ಜಯಂತಿ

ಸಂಪಾದಕರು: ಬೆಟಗೇರಿ ಕೃಷ್ಣಶರ್ಮ

ಮುಖ್ಯ ವಿಷಯಗಳು

ಸಾಮಾಜಿಕನ ಸಂವಚನಗಳು
'ಸಾಮಾಜಿಕ' ೧೮೫
ಕರ್ನಾಟಕ ವಿಜಯಂ (ಕನ್ನಡಿಗರ ಅಪಖ್ಯಾತಿ)
ಶ್ರೀ ಪ್ರಾಂ. ಭೀ. ದೇಸಾಯಿ ಎಂ. ಎ. ನೀಲಗಿರಿ ೧೮೮
ಪ್ರಿನ್ಸಿಪಾಲ್ ಬಿ. ಆರ್ ಶೆಣಾಯ್ (ಸಂದರ್ಶನ)
ಶ್ರೀ. ಎಚ್. ಎಸ್. ಪಾಟೀಲ ಎಂ. ಎ., ಬಿ. ಕಾಮ್. ಮುಂಬೈ ೧೮೯
ಕಾರವಾರದ ಸೊಬಗಿನ ಸಿರಿ (ಕವನ)
ಶ್ರೀ. ಗ. ಸು. ಗಾಂವಕರ ಬಿ. ಎಸ್‌ಸಿ. ಕಾರವಾರ ೧೯೩
ನಂಬರ್ ೧೬೭೮ (ಸಣ್ಣ ಕತೆ)
ಶ್ರೀ. ಅ. ನೇ. ತಳುಕು ಬಿ. ಎ. ಧಾರವಾಡ ೧೯೪
ಸಾರಾಸಾರ ವಿಚಾರ (ಕವನ)
ಶ್ರೀ. ಖಾನೋಳಕರ ಶ್ರೀಧರರಾಯರು, ಪುಣೆ ೧೯೬
ಸಾಯನ-ನಿರಯನ ವಾದ (ಜ್ಯೋತಿರ್ಗಣಿತ ವಿಚಾರ)
ಶ್ರೀ. ಪ್ರ. ಗೋ. ಕುಲಕರ್ಣಿ, ಬೆಳಗಾಂವಿ ೧೯೭
ಚೆಲುವು-ಒಲವುಗಳ ಸಂಬಂಧದ ನಿರೂಪಣೆ (ಪಕ್ಷ ಸಮನ್ವಯ)
ಶ್ರೀ. ಬಿ. ಎಚ್. ಶ್ರೀಧರ ಎಂ. ಎ. ಭಟ್ಕಳ ೨೦೦
ಕಂತಪಲಿ (ಒಂದು ನುಡಿಗತೆ)
ಶ್ರೀ ವಿ ಜಿ. ಭಟ್ಟ, ಕಡತೋಕಾ ೨೦೧
ಜಪಾನಿನ ಜನಜೀವನ (ಪರಿಚಯಾತ್ಮಕ)
ಶ್ರೀ. ನಿರ್ಜಿ ಅಣ್ಣಾರಾಯರು, ಉಗಾರ ೨೦೪
ವ್ಯಕ್ತಿ ಮತ್ತು ಸಮಾಜ (ಶಿಕ್ಷಣ ವಿಚಾರ)
ಶ್ರೀ ನಾಡಿಗೇರ ಲಕ್ಷ್ಮಣರಾಯರು ಬಿ. ಎ., ಬಿ. ಟಿ. ಧಾರವಾಡ ೨೦೭
ಇಲ್ಲದೆ 'ಸಾಹಿತ್ಯ ವಿಹಾರ' 'ನಾಲ್ಕು ನಿಟ್ಟಿನ ನೋಟ'
ಮೊದಲಾದುವು.

ಸಾದರ ಸ್ವೀಕಾರ

೯೯. ಯುದ್ಧಕಾಲದ ಆರ್ಥಿಕ ಸಮಸ್ಯೆಗಳು (ಅರ್ಥಶಾಸ್ತ್ರ ವಿಚಾರಪ್ರಬಂಧ). ಲೇಖಕರು ಶ್ರೀಮಾನ್ ಎಸ್. ಲಕ್ಷ್ಮೀನರಸಿಂಹನ್, ಎಂ. ಎ ಮೈಸೂರು. ಮೈಸೂರು ವಿಶ್ವವಿದ್ಯಾನಿಲಯದ ಪ್ರಚಾರೋಪನ್ಯಾಸ ಮಾಲೆಯ ೩೩ನೆಯ ಪುಸ್ತಕ. ಫೂ. ಕ್ಯಾ. ೮. ೩೪ ಪುಟ, ಬೆಲೆ ೦—೩—೦.

೧೦೦. ಕನ್ನಡನುಡಿಯ ಜೀವಾಳ (ಶಬ್ದಶಾಸ್ತ್ರ ವಿಚಾರಗ್ರಂಥ). ಬರೆದವರು ಶ್ರೀಮಾನ್ ಜೋಶಿ ಶಂಕರರಾಯರು. ಪ್ರಕಾಶಕರು ಸರಸ್ವತೀ ನಿಲಯ, ಧಾರವಾಡ. ಕ್ರಾ. ೮. ೧೨೪ ಪುಟಗಳು. ಬೆಲೆ ೩-೦-೦. ಮುಂಬಯಿ ವಿಶ್ವವಿದ್ಯಾನಿಲಯದಿಂದ ಪ್ರೋತ್ಸಾಹಧನ ಪಡೆದ ಗ್ರಂಥ.

೧೦೧. ವಿನೋದ ಚಿತ್ರಗಳು (ದ್ವಿತೀಯ ಸಂಕಲನ) ಮಂಗಳೂರು ಮಿತ್ರಮಂಡಲಿಯವರು ಬೇರೆ ಬೇರೆ ಲೇಖಕರ ವಿನೋದ ಚಿತ್ರಗಳೆಂಟನ್ನು ಸಂಗ್ರಹಿಸಿ ಪ್ರಕಟಿಸಿದ್ದಾರೆ. ಮಿತ್ರಮಂಡಲಿಯ ಅಖಿಲ ಸೇವಾ ಗ್ರಂಥ-ಮಾಲೆಯ ೧೪ನೆಯ ಕುಸುಮ. ಕ್ರಾ. ೮. ೯೬ ಪುಟಗಳು. ಬೆಲೆ ೧-೪-೦.

೧೦೨. ಶ್ರೀಮದ್‌ಭಗವದ್ಗೀತೆಯ ೧ನೆಯ ಅಧ್ಯಾಯ (ಪುರುಷಾರ್ಥಬೋಧಿನೀ ಎಂಬ ಟೀಕೆ ಸಹಿತ) ಮೂಲಲೇಖಕರು ಪಂಡಿತ ಶ್ರೀ. ದಾ. ಸಾತವಳೇಕರ 'ಗೀತಾಲಂಕಾರ' ಅವರು. ಕನ್ನಡಿಸಿದವರು ಶ್ರೀಮಾನ್ ಜೋಶಿ ಶಂಕರರಾಯರು, ಧಾರವಾಡ. ಕ್ರಾ. ೧೬ದ ೭೮ ಪುಟಗಳು. ಬೆಲೆ ೧ ರೂಪಾಯಿ. ಸಿಕ್ಕುವ ಸ್ಥಳ ಸರಸ್ವತೀ ನಿಲಯ, ಧಾರವಾಡ.

೧೦೩. ಮಯೂರಶರ್ಮ ಮತ್ತು ಇತರ ಕತೆಗಳು (ಐತಿಹಾಸಿಕ ಕತೆಗಳ ಸಂಗ್ರಹ). ಲೇಖಕರು ಶ್ರೀಮಾನ್ ಹುಲ್ಲೂರು ಶ್ರೀನಿವಾಸ ಜೋಯಿಸರು, ವಕೀಲರು, ಚಿತ್ರ-ದುರ್ಗ. ಪ್ರಕಾಶಕರು ಶ್ರೀ. ಜಿ. ಎ. ಸರಸಿಂಹಮೂರ್ತಿ, ಆರ್. ಎಸ್. ನ್ಯೂಸ್ ಏಜನ್ಸಿ, ಚಿಕ್ಕಪೇಟೆ—ಬೆಂಗಳೂರು ನಗರ. ಕ್ರಾ. ೮. ೩೨ ಪುಟಗಳು. ಬೆಲೆ ೦-೩-೦.

ಈ ಪುಟ್ಟ ಪುಸ್ತಕಕ್ಕೆ ಶ್ರೀಮಾನ್ ಸಿದ್ದವನಹಳ್ಳಿಯ ಕೃಷ್ಣಶರ್ಮರು ಮುನ್ನುಡಿ ಬರೆದಿದ್ದಾರೆ: ಆದರಲ್ಲಿ ಅವರು ಲೇಖಕರ ವಿಚಾರ ಹೇಳುತ್ತ "......ಇತಿಹಾಸದ ಮಂಜುಮುಸುಕಿನ ಸಂಗತಿಗಳಲ್ಲಿ ಹುದುಗಿರುವ ಸತ್ಯಸಂಗತಿಯನ್ನು ಅರಸಿ, ಅದಕ್ಕೆ ಜೀವತುಂಬುವ ಸಾಹಿತ್ಯಸಾಮ್ರಾಜ್ಯ ಇವರದು. ಅವರಲ್ಲೂ ಚಿತ್ರದುರ್ಗಸಂಪದರೆ ಜೋಯಿಸರಿಗೆ ಹೆಚ್ಚು ಅಭಿಮಾನ. ನಮ್ಮ ಊರಿನ ಬೆಟ್ಟದ ಹಳ್ಳ-ಕೊಳ್ಳದ ಕಲ್ಲುಮಣ್ಣನ್ನೂ, ಮಣೆತಳವಾಯವನ್ನೂ ಶೋಧಿಸುವ ಕೆಲಸಗಾರನಂತೆ ಶೋಧಿಸಿದಾರೆ. ಅವರೊಡನೆ ಮಾತಾಡದ ಕಲ್ಲಿಲ್ಲ; ಅವರ ಕಣ್ಣನ್ನು ಸೆಳೆಯದ ಕಲ್‌ಗೊಂಬೆಯಿಲ್ಲ; ಅವರು ಕೇಳದ ದಂತಕಥೆಯಿಲ್ಲ. ಅವರಿಗೆ ತಿಳಿಯದ ಕೋಲುಸಪದ, ಲಾವಣಿ (ಮದಕರಿ ನಾಯಕನದು) ಇಲ್ಲ—ನಮ್ಮ ಊರಿನಲ್ಲಿ" ಎಂದು ಬರೆದಿದ್ದಾರೆ. ಕನ್ನಡದ ಓದುಗರಿಗೆ ಈ ಲೇಖಕರ ಹೆಸರೂ ಸಂಶೋಧಕ ಸಾಹಿತ್ಯವೂ ಸುಪರಿಚಿತವಾಗಿರುವುದು.

ಇವರಲ್ಲಿ 'ಮಯೂರಶರ್ಮ' 'ಪೂಜಾರಿಯ ಗುಟ್ಟು' 'ನಾಯಕೊಂಡದ ಮುತ್ತಿಗೆ' 'ಸಿದ್ಧರಸ' 'ಧ್ರುವದೇವಿ' 'ಮಗ್ಗಾಣಿ ಕತೆ' ಎಂಬ ಆರು ಐತಿಹಾಸಿಕ ಕತೆಗಳಿವೆ. ಹಳೆಯ ಶಾಸನ, ಜಾನಪದಗೀತ, ಜಾನಪದ ಕತೆಗಳ ಆಧಾರದಿಂದ ಈ ಕತೆಗಳು ನಿಂತುಕೊಂಡಿವೆ. ಐತಿಹಾಸಿಕ ಕತೆಗಳಾದರೂ ವಸ್ತುವಿನ ಚಮತ್ಕೃತಿಯ ಮೂಲಕ ಮನೋರಂಜಕವೂ ಆಗಿವೆ. ಶ್ರೀಮಾನ್ ಶ್ರೀನಿವಾಸ ಜೋಯಿಸರ ಸಾಹಿತ್ಯನಿರ್ಮಾಣಕಾರ್ಯ ಅಖಂಡವಾಗಿ ನಡೆಯಲೆಂದು ನಮ್ಮ ಹಾರಯಿಕೆ.

೧೦೪. ರಾಷ್ಟ್ರೀಯ ಪಂಚಾಯತಿ (ರಾಜಕಾರ್ಯಬೋಧಕ ಗ್ರಂಥ) ಮಹಾತ್ಮಾ ಗಾಂಧಿ, ಪಂಡಿತ ಜವಾಹರಲಾಲ ನೆಹರು, ರಾಜಗೋಪಾಲಾಚಾರ್ಯ ಮೊದಲಾದ ಭಾರತದ ನೇತಾರರು ರಾಷ್ಟ್ರೀಯ ಸರಕಾರದ ವಿಚಾರವಾಗಿ ಬರೆದ ಲೇಖನಗಳ ಅನುವಾದಗಳು ಇದರಲ್ಲಿವೆ. ಅನುವಾದಕರು ಶ್ರೀಮಾನ್ ಬಿಂದುಮಾಧವ ಬುರ್ಲಿಯವರು. ಧಾರವಾಡದ ಮಿಂಚಿನಬಳ್ಳಿಯ ೭ನೆಯ ಕುಡಿ. ಕ್ರಾ. ೮. ೯೪ ಪುಟಗಳು. ಬೆಲೆ ೧-೦-೦.

೧೦೫. ಕೀಲುಕುದುರೆ (ಮಕ್ಕಳಿಗಾಗಿ ಬರೆದ ಚಿಕ್ಕ ಕಥೆಗಳು) ಲೇಖಕರು ಶ್ರೀಮಾನ್ ಬಿ. ಎಂ. ಆರ್. ಸ್ವಾಮಿ, 'ಕನ್ನಡಿಗರ ಕಣಜ' ಬೆಂಗಳೂರು. ಪ್ರಕಾಶಕರು ಸತ್ಯಶೋಧನ ಪ್ರಕಟನಮಂದಿರ, ಕೋಟೆ — ಬೆಂಗಳೂರು ನಗರ. ಕ್ರಾ. ೮. ೨೮ ಪುಟಗಳು. ಬೆಲೆ ೦-೪-೦.

ಸಚಿತ್ರವಾಗಿ ಅಂದವಾಗಿ ಅಚ್ಚುಹಾಕಿಸಿ ಪ್ರಕಟಿಸಿದ ಈ ಪುಸ್ತಕದಲ್ಲಿ, ನಾಲ್ಕು ಮಕ್ಕಳ ಕನಸಿನ ಕತೆಗಳಿವೆ. ಮೊದಲನೆಯ ಕನಸು ಪುಟ್ಟ ಪುರಾಣಿ ರುಕ್ಮಿಣಿ ಕಂಡುದು. ಎರಡನೆಯ ಕನಸು ಗೋಪಿ ಎಂಬ ಬಡಹುಡುಗ ದಾರಿಯಲ್ಲಿ ಏಟುತಿಂದು ಆಸ್ಪತ್ರೆಯಲ್ಲಿ ಮಲಗಿದಾಗ ಕಂಡುದು. ಮೂರನೆಯದು, 'ಜಾಕಿ' ಎಂಬ ಹುಡುಗ 'ಸ್ಕೂಟರ್' ಗಾಡಿ ಹತ್ತಬೇಕೆಂಬ ಆತುರದಿಂದ ಮಲಗಿದಾಗ ಕಂಡುದು. ನಾಲ್ಕನೆಯದು, ಒಂದು ಬೆಕ್ಕಿನಮರಿ ಕಂಡ ಕೆಟ್ಟ ಕನಸು. ಮಲಗುವ ಮುಂಚೆ ಮಕ್ಕಳು ಯಾವ ಸಂಗತಿಯನ್ನು ಮನಸ್ಸಿಗೆ ಹಚ್ಚಿಕೊಂಡು ಅತೃಪ್ತಿಯಿಂದ ಮಲಗಿರುವರೋ, ಅದೇ ಸಂಗತಿಯ ಸನ್ನಿವೇಶದಿಂದ ಕೂಡಿದ ಅದ್ಭುತ ಕನಸುಗಳು ಬೀಳುತ್ತವೆಂಬ ಮಕ್ಕಳ ಮನಃಶಾಸ್ತ್ರದ ಸಿದ್ಧಾಂತಾನುಸಾರ ಈ ಕತೆಗಳನ್ನು ರಚಿಸಿದ್ದಾರೆಂದು ತೋರುವುದು. ಆದರೆ ಇದರಲ್ಲಿಯ ಕನಸಿನ ಘಟನೆಗಳ ಕತೆ ಮಕ್ಕಳ ಮನವನ್ನು ಆಕರ್ಷಿಸುವಷ್ಟು ರಂಜಕವಾಗಿಲ್ಲ. ಭಾಷೆ ಕೂಡ ಚಿಕ್ಕಮಕ್ಕಳನ್ನು ಗುರಿಯಾಗಿರಿಸಿಕೊಂಡು ಬರೆದಂತಿಲ್ಲ. ಎಂತಲೆ ಇಂತಹ ಪುಸ್ತಕಗಳು ಮಕ್ಕಳಿಗೆ ಹೆಚ್ಚು, ದೊಡ್ಡವರಿಗೆ ಕಡಿಮೆ ಎನಿಸಿ, 'ಇಂತಹ ಪುಸ್ತಕಗಳು ಯಾರಿಗಾಗಿ?' ಎಂಬ ಪ್ರಶ್ನೆಯನ್ನು ವಿಮರ್ಶಕರಲ್ಲಿ ಎಬ್ಬಿಸಿ ಬಿಡುವುವು. ಶಿಶುಸಾಹಿತ್ಯ ನಿರ್ಮಾತೃಗಳು ಈ ಮಾತನ್ನು ಲಕ್ಷ್ಯದಲ್ಲಿರಿಸಿಕೊಳ್ಳಬೇಕಾದುದು ಅಗತ್ಯವೆಂದು ನಮ್ಮ ಅಭಿಪ್ರಾಯ.

೧೦೬. ಭಾರತದ ವೀರ ಮಹಿಳೆಯರು (ಐತಿಹಾಸಿಕ ವ್ಯಕ್ತಿಪರಿಚಯಗಳು). ಬರೆದವರು ಶ್ರೀಮತಿ ಸರಸ್ವತೀದೇವಿ ಗೌಡರ, ಹುಬ್ಬಳ್ಳಿ. ಮುನ್ನುಡಿಕಾರರು ಶ್ರೀ. ವಿ. ಕೃ. ಗೋಕಾಕ ಬಿ. ಎ. (ಆಕ್ಸನ್). ಪ್ರಕಾಶಕರು ಎಂ. ಜಿ. ಏರೂಪಾಕ್ಷನ್, ಕಿಲ್ಲೆ—ಧಾರವಾಡ. ಕ್ರಾ. ೮. ೬೪ ಪುಟ, ಬೆಲೆ ೧—೮—೦.

ಮುದ್ರಕರು:
ಶ್ರೀ. ಎಸ್. ಎಸ್. ಬೆಂಗೇರಿ, ಕಿಜಾನ ಮುದ್ರಾಲಯ, ಧಾರವಾಡ

ಪ್ರಕಾಶಕರು:
ಶ್ರೀ ಎಂ. ವ್ಹಿ. ಮೆಳ್ಳಿಗಟ್ಟಿ, ಜಯಂತಿ ಕಾರ್ಯಾಲಯ, ಧಾರವಾಡ.

ಜಯಂತಿ

ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

ವಾ. ವರ್ಗಣಿ ಅಂಚೆವೆಚ್ಚ ಸೇರಿ ೪—೪—೦ | ಆರು ತಿಂಗಳಿಗೆ ೨—೪—೦ | ಬಿಡಿ ಸಂಚಿಕೆಗೆ ೬ ಆಣೆ.

ಸಂಪುಟ ೭ | ೧ನೆಯ ಜನವರಿ ೧೯೪೫ | ಸಂಚಿಕೆ ೮

ಸಾಮಾಜಿಕನ ಸಂವಚನಗಳು

೧

ಮಾನವನ ಜೀವನ ಮುಂಬರಿವುದು ಅದೆಲ್ಲಿಯವರೆಗಯ್ಯಾ? ಎಲ್ಲಿಯವರೆಗೆಂಬುವದರ ಎಲ್ಲೆಯನವನು ಅರಿತಿದ್ದರೆ, ಮುಂಬರಿವ ದಾರಿಯೊಳೆ ನಡೆಯುತಿದ್ದರ್ ಕಾಣಯ್ಯಾ! ಮುಂಬರಿವೆನೆನ್ನುವ ಮರುಳಿನಲಿಯೆ ಮಾನವ ಹಿಂಬರಿಯುತಿಹ ಕೇಳು ತಂದೆ! ಮುಂಬರಿವೆನೆನ್ನುವ ಮರ್ಬಿನೊಳೆ ನಿಂದಲಿಯೆ ಕಾಲಾಡಿಸುತಿಹನಯ್ಯಾ! ಮುಂಬರಿವೆನೆನ್ನುವ ಮಂಕಿನೊಳೆ ತನ್ನನೆ ತಾನು ಸುತ್ತುತಿಹನಯ್ಯಾ! ಮುಂಬರಿವೆನೆಂಬ ಕಲ್ಪನೆಯಿಂದ ಕುರುಡುಗೊಂಡು ಕಂಡ ಕಡೆಗೆ ದುಡುಕುತಿಹನಯ್ಯಾ! ಮುಂಬರಿವೆನೆಂಬ ಕನಸ ಕಾಣುತ ಬಿದ್ದಲಿಯೆ ಬಿದ್ದು ನಿದ್ದೆಹೋಗುತಿಹನಯ್ಯಾ! ಸರ್ವಸಾಕ್ಷಿಯಾದ ನಮ್ಮ ಕಾಲಮಹಾಯೋಗಿ, ಮಾನವನ ಈ ಮರುಳು-ಮಂಕು-ಮರ್ಬುಗಳನು ಕಂಡು ಕರುಣೆಯ ಕಿರುನಗೆ ನಗುತಿಹನಯ್ಯಾ!

೨

ದೇವರನು ಕಾಣುವುದೆ ಮಾನವನ ಮುಂಬರಿತದ ಗುರಿಯೇನಣ್ಣಾ? ದೇಶ-ದೇಶದಲಿ, ಕಾಲ-ಕಾಲದಲಿ, ಕುಲ-ಕುಲಗಳಲಿ, ಮನೆ-ಮನೆಗಳಲಿ ಬೇರೆಬೇರೆಯಾಗುತ್ತ ಬಂದಿರುವ ದೇವರೆಂಬ ಭಾವನೆಯ ಚಿತ್ರವನು, ಕಣ್ಣಿಂದ ಕಂಡವರು ಯಾರುಂಟು ತಂದೆ? ಇದು ದೇವರೆಂದು ತೋರಿಸಿ, ಅದನೆ ದೇವರಲ್ಲವೆಂದು ಹೇಳುವ ಹಿರಿನುಡಿಯ ಹುರುಳೇನೆಂಬುದನು ಅರಿತಿಹೆಯೇನಯ್ಯಾ? 'ತಂದೆಯೆ ದೇವರು, ತಾಯಿ ದೇವರು, ಅತಿಥಿಯೆ ದೇವರು, ಗುರುವೇ ದೇವರು' ಎಂದು ಹೇಳಿದ ತಿಳುವಳಿಕೆ ತಿಳಿದು ನಡೆದಿಹೆಯೇನಯ್ಯಾ? ಅನ್ನವೆ ದೇವರೆಂದೊರೆದ ಅನುಭವವಚನವೆ, ಪ್ರಾಣವ ದೇವರೆಂದು ಉಗ್ಗಡಿಸಿದೆ! ಅದೇ ನಮ್ಮ ಮನವೆ ದೇವರೆಂದಿದೆ, ವಿಜ್ಞಾನವೆ ದೇವರೆಂದಿದೆ, ಆನಂದವೆ ದೇವರೆಂದಿದೆ ಕಾಣಯ್ಯಾ! ಈ ದೇವರುಗಳನು ಸಾಕ್ಷಾತ್ಕಾರ ಮಾಡಿಕೊಂಡಿಹೆಯೇನು ತಂದೆ? ಇವೆಲ್ಲ ಇದ್ದ ದೇವರುಗಳ ಕೈಯನು ಬಿಟ್ಟು, ಕನಸಿನ ಮಂಜನರಸುತ ನಡೆವ ಮಾನವಕುಲವ ಕಂಡು ಕನಿಕರ ಪಡುವನಯ್ಯಾ ನಮ್ಮ ಕಾಲರಾಯ!

೩

ಸ್ವರ್ಗದ ಸಿರಿಸುಖವು ಮಾನವನ ಮುಂಬರಿತಕೆ ನೆಲೆಯೇನಯ್ಯಾ? ಸ್ವರ್ಗದ ಸರಿಯಾದ ರೂಪವನು ಕಂಡುಂಡ ಕಡುಗಲಿಗಳಾದವರೂ ಇಳೆಯಲ್ಲಿರುವರೇನು ತಂದೆ? ಸಾವಿನಾಚೆಗೆ ಸ್ವರ್ಗವೆಂದು ಸಾರುವ ಅಯ್ಯಂಗಳು, ಸಾವಿನೀಚೆಯ ಲೋಕದ ಸಂಸ್ಥಾನವನು ಅರಿತಿಹರೇನಯ್ಯಾ? ಸ್ವರ್ಗವೆಂಬ ಕನಸಿನ ಲೋಕದೊಳು ಇರುವುದೇನು ಹೇಳಯ್ಯಾ! ಇರಲು ಸುರಪನ ಅರಮನೆ; ವಿಹರಿಸಲು ಇಂದ್ರನ ನಂದನವನ; ಸವಿದುಣ್ಣಲು ಸುಧೆಯ ಸವಿಯೂಟ; ಸುಖಶಯ್ಯೆಗೆ ಅಂದದ ಅಪ್ಸರಸಿಯರು; ಹಾಡು-ಕುಣಿತದ ಕೇಳಿಗೆ ಗಂಧರ್ವ-ಕಿನ್ನರರು! ಹುಸಿಯೇನಯ್ಯಾ? ಇನಿತಕಾಗಿಯೆ ಮನುಜಕುಲ ಸತ್ತು ಸ್ವರ್ಗವ ಸಾರಬೇಕೇನಣ್ಣಾ? ಇನಿತಕಾಗಿಯೆ ಬದುಕಿ ಬಾಳುವ ಇಳೆಯ ದೆಸೆಗೆ ಕಂಗುರುಡರಾಗಬೇಕೆ ಅಣ್ಣಾ? ಸ್ವರ್ಗದಲಿ ಸಿಕ್ಕಬಹುದಾದುದು ಮರ್ತ್ಯದಲಿಯೂ ಸಿಕ್ಕುತಿದ್ದರೆ ಅದನೇಕೆ ಕಡೆಗಣಿಸುವುದಯ್ಯಾ! ಸತ್ತು ಸ್ವರ್ಗವ ಸೇರುವೆನೆಂಬುದಕಿಂತ ಇರುವ ಇಳೆಯನೆ ಸ್ವರ್ಗವನಾಗಿಸುವೆನೆಂದು ಹವಣಿಸುವವರಿಗೆ ಮೆಚ್ಚಿನ ಮಾಲೆ ಹಾಕುವನಯ್ಯಾ ನಮ್ಮ ಕಾಲಮಹಾರಾಯ!

೪

ಮೋಕ್ಷವೆಂಬುದು ಮಾನವನ ಮುಂಬರಿತದ ಗುರಿಯೇನಯ್ಯಾ? ಮೋಕ್ಷವೆಂದರೇನೆಂಬುದನು ಮನದಟ್ಟು ಮಾಡಿಕೊಂಡ ಮಹನೀಯರೀ ಮಹಿಯೊಳು ಎಷ್ಟು ಜನರು ತಂದೆ? ಲೋಕದ ಬದುಕಿನ ಕಹಿ-ಕಷ್ಟಗಳ ಅನುಭವದಿಂದ ನೊಂದ—ಸಿಹಿ-ಸುಖಗಳ ಅನುಭವದಿಂದ ನಲಿದ—ಮಾನವ, ತನ್ನ ಎದೆಯ ಹಾರಯಿಕೆಯ ಬಯಕೊಂದನು ಭಾವಿಸಿದನಯ್ಯಾ! ಆ ಭಾವನೆಯ ಬದುಕನೆ ಮೋಕ್ಷವೆಂದು ಕರೆದನು ಕೇಳಯ್ಯಾ! ಇರುವ ಲೋಕದ ನಿಜವನರಸುತ್ತ—ಅರಿಯದುದನು ಅರಿಯಲು ಹವಣಿಸುತ್ತ—ಮರಣ ಬಂದಾಗ ಹರುಷದಲಿ ಸ್ವಾಗತಿಸುವುದೆ ಮೋಕ್ಷವಯ್ಯಾ! ಇದಕಾಗಿ ಮುಂಬರಿವುದೇ ಮಾನವನ ಗುರಿಯಾಗಬೇಕೆಂದೊರೆವ ನಮ್ಮ ಹಿರಿಯರ ಹಿರಿಯ ಕಾಲರಾಯ!

ಕನ್ನಡ ನಾಡಿನ ಸಂಘ-ಸಂಸ್ಥೆಗಳ ಕರ್ತವ್ಯ

ಇಂದು ಬಹುಜನ ಮತಕ್ಕೆ ಹೆಚ್ಚಿನ ಬೆಲೆಯಿರುವುದರಿಂದ, ನಾವು ಯಾವ ವಿಧಾಯಕ ಕಾರ್ಯವನ್ನು ಮಾಡಬೇಕಾದರೂ ಗುಂಪುಗೂಡಿ ಮಾಡಬೇಕಾಗುತ್ತದೆ. ಇಂತಹ ಸುವ್ಯವಸ್ಥಿತವಾದ— ಸುಸಂಘಟಿತವಾದ ಗುಂಪುಗಳೇ 'ಸಂಘ' 'ಸಂಸ್ಥೆ' 'ಸಮಿತಿ' 'ಪರಿಷತ್ತು' ಎನಿಸಿಕೊಳ್ಳುವುವು. ಗುಂಪು ದೊಡ್ಡದಿದ್ದಷ್ಟೂ ಅದರ ಮಾತಿಗೂ ಕಾರ್ಯಕ್ಕೂ ಬೆಲೆ ದೊಡ್ಡದಾಗುವುದು. ಇಂತಹ ಗುಂಪುಗಳು ನಮ್ಮ ಕನ್ನಡನಾಡಿನಲ್ಲಿಯೂ ಬೇರೆ ಬೇರೆ ಉದ್ದೇಶವನ್ನಿರಿಸಿ ಕಾರ್ಯಸನ್ನದ್ಧವಾಗಿ ನಿಂತಿರುವುವು; ನಿಲ್ಲಲಿರುವುವು.

ಭಾರತದ ಸ್ವಾತಂತ್ರ್ಯಸಾಧನೆಯ ಉದ್ದೇಶದಿಂದ ಕಾರ್ಯಮಾಡುತ್ತಿರುವ ಅಖಿಲಭಾರತೀಯ ರಾಷ್ಟ್ರೀಯ ಸಭೆಯ ಪ್ರತಿನಿಧಿಯಾದ ಕನ್ನಡ ಸಂಸ್ಥೆಯೆಂದರೆ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯು. ಇದರಂತೆಯೆ ಅಖಿಲಭಾರತೀಯ ಸಂಸ್ಥೆಗಳ ಕನ್ನಡಶಾಖೆಗಳಾಗಿ ಅಖಿಲಭಾರತೀಯ ನೂಲುವವರ ಸಂಘದ ಕರ್ನಾಟಕ ವಿಭಾಗ, ಹರಿಜನಸಂಘ, ಕೂಲಿಕಾರ ಸಂಘಗಳು ನಮ್ಮಲ್ಲಿ ಕಾರ್ಯಮಾಡುತ್ತಲಿವೆ. ಇನ್ನು ಅಖಿಲ ಕರ್ನಾಟಕದ ಬೇರೆ ಬೇರೆ ಅಂಗದ ಉನ್ನತಿಯನ್ನಿರಿಸಿಕೊಂಡು ಹೊರಟ ಸಂಸ್ಥೆಗಳೆಂದರೆ ಕರ್ನಾಟಕ ವಿದ್ಯಾವರ್ಧಕ ಸಂಘ, ಕನ್ನಡ ಸಾಹಿತ್ಯ ಪರಿಷತ್ತು, ಕರ್ನಾಟಕ ಏಕೀಕರಣ ಸಂಘ, ಕರ್ನಾಟಕ ವಿಶ್ವವಿದ್ಯಾಲಯ ಸಮಿತಿ, ಕರ್ನಾಟಕ ವರ್ತಕ ಸಂಘ. ಇವಲ್ಲದೆ ಕರ್ನಾಟಕ ಸಂಸ್ಕೃತಿ-ಸಾಹಿತ್ಯಗಳ ಸಂವರ್ಧನೆ-ಸಂರಕ್ಷಣೆಗಳ ಉದ್ದೇಶದಿಂದ ಹೊರಟ 'ಕರ್ನಾಟಕ ಸಂಘ' 'ಕನ್ನಡಿಗರ ಕೂಟ' 'ಎಳೆಯರ ಬಳಗ' 'ತರುಣರ ತಂಡ' 'ಮಿತ್ರಮಂಡಲಿ' 'ಗೆಳೆಯರ ಬಳಗ' ಮೊದಲಾದ ಹೆಸರಿನ ಪ್ರಾದೇಶಿಕ ಸಂಸ್ಥೆಗಳು ಎಲ್ಲೆಲ್ಲಿಯೂ ತಲೆಯೆತ್ತಿಕೊಂಡು ನಿಂತಿವೆ. ಓದುವ ಅಭಿರುಚಿ ಕನ್ನಡಿಗರಲ್ಲಿ ಇತ್ತೀಚೆಗೆ ಬೆಳೆಯುತ್ತಿರುವುದರಿಂದ, ಹಳ್ಳಿ-ಹಳ್ಳಿಗಳಲ್ಲಿಯೂ ಸಾರ್ವಜನಿಕ ವಾಚನಮಂದಿರ—ಪುಸ್ತಕ ಭಾಂಡಾರಗಳು ಹುಟ್ಟುತ್ತಲಿವೆ. ಇವಲ್ಲದೆ ಜಾತಿಯ ಸಂಘಟನೆಯ ಕಾರಣದಿಂದ ಹೊರಟ ಕನ್ನಡ ಸಂಸ್ಥೆಗಳೂ ಇವೆ. ಇಂತಹ ಸಂಸ್ಥೆಗಳಲ್ಲಿ ಎಲ್ಲರ ಕಣ್ಣಲ್ಲಿಯೂ ತುಂಬುವಂತಹ—ಆನುಷಂಗಿಕವಾಗಿ ಅಖಿಲ ಕರ್ನಾಟಕದ ಉನ್ನತಿಗೆ ನೆರವನ್ನು ನೀಡುವಂತಹ—ಪ್ರಮುಖ ಸಂಸ್ಥೆಯೆಂದರೆ ಕರ್ನಾಟಕ ಲಿಂಗಾಯತ ವಿದ್ಯಾಭಿವೃದ್ಧಿಸಂಸ್ಥೆ. ಬೇರೆ ಸಣ್ಣಪುಟ್ಟ ವಿದ್ಯಾಪ್ರಸಾರಕ ಸಂಸ್ಥೆಗಳೂ ಅಲ್ಲಲ್ಲಿ ಪಟ್ಟಣಗಳಲ್ಲಿದ್ದು, ತಂತಮ್ಮ ಪರಿಯಿಂದ ಕಾರ್ಯಮಾಡುತ್ತಿವೆ. ಇವೆಲ್ಲ ಸಂಸ್ಥೆಗಳಿಂದ ಕನ್ನಡ ಜನತೆ ಒಂದು ಮಹತ್ತ್ವದ ಸಹಾಯವನ್ನು ಅಪೇಕ್ಷಿಸಬೇಕಾಗಿದೆ. ಆ ಸಹಾಯದಿಂದಲೆ ನಮ್ಮ ನಾಡು ಶುಭಭವಿಷ್ಯವನ್ನು ಕಾಣಬಹುದಾಗಿದೆ.

ನಮ್ಮ ಜನರಲ್ಲಿ, ತಲೆಮಾರಿನಿಂದ ತಲೆಮಾರಿಗೆ ನಡೆದುಕೊಂಡು ಬಂದಿರುವ ಎರಡು ದೊಡ್ಡ ಅವಗುಣಗಳು ನೆಲೆಯೂರಿವೆ. ಒಂದನೆಯದು 'ದೀನನಾನುತನ' (ಇನ್‌ಫೀರಿಯಾರಿಟಿ ಕಾಂಪ್ಲೆಕ್ಸ್), ಎರಡನೆಯದು ಔದಾರ್ಯವೆಂದು ಒಪ್ಪಿಟ್ಟುಕೊಳ್ಳುವ ಉದಾಸೀನ ಭಾವ! ಮೊದಲನೆಯದರ ಮೂಲಕ ಎರಡನೆಯವರು ನಮ್ಮನ್ನು ಆಳಲು ಬರುತ್ತಾರೆ; ಎರಡನೆಯ ಗುಣದ ಮೂಲಕ ಇನ್ನೊಬ್ಬರು ನಮ್ಮ ಕೂಳನ್ನು ಕಸಿದುಕೊಳ್ಳುತ್ತಲಿದ್ದಾರೆ. ಈ ಕಾರಣದಿಂದಲೆ ನಮ್ಮ ಯಾವ ಸಂಘ-ಸಂಸ್ಥೆಗಳ ಕಾರ್ಯವೂ ಪ್ರಭಾವಶಾಲಿಯಾಗಿ ಪರಿಣಮಿಸದಾಗಿದೆ. ಕನ್ನಡಿಗರದೊಂದು ವಿದ್ಯಾಸಂಸ್ಥೆ ತಲೆದೋರಿತೊ, ಅಲ್ಲಿ ಕನ್ನಡ ವಿದ್ಯಾವಂತರಿಗೆ ಸ್ಥಾನವೆ ಸಿಕ್ಕದು. ಕನ್ನಡಿಗರ ಉದ್ಯಮಶಾಲೆಯೊಂದು ತೆರೆಯಿತೊ, ಅದರ ಸೂತ್ರಧಾರಿಗಳೆಲ್ಲ ಕನ್ನಡಿಗರಲ್ಲದವರಾಗಿರುವರು. ಕನ್ನಡಿಗರ ವ್ಯಾಪಾರಸಂಸ್ಥೆಯೊಂದು ತಲೆಯೆತ್ತಿತೊ, ಅಲ್ಲಿಯ ಕಾರಭಾರವೆಲ್ಲ ಬೇರೆಯವರ ಕಡೆಗೆ ಹೋಗಿರುವುದು. ಇಷ್ಟೇ ಅಲ್ಲ; ಕರ್ನಾಟಕದ ಕೇಂದ್ರನಗರಗಳಲ್ಲಿ ಕನ್ನಡಿಗರಾದ ವೈದ್ಯ-ವಕೀಲರಿಗಿಂತ ಕನ್ನಡಿಗರಲ್ಲದವರದೇ ಬೊಜ್ಜು ಬೆಳೆದಿರುವುದು. ಇದರಂತೆಯೆ ಪೇಟೆಯ ಪರಿಸ್ಥಿತಿ; ಯಾರಿಗೆ ಯಾರೋ ಬಂದು ಕನ್ನಡ ಪೇಟೆಗಳನ್ನು ವಶಪಡಿಸಿಕೊಂಡು, ತಿಂದು ಮುಸುಗುಡುತ್ತಲಿದ್ದಾರೆ. ಈ ದುರವಸ್ಥೆಗೆ ನಮ್ಮ ದೀನನಾನುತನ—ಔದಾಸೀನ್ಯಗಳೇ ಪ್ರಮುಖಕಾರಣಗಳೆಂಬುದು ಕಣ್ದೆರೆದು ನೋಡುವವರಿಗೆ ಸಹಜವಾಗಿ ತಿಳಿಯುವಂತಿದೆ.

ನಾಗರಿಕರಾಗಿ ಬಾಳಬೇಕೆನ್ನುವ ಜನರಲ್ಲಿ ತಾನು ಕೀಳೆಂದು ತಿಳಿವ ಸ್ವಭಾವ ಎಂದೂ ಇರಲಾಗದು. ಈ ಸ್ವಭಾವವಿರುವವನು ಯಾವಾಗಲೂ ಆಳಾಗಿರುವನಲ್ಲದೆ ಆಳುವವನಾಗಲಾರನು. ಇನ್ನೊಬ್ಬನ ಕೂಳನ್ನು ಕಸಿದುಕೊಳ್ಳುವುದು ಮನುಷ್ಯತ್ವವಲ್ಲದಂತೆಯೆ, ತನ್ನದನ್ನು ಕಳೆದುಕೊಳ್ಳುವುದೂ ಮನುಷ್ಯತ್ವವಲ್ಲವೆಂಬುದನ್ನು ನಾವು ಯಾವಾಗಲೂ ಮರೆಯಲಾಗದು. ಮೊದಲನೆಯದು ಕಾಡುತನವೆನಿಸಿದರೆ ಎರಡನೆಯದು ಹೇಡಿತನವೆನಿಸುವುದು. ಕನ್ನಡ ಜನಸಾಮಾನ್ಯರಲ್ಲಿ ಕನ್ನಡಿಗರೂ ಮನುಷ್ಯರೆಂಬ ತಿಳಿವಳಿಕೆಯಿಂದು ತುಂಬಿಕೊಳ್ಳಬೇಕಾಗಿದೆ 'ನನ್ನ ಅನ್ನ ನಾನೆ ತಿನ್ನಬೇಕು' ಎಂಬ ಭಾವನೆ ಜಾಗೃತವಾಗಬೇಕಾಗಿದೆ. ಈ ಕೆಲಸವನ್ನಿಂದು ಕನ್ನಡನಾಡಿನ ಪ್ರತಿಯೊಂದು ಸಂಘ-ಸಂಸ್ಥೆಯೂ ಮನಮುಟ್ಟಿ ಮಾಡಬೇಕಾಗಿದೆ.

ಕಲೆಯ ಹೆಸರಿನಿಂದಲೊ, ಧರ್ಮದ ಹೆಸರಿನಿಂದಲೊ, ಅಖಿಲ ಭಾರತದ ಮೋಹದ ಹೆಸರಿನಿಂದಲೊ, ವಿಶ್ವಬಾಂಧವದ ಹುಚ್ಚಿನ ಹೆಸರಿನಿಂದಲೊ, ಕನ್ನಡಿಗರ ಮನಸ್ಸನ್ನಾಳಿ ಸ್ವಾರ್ಥಸಾಧಿಸಿಕೊಳ್ಳುವ ಪರಕೀಯರು ಹಲವರು. ಉದಾಹರಣೆಗಾಗಿ: ಕನ್ನಡನಾಡಿನ ಕೇಂದ್ರನಗರವೊಂದರಲ್ಲಿ ಕನ್ನಡಿಗರಿಂದಲೆ ನಡೆದಿರುವ ಕಲಾಸಂಘವು, ಅನ್ಯರಿಗೇ ಮನ್ನಣೆಯ ಹೀರವನ್ನೂ ಹೊನ್ನಿನ ಕಾಣಿಕೆಯನ್ನೂ—ಕಲೆಯ ಹೆಸರಿನಿಂದ—ಸಲ್ಲಿಸಿ, ಕನ್ನಡಿಗರ ಕೈಗೆ ಕುಂಬಳಕಾಯನ್ನು ಕೊಡುತ್ತಿರುತ್ತದೆ. ಇದು ಕಣ್ಣಾರೆಕಂಡ—ಮುಂದೆಕೂಡ ಕಾಣಬಹುದಾದ—ಸಂಗತಿ. ಇನ್ನೇ ಉದಾಹರಣೆ ಎಲ್ಲ ವ್ಯವಹಾರದಲ್ಲಿಯೂ ನಡೆಯುತ್ತಿರುವಾಗ, ಕನ್ನಡ ಜನಸಾಮಾನ್ಯರಲ್ಲಿ, 'ನಮ್ಮಲ್ಲಿಯೂ ಬುದ್ಧಿಯಿದೆ, ಬಲವಿದೆ, ಕಲೆಯಿದೆ, ಕೌಶಲವಿದೆ' ಎಂಬ ನಂಬುಗೆ ನೆಲೆಗೊಳ್ಳುವ ಬಗೆ ಹೇಗೆ? ಈಗ ಇಲ್ಲದಿದ್ದರೂ ಇನ್ನು ಮುಂದಾದರೂ ನಮ್ಮಲ್ಲಿ ಅವುಗಳನ್ನು ತಂದುಕೊಳಬೇಕೆಂಬ ಹಂಬಲು ಹುಟ್ಟುವುದು ಹೇಗೆ? ಆದುದರಿಂದಲೆ ಕನ್ನಡ ಸಂಸ್ಥೆಗಳೆಲ್ಲ ಕನ್ನಡಿಗರ ದೊಡ್ಡಿತ್ತೆ, ಕಲ್ಮೆ-ಬಲ್ಮೆ-ಕಲೆಗಳನ್ನ ಯಾವಾಗಲೂ ಮೆರೆಯಿಸುತ್ತಿರಬೇಕು. ಇವುಗಳ ಹೆಸರಿನಿಂದ ಅನ್ನಿಗರು ನಮ್ಮ ಮೇಲೆ ಅಧಿಕಾರ ನಡೆಸಲು ಬಂದರೆ, ಅದನ್ನು ಅಲ್ಲಿಯೆ ಅಲ್ಲಗಳೆದು ಚೆನ್ನಾಗಿ ಬುದ್ಧಿ ಕಲಿಸಬೇಕು. ಅದರಂತೆಯೆ ವ್ಯಾಪಾರ ಉದ್ಯಮ, ವೈದ್ಯಕಿ, ವಕೀಲಿ ಮೊದಲಾದ ಹಲವು ವ್ಯವಸಾಯಗಳಿಂದ ಕನ್ನಡಿಗರ ಅನ್ನವನ್ನು ಕಸಿದುಕೊಳ್ಳಲು ಬರುವ ಅನ್ನಿಗರ ವಿಷಯದಲ್ಲಿ ಎಚ್ಚರಿರುವಂತೆ ಜನಸಾಮಾನ್ಯರನ್ನು ಚಟುವಟಿಕೆಗೊಳಿಸಬೇಕು. ಅಖಿಲ ಕರ್ನಾಟಕ ಸಂಸ್ಥೆಯಿರಲಿ, ಪ್ರಾದೇಶಿಕ ಸಂಸ್ಥೆಯಿರಲಿ, ಜಾತೀಯಸಂಸ್ಥೆಯಿರಲಿ; ಒಂದೊಂದೂ ತಾನಿದ್ದಲ್ಲಿ ಕನ್ನಡ ನಾಡಿನ ಕಾಪಿನ ಕೋಟೆಯಾಗಿ ಇಂದು ಕಾರ್ಯವನ್ನು ಮಾಡಬೇಕು. ಕನ್ನಡ ಸಂಘ-ಸಂಸ್ಥೆಗಳಿಂದ ನಾವೆಲ್ಲ ಅಪೇಕ್ಷಿಸುವ ಮಹತ್ತ್ವದ ಸಹಾಯವೆಂದರೆ ಇದೇ! ಈ ಸಹಾಯವನ್ನವು ಕೊಡಬೇಕು; 'ಕನ್ನಡಿಗರನ್ನು ಮತ್ತೆ ಮನುಷ್ಯರನ್ನಾಗಿ ಮಾಡಿ ಬಾಳತೊಡಗಿಸಬೇಕು.

—ಸಂಪಾದಕರು



೧. ಒಂದೇ ಮಾತರಂ!

ಇತ್ತೀಚೆಗೆ ಎಲ್ಲರಂತೆ ಮಂಗರಾಯನಿಗೂ ಏಕೀಕರಣದ ಹುಚ್ಚು ಹಿಡಿದಿದೆ. ಎಲ್ಲ ಹುಚ್ಚುಗಳ ಕೇಂದ್ರವಾದ ಮಂಗವಾಡದಲ್ಲಿ ಕೊನೆಗೊಂದು ಏಕೀಕರಣ ಸಮ್ಮೇಳನವೂ ಕೂಡಿತು. ಇದಕ್ಕೂ ಮುಂಚೆ ಕೂಡಿದ್ದ ಸಮ್ಮೇಳನವನ್ನು ಕಂಡವರು ಒಬ್ಬರೂ ಜೀವಂತವಿಲ್ಲದ್ದರಿಂದ, ಮಂಗವಾಡದ ಸಮ್ಮೇಳನವೆ ಮೊದಲಿನದೆಂದು ಹೇಳಬಹುದು. ಅತ್ಯಂತ ಶ್ಲಾಘ್ಯವಾದ ಸಂಗತಿ ಎಂದರೆ ಅದೇ ಕಾಲಕ್ಕೆ ಅನೇಕ ಕಡೆ ಅನೇಕ ಸಮ್ಮೇಳನಗಳಿದ್ದುದರಿಂದ, ಗೊತ್ತುವಳಿಗಳ Rationing ಆಗಿ ಮಂಗವಾಡದ ಏಕೀಕರಣ ಸಮ್ಮೇಳನದ ಪಾಲಿಗೆ ಒಂದೇ ಗೊತ್ತುವಳಿ ದೊರಕಿತು. ಬಂದವರೆಲ್ಲ ಮೈಗೆ ಮೈ ತುರಿಸಿ ಆ ಗೊತ್ತುವಳಿಯನ್ನು ಈ ರೀತಿಯಲ್ಲಿ ಸ್ವೀಕರಿಸಿದರು:

'ಇಂದು ಕರ್ನಾಟಕವು ಒಡೆದು ಹಂಚಿಹೋಗಿದೆ; ಅನೇಕ ಜಾತಿಗಳಲ್ಲಿ ಹರಿದು ಹಂಚಿಹೋಗಿದೆ, ಆದ್ದರಿಂದ ಮಿಕ್ಕ ಜಾತಿಗಳನ್ನೆಲ್ಲ ಹೊರದೂಡಿ ಕರ್ನಾಟಕವನ್ನು ಒಂದೇ ಜಾತಿಯ ಪ್ರಾಂತವನ್ನಾಗಿಸಬೇಕು;

'ಕರ್ನಾಟಕವು—ಇದಲ್ಲದೆ—ಬೆಳಗಾಂವಿ, ಧಾರವಾಡ, ಮೈಸೂರು, ಮಂಗಳೂರು,—ಮುಂತಾಗಿ ಅನೇಕ ಪಟ್ಟಣಗಳಾಗಿ ಹರಿದು ಹಂಚಿ ಹೋಗಿದೆ; ಈ ಪಟ್ಟಣಗಳನ್ನೆಲ್ಲ ಕೆಡವಿ ಕರ್ನಾಟಕವು ಒಂದೇ ಸಮನಾದ ಪ್ರಾಂತವಾಗಬೇಕು;

'ಮೈಸೂರುಗನ್ನಡ, ದಕ್ಷಿಣ ಕನ್ನಡ, ಉತ್ತರ ಕನ್ನಡ ಹೀಗೆ ಬೇರೆ ಬೇರೆ ಭಾಷೆಗಳ ಉಪಟಳ ಹೆಚ್ಚಾದ್ದರಿಂದ, ಸಂಸ್ಕೃತಿಗಾಗಿ ಇಂಗ್ಲಿಷನ್ನಾಗಲಿ ಬಾಂಧವ್ಯಕ್ಕಾಗಿ ಮರಾಠಿ-ತಮಿಳು-ತೆಲುಗಗಳನ್ನಾಗಲಿ ದೇಶಭಕ್ತಿಗಾಗಿ ಹಿಂದಿಯನ್ನಾಗಲಿ ಕಲಿಯುವುದು ಕಠಿಣವಾಗಿದೆ; ಆದ್ದರಿಂದ ಅನೇಕ ತರದ ಕನ್ನಡ ಭಾಷೆಗಳನ್ನು ಕಿತ್ತೊಗೆದು ಒಂದೇ ಪರಭಾಷೆಯ ಪ್ರಾಂತವಾಗಬೇಕು.

'ಕೊನೆಯದಾಗಿ, ಮೇಲೆ ಸೂಚಿಸಿದಂತೆ ಏಕೀಕರಣವನ್ನು ಕೂಡಲೆ ಸಾಧಿಸಲು ಮಿಸ್ ಗೋದಾವರಿಯ ಅಧ್ಯಕ್ಷತೆಯಲ್ಲಿ ಮಿಸ್‌ಗಳಾದ ಕಾವೇರಿ, ಕೃಷ್ಣಾ, ಭೀಮಾ ಮತ್ತು ತುಂಗಾಬಾಯಿ ಇವರ ಉಪಸಮಿತಿಯನ್ನು ರಚಿಸಬೇಕು ಈ ಉಪಸಮಿತಿಗೆ ಮಿಸ್ ತುಂಗಾಬಾಯಿಯ ಸಹೋದರಿಯಾದ ಮಿಸ್ ಭದ್ರಾ ಇವಳು ಕಾರ್ಯದರ್ಶಿಯಾಗಬೇಕು!

ಬೋಲೊ! ಕರ್ನಾಟಕ ಪೀರಮಾತೆಗೆ—ಅಲ್ಲಲ್ಲ—ವೀರಮಾತೆಗೆ—ಜಯ—ಹೊಡೆಯು—ಬೋಲೊ!

* * *

೨. ಬೇ-ಕೀ-ಕ-ರ-ಣ

ಧಾರವಾಡದಲ್ಲೂ ಒಂದು ಏಕೀಕರಣ ಸಮ್ಮೇಳನವಾಯಿತೆಂದು ವಾಚಕನೊಬ್ಬನು ಮಂಗರಾಯನ ಎದುರು ತಕರಾರನ್ನು ಹೂಡಿದ್ದಾನೆ. 'ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಸಮ್ಮೇಳನಗಳು ನಡೆದಾಗ ಧಾರವಾಡದಲ್ಲೇಕೆ ಏಕೀಕರಣ?' ಎಂದು ಈ ವಾಚಕನ ತಕರಾರು! ಛಡಛಡ! ಎಂತೆಂತಹನು ಜ್ಞಾನಂ ಗಡ! ಎಂದರೆ, ಒಂದೇ ಧಾರವಾಡದಲ್ಲಿ ಏಕೀಕರಣವಾದರೆ ಮುಂದೇನು ತಡ—ಎಂದು! ಯಾಕೆಂದರೆ, ಧಾರವಾಡದಲ್ಲಿ ಒಂದಲ್ಲಿಯೆ

೧. ಪ್ರಮುಖ ರಾಷ್ಟ್ರೀಯ ಮುಂದಾಳುಗಳಿದ್ದಾರೆ,
೨. ಕಾರವಾರ ಜಿಲ್ಲೆ ಕೊಂಕಣಿ ಎಂಬ ಕನ್ನಡಿಗರಿದ್ದಾರೆ,
೩. ಮೈಸೂರಿನ ಮುಂದಾಳುತನದಲ್ಲಿ ಮುಳಿದ ಉತ್ತರ ಕನ್ನಡದವರಿದ್ದಾರೆ,
೪. ಕರ್ನಾಟಕವು ಬ್ರಾಹ್ಮಣೇತರರದು ಎಂಬ ನಿಸ್ವಾರ್ಥ ಬ್ರಾಹ್ಮಣರಿದ್ದಾರೆ,
೫. ಧಾರವಾಡವನ್ನು ಬೆಂಗಳೂರಿನ ವಶಮಾಡಬೇಕೆಂಬ ಉಮೆಯ ಭೇರುಂಡರಿದ್ದಾರೆ,
೬. ಬೆಳಗಾಂವಿಯನ್ನ ಧಾರವಾಡ ಎಂದು ತಿಳಿಯಬೇಕು ಎನ್ನುವವರೂ ಇದ್ದಾರೆ,

ಮತ್ತು—

ಅಥವಾ ಸಾಕಲ್ಲವೆ? ಏಕೀಕರಣದ ಅವಶ್ಯಕತೆಗೆ ಇನ್ನೆಷ್ಟು ಸಾಮಗ್ರಿ ಬೇಕು?

* * *

೩. ಮಂಗರಾಯನ ಅಕಾರ್ಯಕ್ರಮ

ಇತ್ತೀಚೆಗೆ ಎಲ್ಲಿ ನೋಡಿದಲ್ಲಿ ಪ್ರಗತಿಯ ಕೂಗು ಕೇಳುತ್ತಿದ್ದು ಸಮ್ಮೇಳನಗಳ ಕಾರ್ಯಕ್ರಮದಲ್ಲೂ ಒಂದು ಪ್ರಗತಿ, ಒಂದು ಕ್ರಾಂತಿ ಆಗಬಾರದೇಕೆ ಎಂದು ಜಗಿದೆದ್ದ ಮಂಗರಾಯನು ಮಿಕ್ಕವರಿಗಾಗಿ ಒಂದು ದಿನದ ಸಮ್ಮೇಳನದ ಮಾದರಿಯ ಕಾರ್ಯಕ್ರಮವನ್ನು ಇಲ್ಲಿ ಕಾಣಿಸುತ್ತಿದ್ದಾನೆ.

ಬೆಳಗಿನಲ್ಲಿ	೬ ರಿಂದ	ಏಳಲು ಪ್ರಾರಂಭ
	೭ ರಿಂದ ೮	ಉತ್ಸವ
	೮ ರಿಂದ ೯	ಭಾಷಣ
	೯ ರಿಂದ ೧೦	ಆಭಾರ
	೧೦ ರಿಂದ ೧೧	ಮನ್ನಣೆ
	೧೧ ರಿಂದ ೧೨	ಊಟ
	೧೨ ರಿಂದ ೧	ಹಾರ
ಮಧ್ಯಾಹ್ನದಲ್ಲಿ	೧ ರಿಂದ ೨	ಹರಿ
	೨ ರಿಂದ ೩	ಜಯಂ
	೩ ರಿಂದ ೪	ಸ್ವಾ-
	೪ ರಿಂದ ೫	ಗತ-
	೫ ರಿಂದ ೬	ಅಧ್ಯಕ್ಷ
	೬ ರಿಂದ ೭	ಭಾಷಣ
ಸಾಯಂಕಾಲದಲ್ಲಿ	೭ ರಿಂದ ೮	ಮುಂದಿನ
	೮ ರಿಂದ ೯	ಅಧ್ಯಕ್ಷ
ರಾತ್ರಿಯಲ್ಲಿ	೯ ರಿಂದ ೧೦	ಆ-
	೧೦ ರಿಂದ ೧೧	ಹಾರ
	೧೧ ರಿಂದ ೧೧-೫೫	ಪರಿಚಯ
	೧೧-೫೫ ರಿಂದ ೧೨	ಉಧ್ಯಕ್ಷರ ಭಾಷಣ

ಸಿರಿಗನ್ನಡಂ ಗೆಲ್ಗೆ! ಬಂದವರ್ಗಂ ಸೋಲ್ಗೆ!!



ಪುಸ್ತಕ ದೊರೆಯುವ ಸ್ಥಳ:—
ವಾಗ್ವಿಲಾಸ ಬುಕ್-ಡಿಪೋ ಮತ್ತು ಪವರ್ ಪ್ರಿಂಟಿಂಗ್ ಪ್ರೆಸ್, ಹುಬ್ಬಳ್ಳಿ.

ಕರ್ನಾಟಕ ವಿಜಯಂ

ದೇಸಾಯಿ ಪಾಂಡುರಂಗರಾಯ ಎಂ. ಎ. ನೀಲಗಿರಿ

*

ಇದೀಗ ನಾನು ಹೇಳಹೊರಟಿರುವುದು ಪ್ರಾಚೀನ ಚರಿತ್ರೆಯಲ್ಲಿ ಕರ್ನಾಟಕವು ಹಿಂದೆ ಮೆರೆಯಿಸಿದ ಶೌರ್ಯ-ಪರಾಕ್ರಮಗಳ ವರ್ಣನೆಯಲ್ಲ. ಈ ವಿಧದ ಕಷ್ಟಗಳಲ್ಲಿ ಓದುಗರನ್ನು ಸಿಲುಕಿಸಿ ಗಾಸಿಗೊಳಿಸುವುದು ನನಗೆ ಇಷ್ಟವಿಲ್ಲ. ನಾನು ಇಲ್ಲಿ ಹೇಳಬೇಕೆಂದಿರುವುದು ಇಂದಿನ ಕರ್ನಾಟಕದ ಒಂದು ಸಮಾಚಾರ ಕನ್ನಡಿಗರ ಒಂದು ಕತೆ. ಕತೆ ವಿಚಿತ್ರವಾಗಿದ್ದರೂ ರಹಸ್ಯಪೂರ್ಣವಾಗಿದೆ.

ತಮಿಳ ಭಾಷೆಯ 'ಕಲೈಮಗಳ್' ಎಂಬ ನಾಮಾಂಕಿತ ಮಾಸಪತ್ರಿಕೆಯಲ್ಲಿ, ಸ್ವಲ್ಪ ದಿನಗಳ ಹಿಂದೆ ಒಂದು ಸಣ್ಣಕತೆ ಪ್ರಕಟವಾಗಿದೆ. ಅದರಲ್ಲಿ ಇಂದಿನ ನವನಾಗರಿಕತೆಗೆ ಮಾನಸೋತ ಒಬ್ಬ ಸುಶಿಕ್ಷಿತ ಹಿಂದಿ ಯುವಕನು. ಹಳೆಯ ತರದ ಸಂಸ್ಕಾರವುಳ್ಳ ತನ್ನ ಅರ್ಧಾಂಗಿಯ ವಿಷಯದಲ್ಲಿ ಅಸಡ್ಡೆಯನ್ನು ತಾಳುವನು. ಮುಂದೆ ಆತನು ತನ್ನ ಮಾವನ ಹೆಚ್ಚಿನ ಹಣದಿಂದ ಐ. ಸಿ. ಎಸ್. ಪರೀಕ್ಷೆಯ ಅಭ್ಯಾಸ ಮಾಡಲು ಇಂಗ್ಲೆಂಡಿಗೆ ಪ್ರಯಾಣ ಮಾಡುವನು. ಅಲ್ಲಿರುವಾಗ, ಒನಪು-ಒಯ್ಯಾರಗಳಿಂದ ನಲಿಯುವ ಒಬ್ಬ ಪಾಶ್ಚಾತ್ಯ ಮೋಹಿನಿಯ ಪ್ರಣಯಜಾಲದಲ್ಲಿ ಸಿಲುಕಿ ಅವಳನ್ನು ಮದುವೆಯಾಗುವನು. ವಿವಾಹವಾದ ಬಳಿಕ ಸ್ವಲ್ಪ ದಿನಗಳಲ್ಲಿಯೇ ಆಕೆಯ ನೋಗು ಹೊಣೆಗೆ ಒಳಪಟ್ಟು ಬಿಸು-ಬಿಸುಪು ಆಕೆಯ ಕೈಯಿಂದ ಅನಾದರ-ಅಪಮಾನಗಳನ್ನು ಸಹಿಸಬೇಕಾಗುವುದಲ್ಲದೆ, ಅವಳ ರೂಪ-ಯೌವನ ಮಾದರಿ ಕೃತ್ರಿಮವೆಂದು ಆತನ ಅನುಭವಕ್ಕೆ ಬರುವುದು. ಆತನು ಮುಂದೆ ಆ ಬಳಿಕ ಮದ ಸರಿದ ಹೋದ ಕಾರ್ಯವನ್ನು ಮುಗಿಸಿಕೊಂಡು ಮರಳಿ ಸ್ವದೇಶಕ್ಕೆ ಬರುವನು. ಹೀಗೆ ಒಬ್ಬಂಟಿಗರಿತು ಬಂದ ಆತನು, ತನ್ನ ಪುರಾಣ ಸಂಪ್ರದಾಯದ ಹಳೆಯ ಹೆಂಡತಿಯನ್ನು ಪ್ರೀತಿಸುವುದರಲ್ಲಿಯೇ ಶ್ರೇಷ್ಠತೆಯನ್ನು ತಿಳಿಯುವನು! ಈ ಮೇರೆಗೆ ಈ ಕತೆಯಲ್ಲಿ ಹಳೆಯ ಸಂಪ್ರದಾಯದ ಶ್ರೇಷ್ಠತೆಯನ್ನು ಎತ್ತಿ ತೋರಿಸಿರುವುದರಿಂದ, ಲೇಖಕರು ತಮ್ಮ ಅಭಿಪ್ರಾಯದಂತೆ ತಕ್ಕುದಾದ "ಕರ್ನಾಟಕ ವಿಜಯಂ" ಎಂಬ ತಲೆಬರಹವನ್ನು ಈ ಕತೆಗೆ ಕೊಟ್ಟಿರುವರು. ಇದರ ಕಾರಣವೇನು ಗೊತ್ತೆ? "ಕರ್ನಾಟಕ" ಎಂದರೆ "ಪುರಾಣಪ್ರವೃತ್ತಿ, ಹಳೆಯ ಸಂಪ್ರದಾಯ" ಎಂಬ ಅರ್ಥ.

ಹಿಂದಿನ ತಮಿಳ ಸಾಹಿತ್ಯದಲ್ಲಿ ಇಲ್ಲದಿದ್ದರೂ, ಇಂದಿನ ತಮಿಳ ವಾಙ್ಮಯದಲ್ಲಿಯೂ ವ್ಯಾವಹಾರಿಕ ಭಾಷೆಯಲ್ಲಿಯೂ "ಕರ್ನಾಟಕ" ಎಂಬ ಪದಕ್ಕೆ ಈ ವಿಧದ ಅರ್ಥವು ರೂಢವಾಗಿದೆ. 'ಅವ್ಯವಸ್ಥೆ ತುಂಬಿ ಹೋಗಿದೆ' ಎಂದು ಹೇಳುವುದಾದರೆ ತಮಿಳರು ತಮ್ಮ ಮಾತಿನಲ್ಲಿ 'ರೊಂಬ ಕರ್ನಾಟಕಮಾಯಿರ್ಕುಂ (ತುಂಬ ಕರ್ನಾಟಕವಾಗಿದೆ)' ಎಂದು ಮೇಲಿಂದ ಮೇಲೆ ಹೇಳುವುದುಂಟು. ಇದಲ್ಲದೆ 'ಮೂಢನಂಬಿಕೆ, ಅಂಧವಿಶ್ವಾಸ' ಮುಂತಾದ ಅರ್ಥವನ್ನು ವ್ಯಕ್ತ ಮಾಡುವಾಗಲೂ ತಮಿಳರು 'ಕರ್ನಾಟಕ' ಎಂಬ ಶಬ್ದವನ್ನು ಸಹಾಯಕ್ಕೆ ತೆಗೆದುಕೊಳ್ಳುವರು. ಅದು ಹೀಗೆ: 'ಕರ್ನಾಟಕ ಕ್ಕುರುಟ್ಟು ನಂಬಿಕ್ಕೈಹಳ್' ಎಂದರೆ 'ಹಳೆಯ ಸಂಪ್ರದಾಯದ ಕುರುಡು ನಂಬಿಕೆಗಳು.'

"ಕರ್ನಾಟಕ" ಎಂಬ ಶಬ್ದಕ್ಕೆ ತಮಿಳಿನಲ್ಲಿ ಈ ಪರಿಯ ಅರ್ಥವು ಹೇಗೆ ಉಂಟಾಯಿತು, ಯಾವಾಗ ಉಂಟಾಯಿತು?—ಎಂಬ ವಿಷಯದಲ್ಲಿ ಅನ್ವೇಷಣವನ್ನು ನಡೆಸುವುದು ಒಂದು ವಿಧದ ವಿನೋದವಾಗಬಹುದು. ಆದರೆ ಆ ವಿನೋದದ ಹಿನ್ನೆಲೆಯಲ್ಲಿ ಎಂತಹ ಗಂಭೀರವಾದ ಒಂದು-ನೈತಿಕ, ಸಾಮಾಜಿಕ, ಜನಾಂಗಿಕ ಸಮಸ್ಯೆ ಅಡಗಿಕೊಂಡಿದೆ ಎಂಬುವನ್ನು ನೋಡಿದರೆ, ಆ ವಿನೋದವು ಹಿಂಗಿ ವಿಷಾದವು ತಲೆಯೆತ್ತದಿರಲಾರದು. ಯಾವ ತಮಿಳ ನಾಡಿನಲ್ಲಿ "ಕರ್ನಾಟಕ ಸಂಗೀತ" ಎಂಬುದು ಅತ್ಯಂತ ಗೌರವದ ವಿಷಯವಾಗಿದೆಯೋ, ಅದೇ ಆ ನಾಡಿನಲ್ಲಿ "ಕರ್ನಾಟಕ" ಎಂಬ ಮಾತಿಗೆ ಇಷ್ಟು ತುಚ್ಛವಾದ ಅಭಿಪ್ರಾಯ ಉಂಟಾದ ವಿಪರ್ಯಾಸವನ್ನು ನೋಡಿ, ಈ ವಿಷಾದದ ಭಾವನೆ ಇನ್ನಿಷ್ಟು ಉತ್ಕಟವಾಗುವುದು!

ತೆಲುಗಿನಲ್ಲಿ 'ಕನ್ನಡ' ಎಂಬ ಮಾತಿಗೆ 'ಅನಾದರ, ಉಪೇಕ್ಷೆ' ಎಂಬ ಅರ್ಥ; 'ಕನ್ನಡಿಂಚು' ಎಂದರೆ 'ಉಪೇಕ್ಷಿಸು.'

'ದೇಶಸ್ಥ ಪ್ಯಾಣಜೀ ಬೇಶಿಸ್ತ' (ಅವ್ಯವಸ್ಥಿತನಾದವನು ದೇಶಸ್ಥ!) 'ಅಸ್ತವ್ಯಸ್ತ ಸಮಸ್ತ ವಸ್ತು ಮಿಳುನೀ ದೇಶಸ್ತ ನಿರ್ಮಿಯಲಾ (ಎಲ್ಲ ಅವಡು ಸವಡು ವಸ್ತುಗಳ ಒಂದು ಗಂಟೆಂದರೆ ದೇಶಸ್ಥ!)' ಮುಂತಾದ ಮರಾಠೀ ಭಾಷೆಯಲ್ಲಿಯ ವಚನಗಳು ಮಹಾರಾಷ್ಟ್ರದಲ್ಲಿಯ ದೇಶಸ್ಥ ಜಾತಿಯ ಜನಗಳ ಜೊತೆಗೆ ಕರ್ನಾಟಕದ ಜನಗಳಿಗೂ ಅನ್ವಯಿಸುತ್ತವೆ. ಮಹಾರಾಷ್ಟ್ರದ ನಾಟಕಕಾರ—ಗಡಕರಿ 'ರುಂಡು ಕುಂಡು ಗುಂಡು' ಮುಂತಾದ ನಿರರ್ಥಕ ಉಚ್ಚಾರಗಳಿಂದ ಕನ್ನಡ ಭಾಷೆಯಲ್ಲಿ ಅರ್ಥವುಂಟಾಗುವುದು—ಎಂದು ಸೂಚಿಸಿದುದು ಮತ್ತು ಆತನ ಗುರುವಾದ ಶ್ರೀ. ಕೃ. ಕೊಲ್ಹಟಕರ್ 'ಗಡಿಗೆಯಲ್ಲಿ ಹರಳನ್ನು ಹಾಕಿ ನಡಿಸಿದರೆ ಕನ್ನಡ ಮಾತಾಡಿದಂತೆ ಅಭಿಪ್ರಾಯವಾಗುವುದು' ಎಂದು ಹೇಳುವುದು ಕನ್ನಡದ ಬಗೆಗೆ ಮರಾಟರು ತಾಳುವ ತಿಳವಳಿಕೆಗಳಿಗೆ ನಿದರ್ಶನವಾಗಿವೆ. 'ರೊಂಬ ಕರ್ನಾಟಕಮಾಯಿರ್ಕುಂ' ಎಂದು ತಮಿಳರು ಹೇಳುವ ಮಾತಿನಲ್ಲಿ ತೋರುವ ಕನ್ನಡದ ಅವಹೇಳನೆ 'ಕಾನಡೀ ಅಪ್ಪಾ' ಎಂಬ ಮರಾಟರ ಅಣಕದ ನುಡಿಯಲ್ಲಿಯೂ ವ್ಯಕ್ತವಾಗುವುದು.

ಒಂದು ಜನಾಂಗದವರು ಇನ್ನೊಂದು ಜನಾಂಗದವರನ್ನು ಕುರಿತು ಕೊಂಕುಮಾತುಗಳನ್ನು ಆಡುವುದು ವಾಡಿಕೆಯಾದುದು ಎಂದು ಇಟ್ಟುಕೊಂಡರೂ, ಅಂತಹ ಮಾತುಗಳು ಈ ವಿಧವಾಗಿ ಭಾಷಾಪ್ರಯೋಗಗಳಾಗಿ ನಿಲ್ಲುವುದು ಮಾತ್ರ ಹುಡುಗಾಟಿಕೆಯಲ್ಲ! ಇದೊಂದು ಬರಿಯ ಪರಿಹಾಸವಲ್ಲ, ಜನಾಂಗದ ಹುಟ್ಟನ್ನು ನಿವೇದಿಸುವ ಉಪಹಾಸಪ್ರಬಂಧ. ಇದರಿಂದ ಈಚಿನ ಕಾಲದಲ್ಲಿ ಕರ್ನಾಟಕವೂ ಕನ್ನಡ ಜನಗಳೂ ತಮ್ಮ ಗೌರವವನ್ನು ಕಳೆದುಕೊಂಡು, ಅನ್ಯಜನಾಂಗದವರಿಗೆ ಹೇಗೆ ಅಭಾಸವಾಗಿ ಅನಾಮಧೇಯರಾಗಿ ಕಾಣುತ್ತಿರುವರು ಎಂಬುದು ಸ್ಫುಟವಾಗುವುದು. ಅನ್ಯಜನಾಂಗದಲ್ಲಿ ತಮ್ಮ ಬಗೆಗೆ ಉಂಟಾದ ಈ ಅನಾದರ ಭಾವನೆಯನ್ನು ತೊಡೆದು ಹಾಕಿ, ತಮ್ಮ ಯೋಗ್ಯತೆ-ಗೌರವಗಳನ್ನು ಮತ್ತೆ ಪ್ರಸ್ಥಾಪಿಸುವುದು ಇಂದಿನ ಕನ್ನಡಿಗರ ಒಂದು ಹೊಣೆಯಾಗಿದೆ. ಇದನ್ನು ನಾವು ಅರಿತಷ್ಟೂ ಒಳ್ಳೆಯದು.

ಪ್ರಿನ್ಸಿಪಾಲ್ ಬಿ. ಆರ್. ಶೆಣಾಯ್

ಅಹಮ್ಮದಾಬಾದಿನಲ್ಲಿರುವ ಒಬ್ಬ ಕನ್ನಡದ ಕಡುಗಲಿ !

✲

ಶ್ರೀ ಎಚ್. ಎಸ್. ಪಾಟೀಲ ಎಂ. ಎ., ಬಿ. ಕಾಮ್. **ಮುಂಬಯಿ**

(ಪ್ರಿನ್ಸಿಪಾಲ್ ಶೆಣಾಯ್ ಅವರು, ತಾ. ೮-೬-೧೯೦೮ನೆಯ ದಿನ ಮಂಗಳೂರಲ್ಲಿ ಹುಟ್ಟಿದರು. ಇವರು ಬನಾರಸ ಹಿಂದು-ವಿಶ್ವವಿದ್ಯಾಲಯದ ಎಂ. ಎ. ಪದವೀಧರರಿದ್ದು, ಲಂಡನ್ ವಿ. ವಿ. ನಿಲಯದ ಎಕಾನಾಮಿಕ್ ಎಂ. ಎಸ್ ಸಿ. ಪದವಿ ಪಡೆದಿರುವರು. ವಿದ್ಯಾಭ್ಯಾಸ ಮುಗಿಸಿದ ಮೇಲೆ, ಸಿಲೋನಿನ ವಿಶ್ವವಿದ್ಯಾನಿಲಯದಲ್ಲಿ ಕೆಲಕಾಲ ಅರ್ಥಶಾಸ್ತ್ರದ ಅಧ್ಯಾಪಕರಾಗಿ ಇದ್ದರು, ಬಳಿಕ ಕಮಿಶನರ್ ಆಫ್ ಕರನ್ಸಿ ಅಧಿಕಾರದಲ್ಲಿದ್ದರು. ಕೆಲವು ಸಮಯ ಸಿಂಹಲ ಸರಕಾರದ ವ್ಯಾಪಾರ ಮತ್ತು ಉದ್ಯೋಗ ಇಲಾಖೆಗೆ ಎಡ್‌ವೈಜರ್ ಎಂದು ಕೆಲಸಮಾಡಿ, ಈಗ ಅಹಮ್ಮದಾಬಾದಿನ ಕಾಲೇಜೊಂದರಲ್ಲಿ ಪ್ರಿನ್ಸಿಪಾಲರಾಗಿದ್ದಾರೆ. ಬ್ಯಾಂಕಿಂಗ್, ಕರನ್ಸಿ ಮತ್ತು ಫೈನ್ಯಾನ್ಸ್ ಮೊದಲಾದ ವಿಷಯಗಳ ಮೇಲೆ ಮೂರು-ನಾಲ್ಕು ಗ್ರಂಥಗಳನ್ನು ಬರೆದಿರುವರು. ಅಲ್ಲದೆ ಅನೇಕ ಲೇಖನಗಳನ್ನೂ ಬರೆದಿರುವರು. ಮಂಗಳೂರಿನ ಶ್ರೀಮಾನ್ ಎಚ್. ಕೇಶವ ಕಾಮತ ಅವರ ಮಗಳು—ಶ್ರೀಮತಿ ಅನಸೂಯಾದೇವಿ ಎಂಬ ಸುವಿದ್ಯ ಮಹಿಳೆಯೊಂದಿಗೆ ೧೯೩೯ರಲ್ಲಿ ಇವರಿಗೆ ಮದುವೆಯಾಗಿದೆ. ಕನ್ನಡದ ಬಗೆಗೆ ತುಂಬ ಅಭಿಮಾನ ಆದರಗಳಿವೆ ಇವರಲ್ಲಿ.)

ಅದು ಮೂರು ತಾಸುಗಳ ಒಂದು ಸಂದರ್ಶನ—ಅಥವಾ ಸಾಮಾನ್ಯವಾದ ಹರಟೆಯೆಂದರೂ ಸಲ್ಲುವುದು. ಅದರಲ್ಲಿ ಮೂರು ಲೋಕಗಳ ಮತ್ತು ಮೂರು ಕಾಲಗಳ ವಿಷಯಗಳನ್ನು ಕುಂತು ನಾವು ಮಾತನಾಡಿದೆವು. ಹಾಗೆ ಕೇಳಿದರೆ—ಅವರಿಗೆ ನಾನು ತೀರ ಅಪರಿಚಿತ; ಒಬ್ಬರನ್ನೊಬ್ಬರು ಎಂದೂ ಅದಕ್ಕೆ ಮುಂಚೆ ನೋಡಿರಲಿಲ್ಲ ಕೂಡ. ಆದರೂ ಸಕೃದ್ದರ್ಶನದಲ್ಲಿಯೆ ಅವರು, ನಾನಾರು ಎಂಬುದನ್ನು ತಿಳಿದುಕೊಂಡರಲ್ಲದೆ, ಮೊದಲಿನ ನಾಲ್ಕು ಮಾತುಗಳಲ್ಲಿಯೆ, ಒಂದೆರಡು ನಿಮಿಷಗಳಲ್ಲಿಯೆ, ನನ್ನೊಡನೆ ಗೆಳೆತನದ ಸಲುಗೆಯಿಂದ ನಡೆದುಕೊಳ್ಳತೊಡಗಿದರು.

ಅದೊಂದು ಆದಿತ್ಯವಾರದ ಮುಂಜಾವು; ನಾನು ಅಹಮ್ಮದಾಬಾದದ ಒಂದು ಊಟದ ಮನೆಯಲ್ಲಿ ನನ್ನ ಬಟ್ಟೆಗಳನ್ನು ಬದಲು ಮಾಡಿಕೊಂಡು, 'ಸ್ಥಾನ ಮಾಹಾತ್ಮ್ಯ ಎಂದರೇನು ?' ಎಂಬ ವಿಷಯವಾಗಿ ವಿಚಾರ ಮಾಡುತ್ತ—ಬಸ್ಸಿನಲ್ಲಿ—ಅಲ್ಲಿಯ **ಶೇಠ ಲಾಲಭಾಯಿ ದಳಪತಭಾಯಿ** ಆರ್ಟ್ಸ ಕಾಲೇಜಿನ ಕಡೆಗೆ ಹೊರಟಿದ್ದೆ. ಆ ಇಕ್ಕಟ್ಟಿನ—ಹೊಲಸಿನಿಂದ ತುಂಬಿದ—ಊರ ದಾರಿಗಳೊಳಗಿಂದ ಬಸ್ಸು ದಾಟಿ ಹೋಗುವಾಗ 'ಈ ಊರ ಆರೋಗ್ಯ ಚೆನ್ನಾಗಿರಲಿಕ್ಕೆ ಸಾಧ್ಯವೆ ಇಲ್ಲ—ಈ ಬಗೆಯ ದೂಳು ಮತ್ತು ಇಕ್ಕಟ್ಟುಗಳಲ್ಲಿ ಮನುಷ್ಯನು ಸುದೃಢವಾಗಿ ಇರಬಹುದೆ ?' ಎಂದು ಧ್ಯಾನಿಸುತ್ತಿದ್ದಾಗಲೆ, ಬಸ್ಸು ಮೆಲ್ಲಗೆ ಊರಹೊರಗಿನ ಭಾಗದಲ್ಲಿ ಬಂದಿತು. ಕೂಡಲೆ ನನ್ನ ಚಿತ್ತವು ಮತ್ತೆ ಮೊದಲಿನ ವಿಚಾರದ ಎಳೆಯನ್ನು ಹಿಡಿಯಿತು: 'ಕಳೆದ ಐದು ವರುಷ, ಈ ಕಾಲೇಜನ್ನು ಆರಂಭಮಾಡುವ ಕಾರ್ಯದಿಂದಲೇ ಆರಂಭವಾಗಿ **ಡಾ. ವಿಜಯೀಂದ್ರರಾಯರಂತಹ** ಕನ್ನಡದ ಹೆಸರಾದ ಅರ್ಥಶಾಸ್ತ್ರಜ್ಞರು ಇದಕ್ಕೆ ಪ್ರಿನ್ಸಿಪಾಲರಾಗಿ ದೊರೆತರು. ಈಗ ಮತ್ತೆ ಪ್ರಿನ್ಸಿಪಾಲ್ ಶೆಣಾಯ್ ಅವರಂತಹ ಕನ್ನಡದ ಕಡುಗಲಿ ಇದಕ್ಕೆ ಸಿಕ್ಕರು—ಎಂದ ಮೇಲೆ—ಈ ಸ್ಥಾನಕ್ಕೆ ಕನ್ನಡಿಗರೇ ಅಧಿದೇವತೆಯಾಗಿ ನಿಲ್ಲುವ ಮಾಹಾತ್ಮ್ಯ ಇದೆಯೆ ? ....'

ಅಷ್ಟರಲ್ಲಿ ಕಾಲೇಜಿನ ಕಟ್ಟಡವು ಕಾಣತೊಡಗಿತು. ಊರ ಆ ಭಾಗವು—ಎಂದರೆ ಅದಕ್ಕೆ ನವರಂಗಪುರ ಎನ್ನುವರು—ಹೆಚ್ಚು ಬಿಡಿಯಾಗಿ ಬೆಳೆದಿದ್ದು—ಓರಣದಿಂದ ಒಪ್ಪುವ ಮನೆಗಳಿಂದ ತುಂಬಿದೆ. ಅಂತೆಯೆ ಅತ್ತಿತ್ತ ಸುತ್ತಲಿನ ಪ್ರದೇಶವನ್ನು ನಾನು ನೋಡುತ್ತಿರುವಷ್ಟರಲ್ಲಿ, ಆರ್ಟ್ಸ ಮತ್ತು ಕಾಮರ್ಸ ಕಾಲೇಜುಗಳ ಜೋಡುಕಟ್ಟಡವು ಗೋಚರಿಸಿತು. ಕೂಡಲೆ ನನ್ನ ಕಣ್ಣೆದುರಿನಲ್ಲಿ ನಮ್ಮ ಕರ್ನಾಟಕ ಕಾಲೇಜಿನ ಆ ರಮ್ಯವಾದ ಆವರಣ, ಭವ್ಯವಾದ ಕಟ್ಟಡಗಳು ಸುಳಿದುಹೋದುವು. 'ಪ್ರಾಂತದ ಈ ಭಾಗದಲ್ಲಿ ಹೇಗೆ ಬೇರೆ ಬೇರೆ ಶಾಸ್ತ್ರಗಳ ಶಿಕ್ಷಣವನ್ನು ಕೊಡುವ ಸಂಸ್ಥೆಗಳು ಒಂದೊಂದಾಗಿ ಹುಟ್ಟತೊಡಗಿದುವಲ್ಲ—ನಮ್ಮಲ್ಲಿ ಇದ್ದು ಬಿದ್ದುದೆಂದರೆ ಒಂದು ಆರ್ಟ್ಸ ಕಾಲೇಜು—! ಧಾರವಾಡ ನಿಲ್ದಾಣದ ಎಡಬದಿಯ ಆ ದಿನ್ನೆಯ ಮೇಲೆ, ಇಂತಹವೆ ಆದ ನಾಲ್ಕಾರು ಶಿಕ್ಷಣಮಂದಿರಗಳು ಎಂದು ನಮಗೆ ಕಂಡಾವು ?' ಎಂಬ ಪ್ರಶ್ನೆಯೂ ಅದೇ ಕ್ಷಣದಲ್ಲಿ ಉದ್ಭವಿಸಿತು.

ಬಸ್ಸು ನಿಂತಿತು. ನನ್ನ ವಿಚಾರಕ್ಕೆ ತಡೆಯೊದಗಿತು. ನಾನು ಪ್ರಿನ್ಸಿಪಾಲರ ಬಂಗಲೆಯನ್ನು ಹೊಕ್ಕೆ.

"ತಮಗೆ ಯಾರು ಬೇಕು ?" ಎಂದು ನನ್ನ ಎದುರಿಗೆ ಕಾಣುವ ಇಬ್ಬರಲ್ಲಿ, ಹಿರಿಯರೊಬ್ಬರು ಗುಜರಾತಿಯಲ್ಲಿ ಕೇಳಿದರು.

"ನಾನು ಪ್ರಿ. ಶೆಣಾಯ್ ಅವರ ಕಡೆಗೆ ಬಂದಿರುವೆ". ಎಂದು ಕನ್ನಡದಲ್ಲಿ ಹೇಳಿದೆ. ಅವರು ತಟ್ಟನೆ ತಡೆದು, ತುಸು ನಗುತ್ತ

"ಓಹೊ, ಮಿ. ಪಾಟೀಲ—ಯಾವಾಗ ಬಂದುದು ? ಬೊಂಬಾಯಿಯಿಂದ ?—ಬನ್ನಿರಿ—ಇತ್ತ ಬನ್ನಿರಿ !" ಎನ್ನುತ್ತ ನನ್ನನ್ನು ಮನೆಯೊಳಗೆ ಕರೆದೊಯ್ದರು. ಅತ್ತ ನನ್ನ ಲಕ್ಷ್ಯ—ಅವರ ಜೊತೆಗಿದ್ದ ಇನ್ನೊಬ್ಬರು ಒಬ್ಬ ಮಗುವನ್ನು ಮಕ್ಕಳ ಗಾಡಿಯಿಂದ ಕೆಳಕ್ಕಿಳಿಸಿಕೊಂಡು ಒಳಗೆ ಹೋಗುವುದರ ಕಡೆಗೆ—ಹರಿದಿತ್ತು.

ನಾನು ಕುಳಿತೆ. ನನ್ನೆದುರು ಕುಳಿತ ವ್ಯಕ್ತಿ—ಕುಳ್ಳ ಆಕಾರದವರಾಗಿದ್ದರೂ, ಕಿಡಿಯಂತೆ ಹಾರುವ ನೋಟವುಳ್ಳವರಾಗಿದ್ದರು.

ಸುಮಾರು ೩೭-೩೮ ವರ್ಷಗಳ ಪ್ರಾಯ; ಆದರೂ ತಲೆಯ ಮೇಲೆ, ಮಕ್ಕಳಿಗೆ ಅಂಕಿಗಳನ್ನು ಕಲಿಸಲು ಸಾಕೆನ್ನಬಹುದಾದಷ್ಟು ಕೂದಲು. ಮೊಗದ ಮೇಲೆ ಒಂದು ಮೃದುಹಾಸ್ಯ.

"ಇದೇನು, ನೀವು ನನ್ನನ್ನು ಇಲ್ಲಿಯ ಮಾತಿನಲ್ಲಿಯೆ ಕೇಳಿದಿರಿ ಮೊದಲು?" ಎಂದು ಆರಂಭ ಮಾಡಿದ ನಾನು "ನಾನು ನಿಮಗೆ ಗುಜ್ಜರಂತೆಯೆ ಕಂಡೆನೆ?" ಎಂದು ಕೇಳಿದೆನು.

"ಹಾಗೇನು ಇಲ್ಲ. ನಮ್ಮಲ್ಲಿ ಬರು-ಹೋಗುವವರು ಅವರೇ ಹೆಚ್ಚು ಇಲ್ಲಿ– ಅಂತೆಯೆ ಹಾಗೆ ಕೇಳಿದ್ದು. ನಿಮ್ಮಂತೆ ವೇಷವನ್ನು ಧರಿಸಿದರೆ, ಯಾವ ಪ್ರಾಂತದವರು ನೀವು ಎಂಬುದು ತಿಳಿವುದೇ ಇಲ್ಲ. ಅಂತೆಯೆ ಈ ಊರವರೆ ಎಂದು ತಿಳಿದುಕೊಳ್ಳುವುದು— ಮೊದಲು" ಎಂದರವರು

"ಹೌದು, ಅದೊಂದು ನಮ್ಮ ದುರ್ಭಾಗ್ಯ!" ಎಂದೆ ನಾನು. "ಕರ್ನಾಟಕದವರಿಗೆ ಕರ್ನಾಟಕದ ಹೊರಗೆ ಹೋದಾಗ—ಅವರನ್ನು ಗುರುತಿಸುವಂತಹ ಒಂದು ಉಡುಪು ಉಳಿದಿಲ್ಲ; ಕನ್ನಡಿಗರೆಲ್ಲರೂ ಹೊರಗೆ ಕೂಡ ಒಂದಾಗಿರಲು ಅವಶ್ಯಕವಾಗಿರುವ ಕನ್ನಡದ ಪ್ರಥಮಪಾಠಗಳ ಶಿಕ್ಷಣ, ಕನ್ನಡದಲ್ಲಿಯೆ ಸಿಕ್ಕುವಂತಹ ಅನುಕೂಲತೆಯಾಗಿಲ್ಲ" ಎಂದು ಮೆಲ್ಲಗೆ ಒಂದು ವಿಷಯದ ಪ್ರಸ್ತಾಪವನ್ನು ಮಾಡಿದೆ. ಅವರಿಗೆ ಆ ವಿಚಾರವು ತಿಳಿಯಿತು. ಅವರ ಮಕ್ಕಳು ಇನ್ನೂ ಚಿಕ್ಕವಾಗಿದ್ದರೂ, ಅವರ ಅನುಭವದಲ್ಲಿ ಕನ್ನಡ ಮಕ್ಕಳ ಶಿಕ್ಷಣದ ವಿಷಯದಲ್ಲಿ ಎಂತಹ ತೊಂದರೆಗಳುಂಟಾಗಿದ್ದುವು ಎಂಬುದನ್ನು ಹೇಳಿದರು :

"ನಾನು ಈ ಮೊದಲೆ ಕೆಲಸಕ್ಕೆ ಇದ್ದ ಈ ಊರು ಮತ್ತು ಕೊಲ್ಹಾಪುರ-ಪುಣೆಗಳಂತಹ ಊರುಗಳಲ್ಲಿ, ಆಗ ಕನ್ನಡದಲ್ಲಿಯೆ ಶಿಕ್ಷಣ ದೊರೆಯುವ ಏರ್ಪಾಡು ಏನೂ ಇರಲಿಲ್ಲ. 'ಮಾತೃಭಾಷೆಯಲ್ಲಿಯ ಶಿಕ್ಷಣವೇ–ಭದ್ರವಾದ ತಳಹದಿಯನ್ನುಂಟು ಮಾಡುವಂತಹದು' ಎಂಬ ಮುಖ್ಯಸೂತ್ರವನ್ನರಿತ ಇಂದಿನ ಕಾರ್ಯಕರ್ತೃಗಳು, ಈ ವಿಷಯದಲ್ಲಿ ಹೆಚ್ಚು ಜಾಗೃತಿಯನ್ನು ವಹಿಸುವುದು ಉಚಿತ. ಕನ್ನಡ ಸಂಸ್ಕೃತಿಯ ಬಗೆಗೆ ಸಾಕಷ್ಟು ತಿಳಿವಳಿಕೆಯುಂಟಾಗಿ, ಕನ್ನಡಿಗರೆಲ್ಲರೂ ಮನೆಯಲ್ಲಿ ಮತ್ತು ಮಂಡಿಯಲ್ಲಿ ಕನ್ನಡದಲ್ಲಿ ಹೆದರಿಕೆ ನಾಚಿಕೆಗಳಿಲ್ಲದೆ ಮಾತುಗಳನ್ನಾಡುತ್ತಿರುವುದು ಕಾಣುತ್ತಿದ್ದರೂ, ಆ ನೆಲವನ್ನು ಗಟ್ಟಿಮಾಡಿಕೊಳ್ಳುವುದು ಇನ್ನು ಮುಂದಿನ ಯತ್ನವಾಗಬೇಕು. ಈ ದೃಷ್ಟಿಯಿಂದ ಒಂದು ಕನ್ನಡಶಾಲೆ, ಒಂದು ವಾಚನಾಲಯ ಮತ್ತು ಒಂದು ಅಭ್ಯಾಸಮಂಡಲ ಇವು ಹೆಚ್ಚು ಉಪಯುಕ್ತ ಆಗುವವು—ಎಂದು ನನ್ನ ವಿಚಾರ!" ಎಂದರವರು. ಚೊಕ್ಕಟವಾದ ವಿಚಾರಗಳನ್ನು ಒಂದು ಯೋಜನೆಯೇನೋ ಎಂದು ಎನಿಸುವಂತಹ ಪದ್ಧತಿಯಲ್ಲಿ ಅವರು ಮಂಡಿಸಿದರು. ಮಕ್ಕಳ ನೆವದಿಂದ ಹೇಗೆ ಪ್ರಾಂತದ ಗಡಿಗಳು,—ಭಾಷೆಯ ಬಿಗುಹು ಇರದಿದ್ದರೆ,—ಕಾಲಬುಡದಿಂದ ಜಾರಿಹೋಗುವುವು; ಹೆಣ್ಣುಮಕ್ಕಳ ಬೇಸರದಿಂದ ಮನೆಯೆ ಆಗಲಿ, ಬೇರೆ ಯಾವ ಸಂಸ್ಥೆಯೆ ಆಗಲಿ, ಅದರ ಸ್ವಯಂಪೂರ್ಣತೆಯು ಹೇಗೆ ನಾಶ ಹೊಂದುತ್ತದೆ; ಮತ್ತು ಗಂಡಸರ ಅಜ್ಞಾನದಿಂದ ಹೇಗೆ ಒಂದು ಭಾಗವೆ ಆಗಲಿ ರಾಷ್ಟ್ರವೆ ಆಗಲಿ ಪಾರತಂತ್ರ್ಯದಲ್ಲಿ ಬೀಳುತ್ತದೆ ಎಂಬುದನ್ನು ಅವರು ಸೋದಾಹರಣವಾದ ಸರಳ ಶೈಲಿಯಲ್ಲಿ ತಿಳುಹಿದರು. "ಅದಕ್ಕೆ ಇವು ಮೂರು ಮಾತ್ರೆಗಳ ಪ್ರಥಮಚಿಕಿತ್ಸೆ" ಎಂದು ನಕ್ಕರವರು.

"ಈಗ ನಮ್ಮ ಜಿಲ್ಲೆಯದೆ ಮಾತನ್ನು ಹೇಳುವೆ. ನಾನು ಮಂಗಳೂರು ತಾಲ್ಲೂಕಿನ ಹೊಸದುರ್ಗದವ. ನಮ್ಮ ಪ್ರಾಂತದಲ್ಲಿ ಹಿಂದುಳಿದವರ ರಕ್ಷಣೆ, ಅಲ್ಪಸಂಖ್ಯಾಕರಿಗೆ ಅನೇಕ ರಿಯಾಯಿತಿಗಳು—ಎನ್ನುತ್ತ ಮತ್ತು ವಿಶಿಷ್ಟವಿಷಯಗಳಿಗಾಗಿ ತಜ್ಞರು, ಅಂತರಪ್ರಾಂತೀಯ ಬಾಂಧವ್ಯ ಎಂಬ ನೆವಗಳಿಂದ—ಕನ್ನಡ ಜಿಲ್ಲೆಯಲ್ಲಿರುವಷ್ಟು ಕನ್ನಡೇತರ ಜನರು ಮತ್ತೆಲ್ಲಿಯೂ ಇರಲಿಕ್ಕಿಲ್ಲ. ಆದರಿಂದ ದಕ್ಷಿಣದ ತಾಲ್ಲೂಕುಗಳ ಕೆಲವು ಭಾಗವನ್ನು ಮೆಲ್ಲಮೆಲ್ಲನೆ ಮಲೆಯಾಳಿಗಳು ತನ್ನದೆಂದು ಎಣಿಸಹತ್ತಿದ್ದಾರೆ. ಇದಕ್ಕೆ ಮೂಲ ಕಾರಣ ಎಂದರೆ, ಕನ್ನಡದಲ್ಲಿ ಮೊದಲ ಓದು ಸಿಕ್ಕದಿದ್ದುದು. ಮೊದಲು ಅಕ್ಷರಿಗರ ಪ್ರಮಾಣವೆ ಚಿಕ್ಕದು....ಅದರಲ್ಲಿಯಷ್ಟು ಜನ ಆ ನುಡಿಗೇ ಅಪರಿಚಿತರಾದರೆ, ಪ್ರಾಂತವು ಹೊಂದಿಕೊಂಡಿರುವುದು ಹೇಗೆ? ಅದಕ್ಕಾಗಿಯೆ ಪ್ರಾಂತದ ಗಡಿಗಳಲ್ಲಿ ಮತ್ತು ಹೊರಗೆ ಇರುವ ಆ ಪ್ರಾಂತದ ಮಕ್ಕಳಿಗಾಗಿ, ಆ ಭಾಷೆಯ ಶಾಲೆಗಳು ಆರಂಭವಾದರೇ ಆ ಪ್ರಾಂತವು ಊರ್ಜಿತಾವಸ್ಥೆಯನ್ನು ಹೊಂದಲು ಸಹಾಯಕಾರಕವಾಗುವುದು," ಎಂದರು. ಆಗ ನಾನು, ಇತ್ತ ಕರ್ನಾಟಕದ ಉತ್ತರದಲ್ಲಿ ಬೆಳಗಾಂವಿಯ ಗಡಿಯಲ್ಲಿ ಮತ್ತು ಬಳ್ಳಾರಿಯ ಭಾಗದಲ್ಲಿ ಆ ತತ್ತ್ವವರಿತ ಜನರು ಎಂತಹ ಪ್ರಯತ್ನಗಳನ್ನು ನಡೆಯಿಸಿರುವರು ಎಂಬ ವಿಷಯವಾಗಿ ಅವರಿಗೆ ಒಂದೆರಡು ಸಂಗತಿಗಳನ್ನು ಹೇಳಿದೆ.

ಮಾತಿಗೆ ಮಾತು ಹಾಗೇ ನಡೆದಿದ್ದುವು. ನುಡಿಯ ಅನುಷಂಗವಾಗಿ ನಡೆಯ ಕಡೆಗೆ, ನಡೆಯ ಎಳೆಯಿಂದ ನಾಡಿನ ಕಡೆಗೆ ನಮ್ಮ ಮಾತುಗಳು ಏರಿಳಿತಗಳನ್ನು ಸಹಿಸುತ್ತ ಸಾಗಿದ್ದುವು. 'ಹಿಂದುಸ್ತಾನದ ವಿಷಯದಲ್ಲಿ ಹೇಗೆ ಇಡಿಯ ಜಗತ್ತಿನಲ್ಲಿ ಅಪಪ್ರಚಾರ—ಭಿನ್ನಾಭಿಪ್ರಾಯಗಳು ನೆಲಸಿರುವವೋ, ಹಾಗೆಯೆ ಕರ್ನಾಟಕದ ವಿಷಯದಲ್ಲಿಯೂ ಭಾರತದ ಅನ್ಯಪ್ರಾಂತಗಳಲ್ಲಿ ನಡೆದಿದೆ' ಎಂದು ಹೇಳಿದೆ ನಾನು ಅದಕ್ಕೆ ಅವರು, ಸಿಂಹಲದ್ವೀಪದಲ್ಲಿ ತಾವು ಪ್ರಾಧ್ಯಾಪಕರಾಗಿ, ಸಮಿತಿಗಳ ಸದಸ್ಯರಾಗಿ, ಸರಕಾರದ ಆರ್ಥಿಕವಿಭಾಗದ ನಿರ್ದೇಶಕರಾಗಿ ನಾಲ್ಕಾರು ವರುಷ ಕೆಲಸಮಾಡುತ್ತಿರುವಾಗ—ಹಿಂದೀಯರ ವಿಷಯದಲ್ಲಿ ಇಲ್ಲದ ಸಲ್ಲದ ಆರೋಪಗಳು ಹೇಗೆ ಉದ್ಭವಿಸುತ್ತಿದ್ದುವು ಎಂಬುದನ್ನು ತಿಳುಹಿದರು. 'ಆದರೂ ಇತ್ತ ಸಿಂಹಲದ ಹೊರಗೆ ಎಷ್ಟು ಕೂಗಾಟ ಕೇಳಬರುವುದೊ ಅಷ್ಟೇನು 'ರಂಪು' ಅಲ್ಲಿ ಇರುವುದಿಲ್ಲ; ಇದೂ ನಿಜವಾದ ಸಂಗತಿ!' ಎಂಬುದನ್ನು ಹೇಳಿದರು.

"ಅದಕ್ಕೆಲ್ಲ ನಮ್ಮ ಊರ, ನಮ್ಮ ಜಿಲ್ಲೆಯ, ನಮ್ಮ ಪ್ರಾಂತದ, ನಮ್ಮ ದೇಶದ ವಿಷಯವಾಗಿ ಸರಿಯಾದ ಜ್ಞಾನವಿರುವುದೇ ಮುಖ್ಯ ಉಪಾಯ" ಎಂದು ಅವರು ಒಂದು ನಗೆಯನ್ನು ಬೀರಿದರು. ಮೊದಲು ಆ ಆ ಭಾಗದಲ್ಲಿ ಶಿಕ್ಷಣದ ಪ್ರಮಾಣವು ಗೊತ್ತಾಗಬೇಕು....ಇದು ಒಪ್ಪಬೇಕಾದ ಮಾತು ಆಗಿದ್ದರೂ, ಆ ಪ್ರದೇಶವನ್ನು ಬಿಟ್ಟು ದೂರ ಬಂದವರಿಗಂತೂ ಅದರ ಆವಶ್ಯಕತೆ ಹೆಚ್ಚು ಎನಿಸುತ್ತದೆ. ಅದಕ್ಕೆ ನಾನು ಇಂಗ್ಲೆಂಡಿಗೆ ಹೋಗುವ ಮೊದಲು, ಇಲ್ಲಿ ರಾಷ್ಟ್ರೀಯ ಆಂದೋಲನದಲ್ಲಿ ಬೆರೆತಿದ್ದ ಅನುಭವವೂ, ಕಾಶೀ ವಿದ್ಯಾಪೀಠದಲ್ಲಿ ನನಗೆ ದೊರೆತ ಕೆಲವು ಪ್ರತ್ಯಕ್ಷ ಪಾಠಗಳೂ, ಹೊರನಾಡುಗಳಲ್ಲಿ ನನಗೆ

ಹೆಚ್ಚು ಸಹಾಯಕಾರಕವಾದುವು–ಎಂಬುವಾಗ ಆನಂದವೆನಿಸುತ್ತದೆ. ನೀವು ನಿಮ್ಮ ಮೂಲಸ್ಥಾನವನ್ನು ಬಿಟ್ಟು ತೆರಳುವಾಗ, ಹೊಟ್ಟೆಯದೇ ಆಗಲಿ, ಎಂತಹದೇ ಬೇರೆ ಕಾರಣವಾಗಲಿ ಇದ್ದರೂ, ಬೇರೆ ಕಡೆಗೆ ಹೋಗಿ ನೆಲಸಿದ ಕೂಡಲೆ, ನೀವು ಕೇವಲ ಒಬ್ಬ ವ್ಯಕ್ತಿಯಾಗಿರದೆ, ನಿಮ್ಮ ಭಾಗದ, ನಿಮ್ಮ ಪ್ರಾಂತದ ಇಲ್ಲವೆ ನಿಮ್ಮ ರಾಷ್ಟ್ರದ ಒಬ್ಬ ಪ್ರತಿನಿಧಿಯಾಗುತ್ತೀರಿ—ನೀವು. ಅಂತೆಯೆ 'ಪ್ರತಿನಿಧಿ' ಎನ್ನಿಸಿಕೊಳ್ಳುವ ಹೆಮ್ಮೆಯ ಸ್ಥಾನಕ್ಕೆ ಉಚಿತವೆನಿಸುವ ಅಧಿಕಾರ–ಹೊಣೆಗಳಿಗೆ ನೀವು ಕೂಡಲೆ ಪಾತ್ರರಾಗಬೇಕು!"

ನಮ್ಮ ಮಾತಿನ ಕಾವು ಏರಿದಂತೆ, ಊರಲ್ಲಿಯ ಕಾವೂ ಏರಹತ್ತಿತು; ಅತ್ತ ಹೊತ್ತುಕೂಡ ಏರಹತ್ತಿತು. ಮುಂಬಯಿಯ ಆರ್ಥಿಕ ಯೋಜನೆಯ ವಿಮರ್ಶೆಯೊಂದನ್ನು ಅವರು ಬರೆದಿದ್ದರು; ಅದನ್ನು ಕುರಿತು ಕೆಲವು ಪ್ರಶ್ನೆಗಳನ್ನು ಕೇಳಿದೆ. ಆ ಯೋಜನೆಯ ಆರ್ಥಿಕ ಭಾಗದಲ್ಲಿ ಹೇಗೆ ತಪ್ಪುಗಳು ವಿಪುಲವಾಗಿವೆ; ಅಂಕಿಗಳು ಎರಡು ಸಲ ಎಣಿಸಲ್ಪಟ್ಟಿವೆ; ವೆಚ್ಚವು ಕಡಿಮೆಯೆಂದು ತಿಳಿದಿದೆ—ಎಂಬಿವೇ ಸಂಗತಿಗಳನ್ನು ವಿಶದವಾಗಿ ಅವರು ತಿಳಿಸಿದರು. ಕರ್ನಾಟಕದ ಸ್ಥಾನದ ಬಗೆಗೆ ಮಾತನ್ನು ತೆಗೆಯಲು, "ಈ ಯೋಜನೆಯಲ್ಲಿ ಕರ್ನಾಟಕದ ಸಂಬಂಧವೇ ಇಲ್ಲ, ಇದು ತೀರ ಸೂಕ್ಷ್ಮವಾದ ಒಂದು ವಿಷಯದ ಸ್ಥೂಲವಾದ ಒಂದು ಯೋಜನೆ; ಇದನ್ನು ಆಚಾರರೂಪದಲ್ಲಿ ತರುವಾಗ ನೋಡಬೇಕು" ಎಂದು ಜಾರಲು ಯತ್ನಿಸಿದರು ಅವರು. ನಾನು ಮತ್ತೆ ಓಘದಲ್ಲಿ ಅವರನ್ನು ಎಳೆದೇ ಬಿಟ್ಟೆ.

"ಕರ್ನಾಟಕದ ಆರ್ಥಿಕ-ಔದ್ಯೋಗಿಕ-ಸಾಂಪತ್ತಿಕ ವಿಷಯವಾಗಿ ನಿಮ್ಮದೇನು ಅಭಿಪ್ರಾಯವಿದೆ?"

"ಅದನ್ನು ಮೊದಲು ಲೆಕ್ಕಹಾಕಿ ನೋಡಬೇಕು; ನಮ್ಮ ಮುದ್ದಲು ಇದೆಯಾದರೂ ಎಷ್ಟು ಎಂಬುದನ್ನು ಊಹಿಸುವುದಷ್ಟೆ ಅಲ್ಲದೆ, ಪ್ರತ್ಯಕ್ಷ ಅಳೆದು ನೋಡಬೇಕು!"

"ಕನ್ನಡವು ಒಂದಾದರೆ—ಅದು ಆರ್ಥಿಕ ದೃಷ್ಟಿಯಿಂದ ಸ್ವಯಂಪೂರ್ಣ ಆಗಲಾರದು ಎಂದು ಕೆಲವರು ಘೋಷಿಸಿದ್ದಾರೆ!"

"ಇಲ್ಲಿ ಒಂದು ಮಾತನ್ನು ನೆನಪಿನಲ್ಲಿಡಬೇಕು. ಈ ಸ್ವಯಂಪೂರ್ಣತೆಯ ವಿಷಯವೆಂದರೆ ಅದೊಂದು ಮಾಯಾಜಾಲ. ಅದರಲ್ಲಿ ಬೀಳಲಿಕ್ಕೇಕೆ ಹೋಗಬೇಕು ನಾವು? ನಮ್ಮ ಆದಾಯ ಎಷ್ಟಾಗಬಹುದು ನೋಡಿಕೊಂಡು, ಅಷ್ಟನ್ನೇ ಮಾತ್ರ ನಾವು ವೆಚ್ಚ ಮಾಡಬೇಕು. ನಿರರ್ಥಕವಾದ, ಅತಿ ಭಾರವೆನಿಸುವಂತಹ, ಕೇಂದ್ರಸಂಸ್ಥೆಗಳಲ್ಲಿ ನಾವು ಈ ಉಳಿಕೆಯನ್ನು ಮಾಡಿಕೊಳ್ಳಬಹುದು. ಪ್ರಾಂತಕ್ಕೆ ನೀಗುವಂತಹ, ಕಾರ್ಯಾಲಯ (Secret-riat) ಮತ್ತು ಮಿಕ್ಕ ವಿಭಾಗಗಳನ್ನು ಮಿತವ್ಯಯವಾಗಿ ನಡೆಯಿಸಬಹುದು. ಅದಲ್ಲದೆ ಮೊದಲ ಅವಧಿಯಲ್ಲಿ ಕೇಂದ್ರ ಸರಕಾರದಿಂದ ತುಸು ನೆರವನ್ನು ನಾವು ನಿರೀಕ್ಷಿಸಬಹುದು.......ಮೇಲಾಗಿ ಶೀಘ್ರವಾದ ಔದ್ಯೋಗೀಕರಣಕ್ಕೆ ತೊಡಗಿ, ಚಿಕ್ಕ ಅವಧಿಯಲ್ಲಿಯೆ ನಾವು ನಮ್ಮ ಉತ್ಪನ್ನವನ್ನು ಎಷ್ಟೋ ಪಟ್ಟು ಹೆಚ್ಚು ಮಾಡಿಕೊಳ್ಳಬಹುದು!"

ಇಲ್ಲಿ ಒಂದು ನಿಲುವಳಿಯ ಬೆರಳನ್ನು ಎತ್ತಿದೆ ನಾನು:

"ನಮ್ಮಲ್ಲಿ ಈಗ ಉದ್ಯೋಗಗಳಿಗೆ ಬೇಕಾಗುವ ಮೂಲ ಸಾಮಗ್ರಿ ಬೇಕಾದಷ್ಟಿದೆ, ಆದರೆ ಅದರ ಉಪಯೋಗವನ್ನು ಮಾಡಿಕೊಳ್ಳುವ ಶಾಸ್ತ್ರಜ್ಞರು ಸಾಕಷ್ಟಿಲ್ಲ; ನಮ್ಮಲ್ಲಿ ದೊಡ್ಡ ಪ್ರಮಾಣದ ವ್ಯಾಪಾರವಿರುತ್ತದೆ; ಆದರೆ ಆಧುನಿಕ ಪದ್ಧತಿಯ ನಿಯೋಜಕರಿಲ್ಲ; ಶಿಕ್ಷಣವನ್ನು ಪಡೆದ ಜನರು ತುಂಬಾ ಇರುತ್ತಾರೆ. ಉಚಿತ ಕಾರ್ಯವನ್ನು ಮಾಡಲು ಉತ್ಸಾಹವಿಲ್ಲ. ನಮ್ಮಲ್ಲಿ ಪ್ರಾಂತಾಭಿಮಾನವೂ ರಾಷ್ಟ್ರಾಭಿಮಾನವೂ ತುಂಬಿತುಳುಕುತ್ತಿದೆ; ಆದರೆ ಅವನ್ನು ಸರಿಯಾದ ಮಾರ್ಗದಲ್ಲಿ ತಿರುವಿ, ಪ್ರಾಂತದ ಹಿತವನ್ನೇ ಸಾಧಿಸುವಂತಹ ಮುಂದಾಳುಗಳಿಲ್ಲ—ಇದಕ್ಕೇನು ಮಾಡುವುದು?"

"ನಿಮ್ಮ ಅಭಿಪ್ರಾಯ ತಿಳಿಯಿತು. ಇದಕ್ಕೆ ಒಂದೇ ಒಂದು ಉಪಾಯ; ಅದೆಂದರೆ ಪ್ರಾಂತೀಕರಣ, ಏಕೀಕರಣ! ನೀವು ಹೇಳುವಂತಹ ವಿಷಯಗಳ ನಿಜವಾದ ಕೊರತೆ ನಮ್ಮಲ್ಲಿಲ್ಲ; ಅದರ ಆಭಾಸ ಮಾತ್ರ ಇದೆ. ಅದಕ್ಕೆ ಕಾರಣವೆಂದರೆ ಹದಿನೆಂಟು ಆಡಳಿತಗಳಲ್ಲಿ ಹರಿದು ಹೋದ ನಮ್ಮ ಪ್ರಾಂತದ ಜನರು, ಬೇರೆ ಕಡೆಗೆ ಸಾಮಾನ್ಯ ಜನರಾಗಿ ದುಡಿಯಬೇಕಾಗುತ್ತದೆ; ನಮ್ಮದಾದ ಒಂದೇ ಪ್ರಾಂತವಿದ್ದರೆ ನಮ್ಮ ಶಕ್ತಿಯೆಲ್ಲ ಕೇಂದ್ರೀಕೃತವಾಗಿ, ನಮ್ಮ ಉತ್ಸಾಹಕ್ಕೆ ಸರಿಯಾದ ದಾರಿಯು ದೊರೆಯುತ್ತದೆ. ಅಲ್ಲಿಂದ ಉತ್ಕರ್ಷಕ್ಕೆ ತಡೆಯೆ ಇಲ್ಲ. ಅಂತೆಯೆ ಯಾವುದೇ ಕಾರ್ಯವಿರಲಿ, ಉದ್ಯಮವಿರಲಿ, ಸಂಸ್ಥೆಯಿರಲಿ, ವ್ಯಕ್ತಿಯಿರಲಿ, ನಾವೆಲ್ಲರೂ ಅಖಂಡಕರ್ನಾಟಕದ ದೃಷ್ಟಿಯನ್ನಿಟ್ಟುಕೊಂಡು ಹೆಣಗಬೇಕು. ಯಾವುದೇ ಕ್ಷೇತ್ರದಲ್ಲಿ ದುಡಿಯುತ್ತಿರಲಿ, ಕರ್ನಾಟಕದ ಏಕೀಕರಣ, ಹಿಂದುಸ್ತಾನದ ಸ್ವಾತಂತ್ರ್ಯ ಇವೇ ನಮ್ಮ ಧ್ರುವತಾರೆಯಾಗಿರಬೇಕು!"

ಇಲ್ಲಿಗೆ ನಮ್ಮ ಸಂಭಾಷಣೆ ಮುಗಿಯಲಿಲ್ಲ; ಹಾಗೆಯೆ ತುಸು ಹೊತ್ತು ಸಾಗಿತು. ವಿಷಯ-ವೇಳೆಗಳ ಲೆಕ್ಕವೇ ಇರಲಿಲ್ಲ. ಮತ್ತೆ ಕಾಣುವೆ ಎಂದು ನಾನು ಅಲ್ಲಿಂದ ಹೊರ-ಹೊರಟೆ. ಅದೊಂದು ಅದ್ಭುತ ವ್ಯಕ್ತಿ—ಎಂದುಕೊಂಡೆ.

ಏಜಂಟರು ಬೇಕು!

ಬೆಂಗಳೂರು, ಮೈಸೂರು, ಚಿಂತಾಮಣಿ, ಸಂಕೇಶ್ವರ, ಚಿತ್ರದುರ್ಗ, ಬೈಲಹೊಂಗಲ, ರಾಯಚೂರು, ಚಿಕ್ಕೋಡಿ, ಇಳಕಲ್ಲು, ಜಮಖಂಡಿ, ರಬಕವಿ, ಹಾನಗಲ್ಲು, ಹರಿಹರ, ಅರಸಿಕೇರೆ, ಕುಂದಾಪುರ, ಸಾಗರ, ಕುಮಟೆ, ಕಾರವಾರ ಮೊದಲಾದ ಕನ್ನಡನಾಡಿನ ದೊಡ್ಡ ದೊಡ್ಡ ಪುರ-ಪಟ್ಟಣಗಳಲ್ಲಿ ಜಯಂತಿಗೆ ಏಜಂಟರು ಬೇಕಾಗಿದ್ದಾರೆ. ಕಮಿಶನ್ ದರವನ್ನು ಮೊದಲಿಗಿಂತ ಹೆಚ್ಚಿಸಲಾಗಿದೆ. ಬೇಕಾದವರು ಕೂಡಲೆ ಪತ್ರವ್ಯವಹಾರ ಮಾಡಿ ಏಜನ್ಸಿಯ ಕರಾರುಗಳನ್ನು ತಿಳಿದುಕೊಳ್ಳಬೇಕು.

ಮ್ಯಾನೇಜರ್ 'ಜಯಂತಿ' ಧಾರವಾಡ

ಕಾರವಾರದ ಸೊಬಗಿನ ಸಿರಿ

ಶ್ರೀ. ಗ. ಸು. ಗಾಂವಕರ, ಬಿ. ಎಸ್‌ಸಿ. ಕಾರವಾರ

(ಸಾಹಿತ್ಯರಸಿಕರೂ ಜಯಂತಿಯ ಅಭಿಮಾನಿಗಳೂ ಆದ ಶ್ರೀಮಾನ್ ಸಿ. ಎಸ್. ಕಬಿ೯, ಬಿ. ಎ. ಹುಬ್ಬಳ್ಳಿ ಅವರು, ತಮ್ಮ ಕಾರವಾರ ಜಿಲ್ಲೆಯ ಪ್ರವಾಸದಲ್ಲಿ ಸಿಕ್ಕಿದ ಹೊಸ ಕವಿಗಳೊಬ್ಬರ ಈ ಕವನವನ್ನು ಪ್ರಕಟನೆಗೆ ಕಳುಹಿರುವರು. ಛಂದಸ್ಸು, ಅಲಂಕಾರ, ಶೈಲಿ ಎಲ್ಲವೂ ಸಾಂಪ್ರದಾಯಿಕವಾಗಿ ಕಾಣುವವು. ಆದರೂ ನಿಸರ್ಗಸೌಂದರ್ಯವನ್ನು ಉಚಿತರೂಪಕವಾಗಿ ಬಣ್ಣಿಸಿರುವುದು ರಸವತ್ತಾಗಿದೆ. ಸಂ. ಜ.)

೧

ಪಡುವ ಕಡಲಿನ ಜಲದ ರಾಶಿಯು
ಮಡುವಿನೊಳಗಿಂದೆದ್ದು ಫಣಿಪತಿ,
ಹೆಡೆಯನೊಲೆಯುತ ಬಿಚ್ಚಿದನು ಸಲೆ ವ್ಯೋಮವಿಸ್ತರದಿ!
ಕಡುಮಮತೆಯಲಿ ‘ಮಕ್ಕಳೆಲ್ಲರು
ಮಡಿದು ಸೋಕಿರಿ, ದಣಿವನಾರಿಸಿ
ಪಡೆಯಿರಾರಾಮೆ’ನುತೆ ಚಾಚಿದ ಶ್ಯಾಮಛಾಯೆಯನು!

೨

ಒಡೆಯನಾಣತಿ ತಲೆಯೊಳಾನುತೆ
ಒಡನೆ ಖಗ-ಮೃಗ ತೆಗೆದು ಗೂಡಿನ
ಎಡೆಯ ಸೇರುವು ಭೀತಿಯಿಲ್ಲದ ನಂಬಿನಿಂಬಿನಲಿ!
ಕಡಲು ಎಳೆದುದು ತೆರೆಯ ಸರಣಿಯ,
ಹಿಡಿದು ಬಿಗಿದುದು ಇಳೆಯ ಬಾಗಿಲ,
ಪಡುವ ಕಡಲಿನ ಕಾಪಿನಾ ಪರಿ ಕಾಣದವರಿಹರೆ?

೩

‘ಕಡುಪಿನಪ್ಪಣೆ, ಜೋಕೆ!’ ಎಂದಿತು,
‘ಬಡಿಯಿರೆಡಬಲವಡಿಯ’ನೆಂದಿತು,
ಅಡಿಯ ಬಡಿಯುತ ನಡೆಯುತೆಂದಿತು ದಿಶೆಗಳಾಣ್ಮರಿಗೆ;
ಪಡೆದ ಆಜ್ಞೆಗೆ ಬೇರೆ ಮಾತನು
ನುಡಿಯಲಾರದೆ ದಳವು ತೆರಳಿತು—
ಹುಡುಕುತೆಡೆಯೆಡೆಯಲಿಗಳಲೆದುವು ಲೋಕಬಾಹಿರರ!

೪

‘ನಂಬಿ ನಡೆಯಲು ಮನದ ರಾಜ್ಯದ
ಇಂಬು ಕಾಣದ ಶಂಕೆಯೇ ಇದು?’
ಎಂಬ ತೆರದಲಿ ತಿರುಗಿ ನಿರುಕಿಸುತಿದ್ದೆ ನಾ ತಮದಿ;
ತುಂಬಿ ತುಳುಕುವ ನೀಲವರ್ಣವು
ಬಿಂಬಿಸುವ ಕಳೆಯೊಳಗೆ ಬೆಳಗಿದ
ರಂಬಿಸುವ ಚುಕ್ಕೆಗಳು; ಶೇಷನ ಹೆಡೆಯ ಮಣಿ ಕಾಣೆ!

೫

ಮುನಿದು ಶೇಷನು ಸುಯಿದ ಸುಯಿಲೋ—
ಎನಿಸಿ ಬೀಸಿತು ಸುಳಿವ ಗಾಳಿಯು,
‘ನಿನಗೆ ಬೇಕೇ ನಿಜ ಕುರುಹುಗಳು ಲೋಕಬಾಹಿರನೆ!’
ಎನುತ ಪರದೆಯ ಮರೆಯಲಿರಿಸಿದ
ಮಣಿಯು ಫಣಿಯೊಳಗುದಿತವಾಗಲು
ಮುನಿಸನಗಲಿದನಂತ ವಿಕಟವಿನೋದದೊಳು ಮೆರೆದ!

೬

ಇಂದು ತೊಳಗಲು ಹರಿವ ಬೆಳಕಿನ
ಹಿಂದನಂಟಿಯೆ ನಿಲುವ ಕತ್ತಲೆ-
ಯೊಂದಗಲಿ ತೊಡಕೋಂದು ಕಂಡುದು ಮಣಿಯು ಥಳಥಳಿಸಿ—
ಮುಂದೆ ವ್ಯಾಪಿಸಿ ನಿಂದ ಕಡಲೊಳ-
ಗಿಂದು ಕಂಡೆನನಂತ ಶೇಷನು
ನಂದ ಹಾಲಿನ ಕಡಲ; ಕಾಂಬೆನೊ ಶೇಷಶಾಯಿಯನು?

೭

ಸಕ್ಕರೆಯನರಸುತ್ತ ಹೊರಟಾ
ಚಿಕ್ಕ ಇರುವೆಯು ಕಬ್ಬಹಿತ್ತಲ
ಹೊಕ್ಕು ಕಾಣದೆ ಹುಡುಕಿ ದಣಿದೂ ಸಕ್ಕರೆಯ ತಾಣ—
ಉಕ್ಕಿಸುವ ಮನದಾಶೆ ಬಳೆಯಿತು,
ದಿಕ್ಕು-ದಿಕ್ಕಿಗೆ ಕಣ್ಣು ಬಿಟ್ಟಿತು,
‘ತಕ್ಕ ತಾವಿನಲಿರಲು ತಾವಿನ ದೇವ ತಾಂ ಸಿಗನೆ?’

೮

ಎನುವ ಮನ ನಿಜದನುವ ಕಂಡಿತು—
ಕ್ಷಣದೊಳದ್ಭುತ ಕಣ್ಣು ಕಟ್ಟಿತು;
ನೆನಸಿದಚ್ಯುತ ಪದದಲೊಪೆದನು ಹೋಹೊ! ಅಚ್ಚರಿಯು!—
‘ಘನಮಹಿಮ ಹರಿ ರೂಹುದೋರ್ದೊಡೆ
ಮನುಜನಯನವು ಕಂಡು ಸಹಿಪುದೆ?’
ಎನುವ ಸತ್ಯದ ಸಾರಿ ಹಬ್ಬಿದ ಶ್ಯಾಮಭೂಮಿಯಲಿ!

೯

ಸಿರಿಯು ಚರಣಕೆ ಎರಗಿ ನಿಂದಾ
ಹರಿಯ ಹಿರಿಮೆಯನೇನ ಹೇಳುವೆ?
ಗರುಡಿಸುವ ಜನಸಿಥಿಯು ನಿಂದುದು ಮಣಿದು ಮಂಕಾಗಿ
ಕೊರಳೊಳಲೆಯುವ ಕೌಸ್ತುಭವು ಶುಭ-
ದರುಣದುದಯದಿ ಬೆಳಗಿ ನಿಂದಿರೆ,
ಧರಣಿ ತಳೆವುದು ಹೊಸತು ಹಿಗ್ಗನು— ಲೀಲೆಯನು ಬೀರಿ!

೧೦

ಜಗವ ಜಾಗೃತಗೊಳಿಸುವೀ ನೆಲ-
ವಗಲಿ ಪ್ರೋಷನೆ—ಸಿರಿಗೆ ಮೆಚ್ಚಿದ
ಭಗವದಧಿಪ ಶ್ರೀಹರಿಯು ಧಾವಿಪನು ಭಕ್ತರೆಡೆ!
ದಿಗ-ದಿಗಂತದಿ ಚರಿಪನಾದರು
ಮುಗುಳ ನೆಲಸುವುದಿಲ್ಲಿಯೇ ಸರಿ!
ಪೊಗಳಲೆಂ ನಾಂ ಕಾರವಾರದ ಸೊಬಗಿನಾ ಸಿರಿಯು?

ನಂ. ೧೬೭೮

✲

ಶ್ರೀ. ಅ. ವೆಂ. ತಳುಕು ಬಿ. ಎ. ಧಾರವಾಡ

" *Out, out, brief candle* "

●

ಸಂಜೆಯ ಆರು ಘಂಟೆ ಹೊಡೆಯಿತು....ಮಿಲ್ಲಿನ ದೊಡ್ಡ ಗಡಿಯಾರ. ಕೂಡಲೆ ಸುತ್ತುಮುತ್ತಲ ಗಿರಣಿಗಳಿಂದ ಶಿಳ್ಳು ಕೇಳಿತು.

ಬೃಹದ್ರಾಕ್ಷಸನ ಅಜೀರ್ಣವಾದ ಹೊಟ್ಟೆಯಿಂದ ವಾಂತಿಯಾದ ಹುಳುಗಳಂತೆ, ಕೂಲಿಗಳು ಗಿರಣಿಗಳ ದೊಡ್ಡ ಕಬ್ಬಿಣದ ಸರಳುಗಳ ದ್ವಾರದಿಂದ ಹೊರಬೀಳುತ್ತಿದ್ದರು. ಎಲ್ಲರೂ ಮಿಲ್ಲಿನ ಗೋಡೆಗೆ ಹೊಂದಿಕೊಂಡು ಚಾಚಿದ ಕಾಲು ಹಾದಿಯ ಎರಡು ಕಡೆಗೂ ಹೋಗುತ್ತಿದ್ದರು. ಎದುರಲ್ಲೇ ವಿಶಾಲವಾದ ಡಾಂಬರು ರಸ್ತೆ. ಆದಿ ಅಂತ್ಯವಿಲ್ಲದಂತೆ ಎಡಬಲಗಳಲ್ಲಿ ಮೋಟಾರುಗಳು, ಶ್ರೀಮಂತರ ಕಾರುಗಳು ಸಾಗುತ್ತಿದ್ದುವು. ಆ ಗಿರಣಿಯ ಎದುರಿಗೇ ನಾಲ್ಕಾರು ಸಿನಿಮಾ ಚಿತ್ರಗಳ ದೊಡ್ಡ ಜಾಹಿರಾತುಗಳು, ಅಸ್ತಮಿಸುವ ಸೂರ್ಯನ ಬೆಳಕಿನಲ್ಲಿ ಹೊಳೆಯುತ್ತಿದ್ದುವು. ಅವುಗಳನ್ನು ನೋಡುವುದರಲ್ಲೇ ಮೈಮರೆತು ನಿಂತಿದ್ದರು ಕೆಲವರು ವಿದ್ಯಾರ್ಥಿಗಳು. ಬಣ್ಣ-ಬಣ್ಣದಲ್ಲಿ ಬರೆದಿದ್ದ 'ತಾರೆ'ಗಳು ಅವರಿಗೆ, ಗಂಧರ್ವ ಕನ್ಯೆಯರೇ ಭೂಲೋಕಕ್ಕೆ ಇಳಿದಂತಿತ್ತು. ನಾಗರಿಕತೆಯ ಚಿಹ್ನೆಯಾದ ಸಿಗರೇಟು ಅವರ ತುಟಿಗಳಲ್ಲಿ ನಿಂತಿತ್ತು. ದುಡ್ಡಿದ್ದವರಿಗೆ 'ಸುಖಾಗಮನ' ಬಯಸುವ ಹೋಟೆಲುಗಳು, ದೊಡ್ಡ ದೊಡ್ಡ ಅಕ್ಷರಗಳ ಬೋರ್ಡುಗಳನ್ನು ತೂಗುಹಾಕಿಕೊಂಡು ನಿಂತಿದ್ದುವು. ಒಂದವರ ಆರಾಮಕ್ಕಾಗಿ ಸಂಗೀತ ಬೇರೆ; "ಪಿಯೋ ಜಾ, ದುಃಖಿಯಾ ಭರ್ಕೇ ದಿಯೋಜಾ"........ಯಾರಿಗೆ ಆ ಆಹ್ವಾನ ?

ಗಿರಣಿಯ ಕೂಲಿಗಳು ಮಾತ್ರ, ಒಂದೇ ಸಮನೆ ಸಾಗಿದ್ದರು. ಸಿನಿಮಾ, ಸಂಗೀತ, ಜನ ಯಾವುವೂ ಅವರನ್ನು ಬೆರಗುಗೊಳಿಸಲಿಲ್ಲ; ಯಾವುವೂ ಅವರನ್ನು ಆಕರ್ಷಿಸಲಿಲ್ಲ. ಕೊಳಕು ಬಟ್ಟೆ; ಅಲ್ಲಲ್ಲಿ ತೇಪೆಯಾಗಿದ್ದ ವಸ್ತ್ರ ಅವರು ತೊಟ್ಟಿದ್ದು, ತಲೆಯ ಮೇಲೆ ಹತ್ತಿಯ ಧೂಳು ತಾನೇ ತಾನಾಗಿ ಪಸರಿಸಿತ್ತು. ದಾರಿಯ ಎದುರು ಕೊನೆಯಿಂದ ಬರುವವರಿಗೆ, ಜೇಡನ ಪರೆಗಳು ತೇಲಿ ಬರುವಂತೆ ಭಾಸವಾಗುತ್ತಿತ್ತು. ಎಲ್ಲರೂ ಒಂದೇ ಕುಟುಂಬಕ್ಕೆ ಸೇರಿದವರು; ದಾರಿದ್ರ್ಯ ದೇವತೆಯ ಮಕ್ಕಳು. ಎಲ್ಲರ ಮುಖದಲ್ಲೂ ಒಂದೇ ಭಾವ; ರಿಕ್ತತೆಯ ನರ್ತನ. ಎಲ್ಲರ ಹೃದಯದಲ್ಲೂ ಒಂದೇ ರಾಗ, ಕಾತರ; ಗೂಡನ್ನು ಸೇರಬೇಕೆಂದು. ಹಲ-ಕೆಲವರು ಬಾಲಕರ ಹೊರತು, ವಯಸ್ಸಾದ ಕೂಲಿಗಳೆಲ್ಲಾ ಮೂಕರಾಗಿ ಸಾಗಿದ್ದಾರೆ.....ಯಂತ್ರಕ್ಕೆ ನಾಲಗೆ ಇದೆಯೆ ?

ಅರ್ಧಗಂಟೆಯಾದರೂ, ಇನ್ನೂ ಹೊರಬೀಳುತ್ತಲೇ ಇದ್ದಾರೆ ಅವರು; ಬೇಗಬೇಗನೆ, ಕಾತರದಿಂದ ಹೆಜ್ಜೆ ಹಾಕುತ್ತಿದ್ದಾರೆ,.... ಎಲ್ಲಿಗೆ ?

ಗಿರಣಿಯ ಗೋಡೆಯ ಪಕ್ಕದಲ್ಲೇ ನಡೆದರೆ, ದೊಡ್ಡ ರಸ್ತೆಯಿಂದ ಸಣ್ಣ ಓಣಿಯೊಂದು ಎಡಗಡೆಗೆ ತಿರುಗುತ್ತದೆ, ಅಕ್ಕ-ಪಕ್ಕದ ಎತ್ತರವಾದ ಸೌಧಗಳು ಅಲ್ಲಿ ನಿರಂತರ ನೆರಳನ್ನು ಚೆಲ್ಲಿವೆ. ಸೂರ್ಯನೂ ಇಣುಕಲು ಹೆದರುವ ಎಡೆ ಅದು. ಡೊಂಕುಡೊಂಕಾಗಿ ಹರಿದು, ಕಡೆಗೊಂದು ತಗ್ಗಿನಲ್ಲಿ ಜಾರುತ್ತದೆ ಆ ಗಲ್ಲಿ; ಬಹುಹಿಂದೆ ಊರಿನ ಕೆರೆಯಿದ್ದ ಜಾಗ ಅದು; ಊರಿಗೆಲ್ಲಾ ನೀರಿನ ಆಸರೆಯಾಗಿತ್ತು. ಇಂದು ನೀರೆಲ್ಲ ಒಣಗಿ ಹೋಗಿ, ಆ ತಗ್ಗಿನಲ್ಲಿ ಸಾವಿರಾರು ಸಣ್ಣಪುಟ್ಟ ಗುಡಿಸಿಲುಗಳು ಕಾಣುತ್ತವೆ.

ಒಂದು ರೀತಿಯಿಲ್ಲ, ವ್ಯವಸ್ಥೆಯಿಲ್ಲ. ಕುಪ್ಪೆಕುಪ್ಪೆಯಾಗಿ, ಅಲ್ಲಿ ಇಲ್ಲಿ ಚೆದರಿಕೊಂಡಿವೆ ಆ ಗುಡಿಸಿಲುಗಳು....ನಿಲ್ಲುವುದಕ್ಕೆ ತ್ರಾಣವೆಲ್ಲಿ? ಅವುಗಳಷ್ಟೇ ವಕ್ರವಾಗಿ ಹರಿಯುತ್ತದೆ, ಅಲ್ಲಿಯ ಹೊಲಸನ್ನೆಲ್ಲಾ ಒಳಗೊಂಡ ಚರಂಡಿ. ಅದೂ, 'ಕಾಲಕ್ಕೆ ಅಂತ್ಯವಿಲ್ಲ; ಇಂದಲ್ಲ ನಾಳೆ....' ಎಂಬಂತೆ, ಉದಾಸೀನದಿಂದ, ನಿಧಾನವಾಗಿ ಸಾಗಿದೆ. ತನ್ನ ರಾಜ್ಯದಲ್ಲಿ ತನ್ನ ಗುರುತೆಂಬಂತೆ, ಅದು ಹರಿಯುವ ಕಡೆಯಲ್ಲೆಲ್ಲಾ ಅದರದೇ ಒಂದು ವಾಸನೆ; ಮೂಗೊಡೆಯುವ ದುರ್ಗಂಧ. ಆ ಕೊಚ್ಚೆಯೇ ಅಲ್ಲಿಯ ಹುಡುಗರ ದೋಣಿಯಾಟದ ಹೊಳೆ. ಈ ಹಟ್ಟಿಯ ಆಚೆ ಕಡೆಗೆ ರೈಲುದಾರಿ. ರೈಲಿನಲ್ಲಿ ಹೋಗುವವರಿಗೆ ಆ ಗುಡಿಸಿಲ ಹೊದಿಕೆಗಳು ಪಾತಾಳದಲ್ಲಿದ್ದಂತೆ ಕಾಣುತ್ತವೆ.

ಅಲ್ಲಿಗೆ ಸುರಿಯಿತು ಮಿಲ್ಲಿನ ಕೂಲಿಯ ಜನ.

× × × ×

ರೆಡ್ಡಿ-ಚೌಡಿ, ಒಂದು ಗಂಡು, ಒಂದು ಹೆಣ್ಣು-ಲೆಕ್ಕಕ್ಕೆ. ಚೌಡಿ ಉಟ್ಟ ಸೀರೆಯಿಂದ ಅವಳನ್ನು 'ಹೆಣ್ಣು' ಎಂದು ಗುರುತಿಸಲಾಗುತ್ತಿತ್ತೇ ಹೊರತು, ಇಲ್ಲದಿದ್ದರೆ ಅವಳು ಒಂದು ಬಗೆಯ ಪ್ರಾಣಿ ಎಂದೇ ಭಾಸವಾಗುತ್ತಿತ್ತು. ಹಟ್ಟಿಯಲ್ಲಿಯ ಇತರರಂತೆ ಅವಳೂ ತಾನು ಕೆಲಸ ಮಾಡುತ್ತಿದ್ದ ಗಿರಣಿಯಲ್ಲಿಯ ಯಂತ್ರಗಳಲ್ಲೊಂದು ಭಾಗ.

ಚೌಡಿಯ ತಂದೆ-ತಾಯಿ ಗಳಾರೆಂಬುದು ಯಾರಿಗೂ ತಿಳಿಯದು. ಅವಳಿಗೂ ತಿಳಿಯದಂತೆ. ಅಂತೂ ಹೆಣ್ಣಾಗಿ ಹುಟ್ಟಿ, ಜಗತ್ತಿಗೆ ಬಂದಿದ್ದಳು. ರೆಡ್ಡಿಯಾದರೂ ಹಾಗೇ. ಯತ್ನವಿಲ್ಲದೆ ಗಂಡ-ಹೆಂಡತಿ ಎಂದು ಹೇಳಿಕೊಂಡು, ಒಂದೇ ಗುಡಿಸಿಲಲ್ಲಿ ವಾಸ ಮಾಡುತ್ತಿದ್ದರು. ಮಂಗಳ ಮುಹೂರ್ತದಲ್ಲಿ ಮಂಗಳವಾದ್ಯಗಳ ಧ್ವನಿಯಿಲ್ಲ; 'ಸುಲಗ್ನೇ ಸಾವಧಾನ' ಎಂದು ಯಾವ ಪುರೋಹಿತನೂ ಅವರನ್ನು ಹರಸಲಿಲ್ಲ. ಸಲಹಿ ಸಾಕಿದ ತನ್ನ ಮುದ್ದು ಮಗಳನ್ನು 'ಎನ್ನ ಮನೆಯಂಗಳದಿ ಬೆಳೆದೊಂದು ಹೂ'ವನ್ನು ನಿನಗೆಂದು ಕೊಟ್ಟ ತಾಯಿಯಿಲ್ಲ.

ರೆಡ್ಡಿ-ಚೌಡಿ 'ಸಂಸಾರ' ಹೂಡಿ, ಹಲವು ವರ್ಷಗಳಾಗಿದ್ದುವು. ರೆಡ್ಡಿ ಮೊದಲು ನಾಲ್ಕು ದಿನ ಅವಳ ಜೊತೆಯಲ್ಲೇ ಇರುತ್ತಿದ್ದ; ಮಿಲ್ಲಿನಿಂದ ಇಬ್ಬರೂ ಒಟ್ಟಿಗೆ ಬರುತ್ತಿದ್ದರು, ಒಟ್ಟಿಗೇ ಇರುತ್ತಿದ್ದರು. ಕಾಲಕಳೆದಂತೆ ರೆಡ್ಡಿಗೆ ಅವಳ ಒಂದಿಗಿರುವುದು ಸಾಕಾಯ್ತು. ಸಾಲದ್ದಕ್ಕೆ ಪ್ರಾರಬ್ಧ ಅವಿತಂತೆ, ಒಂದು ಮಗುವನ್ನು ಬೇರೆ ಹೆತ್ತಳು ಚೌಡಿ ಈಗೀಗಂತೂ, ಬೆಳಗ್ಗೆ ಹೊರಗೆ ಹೊರಟ ರೆಡ್ಡಿ ಮನೆ ಕಾಣುತ್ತಿದ್ದುದು ರಾತ್ರಿ ಹನ್ನೆರಡರ ಮೇಲೆಯೆ. ಮುನಿಯನ ಹೆಂಡದಂಗಡಿ, ಅರಳಿ ಮರದಡಿಯ ಜೂಜಿನ ಕಟ್ಟೆ—ಇವೇ ಅವನ ಸ್ಥಳ. ಮಿಲ್ಲಿನಲ್ಲಿ

ದುಡಿದು ದುಡಿದು, ಯಂತ್ರದೊಡನೆ ಸೆಣಸಿ ಸೆಣಸಿದ ರಟ್ಟೆಗೆ 'ತಾನೊಬ್ಬ ಮನುಷ್ಯ'ನೆಂದು ತಿಳಿಸುತ್ತಿದ್ದವಳು ಮದಿರಾ ದೇವತೆ. ಸೋತ ದೇಹಕ್ಕೆ, ನೊಂದ ಆತ್ಮಕ್ಕೆ, ತಂಪು ಬರುತ್ತಿತ್ತು; ಬದುಕಿನ ನರಕ ನಾಲ್ಕು ಘಳಿಗೆ ಮರೆಯುತ್ತಿತ್ತು.

ಚೌಡಿಗೆ ಗಿರಣಿಯಿಂದ ಮನೆಗೆ ಬರುವವರೆಗೂ ಮಗುವಿನದೇ ಯೋಚನೆ. ಆರು ತಿಂಗಳ ಕೂಸು. ಬೆಳಗ್ಗೆ ಹೋಗುವ ಮುಂಚೆ ಸ್ವಲ್ಪ ಹಾಲು ಕೊಟ್ಟ ಮೇಲೆ, ಪುನಃ ಅದು ಆಹಾರ ಕಾಣುತ್ತಿದ್ದುದು ಸಂಜೆಗೇ. ತನಗಿಲ್ಲದಿದ್ದರೂ ತನ್ನ ಮಗು ಬದುಕಲೆಂದು, ಹೊಟ್ಟೆ ಕಟ್ಟಿ, ಒಣಗಿ ಬೆಂಡಾದ ಮರವಾಗಿದ್ದಳು ಚೌಡಿ.

ನಿತ್ಯದಂತೆ ಇಂದು ಚೌಡಿ ಮನೆಗೆ ಬರುವ ಹೊತ್ತಿಗೆ ಕತ್ತಲು ಆವರಿಸುತ್ತಿತ್ತು; ಬಾಗಿಲನ್ನು ತೆರೆದವಳೇ, ತನ್ನ ಕಂದನನ್ನು ಎತ್ತಿಕೊಂಡಳು. 'ಕಂದ' ಅವಳ ಹಳೆಯ ಸೀರೆಯ ಕೊನೆಗಳನ್ನು ಜೋಡಿಸಿ ತೂಗುಹಾಕಿದ್ದ ಜೋಲಿಯಲ್ಲಿ ಬಟ್ಟೆಯೊಡನೆ ಸೇರಿ ಹೋಗಿತ್ತು. ತಾಯಿ ಎತ್ತಿಕೊಂಡ ಮೇಲೆ, ಎಚ್ಚರವಾಯಿತು ಅದಕ್ಕೆ. ನೋಡುವುದಕ್ಕೆ ಅಸಹ್ಯಕರವಾಗಿ ಕಾಣುತ್ತಿದ್ದ ಆ 'ಕೂಸು' ಅವಳ ಪಾಲಿಗೆ ಬಾಲಕೃಷ್ಣ. ಎರಡು ಕೆಂಚಿಕಣ್ಣುಗಳನ್ನು ಕೃಷ್ಣನ ಶೂಲದಂತೆ ಜೋಡಿಸಿ, ತಲೆಗೊಂದು ಒಣಗಿದ ಚೆನ್ನಿಕ್ಕಿಟ್ಟರೆ ಪೂರೈಸಿತು ಅವರ ಅವತಾರ. ತನ್ನೆರಡು ಕೈಗಳಿಂದಲೂ ಅದನ್ನು ಮಲಗಿಸಿಕೊಂಡು ಹಾಡಿಯೆ ಹಾಡಿದಳು ಚೌಡಿ, "ತಾರಮ್ಮಯ್ಯಾ ರಘುಕುಲ ರಾಮಚಂದ್ರಮನಾ ...." ಕತ್ತಿಗಳೂ ಉತ್ತರ ಕೊಡಲಾರದ ಆಗಾಗ, ಅವಳಿಗೆ ಗಂಧರ್ವಗಾಯನಕ್ಕೂ ಮಿಗಿಲೆನಿಸಿತ್ತು. ತಾಯಿಗಿಂತ ತಾನೇನೂ ಕಡಮೆಯಿಲ್ಲವೆಂಬಂತೆ ಚೀರಿತು ಕೈಯಲ್ಲಿ ಬಿದ್ದಿದ್ದ ಕಂದ. 'ಅಯ್ಯೋ........ನನ್ನ ಕಂದ........ಅಳಲಿಲ್ಲನೋ........ಇದೋ, ತಂದೆ ನೋಡು....ನನ್ನ ಕಂದಾಗೇ ಅಲೂ....'

ಎರಡು ವಾರಗಳಿಂದ ಅವಳ ಗುಡಿಸಿಲಲ್ಲಿ ದೀಪವಿಲ್ಲ. ಕತ್ತಲಲ್ಲೇ-ಅಭ್ಯಾಸಬಲದಿಂದ—ಸಾಮಾನುಗಳನ್ನು ತೆಗೆಯುತ್ತಿದ್ದಳು. ನಿತ್ಯದಂತೆ ಇಂದೂ ಮೂಡದಲ್ಲಿ ಕೈಯಾಡಿಸಿದಳು. ಬರೀ ಕತ್ತಲನ್ನು ಸವರಿದುವು ಬೆರಳುಗಳು....ಹಾಗೇ ಅಲ್ಲಿ ಇಲ್ಲಿ ನೋಡಿದಳು; ನೆಲದ ಮೇಲೆ ಮಡಕೆ ಚೂರಾಗಿ ಬಿದ್ದಿತ್ತು. ಹಾಲು ಮಣ್ಣಿನಲ್ಲಿ ಬೆರೆತುಕೊಂಡಿತ್ತು.

'ಕಾರಣ? ಯಾರು ಬಂದಿರಬೇಕು?....ಕಿಡಕಿ ಬಾಗಿಲು ಹಾಕಿದ್ದೇನೆ!....ಇನ್ನಾರು?....... ಅವನೇ ಬಂದಿದ್ದಾನೆ!........ಮಗುವಿಗೆ ಹೊಟ್ಟೆಗೆ?" ತೀರ ಅಗತ್ಯದ ಕಾಲಕ್ಕಿರಲೆಂದು-ಗಂಡನಿಗೆ ತಿಳಿಯದಂತೆ, ರಾಗಿಯನ್ನಿಡುತ್ತಿದ್ದ ಸಣ್ಣ ಮಡಕೆಯಲ್ಲಿ ಆಗಾಗ ನಾಲ್ಕು ಕಾಸು ಮುದುಗಿಡುತ್ತಿದ್ದಳು. ಅದುದರಿಂದಲೇ, ಮೂಲೆಯಲ್ಲಿ ಗೂಡಿನಲ್ಲಿದ್ದ ಮಡಕೆಗೆ ಕೈಹಾಕಿದಳು. ಎಷ್ಟು ತಡಕಾಡಿದರೂ, ಬೆರಳುಗಳಿಗೇನೂ ತಾಕಲಿಲ್ಲ. ಬರೀ ರಾಗೀ ಕಾಳು ಬೆರಳುಗಳ ಸಂದಿನಲ್ಲಿ ಜಾರಿ ಹೋಗುತ್ತಿತ್ತು. ಕುಲುಕಿ ನೋಡಿದಳು.ಊಹುಂ! ಅದನ್ನು ತೆಗೆದುಕೊಂಡು, ಬೀದಿದೆಸೆಯ ದಡಿಗೆ ಬಂದಳು; ರಾಗಿಯನ್ನೆಲ್ಲಾ ಸೆರಗಿಗೆ ನಿಧಾನವಾಗಿ ಸುರಿದಳು....ಮತ್ತೆ ಎಲ್ಲವನ್ನೂ ಜಾಲಾಡಿಳು.....ಎಲ್ಲಿ.... ಆ ಹೆಟ್ಟಿಗೆ ತಕ್ಕಂತೆ ನಿಂತಿತ್ತು ಆ ಕಂಬ; ಅವರನ್ನು ನೋಡಲು ಅದಕ್ಕೂ ಬೇಸರವೇನೋ! ಮುಂಕಾಗಿ, ತಿರಸ್ಕಾರದಿಂದ ನೋಡುವವರಂತೆ? ಚೌಡಿಯ ಹುಡುಕಾಟಕ್ಕೆ ಸಾಕ್ಷಿಯಾಗಿ ನಿಂತಿತ್ತು....ಎಲ್ಲಿ ಹೋಯ್ತು?....ಕಡೆಗೆ ಹೊಳೆಯಿತು....ತನ್ನ ಕಂದನಿಗೆಂದು, ತಾನು ಜೀವನ್ಮೃತಳಾಗಿ, ಮೀಸಲಿಟ್ಟಿದ್ದ ನಾಲ್ಕು ಕಾಸೂ, ಆ ಚಾಂಡಾಲನ ಹೆಂಡಕ್ಕೆ....ಹಾಲಿನ ಮಡಕೆ ಒಡೆದುದಕ್ಕೂ ಅವನೇ ಕಾರಣ! ಸಿಟ್ಟಿನಿಂದ ಬಿಟ್ಟು ಮನೆಯೊಳಕ್ಕೆ ಹೋದಳು. ಮಗು ಇನ್ನೂ ಕ್ಷೀಣಸ್ವರದಲ್ಲಿ ಅಳುತ್ತಿತ್ತು.....

"ದುಗ್ಗವ್ವಾ....ದುಗ್ಗವ್ವಾ...." ನೆರೆಮನೆಯವಳನ್ನು ಕೂಗಿದಳು ಚೌಡಿ.

"ಏನಾ ಚೌಡೀ" ದುಗ್ಗವ್ವನ ಧ್ವನಿಯಲ್ಲಿ ಅಸಹನೆಯಿತ್ತು ನಿದ್ದುರಕ್ತೆಯಿತ್ತು.

"ನೋಡಾ, ದುಗ್ಗವ್ವ....ಮಗೂ ಅಳ್ತಿದ್ಲಾ ಚೆಲ್ಲಾದೆ ಕಣವ್ವಾ, ...ಒಂದು ಬಟ್ಟು ಅಲಿದ್ರೆ ಕೊಡವ್ವ, ನಾಳೆ ಕೊಟ್ಟೇನು ನಿನಗೆ!...."

"ಚೆನ್ನಾಗೈತು .... ನಾನೇನು ಗೌಡಿತಿ ಏನ್ಲಾವ್ವಾ....ನಾಲ್ಕೈದ್ಕೆ ಕಟ್ಕೊಳ್ಳಾಕೆ ...ನಾವ್ಪದುಕೋದೇ ಸಾಕುಸಾಕಾಗದು, ಇನ್ನಿವಳ ಕಂದವ್ವನಂತೆ....ಅಲಂತೆ. .."

'ದುಗ್ಗವ್ವಾ ...ಮುಂಜಾನ ಬಸಿ ಅಲ್ಕುಡಿದಿದ್ದು ಕಾಣವ್ವ.... ಬರೀ ಒಟ್ಟ್ಯಾಗೇ ಅದೇ ಕಣವ್ವ!"

" ಹೋಗೇ ರಂಡಿ....ನಿಂಗೇ ಇಲ್ದೋಳು ಕೂಸಿನ್ಯಾಕಾ ಹೆತ್ತಿ..."

ನಿರಾಶಳಾಗಿ ಹಿಂದಿರುಗಿದಳು ಚೌಡಿ.ಬೇರೆಯವರಾರನ್ನಾದರೂ ಕೇಳಿದರೆ ಅದೇ ಉತ್ತರ, ಅಸಹನೆಯ ನಿಷ್ಠುರ ಮಾತು....ಕೇಳಲಾರದ ಬೈಗಳು!....

ಕತ್ತಲಲ್ಲೇ ಮಗುವನ್ನು ತೊಡೆಯ ಮೇಲೆ ಹಾಕಿಕೊಂಡು ಗೋಡೆಗೊರಗಿದಳು....ಮಗುವೂ ಅತ್ತು ಅತ್ತು, ಮುಂದೆ ಅಳಲು ಪ್ರಾಣವಿಲ್ಲದೆ, ತೆಪ್ಪಗಾಗಿತ್ತು...."ತಾನೇಕೆ ಮದುವೆಯಾದೆ ?.... ನಿಜ ತಾನು ಬಡವಳು; ಆದರೆ, ತಾನು ತಾಯಿಯಾಗಕೂಡದೆ?....ರೆಡ್ಡಿ !.... ಆವನ ತಪ್ಪೇನು...." ಮನಸ್ಸು ಹತೋಟಿ ತಪ್ಪಿತು; ಹಸಿದ ಹೊಟ್ಟೆ; ಬುದ್ಧಿ ಲಗಾಮು ಕಿತ್ತುಕೊಂಡು ಬಯಲಲ್ಲಿ ಓಡುವ ಕುದುರೆಯಾಗಿತ್ತು. ಏನೇನೋ ಚಿತ್ರಗಳು ಅವಳ ಕಣ್ಣಮುಂದೆ....ಚಿಕ್ಕಂದಿನಲ್ಲಿ ಕೃಷ್ಣನ ಬಾಲಲೀಲೆಗಳನ್ನು ಕೇಳಿದ್ದಳು ಚೌಡಿ .... ವಿಶಾಲವಾದ ಹಾಲ್ಕಡಲು....ಎಲ್ಲೆಲ್ಲೂ ಹಾಲು ಸೂರೆಸೂರೆಯಾಗಿ ಹರಿದಾಡುತ್ತಿದೆ. ....ಅದರ ನಡುವೆ ಸಣ್ಣ ಮಗು....ಯಾವುದು?..ತನ್ನ ಕೂಸೇ !!.... ತನ್ನ ಬಾ–ಲ–ಕೃ–ಷ್ಣ.

ಹುಚ್ಚುಕನಸಿನಲ್ಲಿ ಮುಳುಗಿದ್ದ ಚೌಡಿಗೆ ತೊಡೆಯ ಮೇಲಿದ್ದ ಮಗು ಕೂಡ ಮರೆತು ಹೋಗಿತ್ತು.

ಮೊದಲೇ ಆರಯಿಕೆ ಇಲ್ಲದೆ, ಸಾವಿಗೂ–ಜೀವಕ್ಕೂ ಅಂಟಿಅಂಟಿ ಉಸುರಾಡುತ್ತಿತ್ತು ಮಗು ಜೀವ ಮಿಡುಕಿ, ಮಿಡುಕಿ, ಇನ್ನೂ ಮಿಡುಕಲು ಸಾಧ್ಯವಾಗದೆ, ನಿಶ್ಶಕ್ತವಾಗಿ ತೆಪ್ಪಗಾಗಿತ್ತು; ಇದ್ದ ಅಲ್ಪ ಸ್ವಲ್ಪ ಉಸಿರೂ ಎಳೆದು ಎಳೆದುಕೊಂಡು, ಕಡೆಗೆ ಒಂದು ಸಾರಿ ಹೊರಟೇ ಹೋಯ್ತು ಮಗುವಿನ ಗೂಡಿನಿಂದ....ಭವದ ಬಂಧನದಿಂದ ಮುಕ್ತವಾಯ್ತು ಅದು. ಬದುಕಿದ್ದಿದ್ದರೆ ಇನ್ನೆಷ್ಟು ಕಷ್ಟ ಕಾಣಬೇಕಾಗಿತ್ತೋ ಏನೋ !

ಧಢಾರನೆ ಬಾಗಿಲನ್ನೊದೆದು ಒಳಗೆ ನುಗ್ಗಿದ ರೆಡ್ಡಿ. ದಬ್ಬಕ್ಕೆ ಬೆಚ್ಚಿಬಿದ್ದು ನೋಡಿದಳು ಚೌಡಿ. ಅವಳಿಗೆ ರೆಡ್ಡಿಯ ಗುರುತು ಹತ್ತಲಿಲ್ಲ. ಇನ್ನೂ ಹಾಲುಗಡಲಲ್ಲಿ ಈಜುವ ತನ್ನ ಕಂದನನ್ನು ಕಾಣುತ್ತಿದ್ದಳು....ರೆಡ್ಡಿಯ ಕೈಯಲ್ಲೇನೋ ಬಿಳಿಯದು ಕಂಡಿತು.... ಏನೋ....ಹಾ ! ಹಾಲು....ತನ್ನ ಕಂದನಿಗೆ ಹಾಲು!

' ಮಗು.... ಅಲು ನೋಡೋ ಆಲು!....ಆಲ್ತಂದ್ಯಾ ಮಗೂಗೆ?.. ಇಲ್ನೋಡು!....'

' ಏನೇ ಬೊಗಳೋದು ನೀನು!....ಏ ಜೋಕೆ ...ಹಹ್ಹಹಾ...."

ಚೌಡಿಗೆ, ಕಗ್ಗತ್ತಲ ರಾತ್ರಿಯಲ್ಲಿ ಝಗ್ಗನೆ ಮಿಂಚು ಹೊಳೆದಂತೆ ಅರ್ಥವಾಯ್ತು. ಹೃದಯದಲ್ಲಿ ದುಃಖ-ರೋಷಗಳ ಜ್ವಾಲಾಮುಖಿ ಸಾವಿರ ಆಕಾರದಲ್ಲಿ ಹಾರಿತು.

' ಆಯ್ಯೋ !....ಪಾಪೀ....' ಮೈಮೇಲೆ ಪ್ರಜ್ಞೆಯಿಲ್ಲ.

ಒಂದು ಘಳಿಗೆಯಲ್ಲಿ ಅವನ ಕೈಯಿಂದ ಸೀಸೆಯನ್ನು ಕಿತ್ತುಕೊಂಡು, ಅವನ ಮುಖದ ಕಡೆಗೇ ಎಸೆದಳು. ಗುರಿತಪ್ಪಿ ಸೀಸೆ ಗೋಡೆಗೆ ಬಡಿದು, ಸಾವಿರ ಹೋಳಾಯ್ತು; ಹೆಂಡ ಗೋಡೆಯ ಮೇಲೆ ಸುರಿದು ಕೆಳಗಿಳಿಯಿತು.

'....ರಂಡೆ ...' ಅಬ್ಬರಿಸಿದ ರೆಡ್ಡಿ. ಮರುಘಳಿಗೆಯಲ್ಲಿ, ಅವನ ಒದೆತದಿಂದ, ಮೂಲೆಯ ಕುಪ್ಪೆಯಾದಳು ಚೌಡಿ. ಪ್ರಜ್ಞೆ ತಪ್ಪಿತ್ತು. ಪುನಃ ಮುಸಿಯನಲ್ಲಿಗೆ ಧಾವಿಸಿದ ರೆಡ್ಡಿ.

× × × ×

' ಆಲು ...ಕಂದ....' ಏನೇನೋ ಕನವರಿಸುತ್ತ ಎಚ್ಚತ್ತಳು ಚೌಡಿ. 'ಹಾಲು....ಕಂದ....' ಎರಡೇ ಶಬ್ದ ಅವಳ ಬಾಯಲ್ಲಿ; ಹಾಲಿನ ಕಡಲು....ಅದರ ನಡುವೆ ' ತನ್ನ ' ಗೋಪಾಲ ಒಂದೇ ದೃಶ್ಯ ಅವಳ ಕಣ್ಣಲ್ಲಿ. ಮಿಕ್ಕೆಲ್ಲ ನೆನಪಿನ ಹಲಗೆಯಿಂದ ಸಂಪೂರ್ಣವಾಗಿ ಅಳಿಸಿ ಹೋಗಿತ್ತು.

ನಿಧಾನವಾಗಿ ಕಣ್ತೆರೆದಳು....ಎದುರಿಗೆ ಕತ್ತಲಲ್ಲಿ, ಏನೋ ಬೆಳ್ಳಗೆ ಕಾಣುತ್ತಿದೆ. ನಿಟ್ಟಿಸಿದಳು ಚೌಡಿ; ನೋಡು ನೋಡುತ್ತಿದ್ದಂತೆ ವಿಸ್ತಾರವಾದ ಸಾಗರವಾಯ್ತು. ಆ ಬಿಳಿಯ ಬಣ್ಣ....ಅವಳ ಮುಖದಲ್ಲಿ ಸಂತೋಷ ಮೂಡಿತ್ತು. 'ಮಗೂ....ಆಲು! ಕುಡಿಯೊ....ತುಂಬ ಕುಡಿ....ಆಲು....ಕಂದ ಆಲು!'

ಮಗುವನ್ನು ಎತ್ತಿಕೊಂಡು, ಅಲ್ಲಿಗೇ ಧಾವಿಸಿದಳು....' ಸತ್ತ ಮಗು ' ಎಂಬ ಪ್ರಜ್ಞೆ ಕೂಡ ಇಲ್ಲ.

× × × ×

ಮತ್ತಿಳಿಯುವವರೆಗೂ ಮುಸಿಯನ ಚಾವಡಿಯಲ್ಲೇ ಬಿದ್ದಿದ್ದ ರೆಡ್ಡಿ ಮನೆಗೆ ಬಂದ. ಬಾಗಿಲನ್ನೊದೆದುಕೊಂಡು....ಕೂಗಿದ. 'ರೊಟ್ಟಿ ಮಾಡಿಯೇನ ಚೌಡೀ....ಏ....'

'ಶ್ಯ್—ಶ್'....ಯಾಕಾ ಅರಚ್ತೀ...ಗೋಪಾಲ ಅಲ್ಕುಡಿತಾನೆ.... ಶ್ಯ....ಸುಮ್ನಿರಾ ...ಕಾಣಾಕಿಲ್ವ ಅಲ್ಸಾಗರ?..ನೋಡಾ....ಕುಡಿಯೋ ಕಂದಾ....ಆ ಆ ಆ ಆ....ಆಲುಡೀತಾನೆ ನನ್ಕಂದ....'

ಕತ್ತಲಲ್ಲಿ ಏನೂ ಕಾಣಿಸುತ್ತಿರಲಿಲ್ಲ ರೆಡ್ಡಿಗೆ; ಅವಳ ಧ್ವನಿಯಲ್ಲಿ ವಿಕಾರ ಕೂಗು! ಏನಿರಬಹುದು ?

ಚಡ್ಡಿಯ ಜೇಬಿನಿಂದ ಬೆಂಕಿಪಟ್ಟಣವನ್ನು ತೆಗೆದು ಗೀರಿದ.

ಚೌಡಿಯ ತೊಡೆಯ ಮೇಲೆ ಸತ್ತ ಮಗು. ಕೈಕಾಲು ಸೆಡೆದು ನಿಂತಿವೆ, ಕೈಗಳು ಮುಷ್ಟಿ ಬಿಗಿದಿವೆ. ಮಣ್ಣೇರಿತ ಹೆಂಡವನ್ನೇ ಹಾಲೆಂದು, ಅದರ ಬಾಯಿಗೆ ಸುರಿಯುತ್ತಿದ್ದಾಳೆ. ಮಗುವಿನ ಎರಡು ದವಡೆಗಳಲ್ಲೂ ಹರಿದು ಇಳಿಯುತ್ತಿದೆ ಹೆಂಡ....ಅವಳ ಕಣ್ಣು, ಎತ್ತಲೋ ಹೋಗಿವೆ! ಕಂಬದಂತೆ ನಿಂತ ರೆಡ್ಡಿ. ಕೈಲಿದ್ದ ಬೆಂಕಿಕಡ್ಡಿ ನಿಧಾನವಾಗಿ ಆರಿಹೋಯ್ತು; ಸ್ವಲ್ಪ ಹೊತ್ತು ಅದರ ಹೊಗೆ ಆಡುತ್ತಿದ್ದು, ಅದೂ ಮಾಯವಾಯ್ತು. ಚೌಡಿಗೆ ಹುಚ್ಚು ಹಿಡಿದಿತ್ತು.

ಮಗುವಿನ ಗೋರಿಯು ಆಯ್ತು, ಚೌಡಿಗೆ ಬೀದಿಗಳೇ ಬೀಡಾರವಾಯ್ತು, ರೆಡ್ಡಿ ?.... ಗಿರಣಿಯ ಯಂತ್ರದಲ್ಲೊಂದು ಭಾಗ !

× × × ×

ಬೆಳಗಾಯ್ತು; ಉಷೆ ಬಂಗಾರದ ಸೀರೆಯುಟ್ಟು, ಗಿಡಗಳೆಲೆಗಳ ಮೇಲೆ ನರ್ತಿಸಿ, ಸೌಧಗಳ ಗೋಪುರಗಳ ಮೇಲೆ ಹೊಳೆದು, ಎಂದಿನಂತೆ ಆನಂದದಿಂದ ಮುಂದೆ ಸಾಗಿದಳು.

ಗಿರಣಿಯು ಕೂಗಿತು; ಹಟ್ಟಿಯಿಂದ ಜನ ಸೂಕರಂತೆ ಹೊರಬಿದ್ದರು; ಓಣಿಯಿಂದ ರಸ್ತೆಗೆ ಬಂದು, ಗಿರಣಿಯೊಳಕ್ಕೆ ಸುರಿದರು; ಬಂಡವಾಳದ ಬಾಯಿಗಳಂತಿದ್ದ ಕಬ್ಬಿಣದ ಸರಳಿನ ವಿಶಾಲ ಬಾಗಿಲು ಮುಚ್ಚಿತು.

ಅಂದು ಗಿರಣಿಯಲ್ಲಿ ಒಂದು ಹೆಣ್ಣು ಕೂಲಿಯಿರಲಿಲ್ಲ. 'ನಂಬರು ೧೬೭೮.'

ಸಾರಾಸಾರ ವಿಚಾರ

ಲಾವಣಿ ಧಾಟಿ

ಶ್ರೀ. ಖಾನೋಳಕರ ಶ್ರೀಧರರಾಯರು, ಪುಣೆ

ಕಾಮ

೧

ಸಾರಾಸಾರ ವಿಚಾರ ಮಾಡಿದರೆ
ಮದುವಿಯೆಂಬುದಿದು ಬಲು ಹೀನಾ,
ಮದುವಿಯಿಂದ ಮಗ ಮಂಗನಾಗತಾನ
ಸೊಸಿಗೆ ಮಣಿಯತಾನ ದಿನಾ ದಿನಾ!

೨

ಚೆಲುವ ಹಕ್ಕಿಯೊಲು ಹಾರಿ ತಿರು-ತಿರುಗಿ
ಬನದ ಸೊಬಗಿನೊಳು ಮೈಮರೆತು–
ಬಂದು ಮನೆಯೊಳಗೆ ಬಿದ್ದುಕೊಂಬುದೇ
ಸುಖಾ ಸುಖಾ ಚಿಂತೆಯ ಮರೆತು!

೩

ಮದುವೆ ಮಾಡಿಕೊಂಡ್ರೆ ನಿದ್ದೆಯೆಲ್ಲಿಯದು?
ಹುಚ್ಚು ಜಾಗರಣಿ ಬೆಳತನಕಾ!
ತಿಂದ ಅನ್ನ ಸವಿ–ರುಚಿಯಾಗುವುದೆ?
ಮೈಗೆ ಹತ್ತುವುದೆ ಮಡಿವನಕಾ?

೪

ಹರಯ ಬಂದ ಹುಡುಗರಿಗೆ ಮದುವಿ ಮಾಡಿ
ಕೆಡಿಸಬ್ಯಾಡ್ರ್ಯೋ ಸೊಗಸಿನ ಥಾಟ!
ಎಷ್ಟು ಓದಿದರು ಶಂಖವಾಗುವನು
ಎದೀ ಬಿಲ್ಲಿನೊಲು ಬಿರಿಸೋಟ!

೫

ಹೆಂಡತಿಯೆಂಬುವ ಕಾಲಬೇಡಿ–ಕೈ-
ಬೇಡಿ ಬಿದ್ದನ್ಯಾಗ ಇದ್ದ ಸುಖಾ–
ಸಂದಿ ಪೋಗತದ; ದೇಶಕಾರ್ಯದೊಳು
ಧರ್ಮಕಾರ್ಯವೂ ಬಲುಬಡಕಾ!

೬

ಮದುವಿಯಿಂದಲೇ ಹಾಳು ದುಷ್ಕ–ಧನ–
ವೀರ್ಯ–ಶೌರ್ಯ ಬಯಲಿಗೆ ಬಯಲಾ!
ಹೊಟ್ಟೆಯ ಮಕ್ಕಳ ಎಳೆಯ ಕೊರಳಿನಾಗ
ಯಾಕ ಹಾಕತೀರಿ ಸವಿಯುರಲಾ?

೭

ಮದುವಿಯಿಂದಲೇ ನಮ್ಮ ದೇಶ ಕೊರ–
ಕೊರಗಿ ಸಾಯತದ ಭಣಾ ಭಣಾ!
ಹೆಂಡತಿ ಮಕ್ಕಳ ಬೈಗಳ ಸುರಿಮಳೆ
ಸುರಿದೆ ಸುರಿಯತದ ದಿನಾ ದಿನಾ!

ಬ್ರಹ್ಮಚರ್ಯ

೧

ಸಾರಾಸಾರ ವಿಚಾರ ಮಾಡಿದರೆ
ಮದುವಿಯೆಂಬುದೇ ಬಲುಹುರುಪಾ!
ಬ್ರಹ್ಮಚರ್ಯದಲಿ ಕಳೆದ ಜೀವನವು
ಎಣ್ಣೆಯಿಲ್ಲದಾ ಬರಿದೀಪಾ!

೨

ಬ್ರಹ್ಮಚಾರಿಯೊಳು ದಿಟ್ಟತನದ ಹುರಿ
ತುಂಬೇ ತುಂಬತದ ಮೈಯೆಲ್ಲಾ
ಬಿಟ್ಟ ಕೋಣನ್ಹಾಂಗ ಹೋದ-ಹೋದ ಕಡೆ
ಜಗಳಗಂಟತನ ತುದಿ ಮೊದಲಾ!

೩

ಮದುವಿಯೆಂಬ ಮಾಮಂತ್ರ ಜಪಿಸಿದರೆ
ಅಳದುಹೋಗಿ ಮನಸಿನ ಬಿಂಕ—
ಮರ್ತ್ಯಜೀವನವು ಜೇನಿನಂತೆ ಸಿಹಿ-
ಯಾಗಿ ಬಲಿಯುವುದು ಕಡೆತನಕಾ!

೪

ಹಿಡಿಹಿಡಿ ಅರಿಸಿಣ ಬಡಿದುಕೊಂಡರೂ
ಗಲ್ಲ-ಗಲ್ಲದೊಳು ಜಡಿಜಡಿದು–
ಹಣೆಯಮ್ಯಾಲೆ ಕುಂಕುಮವು ಇಲ್ಲದಿರೆ
ಚೆಂದ ಕಾಣುವುದೆ ಮುಖ ನಿಡಿದು?

೫

ಮದುವೆಯ ಅಕ್ಷತೆ ಬಿದ್ದ ಮದುಮಗನ
ಮೋರೆ ನೋಡು ಕಾಮನ ಬಿಲ್ಲಾ!
ಮದುವಿಯಿಲ್ಲದಾ ತುಂಟ ಮೋತಿಯೊಳು
ರಾವು ಹೊಡೆಯುವುದು ಹಗಲೆಲ್ಲಾ!

೬

ಮದುವಿಯಿಂದಲೇ ಧರಣಿಯೊಳಗೆ ಸುಖ-
ಶಾಂತಿ-ಸೊಗಸು-ಜೀವದ ತಿರುಳು!
ಮದುವೆಯಿಂದಲೇ ಬಾಳ್ವೆಯೆಂಬ ರಸ-
ಬಾಳ್ವೆ ತೊರೆಯುವುದು ಹಗಲಿರುಳು!

೭

ಮದುವಿಯಿಲ್ಲದನ ಹಣೆಯಬರೆಹ ಕುರು–
ಡಾನ ಕಣ್ಣಿನೊಲು ಬಲುಘೋರ!
ಮದುವಿ ಮಾಡಿನೋಡೊಮ್ಮೆ ಜನುಮದಲಿ
ಚಿನ್ನವಾಗತದ ಸಂಸಾರಾ!

ಮದುವೆ

೧

ದೇವ ಹುಟ್ಟಿಸಿಹ ಕಾಮ ಭಾವನೆಯ
ಇಟ್ಟನದರ ಹೊಟ್ಟ್ಯಾಗ ಸಿರಿ!
ಕಾಮರತಿಯ ಸುಖವೆಷ್ಟು ಹೊಗಳಬೇಕು?
ಜೀವಕಮಲ ಮಕರಂದ ನೊರಿ!

೨

ಕಾಮದಿಂದ ಮನಬೆಂದು ಹೋಗತದ
ಸಿದ್ಧವಾಗತದ ಸುಡುಸುಡುತಾ
ಹೆಣ್ಣಿನ ಬೆಸುಗೆಯ ಹೊಂದಿ ಆಗತದ
ಪೂರ್ಣ ಮಾನವನ ಮನೋರಥಾ!

೩

ಗಂಡು-ಹೆಣ್ಣುಗಳ ಮನದಿ ಮದನ-ರತಿ
ತುಂಬಿ ಕಾಣತದ ಧರೆಯೆಲ್ಲಾ!
ಸೊಗಸಿನಿಂದ ತುಂಬಿರುವ ಕಲಾಕೃತಿ
ಒಣ್ಣಸೊಗಸು ವಿಶ್ವದೊಳೆಲ್ಲಾ!

೪

ಇನಿಯನಾಗತಾನ ದೇವ, ಇನಿಯಳೇ
ದೇವಿಯಾಗತಾಳ; ಸದಾ ಶುಚಿ!
ಒಬ್ಬರಿಗೊಬ್ಬರು ಕೂಡಿ ಹೊಂದತಾರ
ಜೀವರತಿಯ ಕೆನಿ–ಸವಾರುಚಿ!

೫

ಮದುವಿಯೆಂದರದು ದೇಹಭೋಗದೊಳು
ಕಾಮ ತುಂಬಿ ಕುಣಿಯುವುದಲ್ಲಾ!
ಮದುವಿಯೆಂದರೆಯೆ ಮಧುರಭಕ್ತಿಯೊಳು
ಅಮರನಾಗುತಿಹ ಪದವಲ್ಲಾ!

೬

ಜೀವದೊಳಗ ಚೆಲ್ವಿಕೆಯು ಬೆರೆಯುತದ
ಹೊಲಿಗಿ ಕಡಿದು ನುಣುಪಾಗಿ ಮನಾ–
ತಂದೆ-ತಾಯಿ-ಮಗ, ಬಂಧು–ಬಾಂಧವರು
ಬಳ್ಳಿ ಹಬ್ಬತದ ಧರೆಯ ಬನಾ!

೭

ಮದುವಿ ಮಂಗಲದ ಗುಟ್ಟು ಸುಖದ ಸವಿ–
ತೊಟ್ಟು ಮುಕ್ತಿಯನು ತೋರ್ವ ಸರಿ,
ರೀತಿ–ನೀತಿಗಳ ಕಲಿಪ ವೀಣೆ ಶ್ರೀ–
ಧರನ ಕವನದೊಲು ನವಿಲುಗರಿ!

ಸಾಯನ ನಿರಯನ ವಾದ

(ಪಂಚಾಂಗ ಸಂಶೋಧನೆಯಲ್ಲಿಯ ಒಂದು ಸಂಗತಿ)

●

ಶ್ರೀ. ಪ್ರ. ಗೋ. ಕುಲಕರಣಿ, ಬೆಳಗಾಂವಿ

ಭಾರತೀಯರು ಸಾಯನ ಪಂಚಾಂಗವನ್ನು ಅನುಸರಿಸಬೇಕೋ, ನಿರಯನ ಪಂಚಾಂಗವನ್ನು ಅನುಸರಿಸಬೇಕೊ ಎಂಬ ಬಗೆಗೆ ಒಂದು ವಾದವಿದೆ. ಈ ವಾದದ ವಿವೇಚನೆಯನ್ನು **ದಿವಂಗತ ಶಂಕರ ಬಾಳಕೃಷ್ಣ ದೀಕ್ಷಿತ** ಅವರು ತಮ್ಮ "ಭಾರತೀಯ ಜ್ಯೋತಿಃಶಾಸ್ತ್ರ"* ಎಂಬ ಗ್ರಂಥದ 'ಪಂಚಾಂಗ ಪ್ರಕರಣ'ದಲ್ಲಿ ಮಾಡಿ "ಸಾಯನ ಮಾನವನ್ನು ಸ್ವೀಕರಿಸುವುದುಉತ್ತಮ ಮಾರ್ಗವಾಗಿದೆ" ಎಂದು ತಮ್ಮ ಅಭಿಪ್ರಾಯ ಕೊಟ್ಟಿದ್ದಾರೆ, (ಪುಟ ೪೩೮); ಆದರೆ ಇಂದು ಭಾರತೀಯರು ಆಸೇತು ಹಿಮಾಚಲ ಅನುಸರಿಸುತ್ತಿರುವುದು ನಿರಯನ ಪಂಚಾಂಗ. ನಿರಯನ ಪಂಚಾಂಗವನ್ನು ಅನುಸರಿಸುವುದರಿಂದ ಹಲವು ತೊಡಕುಗಳೂ ಇರುತ್ತವೆ. ಆ ತೊಡಕುಗಳು ನಮ್ಮ ಜ್ಯೋತಿಷಿಗಳ ಮುಂದೆ ಇಲ್ಲವೆಂತಲ್ಲ. ಹಲವರು ಜ್ಯೋತಿಷಿಗಳು ಈ ಬಗೆಗೆ ವಿಚಾರ ಮಾಡಿ, ಕೆಲವೊಂದು ಮಾರ್ಗವನ್ನು ತೆಗೆಯಲಿಕ್ಕೂ ಪ್ರಯತ್ನಿಸಿದ್ದಾರೆ. ಅಂಥವರ ಅಭಿಪ್ರಾಯವನ್ನು ದಿ. ದೀಕ್ಷಿತರು ತಮ್ಮ ಗ್ರಂಥದಲ್ಲಿ ಉದಹರಿಸಿ, ಅದನ್ನು ಖಂಡಿಸಲೂ ಪ್ರಯತ್ನಿಸಿದ್ದಾರೆ. ಅಂಥವರು ಸೂಚಿಸಿದುದು: "ವರ್ಷಮಾನವನ್ನು ಸಾಯನ ತೆಗೆದುಕೊಳ್ಳದೆ, ಶುದ್ಧ ನಿರಯನ ತೆಗೆದುಕೊಳ್ಳಬೇಕು; ನಕ್ಷತ್ರ, ಸಂಕ್ರಾಂತಿ ಇವು ನಿರಯನವೇ ಇರಬೇಕು. ನಿರಯನ ಮೇಷಸಂಕ್ರಮಣವು ಯಾವ ಚಾಂದ್ರಮಾಸದಲ್ಲಿ ಆಗುವುದೊ ಅದು ಚೈತ್ರ–ಎಂಬ ಸದ್ಯದ ಪದ್ಧತಿಯನ್ನು ಇದ್ದಂತೆಯೇ ಇಟ್ಟುಕೊಳ್ಳಬೇಕು; ಆದರೆ ಅಯನಾಂಶವು ೩೦ ಆಗಿ ಸಂಪಾತವು ನಿರಯನ ಮೀನಾರಂಭಕ್ಕೆ ಹೋಗಲು, ವರ್ಷಾರಂಭ–ವನ್ನು ನಿರಯನ ಮೀನಾರಂಭದಲ್ಲಿ–ನಿರಯನ ಫಾಲ್ಗುನದಲ್ಲಿ–ಮಾಡಬೇಕು. ಮತ್ತು **'ಮಧುಮಾಧವ'** ಎಂಬ ಹೆಸರುಗಳು ಋತುಸಂಬಂಧವಾಗಿದ್ದು, ಅವನ್ನು ಸಾವೀಗ ಮಾಡುತ್ತಿದ್ದಂತೆ ಚೈತ್ರದಿಂದ ಪ್ರಾರಂಭಿಸದೆ ಫಾಲ್ಗುನದಿಂದ ಪ್ರಾರಂಭಿಸಿ, ಚೈತ್ರದಲ್ಲಿಯ ಧಾರ್ಮಿಕ ಕೃತ್ಯಗಳನ್ನು ಫಾಲ್ಗುನದಲ್ಲಿ, ವೈಶಾಖದಲ್ಲಿಯವುಗಳನ್ನು ಚೈತ್ರದಲ್ಲಿ ಹೀಗೆ ಎಲ್ಲವನ್ನೂ ಹಿಂದಕ್ಕೆ ತರಬೇಕು. ಹೀಗೆ ಮಾಡುವುದರಿಂದ ಚೈತ್ರದಲ್ಲಿ—ವಸಂತದಲ್ಲಿ—ಮಾಡುವ ಕಾರ್ಯಗಳು ಫಾಲ್ಗುನದಲ್ಲಿ ಆದರೆ ವಸಂತದಲ್ಲಿಯೇ ಆಗುವುವು. ತಾರಾತ್ಮಕ **ರೇವತಿ, ಉತ್ತರಾ ಭಾದ್ರಪದ** ಇತ್ಯಾದಿ ನಕ್ಷತ್ರದ ಸ್ಥಾನಗಳಿಗೆ ಅಶ್ವಿನೀ ಮೊದಲಾಗಿ ಎನ್ನುವ ಕಾರಣವಿಲ್ಲ. ಶ್ರೀ. ಗಳಾದ ಕೇರೋಪಂತ ಛತ್ರೆ, ಕೃಷ್ಣಶಾಸ್ತ್ರಿ ಗೋಡಬೋಲೆ ಇವರ ಅಭಿಪ್ರಾಯವು ಹೀಗೆಯೆ ಇತ್ತು. ಪ್ರೊ. (ಲೋಕಮಾನ್ಯ) ಟಿಳಕ ಮತ್ತು ವೆಂಕಟೇಶ ಬಾಪೂಜಿ ಕೇತಕರ ಇವರ ಅಭಿಪ್ರಾಯವೂ ಹೀಗೆಯೆ ಇರುತ್ತದೆ" (ಪುಟ ೪೩೨–೩೩)

* ಈ ಪುಸ್ತಕವು ಮರಾಟಿ ಭಾಷೆಯಲ್ಲಿ ಬರೆಯಲ್ಪಟ್ಟಿದೆ. ಈ ಲೇಖನದಲ್ಲಿ ಕಂಸದಲ್ಲಿ ಕೊಟ್ಟ ಪುಟಸಂಖ್ಯೆಗಳು ಮೊದಲನೆಯ ಆವೃತ್ತಿಯವು. ಲೇ.

ಇದರಿಂದ ಸದ್ಯಕ್ಕೆ ಪ್ರಚಾರದಲ್ಲಿರುವ ನಿರಯನ ಪಂಚಾಂಗವನ್ನು ಅನುಸರಿಸುವುದರಿಂದ ಇನ್ನು ಮುಂದೆ ತೊಡಕುಗಳು ಹೆಚ್ಚಾಗಿ ಬರುತ್ತವೆಯೆಂಬುದೂ, ಅವುಗಳನ್ನು ಯಾವುದೊಂದು ರೀತಿಯಲ್ಲಿ ಬಿಡಿಸುವುದು ಅಗತ್ಯವಿದೆಯೆಂಬುದೂ ಸ್ಪಷ್ಟವಾಗುತ್ತದೆ. ಈ ವಾದವನ್ನು ಪರಂಪರೆಗೆ ಅನುಸರಿಸಿ ಹೇಗೆ ಬಿಡಿಸಬಹುದೆಂಬುದನ್ನು ವಿವೇಚಿಸುವುದೇ ಈ ಲೇಖನದ ಉದ್ದೇಶ.

ದಿವಂಗತ ದೀಕ್ಷಿತರು ಹೇಳುವಂತೆ (ಪುಟ ೪೩೦) ನಮ್ಮ ಪೂರ್ವಿಕರು ಸಾಯನ ಪದ್ಧತಿಯನ್ನು ಅನುಸರಿಸಿದ್ದಾರೆಂಬುದು ನಿಜ; ಅದನ್ನು ನಿರಯನ ಪದ್ಧತಿಗೆ ಸಂಬಂಧಿಸಿಕೊಂಡು ಬಂದಿದ್ದಾರೆಂಬುದೂ ಅಷ್ಟೇ ನಿಜ. "ಐತಿಹಾಸಿಕ ದೃಷ್ಟಿಯಿಂದ ನೋಡಿದರೆ ಆರಂಭದಿಂದ ಶಕಪೂರ್ವ ೨ ಸಾವಿರ ವರೆಗೆ ಸಾಯನ ವರ್ಷವೇ ಪ್ರಚಾರದಲ್ಲಿದ್ದಿತು" ಎಂದು ದೀಕ್ಷಿತರು ಹೇಳುತ್ತಾರೆ. ಆದರೆ ಈ ಮಾತನ್ನು ಹೇಳುವಾಗ ಅವರು ಪ್ರಯೋಗಿಸಿದ 'ಸಂಭವನೀಯ ಕಾಣುವುದು' ಮೊದಲಾದುವುಗಳು ಆ ಸಂಗತಿಯನ್ನು ಲಟಪಟಿಸಹಚ್ಚುತ್ತವೆ. ಒಂದು ವೇಳೆ ಅದು ಹಾಗೆ ಇದ್ದಿತೆಂದು ತಿಳಿದರೂ, ಕ್ರಿ. ಪೂ. ೨ಸಾವಿರ ವರ್ಷಗಳಿಂದ ಇಂದಿನ ವರೆಗೆ ಎಂದರೆ ನಾಲ್ಕು ಸಾವಿರ ವರ್ಷಗಳ ವರೆಗೆ ನಿರಯನ ಮಾನವೇ ಪ್ರಚಾರದಲ್ಲಿದೆ. ಐತಿಹಾಸಿಕ ದೃಷ್ಟಿಯಿಂದ ಈ ಪರಂಪರೆಗೆ ಏನೂ ಬೆಲೆಯಿಲ್ಲವೆ? ನಮ್ಮಲ್ಲಿ ಕೇವಲ ಸಾಯನವೂ ನಡೆದು ಬಂದಿಲ್ಲ; ಕೇವಲ ನಿರಯನವೂ ನಡೆದು ಬಂದಿಲ್ಲ. ಸಾಯನ-ನಿರಯನಮಾನಗಳೆರಡೂ ಒಂದರಲ್ಲೊಂದು ಹೆಣೆದುಕೊಂಡು ಬಂದಿವೆ. ಹಿಂದೆ ನಿರಯನ ಪದ್ಧತಿಯಿಂದ ಬಂದ ತೊಡಕುಗಳನ್ನು ಸರಿಪಡಿಸಿಕೊಂಡಿದ್ದಾರೆ. ಮುಂದೆ ಹೇಗೆ ಸರಿಪಡಿಸಿಕೊಳ್ಳಬೇಕೆಂಬುವರ ಸೂಚನೆಯನ್ನು ನಮ್ಮ ಜ್ಯೋತಿಷಿಗಳು ತಮ್ಮ ಗ್ರಂಥಗಳಲ್ಲಿ ಹೇಳಿದ್ದಾರೆ. ಆದರೆ ಅದರ ನಿಜವಾದ ಅರ್ಥವನ್ನರಿಯದೆ ದೀ ದೀಕ್ಷಿತರು ಅಪಾರ್ಥ ಮಾಡಿ, ನಕ್ಷತ್ರಾತ್ಮಕ ಅಶ್ವಿನೀ ಮೊದಲಾದ ಹೆಸರುಗಳನ್ನು ಸಂಪಾತ ಬಿಂದುವಿನಿಂದ ಸರಿಯಾದ ಅಂತರಗಳ ಮೇಲಿರುವ ಆಕಾಶಸ್ಥ ಚಲಿತ ಬಿಂದುಗಳಿಗೆ ಕೊಟ್ಟು, ಸಾಯನಮಾನವನ್ನು ಪ್ರಚಾರದಲ್ಲಿ ತರಲು ಪ್ರಯತ್ನಿಸಿದ್ದಾರೆ. ಆಧುನಿಕ ಜ್ಯೋತಿಷಿಗಳೂ ಈ ವಿಷಯದಲ್ಲಿ ಇನ್ನೂ ಸಂಶೋಧನೆ ನಡಿಸದಿದ್ದುದು ವಿಷಾದಕರ ಸಂಗತಿ.

ನಮ್ಮ ನಕ್ಷತ್ರಚಕ್ರವು ಈಗ ಅಶ್ವಿನ್ಯಾದಿಯಾಗಿರುತ್ತದೆ. ಆದರೆ ಮೊದಲಿನಿಂದ ಇದೇ ಕ್ರಮವಿರಲಿಲ್ಲ. ಅಶ್ವಿನೀ ನಕ್ಷತ್ರದಲ್ಲಿ ವಸಂತ ಸಂಪಾತವು ಬರಲು ಅಶ್ವಿನ್ಯಾದಿ ಕ್ರಮವು ಪ್ರಾರಂಭವಾಯಿತು. ವೇದಾಂಗ ಜ್ಯೋತಿಷದ ಕಾಲದಲ್ಲಿ ನಕ್ಷತ್ರಚಕ್ರವು ಕೃತ್ತಿಕಾದಿಯಾಗಿ ಇದ್ದಿತು. ಯಾಕೆಂದರೆ ಆಗ ವಸಂತಸಂಪಾತವು ಕೃತ್ತಿಕೆಯಲ್ಲಿ ಇದ್ದಿತು.

ಇದಕ್ಕೂ ಮೊದಲು ಮೃಗ ನಕ್ಷತ್ರವು ನಕ್ಷತ್ರಚಕ್ರದ ಆದಿಯಲ್ಲಿ ಇದ್ದಿತೆಂದೂ, ಆಗ ವಸಂತ ಸಂಪಾತವು ಆ ನಕ್ಷತ್ರದಲ್ಲಿ ಇದ್ದಿತೆಂದೂ ಲೋಕಮಾನ್ಯ ತಿಲಕರು ತಮ್ಮ 'The orion or Researches into the Antiquities' ಎಂಬ ಗ್ರಂಥದಲ್ಲಿ ಸಿದ್ಧಪಡಿಸಿದ್ದಾರೆ. ಇದರಿಂದ, ಸಂಪಾತ ಬಿಂದುವಿನ ಚಲನೆಯನ್ನನುಸರಿಸಿ ನಮ್ಮ ಪೂರ್ವಿಕರು ನಕ್ಷತ್ರವನ್ನು ಬದಲಿಸಿಕೊಳ್ಳುತ್ತ, ಬಂದಿದ್ದಾರೆಂಬುದು ಸ್ಪಷ್ಟವಾಗುತ್ತದೆ. ನಕ್ಷತ್ರಚಕ್ರವೆಂಬುದು ನಿರಯನ ಪದ್ಧತಿಯ ದ್ಯೋತಕವಿದೆ. ನಕ್ಷತ್ರ-ಚಕ್ರದಲ್ಲಾದ ಬದಲಾವಣೆಯು ಸಾಯನ ಪದ್ಧತಿಯ ದರ್ಶಕವಿದೆ. ಎಂದರೆ ನಮ್ಮ ಪೂರ್ವಿಕರು ಸಾಯನ-ನಿರಯನಗಳೆರಡನ್ನೂ ಹೊಂದಿಸಿಕೊಂಡು ಬಂದಿದ್ದಾರೆಂಬುದು ವ್ಯಕ್ತವಾಗುತ್ತದೆ. ಮೃಗಾದಿಯಾದ ನಕ್ಷತ್ರಚಕ್ರವು ಕೃತ್ತಿಕಾದಿಯಾಗಿ ಪರಿಣಮಿಸಿತು; ಅದು ಮುಂದೆ ಅಶ್ವಿನ್ಯಾದಿಯಾಗಿ ಆಯಿತು, ಅರ್ಥಾತ್ ಇನ್ನು ಮುಂದೆ ಪರಂಪರೆಗೆ ಅನುಸರಿಸಿ ಉತ್ತರಾಭಾದ್ರಪದಾದಿಯಾಗಿ ಮಾಡಿಕೊಳ್ಳುವುದು ಕ್ರಮ-ಪ್ರಾಪ್ತವಿದೆ.

ಸಂಪಾತಬಿಂದುವನ್ನನುಸರಿಸಿ ನಕ್ಷತ್ರಚಕ್ರವನ್ನು ಬದಲಿಸಿಕೊಳ್ಳುವ ವಿಷಯದಲ್ಲಿ ನಮ್ಮ ಪೂರ್ವದ ಜ್ಯೋತಿಷ ಗ್ರಂಥಗಳಲ್ಲಿ ಸೂಚನೆಯಿದೆಯೆ?–ಎಂಬುದನ್ನು ನೋಡಬೇಕು. "ಸೂರ್ಯಾದಿ ಪಂಚಸಿದ್ಧಾಂತಗಳ ಮತದಂತೆ ಸಂಪಾತದ ಪೂರ್ಣ ಪ್ರದಕ್ಷಿಣೆಯಾಗುವುದಿಲ್ಲ. ಅದು ರೇವತೀ ತಾರೆಯ ಪೂರ್ವಕ್ಕೆ ಮತ್ತು ಪಶ್ಚಿಮಕ್ಕೆ ೨೭ ಅಂಶದ ವರೆಗೆ ಹೋಗುತ್ತದೆ. ಎರಡನೆಯ ಆರ್ಯಸಿದ್ಧಾಂತದ ಮತದಂತೆ ಅದು ರೇವತಿಯ ಪೂರ್ವ ಪಶ್ಚಿಮಕ್ಕೆ ೨೪ ಅಂಶದ ವರೆಗೆ ಹೋಗುತ್ತದೆ. ಯಾವ ಕರಣಗ್ರಂಥದಲ್ಲಿಯೂ ಸಂಪಾತದ ಪೂರ್ಣ ಪ್ರದಕ್ಷಿಣೆಯಾಗುತ್ತದೆಂದು ಸ್ಪಷ್ಟವಾಗಿ ಹೇಳಿಲ್ಲ. ಆದರೆ ಅವುಗಳಲ್ಲಿ ಹೇಳಿದ ರೀತಿಯಿಂದ ಅಯನಾಂಶವು ೨೪ ಇಲ್ಲವೆ ೨೭ಕ್ಕಿಂತ ಹೆಚ್ಚು ಎಂದರೆ ೩೬೦ ರ ವರೆಗೆ ಹೋಗುತ್ತದೆ." ಎಂದು ದಿ. ದೀಕ್ಷಿತರೇ ಬರೆಯುತ್ತಾರೆ. ಮತ್ತು ಪೂರ್ವದ ಜ್ಯೋತಿಷಿಗಳು ಸಂಪಾತಕ್ಕೆ ಆಂದೋಲನ ಭ್ರಮಣವಿದುತ್ತದೆಂದು ತಪ್ಪು ತಿಳಿದುಕೊಂಡಿದ್ದಾರೆಂದು ಹೇಳುತ್ತಾರೆ (ಪುಟ ೩೩೨).

ಇಲ್ಲಿ ಶ್ರೀ. ದೀಕ್ಷಿತರ ತಿಳುವಳಿಕೆಯು ತಪ್ಪಾಗಿದೆ. ಸೂರ್ಯಾದಿ ಪಂಚಸಿದ್ಧಾಂತಗಳಲ್ಲಿ ಅಯನಾಂಶವು ೨೭ ಅಂಶಕ್ಕಿಂತ ಹೆಚ್ಚಾಗುವುದಿಲ್ಲವೆಂದು ಮಾತ್ರ ಹೇಳಿದೆಯಲ್ಲದೆ, ೨೭ ಅಂಶವಾದ ಕೂಡಲೆ ಅದು ಕಡಮೆಯಾಗುತ್ತದೆಂದು ಹೇಳಿಲ್ಲ, ಹಾಗೆ ಲೆಕ್ಕವೂ ಇಲ್ಲ. ಅಯನಾಂಶದ ವಿಷಯಕ್ಕೆ ಧನ-ಋಣವೆಂದು ಉಪಯೋಗಿಸಿದುದರ ಕಾರಣವಿಷ್ಟೆ. ರೇವತೀ ತಾರೆಯಲ್ಲಿ ಸಂಪಾತಬಿಂದುವಿದ್ದ ವರುಷದಿಂದ ಮುಂದಿನ ಲೆಕ್ಕವನ್ನು ಮಾಡುವುದಿದ್ದಲ್ಲಿ, ಅಯನಾಂಶವು ಧನವೆಂದು ತಿಳಿಯತಕ್ಕದ್ದು. ಹಿಂದಿನ ವರುಷದ ಲೆಕ್ಕದಲ್ಲಿ ಋಣವೆಂದು ತಿಳಿಯತಕ್ಕದ್ದು–ಎಂಬ ಯೋಜನೆಯಿದೆ. ಪಂಚಸಿದ್ಧಾಂತಕಾರರು ಅಯನಾಂಶವು ೨೭ ಅಂಶಕ್ಕಿಂತ ಹೆಚ್ಚಿಗೆ ಆಗಬಾರದೆಂದು ಹೇಳಿದ ಮಾತನ್ನು ಲಕ್ಷ್ಯದಲ್ಲಿ ತರಬೇಕು. ಈ ಸಂಗತಿಯನ್ನು ಪಂಚಸಿದ್ಧಾಂತಕಾರರು ತಾವೇ ಕಲ್ಪಿಸಿರಲಾರರು; ಪ್ರಾಚೀನ ಗ್ರಂಥಗಳಿಂದ ಸಂಗ್ರಹಿಸಿರಬೇಕು. ಪೂರ್ವಿಕರು ಸಂಪಾತಚಲನೆಯಿಂದ ಋತುಮಾನದಲ್ಲಾಗುವ ಬದಲಾವಣೆಯನ್ನು ಲಕ್ಷ್ಯದಲ್ಲಿ ತಂದು, ಕೃತ್ತಿಕೆಯನ್ನು ಬಿಟ್ಟು, ಆ ಕಾಲದಲ್ಲಿ ಸಂಪಾತಬಿಂದುವಿದ್ದ ಅಶ್ವಿನೀ ನಕ್ಷತ್ರದ ಸ್ಥಾನವನ್ನು ಲಕ್ಷಿಸಿ, ಅಯನಾಂಶವು ಆ ಅಂತರಕ್ಕಿಂತಲೂ (೨೬ ಅಂಶ ೪೦ ಕಲೆ ಸುಮಾರಾಗಿ ೨೭ ಅಂಶ) ಹೆಚ್ಚಾಗಬಾರದೆಂದು ನಿಯಮ ಮಾಡಿರಬಹುದು, ಪಂಚಸಿದ್ಧಾಂತಕಾರರು ಅದನ್ನೇ ಉದಹರಿಸಿರಬಹುದು–ಎಂದು ಹೇಳಲು ಬರುವಂತಿದೆ. ಇನ್ನೊಂದು ಸಂಗತಿಯೆಂದರೆ ನಕ್ಷತ್ರದ ಅಂಶಾತ್ಮಕ ವಿಭಾಗ ಮಾಡಿದಾಗ, ಒಂದೊಂದು ನಕ್ಷತ್ರವು (೩೬೦÷೨೭) ೧೩.೩ ಅಂಶದ್ದಾಗುತ್ತದೆ. ಆಗಾಗ ಸಂಪಾತಬಿಂದುವು ಎರಡು ನಕ್ಷತ್ರಗಳಷ್ಟು ಚಲಿಸಿದ್ದಿತು. ಇದಕ್ಕಿಂತ ಹೆಚ್ಚಿಗೆ ಚಲಿಸಿದರೆ ಋತುಮಾನದ ಬದಲಾವಣೆಯು ತೀವ್ರವಾಗಿ ಭಾಸವಾಗುವುದರಿಂದ (ಚಾಂದ್ರಮಾಸಕ್ಕಿಂತ ಹೆಚ್ಚಿಗೆ ಆಗುವುದರಿಂದ) ಸಂಪಾತಚಲನೆಯು ಎರಡು ನಕ್ಷತ್ರಕ್ಕಿಂತ ಹೆಚ್ಚಿಗೆ ಆದರೆ, ತಾವು ಮಾಡಿಕೊಂಡಂತೆ ನಕ್ಷತ್ರಚಕ್ರವನ್ನೇ ಬದಲಿಸಿಕೊಳ್ಳಬೇಕೆಂಬ ಉದ್ದೇಶದಿಂದ, ಅಯನಾಂಶವು ೨೭ ಅಂಶಕ್ಕಿಂತ ಹೆಚ್ಚಿಗೆ ಆಗಬಾರದೆಂದು ಹೇಳಿರಬೇಕು, ಇದರಿಂದ ಒಂದು ಮಾತು ಸ್ಪಷ್ಟವಿದೆ: ಅಯನಾಂಶವು ಹೆಚ್ಚಾಗಿ ಋತುಮಾನವು ಬದಲಿಸುವ ಸ್ಥಿತಿಯುಂಟಾದಾಗ ನಮ್ಮ ಪೂರ್ವದ ಜ್ಯೋತಿಷಿಗಳು ನಕ್ಷತ್ರ-ಚಕ್ರವನ್ನು ಬದಲಿಸಿಕೊಂಡರು. ನಿರಯನ ಪದ್ಧತಿಯಿಂದ ಬರುವ ತೊಡಕುಗಳನ್ನು ನಿವಾರಿಸಿಕೊಳ್ಳಬೇಕಿದ್ದರೆ ನಾವೂ ಅವರ ಮಾರ್ಗ-ವನ್ನು ಅನುಸರಿಸಬೇಕು, ನಕ್ಷತ್ರಚಕ್ರವನ್ನು ಬದಲಿಸಿಕೊಳ್ಳಬೇಕು.

ಭಾರತೀಯ ಜ್ಯೋತಿಷದ ಬೆಳವಣಿಗೆಯಲ್ಲಿ ಒಂದು ಮಾತು ಸ್ಪಷ್ಟವಾಗಿ ಕಂಡುಬರುತ್ತದೆ; ಮೊದಲಿಗೆ ತಿಳಿದು ಬಂದ ವಿಷಯಕ್ಕೂ ಹಿಂದಿನಿಂದ ತಿಳಿದು ಬಂದ ವಿಷಯಕ್ಕೂ ಇರುವ ಸಂಬಂಧವನ್ನು ಕಂಡು ಹಿಡಿದು ಅವುಗಳನ್ನು ಹೆಣೆದಿದ್ದಾರೆ; ಚಾಂದ್ರಮಾನ, ಸೌರಮಾನಗಳನ್ನು ಅಧಿಕಮಾಸದಿಂದ ಹೊಂದಿಕೆ ಮಾಡಿದ್ದಾರೆ; ನಮ್ಮದೇ ಆದ ನಕ್ಷತ್ರಚಕ್ರವನ್ನು ಪರಕೀಯರಿಂದ ಬಂದ ಮೇಷಾದಿ ರಾಶಿಗಳ ಜೊತೆಗೆ ಬಿಗಿದಿದ್ದಾರೆ. ಇದೇ ಕ್ರಮದಲ್ಲಿ ಸಾಯನ–ನಿರಯಗಳನ್ನು ಜೋಡಿಸಿಕೊಂಡಿದ್ದಾರೆಂದು ಹೇಳಬಹುದು. ನಮ್ಮ ಪಂಚಾಂಗವು ಸಾಯನವೂ ಅಹುದು, ನಿರಯನವೂ ಅಹುದು. ಈ ಮೊದಲೇ ಅವು-ಗಳನ್ನು ಒಂದಕ್ಕೊಂದು ಸಂಬಂಧಿಸಿದ್ದಾರೆ. ಒಮ್ಮೆ ಹೊಂದಿಸಿದ ಸಂಬಂಧವು ದೀರ್ಘಕಾಲದ ವರೆಗೆ ಎಂದರೆ ಸುಮಾರಾಗಿ ೨ ಸಾವಿರ ವರುಷಗಳ ವರೆಗೆ ಉಳಿಯುವುದರಿಂದ, ನಡುವಿನ ಕಾಲದ ಕರಣ

ಶ್ರೀರಂಗರ

ಸ್ವಲ್ಪದ್ರಲ್ಲಿ ಸ್ವಾರಸ್ಯ

(ವಿನೋದ ಪ್ರಚುರ ಹರಟೆಗಳು)

ಪ್ರಕಟವಾಗಿದೆ! ಬೇಗನೆ ನಿಮ್ಮ ಪ್ರತಿ ತರಿಸಿಕೊಳ್ಳಿರಿ!
ಹರಟೆಗಳ ತಂತ್ರವನ್ನು ಕುರಿತು ಸ್ವಾರಸ್ಯವಾಗಿ
ಬರೆದ ಮುನ್ನುಡಿಯನ್ನೊಳಗೊಂಡಿದೆ.

ಬೆಲೆ ೧–೦–೦

ಮಾರಾಟದ ಅಧಿಕಾರಿಗಳು :
ಮನೋಹರ ಗ್ರಂಥಭಾಂಡಾರ, ಧಾರವಾಡ

ಶೀಲಧಾ

ಎಂಟೀಮಲೇರಿಯಾ ವನಸ್ಪತಿ ಪಿಲ್ಸ್

ಎಲ್ಲ ತರದ ಜ್ವರ, ಜ್ವರಗಡ್ಡೆ, ತಜ್ಜನ್ಯ ಅಶಕ್ತತೆಯ ಮೇಲೆ ರಾಮಬಾಣ! ಲಿವರ್ ಹೊಟ್ಟೆನೋವು, ಮಲಬದ್ಧತೆ ಸುಧಾರಿಸಿ ಶಕ್ತಿ ಬೆಳೆಯಿಸುತ್ತದೆ! ಕ್ವಿನ್ಯಾನ್ ಬದಲು ವೈದ್ಯ-ಡಾಕ್ಟರರು ದವಾಖಾನೆಗಳಲ್ಲಿ ವಾಪರಿಸುವರು. ೧೦೦೦ ಗುಳಿಗೆಗಳಿಗೆ ರೂ. ೧೫; ೯೦ಕ್ಕೆ ೧-೧೨-೦. ಔಷಧದಲ್ಲಿ ಗುಣವಿಲ್ಲವೆಂದು ಸಿದ್ಧ ಮಾಡಿದವರಿಗೆ ೧೦೦೦ ರೂಪಾಯಿ ಬಹುಮಾನ. ಪ್ರತಿ ಊರಲ್ಲಿಯೂ ಮಾರುವ ಏಜಂಟರು ಬೇಕು.

ಶೀಲಧಾ ಕೆಮಿಕಲ್ ಕಂಪನಿ, ಸಿರಸಿ, ಉ. ಕ

ಸೋಲ್ ಏಜೆಂಟರು:—

ಎಸ್. ಎಲ್. (ಅಪ್ಪುರಾವ) ಧಾಕೆಪ್ಪಾ

ಬಡವರ ಔಷಧಿ ಸರ್ವಿಸ್, ಸಿರಸಿ, ಉ. ಕಾನಡಾ

ಗ್ರಂಥಕಾರರಿಗೆ ಆ ವಿಚಾರ ಮಾಡುವ ಆವಶ್ಯಕತೆ ಉಳಿಯಲಿಲ್ಲ; ಇಷ್ಟರಿಂದ ನಾವು ಅದನ್ನು ಅಲಕ್ಷ್ಯಿಸಿ ಸಾಯನ-ನಿರಯನವೆಂದು ವಾದ ಎಬ್ಬಿಸುವುದು ಸರಿಯಲ್ಲ. ಅವೆರಡರ ಸಾಮರಸ್ಯವನ್ನು ಸಾಧಿಸಿಕೊಳ್ಳಬೇಕು.

ಸಾಯನ-ನಿರಯನ ಸಾಮರಸ್ಯವನ್ನು ಈಗ ನಾವು ಹೇಗೆ ಸಾಧಿಸಿಕೊಳ್ಳಬಹುದೆಂಬುದರ ವಿಚಾರ ಮಾಡಬೇಕು. ಮೊದಲಿನವು ಕೃತ್ತಿಕೆಯನ್ನು ಬಿಟ್ಟು ಅಶ್ವಿನಿಯನ್ನು ಆರಂಭಸ್ಥಾನದಲ್ಲಿ ತಂದಾಗ ನಿರಯನ ಪದ್ಧತಿಯನ್ನು ಕಾಯ್ದುಕೊಳ್ಳುವುದಕ್ಕಾಗಿ ಒಂದು ನಕ್ಷತ್ರ ಯೋಗತಾರೆಯನ್ನು—ರೇವತೀ ಯೋಗತಾರೆಯನ್ನು—ಹಿಡಿದಿದ್ದಾರೆ. ಕೃತ್ತಿಕಾದಿ ಗಣನೆಯಿದ್ದಾಗ ಕೃತ್ತಿಕಾಯೋಗತಾರೆಯೆ ಆರಂಭಸ್ಥಾನದಲ್ಲಿ ಇದ್ದಿತು. ಇದಕ್ಕನುಸರಿಸಿ ನಕ್ಷತ್ರಚಕ್ರದ ಬದಲಾವಣೆ ಮಾಡಿಕೊಳ್ಳುವಾಗ ನಾವು ಪೂರ್ವಾಭಾದ್ರಪದ ಯೋಗತಾರೆಯನ್ನು ಪ್ರಾರಂಭಸ್ಥಾನದಲ್ಲಿ ಹಿಡಿದು, ಉತ್ತರಾಭಾದ್ರಪದಾದಿಯಾಗಿ ನಕ್ಷತ್ರ-ಚಕ್ರವನ್ನು ಬದಲಿಸಿಕೊಳ್ಳಬಹುದಾಗಿದೆ. ಪೂರ್ವಾಭಾದ್ರಪದ ಯೋಗತಾರೆಯ ವಿಷಯದಲ್ಲಿ ಭಿನ್ನಾಭಿಪ್ರಾಯಗಳೂ ಇರುವುದಿಲ್ಲ. 'ಮಾರ್ಕಾಟ್' ಎಂಬುದು ಪೂ. ಭಾ. ನಕ್ಷತ್ರದ ಯೋಗತಾರೆಯೆಂಬುದು ಸರ್ವಸಮ್ಮತ. ಈ ಮಾತು ಶ್ರೀ. ದೀಕ್ಷಿತರ ಭಾರತೀಯ ಜ್ಯೋತಿಃಶಾಸ್ತ್ರ ಗ್ರಂಥದ ೪೫೯ನೆಯ ಪುಟದ ಕೋಷ್ಟಕದಲ್ಲಿ ಉಕ್ತವಾಗಿದೆ. ಪೂರ್ವಾಭಾದ್ರಪದ ನಕ್ಷತ್ರದ ಶರಾಂಭಿಮುಖ ಭೋಗವು ರೈವತಪಕ್ಷದಂತೆ—ಎಂದರೆ ಝೀಟಾಪಿಸಿಯಮ್—ರೇವತೀ ಯೋಗತಾರೆಯು ಎಂದು ತಿಳಿಯುವ ಟಿಳಕ ಪಂಚಾಂಗದ ಪಕ್ಷದಂತೆ ೨೨ ಅಂಶ ೪೦ ಕಲೆ ಇರುತ್ತದೆ. ಚಿತ್ರಾಪಕ್ಷದಂತೆ ಎಂದರೆ, ಚಿತ್ರಾ ನಕ್ಷತ್ರದಿಂದ ೧೮೦ ಅಂಶದ ಮೇಲೆ ಅಶ್ವಿನಿಯು ಆರಂಭವಾಗುತ್ತದೆಂದು ತಿಳಿಯುವ ಕೇತಕೀ ಪಂಚಾಂಗದಂತೆ ೨೦ ಅಂಶ ೪೨ ಕಲೆ ಇರುತ್ತದೆ. ಇವೆರಡೂ ಶುದ್ಧ ಪಂಚಾಂಗಗಳ ಪ್ರಾರಂಭಸ್ಥಾನದಲ್ಲಿ ಈಗ ಈ ಬಗೆಯಾಗಿ ನಾಲ್ಕು ಅಂಶದ ಅಂತರವಿರುತ್ತದೆ. ಪೂರ್ವಾಭಾದ್ರಪದ ಯೋಗತಾರೆಯನ್ನು ಪ್ರಾರಂಭಸ್ಥಾನದಲ್ಲಿ ಕಲ್ಪಿಸಿದರೆ, ಚಿತ್ರಾಪಕ್ಷದವರಂತೆ ಪ್ರಾರಂಭಸ್ಥಾನವನ್ನು ೩೦ ಅಂಶ ಎಂದರೆ ಸರಿಯಾಗಿ ಒಂದು ರಾಶಿಯಷ್ಟು ಹಿಂದಕ್ಕೆ ಒಯ್ದಂತಾಗುವುದು ಎಂದರೆ ಈಗ ಮೇಷಾರಂಭವಾಗುವಲ್ಲಿಯೇ ಆಗುತ್ತದೆ. ಟಿಳಕ ಪಂಚಾಂಗದಂತೆ ೨೬ ಅಂಶ ಹಿಂದೆ ಒಯ್ದಂತಾಗುತ್ತದೆ. ಎಂದರೆ ನಮ್ಮ ಪೂರ್ವದ ಪಂಚಸಿದ್ಧಾಂತಗಳ ಪ್ರಕಾರ, ಅಯನಾಂಶವು ಹೆಚ್ಚಾಗಬಾರದೆಂಬುವನ್ನು ಸಾಧಿಸಿದಂತಾಗುತ್ತದೆ. ಇದೂ ಅಲ್ಲದೆ ನಿರಯನ ಆರಂಭಬಿಂದುವು ನಕ್ಷತ್ರ ಯೋಗತಾರೆಯಿರಬೇಕೆಂದೂ ಹಾಗೆ ಈಗ ಝೀಟಾಪಿಸಿಯಮ್ ಇರುವುದೆಂದೂ ಹೇಳುತ್ತಿರುವ ಟಿಳಕ ಪಂಚಾಂಗದ ಕ್ರಮವನ್ನು ಅನುಸರಿಸಿದಂತಾಗುತ್ತದೆ. ಸ್ವಲ್ಪ ವಿಚಾರ ಮಾಡಿದರೆ ನಮ್ಮ ಪರಂಪರೆಯನ್ನು ಅನುಸರಿಸಿ ಎರಡೂ ಪಕ್ಷದವರು ಈ ಮಾತಿಗೆ ಒಪ್ಪುವಂತಿದೆ. ಎರಡೂ ಪಕ್ಷದವರು ಈ ಮಾತಿಗೆ ಒಪ್ಪಿದರೆ, ನಿರಯನವಾದದಲ್ಲಿಯ ಪ್ರಾರಂಭದ ಸ್ಥಳದ ತಂಟೆಯು ಮುಗಿಯುವಂತಿದೆ. ಅಲ್ಲದೆ ನಮ್ಮ ಪೂರ್ವಿಕರು ಹಾಕಿಕೊಟ್ಟ ಸಾಯನ-ನಿರಯನ ಸಾಮರಸ್ಯವೂ ಸಾಧಿಸುವಂತಿದೆ.

ನಕ್ಷತ್ರಚಕ್ರವನ್ನು ಉತ್ತರಾಭಾದ್ರಪದಾದಿಯಾಗಿ ಮಾಡಿಕೊಂಡರೆ ಉತ್ತರಾಭಾದ್ರಪದ, ರೇವತಿ, ಅಶ್ವಿನಿಯ ಪ್ರಥಮಚರಣಗಳಿಂದ ಮೀನರಾಶಿಯಾಗುತ್ತದೆ. ಅಶ್ವಿನಿಯ ಮೂರು ಚರಣಗಳು, ಭರಣಿ, ಕೃತ್ತಿಕೆಯ ಎರಡು ಚರಣಗಳಿಂದ ಮೇಷರಾಶಿಯಾಗುತ್ತದೆ. ಆಕಾಶ ರಾಶಿಚಕ್ರದಲ್ಲಿ ಬದಲಾವಣೆಯೂ ಆಗುವುದಿಲ್ಲ. ನಾವು ಈಗ ಮೇಷರಾಶಿಯಲ್ಲಿ ಸೂರ್ಯನು ಪ್ರವೇಶಿಸಿದ ತಿಂಗಳು ಚೈತ್ರಮಾಸವೆಂದು ಎಣಿಸುತ್ತೇವೆ. ಹೊಸಯೋಜನೆಯನ್ನು ಜಾರಿಯಲ್ಲಿ ತರುವಾಗ, ಫಾಲ್ಗುನಮಾಸವನ್ನು ಕ್ಷಯಮಾಸವೆಂದು ತಿಳಿಯಬೇಕು. ಮೀನ ಚೈತ್ರವನ್ನು ಪ್ರಾರಂಭಿಸಬೇಕು. ಇದು ಕ್ರಮಪ್ರಾಪ್ತವಿದೆ. ಹೀಗೆ ಮಾಡಿದರೆ ಲೋಕಮಾನ್ಯರೂ ಶ್ರೀ ಕೇತಕರರೂ ಹೇಳುವಂತೆ ಚೈತ್ರದ ಹಬ್ಬ-ಹುಣ್ಣಿವೆಗಳನ್ನು ಫಾಲ್ಗುಣದಲ್ಲಿ ಮೊದಲಾಗಿ ಬದಲಾವಣೆ ಮಾಡಿಕೊಳ್ಳಬೇಕಾಗಿಲ್ಲ. ಅಧಿಕಮಾಸ ಕ್ಷಯಮಾಸಗಳಿಂದ ಚಾಂದ್ರಮಾನ ಸೌರಮಾನಗಳನ್ನು ಸಂಬಂಧಿಸಿದಂತೆ ಸಾಯನ-ನಿರಯನಗಳನ್ನು ಸಂಬಂಧಿಸಿದಂತೆ ಆಗುತ್ತದೆ. ಹೀಗೆ ಸಾಮರಸ್ಯ-ವನ್ನು ಸಾಧಿಸಿಕೊಳ್ಳಬೇಕೆಂದು ನಮ್ಮ ಪೂರ್ವಿಕರ ಅಭಿಪ್ರಾಯವಿದ್ದಿತೆಂಬುದು ಪ್ರಾಚೀನ ಜ್ಯೋತಿಷ ಗ್ರಂಥಗಳ ಸೂಕ್ಷ್ಮಪರಿಶೀಲನೆಯಿಂದ ಸ್ಪಷ್ಟವಾಗುತ್ತದೆ. ಈ ಬದಲಾವಣೆಯನ್ನು ಮಾಡಿಕೊಳ್ಳುವ ಕಾಲವು ಇನ್ನು ಮುಂದೆ ಇದೆ. ಯಾವ ವರುಷ ಪೂರ್ವಭಾದ್ರಪದ ಯೋಗ-ತಾರೆಯಲ್ಲಿ ಸಂಪಾತಬಿಂದುವು ಪ್ರವೇಶಿಸುವುದೋ ಆ ವರುಷದಿಂದ ಇದು ಬರಬೇಕಾದುದು. ಅದಿನ್ನೂ ನಾನೂರು ವರುಷಗಳ ಮೇಲಿನ ಸಂಗತಿ. ಆದರೂ ಈ ಮಾತಿಗೆ ನಮ್ಮ ಜ್ಯೋತಿಷಗಳು ಈಗ ಒಪ್ಪಿದರೆ ಸಾಕು. ಈ ವಿಷಯದಲ್ಲಿ ಸಾಧಕ-ಬಾಧಕ ಚರ್ಚೆಗಳು ನಡೆಯಬೇಕೆಂದು ಈ ಲೇಖನ ಬರೆದುದಾಗಿದೆ.

—

ಚೆಲುವು-ಒಲವುಗಳ ಸಂಬಂಧದ ನಿರೂಪಣೆ

(ಪಕ್ಷದ್ವಯ ಸಮನ್ವಯ)

ಶ್ರೀ. ಬಿ. ಎಚ್. ಶ್ರೀಧರ ಎಂ. ಎ. ಭಟಕಳ

'ಜಯಂತಿ'ಯ 'ಡಿಸೆಂಬರ್' ಸಂಚಿಕೆಯಲ್ಲಿ, ಶ್ರೀ ಜಿ. ವೆಂಕಟರಾಯರ "ಚೆಲುವಿನಿಂದಲೆ ಒಲವು ಪೊಳೆಯುವುದು" ಎಂಬ ಲೇಖವನ್ನು ಓದಿದ ಬಳಿಕ, ಆ ವಿಚಾರಸರಣಿಯಲ್ಲಿ ಅಪೂರ್ಣತೆಯಿದೆಯೆಂದು ತೋರಿತು. ಅದು ಹೀಗೆ ನಿವಾರಿಸಲ್ಪಟ್ಟಿದೆ:—

ಅವರ ಇಡಿಯ ಲೇಖದ ಸಾರಾಂಶವೆಂದರೆ: ಚೆಲುವಿದ್ದೆಡೆಗೆ ಮನ ಒಲಿಯುವುದು ಅದರಿಂದ ಚೆಲುವುಳ್ಳ ವಸ್ತುವಿನ ಬಗ್ಗೆ ಅದು ಒಲವನ್ನು ತಾಳುವುದು-ಎಂದು. ಇದೇನೋ ಸಹಜ; ಆದರೆ ಇದರಿಂದ 'ಒಲವಿನಲ್ಲಿ ಚೆಲುವಿಲ್ಲ' ಎಂಬ ಅವರ ತೀರ್ಪು ಸಂಭವಿಸುವುದಿಲ್ಲ!

ಈ ಚೆಲುವೊಲವುಗಳ ಚರ್ಚೆಯ ಮೊದಲು ಆ ತತ್ತ್ವಗಳ ಲಕ್ಷಣವನ್ನು ತಿಳಿದುಕೊಳ್ಳುವುದು ಆಗತ್ಯ. ಚೆಲುವೊಲವೆರಡೂ ದರ್ಶನಗೋಚರವಲ್ಲದಿರಬಹುದೆಂಬುದಕ್ಕೆ ರಾಯರ ಒಪ್ಪಿಗೆಯಿದೆ. ಇವೆರಡೂ ಮನುಷ್ಯನಿಂದ ತಿಳಿಯಲ್ಪಡುತ್ತವೆಂಬುದು ಅನುಭವಸಿದ್ಧ. ತ್ಯಾಗ ಮೊದಲಾದ ಸಚ್ಚರಿತ್ರಗಳು ಚೆಲುವಿನ ಪ್ರಕಾರವಿದ್ದು, ಆ ಕಡೆಗೆ ತಮ್ಮ ಒಲವನ್ನು ಹರಿಯಬಿಟ್ಟ ರಾಯರು, ತಮ್ಮ ಒಲವಿನ ಹರಿಯುವಿಕೆಯಲ್ಲಿಯೇ ಒಂದು ಚೆಲುವಿದೆಯೆಂಬುದನ್ನು ಮರೆತು ಬಿಡಬಹುದೇ? ನಿಜವಾಗಿಯೂ ಚೆಲುವನ್ನು ಮೆಚ್ಚಿ ಅದಕ್ಕೆ ಒಲಿದ ಮನವೂ ಚೆಲುವಾದುದೇ ಅಲ್ಲವೆ! ಅಂತಹ ಮನವುಳ್ಳ ವ್ಯಕ್ತಿಗಳ ಚೆಲುವಿಂದ ಅವರ ಬಗ್ಗೆ ಇತರರು ಪ್ರೀತ್ಯಾದರಗಳನ್ನು ತೋರುವುದು ಸಹಜ. ಇದೇ ರಸಿಕತೆಯ ಮರ್ಮ.

ಹೀಗಿರುವಲ್ಲಿ ಚೆಲುವು ಇಂದ್ರಿಯಗ್ರಾಹ್ಯವೆಂಬುದು ಸ್ಪಷ್ಟ. ಇಂದ್ರಿಯಮುಖೇನ ಮನವು ಅದನ್ನು ಗ್ರಹಿಸಿದೊಡನೆ ಅಲ್ಲಿ ಅದರ ಬಗ್ಗೆ ಒಲವು ಉಂಟಾಗುತ್ತದೆ. ಆ ಒಲವಿನ ಪ್ರಕಟನವೂ ಚೆಲುವಾದುದು; ಅದೂ, ಚೆಲುವುಳ್ಳ ವ್ಯಕ್ತಿ ಇಂದ್ರಿಯಾದಿ ಸಾಧನವುಳ್ಳದ್ದಾದರೆ, ಅದಕ್ಕೆ ಗ್ರಾಹ್ಯ; ಸುಂದರಿಯೂ ಸುಂದರನ ಒಲವಿನ ಪ್ರಕಾಶನ (ಅಥವಾ ಚೆಲುವನ್ನು) ಗ್ರಹಿಸಬಲ್ಲಳು! ಇದರಿಂದ ತಿಳಿಯುವುದೇನೆಂದರೆ ಒಲವಿನ ಪ್ರಕಾಶನ ಇಲ್ಲವೆ ಪ್ರಕಟನವೆಂದರೆ ಚೆಲುವು. 'Beauty is expression—ಸೌಂದರ್ಯವೆಂದರೆ ಪ್ರಕಾಶನ'. ಒಲವೆಂಬ ಆಂತರಗುಣ (ಅಥವಾ ಧರ್ಮ)ದ ವ್ಯಕ್ತಸ್ವರೂಪಕ್ಕೆ ಚೆಲುವೆಂದು ಅರ್ಥ ಮಾಡಬಹುದು ಈ ಕಾರಣದಿಂದ 'ಒಲವಿನಲ್ಲಿ ಚೆಲುವಿಲ್ಲ' ಎಂಬುದು ತಪ್ಪು. ಒಲವಿನ ಪ್ರಕಟಸ್ವರೂಪ ಚೆಲುವು, ಚೆಲುವಿನ ಅವ್ಯಕ್ತಭಾವವೇ ಒಲವು. ಹೀಗೆ ವಸ್ತುಸ್ಥಿತಿಯಿರುವಾಗ, ಈ ಎರಡು ತತ್ತ್ವಗಳ ಸಂಬಂಧವನ್ನು ಅರಿಯದೆ ರಾಯರು ಮೇಲೆ ಹೇಳಿದಂತೆ ತೀರ್ಪುಕೊಟ್ಟುದು ಅಸಮಂಜಸ.

ಹೀಗೆ ಒಲವು ಚೆಲುವುಗಳಲ್ಲಿ ಅವಿನಾಭಾವ (Invariable concomitance) ಸಂಬಂಧವಿದೆ. ದೃಗ್ಗೋಚರವಾಗುವ ಚೆಲುವು ಕೆಲವು ವೇಳೆ ಆಭಾಸಮಾತ್ರವಾಗಿರಬಹುದು. ಅಂತಹ ಚೆಲುವು ಕೃತಕ; ಅದು ಪ್ರೇಮಪ್ರಕಾಶಕವಲ್ಲ, ವಂಚನೆ. 'ಸೌಂದರ್ಯವೆಂಬುದು ಕಣ್ಣಿನ ತುತ್ತಲ್ಲ, ಕಣ್ಣಿಗು ಕಣ್ಣಾಗಿ ಒಳಗಿಹುದು' ಎಂಬ ವರಕವಿಯ ಮಾತು ಇದಕ್ಕೆ ಪೋಷಕ. ಸರ್ವಸೌಂದರ್ಯದಾಗರವು ಒಲವು; ಆದರಿಂದ ಚೆಲುವು ಕೇವಲ ಸ್ವತಂತ್ರವಾದ ತತ್ತ್ವವಲ್ಲ; ಜಡಪ್ರಕೃತಿಯ ಲೀಲಾವಿಲಾಸವಲ್ಲ. ಒಂದು ಜಡಪ್ರತಿಮೆಯ ಚೆಲುವು ಕಲೆಗಾರನ ಹೃದಯ ಸೌಂದರ್ಯವನ್ನು ಹೊರಪಡಿಸುವ ಸಾಧನಮಾತ್ರ. ಸುಂದರಿಯು ಸುಂದರನ ಮುಖಸೌಂದರ್ಯಕ್ಕೆ ಮಾತ್ರ ಮೆಚ್ಚಿ ಮರುಳಾದರೆ ಅವಳು ಮೋಸಹೋದಂತೆಯೇ ಸರಿ. ಅದು ಪ್ರಾಮಾಣಿಕವಿದ್ದು ಸುಂದರನ ಆತ್ಮಧರ್ಮಪ್ರಕಾಶಕವಾಗಿದ್ದಾಗ ಮಾತ್ರ ಅದು ಸಾರ್ಥಕವಾಯ್ತು; ಆದರಿಂದ ಕೇವಲದೃಕ್ಪರೀಕ್ಷೆಯಿಂದ ಸೌಂದರ್ಯಾ-ಸೌಂದರ್ಯಭೇದ ಎಲ್ಲೆಡೆ ಸಾಧ್ಯವಿಲ್ಲ ಪ್ರೀತಿಪ್ರಕಾಶನದ ಪ್ರಾಮಾಣಿಕತೆ–ಅಪ್ರಾಮಾಣಿಕತೆ ಇವುಗಳು (ಕಾಲಿದಾಸನ) "ಸಂತ" ಇಲ್ಲವೆ ರಸಿಕರಿಗೆ ತಾನಾಗಿ ಗೊತ್ತಾಗುವುದು. ನಾಲಗೆಯ ಕಲೆಯಿಂದ ರುಚಿಭೇದವನ್ನು ಥಟ್ಟನೆ ಹಿಡಿವಂತೆ, ರಸಿಕನು ಹೃದಯಸಂಸ್ಕಾರದಿಂದ ನಿಜ-ಸೌಂದರ್ಯವನ್ನು ನಿರಾಯಾಸವಾಗಿ ಗುರುತಿಸುವನು.

ಮಹಾತ್ಮರ ತ್ಯಾಗಾದಿ ಸತ್ಕರ್ಮಗಳು 'ಅವರ ಪ್ರೀತಮನೋ-ಧರ್ಮವನ್ನು ಪ್ರಕಾಶಪಡಿಸುವುದರಿಂದಲೇ ಅವು ಸುಂದರವಾಗಿ ತೋರುವುವು. ಒಬ್ಬ ವಿರಕ್ತನು ಧನಕನಕಾದಿಗಳನ್ನು ಮುಕ್ತಿಗಾಗಿ ತ್ಯಾಗ ಮಾಡಿದರೆ ಆಗುವುದಕ್ಕಿಂತ, ಮಹಾತ್ಮರು ದೇಶಕ್ಕಾಗಿ ಮಾಡುವ ತ್ಯಾಗದಿಂದ ನಾವು ಹೆಚ್ಚು ಪ್ರೀತರಾಗುತ್ತೇವೆ. ಹೀಗೆ ಪ್ರೀತಿಯ ಪ್ರಕಾರಗಳಲ್ಲಿ ಉತ್ತಮಾಧಮಭೇದವಿರುವುದರಿಂದ, ಸೌಂದರ್ಯದಲ್ಲೂ ಪ್ರಕಾರಗಳಿವೆ. ಹಾಗಲ್ಲದಿದ್ದರೆ ಲೋಕದ ಸೌಂದರ್ಯ ವಿಷಯಕ ತಾರತಮ್ಯೋಕ್ತಿಗಳಿಗೆ ಬೆಲೆಯಿಲ್ಲವಾದೀತು! ಸತ್ಕರ್ಮಗಳೆಲ್ಲ ಪ್ರೀತಿ ಪ್ರಕಾರಗಳ ವಿವಿಧ ಪ್ರಕಟನಗಳು; ಅವೇ ಸೌಂದರ್ಯಪ್ರಕಾರಗಳು!

ಮೇಲೆ ಹೇಳಿದ ಕಾರಣಗಳಿಂದ ಪ್ರೀತಿಯು ಜೀವನದ ಜ್ಯೋತಿ. ಆ ಜ್ಯೋತಿಯ ಪ್ರಕಾಶನೇ ಚೆಲುವು. ಪ್ರೀತಿಯು ಒಂದು 'ಭಾವ'ವಾದರೆ, ಅದರ ಪ್ರಕಟನವೆನಿಸುವ ಚೆಲುವು ಅದರ ಇಂದ್ರಿಯಗೋಚರ ರೂಪವೆಂದು ಹೇಳಬಹುದು. ಆದುದರಿಂದ ಅವು ಒಂದನ್ನೊಂದು ಬಿಟ್ಟಿಲ್ಲ. ಇಷ್ಟನ್ನು ತಿಳಿದುಕೊಂಡರೆ ಶ್ರೀ ವೆಂಕಟರಾಯರ ಲೇಖನದ ಅಪೂರ್ಣತೆಯನ್ನು ನಿವಾರಿಸಿದಂತಾಗುತ್ತದೆ.

ಕಂತಪಲಿ ★

(ಒಂದು ಮರಿಗತೆ)

ಶ್ರೀ. ವ್ಹಿ. ಜಿ. ಭಟ್ಟ ಕಡತೋಕಾ

ಈ ಕತೆಯಲ್ಲಿ ಬಂದಿರುವ ದೇಶಿ ಶಬ್ದಗಳ ಅರ್ಥ

ಅರೆ = ಬಂಡೆಗಲ್ಲು; ನೆಲಗುಂದ = ತಳಹದಿ; ದುಂಡಗೆ = ಬತ್ತಲೆ; ಹಳಗು = ಬೆವರು; ಮಳ್ಳು = ಹುಚ್ಚು; ತಾಪಿ = ಕರಣಿ; ಕೊಪ್ಪ = ಚಿಕ್ಕ ಹಳ್ಳಿ; ಆಂಡೆ = ಬಿದಿರ ಕೊಳವಿ; ಪ್ರಾಯ = ಸುಗ್ಗಿ; ಹಾಯಿ = ಹಡಗಿನ ಪಟ; ಕಂತ = ಆಳ, ತಗ್ಗು; ಹೊಂತ = ಹಾದಿ; ಬೇಣ = ಹುಲ್ಲುಗಾವಲು; ಬಿರೀನ್-ಬಿರೀನೆ = ಬೇಗನೆ; ಚೂಳಿ = ಬಿದಿರ ಬುಟ್ಟಿ.

●

ನಮ್ಮೂರ ಸುತ್ತಲೆಲ್ಲೂ 'ಬಂಡಿ ಅರೆ' ಯಷ್ಟು ಬಿಸಿಲು ಕಾಯುವುದಿಲ್ಲ. ಬೆಳಗಿನ ಹತ್ತು–ಸಂಜೆಯ ನಾಲ್ಕು–ಘಂಟೆಗಳ ನಡುವೆ ಅಲ್ಲಿ ನಡೆಯುವುದೆಂದರೆ ಉರಿಯುವ ಒಲೆಯೇರಿದಂತೆ; ಕೋಟ್ಯಧೀಶನು ಕಾಲವಶಾತ್ ಕಡುಬಡತನದಲ್ಲಿ ಕಾಲೂರಿದಂತೆ. ಅರೆಯ ಓರೆಯಲ್ಲಿ ಕಿರುಜಾಡಿ. ಇಳುಕಲಿಳಿದರೆ ಬರುವುದೇ ನಮ್ಮೂರು.

ವೈಶಾಖದ ನಡುದಿನ. ಗಾಳಿಯೂ ಬಳಲಿ ನೆಳಲಿನಲ್ಲೀಗ ವಿಶ್ರಮಿಸುತ್ತಿತ್ತು. ತಪತಪ ಎನ್ನುವ ಆತಪದಲ್ಲಿ ಕಲ್ಲುಪರೆಯ ಮೇಲೆ ವ್ಯಕ್ತಿಯೊಂದು "ಹ್ಹ! ಹ್ಹ! ಹ್ಹ! ಇಕೋ ಕಲ್ಲು! ಮನೆಕಟ್ಟಿ!.. ಕಟ್ರೋ ಕಟ್ಟಿ! ನಮ್ಮನೆ ನೆಲಗುಂದದ ಕಲ್ಲು!"....ಎಂದು ವಿಕಟಾಸ್ಯದಲ್ಲಿ ಕೂಗುತ್ತಾ ಉಂಡೆಗಲ್ಲುಗಳನ್ನುರುಳಿಸುತ್ತಿದ್ದ. ಉಟ್ಟ ಲಂಗೋಟಿಯೊಂದನ್ನು ಬಿಟ್ಟರೆ ಆ ವ್ಯಕ್ತಿ ದುಂಡಗೆ. ಕೆದರಿದ ಕರಡುಗೂದಲು ಎಂಟೂ ದಿಕ್ಕಿಗೆ ಕೈಬೀಸುತ್ತಿತ್ತು. ಬೆವತ ನೈದೊಗಲು ಎಲುಬನ್ನು ಅಪ್ಪಿತ್ತು ಬಿಗಿಯಾಗಿ. ಹಣೆಯ ಮೇಲೆ ಹಳಗು (ಬೆವರು) ಕಿರುಗಾಲುವೆ ಕೊರೆದಿತ್ತು. ಅವನನ್ನು ನೋಡಿದೊಡನೆಯೆ ವಿನಾಯಕರ "ಹಂದರೋ ಹಂದರ! ಕಂಬನಿಗಳ ಕಂದರ! ಮೈಬೆವರಿನ ಬಂದರ! ನೋಡು ನೀ ವಸುಂಧರಾ!" ಮುಂತಾದ ಉದ್ಗಾರಗಳನ್ನು ಆಕಾಶವೇ ಉದ್ಘೋಷಿಸುವಂತೆನಿಸುತ್ತಿತ್ತು. ಇಷ್ಟರಿಂದಲೇ ಆ ವ್ಯಕ್ತಿಗೆ ಮಳ್ಳು ಹಿಡಿದಿತ್ತೋ, ಅವನು ಕಳ್ಳು ಕುಡಿದಿದ್ದನೋ ಹೇಳಿಕೊಳ್ಳಬಹುದಾಗಿತ್ತು.

ಬೀರನೆಂದವನಿಗೆ ಹೆಸರು. ಬೀರ ಉಪ್ಪಾರ. ಸುಬ್ಬಿ (ಸೊಸೆ), ಕುಪ್ಪ (ಮಗ) ಇವರು ಅವನ ಪಂಚಪ್ರಾಣಗಳಲ್ಲೆರಡು. ಕಲ್ಲು ಕಡೆಯುವ ಮಚ್ಚಿ, ಸುಣ್ಣ–ಮಣ್ಣು ಕಲಿಸುವ ತಾಪಿ, ಅಳತೆಯ ನೂಲು ಇವು ಉಳಿದ ಮೂರು. ಒಕ್ಕಲಿಗರ ಕೊಪ್ಪದ ಕೊನೆಗೆ ಅವನ ಬಿಡಾರ; ಒಂದು 'ದರೆ'ಯ ಬುಡದಲ್ಲಿ ಹುಲ್ಲಿನ ಗುಡಿಸಿಲು.

ಬೀರನು ಕುಪ್ಪನೊಡನೆ ಕಲ್ಲುಕಡೆಯುತ್ತ ಬಿದುರಿನ 'ಆಂಡೆ'ಯಲ್ಲಿ ಬರೇ ಪಾವಲಿಗಳನ್ನು ತುಂಬುತ್ತಿದ್ದ. ಹೊಟ್ಟೆಯನ್ನು ನೀರಿನಿಂದಲಾದರೂ ಸಂತಯಿಸಿ ಮೊಟ್ಟೆ ಕಟ್ಟುತ್ತಿದ್ದ—ಮಗನಿಗಾಗಿ, ಜೀವನ ಜೀವಕ್ಕಾಗಿ. ಕುಪ್ಪನಿಗೆ ಇಪ್ಪತ್ತು ವರುಷವಾಗಲು, ಆಚೆ ಕೇರಿಯ ಸುಬ್ಬಿಯನ್ನು ತಂದು ಮದುವೆ ಮಾಡಿದನು. ಭತ್ತ ಕುಟ್ಟಿ ಅಬ್ಬೆಯೊಡನೆ ಜೀವಿಸುತ್ತಿದ್ದ ಸುಬ್ಬಿ, ಕಲ್ಲು ಕಡೆಯುವ ಕುಪ್ಪನ ಕೈ ಹಿಡಿವಳು. ಅವರ ಮದುವೆಯ ಸಂಗತಿಯನ್ನು ಬರೆದರೆ ಅದೊಂದು 'ಜೀವನ ಸಂಗೀತ'ವಾಗುವುದು.

ಸುಬ್ಬಿ, ಅವಳ ತಾಯಿ, ಬೀರ, ಕುಪ್ಪ—ಎಲ್ಲರೂ ಒಂದೇ ಗುಡಿಸಿಲಲ್ಲಿ,—ಅಂಬಲಿಯ ಕ್ಷೀರಸಾಗರದಲ್ಲಿ, ಹುಲ್ಲಿನ ಇಂದ್ರಾಗಾರದಲ್ಲಿ, ಸಿರಿವಂತರು ಸಹ ಮತ್ಸರಿಸುವ ಮಹಾನಂದದಲ್ಲಿ ನಗುತ್ತಿರಲು, ಸುಬ್ಬಿಯ ಮುದಿ ತಾಯಿ ತೀರಿ, ಆರು ಕಂಬನಿ ಬಿಂದುಗಳನ್ನು ನೆಲ ಹೀರಿತು.

ಕುಪ್ಪಾರನು ಉಪ್ಪಾರಗೆಲಸಕ್ಕೆ ಹೋಗುವುದು; ಮುದಿಬೀರ ಮನೆಕಾಯುವುದು,—ಗುಡಿಸಿಲ ಸುತ್ತಲೂ ತುಳಸೀವನ ಬೆಳಸುವುದು, ದೊಡ್ಡ ಕಟ್ಟಡಗಳನ್ನು ಕಟ್ಟುವ ಸಮಯದಲ್ಲಿ ಕುಪ್ಪನಿಗೆ 'ಅಕಲು' ಹಾಕಿಕೊಡುವುದು; ಸುಬ್ಬಿ ಬ್ರಾಹ್ಮಣರ ಮನೆಗೆ ಹುಲ್ಲು ಕೊಯ್ದು ಹಾಕುವುದು, ಪ್ರಾಯ ಬಂದಾಗ ನೆಟ್ಟಿಗೆ ಕರಡದ ಕಂಬಳಕ್ಕೆ ಮುಂತಾದ ಆಳು-ತಂಡ ಬೇಕಾಗುವ ಕೆಲಸಗಳಿಗೆ ಹೋಗಿ, ಬಂದ ಸಂಬಳದಿಂದ ಉಪ್ಪು–ಮೆಣಸು ತರುವುದು; ಕುಪ್ಪನು ತನ್ನ ಗಳಿಕೆಯನ್ನು ದೇವರ ಭಾಂಡಾರದಂತಿದ್ದ ಬಿದಿರಿನ ಪೊಳ್ಳಿನಲ್ಲಿ ಕೂಡಿಡುವುದು—ಈ ರೀತಿ ಅವರ ಜೀವನವು ಶಾಂತವಾಗಿ ಅಡೆ-ತಡೆಗಳಿಲ್ಲದೆ ಮುರಿಕೆ, ತಿರುಗಣಿ, ಮಹಾಪೂರಗಳೂ ಇಲ್ಲದೆ, ನಿತ್ಯನೀರವವಾಗಿ ನಗೆಯಾಗಿ ಸೊಡೆಯಾಗಿ ಸಾಗಿತ್ತು.

ಸುಬ್ಬಿ ನಾಲ್ಕು ತಿಂಗಳ ಬಸುರಿ. ಕುಪ್ಪನು ಚೊಚ್ಚಲು ಸಂಭ್ರಮದ ಮುನ್ನವಿಮುಸ್ಸು, ದುಡಿದು ಬಂದು ನೀರು ಕುಡಿಯುವಾಗ, ನಾಲಗೆಗೆ ಹನಿಹನಿಯಾಗಿ ಬಿಡುವ ಬೆಲ್ಲಕ್ಕಿಂತ ಹೆಚ್ಚಾಗಿ ಕಾಣಹತ್ತಿದನು. ಬೀರನಿಗಂತೂ "ಸಾಯೂ ಮುಂಚೆ ಮೊಮ್ಮಗ್ನೊಂದ್ ನೋಡ್ತೆ!" ಎಂದು ತುಳಸೀ ಕಟ್ಟೆಬುದುರು ಬೇಡಿ. ಸುಬ್ಬಿಗೆ ಒಂಭತ್ತು ತಿಂಗಳೆಂದು ತುಂಬೀತೆಂದು ದಿನ ಲೆಕ್ಕ ಮಾಡಿದಂತೆಲ್ಲ ತನ್ನ ಮರಣವನ್ನು ದೇವರು ಮುಂದೂಡಿದಂತೆನಿಸುವುದು. ಗಂಡು ಹುಟ್ಟಿದರೆ 'ಶಿವು' ಎಂದೂ, ಹೆಣ್ಣು ಆದರೆ 'ತುಳಸಿ'ಯೆಂದೂ ಹೆಸರಿಡಬೇಕೆಂದು ಮುದುಕ ಮನಸ್ಸಿನಲ್ಲಿಯೇ ಮುಂಜಾತಕ ಬರೆದಿದ್ದ! ಕುಪ್ಪನಂತೂ ಸುಬ್ಬಿಯ ಬಾಳಂತನಕ್ಕೆ, ಶಿಶುವಿನ ಪಾಲನೆಗೆ ಬೇಕಾಗುವ ಸಾಧನ-ಸಾಮಗ್ರಿಯಗಳನ್ನೆಲ್ಲಾ ಒಟ್ಟುಗೂಡಿಸುವುದರಲ್ಲಿ, ಆಂಡೆಯೊಳಗೆ ಪಾವಲೀ ತುಂಬುವುದನ್ನು ಮರೆತಿದ್ದ! ಪ್ರತಿದಿನವೂ ಸಿಗುವ ಸಂಬಳದಿಂದ ಹೊಸ ಹೊಸ ಸಾಮಾನು ತರತೊಡಗಿದ.

ನಮ್ಮೂರ ಹಳೆಯ ಗುಡಿಯನ್ನು ದುರಸ್ತು ಮಾಡಬೇಕೆಂದು ಮೊಕ್ತೇಸರರು ಕುಪ್ಪನಿಗೇ ಹೇಳಿ ಗುತ್ತಿಗೆ ಕೊಟ್ಟರು. 'ಮಗ ಹುಟ್ಟುವುದರೊಳಗೇ ದೇವರ ಕೆಲಸ ಮಾಡಿದಂತಾಗುವುದು, ಎಂದು

ಹಿಗ್ಗಿ ಕುಪ್ಪನು, ಹಗಲು-ರಾತ್ರಿಯೆನ್ನದೆ ಮೂವರು ಸಹಾಯಕರೊಡನೆ ಗುಡಿಯ ಗೋಡೆಯನ್ನು ಕಟ್ಟಹತ್ತಿದನು. "ಚಿರೀನ್ ಮುಗಿಸ್ಬಿಟ್ರೆ ಗುತ್ಗೆ ಹಣ ಸಿಗ್ತದೆ; ಅದ್ರಿಂದ ಎಂಡ್ತಿಗೆ ಸೀರೆ, ರವಿಕೆ,........" ಇತ್ಯಾದಿ ಗುಣಿಸುತ್ತಾ ಕುಪ್ಪನು ಒಂದು ಮಧ್ಯಾಹ್ನ, ದೇವರ ಮುಂದೆ ಬೆವರು ಸುರಿಸುತ್ತಿರಲು, ಹಸಿಗೋಡೆ ಕುಸಿದು ಬಿದ್ದು ಸ್ವರ್ಗ ಸೇರಿದನು. ತನ್ನ ಗುಡಿ ಕಟ್ಟುತ್ತಿರುವ ಉಪ್ಪಾರನ ಮೇಲೆ ದೇವರೆನ್ನುವಾ ಬಂಡೆಗೆ ದಯೆಯೆಲ್ಲಿದೆ? ಕಲ್ಲಮೂರ್ತಿಗೆ ಕಲ್ಲೆದೆ!

ಸುಬ್ಬಿಯು ಗರ್ಭಿಣಿಯಾಗಿಲ್ಲದಿದ್ದರೆ ಎರಡು ಜೀವಗಳು ಕುಪ್ಪನನ್ನು ಹಿಂಬಾಲಿಸುತ್ತಿದ್ದುವೋ ಏನೋ! ಆದರೆ ಗುಡಿಯಲ್ಲಿ ಹುಗಿದು ಬಿದ್ದ ಕುಪ್ಪನ ಮೂರ್ತಿ, ಸುಬ್ಬಿಯ ಗರ್ಭ-ಗುಡಿಯಲ್ಲಿ ಹುಟ್ಟಿಗಿತ್ತು! ಬೀರ-ಸುಬ್ಬಿಯರು ಕಂಬನಿಯಲ್ಲಿ ಮುಳುಗಿದರೂ ಆ ಶಿಶುವಿಗಾಗಿ ಅದು ಹುಟ್ಟಿದನಂತರ ಪೋಷಿಸುವುದಕ್ಕಾಗಿ ತುಸು ಕತ್ತೆತ್ತಿ ಶ್ವಾಸವಾಡಿಸುವವರಾದರು.

× × × ×

ಶಿವು ಬಂದು ಗುಡಿಸಿಲನ್ನು ಬೆಳಗಿಸಿದರೂ ಬೀರ ಸುಬ್ಬಿಯರೆದೆಯಲ್ಲಿ ಕುಪ್ಪನ ನೆಳಲು ಜೋಲುಮೋರೆ ಹಾಕಿ ಕೂತಿರುತ್ತಿತ್ತು. ದುಃಖದ ತೊರೆಯ ಒರತೆ ಕಣ್ಣುಕೊರೆಯುತ್ತಿತ್ತು. ಆನಂದಾಶ್ರುವು ಅದನ್ನು ಮಾಯಿಸುತ್ತಿತ್ತು.

ಶಿವುಗೆಂದು ಬೇಡಿ ತಂದ ಹಾಲಿನಲ್ಲಿ ತುಸುವನ್ನು ಸುಬ್ಬಿಯು ಗುಡಿಸಿಲ ಬಲಗಡೆಯ ನಾಗರ ನೈವೇದ್ಯಕ್ಕಿಡುತ್ತಿದ್ದಳು. ಶಿಶುವಿನ ತಲೆಗೆ ತಂದ ತೈಲದಿಂದ ಹದಿನೈದು ದಿನಕ್ಕೊಮ್ಮೆ ಹಾವಿನ ಹುತ್ತಕ್ಕೆ ಹಣತೆ ಹಚ್ಚುತ್ತಿದ್ದಳು. "ಸುಬ್ರಾಯಾ, ನನ್ನ ಶಿವೂನ್ನ ಸುಖ್ವಾಗ್ಲಿ ಬಾಳ್ಸಪ್ಪಾ!" ಎಂದು ಸುಬ್ಬಿ ಬೇಡುವಾಗ, ಬೀರನು ಹುತ್ತದೆದುರು ಕೈಜೋಡಿಸಿ ಜೋಲುಮೋರೆಗದಲ್ಲಿ ಕಂಬನಿಗರೆಯುತ್ತಿದ್ದನು. ಭಕ್ತಿಯಲ್ಲಿ ಬೆರೆತು ಪ್ರಸಾದ ಸೂಡಿ, ಶಿಶುವನ್ನು ಹುತ್ತದೆದುರು ಹಿಡಿದು "ನೋಡಪ್ಪಾ ನಿನ್ನ ಕೂಸು" ಎಂದು ತೋರಿಸಿ ತರುತ್ತಿದ್ದರು. ಚೌತಿ. ಮಾಸ್ತಿಗಳಿಗೂ ಇದೇ ಪ್ರಕಾರ ಮೊರೆಹೋಗುತ್ತಿದ್ದರು.

× × × ×

ನಮ್ಮೂರ ಜೋಯಿಸರಿಗೆ ಅಂಜನ ಹಚ್ಚಿ ಗಂಟು ಕೀಳುವ ಹುಚ್ಚು ಬಹಳ. ಅಂದು ಅವರು, ಬೇಣದ ಬುಡದಲ್ಲಿ ಒಂದು ಕಾಸರಕನ ಮರದ ಕೆಳಗೆ ಗಂಟಿದೆಯೆಂದು ಅಂಜನದಿಂದ ತಿಳಿದು, ಅಲ್ಲಿಗೆ ಗುಪ್ತದಲ್ಲಿ ಹೋಗಿ ಅಗೆದರು; ಅಗೆದ ಹಾಗೆಲ್ಲ ಮಣ್ಣೋ ಮಣ್ಣು, ಕಲ್ಲೋ ಕಲ್ಲು! ನಿಕ್ಷೇಪ ಮಾತ್ರ ಕಾಣಿಸಲಿಲ್ಲ. ನಿಷ್ಫಲಪ್ರಯತ್ನರಾಗಿ ಮನೆಗೆ ಬಂದರು.

ಮರುದಿನ ಸುಮಾರು ೧೨ ಗಂಟೆಗೆ, ಶಿಶುವನ್ನು ತೊಟ್ಟಿಲಲ್ಲಿ ಮಲಗಿಸಿ ಬೀರನಿಗೆ ತೂಗಹೇಳಿ, ಸುಬ್ಬಿಯು ಒಡೆಯರ ಮನೆಗಾಗಿ ಹುಲ್ಲು ತರಲು ಅದೇ ಬೇಣಕ್ಕೆ ನಡೆದಳು. ಹುಲ್ಲು ಕೊಯ್ಯುತ್ತಿರುವಾಗ ಸುಗಂಧಿ ಬಳ್ಳಿಗಳನ್ನು ಕಂಡು, ಅವುಗಳ ಬೇರನ್ನು ಕಿತ್ತೊಯ್ದು, ಒಣಗಿಸಿ ಹುಡಿಮಾಡಿ, ಹಾಲೊಳಗೆ ಕೂಡಿಸಿ ಮಗುವಿಗೆ ಕುಡಿಸಿ ಚೆನ್ನಾಗಿ ಬೆಳೆಯಬೇಕೆಂಬ ವಿಚಾರ ತಲೆಯಲ್ಲಿ ನುಗ್ಗಿ, ಹಿಗ್ಗಿ, ಬೇರು ಕೀಳತೊಡಗಿದಳು. ಗಂಟಿಗಾಗಿ ಜೋಯಿಸರಗೆದ ಕಡೆಗೂ ತುಂಬಾ ಸುಗಂಧಿ ಕಂಡು, ಅಲ್ಲಿ ಕತ್ತಿಯಿಂದ ನೆಲ ಕೆದರ ಹತ್ತಿದಳು. ಗಂಟಿಗಗೆದ ಗುಂಡಿಯ ಬದಿಯನ್ನು ಕೆದರುತ್ತಿರುವಾಗ 'ಕಟ್' ಎಂದು ಸಪ್ಪಳವಾಯಿತು! ಕುತೂಹಲ ಹೆಚ್ಚಿ ಅಗೆಯಲು, ಹಿತ್ತಾಳೆಯ ಚೆಂಬೊಂದು ಕಂಡಿತು.

ಜೋಯಿಸರಗೆದ ಜಾಗಕ್ಕೂ, ಗಂಟಿದ್ದ ಸ್ಥಳಕ್ಕೂ ಕೇವಲ ಒಂದು ಅಂಗುಲ; ಆದರೆ ಅದು ಅವರಿಗೆ ಸಿಗತಕ್ಕ ದ್ರವ್ಯವಾಗಿದ್ದಿಲ್ಲವಾದುದರಿಂದಲೇ ಕಾಣಿಸಲಿಲ್ಲ. ಅಂಗುಲ ಅಗಲ ಮಣ್ಣೇ ನಿಕ್ಷೇಪವನ್ನು ಮರೆ ಮಾಡಿತು.

ಸುಬ್ಬಿಯು ಸಂತೋಷದಿಂದುಬ್ಬಿ, ಚೆಂಬನ್ನು ಹುಲ್ಲುಚೂಳಿಯೊಳಗಡಗಿಸಿ, ನೆಟ್ಟಗೆ ಗುಡಿಸಿಲಿಗೆ ನುಗ್ಗಿದಳು. ಅವಳ ವೇಗಕ್ಕೆ ಗಾಳಿ ಸಹ ತಡೆಯೊಡ್ಡಿತು. ಚೂಳಿಯನ್ನು ನೆಲಕ್ಕಿಳಿಸಿ ಚೆಂಬ ಹಿಡಿದು "ಮಾವಾ ಮಾವಾ" ಎನ್ನುತ್ತಾ ಒಳಗೆ ಓಡಿದಳು. ಆದರೆ—

ಬೀರ ನಿದ್ದೆ ಹೋಗಿದ್ದಾನೆ. ತೊಟ್ಟಿಲ ಶಿಶುವನ್ನು ಇಲಿ-ಹೆಗ್ಗಣಗಳ ಬೇಟೆಗೆ ಬಂದ ಹಸಿದ ಹಾವು ಕಡಿದು ಶಿವು ಶವವಾಗಿ ಬಿದ್ದಿದ್ದಾನೆ.

ಭೂಮಿ-ವ್ಯೋಮಗಳು ತಾಗಿ ಸುಬ್ಬಿಯನ್ನು ಹಿಸುಕಿದಂತಾಯಿತು. ಎದೆಯೊಡೆದು "ಹಾ ಹಾ" ಎಂದು ಮೂರ್ಛೆಹೋದಳು ಸುಬ್ಬಿ ತೊಟ್ಟಿಲ ಕೆಳಗೆ.

ಬೀರ ಎಚ್ಚೆತ್ತ. ಹುಚ್ಚು ಹಿಡಿಯಿತು. ಅಲೆದಾಡ ಹತ್ತಿದ. ಆಗಷ್ಟೇ ಬಂದ ಅರೆಗೆ ಬಂದು ಕೂಗುತ್ತಿದ್ದ.

ಸುಬ್ಬಿಯು ಶಿವು-ಶವವನ್ನೆತ್ತಿಕೊಂಡು, ಹೊನ್ನಿನ ತಂಬಿಗೆ ಹಿಡಿದು ಉನ್ಮಾದಗೊಂಡ ಚೀರುತ್ತ ಬಂದಳು: "ತಕೋ ಹೊನ್ನು.... ಉಣ್ಣು ತಿನ್ನು ಜೀಂ!....ನನಗ ಬೇಡಾ. ನನಗೆ ನನ್ನಿವೂ....ನನ್ನಿವೂ...." ಎಂದು ಹೊನ್ನುಗಳನ್ನು ತೂರುತ್ತಾ, ಗಡ್ಡ-ಕಂದರಗಳಲ್ಲಿ "ನನ್ನಿವೂ" ಎಂದು ಮಾರ್ದನಿಗೊಳ್ಳಿಸಿ, ಕಂದಕದ ಕಡೆಗೆ ಓಡುತ್ತಿರುವಾಗ "ಹ್ಹ! ಹ್ಹ! ಹ್ಹ! ನಾನೂ ಒಂದೆ" ಎನ್ನುತ್ತಾ ಬೀರನೂ ಹಿಂಬಾಲಿಸಿದನು. ಇಬ್ಬರೂ ಕುಪ್ಪನನ್ನು ಕಂಡರು.

ಸುಬ್ಬಿ ತೂರಿದ ಹೊನ್ನು ಯಾರಿಗಾದರೂ ಬೇಕೇ? ಕಂದರದಲ್ಲಿ ಸಿಗಬಹುದು.

'ಕಂಬನಿ ಕಡಲಿಗೆ
ಜೀವನ ತೊರೆಗಳು
ಹರಿವುವು ಗಿರಿ-ಝರಿ-ತೊರೆತದಲಿ.
ಲಂಗರುಗಳಿಲ್ಲ,
ಈಜುಗಳಿಲ್ಲ
ನೂಕುವ ಸೆಳವಿದೆ ಕಂತದಲಿ.
ಹಾಯಿಯ ಹರಿಯುವ
ಗಾಳಿಯು ಗವಿಗಳ
ಕೊರೆದಿದೆ ದೂರ-ದಿಗಂತದಲಿ!'

—

ಜಯಂತಿ

ಜಪಾನಿನ ಜನಜೀವನ

ಶ್ರೀ. ಮಿರ್ಜಿ ಅಣ್ಣಾರಾಯರು, ಉಗಾರ

●

ಜಪಾನ್ ದೇಶವು ಈಗ ಹಲವು ವರ್ಷಗಳಿಂದ ಒಂದಿಲ್ಲೊಂದು ರಾಷ್ಟ್ರದೊಡನೆ ಹೋರಾಡುತ್ತಲಿದೆ. ಸದ್ಯದ ಮಹಾಯುದ್ಧವು ಆರಂಭ ನಾಗುವುದಕ್ಕಿಂತ ಮೊದಲೇ ಚೀನಾ-ಜಪಾನುಗಳ ಯುದ್ಧವು ನಡೆದೇ ಇದ್ದಿತು. ಇಂದಿನ ಯುದ್ಧರಂಗದಲ್ಲಂತೂ ಜಪಾನು ಒಂದು ಮುಖ್ಯ-ಪಾತ್ರವನ್ನು ವಹಿಸಿದೆ. ಜಪಾನು ಇಷ್ಟೊಂದು ಯಾಕೆ ಹೋರಾಡುತ್ತ-ಲಿದೆ? ಅದರ ಹೋರಾಟದ ಅಂತಃಸ್ಫೂರ್ತಿಯು ಉಗಮವೆಲ್ಲಿ? ಅದರ ಹೋರಾಟ ನಿಲ್ಲುವುದೆಂದು?—ಇವೇ ಮೊದಲಾದ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರವನ್ನು ಹೇಳಬೇಕಾದರೆ, ಜಪಾನಿನ ಜನಜೀವನ ವನ್ನು ನಿರೀಕ್ಷಿಸಬೇಕು.

ಮುಂದುವರಿದ ರಾಷ್ಟ್ರಗಳ ಅಂತರರಾಷ್ಟ್ರೀಯ ಹೋರಾಟವು ಅಲ್ಲಿಯ ಸಾಮಾನ್ಯ ಜನರ ಜೀವನದ ಅಸ್ಪೃಶ್ಯ-ಅತೃಪ್ತಿಗಳನ್ನೇ ಹೆಚ್ಚಾಗಿ ಅವಲಂಬಿಸಿರುತ್ತದೆ. ಆದ್ದರಿಂದ ಹಿಂದುಳಿದ ರಾಷ್ಟ್ರಗಳ ಸಾಮಾನ್ಯ ಜನತೆಯಲ್ಲಿ ವಿಚಾರ ಸ್ವಾತಂತ್ರ್ಯವಾಗಲಿ; ಹೋರಾಟದ ಶಕ್ತಿಯಾಗಲಿ ಅಷ್ಟು ಪ್ರಬಲವಾಗಿರುವುದಿಲ್ಲ; ಆದುದರಿಂದ ಅದರ ಹೋರಾಟವು ದೇಶದ ಮುಂದಾಳುಗಳ ಕೈಯಲ್ಲಿರುತ್ತದೆ. ದೇಶದ ಮುಖಂಡರ ಒಮ್ಮುಖದಿಂದ ದೇಶದ ಜನತೆಯನ್ನು ಸಾಗಿಸಿದತ್ತ ಅದು ಸಾಗುವುದು ಆದರೆ ಜಪಾನಿನಂತಹ ಮುಂದುವರಿದ ಸ್ವತಂತ್ರ ರಾಷ್ಟ್ರಗಳ ಜನತೆಯು ಹಾಗಲ್ಲ. ಅಲ್ಲಿಯ ಪ್ರತಿಯೊಬ್ಬ ಸಾಮಾನ್ಯ ನಾಗರಿಕನೂ ದೇಶದ ಬಗ್ಗೆ ವಿಚಾರ ಮಾಡುತ್ತಾನೆ; ವಿಚಾರಿಸಿ ಒಂದು ನಿರ್ಣಯಕ್ಕೆ ಬರು-ತ್ತಾನೆ. ಹೀಗೆ ಸ್ವತಂತ್ರವಾಗಿ ವಿಚಾರಿಸಿ ಜನತೆಯು ಒಂದು ನಿರ್ಣಯ-ವನ್ನು ಮಾಡುವ ಸುಸ್ಥಿತಿಯನ್ನು ಹೊಂದಬೇಕಾದರೆ, ಅದಕ್ಕೆ ದೇಶದ ಜ್ಞಾನ, ವಿಚಾರಶಕ್ತಿಗಳು ತುಂಬ ಇರಬೇಕಾಗುತ್ತವೆ. ಜಪಾನಿನ ದೊಡ್ಡ ದೊಡ್ಡ ನಗರಗಳಿಂದ ಹಲವು ಹರದಾರಿಗಳ ದೂರದ ಹಳ್ಳಿ ಯಲ್ಲಿ ವಾಸಿಸುವ ಒಕ್ಕಲಿಗನೂ, ದಿನಾಲು ಒಂದು ದೈನಿಕ ಪತ್ರಿಕೆಯ ನೂರು ಪತ್ರಗಳನ್ನು ಓದುತ್ತಾನೆ. ರೇಡಿಯೊದಿಂದ ದಿನಕ್ಕೆ ನಾಲ್ಕು ಸಾರಿಯಾದರೂ ಯುರೋಪು-ಅಮೇರಿಕೆಗಳಲ್ಲಿ ನಡೆವ ಸಂಗತಿ, ವಿಚಾರ, ವಿವೇಚನೆಗಳನ್ನು ಅರಿತುಕೊಳ್ಳುತ್ತಾನೆ. ಅಲ್ಲದೆ ಅಲ್ಲಿಯ ಕಾರ್ಯ-ಕಾರಣಭಾವಗಳನ್ನು ವಿಚಾರಿಸುತ್ತಾನೆ. ಇದಲ್ಲದೆ ಮನೆಯಲ್ಲಿ ಮಾಸಿಕ-ಸಾಪ್ತಾಹಿಕಗಳಿಗೂ ಕೊರತೆಯಿರುವುದಿಲ್ಲ. ಇಂತಹ ಜನತೆ ಯಾವ ಕಾಲಕ್ಕೂ ಅಂಧವಿಶ್ವಾಸಿಯಾಗಿರಲಾರದು. ಆದುದರಿಂದ ಜಪಾನಿನಲ್ಲಿಯ ಸಾಮಾನ್ಯ ಜನತೆಯ ಜೀವನಧ್ಯೇಯವೇ ರಾಷ್ಟ್ರದ ಧ್ಯೇಯವಾಗಿರುವುದು.

ಯಾವುದೇ ಒಂದು ದೇಶವು ಯುದ್ಧ ಹೂಡಲಿಕ್ಕೆ ಪ್ರಬಲವಾದ ಎರಡು ಕಾರಣಗಳಿರುತ್ತವೆ. ಮೊದಲನೆಯದು ಸಾಮ್ರಾಜ್ಯ ಲಾಲಸೆ; ಇನ್ನೊಂದು ಅನ್ನಾಭಾವ. ಜಪಾನಿನ ಹೋರಾಟಕ್ಕೆ ಅದರ ಸಾಮ್ರಾಜ್ಯ ಲಾಲಸೆಯು ಒಂದು ಪಾಲು ಕಾರಣವಾಗಿದ್ದರೆ, ಮೂರು ಪಾಲು ಅನ್ನಾ-ಭಾವವು ಕಾರಣವಾಗಿದೆ—ಎಂಬುದು, ಸ್ವಲ್ಪ ವಿಚಾರಿಸಿದರೆ ಗೊತ್ತಾಗುವಂತಿದೆ. ಹೇಗೆಂದರೆ ಜಪಾನಿನ ಭೂಮಿ-ಜನಸಂಖ್ಯೆಗಳಲ್ಲಿ ಸಮ ತೋಲವಿಲ್ಲ. ಜಪಾನಿನ ಕ್ಷೇತ್ರವು ಸುಮಾರು ಹೈದರಾಬಾದ್ ಸಂಸ್ಥಾ-ನದ ಮೂರರಷ್ಟಾದರೆ—ಜನಸಂಖ್ಯೆಯು ನಾಲ್ಕರಷ್ಟಿದೆ. ಮೇಲಾಗಿ ಜಪಾನಿನ ಜನಸಂಖ್ಯೆಯು ಪ್ರತಿವರ್ಷ ಹತ್ತು ಲಕ್ಷದಷ್ಟು ಹೆಚ್ಚಾಗು-ವುದು. ಜಪಾನಿನಲ್ಲಿ ಕ್ರಿ. ಶ. ೧೮೬೭ ರಲ್ಲಿ ಜಮೀನ್‌ದಾರಿ ಪದ್ಧತಿಯು ನಷ್ಟವಾದಾಗಿನಿಂದ, ಸಾಧಾರಣವಾಗಿ ನಾಲ್ಕೈದು ಜನರ ಒಂದು ಕುಟುಂಬದ ಪಾಲಿಗೆ ಎರಡು ಎಕರೆ ಜಮೀನು ಬಂದಿರುವುದು. ಅದೂ ಬೆಳೆಯುತ್ತಿರುವ ಜನಸಂಖ್ಯೆಯ ಮೂಲಕ ದಿನದಿನಕ್ಕೆ ಕಡಿಮೆ ಯಾಗುತ್ತ ನಡೆದಿರುವುದು. ಆದರೂ ಈ ಕೊರತೆಯನ್ನು ಒಕ್ಕಲು ತನದ ಸುಧಾರಣೆಯಿಂದ ಅವರು ಎಷ್ಟೋ ತುಂಬಿಕೊಳ್ಳುತ್ತ ಬಂದಿ-ದ್ದಾರೆ. ದೇಶದಲ್ಲಿಯ ಸಣ್ಣ ಸಣ್ಣ ಗುಡ್ಡಗಳನ್ನು ಮೆಟ್ಟಿಲು-ಮೆಟ್ಟಿಲಾಗಿ ಕಡಿದು. ಬೇಸಾಯಕ್ಕೆ ಬರುವಂತಹ ಭೂಮಿಯನ್ನು ಸಿದ್ಧ ಮಾಡಿಕೊಂಡಿದ್ದಾರೆ ಹೊಳೆ-ಹಳ್ಳಗಳ ದಂಡೆಯಲ್ಲಿಯೂ. ಸಮುದ್ರದ ದಂಡೆಯಲ್ಲಿಯೂ, ಎಷ್ಟು ಶಕ್ಯವಿದೆಯೊ ಅಷ್ಟು ಬೇಸಾಯಕ್ಕೆ ಭೂಮಿ ಯನ್ನು ಉಪಯೋಗಿಸುತ್ತಿದ್ದಾರೆ. ಇದೂ ಅಲ್ಲದೆ ಅಲ್ಲಲ್ಲಿ ಚಿಕ್ಕ ಚಿಕ ಕೆರೆಗಳನ್ನು ಕಟ್ಟಿ, ಕೆರೆಯನ್ನು ಮೀನು ಸಾಕುವುದಕ್ಕೂ, ಕೆರೆಯ ಸುತ್ತಲಿನ ಒಡ್ಡುಗಳನ್ನೂ ಮಗ್ಗಲುಗಳನ್ನು ತಂಬಾಕು-ಕಾಯಿ-ಪಲ್ಲೆ ಮೊದಲಾದುವುಗಳನ್ನು ಬೆಳೆಯಿಸಲಿಕ್ಕೂ ಉಪಯೋಗಿಸಿ-ಕೊಳ್ಳುವರು. ಆದುದರಿಂದ ಜಪಾನಿನಲ್ಲಿ ಜನರು ಉಪಯೋಗ ಮಾಡಿ ಕೊಳ್ಳದೆ ಬಿಟ್ಟ ಭೂಮಿಯು ನೋಡಲಿಕ್ಕೆ ಕೂಡ ಸಿಕ್ಕುವಂತಿಲ್ಲ. ಇದೂ ಅಲ್ಲದೆ, ಎಲ್ಲೆಡೆಗೂ ನೀರಾವರಿಯ ವ್ಯವಸ್ಥೆಯನ್ನು ಚೆನ್ನಾಗಿ ಮಾಡಿ-ಕೊಂಡಿದ್ದಾರೆ ಗುಡ್ಡಗಳ ಮೇಲೆ ಎಲ್ಲಿಯವರೆಗೆ ಭೂಮಿಯನ್ನು ಮಾಡಿಕೊಳ್ಳಲಿಕ್ಕೆ ಬಂದಿರುವುದೋ ಅಲ್ಲಿಯ ವರೆಗೆ ಕಡಿದು, ಭೂಮಿ-ಯನ್ನು ಮಾಡಿಕೊಂಡು, ಎಲ್ಲಕ್ಕೂ ಮೇಲೆ ದೊಡ್ಡ ದೊಡ್ಡ ಕೆರೆಗಳನ್ನು ಕಟ್ಟಿಬಿಟ್ಟಿರುವರು. ಮಳೆಗಾಲದ ದಿನಗಳಲ್ಲಿ ಅವು ಮಳೆಯ ನೀರಿನಿಂದ ತುಂಬಿಕೊಳ್ಳುತ್ತವೆ. ಮುಂದೆ ಬೇಸಗೆಯಲ್ಲಿ ಆ ನೀರನ್ನು ಹೊಲಗಳ ಬೆಳೆಗೆ ಕಾಲ-ಕಾಲಕ್ಕೆ ಉಪಯೋಗಮಾಡಿಕೊಳ್ಳುತ್ತಾರೆ. ಇದಲ್ಲದೆ ಜಪಾನಿನಲ್ಲಿ ಎಲ್ಲ ನದಿಗಳಿಗೂ ಕಾಲುವೆಯನ್ನು ಕಟ್ಟಿಕೊಂಡು, ಅವುಗಳ ನೀರನ್ನು ಬೇಸಾಯಕ್ಕೆ ಬಳಸಿಕೊಂಡಿದ್ದಾರೆ. ಚೀನಾ, ಜಪಾನ್, ಕೋರಿಯಾಗಳಲ್ಲಿರುವ ನದಿ ಹಾಗೂ ಕಾಲುವೆಗಳ ಉದ್ದಳತೆಯು, ಸಂಯುಕ್ತ ರಾಜ್ಯ ಮತ್ತು ಅಮೇರಿಕೆಯ ರೇಲ್ವೆಮಾರ್ಗಗಳ ಉದ್ದಳ-ತೆಗಿಂತ ಹೆಚ್ಚಾಗಿದೆ.

ಹೀಗೆ ನೀರಿನ ಪೂರಯಿಕೆಯನ್ನು ಬೆಳೆಗಳಿಗೆ ಮಾಡಿಕೊಂಡದ್ದ-ಲ್ಲದೆ ವಿದ್ಯುತ್ ಶಕ್ತಿಯ ಉತ್ಪಾದನೆ, ಸಾರ್ವಜನಿಕ ಸ್ನಾನಗೃಹ ಮೊದ ಲಾದುವುಗಳಿಗೂ ಮಾಡಿಕೊಂಡಿರುವರು. ಜಪಾನಿನಲ್ಲಿ ದೇಶದ ತುಂಬ ಸಾರ್ವಜನಿಕ ಸ್ನಾನದ ಗೃಹಗಳು ನೋಡಲು ಸಿಕ್ಕುತ್ತವೆ. ಬಹುತರ ಎಲ್ಲೆಡೆಗೂ ಸಂಗಮರವರಿ ಕಲ್ಲಿನ ಹೌದು (ತೊಟ್ಟಿ) ಗಳನ್ನು ಕಟ್ಟಿಸಿ, ಸ್ನಾನಕ್ಕೆ ಅನುಕೂಲ ಮಾಡಿರುವರು. ಅವುಗಳಲ್ಲಿ ಮಧ್ಯಾಹ್ನದ ಹನ್ನೆರಡು ಗಂಟೆಯಿಂದ ರಾತ್ರಿಯ ಹನ್ನೆರಡು ಗಂಟೆಯವರೆಗೆ ಬೇಕಾ-ದಾಗ ಬೇಕಾದವರು ಹೋಗಿ ಸ್ನಾನ ಮಾಡಬಹುದು. ತಮಗೆ ಹತ್ತಿ-ದಷ್ಟು ಬಿಸಿನೀರನ್ನೂ ತಣ್ಣೀರನ್ನೂ ಬೇಕಾದ ಹಾಗೆ ಬಳಸಿಕೊಳ್ಳ-

ಬಹುದು. ಉಷ್ಣತೆ ಹೆಚ್ಚಾದರೆ ವಿದ್ಯುತ್ತಿನ ಬೀಸಣಿಗೆಯಿಂದ ಗಾಳಿಯನ್ನು ಹಾಕಿಸಿಕೊಳ್ಳಬಹುದು. ಇದೆಲ್ಲದರ ಸಲುವಾಗಿ ಆರು ಬಿಲ್ಲಿಯುಷ್ಟು ಮಾತ್ರ ವೆಚ್ಚ ಮಾಡಬೇಕಾಗುತ್ತದೆ.

ಜಪಾನಿನ ಒಕ್ಕಲಿಗನು ತನಗೆ ಹತ್ತುವ ಎಲ್ಲ ಪದಾರ್ಥಗಳನ್ನೂ ಹೊಲದಲ್ಲಿಯೆ ಬೆಳಸಿಕೊಳ್ಳುವನು. ಆಹಾರಕ್ಕಾಗಿ ಬೇಕಾಗುವ ಭತ್ತ, ಗೋದಿ, ಜವೆಗೋದಿ ಮೊದಲುಮಾಡಿಕೊಂಡು ಚಹ, ಆಲೂಗಡ್ಡೆ (ಮೂರು ಪ್ರಕಾರ), ಹಣ್ಣಿನ ಗಿಡಗಳ ವರೆಗೆ ಎಲ್ಲವನ್ನೂ ಬೆಳೆಯುತ್ತಾನೆ. ಅಲ್ಲದೆ ಮನೆಕಟ್ಟಲು ಬೇಕಾಗುವ ಕಟ್ಟಿಗೆ, ಹಾಸಿಗೆಗೆ ಬೇಕಾಗುವ ಹೆಣಿಕೆಯ ಹುಲ್ಲು, ಸುಲಭವಾಗಿ ಕಾಗದ ತಯಾರಿಸಬಹುದಾದ 'ಕೋಜು' ಗಿಡ ಮೊದಲಾದ ನಿತ್ಯೋಪಯೋಗಿ ಪದಾರ್ಥಗಳನ್ನೂ ತಯಾರು ಮಾಡಿಕೊಳ್ಳುವನು. ಮೇಲಾಗಿ ಕೇವಲ ಸೌಂದರ್ಯಕ್ಕಾಗಿ ಜಗತ್ತಿನ ಮನಸ್ಸನ್ನೇ ಜಪಾನಿನತ್ತ ಆಕರ್ಷಿಸಿಕೊಂಡ 'ಸಾಕುರಾ' ಎಂಬ ಹೂವಿನ ಗಿಡಗಳನ್ನೂ ತಕ್ಕಷ್ಟು ಹಚ್ಚಿರುತ್ತಾನೆ. ಸಾಕುರಾ ವರ್ಷದಲ್ಲಿ ಒಂದೇ ವಾರ ಹೂ ಬಿಡುವುದಾದರೂ, ಜಪಾನಿಗಳೆಲ್ಲ ತುಂಬ ಕುತೂಹಲದಿಂದ ಆ ವಾರದ ದಾರಿಯನ್ನು ಕಾಯುವರು. ಜಪಾನಿನ ಕವಿಗಳು ಆ ಹೂವನ್ನು ಕುರಿತು ಎಷ್ಟೋ ಕವನಗಳನ್ನು ಬರೆದಿರುತ್ತಾರೆ. ಈ ರೀತಿ ಒಬ್ಬ ಒಕ್ಕಲಿಗನು ತನ್ನ ಎರಡು ಎಕರೆಯ ಹೊಲದಲ್ಲಿಯೆ ಆಹಾರ, ಜೀವನೋಪಯೋಗಿಯಾದ ಇತರ ವಸ್ತು ಮತ್ತು ಮನೋರಂಜನೆಯ ಸಾಧನೆ ಇವೆಲ್ಲವನ್ನೂ ಪಡೆಯುತ್ತಾನೆ.

ಇನ್ನು ಬಟ್ಟೆ! ಬಟ್ಟೆಗಳ ನಿರ್ಮಾಣಕ್ಕಾಗಿಯೂ ಅಲ್ಲಿಯ ರೈತ ತನ್ನ ಹೊಲದ ಸ್ವಲ್ಪ ಭಾಗವನ್ನು ವೆಚ್ಚ ಮಾಡಿದುದು ಕಾಣಬಹುದು. ಅಲ್ಲಿ ಪ್ರತಿಯೊಬ್ಬ ಒಕ್ಕಲಿಗನೂ ರೇಶಿಮೆಯ ಹುಳುಗಳನ್ನು ಸಾಕುವನು, ಅವುಗಳ ಆಹಾರಕ್ಕಾಗಿ ಬೇಕಾಗುವ ಉಪ್ಪುನೇರಳೆ ಗಿಡಗಳನ್ನೂ ತನ್ನ ಹೊಲದ ಒಂದು ಮೂಲೆಯಲ್ಲಿ ಬೆಳಸುವನು. ಮನೆಯ ಹೆಂಗುಸರು ಆ ರೇಶಿಮೆಯಿಂದ ಬಟ್ಟೆಗಳನ್ನು ಸಿದ್ಧಪಡಿಸುತ್ತಾರೆ. ಬಹುಶಃ ಜಪಾನಿಯ ಒಕ್ಕಲಿಗನು ತಾನು ಸಾಕಿದ ರೇಶಿಮೆಯ ಹುಳುಗಳಿಂದ ಉತ್ಪನ್ನವಾದ ರೇಶಿಮೆಯಿಂದಲೇ, ತಮ್ಮ ಮನೆಯ ಹೆಂಗುಸರೇ ಸಿದ್ಧಪಡಿಸಿದ ಬಟ್ಟೆಯನ್ನು ತೊಡುವನು. ಪ್ರತಿ ಮನೆಯಲ್ಲಿಯೂ ಸ್ತ್ರೀಯರ ಹತ್ತಿರ ನಾನಾಪರಿಗಾಗಿ ನೂರಾರು ವಿಧದ ಅರಿವೆಯ ತುಂಡುಗಳ ಕಟ್ಟುಗಳಿರುತ್ತವೆ. ಅದರಲ್ಲಿ ತಮ್ಮ ತಮ್ಮ ಮನೆಯ ಪೂರ್ವಿಕರು ಸಿದ್ಧಪಡಿಸಿದ ಅನೇಕ ನಮೂನೆಯ ವಸ್ತ್ರದ ತುಣುಕುಗಳನ್ನು ಜನರಿಗೆ ತೋರಿಸಿ, ಹೆಣ್ಣುಮಕ್ಕಳು ಹೆಮ್ಮೆಯಿಂದ ಅವುಗಳ ಇತಿಹಾಸವನ್ನು ಹೇಳಿಕೊಳ್ಳುತ್ತಾರೆ. ಯಾವ ಮನೆಯ ಕಟ್ಟು ವೈವಿಧ್ಯ-ಪೂರ್ಣವಾದುದೂ ದೊಡ್ಡದೂ ಆಗಿರುವುದೋ, ಆ ಮನೆಯ ಹೆಣ್ಣುಮಕ್ಕಳಿಗೊಂದು ಊರಲ್ಲಿ ಹಿರಿಯಸ್ಥಾನ. ಅಲ್ಲಿಯ ಹುಡುಗಿಯರ ಶಾಲೆಗಳಲ್ಲಿಯೂ ಈ ಶಿಕ್ಷಣವನ್ನು ಕೊಡುತ್ತಾರೆ.

ಜಪಾನಿಗಳು ಒಂದು ಹೊಲದಲ್ಲಿ ವರ್ಷದಲ್ಲಿ ಮೂರು ಬೆಳೆಗಳನ್ನು ತೆಗೆದುಕೊಳ್ಳುತ್ತಾರೆ. ಒಮ್ಮೊಮ್ಮೆ ಐದ್ಯೆದು ಬೆಳೆಗಳನ್ನು ತೆಗೆದುಕೊಂಡದ್ದೂ ಉಂಟು. ಬೇಸಾಯದ ವೆಚ್ಚ ಕಳೆದು ಒಂದು ಎಕರೆಯಲ್ಲಿ ಪ್ರತಿವರ್ಷ ಐದುನೂರು 'ಯೆನ್' (ಸುಮಾರು ೩.೫೦ ರೂಪಾಯಿಗಳು) ಗಿಂತ ಕಡಿಮೆಯೆಂದೂ ಬರುವುದಿಲ್ಲ. ಇದಕ್ಕಾಗಿ ಜಪಾನಿನ ಒಕ್ಕಲಿಗರು ಬಹಳ ಪರಿಶ್ರಮ ಪಡಬೇಕಾಗುತ್ತದೆ.

ಜಪಾನಿನ ಒಕ್ಕಲಿಗರು ಕೃಷಿಯ ಕೆಲಸದಲ್ಲಿ ಅಂಧವಿಶ್ವಾಸಿಗಳಲ್ಲ. ಪ್ರತಿಯೊಬ್ಬನೂ ವಸಂತಋತುವಿನ ಆರಂಭದಲ್ಲಿ ಬೇರೆ ಬೇರೆ ಮಾದರಿಯ ಭತ್ತದ ಬೀಜಗಳನ್ನು ಆಯ್ದು ಬಿತ್ತುವನು; ಅವುಗಳಲ್ಲಿ ಯಾವ ಬೀಜದ ಸಸಿಗಳು ಚೆನ್ನಾಗಿ ಬರುವುವೋ ಅವುಗಳನ್ನೇ ಆಯ್ದು ತನ್ನ ಹೊಲದಲ್ಲಿ ನೆಡುವನು. ಇಷ್ಟು ಸುಧಾರಿಸಿದ ರಾಷ್ಟ್ರವಾದರೂ ಅಲ್ಲಿಯ ಒಕ್ಕಲಿಗರು, ಇನ್ನೂ ಪಂಚಾಂಗ ನೋಡಿ ಒಳ್ಳೆಯ ದಿನವಿದ್ದುದನ್ನು ತಿಳಿದುಕೊಂಡು ಸಸಿಗಳನ್ನು ನೆಡುವರು. ಈಗಲೂ ಯಾವ ಒಕ್ಕಲಿಗನೂ 'ಖರಗೋಶ' (ಉದಾಸೀನ) ದಿನದಲ್ಲಿ ಬೀಜ ಬಿತ್ತುವುದಿಲ್ಲ. ಬಿತ್ತಿಗೆಯಾದನಂತರ 'ಎಲ್ಲವೂ ಪರಮೇಶ್ವರನ ಕೈಯಲ್ಲಿ, ಭೂಮಿತಾಯಿ ಕೊಟ್ಟದ್ದು ಬರಲಿ' ಎಂದು ದೈವದ ಮೇಲೆ ಹೊರೆಹಾಕಿ ಎಂದೂ ಸುಮ್ಮನೆ ಕೂಡುವುದಿಲ್ಲ. ಹೊಲದೊಳಗಿನ ಎಲ್ಲ ವಿಧದ ಬೆಳೆಗಳನ್ನೂ ಸೂಕ್ಷ್ಮವಾಗಿ ನಿರೀಕ್ಷಿಸುವನು. ಅವುಗಳಿಗೆ ಅಗತ್ಯವಾದ ಗೊಬ್ಬರ-ನೀರುಗಳನ್ನು ಹಾಕುವನು. ಪ್ರಾಕೃತಿಕ ರೋಗ-ರುಜಿನಗಳಿಗೆ ಉಪಾಯವನ್ನು ಮಾಡುವನು. ಹುಳು-ಹುಪ್ಪಡಿಗಳಿಂದ ನಾಶವಾಗದಂತೆ ಎಚ್ಚರು ತಕ್ಕೊಳ್ಳುವನು. ಒಟ್ಟಿನ ಮೇಲೆ ಜಪಾನಿನ ರೈತ, ತನ್ನ ದೇಹಶ್ರಮವನ್ನು ನಂಬಿದಷ್ಟು ದೈವವನ್ನು ನಂಬದೆ, ಭೂಮಿಯಲ್ಲಿ ದುಡಿಯುತ್ತಾನೆ.

ಜಪಾನಿನ ಕೃಷಿಯು ಬಹಳ ಸುಧಾರಣೆ ಹೊಂದಿದೆ. ಆಸ್ಟ್ರೇಲಿಯಾ ದೇಶವು ತನ್ನ ಉತ್ತಮ ಭೂಮಿಯಲ್ಲಿ, ಸುಮಾರು ೧೫೦ ವರ್ಷಗಳಲ್ಲಿ ಮಾಡಿಕೊಂಡ ಒಕ್ಕಲುತನದ ಸುಧಾರಣೆಗಿಂತ ಮಿಗಿಲಾಗಿ, ಜಪಾನಿಗಳು ತಮ್ಮ ಬಡಭೂಮಿಯಲ್ಲಿ ೨೦ ವರ್ಷಗಳಲ್ಲಿಯೆ ಸುಧಾರಣೆ ಮಾಡಿಕೊಂಡಿದ್ದಾರೆ. ಅದರಂತೆ ಬೆಳೆಯನ್ನೂ ಹೆಚ್ಚಾಗಿ ತೆಗೆದುಕೊಳ್ಳುತ್ತಲಿದ್ದಾರೆ.

ಜಪಾನಿನ ಯಾವುದೇ ಒಂದು ಕುಟುಂಬದ ನಾಲ್ಕೈದು ಜನರು ಎರಡೇ ಎಕರೆ ಅಡವಿಯಲ್ಲಿ ಹಗಲಿರುಳೂ ಚೆನ್ನಾಗಿ ದುಡಿಯುವರು. ಹೀಗೆ ಒಂದೇ ಸವನೆ ಹೊಲದೊಡನೆ ಹೋರಾಡಿ, ಜಪಾನಿಗಳು ಇಂದಿನ ಜಪಾನನ್ನು ನಿರ್ಮಿಸಿದ್ದಾರೆ. ಅಲ್ಲಿಯ ಪ್ರತಿಯೊಬ್ಬ ಒಕ್ಕಲಿಗನೂ ಹೇಳುತ್ತಾನೆ: 'ಕರ್ತವ್ಯಪಾಲನ ಮಾಡಿದರೆ ಬದುಕಬೇಕು; ಇಲ್ಲವಾದರೆ ಕತ್ತಿಯಿಂದ ಇರಿದುಕೊಂಡು ಸತ್ತುಹೋಗಬೇಕು' ಎಂದು! ಈ ಆದರ್ಶವನ್ನು ಇಟ್ಟುಕೊಂಡು ಇಷ್ಟು ಕಠಿನ ಪರಿಶ್ರಮ ಮಾಡಿಯೂ ಜಪಾನಿಗಳು ಬದುಕುವುದು ಕಷ್ಟಕರವಾಗಿದೆ. ಭೂಕಂಪ, ಬಿರುಗಾಳಿ, ಹಿಮ, ಸಮುದ್ರದ ನೀರೆ ಮೀರುವಿಕೆ ಇವೆಲ್ಲ ಆಪತ್ತುಗಳನ್ನು, ಕೇವಲ ಎರಡು ಎಕರೆ ಅಡವಿಗಾಗಿ ಅವರು ಸಹನ ಮಾಡಿಕೊಳ್ಳಬೇಕಾಗುತ್ತದೆ. ಜಪಾನಿನಲ್ಲಿ ಒಟ್ಟಿಗೆ ೫೮ ಜ್ವಾಲಾಮುಖಿಗಳಿವೆ. ಅವುಗಳಲ್ಲಿ ಕೆಲವು ತಮ್ಮ ವಿಶಾಲವಾದ ಗರ್ಭದಲ್ಲಿ ಅಗ್ನಿರಾಶಿಯನ್ನು ಸಂಚಯ ಮಾಡಿಕೊಂಡು ಆಗಾಗ ಹೊರಗೆ ಕಾರುತ್ತವೆ. ಅಂತಹವುಗಳ ನೆರೆಯಲ್ಲಿ ಹೊಲಗಳಿದ್ದ ಒಕ್ಕಲಿಗರು, ಪಾಪ, ಯಾವಾಗ ಇಲ್ಲವಾಗುತ್ತಾರೆಯೋ ಯಾರಿಗೆ ಗೊತ್ತು? ಒಮ್ಮೆ ಜ್ವಾಲಾಮುಖಿ ಜಾಗೃತವಾಯಿತೆಂದರೆ ಸುತ್ತಲಿನ ಹೊಲ-ಮನೆಗಳೆಲ್ಲ ಅಗ್ನಿರಾಶಿಗೆ ಆಹುತಿಯಾಗುವುವು. ಎಷ್ಟೋ ಜನರ ಜೀವಿತಗಳು ನೀರ ಮೇಲಿನ ಗುಳ್ಳೆಯಂತೆ ಕ್ಷಣದಲ್ಲಿ ಇದ್ದೂ ಇಲ್ಲದಂತಾಗುವುವು. ಇಂದು ಭತ್ತದ ಗದ್ದೆಗಳಿಂದ ಸುಂದರವಾ

ತೋರುವ ಹೊಲಗಳು, ನಾಳೆಗೆ ಸಾವಿರಾರು ಫೂಟು ಆಳವಾಗಿ ನೆಲದಲ್ಲಿ ಹೂತು ಬಿಡುವವು.

ಇಷ್ಟೇ ಅಲ್ಲ; ಎಲ್ಲಿ ಈ ಭೂಮಿಯೊಳಗಿನ ಅಗ್ನಿಯು ಶಾಂತವಾಗಿರುವುದೋ ಅಲ್ಲಿ ಇಂದ್ರನು ಕೋಪಗೊಂಡಿರುವನು. ದಕ್ಷಿಣ ಜಪಾನಿನಲ್ಲಿ ಜ್ವಾಲಾಮುಖಿಗಳಿಂದ ಬೆಳೆಗಳು ನಷ್ಟವಾದರೆ, ಉತ್ತರದಲ್ಲಿ ಎಲ್ಲ ಬೆಳೆಗಳು ಹಿಮದಲ್ಲಿ ಹುಗಿದು ಹೋಗುವುವು ಒಂದು ಆಪತ್ತಿನಲ್ಲಿ ಎಲ್ಲವೂ ಭೂಗತವಾದರೆ, ಇನ್ನೊಂದರಿಂದ ಸರ್ವವೂ ಇದ್ದಲ್ಲಿಯೆ ನಷ್ಟವಾಗುವುದು. ಹೀಗಾಗಿ ಜಪಾನಿಗಳು ಯಾವಾಗಲೂ ಮೃತ್ಯುವಿನ ದವಡೆಯಲ್ಲಿಯೆ ಬಾಳಬೇಕಾಗುವುದು. ಆದರಿಂದ ಅಲ್ಲಿಯ ಒಕ್ಕಲಿಗನು ಸಾಮಾನ್ಯವಾಗಿ ಹೀಗೆ ಹೇಳುವನು:

"ನನಗೆ ಎರಡು ಎಕರೆ ಅಡವಿಯಿದೆ, ನನ್ನ ಇಬ್ಬರು ಮಕ್ಕಳೂ ಜೀವಂತವಿದ್ದರೆ ಅವರಿಗೆ ಒಂದೊಂದು ಎಕರೆ ಬರುತ್ತದೆ. ಹಿರಿಯ ಮಗನು ಎರಡು ತಿಂಗಳ ಹಿಂದೆ ಚೀನದ ರಣಭೂಮಿಯಲ್ಲಿ ಯುದ್ಧ ಮಾಡುತ್ತ ಮಡಿದ. ಅವನ ಖಡ್ಗ ತಿರುಗಿಬಂದಿದೆ. ಅದನ್ನು ಅವನು ಕಳುಹಿಸಿದ್ದಾನೆ. ಆ ಖಡ್ಗವನ್ನು ಮಂದಿರದಲ್ಲಿಟ್ಟು ಪ್ರತಿದಿನ ಪ್ರಾತಃಕಾಲದಲ್ಲಿ ನಾನು ಪೂಜಿಸುತ್ತಿರುವೆ. ನಾವು ಶಕ್ತಿಯ ಆರಾಧಕರು. ಆ ಕತ್ತಿ ನಮ್ಮ ಮನೆಯ ನಿಧಿಯು; ಅದು ನಮಗೆ ನಮ್ಮ ಪೂರ್ವಜರ ಪರಾಕ್ರಮದ ದ್ಯೋತಕವಾಗಿದೆ. ಇಂದಿಗೆ ಎಪ್ಪತ್ತು ವರ್ಷಗಳ ಹಿಂದೆ. ಈ ಆಧುನಿಕ ಜಪಾನಿನ ಸ್ಥಾಪನೆಗಾಗಿ ಆದ ಅಂತಃಕಲಹದಲ್ಲಿ ನಮ್ಮಜ್ಜ ಅದನ್ನು ತಕ್ಕೊಂಡು, ಈಶ್ವರಸ್ವರೂಪಿಯಾದ 'ಮಿಕಾಡೊ' ಸಮ್ರಾಟನ ಪರವಾಗಿ ಯುದ್ಧ ಮಾಡಿದ್ದ. ಜಪಾನ್-ರಶಿಯಾ ಯುದ್ಧದಲ್ಲಿ ನನ್ನ ತಂದೆಯು ಅದರ ಪ್ರಯೋಗಮಾಡಿದ. ಮೊದಲನೆಯ ಚೀನ್-ಜಪಾನ್ ಯುದ್ಧದಲ್ಲಿ ಅದನ್ನು ನಮ್ಮಣ್ಣ ಕೈಯಲ್ಲಿ ಹಿಡಿದುಕೊಂಡೇ ರಣರಂಗದಲ್ಲಿ ವೀರಶ್ರೀಯನ್ನು ಹೊಂದಿದ. ಈಗ 'ತುಂಗಚೌ'ದ ಯುದ್ಧದಲ್ಲಿ ನನ್ನ ಮಗನು ವೀರಗತಿಯನ್ನು ಪಡೆದ. ಇನ್ನೇನು? ಮುಂದೆ ಅದನ್ನು ನನ್ನ ಬೇರೆ ಮಕ್ಕಳು ತಕ್ಕೊಂಡು ಹೋರಾಡಬಹುದು. ಜಪಾನಿನ ಸ್ಥಿತಿಯು ಅತ್ಯಂತ ಕೀಳುತರವಾಗಿದೆ. ಯುದ್ಧ ಮಾಡದೆ ಗತಿಯೆಲ್ಲಿದೆ?............

....ನಮ್ಮ ಜನ ಹೆಚ್ಚಾಗಿ ಮಾತನಾಡಲಾರರು. ನಮಗೆ ಪ್ರಚಾರ ಮಾಡಲೂ ಬರುವುದಿಲ್ಲ. ರಾಜನೈತಿಕ ವಾರ್ತೆಯನ್ನೂ ಸಭೆಮಾಡಿ ಪ್ರಚಾರಗೊಳಿಸುವುದು ನಮಗೆ ಗೊತ್ತಿಲ್ಲ. ನಮಗೆ ಬರುವುದೊಂದೇ; ಶಸ್ತ್ರ ಹಿಡಿದು ಹೋರಾಡಿ ಕಾಳೆಗದ ಕಣದಲ್ಲಿ ವೈರಿಯನ್ನು ಕೊಲ್ಲುವುದು, ಇಲ್ಲವೆ ಅವರ ಶಸ್ತ್ರ ಹೊಟ್ಟೆಯಲ್ಲಿ ನೆಟ್ಟು ಸತ್ತು ಹೋಗುವುದು! ಇದೇ ನಮ್ಮ ಧರ್ಮ, ಇದೇ ನಮ್ಮ ಸಂಸ್ಕೃತಿ! ಮಾಡಬೇಕು, ಇಲ್ಲವೆ ಮಡಿಯಬೇಕು........"

ಜಪಾನಿನ ಇಂದಿನ ನಾಗರಿಕನೇ ಹೀಗೆನ್ನುವನೆಂದು ಭಾವಿಸಬೇಕಿಲ್ಲ; ಹಿರಿಯರು ತಮ್ಮ ತಮ್ಮ ಮಕ್ಕಳಿಗೆ ಮೊದಲಿನಿಂದಲೂ ಈ ಶಿಕ್ಷಣವನ್ನು ಕೊಡುತ್ತ ಬಂದಿದ್ದಾರೆ. ರಣರಂಗದಲ್ಲಿ ದೇಹತ್ಯಾಗ ಹಾಗೂ ಉತ್ಕಟ ದೇಶಾಭಿಮಾನ ಈ ಎರಡು ಗುಣಗಳು, ಜಪಾನಿಗಳಿಗೆ ಜಗತ್ತಿನಲ್ಲಿ ಇಂದಿನ ಹಿರಿಯಸ್ಥಾನವನ್ನು ದೊರೆಕಿಸಿಕೊಟ್ಟಿವೆ.

೫೦ ವರ್ಷಗಳಿಂದ ಅನುಭವ ಪಟ್ಟ

ಕರ್ಕಿ ಮತ್ತು ಕಂಪನಿ

ಇವರ

ಜ್ವರದ ಗುಳಿಗೆಗಳು

ಬಾಟ್ಲಿಗೆ ೧-೮-೦

ಎಲ್ಲ ಪ್ರಕಾರದ ಜ್ವರಗಳಿಗೆ ಈ ದಿವ್ಯೌಷಧ.

ವಿಳಾಸ:- **ಗಣೇಶ ರಾಮಚಂದ್ರ ಕರ್ಕಿ ಮತ್ತು ಕಂಪನಿ**

ಗಿರಗಾಂವ, ಮುಂಬಯಿ

ಜಪಾನಿಯ ಒಕ್ಕಲಿಗನು ತನ್ನ ಚಿಕ್ಕ ಮಕ್ಕಳ ಮುಂದೆ ಕೇವಲ ಹಾಸ್ಯಕ್ಕಾಗಿ:

"ಇನ್ನು ನೀವು ಹೊಲ-ಮನೆ ನೋಡಿಕೊಳ್ಳಿರಿ, ನಾನು ಯುದ್ಧಕ್ಕೆ ಹೋಗುವೆ!" ಎಂದು ನುಡಿದರೆ, ಅವರೇನೆನ್ನುವರು ಗೊತ್ತೇ?

"ನಾನಿಲ್ಲಿ ನಿಂತು ಹೊಲದಲ್ಲಿ ಕೆಲಸ ಮಾಡಲಾರೆ. ನಾನೂ 'ತೋಕಿಯೊ'ಕ್ಕೆ ಹೋಗುವೆ. ಇನ್ನೂ ಓದುವೆ, ಆಮೇಲೆ ಚೀನದಲ್ಲಿ ಹೋಗಿ ಒಂದು ವಿಶಾಲವಾದ ರಾಜ್ಯವನ್ನು ಸಂಪಾದಿಸುವೆ. ನಮಗೆ— ಜಪಾನಿಗಳಿಗಾಗಿ ಚೀನದಲ್ಲಿ ಒಂದು ವಿಶಾಲ ರಾಜ್ಯಸ್ಥಾಪನೆ ಮಾಡುವುದು ಅವಶ್ಯವಿದೆ!"

ಹುಡುಗಿಯು ಕೂಡ ಹುರುಪಿನಲ್ಲಿ "ನಾನೂ ಕೂಡ ಅಣ್ಣನಂತೆಯೇ" ಗಹಗಹಿಸಿ ನಕ್ಕು ತಂದೆ ನುಡಿಯುವ: "ನಿನ್ನನ್ನು ಈ ಮೊದಲೇ ನಿಮ್ಮ ಶಾಲೆಯ ಮುಖಾಂತರ ನೂಲುವ ಗಿರಣಿಯಲ್ಲಿ ಕೆಲಸಕ್ಕೆ ಕಳಿಸುವುದೆಂದು ನಿಶ್ಚಯವಾಗಿದೆ; ದುಡಿದುಣ್ಣಲಿಕ್ಕೆ ಅಡವಿ ಸಾಲದಿದ್ದರೆ ಮತ್ತೇನು ಮಾಡುವುದು? ಶಿಲ್ಪಕಲೆ-ಕೈಕೆಲಸಗಳನ್ನು ಮಾಡಿಯಾದರೂ ಬೆಳೆಯುತ್ತಿರುವ ಜನಸಂಖ್ಯೆಯನ್ನು ರಕ್ಷಿಸಬೇಕಲ್ಲ!" ಎಂಬ ವಿಚಾರವನ್ನು ಮಕ್ಕಳ ಮುಂದಿಡುವನು.

ಇಂದಿಗೆ ಕೆಲವು ವರ್ಷಗಳ ಹಿಂದೆ, ಒಮ್ಮೆ ದೊಡ್ಡ ಬಿರುಗಾಳಿ ಬೀಸಿತು. ರಾತ್ರಿಯ ಒಂದು ಗಂಟೆಯಾಗಿರಬಹುದು. ಸುಖನಿದ್ರೆಯಲ್ಲಿ ಮಲಗಿದ ಒಕ್ಕಲಿಗರೆಲ್ಲ ಎದ್ದರು. ಸಮುದ್ರದ ಗರ್ಜನೆ ಭಯಂಕರವಾಗಿತ್ತು; ಎಷ್ಟೋ ಮನೆಗಳ ಮೇಲಿನ ಚಪ್ಪರಗಳು ಗಾಳಿಗೆ ಎಲ್ಲಿಯೋ ಹಾರಿ ಹೋಗಿದ್ದುವು. ಗಾಳಿಯಿಂದ ಮನೆಯೆಲ್ಲ ಮಣ್ಣು ತುಂಬುತ್ತಲಿದ್ದಿತು. ಆದರೆ ಪ್ರಾತಃಕಾಲದ ವರೆಗೆ ಏನನೂ ಮಾಡಲು ಬರುವಂತಿದ್ದಿಲ್ಲ.

ಕೆಲವರು ಎದ್ದು ಎರಡನೆಯವರ ಮನೆಗೆ ಹೋದರು. ಅಲ್ಲಿಯೂ ಅದೇ ಸ್ಥಿತಿ. ಹುಡುಗರೂ ಹೆಂಗುಸರೂ ಶಾಂತರಾಗಿ ಒಂದು ಬದಿಗೆ ಕುಳಿತಿದ್ದರು. ಜಪಾನಿನ ಸ್ತ್ರೀಯರು ಅಷ್ಟು ದುಃಖಿಸುವುದಿಲ್ಲ. ಅಲ್ಲಿಯ ಸ್ತ್ರೀಯರು ಪತಿಗೆ ಭಾರವಾಗಿರುವುದಿಲ್ಲ, ಜೀವನದಲ್ಲಿ ಸಹ-

ಅಶಾಂತಿ ಪರ್ವ

ವಿಜಯನಗರದ ಐತಿಹಾಸಿಕ ಕಾದಂಬರಿ.

೨ನೆಯ ಆವೃತ್ತಿ ಇದೀಗ ಹೊರಕ್ಕೆ ಬಂದಿರುವುದು

ಬೆಲೆ ೨ರೂ. ೮ಆಣೆ.

ಈ ಕಾದಂಬರಿಯೊಂದರ ಆನಂದಕಂದರ ಅತ್ಯುತ್ತಮವಾದ ಕಲಾಕೃತಿ. ಮನೋವಿಶ್ಲೇಷಣೆಯ ತಳಹದಿಯ ಮೇಲೆ ಇಲ್ಲಿಯ ಕಥಾಪಾತ್ರಗಳು ಪರಿಪುಷ್ಟಿಗೊಂಡಿವೆ. ಕುತೂಹಲಕಾರಿಯಾದ ಸನ್ನಿವೇಶಗಳ ಮೂಲಕ, ಈ ಕಾದಂಬರಿಯನ್ನು ಒಮ್ಮೆ ಕೈಯಲ್ಲಿ ತೆಗೆದುಕೊಂಡವರು ಮುಗಿಸುವವರೆಗೆ ಕೆಳಕ್ಕಿಡರು. ವಿಜಯನಗರದ ಐತಿಹಾಸಿಕ ವಾತಾವರಣವನ್ನೂ ವ್ಯಕ್ತಿಗಳನ್ನೂ ಜನಜೀವನವನ್ನೂ ಕಣ್ಣೆದುರು ತಂದು ನಿಲ್ಲಿಸುವಂತಹ ಕಾದಂಬರಿಯಿದು.

ಬೇಕಾದವರು ‘ಜಯಂತಿ’ ಕಾರ್ಯಾಲಯಕ್ಕೆ ಬರೆದು ತರಿಸಿಕೊಳ್ಳಬೇಕು.

ಕಾರಿಗಳಾಗಿರುತ್ತಾರೆ. ಅವರು ಮುಂಜಾನೆ, ಗಂಡನು ಹಾಸಿಗೆಯಿಂದ ಏಳುವುದಕ್ಕಿಂತ ಮುಂಚಿತವಾಗಿ ಎದ್ದು, ಮುಂಜಾನೆಯ ಊಟದ ಸಿದ್ಧತೆ ಮಾಡುವರು. ಮುಂಜಾನೆಯ ಊಟಕ್ಕೆ ಅನ್ನ, ಹಣ್ಣು, ಮೀನು, ಬಿಸಿಬಿಸಿ ಜಪಾನೀ ಚಹ ಅವರೆ ತೀರಿತು. ಅಷ್ಟು ಮಾಡಿ, ಮನೆಯಲ್ಲಿ ನೆಲಕ್ಕೆ ಹಾಸಿದ ಹುಲ್ಲಿನ ಚಾಪೆಯನ್ನೂ ಗೋಡೆ (ಕಟ್ಟಿಗೆಯನ್ನೂ ಒದ್ದೆಯ ಅರಿವೆಯಿಂದ ಒರಸಿ ಸ್ವಚ್ಛ ಮಾಡುವರು. ಊಟದ ಸಲಕರಣೆಗಳಾದ ‘ಚೋಪಸ್ಟಿಕ’ (ಸಣ್ಣವೂ ಸ್ವಲ್ಪ ಅಗಲವೂ ಆದ—ತೆರೆದ ಚಾಕುವಿನಂತಹ—ಕಟ್ಟಿಗೆಯ ತುಂಡು)ಗಳನ್ನು ತೊಳೆದು ಇಡುವರು. ಹೊತ್ತಿಗೆ ಸರಿಯಾಗಿ ಪತಿಗೂ, ಮಕ್ಕಳಿಗೂ ಊಟಕ್ಕೆ ಹಾಕಿ, ಅವರವರ ಕೆಲಸಕ್ಕೆ ಕಳಿಸುವುದು ಅಲ್ಲಿಯ ಸ್ತ್ರೀಯರ ಪರಿಪಾಠ. ಇದರಂತೆ ಅತಿಥಿ ಸತ್ಕಾರದಲ್ಲಿಯೂ ಅಲ್ಲಿಯ ಸ್ತ್ರೀಯರು ಒಳ್ಳೆ ಚತುರರು. ಇಷ್ಟು ಮುಂದುವರಿದ ರಾಷ್ಟ್ರವಾದರೂ ಅಲ್ಲಿಯ ಸ್ತ್ರೀಯರು ಇನ್ನೂ ಮನೆಗೆ ಬಂದ ಅತಿಥಿಗಳಿಗೆ ಅಂತಃಕರಣ ಪೂರ್ವಕವಾಗಿ ಸಾಷ್ಟಾಂಗ ನಮಸ್ಕಾರ ಮಾಡಿದ ಹೊರತು, ಸಮಾಧಾನ ತಾಳುವುದಿಲ್ಲ. ಈ ರೀತಿ ಅಲ್ಲಿಯ ಹೆಂಗುಸರು ಸುಸಂಸ್ಕೃತರಾದುದರಿಂದ ಬಿರುಗಾಳಿ, ಭೂಕಂಪದಂತಹ ಕಠಿಣ ಪ್ರಸಂಗಗಳಲ್ಲಿ ಎಲ್ಲರೂ ಶಾಂತ ರೀತಿಯಿಂದ ವರ್ತಿಸುತ್ತಾರೆ. ಅದೇ ಅವರ ಶಿಕ್ಷಣ, ಅದೇ ಅವರ ನೀತಿ, ಅದೇ ಅವರ ಜೀವನ, ಅದೇ ಅವರ ಆದರ್ಶ ಮತ್ತು ಉದಯ.

ಬೆಳಗಾಯಿತು, ಸುತ್ತಲೂ ನೋಡುತ್ತಾರೆ: ಭೂಮಿಯೆಲ್ಲ ಜಲಮಯವಾಗಿದ್ದಿತು. ಬಿರುಗಾಳಿಯ ಹೊಡೆತಕ್ಕೆ ಸಮುದ್ರರಾಜ ಸಿಟ್ಟಾಗಿದ್ದ. ಪೃಥ್ವಿಯು ಬಲಹೀನವಾದುದರಿಂದ ಆಳಲು ಬಯಸುತ್ತಿದ್ದ. ವರ್ಷಾನುವರ್ಷ ದುಡಿದು, ಸಿದ್ಧಗೊಳಿಸಿದ ಬೆಳೆಯನ್ನು ಒಂದೆರಡು ತಾಸಿನಲ್ಲಿಯೆ ನುಂಗಿಬಿಟ್ಟ. ಇದೀಗ ಸಮುದ್ರದ ಪ್ರವಾಹ ಹಿಂದಿರುಗುವುದರಲ್ಲಿತ್ತು. ಇನ್ನು ಆ ಭೂಮಿಯನ್ನು ಬೇಸಾಯಕ್ಕೆ ಸಿದ್ಧಗೊಳಿಸಬೇಕಾದರೆ ಒಂದು ವರ್ಷ ಹಿಡಿಯುವುದು! ಎಲ್ಲ ಅಡವಿಯೂ ನೀರಿನಿಂದ ಸಮನಾದುದರಿಂದ, ಊರು ಹೊಲ ಎಲ್ಲಿ ಎಂಬುದನ್ನು ಗುರುತಿಸುವುದೂ ಕಠಿನವಾಗಿತ್ತು.

ಹೆಣ್ಣು ಮಕ್ಕಳು ಮುಂಜಾನೆಯ ಊಟದ ಸಿದ್ಧತೆ ಮಾಡಹತ್ತಿದರು. ಇಂತಹ ಪ್ರಸಂಗದಲ್ಲಿಯೂ ಅವರು ಗಂಡುಸರಿಗೆ ಹೇಳಹತ್ತಿದರು: “ಅಡಿಗೆಯ ಚಿಂತೆಯನ್ನು ನೀವು ಮಾಡಬೇಡಿ; ಈಗ ಮೀನು ಒಂದೇ ನಮ್ಮ ಆಹಾರ. ಅದನ್ನು ಒಂದು ತಾಸಿನೊಳಗಾಗಿ ಸಿದ್ಧಗೊಳಿಸುವೆವು!”. ಪಾಪ! ಕೇವಲ ಮೀನೊಂದನ್ನು ಕುದಿಸಿ ತಿನ್ನಬೇಕಾದರೆ ಅದಕ್ಕೊಂದು ಮಸಾಲೆಯಾದರೂ ಬೇಡವೆ? ಎಲ್ಲ ಕಡೆಗೂ ಕೇಳಿದಾಗ ಎರಡು ‘ಯೆನ್’ ಮಾತ್ರ ದೊರೆತುವು. ಅವುಗಳಿಂದ ಇನ್ನು ಮಸಾಲೆ ತರಬೇಕು. ಇದೊಂದು ಉದಾಹರಣೆ. ಜಪಾನಿನಲ್ಲಿ ಒಕ್ಕಲಿಗರ ಜೀವನ ಮೊದಲೇ ಕಷ್ಟಕರವಾದುದು; ಅದರಲ್ಲಿ ಪ್ರಕೃತಿಯ ಪ್ರಕೋಪ; ಹುಣ್ಣಿನ ಮೇಲಿನ ಬರೆ. ಆದರೂ ಜಪಾನಿ ಜನರಲ್ಲಿ ಸಹನಶೀಲತೆ ಅಪೂರ್ವವಾಗಿದೆ. ಇಂತಹ ಪ್ರಸಂಗಗಳಲ್ಲಿ ಅವರು ‘ಶಿಕಾತಾಗಾನಾಈ’ (ನಮ್ಮ ಕೈಯೊಳಗಿನದಲ್ಲ, ಏನು ಮಾಡುವುದು) ಎಂದು ಹೇಳಿ ಸಮಾಧಾನ ಹೊಂದುತ್ತಾರೆ.

ಜಪಾನಿಗಳು ಇಷ್ಟು ಸಹನಶೀಲರಿದ್ದೂ ಅವರಿಗೆ ಪ್ರಕೃತಿಯು ವಿರುದ್ಧ ಹೋಗುತ್ತದೆ, ಅದರಿಂದ ಅವರು ಪ್ರಕೃತಿಯ ಕೂಡ ಹೋರಾಡಬೇಕಾಗುತ್ತದೆ. ಅದಕ್ಕಾಗಿ ಅಲ್ಲಿಯ ಒಕ್ಕಲಿಗರಿಗೆ ಸಾಲವಾಗುತ್ತದೆ. ಇಂದು ಪ್ರತಿಯೊಬ್ಬ ಜಪಾನೀ ಒಕ್ಕಲಿಗನ ತಲೆಯ ಮೇಲೆ ಒಂದು ಸಾವಿರ ‘ಯೆನ್’ ಸಾಲದ ಹೊರೆಯಿರುತ್ತದೆ. ಇದನ್ನೆಲ್ಲ ಅವರು ಶಾಂತರೀತಿಯಿಂದ ಸಹನ ಮಾಡಿಕೊಳ್ಳುತ್ತಾರೆ. ಯಾಕೆ? ಅವರ ಮುಂದೆ ಇವೆಲ್ಲಕ್ಕೂ ಮಿಗಿಲಾದ ರಾಷ್ಟ್ರದ ಪ್ರಶ್ನೆಯೊಂದು ಹಗಲಿರುಳೂ ನಿಂತಿರುತ್ತದೆ. ಅವರು ಕಲಿತವರಿದ್ದಾರೆ. ತಿಳಿದವರಿದ್ದಾರೆ. ಸಂಪೂರ್ಣ ಜಗತ್ತಿನ ಸ್ಥಿತಿ-ಗತಿಯನ್ನು ಅರಿತವರಿದ್ದಾರೆ. ಆ ಕಾರಣ ಅವರ ಎದುರಿಗೆ ಅನ್ಯಮಾರ್ಗವೊಂದಿದ್ದರೆ ಅದು ಕತ್ತಿ ಹಿಡಿದು ರಣಕ್ಷೇತ್ರದಲ್ಲಿ ಹೋರಾಡಿ ಮಡಿಯುವುದೊಂದೇ. ನಿಜವಾಗಿ ಶಸ್ತ್ರವೊಂದೇ ಅವರ ಜೀವನವಾಗಿದೆ. ಅವರು ಶಸ್ತ್ರದಿಂದ ಭೂಮಿಯನ್ನು ಗೆದ್ದು ಬದುಕಬೇಕು, ಇಲ್ಲವೆ ಭೂಮಿಯೊಡನೆ ಹೋರಾಡಿ ಬದುಕಬೇಕು. ಇದೇ ಅವರು ಇಂದು ಸಮರಸನ್ನದ್ಧರಾದವಕೆ ಕಾರಣವಾಗಿದೆ. ಅವರ ಈ ಮನಸ್ಥಿತಿಯನ್ನರಿತುಕೊಂಡು, ಭಾರತದ ಮೇಲೆ ಏರಿಬರಲು ಆಶಿಸುತ್ತಿರುವ ಅವರನ್ನು, ಯುಕ್ತ ಉಪಾಯಗಳಿಂದ ಎದುರಿಸಿ, ನಮ್ಮ ತಾಯಿನಾಡನ್ನು ನಮಗಾಗಿ ಸಂರಕ್ಷಿಸಿಕೊಳ್ಳಬೇಕಾಗಿದೆ.

ವ್ಯಕ್ತಿ ಮತ್ತು ಸಮಾಜ

ಶ್ರೀ. ನಾಡಿಗೇರ ಲಕ್ಷ್ಮಣರಾಯರು ಬಿ. ಎ. ಬಿ. ಟಿ. ಧಾರವಾಡ

(ಶೈಕ್ಷಣಿಕ ವಿಚಾರ)

ಮಾನವನ ಕೃತಿಗಳಲ್ಲಿ ಮುಖ್ಯವಾಗಿ ಎರಡು ತೆರಗಳಿರುವವು. ಒಂದು ಸ್ವಾರ್ಥಪರ, ಇನ್ನೊಂದು ಪರಾರ್ಥಪರ. ಮೊದಲನೆಯದು ಆತ್ಮಸಂರಕ್ಷಣೆಯ ಕಡೆಗಿರುವ ಸಹಜ ಪ್ರೇರಣೆಯಾದರೆ, ಎರಡನೆಯದು ಸ್ವಾರ್ಥವನ್ನು ಹತ್ತಿಕ್ಕಿ ಪರರಿಗೆ ನೆರವನ್ನು ಕೊಡುವುದಾಗಿದೆ. ಪರಿಸ್ಥಿತಿ ಮತ್ತು ಶಿಕ್ಷಣಗಳಿಗನುಗುಣವಾಗಿ ಎರಡೂ ನೈತಿಕ ಇಲ್ಲವೆ ಅನೈತಿಕಗಳಾಗಬಹುದು. ಮೊದಲನೆಯದು ಸ್ವಸಮರ್ಥನೆ ಇಲ್ಲವೆ ಸ್ವಾರ್ಥದಲ್ಲಿ ಲೀನವಾಗುತ್ತಿದ್ದರೆ, ಎರಡನೆಯದು ತ್ಯಾಗ ಇಲ್ಲವೆ ಭಾವನಾಪ್ರಧಾನತೆಯಲ್ಲಿ ಪರಿಣಮಿಸುವುದು. ಮನುಷ್ಯರಲ್ಲಿಯಂತೆ, ಸ್ವಾರ್ಥವು ಪಶುಗಳಲ್ಲಿಯೂ ಕಂಡುಬರುತ್ತದೆ. ಅದು ಪಶುಗಳಲ್ಲಿ ಸ್ಥಿರವಾಗಿ ನೆಲೆ ನಿಂತಿರುತ್ತದೆ; ಭಗೀರಥ ಪ್ರಯತ್ನ ನಡೆಯಿಸಿದರೂ ಅದನ್ನು ತೊಡೆದುಹಾಕಲು ಸಾಧ್ಯವಿಲ್ಲ. ಮಾನವರಲ್ಲಿಯ ಸ್ವಾರ್ಥತೆಯ ಮಾತು ಹಾಗಲ್ಲ; ಯೋಗ್ಯ ಶಿಕ್ಷಣ ಕೊಟ್ಟು-ಎಷ್ಟೋ ಸಲ-ಅದನ್ನು ತೊಡೆದು ಹಾಕಬಹುದು. ಮನುಷ್ಯರ ಬೆಳೆವಣಿಗೆಗಾಗಿ ಈ ಎರಡೂ ಮೂಲ ಉದ್ದೇಶಗಳು ಅತ್ಯವಶ್ಯ; ನಿಯಮಿತವಾಗಿ ಮತ್ತು ಏಕಕಾಲಿಕವಾಗಿ ಇವು ಪರಿಪೂರ್ಣತೆ ಹೊಂದಲು ಪ್ರಯತ್ನಿಸಬೇಕು.

ವೈಯಕ್ತಿಕ ನೋಟ—ಈಗ ದೊರಕುವ ಲೌಕಿಕ ಶಿಕ್ಷಣವು ಸಾಮಾಜಿಕ ಸಮಸ್ಯೆಗಳಿಗಾಗಿ ತಟಸ್ಥವೃತ್ತಿಯನ್ನು ತಾಳಿದೆ. ನಮ್ಮ ಶಾಲೆಗಳಲ್ಲಿ ಹುಡುಗರಿಗೆ ಅವರವರ ಹಿತಸಂಬಂಧಗಳಿಗೆ ಬೇಕಾಗುವ ಶಿಕ್ಷಣವಷ್ಟೇ ಕೊಡಲ್ಪಡುತ್ತದೆಯಲ್ಲದೆ, ಸಾಮಾಜಿಕ ಕರ್ತವ್ಯ ಮತ್ತು ಹಕ್ಕು-ಬಾಧ್ಯತೆಗಳ ಸಂಬಂಧವಾದ ಶಿಕ್ಷಣವು ಕೊಡಲ್ಪಡುವುದಿಲ್ಲ. ಬಾಲಕರ ಲಕ್ಷ್ಯವು ನೇರವಾಗಿ ವೈಯಕ್ತಿಕ ಹಿತಗಳ ಕಡೆಗೆ ಎಳೆಯಬಾರದು; ಸಾರ್ವಜನಿಕ ಹಿತಗಳ ಕಡೆಗೂ ಎಳೆಯಬೇಕು. ಉಪವಿಷಯವಾಗಿ ಶಿಕ್ಷಣಕೊಡುವ ಇಂತಹ ಪ್ರಯತ್ನವೂ— ಒಂದೂ ಎಲ್ಲಿಯೂ-ನಮ್ಮಲ್ಲಿ ನಡೆದಿರುವುದಿಲ್ಲ. ಎಲ್ಲರೂ ಮೊದಲಿಗೆ ಇಚ್ಛಿಸುವುದು ಪರೀಕ್ಷೆಯಲ್ಲಿ ಮೇಲಿನ ಸ್ಥಾನ; ಅನಂತರ ಒಳ್ಳೆಯ ನೌಕರಿ! ಅಂತಹವನಿಗೆ ಸ್ವಂತದ ಹಿತವೇ ಸಮಾಜದ ಮತ್ತು ನಾಡಿನ ಹಿತಗಳಿಗಿಂತ ಹೆಚ್ಚಿನದು. ಮಾನವನು, ತನ್ನ ವಿಜಯ, ತನ್ನ ಅಧಿಕಾರ, ತನ್ನ ಗಳಿಕೆ, ತನ್ನ ಸಂಸ್ಕೃತಿ, ತನ್ನ ಸೌಖ್ಯ, ತನ್ನ ಹಿತ-ಹೀಗೆ ಎಲ್ಲ ತನ್ನವುಗಳಲ್ಲಿಯೆ ಮಗ್ನನಾಗಿರುವನು. ಸಂಸ್ಥೆಗಳು ಕೂಡ ಪರೀಕ್ಷೆಗಳಲ್ಲಿ 'ನಮ್ಮ ಪರೀಕ್ಷೆಯ ಪರಿಣಾಮ ನೂರಕ್ಕೆ ಇಷ್ಟು ಆಯಿತು, ಅಷ್ಟು ಆಯಿತು! ನಮ್ಮ ಹುಡುಗಿ ಇಲ್ಲವೆ ಹುಡುಗ ಒಂದನೆಯ ಇಲ್ಲವ ಎರಡನೆಯ ಸ್ಥಾನಗಳಿಸಿದ್ದಾಳೆ-ನೆ' ಎಂದು ಹೆಮ್ಮೆ ಕೊಚ್ಚಿಕೊಳ್ಳುತ್ತವೆ. ಆದರೆ ಮುಂದೇನು ? ಪರೀಕ್ಷೆಗಳಲ್ಲಿ ಮೇಲಿನ ಸ್ಥಾನ ಗಳಿಸಿದ ಅಂಥವರನ್ನು ಉತ್ತಮ ನಾಗರಿಕರನ್ನಾಗಿಮಾಡಲು ಯಾವ ಉಪಾಯ ಕೈಕೊಂಡಿರುವಿರಿ ? ಕೊನೆಗೊಮ್ಮೆ ನೀವು ಅವರೆದುರಿನಲ್ಲಿ ಕೆಲವು ಆದರ್ಶ ಉದ್ದೇಶಗಳನ್ನಾದರೂ ಇಟ್ಟಿರುವಿರಾ ? ತಾನಿದ್ದ ಸಮಾಜದಲ್ಲಿ 'ತನ್ನದೂ ಒಂದಿಷ್ಟು ಕೆಲಸವಿದೆ' ಎಂದು ಅವನು ತಿಳಿದುಕೊಳ್ಳಲಿ. ಸಮಾಜದ ಹಿತಸಂಬಂಧಗಳು ತನ್ನ ಹಿತಸಂಬಂಧಗಳಿಗೆ ಪೂರಕಗಳಾಗಿರುವುವೆಂದು ಮನವರಿಕೆ ಮಾಡಿಕೊಳ್ಳಲಿ!

ಸಂಘಗಳಿಂದ ಬೇರ್ಪಟ್ಟು ಒಬ್ಬ ವ್ಯಕ್ತಿ ಜೀವಿಸಿರುವುದೂ,ಬೆಳಗೆ ಹೊಂದುವುದೂ ಕಲ್ಪನೆಗೂ ಕಾಣದುದು. ಸಮಾಜವನ್ನುಳಿದು ಪ್ರತ್ಯೇಕವಾಗಿ ಬಾಳುತ್ತೇನೆಂದು ಒಬ್ಬ ವ್ಯಕ್ತಿ ಬಯಸಿದರೆ, ಅದು ಅಶಕ್ಯ! ಅವನಿಗೆ ಸಮಾಜ ಬಿಟ್ಟು ಬೇರೆ ಗತಿಯೇ ಇಲ್ಲ! ಸಮಾಜವೇ ಅವನುಸಿರು. ವ್ಯಕ್ತಿಯ ಮೇಲೆ ಸಮಾಜಕ್ಕೆ ಕೆಲವೊಂದು ಅಧಿಕಾರಗಳಿರುತ್ತವೆ. ಸಮಾಜಕ್ಕೆ ಹೊಂದಿಕೊಂಡು, ಅದಕ್ಕೆ ಸಹಾಯವಾಗುವಂತೆ ನಡೆದುಕೊಳ್ಳಲು ವ್ಯಕ್ತಿಗೆ ಕಲಿಸಬೇಕು. ಆಳವಾಗಿ ವಿಚಾರಿಸಿದರೆ ವ್ಯಕ್ತಿಯ ಹಕ್ಕುಗಳು ಸಮಾಜದಲ್ಲಿ ಲೀನವಾಗಿರುವುದು ನಮಗೆ ಕಂಡುಬರುವುದು. ಆದುದರಿಂದ ಶಿಕ್ಷಣಕ್ಕೆ ಎರಡು ಮುಖ್ಯಗುರಿಗಳು :—ಒಂದು, ವ್ಯಕ್ತಿಯ ಪೂರ್ಣತೆ; ಇನ್ನೊಂದು, ಸಮಾಜದ ಒಳಿತು. ವ್ಯಕ್ತಿ ಸಮಾಜದಲ್ಲಿ ತಾನು ಪರಿಪೂರ್ಣನಾಗಿ, ಸಮಾಜದ ಒಳಿತಿಗಾಗಿ ನೆರವು ಈಯುವುದೇ ಒಟ್ಟಾರೆ ಶಿಕ್ಷಣದ ಮುಖ್ಯ ಉದ್ದೇಶವಾಗಿರುತ್ತದೆ.

ವೈಯಕ್ತಿಕ ಯೋಗ್ಯತೆ :—

ವ್ಯಕ್ತಿಗೆ ಸಮಾಜದಲ್ಲಿ ಭಾಗವಹಿಸಲು—ಅವನ ಯೋಗ್ಯತೆಗೆ ತಕ್ಕಂತೆ—ಅನುಕೂಲತೆಗಳನ್ನು ಶಿಕ್ಷಣವು ಕಲ್ಪಿಸಿಕೊಡಬೇಕು. ಬೇರೆ ಶಬ್ದಗಳಲ್ಲಿ ಹೇಳುವುದಾದರೆ, ಅವನು ಮೊದಲು ವೈಯಕ್ತಿಕ ಯೋಗ್ಯತೆಯಲ್ಲಿ ಶಿಕ್ಷಣಪಡೆದಿರಬೇಕು. ಇದೇ ಯಾವತ್ತೂ ನಾಗರಿಕತೆಯ ಶಿಕ್ಷಣಗಳ ತಳಹದಿ. ಯಾಕೆಂದರೆ ಈ ಉದ್ದೇಶಸಾಧನೆಗೆ ಪ್ರಾಮಾಣಿಕತನ, ಪರಿಶ್ರಮ, ದೃಢಮನಸ್ಸು, ಶಮ-ದಮ, ಹೊಣೆಗಾರಿಕೆ, ಸಾಹಸಜೀವನಕ್ಕೆ ತಕ್ಕ ಶ್ರದ್ಧೆ ಮುಂತಾದ ಪ್ರಾಥಮಿಕಗುಣಗಳು ಬೇಕೇ ಬೇಕು. ಈ ಎಲ್ಲ ಗುಣಗಳು ಯಾವತ್ತೂ ಮೇಲ್ತರಗತಿಯ ನೈತಿಕ ಶಿಕ್ಷಣದ ತಳಹದಿಗಳೆಂದು ಎಣಿಸಲ್ಪಡುತ್ತವೆ. ಇವುಗಳಿಂದಲೇ ಸಮಾಜದ ಹಿತವನ್ನು ಬಯಸುವ, ಪೌರಸದ್ಗುಣ, ಆತ್ಮಸಂಯಮನ ನ್ಯಾಯ ಮತ್ತು ಶ್ರದ್ಧೆಗಳು ಬೆಳೆಯಿಸಲ್ಪಡುತ್ತವೆ; ಈ ಎರಡನೆಯ ಗುಣಗಳು ಮೊದಲನೆಯವುಗಳಿಂದಲೆ ಮೊಳಕೆಯೊಡೆದು, ಅವುಗಳ ಗತಿಯಲ್ಲಿಯೆ ಮುಂದೆ ಸಾಗುತ್ತವೆ. ಆದುದರಿಂದ ಮಹತ್ತರವಾದ ನೈತಿಕ ಶಿಕ್ಷಣವು ವ್ಯಕ್ತಿಯೋಗ್ಯತೆಯ ಶಿಕ್ಷಣದೊಂದಿಗೆ ನಿಕಟ ಸಂಬಂಧದ್ದಾಗಿ ಬೆಳೆಯಬೇಕು. ಇಲ್ಲಿ ಒಂದು ವಿಷಯದ ಕಡೆಗೆ ಲಕ್ಷ್ಯವೀಯಬೇಕಾಗುವುದು. ಈ ವೈಯಕ್ತಿಕ ಯೋಗ್ಯತೆ ಶಿಕ್ಷಣದ ಕೊನೆಯಗುರಿಯೆಂದು ತಿಳಿಯದೆ, ಅದು ಶಿಕ್ಷಣವನ್ನು ಪಡೆಯುವ ಸಾಧನೆಯೆಂದು ಮಾತ್ರ ತಿಳಿಯಬೇಕು.

ಸಾಮಾಜಿಕ ಯೋಗ್ಯತೆ :—

ತನ್ನ ಉದ್ಯೋಗವನ್ನು ಮನಮುಟ್ಟಿ ಸಾಗಿಸಿಕೊಂಡು ಹೋಗಲಿಕ್ಕೂ, ಅದರೊಂದಿಗೆ ತನ್ನ ಪಾಲಿಗೆ ಬಂದ ನಾಗರಿಕಕರ್ತವ್ಯಗಳನ್ನೂ ಬುದ್ಧಿಮತಿಕೆ ಮತ್ತು ತಿಳಿವಳಿಕೆಯಿಂದ ಸಾಗಿಸಿಕೊಂಡು ಹೋಗ

ಲಿಕ್ಕೂ ಪ್ರತಿಯೊಬ್ಬನಿಗೆ ಶಿಕ್ಷಣವು ಮಾರ್ಗದೋರಬೇಕು. ಮೊದಮೊದಲಿಗೆ ವ್ಯಕ್ತಿ ಒಂದಿಲ್ಲೊಂದು ಉದ್ಯೋಗ ಕೈಕೊಳ್ಳಲಿಕ್ಕೆ ಅರ್ಹನಾಗುವಂತೆ ಶಿಕ್ಷಣ ಹೊಂದಬೇಕು; ಅದೇ ಕಾಲದಲ್ಲಿ ಈ ಶಿಕ್ಷಣದ ಜೊತೆಗೆ ಎಲ್ಲ ಉದ್ಯೋಗಗಳನ್ನೊಳಗೊಂಡ ನಾಗರಿಕ ಸಮಾಜದ ಸದಸ್ಯನಾಗಲು ಅರ್ಹನನ್ನಾಗಿ ಮಾಡುವ ಶಿಕ್ಷಣವನ್ನೂ ಆರಂಭಿಸಬೇಕು. ವ್ಯಕ್ತಿಯ ಸಾಮಾಜಿಕ ಯೋಗ್ಯತೆಯೇ ನಮ್ಮ ಶಿಕ್ಷಣದ ಗುರಿಯಾಗಿರಬೇಕು. ಸಾಮಾಜಿಕ ಯೋಗ್ಯತೆಯೆಂದರೇನು? ಅದರಲ್ಲಿಯೂ ಎರಡು ತೆರ: ವ್ಯಕ್ತಿಯ ಯೋಗ್ಯತೆ ಮತ್ತು ನೀತಿ. ಒಂದನೆಯದಾಗಿ, ಸಮಾಜಕ್ಕೆ ಭಾರವಾಗದಂತಹ, ಬೇರೆ ಶಬ್ದಗಳಲ್ಲಿ ಹೇಳುವುದಾದರೆ- ತನ್ನ ಕಾಲುಗಳ ಮೇಲೆ ನಿಲ್ಲಲು ಪಾತ್ರನಾದಂತಹ ಮನುಷ್ಯನು ಸಾಮಾಜಿಕ ಜೀವನಕ್ಕೆ ತಕ್ಕವನು. ಅಂತಹ ವ್ಯಕ್ತಿ ತನ್ನ ಅನ್ನವನ್ನು ತಾನೇ ಗಳಿಸಿಕೊಳ್ಳಲು ಯೋಗ್ಯತೆಯುಳ್ಳವನಾಗಿರಬೇಕು. ಎರಡನೆಯದಾಗಿ, ತನ್ನ ಕಾಲುಗಳ ಮೇಲೆ ತಾನು ನಿಲ್ಲುವುದಲ್ಲದೆ, ಸಾಧ್ಯವಿದ್ದ ಮಟ್ಟಿಗೆ ಎರಡನೆಯವರ ಗೊಡವೆಗೆ ಹೋಗದವನು ಸಾಮಾಜಿಕ ಜೀವನಕ್ಕೆ ಇನ್ನೂ ಹೆಚ್ಚಾಗಿ ತಕ್ಕವನು. ಈತನು ಪರರಿಗೆ ಕೇಡು ಬಯಸದ ನೀತಿವಂತನಾಗಿ, ಇತರರ ಹಕ್ಕು-ಬಾಧ್ಯತೆಗಳನ್ನು ಮಾನ್ಯಮಾಡುತ್ತಿರಬೇಕು. ಮೂರನೆಯದಾಗಿ, ಮೇಲಿನ ಎರಡೂ ಆವಶ್ಯಕತೆಗಳನ್ನು ಪೂರೈಸುವುದಲ್ಲದೆ, ತನ್ನ ಬಲವನ್ನು ವಿವೇಕಪೂರ್ಣವಾಗಿಯೂ ಸ್ಥಿರವಾಗಿಯೂ, ಸಾಮಾಜಿಕ ಬಲಗಳ ಅಭಿವೃದ್ಧಿಗೆ ಧಾರೆಯೆರೆಯುವವನು, ಸಾಮಾಜಿಕ ಜೀವನಕ್ಕೆ ತುಂಬ ಯೋಗ್ಯನೆನ್ನಿಸುವನು. ಈತನು ಪರರಿಗೆ ಒಳಿತನ್ನುಂಟು ಮಾಡುತ್ತ ನೀತಿವಂತನಾಗಿರಬೇಕು; ತನ್ನ ಸಂಗಡಿಗರಾದ ಕೆಲಸಗಾರರಿಗೆ ಕೆಡಕು ಬಯಸಬಾರದಷ್ಟೇ ಅಲ್ಲ, ಅವರ ಮುಂದಿನ ಏಳ್ಗೆಗಾಗಿ ಸಹಾಯ ಮಾಡುತ್ತಿರಬೇಕು. ಆದುದರಿಂದ ವಿವೇಕಪೂರ್ಣವಾಗಿ ಏರ್ಪಡಿಸಿದ ವಿದ್ಯಾಭ್ಯಾಸಕ್ರಮವು ಮಕ್ಕಳಸ್ವಭಾವ ಮತ್ತು ಸಮಾಜದ ಕೊರತೆ ಈ ಎರಡೂ ಶಕ್ತಿಗಳ ಫಲಿತಶಕ್ತಿಯಾಗಬೇಕು.

ಸಾರ್ವಜನಿಕ ಸ್ವಭಾವ ಬೆಳೆಯುವುದು ಸಾರ್ವಜನಿಕ ಚಟುವಟಿಕೆಗಳಲ್ಲಿ ಭಾಗವಹಿಸುವುದರಿಂದಲೇ; ಈಗ ಏನು ನಡೆಯುತ್ತದೆ? ಮುಂದೆ ಏನು ನಡೆಯುವುದು? ಎಂಬುವುಗಳ ಕಡೆಗೆ ನಮ್ಮ ಬಾಲಕರು ಉದಾಸೀನರಾಗಿರಬಾರದು. ಇಂದಿನ ಕಾರ್ಯ, ಮತ್ತು ಮುಂದಿನ ಜೀವನದ ಮುಹದಾರಿ ಮತ್ತು ಹೊಣೆಗಾರಿಕೆ ಇವುಗಳಲ್ಲಿ ಅವರು ಪಾಲುಗಾರರಾಗಬೇಕು. ವಿಚಾರವಿಕಾಸ, ಸಾರ್ವಜನಿಕ ಜೀವನದ ಸ್ಪರ್ಶ ಎರಡೂ ಹೆಚ್ಚಾಗಿ ಪ್ರಾಥಮಿಕ ಶಾಲೆಗಳಲ್ಲಿ ಬೆಳೆದಿರುವುದಿಲ್ಲ. ಆಗಿನ್ನೂ ಬಾಲಕನಲ್ಲಿ ತಾನೊಬ್ಬ ಸಮಾಜದ ಜಾಗೃತಸದಸ್ಯನೆಂಬ ಅರಿವು ಮೊಳೆತಿರುವುದಿಲ್ಲ. ಅದನ್ನು ನಾವು ಮಗುವಿನಲ್ಲಿ ಮೊಳೆಯಿಸಲು ಜಯಶೀಲರಾದರೆ, ನಮ್ಮ ಶಿಕ್ಷಣಧ್ಯೇಯವು ಅಗಣಿತ ಮಹತ್ತ್ವದ್ದಾಗುವುದು. ಒಮ್ಮೆ ಈ ಭಾವನೆ ಮೊಳೆತು ಮರವಾದರೆ, ಅವನನ್ನು ಜ್ಞಾನ-ಯೋಗ್ಯತೆಗಳನ್ನು ಪಡೆಯಲಿಕ್ಕೆ ಹುರಿದುಂಬಿಸುತ್ತ ಮತ್ತು ನೈತಿಕಬಲವನ್ನು ಇಡೀ ಜನಾಂಗದ ಹಿತಕ್ಕಾಗಿ ಹೆಣಗುವ ಶಕ್ತಿಯನ್ನು ಬೆಳೆಯಿಸುತ್ತ, ಅದು ಅವನ ಕೊನೆಯ ದಿನಗಳ ವರೆಗೆ ಉಳಿಯುವುದು.

ಪೌರ ಶಿಕ್ಷಣ:—

ಇಂದು ಇಡಿ ಜಗತ್ತಿನ ಮೇಲಿರುವ ಹೆಂಗಸರೂ ಗಂಡಸರೂ ಕೂಡಿಯೆ, ತಮ್ಮ ನಾಡುಗಳ ಮಂಗಲಕರವಾದ ಉಜ್ವಲ ಅಭ್ಯುದಯಕ್ಕಾಗಿ ಕನಸುಕಾಣುತ್ತಾರೆ. ಆದರೆ ಅಭ್ಯುದಯ ಬರಿಯ ಕನಸು ಕಾಣುವುದರಿಂದ ದೊರೆಯಲಾರದು. ಬಲಿಷ್ಠವಾದ ಮತ್ತು ಅತ್ಯಂತ ಆಗತ್ಯವಾಗಿರುವ ಅತ್ಯುತ್ತಮ ವಸ್ತುಗಳ ಒಡೆತನಕ್ಕಾಗಿ ನಡೆದ ಕದನಕ್ಕೆ, ಪ್ರಾವೀಣ್ಯತೆ ಪಡೆದು ಸಿದ್ಧರಾಗಬೇಕು. ನಮ್ಮ ಬಾಲಕರಿಗೆ ಶಾಲೆಗಳನ್ನು ಬಿಟ್ಟಾಗ, ಪೌರಸಮಸ್ಯೆಗಳಲ್ಲಿ ಒಂದಿಷ್ಟಾದರೂ ಲವಲವಿಕೆ ಇರುವುದಿಲ್ಲ; ಅದರಂತೆಯೆ ನಾಡಿನ ರಚನೆಯ ಕಾರ್ಯ, ರಾಜ್ಯಘಟನೆಯ ಉದ್ದೇಶಗಳಲ್ಲಿ ಅವರು ಸಂಪೂರ್ಣ ಅಜ್ಞಾನಿಗಳಾಗಿರುತ್ತಾರೆ. ತನ್ನ ನಾಡಿನ ಕರ್ತವ್ಯಗಳನ್ನು ಅರಿವುಮಾಡಿಕೊಡುವ ಮತ್ತು ತನ್ನ ಯೋಗ್ಯತೆಗನುಗುಣವಾಗಿ ನಾಡರಚನೆಯಲ್ಲಿ ನೆರವೀಯುವ ಸಾಮರ್ಥ್ಯವುಳ್ಳವನನ್ನಾಗಿಯೂ, ಇಚ್ಛೆಯುಳ್ಳವನನ್ನಾಗಿಯೂ ಮಾಡುವ ಶಿಕ್ಷಣವನ್ನೇ ಪ್ರತಿಯೊಬ್ಬ ನಾಡಿಗನು ಪಡೆಯಬೇಕು. ಅವನು ಜೀವನದ ಯಾವುದೇ ಕ್ಷೇತ್ರದಲ್ಲಿರಲಿ, ಎಷ್ಟೇ ಅಲ್ಪನಾಗಿರಲಿ, ನಾಡನ್ನು ರಾಷ್ಟ್ರವನ್ನಾಗಿ ಮಾಡುವ ಬಿತ್ತರದ ಸಾಮಾಜಿಕ ವ್ಯವಸ್ಥೆಯಲ್ಲಿ ತಾನೊಂದು ಅತ್ಯವಶ್ಯವಾದ ಕಟ್ಟೆಂದು ತಿಳಿಯಬೇಕು. ನಾಡಿನ ಘನತೆ ಸರಾಸರಿ ಒಳ್ಳೆಯ ಮನುಷ್ಯರನ್ನು ಅವಲಂಬಿಸಿರುವುದೇ ಹೊರತು, ಬಟ್ಟಿನಿಂದ ತೋರಿಸಬಹುದಾದ ಒಬ್ಬಿಬ್ಬರು ದೊಡ್ಡ ಮನುಷ್ಯರನ್ನಲ್ಲವೆಂದು ಪ್ರತಿಯೊಬ್ಬನೂ ತಿಳಿಯಬೇಕು.

ನಮ್ಮ ವಿದ್ಯಾರ್ಥಿಗಳಿಗೆ, ಬಾಲ್ಯದಿಂದಲೇ ಪ್ರಜಾಪ್ರಭುತ್ವದ ಬಗ್ಗೆ ಹಲಕೆಲವು ವಿಚಾರ, ಜ್ಞಾನ ಮತ್ತು ಅನುಭವಗಳು ದೊರೆಯುವಂತೆ ಉಪದೇಶಿಸಬೇಕು. ಇಲ್ಲಿ ನಾನು ರಾಜಕಾರಣದಲ್ಲಿ ಪ್ರವೇಶಿಸದೆ, ರಾಜಕಾರಣದ ಮಟ್ಟದಿಂದ ಅಳೆದರೆ ಯಾವ ಆಡಳಿತದ ಮಾದರಿ ಹೆಚ್ಚಿನದೆಂಬುದನ್ನು ಚರ್ಚಿಸುವೆ. ವಿದ್ಯಾಭ್ಯಾಸದ ದೃಷ್ಟಿಯಿಂದ ಪ್ರಜಾಪ್ರಭುತ್ವವು ಅತ್ಯುತ್ತಮಮಾದರಿಯೆಂದು ನಂಬುತ್ತೇನೆ. ಅದರಲ್ಲಿ ವ್ಯಕ್ತಿವಿಕಾಸದ ಅನುಕೂಲತೆಗಳಿವೆ. ಆದುದರಿಂದ ಪ್ರಜಾಪ್ರಭುತ್ವದ ವಿಜಯಿ ಮುನ್ನಡೆಗೆ, ಪ್ರದರ್ಶನಕ್ಕೆ, ಉಪಯೋಗಬೀಳುವ ಯೋಗ್ಯ ಶಿಕ್ಷಣವೇ ನಮಗೆ ಈ ಕಾಲಕ್ಕೆ ಅತ್ಯವಶ್ಯವಾಗಿ ಬೇಕಾಗಿರುವ ಶಿಕ್ಷಣ. ಪ್ರಜಾಪ್ರಭುತ್ವದ ಅನುಭವವಾಗಬೇಕಾದರೆ, ಶಿಕ್ಷಣಪದ್ಧತಿಯಲ್ಲಿ ತರುಣರ ಸಂಘಟನೆಗೆ ಅನುಕೂಲತೆಗಳನ್ನು ಒದಗಿಸಿಕೊಡಬೇಕು. ಅದರ ಪ್ರತ್ಯಕ್ಷ ಅನುಭವವಿರದೆ, ಹಲವು ಸಂಗತಿಗಳನ್ನು ತಿಳಿಯುವುದರಿಂದ ಪ್ರಜಾಪ್ರಭುತ್ವದ ನಿಶ್ಚಿತಜ್ಞಾನವಾದಂತಾಗಲಿಲ್ಲ; ಮತ್ತು ಈ ಅನುಭವದಿಂದ ಬರುವ ಪ್ರಜಾಪ್ರಭುತ್ವಜೀವನಕ್ಕೆ ಹಿಂದು-ಮುಂದೆ ನೋಡಿ ಸಿದ್ಧನಾಗದಿದ್ದರೆ, ಅವನು ಪ್ರಜಾಪ್ರಭುತ್ವದಲ್ಲಿರಲು ಪಾತ್ರನಾಗಲಾರನು.

ಮೊತ್ತಮೊದಲಿನ ಮತ್ತು ಮುಖ್ಯವಾದ ಆವಶ್ಯಕತೆಯೆಂದರೆ ಪೌರಸದ್ಗುಣಗಳ ಆಚರಣೆ. ಪೌರಸದ್ಗುಣಗಳು ಹೇಗೂ ಒಂದು ಸ್ಥಿರವಾದ ಕ್ರಮವಿಡಿದ ಪೌರಶಿಕ್ಷಣದ ತಳಹದಿಯ ಮೇಲೆ ಪೋಷಿಸಲ್ಪಡುತ್ತವೆ. ಪೌರನೀತಿಯ ಜ್ಞಾನವನ್ನು ಹೆಚ್ಚಾದ ಅಹಂಕಾರಿಯೂ ಪಡೆದಿರಬಹುದು; ಅದರಂತೆ ಕ್ರಮತಪ್ಪಿದ ಠಕ್ಕನೂ ಪಡೆದಿರಬಹುದು.

ಪೌರಸನ್ನುಣಗಳು - ಕಾರ್ಯಜ್ಞಾನವಿರದವರಲ್ಲಿಯೂ, ಕಾರ್ಯ ಕೈಕೊಳ್ಳದವರಲ್ಲಿಯೂ ಇರಬಹುದು. ಎಲ್ಲವೂ ವ್ಯಕ್ತಿಹಿತ ನಾಡಿನ ಹಿತ ಇವೆರಡನ್ನೂ ಜೋಡಿಸುವುದರ ಮೇಲೆ ಅವಲಂಬಿಸಿರುತ್ತದೆ.

ರಾಷ್ಟ್ರೀಯ ಶಿಕ್ಷಣ:—

ತರುಣ-ತರುಣಿಯರು ರಾಷ್ಟ್ರೀಯತೆಯ ಧ್ಯೇಯಗಳಿಗೆ ಗೊಂದಿಕೊಂಡಿರಲು ಶಿಕ್ಷಣ ಪಡೆಯಬೇಕಲ್ಲದೆ, ಜಾತೀಯತೆಯ ಕ್ಷುಲ್ಲಕ ಸಾಮರ್ಥ್ಯದಿಂದ ತಮ್ಮ ಹೆಬ್ಬಯಕೆಗಳನ್ನು ಸಂಕುಚಿತಸಡಿಸಲಿಕ್ಕಲ್ಲ. ಹೆಚ್ಚಾದ ಪರೋಪಕಾರ ಬುದ್ಧಿಯಿಂದ ಹುರಿದುಂಬಿಸಲ್ಪಟ್ಟ ಆದರ್ಶ ನಾಗರಿಕ ಶಿಕ್ಷಣವೊಂದರಿಂದಲೇ ರಾಷ್ಟ್ರವು ಅಭಿವೃದ್ಧಿಹೊಂದಬಹುದು. ನಾಗರಿಕರನ್ನು ಮಾಡುವುದೆಂದರೆ ಸಂಕುಚಿತ ದೃಷ್ಟಿಯ ಮತ್ತು ಸ್ವಾರ್ಥಪರವಾದ ಸ್ವದೇಶಾಭಿಮಾನವನ್ನುಂಟು ಮಾಡುವುದೆಂದು ನಾನು ಹೇಳುತ್ತೇನೆಂದು ಯಾರೂ ತಿಳಿದುಕೊಳ್ಳಬಾರದು. ರಾಷ್ಟ್ರೀಯ ವಿಚಾರ ಮತ್ತು ರಾಷ್ಟ್ರೀಯ ಸಂಸ್ಕೃತಿಗಳು ನಮ್ಮ ಶಿಕ್ಷಣದ ತಳಹದಿಯಾಗಬೇಕೆಂಬುದೇನೋ ನಿಜ. ನಮ್ಮ ಚಿಕ್ಕಮಕ್ಕಳು ಇಂಗ್ಲಿಷ್ ತರುಣ-ತರುಣಿಯರಾಗದೆ, ಭಾರತೀಯ ತರುಣ-ತರುಣಿಯರಾಗುವಂತೆ ಶಿಕ್ಷಣಕೊಡುವುದೇ ನಮ್ಮ ಕರ್ತವ್ಯವೇನೊ ಸರಿ! ಆದರೆ ಇದಿಷ್ಟೇ ಅಲ್ಲ, ಅವರು ಜಗತ್ತಿನ ತರುಣ ನಾಗರಿಕರಾಗುವಂತೆ ಶಿಕ್ಷಣ ಪಡೆಯಬೇಕು. ಇಡಿ ಜಗತ್ತೇ ತಮ್ಮ ಸ್ವಂತದ ನಾಡೆಂದೂ, ಪರರಿಗೆ ಒಳಿತನ್ನು ಮಾಡುವುದೇ ತನ್ನ ಧರ್ಮವೆಂದೂ ತಿಳಿಯಬೇಕು. ನಾಡಿನ ವಿಚಾರಗಳೊಂದಿಗೆ ಏಕಕಾಲಿಕವಾಗಿ ಮನುಷ್ಯತ್ವದ ವಿಚಾರವೂ ಉತ್ತೇಜನಗೊಳಿಸಲ್ಪಡಬೇಕು. ಆತ್ಮಸಂರಕ್ಷಣೆಯ ವಿಚಾರ ಮತ್ತು ಸಾರ್ವಜನಿಕ ಕಲ್ಯಾಣಗಳು ಒಂದರೊಂದಿಗೊಂದು ತುಂಬಿಬರಬೇಕು. ಮಾನವತೆಯ ಹಿತಸಂಬಂಧದಲ್ಲಿ ತನ್ನ ನಾಡು, ತನ್ನ ಸುರಕ್ಷಿತತೆಗಳ ಕಡೆಗೆ ಅನಾದರ ತೋರಿಸುವಂತಹ ಬೇಡಿಕೆ ಈಗಂತೂ ಅಕಾಲಬೇಡಿಕೆ. ಈಗ ನಾವು ನಮ್ಮ ಮಾತೃಭೂಮಿಯ ಹಕ್ಕುಗಳನ್ನು ಮೊದಲು ಮುಂದೆ ಮಾಡಬೇಕು. ಅನಂತರ ಇತರ ನಾಡಿನವರ ಹಕ್ಕು-ಬಾಧ್ಯತೆಗಳ ರಕ್ಷಣೆಗಾಗಿ ಹೆಣಗಬೇಕು. ಎಷ್ಟೇ ಅಸಂಭವವಾಗಿ ತೋರಿದರೂ, ಸಾಮಾಜಿಕ ನೀತಿಶಾಸ್ತ್ರದ ಕೊನೆಯ ಗುರಿಯಾದ ಮಾನವತ್ವದ ದೃಷ್ಟಿಯನ್ನು ತಮ್ಮ ಹುಡುಗರು ಕಳೆದುಕೊಳ್ಳಬಾರದು. ಬರಿಯ ಆತ್ಮಸಂರಕ್ಷಣೆಯಿಂದ ಘನವಾದ ಪರಿಪೂರ್ಣತೆಯ ಕಡೆಗಿನ ವಿಕಾಸದ ಸ್ಥಿತಿಯನ್ನೇ ನಾವು ಅರಿಯುತ್ತೇವೆ ಹೊರತು ಸಮತೂಕಸ್ಥಿತಿಯನ್ನು ಕಾಯ್ದುಕೊಳ್ಳುವ ಪ್ರಯತ್ನವನ್ನು ಅರಿಯಲಾರೆವು; ಅಥವಾ, ಆತ್ಮಸಂರಕ್ಷಣೆಯೆಂದರೆ ಹೆಚ್ಚಿನ ಪರಿಪೂರ್ಣತೆಯ ಕಡೆಗಿರುವ ವಿಕಾಸದ ಸ್ಥಿತಿಮಾತ್ರ; ಅದರೆ ಅದು ಸಮತೂಕಸ್ಥಿತಿಯನ್ನು ಸಾಧಿಸುವ ಸಾಧನವಲ್ಲ. ನಾಡಿನ ನಾಗರಿಕ ಶಿಕ್ಷಣವು ಜಗತ್ತಿನ ನಾಗರಿಕಶಿಕ್ಷಣಕ್ಕೆ ಮೆಟ್ಟುಗಲ್ಲಾಗುವಂತೆ ನಾವು ಹೆಣಗಬೇಕು.

ಸೊಲ್ಲಾಪುರದಲ್ಲಿ ನಮ್ಮ ಏಜಂಟರು:

ಶ್ರೀ. ಎನ್. ಎಚ್. ದೇಶಪಾಂಡೆ ನ್ಯೂಜ್ ಏಜನ್ಸಿ

ಝುಂಬ್ರೇವಾಡಾ, ಸೌಥ್‌ಕಸ್ಬಾ, ಮನೆ ನಂ. ೨೩೬.

ಅಮೃತಯಾಮ

ಶ್ರೀ ನ. ಕೃ. ಕುಲಕರ್ಣಿ, ಗದಗು

ವಿಷವು ನಂಜನು ತೊರೆದು ಅಮೃತ ಸುರಿಯುವ ಕಾಲ
ನಾಸ್ತಿಕತ್ವದ ಬಗೆಗೆ ದೈವಾಸ್ತಿ ಭಾವನೆಯ
ತರುತಿಹುದು ನೋಡಲ್ಲಿ; ಬೆಳ್ಳಿ ಮೂಡಣದಲ್ಲಿ–
ತೊಳತೊಳಗಿ ಬೆಳಗುತಿರೆ, ಕರಿಮುಸುಕ ತೆರೆತೆರೆದು,
ನಸುಬೆಳಗು ನವಸೃಷ್ಟಿಯೊಡಗೂಡಿ ಏಳುತಿದೆ;
ಜೀವ-ಜೀವಗಳಲ್ಲಿ ತೃಪ್ತಿಯನು ತುಂಬುತ್ತ
ಕಡಿದ ಬಾಳಿನ ಎಳೆಗೆ ತುದಿಹಚ್ಚಿ ಹೊಸೆಯುತಿದೆ!
ಸುಳಿಗಾಳಿ ಎಳಬೆಳೆಯ ಮೇಲ್ವಾಯ್ದು, ನಸುಸೋಂಕಿ,
ನೀರ್ವನಿಯನುದುರಿಸುತ ಇನಿಗಂಪ ಬೀರುತಿದೆ!
ಹರುಷ ಮೈದುಂಬಿರುವ ಗಿಳಿವಿಂಡು, ಪಕ್ಕಿಪಡೆ,
ಏಕಾಕಿ ಕೋಕಿಲೆಯ ಆರ್ತರ ಧ್ವನಿಯೊಂದಿ
ಕೇಕೆಯಲಿ ಚಿಮ್ಮುತಿವೆ; ಜೇಂಗುಡಿದ ತುಂಬಿಗಳು
ಹೂವಿಂದ ಹೂವಿಂಗೆ ಮುದವೇರಿ ತೂರುತಿವೆ;
ಕ್ಷಣವಲ್ಲೀ ಸುಖಸಮಯ ಮರೆಯಾಗುತಿಹುದಲಾ!
ವಿಶ್ವಗತಿ ಆಳಿದರೂ ಅಮರವಿರಲೀ ಯಾಮ!
ವಿಷವು ನಂಜನು ತೊರೆದು ಅಮೃತಸುರಿಸುವ ಕಾಲ!

ಶ್ರೀರಂಗ ಸಾರಸ್ವತ

ಇದೀಗ ಪ್ರಕಟವಾಗಿರುವ ಗ್ರಂಥಗಳು.

ನಗೆ

(ಹಾಸ್ಯವಿಷಯಕ ಪ್ರಬಂಧ) ೧—೪—೦

ಆಹ್ವಾನ

(ಕವನಸಂಗ್ರಹ) ೧—೦—೦

ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆದು ಕೇಳಿರಿ.
ಪುಸ್ತಕ ಮಾರಾಟಗಾರರಿಗೆ ಉಚಿತವಾದ
ಕಮಿಶನ್ ಕೊಡಲಾಗುವುದು.

ರಂಗ-ಮಂಗ ರಂಜನೋದ್ಯಾನ
C/o 'ಜಯಂತಿ' ಧಾರವಾಡ

ಸಾಹಿತ್ಯವಿಹಾರ

"ವಿಹಾರಿ"

೧೯೪೪ ವರ್ಷದ ವಾಙ್ಮಯ ನಿರ್ಮಿತಿ

ಹೊಸ ವರುಷದ ಮೊದಲನೆಯ ದಿನ, ಮುನ್ನೋಟ ಹಿನ್ನೋಟಗಳ ದಿನ. ಕಳೆದ ವರುಷದಲ್ಲಿ ಮಾಡಲಾಗದ ಕೆಲಸಗಳಿಗಾಗಿ ಅಸಮಾಧಾನ ಒಂದು ಕಡೆಯಾದರೆ, ಆ ಕೆಲಸಗಳೆಲ್ಲವನ್ನೂ ಮುಂಬರುವ ಮುನ್ನೂರರವತ್ತೈದು ದಿವಸಗಳಲ್ಲಿ ಮಾಡಿಯೇ ಬಿಡಬೇಕೆಂಬ ನಿರ್ಧಾರ ಇನ್ನೊಂದು ಕಡೆ. ಇದೊಂದು ಪ್ರತಿ ವರುಷ ಬರುವ ಸಂಧಿಕಾಲ. ಕನ್ನಡ ಸಾಹಿತ್ಯದ ಪ್ರಗತಿಯ ವಿಚಾರವಾಗಿ ಆತುರಪಡುವ ಹೊಸ ಹಳೆಯ ಲೇಖಕರೆಲ್ಲರೂ, ಕನ್ನಡ ಸಾಹಿತ್ಯ ಎತ್ತ ಸಾಗಿದೆ, ಏನು ಸಾಧಿಸಿದೆ, ಏನು ಸಾಧಿಸಲು ಹವಣಿಸುತ್ತಿದೆ—ಎಂಬ ಹಲವಾರು ಪ್ರಶ್ನೆಗಳನ್ನು ಕೇಳಿ ಉತ್ತರ ಕೊಡಬೇಕಾದ ಕಾಲ. ಹನ್ನೆರಡು ತಿಂಗಳ ಹಿಂದೆ ನಾವು ಸಿಂಹಾವಲೋಕನವನ್ನು ಮಾಡಿದಾಗ, ಪರಿಸ್ಥಿತಿ ತೀರ ನಿರಾಶಾಜನಕವಾಗಿದ್ದ ಬಗ್ಗೆ ಹೋದವರುಷ ಹೇಳಿದ್ದೆ; ಈ ವರುಷವಾದರೂ ನಮ್ಮ ಸಾಹಿತಿಗಳು ನಿರಾಶೆಯ ನಿಟ್ಟುಸಿರನ್ನು ತಪ್ಪಿಸಬಹುದೆಂದು ಆಶಿಸಿದ್ದೆ. ಆದರೆ ಲೇಖಕರೂ ಪ್ರಕಾಶಕರೂ ಪರಿಸ್ಥಿತಿಯನ್ನು ಸುಧಾರಿಸಲಿಲ್ಲ. ಹೊದಲೇ ಬಳಲುವವನ ಹೆಂಡತಿ ಸತ್ತಹಾಗೆ ನಮ್ಮ ಬರೆಹಗಾರರ ನಿರುತ್ಸಾಹಕ್ಕೆ ನಿಯಂತ್ರಣವೊಂದು ನೆರವಾಯಿತು. ಅಂತೂ ಇಂತೂ ವರ್ಷಾಂತ್ಯದಲ್ಲಿ ಲೆಕ್ಕಹಾಕಿದರೆ, ನಲವತ್ತಕ್ಕೆ ಮೀರದು ಹೊಸ ಕನ್ನಡ ಪುಸ್ತಕಗಳ ಸಂಖ್ಯೆ. ಅವುಗಳಲ್ಲಿ ಒಳ್ಳೆಯವು ಯಾವುವು, ಅಲ್ಲದುವು ಯಾವುವು ಎಂಬ ವಿಚಾರವನ್ನಂತೂ ಸದ್ಯಕ್ಕೆ ಮೂಲೆಗಿರಿಸೋಣ. 'ಸುಮಾರಾಗಿ ನಲವತ್ತು ಪುಸ್ತಕಗಳಾದರೂ ಪ್ರಕಟವಾದುವಲ್ಲ' ಎಂದು ಸಮಾಧಾನಪಡಬೇಕಾದ ಕಾಲವೇನೋ ನಿಜ. ಆದರೆ ನೆರೆಹೊರೆಯವರ (ಮರಾಠಿ, ತೆಲುಗು, ತಮಿಳು ಸಾಹಿತ್ಯಿಕರ) ನಿರ್ಮಿತಿ ಪ್ರಮಾಣವನ್ನು ಲಕ್ಷ್ಯದಲ್ಲಿ ತಂದುಕೊಂಡರೆ, ಕನ್ನಡದಲ್ಲಿ ಇಷ್ಟೇ ಕೃತಿಗಳು ಹೊರಬೀಳುವುದಕ್ಕೆ ನಿಯಂತ್ರಣವಲ್ಲದೆ ಬೇರೊಂದು ಕಾರಣವಿರಬೇಕೆಂಬ ಮಾತು ಸ್ಪಷ್ಟವಾಗದಿರದು. ಹೆಚ್ಚಿನ ಆಶೆ ನಿರಾಶೆಗೊಂದು ಕಾರಣವೆನ್ನುವಂತೆ, ನಮ್ಮ ಅಪೇಕ್ಷೆಯನ್ನೇ ನಾವು ಹೆಚ್ಚಾಗಿ ಹಿಗ್ಗಿಸಿದೆವೇನೋ ಎನ್ನುವಂತೆ ಒಲಿಯುತ್ತಿದೆ ಕನ್ನಡ ಸಾಹಿತ್ಯದ ಪರಿಸ್ಥಿತಿ. ಪ್ರಕಾಶಕರಿಗೆ ತೊಂದರೆಗಳಿದ್ದುವೇನೋ ನಿಜ; ನಮ್ಮ ಲೇಖಕರೆಲ್ಲರೂ ಬೇರೊಂದು ವ್ಯವಸಾಯವನ್ನು ಜೀವನಕ್ಕಾಗಿ ಸಾಗಿಸಿಕೊಂಡು, ಉಳಿದ ವೇಳೆಯಲ್ಲಿ ಸಾಹಿತ್ಯನಿರ್ಮಿತಿ ಮಾಡತಕ್ಕವರೆಂಬ ಮಾತೂ ನಿಜ; ಆದರೂ ಕೂಡ ನಮ್ಮ ಸಾಹಿತಿಗಳಲ್ಲಿಯ ನಿರ್ಮಿತಿಯ ಉತ್ಸಾಹ ನಿಜವಾಗಿಯೂ ಎಲ್ಲಿಯಾದರೂ ಕುಗ್ಗುತ್ತಿರಬಹುದೇ ಎಂಬ ಅನುಭವದ ಸಂಶಯ ಬರುವಂತೆ ಹೊರನೋಟವಂತೂ ದಿನದಿನಕ್ಕೂ ಸ್ಪಷ್ಟವಾಗುತ್ತಲಿದೆ. ಅಲ್ಲೊಂದು ಇಲ್ಲೊಂದು ಕವನಸಂಗ್ರಹ. ಕಥೆ-ಕಾದಂಬರಿಗಳಲ್ಲಿ ಮೂಲ ಬರಹಕ್ಕಿಂತ ಹೆಚ್ಚಾಗಿ ಭಾಷಾಂತರಗಳು. ವಿಮರ್ಶಾಸಾಹಿತ್ಯದಲ್ಲಿ ಸ್ವಂತ ವಿಚಾರಕ್ಕಿಂತ ಅನುಕರಣ ದೃಷ್ಟಿಯ ಪ್ರಾಬಲ್ಯ; ನಾಟ್ಯಸೃಷ್ಟಿಯಲ್ಲಿ (ರಂಗಭೂಮಿಯೇ ಇಲ್ಲದ ಮೂಲಕವೆ?) ನಿರುತ್ಸಾಹ; ಚರಿತ್ರಾತ್ಮಕ ಸಾಹಿತ್ಯದ ಅಭಾವ—ಇವೆಲ್ಲವೂ ಇಂದಿನ ಕನ್ನಡ ಸಾಹಿತ್ಯದ ಸ್ಥೂಲವಾದ ರೂಪರೇಷೆಗಳೆಂದು ನಿರ್ವಿವಾದವಾಗಿ ಹೇಳಬಹುದು. ನಾಡಹಬ್ಬಗಳಲ್ಲಿ, ನೂರಾರು ಸಂಘಗಳ ಉತ್ಸವಸಮಯದಲ್ಲಿ ನಮ್ಮ ವ್ಯವಸಾಯಿಕ ವ್ಯಾಖ್ಯಾತರುಗಳು—'ನಮ್ಮ ಇಂದಿನ ಸಾಹಿತ್ಯ ನಭೂತಪೂರ್ವವಾಗಿ ಬೆಳೆಯುತ್ತಿದೆ' ಎಂದು ಎಷ್ಟು ಗಟ್ಟಿಯಾಗಿ ಎದೆತಟ್ಟಿ ಹೇಳಿಕೊಂಡಿದ್ದರೂ, ಇದ್ದ ಪರಿಸ್ಥಿತಿ ಮೇಲೆ ಹೇಳಿದಂತೆಯೆ. 'ಮಾಡಬೇಕಾದುದು ಹೇಳಲಾಗದಷ್ಟಿದೆ, ಮಾಡಿದ್ದೆಲ್ಲ ಮಣ್ಣು' ಎಂದು ಮುಂತಾಗಿ ಕೃತಿಗಿಂತ ಹೆಚ್ಚಾಗಿ ಮಾತು ಬೆಳೆಯುಸುತ್ತಿರುವ 'ಪ್ರಗತಿಶೀಲರು' ಎಬ್ಬಿಸಿದ ಧೂಳಿಯಲ್ಲಿ, ಸಾಂಪ್ರದಾಯಿಕರು ದಾರಿಗಾಣದವರಾಗಿದ್ದಾರೆಯೆ?

ಪ್ರಕಟವಾದ ಸಾಹಿತ್ಯದಲ್ಲಿ ಒಂದು ಆಶಾಕಿರಣಮಾತ್ರ ಮೂಡಿದ್ದು ಎಷ್ಟೋ ಸಮಾಧಾನ ತರುವಂತಹ ಮಾತಾಗಿದೆ. ಅದೆಂದರೆ ಈ ವರುಷ ಒಂದೆರಡಾದರೂ ಹೊಸ ಹೆಸರು ಲಕ್ಷ್ಯವನ್ನೆಳೆಯುವಂತೆ ಕೃತಿಗಳನ್ನು ಬೆಳಕಿಗೆ ತಂದಿವೆ. ಮುಖ್ಯವಾಗಿ ಕಾವ್ಯಪ್ರಪಂಚದಲ್ಲಿ ಕಲಾಕುಮಾರ (ರೋಹಿಣಿ), ಕಿಂಯಣ್ಣಾರೈ (ಶಿಲಾಮುಖ) ರಾಘವ (ಹಕ್ಕಿ ಹಾಡು) ಇವರ ಹೆಸರುಗಳನ್ನು ಈ ಸಂದರ್ಭದಲ್ಲಿ ಹೇಳದಿರಲಾರೆ. ಸಣ್ಣ ಕಥೆಯ ವಿಶಾಲ ಬಯಲಿನಲ್ಲಿ ಮೂರು ಹೊಸ ಹೆಸರು ಬಂದಿವೆ. ಮೊದಲನೆಯದಾಗಿ ಕಸ್ತೂರಿಯನ್ನು ಕೊಟ್ಟ "ವಾಣಿ" (ಶ್ರೀಮತಿ ಸುಬ್ಬಮ್ಮ ಅವರು), "ಸಂಗಮ"ವನ್ನು ಸಲ್ಲಿಸಿದ ಶ್ರೀ. ಸಿ. ಕೆ. ನಾಗರಾಜರಾಯರು ಮತ್ತು ಕಾವ್ಯಸಂಗ್ರಹವನ್ನಲ್ಲದೆ "ಅನ್ನದೇವರು ಮತ್ತು ಇತರ ಕಥೆಗಳ"ನ್ನು ಹೇಳಿದ ಕಿಂಯಣ್ಣಾರೈ ಅವರು. ಇವರೆಲ್ಲರಿಗೂ ಸುಸ್ವಾಗತವು. ಇಲ್ಲಿ ಬೆಳಗಾಂವಿಯಲ್ಲಿಯ ಕಿರಿಯರ ಬಳಗದ ಕವನ ಸಂಗ್ರಹವಾದ "ತಂಬಿ"ಯನ್ನು ನಿರ್ದೇಶಿಸಲೇಬೇಕು. ಹೊಸ ಹೆಸರುಗಳು ಇನ್ನೂ ಹೆಚ್ಚಾಗಿ ಬರಬೇಕು. ಪತ್ರಿಕೆಗಳಲ್ಲಿ ಆಗಾಗ ಕವನಗಳ ಕೆಳಗೆ ಎಷ್ಟೋ ಹೊಸ ಹೆಸರುಗಳನ್ನು ನೋಡುತ್ತೇವೆ. ಆದರೆ ಕೃತಿಗಳನ್ನು ಒತ್ತಟ್ಟಿಗೆ ಕಲೆಹಾಕಿ, ಈ ನಮ್ಮ ಹೊಸ ಕವಿಗಳು ಯಾಕೆ ಬೆಳಕಿಗೆ ತರಬಾರದು? ನಮ್ಮಲ್ಲಿಯ ಪ್ರಕಾಶಕರು, ಹೊಸ ಪುಸ್ತಕಗಳಿಗಾಗಿ ಹೆಸರು ಗಳಿಸಿದ ಸಾಹಿತಿಗಳ ಬೆನ್ನುಹತ್ತುವುದರ ಬದಲಾಗಿ, ಹೊಸ ಹೆಸರುಗಳನ್ನು ಬಯಲಿಗೆ ತರುವುದರ ಕಡೆಗೆ ಗಮನ ಕೊಡಬೇಕೆಂದು ಇಲ್ಲಿ ಸೂಚಿಸಿದರೆ ತಪ್ಪಾಗಲಾರದು.

ಹೆಸರು ಗಳಿಸಿದ ಕವಿಗಳಲ್ಲಿ ಹೆಚ್ಚಾಗಿ ಈ ವರ್ಷ ಕಾವ್ಯಸ್ಫೂರ್ತಿ ಕಾವ್ಯವಾಗಿ ಹರಿಯಲಿಲ್ಲವೆಂದು ತೋರುತ್ತದೆ. ಆದರೂ ಶ್ರೀ. ಪುಟ್ಟಪ್ಪನವರು "ಕೋಗಿಲೆ ಮತ್ತು ಸೋವಿಯೆಟ್ ರಷ್ಯಾ" ಎಂಬ ಪ್ರಗ

ಶೀಲ ತಲೆಕಟ್ಟಿನ ಸಾಂಪ್ರದಾಯಿಕ ಕಾವ್ಯಸಂಗ್ರಹವನ್ನು ಪ್ರಕಟಿಸಿದ್ದಾರೆ. ಅಲ್ಲದೆ "ಕೊಳಲು," "ಪಾಂಚಜನ್ಯ" ಗಳ ಎರಡನೆಯ ಆವೃತ್ತಿಗಳನ್ನು ಹೊರಡಿಸಿದ್ದಾರೆ. ಶ್ರೀ. ಪು. ತಿ. ನರಸಿಂಹಾಚಾರ್ಯರು "ಶಾರದಯಾಮಿನಿ," "ದೋಣಿಯ ಬಿನದ ಮತ್ತು ಕವಿ" ಎಂಬ ಕವನಸಂಗ್ರಹ ಮತ್ತು ರೂಪಕನೃತ್ಯಗಳನ್ನು ಕನ್ನಡ ಕಾವ್ಯಪ್ರಪಂಚಕ್ಕೆ ಸಲ್ಲಿಸಿದ್ದಾರೆ. ಶ್ರೀನಿವಾಸರು "ನವರಾತ್ರಿ" ಎಂಬ ಕಥನಕವನಗಳ ಸಂಗ್ರಹವನ್ನೂ ಶ್ರೀ. ಡಿ. ವಿ. ಗುಂಡಪ್ಪನವರು "ಉಮರನ ಒಸಗೆ"ಯ ಪುನರ್ಮುದ್ರಣವನ್ನೂ ಒಪ್ಪಿಸಿದ್ದಾರೆ.

ಕಥೆ-ಕಾದಂಬರಿಗಳ ಕಥೆ ಇದಕ್ಕೂ ಹೆಚ್ಚಾಗಿ ನಿರುತ್ಸಾಹದ್ದಾಗಿದೆ. ಸಾಮಾನ್ಯ ಓದುಗನಿಗೆ ಬೇಕಾದದ್ದು ಕಾವ್ಯಕ್ಕಿಂತ ಹೆಚ್ಚಾಗಿ ಕಾದಂಬರಿ; ಹಾಡುಗಳಿಗಿಂತ ಹೆಚ್ಚಾಗಿ ಕಥೆ. ಹೀಗಿದ್ದರೂ ಕಥೆ-ಕಾದಂಬರಿಗಳೆಂದೂ ಯೋಗ್ಯವಾದ ಪ್ರಮಾಣದಲ್ಲಿಯಂತೂ ಇಲ್ಲವೇ ಇಲ್ಲ, ಮಿತವಾದ ಬೇಡಿಕೆಯನ್ನು ಪೂರಯಿಸುವಷ್ಟು ಕೂಡ ಪ್ರಕಟವಾಗಲಿಲ್ಲವೆಂಬ ಮಾತು ನಮ್ಮ ಬರೆಹಗಾರರು ವಾಚಕರ ಬೇಡಿಕೆಗಳ ಕಡೆಗೆ ಎಷ್ಟು ಲಕ್ಷ್ಯವನ್ನು ಕೊಡುತ್ತಿಲ್ಲವೆಂಬ ಮಾತಿಗೆ ನಿದರ್ಶನವಾಗಿದೆ. ಸಾಮಾನ್ಯವಾಚಕರಿಗೆ ಓದಲಿಕ್ಕೆ ಏನಾದರೂ ಬೇಕು ಎಂಬ ಮಾತನ್ನು ಅನುಲಕ್ಷಿಸಿ ಒಬ್ಬಿಬ್ಬ ಪ್ರಕಾಶಕರು ಮಾತ್ರ ಭಾಷಾಂತರಗಳನ್ನು ಬೆಳಕಿಗೆ ತಂದಿದ್ದಾರೆ. ಸ್ವತಂತ್ರ ಬರೆಹದ ಪ್ರಮಾಣಕ್ಕೂ ಭಾಷಾಂತರಗಳ ಪ್ರಮಾಣಕ್ಕೂ ಇಲ್ಲಿ ಕಾಣಬರುವ ವಿಪರೀತ ವ್ಯತ್ಯಾಸವನ್ನು ನೋಡಿದರೆ, ಕನ್ನಡದಲ್ಲಿಯ ಕಥಾಲೇಖಕರ ಮತ್ತು ಕಾದಂಬರಿಕಾರರ ವಿಚಾರವಾಗಿ ನಿರಾಶೆಯ ಅಭಿಪ್ರಾಯವನ್ನೇ ವ್ಯಕ್ತ ಮಾಡಬೇಕಾಗಿ ಬಂದದ್ದು ತೀರ ಖೇದಜನಕವಾಗಿದೆ. ಇಡೀ ವರ್ಷದಲ್ಲಿ ಪ್ರಕಟವಾದ ಸ್ವತಂತ್ರ ಕಾದಂಬರಿಯೆಂದರೆ ಶ್ರೀ 'ಎಸ್ಕೆ' ಅವರ "ಸಾವಿನ ಉಡಿಯಲ್ಲಿ" ಇದೊಂದೇ ಒಂದು. ಸಣ್ಣ ಕಥೆಗಳ ಬಗೆಯಲ್ಲಿ ಮಾತ್ರ ಎಷ್ಟೋ ವರ್ಷಗಳ ತರುವಾಯ ಹಳೆಯ ಲೇಖಕರಿಬ್ಬರು ಹೊಸ ಹುರುಪಿಗೆ ಆಸ್ಪದ ಕೊಟ್ಟಿದ್ದಾರೆ. ಶ್ರೀ ದೇವುಡು ಅವರು ಘಾಟಿ ಮುದುಕ ಮತ್ತು ಇತರ ಕಥೆಗಳನ್ನೂ 'ಗಂಗೆಯ ಗುತ್ತಿಗೆ'ಯ ಶ್ರೀ ಟೇಂಗ್ಸೆ ಅವರು ದಾಸರ ಹುಡುಗಿಯ ಕಥೆಯನ್ನೂ ಹೇಳಿದ್ದಾರೆ. ಶ್ರೀಮತಿ ಜಯಲಕ್ಷ್ಮಿ ಶ್ರೀನಿವಾಸನ್ ಅವರ "ಮೊಗ್ಗು" ಎಂಬ ಕಥಾಸಂಗ್ರಹವನ್ನು ನಿರ್ದೇಶಿಸಿದರೆ, ಸ್ವತಂತ್ರ ಕಥೆಗಳ ಕಥೆ ಮುಗಿದಂತಾಯಿತೆಂದೇ ಹೇಳಬೇಕು. ಭಾಷಾಂತರಿತ ಕೃತಿಗಳಲ್ಲಿ ಶರಚ್ಚಂದ್ರರ ಬರೆವಣಿಗೆ ಹೆಚ್ಚಾಗಿ ಹೊರಬಿದ್ದಿವೆ. ಕಾಶೀನಾಥ, ವೃಂದಾವನ, ರಾಜಲಕ್ಷ್ಮಿ, ಸುಮತಿ, ಅನುರಾಧಾ ಇವೆಲ್ಲವುಗಳ ಪ್ರಕಟನೆಗಾಗಿ ಸಾಹಿತ್ಯಭಾಂಡಾರಕ್ಕೆ ನಾವು ಋಣಿಯಾಗಿರಬೇಕಾಗಿದೆ. ಮಿತ್ರಮಂಡಲಿಯ "ಕ್ಷುಧಿತಪಾಷಾಣ", ನಾರಾಯಣ ಸ್ವಾಮಿ ಅಯ್ಯರ್ ಅವರ "ರವೀಂದ್ರರ ಕಥೆಗಳು" ಇವು ಟಾಗೋರರ ಸಾಹಿತ್ಯದಿಂದ ಕನ್ನಡಕ್ಕೆ ಬಂದುವುಗಳು. ಶ್ರೀ. ಕೋ. ಸಂಪದ್ಗಿರಿರಾಯರು ತಮಿಳಿನಿಂದ ರಾಜಾಜಿಯವರ ಕಥೆಗಳನ್ನು ತಂದಿದ್ದಾರೆ. ಚುಳಕಿ ಅವರ "ಮುದ್ದಿನ ಕಣಿ" ಮತ್ತು ಎಚ್. ನಾರಾಯಣರಾವ್ ಮತ್ತು ಕೆ. ಪಿ. ರಾಮನಾಥಯ್ಯ ಇವರ "ಬ್ರಾನ್ಟಿ ಸಹೋದರರ ಭವ್ಯ ಸಂದೇಶ" ಇವು ಪಾಶ್ಚಿಮಾತ್ಯ ಸಾಹಿತ್ಯದಿಂದ ಬಂದುವುಗಳು. ಕರ್ವೆ ಅವರ "ಸಿಂಹಾವಲೋಕನ"ದ ಭಾಷಾಂತರವೊಂದನ್ನು ಹೇಳಿಬಿಟ್ಟರೆ ಹೊರಗಿನಿಂದ ಬಂದದ್ದರ ಲೆಕ್ಕವೂ ಮುಗಿಯಿತು.

ನಾಟಕಗಳ ವಿಚಾರವಾಗಿ ಹೆಚ್ಚು ಬರೆಯುವ ಆವಶ್ಯಕತೆಯೇ ಇಲ್ಲ. ನಾಟಕಗಳಿಗಾಗಿ ನಾವು ನೋಡಬೇಕಾದದ್ದು ಶ್ರೀರಂಗರನ್ನು. ಅವರು ತಮ್ಮ ಕೆಲಸವನ್ನು ತೀರ ಸಮರ್ಪಕವಾಗಿಯಲ್ಲದಿದ್ದರೂ ಸಮಾಧಾನಕಾರಕವಾಗಿ ನಡೆಸಿಕೊಟ್ಟಿದ್ದಾರೆಂದೇ ಹೇಳಬೇಕು. 'ನಿರಾಹಾರ' 'ಉತ್ತರ ರಂಗ' ಎಂಬ ಎರಡು ಏಕಾಂಕಗಳ ಸಂಗ್ರಹಗಳನ್ನು ಪ್ರಕಟಿಸಿದ್ದಾರೆ. ಶ್ರೀ. ಕೈಲಾಸಂ ಅವರ ಒಂದೆರಡು ಚಿಕ್ಕ ಕೃತಿಗಳು ಹೊರಬಿದ್ದಿವೆ. ಶ್ರೀ. ಪುಟ್ಟಪ್ಪನವರೂ, ಶ್ರೀ. ಸಿ. ಕೆ. ನಾಗರಾಜರಾಯರೂ ಶೂದ್ರಮುನಿಯ ವಿಚಾರವಾಗಿ ಎರಡು ಏಕಾಂಕಗಳನ್ನು ನೀಡಿದ್ದಾರೆ ಎಚ್. ರಾಜಗೋಪಾಲ್ ಅಯ್ಯಂಗಾರ್ ಅವರ 'ಸಂಶಯ' ಮತ್ತು ಕೃಷ್ಣಕುಮಾರರ 'ಮಿಂಚಿನ ಹುಡಿ' ಇವನ್ನು ಎಣಿಕೆಯಲ್ಲಿ ಹಾಕಿಬಿಟ್ಟರೆ ನಾಟಕದ ಅಕೌಂಟ್ ಕ್ಲೋಜ್ ಮಾಡಿದಂತೆಯೇ! ಇಡೀ ವರ್ಷದಲ್ಲಿ ಒಂದು ಕೂಡ ಸಂಪೂರ್ಣ ನಾಟಕವಿಲ್ಲ. ಇದು ತೀರ ಶೋಚನೀಯವಲ್ಲವೆ?

ಇನ್ನುಳಿದ ಒಂದೆರಡು ಗದ್ಯಪ್ರಕಾರಗಳಲ್ಲಿ ಕೆಲವು ಪುಸ್ತಕಗಳು ಬಂದಿವೆ. ನಿಬಂಧ, ನಗೆಬರೆಹ, ವಿಮರ್ಶೆಯ ಒಂದೆರಡು ಕೃತಿ, ಎಸ್ಕೆ ಅವರ 'ಮುಂಗಾಣ್ಕೆಯೆಡೆಗೆ' ಶ್ರೀರಂಗರ 'ಸ್ವಲ್ಪದರಲ್ಲಿ ಸ್ವಾರಸ್ಯ' ಕಾರಂತರ 'ಹಳ್ಳಿಯ ಹತ್ತು ಸಮಸ್ತರು' ಕಸ್ತೂರಿ ಅವರ 'ಡೊಂಕುಬಾಲ'-'ಚಕ್ರದೃಷ್ಟಿ' ವಿಠ್ಠಲಶೆಣೈ ಅವರ 'ನಗೆ ನೋಟಗಳು' ಮಿತ್ರಮಂಡಲಿಯ 'ವಿನೋದ ಚಿತ್ರಗಳು' ರಾಜರತ್ನಂ ಅವರ 'ನಕ್ಕಳಾ ತಾಯಿ' ಇವೇ ಮುಖ್ಯವಾದುವುಗಳು. ವಿಮರ್ಶೆಯಲ್ಲಿ ರಂಗಣ್ಣನವರ ಶೈಲಿ, ಅ. ನ. ಕೃಷ್ಣರಾಯರ 'ಸಾಹಿತ್ಯ ಮತ್ತು ಜೀವನ' 'ನನ್ನನ್ನು ನಾನೇ ಕಂಡೆ' ಅವರಿಂದಲೇ ಸಂಪಾದಿತವಾದ "ಪ್ರಗತಿಶೀಲ ಸಾಹಿತ್ಯ" ಮಾಸ್ತಿಯವರ "ಶಾಕುಂತಲೆಯ ತಪಸ್ಸಿದ್ಧಿ" ಮತ್ತು ಆರ್. ಎಸ್. ರಾಮರಾಯರ "ಕನ್ನಡ ಸಾಹಿತ್ಯದಲ್ಲಿ ಸಾಮಾಜಿಕ ನಾಟಕ"ಗಳ ವಿಚಾರವಾಗಿ ಪ್ರಕಟಿಸಿದ ಪ್ರಬಂಧ ಇವೇ ಮುಖ್ಯವಾದುವುಗಳು. ಹಳಕಟ್ಟಿಯವರ ಯುಗಪ್ರವರ್ತಕ ಬಸವಣ್ಣನವರು ಮತ್ತು ಎಂ. ಹರಿದಾಸ ಅವರ ಉಕ್ಕಿನ ಮನುಷ್ಯ ಇವೆರಡು ಚರಿತ್ರಾತ್ಮಕ ಬರೆಹಕ್ಕೆ ಸಂಬಂಧಪಟ್ಟವುಗಳು. (ಮೊದಲನೆಯದರಲ್ಲಿ ಚರಿತ್ರಕ್ಕಿಂತ ವಿಮರ್ಶೆಯೇ ಹೆಚ್ಚಾದದ್ದೊಂದು ವಿಶೇಷ). ಮೈಸೂರು ವಿಶ್ವವಿದ್ಯಾನಿಲಯದ ಪ್ರಚಾರ ಪುಸ್ತಕಮಾಲೆಯಲ್ಲಿಯ ಟಿ. ಎಸ್. ವಾಮರಾಯರ "ಮಹಾಪ್ರಾಣ"ವನ್ನು ಉಲ್ಲೇಖಿಸಿದರೆ, ವಿಮರ್ಶಾಸಾಹಿತ್ಯದ ಲೆಕ್ಕಾಚಾರವೂ ಮುಗಿದಂತೆಯೆ ಸರಿ. ಈ ಎಲ್ಲ ಎಣಿಕೆಯಲ್ಲಿ ಒಂದೆರಡು ಪುಸ್ತಕಗಳ ಹೆಸರು ಮರೆತುಹೋಗಿದ್ದರೂ ಹೋಗಿರಬಹುದು. ಮುಖ್ಯವಾದುವುಗಳೆಲ್ಲವುಗಳನ್ನೂ ಉಲ್ಲೇಖಿಸಿದ್ದೇನೆಂಬ ಭರವಸೆ ಇದೆ. ಈ ವರ್ಷ ಶ್ರೀ. ಗೋವಿಂದ ಪೈ, ಬೇಂದ್ರೆ, ಗೋಕಾಕ, ಮುಗಳಿ, ವಿ ಸೀ. ಆನಂದ, ಆನಂದಕಂದ, ಗೋಪಾಲಕೃಷ್ಣರಾಯ, ಸಾಲಿ ಇವರಾರೂ ಒಂದು ಕೃತಿಯನ್ನು ಕೂಡ ಕನ್ನಡಕ್ಕೆ ಕೊಡಲಿಲ್ಲ. ಶ್ರೀ. ಬೇಂದ್ರೆ ಅವರ ಹೊಸ ಪುಸ್ತಕಗಳ ಮಾತಿರಲಿ, ಅವರ ಹಳೆಯ ಪುಸ್ತಕಗಳು ಪೇಟೆಯಲ್ಲಿ ಒಂದುಕೂಡ ಇಲ್ಲದಿದ್ದರೂ, ಅವರೂ ಅವರ ಪ್ರಕಾಶಕರೂ ಜನರ ಬೇಡಿಕೆಯನ್ನು ಯಾಕೆ ನಿರಾಕರಿಸುತ್ತಿದ್ದಾರೋ ತಿಳಿಯದು. ಅಂತೂ ಕನ್ನಡ ಕವಿಗಳೊಬ್ಬರು ಹಾಡಿದ್ದನ್ನೇ ಹಾಡುವ ಪರಿಸ್ಥಿತಿ ದೂರವಾಗಲೊಲ್ಲದು. "ವರುಷ ಬಂದಿತು, ವರುಷ ಹೋಯಿತು, ಹರುಷ ಬಾರದು, ಬಾರದು....'

ಸಪ್ರೂ ಸಮಿತಿ

ರಾಜಕೀಯ ರಂಗದಲ್ಲಿ ಗಾಂಧಿ-ಜಿನಾ ಭೆಟ್ಟಿಯ ತರುವಾಯ ಜರುಗಿದ ಮಹತ್ತ್ವದ ಘಟನೆ ಎಂದರೆ ಸರ್ ತೇಜಬಹಾದುರ ಸಪ್ರೂ ಅವರ ನೇತೃತ್ವದಲ್ಲಿ ರೂಪುಗೊಂಡ ಸೌಹಾರ್ದಸಮಿತಿ (Conciliation Committee). ಪಕ್ಷಾಂಧತೆಯ ರಾಜಕಾರಣಿಗಳಿಂದ ದೇಶದ ಜಾತೀಯ ಮತ್ತು ರಾಜಕೀಯ ಬಿಕ್ಕಟ್ಟು ಬಿಡಲಾರದೆಂಬ ಮಹಾತ್ಮರ ಅಭಿಪ್ರಾಯವನ್ನನುಸರಿಸಿ, ಪಕ್ಷಾತೀತ ಮನೋವೃತ್ತಿಯ ತಜ್ಞರ ಮತ್ತು ರಾಜಕಾರಣಿಗಳ ಸಮಿತಿಯನ್ನು ನಿಯಮಿಸಲಾಗಿದೆಯಂತೆ. ಈ ಸಮಿತಿಯು (೧) ರಾಜ್ಯಘಟನೆಯ ಯೋಜನೆ, (೨) ಪರಸ್ಪರ ಸೌಹಾರ್ದವನ್ನೊ, ಇಲ್ಲವೆ (೩) ಪರಸ್ಪರರಿಗೆ ಒಪ್ಪಿಗೆಯಾಗುವಂತಹ ರಾಜ್ಯಘಟನೆಯನ್ನೊ ತಯ್ಯಾರಿಸಬಹುದಾಗಿದೆ. ಉದ್ದೇಶವೂ ಉಪಕ್ರಮವೂ ಸ್ತುತ್ಯವಾಗಿದ್ದರೂ ಧ್ಯೇಯವನ್ನು ಈ ಸಮಿತಿಯು ಸಾಧಿಸಲಾರದೇನೊ ಎಂದು ಸಂದೇಹ. (೧) ರಾಜ್ಯಘಟನೆಯನ್ನು ತಯ್ಯಾರಿಸಿದರೆ ಬ್ರಿಟಿಶರು ಒಪ್ಪುವ ಭರವಸೆ ಇಲ್ಲ, (೨) ಸೌಹಾರ್ದವನ್ನುಂಟುಮಾಡುವ ಯೋಜನೆಯನ್ನು ತಯ್ಯಾರಿಸುವುದಾದರೆ ಮಹಾಸಭೆ-ಮುಸ್ಲಿಂಲೀಗ ಮುಂತಾದ ಜಾತೀಯ ಸಂಸ್ಥೆಗಳಿಗಾಗಿ ಅದು ಅಶಕ್ಯ; (೩) ಎಲ್ಲರೂ ಒಪ್ಪುವ ರಾಜ್ಯಘಟನೆ ಎನ್ನು ತಯ್ಯಾರಿಸುವುದೆಂದರೆ ತತ್ತ್ವ[illegible] ರಾಜಕಾರಣ ಮತ್ತು ಸಾಮ್ರಾಜ್ಯವಾದದ [illegible] ಹೀಗಿರುವಾಗ [illegible] ಕಾಂಗ್ರೆಸ್ಸು [illegible] ಬೆಂಬಲ ಕೊಟ್ಟಲ್ಲಿ ಈ ಸಮಿತಿಯ [illegible] ಸಫಲವಾಗಬಹುದಾಗಿದೆ. ಹಾಗೆ ಮಾಡುವುದು ಪ್ರಜಾಪ್ರಭುತ್ವ ತತ್ತ್ವಕ್ಕೆ ಘಾತಕ, ಸ್ವಾತಂತ್ರ್ಯವೃತ್ತಿಗೆ ಅಪಮಾನ; ಇದಲ್ಲದೆ ಅಸಂತೋಷದ ಬೀಜ ಬಿತ್ತಿದಂತಾಗುವುದು. ಅಂತೂ, ತಜ್ಞರಿಂದಾಗಲಿ ಮುತ್ಸದ್ದಿಗಳಿಂದಾಗಲಿ ಬಿಕ್ಕಟ್ಟು ಬಗೆಹರಿಯುವ ಕಾಲ ಹೋದಂತೆಯೆ ಆಗಿದೆ. ಜನತೆಯಲ್ಲಿ ಜಾಗೃತಿಯನ್ನೂ ಅರಿವನ್ನೂ ಪ್ರಚಾರವನ್ನೂ ಮಾಡಿ, ಆ ಮೂಲಿಕ ಶಕ್ತಿಯನ್ನು ಗಳಿಸಿಕೊಳ್ಳದ ಹೊರತು ಭಾರತವು ರಾಜಕೀಯ ಪ್ರಗತಿಯ ದಾರಿಯಲ್ಲಿ ಮುಂದಿನ ಹೆಜ್ಜೆಯನ್ನು ಇಡಲಾರದು ಎಂದು ಹೇಳಬಹುದಾಗಿದೆ.

ದೃಷ್ಟಿ ವಿಶಾಲವಾಗಬೇಕು

ಡಿಸೆಂಬರ್ ೨೫-೨೬ ಕ್ಕೆ ಧಾರವಾಡದಲ್ಲಿ ನಡೆಯುವ ಏಕೀಕರಣ ಸಮ್ಮೇಳನ ಕೂಡಿತ್ತಷ್ಟೆ? ಸಮ್ಮೇಳನದ ಕಾರ್ಯಕಲಾಪಗಳ ವಿಚಾರ-ವಿಮರ್ಶೆಯನ್ನು ಮಾಡುವ ಮುಂಚೆ ಒಂದು ಮಾತನ್ನು ಹೇಳುವುದು ಅಗತ್ಯವಾಗಿದೆ. 'ಏಕೀಕರಣದ ಕಾರ್ಯ ಹಿಂದೆ ಬಿದ್ದುದೇಕೆ?' ಎಂಬ ಪ್ರಶ್ನೆಗೆ ಉತ್ತರವನ್ನು ಕೊಡುವಾಗ 'ಒಮ್ಮತವಿದ್ದುದನ್ನೆ ಎತ್ತಿ ದುಡಿಯುವುದಕ್ಕಿಂತ, ಭಿನ್ನಮತವನ್ನೆ ಎತ್ತಿಹಿಡಿದು ದೂರದೂರ ಸಿಡಿಯುವ ಪ್ರವೃತ್ತಿಯೆ ಇನ್ನೂ ನಮ್ಮಲ್ಲಿ ಹೆಚ್ಚು' ಎಂದು ಕಳೆದ ತಿಂಗಳ **ನೋಟ**ದಲ್ಲಿ ಹೇಳಿದ್ದೆವು. ನಮ್ಮ ಮಾತಿನ ಸತ್ಯತೆಯನ್ನು ಸಿದ್ಧಮಾಡಿ ತೋರಿಸುವ ಹಟದಿಂದಲೊ ನಮ್ಮ ದುರ್ದೈವದಿಂದಲೊ ಸಮ್ಮೇಳನದ ಹಿನ್ನೆಲೆಯಾಗಿ ಕೆಲವು ಸಂಗತಿಗಳು ಘಟಿಸಿದುವು. ಆ ಸಂಗತಿಗಳ ಬಗ್ಗೆ ದೋಷಾರೋಪಣೆಯನ್ನು ಮಾಡುವ ವಿಚಾರವನ್ನು ಬದಿಗಿಟ್ಟು ಸಂಗತಿಗಳನ್ನಷ್ಟೆ ನೋಡೋಣ :—

೧. ಮೊದಲು ಹಿಂದಿನ ಕಾರ್ಯದರ್ಶಿಗಳಾದ ಶ್ರೀ. ಮುದವೀಡು ಕೃಷ್ಣರಾಯರ ರುಜುವಿನಿಂದ ಕಾರ್ಯಕರ್ತರ ಸಭೆಗಾಗಿ ಕಳುಹಿಸಿದ ಬಿನ್ನಹದೋಲೆಯಲ್ಲಿ 'ಪ್ರಮುಖ ರಾಷ್ಟ್ರೀಯ ಕಾರ್ಯಕರ್ತರ ಅಜ್ಞಾನ-ಅನಾಸ್ಥೆ'ಗಳಾಗಿ ಏಕೀಕರಣಕ್ಕೆ ಆಘಾತವಾಗಿದೆ—ಎಂದಿತ್ತು. (ಕೆಲವು ಪ್ರತಿಗಳಲ್ಲಿ 'ಪ್ರಮುಖ'ದ ಹಿಂದೆ 'ಹಲಕೆಲವು' ಎಂಬ ಶಬ್ದವಿದೆ).

೨. ಈ ವಾಕ್ಯಕ್ಕಾಗಿ ನೊಂದ ಸ್ಥಳೀಯ ಕಾಂಗ್ರೆಸಿಗರು ಮೊದಲ ಸಭೆ, ತರುವಾಯದ ಸಮ್ಮೇಳನ ಇವುಗಳ ಸಂಬಂಧವಾಗಿ ತಮ್ಮ ಹೆಸರು ಬಾರದಂತೆ ನೋಡಿಕೊಂಡರು, ಕೆಲವರು ಯಾವ ಸಭೆಗಳಿಗೂ ಬರಲಿಲ್ಲ.

೩. ಮೇಲಿನ ಎರಡು ಸಂಗತಿಗಳು ಹೀಗೆ ಪರಸ್ಪರ ಸಂಬದ್ಧವಾಗಿವೆ ಎಂಬುದು ಮೊದಲ ಸಲ, ಸಾರ್ವಜನಿಕವಾಗಿ—'ಸಂಯುಕ್ತ ಕರ್ನಾಟಕ'ದ ಅಗ್ರಲೇಖದಿಂದ ತಿಳಿದು ಬಂದಿತು.

೪. ಈ ಅಗ್ರಲೇಖಕ್ಕೂ ಅಲ್ಲಿ ಚರ್ಚಿಸಿದ ವಿಷಯಗಳಿಗೂ ಉತ್ತರವೆಂದು ಶ್ರೀ. ಮು. ಕೃಷ್ಣರಾಯರು ಸವಿಸ್ತಾರ ಉತ್ತರವನ್ನು ಕಳುಹಿಸಿದ್ದು, ಅದರಲ್ಲಿ ಅನೇಕರ ಮೇಲೆ 'ಆರೋಪ' ಇವೆ ಎಂಬುದಾಗಿ ಅದೇ ದಿನಪತ್ರಿಕೆಯ ಇನ್ನೊಂದು ಅಗ್ರಲೇಖದಿಂದ ತಿಳಿದುಬಂದಿತು.

೫. ಇಷ್ಟರಲ್ಲಿ-ಪ್ರಕಟವಾಗಿ ಏನೇ ಹೇಳಿದರೂ—ಕೆಲವು ಕಾಂಗ್ರೆಸಿಗರು [illegible] ನವು ಪ್ರಾತಿನಿಧಿಕವಲ್ಲವೆಂದು ಸಿದ್ಧಮಾಡಿ

ತೋರಿಸಲು, ಕೆಲವು ಸಂಚಾಲಕರ ಮೇಲೆ ಅರಾಷ್ಟ್ರೀಯತೆಯ ಆರೋಪಗಳನ್ನು ಹೊರಿಸುತ್ತ, ಸಮ್ಮೇಳನವನ್ನು ಯಶಸ್ವಿ ಮಾಡಲು ಸ್ವಸಂತೋಷದಿಂದ ಬರಬಯಸಿದ ಪರಸ್ಥಳದವರನ್ನು ನಿರುತ್ಸಾಹಗೊಳಿಸುತ್ತ–ತಮ್ಮ ನಿಷ್ಕ್ರಿಯ (Passive) ಅಸಹಕಾರವನ್ನು ಸಕ್ರಿಯ ಮಾಡತೊಡಗಿದರು. ಕೊನೆಗೆ ಸಮ್ಮೇಳನವು ಒಳಸಂಕಲ್ಪದ ಸಾಮರ್ಥ್ಯದ ಮೇಲೆಯೆ ನಿಂತು ನಡೆಯಿತು.

ಧಾರವಾಡವು ಕರ್ನಾಟಕದ ಕೇಂದ್ರ, ಮುಂದಾಳುಗಳು ನಿಸ್ವಾರ್ಥ ಬುದ್ಧಿಯ ಮೂರ್ತಿಗಳು, ಏಕೀಕರಣವು ಕನ್ನಡಿಗರಿಗೆ ಜೀವಾಳದ ಪ್ರಶ್ನೆ—ಈ ಮೂರು ಮಾತುಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ಮೇಲಿನ ಸಂಗತಿಗಳನ್ನು ನೆನೆದರೆ, ನಮಗೆ ನಾವೇ ನಾಚಿಕೆಗೀಡು ಎನ್ನಿಸುವೆವು. ಅದಕ್ಕೆಂದೇ—'**ತನ್ನನ್ನು ಮರೆತು ಧ್ಯೇಯಕ್ಕಾಗಿ ದುಡಿಯುವ ವಿಶಾಲದೃಷ್ಟಿ ಬರುವವರೆಗೆ ಈ ದುಃಸ್ಥಿತಿ ತಪ್ಪದು**' ಎಂದು ಕಳೆದ ತಿಂಗಳ **ನೋಟ**ದಲ್ಲಿ ಹೇಳಿದ್ದನ್ನು '**ಖಂಡಿತ** ತಪ್ಪದು' ಎಂದು ಮತ್ತೊಮ್ಮೆ ಹೇಳುತ್ತೇವೆ.

ಕಾರ್ಯದರ್ಶಿಗಳ ಕಳವಳ

'ಪ್ರಮುಖ ರಾಷ್ಟ್ರೀಯ ಕಾರ್ಯಕರ್ತರಲ್ಲಿ ಏಕೀಕರಣಕ್ಕಾಗಿ ಅಜ್ಞಾನ–ಅನಾಸ್ಥೆಗಳಿವೆ' ಎಂದು ಕರ್ನಾಟಕ ಏಕೀಕರಣ ಪರಿಷತ್ತಿನ ಕಾರ್ಯದರ್ಶಿಗಳು ಹೇಳಿದರಷ್ಟೆ? ಇದರರ್ಥವೇನು? ಇಡಿಯ ಜನ್ಮವನ್ನು ದೇಶಸೇವೆಯಲ್ಲಿ ಸಾರ್ವಜನಿಕ ಜೀವನದಲ್ಲಿ ಸವೆಯಿಸಿದ ಶ್ರೀ. ಮುದವೀಡರು ಈ ಮಾತನ್ನು ಹೇಳುವಾಗ, ವ್ಯಕ್ತಿಗಳ ದೋಷಾರೋಪಣೆಯಿಂದ ಪ್ರೇರಿತರಾದರೆ? ಇಲ್ಲವೆ, ಏಕೀಕರಣ ಚಳವಳ ಸತ್ತಂತಾದುದಕ್ಕೆ ಕಳವಳಗೊಂಡರೆ? ದೇಶದ ಸ್ವಾತಂತ್ರ್ಯದ ಹೋರಾಟದಲ್ಲಿ ರಾಷ್ಟ್ರೀಯ ಕಾರ್ಯಕರ್ತರು ಯಾವಾಗಲೂ ಮುಂದಾದವರು. ಅಲ್ಲಲ್ಲಿ ಕನ್ನಡ ವ್ಯಕ್ತಿಗಳಿಂದ ಅನ್ಯಾಯವನ್ನು ಆಗಾಗ (ದೃಷ್ಟಾಂತಕ್ಕಾಗಿ, ಗಾಂಧಿ–ಐರ್ವಿನ್ ಸಂಧಾನ) ಹಟದಿಂದ ಸರಿಪಡಿಸಿಕೊಂಡ ನಮ್ಮ ದೇಶಭಕ್ತ ಮುಂದಾಳುಗಳು, ಏಕೀಕರಣಕ್ಕಾಗಿ ಯಾವಾಗ ಹಟ ತೊಟ್ಟರು? ಓಡಿಸಾದಲ್ಲಿ ಕಾಂಗ್ರೆಸ್ ಮಂತ್ರಿಮಂಡಳದ ಮುಖ್ಯ ಪ್ರಧಾನರಾದ ಶ್ರೀ. ಬಿ. ವಿಶ್ವನಾಥದಾಸರು ಕಾಂಗ್ರೆಸಿಗರಾದರೂ, ನಮ್ಮವರು ಅಸಹಕಾರಮಾಡಿದ ವೇಳೆಯಲ್ಲಿಯೆ, ಓಡಿಸಾದ ಪ್ರಾಂತೀಕರಣಕ್ಕಾಗಿ ಮುಂದಾಗಿ ಹೆಣಗಾಡಿದರು. ನಮ್ಮ ಕಾಂಗ್ರೆಸಿಗರು ಹಾಗೆ ಮಾಡಲಿಲ್ಲವಲ್ಲ? ಯಾಕೆ? ಇವರಿಗೆ ಏಕೀಕರಣ ಬೇಡವಾಗಿದೆಯೆ? ಸ್ವತಃ ಕಾಂಗ್ರೆಸಿಗರಾದ ಶ್ರೀಮಾನ್ ಮುದವೀಡರು ಆ ಮಾತನ್ನು ಒಪ್ಪದೆ ಕೇವಲ ಇವರಲ್ಲಿ ಏಕೀಕರಣಕ್ಕಾಗಿ 'ಅಜ್ಞಾನ-ಅನಾಸ್ಥೆ'ಗಳಿವೆ ಎಂದು ಯಾಕೆ ಸಮಾಧಾನವನ್ನು ತಂದುಕೊಂಡಿರಬಾರದು?

ಹಿರಿಯರ ಹುಡುಗತನ

ಇನ್ನು ನಮ್ಮ ಸ್ಥಳೀಯ ಮುಂದಾಳುಗಳ ಮಾತು: ಸಾರ್ವಜನಿಕ ಜೀವನದಲ್ಲಿ ನುರಿತ ಇವರಿಗೆ ಇನ್ನೊಬ್ಬನು ಪ್ರಾಂತೀಕರಣದಿಂದ ಮಾಡಿದ ಟೀಕೆ ಅಸಹಕಾರವೃತ್ತಿಯನ್ನು ಹುಟ್ಟಿಸುವಷ್ಟು ಅಸಹ್ಯವಾಗಬೇಕೇಕೆ? ಯಾರೂ ಯಾವ ಟೀಕೆಯನ್ನೂ ಮಾಡಬಾರದೆಂದರೆ, ಪ್ರಜಾಪ್ರಭುತ್ವದ ಉಪನ್ಯಾಸಗಳು ಕೇವಲ ನಾಲಗೆಯ ವ್ಯಾಯಾಮ ಪ್ರದರ್ಶನವೆನ್ನಿಸುವುದು. ಟೀಕೆಯು ತಪ್ಪು ಇಲ್ಲವೆ ಸುಳ್ಳು ಇದ್ದರೆ, ಅದನ್ನು ತಿದ್ದುವ ಮುಂದಾಳುತನದ ಹಿರಿತನವನ್ನು ತೋರಿಸಬೇಕೆ?–ಇಲ್ಲವೆ ಮಕ್ಕಳಂತೆ ಮುನಿಸುಗೊಂಡು ಮೂಲೆ ಹಿಡಿಯಬೇಕೆ? ಯಾವ ರಾಷ್ಟ್ರೀಯ ಕಾರ್ಯಕರ್ತನೂ ಏಕೀಕರಣಕ್ಕಾಗಿ ಅಜ್ಞಾನ-ಅನಾಸ್ಥೆಗಳನ್ನು ತೋರಿಸಿಯೆ ಇಲ್ಲ ಎಂದು ಹೇಳುವಂತಿಲ್ಲ (ಸಂ. ಕ. ದ ೨೧–೧೧-೪೪ ರ ಅಗ್ರಲೇಖದಲ್ಲಿ ಇಂತಹ ಅಭಿಪ್ರಾಯವಿದೆ). ಅಥವಾ ಮುನಿಸುಗೊಂಡು ತಾವೇ '(ಹಲಕೆಲವು) ರಾಷ್ಟ್ರೀಯ ಪ್ರಮುಖ ಕಾರ್ಯಕರ್ತರು' ಎಂದು ಜನತೆಗೆ ತೋರಿಸಬೇಕಾಗಿದೆಯೆ? ಧ್ಯೇಯದಲ್ಲಿ ವಿಶ್ವಾಸವಿದ್ದವನು ಟೀಕೆಗಳನ್ನು ಲೆಕ್ಕಿಸದೆ ದುಡಿಯುವನಾದರೆ, ಟೀಕೆಗಳನ್ನೆ ಗಮನಿಸುವವನಿಗೆ ಕಳಕಳಿಯ ಧ್ಯೇಯವಿಲ್ಲ ಎನ್ನಬಹುದಾಗಿದೆ. ನಿಜವಿದ್ದ ಮಾತೆಂದರೆ, ಇಂದಿನ ಸಂದರ್ಭದಲ್ಲಿ ಹಿರಿಯರೆನ್ನುವವರ ಹುಡುಗತನದ ವೃತ್ತಿಯನ್ನು ನೋಡಿದರೆ 'ಅಜ್ಞಾನ–ಅನಾಸ್ಥೆ'ಗಳಿಗಿಂತಲೂ ವಸ್ತುಸ್ಥಿತಿ ನಿರಾಶಾಜನಕವಿರಬಹುದು ಎಂದು ಹೆದರಿಕೆಯಾಗುವುದು.

ಕಾಂಗ್ರೆಸು ಮತ್ತು ಏಕೀಕರಣ

ಒಂದು ಮಾತನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು. ಭಾಷಾನುಗುಣ ಪ್ರಾಂತರಚನೆಯ ತತ್ತ್ವವನ್ನು ಒಪ್ಪಿದ ಕಾಂಗ್ರೆಸಿನ ಮೇಲೆ ದೋಷಾರೋಪಣೆ ಇಲ್ಲ; ಆದರೂ 'ಕಾಂಗ್ರೆಸು ಕರ್ನಾಟಕದ ಏಕೀಕರಣ ತತ್ತ್ವವನ್ನು ಒಪ್ಪಿಲ್ಲವೆ?' ಎಂದು ಸಾಯುವವರೆಗೂ ಹೇಳಿಕೊಳ್ಳುವ ಅಧಿಕಾರ ಮಾತ್ರ ಕಾಂಗ್ರೆಸಿನ ಕನ್ನಡ ಅನುಯಾಯಿಗಳಿಗೆ ಬಾರದು. ಕಾಂಗ್ರೆಸು ಆ ತತ್ತ್ವವನ್ನು ಒಪ್ಪಿತು; ಅದಕ್ಕನುಗುಣವಾಗಿ ಕಾಂಗ್ರೆಸಿನ ಆಡಳಿತದಲ್ಲಿ (ಎಂದರೆ ಕಾಂಗ್ರೆಸ್ ಸಂಸ್ಥೆಯ ಘಟನೆಯಲ್ಲಿ) ಕರ್ನಾಟಕವು ಒಂದು ಪ್ರಾಂತವಾಯಿತು. ಆ ಮಾತಿಗೆ ೨೦ ವರುಷಗಳಾದುವು. ಈ ಇಪ್ಪತ್ತು ವರುಷಗಳಲ್ಲಿ ಕರ್ನಾಟಕಕ್ಕಿಂತ ಚಿಕ್ಕ ಮತ್ತು ಬಡವ ಎರಡು ಪ್ರದೇಶಗಳು ಸ್ವತಂತ್ರ ಪ್ರಾಂತವಾದುವು; ಆದರೆ ನಾವು ಮಾತ್ರ 'ಕೆ. ಪಿ. ಸಿ. ಸಿ.' ಯೆ ನಮ್ಮ ಸ್ವತಂತ್ರ ಪಾರ್ಲಮೆಂಟು ಎಂದು ಸಮಾಧಾನವನ್ನು ತಂದುಕೊಳ್ಳಬೇಕು. ಕಾಂಗ್ರೆಸ್ ಸಂಸ್ಥೆಯ ಆಡಳಿತದಲ್ಲಿ ಕರ್ನಾಟಕವು ಸ್ವತಂತ್ರ ಪ್ರಾಂತವಾದ ಅನುಭವದಿಂದ, ನಿಜವಾದ ಏಕೀಕೃತ ಕರ್ನಾಟಕ ಬೇಡವೆನಿಸಿರಬಹುದೆ ನಮ್ಮ ರಾಷ್ಟ್ರೀಯ ಮುಂದಾಳುಗಳಿಗೆ? ಇಲ್ಲವಾದರೆ, ಅವರು ಏಕೀಕರಣಕ್ಕಾಗಿ ಹಟ ತೊಡಬಹುದಾಗಿತ್ತಲ್ಲ? ಹೀಗೆ ನಾವು ತರ್ಕಮಾಡಿದರೆ ತಪ್ಪಾಗದಿದ್ದರೂ, ನಮ್ಮ ತರ್ಕ ತಪ್ಪಾದರೆಯೆ ನಮಗೆ ಸಂತೋಷವಿದೆ. ಆದರೂ ಇತ್ತಿತ್ತಲಾಗಿ ಕಂಡ ಒಂದೆರಡು ಅನುಭವಗಳಿಂದ ಏಕೀಕರಣಕ್ಕೆ ರಾಷ್ಟ್ರೀಯ ಮನೋವೃತ್ತಿಯಲ್ಲಿ ಕಳಕಳಿಯಾಗಲಿ ಕಾರಣವಾಗಲಿ ಸಾಕಷ್ಟಿಲ್ಲ ಎಂದೆನ್ನಿಸುವಂತಿದೆ.

ದೋಷಾರೋಪಣೆಯಲ್ಲ, ದುರ್ದೈವದ ದೃಷ್ಟಾಂತ!

ಕರ್ನಾಟಕ ಕಾಂಗ್ರೆಸ್ ಕಾರ್ಯಕರ್ತರ ಮೇಲೆ ಆರೋಪ ಹೊರಿಸಿ ವಾದಗೆಲ್ಲುವ ಹಟವಾಗಲಿ ಇಚ್ಛೆಯಾಗಲಿ ನಮಗಿಲ್ಲ. ಕಳೆದ ತಿಂಗಳ **ನೋಟ**ದಲ್ಲಿ ಆ ಮಾತನ್ನು ಸ್ಪಷ್ಟ ಮಾಡಿದ್ದೇವೆ.

ಆದರೆ ದೇಶಸೇವೆಗಾಗಿ ಸ್ವಾರ್ಥತ್ಯಾಗ ಮಾಡಿದವರು, ಕಷ್ಟಗಳನ್ನು ಕಂಡುಂಡವರು, ಮುಂದಾಳುತನದ ಸಿಂಹಾಸನವನ್ನಲಂಕರಿಸಿದವರು, ಸಾರ್ವಜನಿಕ ಜೀವನದ ಕಣದಲ್ಲಿ ಕೆಳ-ಮೇಲುಗಳನ್ನು ಅನುಭವಿಸಿದವರು—ಇಂತಹರು ಒಂದು ಅತ್ಯಂತ ಅಗತ್ಯದ, ಪ್ರಾಂತದ ಬೆಳವಣಿಗೆಯ, ದೇಶದ ಹಿತದ ಯೋಜನೆಯ ಸಂದರ್ಭದಲ್ಲೂ ಸಂಕುಚಿತ ದೃಷ್ಟಿಯುವರಂತೆ ದುರಭಿಮಾನಿಗಳಂತೆ ಹಟಮಾರಿ ಹುಡುಗನಂತೆ ವರ್ತಿಸುವುದೆಂದರೆ, ಪ್ರಾಂತದ—ದುರ್ದೈವ ಕನ್ನಡಿಗರ ಪೂರ್ವಜನ್ಮ ಪರಂಪರೆಯ ಪಾಪಸಂಚಯ—ಎಂದೇ ತಿಳಿಯಬಹುದಲ್ಲವೆ? ಏಕೀಕರಣಕ್ಕಾಗಿ ಅಗತ್ಯವನ್ನೂ ಉತ್ಸಾಹವನ್ನೂ ತೋರುವ, ಮಿಕ್ಕವರ ಉತ್ಸಾಹಭಂಗಕ್ಕಾಗಿ ಯತ್ನಿಸಲು ಕೂಡ ಹಿಂಜರಿಯದ ಮನೋವೃತ್ತಿಗಾಗಿ ಎಷ್ಟು ನೊಂದರೂ ಸಾಲದು, ಎಷ್ಟು ಹಳಿದರೂ ಸಾಲದು!! —ಆದರೆ, ನಿಜವಾದ ಉತ್ಸಾಹವಿದ್ದವನಿಗೆ ಅದನ್ನು ಮಾಡಲು ಮನಸೂ ಇಲ್ಲ, ವೇಳೆಯೂ ಇಲ್ಲ. ಯಾವುದಕ್ಕೂ ಜನತೆಯ ಸಮ್ಮುಖದಲ್ಲಿ ನಿಲ್ಲಲು ಹೆದರುವ ಮುಂದಾಳುಗಳು, ಒಂದು ಪತ್ರಿಕೆಯ ಮರೆಯಿಂದ, ಒಂದು ರಹಸ್ಯವಾದ ಅಪ-ಪ್ರಚಾರಯತ್ನದಿಂದ ಹಣಿಕಿಕ್ಕುವುದು ಅವರ ಯೋಗ್ಯತೆಗೆ ಶಿಫಾರಸಿನ ಪತ್ರವಲ್ಲ; ಅಂತಹರ ಮುಂದಾಳುತನವನ್ನೊಪ್ಪುವ ಸಾರ್ವಜನಿಕ ಜೀವನದ ಬುದ್ಧಿಯ ಲಕ್ಷಣವೂ ಅಲ್ಲ.

ದ್ವೇಷದೃಷ್ಟಿ ಅಲ್ಲ, ಧ್ಯೇಯದೃಷ್ಟಿ ಇದೆ!

ಈ ಟೀಕೆ ಮಾಡುವಾಗ ನಮಗೆ ದ್ವೇಷಬುದ್ಧಿ ಇಲ್ಲ ಎಂದು ಮತ್ತೆ ಮತ್ತೆ ಹೇಳುವೆವು. ವ್ಯಕ್ತಿಗಳನ್ನೆತ್ತಿ ಹಿಡಿದು ತೋರಿಸುವ ಉದ್ದೇಶವಂತೂ ಇಲ್ಲವೇ ಇಲ್ಲ. ಸಾರ್ವಜನಿಕ ಕಾರ್ಯದ ಸ್ವರೂಪವು ನಮ್ಮ ದೃಷ್ಟಿಯಿಂದ ವಿಶಿಷ್ಟವಾದುದಿದೆ ಅದರಲ್ಲಿ ವ್ಯಕ್ತಿಗಳಿಗೆ ವೈಯಕ್ತಿಕವಾದ ಸ್ಥಾನವೆ ಇಲ್ಲ; ಇದನ್ನರಿಯದವರು, ಎಂದರೆ ಸಾರ್ವಜನಿಕ ಕಾರ್ಯದ ಸ್ವರೂಪವನ್ನೆ ಅರಿಯದವರು, ವ್ಯಕ್ತಿಗಳನ್ನು ವೈಯಕ್ತಿಕವಾಗಿ ಟೀಕಿಸಬಲ್ಲರು. ನಮ್ಮ ದೃಷ್ಟಿ ಅಂತಹದಲ್ಲ; ನಮ್ಮಲ್ಲಿ ಅನೇಕರಿಗೆ ಅಂತಹ ದೃಷ್ಟಿಯು ಇವೆ, ಅದು ಬದಲಾಯಿಸಲೇಬೇಕೆಂದು ನಮ್ಮ ಹಟ. ಇದಲ್ಲದೆ, ಸಾರ್ವಜನಿಕ ಕಾರ್ಯದ ಸಂದರ್ಭದಲ್ಲಿ ಟೀಕಿಸಿಕೊಳ್ಳದಂತಹ ಮಹತ್ತ್ವದ ವ್ಯಕ್ತಿಗಳೂ ನಮ್ಮಲ್ಲಿಲ್ಲ. ಅದಕ್ಕಾಗಿ ಓದುಗರು ನಮ್ಮ ಟೀಕೆಯನ್ನು ಸಮಂಜಸವಾದ ರೀತಿಯಲ್ಲಿ ತಿಳಿದುಕೊಳ್ಳಬೇಕು. ಏಕೀಕರಣದಂತಹ ಧ್ಯೇಯವೊಂದಿದೆ, ಅದನ್ನು ಸಾಧಿಸುವ ಅರ್ಹತೆಯನ್ನು ನಾವು ಪಡೆಯುವುದು ಹೇಗೆ, ಆ ಮಾರ್ಗದಲ್ಲಿ ಇದುವರೆಗೆ ನಾವು ಮುಂದೆ ಹೆಜ್ಜೆಯನ್ನಿಡಲಾರದಾದೆವೇಕೆ—ಇಂತಹ ಪ್ರಶ್ನೆಗಳನ್ನು, ಆ ಧ್ಯೇಯದೃಷ್ಟಿಯಿಂದ ನಾವು ಬಿಡಿಸಬೇಕಾಗಿದೆ, ಬಿಡಿಸುವುದಗತ್ಯವಾಗಿದೆ; ಅದಕಾಗಿ ಸದ್ಯದ ಪರಿಸ್ಥಿತಿಯನ್ನು ಪೂರ್ತಿಯಾಗಿ, ಪ್ರಾಮಾಣಿಕವಾಗಿ ತಿಳಿದುಕೊಳ್ಳೋಣ!

ಸ್ವಾರ್ಥಿಗಳ ಸೊತ್ತು

... ಕಾಂಗ್ರೆಸು ಭಾಷಾನುಗುಣ ಪ್ರಾಂತರಚನೆಯನ್ನು ಮನ್ನಿಸಿದೆ ಎಂದು ಒಪ್ಪಿದ ಮೇಲೆ, ಕರ್ನಾಟಕದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಏಕೀಕರಣವನ್ನು ಎಷ್ಟರ ಮಟ್ಟಿಗೆ ತಮ್ಮ ಕಾರ್ಯಕ್ರಮದಲ್ಲಿ ಸೇರಿಸಿಕೊಂಡರೆಂಬುದನ್ನು ಕೇಳಬಹುದಲ್ಲವೆ? ನೆಹರು ಸಮಿತಿಗೆ (೧೯೨೪ರಲ್ಲಿ) ವರದಿಯನ್ನು ಒಪ್ಪಿಸಿದ್ದು ಕಾಂಗ್ರೆಸ್ ಕಾರ್ಯಕರ್ತರ ನೇತೃತ್ವದಲ್ಲಿ. ಆ ವರದಿಯ ತರುವಾಯ ೧೯೪೨ರ ವರೆಗೆ ಕರ್ನಾಟಕದ ಕಾಂಗ್ರೆಸ್ ಕಾರ್ಯಕರ್ತರು ಪ್ರಾಂತೀಕರಣ ಚಳವಳವನ್ನು ಯಾವ ಕಾಲಕ್ಕೆ, ಎಷ್ಟು ಸಲ, ಯಾವ ರೀತಿಯಲ್ಲಿ ಹೂಡಿದರು? ಈ ಪ್ರಶ್ನೆಗೆ ಉತ್ತರವನ್ನು ಕೊಡುವುದನ್ನು ಸಂಶೋಧನಾಪಟುಗಳಾದ ಇತಿಹಾಸತಜ್ಞರಿಗೆಯೆ ನಾವು ಬಿಡಬೇಕಾಗುವುದು. ರಾಜಕೀಯ ಚಳವಳವಿಲ್ಲದ ಕಾಲಕ್ಕೆ ವಿಧಾಯಕ ಕಾರ್ಯಕ್ರಮದಲ್ಲಿ ಏಕೀಕರಣವನ್ನು ಸೇರಿಸಬಾರದಾಗಿತ್ತೇಕೆ? ವಸ್ತುಸ್ಥಿತಿಯನ್ನು ಪ್ರಾಮಾಣಿಕವಾಗಿ ತಿಳಿದುಕೊಂಡು ಈ ಪ್ರಶ್ನೆಗೆ ಉತ್ತರ ಕೊಟ್ಟರೆ, ಯಾವ ಕನ್ನಡಿಗನಿಗೂ ಗೌರವವೆನ್ನಿಸದು. ತಾವು ಮುಂದಾಗಿ, ಕೈಕೊಂಡು ಈ ಕಾರ್ಯವನ್ನು ನಡೆಯಿಸದಿದ್ದರೂ ಇನ್ನೊಬ್ಬರು ಅದನ್ನು ಕೈಕೊಳ್ಳುವರೆಂದಾಕ್ಷಣ ತಟ್ಟನೆ ಕಾಂಗ್ರೆಸಿಗರು ಚಟುವಟಿಕೆಯನ್ನು ತೋರಿಸುತ್ತಿದ್ದರು. ಧಾರವಾಡದಲ್ಲಿ ಹಿಂದೊಮ್ಮೆ ಶ್ರೀ. ರಾಮಕೃಷ್ಣ ಕಾರಂತರ ಅಧ್ಯಕ್ಷತೆಯಲ್ಲಿ ಸೇರಿದ ಏಕೀಕರಣ ಪರಿಷತ್ತಿನ ಮುಂಚಿನ ಮತ್ತು ತರುವಾಯದ ಇತಿಹಾಸ ಈ ಮಾತಿಗೆ ಇತ್ತೀಚಿನ ಸಾಕ್ಷಿಯಾಗಿದೆ. ಇದೆಲ್ಲವನ್ನೂ ನೋಡಿದರೆ, ಒಂದು ಮಾತು ಸ್ಪಷ್ಟವಾಗುವುದು: ಏಕೀಕರಣ ಚಳವಳವು ನಮ್ಮಲ್ಲಿ ಕೇವಲ ಮುಂದಾಳುತನವನ್ನು ಉಳಿಸಿಕೊಳ್ಳುವ ಇಲ್ಲವೆ ಗಳಿಸಿಕೊಳ್ಳುವ ಸಾಧನವಾಗಿದ್ದಿತು. ಮುಂದಾಳುತನ ಉಳಿದ ಇಲ್ಲವೆ ದೊರೆತ ಕ್ಷಣ ಸ್ವೀಕೃತವಾದ ಗೊತ್ತುವಳಿಗಳ ಸಮೇತವಾಗಿ ಏಕೀಕರಣ ಪ್ರಶ್ನೆಯು ಗಂಗೆಯ ತಳವನ್ನು ಕಾಣುತ್ತಿದ್ದಿತು.

ದೋಷ ವ್ಯಕ್ತಿಯದಲ್ಲ, ಸಾರ್ವಜನಿಕರದು

ಈ ಮಾತನ್ನು ಹೇಳುವುದರಲ್ಲಿ ಒಂದೆರಡು ವ್ಯಕ್ತಿಗಳನ್ನು ದೂಷಿಸಬೇಕೆಂಬ ಉದ್ದೇಶ ನಮಗಿಲ್ಲ. ದೂಷಣೆಗೆ ಅರ್ಹವಾದ ವ್ಯಕ್ತಿಯ ಕೃತಿಗಳೆ ಆ ಕೆಲಸವನ್ನು ಮಾಡುವುವು. ಆದರೆ ನಮ್ಮ ದೃಷ್ಟಿಯಿಂದ ಇಂತಹ ಪರಿಸ್ಥಿತಿಯ ಪೂರ್ತಿಯಾದ ಜವಾಬ್ದಾರಿಯು ನಮ್ಮ ಸಾರ್ವಜನಿಕ ಜೀವನದ ಮೇಲೆಯೆ ಇದೆ. ನಮ್ಮ ಮುಂದಾಳುಗಳೆಂದರೆ ಯಾವಾಗಲೂ ನಮ್ಮ ಯೋಗ್ಯತೆಗೆ ತಕ್ಕವರೇ ಇರುತ್ತಾರೆಂಬುದನ್ನು ನಾವು ಮರೆಯುವಂತಿಲ್ಲ ೧೯೨೦ರಿಂದ ನಡೆದುಬಂದ ಸಾರ್ವಜನಿಕ ಜೀವನದಲ್ಲಿ ಮುಂದಾಳುತನ ಬದಲಾಯಿಸುತ್ತ ಬಂದಿತು. ನಮ್ಮ ಪ್ರಾಂತವು ಮಾತ್ರ ಶಿಕ್ಷಣದೃಷ್ಟಿಯಿಂದ ಹಿಂದುಳಿದದ್ದರಿಂದ, ನಮ್ಮಲ್ಲಿಯ ಮುಂದಾಳುತನ ಮಿಕ್ಕವರಿಗಿಂತ ಕೆಳತರಗತಿಯದಿದ್ದಿತು. ಮುಂದಾಳುತನವೆಂದರೆ ಸಾರ್ವಜನಿಕರ ಪ್ರತಿನಿಧಿತ್ವ ಎಂಬ ಕಲ್ಪನೆಯ ಬದಲಾಗಿ, ಸಾರ್ವಜನಿಕರಿಗಿಂತ ಬೇರೆಯಾದ,—ಮೇಲಿನದಾದ—ಶಕ್ತಿ ಎಂದು ನಮ್ಮ ಕಲ್ಪನೆಯಾಯಿತು. ಆ ಕಲ್ಪನೆಗನುಗುಣವಾಗಿ ಎಂದಿನ ಮುಂದಾಳುತನ ಇದ್ದಂತೆಯೆ ಉಳಿಯಿತು. ಜೀವನ ಬದಲಾಯಿಸಿದರೂ ಅದಕ್ಕೆ ತಕ್ಕ ಮುಂದಾಳುತನ ಬಾರದಾಯಿತು. ದಿನದಿನಕ್ಕೆ ಹಳೆಯ ಮುಂದಾಳುತನವು ತನ್ನ ಕರ್ತವ್ಯವನ್ನು ಬದಿಗಿಟ್ಟು ಆತ್ಮಸಂರಕ್ಷಣೆಗಾಗಿಯೆ ಟೊಂಕ ಕಟ್ಟಿ ನಿಂತಿತು. ಆ ಆತ್ಮಸಂರಕ್ಷಣೆಗೆ ಈ ಏಕೀಕರಣವೂ ಕ್ರಮಪ್ರಾಪ್ತವಾದ ಒಂದು ಸಾಧನವಾಯಿತು. ಇಂದು ಏಕೀಕರಣ ಚಳವಳವು ಕನ್ನಡಿಗರ ಸ್ವಾಭಿಮಾನಕ್ಕೆ ತಕ್ಕುದಾಗಿ ಬೆಳೆಯಬೇಕಾದರೆ, **ಮುಂದಾಳುತನ ಬದಲಾಯಿಸಲೇ ಬೇಕು.**

ದೃಷ್ಟಿ, ವ್ಯಕ್ತಿಯಲ್ಲ!

ಮುಂದಾಳುತನ ಬದಲಾಯಿಸಬೇಕೆಂದರೆ ಮುಂದಾಳುಗಳು ಬದಲಾಯಿಸಬೇಕು ಎಂದೇ ಅರ್ಥವಲ್ಲ. ಮುಂದಾಳುತನವು ದೃಷ್ಟಿಯಲ್ಲಿದೆ, ವ್ಯಕ್ತಿಯಲ್ಲಿ ಅಲ್ಲ. ದೃಷ್ಟಿ ಬದಲಾಯಿಸುವುದೇ ಮುಖ್ಯ. ಆದಾಪರ ಯಾವ ವ್ಯಕ್ತಿ ಇದ್ದರೂ (ಹೊಸತೇ ಇರಲಿ, ಹಳೆಯದೆ ಇರಲಿ) ಅಷ್ಟೆ! ಇಂದಿನ ಮುಂದಾಳುತನದ ದೃಷ್ಟಿ ಎಂದರೆ ಸಾರ್ವಜನಿಕರಿಂದ ಅಲಿಪ್ತವಾದುದಿದೆ. ಕರ್ನಾಟಕವು ಕಾಂಗ್ರೆಸ್‌ನಿಷ್ಠೆಯಲ್ಲಿ ಎಲ್ಲ ಪ್ರಾಂತಗಳಿಗಿಂತ ಮುಂದಿರುವುದು. ಪ್ರಾಂತಿಕ ಕಾಂಗ್ರೆಸ್ ಮುಂದಾಳುತನದ ಶ್ರೇಯಸ್ಸಲ್ಲ; ಅಖಿಲ ಭಾರತ ಕಾಂಗ್ರೆಸು ಮತ್ತು ಮಹಾತ್ಮಾ ಗಾಂಧಿ—ಇವುಗಳಿಗಾಗಿ ಕನ್ನಡಿಗರಲ್ಲಿ ಅಚಲನಿಷ್ಠೆ ಇದೆ ಎಂದೇ ಅರ್ಥ. ಆಗಾಗ ಅಖಿಲಭಾರತೀಯ ಕಾಂಗ್ರೆಸಿನ ಚಳವಳವನ್ನು ಕರ್ನಾಟಕದಲ್ಲಿ ಪ್ರವಹಿಸುವ ಕಾಲುವೆಯಲ್ಲದೆ ಹೆಚ್ಚಿನ ಯೋಗ್ಯತೆ ನಮ್ಮ ಪ್ರಾಂತದ ಮುಂದಾಳುತನದಲ್ಲಿ ಖಂಡಿತ ಇರಲಿಲ್ಲ. ಕಾಲುವೆಯಾದ್ದರಿಂದ ಮೇಲಿನಿಂದ ನೀರು ಬಾರದ ವೇಳೆಯಲ್ಲಿ ನಮ್ಮ ಮುಂದಾಳುತನ ಒಣ ದೊಳಿಯು ತಗ್ಗು ಮಾತ್ರ! ಉದಾಹರಣೆಗಾಗಿ, ಹಿಂದೀಪ್ರಚಾರ ನಮ್ಮಲ್ಲಿ ಎಷ್ಟು ಸುವ್ಯವಸ್ಥಿತವಾಗಿದೆಯೊ ಅಷ್ಟೇ ಏಕೀಕರಣ ಚಳವಳವು ಅವ್ಯವಸ್ಥಿತವಾಗಿದೆ. ಮುಂದಾಳುತನ ಬದಲಾಯಿಸಬೇಕೆಂದರೆ, ಮೊದಲು ಪ್ರಾಂತದ ಜೀವನದೊಡನೆ ಸಮರಸವಾದುದಿರಬೇಕು.

ನಮ್ಮಲ್ಲಿಯೆ ಬೇರೂರಿಸಬೇಕು!

ಪ್ರಾಂತದ ಜೀವನದಲ್ಲಿ ಅದರ ಮುಂದಾಳುತನ ಸಮರಸವಾಗಿರಬೇಕೆಂದರೆ, ಪ್ರಾಂತದ ಜೀವನದಲ್ಲಿಯೆ ಹುಟ್ಟಿ ಬೆಳೆದು ಬಾಳುವುದಾಗಿರಬೇಕು. ಬೇರೆ ಶಬ್ದಗಳಲ್ಲಿ ಹೇಳುವುದಾದರೆ, ವಿರಾಟಪುರುಷನಂತೆ ನಮ್ಮ ಸುಖ-ದುಃಖಗಳನ್ನು ಕಟ್ಟಿಕೊಂಡೇ ಅದು ಮೂರ್ತಸ್ವರೂಪವನ್ನು ಹೊಂದಬೇಕು. ರಾಜಕಾರಣದ ಭಾಷೆಯಲ್ಲಿ ಹೇಳುವುದಾದರೆ, ನಮ್ಮಿಂದಲೆ ನಮ್ಮ ಮುಂದಾಳುತನಕ್ಕೆ ಸ್ವರೂಪವೂ ಶಕ್ತಿಯೂ ದೊರೆಯಬೇಕು. ಕರ್ನಾಟಕವು ಭಾರತದ ಅಂಗವಾಗಿದೆ, ಭಾರತಕ್ಕೆ ಸ್ವಾತಂತ್ರ್ಯವಿಲ್ಲದಾಗ, ಕರ್ನಾಟಕದ ಸ್ವಾತಂತ್ರ್ಯಕ್ಕೆ ಬೆಲೆ ಬಾರದು; ನಿಜ. ಆದರೆ ಭಾರತದ ಸ್ವಾತಂತ್ರ್ಯಕ್ಕೆ ಹೆಣಗಾಡುವ ಕರ್ನಾಟಕವು ತನ್ನ ಶಕ್ತಿ, ಸಂಪತ್ತುಗಳನ್ನು ಕಡೆಗಣಿಸಬೇಕಿಲ್ಲ; ಹಾಗೆ ಮಾಡಿದರೆ ಭಾರತದ ಸ್ವಾತಂತ್ರ್ಯದ ಹೋರಾಟದಲ್ಲೂ ಕರ್ನಾಟಕವು ತನ್ನ ಉಪಯುಕ್ತತೆಯನ್ನು ಸಫಲಗೊಳಿಸಲಾರದು. ಆದಕಾಗಿ ಯಾವಾಗಲೂ ಕರ್ನಾಟಕದ ಶಕ್ತಿ-ಸಂಪತ್ತುಗಳನ್ನು ಬೆಳೆಯಿಸುವುದಕ್ಕೆ ಮೊದಲಸ್ಥಾನವನ್ನು ಕೊಡುವ ದೃಷ್ಟಿಯೆ ಯೋಗ್ಯವೆನ್ನಿಸುವುದು; ಆ ದೃಷ್ಟಿಯ ಮುಂದಾಳುತನವೆ— ಕನ್ನಡಿಗರ ಆತ್ಮೋದ್ಧಾರದ ಮಾನಸಪುತ್ರನಂತಿದ್ದ ಮುಂದಾಳುತನವೆ—ಕರ್ನಾಟಕದ ಮುಂದಾಳುತನವೆನ್ನಿಸುವುದು. ಇದಲ್ಲದ ದೃಷ್ಟಿ ಅಜ್ಞಾನದ ಲಕ್ಷಣ, ಅಂಧಶ್ರದ್ಧೆಯ ಪ್ರತೀಕ; ತರ್ಕದಿಂದ ತಪ್ಪಾದುದು, ವ್ಯವಹಾರಕ್ಕೆ ಒಪ್ಪದ್ದು; ಕೇವಲ ಮಾನಸಶಾಸ್ತ್ರದ ದೃಷ್ಟಿಯಿಂದ ನೋಡಿದರೂ ಮೋಸ ಎನ್ನಿಸುವುದು.

ಪಕ್ಷಬಂಧನವಿಲ್ಲದ ಹಿನ್ನೆಲೆ

ಮೇಲಿನ ಮಾತು ಸರ್ವಸಾಮಾನ್ಯವಾದ ಮಾತು. ಕೇವಲ ನೈಯಕ್ತಿಕವಾಗಿ ಕಾಂಗ್ರೆಸ್ ಪಕ್ಷದ ಇಲ್ಲವೆ ಮತ್ತೊಂದು ಪಕ್ಷದ ಮುಂದಾಳುಗಳಿಗೆ ಅನ್ವಯಿಸುವ ಮಾತಲ್ಲ ಎಂದು ಮತ್ತೊಮ್ಮೆ ಸ್ಪಷ್ಟವಾಗಿ ಹೇಳಬಯಸುತ್ತೇವೆ. ಇದಲ್ಲದೆ ಕೇವಲ ಏಕೀಕರಣ ಚಳವಳವೊಂದನ್ನೆ ಅನುಲಕ್ಷಿಸಿ ನಾವು ಈ ಮಾತನ್ನು ಹೇಳುವುದಿಲ್ಲ. ನಮ್ಮಲ್ಲಿ ಯಾವ ಚಳವಳವೆ ನಡೆಯಲಿ, ಅದು ಫಲದಾಯಕವಾಗಬೇಕಾದರೆ ನಾವು ಹೇಳುವಂತಹ ಮುಂದಾಳುತನವೆ ಅಗತ್ಯವಾಗಿ ಬೇಕು; ಸದ್ಯದ ಮುಂದಾಳುತನವು ಅಷ್ಟೆ ಅಗತ್ಯವಾಗಿ ಹೋಗಬೇಕು. ಕಳೆದ ಏಳು ವರ್ಷಗಳಿಂದ ಈ ನೋಟದಲ್ಲಿ ನಾವು ಸುಸಂಗತವಾದ ಒಂದೇ ಒಂದು ಧೋರಣೆಯನ್ನು—ಸಾರ್ವಜನಿಕತೆಯ ದೃಷ್ಟಿಯಿಂದ—ಪ್ರತಿಪಾದಿಸುತ್ತಿದ್ದೇವಲ್ಲದೆ, ನೋಟದ ಅಭಿಪ್ರಾಯಗಳಿಗೆ ಯಾವುದೊಂದು ಪಕ್ಷಪಂಗಡದ ಆಣೆ-ನಿರ್ಬಂಧವಿಲ್ಲ—ಎಂಬುದನ್ನು ಅನೇಕ ಸುಜ್ಞ ವಾಚಕರು ಕಂಡಿದ್ದಾರೆ, ಇನ್ನು ಅನೇಕರು ಕನಲಿದ್ದಾರೆ. ಇಂದು ಕೂಡ ನಾವು ಮುಂದಾಳುತನದ ಪ್ರಶ್ನೆಯನ್ನು ಸಾರ್ವಜನಿಕರ ದೃಷ್ಟಿಯಿಂದಲೆ ಚರ್ಚಿಸುತ್ತಿದ್ದೇವೆ ಎಂದು ಬೇರೆ ಹೇಳಬೇಕಾಗಿಲ್ಲ. ಇದಲ್ಲದೆ ಕಳೆದ ತಿಂಗಳು ಧಾರವಾಡದಲ್ಲಿ ಸೇರಿದ ಏಕೀಕರಣ ಸಮ್ಮೇಳನಕ್ಕೆ ಸಂದೇಶಗಳನ್ನು ಕಳುಹಿದ ಅನೇಕ ಮುಂದಾಳುಗಳು ಇಂತಹ ಅಭಿಪ್ರಾಯವನ್ನೇ ಸೂಚಿಸಿದ್ದಾರೆಂಬುದು ಮನನೀಯವಾದ ಮಾತು. ಏಕೀಕರಣ ಚಳವಳವು ಫಲಪ್ರದವಾಗಬೇಕಾದರೆ ಅದು ಪ್ರತ್ಯೇಕವೂ ಆಗಿರಬೇಕು, ಸರ್ವಪಕ್ಷೀಯವೂ ಆಗಿರಬೇಕು.

ಧಾರವಾಡದ ಸಮ್ಮೇಳನ

ಏಕೀಕರಣ ಚಳವಳದ ಅಗತ್ಯ ಎಷ್ಟಿದೆ, ಚಳವಳ ಸಡಿಲಾದರೆ ಕರ್ನಾಟಕಕ್ಕೆ ಯಾವ ರೀತಿಯಿಂದ ಅಪಾಯವಿದೆ, ಸದ್ಯಕ್ಕೆ ವಿಲಂಬವಿಲ್ಲದೆ ಕಾರ್ಯೋನ್ಮುಖವಾಗುವುದಾದರೆ ಯಾವ ಧೋರಣೆಯನ್ನು ಸ್ವೀಕರಿಸಬೇಕು, ನಮ್ಮ ಮುಂದಿನ ಮಹತ್ತ್ವದ ಸಮಸ್ಯೆಗಳಾವುವು ಎಂಬುದನ್ನು ಸಮ್ಮೇಳನದ ಸ್ವಾಗತಾಧ್ಯಕ್ಷರಾದ ಶ್ರೀ. ಸಿ. ಸಿ. ಮಳಿಮಠ ಅವರು ತಮ್ಮ ಚಿಕ್ಕ ಭಾಷಣದಲ್ಲಿ ಬಹಳೇ ಮಾರ್ಮಿಕವಾಗಿ ಹೇಳಿದ್ದಾರೆ. ಹಿಂದುಸ್ತಾನದ ಭಾವೀ ಘಟನೆಯ ಸಂಭವವು ಅನಿರೀಕ್ಷಿತವಾಗಿಯೆ ಮುಂದೆ ಬರಬಹುದಾಗಿದೆ; ಯುದ್ಧೋತ್ತರ ಪುನರ್‌ರಚನೆಯ ಯೋಜನೆಗಳನ್ನು ಈಗಾಗಲೆ ಆಯಾ ಪ್ರಾಂತಿಕ ಸರಕಾರಗಳು (ನಮ್ಮದು ಹಂಚಿಹೋದ ಪ್ರಾಂತ) ಕೈಕೊಳ್ಳುತ್ತಲಿವೆ; ಚಿಕ್ಕ-ಚಿಕ್ಕ ಸಂಸ್ಥಾನಗಳ ಆಡಳಿತ ಮತ್ತು ವೆಚ್ಚದ ದೃಷ್ಟಿಯಿಂದ ಸಹಕಾರ ಸಮಾವೇಶಗಳ ಹಂಚಿಕೆ ಮುಂದೆ ಬಂದಿದೆ; ಕೊನೆಯದಾಗಿ ಏಕೀಕರಣ ಸಂಘವು ಅಖಂಡ ಕರ್ನಾಟಕವನ್ನೆ ತನ್ನ ಗುರಿಯಾಗಿಟ್ಟುಕೊಳ್ಳಬೇಕೊ ಇಲ್ಲವೆ ಅದು 'ಅಂತಿಮ ಧ್ಯೇಯ' ಎಂದು, ಬ್ರಿಟಿಶ್ ಕರ್ನಾಟಕದ ಏಕೀಕರಣವನ್ನೆ ಸದ್ಯದ ಧ್ಯೇಯವೆಂದುಕೊಳ್ಳಬೇಕೊ—ಇಂತಹ ಅನೇಕ ಮಹತ್ತ್ವದ ಪ್ರಶ್ನೆಗಳನ್ನು ಚರ್ಚಿಸಿ, ನಿರ್ಣಯಕ್ಕೆ ಬಂದು, ಕೂಡಲೆ ಕಾರ್ಯಕ್ಕೆ ಪ್ರವೃತ್ತರಾಗಬೇಕೆಂದು ಹೇಳಿದ ಸ್ವಾಗತಾಧ್ಯಕ್ಷರ ಕಳಕಳಿಯ ಬೇಡಿಕೆಗೆ ಯಾವ ಕನ್ನಡಿಗನೂ ಭಿನ್ನಾಭಿಪ್ರಾಯವನ್ನು ತಾಳಲಿಕ್ಕಿಲ್ಲ ಎಂದು ನಂಬಿದ್ದೇವೆ.

ನಂಬಿಕೆಗೆ ಅರ್ಹರಾದ ಅಧ್ಯಕ್ಷರು

ಅಧ್ಯಕ್ಷರಾದ ಶ್ರೀಮಾನ್ ಜಿನರಾಜ ಹೆಗಡೆಯವರು, ಮಾತುಗಾರರೆಂಬುದಕ್ಕಿಂತ ಕೃತಿವೀರರೆಂಬುದನ್ನು ತಮ್ಮ ಅಧ್ಯಕ್ಷಕಾರ್ಯದಿಂದ ಅನುಭವಕ್ಕೆ ತಂದುಕೊಟ್ಟರು. ನಮಗಿಂದು ಕೃತಿವೀರರ ಅಗತ್ಯವಿದೆಯಲ್ಲದೆ ಮಾತಿನ ವೀರರವಲ್ಲ. ಏಕೀಕರಣದ ಅಗತ್ಯ ಕನ್ನಡಿಗರಿಗೆ ಎಷ್ಟಿದೆಯೆಂಬುದರ ಮರ್ಮವನ್ನವರು ಚೆನ್ನಾಗಿ ಮನವರಿಕೆ ಮಾಡಿಕೊಂಡಿದ್ದಾರೆಂಬುದು, ಅವರ ಮಿತವಾದ ಮಾತುಗಳಲ್ಲಿ ಸ್ಪಷ್ಟವಾಗಿ ಮೂಡಿಕೊಂಡಿದೆ. ಶ್ರೀ. ನಾಯರ್ ಎಂಬ ಮಲಯಾಳಿ 'ಹಿಟ್ಲರು', ಮಲಯಾಳಿಗಳ ಬದುಕಿಗಾಗಿ ಕರ್ನಾಟಕವನ್ನು ಆಕ್ರಮಿಸುವ ಬಗೆ ಹೇಗೆಂದು ಹಾಕಿದ ಹೊಂಚನ್ನು, ಕನ್ನಡ ಜನಸಾಮಾನ್ಯರೆದುರು ತೆರೆದಿಟ್ಟು ಶ್ರೀ. ಹೆಗಡೆಯವರು ಉಪಕಾರ ಮಾಡಿದ್ದಾರೆ. ಮಲಯಾಳಿಗಳಂತಹ ಅಲ್ಪಸಂಖ್ಯಾಕರೂ, ಕುರುಡರಾಗಿ ನಡೆದಿರುವ ಕನ್ನಡಿಗರ ನ್ನಾಳಲು ಹವಣಿಸುವರೆಂಬ ಹೊಸ ಮಾತು, ಹಲವು ಕನ್ನಡಿಗರಿಗೆ ಹೊಸದೃಷ್ಟಿಯನ್ನು ಕೊಟ್ಟಿತು. ಹೆಗಡೆಯವರ ಕನ್ನಡದ ಅಭಿಮಾನವೂ, ಕರ್ತೃತ್ವಶಕ್ತಿ, ಕಾರ್ಯಕ್ಷಮತೆಗಳೂ, ಕರ್ನಾಟಕ ಏಕೀಕರಣದ ಚಳವಳಿಯನ್ನು ಉತ್ಸಾಹದಿಂದ ಮುಂದುವರಿಸಿಕೊಂಡೊಯ್ದು ಧ್ಯೇಯವನ್ನು ತಲ್ಪಿಸಲು ಸಮರ್ಥವಾಗಿವೆಯೆಂಬುದನ್ನು ನಾವೆಲ್ಲ ನಂಬೋಣ; ನಂಬಿ ಕೆಲಸವನ್ನು ಮಾಡೋಣ!

ಎತ್ತಿಹಿಡಿದ ಗೊತ್ತುವಳಿಗಳು

ಪರಿಷತ್ತಿನಲ್ಲಿ ಪುರಸ್ಕೃತವಾದ ಬೇರೆ ಬೇರೆ ಗೊತ್ತುವಳಿಗಳಲ್ಲಿ ಅಡಕವಾಗಿರುವ ಉತ್ಕಟತೆಯನ್ನೂ ಗಟ್ಟಿತನವನ್ನೂ ನೋಡಿದರೆ, ಕನ್ನಡಿಗರೆಲ್ಲರೂ ಏಕೀಕರಣದ ಬಗ್ಗೆ ಎಷ್ಟೊಂದು ಆತುರರಾಗಿರುವರೆಂಬುದು ಒಡೆದು ಕಾಣುವಂತಿದೆ. ಈ ಗೊತ್ತುವಳಿಗಳಿಗನುಸಾರವಾಗಿ ಕಾರ್ಯಕ್ರಮವನ್ನು ಹಾಕಿಕೊಂಡು ನಾವು ಮುಂದುವರಿಯ ತೊಡಗಿದರೆ, ಯಾವ ಹಿತಶತ್ರುವೂ— ಈ ಮೊದಲಿನಂತೆ—ನಮ್ಮನ್ನು ಮೋಸಗೊಳಿಸಲು ಧೈರ್ಯಮಾಡಲಾರನು. ಎಲ್ಲೆಲ್ಲಿಯೂ ಕನ್ನಡಿಗರ ಒಕ್ಕೊರಲಿನ ಬೇಡಿಕೆ, ಒಂದೆ ಹೃದಯದ ಆಶೆ-ಆಕಾಂಕ್ಷೆ ಕಿವಿಗೆ ಬೀಳಬಹುದು. ಒಂದೇ ಧ್ಯೇಯದಿಂದ ಒಟ್ಟುಗೂಡಿ, ಒಂದೇ ಕ್ಷೇತ್ರದಲ್ಲಿ ಕೆಲಸ ಮಾಡುವುದರಿಂದ, ಕನ್ನಡಿಗರ ಜಾತಿ-ಮತಗಳ—ಗುಂಪು-ಗುಂಪುಗಳ-ವ್ಯಕ್ತಿ-ಪಕ್ಷಗಳ—ಅಂತಃಕಲಹ ಕಡಿಮೆಯಾಗಿ ಈರ್ಷ್ಯೆ ಮತ್ಸರಗಳು ಅಳಿದು ಹೋಗಬಹುದು. ಆದರೆ ಎಲ್ಲರ ದೃಷ್ಟಿ ಧ್ಯೇಯದ ಕಡೆಗೂ, ಅದನ್ನು ಸಾಧಿಸುವ ಕಾರ್ಯದ ಕಡೆಗೂ ಸಂಪೂರ್ಣವಾಗಿ ತೊಡಗಿಕೊಳ್ಳಬೇಕು. ಸಮಾಜಹಿತದ ಗುರಿಯಿಂದಲೆ ಕಾರ್ಯ ಮಾಡುವವರು ಎಂದೂ ಜಗಳವಾಡರು; ಸ್ವಾರ್ಥಸಾಧಕರು ಸೇರಿದಲ್ಲಿ ಮಾತ್ರ ಜಗಳ ಬರುವುದು ಖಂಡಿತ. ಏಕೀಕರಣ ಪರಿಷತ್ತು ನಿಯಮಿಸಿದ ಕಾರ್ಯಕಾರಿ ಮಂಡಲಿ ಯಾವಾಗಲೂ ಈ ಮಾತಿನ ಮನವರಿಕೆಯಿಂದ ಕಾರ್ಯ-ಮಾಡುತ್ತ ಹೋದಲ್ಲಿ, ಕ್ಷಣ-ಕ್ಷಣಕ್ಕೂ ಗುರಿಯನ್ನು ಸಮೀಪಿಸುತ್ತ ಹೋಗಬಹುದು. ಗೊತ್ತುವಳಿಗಳ ಛಾಪೆಯಲ್ಲಿರುವ ಪ್ರಥಮನಿಷ್ಠೆಯು ಕರ್ತವ್ಯ ಜಾಗೃತಿ, ಕಾರ್ಯಾತುರಗಳು ಕನ್ನಡಿಗರ ಕೃತಿಯಲ್ಲಿ ಇಳಿಯಬೇಕು

ರಬಕವಿಯ ಸಾಹಿತ್ಯಸಮ್ಮೇಳನ

ನಮ್ಮ ಈ ಸಂಚಿಕೆ ಕೈಸೇರುವುದರಲ್ಲಿಯೆ ರಬಕವಿಯಲ್ಲಿ ಸೇರಿರುವ ಕ. ಸಾ. ಸಮ್ಮೇಳನದ ೩೪ನೆಯ ಅಧಿವೇಶನ ಮುಗಿದಿರುವುದು (ವಿವರಣೆಗಳಿಂದ ಕೂಡಿದ ವರದಿ ಮುಂದಿನ ಸಂಚಿಕೆಯಲ್ಲಿ ಪ್ರಕಟವಾಗುವುದು.). ಪ್ರಸಿದ್ಧವಾದ ಕಾರ್ಯಕಲಾಪದ ವಿಸ್ತಾರವನ್ನು ನೋಡಿದರೆ, ಸಾಹಿತ್ಯ ಸಮ್ಮೇಳನವು, ಮಿಕ್ಕ ಕಾರ್ಯಕಲಾಪಗಳ ಮರೆಯಲ್ಲಿ, ಎಲ್ಲೆಲ್ಲಿಯೊ ಮುಖ ಇಣಕುತ್ತಿರುವುದನ್ನು ಕಾಣಬಹುದು. ಎಲ್ಲ ಕಾರ್ಯಕಲಾಪಗಳೂ ಸರಿಯಾಗಿ ಜರುಗಿ ಎಲ್ಲರೂ ಅವುಗಳಿಂದ ಪ್ರಯೋಜನ ಪಡೆಯಬೇಕೆಂದಾದರೆ, ಇಂತಹ ಕಿಕ್ಕಿರಿದ ಕಾರ್ಯಕ್ರಮಗಳು ಒಂದು ವಾರದ ವರೆಗಾದರೂ ನಡೆಯಬೇಕು; ಇಲ್ಲವಾದರೆ ಕಾರ್ಯಕರ್ತರಿಗೆ ತೊಂದರೆ, ನೋಡಬೇಕೆಂಬವರಿಗೆ ನಿರಾಶೆ, ಅವಸರದಲ್ಲಿ ಎಲ್ಲವನ್ನೂ ಮುಗಿಸಬೇಕಾಗಿ ಬರುವುದರಿಂದ ಒಂದೂ ವ್ಯವಸ್ಥಿತವಾಗಿ ನೆರವೇರದಿರುವುದು—ಹೀಗೆಲ್ಲ ಆಗುವುದೆಂದು ಹಲವು ಸಲ ಕಂಡುಂಡ ಮಾತು. ಆದರೂ 'ಸಂದಿಯಲ್ಲಿ ಸಮಾರಾಧನೆ ನಡೆಯಿಸುವ' ನಮ್ಮ ಸಂಪ್ರದಾಯ ಅಳಿಸಲೊಲ್ಲದು. ಬರಿಯೆ ಉದ್ಘಾಟಕ, ಸ್ವಾಗತಾಧ್ಯಕ್ಷ, ಅಧ್ಯಕ್ಷ ಇವರ ಭಾಷಣಗಳಲ್ಲಿಯೆ ಮುಕ್ತಾಯಗೊಳಿಸಬೇಕಾಗಿ ಬರುವ ಹಲವು ಗೋಷ್ಠಿಗಳನ್ನು ಹೀಗೆ ನಡೆಯಿಸುವುದಕ್ಕಿಂತ, ಒಬ್ಬರೆ ಒಬ್ಬ ಸಮ್ಮೇಳನಾಧ್ಯಕ್ಷರ ನೇತೃತ್ವದಲ್ಲಿಯೆ ಎಲ್ಲ ಕಾರ್ಯಕ್ರಮವೂ ಜರಗುವಂತೆ ಮಾಡಿದರೆ, ಎಷ್ಟೋ ವೇಳೆಯೂ ಹಣವೂ ಶ್ರಮವೂ ಉಳಿಯಬಹುದು. ಕಾರ್ಯವೂ ಸುಯಂತ್ರಿತವಾಗಿ ಸಾಗಬಹುದು.

ಸಾಂಗಲಿಯ ಶ್ರೀಮಂತರ ಅಭಯದಾನ

ಸಾಹಿತ್ಯ ಸಮ್ಮೇಳನವನ್ನು ಪ್ರಾರಂಭಿಸಿದ ಸಾಂಗಲಿಯ ಶ್ರೀಮಂತ ಯುವರಾಜರು ಮಾತೃಭಾಷೆಯ ಮಹತ್ತ್ವದ ದೃಷ್ಟಿಯಿಂದ ಕನ್ನಡಿಗರ ಹಕ್ಕುಗಳನ್ನೊಪ್ಪಿ ಘೋಷಣೆ ಮಾಡಿರುವುದು ಸಮಾಧಾನದ ಸಂಗತಿಯಾಗಿದೆ. ತಮ್ಮಲ್ಲಿ ಸಮ್ಮೇಳನ ನೆರೆಯಕೂಡದೆಂದು ಕಟ್ಟಪ್ಪಣೆ ಮಾಡಿದ್ದ—ಮತ್ತೆ ಅನಿವಾರ್ಯವಾಗಿ ಅದನ್ನು ಉಪಸಂಹರಿಸಿಕೊಂಡಿದ್ದ – ಶ್ರೀಮಂತ ಮಹಾರಾಜರನ್ನು ಕಂಡ ಕಾಲವೂ ಒಮ್ಮೆ ಇತ್ತು. ಇಂದು ಆ ಕಾಲವೇ ಅಂತಹ ಶ್ರೀಮಂತರಲ್ಲಿ ಸದ್ಬುದ್ಧಿ ಹುಟ್ಟಿಸಿ ಕನ್ನಡದ ಬಗೆಗೂ ಕನ್ನಡಿಗರ ಬಗೆಗೂ ಸಹಾನುಭೂತಿಪೂರ್ಣವಾದ ಮಾತನಾಡಹಚ್ಚಿರುವುದು. ಸಮ್ಮೇಳನದಲ್ಲಿ ಕನ್ನಡದ ಸ್ಥಾನ-ಮಾನಗಳನ್ನೊಪ್ಪಿ ಸಾರಿದ ಶ್ರೀಮಂತರು, ಕನ್ನಡ ಸಾಹಿತ್ಯ ನಿರ್ಮಿತಿಗೂ ಸಂಸ್ಕೃತಿಸಂವರ್ಧನೆಗೂ ಕೈಗೊಟ್ಟು ನೆರವಾದರಲ್ಲವೇ ಅವರ ಅಭಯದಾನ-ಆಶ್ವಾಸನಗಳಿಗೆ ಬೆಲೆ ?

ಅಧ್ಯಕ್ಷರ ಭಾಷಣ

ಸಮ್ಮೇಳನದ ಅಧ್ಯಕ್ಷರಾದ ಶ್ರೀ. ಬಸವನಾಳರ ಭಾಷಣವು ಕನ್ನಡ ಸಾಹಿತ್ಯದ ವಿವಿಧಾಂಗದ ಪ್ರಗತಿ-ಪ್ರಕರ್ಷಗಳಿಗಾಗಿ ಮಾಡಿದ ಹಲವು ವಿಧಾಯಕ ಸೂಚನೆಗಳಿಂದ ತುಂಬಿದೆ. ಅವರ ಮಾತುಗಳಲ್ಲಿ ಸಾಹಿತ್ಯಿಕನ ಭಾವಪ್ರಚೋದಕ ಮಾತುಗಳಿಗಿಂತ, ಧೋರಣೆಯನ್ನರಿತ ಮುಂದಾಳಿನ ಸಂಘಟನಾತ್ಮಕ ಬೋಧನೆಯ ಮಾತುಗಳೆ ಹೆಚ್ಚಾಗಿವೆ. ಕನ್ನಡ ಸಾಹಿತ್ಯ ಪ್ರಪಂಚದಲ್ಲಿಯ ಕೊರತೆಗಳ ಕಲ್ಪನೆ ಶ್ರೀಯುತರಿಗೆ ಸಂಪೂರ್ಣವಾಗಿದೆಯೆಂಬುದನ್ನು ಅವರ ಒಂದೊಂದು ಮಾತೂ ಮನವರಿಕೆ ಮಾಡಿಕೊಡುವಂತಿದೆ. ಇಂತಹ ಅಧ್ಯಕ್ಷರನ್ನು ಪಡೆದ ರಬಕವಿಯ ಸಾಹಿತ್ಯ ಸಮ್ಮೇಳನ, ಕನ್ನಡ ಜನತೆಗೆ ಹೊಸ ಹಾದಿಯನ್ನು ತೋರಿಸಿಕೊಡಲಿ!

ಜಯಂತಿಯ ಲೇಖಕರಿಗೆ:—

೧. ಜಯಂತಿಗೆಂದು ಬರಲಿರುವ ಪ್ರತಿಯೊಂದು ಲೇಖನವೂ ಪಂಡಿತ-ಪಾಮರರಿಬ್ಬರ ಮನಸ್ಸನ್ನೂ ಸೆಳೆದುಕೊಳ್ಳುವಂತಹ ವಿಷಯಗೌರವದಿಂದ ಕೂಡಿದ್ದು, ಜನಸಾಮಾನ್ಯರಿಗೆ ತಿಳಿಯುವಂತೆ ಭಾಷೆ-ಶೈಲಿಗಳು ಸರಲವೂ ಸುಲಭವೂ ಇರಬೇಕು.

೨. ಯಾವುದೇ ಲೇಖನವು ಜಯಂತಿಯ ಮೂರು ನಾಲ್ಕು ಪುಟಗಳನ್ನು ಮಿಕ್ಕಿ ಇರಲಾಗದು. ಜಯಂತಿಯ ಒಂದು ಪುಟದಲ್ಲಿ ಸುಮಾರು ನಾನೂರರಷ್ಟು ಶಬ್ದಗಳು ಕೂಡುವವು. ಈ ಪ್ರಮಾಣವನ್ನರಿತು ಲೇಖಕರು ತಮ್ಮ ಲೇಖನಗಳನ್ನು ಅನುಗೊಳಿಸಬೇಕು. ಉದ್ದುದ್ದ ಕವನಗಳಿಗಿಂತ ಸಣ್ಣ ಸಣ್ಣ ಭಾವಗೀತಗಳಿದ್ದರೆ ಹೆಚ್ಚು ಒಳ್ಳೆಯದು.

೩. ತಮ್ಮ ಲೇಖನವು ಅಚ್ಚಾಗಬೇಕಾದುದೆಂಬುದನ್ನು ಪ್ರತಿಯೊಬ್ಬ ಲೇಖಕರೂ ಲಕ್ಷ್ಯದಲ್ಲಿಟ್ಟುಕೊಂಡಿರಬೇಕಾದುದು ಅತ್ಯಗತ್ಯ. ಅದಕ್ಕಾಗಿ ಅಚ್ಚಿಗೆ ತೊಂದರೆಯಾಗದಂತೆ, ಬರೆಯುವ ಹಾಳೆಗಳಿಗೆ ಸಾಕಷ್ಟು ಬದಿಯಂಚು (Margin) ಬಿಟ್ಟು ಸ್ಪಷ್ಟವಾದ ಅಕ್ಷರಗಳಿಂದ ಒಂದೇ ಮಗ್ಗುಲು ಬರೆಯಬೇಕು.

೪. ಯಾವುದೇ ಪರಭಾಷೆಯ ಲೇಖನದ ಅನುವಾದ ಇಲ್ಲವೆ ಭಾಷಾಂತರವಿದ್ದಲ್ಲಿ ಆ ಮಾತನ್ನು ಸ್ಪಷ್ಟೀಕರಿಸುವುದಕ್ಕೆ ಮರೆಯಲಾಗದು.

೫. ಜಯಂತಿಗೆಂದು ಬರುವ ಲೇಖನಗಳು ಆ ಮೊದಲು ಇನ್ನೆಲ್ಲಿಯೂ ಅಚ್ಚಾಗಿರಬಾರದು. ಮುಂದೆ ಅಚ್ಚಾಗಬೇಕಾದರೆ ನಮ್ಮ ಸಮ್ಮತಿ ಕೇಳಿಕೊಳ್ಳಬೇಕು.

೬. ತಮ್ಮ ಲೇಖನಗಳಲ್ಲಿ ಚಿತ್ರಗಳನ್ನು ಬಯಸುವವರು, ಸಾಧ್ಯವಿದ್ದಲ್ಲಿ ಯುಕ್ತವಾದ ಚಿತ್ರಗಳನ್ನು ಯಾರಿಂದಾದರೂ ಬರೆಯಿಸಿ ಲೇಖನದ ಜೊತೆಗೆ ಕಳುಹಿಸಬಹುದು. ಒಪ್ಪಿಗೆಯೆನಿಸಿದರೆ ಅವುಗಳ ಪಡಿಯಚ್ಚನ್ನು ನಾವೇ ಮಾಡಿಸುವೆವು.

೭. ತಮ್ಮ ಲೇಖನವು ಸ್ವೀಕೃತ-ಅಸ್ವೀಕೃತ ಎಂಬುದನ್ನು ಕೂಡಲೇ ತಿಳಿದುಕೊಳ್ಳಲಪೇಕ್ಷಿಸುವವರು ಲೇಖನದ ಜೊತೆಗೆ ಮುಕ್ಕಾಲಾಣೆಯ ಅಂಚೆಯ ಟಿಕೇಟುಗಳನ್ನಿಟ್ಟಿರಬೇಕು.

೮. ಅಸ್ವೀಕೃತ ಲೇಖನಗಳನ್ನು ಮರಳಿ ಬಯಸುವವರು ಅದಕ್ಕೆ ತಗಲುವ ಅಂಚೆಯ ಟಿಕೇಟುಗಳನ್ನು ಕಳುಹಬೇಕು. ಅಚ್ಚಾದ ಲೇಖನಗಳ ಮೂಲಪ್ರತಿಗಳನ್ನು ಮರಳಿ ಅಪೇಕ್ಷಿಸುವವರು ಮೊದಲೇ ನಮಗೆ ಬರೆದು ತಿಳಿಸಿರಬೇಕು.

ಸಂಪಾದಕ, "ಜಯಂತಿ" ಧಾರವಾಡ

ಕನ್ನಡ ಕತೆಗಾರರಲ್ಲಿ:

ನಮ್ಮ ಕತೆಗಾರರಿಗೆ ಪ್ರತಿಫಲ ಧನ! ಜಯಂತಿಯ ಹೊಸ ಏರ್ಪಾಡು!

ಜಯಂತಿಯಲ್ಲಿ ಬರಲಿರುವ ಕತೆಗಳೆಲ್ಲವೂ ಒಳ್ಳೆಯವಾಗಿರಬೇಕೆಂದು ವಾಚಕರ ಅಪೇಕ್ಷೆಯಿರುವುದು ಸ್ವಾಭಾವಿಕ. ಹಾಗೆ ಒಳ್ಳೆಯ ಕತೆಗಳನ್ನು ಪ್ರಕಟಿಸಬೇಕೆಂದು ಜಯಂತಿಯ ಆಶೆಯಿದೆ. ಅದಕ್ಕಾಗಿ ಕತೆಗಾರರಿಗೆ ಪ್ರತಿಫಲ ಧನವನ್ನು ಕೊಡುವುದಾಗಿ ಜಯಂತಿಯ ಸಂಚಾಲಕರು ನಿರ್ಣಯಿಸಿದ್ದಾರೆ. ಸಂಪಾದಕ ಮಂಡಲಿ ಪ್ರಕಟನೆಗೆ ತಕ್ಕುದೆಂದು ಒಪ್ಪಿಗೆ ಕೊಟ್ಟು, ಕತೆ ಮುದ್ರಿತವಾದ ಒಂದು ವಾರದಲ್ಲಿಯೆ, ಕತೆಗಾರರಿಗೆ—ಕತೆಯ ಆಕಾರ-ಗುಣಗಳ ಯೋಗ್ಯತೆಯಂತೆ—೪ ರಿಂದ ೧೦ ರೂಪಾಯಿಗಳ ವರೆಗೆ ಪ್ರತಿಫಲವನ್ನು ಸಲ್ಲಿಸಲಾಗುವುದು. ಕನ್ನಡನಾಡಿನ ಒಳ್ಳೆಯ ಕತೆಗಾರರೆಲ್ಲ ದಯೆಯಿಟ್ಟು ಜಯಂತಿಗೆ ತಂತಮ್ಮ ರಸವತ್ತಾದ ಸ್ವತಂತ್ರ ಕತೆಗಳನ್ನು ಕಳುಹಿ, ಈ ನಮ್ಮ ಯೋಜನೆ ಫಲಕಾರಿಯಾಗುವಂತೆ ಮಾಡಬೇಕು. ಇದೊಂದು ಸಣ್ಣ ಕತೆಯ ಮೇಲಾಟವಲ್ಲವೆಂಬುದನ್ನು ಎಲ್ಲರೂ ಲಕ್ಷ್ಯದಲ್ಲಿಟ್ಟುಕೊಳ್ಳಬೇಕು. ಜಯಂತಿಯಲ್ಲಿ ಪ್ರಕಟವಾದ ಸ್ವತಂತ್ರ ಕತೆಗಳಿಗೆಲ್ಲ ಪ್ರತಿಫಲ ಕೊಡಲಾಗುವುದು.

ಸಂಪಾದಕ, 'ಜಯಂತಿ'.

ದಿ ಯುನಾಯಿಟೆಡ್ ಕರ್ನಾಟಕ ಇನ್ಶ್ಯೂರೆನ್ಸ್ ಕಂಪನಿ, ಲಿ. ಧಾರವಾಡ

ಹೆಡ್ ಆಫೀಸ್ ಧಾರವಾಡ

- **ವಿಮೆ ಮಾಡುವ ಅನುಕೂಲವುಳ್ಳ ಕರ್ನಾಟಕಸ್ಥರು, ಭರದಿಂದ ಬೆಳೆಯುತ್ತಿರುವ ಈ ಕನ್ನಡ ಕಂಪನಿಯ ಪಾಲಿಸಿಯನ್ನೇ ಪಡೆಯಬೇಕು!**

- ಮೊದಲನೆಯ ಮೌಲ್ಯಮಾಪನದಲ್ಲಿ (Valuation) ಲಾಭವನ್ನು ಹಂಚುವುದಲ್ಲದೆ, ಹೊಸ ವಿಮಾಕಾಯಿದೆಯ ನಿರ್ಬಂಧಗಳಿಗೆ ತಕ್ಕಂತೆ ನಡೆದು, ಎಲ್ಲ ಪಾಲಿಸಿದಾರರ ಪ್ರೋತ್ಸಾಹಕ್ಕೂ ಪಾತ್ರವಾಗಿದೆ.
- ಮರಣಹೊಂದಿದ ಪಾಲಿಸಿದಾರರ ವಾರಸದಾರರಿಗೆ ವಿಲಂಬವಿಲ್ಲದೆ ಹಕ್ಕಿನ ಹಣ (Claim) ವನ್ನು ಸಲ್ಲಿಸಿರುವುದರಿಂದ, ಎಲ್ಲರ ನಂಬಿಗೆಗೂ ತಕ್ಕುದಾಗಿದೆ.
- ಕರ್ನಾಟಕದ ಏಳ್ಗೆಗಾಗಿ ಹಂಬಲಿಸುವವರೂ ಕನ್ನಡನಾಡಿನ ಹಿತಚಿಂತಕರೂ, ಇದೇ ಕಂಪನಿಯ ಪಾಲಿಸಿಗಳನ್ನೂ ಪಾಲುಗಳನ್ನೂ ಕೊಂಡುಕೊಳ್ಳಬೇಕು.

ಏಜಂಟರಿಗೆ ಧಾರಾಳವಾದ ಕಮಿಶನ್ ಕೊಡಲಾಗುವುದು.

ವಿಶೇಷ ವಿವರಕ್ಕೆ ಬರೆಯಬೇಕು :- ಎಂ. ಗೋವರ್ಧನರಾವ, ಮ್ಯಾನೇಜರ್

ತಲೆಗೂದಲು ಚೆನ್ನಾಗಿದ್ದರೆ ಚೆಲುವಿಗೊಂದು ಬೆಲೆ!
ಹಾಗೆ ಚೆನ್ನಾಗಿರುವುದೆಂದರೇನು?

ತಲೆಗೂದಲು ಕಪ್ಪಗೆ ಇರಬೇಕು. ದಟ್ಟವಾಗಿ, ನೀಳವಾಗಿ ಇರಬೇಕು!

ಹಾಗಾಗಬೇಕಾದರೆ 'ಮುಕುಲ' ಉಪಯೋಗಿಸಿರಿ!

ತರುಣ-ತರುಣಿಯರು ಬರಿಯ ಕಣ್ಣು ಮೂಗು-ಬಣ್ಣಗಳಿಂದ ಚೆನ್ನಾಗಿದ್ದರೆ ಏನಾಯಿತು? ತಲೆಗೆ ಕೂದಲು ಚೆನ್ನಾಗಿರದಿದ್ದರೆ ಎಷ್ಟು ಚೆಲುವಿಕೆ ಇದ್ದರೂ ಅದು ವ್ಯರ್ಥವೆನಿಸುವುದು.

ಮುಕುಲ
ದಿನದಿನವೂ ಉಪಯೋಗಿಸಿರಿ.

ಆದಕ್ಕಾಗಿಯೇ

ಆಯುರ್ವೇದ ತಜ್ಞರಿಂದ ಶುದ್ಧ ಕೊಬ್ಬರಿ ಎಣ್ಣೆಯಲ್ಲಿ ತಯಾರಿಸಲಾದ "ಮುಕುಲ" ಎಂಬ ಕೇಶವರ್ಧಕ ತೈಲವನ್ನು ಯಾವಾಗಲೂ ಬಳಸುತ್ತಿದ್ದರೆ, ನಿಮ್ಮ ಚೆಲುವಿಕೆ ಪೂರ್ಣತೆ ಪಡೆಯುವುದೆಂಬುದನ್ನು ಮರೆಯಬೇಡಿರಿ.

ಆಯುರ್ವೇದಾಶ್ರಮ ಫಾರ್ಮಸಿ ಲಿ., ಅಹಮ್ಮದನಗರ
ಕರ್ನಾಟಕ ಶಾಖೆ : ಸ್ಟೇಶನ್‌ರೋಡು, ಹುಬ್ಬಳ್ಳಿ.

ಜಯಂತಿ

ಫೆಬ್ರುವರಿ
೧೯೪೫

ಸಂಪುಟ ೭ ※ ಸಂಚಿಕೆ ೬

ಸಂಪಾದಕರು :— ಬೆಟಗೇರಿ ಕೃಷ್ಣಶರ್ಮ

ಮುಖ್ಯ ವಿಷಯಗಳು

ಅವರ ಇರವಿನ ಅರಿವು ಅವರಿಗಾಗಲಿ ಮೊದಲು ! (ಕವನ)
ಶ್ರೀ. ಬಂಗಾಪುರ ದತ್ತರಾಜ, ಹಾನಗಲ್ಲು [illegible]
ಕರ್ನಾಟಕ ಏಕೀಕರಣ ಸಮಸ್ಯೆ (ಪತ್ರವ್ಯವಹಾರ)
ಸಂಸ್ಥಾನದ ಕನ್ನಡಿಗನೊಬ್ಬನಿಂದ [illegible]
ಗಾಂಧಿ-ಯೋಜನೆ (ಆರ್ಥಿಕ ವಿಚಾರ)
" ಜಾಡಿಯ ಜಾಣಕ್ಕ " [illegible]
ವೀಣೆ ಅವರಿಲ್ಲ (ಸಣ್ಣ ಕತೆ)
" ಕಮಲಮಿತ್ರ " ಸ್ನೇಹಜೀವಿ [illegible]
ಎದುರಿಸದಿರೆ ನಾಶ ಸತ್ಯ ! (ಕವನ)
ಶ್ರೀ. ಬಿ. ಎಚ್. ಶ್ರೀಧರ, ಎಂ. ಎ., ಕುಮಟಾ [illegible]
ಬೋಧನಗಳು (ವಿಚಾರದಲ್ಲಿನ ಒಂದು ಮೋಡ)
ಶ್ರೀ. ಸಚ್ಚಿದಾನಂದ ತಿರೋಡಕರ, ಪುಣೆ [illegible]
ಆತ್ಮಬಲಿ (ಸಣ್ಣ ಕತೆ)
ಬಾವಾರಾವ ಪರದಾ ಕರ [illegible]
ಮಾಮಾನಗೆ ಮೊದಲು (ಕವನ)
ರೆವರೆಂಡ್ ಮಹಾಂತ ಸಾಮಣ್ಣ, ಧಾರವಾಡ [illegible]
ನಾಳಿನಾ ನಾಡು (ಪರಿಸ್ಥಿತಿ ವಿಚಾರ)
ಶ್ರೀ. ನೀಗಳೂರ ರಂಗನಾಥ, ಎಂ. ಎ., ಬಿ. ಟಿ. [illegible]
ಅವಳೆ (ಸಂಶೋಧನ ವಿಚಾರ)
ಶ್ರೀ. ಗೋರೆ ಜಂಗಮರಾಯರು, ಧಾರವಾಡ [illegible]
ಈ ಸಪ್ತಾಹದ ಸಿಂಹಾವಲೋಕನ
" ಪರತಂತ್ರ " ಜೋಂಡ್ಲೆ [illegible]

ಇಲ್ಲದೆ ಸಂಗಡ ಮಲ್ಲಿನಾಥಕವನ, ಸಾಹಿತ್ಯವಿಚಾರ,
ನಾಲ್ಕಾರು ಹಿತ್ತಿನ ನೋಟ ಮುಂತಾದುವು

೨ ಆಣೆ

ಸಾದರ ಸ್ವೀಕಾರ

೧೦೭. **ವಿಜ್ಞಾನ ಮತ್ತು ಸಾಹಿತ್ಯ** (ವಿವೇಚನಾತ್ಮಕ ಗ್ರಂಥ.) ಲೇಖಕರು ಪ್ರೊ. ಕೆ. ಎಸ್. ಸವಣೂರ ಬಿ. ಎಸ್‌ಸಿ ಧಾರವಾಡ. ಪ್ರಕಾಶಕರು ಶ್ರೀ. ಆರ್. ಜಿ. ಕುಕ್ನೂರಿ, ಸ್ಟೂಡಂಟ್ಸ್ ಓನ್ ಬುಕ್‌ಡಿಪ್ಪೊ, ಧಾರವಾಡ. ಕ್ರೌ. ೮. ೬೨ ಪುಟಗಳು; ಬೆಲೆ ೦-೧೨-೦.

೧೦೮. **ಕಾವ್ಯಾಲಾಪ:** (ಒಂದು ಕವನ) ಬರೆದವರು ಶ್ರೀ. 'ಕವಿಮಿತ್ರ;' ಪ್ರಕಾಶಕರು ಶ್ರೀ. ಎಂ. ವಿ. ಸೀತಾರಾಮಯ್ಯ ಎಂ. ಎ. ಬೆಂಗಳೂರು ಪುಸ್ತಕ ಸಿಗುವ ಸ್ಥಳ. ಎಸ್. ಎಸ್. ಎನ್. ಬುಕ್‌ಡಿಪ್ಪೊ, ಗಾಂಧಿಬಝಾರ್, ಬಸವನಗುಡಿ, ಬೆಂಗಳೂರು; ಕ್ರೌ. ೮. ೧೬ ಪುಟಗಳು. ಬೆಲೆ ೦-೩-೦,

'ಹಳೆಯದೆಲ್ಲ ಕೊಳೆ, ಹೊಸದೆಲ್ಲ ರಸ' ಎನ್ನುವ ಅತಿವಾದಿಗಳಾದ 'ಪ್ರಗತಿಶೀಲಬಂಧು'ಗಳಿಗೆ ಉತ್ತರವಾಗಿ ಈ ಕಾವ್ಯಾಲಾಪವು ಹೊರಬಂದಿದೆ. 'ಹಳೆಯದೆಲ್ಲವು ಹೊಲ್ಲ, ಹಾಕು ಬೆಂಕಿಗೆ ಎಲ್ಲ, ಹೊಸದೊಂದೆ ನಲ್ಲದೆನುವೀ ಕೂಗು ಏಕೆ? ಮಳಬೆಳಸಿದ ನಿನ್ನ ಪಡೆದ ತಾಯ್-ತಂದೆಗಳ ಕೊರಳ ಕೊಯ್ಯುವದೆ ಸುಪ್ಪುತ್ರನೆನುವೆಯೇಕೆ?' ಎಂಬ ತರ್ಕಸರಣಿಯಲ್ಲಿ ಮುಂದುವರಿದ ಕಾವ್ಯಾಲಾಪವು, ಕೊನೆಯ ವರೆಗೂ ತನ್ನ ರಭಸವನ್ನು ಕಾಯ್ದುಕೊಂಡಿದೆ. ಇಲ್ಲಿಯ ಕೆಲ ಚೌಪದಿಗಳಲ್ಲಿಯೂ, ನಿರ್ಜೀವವಾದ ನೀರಸವಾದ ಮಾತುಗಳೆಂದ ಕೂಡಿದ್ದವು ಒಂದೂ ಇಲ್ಲ. ಕವಿಗೆ ಹಳೆಯದನ್ನು ಹಳಿವವರ ಬಗೆಗೆ ರೋಷವು ಇದ್ದರೂ ಹೊಸತು ಬೇಡವೆಂಬ ಪ್ರಾಚೀನಾಭಿಮಾನವೂ ಇಲ್ಲ. 'ಹೊಸಮನೆಯು ಕಟ್ಟು ಹೊಸ ಕಟ್ಟುಕೊಳು; ಇದಕಾಗಿ ಹಳೆ ಮನೆಗಳನೆಲ್ಲ ಸುಟ್ಟು ಕೆಡದಿರು! ಹೊಸದೆಂಬ ಮೋಹದಲಿ ಹಳೆಯ ಹಳಿಯುವರನೊಡಗೂಡದಿರು; ಹಳೆಯದಿದು; ಅದು ನಾಡ ಸಂಪತ್ತು!' ಎಂಬ ಸದುಪದೇಶ ಈ ಕವಿಮಿತ್ರರದು. ತಾರ್ಕಿಕತ್ವ ಪ್ರಧಾನವಾಗಿರುವುದು ಇದೊಂದು ಬಗೆಯ ಸಂಕೇತ. ಸಂಪ್ರದಾಯಗಳ ಶರಣನವ. ಕವನ ಪ್ರತಿಯೊಂದು ಯುಗದಲ್ಲಿಯೂ ಕಾರ್ಯದ ಕಡೆಗೆ ನೋಡುವನು. ಇದರಿಂದಲೆ ಆತನು ಯಾವ ಸಂಪ್ರದಾಯಕ್ಕೂ ಸೇರದೆ, ಸದುದಾರಿಯಿಂದ ಸಾಗುವನು. ಕಾವ್ಯಾಲಾಪದ ಕವಿ ಮಿತ್ರರೂ ಕರ್ಮವಾದಿಗಳು. ಇದರಿಂದಲೆ ತಮ್ಮ ಕವನದ ಕೊನೆಯನ್ನು 'ಬರಿ ಬೋಧನೆಯು ಬಿಟ್ಟು ಧುಮುಕು ಕಾರ್ಯದ ಕಳಕ್ಕೆ, ಹೇಗೆ ಏಟು ಯುವ ಕೈಲಿ ಹಿಡಿ ಕುಠಾರ! ಬರಿಯ ಅರ್ಭಟನೇಕೆ ಸಾಹಿತ್ಯರಾಜ್ಯದಲಿ ಹಿಡಿದು ಇಲ್ಲದ ಕಲ್ಲದೆಸಳ ಕಿತಾರ!' ಎಂಬ ಪದ್ಯದಿಂದ ಮಾಡಿದ್ದಾರೆ. ಕೃತಿಯು ಚಿಕ್ಕದಾದರೂ ನುಡಿಯು ನಡಿಗೆ, ವಿಚಾರದ ರಭಸ ಸಮರ್ಥವಾಗಿವೆ. ಎಲ್ಲರೂ ಓದಿ ನೋಡಬೇಕು.

೧೦೯. **ಕಿರ್ಲೋಸ್ಕರ:** (ಮರಾಠಿ ಮಾಸಪತ್ರಿಕೆಯ ರೌಪ್ಯಮಹೋತ್ಸವದ ವಿಶೇಷ ಸಂಚಿಕೆ). ಸಂಪಾದಕರು ಶ್ರೀಮಾನ್ ಶಂ. ವಿ. ಕಿರ್ಲೋಸ್ಕರ, ಕಿರ್ಲೋಸ್ಕರವಾಡಿ, ಜಿಲ್ಲಾ ಸಾತಾರಾ. ಡೆಮಿಾ ೪ ದ ೯೬ ಪುಟಗಳು. ಬೆಲೆ. ೧-೦-೦.

ಮಹಾರಾಷ್ಟ್ರದಲ್ಲಿ ಪರಂಪರೆಯಿಂದ ಬಂದ ಸಾಂಪ್ರದಾಯಿಕ ಜಾಡ್ಯವನ್ನು ಹೊಡೆದೋಡಿಸಿ, ಹೊಸಯುಗದಲ್ಲಿ ಬದುಕಬೇಕಾದ ಸಮಾಜವನ್ನು ಸಜ್ಜುಗೊಳಿಸಲು ಈ ಪತ್ರಿಕೆ ಮಾಡಿದ ಕಾರ್ಯವು ಬಹು ದೊಡ್ಡದು. ಭಾರತದ ಎಲ್ಲ ಕಡೆಗಳಲ್ಲಿಯಂತೆ ಅಧ್ಯಾತ್ಮವಾದದ ಭೂತ, ಮಹಾರಾಷ್ಟ್ರದ ಜನವನ್ನೂ ಹಿಡಿದುಕೊಂಡಿದ್ದಿತು. ಐಹಿಕ ಜೀವನದ ಅವಶ್ಯಕತೆಯನ್ನೂ ಪ್ರಯೋಜನವನ್ನೂ ಬೋಧಿಸಿ, ಆ ಭೂತದ ಉಚ್ಚಾಟನೆ ಮಾಡಿಸಲು ಈ ಪತ್ರಿಕೆ ಮಂತ್ರವಾದಿಯಂತೆ ಕೆಲಸ ಮಾಡಿದೆಯೆಂಬುದಕ್ಕೆ ಇನ್ನಾವ ಪ್ರಮಾಣಗಳೂ ಬೇಕಿಲ್ಲ. ಈ ಸಂಚಿಕೆಯಲ್ಲಿ ಪ್ರಕಟವಾದ ಮಹಾರಾಷ್ಟ್ರದ ನಾಡ ನಾಯಕರ—ಬುದ್ಧಿವಂತರ—ಸಾಹಿತ್ಯಿಕಶ್ರೇಷ್ಠರ ಹೊಗಳಿಕೆಯ ಮಾತುಗಳು ಪ್ರತ್ಯಕ್ಷ ಪ್ರಮಾಣವಾಗಿವೆ. ಎಂದಿನಂತೆ ಈ ಸಂಚಿಕೆಯಲ್ಲಿಯೂ ಅಲ್ಲಿಯ ಸುಪ್ರಸಿದ್ಧ ಕವಿ-ಕತೆಗಾರ-ಪ್ರಬಂಧಕಾರರ ಸಾಹಿತ್ಯಕೃತಿಗಳೂ, ಸಾಮಾಜಿಕ ಉನ್ನತಿಗೆ ನೆರವನ್ನು ಕೊಡಬಲ್ಲ ಚರಿತ್ರೆ—ಪ್ರವಾಸ — ಉದ್ಯಮ-ವಿಚಾರ ಲೇಖನಗಳೂ ಸಚಿತ್ರ ಪ್ರಸಿದ್ಧವಾಗಿವೆ. ಇದೀಗ ಕಿರ್ಲೋಸ್ಕರ ಪತ್ರಿಕೆಯ ೩೦೦ನೆಯ ಸಂಚಿಕೆ. ಈ ಪತ್ರಿಕೆಯ ಭದ್ರವಾದ ತಳಹದಿ, ಸಮರ್ಥರಾದ ಸಂಚಾಲಕ—ಸಂಪಾದಕರು, ಜನತೆಯ ನೆರವು ಇವುಗಳನ್ನು ನೋಡಿದರೆ, ಇದರ ಚಿರಕಾಲಜೀವಿತದ ಬಗ್ಗೆ ಯಾರೂ ಚಿಂತೆಗೊಳ್ಳುವ ಕಾರಣವೆ ಇಲ್ಲ. ಆದರೆ ಇದರ ಬದುಕು, ದಿನದಿನವೂ ನಾಡನ್ನು ಮುಂದುವರಿಸುವ ಕಾರ್ಯಕ್ಕಾಗಿಯೆ ಮುಡಿಪಾಗಿರಲೆಂದು ನಮ್ಮ ಹಾರಯಿಕೆ. ಮಹೋತ್ಸವ ಮಾಡಿಸಿಕೊಂಡ ಈ ಪತ್ರಿಕೆಯ ಸಂತೋಷವನ್ನು ನಮ್ಮ ಅಭಿನಂದನೆಯಿಂದಲೂ ಹೆಚ್ಚಿಸಬಯಸುತ್ತೇವೆ.

೧೧೦. **ಸಮಾಜ ದಿನಚರಿ.** (ಪಾಕೆಟ್ ಕ್ಯಾಲೆಂಡರ್) ೫೬ ಪುಟ್ಟ ಪುಟಗಳು; ಬೆಲೆ ೦-೨-೦. ಧಾರವಾಡದ ಸಮಾಜ ಪುಸ್ತಕಾಲಯದ ಪ್ರಕಟನೆ.

ಒಂದೊಂದು ಪುಟದಲ್ಲಿ ಒಂದೊಂದು ವಾರದ ಹಿಂದು ತಿಥಿಗಳನ್ನೂ, ಇಂಗ್ಲಿಷ್ ತಾರೀಖುಗಳನ್ನೂ ಪಕ್ಕಪಕ್ಕದಲ್ಲಿ ಕೊಟ್ಟಿದ್ದು, ಅವುಗಳ ಮುಂದೆ ಆಂದಿನ ವಿಶೇಷ ಕೆಲಸದ ಟಿಪ್ಪಣಿ ಬರೆಯಲು ಬೇಕಾದಷ್ಟು ಸ್ಥಳವನ್ನಿರಿಸಲಾಗಿದೆ.

೧೧೧. **ನನ್ನ ಆರಂಭ ಜೀವನ** (ಜೀವನ ಚರಿತ್ರ) ಮೂಲ ಲೇಖಕರು ಮಹಾತ್ಮಾ ಗಾಂಧಿಯವರ ಪಟ್ಟಶಿಷ್ಯರಾದ ದಿವಂಗತ ಮಹದೇವ ದೇಸಾಯಿ ಅವರು. ಕನ್ನಡ ಭಾಷಾಂತರಕಾರರು ಶ್ರೀ. ಮ. ಗೋವಿಂದರಾಯರು. ಪ್ರಕಾಶಕರು ಶ್ರೀ. ಲಕ್ಷ್ಮಣ ಹೆಗಡೆ, ಅವಧೂತ ಗ್ರಂಥಾಲಯ, ಹುಬ್ಬಳ್ಳಿ. ಕ್ರೌ. ೮. ೧೩೬ ಪುಟಗಳು. ಬೆಲೆ. ೨-೦-೦.

೧೧೨. **ಅರಗಿನ ಮನೆ.** (ಅನುವಾದಿತ ಕಾದಂಬರಿ). ಮೂಲ ಬಂಗಾಲಿ ಲೇಖಕರು ಕೀರ್ತಿಶೇಷ ಶ್ರೀ ಶರಚ್ಚಂದ್ರ ಚಟ್ಟೋಪಾಧ್ಯಾಯ ಅವರು. ಅನುವಾದಕರು ಶ್ರೀ. ವೇದವ್ಯಾಸ ಮುಲ್ಲಾರಿ ಅವರು. ಪ್ರಕಾಶಕರು ಸಾಹಿತ್ಯ ಭಾಂಡಾರ, ಹುಬ್ಬಳ್ಳಿ. ಕ್ರೌ. ೮. ೩೦೦ ಪುಟಗಳು. ಬೆಲೆ ೪-೦-೦.

೧೧೩. **ಮದುವೆಯ ಗುರಿ,** (ವಿಚಾರಪ್ರಚೋದಕ ಪ್ರಬಂಧ) ಮೂಲ ಫ್ರೆಂಚ್ ಲೇಖಕರಾದ ಹ್ಯಾವಲಾಕ್ ಎಲ್ಲಿಸರ ಗ್ರಂಥದಿಂದ 'ಸಂಗ್ರಹಿಸಿದುದು. ಸಂಗ್ರಾಹಕರು ಶ್ರೀಮಾನ್ 'ಪಿಂತಿಹ್ಳ್ಳಿನೆಯ' ವೀರಭದ್ರಪ್ಪನವರು. ಧಾರವಾಡದ ಸರಸ್ವತೀ ನಿಲಯದ ಪ್ರಕಟನೆ; ೨ನೆಯ 'ಮನೆಬೆಳಕು'. ಕ್ರೌ. ೮. ೨೪ ಪುಟಗಳು. ಬೆಲೆ ೦-೪-೦.

೧೧೪. **ಕತೆಗಾರ** (೧೯೪೫ ಜನವರಿಯ ವಿಶೇಷ ಸಂಚಿಕೆ) ಸಂಪಾದಕರು ಜಿ. ಎ. ನರಸಿಂಹಮೂರ್ತಿ, ಬಿ. ಎಸ್‌ಸಿ ಬೆಂಗಳೂರು; ಪ್ರಕಾಶಕರು ಆರ್. ಎಸ್. ನ್ಯೂಸ್ ಏಜನ್ಸಿ, ಚಿಕ್ಕಪೇಟೆ, ಬೆಂಗಳೂರು ನಗರ. ರೊ. ೪ ದ ೧೨೦ ಪುಟಗಳು. ಬೆಲೆ ೦—೧೨—೦.

ಸಂಚಿಕೆಯ ೧೦೦ದ ೬೮ ಪುಟಗಳವರೆಗೆ ಕೈಗಾರಿಕೆಗೆ ಸಂಬಂಧಿಸಿದ ಬೇರೆ ಬೇರೆ ತಜ್ಞರ ಲೇಖನಗಳು ಇದ್ದು, ಮುಂದಿನ ಪುಟಗಳು ಲಲಿತ ಸಾಹಿತ್ಯದಿಂದ ತುಂಬಿಕೊಂಡಿವೆ. ಸಂಚಿಕೆಯ ಬಹಿರಂಗ ಆಕರ್ಷಕವಾಗಿದ್ದು ಅಂತರಂಗವು ವಾಚಕರ ಮನಸ್ಸನ್ನು ತಣಿಸುವಂತಹ—ಇವನ್ನು ಬಹುಪ್ರಯತ್ನದಿಂದಾಗಿಸುವಂತಹ—ಲೇಖನಗಳಿಂದ ಕೂಡಿವೆ, ಎಲ್ಲರೂ ಓದಿ ನೋಡಬೇಕಾದ ಸಂಚಿಕೆ.

ಮುದ್ರಕರು:
ಶ್ರೀ. ಎಸ್. ಎಸ್. ಬೆಂಗೇರಿ, ವಿಜಯ ಮುದ್ರಣಾಲಯ, ಧಾರವಾಡ

ಪ್ರಕಾಶಕರು:
ಶ್ರೀ. ಎಂ. ವಿ. ಮೊಳಗಟ್ಟಿ, ಜಯಂತಿ ಕಾರ್ಯಾಲಯ, ಧಾರವಾಡ

ಜಯಂತಿ

ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

ವಾ. ವರ್ಗಣಿ ಅಂಚೆವೆಚ್ಚ ಸೇರಿ ೪—೪—೦ ಆರು ತಿಂಗಳಿಗೆ ೨—೪—೦ ಬಿಡಿ ಸಂಚಿಕೆಗೆ ೬ ಆಣೆ.

ಸಂಪುಟ ೭ ೧ನೆಯ ಫೆಬ್ರುವರಿ ೧೯೪೫ ಸಂಚಿಕೆ ೯

ಅವರ ಇರವಿನ ಅರಿವು ಅವರಿಗಾಗಲಿ ಮೊದಲು!

ಶ್ರೀ. ಬಂಕಾಪುರ ದತ್ತರಾಯ, ಹಾನಗಲ್ಲು

ಲಲಿತಸಾಹಿತ್ಯ ನಿರ್ಮಾಣ ನಿಪುಣರೇ,
ದೊಡ್ಡ ಹೆಮ್ಮೆಯಲಿ ಬರಿಯ ಜೊಳ್ಳು ಹುಮ್ಮುಬ್ಬಿಸಿದ
ಹೆಸರುಗಬ್ಬಿಗರೆ! ನೀವ್ ಪ್ರಸ್ತುತದ ಬಾಳಿನಲಿ
ಕಂಡುಂಡ ಲಾಲಿತ್ಯವೆಂತಹದು ಹೇಳಿರೈ!
ನಾಡ ನಾಡಿಯ ಮಿಡಿತವರಿದು ಒಳಗಣ್ಣಿನಲಿ
ನಾಡಿಗೊದಗಿದ ರುಜೆಯ, ದಿವ್ಯ ಸಂಜೀವಿನಿಯ-
ನೂಡಿ ಕಳೆದಪೆವೆಂಬ ಸೊಲ್ಲಡಗಿತೇ ಈಗ?

ಬರೆಬರೆದು ಬರೆದುದನೆ ಬರೆವ ಚಟವಾಯ್ತೇ?
ಹಾಡಿದ್ದೆ ಹಾಡುವುದೆ ಒಂದು ಹಟವಾಯ್ತೇ?
ಪಂಡಿತರ ತೂಗುವಾ ತಲೆಯೆ ನಿಮಗುಯ್ಯಲೆಯೆ?
ಗ್ರಂಥಪ್ರಕಾಶಕರ ನುಡಿ ನಿಮಗೆ ಜೇಂಗೊಡವೆ?
ಜಾಣರೇ ತಲೆದೂಗಿಸದ ನುಡಿದೊಡಾ ಪದ-
ಕಬ್ಬಿಗೆಯೆ ಬಹುದೆಂಬ ನುಡಿ ಪಂಚೆನುಡಿಯಾಗ!
ಜಾಣುಳ್ಳ ಜನರೆನಿತು? ಜನಗಣನೆ ಹೇಳದೇ?
ಜನತೆಯೆದೆಯುಬ್ಬಿನಲಿ ಅಜ್ಞಾನ ಹಾಡೇ
ನಿಚ್ಚವೂ ಹೊಸತಾಗಿ ನಿಲ್ಲುವುದು ನೋಡು!

'ಕೋಣ ಕಿನ್ನರಿಯರಿವುದೇ?' ಎಂಬ ಜನರೆಂಥ
ಕೋಣರೋ? ಕಲಿಸಿದರ ತಿಳಿಯದಂತಹ ಜನರೆ?

ಪ್ರಸ್ತುತ ಪರಿಸ್ಥಿತಿಯ ತಿಳಿವೆನಿತು ಜನತೆಗಿಹುದು?
'ಹುಂಬ ಹಳ್ಳಿಗರೆಲ್ಲ ಜಾಣರಾದರೆ ನಮ್ಮ
ಹುಟ್ಟುವಳಿಗೇ ಒಂದು ಬಡಿಗಲ್ಲು' ಎಂದೆನುವ-
ರಾಳರಸರೆಂಬವರು! ರಾಜನೀತಿಯಿದವರು!
ಯಾರ ಹೊಟ್ಟೆಯೊ ನೋಯೆ, ಯಾರೊ ಅಜವಾನ ತಿನೆ
ಎಂತಹುದು? ನಮ್ಮವರ ಪರಿವೆ ನಮಗಿನಿತಿಲ್ಲ!

ಜನತೆಯಜ್ಞಾನದಾ ಲಾಭವನೆ ಉಂಡುಂಡು
ಎನಿತು ಸೆಟ್ಟರ ಹೊಟ್ಟೆ ಬಟ್ಟೆಯಂತಾಗಿಲ್ಲ?
'ಅಜ್ಞಾನಿ ಹಳ್ಳಿಗರೆ ಹಣದ ಸೆಲೆ ನಮಗೆಂ'ದು
ಎನಿತು ಸರ್ವಜ್ಞ ಸಾಕ್ಷರ ಜನರು ತಿಳಿದಿಲ್ಲ?
ನಂನಮ್ಮ ಜನರೀಗ ನಂನಮ್ಮ ಜನರಸುವ
ಸುಮ್ಮನೇ ಹೀರುವುದ ನೋಡಿ ಸೈರಿಸಬಹುದೆ?

ಸಾಕಿನ್ನು ನರಭಕ್ಷಕರ ತಂದ ಜೀವನವು!
ಬೇಕೀಗ ನರರಕ್ಷಕರ ಚಂದ ಜೀವನವು!!
ಅದಕಾಗಿ, ಲಲಿತಸಾಹಿತ್ಯ ಸಮ್ರಾಟರೇ!
ಸಾಗಿ, ಹಳ್ಳಿಗೆ! ನೋಡಿ, ಹಳ್ಳಿಗರ ಕಣ್ತೆರೆದು!
ಅವರ ಇರವಿನ ಅರಿವು ಅವರಿಗಾಗಲಿ ಮೊದಲು!
ಲಲಿತವಾಗಲಿ ಮೊದಲು ಹಳ್ಳಿಗರ ಜೀವನವು!
ಲಲಿತವಾಗಲಿ ಬಳಿಕ ಸಾಹಿತ್ಯದುಪವನವು!!

ಸಂಪಾದಕೀಯ

ಕನ್ನಡಿಗರು ಯಾರು?

ಹಲವರು ನಕ್ಕುಬಿಡಬಹುದು, 'ಇದೊಂದು ಪ್ರಶ್ನೆಯೆ?' ಎಂದು. 'ಕನ್ನಡ ಮನೆಮಾತಾಗಿ ಉಳ್ಳವರೆಲ್ಲರೂ ಕನ್ನಡಿಗರು!' ಎಂದು ಸಹಜವಾಗಿ ಉತ್ತರವನ್ನೂ ಕೆಲವರು ಕೊಟ್ಟುಬಿಡಬಹುದು. ಆದರೆ ಕನ್ನಡನಾಡಿನ ಪರಿಸ್ಥಿತಿ ಇಂದು ಹೀಗೆ ನಕ್ಕುಬಿಡುವಷ್ಟು, ಸಹಜವಾಗಿ ಉತ್ತರ ಕೊಡಬಹುದಾದಷ್ಟು ಸರಳವಿಲ್ಲ; ಸುಲಭವಿಲ್ಲ.

ಭಾಷಾನುಗುಣ ಪ್ರಾಂತ್ಯಪದ್ಧತಿಯ ತತ್ತ್ವವನ್ನು ಒಪ್ಪಿಕೊಂಡರೆ, ಕನ್ನಡನಾಡಿಗೆ ಒಂದು ಸ್ವತಂತ್ರ ಅಸ್ತಿತ್ವ ಪ್ರಾಪ್ತವಾಗುವುದು ಸ್ವಾಭಾವಿಕ; ಏಕೆಂದರೆ ಕನ್ನಡಿಗರ ಸಂಖ್ಯೆ, ಬಹುಸಂಖ್ಯಾಕರು ವಾಸಿಸುವ ಕ್ಷೇತ್ರ, ಇವು ಒಂದು ಪ್ರತ್ಯೇಕ ಪ್ರಾಂತ್ಯವಾಗುವಷ್ಟು ದೊಡ್ಡ ಪ್ರಮಾಣದಲ್ಲಿವೆ. ಹೀಗೆ ಕನ್ನಡನಾಡು ರೂಪುಗೊಂಡಾಗ, ಈ ನಾಡಿನಲ್ಲಿ ವಾಸಿಸುವ—ಇಲ್ಲಿಯೆ ಹುಟ್ಟಿ ಬೆಳೆದು ಬಾಳಬೇಕಾಗಿರುವ—ಯಾವುದೊಂದು ವ್ಯಕ್ತಿಯೂ ಯಾವ ಕಾರಣಕ್ಕಾಗಿಯೂ 'ತಾನು ಕನ್ನಡಿಗನಲ್ಲ' ಎಂದು ಹೇಳಿಕೊಳ್ಳಕೂಡದು. ಹಾಗೆ ಹೇಳಿಕೊಳ್ಳತೊಡಗಿದರೆ ಪ್ರಾಂತೀಯ ಸಾಮಾಜಿಕ ಜೀವನದಲ್ಲಿ ಸಾಮರಸ್ಯ ಉಳಿಯಲಾರದು; ಸಾಂಸ್ಕೃತಿಕ ಜೀವನದಲ್ಲಿಯೂ ಅಡ್ಡಿ-ಆತಂಕಗಳು ತಲೆದೋರುತ್ತವೆ.

ಕನ್ನಡನಾಡಿನ ಸಂಪರ್ಕ ಪ್ರಸ್ತುತ ಮೂಲಕ—ರಾಜಕೀಯ ಕಾರಣದ ಮೂಲಕ—ಇಲ್ಲಿ ಬೇರೆ ಬೇರೆ ಪರನಾಡಿನಿಂದ, ಎಂದೊ ಏನೊ ಬಂದು, ಹಲವು ಜನರು ಒಕ್ಕಲಾಗಿರುವರು. ಅವರಿಗೆ ಹಿಂದೆ ತಂತಮ್ಮ ಹಿರಿಯರಿದ್ದ ನಾಡಿನ ಆರ್ಥಿಕ ಹಿತಸಂಬಂಧಗಳು ಯಾವುವೂ ಇರುವುದಿಲ್ಲ. ಅವರ ಸಂತಾನದ ಹುಟ್ಟಿಗೆ ಕನ್ನಡನಾಡೆ ಆಶ್ರಯ; ಬೆಳವಣಿಗೆಗೆ ಇಲ್ಲಿಯ ಅನ್ನ-ಬಟ್ಟೆಗಳೆ ಆಗಬೇಕು; ಕೊನೆಗಾಲದಲ್ಲಿಯೂ ಕನ್ನಡದ ನೆಲವೆ ಒಳಗೊಳ್ಳಬೇಕು. ಅವರು ಬೇರೆ ನಾಡಿನವರೆಂಬ ಗುರುತು ಏನಾದರೂ ಉಳಿದಿದ್ದರೆ ಅವರಾಡುವ ಮನೆಮಾತು; ಅದೂ ಹರಕು-ಮುರುಕಾದುದು, ತನ್ನ ಸ್ವಂತದ ಜೀವಾಳವನ್ನು ಕಳೆದುಕೊಂಡುದು. ಇಂತಹರಲ್ಲಿ ಕೆಲವು ಜನರು, ಯಾವುದೋ ಸ್ವಾರ್ಥದಿಂದ ಹುಚ್ಚು ಅಭಿಮಾನದಿಂದ—ಪ್ರೇರಿತರಾಗಿ 'ನಾವು ಎಂದೂ ಕನ್ನಡಿಗರಲ್ಲ; ನಮ್ಮ ಭಾಷೆ ಬೇರೆ, ಸಂಸ್ಕೃತಿ ಬೇರೆ!' ಎಂದು ಹೇಳಿಕೊಳ್ಳುತ್ತ, ಸಾಕಿದಂಥ ನಾಡಿಗೆ ಕೃತಘ್ನರಾಗಿ ವರ್ತಿಸುತ್ತಿರುವರು. ತತ್ತ್ವವನ್ನು ತಿಳಿದ ಹಲವು ಜನರು, ಕನ್ನಡಿಗರೊಂದಿಗೆ ಸಮರಸರಾಗಿ—ಕನ್ನಡಿಗರೇ ಆಗಿ—ಕನ್ನಡನಾಡ-ನುಡಿಯ ಉನ್ನತಿಗಾಗಿ ತನು-ಮನ-ಧನದಿಂದ ದುಡಿಯುತ್ತಿರುವರು. ಇವರನ್ನು ಶಂಕೆಯಿಂದ ಕಂಡು 'ಹುಟ್ಟುಗನ್ನಡಿಗರಲ್ಲದ ಇವರು ಕನ್ನಡಿಗರೆ?' ಎಂದು ಕೇಳುವ ಹುಟ್ಟುಗನ್ನಡಿಗರು ಕೆಲವರು ನಮ್ಮಲ್ಲಿ ಇರುವರು. ಆದುದರಿಂದಲೆ 'ಕನ್ನಡಿಗರು ಯಾರು?' ಎಂಬ ಸುಲಭವಾದ ಪ್ರಶ್ನೆಯೂ ಇಂದು ನಮ್ಮ ನಾಡಿನಲ್ಲಿ ತಿಳಿವಳಿಕೆಯ ತಪ್ಪಿನ ಮೂಲಕ ತೊಡಕಿನದಾಗಿ ಕಾಣುತಿದೆ. ತತ್ತ್ವ ತಿಳಿಯದ ಕೆಲವು ಜನ ಅತಿವಾದಿಗಳಾದ ಒಕ್ಕಲುಜನರು 'ನಾವು ಕನ್ನಡಿಗರಲ್ಲ' ಎಂದು ಕನ್ನಡಿಗರನ್ನು ರೇಗಿಸುತ್ತಿದ್ದಂತೆ, ತತ್ತ್ವ ತಿಳಿಯದ ಕೆಲವು ಕನ್ನಡಿಗರು "ಹುಟ್ಟುಗನ್ನಡಿಗರಲ್ಲದವರು ಕನ್ನಡಿಗರಲ್ಲ!" ಎಂದು ಅವರನ್ನು ನೋಯಿಸುತ್ತಿರುವರು. ಹೀಗಿರುವಾಗ ಈ ತೊಡಕಿನ ಪ್ರಶ್ನೆಯನ್ನು ಹೇಗೆ ಬಿಡಿಸಬೇಕು? ಮಿಕ್ಕ ನಾಡುಗಳಲ್ಲಿ ಈ ಪ್ರಶ್ನೆ ಇಲ್ಲವೆಂದು ಹೇಳಲಾಗದಿದ್ದರೂ, ನಮ್ಮಲ್ಲಿಯಂತೆ ಅದು ತೊಡಕಿನದಾಗಿಲ್ಲವೆಂದು ನಿರ್ವಿವಾದವಾಗಿ ಹೇಳಬಹುದು. ನಮ್ಮಲ್ಲಿ ಹೀಗಿದು ತೊಡಕಿನದಾಗಿರುವುದಕ್ಕೆ ಮುಖ್ಯಕಾರಣವೆಂದರೆ, ನಾಡಿನ ಛಿನ್ನ-ವಿಚ್ಛಿನ್ನತೆ, ಪರಕೀಯರ ಆಡಳಿತದ ಮೂಲಕ ಉಂಟಾಗಿರುವ ಸಾಂಸ್ಕೃತಿಕ ವಿಸಂಬಂಧ, ಸಾಮಾಜಿಕ ಸಂಘಟನೆಯಲ್ಲಿಯ ಶೈಥಿಲ್ಯ ಇವೇ ಮುಖ್ಯವಾದುವುಗಳು. ಇವುಗಳನ್ನು ಹೋಗಲಾಡಿಸಿದರೆ ಈ ಪ್ರಶ್ನೆಯ ತೊಡಕು ಇದ್ದುದಿದ್ದ ಹಾಗೆಯೆ ಬಿಟ್ಟುಹೋಗುವುದು.

ಕನ್ನಡನಾಡಿನಲ್ಲಿ ಹುಟ್ಟಿ ಬೆಳೆದು ಬಾಳಲಿರುವ ಪ್ರತಿಯೊಬ್ಬನೂ ಕನ್ನಡಿಗನೆ. ಅದರಂತೆಯೆ ಎಲ್ಲಿಯೆ ಹುಟ್ಟಲಿ, ಕಾರಣಾಂತರದಿಂದ ಕನ್ನಡನಾಡಿನಲ್ಲಿಯೆ ಒಕ್ಕಲಾಗಿ ಬಂದು ನಿಂತು ಇಲ್ಲಿಯೆ ಕೊನೆಯವರೆಗೆ ಉಳಿಯಬೇಕೆನ್ನುವವನೂ ಕನ್ನಡಿಗನೆ. ಒಂದೆ ಮಾತಿನಲ್ಲಿ ಹೇಳಬೇಕೆಂದರೆ ಕನ್ನಡನಾಡಿನಲ್ಲಿ ನಾಗರಿಕತ್ವದ ಹಕ್ಕು-ಬಾಧ್ಯತೆಗಳಿದ್ದು, ಸ್ಥಿರವಾದ ಆರ್ಥಿಕ ಹಿತಸಂಬಂಧವುಳ್ಳ ಜನರೆಲ್ಲರೂ ಕನ್ನಡಿಗರು. 'ನಾವು ಕನ್ನಡಿಗರಲ್ಲ' ಎಂದು ಹೇಳುವವರು ನಾಡಿನ ಹಾನಿ ಮಾಡುವರಲ್ಲದೆ ತಮ್ಮ ಯಾವ ಹಿತವನ್ನೂ ಸಾಧಿಸಿಕೊಳ್ಳಲಾರರು. ಅದರಂತೆಯೆ 'ನೀವು ಕನ್ನಡಿಗರಲ್ಲ!' ಎಂದು ಅವರನ್ನು ಕುರಿತು ಶಂಕೆಪಡುವವರೂ ಹಾನಿಗೊಳಗಾಗುವರಲ್ಲದೆ, ಪರ್ಯಾಯವಾಗಿ ನಾಡಿಗೆ ಅಹಿತ ಮಾಡುವವರೆನಿಸಿಕೊಳ್ಳುವರು.

'ಕರ್ನಾಟಕಸ್ಥ' 'ಕನ್ನಡಿಗ' ಎಂದು ಕೆಲವು ಜನರು ಭೇದ ಕಲ್ಪಿಸಿ ಹೇಳುವರು. ಈ ಭೇದವೂ ಸಮಾಜವಿಘಾತಕವಾದುದು. ಬಹುಜನ 'ಕನ್ನಡಿಗರ ನಡುವೆ ಇರಬೇಕಾಗಿರುವ ಕೆಲವು ಜನ 'ಕರ್ನಾಟಕಸ್ಥ'ರು, ಕನ್ನಡಿಗರಿಂದ ಭಿನ್ನರಾಗಿ ಹೇಗೆ ಉಳಿಯಬಲ್ಲರು? ಉಳಿದರೂ ಉಪಯೋಗವೇನು? ಕನ್ನಡಿಗರ ಸಾಮಾಜಿಕ-ರಾಜಕೀಯ ಸಂಘಟನೆಯಾಗಿ, ಆ ಯಂತ್ರಗಳು ವ್ಯವಸ್ಥಿತವಾಗಿ ಕೆಲಸ ಮಾಡತೊಡಗಿದಾಗ, ಎಲ್ಲ ಚಿಕ್ಕ-ಪುಟ್ಟ ಭೇದಗಳನ್ನೂ ಅದು ಅಳಿದುಬಿಡುವುದು ಖಂಡಿತ. ಕನ್ನಡನಾಡಿನಲ್ಲಿ ರೂಪುಗೊಳ್ಳಬೇಕಾದ ಒಂದೆ ಒಂದು ಸಮಾಜವೆಂದರೆ ಅದು ಕನ್ನಡಿಗರದು. ಕಾರ್ಯಾರ್ಥಿಗಳಾಗಿಯೊ, ಪ್ರವಾಸಿಕರಾಗಿಯೊ, ಅತಿಥಿಗಳಾಗಿಯೊ ಯಾರಾದರೂ ಬೇರೆಯವರು ಬಂದರೆ ಬರಲಿ; ಬಂದು ಕಾರ್ಯ ತೀರಿಸಿಕೊಂಡು ಹೊರಟುಹೋಗಲಿ. ಅವರನ್ನು ನಾವು ಪ್ರೀತಿಯಿಂದ ಸ್ವಾಗತಿಸೋಣ; ಪಡೆಯಬೇಕಾದ ಪ್ರಯೋಜನ ಪಡೆಯೋಣ. ಹಾಗೆಯೆ ನಾವೂ ಕನ್ನಡಿಗರಾಗಿಯೆ ಬೇರೆ ಬೇರೆ ನಾಡುಗಳಿಗೆ ಹೋಗೋಣ! ಮರಳಿ ಬರುವಾಗ ಕನ್ನಡಿಗರಾಗಿಯೆ ಉಳಿಯೋಣ!

ಎಲ್ಲಿಯೊ ಕೆಲಸಕ್ಕಾಗಿ ಹೋಗಿ ಕನ್ನಡತನ ಕಳೆದುಕೊಂಡು, ಮರಳಿ ಕರ್ನಾಟಕಕ್ಕೆ ಬಂದು, ಕನ್ನಡಿಗರನ್ನು ವಿರೋಧಿಸುವ ಮನೆ ಮುರುಕರೂ ಅಲ್ಲಿ ಇಲ್ಲಿ ನಮ್ಮ ನಾಡಿನಲ್ಲಿ ಇದ್ದಾರೆ. ತಪ್ಪು ತಿಳಿವಳಿಕೆಯ ಪೆಟ್ಟು ಅವರ ಬಾಳಿನ ಮೇಲೆ ಬಿದ್ದಾಗ, ಖಂಡಿತ ಅವರ ಕಣ್ಣು ತೆರೆಯೇ ತೆರೆಯುವುವು. ಆದರೆ ಎಲ್ಲದಕ್ಕೂ ಮೊದಲು ಬೇಕು ನಾಡಿನ — ನಾಡಿಗರ — ಒಗ್ಗಟ್ಟು. ಅದು ಕೂಡಲೆ ಉಂಟಾಗುವಂತೆ ಎಲ್ಲರೂ ಕಾರ್ಯಮುಖರಾಗಬೇಕು. 'ಕನ್ನಡಿಗತನ'ದ ಬಗ್ಗೆ ಬಡಿದಾಡುತ್ತ ಕುಳಿತರೆ ಬರಿ ಬಾಯಿ ನೋವಲ್ಲದೆ ಪ್ರಯೋಜನವಾವುದೂ ಇಲ್ಲ.

ಸಂಪಾದಕರು.



೧. ಸಾಹಿತ್ಯದ ಕೇಕೆ

ಧಾರವಾಡದ ಏಕೀಕರಣ ಸಮ್ಮೇಳನವು ಬೌದ್ಧಿಕ ಸಭೆಯಾಗಿ ತನಗೆ ನಿರಾಶೆಯಾಯಿತೆಂದೂ ನಟ-ಕವಿಯ ಸಮ್ಮೇಳನಕ್ಕೆ ಬಂದು ಸಮಾಧಾನವಾಯಿತೆಂದೂ ಕೆ. ಕೆ. ಶೆಟ್ಟಿ ಎಂಬವರೊಬ್ಬರು ಮಾತನಾಡಿದರೆಂದು ಓದಿ, ಮಂಗರಾಯನಿಗೆ ಬಹಳೇ ಮೋಜೆನ್ನಿಸಿತು. 'ಕೇಕೆ' ಹಾಕುವ ಈ ಶೆಟ್ಟಿಗಳು ರಟಕವಿಯ ಸಮ್ಮೇಳನದಲ್ಲಿ 'ಬೌದ್ಧಿಕವಿರಲಿಲ್ಲ' ಎಂದು ಸೂಚಿಸಿದ್ದಕ್ಕಾಗಿ ಕ್ಷಮೆಯನ್ನಾದರೂ ಬೇಡಬಹುದಾಗಿತ್ತಲ್ಲ? ಕೆಲವೊಂದು ಪತ್ರಿಕೆಗಳನ್ನು ಮುಟ್ಟಿದರೆ ಮೈಲಿಗೆಯಾಗಿ ಸ್ನಾನಮಾಡಬೇಕೆನ್ನುವಂತಹ ಹಿರಿಯ ಪಾಪಭೂಷಿಯ ಸಮ್ಮೇಳನಗಳು 'ಬೌದ್ಧಿಕ'ವಲ್ಲವೆ? ಹರಹರಾ ಶ್ರೀ ಕೇಕೆ ಶೆಟ್ಟೀಶ್ವರಾ! ತಾವು ಕೇಕೆ ಹಾಕುವ ಸಮ್ಮೇಳನವೆ ಶ್ರೇಷ್ಠವೆಂಬ 'ಪ್ರಗತಿಶೀಲ' ಘೋರಣೆ ಅಖಿಲ ಕರ್ನಾಟಕ ಕಾರ್ಯಕರ್ತರಲ್ಲಿ ಬರುತ್ತಿದೆಯಲ್ಲ—ಎಂದು ಉಬ್ಬಿಸದಿರಿ: ಶಂಕ್ರೆ — ಅಲ್ಲಲ್ಲ — ಸಂತಸದಿಂದ ಉಬ್ಬಿ ಮಂಗರಾಯನು ಕೇಕೆಯ ಪತಾಕೆಯನ್ನು ನಿಲ್ಲಿಸಿದ ಮುಂದಾಳುಗಳಲ್ಲಿ ತನ್ನ ವಿಶ್ವಾಸವಿದೆ ಎಂದು ತೋರಿಸುವದಲ್ಲದೆ, ಬರುವ ವರ್ಷದೊಳಗಾಗಿ ನೂರುಸಾವಿರ ಕೇಕೆಗಳ ಪೋಲ್ಟ್ರಿಯನ್ನು ಒದಗಿಸಲು ವ್ಯತುರಿಸಿದ್ದಾನೆ.

ಕನ್ನಡಿಗರೆ, ನೀವ್ ಕೇಳಿರಿ, ಜೋಕೆ!
ಬೊಟ್ಟು ಮುರಿಯುವ ಶಪಿಸುವ ಕೇಕೆ!

× × ×

೨. 'ಶಾಯಿ'ತ್ಯ!

'ಮಡಿಕೆಯ ಮಾಡುವರೆ ಮಣ್ಣೇ ಮೊದಲು...' ಎಂಬಂತೆ ಸಾಹಿತ್ಯಕ್ಕೆ ಧರ್ಮವೇ ಮೊದಲು ಎಂಬುದು ಸಾಧಾರಣವಾಗಿ ಒಪ್ಪತಕ್ಕ ಮಾತು—ಎಂದು ಉಜ್ವಲ ಕನ್ನಡಾಭಿಮಾನಿಗಳೊಬ್ಬರು ಹೇಳಿದ್ದಾರೆಂದೂ, ಹಾಗೆ ಹೇಳಿದಂದಿನಿಂದ ದಿನದಿನಕ್ಕೆ ಬೆಳಗಾಗುವುದರೊಳಗೆ ತನ್ನ ಮನೆಯ ಗೋಡೆಗಳ ಮಣ್ಣು ಮಾಯವಾಗುತ್ತಿದೆಯೆಂದೂ ವಾಚಕನೊಬ್ಬನು ದಿಗ್ಭ್ರಮೆಯಿಂದ ಮಂಗರಾಯನಲ್ಲಿ ಮೊರೆ ಇಟ್ಟಿದ್ದಾನೆ. ಸಾಹಿತ್ಯವು ಮಡಿಕೆಯಾದರೆ ಧರ್ಮವು ಮಣ್ಣಾಗುವುದಲ್ಲ—ಎಂದು ಈ ವಾಚಕನಿಗೆ ವಿಚಾರ-ಗೊಂದಲ ಬೇಡ! ಪಾಪ! ದೊಡ್ಡವರ ಮಾತಿನ ರೀತಿಯು ತಿಳಿಯದ್ದಕ್ಕಾಗಿ ಈ ವಾಚಕನು 'ಪೇಚಕ'ನಾಗಿದ್ದಾನೆ! ಸಾಹಿತಿಗಳು ಕುಂಬಾರರಂತೆ ಎಂಬ ಅರ್ಥವು ಈ ಹಿರಿಯರ ಮಾತಿನಲ್ಲಿ ಗರ್ಭಿತವಾಗಿದೆ ಎಂಬುದು ತಿಳಿಯಬಾರದೆ? ಸಾಹಿತಿಗಳು ಕುಂಬಾರರು, ಆದಕಾರಣ ಸಾಹಿತಿಗಳ ಇದಿರು ಕುಂಬಾರರ ಇದಿರಿನಲ್ಲಿಯಂತೆ ಕಲಸಿದ ಮಣ್ಣುಮುದ್ದೆ ಇರುವದು. ಆದರೆ ಕುಂಬಾರನ ವಿದ್ಯೆಯಾದ ಮಡಿಕೆ ಸಾಹಿತಿಗೆ ಬರುವುದಿಲ್ಲವಾದ್ದರಿಂದ, ಈ ಸಾಹಿತಿಗಳು ತಮ್ಮ ಮಣ್ಣುಮುದ್ದೆಯನ್ನು ಬಿಟ್ಟುಕೊಟ್ಟರೆ ಮೇಲೊಗೆದು ಸರಸ್ವದ ಮುಖವು 'ಪಂಕಜ'ವಾಗುವಂತೆ ಮಾಡುತ್ತಾರೆ! ಹಹ! ವಾಚಕ ಮಹಾಶಯಾ, ತೊಲಗಿತೇ ಸಂಶಯಾ? ತಿಳಿಯಿತೇ ಹಿರಿಯರ ಆಶಯಾ? ಧರ್ಮವೆಂಬ ವಿಷಯಾ? ಹಹಹ! ಸಾಹಿತ್ಯಕ್ಕೆ ಧರ್ಮವೇ ಮೊದಲು ಎಂದರೆ ಈ ಧರ್ಮದ ಮೊದಲು!

ಸಾಹಿತ್ಯಕ್ಕೆ ಧರ್ಮವೆ ಮೊದಲು
ಧರ್ಮವೆಂಬುದು ಜಾತಿಗೆ ಒದಲು!।
ತನ್ನ ಜಾತಿಗದ ಆಡದ ತೊದಲು
ಕಾವ್ಯದ ಮಡಿಕೆಯ ಮಾಡುವ ಮೊದಲು॥

× × ×

೩. ಪ್ರದರ್ಶನದ ವಿಶ್ವಾಸ

ಇತ್ತಿತ್ತಲಾಗಿ ಮಂಗರಾಯನನ್ನು ಅನೇಕ ವಾಚಕರು ಕೇಳತೊಡಗಿದ್ದಾರಷ್ಟೆ? ಅದಕ್ಕಾಗಿ ಮಂಗರಾಯನು ಅಖಂಡ ದಕ್ಷಿಣಾಪಥವನ್ನು ಸಂಚರಿಸಿ ಅನುಭವ ಪಡೆಯಲೆಳಸಿದನು, ಸಂಚಾರವನ್ನು ಮಾಡಿಬಂದನು! ಈ ಸಂಚಾರಕ್ರಮದಲ್ಲಿ ಅಲ್ಲಲ್ಲಿಯ ಮಂಗಗಳು 'ನಾವು ಇದ್ದಲ್ಲಿಯೆ ಗಿಡಕ್ಕೆ ಜೋತುಬೀಳುವ ಮಂಗಗಳು; ಗಿಡದಿಂದ ಗಿಡಕ್ಕಲ್ಲದೆ ಊರಿಂದ ಊರಿಗೆ ಹಾರಿ ಸಂಚರಿಸಲು ಸಮರ್ಥನಾದ ಮಂಗರಾಯ ಶ್ರೇಷ್ಠ, ಇವನೇ ಮುಂದಾಳಾಗಲಿ' ಎಂದರು. ಕೂಡಲೆ ಮಂಗರಾಯನು ಅಖಂಡ ದಕ್ಷಿಣಾಪಥದ ಮಂಗಗಳ ಸಮ್ಮೇಳನವನ್ನು ನೆರೆಯಿಸಿದನು. ಘನ ಸಂಖ್ಯೆಯಾದ ನೂರರಷ್ಟು ಮಂಗಗಳು ಬಂದುವು. ಅವಸರದ ಸಭೆಯಾದ್ದರಿಂದ ಸಭೆಯು ಅವಸರದೊಳಗಾಗಿ ಇಪ್ಪತ್ತು ಮಂಗಗಳು ಹಾಜರಾದುವು ಸಭೆಗೆ. ನಲವತ್ತು ಕೈಗಳು ಮೇಲಕ್ಕೆದ್ದುವು; ಮರುಕ್ಷಣದಲ್ಲಿ ನಲವತ್ತು ಕಾಲ್ಗಳು ಮೇಲಕ್ಕೆದ್ದುವು; ಮೂರನೆಯ ಕ್ಷಣದಲ್ಲಿ ಇಪ್ಪತ್ತು ಬಾಲಗಳು ಮೇಲಕ್ಕೆದ್ದುವು; ಅಂತೂ ೪೦+೪೦+೨೦ ಹೀಗೆ ಘನಸಂಖ್ಯೆಯಾದ ನೂರು ಮತಗಳಿಂದ ಮಂಗರಾಯನಲ್ಲಿ ವಿಶ್ವಾಸ ಪ್ರದರ್ಶನವನ್ನು ವ್ಯಕ್ತಮಾಡಿ, ಸಭೆಯು ಅವಸರದಲ್ಲಿ—ಅಲ್ಲಲ್ಲ—ಅವಸರದ ಸಭೆ ಅಲ್ಲಿಗೇ ಮುಕ್ತಾಯವಾಯಿತು. ಅಂತೂ ಮಂಗರಾಯನೆ ಅಖಂಡ ದಕ್ಷಿಣಾಪಥದ ಸರ್ವಾನುಮತದಿಂದ ಮುಂದಾಳಾದನು.

ಬೋಲೊ! ಸಾವಿರ ಮತಕ್ಕೆ ಜೊಯ್!
ವಿಶ್ವಾಸಕ್ಕೆ ಒಂದೇ ಕೈ!

ಶ್ರೀರಂಗರು ಬರೆದ

ಜಾತೀಯ ಸಮಸ್ಯೆ

೦—೬—೦ ಮಾತ್ರ

ಸ್ವಲ್ಪೇ ಪ್ರತಿಗಳಿದ್ದುದರಿಂದ ಪ್ರತಿಗಳಿಗಾಗಿ ಜಯಂತಿಯ ಕಾರ್ಯಾಲಯಕ್ಕಾಗಲಿ, ಏಜಂಟರಲ್ಲಾಗಲಿ ಮುಂಚಿತ ಆರ್ಡರ್ ಕೊಡಬೇಕು.

ಏಕೀಕರಣ ಸಮಸ್ಯೆ

●

(ಸಂಸ್ಥಾನಗಳಲ್ಲಿಯ ಒಂದು ವಿಚಿತ್ರ)

[ಉತ್ತರ ಕರ್ನಾಟಕ ಸಂಸ್ಥಾನಗಳೊಂದರಲ್ಲಿಯ ಕನ್ನಡ ಕಾರ್ಯಕರ್ತರ ಕಾಗದದಲ್ಲಿ ಬರೆದ ಕೆಲವು ಮಾತುಗಳನ್ನು ಇಲ್ಲಿ ಕಾಣಿಸಿದೆ. ಕರ್ನಾಟಕದ ಬೇರೆ ಬೇರೆ ಭಾಗದ ಕಾರ್ಯಕರ್ತರು ತಮ್ಮ ಅನುಭವಗಳನ್ನು, ನಿರ್ದಾಕ್ಷಿಣ್ಯವಾಗಿ ಮತ್ತು ಪ್ರಾಮಾಣಿಕವಾಗಿ ಬರೆದಲ್ಲಿ, ಜಯಂತಿ ಅವನ್ನು ಅಷ್ಟೇ ನಿರ್ದಾಕ್ಷಿಣ್ಯವಾಗಿ ಪ್ರಕಟಿಸುವುದು. ಸದ್ಯದ ಕಾಗದದಲ್ಲಿಯ ಕೆಲವು ಮಾತುಗಳಿಂದ ಕನ್ನಡಿಗರಿಗೆ ನಾಚಿಕೆಯಾಗಬಹುದು; ಆದರೆ ಒಟ್ಟಾರೆ ಕಾಗದದ ಅಭಿಪ್ರಾಯವು ಏಕೀಕರಣ ಪ್ರಶ್ನೆಯ ಇತಿಹಾಸವನ್ನು, ಅಗತ್ಯವನ್ನು ಸೂಚಿಸುವುದೆಂಬುದರಲ್ಲಿ ಸಂದೇಹವಿಲ್ಲ. —ಸಂಪಾದಕರು].

"ಸಾಂಗ್ಲಿ ಸಂಸ್ಥಾನದ ತೇರದಾಳ ಮಹಲದಲ್ಲಿ ೧೨ ಹಳ್ಳಿಗಳಲ್ಲಿ ೧೦ ರಲ್ಲಿ (ಕನ್ನಡ) ಶಾಲೆಗಳಿವೆ. ಇನ್ನೆರಡರಲ್ಲಿ ಜನಸಂಖ್ಯೆ ಇನ್ನೂರಕ್ಕಿಂತ ಕಡಮೆ ಇದೆ. ಕಲಿಸುವದು ಕನ್ನಡವಾದರೂ ಶಾಲೆಯಲ್ಲಿ ೧ನೆ ೨ನೆ ರಜಿಸ್ಟರ್ ಮುಂತಾದವು ಮರಾಠಿಯಲ್ಲಿ ನಡೆಯುತ್ತವೆ. ಮಹಲ ಸ್ಥಳವಾದ ತೇರದಾಳದಲ್ಲಿ ಜನ ನೂರಕ್ಕೆ ನೂರು ಕನ್ನಡಿಗರು....ಅಧಿಕಾರಿಗಳ ಕುಯುಕ್ತಿ ದರ್ಪದ ಕಾರಣದಿಂದ, ನಮ್ಮವರೆ ಆದ ಕೆಲವು ದೇಶಸ್ಥ ಬ್ರಾಹ್ಮಣ ವರ್ಗದವರು, ಮಕ್ಕಳನ್ನು ಮುದ್ದಾಂ ಮರಾಠಿ ಶಾಲೆಗೆ ಕಳುಹುತ್ತಾರೆ....ಮುಧೋಳ ಮತ್ತು ಜಮಖಂಡಿ ಹಾಯ್‌ಸ್ಕೂಲುಗಳಲ್ಲಿ ಕನ್ನಡಕ್ಕೆ ಇನ್ನೂ ಸ್ಥಾನ ದೊರೆತಿಲ್ಲ. ಮತ್ತು ಕೋರ್ಟು ಭಾಷೆ ತೇರದಾಳ, ಜಮಖಂಡಿ, ಮುಧೋಳಗಳಲ್ಲಿ ಮರಾಠಿ ನಡೆಯುತ್ತದೆ. ವರ್ತಕರು ಈ ಮೂರು ಊರುಗಳಲ್ಲಿ ತಮ್ಮ ಲೆಕ್ಕಪತ್ರ ಮೋಡಿಯಲ್ಲಿಡುತ್ತಾರೆ....ಇನ್ನೂ ಪ್ರಚಾರದ ಆವಶ್ಯಕತೆಯಿದೆ.

"ಸಮೀಪದಲ್ಲಿ ಕಿತ್ತೂರು ಬುಧಗಾಂವ ಸಂಸ್ಥಾನಕ್ಕೆ ಸೇರಿದ ಹಳ್ಳಿ. ಕೃಷ್ಣಾತೀರದಲ್ಲಿ ಕುಡಚಿ ಸ್ಟೇಶನದಿಂದ ನಾಲ್ಕು ಮೈಲಿನಲ್ಲಿದೆ. ಅಲ್ಲಿ ಸಕರೆ ಕಾರ್ಖಾನೆ ಪ್ರಾರಂಭವಾಗಿ, ಸಂಪೂರ್ಣ ಮರಾಠಿಗರ ಸೊತ್ತಾಗಿದೆ. ಅಲ್ಲಿ ಕೆಲಸ ಮಾಡುವವರೆಲ್ಲರೂ ಮರಾಠಿಗರು. ಅದರಂತೆ ಬೀಳಗಿ ಮಹಲಿನಲ್ಲಿದ್ದ ಗಲಗಲಿ ಹತ್ತರ ಒಂದು, ಜಮಖಂಡಿಯಿಂದ ೫ ಮೈಲಿನ ಮೇಲೆ ಸನಾಳದ ಹತ್ತರ ಮತ್ತೊಂದು....ಹೀಗೆ ಸಕ್ಕರೆ ಕಾರ್ಖಾನೆಗಳು ಪ್ರಾರಂಭವಾಗಿವೆ ಇವೆಲ್ಲ ಮರಾಠಿಗರ ಕಡೆಗಿವೆ. ಬರುಬರುತ್ತ ಸುಮ್ಮನೆ ಕುಳಿತರೆ, ಸುತ್ತಿನ ಭಾಗದಲ್ಲಿ ಮರಾಠಿಗರ ಪ್ರಾಬಲ್ಯ ಹೆಚ್ಚಾಗುತ್ತದೆ. ಜಮಖಂಡಿಯಲ್ಲಿ ಪ್ರಜಾಧುರೀಣರೆಂದು ಸೋಗು ಹಾಕಿಕೊಂಡ (ಇಲ್ಲಿ ಒಂದು ಹೆಸರಿದೆ, ಅದನ್ನು ಕಾಣಿಸಿಲ್ಲ. ಸಂ.) ಮೊದಲಾದವರು ಅಚ್ಚ ಮರಾಠಿಗರ—(ಇಲ್ಲಿ ಒಂದು ಊರಿನ ಹೆಸರಿದೆ) ದೇಶಪಾಂಡೆಯವರಿದ್ದಂತೆ. ಅಂಥವರೆ ತೇರದಾಳದಲ್ಲಿ—ರು, ಹನಗಂಡಿಯಲ್ಲಿ—ರು ಇದ್ದಾರೆ. ಇವರೆಲ್ಲ ನಮಗೆ ವಿರೋಧಿಗಳಾಗಿ ಕೆಲಸ ಮಾಡುವರು ...ಒಂದೊಂದು ಸ್ಥಳದಲ್ಲಿ ನಾನಾಪ್ರಕಾರವಾಗಿ ಪ್ರಚಾರ ಮಾಡಿ, ಮರಾಠಿಗರನ್ನು ಓಡಿಸಬೇಕಾಗಿದೆ: ಪ್ರಚಾರಕ್ಕೆ .... ವ್ಯಾಖ್ಯಾತರನ್ನು ಕಾರ್ಯಕರ್ತರನ್ನು ಕರೆಯಿಸಿಕೊಳ್ಳಬೇಕೆಂದಿದ್ದೇವೆ...."

ಸೂಚನೆ:— ಕೆಲವು ಹೆಸರುಗಳನ್ನು ಪ್ರಕಟಿಸುವಾಗ ನಾವು ಕಾಣಿಸಿಲ್ಲ. ಒಟ್ಟಾರೆ ಪತ್ರದ ಅಭಿಪ್ರಾಯವಾಗಲು ಅವುಗಳ ಆವಶ್ಯಕತೆ ಇಲ್ಲ.—ಸಂ.

ಕನ್ನಡ ಕತೆಗಾರರಲ್ಲಿ:

ನಮ್ಮ ಕತೆಗಾರರಿಗೆ ಪ್ರತಿಫಲ ಧನ! **ಜಯಂತಿಯ ಹೊಸ ಏರ್ಪಾಡು!**

ಜಯಂತಿಯಲ್ಲಿ ಬರಲಿರುವ ಕತೆಗಳೆಲ್ಲವೂ ಒಳ್ಳೆಯವಾಗಿರಬೇಕೆಂದು ವಾಚಕರ ಅಪೇಕ್ಷೆಯಿರುವುದು ಸ್ವಾಭಾವಿಕ. ಹಾಗೆ ಒಳ್ಳೆಯ ಕತೆಗಳನ್ನು ಪ್ರಕಟಿಸಬೇಕೆಂದು ಜಯಂತಿಯ ಆಶೆಯಿದೆ. ಅದಕ್ಕಾಗಿ ಕತೆಗಾರರಿಗೆ ಪ್ರತಿಫಲ ಧನವನ್ನು ಕೊಡುವುದಾಗಿ ಜಯಂತಿಯ ಸಂಚಾಲಕರು ನಿರ್ಣಯಿಸಿದ್ದಾರೆ. ಸಂಪಾದಕ ಮಂಡಲಿ ಪ್ರಕಟನೆಗೆ ತಕ್ಕುದೆಂದು ಒಪ್ಪಿಗೆ ಕೊಟ್ಟು, ಕತೆ ಮುದ್ರಿತವಾದ ಒಂದು ವಾರದಲ್ಲಿಯೆ, ಕತೆಗಾರರಿಗೆ—ಕತೆಯ ಆಕಾರ-ಗುಣಗಳ ಯೋಗ್ಯತೆಯಂತೆ—೪ ರಿಂದ ೧೦ ರೂಪಾಯಿಗಳ ವರೆಗೆ ಪ್ರತಿಫಲವನ್ನು ಸಲ್ಲಿಸಲಾಗುವುದು. ಕನ್ನಡನಾಡಿನ ಒಳ್ಳೆಯ ಕತೆಗಾರರೆಲ್ಲ ದಯೆಯಿಟ್ಟು ಜಯಂತಿಗೆ ತಂತಮ್ಮ ರಸವತ್ತಾದ ಸ್ವತಂತ್ರ ಕತೆಗಳನ್ನು ಕಳುಹಿ, ಈ ನಮ್ಮ ಯೋಜನೆ ಫಲಕಾರಿಯಾಗುವಂತೆ ಮಾಡಬೇಕು. ಇದೊಂದು ಸಣ್ಣ ಕತೆಯ ಮೇಲಾಟವಲ್ಲವೆಂಬುದನ್ನು ಎಲ್ಲರೂ ಲಕ್ಷ್ಯದಲ್ಲಿಟ್ಟುಕೊಳ್ಳಬೇಕು. ಜಯಂತಿಯಲ್ಲಿ ಪ್ರಕಟವಾದ ಸ್ವತಂತ್ರ ಕತೆಗಳಿಗೆಲ್ಲ ಪ್ರತಿಫಲ ಕೊಡಲಾಗುವುದು.

ಸಂಪಾದಕ, 'ಜಯಂತಿ'.

ಗಾಂಧಿ-ಯೋಜನೆ*

'ಚಾಡಿಯ ಚಾಣಕ್ಯ'

●

೧. ವ್ಯಾಪಾರ ಮತ್ತು ಆರ್ಥಿಕೋದ್ಯಮಗಳನ್ನು ವರ್ತಕ-ಸಂಘಗಳಿಗೆ ಬಿಟ್ಟುಕೊಡುವ ಕಾಲ ಕಳೆದುದರಿಂದ, ಆರ್ಥಿಕಯೋಜನೆಗಳಿಗೆ ಮಹತ್ತ್ವ ಬಂದಿದೆ. ರಶಿಯಾದಲ್ಲಿ ಪಂಚವಾರ್ಷಿಕ ಯೋಜನೆಯಿಂದ ಪ್ರಾರಂಭವಾದ ಇಂದಿನ ಯೋಜನೆಯುಗದಲ್ಲಿ ರೂಜ್‌ವೆಲ್ಟರ ನ್ಯೂ ಡೀಲ್, ಹಿಟ್ಲರನ ಚತುರ್ವಾರ್ಷಿಕ ಯೋಜನೆ, ಇಂಗ್ಲಂಡಿನಲ್ಲಿ ಬಿವರಿಜ್ ಯೋಜನೆ- ಒಂದೊಂದಾಗಿ ಮುಂದೆ ಬಂದಿವೆ. ನಮ್ಮ ದೇಶದಲ್ಲಿ ಸರ್ ಎಮ್. ವಿಶ್ವೇಶ್ವರಯ್ಯನವರು, ತರುವಾಯ ಕಾಂಗ್ರೆಸಿನವರು ನಿಯಮಿಸಿದ ರಾಷ್ಟ್ರೀಯ ಯೋಜನಾ ಸಮಿತಿಯವರು ಮುಂದಾಗಿದ್ದಾರೆ. 'ಇತ್ತೀಚೆಗೆ ಸರಕಾರದವರು ಯೋಜನೆಗಳನ್ನು ಸಿದ್ಧಪಡಿಸುತ್ತಲಿದ್ದು, ಅದು ಕೇವಲ ಜನತೆಯ ಲಕ್ಷ್ಯವನ್ನು ಮುಖ್ಯ ಪ್ರಶ್ನೆಯಾದ ಸ್ವಾತಂತ್ರ್ಯದಿಂದ ಸೆಳೆಯಲು ಇಲ್ಲವೆ ಇಂಗ್ಲಂಡಿನ ಹಿತವನ್ನು ಕುರಿತು ಎಂದು ಹೇಳಬಹುದು. ಇದಲ್ಲದೆ ನಮ್ಮ ಧನಿಕರು **ಮುಂಬಯಿ ಯೋಜನೆ** ಎಂಬುದನ್ನೂ, ಕಾಮ್ರೇಡ್ ರಾಯರ **ಜನತಾಯೋಜನೆ** (Peoples' plan) ಎಂಬುದನ್ನೂ ಸಿದ್ಧಗೊಳಿಸಿದ್ದಾರೆ. ಆದರೆ ಇವೆಲ್ಲ ಯೋಜನೆಗಳು ನಮ್ಮ ದೇಶದ ವಿಶಿಷ್ಟ ಪರಿಸ್ಥಿತಿಯನ್ನೂ ಸಮಾಜಜೀವನದ ತಳಹದಿಯನ್ನೂ ಮರೆತು, ಬಂಡವಳಗಾರಿಕೆಯ ಇಲ್ಲವೆ ಸಾಮ್ಯವಾದದ ದೃಷ್ಟಿಕೋನದಲ್ಲಿ ಪಾಶ್ಚಾತ್ಯ ಯೋಜನೆಗಳನ್ನು ಅನುಸರಿಸಿವೆ. 'ಮಹಾತ್ಮಾ ಗಾಂಧಿಯವರ ವಿಚಾರಗಳ ಅಭ್ಯಾಸವನ್ನು ಮಾಡಿ, ಅವರೊಡನೆ ಅನೇಕ ವಿಷಯಗಳನ್ನು ಚರ್ಚಿಸಿ, ನಾನೀ ಯೋಜನೆಯನ್ನು ಸಿದ್ಧಪಡಿಸುತ್ತಲಿದ್ದೇನೆ. ಯಾವ ಯೋಜನೆ ವ್ಯವಹಾರ್ಯವಾಗಬೇಕಾದರೂ ದೇಶಕ್ಕೆ ಮೊದಲು ಸ್ವಾತಂತ್ರ್ಯ ಅಗತ್ಯ ಎಂದು ನಾನಿಲ್ಲಿ ಸ್ಪಷ್ಟ ಹೇಳಬಯಸುತ್ತೇನೆ.'

೨. ಈ ಆರ್ಥಿಕಯೋಜನೆಗಳ ಉದ್ದೇಶವು ಏನಿರಬೇಕು? ರಶಿಯಾದಲ್ಲಿ ಜನತೆಯ ಉಪಜೀವನದ ಮಟ್ಟನ್ನು (standard of living) ಏರಿಸುವುದೆ ಉದ್ದೇಶವಾಗಿದೆ; ತಾತ್ಕಾಲಿಕ ಗಂಡಾಂತರದಿಂದ ಬಂಡವಳಗಾರಿಕೆಯನ್ನುಳಿಸುವುದು ರೂಜ್‌ವೆಲ್ಟರ ಉದ್ದೇಶ; ನಿರುದ್ಯೋಗವನ್ನು (ಯುದ್ಧಯಂತ್ರ ಉತ್ಪಾದನೆಯಿಂದ) ಹೋಗಲಾಡಿಸುವುದು ಹಿಟ್ಲರನ ಉದ್ದೇಶ; ಸಾಮ್ರಾಜ್ಯವನ್ನೂ ವಸಾಹತುಗಳನ್ನೂ ಹೆಚ್ಚಾಗಿ ಉಪಯೋಗಿಸಿಕೊಂಡು, ಜನರ ಜೀವನವನ್ನು ಭದ್ರಗೊಳಿಸುವುದು (ಇಂಗ್ಲಂಡಿನ) ಬಿವರಿಜ್ ಯೋಜನೆಯ ಉದ್ದೇಶ. ಆದರೆ ಇಂತಹ ಯಾವ ಯೋಜನೆಯೂ ಸಮರ್ಪಕವಲ್ಲ. ಜೀವನದ ಮಟ್ಟಕ್ಕೆ ಮಿತಿ ಇಲ್ಲ; ಉದ್ಯೋಗವೆಂದರೆ ಯುದ್ಧ ಇಲ್ಲವೆ ಯಂತ್ರೀಕರಣ ಎನ್ನಿಸುವುದು; ಹೆಚ್ಚು ಉತ್ಪಾದನೆಯೆ ಉದ್ದೇಶವಾದಲ್ಲಿ ಸಂಪತ್ತಿದ್ದೂ ಉಪವಾಸ-ಕಷ್ಟ ತಪ್ಪಲಾರದು. ಡಾ. ಸನ್‌ಯಾತ್‌ಸೆನ್‌ರು ಈ ಸಂದರ್ಭದಲ್ಲಿ ಹೇಳಿದ ರಾಷ್ಟ್ರೀಯತೆ, ಪ್ರಜಾಸತ್ತೆ ಮತ್ತು ಜೀವನಾಧಿಕಾರ-ಈ ಮೂರು ತತ್ತ್ವಗಳು ಯಾವ ಯೋಜನೆಗೂ ಮುಖ್ಯವಾದುವು. (೧) ರಾಷ್ಟ್ರೀಯತೆ ಎಂದರೆ ದೇಶದ ಸಂಸ್ಕೃತಿ ಮತ್ತು ಸಾಮಾಜಿಕ ಜೀವನಕ್ಕೆ ಸಂಬಂಧಿಸಿರುವುದು; (೨) ಪ್ರಜಾಸತ್ತೆ ಎಂದರೆ ಯೋಜನೆಯಲ್ಲಿ ವ್ಯಕ್ತಿಯ ಸ್ವಾತಂತ್ರ್ಯ ಉಳಿಯುವುದು; ಮತ್ತು (೩) ಪ್ರತಿಯೊಬ್ಬನಿಗೆ ನ್ಯಾಯ ಮತ್ತು ಗೌರವರೀತಿಯಲ್ಲಿ ಗಳಿಸಲು ಜೀವನಾಧಿಕಾರವಿರುವುದು.

೩. ಇಂದು ಜಗತ್ತಿನಲ್ಲಿ ಯಾವ ಯೋಜನೆಯೂ ಬಡತನವನ್ನು ಹಿಂಗಿಸಿಲ್ಲ; ಇದಕ್ಕೂ ಕೆಟ್ಟದೆಂದರೆ, ಒಂದೆಡೆ ಸಂಪತ್ತು ಹೆಚ್ಚಿದಂತೆ ಅದೇವೇಳೆಗೆ ಇನ್ನೊಂದೆಡೆ ಬಡತನವೂ ಬೆಳೆದಿದೆ. ಸರ್ವಾಧಿಕಾರಿತ್ವದ ಯೋಜನೆಯಲ್ಲಿ ವ್ಯಕ್ತಿಯ ಸ್ವಾತಂತ್ರ್ಯದ ಆಹುತಿಯಾಗಿದೆ; ಅಮೇರಿಕೆಯ ನ್ಯೂಡೀಲ್‌ನಲ್ಲಿ ಕೇವಲ ಬಂಡವಳಗಾರರ ಲಾಭಗಾರಿಕೆಯೆ ಸ್ಥಿರೀಕೃತವಾಗಿದೆ; ಬಿವರಿಜ್ ಯೋಜನೆಯಿಂದ 'ಭಿಕ್ಷೆ'ಗೆ ಬೇರೊಂದು ಹೆಸರು ಮಾತ್ರ ದೊರೆತಿದೆ; ರಶಿಯಾದಲ್ಲಿ ವ್ಯಕ್ತಿಸ್ವಾತಂತ್ರ್ಯ ಹೋಗಿದೆಯಲ್ಲದೆ ರಾಷ್ಟ್ರ ಮತ್ತು ನಾಗರಿಕರ ನಡುವೆ ಕಾರ್ಯನಿರೀಕ್ಷಕ (Manager) ವರ್ಗ ಬೆಳೆಯುತ್ತಲಿದೆ. ಆದಕಾಗಿ ಶಾಂತಿ-ಸುಖ-ಸ್ವಾತಂತ್ರ್ಯಗಳ ದೃಷ್ಟಿಯಿಂದ ಗಾಂಧಿ-ಯೋಜನೆಯು ಅಗತ್ಯವಿದೆ.

೪. ಗಾಂಧಿವಾದದ ಅರ್ಥಶಾಸ್ತ್ರಕ್ಕೆ ನಾಲ್ಕು ಮಹತ್ತ್ವದ ತಳಹದಿಗಳಿವೆ: (೧) ಸರಳತೆ (Simplicity), (೨) ಅಹಿಂಸೆ (non-Violence), (೩) ಶ್ರಮಗೌರವ (Sanctity of labour), ಮತ್ತು (೪) ಮನುಷ್ಯತೆ (Human Values). (೧) ಜೀವನದ ಸಲಕರಣೆಗಳನ್ನು ಹೆಚ್ಚಿಸಿ ಅವನ್ನೊದಗಿಸಲು ಯತ್ನಿಸುವುದು ಇಂದಿನ ಯಂತ್ರಯುಗದ ಲಕ್ಷಣವಾಗಿದೆ. ಆದರೆ ಸಂಪತ್ತಿನ ಆಸೆಗೆ ಕೊನೆ ಇಲ್ಲ, ಆದಕಾಗಿ ಅಂತಹ ಆಸೆಯಿಂದ ಸುಖವಿಲ್ಲ ಶಾಂತಿ ಇಲ್ಲ, ಅವಶ್ಯವಿದ್ದುದನ್ನೆ ಬಯಸುವ ನಿಯಂತ್ರಣ ಅಗತ್ಯ ಎಂದು ಇಂದು ಪಾಶ್ಚಾತ್ಯರೂ ಬುದ್ಧಿಗಲಿತಿದ್ದಾರೆ. (೨) ಅಹಿಂಸೆ ಎಂಬುದು ಸ್ವಾತಂತ್ರ್ಯತತ್ತ್ವಕ್ಕೆ ವಿರುದ್ಧ ಮತ್ತು ಘಾತಕ ಹಿಂಸೆಯಿಂದ ಹಿಂಸೆಗೆ ಪ್ರಚೋದನೆ ತಪ್ಪದು, ಯಂತ್ರೀಕರಣವು ಹಿಂಸಾತತ್ತ್ವದ ಮೇಲೆ ನಿಂತಿದೆ, ಲಾಭಗಾರಿಕೆಯು ಹಿಂಸೆಯಾಗಿಯೆ ಪರಿಣಮಿಸುವುದು. (೩) ಶಾರೀರಿಕ ಶ್ರಮವು ನಿಸರ್ಗದ ನಿಯಮ, ಸೃಷ್ಟಿ ಹಾಕಿದ ಶರ್ತು, ಕೆಲವರು ಕುಳಿತು ತಿನ್ನುವುದು ಅಸ್ವಾಭಾವಿಕ, ನಿರುದ್ಯೋಗವು ಸಾಮಾಜಿಕ ಪಾಪ, ರಾಶಿರಾಶಿಯಾಗಿ ಉತ್ಪಾದನೆ ಮಾಡುವುದಕ್ಕಿಂತ (Mass-production) ಪ್ರತಿಯೊಬ್ಬನು ಕೈಯಿಂದ ದುಡಿಯುವುದು (Production by the Masses) ಉತ್ತಮ. (೪) ಯಂತ್ರೀಕರಣದಲ್ಲಿ ಮಾನವನ ಹೃದಯವೂ ಯಂತ್ರವಾಗುವುದು, ಆದು ಹೋಗಿ ವ್ಯಕ್ತಿಗಳ ದೃಷ್ಟಿಯಿಂದ ವಿಚಾರ ಮಾಡುವುದು ಶ್ರೇಯಸ್ಕರ.

೫. ನಮ್ಮ ದೇಶದಲ್ಲಿ ಎಂದಿನಿಂದಲೂ ಗ್ರಾಮ-ಸಂಘ (ಪಂಚಾಯತಿ) ಗಳಿದ್ದುವು. ಇವುಗಳಿದ್ದುದಕ್ಕಾಗಿಯೆ, ದೇಶದಲ್ಲಿ ಎಂತಹ ರಾಜಕೀಯ ಕ್ರಾಂತಿ ಘಟಿಸಿದರೂ ಆರ್ಥಿಕ ಜೀವನಕ್ಕೆ ಧಕ್ಕೆ ಬರುತ್ತಿರಲಿಲ್ಲ. ಸಹಕಾರ ತತ್ತ್ವ, ಲಾಭಗಾರಿಕೆಯ ಅಭಾವ, ಜನತೆಯ

* The Gandhian Plan of Economic Development for India, ಬರೆದವರು ಶ್ರೀಮಾನ್ ನಾರಾಯಣ ಅಗರವಾಲ, ಪದ್ಮ ಪ್ರಕಾಶನ ಸಂಸ್ಥೆ, ಮುಂಬಯಿ.

ಪ್ರತಿನಿಧಿತ್ವ—ಇವೆಲ್ಲವುಗಳಿಗಾಗಿ ಗ್ರಾಮಸಂಘಗಳು ಯಾವ ಕ್ರಾಂತಿಯನ್ನಾದರೂ ಇದಿರಿಸಿದುವು. ಯಂತ್ರೀಕರಣದಿಂದ ಗ್ರಾಮಸಂಘಗಳು ಹೋದುವು. ವ್ಯಕ್ತಿಯ ಬುದ್ಧಿಮತ್ತೆ-ಸಾಹಸ-ಕೌಶಲ್ಯ-ಸಹಕಾರ—ಸುಖ ಇವುಗಳಿಗೆ ಅಸ್ಪದವಿಲ್ಲದಂತಾಯಿತು. ವ್ಯವಸಾಯವು ಕೇಂದ್ರೀಕೃತವಾಯಿತು (ಇಂದಿನ ಯುದ್ಧದಲ್ಲಿ ಇದು ದೊಡ್ಡ ಅನನುಕೂಲ, ಕೇಂದ್ರಗಳು ಬಾಂಬಿಗೆ ಗುರಿಯಾಗಿ). ನಗರಜೀವನ ಬೆಳೆಯಿತು (ಮಾನವನ ಶಕ್ತಿ ಮತ್ತು ಸಂಖ್ಯೆ ಇದಕಾಗಿ ಇಳಿಯತೊಡಗಿವೆ). ನಿರುದ್ಯೋಗವು ಯಂತ್ರೀಕರಣದ ಪ್ರಮಾಣದೊಡನೆಯೆ ಹೆಚ್ಚಿತು. ಅಂತರರಾಷ್ಟ್ರೀಯದಲ್ಲಿ ಅಶಾಂತಿಯೂ ಬೆಳೆಯಿತು. ಆದರೆ ಅದೇ ಚೀನ ಮೊದಲಾದ ಕೆಲವು ದೇಶಗಳನ್ನು ನೋಡಿದರೆ ಸಹಕಾರ ಸಂಘ, ಗ್ರಾಮಸಂಘ ಮತ್ತು ಉತ್ಪಾದನೆಯ ವಿಸರ್ಗೀಕರಣ (decentralisation) ಇವುಗಳಿಂದ ಹಿತವಿವೆಯೆಂಬುದು ಸ್ಪಷ್ಟವಾಗುವುದು.

೬. ಹಿಂದುಸ್ತಾನದಲ್ಲಿ ಒಕ್ಕಲುತನ ಮುಖ್ಯ ವ್ಯವಸಾಯ; ಅದಕ್ಕೆ ಅಂಟಿಕೊಂಡ ರೋಗಗಳೆಂದರೆ ಬಡತನ ಮತ್ತು ಅಜ್ಞಾನ. ಯೋಗ್ಯವಾದ ಆಹಾರ, ಸಾಕಷ್ಟು ಬಟ್ಟೆ, ಪುಕ್ಕಟೆ ಪ್ರಾಥಮಿಕ ಮತ್ತು ವ್ಯವಹಾರಾಗತ್ಯ ಶಿಕ್ಷಣ, ಸುಲಭ ಮತ್ತು ಸಮೀಪದ ಔಷಧೋಪಚಾರ ವ್ಯವಸ್ಥೆ, ಪೋಸ್ಟ್-ಬ್ಯಾಂಕ್-ಜೀವವಿಮೆಯ ಸೌಕರ್ಯ ಮತ್ತು ಆರೋಗ್ಯಸ್ಥಾನಗಳು ಇವು ಹಳ್ಳಿಗಳ ಯೋಜನೆಗೆ ಮುಖ್ಯವಾದುವು. ಪ್ರತಿಯೊಬ್ಬನಿಗೆ ವರ್ಷಕ್ಕೆ ೭೨ ರೂ. ಗಳ ಆದಾಯ ಈ ದೃಷ್ಟಿಯಿಂದ ಅನಿವಾರ್ಯವೆನ್ನಿಸುವುದು; ಇದಲ್ಲದೆ ಗ್ರಾಮಸಂಘಗಳನ್ನೆ ಸ್ಥಾನಿಕ ಆಡಳಿತ-ವ್ಯವಸ್ಥೆಗಳಿಗಾಗಿ ಸ್ವಾಯತ್ತವಾಗಿರಿಸಬೇಕು.

೭. ಸಾಕಷ್ಟು ಮತ್ತು ಯೋಗ್ಯ (ಪಥ್ಯ) ವಾದ ಆಹಾರ, ಹವಾಮಾನಗಳಿಗನುಸರಿಸಿ ಬೆಳೆಗಳ ಯೋಜನೆ, ಆಹಾರಧಾನ್ಯ ಮತ್ತು ದೇಶದ ಉದ್ಯೋಗಗಳ ಕಚ್ಚಾಮಾಲು ಸಾಕಷ್ಟಿರಿಸುವುದು, ಆಯಾ ಪ್ರದೇಶಗಳೂ ತಮಗೆ ಸಾಕಷ್ಟು ಬೆಳೆದುಕೊಳ್ಳುವಂತೆ ಮಾಡುವುದು, ಹಣದಾಸೆಗಾಗಿ ಮತ್ತು ದೂರದ ಮಾರ್ಕೆಟಿಗಾಗಿ ಬೆಳೆಯುವುದನ್ನು ತಡೆಯುವುದು, ಮತ್ತು ಸಂಶೋಧನೆಯ ಸಹಾಯದಿಂದ ಪ್ರಯೋಗ ಫಾರ್ಮ್ (farm) ಗಳನ್ನು ಏರ್ಪಡಿಸುವುದು—ಇವು ಒಕ್ಕಲುತನದ ಯೋಜನೆಯ ಮುಖ್ಯ ಅಂಶಗಳು. ಭೂಮಿಯ ಒಡೆತನವನ್ನು ಗ್ರಾಮಸಂಘಗಳಿಗೆ ಸಾಮೂಹಿಕವಾಗಿ ಕೊಟ್ಟು, ಕಂದಾಯವನ್ನು ಇಳಿಸಿ, ಧಾನ್ಯದಲ್ಲಿಯೆ ತೆರಿಗೆಯನ್ನು ಕೊಡುವಂತೆ ಮಾಡಿದರೆ ಬಡತನ, 'ಪಡ' ಭೂಮಿ ಮತ್ತು ಸಾಲಗಾರಿಕೆ ಕಡಿಮೆಯಾಗುವುವು. ನೀರಾವರಿಯ ಕ್ಷೇತ್ರವನ್ನು ವ್ಯವಸ್ಥಿತವಾಗಿ ಬೆಳೆಯಿಸಬೇಕು.

೮. ಒಕ್ಕಲುತನದ ಅಂಗವಾಗಿಯೆ ಹಾಲು-ಬೆಣ್ಣೆಗಳ ಮಾರಾಟವನ್ನೂ ಇನ್ನೊಂದೆಡೆಗೆ ಚರ್ಮದ ವ್ಯವಸಾಯವನ್ನೂ ಗ್ರಾಮಸಂಘವಾಗಲಿ ಗ್ರಾಮ **ಕುಲ** (ಸಂಘಗಳ ಗುಂಪು) ವಾಗಲಿ ಏರ್ಪಡಿಸಬೇಕು. ಅದರಂತೆಯೆ ಹಣ್ಣು—ಕಾಯಿ—ಪಲ್ಲೆಗಳ ವ್ಯವಹಾರದ ಕೇಂದ್ರೀಕರಣವಾಗಬೇಕು.

೯. ಹಳ್ಳಿಗನಾಗಲಿ ? ಹಳ್ಳಿಯಾಗಲಿ ಆಹಾರ—ಬಟ್ಟೆ—ಮನೆ ಕಟ್ಟುವ ಸಾಮಾನುಗಳಿಗಾಗಿ ಪರತಂತ್ರವಾಗಿರಬಾರದು. ಈ ದೃಷ್ಟಿಯಿಂದ ಹಳ್ಳಿಗನು ತನ್ನ ಉತ್ಪನ್ನವನ್ನು ಬೆಳೆಯಿಸಿಕೊಳ್ಳಲು ಕುಲ ವ್ಯವಸಾಯ (cottage industry)ಯನ್ನು ಕೈಕೊಳ್ಳುವಂತೆ ಮಾಡಬೇಕು. ಖಾದಿ, ಕಾಗದ, ಎಣ್ಣೆ ತೆಗೆಯುವುದು, ಭತ್ತ ಕುಟ್ಟುವುದು—ಇವು ಮಾದರಿಯ ವ್ಯವಸಾಯಗಳು. ಇವುಗಳ ಕೇಂದ್ರೀಕರಣಕ್ಕಾಗಿ ಸರಕಾರವು ಹಣ—ಶಿಕ್ಷಣ—ಸಹಕಾರಸಂಘ ಮೊದಲಾದುವುಗಳಿಂದ ಸಹಾಯವನ್ನು ನೀಡಬೇಕು.

೧೦. ಜನತೆಗೆ ದಿನಂಪ್ರತಿ ಬೇಕಾಗುವ ವಸ್ತುಗಳನ್ನು ಜನತೆಯೆ ಗ್ರಾಮಸಂಘಗಳ ಸಹಾಯದಿಂದ ತಯ್ಯಾರಿಸಿದರೆ, ದೇಶದ ದೃಷ್ಟಿಯಿಂದ ಬೇಕಾಗುವ ಮೂಲ ವ್ಯವಸಾಯಗಳನ್ನು (Basic Industries) ಸಹಕಾರ ಸಂಘಗಳಾಗಲಿ ಧನಿಕರಾಗಲಿ ನಡೆಯಿಸಬಹುದು. ಆದರೆ ಇವು ವ್ಯಕ್ತಿಯ ಲಾಭಕ್ಕಾಗಿ ಅಲ್ಲ, ಇಡಿಯ ದೇಶದ ಹಿತಕ್ಕಾಗಿ; ಅದಕಾಗಿ ಸರಕಾರದ ಅಧಿಕಾರವು ಇವುಗಳ ಮೇಲೆ ಪೂರ್ತಿಯಾಗಿ ಇರತಕ್ಕದ್ದು.

೧೧. ಸಾರಿಗೆ—ಆರೋಗ್ಯ—ಶಿಕ್ಷಣ—ಬ್ಯಾಂಕಿಂಗ್ ಮತ್ತು ಜೀವವಿಮೆ ಇವು ಸಾರ್ವಜನಿಕರ ಹಿತ ಸಂಗತಿಗಳಾದ್ದರಿಂದ, ಗ್ರಾಮ ಸಂಘಗಳ ಸಹಕಾರದಿಂದ ಸರಕಾರವೆ ಮುಂದಾಗಿ ಇವನ್ನು ಕೈಕೊಳ್ಳಬೇಕು. ಜನತೆಗೆ ಹಿತ ಮತ್ತು ಉಪಯುಕ್ತವಾಗಿರುವುದೆ ಮುಖ್ಯ ಧ್ಯೇಯವಾಗಿರಬೇಕು.

ಇದೇ ಮೇರೆಗೆ ಆರೋಗ್ಯ—ಶಿಕ್ಷಣ—ನೀರಿನ ಸೌಕರ್ಯ ಮೊದಲಾದುವುಗಳ ಯೋಜನೆಯಲ್ಲೂ ಅದರಂತೆಯೆ ಸಾರಿಗೆಯ ಮಾರ್ಗರಚನೆಗಳಲ್ಲೂ ಸ್ಥಾನಿಕ ಹಿತವನ್ನೆ ಮೊದಲು ನೋಡಬೇಕು.

× × × ×

ಯಾವುದೆ ಯೋಜನೆಯಾಗಲಿ, ಅದರ ಉದ್ದೇಶ, ಅದನ್ನು ಜಾರಿಯಲ್ಲಿ ತರುವ ಪ್ರದೇಶದ ವೈಶಿಷ್ಟ್ಯ, ಜನತೆಯ ಸಾಂಸ್ಕೃತಿಕ ತಳಹದಿ— ಇವೆಲ್ಲವನ್ನೂ ಅರಿತುಕೊಳ್ಳಬೇಕಲ್ಲದೆ, ಆ ಯೋಜನೆಯನ್ನು ಕಾರ್ಯರೂಪದಲ್ಲಿ ತರಲು ತರಬೇತಾದ ಸಹೃದಯ ಕೆಲಸಗಾರರು ಬೇಕೇ ಬೇಕು ಎಂಬ ಮಾತೂ ಒಪ್ಪತಕ್ಕಂತಹದು. ಯೋಜನೆಗಳ ಸುರಿಮಳೆಯ ಈ ಕಾಲದಲ್ಲಿ ಗಾಂಧಿ-ಯೋಜನೆಯನ್ನು ಪ್ರತಿಯೊಬ್ಬ ದೇಶಾಭಿಮಾನಿಯೂ ಲಕ್ಷ್ಯಪೂರ್ವಕವಾಗಿ ಅಭ್ಯಸಿಸಬೇಕು. ಒಂದು ತಾತ್ಪೂರ್ತಿಕ ಯೋಜನೆಗಿಂತ ಜೀವನದ ಒಂದು ತಾತ್ತ್ವಿಕ ಮಾರ್ಗದರ್ಶಿಯಾಗಿದೆ ಶ್ರೀಮನ್ನಾರಾಯಣ ಅಗರವಾಲರ ಪ್ರಕಟನೆ. ಆಶೀರ್ವಾದದಂತೆ ಮಹಾತ್ಮರ ಮುನ್ನುಡಿಯೊಂದಿದೆ.

ಏಜಂಟರು ಬೇಕು!

ಬೆಂಗಳೂರು, ಮೈಸೂರು, ಚಿಂತಾಮಣಿ, ಸಂಕೇಶ್ವರ, ಚಿತ್ರದುರ್ಗ, ಬೈಲಹೊಂಗಲ, ರಾಯಚೂರು, ಚಿಕ್ಕೋಡಿ, ಇಳಕಲ್ಲು, ಜಮಖಂಡಿ, ರಬಕವಿ, ಹಾನಗಲ್ಲು, ಹರಿಹರ, ಅರಸಿಕೇರೆ, ಕುಂದಾಪುರ, ಸಾಗರ, ಕುಮಟೆ, ಕಾರವಾರ ಮೊದಲಾದ ಕನ್ನಡನಾಡಿನ ದೊಡ್ಡ ದೊಡ್ಡ ಪುರ-ಪಟ್ಟಣಗಳಲ್ಲಿ ಜಯಂತಿಗೆ ಏಜಂಟರು ಬೇಕಾಗಿದ್ದಾರೆ. ಕಮಿಶನ್ ದರವನ್ನು ಮೊದಲಿಗಿಂತ ಹೆಚ್ಚಿಸಲಾಗಿದೆ. ಬೇಕಾದವರು ಕೂಡಲೆ ಪತ್ರವ್ಯವಹಾರ ಮಾಡಿ ಏಜನ್ಸಿಯ ಕರಾರುಗಳನ್ನು ತಿಳಿದುಕೊಳ್ಳಬೇಕು.

ಮ್ಯಾನೇಜರ್ 'ಜಯಂತಿ' ಧಾರವಾಡ

ದೀಪ ಆರಲಿಲ್ಲ!

(ಸಣ್ಣಕತೆ)

"ಕಮಲಮಿತ್ರ" ಮೈಸೂರು

●

ಚಿತ್ರವನ್ನು ನೋಡುತ್ತ ನೋಡುತ್ತ ಸುಂದರನಿಗೆ ಹುಚ್ಚು ಹಿಡಿಯುವಂತಾಯಿತು. ಬರೆದವನು ತಾನೇ ಎಂಬುದನ್ನು ಕೂಡ ಆ ಚಿತ್ರವು ಮರೆಯಿಸಿ ಬಿಟ್ಟದ್ದಿತು. ಅದು ಸುಂದರನ ಪುಟ್ಟ ಭಾರ್ಯೆಯ ಚಿತ್ರ! ಎಂತಹ ಮೋಹದ ನಿಲುವು! ಏನು ಮುಗ್ಧತೆ! ಅಬ್ಬಬ್ಬಾ! ಸುಂದರನ ಎದೆ ಹಿಗ್ಗಿಹೋಯಿತು. ಸುತ್ತಣ ನಿಸರ್ಗವೆಲ್ಲವೂ ಸುಂದರನಿಗೆ, ಸ್ವರ್ಗದಿಂದ ಇಳಿದು ಬಂದ ಸೌಖ್ಯದ ರೂಪಭೇದದಂತೆ ತೋರಿತು. ಆತನಿಗೆ ಪ್ರಪಂಚವೇ ಸ್ವರ್ಗವೆನ್ನಿಸಿತು. ಚಿತ್ರವನ್ನು ಮೆಲ್ಲಗೆ ಎತ್ತಿಕೊಂಡು ಕಿಟಕಿಯ ಬಳಿ ಇಟ್ಟು, ಕೆಲವು ಗಜಗಳ ದೂರ ಹೋಗಿ ನೋಡುತ್ತ ನಿಂತುಕೊಂಡನು:

ಸವಿ ಹದಿನೇಳು ವರ್ಷದ ತರುಣಿ. ಭಯ-ಲಜ್ಜೆಗಳಾಭರಣಗಳನ್ನಿಟ್ಟು, ಮೋಗೆನ್ನೆಗಳಿಗೆ ಗುಲಾಲನ್ನೇರಿಸಿ, ಚಂಚಲಾಕ್ಷಿಗಳನ್ನು ಪ್ರಯತ್ನಪೂರ್ವಕವಾಗಿ ಒಂದು ಕಡೆ ನಿಲ್ಲಿಸಿ ನಿಂತಿದ್ದ ವೈಖರಿ; ಒಂದು ಕುರ್ಚಿಯ ಬೆನ್ನನ್ನು ಮೃದುವಾಗಿ ಹಿಡಿದು, ಎಡದ ಕಾಲನ್ನು ಬೆರಳುಗಳ ಮೇಲೆ ಮಾತ್ರ ನಿಲ್ಲಿಸಿ, ನವಿಲುಗರಿಯಂತಹ ಪತ್ತಲದ ನಿರಿಗಳು ರತ್ನಗಂಬಳಿಯಲ್ಲಿ ಹರಡುವಂತೆ ಮಾಡಿದ್ದ ಆ ಮಂಗಲ ಮೂರ್ತಿಯ ಚೆಲುವಾದ ಮಾಟ. ಸುಮಾರು ಮುಕ್ಕಾಲು ಮಾರುದ್ದದ ಹೆಣೆದ ಜಡೆಯನ್ನು—ವಕ್ಷಸ್ಥಲದಿಂದ ಹಾದುಬಂದುದನ್ನು—ಎಡಗೈಯಲ್ಲಿ ಹಿಡಿದಿರುವ ಸೊಗಸು.......

ಸುಂದರನು ಕನಸಿನಿಂದ ಎಚ್ಚತ್ತು ಕಣ್ತೆರೆದನು. ಮೃದುವಾಗಿ ಒಮ್ಮೆ "ರತ್ನಾ...." ಎಂದನು. ಚಿತ್ರವು ಹಾಗೆಯೆ ನಿಂತಿತ್ತು. ಸುಂದರನು ತೃಪ್ತಿಯಿಂದ ಒಂದು ಉಸಿರನ್ನು ಬಿಟ್ಟು, ಪಕ್ಕದ ಕುರ್ಚಿಯ ಮೇಲೆ ಕುಳಿತನು. ಚಿತ್ರವು ಅವನನ್ನೇ ನೋಡಿತು. ದೃಷ್ಟಿಯನ್ನು ಬೇರೆಡೆಗೆ ತಿರುಗಿಸಿ ಪುನಃ ಒಮ್ಮೆ ಚಿತ್ರವನ್ನು ನೋಡಿದನು. ಪುನಃ ನಾಲ್ಕು ಕಣ್ಣುಗಳೂ ಸೇರಿದುವು. "ಚಿನ್ನಾ, ನಾಳೆ ಹೇಗಿದ್ದರೂ ಬಂದೇ ಬರುತ್ತೀಯಲ್ಲ!" ಎಂದನು. ಚಿತ್ರವು ಮುಗುಳ್ನಗೆ ನಕ್ಕಿತು. ಸುಂದರನಿಗೆ ರೋಮಾಂಚವೆನಿಸಿತು. ಏತಕ್ಕೋ ಚಿತ್ರದೆಡೆಗೆ ಎದ್ದುಹೋದನು. ಅಷ್ಟರಲ್ಲೇ ಮೀನಮ್ಮನವರು ಬಂದು ಕೂಗಿಬಿಟ್ಟರು. ಸುಂದರನು ನಾಚಿ ಬೆವರಿಟ್ಟನು.

ಸುಂದರನಿಗೆ ದೇವರು ಬಹಳ ಮಂಗಲಕರವಾದ ಸೌಲಭ್ಯಗಳನ್ನು—ಅವನ ಜೀವನಕ್ಕೆ—ಒದಗಿಸಿದ್ದನು. ವಿದ್ಯೆ, ರೂಪು, ಕಲೆ, ಹಣ ಎಲ್ಲವೂ ಅವನಿಗೆ ಸಾಕಷ್ಟು ಇದ್ದೇ ಇತ್ತು. ಸುಂದರನು ಡಿಗ್ರಿಗಳನ್ನು ಗುಡ್ಡೆ ಹಾಕಿಕೊಳ್ಳದಿದ್ದರೂ, ಆ ಪರಭಾಷೆಯ ಪಾಂಡಿತ್ಯ ಅವನಲ್ಲಿ ತೃಪ್ತಿಕರವಾಗಿಯೇ ಇತ್ತು. ರೂಪು ಮನಮೋಹಿಸುವಷ್ಟು ಇಲ್ಲದಿದ್ದರೂ, ಅವನ ವ್ಯಕ್ತಿತ್ವವನ್ನು ಅರೆಗಳಿಗೆ ವಿಮರ್ಶಿಸಿದವರು ಮಾತ್ರ ಅವನನ್ನು ಕೆಲುವನೆಂದೇ ಪರಿಗಣಿಸುತ್ತಿದ್ದರು. ಸುಂದರನು ಒಬ್ಬ ಚಿತ್ರಕಾರ. ಚಿತ್ರಕಲೆ ಅವನನ್ನು ಪ್ರಪಂಚವು ಬೆರಳಿಟ್ಟು ತೋರಿಸುವಂತಹ ಯಶವನ್ನವನಿಗೆ ಒದಗಿಸಿಕೊಡುವಷ್ಟು ಅಧೀನವಾಗದಿದ್ದರೂ, ನೋಡಿದವರ ಮನಸ್ಸಿನ ಮೇಲೆ ಸಮಾಧಾನಕರವಾದ ಒಂದು ಸುಗಂಧ ಮಂದಮಾರುತವು ಬೀಸದೇ ಇರುತ್ತಿರಲಿಲ್ಲ. ಸುಂದರನಿಗೆ ಕೆಲವೇ ಎಕರೆ ಸ್ಥಿರ ಆಸ್ತಿಯೂ, ನಲವತ್ತು ರೂಪಾಯಿಗಳ ವೇತನದೊಂದು ನೌಕರಿಯೂ ಇದ್ದುವು. ಇವಿಷ್ಟನ್ನೂ ಸಾಧಿಸಿದ್ದ ಸುಂದರನ ವ್ಯಕ್ತಿತ್ವದ ಗುಣಗಳು ತಾವಾಗಿಯೇ ಸುರೂಪವನ್ನು ಪಡೆದಿದ್ದುವು.

ಸುಂದರನ ಮತ್ತೊಂದು ಅದೃಷ್ಟವೆಂದರೆ ಮೀನಮ್ಮನವರು. ಗಂಡನನ್ನು ಕಳೆದುಕೊಂಡರೂ ಮಾತೃತ್ವದ ಬೆಲೆಯ ಮೇಲೆ ಗಮನವಿಟ್ಟು ಸುಂದರನನ್ನೊಬ್ಬ ವ್ಯಕ್ತಿಯನ್ನಾಗಿ ಮಾಡಿದುದು ಮೀನಮ್ಮನವರ ಪುಣ್ಯಗಳಲ್ಲಿ ಒಂದು. ಮೀನಮ್ಮನವರಿಗೆ ಸುಂದರನ ಅಭಿವೃದ್ಧಿಯನ್ನು ನೋಡಿ ಅಮಿತ ಸಂತೋಷವಾಗುತ್ತಿತ್ತು. ಇನ್ನುಳಿದ ತಮ್ಮ ಒಂದು ಕರ್ತವ್ಯವನ್ನು ಪೂರ್ಣಗೊಳಿಸಲು ಆಕೆ ತವಕಗೊಂಡಿದ್ದರು.

"ಮೊದಲುನೋಟದ ಪ್ರೇಮ"ಕ್ಕೆ ಬಲಿ ಬಿದ್ದಿದ್ದ ಸುಂದರನ ಜೀವನವನ್ನು ಕಷ್ಟಕ್ಕೀಡುಮಾಡಲು ದೇವರು ಇಷ್ಟಪಡಲಿಲ್ಲ. ಸುಂದರನ ಪ್ರೇಯಸಿ ರತ್ನಳು ಸುಂದರನನ್ನು ಸೇರುವ ಹಾಗೆ ಮಾಡುವುದರಲ್ಲಿ ವಿಧಿಯ ಕೈವಾಡವೂ ಕೊಂಚ ಇದ್ದಿತೆಂದರೆ, ಸುಂದರನ ಅದೃಷ್ಟವನ್ನು ಹೇಗೆ ಅಳೆಯುವುದು? ಸುಂದರನ ವಿದ್ಯಾಭ್ಯಾಸದ ಕಾಲದಿಂದ ಈಚೆಗೆ ಕಷ್ಟವೆಂಬುದನ್ನೇ ತಿಳಿಯದಿದ್ದ ಸುಂದರನಿಗೆ 'ಇದೇನಪ್ಪ ಗ್ರಹಚಾರ!' ಎನ್ನುವಷ್ಟು ಮಟ್ಟಿಗೆ ಸುಖಗಳು, ಒಂದರಮೇಲೊಂದು ಬರಲಾರಂಭಿಸಿದ್ದುವು. ಅಂತೂ ಸುಂದರನ ಆ ಮೊದಲ ನೋಟದ ಪ್ರೇಮದ ಪ್ರೇಯಸಿ ರತ್ನಳು ಸುಂದರನ ಕೈ ಹಿಡಿದಳು. ಸುಂದರನ ದೇಹ ಒಂದು ಹೂವಾದಂತೆ ಅವನಿಗೆ ತೋರಿತು. ಎಲ್ಲೆಲ್ಲಿಯೂ ಸೌಖ್ಯಗಳೇ ಕಾಣಹತ್ತಿದುವು. ಸುಂದರನು ಕೆಲಕಾಲ ಹೂವಾಗುವನು, ಕೆಲಕಾಲ ಚಿಟ್ಟೆಯಾಗುವನು. ಮರುಕ್ಷಣ ಬೆಳುದಿಂಗಳಾಗುವನು—ಎಷ್ಟಾದರೂ ಕಲಾವಂತ!

ರತ್ನಳು ಮನೆಗೆ ಬರುವ ದಿನವು ಹತ್ತಿರವಾಗತೊಡಗಿದುವು. ಸುಂದರನ ಎದೆ ಹಾರತೊಡಗಿತು. "ಎಂದಿಗೆ ನನ್ನ ದೇವಿಯನ್ನು, ತನ್ನ ಹೃದಯಮಂದಿರದಲ್ಲಿ ಕುಳ್ಳಿರಿಸಿ ಪೂಜಿಸುವೆನು!" ಎಂಬ ಹಂಬಲವೇ ಅವನಲ್ಲಿ ತುಂಬಿದ್ದಿತು. ಮೀನಮ್ಮನವರಿಗೆ ಮಗನ ಹರುಷವನ್ನು ನೋಡಿ ನಗೆಯು ಒತ್ತರಿಸಿ ಬರುತ್ತಿತ್ತು.

× × × ×

ರೈಲು ರತ್ನಳನ್ನು ಸುಂದರನೂರಿಗೆ ಕರೆದು ತಂದೇ ತಂದಿತು. ರತ್ನಳು ಗಂಡನ ಮನೆಯ ಹೊಸ್ತಿಲನ್ನು ದಾಟಿ, ಗೃಹಪ್ರವೇಶ ಮಾಡಿದಳು. ಅತ್ತೆಗೆ ನಮಸ್ಕಾರ ಮಾಡಿದಳು. ಮೀನಮ್ಮನವರಿಗೆ ಕಣ್ಣಲ್ಲಿ ನೀರು ಬಂದಿತು. ಆಶೀರ್ವದಿಸಿ ಸೊಸೆಯನ್ನು ಮೇಲಕ್ಕೆ ಎತ್ತಿದರು. ಸುಂದರನಿಗೆ ಹೃದಯದ 'ಡವಡವ' ಹೆಚ್ಚಾಯಿತು. ಹೆಂಡತಿಯನ್ನು ಇನ್ನೂ ಮಾತನಾಡಿಸಿರಲಿಲ್ಲ. ಅದೆಲ್ಲವೂ ಅವನಿಗೆ

ಹೊಸದು. ಲೋಕದ ರೂಢಿ ತಿಳಿಯದ ಹುಡುಗ. ಹೆಂಡತಿಗಾಗಿ ಒಲವು ಮಾತ್ರ ಹೃದಯದಲ್ಲಿ ತುಂಬಿ ಸಿಕ್ಕಿ ಹೋಗಿದೆ. ನಿಷೇಕದ ಕಾಲದಲ್ಲಿ ನೋಡಿದ್ದ 'ತನ್ನ ಹೆಂಡತಿ'ಯನ್ನು ಈಗ ನೋಡುತ್ತಿದ್ದಾನೆ. 'ತನ್ನ ಹೆಂಡತಿ' ಎಂಬ ಅಹಂಭಾವದಲ್ಲಿಯೆ ಅವನಿಗೇನೋ ಒಂದು ತೆರದ ಸವಿ ತೋರುತ್ತಿದೆ. ತುಟಿಗಳ ಮೇಲೆ ನಗೆ, ಕಣ್ಣುಗಳಲ್ಲಿ ತನಕ ತಾಂಡವವಾಡುತ್ತಿವೆ.

ಈಗ ಅವನಿಗೆ ಸಂಧ್ಯಾರಾಗಗಳ ಮೇಲಿನ ಪ್ರೀತಿ ಬಹು ಹೆಚ್ಚಿ ಹೋಗಿದೆ. ದಿನದ ಪ್ರಚಂಡ ಬೆಳಕು ಆರುತ್ತ ಹೋದಂತೆ ಅವನ ಮನಸ್ಸಿನಲ್ಲಿ ಸಂತೋಷವು ನರ್ತಿಸಲು ಮೊದಲಿಡುತ್ತದೆ. ಅವನೀಗ ಜೀವನದ ಸ್ವರ್ಣಯುಗದ ರುಚಿಯನ್ನು ಸವಿಯುತ್ತಿದ್ದಾನೆ. ಎಲ್ಲೆಲ್ಲಿಯೂ ಆನಂದವೇ ತುಂಬಿದೆ. ಎದೆಯು ಒಲುಮೆ, ಸಮಾಧಾನ, ತೃಪ್ತಿಗಳ ತವರಾಗಿದೆ.

ರತ್ನಳು ಬಹಳ ಚುರುಕುಹುಡುಗಿ. ಅವಳಿಗೆ ಜನ್ಮದ ಮೊದಲಿನಿಂದಲೂ, ಚುರುಕುತನ, ಸ್ವಾತಂತ್ರ್ಯಾಭಿಲಾಷೆಗಳು ಬೆರಸಿಕೊಂಡು ಬಂದಿವೆ. ಓದು-ಬರೆಹಗಳಲ್ಲಿ ತಕ್ಕನಿಟ್ಟಿಗೆ ಬುದ್ಧಿವಂತೆಯೂ ಹೌದು. ಇಂತಹ ಹುಡುಗಿಯು ಸುಂದರನಂತಹ ಹುಡುಗನ ಕೈಹಿಡಿದುದು ತಕ್ಕದ್ದೇ; ಆದರೂ, ರತ್ನಳ ಸ್ವಾತಂತ್ರ್ಯಾಭಿಲಾಷೆ ಒಮ್ಮೊಮ್ಮೆ ಇರಬಾರದಾಗಿತ್ತು ಎನ್ನಿಸುವಂತಿತ್ತು. ಆ ಸ್ವಾತಂತ್ರ್ಯಾಭಿಲಾಷೆಯು ಅವಳನ್ನೊಮ್ಮೆ ನಾಚಿಕೆಯಿಂದ ಹೊರಗಿರಿಸಿ ಬಿಡುತ್ತಿದ್ದಿತು. ರತ್ನಳು ಸ್ತ್ರೀಯಾದುದು ಸುಂದರನಿಗಾಗಿಯೇ,—ಎನಿಸುವಂತಿದ್ದರೂ, ಅವಳು ಕೊಂಚ 'ಕಟು' ಸ್ವಭಾವದವಳಾಗಿಲ್ಲದಿದ್ದರೆ ಚೆನ್ನಾಗಿರುತ್ತಿತ್ತು. ಸುಂದರನಿಗೆ ಆ ಕಟುತ್ವದಿಂದ ಪ್ರಮಾದವೇನೂ ತೋರಿ ಬರಲಿಲ್ಲ.

ಮೀನಮ್ಮನವರು ಇತರರೊಡನೆ ತಮ್ಮ ಸೊಸೆಯನ್ನು ಹೊಗಳಿದ್ದೂ ಹೊಗಳಿದ್ದೆ. ರತ್ನಳಲ್ಲೇನಾದರೂ ಕುಂದು ತೋರಿದರೆ ಅದನ್ನು ಮುಚ್ಚಿ, ಮೃದುವಾಗಿ, ಅವಳಿಗೆ ನಡೆವಳಿಕೆಯನ್ನು ಯಾವುದಾದರೊಂದು ರೀತಿಯಲ್ಲಿ ಹೇಳಿಕೊಡುವುದೆಂದರೆ ತುಂಬಾ ಆಸಕ್ತಿ. ಒಮ್ಮೊಮ್ಮೆ ರತ್ನಳ ಬಾಯಿ ಮೇಲಕ್ಕೇರುವುದೂ ಉಂಟು. ಆದರೂ ಆಗ ಮೀನಮ್ಮನವರು, ನಗುತ್ತಲೇ ಸುಮ್ಮನಿದ್ದು ಬಿಡುತ್ತಿದ್ದರು.

ಸುಂದರನಿಗೆ ಒಮ್ಮೊಮ್ಮೆ, ರತ್ನಳು ಮೀನಮ್ಮನವರೊಡನೆ ಸಿಡಿದಾಗ ಏನಾದರೂ ತಪ್ಪುನಡೆದುದಾದರೆ, ಮೀನಮ್ಮನವರು ಅದನ್ನು ತಿದ್ದಿದಾಗ ಅವಳು ಒಂದೆಲ್ಲ ಒಂದು ಹೇಳುತ್ತಿದ್ದುದನ್ನು ಕಂಡದ್ದಾದರೆ—ಸಹಿಸುತ್ತಿರಲಿಲ್ಲ. ಆದರೆ ರತ್ನಳು ತನ್ನ ಮುಗ್ಧರೂಪದಿಂದ ಮುಗುಳ್ನಗೆಯನ್ನು ತುಟಿಗಳ ಮೇಲೆ ಕುಣಿಸುತ್ತಾ ಬಂದು ಹತ್ತಿರ ನಿಂತರೆ, ಅವನ ಅಸಮಾಧಾನವು ಹಾಸ್ಯಕ್ಕೆ ತಿರುಗಿ ಹೋಗುತ್ತಿತ್ತು. ಕೆಲವು ಸಲ ಅವಳು ತನ್ನ ಸಮೀಪಕ್ಕೆ ಬಂದಾಗ ಕೆಲವು ಬುದ್ಧಿಮಾತುಗಳನ್ನು ಅವಳಿಗೆ ಹೇಳಬೇಕೆಂದು ನಿರ್ಧರಿಸಿಕೊಳ್ಳುತ್ತಿದ್ದನು; ಆದರೆ ಒಂದು ದಿನವೂ ಆ ಕೆಲಸದಲ್ಲಿ ಕೃತಕೃತ್ಯನಾಗುತ್ತಿರಲಿಲ್ಲ. ರತ್ನಳು ಒಳಗೆ ಬಂದಳೆಂದರೆ—ಸುತ್ತಲಿನ ಕಲ್ಪನೆಗಳನ್ನೋಡಿಸುವ ಸ್ಫಟಿಕದ ಹರಳಿನಂತೆ—ಅವನ ಮನಸ್ಸಿನಲ್ಲಿದ್ದ ಕಲ್ಪನೆಗಳನ್ನೆಲ್ಲಾ ಚೆದರಿಸುತ್ತ ಬರುತ್ತಿದ್ದಳು. ಇದರಿಂದ ಅವನಿಗೆ ಯಾವುದೂ ತೋಚುತ್ತಿರಲಿಲ್ಲ.

ಈಗೀಗ ರತ್ನ ಕೊಂಚ ತುಂಟ ಹುಡುಗಿಯಾಗಹತ್ತಿದಳು. ಇದನ್ನು ಅತ್ತೆ, ಗಂಡ ಇಬ್ಬರೂ ಗಮನಿಸುತ್ತಲೆ ಇದ್ದರೂ, ಅನುಭವವಿಲ್ಲದ ಎಳೆಯ ಜೀವವೆಂಬುದಾಗಿ ಪರಿಗಣಿಸಿ, ರತ್ನಳನ್ನು ಮನ್ನಿಸುತ್ತಾ ಬಂದರು. ರತ್ನಳು ತಪ್ಪು ತಿಳಿದುಕೊಂಡಳು. ಅವರಿಬ್ಬರೂ ತನಗೆ ಹೆದರಿರುವರೆಂದು ಅವಳ ತಿಳಿವಳಿಕೆ. ಗಂಡನ ಒಲುಮೆಯನ್ನಾಗಲಿ, ಅತ್ತೆಯ ಪ್ರೀತಿಯನ್ನಾಗಲಿ ರತ್ನ ಅರ್ಥ ಮಾಡಿಕೊಳ್ಳಲೆ ಇಲ್ಲ.

× × × ×

"ರತ್ನ ಈಚೀಚೆಗೆ ಒಂದು ತರಹ ಆಗಿಬಿಟ್ಟೆ?"

"ಏನು ತರಹ"

"ನೋಡಿದೆಯೋ, ಅದರಲ್ಲೇ ಉದಾಸೀನತೆ! ಮೊದಲಿದ್ದ ಹಾಗೇಕೆ ನೀನಿಲ್ಲ?"

"ನಾನು ಮೊದಲು ಹೇಗಿದ್ದೆ?"

"ನನ್ನ ಕಣ್ಣುಗಳಲ್ಲೇ ಸುಳಿಯುತ್ತಿದ್ದೆ. ನೀನು ನನ್ನ ದೇವಿಯೆಂದು ತಿಳಿದಿದ್ದೆ. ನಿನ್ನನ್ನು ನೋಡಲು ನಿನ್ನ ಸಾಮೀಪ್ಯದಲ್ಲಿರಲು, ನನ್ನ ಕಣ್ಣು-ದೇಹಗಳು ಸದಾ ತುಡುಕುತ್ತಿದ್ದುವು. ಆ ದೈವೀಗುಣಗಳೆಲ್ಲವೂ ಎಲ್ಲಿ ಹೋದುವು ನನ್ನ ರತ್ನ?"

"ಚಿತ್ರಕಾರರಿಗೂ, ಕವಿಗಳಿಗೂ, ಹುಚ್ಚರಿಗೂ ಬಹು ಹತ್ತಿರದ ಸಂಬಂಧ ಎನ್ನುವುದು ಸತ್ಯವಾಯಿತು. ನಿಮ್ಮ ದಮ್ಮಯ್ಯ! ಕವಿಗಳಾಗಬೇಡೀಂದ್ರೆ. ಅದೇನು ಹೇಳಬೇಕೆಂದಿರುವಿರೋ ಅದನ್ನು ಸರಿಯಾಗಿ ಹೇಳ್ರಿ!"

"ರತ್ನ, ನೀನು ಎಷ್ಟು ಒಳ್ಳೆಯವಳು ಎನ್ನುವುದು ನಿನಗೇ ಗೊತ್ತಿಲ್ಲ. ನಿನ್ನ ಈ ಮುಂಗೋಪವನ್ನು ಬಿಟ್ಟರೆ ಎಲ್ಲವೂ ಸರಿಹೋಗುವುದು. ನಿನ್ನ ರೂಪಕ್ಕೆ ತಕ್ಕ ನಡೆವಳಿಕೆ ಇದ್ದರೆ, ನನ್ನಂತಹ ಪುಣ್ಯವಂತನಿನ್ನಿಲ್ಲ ರತ್ನ!'

"ನಾನು ಹೇಗಿದ್ದರೇನು! ಹೌದು, ನಾನು ಕೆಟ್ಟವಳು, ಕುರೂಪಿ. ನನ್ನನ್ನೇಕೆ ಕಟ್ಟಿಕೊಂಡು ನೀವೂ ಕಷ್ಟಪಟ್ಟು ನನ್ನನ್ನೂ ಗೋಳುಗುಟ್ಟಿಸುವಿರಿ?"

"ರತ್ನ, ನಿನ್ನನ್ನು ಗೋಳುಗುಟ್ಟಿಸುವೆನೇ?"

"ಇಲ್ಲ, ಪ್ರಾಣ ಹಿಂಡುವಿರಿ!"

"ಛೆ! ನಿನ್ನೊಡನೇನು ಮಾತು?" ಎಂದು ಸುಂದರನು ಬಹಳ ಸಂಕೋಚದಿಂದ ಅಲ್ಲಿಂದ ಕಾಲ್ತೆಗೆದನು. ಅಲ್ಲಿಂದ ಬರುವಾಗ ಎಷ್ಟು ಶಾಂತತೆಯಿಂದ ವರ್ತಿಸಿದ್ದನೋ, ಹೋಗುವಾಗ ಅಷ್ಟು ಅಸಮಾಧಾನವನ್ನು ಹೊತ್ತುಕೊಂಡು ಹೊರಟು ಹೋದನು. ಅವನ ಮಿದುಳು ಕಾಯ್ದುಹೋಗಿತ್ತು. ರತ್ನಳ ಚಿತ್ರದ ಮುಂದೆ ಹೋಗಿ ಕುಳಿತನು. ಹಿಂದೆ ನೋಡಿದ ನೋಟವೇ ಈಗಲೂ ಚಿತ್ರದಲ್ಲಿತ್ತು. ಅದೇ ಮೂರ್ತಿಯು ಹಾಗೆಯೆ ನಗುತ್ತಿತ್ತು. ಸುಂದರನು ಖಿನ್ನನಾಗಿ, ಶೂನ್ಯದೃಷ್ಟಿಯನ್ನು ಚಿತ್ರದಲ್ಲಿರಿಸಿ ಸುಮ್ಮನೆ ಕುಳಿತುಬಿಟ್ಟನು. ರತ್ನಳು ಅತ್ತ ಕಡೆಗೆ ಹೊರಟುಹೋದಳು.

ನಿಷ್ಠುರವಾಗಿ ಮಾತನಾಡಿ ಬಿಡುವುದನ್ನು ರತ್ನ ಬಲು ಸೊಗಸಾಗಿ ಕಲಿತು ಬಿಟ್ಟಳು. ಮೀನಮ್ಮನವರು 'ಏನೇ ಬರಲಿ, ನಾನು ನನ್ನ ಪುಟ್ಟಸೊಸೆಯ ಮೇಲೊಂದು ಮಾತನ್ನೂ ಆಡುವುದಿಲ್ಲ' ಎಂದು ನಿಷ್ಕರ್ಷಿಸಿ ಬಿಟ್ಟಿದ್ದರು. ಪ್ರೇಮವೆಂಬುದರ ಅರಿವು ರತ್ನಳಿಗೆ ಹೋಯಿತು. ಮರೆತು ಹಿಂದೆ ತನಗಾಗಿ ಸುಂದರನು ಚಟಪಟಿಸುತ್ತಿದ್ದುದು 'ತನ್ನ ರೂಪಸಂಪತ್ತಿಗಾಗಿ ಮಾತ್ರ' ಎಂದು ನಿರ್ಧರಿಸಿ ಬಿಟ್ಟಿದ್ದಳು. ಸುಂದರನಿಗೂ ರತ್ನಳಿಗೂ ಮನಸ್ಸಿನ ಅಂತರ ವಿಪರೀತವಾಗ ತೊಡಗಿತು. ಆದರೂ ಸತಿ-ಪತಿಗಳಾಗಿಯೆ ದಿನಗಳನ್ನು ನೂಕುತ್ತಿದ್ದರು. ಸುಂದರನಿಗೆ ರತ್ನಳು ಈಗ ಪ್ರೇಮದ ಒಂದು ಮೂರ್ತಿಯಾಗಿರಲಿಲ್ಲ; ಬೇಸರವಾದಾಗ ಆಟವಾಡಿಕೊಳ್ಳಲು ಉಪಯೋಗಿಸುವ ಒಂದು ಕೀಲುಬೊಂಬೆಯಾದಳು. ಅವನ ಸುಖವು ದೂರ—ದೂರ—ದೂರವಾಗಿ ಹೋಯಿತು. ಶಾಂತಿಗೂ ಸುಂದರನಿಗೂ ಇದ್ದ ಸಂಬಂಧವು ಕಡಿದು ಹೋಯಿತು. ಸುಂದರನು ವಿರಹಿಯಂತಾದನು. ಆತ್ಮಹತ್ಯೆಗೆ ತಯಾರಾದವನಂತಿದ್ದನು.

ಗಾಣದೆತ್ತಿನಂತೆ ದುಡಿದು ಮನೆಗೆ ಬಂದರೆ, ಮನೆಯಲ್ಲಿ ಏನಾದರೂ ಒಂದು ಕಲಹವು ನ್ಯಾಯ ತೀರ್ಮಾನಕ್ಕೆ ಕಾದಿರುತ್ತಿತ್ತು. ಪ್ರತಿ ಸಲವೂ ಮೀನಮ್ಮನವರೇ ತಪ್ಪನ್ನೊಪ್ಪಿಕೊಳ್ಳುತ್ತಿದ್ದರೆ ರತ್ನಳು ಅಳುವುದನ್ನು ಕಂಡರೆ,ಸುಂದರನಿಗೆ ಉರಿದುಬೀಳುವ ಹಾಗಾಗುತ್ತಿತ್ತು. 'ಒಮ್ಮೆ ದಂಡೋಪಾಯದಿಂದ ಈ ಸಮಸ್ಯೆಯನ್ನು ಪರಿಹರಿಸಲೇ?' ಎನ್ನಿಸುವುದು. ಆದರೆ 'ಹೆಂಡತಿಯನ್ನು ದನದಂತೆ ದಂಡಿಸುವವನು ಮಾನವನಲ್ಲ, ಕಾಡುಪ್ರಾಣಿ!' ಎಂದು ಅವನೂ ನಂಬಿಕೊಂಡಿದ್ದನು. ಕೋಪವನ್ನೆಲ್ಲಾ ಒಡಲಿನಲ್ಲೇ ತಡೆದು, ಕೋಟೆಳೆದುಕೊಂಡು ಹೊರಕ್ಕೆ ಹೊರಟುಹೋಗುತ್ತಿದ್ದನು. ಮನೆಗೆ ಹನ್ನೊಂದೋ ಹನ್ನೆರಡೋ ಘಂಟೆಗೆ ಬರುವನು ಅತಿಥಿಯಂತೆ ಹಾಕಿದುದನ್ನು ಸದ್ದಿಲ್ಲದೆ ತಿಂದೇಳುವನು; ಹೋಗಿ ಬಿದ್ದುಕೊಳ್ಳುವನು. ಸೂರ್ಯನು ಬರುವ ಸುಳಿವನ್ನೇ ಕಾಯ್ದುಕೊಂಡಿದ್ದು, ಪುನಃ ಹಿಂದಿನ ದಿನಗಳಂತೆ ಕಾರ್ಯಕ್ರಮವನ್ನನುಸರಿಸುತ್ತಿದ್ದನು. ಅವನು ಮನುಷ್ಯನಿದ್ದವನು ಈಗ ಯಂತ್ರವಾಗಿದ್ದನು. ಸವೆದು ಹೋಗುತ್ತಿದ್ದನು. ರತ್ನಳು ಎಲ್ಲಿದ್ದರೂ ಸುಂದರನ ಸುತ್ತ ಅಶಾಂತಿ ಇರುತ್ತಿತ್ತು. ಮೀನಮ್ಮನವರ ಆಶೆಗಳು ಚೂರುಚೂರಾಗಿ ಒಡೆದು, ದ್ರವಿಸಿ, ನಯನಗಳಲ್ಲಿ ಪ್ರವಿಸುತ್ತಿದ್ದುವು.

\+ + + +

ರತ್ನ ಗರ್ಭವತಿಯಾಗಿ ತವರುಮನೆಗೆ ಹೋದಳು. ಸುಂದರನಿಗೆ ಬದುಕಿನಲ್ಲೇ ಬೇಸರವಾಗತೊಡಗಿತು. ಆ ಬೇಸರದಲ್ಲೂ ಒಮ್ಮೊಮ್ಮೆ ಒಂದೊಂದು ಕನಸು ಒಡೆಯುವುದು. ರತ್ನಳನ್ನು ತಾನು ಮದುವೆಯಾಗುವುದಕ್ಕಿಂತ ಮುನ್ನ ಪ್ರೇಮಿಸುತ್ತಿದ್ದ ಕಾಲವು ನೆನಪಿಗೆ ಬರುವುದು; ಆಗ ರತ್ನಳನ್ನು ನೋಡಬೇಕೆಂಬ ಆಶೆಯಿಂದ ಅವರ ಊರಿಗೆ ಕೆಲಸವಿಲ್ಲವಿದ್ದರೂ ಹೋಗುತ್ತಿದ್ದುದು; ಹೂವು-ಹಣ್ಣುಗಳನ್ನು ತೆಗೆದುಕೊಂಡು ಹೋಗಿ, ಹೇಗಾದರೂ ಮಾಡಿ ರತ್ನಳ ಕೈಲೇ ಕೊಡಬೇಕೆಂದು ಮನಸ್ಸು ಮಾಡಿದರೂ ಕೊಡಲಾಗದೆ ಹೋದುದಕ್ಕೆ ಬಿಡುತ್ತಿದ್ದ ನಿಟ್ಟುಸಿರುಗಳು; ತನಗಾಗಿ ಅವಳು, ಅವರ ಮನೆಯಲ್ಲಿ ತೋರುತ್ತಿದ್ದ ಪ್ರತ್ಯಕ್ಷ-ಪರೋಕ್ಷ ಪ್ರೀತ್ಯಾದರಗಳು; ಅವಳಲ್ಲಿ ತಾನು ಕಲ್ಪಿಸಿಕೊಳ್ಳುತ್ತಿದ್ದ ದೈವಿಕ ಗುಣಗಳು - ಇವೆಲ್ಲವೂ ಸುಂದರನಿಗೆ ಆ ಕನಸಿನಲ್ಲಿ ಒಡೆದು ಬರುವುವು. ತನ್ನಲ್ಲಿಯೆ "ಏಕೆ, ಆ ನನ್ನ ರತ್ನ, ಈ ರತ್ನಳಾದಳು?" ಎಂಬ ಪ್ರಶ್ನೆಯನ್ನು ಹಾಕಿಕೊಳ್ಳುತ್ತಿದ್ದನು. ಉತ್ತರ ಮಾತ್ರ ಹೊಳೆಯದೆ ಪರಿತಪಿಸುತ್ತಿದ್ದನು. "ಹಾಗಾದರೆ ಈ ಪ್ರೇಮಗಳೆಲ್ಲ ದೂರದ ಬೆಟ್ಟಗಳೇ?" ಎಂದು ಯೋಚಿಸುವನು. "ಹೌದು, ಪ್ರಿಯ-ಪ್ರೇಯಸಿಯರು ಜೀವನದಲ್ಲಿ ಒಂದಾದಾಗಲೆಲ್ಲ, ಸುಖಿಗಳಾಗುವುದಿಲ್ಲ. ಅವರು ಕಡೆಯವರೆಗೂ ವಿರಹಿಗಳಾಗಿದ್ದರೇ, ಅವರಿಬ್ಬರಲ್ಲೂ ಒಂದು ವಿಧವಾದ ಉನ್ನತ ಮಾನುಷ ಸ್ವರೂಪವಿರಲು ಸಾಧ್ಯ!" ಎಂಬ ತೀರ್ಮಾನಕ್ಕೆ ಒಮ್ಮೆ ಬರುವನು. ಅಂತೂ, ಸುಂದರನು ಏನೋ ಒಂದು ತರದ ವಿಚಿತ್ರ ಪುರುಷನಾದನು.

× × × ×

ರತ್ನಳ ಊರಿಂದ—ಅವಳ ತಂದೆಯಿಂದ—ಸುಂದರನಿಗೆ ಕಾಗದಗಳು ಬರುತ್ತಲೇ ಇದ್ದುವು. ಸುಂದರನು ಸಾಮಾನ್ಯವಾದ ಯೋಗಕ್ಷೇಮ ಕಾಗದಗಳನ್ನು ಹಾಕುತ್ತಲೂ ಇದ್ದನು. ಇವನ ಸಪ್ಪೆಯಾದ ಕಾಗದವನ್ನು ಕಂಡು ಅವನ ಮಾವನಿಗೆ ಕೊಂಚ ಭಯವಾದುದೂ ಉಂಟು. ಈಚೀಚೆಗೆ ಸುಂದರನಿಗೆ ಕಾಗದ ಬರೆಯುವ ಮನಸ್ಸೂ ಇಲ್ಲದೆ ಹೋಯಿತು. ಆದರೂ ಮೀನಮ್ಮನವರು ಬಲವಂತಪಡಿಸಿ ಕಾಗದ ಬರೆಯಿಸುತ್ತಿದ್ದರು. ಒಬ್ಬಳು ಹೆಣ್ಣುಮಗಳನ್ನು ಅಷ್ಟು ಬೇಗ ದೂರ ಮಾಡಲು ಅವರು ಸಿದ್ಧರಾಗಿರಲಿಲ್ಲ. ಮೀನಮ್ಮನವರಲ್ಲಿ ತುಂಬಿದ್ದ ಸಹನೆ, ಕರುಣೆಗಳು ಸುಂದರನಲ್ಲಿ ಆಶ್ಚರ್ಯವನ್ನುಂಟುಮಾಡಿದ್ದುವು.

ರತ್ನಳಿಗೆ ನೈ ಇಳಿದುಹೋಯಿತೆಂದೂ, ದೇಹಸ್ಥಿತಿ ಕೊಂಚ ಕೇಳಾಗಿದೆಯೆಂದೂ ಸಾರಾಂಶವುಳ್ಳ ಒಂದು ಕಾಗದವು ಸುಂದರನಿಗೆ ತಲುಪಿತು. ಸುಂದರನಿಗೆ ಆಗ ಎದುರಿಗಿದ್ದ ರತ್ನಳ ಚಿತ್ರವನ್ನು ನೋಡಿ ಕರುಣೆಯುಂಟಾದರೂ— ಮನಸ್ಸು ಬಿಗಿಯಾದುದರಿಂದ— ಆ ವಿಷಯದಲ್ಲಿ ಕೂಡ ಅವನು ಉದಾಸೀನನಾದನು. ಎರಡು ದಿನಗಳ ನಂತರವೆ ಮತ್ತೊಂದು ಕಾಗದ ಬಂದಿತು. ರತ್ನಳ ಸ್ಥಿತಿ ಬಹು ಕೆಟ್ಟಿದೆಯೆಂತಲೂ, ತಮ್ಮನ್ನೂ ಅತ್ತೆಯವರನ್ನೂ ನೋಡಲು, ರತ್ನಳು ಬಯಸುವಳೆಂದೂ ಆ ಕಾಗದದ ನಿರೂಪಣೆಯಾಗಿತ್ತು. ಸುಂದರನು ಅದನ್ನು ಕೂಡ ಓದಿ ಕವರಿನೊಳಗೇ ಇಟ್ಟು, ಬದಲುತ್ತರ ಬರೆದನು. ಕಾಗದದ ಕಡೆಯಲ್ಲಿ ಒಂದು ಮಾತನ್ನು ಸೇರಿಸಿದ್ದನು:

"......................................ನಾವು ಬಂದು, ಸೌ॥ ರತ್ನಳನ್ನು ಪ್ರಾಣ ಹಿಂಡುವ ಅವಶ್ಯವಿಲ್ಲೆಂದು ತೋರುತ್ತದೆ. ತಮ್ಮ ಮಾತನ್ನು ಉಲ್ಲಂಘಿಸಿದುದಕ್ಕಾಗಿ ಕ್ಷಮೆ ಬೇಡುವ,

ಸುಂದರರಾಯನ

ಸಾಷ್ಟಾಂಗ ನಮಸ್ಕಾರಗಳು."

ರತ್ನಳು ಇದನ್ನೋದಿ ಗಾಬರಿಯಾದಳು. ಆ ಒಂದು ವಾಕ್ಯದಲ್ಲಿಅಡಗಿದ್ದ ಹೃದಯದ ವೇದನೆಯನ್ನು ತತ್‌ಕ್ಷಣ ಅರಿತುಕೊಂಡಳು. ತನ್ನ ಅವಿವೇಕವು ತೀರಿಸಿಕೊಳ್ಳುತ್ತಿರುವ ಸೇಡನ್ನು ಅರಿತು, ಪಾಪ! ತರಂತರ ನಡುಗಿದಳು. ಕಾಯಿಲೆಯಿಂದ ಸೊರಗಿದ್ದ ಆ ಗೂಡು ಮನೋವೇದನೆಯಿಂದಲೂ ಕರಗಲಾರಂಭವಾಯಿತು. ತನ್ನ ಪ್ರೀತಿಯ

ಗಂಡ ಮತ್ತು ಅತ್ತೆಯರಿಗೆ ತಾನು ಒದಗಿಸಿದ ನೋವನ್ನು ನೆನೆಸಿಕೊಂಡು ಬೆರಳು ಕಚ್ಚಿಕೊಂಡು, ಕೈಗಳನ್ನು ದಿಂಬಿಗೆ ಬಡಿಯುತ್ತಿದ್ದಳು. ಔಷಧಿ ಕೊಡಲು ಬಂದ ಅಪ್ಪನ ಕೈಗಳನ್ನು ಹಿಡಿದು ತನ್ನ ಗಂಡನನ್ನು ಕರೆತರಬೇಕೆಂದು ಕಣ್ಣೀರಿಟ್ಟು ಕೇಳಿಕೊಂಡಳು. ಅವಳ ಸ್ಥಿತಿಯು ತುಂಬ ಚಿಂತಾಜನಕವಾಗಿತ್ತು. ಕೂಡಲೆ ರತ್ನಳ ತಂದೆ ಸುಂದರನಿಗೆ ತಂತಿ ಕೊಟ್ಟರು:

ಸುಂದರನ ಕೈಗೆ ತಂತಿ ಬಂದಿತು. ಮೀನಮ್ಮನವರಿಗೆ ಅದನ್ನು ವಿವರಿಸಿ ಹೇಳಿದನು.

ಜುಗುಪ್ಸೆಯಿಂದ ಸುಂದರನು ಪ್ರಯಾಣದ ವಿಷಯವನ್ನು ತಳ್ಳಿಹಾಕಿದನು. ಆದರೆ ಮೀನಮ್ಮನವರು ಸುಮ್ಮನಿರಲಿಲ್ಲ. ಸುಂದರನಿಗೆ ಒಳ್ಳೆಯ ಮಾತಿನಲ್ಲಿ ಹೇಳಿದರು, ಕೋಪಿಸಿಕೊಂಡರು; ಕಡೆಗೆ ಅತ್ತುಬಿಟ್ಟರು. 'ಮೀನಮ್ಮನವರಿಗೇ ರತ್ನಳ ಮೇಲೆ ಅಷ್ಟು ಮಮತೆ ಇರುವುದಾದಮೇಲೆ ತನ್ನದೇನು!' ಎಂಬ ಭಾವನೆಯಿಂದಲೊ ಅಥವಾ ಅಮ್ಮನ ಕಣ್ಣೀರನ್ನು ಸಹಿಸಲಾರದೆಯೊ ಒಪ್ಪಿದನು. ತಾಯಿಮಕ್ಕಳಿಬ್ಬರೂ ಪ್ರಯಾಣಕ್ಕೆ ಸಿದ್ಧರಾದರು.

\+ + + +

ರತ್ನಳ ಮನೆಯ ಬಾಗಿಲಿಗೆ ಗಾಡಿ ಬಂದು ನಿಂತಿತು. ಇಬ್ಬರೂ ಇಳಿದರು. ಮನೆಯು ನಿಶ್ಶಬ್ದವಾಗಿತ್ತು. ಸುಂದರನಿಗೆ ಅರ್ಥಾರ್ಸಕ್ತಿ ಮಾತ್ರವಿತ್ತು. ಮೀನಮ್ಮನವರು ಮುಂಚೆ ಇಳಿದು ಒಳಗೆ ಹೋದರು. ಸುಂದರನೂ ಹಿಂಬಾಲಿಸಿದನು. ಸಾಮಾನ್ಯವಾಗಿ ತಾನು ಹೋದಾಗ ಇಳಿದುಕೊಳ್ಳುತ್ತಿದ್ದ ರೂಮಿನಲ್ಲಿ ತನ್ನ ಬಟ್ಟೆ-ಬರೆಗಳನ್ನು ಒಗೆದು, ಪುನಃ ಜಗಲಿಗೇ ಬಂದು ನಿಂತುಕೊಂಡನು. ಅವನ ಮನಸ್ಸಿನಲ್ಲಿ ಒಂದು ದೊಡ್ಡ ಗೊಂದಲವೇರ್ಪಟ್ಟಿತು: ಮದುವೆಗೆ ಮುಂಚೆ ಆ ಮನೆಯು ಅವನಿಗೆ ಮಹತ್ವಪೂರ್ಣವಾಗಿದ್ದಿತು. ಈಗ ಏನೋ ಕಾಂತಿಹೀನವಾಗಿ ತೋರುತ್ತಿತ್ತು. ಹಿಂದೆ ಆ ಮನೆಯಿಂದ ರತ್ನಳನ್ನು ಬಿಟ್ಟು ಹೋಗಬೇಕಲ್ಲಾ ಎನ್ನಿಸುತ್ತಿತ್ತು. ಈಗ ಊರಿಗೆ ಹೋದೇನಲ್ಲಾ ಎನ್ನಿಸುತ್ತಿತ್ತು. ಆಗ ಆ ಮನೆಯಲ್ಲೇ ಕುಳಿತಿರಬೇಕೆನ್ನಿಸುತ್ತಿತ್ತು. ಈಗ ಹೇಸಿಗೆಯಾಗುತ್ತಲಿದೆ. ಮೊದಲು ಈ ಮನೆಗೆ ಬಂದರೆ ಮೊದಲ ಕೆಲಸವೆಂದರೆ ರತ್ನಳನ್ನು ನೋಡುವುದು. ಈಗ........? ಎಂದು ಏನೇನೋ ಸುಂದರನ ತಲೆಯಲ್ಲಿ ಹಾದುಹೋಗುತ್ತಿದ್ದುವು. ಸೂರಿನ ಗಳುವನ್ನು ಹಿಡಿದು, ಭಾವಿಯ ಕಟ್ಟೆಯನ್ನು ನೋಡುತ್ತಾ ನಿಂತುಬಿಟ್ಟನು.

ರತ್ನಳ ತಂದೆ ಬಂದು ಸುಂದರನನ್ನು ಕರೆದರು. ನೆಟ್ಟಗೆ ಅವರ ಹಿಂದೆ ಹೋದನು. ಅವರು ಒಂದು ನಡುಗತ್ತಲೆಯ ಕೋಣೆಗೆ ಹೋದರು. ಅಲ್ಲಿ ಒಂದು ಮಂಚದ ಮೇಲೆ ರತ್ನ ಮಲಗಿದ್ದಳು. ಮೀನಮ್ಮನವರು ರತ್ನಳ ಹತ್ತಿರ ಕುಳಿತಿದ್ದರು. ರತ್ನ ಸುಂದರನನ್ನು ನೋಡಿ, ಬಹಳ ಕಷ್ಟದಿಂದ ಎದ್ದ ಹಾಗೆ ಮಾಡಿ, "ಬನ್ನಿ" ಎಂದಳು. ಸುಂದರನು ಯಂತ್ರದಂತೆ ಹೋಗಿ ಮಂಚದ ಒಂದು ಪಕ್ಕದಲ್ಲಿ ನಿಂತುಕೊಂಡು ನಿರ್ವಾಹವಿಲ್ಲದೇ "ಹೇಗಿದ್ದೀ—ರತ್ನಾ ?" ಎಂದನು.

ಶೀಲಧಾ

ಎಂಟೀಮಲೇರಿಯಾ ವನಸ್ಪತಿ ಪಿಲ್ಸ್

ಎಲ್ಲ ತರದ ಜ್ವರ, ಜ್ವರಗಡ್ಡೆ, ಶಕ್ತಿಹೀನ್ಯ ಅಶಕ್ತತೆಯ ಮೇಲೆ ರಾಮಬಾಣ! ಲಿವರ್, ಹೊಟ್ಟೆನೋವು, ಮಲಬದ್ಧತೆ ಸುಧಾರಿಸಿ ಶಕ್ತಿ ಬೆಳೆಯಿಸುತ್ತದೆ! ಕ್ವಿನ್ಯಾನ್ ಬದಲು ವೈದ್ಯ-ಡಾಕ್ಟರರು ದವಾಖಾನೆಗಳಲ್ಲಿ ವಾಪರಿಸುವರು. ೧೦೦೦ ಗುಳಿಗೆಗಳಿಗೆ ರೂ. ೧೫; ೬೦ಕ್ಕೆ ೧-೧೨-೦. ಔಷಧದಲ್ಲಿ ಗುಣವಿಲ್ಲವೆಂದು ಸಿದ್ಧಮಾಡಿದವರಿಗೆ ೧೦೦೦ ರೂಪಾಯಿ ಬಹುಮಾನ. ಪ್ರತಿ ಊರಲ್ಲಿಯೂ ಮಾರುವ ಏಜಂಟರು ಬೇಕು.

ಶೀಲಧಾ ಕೆಮಿಕಲ್ ಕಂಪನಿ, ಸಿರಸಿ, ಉ. ಕ.

ಸೋಲ್ ಏಜೆಂಟರು:—

ಎಸ್. ಎಲ್. (ಅಪ್ಪುರಾವ) ಥಾಕಪ್ಪಾ

ಬಡವರ ಔಷಧಿ ಸರ್ವಿಸ್, ಸಿರಸಿ, ಉ. ಕಾನಡಾ

ರತ್ನ ಎಂದಳು: "ಅಬ್ಬ! ಬಲು ಕೋಪವಾಗಿದೆ, ನಿಮ್ಮವಳ ಮೇಲೆ!" ಸುಂದರನಿಗೆ ಬಹು ಹಿಂದಿನ ಯಾವುದೋ ಒಂದು ಪ್ರಸಂಗ ನೆನಪಾಯಿತು. ರತ್ನ ಮುಂದುವರಿಸಿದಳು: "ನಾನು ತಮಗೆ ತುಂಬಾ ತೊಂದರೆ ಕೊಟ್ಟೆ. ಆದರೆ....ಅದಕ್ಕೆ ಪ್ರಾಯಶ್ಚಿತ್ತ ಮಾಡಿಕೊಳ್ಳುವುದಕ್ಕೆ ದೇವರು ನನಗೆ ಆಯುಷ್ಯ ಕೊಡುವುದಿಲ್ಲ!"

ಸುಂದರನ ಕಣ್ಣೊಳಗೆ ರತ್ನಳ ಪ್ರತಿಬಿಂಬ ಬಿದ್ದಿತ್ತು. ತನ್ನನ್ನು ಗಂಡನ ಕಣ್ಣೊಳಗೆ ನೋಡಿಕೊಂಡಳು. ಅವಳ ರೂಪು ಅವಳಿಗೆ ಘೋರವೆನಿಸಿತು. ಉದುರಿದ ತಲೆ, ಗುಳಿ ಬಿದ್ದ ಕಣ್ಣು-ಕೆನ್ನೆಗಳು, ಮೂಳೆಗಳೆದ್ದ ಗಲ್ಲಗಳು. ಅವಳಿಗೆ ನೋಡುತ್ತಿದ್ದಂತೆಯೆ ಕಣ್ಣೀರು ಉಕ್ಕಿತು. ಗಂಡನ ಎರಡು ಕೈಗಳನ್ನೂ ತೆಗೆದು ಕಣ್ಣಿಗೊತ್ತಿಕೊಂಡು ಅತ್ತಳು. ಎಲ್ಲರೂ ಸ್ತಬ್ಧರಾಗಿ ನಿಂತಿದ್ದರು.

ಮೀನಮ್ಮನವರು "ಹಾಗೆನ್ನಬೇಡಮ್ಮಾ, ನೀನು ಲಕ್ಷ್ಮಿ. ನಿನ್ನನ್ನು ನಾವು ಬಿಟ್ಟುಕೊಡುವುದಿಲ್ಲ!" ಎಂದರು.

ರತ್ನಳು ಗಟ್ಟಿಯಾಗಿ "ಅತ್ತೆಮ್ಮನವರೇ, ನನ್ನನ್ನು ದಯವಿಟ್ಟು ಬದುಕಿಸಿಕೊಳ್ಳಿ! ನಿಮ್ಮ ಸೇವೆ ಮಾಡಿ ಅನಂತರ ಸಾಯುತ್ತೇನೆ.... ಅತ್ತೆ....ಮ್ಮನ....ವರೇ!" ಎಂದಳು. ಸುಂದರನ ಕಣ್ಣಲ್ಲೂ ನೀರೂರಿತು. ರತ್ನ ಸುಂದರನ ಕಡೆ ನೋಡಿ "ಬದುಕಿಸಿಕೊಳ್ಳಿ!" ಎಂದಳು.

× × × ×

ಸುಂದರನ ಅದೃಷ್ಟವು ದೀನವನ್ನಾಲಿಸಲಿಲ್ಲ.

ಜಯಂತಿ

ಎದುರಿಸದಿರೆ ನಾಶ ಸತ್ಯ!

ಶ್ರೀ. ಬಿ. ಎಚ್. ಶ್ರೀಧರ, ಎಂ. ಎ. ಭಟಕಳ

●

ಕಾಲಕಾಲನಾಗಿ ನಂಜನುಂಗು ಜೀವ!—ಭಯದ—
ಮೂಲವನ್ನೆ ಮುರಿಯೆ ಬರ್ಕು ಧೀರಭಾವ!

೧

ನೂರು ದೇವರುಗಳಿಗೆರಗಿ ನೂರು ದಾರಿ ತುಳಿಯಲೇಕೆ?
ನೂರು ಗುರುಗಳೆಂದರಲ್ಲ ಗುರಿಗಳವು—ಬಿಸಾಡು ಹೊಲ್ಲ!
ಅರಸಿ ಅದನು ಇದನು ದುಃಖ-
ಸರಸಿಯಲ್ಲಿ ಬೀಳಲೇಕೆ?
ತರಿಸಿಕೊಳುವ ಶಕ್ತಿ ಬೇಕು;
ಬರಿದೆ ಬೇಡಲೆಲ್ಲ ಹೋಕು!

೨

ಎಲೆಲೆ ಜೀವ, ನಿಂತ ಕಡೆಯೆ ನಿಲಲು ಕೂಡ ನೀ ನಿರುದ್ಧ-
ಬಲದ ಹತಿಯನಾಂತು ತಡೆಯೆ ಬಲವ ಪಡೆಯದಿರಲು ಬದ್ಧ!
ಸೂರ್ಯ-ಚಂದ್ರರಿಂದ ಹಿಡಿದು
ಜೀವ, ಜಡ, ಸಮಸ್ತ ನಿತ್ಯ
ಸ್ಥಾಪಿಸುತಿದೆ ನಿನ್ನ ಮೇಲೆ—
ಎದುರಿಸದಿರೆ ನಾಶ ಸತ್ಯ!

೩

ಅದರಿನಿಂದ್ರ ಚಂದ್ರ ನಾನು, ವಿಗಡ ಬಲ ಕೃಶಾನು ಭಾನು-
ಎಂದು ತನ್ನ ತಾನೆ ನುತಿಸಿ ಕುರುಡನಾದ ಮರ್ತ್ಯಸೂನು!
ಮುಳುಗಿದಿನನು ಮೂಡದಿರನು—
ಕತ್ತಲೆಷ್ಟು ನಡೆದರೇನು?
ಬೆಳೆವುದೆಮಗೆ ಜನ್ಮಸಿದ್ಧ—
ಬಿದ್ದ ಮನುಜನೇಳದಿರನು!

೪

ತಾಯಿ-ತಂದೆ ಮೊದಲುಗೊಂಡು ಅನ್ನ-ಚಿನ್ನ-ದೈವವೆಲ್ಲ
ಕಾಯಕಷ್ಟದಿಂದ ಪಡೆವ ಪ್ರಗತಿಗಾಗಿ— ಪ್ರಗತಿಯಲ್ಲ!
ಜಗವ ತಿದ್ದಲೆಂದು ಹೊರಟು
ಗೆದ್ದ ವೀರನೊಬ್ಬನಿಲ್ಲ;
ದೃಷ್ಟಿಯಂತೆ ಸೃಷ್ಟಿಯಿಹುದು;
ಸೃಷ್ಟಿಯೊಂದೆ, ದೃಷ್ಟಿಯಲ್ಲ!

೫

'ಸ್ವಸ್ತಿಪಂಥದಲ್ಲಿ ಸೂರ್ಯ-ಚಂದ್ರನಂತೆ ನಡೆವೆ'ವೆಂದ
ಸ್ತುತ್ಯಪೂರ್ವಜರನು ನೋಡು, ಅತ್ತು ಕರೆಯಲೇನು ಚಂದ?
ಹರುಷರೂಪ! ಸತ್ತ್ವಭಾವ-
ಕೆರಗಿ ಯೋಧನಂತೆ ತಾವು-
ಸರನು ತಡೆಯಲಾತ್ಮಬಲವ
ಪಡೆವ ಬಯಕೆ ದಿವ್ಯಕಾನು!

೬

ದೊಡ್ಡ ತಾರೆಯೆರಡರೆಳೆತಕಡ್ಡ ಸಿಕ್ಕಿ ನರಳ್ವ ಗ್ರಹಕೆ
ಸದೃಶವೀಸಮಾಜ ಮಂದ-ಶೀಘ್ರವಾದದಲ್ಲಿ ಸಿಲುಕಿ-
ಎಲ್ಲ ಜನದ ಹರುಷ ತನ್ನ-
ದೆಂಬ ಭಾವ ಮೂಡಲಿಲ್ಲ;
ಎಲ್ಲದಲ್ಲಿ ತನ್ನ ತಳವ
ಗುರುತು ಮಾಡಿಕೊಳ್ಳಲಿಲ್ಲ!

೭

ಅವನು ತಳೆದದಮ್ಯ ಯತ್ನವೆಸಗು ಧೀರ ಜೀವ-ಮನದ
ಪಿಶುನಭಾವದೆದೆಯ ಮೆಟ್ಟಿ ಅಡಿಯಿಡು ಪ್ರತಾಪ ಬೆಳೆದ!
ಇರಿದು ಕೆಡಹು ತಡೆಗಳನ್ನು,
ನಿಜವ ಮೊಳಗು ಒಳಗು ಹೊರಗು;
ಆಹ ನವೋನವ ಪ್ರಭಾವಿ
ಆತ್ಮತೇಜವದನು ಬೆಳಗು!

ಕಾಲಕಾಲನಾಗಿ ನಂಜನುಂಗು ಜೀವ!—ಭಯದ—
ಮೂಲವನ್ನೆ ಮುರಿಯೆಬರ್ಕು ಧೀರಭಾವ!

ಮೋಡಗಳು

(ವಿಚಾರದಲ್ಲಿಯ ಒಂದು ಮೋಡ)

ಶ್ರೀ. ಸಚ್ಚಿದಾನಂದ ಶಿರೋಡಕರ, ಪುಣೆ

●

ಇಂದು ಜೀವವು ಬಹು ಕಷ್ಟಮಯವಾಗಿದೆ. ಉಚ್ಚಧ್ಯೇಯಗಳನ್ನು ಮುಂದಿಟ್ಟುಕೊಂಡು ಪರಿಸ್ಥಿತಿಯೊಡನೆ ಕಾದಾಡುತ್ತ ಮುಂದೆ ಸಾಗುತ್ತಲಿದ್ದೇನೆ; ಮುಂದೆಯೂ ಇದೇ ರೀತಿ ಮುನ್ನುಗ್ಗಿ ನಡೆಯಬೇಕೆಂಬ ಬಲವಾದ ಸಂಕಲ್ಪವಿದೆ. ನಿರಾಶಾವಾದಕ್ಕೆ ಮನಸ್ಸಿನಲ್ಲಿ ಎಳ್ಳಷ್ಟೂ ಆಸ್ಪದವನ್ನು ಕೊಡದೆ ಇಂದಿನವರೆಗೆ ತೇಲಿಬಂದಿದ್ದೇನೆ. ಪ್ರವಾಹದ ಹಿಡಿತದಲ್ಲಿ ಸಿಕ್ಕು ಹರಿದುಬಂದ ದಂಟಿನಂತಲ್ಲ, ಪ್ರತಿಕೂಲ ತೆರೆ-ಬಿರುಗಾಳಿಗಳೊಡನೆ ಧೈರ್ಯ–ಸ್ಥೈರ್ಯಗಳಿಂದ ಕಾದುತ್ತ ಅಮರ ಆನಂದವನ್ನು ಪಡೆಯಬೇಕೆಂಬ ಹಿರಿಹಂಬಲದಿಂದ ಪ್ರೇರಿತನಾಗಿ! ಈ ಪ್ರೇರಣೆಯಿಂದ ಜೀವನದಲ್ಲಿ ಮುಂದುವರಿದಿದ್ದೇನೆ— ಮುಂದುವರಿಯಬೇಕೆಂದಿರುವೆ. ಸಾಧನಾರಥವು ಎಂದೋ ಸಿದ್ಧವಾಗಿದೆ. ದಿನಗಳು ಕಳೆದಂತೆ ಅದು ಹೆಚ್ಚಿಚ್ಚು ಬಲಶಾಲಿಯಾಗುತ್ತ ನಡೆದಿದೆ. ಇಂದಿನ ನನ್ನ ಪರಿಸ್ಥಿತಿ! ಪ್ರಯತ್ನ ಮಾಡಿ ಮುನ್ನುಗ್ಗುವ ನಿರ್ಧಾರವೊಂದು ಕಡೆ; ಸಾಧನಾರಥದಲ್ಲಿ ಕುಳಿತಿರುವ ನನ್ನನ್ನು ಕವಿದಿರುವ ಮೋಡಗಳು ಇನ್ನೊಂದು ಕಡೆ! ಸುತ್ತಲೂ ನಸುನಗುವ ಕೆಲವು ಸೊಬಗಿನ ಹೂಗಳಿವೆ; ಆದರೆ ಅವು ಬಹು ದೂರದಲ್ಲಿವೆ. ನನ್ನ ಹತ್ತಿರದಲ್ಲಿ ಬರೀ ಚುಚ್ಚುವ ಮುಳ್ಳುಗಳು! ತಿವಿಯುವ ಮುಳ್ಳುಗಳು! ಜರ್ಮ ಹರಿಯುವ ಮುಳ್ಳುಗಳು! ಮರ್ಮವನ್ನೂ ಅವು ಚುಚ್ಚಬಹುದು; ಆದರೆ ಸಂಪೂರ್ಣ ನಿರಾಶೆಗೆ ಕಾರಣವಿಲ್ಲ. ಈ ಕಠೋರ ಮುಳ್ಳುಗಳು, ಮನೋಧೈರ್ಯವು ಸಾಯುವಂತೆ ಮಾಡಲಾರವು. ಸೃಷ್ಟಿಯಲ್ಲಿ ಕಾಣುವ ಸೌಂದರ್ಯದಲ್ಲಿ ಬೆರೆತಿರಬೇಕೆಂದು ಓದಿದ್ದೇನೆ. ಮಹಾಪುರುಷರುಗಳು ಈ ರೀತಿ ಹಾಡಿ ಹೋಗಿವೆ. ಇಂದಿನ ಅವಸ್ಥೆಯಲ್ಲಿ ಇಷ್ಟು ಉಚ್ಚ ಆನಂದಪಡೆಯಲು ನಾನು ಅಸಮರ್ಥನಿದ್ದೇನೆ. ನನ್ನ ಜೀವನಮುಗಿಲಲ್ಲಿ ಕಲೆತಿರುವ ಮೋಡಗಳ ಪ್ರಾಬಲ್ಯಕ್ಕೆ ಇದೊಂದು ಕಾರಣ. ವಿಸ್ತಾರವಾದ ಜಗತ್ತಿನಲ್ಲಿ ವಿಶಾಲ ಸೃಷ್ಟಿಯನ್ನು ಮಸರಿಸಿ ನೋಡಬಯಸುತ್ತೇನೆ; ನೋಡುತ್ತಲಿದ್ದೇನೆ ನಾನು. ನೋಡಗಳಲ್ಲಿದ್ದೇನೆ; ಜಗತ್ತೂ ಅದೇ ರೀತಿ. ನಿಜವಾದ ಜೀವನಕ್ಕೆ ಅವಶ್ಯವಿರುವ ಸ್ವಾತಂತ್ರ್ಯವು ಕೆಲವೆ ಜನರ ಸೊತ್ತಾಗಿದೆ. ಉಚ್ಚ ಸಂಸ್ಕೃತಿಗಳ ಮೇಲೆ ಸಾಮ್ರಾಜ್ಯಶಾಹಿಯು ತನ್ನ ರಾಜ್ಯವನ್ನು ಕಟ್ಟುತ್ತಲಿದೆ. ಅಜ್ಞಾನತಮವು ಇನ್ನೂ ಮಾಯವಾಗಿಲ್ಲ! ಇಷ್ಟೆಲ್ಲ ಮೋಡಗಳಲ್ಲಿ ಸಿಲುಕಿರುವ ಮಾನವಜನಾಂಗವಿನ್ನೆ ನಾನೊಬ್ಬ! ವೈಯಕ್ತಿಕ ಮೋಡಗಳು ಬೇರೆ! ಇವುಗಳನ್ನು ಬೇಗ ಹೊಡೆದೋಡಿಸುವುದು ಸಾಧ್ಯವೇ? ಆದರೆ ಇಷ್ಟು ಮಾತ್ರ ನಿಜ; ಒಂದಿಲ್ಲೊಂದು ದಿನ ಈ ಮೋಡಗಳೆಲ್ಲ ಕರಗಿ, ದುಃಖದ ಬದಲು ಆನಂದವೂ ನಿರಾಶೆಯ ಬದಲು ಆಶಾವಾದವೂ ಅನ್ಯಾಯಕ್ಕೆ ಬದಲಾಗಿ ನ್ಯಾಯವೂ ಬರಲೇ ಬೇಕು!

ವಿಶ್ರಾಂತಿಗೆಂದು ಪೂನಾ ನಗರದ ರಸ್ತೆಯೊಂದರ ಮೇಲೆ, ಮಧ್ಯರಾತ್ರಿಯ ಸಮಯದಲ್ಲಿ ಅಡ್ಡಾಡುತ್ತಲಿದ್ದೇನೆ; ಮೋಟಾರು-ಸಾಯಕಲ್ಲುಗಳ ಭೀತಿ ಇಲ್ಲ; ಮುಗಿಲತ್ತ ಮೋರೆ ಮಾಡಿ ಅಡ್ಡಾಡುತ್ತಲಿದ್ದೇನೆ. ತಂಗಾಳಿ ತಂಪನ್ನು ಹರಡುತ್ತಲಿದೆ; ಚಂದ್ರನು ಆಕಾಶದಲ್ಲಿ ವಿರಾಜಮಾನನಾಗಿದ್ದಾನೆ; ಎತ್ತ ನೋಡಿದತ್ತ ಹಾಲಿನ ಹೊಳೆಗಳು ಹರಿಯುವಂತಿದೆ. ಆನಂದ; ಎಲ್ಲವೂ ಆನಂದ! ಕ್ಷಣಮಾತ್ರದಲ್ಲಿ ಕಪ್ಪು ಮೋಡವೊಂದು ನಿಶಾಕರನನ್ನು ಆವರಿಸಿಬಿಡುತ್ತದೆ. ಆಹಾ! ಕ್ಷಣದಲ್ಲಿ ನನ್ನ ಆನಂದದ ಆಹುತಿ! ತಂಗಾಳಿಯ ಅವಿರತ ಪರಿಶ್ರಮದಿಂದ ಪ್ರಯೋಜನವಾಗುವುದು ನಿಂತು ಹೋಗುತ್ತದೆ. ಹತ್ತೆಂಟು ನಿಮಿಷಗಳು ಹೀಗೆಯೆ ಕಳೆದುಹೋಗುತ್ತವೆ. ನನ್ನ ಚಂದ್ರಮನು ಮೋಡಗಳೊಳಗಿಂದ ಹೊರಗೆ ಬರುತ್ತಾನೆ! ಅಹಾ, ಆನಂದ!. ಪೂರ್ವಕ್ಕಿಂತಲೂ ಅವನು ಹೆಚ್ಚು ಆನಂದದಾಯಕನಾಗಿದ್ದಾನೆ.

ಪೂನಾ ನಗರವು ನೂರಾರು ವರ್ಷಗಳಿಂದ ಮೋಡಗಳಲ್ಲಿದೆ. ವೀರ ಮರಾಟರ ಸ್ವಾತಂತ್ರ್ಯದ ಖಡ್ಗಗಳು ಮಾಯವಾಗಿವೆ. ಪರಕೀಯರ ಟ್ಯಾಂಕುಗಳು ನಗರವಾಸಿಗಳನ್ನು ಬೆದರಿಸುತ್ತಿವೆ. ಹೋದ ಚಳವಳಿಯಲ್ಲಿ ಅವು ತಮ್ಮ ಮದ್ದಿನ ಪ್ರಭಾವದಿಂದ ಸಾಕಷ್ಟು ಮೋಡಗಳನ್ನು ರಚಿಸಿದುವು. ನನ್ನ ದೇಶವೆಲ್ಲ ಮೋಡದಲ್ಲಿದೆ. ಹೊರಗಿನ ಜಗತ್ತನ್ನು ಅದು ಸ್ವೈರವೃತ್ತಿಯಿಂದ ಕಾಣಲಾರದು; ಹೊರಗಿನವರೂ ನಮ್ಮ ಸುಖ-ದುಃಖಗಳನ್ನೂ ನಮ್ಮ ಅಮರ ಸಂಸ್ಕೃತಿಯ ಹಿರಿಮೆಯನ್ನೂ ಕಾಣಲಾರರು. ಒಂದಿಲ್ಲೊಂದು ದಿನ ಈ ಮೋಡವು ಕರಗಿ ಸುದಿನಗಳು ಬರಲೇಬೇಕು— ಗತವೈಭವವನ್ನು ನಾವು ಪುನಃ ಪಡೆಯಲೇ ಬೇಕು. ನನ್ನ ದೇಶವು ಪ್ರಪಂಚದ ದೇಶಗಳಿಗೆಲ್ಲ ಆರ್ಥಿಕ, ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ರಂಗಗಳಲ್ಲಿ ಆದರ್ಶಪ್ರಾಯವಾಗಿ ನಲಿಯಲೇ ಬೇಕು; ಇಂದು ಅರೆಹೊಟ್ಟೆ ಊಟ ಸಿಕ್ಕದೆ ಕೊರಗುವ ನನ್ನ ದೇಶಬಂಧುಗಳು, ಸುಖ-ಶಾಂತಿ-ಸಮಾಧಾನಗಳನ್ನು ಪಡೆಯಲೇಬೇಕು! ಇಂದು ನನ್ನನ್ನು ಕವಿದಿರುವ ಮೋಡವೆ, ನನ್ನ ನಶ್ವರ ಶರೀರವನ್ನು ನೀನು ಆಳುತ್ತಿರುವೆ! ಆದರೆ ಅದಮನೀಯವಾದ ನನ್ನ ವಿಚಾರಗಳು ನಿನ್ನನ್ನು ಭೇದಿಸಿ ಮುಂದೆ ನಡೆಯಲಾರಂಭಿಸಿವೆ! ಸುವಿಚಾರಗಳೊಡನಾಡುವ ಆತ್ಮದ ಪ್ರಭಾವದಿಂದ, ಪ್ರಕಾಶದಿಂದ ದೇಹಕ್ಕೂ ದಿವ್ಯತೇಜವು ದೊರೆಯುವುದೆಂದು ಹೇಳುವ ತತ್ತ್ವಜ್ಞಾನಿಗಳಲ್ಲಿ ನನ್ನ ಶ್ರದ್ಧೆ ಇದೆ. ಎಂದು ನನ್ನ ವಿಚಾರಗಳು ಸುವಿಚಾರಗಳಾಗುವುವೋ, ಎಂದು ನನ್ನ ಆತ್ಮಶಕ್ತಿಯು ಪರಿಪೂರ್ಣವಾಗುವುದೊ ಅಂದು ನನ್ನ ದೇಹದ ಮೇಲೆ ಕೂಡ ನೀನು ಪರಿಣಾಮ ಮಾಡಲಾರೆ! ಸೃಷ್ಟಿದೇವಿಯು ವಿದ್ಯಾನಿಧಿ! ಒಮ್ಮೊಮ್ಮೆ ನಿರಭ್ರವಾದ ಮುಗಿಲು! ಶಾಂತ ಕಡಲು! ಹಿಟ್ಟಿನಂತೆ ಚೆಲ್ಲಿದ ಬೆಳದಿಂಗಳು! ಒಮ್ಮೊಮ್ಮೆ ಮೋಡಗಳಿಂದ ಕಪ್ಪಾದ ಮುಗಿಲು! ಬಿರುಗಾಳಿಯ ಬಲದಿಂದ ಭೋರ್ಗರೆವ ಕಡಲು! ಅಮಾವಾಸ್ಯೆಯ ಕಗ್ಗತ್ತಲೆ! ಜೀವನದ ಗತಿಯು ಇದೇ ರೀತಿ! ಸುಖ–ದುಃಖಗಳ ತಿಕ್ಕಾಟ! ಸುಖಕ್ಕೊಮ್ಮೆ ಜಯ; ದುಃಖಕ್ಕೊಮ್ಮೆ ಗೆಲವು! ಸುಖಕ್ಕೆ ಜಯವಾದರೆ ನಮ್ಮ ಗೆಲುವೆಂದೂ, ಅನಿಷ್ಟಗಳಿಗೆ ಜಯವಾದರೆ ನಮ್ಮ ಅಪಜಯವೆಂದೂ ಸರ್ವಸಾಧಾರಣವಾಗಿ ನಾವು ತಿಳಿಯುತ್ತೇವೆ. ಜೀವನದ ಅನುಭವಗಳನ್ನು ಶಾಂತಚಿತ್ತದಿಂದ ಪಡೆದು ಜ್ಞಾನಿಯಾದವನು, ದುಃಖ-ಅನಿಷ್ಟ-ಸೋಲುಗಳಿಂದ ಕುಗ್ಗಿ ಹಿಂದೆ ಸರಿಯು-

ವುದಿಲ್ಲ. "ನನ್ನ ಜೀವನದ ಹೋರಾಟದಲ್ಲಿ ನಾನು ಒಂದು ಸಲ ಬೀಳಬಹುದು, ಎರಡು ಸಲ ಬೀಳಬಹುದು. ಆದರೆ ಬೀಳುವಾಗ ಧೈರ್ಯಾನಂದದಿಂದ ಬೀಳುವೆನು; ಬಿದ್ದ ಬಳಿಕ ಏಳದೆ ಎಂದಿಗೂ ಇರೆನು" ಎನ್ನುವನು. ಇದು ಬಾಳ ಕದನದ ಸೈನಿಕನ ವೀರವಾಣಿ! ಏನೇ ಆಗಲಿ; ಆಶಾವಾದವು ನನ್ನಲ್ಲಿರುವುದು. ಈ ಮಹಾಶಕ್ತಿಯ ಸಹಾಯದಿಂದ ನಾನು ಜೀವನದ ಸುಖ-ದುಃಖಗಳನ್ನು ಕಲಾಕಾರನ ದೃಷ್ಟಿಯಿಂದ ನೋಡುವೆನು. ಶ್ವೇತವರ್ಣದ ಮೇಲೆ ಶ್ಯಾಮವರ್ಣದ ಗೆರೆಯೊಂದನ್ನೆಳೆದರೆ, ಶ್ವೇತವರ್ಣದ ಸೌಂದರ್ಯಕ್ಕೆ ಸ್ವಲ್ಪ ಕುಂದು ಬರುವುದೇನೊ ನಿಜ; ಆದರೆ ಶ್ವೇತ-ಶ್ಯಾಮಗಳ ಮಿಲನದಿಂದ ಒಂದು ಬಗೆಯ ಕಲಾಕೃತಿಯ ನಿರ್ಮಾಣವಾಗುವುದು. ಸುಖಗಳನ್ನು ಆವರಿಸುವ ಕಷ್ಟಗಳನ್ನು, ನಾನು ಇದೇ ದೃಷ್ಟಿಯಿಂದ ಕಾಣಬಯಸುತ್ತೇನೆ. ಆದರೆ ಇನ್ನೊಂದು ಮಾತನ್ನು ಲಕ್ಷ್ಯದಲ್ಲಿಡಬೇಕು. ಬಾಳಿನ ಆನಂದ-ದುಃಖಗಳನ್ನು ಕಲಾಕಾರನ ದೃಷ್ಟಿಯಿಂದ ನೋಡಬೇಕೆಂಬುದು ಸ್ವಚ್ಛ ಆದರ್ಶವಾದ! ಸಂಪೂರ್ಣ ಆದರ್ಶವಾದವು ಜಗತ್ತಿನ ವ್ಯವಹಾರದಲ್ಲಿ ನಡೆಯಲಾರದು! ಆದುದರಿಂದ ನೈಜ ಪರಿಸ್ಥಿತಿಯ ಪರಿಶೀಲನೆಯು ಆವಶ್ಯಕವಾಗಿರುವುದು. ಕಷ್ಟಗಳು ಬಂದಾಗ ನಾವೀ ಆದರ್ಶದತ್ತ ಹೊರಳಿ ಧೈರ್ಯದಿಂದಿರಬೇಕು ಮತ್ತು ವ್ಯವಹಾರವಾದಕ್ಕನುಸರಿಸಿ ದುಃಖ-ಅನಿಷ್ಟ-ಕಷ್ಟಗಳನ್ನು ದೂರೀಕರಿಸಲು ಶಕ್ತಿಮೀರಿ ಪ್ರಯತ್ನಿಸಬೇಕು.

ಆದರ್ಶವಾದದ ಸೇವಕರಾಗಬಾರದು; ಆದರೆ ಗೆಳೆಯರಾಗಿ ಇರುವುದು ಅತ್ಯವಶ್ಯ. ಸಮಯಕ್ಕನುಸಾರವಾಗಿ ಆದರ್ಶವಾದದ ಉಪಯೋಗ ಮಾಡಿಕೊಳ್ಳಲಿ ಬೇಕು. ಸುಖ-ದುಃಖಗಳು ಸಾಧಾರಣ ಸರಿಸಮವಿರುವಂತೆ ನಮ್ಮ ಬಾಳಿನಲ್ಲಿ—ಎಷ್ಟೇ ಸುಖವಲ್ಲಿದ್ದರೂ ಅಲ್ಪ ಪ್ರಮಾಣದಲ್ಲಿಯಾದರೂ-ದುಃಖ, ಭಯ ಇವೇ ಮೊದಲಾದ ವಿಕಾರಗಳು ನಮ್ಮ ಮನಸ್ಸುಗಳನ್ನು ಕದಡುವುವು. ಇದಕ್ಕೆ ಉಪಾಯವಿಲ್ಲ. ಶಾಂತವೃತ್ತಿಯಿಂದ ವರ್ತಿಸುವುದೇ ಒಂದು ಬಗೆಯ ಉಪಾಯವೆನ್ನಬಹುದು. ನಮ್ಮನ್ನು ಮುಸುಕಿರುವ ಅಭೇದ್ಯವೆನಿಸಿದ ಮೋಡಗಳು, ಕೆಲವೊಮ್ಮೆ ಅಂತ್ಯದಲ್ಲಿ ಹಿತಕಾರಿಯಾಗಿ ಪರಿಣಮಿಸುವುವು. ಸುಂದರವಾದ ಗಗನದಲ್ಲಿ ಕಲೆತು ಸೂರ್ಯ ಚಂದ್ರ ತಾರೆಗಳನ್ನು ಜಗತ್ತಿನ ಕಣ್ಣುಗಳಿಂದ ಆಗಲಿಸಿ, ಜನತೆಗೆ ಬೇಡಾದ ಕತ್ತಲೆಯನ್ನು ಹಬ್ಬಿಸುವ ಮೋಡಗಳು, ಕೆಲವೇ ಕವಿಗಳ ಪ್ರಶಂಸೆಯನ್ನು ಪಡೆದಿವೆ; ಅವು ಸ್ವಾಭಾವಿಕವಾಗಿಯೆ ಅಪ್ರಿಯವಾಗಿವೆ. ವೇಳೆಯನ್ನು ಕೂಡ ಮೋಡಗಳು ಮುಚ್ಚುವುದರಿಂದ, ಕೋಮಲಾಂಗಿಯರು ಕೆಲವೊಮ್ಮೆ ಸಿಟ್ಟಿನಿಂದ ಶಪಿಸುತ್ತಾರೆ. ಜಗತ್ತಿಗೆ ಅತ್ಯವಶ್ಯವಾದ ಮಳೆಯನ್ನು ಮೋಡಗಳೇ ಸುರಿಸುವುವಲ್ಲವೆ? ಚಿಕ್ಕ ಪುಟ್ಟ ಬಾಲಕರಿಗೆ ದೋಣಿಯ ಆಟಗಳನ್ನಾಡಲು ನೀರನ್ನು ಪೂರಯಿಸುವುದಿಲ್ಲವೆ? ಇವೇ ಮೋಡಗಳು ತಮ್ಮ ಭೀಕರ ಗರ್ಜನೆಯಿಂದವರನ್ನು ಬೆದರಿಸುವುದಿಲ್ಲವೇ? ಕೆಲವೊಮ್ಮೆ ಅಪ್ರಿಯರಾದ ಕೆಲವು ಜನರೂ ಲೋಕೋಪಕಾರ ಮಾಡಬಲ್ಲರು. ಕೆಲವು ಜನರು ಕಠೋರ ಸತ್ಯವನ್ನಾಡಿ ಸಮಾಜ ಸೇವೆ ಮಾಡುವರು. ಅಪ್ರಿಯವಸ್ತುಗಳು ಹಾಗೂ ಘಟನೆಗಳು ಕೆಲವೊಮ್ಮೆ ಉಪಕಾರಿಯಾಗಬಲ್ಲವೆಂಬುದನ್ನು ನಾನು ಅಪ್ಪಿತಪ್ಪಿಯೂ ಮರೆಯಲಾರೆನು. ಸದಾ ಮುಗುಳುನಗೆಯನ್ನು ಬೀರುವವನು ನಲುಮೆಯನ್ನು ಸಿರುವನೆಂದು ತಿಳಿಯುವುದು ಘಾತುಕವಾಗಿದೆ.

ಕಷ್ಟಗಳು ಮುಳ್ಳಮಾಲೆಗಳಂತೆ ಎನಿಸಬಹುದು. ಅವು ಒಂದಾನೊಂದು ದಿನ ಹೂಮಾಲೆಗಳಾಗಿಯೇ ತೀರುವುವೆಂಬ ಅಚಲ ಭರವಸೆಯಿಂದ, ಕಷ್ಟದಲ್ಲಿರುವಾಗಲೂ ಹೂಗಳ ಸುಖಸ್ಪರ್ಶವನ್ನು ವಿವೇಕಿಯು ಕಲ್ಪಿಸಿಕೊಳ್ಳತಕ್ಕದ್ದು; ಕಷ್ಟ-ನಷ್ಟಗಳನ್ನು ತಾಳ್ಮೆಯಿಂದ ಸಹಿಸಿಕೊಂಡು, ಅವುಗಳನ್ನು ನಿವಾರಿಸಲು ತಕ್ಕ ಉಪಾಯ ಕೈಕೊಳ್ಳಲು ಇದು ಅವಶ್ಯವಾಗಿ ನೆರವಾಗುವುದು. ಮಹತ್ಕಾರ್ಯಗಳನ್ನು ಕೈಕೊಂಡ ಪ್ರತಿಯೊಬ್ಬ ವ್ಯಕ್ತಿಯ ಮುಂದೆ ಮೋಡಗಳು ಬಂದಿರುವುವು; ಆದರೆ ಸೂರ್ಯನನ್ನು ಮೋಡಗಳು ಮುಸುಕಿದುವೆಂದು ಅವನನ್ನು ಹೀಯಾಳಿಸುವವರು ಬಹು ಕಡಿಮೆ. ಅವನೆಂದು ಮೋಡಗಳೊಳಗಿಂದ ಹೊರಗೆ ಬಂದು ಪುನಃ ಆಲ್ಹಾದಕರನಾಗುವನೋ ಎಂದು ಎಲ್ಲರೂ ಹಾತೊರೆಯುತ್ತಾರೆ. ಅನೇಕ ಮಹಾಪುರುಷರು ತಮ್ಮಲ್ಲಿಯ ಆತ್ಮಶಕ್ತಿಯ ಪ್ರೇರಣೆಯಿಂದ, ಮುಂದೆ ಬಂದ ಮೋಡಗಳನ್ನು ಬದಿಗೆ ಸರಿಸಿ, ಅಜರಾಮರ ಕೀರ್ತಿಯನ್ನು ಸಂಪಾದಿಸಿದರು. ಕೆಲವು ಜನರು ಅವುಗಳನ್ನು ನೂಲಿಸಿ ಹೊರಗೆ ಬರುತ್ತಿರುವಾಗಲೇ ತೀರಿದರು. ಮೋಡಗಳೊಡನೆ ನಡೆದ ಅವ್ಯಾಹತ ಕದನದಲ್ಲಿಯೆ ತೀರಿದರು. ಆದರೆ ಅವರೆಲ್ಲರ ವಿಚಾರಗಳು—ಸುವಿಚಾರಗಳು—ಉಚ್ಚ ಮಹತ್ವಾಕಾಂಕ್ಷೆಗಳು, ಎಂದೋ ಮೋಡಗಳನ್ನು ಭೇದಿಸಿ ನಡೆದಿದ್ದುವು! ಮೇಲೆ ಹೇಳಿದ ಮೂರು ತರದ ಮಹಾವ್ಯಕ್ತಿಗಳು

ಜಗತ್ತಿನ ಆದರಕ್ಕೆ ಪಾತ್ರವಾಗಿದ್ದಾರೆ; ಅವರು ತಮಗೆ ಸಲ್ಲತಕ್ಕ ಮನ್ನಣೆಯನ್ನು ಪಡೆದಿರುವುದು ಸಮಾಧಾನದ ಸಂಗತಿ!

ಮಹಾತ್ಮ ಎಬ್ರಹಾಂ ಲಿಂಕನ್, ನಿನ್ನ ದೇಶವಿಂದು ಸಾಂಪತ್ತಿಕ ಸುಖಕ್ಕಾಗಿ ಸಾಮ್ರಾಜ್ಯಶಾಹಿಯ ಮೈತ್ರಿಯನ್ನು ಸ್ವೀಕರಿಸಿದೆ! ನಿನ್ನ ಅಧ್ಯಕ್ಷಪದದ ಅವಧಿಯಲ್ಲಿ ಇಂತಹ ಧ್ಯೇಯಕ್ಕೆ ಆಸ್ಪದವಿರಲಿಲ್ಲ! ಮಾನವೀಯತೆಗೆ ಸಲ್ಲಿಸಿದ ನಿನ್ನ ಅಮೋಘವಾದ ಸೇವೆಯ ಫಲಗಳು ಪರಿಪಕ್ವವಾಗುತ್ತ ನಡೆಯಲಿ! ವರುಷಕ್ಕೊಂದು ಸಲವಾದರೂ ನಿನ್ನಿಂದ ಉದ್ಧರಿಸಲ್ಪಟ್ಟ ನಿನ್ನ ನಿಗ್ರೊ ಜನತೆಯು "ಏಬ್ರಹಾಂ ಏಬ್ರಹಾಂ" ಎಂದು ನಿನ್ನ ಹೆಸರನ್ನು ಜಪಿಸುತ್ತ ತನ್ನ ಕೃತಜ್ಞತೆಯನ್ನು ಪ್ರದರ್ಶಿಸುತ್ತಲಿದೆ. ನಿನ್ನನ್ನು ಮುಕುರಿದ ಮೋಡಗಳೊಡನೆ ಯಶಸ್ವಿಯಾಗಿ ಕಾದಾಡಿ, ಅವುಗಳನ್ನು ಸೋಲಿಸಿ ಹೊರಗೆ ಬರುವಷ್ಟರಲ್ಲಿಯೇ ನಿನ್ನ ಅಂತ್ಯವಾಯಿತು. ಮಾನವರು ದಯೆ, ಮಾಯೆ, ಔದಾರ್ಯ ಕರುಣೆಗಳಲ್ಲಿ ಮುಂದುವರಿದಂತೆ ನಿನ್ನ ಅಪೂರ್ವ ಸೇವೆಯ ಸ್ಮರಣೆಯು ಹೆಚ್ಚೆಚ್ಚು ಜಾಗ್ರತವಾಗುತ್ತ ನಡೆಯುವುದರಲ್ಲಿ ಸಂದೇಹವಿಲ್ಲ! ಸತ್ಯವೀರ ಸಾಕ್ರೆಟಿಸ್, ಮೋಡಗಳೊಡನೆ ಕದನವಾಡುವಾಗಲೇ ನಿನಗೆ ಮರಣವು ಬಂದಿತು. ಆದರೆ ನಿನ್ನ ಹಿರಿಮೆ-ಮಹಿಮೆಗಳನ್ನು ಜಗತ್ತು ಮರೆತಿಲ್ಲ—ಮರೆಯುವಂತಿಲ್ಲ. ಸೂರ್ಯ-ಚಂದ್ರರಿರುವವರೆಗೂ ನಿನ್ನ ಘನತೆಯ ಆದರ್ಶವು ಚಿರಸ್ಥಾಯಿಯಾಗಿರುವುದು. ಪೂಜ್ಯ ವೆಂಡಲ್‌ವಿಲ್ಕಿ! ನಿನ್ನ ಅಕಾಲ ಮರಣವಾರ್ತೆಯನ್ನು ಕೇಳಿ ನಾನು ಅನಾಥನೆಂದು ನನಗೆನಿಸಿತು. ಭೂಮಾತೆಯು ಸತ್ಪುತ್ರನೊಬ್ಬನನ್ನು ಕಳೆದುಕೊಂಡಳು. ಅಖಂಡ ಜಗತ್ತಿನ ಸ್ವಾತಂತ್ರ್ಯದ ಬಗ್ಗೆ ನಿನ್ನ ಶ್ಲಾಘನೀಯವಾದ ಉದ್ಗಾರಗಳು ನನ್ನ ಕಿವಿಗಳಲ್ಲಿ ಇನ್ನೂ ತಮ್ಮ ರವಗಳನ್ನು ಕಳುಹಿಸುತ್ತಿವೆ! ನಿನ್ನ ಉದಾರಮತಕ್ಕೆ ಧನ್ಯವಾದಗಳು! ನಿನಗೆ ಅನಂತ ಪ್ರಣಾಮಗಳು! ನಮ್ಮ ದುರ್ದೈವದಿಂದ ನೀನೂ ಮೋಡಗಳಲ್ಲಿರುವಾಗಲೇ ಕ್ರೂರ ಸಾವಿಗೆ ತುತ್ತಾಗಬೇಕಾಯಿತು. ಕೊನೆಯವರೆಗೆ ಉಚ್ಚಧ್ಯೇಯ ಸಾಧನೆಗಾಗಿ ಸೆಡೆದು ನಿಂತ ನಿನ್ನನ್ನು ಜಗತ್ತು ಮರೆಯಲಾರದು—ಎಂದಿಗೂ ಮರೆಯಲಾರದು! ಪರಮಪೂಜ್ಯ ಮಹಾತ್ಮಾಗಾಂಧೀಜಿ, ಭಾರತವನ್ನು ಕವಿದಿರುವ ದಾಸ್ಯಮೋಡವನ್ನೂ, ಜಗತ್ತನ್ನು ಕವಿದಿರುವ ಹಿಂಸಾ-ಅನಾಚಾರಗಳ ಮೋಡಗಳನ್ನೂ ನಿವಾರಿಸಲು, ಅವಿಶ್ರಾಂತ ಪರಿಶ್ರಮದಿಂದ ಸಾಗಿರುವ ನಿಮ್ಮನ್ನು ಇಂದು ಘೋರ ಮೋಡಗಳು ಮುಕುರಿವೆ! ಪತಿತರ ಉದ್ಧಾರಕ್ಕಾಗಿ, ಜನ್ಮಭೂಮಿಯ ಏಳಿಗೆಗಾಗಿ, ತಪ್ಪುದಾರಿಯನ್ನು ತುಳಿಯುತ್ತಿರುವ ಜಗತ್ತಿನ ಉದ್ಧಾರಕ್ಕಾಗಿ ಕಷ್ಟ-ನಷ್ಟಗಳನ್ನು ಸಹಿಸಲು ಸದಾ ಮುಗುಳುನಗೆಯೊಡನೆ ಸಿದ್ಧರಾಗಿರುವ ನಿಮಗೆ ಅನಂತ ಧನ್ಯವಾದಗಳು! ನಿಮ್ಮಲ್ಲಿ ನೆಲೆಯೂರಿ ನಿಂತಿರುವ ಸತ್ಯಪ್ರೇಮ, ಅಹಿಂಸಾಪ್ರೀತಿ, ಅನಾಥಪ್ರೇಮ, ಆಶಾವಾದ ಈ ಸತ್ತ್ವ ಶಕ್ತಿಗಳ ಬಲದಿಂದ, ಇಂದು ನಿಮ್ಮನ್ನು ಕವಿದಿರುವ ಕಪ್ಪುಮೋಡಗಳು ಮಾಯವಾಗುವುವು! ನಿಮ್ಮನ್ನು ಈಗ ದೂಷಿಸುವ ಕೆಲವು ಜನರು ನಿಮ್ಮ ಪೂಜಾರಿಗಳಾಗುವರು. ಸತ್ಯಕ್ಕೇ ಕಟ್ಟಕಡೆಯ ಜಯವಿರುವುದರಿಂದ, ನಿಶ್ಚಯವಾಗಿಯೂ ಇಂದಿನ ಮೋಡಗಳು ಕರಗಿ ದೂರಸಾಗುವುವು. ಆ ಸುದಿನಗಳು ಬೇಗನೆ ಬರಲಿ!

೫೦ ವರ್ಷಗಳಿಂದ ಅನುಭವ ಪಟ್ಟ
ಕೇಕರ್ ಮತ್ತು ಕಂಪನಿ
ಇವರ
ಜ್ವರಗಡ್ಡೆಯ ಗುಳಿಗೆಗಳು
ಬಾಟ್ಲಿಗೆ ೧-೮-೦
ಎಂತಹ ಜ್ವರಗಡ್ಡೆಯನ್ನೂ ಕಳೆಯುವುದು.
ವಿಳಾಸ:- ಗಣೇಶ ರಾಮಚಂದ್ರ ಕೇಕರ್ ಮತ್ತು ಕಂಪನಿ
ಗಿರಗಾಂವ, ಮುಂಬಯಿ.

ನೆನಪಿನ ಗೋರಿ

ಶ್ರೀ. ರಾಮಚಂದ್ರ, ವಿಜಾಪುರ

೧

ನೋಡದಿರು ಎಲೆಜೀವ ಹಿಂದಿರುಗಿ ನೋಡದಿರು
ಕಳೆದ ದಿನಗಳ ಕಡೆಗೆ ನೋಟ ಬೀರಿ,
ಅಳಿದ ನೆನಪಿನ ಒಡಲು ಅಗ್ನಿ ಕುಂಡವದಿಹುದು,
ಪ್ರಜ್ವಲಿಸಬಹುದೊಮ್ಮೆ ಬೂದಿ ಹಾರಿ!

೨

ಬಾನ ಬಟ್ಟೆಯಲಿಂದು ವಿಹಗದೊಲು ಆಡುತಿಹ
ಚಿಕ್ಕನಾಡಿಗು ನೀನು ಏರಬಹುದು!
ಭಾವದುನ್ಮಾದದಲಿ ಭಾನವಳಿದರೆ ನಿನ್ನ
ನೆನಪಿನೀ ಶರ ತೂರಿ ಕೆಡಹಬಹುದು!

೩

ನೀ ಸುರಿದ ಕಂಬನಿಗೆ ಎದೆಗಿಚ್ಚು ಆರಿಹುದು,
ಅದನು ಹೊತ್ತಿಸಲೇಕೆ ಯತ್ನ ಮತ್ತೆ?
ತಲೆಯೆತ್ತಿ ಮೆರೆಯದೊಲು ನೆನಪನ್ನು ಹೂಳಿಬಿಡು,
ಅದುವು ಜಾಗರವಾಗೆ ನೀನು ಸತ್ತೆ!

೪

ನಾಲ್ಕು ಸಲಿಕೆಯ ಮಣ್ಣನೆಳೆದು ಗೋರಿಯ ಮುಚ್ಚು,
ನೆನಪಿನೆದೆಯಲ್ಲೊಂದು ಶಿಲೆಯನೂರು!
ಮುಂದಿನಾ ವೈಭವದ ಮಂಗಲೋತ್ಸವದಲ್ಲಿ
ಕೇಳಿ ಬರದಂತವರ ಕ್ರೂರ-ಸೂರು!

ಆತ್ಮಬಲಿ

(ಸಣ್ಣ ಕತೆ)

ಕುಮಾರಿ ವರದಾ ಕಿಣಿ, ಕಾರಕಳ

☆

" ಅಮ್ಮಾ! "

" ಏನಪ್ಪ? "

" ಇತ್ತ ಬಾಮ್ಮಾ! "

" ಏಕೆ ಕಂದಾ? "

" ಬೆಳಗಾಯ್ತೆ? "

" ಇಲ್ಲ ಮಗು; ಇನ್ನೆಷ್ಟೋ ತಡವಿದೆ! "

" ಅಮ್ಮಾ! "

" ಅಪ್ಪಾ! "

" ನಿಮಗೆ ಎಷ್ಟೋ ಬಾಧೆಯಾಗುತ್ತಿದೆ. ಅಲ್ಲವೆ ಅಮ್ಮಾ? ನನ್ನ ಈ ಹಾಳು ಕಾಹಿಲೆಯು ನಿಮಗೂ ಬಾಧೆಯನ್ನುಂಟು ಮಾಡುತ್ತದೆ; ನನಗೂ ಸಹಿಸಲಸಾಧ್ಯವಾದ ಬೇನೆಯನ್ನುಂಟು ಮಾಡುತ್ತದೆ. ನನಗೇಕೊ ಬದುಕುವ ಆಶೆಯೇ ತೋರುವುದಿಲ್ಲ! "

" ಮಗೂ, ಹಾಗೆನ್ನಬೇಡಾ! ಈಗ ನಿದ್ದೆ ಹೋಗು. ನೀನು ಮಾತೆತ್ತಬಾರದಾಗಿ ಡಾಕ್ಟರರು ಹೇಳುವರು. ಸ್ವಲ್ಪ ನಿದ್ರಿಸು! "

" ಇಲ್ಲಮ್ಮಾ! ನನಗೆ ನಿದ್ದೆಯೇ ಹಿಡಿಯುವುದಿಲ್ಲ! ಇಲ್ಲಿ ಹತ್ತಿರವಾಗಿ ಕುಳ್ಳಿರು....ನನ್ನ ಎದೆಯನ್ನು ಮುಟ್ಟಿನೋಡು! "

" ಬಹಳ ನೋಯುತ್ತಿರುವುದೇ ಕಂದಾ? "

" ಹೌದಮ್ಮಾ, ಯಾವುದೋ ಏನೋ: ಎದೆಯೊಡೆದು ಹೊರಗೆ ಸಿಡಿಯುವಂತಿದೆ; ಅದಾಗದೆ ಚಡಪಡಿಸುತ್ತದೆ! "

" ಮಗೂ, ಸ್ವಲ್ಪ ಧೈರ್ಯಗೊಂಡು ಶಾಂತವಾದರೆ, ಆ ಎದೆಯಲ್ಲಿಯೂ ಸಮಾಧಾನವಾಗುವುದು! "

" ಅಮ್ಮಾ, ನೀನು ತಲೆಯ ಬಳಿ ಕುಳಿತಿದ್ದು, ನನ್ನ ಎದೆಯ ಮೇಲೆಯೆ ಕೈಯಾಡಿಸುತ್ತಿರು..........ಸರಿ. ಹಾಗೆಯೆ! "..........

" ಸರಿ, ಕಣ್ಣೀರೂರುತ್ತಿದೆ. ನಿದ್ದೆ ಬರುತ್ತಿದೆ..........." ಎಂದು ಗಟ್ಟಿಯಾಗಿ ನುಡಿದು ತನ್ನಲ್ಲಿ ತಾನೆ ಎಂದುಕೊಂಡಳು; " ನಿದ್ದೆ ಹಿಡಿದಿರಬೇಕು. ಹೇಗೆ ಬಾಡಿರುವನು! ದುರ್ಗಾ! ಸತಿ!! ಒಮ್ಮೆ ಕಣ್ತೆರೆದು ಇತ್ತ ನೋಡಬಾರದೇ? ಅಮ್ಮಾ, ದೇವಿ! ನನ್ನ ಪರಮಾಯುವನ್ನು ಇವನಿಗೆ ಕೂಡಿಸಿಕೊಟ್ಟು, ಇವನನ್ನು ಬದುಕಿಸಬಾರದೆ? " ಹೀಗೆಂದು ರಮೆಯು ತನ್ನ ಮುದ್ದು ಬಾಲಕ ಸತೀಶನ ಶೋಚನೀಯ ಸ್ಥಿತಿಯನ್ನು ಕಂಡು ಮರುಗುತಿದ್ದಳು. ರಮೆಯು ಕೀರ್ತಿಶೇಷ ಶ್ರೀಧರರಾಯರ

ಶಿ

ಶ್ರೀ

ದಿ

ಪುತ್ರ ಮೊದಲು ...ಇದ್ದಿಲ್ಲ.

ಅವರ ದೊಡ್ಡ ... ...ು ಸತೀಶನಾಗಿದ್ದನು. ರಮೆಯು ಪತಿಯ ಅಕಾಲ ಮರಣಕ್ಕಾಗಿ ಬಹಳ ದುಃಖಿಸಿದಳು; ತನ್ನ ದುರ್ದೈವಕ್ಕಾಗಿ ಹಲುಬಿದಳು. ಅಂತರಾಳದಲ್ಲಿ ಕೈ ಬಿಟ್ಟಂತಾಗಿ ರಮೆಯ ಆಲೋಚನೆಗಳು ಭಯಂಕರವಾದುವು. ಕೆರೆ, ಮರ, ನೇಣು ಗಳೆಲ್ಲ ಮನಸ್ಸಿಗೆ ಬಂದುವು. ಕ್ಷಣದಲ್ಲಿ ತನ್ನ ಅಬೋಧ ಬಾಲಕ ಸತೀಶನ ನೆನಪಾದೊಡನೆ, ಆಕೆಯ ಹೃದಯವು ಕರಗಿತು. ಅನುದಿನವೂ ರಮೆಯು ಪತಿಯ ನಿಧನಕ್ಕಾಗಿ, ತನಗೊದಗಿದ ವೈಧವ್ಯದ ದುಸ್ಥಿತಿಗಾಗಿ ಕಣ್ಣೀರಿನಲ್ಲಿ ಮಿಂಯುತ್ತಿದ್ದಳು. ಆದರೆ ತಾನೂ ಪತಿಯ ದಾರಿಯನ್ನನುಸರಿಸಿದರೆ ತನ್ನ ಮುದ್ದು ಬಾಲಕನು ಅನಾಥನಾಗುವನು, ಅವನಿಗೆ ಮುಂದಕ್ಕಾರು ಗತಿ?....ಎಂಬ ಆಲೋಚನೆಯು ಅವಳಲ್ಲಿ ಉದ್ಭವಿಸಿದುದರಿಂದ, ಅವನಿಗಾಗಿಯೇ ಆಕೆ ಈ ತನಕ ಜೀವ ಧರಿಸಿಕೊಂಡಿದ್ದಳು. ಆದರೆ ವಿಧಿಯ ಆಟವನ್ನು ಬಲ್ಲವರಾರು? ಸತೀಶ—ರಮೆಯ ಕರುಳಿನ ತುಂಡು—ಇದ್ದಕ್ಕಿದ್ದಂತೆ ಕಾಹಿಲೆಗೆ ತುತ್ತಾಗಿದ್ದು ಇದೀಗ ವಿಷಮಾವಸ್ಥೆಯಲ್ಲಿದ್ದನು. ತೀವ್ರವಾದ ವೇದನೆಯ ದೆಸೆಯಿಂದಾಗಿ ಒದೆದಾಡುತ್ತಿದ್ದನು. ರಮೆಯು, ರಾತ್ರಿ ಹಗಲೆನ್ನದೆ ತನ್ನ ಮಗನನ್ನು ಉಪಚರಿಸುತ್ತಾ ಕುಳಿತಿದ್ದಳು. ನಿದ್ರಾಹಾರಗಳಿಲ್ಲದೆ ಕಂಗಾಲಾಗಿದ್ದಳಾದರೂ ಅವಳಿಗದರ ಪರಿವೆಯೇ ಇಲ್ಲ. ಅವಳ ಸಂಪೂರ್ಣ ಲಕ್ಷ್ಯವು ಮಗನ ಮೇಲೆಯೆ ಲಯವಾಗಿದ್ದಿತು. ಅವಳೊಮ್ಮೆ ಕಣ್ಣುಮುಚ್ಚಿ ಕೈ ಮುಗಿಯುವಳು; ಮತ್ತೊಮ್ಮೆ ಮಗನನ್ನು ನೋಡಿ ಕಣ್ಣೀರು ಮಿಡಿಯುವಳು. ಮಗುದೊಮ್ಮೆ ಅಸಹಾಯಳಾದ ತನ್ನ ದುಃಸ್ಥಿತಿಗಾಗಿ ಮರುಗುವಳು.

ಸತೀಶನೊಮ್ಮೆ ವಿಕಾರವಾಗಿ ಕೈಕಾಲುಗಳನ್ನಾಡಿಸಿ ಚೀರಿದನು. ಒಂದು ಬಗೆಯ ಶಬ್ದವು ಕೊರಳಿನಿಂದ ಹೊರಡುತ್ತಿತ್ತು. ಇದನ್ನು ಕಂಡು ರಮೆಯು ಹೌಹಾರಿದಳು. ಪ್ರತಿಮೆಯಂತೆ ಸ್ವಲ್ಪಹೊತ್ತು ಮೌನದಿಂದ ನಿಂತು ಬಾಲಕನನ್ನು ದಿಟ್ಟಿಸಿದಳು. ಕಡೆಗೆ 'ಸತೀಶ! ಸತೀಶ!!' ಎಂದು ಕೂಗಿದಳು. ಅವನನ್ನು ಅಲುಗಾಡಿಸಿದಳು. 'ಇಂದಿನ ರಾತ್ರಿ ಕಳೆದರೆ ಮುಂದೆ ಯಾವ ಭಯವೂ ಇಲ್ಲ' ಎಂದು ಡಾಕ್ಟರರ ಮಾತುಗಳು ಅವಳ ಕಿವಿಯಲ್ಲಿ ಧ್ವನಿಗೈಯಲಾರಂಭಿಸಿದುವು. ಸತೀಶನಿಗೆ ಮೈಮೇಲೆ ಪ್ರಜ್ಞೆಯೇ ಇರಲಿಲ್ಲ. ಪುತ್ರನ ದಯನೀಯ ಸ್ಥಿತಿಯನ್ನು ನೋಡಿ ಅವಳ ಕರುಳು ಕೊಯ್ದಂತಾಗುತ್ತಿದ್ದಿತು. ಅವಳಿಗೆ ಏನೇನೋ ವಿಚಾರಗಳು ಹೊಳೆಯತೊಡಗಿದುವು. ಯಾವುವೋ ದೃಶ್ಯಗಳು ಅವಳ ಅಂತರ್ಲೋಚನಗಳ ಮುಂದೆ ತೆರೆಯಂತೆ ಇಳಿದು ಬಂದುವು; ಎದೆಗೆ ಶೂಲವಿಕ್ಕಿದಂತಾಯಿತು. ತನ್ನ ಕುಲದೀಪವು ನಂದಿ ಹೋಗುವ ಹಾಗೆ ಭಾಸವಾಯಿತು. ಬಂದೊದಗುವ ಕಷ್ಟದಿಂದ ಹೇಗೆ ಪಾರಾಗುವುದೆಂದು ತಿಳಿಯದಾಯಿತು ಬಹುಕಾಲದಿಂದ ಮನಸ್ಸಿನಲ್ಲಿ ಇಣಿಕಿ ಇಣಿಕಿ ಹೊಂಚಿ ಹೋಗುತ್ತಿದ್ದ ಆತ್ಮಹತ್ಯೆಯ ಪಿಶಾಚವು ಸಾಕಾರವಾಗಿ ಅವಳೆದುರು ನಿಂತು ಆಹ್ವಾನಿಸಿತು. ಸಾಂಸಾರಿಕ ಭಯದ ದುಃಖ ತನ್ನಿಂದ ಬಿಡಿಸಲಸಾಧ್ಯವಾಗಿ ತೋರಿತು. ಸಾವು ಬಿಡುಗಡೆಯ ಬೀಡಾಗಿ ತೋರಿತು. ಯಾವನು ತನ್ನ ಜೀವನದ ದೇವತೆ

ಜಗತ್ತಿನ ಆದರಕ್ಕೆ ಪಾತ್ರವಾಗಿದ್ದಾರೆ; ಅವರು ತಮಗೆ ಸಲ್ಲತಕ್ಕ ಮನ್ನಣೆಯನ್ನು ಪಡೆದಿರುವುದು ಸಮಾಧಾನದ ಸಂಗತಿ!

ಮಹಾತ್ಮ ಎಬ್ರಹಾಂ ಲಿಂಕನ್, ನಿನ್ನ ದೇಶವಿಂದು ಸಾಂಪತ್ತಿಕ ಸುಖಕ್ಕಾಗಿ ಸಾಮ್ರಾಜ್ಯಶಾಹಿಯ ವೈಖರಿಯನ್ನು ಸ್ವೀಕರಿಸಿದೆ! ನಿನ್ನ ಅಧ್ಯಕ್ಷಪದದ ಅವಧಿಯಲ್ಲಿ ಇಂತಹ ಧ್ಯೇಯಕ್ಕೆ ಆಸ್ಪದವಿರಲಿಲ್ಲ! ಮಾನವೀಯತೆಗೆ ಸಲ್ಲಿಸಿದ ನಿನ್ನ ಅಮೋಘವಾದ ಸೇವೆಯ ಫಲಗಳು ಪರಿಪಕ್ವವಾಗುತ್ತ ನಡೆಯಲಿ! ವರುಷಕ್ಕೊಂದು ಸಲವಾದರೂ ನಿನ್ನಿಂದ ಉದ್ಧರಿಸಲ್ಪಟ್ಟ ನಿನ್ನ ನಿಗ್ರೋ ಜನತೆಯು "ಎಬ್ರಹಾಂ ಎಬ್ರಹಾಂ!" ಎಂದು ನಿನ್ನ ಹೆಸರನ್ನು ಜಪಿಸುತ್ತ ತನ್ನ ಕೃತಜ್ಞತೆಯನ್ನು ಪ್ರದರ್ಶಿಸುತ್ತಲಿದೆ. ನಿನ್ನನ್ನು ಮುಕುರಿದ ರೋಗಗಳೊಡನೆ ಯಶಸ್ವಿಯಾಗಿ ಕಾದಾಡಿ. ಅವುಗಳನ್ನು ಸೋಲಿಸಿ ಹೊರಗೆ ಬರುವಷ್ಟರಲ್ಲಿಯೇ ನಿನ್ನ ಅಂತ್ಯವಾಯಿತು. ಮಾನವರು ದಯೆ, ನ್ಯಾಯ, ಔದಾರ್ಯ ಕರುಣೆಗಳಲ್ಲಿ ಮುಂಮುಂದರಿದಂತೆ ನಿನ್ನ ಅಮೂಲ್ಯ ಸೇವೆಯ ಸ್ಮರಣೆಯು ಹೆಚ್ಚೆಚ್ಚು ಜಾಗ್ರತವಾಗುತ್ತ ನಡೆಯುವುದರಲ್ಲಿ ಸಂದೇಹವಿಲ್ಲ! ಸತ್ಯವೀರ ಸಾಕ್ರೆಟಿಸ್, ರೋಗಗಳೊಡನೆ ಕದನವಾಡುವಾಗಲೇ ನಿನಗೆ ಮರಣವು ಬಂದಿತು. ಆದರೆ ನಿನ್ನ ಹಿರಿಮೆ-ಮಹಿಮೆಗಳನ್ನು ಜಗತ್ತು ಮರೆತಿಲ್ಲ—ಮರೆಯುವಂತಿಲ್ಲ. ಸೂರ್ಯ-ಚಂದ್ರರಿರುವವರೆಗೂ ನಿನ್ನ ಘನತೆಯ ಆದರ್ಶವು ಚಿರಸ್ಥಾಯಿಯಾಗಿರುವುದು. ಪೂಜ್ಯ ಮೆಂಡಲ್ವಿಲ್ಲಿ! ನಿನ್ನ ಅಕಾಲ ಮರಣವಾರ್ತೆಯನ್ನು ಕೇಳಿ ನಾವು ಅನಾಥರೆಂದು ನಮಗೆನಿಸಿತು. ಭೂಮಾತೆಯು ಸತ್ಪುತ್ರನೊಬ್ಬನನ್ನು ಕಳೆದುಕೊಂಡಳು. ಅಖಂಡ ಜಗತ್ತಿನ ಸ್ವಾತಂತ್ರ್ಯದ ಬಗ್ಗೆ ನಿನ್ನ ಶ್ಲಾಘನೀಯವಾದ ಉದ್ಗಾರಗಳು ನಮ್ಮ ಕಿವಿಗಳಲ್ಲಿ ಇನ್ನೂ ತಮ್ಮ ರವಗಳನ್ನು ಕಳುಹಿಸುತ್ತಿವೆ! ನಿನ್ನ ಉದಾರಮತಕ್ಕೆ ಧನ್ಯವಾದಗಳು! ನಿನಗೆ ಅನಂತ ಪ್ರಣಾಮಗಳು! ನಮ್ಮ ದುರ್ದೈವದಿಂದ ನೀನೂ ರೋಗಗಳಲ್ಲಿರುವಾಗಲೆ ಕ್ರೂರ ಸಾವಿಗೆ ತುತ್ತಾಗಬೇಕಾಯಿತು. ಕೊನೆಯವರೆಗೆ ಉಚ್ಚಧ್ಯೇಯ ಸಾಧನೆಗಾಗಿ ಸೆಣೆದು ನಿಂತ ನಿನ್ನನ್ನು ಜಗತ್ತು ಮರೆಯಲಾರದು—ಎಂದಿಗೂ ಮರೆಯಲಾರದು! ಪರಮಪೂಜ್ಯ ಮಹಾತ್ಮಾಗಾಂಧೀಜಿ, ಭಾರತವನ್ನು ಕವಿದಿರುವ ದಾಸ್ಯರೋಗವನ್ನೂ, ಜಗತ್ತನ್ನು ಕವಿದಿರುವ ಹಿಂಸಾ-ಅನಾಚಾರಗಳ ರೋಗಗಳನ್ನೂ ನಿವಾರಿಸಲು, ಅವಿಶ್ರಾಂತ ಪರಿಶ್ರಮದಿಂದ ಸಾಗಿರುವ ನಿಮ್ಮನ್ನು ಇಂದು ಘೋರ ರೋಗಗಳು ಮುಕುರಿವೆ! ಪತಿತರ ಉದ್ಧಾರಕ್ಕಾಗಿ, ಜನ್ಮಭೂಮಿಯ ಏಳಿಗೆಗಾಗಿ, ತಪ್ಪುದಾರಿಯನ್ನು ತುಳಿಯುತ್ತಿರುವ ಜಗತ್ತಿನ ಉದ್ಧಾರಕ್ಕಾಗಿ ಕಷ್ಟ-ನಷ್ಟಗಳನ್ನು ಸಹಿಸಲು ಸದಾ ಮುಗುಳುನಗೆಯೊಡನೆ ಸಿದ್ಧರಾಗಿರುವ ನಿಮಗೆ ಅನಂತ ಧನ್ಯವಾದಗಳು! ನಿಮ್ಮಲ್ಲಿ ನೆಲೆಯೂರಿ ನಿಂತಿರುವ ಸತ್ಯಪ್ರೇಮ, ಅಹಿಂಸಾಪ್ರೀತಿ, ಅನಾಥಪ್ರೇಮ, ಆಶಾವಾದ ಈ ಸ್ತುತ್ಯ ಶಕ್ತಿಗಳ ಬಲದಿಂದ, ಇಂದು ನಿಮ್ಮನ್ನು ಕವಿದಿರುವ ಕಪ್ಪುರೋಗಗಳು ಮಾಯವಾಗುವುವು! ನಿಮ್ಮನ್ನು ಈಗ ದೂಷಿಸುವ ಕೆಲವು ಜನರು ನಿಮ್ಮ ಪೂಜಾರಿಗಳಾಗುವರು. ಸತ್ಯಕ್ಕೇ ಕಟ್ಟಕಡೆಯ ಜಯವಿರುವುದರಿಂದ, ನಿಶ್ಚಯವಾಗಿಯೂ ಇಂದಿನ ರೋಗಗಳು ಕರಗಿ ದೂರವಾಗುವುವು. ಆ ಸುದಿನಗಳು ಬೇಗನೆ ಬರಲಿ!

೫೦ ವರ್ಷಗಳಿಂದ ಅನುಭವ ಪಟ್ಟ

ಕೆಕರ್ ಮತ್ತು ಕಂಪನಿ

ಇವರ

ಜ್ವರಗಡ್ಡೆಯ ಗುಳಿಗೆಗಳು

ಬಾಟ್ಲಿಗೆ ೧-೮-೦

ಎಂತಹ ಜ್ವರಗಡ್ಡೆಯನ್ನೂ ಕಳೆಯುವುದು.

ವಿಳಾಸ:- ಗಣೇಶ ರಾಮಚಂದ್ರ ಕೆಕರ್ ಮತ್ತು ಕಂಪನಿ

ಗಿರಗಾಂವ, ಮುಂಬಯಿ.

ನೆನಪಿನ ಗೋರಿ

ಶ್ರೀ. ರಾಮಚಂದ್ರ, ವಿಜಾಪುರ

೧

ನೋಡದಿರು ಎಲೆಜೀವ ಹಿಂದಿರುಗಿ ನೋಡದಿರು
ಕಳೆದ ದಿನಗಳ ಕಡೆಗೆ ನೋಟ ಬೀರಿ,
ಆಳದ ನೆನಪಿನ ಒಡಲು ಅಗ್ನಿ ಕುಂಡವನದಿಹುದು,
ಪ್ರಜ್ವಲಿಸಬಹುದೊಮ್ಮೆ ಬೂದಿ ಹಾರಿ!

೨

ಬಾನ ಬಟ್ಟೆಯಲಿಂದು ವಿಹಗದೊಲು ಆಡುತಿಹೆ
ಚಿಕ್ಕೆನಾಡಿಗು ನೀನು ಏರಬಹುದು!
ಭಾವದುನ್ಮಾದದಲಿ ಭಾನವಳಿದರೆ ನಿನ್ನ
ನೆನಪಿನೀ ಶರ ತೂರಿ ಕೆಡಹಬಹುದು!

೩

ನೀ ಸುರಿದ ಕಂಬನಿಗೆ ಎದೆಗಿಚ್ಚು ಆರಿಹುದು,
ಅದನು ಹೊತ್ತಿಸಲೇಕೆ ಯತ್ನ ಮತ್ತೆ?
ತಲೆಯೆತ್ತಿ ಮೆರೆಯದೊಲು ನೆನಪನ್ನು ಹೂಳಿಬಿಡು,
ಅದುವು ಜಾಗರವಾಗೆ ನೀನು ಸತ್ತೆ!

೪

ನಾಲ್ಕು ಸಲಿಕೆಯ ಮಣ್ಣು ನೆಳೆದು ಗೋರಿಯ ಮುಚ್ಚು,
ನೆನಪಿನೆದೆಯಲ್ಲೊಂದು ಶಿಲೆಯನೂರು!
ಮುಂದಿನಾ ವೈಭವದ ಮಂಗಲೋತ್ಸವದಲ್ಲಿ
ಕೇಳಿ ಬರದಂತದರ ಕ್ರೂರ-ಸೂರು!

ಆತ್ಮಬಲಿ

(ಸಣ್ಣ ಕತೆ)

ಕುಮಾರಿ ವರದಾ ಕಿಣಿ, ಕಾರಕಳ

*

"ಅಮ್ಮಾ!"

"ಏನಪ್ಪ?"

"ಇತ್ತ ಬಾಮ್ಮಾ!"

"ಏಕೆ ಕಂದಾ?"

"ಬೆಳಗಾಯ್ತೆ?"

"ಇಲ್ಲ ಮಗು; ಇನ್ನೆಷ್ಟೋ ತಡವಿದೆ!"

"ಅಮ್ಮಾ!"

"ಅಪ್ಪಾ!"

"ನಿಮಗೆ ಎಷ್ಟೋ ಬಾಧೆಯಾಗುತ್ತಿದೆ. ಅಲ್ಲವೆ ಅಮ್ಮಾ? ನನ್ನ ಈ ಹಾಳು ಕಾಹಿಲೆಯು ನಿಮಗೂ ಬಾಧೆಯನ್ನುಂಟು ಮಾಡುತ್ತದೆ; ನನಗೂ ಸಹಿಸಲಸಾಧ್ಯವಾದ ಬೇನೆಯನ್ನುಂಟು ಮಾಡುತ್ತದೆ. ನನಗೇಕೊ ಬದುಕುವ ಆಶೆಯೇ ತೋರುವುದಿಲ್ಲ!"

"ಮಗೂ, ಹಾಗೆನ್ನಬೇಡಾ! ಈಗ ನಿದ್ದೆಹೋಗು. ನೀನು ಮಾತೆತ್ತಬಾರದಾಗಿ ಡಾಕ್ಟರರು ಹೇಳಿರುವರು. ಸ್ವಲ್ಪ ನಿದ್ರಿಸು!"

"ಇಲ್ಲವಮ್ಮಾ! ನನಗೆ ನಿದ್ದೆಯೇ ಹಿಡಿಯುವುದಿಲ್ಲ! ಇಲ್ಲಿ ಹತ್ತಿರವಾಗಿ ಕುಳ್ಳಿರು....ನನ್ನ ಎದೆಯನ್ನು ಮುಟ್ಟಿನೋಡು!"

"ಬಹಳ ನೋಯುತ್ತಿರುವುದೇ ಕಂದಾ?"

"ಹೌದಮ್ಮಾ, ಯಾವುದೋ ಏನೋ: ಎದೆಯೊಡೆದು ಹೊರಗೆ ಸಿಡಿಯುವಂತಿದೆ; ಅದಾಗದೆ ಚಡಪಡಿಸುತ್ತದೆ!"

"ಮಗೂ, ಸ್ವಲ್ಪ ಧೈರ್ಯಗೊಂಡು ಶಾಂತವಾದರೆ, ಆ ಎದೆಯಲ್ಲಿಯೂ ಸಮಾಧಾನವಾಗುವುದು!"

"ಅಮ್ಮಾ, ನೀನು ತಲೆಯ ಬಳಿ ಕುಳಿತಿದ್ದು, ನನ್ನ ಎದೆಯ ಮೇಲೆಯೆ ಕೈಯಾಡಿಸುತ್ತಿರು............ಸರಿ. ಹಾಗೆಯೆ!"...........

"ಸರಿ, ಕಣ್ಣೆ ರೂರುತ್ತಿದೆ. ನಿದ್ದೆ ಬರುತ್ತಿದೆ............" ಎಂದು ಗಟ್ಟಿಯಾಗಿ ನುಡಿದು ತನ್ನಲ್ಲಿ ತಾನೆ ಎಂದುಕೊಂಡಳು; "ನಿದ್ದೆ ಹಿಡಿದಿರಬೇಕು. ಹೇಗೆ ಬಾಡಿರುವನು! ದುರ್ಗಾ! ಸತಿ!! ಒಮ್ಮೆ ಕಣ್ತೆರೆದು ಇತ್ತ ನೋಡಬಾರದೇ? ಅಮ್ಮಾ, ದೇವಿ! ನನ್ನ ಪರಮಾಯುವನ್ನು ಇವನಿಗೆ ಕೊಡಿಸಿಕೊಟ್ಟು, ಇವನನ್ನು ಬದುಕಿಸಬಾರದೆ?" ಹೀಗೆಂದು ರಮೆಯು ತನ್ನ ಮುದ್ದು ಬಾಲಕ ಸತೀಶನ ಶೋಚನೀಯ ಸ್ಥಿತಿಯನ್ನು ಕಂಡು ಮರುಗುತಿದ್ದಳು. ರಮೆಯು ಕೀರ್ತಿಶೇಷ ಶ್ರೀಧರರಾಯರ ವಿಧವೆ. ಶ್ರೀಧರರಾಯರು ಕಚೇರಿಯಲ್ಲಿ ಗುಮಾಸ್ತರಾಗಿದ್ದರು. ತಮ್ಮ ಅಲ್ಪಸ್ವಲ್ಪ ತಲಬಿನಿಂದ ತಮ್ಮ ಪ್ರಿಯಪತ್ನಿ ರಮೆಯೊಡನೆ ಸಂತೋಷದಿಂದ ಜೀವನ ನಡೆಯಿಸುತಿದ್ದರು. ಇದ್ದಕ್ಕಿದ್ದಂತೆ ಅವರು ಅಕಾಲ ಮರಣಕ್ಕೆ ತುತ್ತಾದರು. ಅವರೇನು ಅಪಾರ ಸಂಪತ್ತು ಗಳಿಸಿದ್ದಿಲ್ಲ. ಅವರ ದೊಡ್ಡ ಸಂಪತ್ತೆಂದರೆ ಅವರ ಪುಟ್ಟಮಗ ಸತೀಶನಾಗಿದ್ದನು. ರಮೆಯು ಪತಿಯ ಅಕಾಲ ಮರಣಕ್ಕಾಗಿ ಬಹಳ ದುಃಖಿಸಿದಳು; ತನ್ನ ದುರ್ದೈವಕ್ಕಾಗಿ ಹಲುಬಿದಳು. ಅಂತರಾಳದಲ್ಲಿ ಕೈ ಬಿಟ್ಟಂತಾಗಿ ರಮೆಯ ಆಲೋಚನೆಗಳು ಭಯಂಕರವಾದುವು. ಕೆರೆ, ಮರ, ನೇಣು ಗಳೆಲ್ಲ ಮನಸ್ಸಿಗೆ ಬಂದುವು. ಕ್ಷಣದಲ್ಲಿ ತನ್ನ ಅಬೋಧ ಬಾಲಕ ಸತೀಶನ ನೆನಪಾದೊಡನೆ, ಆಕೆಯ ಹೃದಯವು ಕರಗಿತು. ಅನುದಿನವೂ ರಮೆಯು ಪತಿಯ ನಿಧನಕ್ಕಾಗಿ, ತನಗೊದಗಿದ ವೈಧವ್ಯದ ದುಸ್ಥಿತಿಗಾಗಿ ಕಣ್ಣೀರಿನಲ್ಲಿ ಮಿಂಯುತ್ತಿದ್ದಳು. ಆದರೆ ತಾನೂ ಪತಿಯ ದಾರಿಯನ್ನನುಸರಿಸಿದರೆ ತನ್ನ ಮುದ್ದು ಬಾಲಕನು ಅನಾಥನಾಗುವನು, ಅವನಿಗೆ ಮುಂದಾರು ಗತಿ?....ಎಂಬ ಆಲೋಚನೆಯು ಅವಳಲ್ಲಿ ಉದ್ಭವಿಸಿದುದರಿಂದ, ಅವನಿಗಾಗಿಯೇ ಆಕೆ ಈ ತನಕ ಜೀವ ಧರಿಸಿಕೊಂಡಿದ್ದಳು. ಆದರೆ ವಿಧಿಯ ಆಟವನ್ನು ಬಲ್ಲವರಾರು? ಸತೀಶ—ರಮೆಯ ಕರುಳಿನ ತುಂಡು—ಇದ್ದಕ್ಕಿದ್ದಂತೆ ಕಾಹಿಲೆಗೆ ತುತ್ತಾಗಿದ್ದು ಇದೀಗ ವಿಷಮಾವಸ್ಥೆಯಲ್ಲಿದ್ದನು. ತೀವ್ರವಾದ ವೇದನೆಯು ದೆಸೆಯಿಂದಾಗಿ ಒದೆದಾಡುತ್ತಿದ್ದನು. ರಮೆಯು, ರಾತ್ರಿ ಹಗಲೆನ್ನದೆ ತನ್ನ ಮಗನನ್ನು ಉಪಚರಿಸುತ್ತಾ ಕುಳಿತಿದ್ದಳು. ನಿದ್ರಾಹಾರಗಳಿಲ್ಲದೆ ಕಂಗಾಲಾಗಿದ್ದಳಾದರೂ ಅವಳಿಗದರ ಪರಿವೆಯೇ ಇಲ್ಲ. ಅವಳ ಸಂಪೂರ್ಣ ಲಕ್ಷ್ಯವು ಮಗನ ಮೇಲೆಯೆ ಲಯವಾಗಿದ್ದಿತು. ಅವಳೊಮ್ಮೆ ಕಣ್ಣುಮುಚ್ಚಿ ಕೈ ಮುಗಿಯುವಳು; ಮತ್ತೊಮ್ಮೆ ಮಗನನ್ನು ನೋಡಿ ಕಣ್ಣೀರು ಮಿಡಿಯುವಳು. ಮಗುದೊಮ್ಮೆ ಅಸಹಾಯಳಾದ ತನ್ನ ದುಃಸ್ಥಿತಿಗಾಗಿ ಮರುಗುವಳು.

ಸತೀಶನೊಮ್ಮೆ ವಿಕಾರವಾಗಿ ಕೈಕಾಲುಗಳನ್ನಾಡಿಸಿ ಚೀರಿದನು. ಒಂದು ಬಗೆಯ ಶಬ್ದವು ಕೊರಳಿನಿಂದ ಹೊರಡುತ್ತಿತ್ತು. ಇದನ್ನು ಕಂಡು ರಮೆಯು ಹೌಹಾರಿದಳು. ಪ್ರತಿಮೆಯಂತೆ ಸ್ವಲ್ಪಹೊತ್ತು ಮೌನದಿಂದ ನಿಂತು ಬಾಲಕನನ್ನು ದಿಟ್ಟಿಸಿದಳು. ಕಡೆಗೆ 'ಸತೀಶ! ಸತೀಶ!!' ಎಂದು ಕೂಗಿದಳು. ಅವನನ್ನು ಅಲುಗಾಡಿಸಿದಳು. 'ಇಂದಿನ ರಾತ್ರಿ ಕಳೆದರೆ ಮುಂದೆ ಯಾವ ಭಯವೂ ಇಲ್ಲ' ಎಂದು ಡಾಕ್ಟರರ ಮಾತುಗಳು ಅವಳ ಕಿವಿಯಲ್ಲಿ ಧ್ವನಿಗೈಯಲಾರಂಭಿಸಿದುವು. ಸತೀಶನಿಗೆ ಮೈಮೇಲೆ ಪ್ರಜ್ಞೆಯೇ ಇರಲಿಲ್ಲ. ಪುತ್ರನ ದಯನೀಯ ಸ್ಥಿತಿಯನ್ನು ನೋಡಿ ಅವಳ ಕರುಳು ಕೊಯ್ದಂತಾಗುತ್ತಿದ್ದಿತು. ಅವಳಿಗೆ ಏನೇನೋ ವಿಚಾರಗಳು ಹೊಳೆಯತೊಡಗಿದುವು. ಯಾವುವೋ ದೃಶ್ಯಗಳು ಅವಳ ಅಂತರ್ಲೋಚನಗಳ ಮುಂದೆ ತೆರೆಯಂತೆ ಇಳಿದು ಬಂದುವು; ಎದೆಗೆ ಶೂಲವಿಕ್ಕಿದಂತಾಯಿತು. ತನ್ನ ಕುಲದೀಪವು ನಂದಿ ಹೋಗುವ ಹಾಗೆ ಭಾಸವಾಯಿತು. ಬಂದೊದಗುವ ಕಷ್ಟದಿಂದ ಹೇಗೆ ಪಾರಾಗುವುದೆಂದು ತಿಳಿಯದಾಯಿತು ಬಹುಕಾಲದಿಂದ ಮನಸ್ಸಿನಲ್ಲಿ ಇಣಿಕಿ ಇಣಿಕಿ ಹೊಂಚಿ ಹೋಗುತ್ತಿದ್ದ ಆತ್ಮಹತ್ಯೆಯ ಪಿಶಾಚವು ಸಾಕಾರವಾಗಿ ಅವಳೆದುರು ನಿಂತು ಆಹ್ವಾನಿಸಿತು. ಸಾಂಸಾರಿಕ ಭಯದ ದುಃಖ ತನ್ನಿಂದ ಬಿಡಿಸಲಸಾಧ್ಯವಾಗಿ ತೋರಿತು. ಸಾವು ಬಿಡುಗಡೆಯ ಬೀಡಾಗಿ ತೋರಿತು. ಯಾವನು ತನ್ನ ಜೀವನದ ದೇವತೆ

ಯೆಂದು ಆಕೆ ಭಾವಿಸಿದ್ದಳೊ, ತನ್ನ ಕುಲದ ಜ್ಯೋತಿಯೆಂದು ತಿಳಿದಿದ್ದಳೊ ಆತನೇ ತನ್ನನ್ನು ಅಗಲುವ ಸ್ಥಿತಿಯಲ್ಲಿದ್ದ ಬಳಿಕ ಬೇರೆ ಗತಿಯೇನು? ಒಂದು ವೇಳೆ ಸತೀಶನ ಸ್ಥಿತಿಯು ಸುಧಾರಿಸಿದ್ದರೆ ಅವಳು ಎಷ್ಟು ಕಷ್ಟ ಒದಗಿದರೂ ಸಹಿಸುತ್ತಿದ್ದಳು. ಆದರೆ ಆತನ ಸ್ಥಿತಿಯು ಇನ್ನೂ ಚಿಂತಾಜನಕವಾಗತೊಡಗಿತು. ಆತನ ಇಡಿ ಮೈ ಥರಥರನೆ ನಡುಗಲಾರಂಭಿಸಿತು. ರಮೆಯು ಕಣ್ಣುಬಿಟ್ಟು ಆತನನ್ನೇ ನೋಡುತ್ತಾ, ನೆನೆದು ನೆನೆದು ಕಣ್ಣೀರನ್ನು ಸುರಿಸಿದಳು.... ....ಆ ಕೆರೆ! ಆ ಕತ್ತಲೆ!...........ಹಾ!........... ರಮೆಯ ಎದೆಯು ಝಗ್ಗೆಂದಿತು!....'ನೋಡೋಣ, ಈಗಲಾದರೂ ಕಂದನು ಕಣ್ಣು ತೆರೆದರೆ ಸಾಕು!' ಎಂದು ಕುರುಡಾಸೆ ಪಡತೊಡಗಿದಳು. ಆತನ ಕೈಕಾಲುಗಳನ್ನು ಮೆಲ್ಲಗೆ ಸವರತೊಡಗಿದಳು. ಬೇಗಬೇಗನೆ ಸ್ವಲ್ಪ ನೀರನ್ನು ಸತೀಶನ ಕಣ್ಣಿಗೆ ಮುಟ್ಟಿಸಿದಳು. ಬಾಯ ಹತ್ತಿರಕ್ಕೆ ತಂದು ಕುಡಿಸಲು ಪ್ರಯತ್ನಿಸಿದಳು. ಆದರೆ ಅವಳ ಪ್ರಯತ್ನಗಳೆಲ್ಲಾ ವಿಫಲವಾದುವು. ಕಡೆಗೆ ಏನೂ ಉಪಾಯವು ತೋಚದೆ, ಸಾಯುವ ಬಾವಿಗೆ ಕಾಲು ಜಾರಿದವಳು ದಡದ ಗಿಡವನ್ನು ಆತುರಿ ಹಿಡಿಯುವಂತೆ, ಬಾಳಿನ ಬಾವಿಗೆ ಕಾಲು ಜಾರಿದವಳು ಸಾವಿನ ಕಾಲನ್ನು ಭದ್ರವಾಗಿ ಹಿಡಿದಳು!.. ....ಎದ್ದು ನಿಂತಳು; ಪಕ್ಕದಲ್ಲಿ ಪ್ರಜ್ಞೆಯಿಲ್ಲದೆ ಮಲಗಿದ್ದ ಮುದ್ದುಕುವರನನ್ನು ನೋಡಿ, ಏತಕ್ಕೋ ಏನೋ 'ಸ್ವಲ್ಪ ತಡೆದು ಹೋಗುತ್ತೇನೆ' ಎಂದು ನಿಶ್ಚಯಿಸಿದಳು—ಪುನಃ ಹೊರಟಳು........ಮಗನನ್ನು ತಬ್ಬಿಕೊಂಡು ತುಂಬಾ ಅತ್ತಳು. 'ದೇವಿ! ನನ್ನ ಕಂದನ ಜೀವನವನ್ನು ಕಾಪಾಡಬೇಕು. ಸತೀ! ದಯೆಯನ್ನಿಡು, ನನ್ನ ಪ್ರಾಣಗಳನ್ನು ಅವನ ಪ್ರಾಣಗಳ ಬದಲಾಗಿ ಸ್ವೀಕರಿಸು!' ಎಂದು ಕೈಮುಗಿದು ಪ್ರಾರ್ಥಿಸಿದಳು........ಬಿರುಬಿರನೆ ಕೆರೆಯ ಕಡೆಗೆ ನಡೆದಳು!....ಕೆರೆಗೆ ಹಾರಿದಳು!........ನೀರು ಘಳ್ಳೆಂದು ಚಿಗಿಯಿತು.

× × × ×

ದಿನನಿತ್ಯದ ಪದ್ಧತಿಯಂತೆ ಡಾಕ್ಟರ್ ರಾಮರಾಯರು, ಸತೀಶನನ್ನು ನೋಡುವುದಕ್ಕಾಗಿ ಬೆಳಗಿನ ಜಾವದಲ್ಲಿ, ವೈದ್ಯ ಸಾಮಗ್ರಿಗಳೊಂದಿಗೆ ರಮೆಯ ಮನೆಗೆ ಬಂದರು; ಅವರೆ ನೋಡುವುದೇನು? ಹಾಸಿಗೆಯ ಮೇಲೆ ಸತೀಶನು ಪ್ರಜ್ಞಾರಹಿತನಾಗಿ ಬಿದ್ದಿರುವನು. ಪ್ರೇಮಮಯಿಯಾದ ರಮೆಯು ಯಾವಾಗಲೂ ಮಗನ ಶಯ್ಯೆಯ ಬಳಿಯಲ್ಲಿಯೇ ಇರುತ್ತಿದ್ದಳು; ಆದರೆ ಇಂದು ಅವಳ ಸುಳಿವೇ ಇಲ್ಲ. ಎರಡು ಮೂರು ಸಲ ಡಾಕ್ಟರರು ರಮೆಯ ಹೆಸರನ್ನು ಹಿಡಿದು ಕೂಗಿದರು. ಆದರೂ ಪ್ರತಿಧ್ವನಿ ಇಲ್ಲ; ಪ್ರತ್ಯುತ್ತರವಿಲ್ಲ. ಅವರಿಗೆ ಎದೆ ಝಲ್ಲೆಂದಿತು. ಆದರೆ ಈ ವಿಷಯದಲ್ಲಿಯೆ ಆಲೋಚಿಸುತ್ತ ಕುಳಿತುಕೊಳ್ಳುವುದಕ್ಕೆ ಅದು ಸರಿಯಾದ ಸಮಯವಲ್ಲವೆಂದು ಅವರಿಗೆ ಕಂಡು ಬಂದುದರಿಂದ, ಬೇಗಬೇಗನೇ ರೋಗಿಯ ಶುಶ್ರೂಷೆಯನ್ನು ಮಾಡತೊಡಗಿದರು. ಸ್ವಲ್ಪ ಸಮಯದನಂತರ ಸತೀಶನು ಮೆಲ್ಲಗೆ ಕಣ್ದೆರೆದನು.

ಸತೀಶ—(ನಿಟ್ಟುಸಿರು ಬಿಡುತ್ತಾ) 'ಅಮ್ಮಾ,—ಅ ಮ್ಮಾ'

ಡಾಕ್ಟರ್—ಮಗು, ನೀನು ತುಂಬಾ ಅಶಕ್ತನಾಗಿರುವೆ; ಆದುದರಿಂದ ಹೆಚ್ಚು ಕೂಗಬೇಡ!

ಸತೀಶನು ಆಗಾಗ ಕಣ್ಣು ತೆರೆದು ನೋಡುತ್ತಾನೆ. ಆಗಾಗ ಮುಚ್ಚುತ್ತಾನೆ. ಆದರೆ ಮಾತನಾಡುವ ಶಕ್ತಿ ಅವನಲ್ಲಿಯೂ ಇದ್ದಿಲ್ಲ. ಅವನನ್ನು ಹೆಚ್ಚಿಗೆ ಮಾತನಾಡಿಸುವುದು ಯೋಗ್ಯವಲ್ಲವೆಂದು ಕಂಡು ಬಂದುದರಿಂದ, ಡಾಕ್ಟರ್ ರಾಮರಾಯರು ಅಚಂಚಲವಾದ ದೃಷ್ಟಿಯಿಂದ ರೋಗಿಯ ಮುಖವನ್ನೇ ನೋಡುತ್ತಾ, ರಮೆಯ ವಿಷಯವಾಗಿ ಆಲೋಚಿಸುತ್ತಿದ್ದರು. ಥಟ್ಟನೆ ಅವರಿಗೆ ಹೊರಗೆ ಕೋಲಾಹಲವು ಕೇಳಬಂತು. ಏನೆಂದು ಆಲಿಸಲು, ನೆರೆದ ಜನರೆಲ್ಲರೂ ರಮೆಯ ಆತ್ಮಹತ್ಯೆಯ ವಿಷಯವಾಗಿ ಮಾತನಾಡುವುದು ಅವರಿಗೆ ಕೇಳಬಂತು. ಆ ಸುದ್ದಿ ಅವರಿಗೆ ಸಿಡಿಲಾಘಾತದಂತಾಯಿತು... ಆ ಸುದ್ದಿ ಅವರಿಗೆ ಆಘಾತವೊಂದು ಬರೆಯನ್ನೆಳೆದು ಬಿಟ್ಟಿತು.

+ × × ×

ಇಪ್ಪತ್ತು ವರ್ಷಗಳ ಹಿಂದೆ ಸತೀಶನು, ರಾಷ್ಟ್ರೀಯ ಪ್ರಪಂಚಕ್ಕೆ ತೀರ ಅಪರಿಚಿತ ವಸ್ತುವಾಗಿದ್ದ ಆ ಚಿಕ್ಕ ಮುದ್ದು ಬಾಲಕನಾಗಿದ್ದನು. ಸತೀಶನ ಹನ್ನೊಂದನೆಯ ವರ್ಷದಲ್ಲಿ ರಮೆಯು ಕಾಲವಶಳಾದಳು. ತಂದೆಯು ಆ ಮೊದಲೇ ತೀರಿಹೋದುದರಿಂದ ಅನಾಥನಾದ, ಸತೀಶನನ್ನು ಪೋಷಿಸಿ ಬಹಳ ಶ್ರೇಷ್ಠ ವಿದ್ಯಾವಂತನನ್ನಾಗಿ ಮೇಲಕ್ಕೆ ತಂದವರೆಂದರೆ ಡಾಕ್ಟರ್ ರಾಮರಾಯರು. ರುಗ್ಣಶಯ್ಯೆಯಲ್ಲಿ ತಾಯಿಯ ಪೋಷಣೆಯು ತಪ್ಪಿಹೋಗಿ ನಿರ್ಗತಿಕನಾಗಲು ಆ ವಿಚಾರ ತಿಳಿದ ರಾಮರಾಯರು ಅವನ ಆರೈಕೆ ಕೈಕೊಂಡರು. ಸತೀಶನು ವಿದ್ಯಾಭ್ಯಾಸದಲ್ಲಿ ಚುರುಕು ಹುಡುಗ. ರಾಮರಾಯರೇ ಆತನ ಮೇಲ್ವಿಚಾರಕರಾದ ಮೇಲೆ ಸಿಕ್ಕಿತು ಈ ಹುಡುಗನಿಗೂ ವೈದ್ಯಶಾಸ್ತ್ರದ ಜ್ಞಾನ. ಕೆಲವೇ ವರ್ಷಗಳಲ್ಲಿ ವೈದ್ಯಶಾಸ್ತ್ರವಿಚಾರಗಳಲ್ಲಿ ಸತೀಶನು ಬಹಳ ನಿಪುಣನಾದನು.

ಇಂದು ಸತೀಶನು ವೈದ್ಯಶ್ರೇಷ್ಠ, ದೀನೋದ್ಧಾರಕ, ಅನಾಥ ರಕ್ಷಕನೆಂಬ ಬಿರುದುಗಳಿಗೆ ಅರ್ಹನಾಗಿರುವನು. ಆತನ 'ರಮಾಸದನ'ವು ನೂರಾರು ರೋಗಿಗಳ ಶುಶ್ರೂಷಾಗೃಹವಾಗಿದೆ. ಹಲವು ಜನ ಅನಾಥ ಬಾಲಕರ ಬೀಡಾರವಾಗಿದೆ.

ಸತೀಶನ ಮೇಲ್ಮೆಯನ್ನು ನೋಡಿ ಕೆಲವರು ಇದು ರಮೆಯ ಆತ್ಮಬಲಿದಾನದ ಪ್ರಸಾದವೆನ್ನುವರು. ಹಲವರು ಇದು ವಿಧಿಯ ಲೀಲೆ ಎನ್ನುವರು; ಇನ್ನೂ ಕೆಲವರು 'ಪುತ್ರನ ಸೌಭಾಗ್ಯ ಸಂಪತ್ತನ್ನು ನೋಡಲು ರಮೆಯು ಉಳಿಯಲಿಲ್ಲವಲ್ಲಾ!' ಎಂದು ಮರುಗುವರು.

ಸೊಲ್ಲಾಪುರದಲ್ಲಿ ನಮ್ಮ ಏಜಂಟರು:

ಶ್ರೀ. ಎನ್. ಎಚ್. ದೇಶಪಾಂಡೆ

ನ್ಯೂಜ್ ಏಜನ್ಸಿ

ಝುಂಬ್ರೇವಾಡಾ, ಸೌಥ್ ಕಸ್ಬಾ, ಮನೆ ನಂ. ೨೩೭.

ಮದುವೆಗೆ ಮೊದಲು

ರೆವರೆಂಡ್ ಮಾರಾ ಶಾಮಣ್ಣ, ಧಾರವಾಡ

●

೧

ಗ್ರಾಮಹೊಳೆಯ ನೀರಿಗಂದೀವು ಬಂದೆ, ನಳಿ-
ನಾಕ್ಷಿ ಕಂಕುಳಲ್ಲಿ—
ಕಳಶವೆತ್ತಿ ವೈಯಾರದಿಂದ ಗೋ-
ಧೂಳಿ ಸಮಯದಲ್ಲಿ;
ತೊಳೆಯುತಿರ್ದೆ ಬಟ್ಟೆಗಳ ನಾನು ಆ
ನದಿಯ ತೀರದಲ್ಲಿ,
ಬಳೆಗಳಿಂಚರಕೆ ಮೊಗವನೆತ್ತಿ ನಾ
ಕಂಡೆ ನಿನ್ನನಲ್ಲಿ.

೨

ನೋಟಿರೆ ನೀರ ಕಡೆ, ಮನವು ಹಾರಿದೆಡೆ,
ನಯನ ನೀರೆಸೆಡೆಗೆ—
ಸಾರುತಿರಲು ಕೈಜಾರಿ ಹೋಯಿತಾ
ಕಳಶ ನೀರಿನೊಳಗೆ;
ಒಯ್ಯನೊಯ್ಯನದು ಹರಿವ ನೀರಿನಲಿ
ತೇಲುವುದನು ಕಂಡೆ,
‹ಅಯ್ಯೊ!› ಎಂದು ನೀ ಬಾಯ ಕೆಳಗೆ ಬೆರ-
ಳಿರಿಸಿ ನಿಂತುಕೊಂಡೆ!

೩

ಸರಿಯುತಿರ್ದ ಕೊಡ ನೋಡಿ ತಡೆಯದಲೆ
ಹರಿವ ಹೊನಲಿನಲ್ಲಿ—
ಹರಿದು ಈಸಿ ಕೊಡ ತಂದು ಇರಿಸಿದೆನೆ
ನಿನ್ನ ಎದುರಿನಲ್ಲಿ;
ಅರಳಿತಾಗ ಮೊಗವರಳಿನಂತೆ ಆ
ಸಂಜೆಗೆಂಪಿನಲ್ಲಿ
ಕುರುಳು ಕುಣಿದುವಾ ತುಂಬಿಯಂತೆ ಪೂ-
ಗುಡಿಯ ಮುಸುಕಿನಲ್ಲಿ!

೪

ಕಣ್ಣು—ಕಣ್ಣು ಕೂಡಿದುವು ಚೆನ್ನೆ ಆ
ನೆಟ್ಟ ನೋಟದಲ್ಲಿ;
ಕಣ್ಣು ಕಣ್ಣ ಮಾತಾಡಿ ಕುಣಿದುವಾ
ಚೆಲುವಿನಾಟದಲ್ಲಿ;
ಬನ್ನದಲಿಯೆ ಅಗಲಿದುವು ನೋಟವಂ-
ದೊಂದನೊಂದು ಬಿಟ್ಟು
ಹೆಣ್ಣೆ, ನಡೆದೆ ನೀ ಮನೆಯ ಕಡೆಗೆ ಕೊಡ
ತಲೆಯ ಮೇಲೆ ಇಟ್ಟು.

೫

ನೀರ ತರುವ ನೆಪದಿಂದ ನೀನು, ನಾ
ಬಟ್ಟೆ ತೊಳೆಯಲೆಂದು—
ಸೇರತೊಡಗಿದೆವು ಹೊಳೆಯ ತೀರದಲಿ
ನಿತ್ಯ ಬಿಡದೆ ಬಂದು;
ಓರೆಗಣ್ಣಿನಿಂದೆಸೆದ ಕಣೆಗಳೆ-
ನ್ನೆದೆಯ ಸೇರಿಕೊಂಡು,
ಸೂರೆಗೊಂಡುವಾನಂದ-ಶಾಂತಿಗಳ-
ನೊಳಗೆ ಹುದುಗಿಕೊಂಡು!

೬

ಕೊನೆಗೆ ಒಂದು ದಿನ ಕೂಡಿ ನಿಂತೆವಾ
ಮನೆಯ ಬನದ ಬಳಿಯೆ,
ಮನದೊಳುಕ್ಕಿ ಮನವಾರೆ ಹರಿಯಿತಾ
ಪ್ರೇಮರೂಪಿ ಹೊಳೆಯೆ;
ಸನಿಹದೊಳೇ ನಿಂದಿದ್ದ ನಲ್ಲೆ ಈ
ಲೋಕವನ್ನೆ ಮರೆತು—
ನನಸು-ಕನಸಿನುಯ್ಯಾಲೆಯಲ್ಲಿ ಜೀ-
ಕುತ್ತ ಮೈಯ ಮರೆತು!

೭

ಕೈಗೆ ಕೈಯ ಕೂಡಿಸಲು ಎದ್ದು ಕೋಲ್-
ಮಿಂಚು ಮಿಂಚಿತೊಳಗೆ
ಮೈಯಿ ನಿಮಿರಿ ಬೆವರೊಡೆದು ಬಳುಕಿತಾ
ಬಾಳ ಬೆಳಕಿನೊಳಗೆ;
ನೀರ ಬಿಂದು ಹೊರಬಂದು ನಿಂದುವಾ
ಕಣ್ಣ ಕುಣಿಕೆಯಲ್ಲಿ,
ಧಾರೆ-ಧಾರೆಯಾಗಿಳಿದುವಲ್ಲಿ ಸುಖ-
ದುಃಖ ಮಿಲನದಲ್ಲಿ.

೮

ಕುಸುಮವೆರಡನೊಡನೆರಸಿ ಬಿಟ್ಟತಾ
ಒಲವುದುಂಬಿ ಬಂದು;
ಹಸಿದ ಹೃದಯಗಳ ತಣಿಸಿತಂದು ಆ
ಸಾಮರಸಿಯ ಸಿಂಧು!
ತಿಂಗಳೆರಡು ಈಗರಳಿ ಹೋದುವೀ
ಪ್ರೇಮತಾರೆ ಮೂಡಿ—
ತಂಗಾಳಾಯಿತಾಗಂದು ಸವಿದ ಸುಖ
ಕಾಲದಲ್ಲೆ ಕೂಡಿ!

೯

ಮೈಯ ಕೈಯ ಮುಟ್ಟಿದರೆ ಈಗ ಆ
ನವಿರು-ಬೆವರು ಇಲ್ಲ!
ಒಯ್ಯನೊಯ್ಯನೇ ಸರಿಯುತಿರುವುದಾ
ಮಿಂಚು ರಾಜ್ಯವೆಲ್ಲ!
ಕಾರಣವೇನಿದಕೆಲ್ಲವೆಂದು ನೀ
ಕೇಳ್ವೆಯೆನಿತು ನೀರೆ,
ಕಾರಣವಿದು ನಾವ್ ಮದುವೆಯಾದುದೇ
ಮರೆಯಬೇಡ ಬಾರೆ!

ನಾಳಿನಾ ನಾಡು!

ಲೇಖನಾಂಕ ೧

ಶ್ರೀ. ನೆಗಳೂರ ರಂಗನಾಥ ಎಂ. ಎ., ಬಿ. ಟಿ.

●

ಸದ್ಯದ ಯುದ್ಧವು ಎಂದು ಮುಗಿವುದೆಂದು ಹೇಳಲು ಬಾರದಿದ್ದರೂ, ಬೇಗನೆ ಮುಗಿವ ಚಿಹ್ನಗಳು ಮಾತ್ರ ಕಾಣತೊಡಗಿವೆ. ಯುದ್ಧದ ಬಗ್ಗೆ ಜನತೆಯೀಗ ಹೆಚ್ಚು ಆಸಕ್ತಿ ತೋರದಂತಾಗಿದೆ. ಯುದ್ಧದ ಸುದ್ದಿಯೀನು ಜನಮನವನ್ನು ಆಕರ್ಷಿಸದಂತಾಗಿದೆ. ಯಾರನ್ನು ಮಾತನಾಡಿಸಿದರೂ ಯುದ್ಧಾನಂತರದ ಆಶೆ-ಆಕಾಂಕ್ಷೆಗಳ—ಹಂಚಿಕೆ ಹವಣಿಕೆಗಳ—ವಿವರವೆ ಸಿಕ್ಕುವುದು. 'ಯುದ್ಧವು ಬೇಗನೆ ಮುಗಿಯಬಹುದು—ಮುಗಿಯಬೇಕು' ಎಂಬ ವಿಚಾರ ಎಲ್ಲೆಡೆಯಲ್ಲಿಯೂ ಬಲವತ್ತರವಾಗತೊಡಗಿದೆ. ಯುದ್ಧದಿಂದ ಜನತೆ ಬೇಸರುಗೊಂಡಿದೆ. ಯುದ್ಧವು ಕೊನೆಯ ರಂಗವನ್ನೂ ಮುಟ್ಟಿದೆ ಯೆಂಬುದು ವಾತಾವರಣ ನಿರೀಕ್ಷಿಸಿದರೆ ತಿಳಿಯದಿರದು. ಮುಗಿಯಲಿದೆ ಯುದ್ಧ! ಬೇಗನೆ ಮುಗಿಯಲಿದೆ! ಎಷ್ಟು ಬೇಗ? ಎಂದು?.... ಎಂಬುವನ್ನು ಮಾತ್ರ ನಿಶ್ಚಿತವಾಗಿ ಹೇಳಲಿಕ್ಕೆ ಇನ್ನೂ ಆಗದು! 'ಬೇಗನೆ ಮುಗಿಯುತ್ತದೆ' ಎಂಬ ಎಣಿಕೆ ದೃಢತರವಾಗತೊಡಗಿದೆ ಇದು ಒಳ್ಳೆಯ ಲಕ್ಷಣ.

ಯುದ್ಧ ನಿಂತು ವ್ಯವಹಾರವು ಸಾಮಾನ್ಯ (Normal) ಮಟ್ಟಕ್ಕೆ ಬಂದರೂ, ಜಗತ್ತು ಯುದ್ಧಪೂರ್ವದ ಅವಸ್ಥೆಗೆ ಬಂದೀತೆಂಬ ನಿಯಮವಿಲ್ಲ; ಬರುವುದೂ ಇಲ್ಲ. ಕಾಲ ಬದಲಾಗಿರುವುದು. ಪರಿಸ್ಥಿತಿ ಬದಲಾಗಿರುವುದು. ಕಾಲ-ಪರಿಸ್ಥಿತಿಗಳ ಬದಲಾವಣೆಯಿಂದ ಯುದ್ಧದ ನಂತರ ಹೊಸ ಜಗತ್ತು ಬರಲಿರುವುದು. ಹಳೆಯ ವಾತಾವರಣದಲ್ಲಿ ಬೆಳೆದು—ಒಮ್ಮೆಲೆ ಯುದ್ಧಜನ್ಯ ಪರಿಸ್ಥಿತಿಯಲ್ಲಿ ಬೆಂದು ಬಳಲಿ ಹೊರಬಂದು ನೋಡಿದರೆ, ಜಗತ್ತು ಹೊಸರೂಪ ಧರಿಸಿರುವುದು ಕಂಡು ಬರುವುದು. ಹೊಸಕಾಲ-ಪರಿಸ್ಥಿತಿಗಳನ್ನು ಅನುಲಕ್ಷಿಸಿ ಬಾಳನ್ನು ಸರಿಪಡಿಸಬೇಕಾಗುವುದು. ಹಾಗೆ ಸರಿಪಡಿಸುವ ಕಾರ್ಯದ ಕಲ್ಪನೆ ಈಗಾಗಲೆ ಅನೇಕರ ತಲೆಯಲ್ಲಿ ಮೂಡಿದೆ. ಅಲ್ಲಲ್ಲಿ "ಪುನರ್ರಚನೆ"ಯ ಮುಸುಕಿನ ಮರೆಯಲ್ಲಿ ಕಾಣುತ್ತಲೂ ಇದೆ. ಕಲ್ಪನೆಯನ್ನು ಕಾರ್ಯದ ಮಟ್ಟಕ್ಕೆ ಇಳಿಸುವ ಪ್ರಯತ್ನಗಳು ನಡೆದಿವೆ. ಯುದ್ಧವನ್ನು ಹೇಗೆ ಕೊನೆಗಾಣಿಸಬೇಕೆಂಬ ಸಮಸ್ಯೆಗಿಂತ, ಯುದ್ಧವು ... ವ ಹೊಸ ಪರಿಸ್ಥಿತಿಯನ್ನು ಸಾವಧಾನವಾಗಿ ಹೇಗೆ ಎದುರಿಸಬೇಕೆಂಬುದೆ ಈಗಿನ ಸಮಸ್ಯೆಯಾಗಿದೆ. ಈ ಸಮಸ್ಯೆಯ ವಿಚಾರವೂ ನಡೆದಿದೆ. ಅನೇಕರು ಅನೇಕ ಹಂಚಿಕೆಗಳನ್ನು ಮುಂದೆ ಮಾಡಿದ್ದಾರೆ.

ಹಂಚಿಕೆಗಾರರೆಲ್ಲರೂ ಹೊಸ ಜಗತ್ತನ್ನೆ ಕಣ್ಮುಂದೆ ಇಟ್ಟುಕೊಂಡವರಾಗಿದ್ದಾರೆ. ಆ ಹೊಸ ಜಗತ್ತಿಗೆ ಸದ್ಯದ ಯುದ್ಧ ಪರಿಸ್ಥಿತಿಯೂ ಇದಕ್ಕೂ ಮೊದಲಿನ ಪರಿಸ್ಥಿತಿಯೂ ತಳಹದಿಯಾಗಿದ್ದರೂ, ನೆಟ್ಟ ನೋಟವು ಮಾತ್ರ ಹಂಬಲಿಸುವ ಆ ಮುಂಬರುವ ಹೊಸ ಜಗತ್ತಿನ ಕಡೆಗೆಯೆ; ನಾಳಿನ ಜಗತ್ತಿನ ಕಡೆಗೆಯೆ! ಇಂದು ಎಲ್ಲ ವಿಚಾರವಂತರು ನಾಳೆಯ ಜಗತ್ತಿನ ಕನಸನ್ನು ಕಾಣುತ್ತಲಿದ್ದಾರೆ. ನಾಳೆಯ ಜಗತ್ತು ಸುಖಮಯವಾಗಬೇಕೆಂದು ಬಯಸುತ್ತಿದ್ದಾರೆ. ನಿನ್ನೆ-ಇಂದಿಗಿಂತಲೂ ಹೆಚ್ಚು ಮುಂದುವರೆಯಬೇಕೆಂಬ ಕುತೂಹಲವುಳ್ಳವರಾಗಿದ್ದಾರೆ. ಕಾಲಕಾಲಕ್ಕೆ ಬರುತ್ತಿರುವ ಈ ಯುದ್ಧಗಳನ್ನು ತಪ್ಪಿಸುವ ವಿಚಾರಕ್ಕೆ ಹೆಣಗುತ್ತಿದ್ದಾರೆ. ಯಾವ ಪದ್ಧತಿಯನ್ನು ಅನುಸರಿಸಿದರೆ ಹೆಚ್ಚಿನ ಸುಖ ದೊರೆತೀತು? ಇಂದಿನವರೆಗೆ ನಡೆದು ಬಂದ ಬಾಳಿನ ಚರಿತ್ರೆ ಯಾವ ಪಾಠವನ್ನು ಕಲಿಸುತ್ತಿದೆ? ಹಿಂದಿನ ಸಂಗತಿಗಳಿಂದ ಪಾಠ ಕಲಿಯದೆ ಹೋದರೆ, ಇತಿಹಾಸವು ಮಾನವನಿಗೆ ಉಪಯೋಗವಿಲ್ಲದಂತಾಗುವುದಲ್ಲ!

ಹಿಂದಿನ ಸಂಗತಿಗಳು—ಅವುಗಳಿಂದಾದ ಇಂದಿನ ಪರಿಣಾಮ—ಕಲಿತಪಾಠ—ಮುಂದೆ ಅನುಸರಿಸಬೇಕಾದ ವಿಚಾರ-ಪದ್ಧತಿ ಇದೇ ಇದೆ....ಎಲ್ಲರ ಮನದಲ್ಲಿ,—ವಿಚಾರದಲ್ಲಿ.

ನಾಳೆಯ ಜಗತ್ತಿನಲ್ಲಿ ಭಾರತದ ಸ್ಥಿತಿಯೇನು? ನಾಳೆ ಜಗತ್ತು ಹೇಗಾಗುವುದು ಇದರ ಮೇಲೆಯೆ ಅವಲಂಬಿಸಿದೆ ಭಾರತದ ಸ್ಥಿತಿಗತಿ. ರಾಜಕೀಯದಲ್ಲಿ ಸಾಮ್ರಾಜ್ಯವಾದವೆ ಮೇಲುಗೈ ಪಡೆದರೆ, ನವಭಾರತವು ಮುಗ್ಗರಿಸಿತೆಂದೇ ತಿಳಿಯಬೇಕು. ರಾಷ್ಟ್ರವಾದವು ತಲೆಯೆತ್ತಿದರೆ, ಮತ್ತೆ ಯುದ್ಧ ಕಟ್ಟಿಟ್ಟಂತೆಯೆ. ಜಾಗತಿಕ ಸಂಘವಾದವು ಮೇಲೇರಿ ಬಂದರೆ, ಭಾರತಕ್ಕೆ ತುಸು ಉಸಿರಾಡಿಸಲು ಅನುವು ದೊರೆವುದು. ಸದ್ಯದ ಯುದ್ಧದಿಂದ ರಾಷ್ಟ್ರವಾದವು ಸಂಕುಚಿತ ಭಾವದ ಪ್ರತೀಕವೆಂದು ಹೆಸರನ್ನು ಕೆಡಿಸಿಕೊಂಡಿದೆ. ಶಾಸ್ತ್ರೀಯ ಸಂಶೋಧನೆಗಳು ಜಗತ್ತನ್ನೇ ಒಂದು ಘಟಕವನ್ನಾಗಿ ಮಾಡಿವೆ. ಅತಿವೇಗದ ವಾಹನಗಳ ಮೂಲಕ ದೂರದೂರ ಹಂಚಿಹೋದ ಭೂಭಾಗಗಳು ಅತಿಸಮೀಪ ಬಂದಂತೆ ಆಗತೊಡಗಿದೆ. ಬೇರೆ ಬೇರೆ ದೇಶದಲ್ಲಿದ್ದ ಜನರು 'ತಾವು ಬೇರೆ ತಾವು ಬೇರೆ' ಎಂದು ತಿಳಿಯದೆ, 'ತಾವೂ ಮಾನವ ಕೋಟಿಗೆ ಸೇರಿದವರು. ಎಲ್ಲರೂ ಮಾನವರೆ? ಯಾರು ಹೆಚ್ಚು ಯಾರು ಕಡಿಮೆ?' ಎಂಬ ವಿಚಾರದ ಸುಳಿದಾಟವನ್ನು ಕಾಣುತ್ತಲಿದ್ದಾರೆ. ಇಷ್ಟೆಲ್ಲ ವಿಚಾರಸುಳಿಗಳ ತಿಕ್ಕಾಟದಲ್ಲಿ ಪರಿಪಾಕ ಹೊಂದಿ, ಹೊಸವಿಚಾರವೊಂದು ಬರುವುದು ಖಂಡಿತ. ಆ ಹೊಸ ವಿಚಾರವು ಸದ್ಯ ಪ್ರಚಲಿತವಿದ್ದ ಸಾಮ್ರಾಜ್ಯವಾದಕ್ಕೂ ಮನ್ನಣೆ ಕೊಡುವುದಿಲ್ಲ; ಸಂಕುಚಿತ ರಾಷ್ಟ್ರವಾದಕ್ಕೂ ಮನ್ನಣೆ ಕೊಡುವುದಿಲ್ಲ. ಅದು ಹೊಸ ಜಗತ್ತಿನ ಪದ್ಧತಿ. ಅದರ ರೀತಿ-ನೀತಿಗಳೆ ಬೇರೆ. ಸದ್ಯ ಹೆಸರು ಕೆಡಿಸಿಕೊಂಡು ಕೊಳೆತ ಪದ್ಧತಿಗಳ ಸೋಂಕು ಮಾತ್ರ ಅದಕ್ಕೆ ಹತ್ತಬಾರದು. ಹೊಸದೊದ ಮೇಲೆ ಹತ್ತಲಿಕ್ಕಿಲ್ಲವೆಂದೇ ತಿಳಿಯೋಣ.

'ಹೊಸ ಜಗತ್ತಿನ ರೂಪು ಯಾವುದೆ ಬಗೆಯದಾಗಲಿ, ಭಾರತದ ಭವಿಷ್ಯ ಮಾತ್ರ ಉಜ್ವಲವಿದೆ,' ಎಂದು ಭಾಸವಾಗತೊಡಗಿದೆ. ಹಿಂದಿನ ಭಾರತ ಇಂದು ಇಲ್ಲ; ಇಂದಿನದು ನಾಳೆ ಉಳಿವುದಿಲ್ಲ. ಅದರೆ ನಿನ್ನೆ-ಇಂದು—ನಾಳೆಗಳ ಸಂಗತಿಗಳನ್ನು ಸಾಲಾಗಿರಿಸಿ ನೋಡಿದರೆ, ನಿನ್ನೆ-ಇಂದಿನ ಸ್ಥಿತಿಗೂ ನಾಳೆಯ ಗತಿಗೂ ಮಹದಂತರಕಾಣುವುದು ನಿನ್ನಿನದು ದಾರಿದ್ರ್ಯ—ಗುಲಾಮಗಿರಿಗಳ ಯುಗವಾಯಿತು. ಇಂದಿನದು

ಪ್ರಯೋಗಕಾಲದ ಸಂಕಟಯುಗವಾಗಿದೆ. ನಾಳೆಯದು ಹೊಸ ಹುರುಪಿನ, ಹೊಸರೂಪಿನ ಉದಯಕಾಲ—ಭಾಗ್ಯಕಾಲವಾಗುವು-ದೆಂದು ಎನ್ನಿಸುತ್ತಿದೆ.

ಬರಬಹುದಾದ ಈ ಭಾಗ್ಯಕಾಲದ ಕನಸುಕಾಣುತ್ತ ಕುಳ್ಳಿರು-ವುದು ಮಾತ್ರ, ಹೊಸ ಜಗತ್ತಿನ ಹೊಸರೂಪಿನ ಲಕ್ಷಣವಲ್ಲ. ವಿಚಾ-ರಿಸಬೇಕು. ಹಿಂದು-ಇಂದು-ಮುಂದಿನ ಸ್ಥಿತಿಗತಿಗಳನ್ನು ತಿಳಿಯ ಬೇಕು. ನಾವಾರು? ಹೇಗಿದ್ದೆವು? ಏನು ಮಾಡಿದೆವು? ಏನು ಮಾಡುತ್ತಿದ್ದೇವೆ? ಏನು ಮಾಡುವ ಶಕ್ತಿ ನಮ್ಮಲ್ಲಿದೆ? ಆ ಶಕ್ತಿ ಇದೆ ಎಂದು ನಮಗೆ ತಿಳಿದಿಲ್ಲವೆ? ನಮ್ಮ ಶಕ್ತಿಯ ಅಳವು ಹೆರವರಿಗೂ ತಿಳಿದಿಲ್ಲವೆ? ಯುದ್ಧವು ಭಾರತದಲ್ಲಿ ಮರೆಗೊಂಡಿದ್ದ ಶಕ್ತಿಗಳನ್ನು ಅನೇಕ ಮುಖವಾಗಿ ಹೊರಗೆಳೆದಿದೆ. ಹೊರಬಂದ ಶಕ್ತಿಗಳನ್ನೂ ಭಾರತೀಯರು ಕಂಡಿದ್ದಾರೆ. ಭಾರತೀಯರ ಎಚ್ಚತ್ತ ಪರಿಸ್ಥಿತಿಯನ್ನು ಹೆರವರು ತಿಳಿಯತೊಡಗಿದ್ದಾರೆ. ಮುಖ್ಯವಾಗಿ ಈ ಯುದ್ಧದ ಮೂಲಕ ಭಾರತದ ಸಂಪತ್ತು ಬಯಲಿಗೆ ಬಂದಿದೆ. ತರುಣಸಂಪತ್ತು, ಶಕ್ತಿ ಸಂಪತ್ತು, ಬುದ್ಧಿಸಂಪತ್ತು, ಬೆಳಕಿಗೆ ಬಂದು, ಲೋಕವನ್ನೆ ಬೆರಗು ಪಡಿಸಿದೆ.

ಮಾನವನ—ದೇಶದ—ಜಗತ್ತಿನ—ಪ್ರಗತಿಗೆ ಮೂಲಜ್ಞಾನ ವೆಂದರೆ ಆತ್ಮಜ್ಞಾನ. 'ತಾನಾರು? ತನ್ನ ಸ್ಥಿತಿಯೇನು?' ಎಂಬುದರ ವಿಚಾರ ಮಾಡಿತೆಂದರೆ ಆ ವ್ಯಕ್ತಿಯ—ದೇಶದ—ಉದ್ಧಾರವಾಗ-ತೊಡಗಿತು ಎಂದು ತಿಳಿಯಲು ಅಡ್ಡಿಯಿಲ್ಲ.

ಇಂದು ಭಾರತವು ಹಾಗೆ ಎಚ್ಚತ್ತಿದೆ. ನಾಳೆಯ ಪರಿಸರದಲ್ಲಿ ತನಗೂ ಒಂದು ವಿಶಿಷ್ಟಸ್ಥಾನ ಸಿಕ್ಕಬೇಕೆಂದು ಹಂಬಲಿಸುತ್ತಿದೆ. ಆ ಸ್ಥಾನ ಸಿಕ್ಕಲಿ ಬಿಡಲಿ; ಈ ಹಂಬಲು ಮುಖ್ಯ. ಹಂಬಲು ಇಲ್ಲದೆ ಹೆರ-ವರ ಆಶೀರ್ವಾದದ ಬಲದಿಂದ ಸ್ಥಾನ-ಮಾನ ಸಿಕ್ಕರೂ ಯೋಗ್ಯತೆಯ ಅರಿವಿಲ್ಲದೆ ಹೋಗುತ್ತಿತ್ತು. ಈಗ ಸ್ಥಾನ-ಮಾನ ಸಿಕ್ಕದಿದ್ದರೂ ಯೋಗ್ಯತೆಯ ಅರಿವು ಬರತೊಡಗಿದೆ. ಯೋಗ್ಯತೆಯ ಅರಿವು ಬಂದ ಮೇಲೆ ಸ್ಥಾನಗಳಿಸುವುದೂ ಮಾನ ದೊರೆಕಿಸುವುದೂ ಮುಂದೆ ಒಂದೆ ಹೆಜ್ಜೆ; ಸುಲಭವಾದ ಹೆಜ್ಜೆ; ಹೆಮ್ಮೆಯ ಹೆಜ್ಜೆ!

ನಿನ್ನೆಯ ಭಾರತ ಒಕ್ಕಲುತನದ ದೇಶ; ಬರಗಾಲ-ಬವಣೆಗಳ ಬೀಡು; ಆಳರಸರ ಗುಲಾಮಗಿರಿಯಲ್ಲಿ ನೈ ಮರೆತ ಕೈಯಾಳು. ಅಕ್ಷರಶತ್ರುಗಳ ನಾಡು. ಪಕ್ಷಪಂಗಡಗಳ ಗೂಡು. ಭಿಕ್ಷುಕರ ನೆಲೆ ವೀಡು—ಹಿಂದುಳಿದ ಕಂಗಾಲಾಗಿ ಕೈಸೋತ ಆಳಾಗಿ ಹವಗೆಟ್ಟ ನಾಡು!

ಯುದ್ಧ ಬಂತು! ಬಂತು! ಪರಿಸ್ಥಿತಿಯು ಬದಲಾಯಿತು. ಒಕ್ಕಲುತನವಲ್ಲದೆ ಜನಮನವನ್ನು ಉದ್ಯಮಗಳ ಕಡೆಗೆ ಎಳೆಯ ಲಾಯಿತು. ಬರಗಾಲಬವಣೆಗಳು ಹೆಚ್ಚಿದುವು. ಜನತೆ ಹೆಚ್ಚಿಗೆ ಕಂಗಾಲಾಯಿತು. ಬಂಗಾರದ ಹೊಗೆ ಹಾಯುವ ಭಾರತದಲ್ಲಿ ಅಡುಗೆಯ ಹೊಗೆಗೂ ಅವಕಾಶವಿಲ್ಲದಂತಾಯಿತು. ಜನತೆ ಕಣ್-ದೆರೆಯಿತು. ವಿಚಾರಕ್ಕೆ ಎಡೆಯಾಯಿತು. ಇಷ್ಟು ದಿನಗಳ ವರೆಗೆ ನೆಮ್ಮದಿಯಿಂದ ಮನೆಯಲ್ಲಿ ಕುಳಿತು ಕಾಲಕಳೆದು, ಸರಕಾರವು ಸೌಖ್ಯ-ದಾಯಿಯೆಂಬ ಭ್ರಮೆಯಲ್ಲಿದ್ದುದು, ಇಂದು ಸರಕಾರವೆ ಕುಳಿತು ಲಕ್ಷಾಪತಿ ಜನರನ್ನು ಮಣಕ್ಕೀಡು ಮಾಡಿದ ಸಂದರ್ಭ ಕಂಡುಕೊಂಡಿತು. "ಹರಕೊಲ್ಲಲ್ ಪೆರಕಾವನೆ" ಎಂಬ ಹತಾಶವಾದ ಕೂಗು ಬಂದರೂ, ಕೊಲ್ಲುವವರಾರೆಂಬ ಅರಿವು ಬಂತು. ಭಾಗ್ಯದ ಭಾಂಡಾರವಾದ ಬಂಗಾಲದಲ್ಲಿಯೂ ಬರಗಾಲದ ನರಕ ಕಂಡುಬಂತು. ಮೇಲಿನವರ ಮೇಲಿನ ವಿಶ್ವಾಸ ಹಾರಿಹೋಗಿ, ತಮ್ಮರಿವು ಹೆಚ್ಚಾಗತೊಡಗಿತು.

"ನಮ್ಮ ನಾಡವರೆ ಸರಕಾರ ನಡೆಯಿಸಿದರೆ ಒಳ್ಳೆಯ ಸ್ಥಿತಿ ಬರುವುದು!" ಎಂಬ ವಿಚಾರಕ್ಕೂ ಪೋಷಣೆ ಸಿಕ್ಕಿತು. ಯುದ್ಧ ಪೂರ್ವ ಕೆಲಕಾಲ ಆಳಿದ ಕಾಂಗ್ರೆಸ್ ಸರಕಾರದ ಚಿತ್ರ ಒಂದೆಡೆ; ಅದರ ನಂತರದ ಬಲಿದಾನ ಮತ್ತೊಂದೆಡೆ. 'ನಮ್ಮವರು ಹಿತಕರ ವಾಗಿ ಪ್ರಗತಿಪರವಾಗಿ ಆಳಬಲ್ಲರು' ಎಂಬ ವಿಚಾರದಂತೆಯೆ 'ಹೆರವರ ಕೈಯಲ್ಲಿಯ ಅಧಿಕಾರ ನಮ್ಮವರ ಗಂಟಲ ಗಾಣ!' ಎಂಬುದರ ತಿಳಿವೂ ಈ ಯುದ್ಧದಿಂದ ಬಂತು. 'ನಮ್ಮ ಜನರಿಂದಲೆ ನಮಗೆ ಸುಖ-ಸಂಪತ್ತು; ನಮ್ಮ ಸರಕಾರದಿಂದಲೆ ನಮ್ಮ ಉದ್ಧಾರ!' ಎಂಬದು ದೃಢ ವಾಗತೊಡಗಿತು.

'ನಿರಕ್ಷರಿಗಳ ದೇಶ'ವೆಂದು ಕಂಡವರೂ ಕೂಗಿ ನಮ್ಮನ್ನು ಕಸಿ-ವಿಸಿ ಪಡಿಸಿದರು. ಕಾಂಗ್ರೆಸ್ ಸರಕಾರದ ಒಂದೆರಡು ವರ್ಷಗಳ ಆಳ್ವಿಕೆಯಲ್ಲಿ, ಹಿಂದಿನ ಆಳ್ವಿಕೆಯ ೫೦ ವರುಷಗಳಲ್ಲಿ ಆಗದ ಪ್ರಗತಿ ಯಾದುದು ಅನೇಕರಿಗೆ ಇನ್ನೂ ಆಶೆ ಹುಟ್ಟಿಸುತ್ತದೆ. ನಮ್ಮ ದುಃಖದ ಆಳ ನಮ್ಮ ಜನತೆಗೇ ತಿಳಿವುದು.

ಆಳುವವರು ಒಂದು ಮಾತನ್ನು ಗುರಿಯವಾಗಿಟ್ಟುಕೊಂಡಿದ್ದಾರೆ. "ಆಳಬೇಕಾದರೆ, ಭೇದೋಪಾಯವನ್ನು ಅನುಸರಿಸು!" ಭೇದೋ-ಪಾಯದಿಂದ ಆಳಬೇಕೆಂದು ನಡೆಯಿಸಿದ ಪ್ರಯತ್ನ ಹಿಂದಿನ ಎಲ್ಲ ಸಾಮ್ರಾಜ್ಯಗಳಲ್ಲಿಯೂ ಸಾಧಿಸಿದೆ. ಎಂದು ಜನತೆ ಈ ಭೇದೋಪಾ ಯವನ್ನು ಭೇದಿಸಿತೊ ಅಂದೆಯೆ ಸಾಮ್ರಾಜ್ಯ ಮಣ್ಣುಗೂಡಿತು. ಹೀಗೆ ಭೇದೋಪಾಯವನ್ನು ಭೇದಿಸಿ, ಪಕ್ಷ-ಪಂಗಡಗಳಲ್ಲಿ ಒಕ್ಕಟ್ಟು ಬೆಳೆಯಿಸಬೇಕೆಂಬ ಪ್ರಯತ್ನಗಳು—ವಿಶ್ವಪ್ರಯತ್ನಗಳು ನಡೆದುದು ಸಾಮ್ರಾಜ್ಯವಾದಿಗಳಿಗೆ ಕಾಟ್ಕೊಡಕು. ಆದರೆ ನಮ್ಮ ನಾಡಿಗೆ ಅದು ಒಂದು ಹೆಜ್ಜೆ ಮುಂದು.

ಸದ್ಯದ ಯುದ್ಧವು ಎರಡು ಮಾತುಗಳನ್ನು ಕಲಿಸಿದೆ:—

(೧) ನಮ್ಮ ಸರಕಾರದಿಂದಲೆ ನಮ್ಮ ಉದ್ಧಾರ.

(೨) ಸರಕಾರ ನಡೆಯಿಸುವ ಶಕ್ತಿಸಾಮರ್ಥ್ಯ, ಕೈವಾಡ, ಬ್ರಿಟಿ-ಶರ ಗುತ್ತಿಗೆಯಲ್ಲ; ನಮ್ಮಲ್ಲಿಯೂ ಇದೆ. ಯಾವುದೆ ಜಗತ್ತಿನ ರಂಗ ದಲ್ಲಿ ಭಾರತೀಯರು ಹಿಂದೆ ಇಲ್ಲ ಎಂಬುದು ಸಿದ್ಧವಾದುದು—ಇದೇ ಆತ್ಮಜ್ಞಾನ.

ಈ ಎರಡು ಪಾಠಗಳಿಂದ ನಾವು ಬಹಳ ಕಲಿತಿದ್ದೇವೆ. ನಾವೂ ಉಳಿದವರಂತೆ ಸಮಭಾವದಿಂದ ಬಾಳಬೇಕು. ಉಳಿದವರಂತೆ ನಮ್ಮ-ಲ್ಲಿಯೂ ಶಕ್ತಿ-ಸಾಮರ್ಥ್ಯ, ಜಾಣ್ಮೆ ಇದೆಯಲ್ಲ' ನಾವೇಕೆ ಮುಂದೆ ಬರ ಬಾರದು? ಏಕೆ? ಏಕೆ?

ಈ ಬಗೆಯ ವಿಚಾರಸರಣಿಯು ಭಾರತೀಯರನ್ನು ಅನೇಕ-ಮುಖವಾಗಿ ಮುಂದೆತರಲಿದೆ. ಭಾರತದ ಪರಿಸ್ಥಿತಿಯನ್ನು ಸುಧಾರಿಸಬೇಕು. ಅದನ್ನಾದರೂ ನಾವೇ ಮಾಡಬಲ್ಲೆವೇ ವಿನಾ ಹೆರವರ ಹಿತವಾದದಿಂದಾಗುವುದಿಲ್ಲ—ಎಂದು ಜನ ಮನಗಂಡಿದೆ. ಹೀಗೆ ಮನಗಂಡುದರ ದ್ಯೋತಕವೆಂದೇ ಇಂದು ವಾತಾವರಣದಲ್ಲಿ ಭಾರತಕ್ಕಾಗಿ, ನಾಳೆಯ ಭಾರತಕ್ಕಾಗಿ ಅನೇಕ ಯೋಜನೆಗಳು ಬಂದಿವೆ—ಬರಲಿವೆ.

ಯಾವ ಯೋಜನೆಯನ್ನು ತೆಗೆದು ನೋಡಿದರೂ ಒಂದು ಮಾತು ಸ್ಪಷ್ಟಕಾಣುವುದು: ಭಾರತವು ತಲೆಯೆತ್ತಿ ನಿಲ್ಲಬೇಕಾದರೆ ಔದ್ಯೋಗೀಕರಣದ ಆವಶ್ಯಕತೆಯಿದೆ. ಕೇವಲ ಒಕ್ಕಲುತನ ನಮ್ಮನ್ನು ನೆಲಬಿಟ್ಟು ಮೇಲೆಬ್ಬಿಸಲಾರದು. ಕೇವಲ ನೆಲವನ್ನವನ್ನವಲಂಬಿಸಿದರೆ ಗುಲಾಮಗಿರಿಯು ತಪ್ಪಿದ್ದಲ್ಲ. ರಸಿಯದ ಉದಾಹರಣೆ ಸ್ಫುಟವಾಗಿ ನಿಂತಿದೆ. ಔದ್ಯೋಗೀಕರಣವೇ ಭಾರತದ ಬೇಗುದಿಗೆ ದಿವ್ಯ ರಸಾಯನ.

ಈಗ ಎಲ್ಲರ ತಲೆಯಲ್ಲಿರುವುದು ಇಷ್ಟು: ಭಾರತವು ತಲೆಯೆತ್ತಿ ನಿಲ್ಲಬೇಕು; ಔದ್ಯೋಗೀಕರಣವೆ ತಲೆಯೆತ್ತಿ ನಿಲ್ಲಲು ಸಹಾಯಕ; ನಾಳೆಯ ಭಾರತವನ್ನು ಚಿತ್ರಿಸಿಕೊಳ್ಳುವವರು ಬೇಸಾಯದ ಭಾರತ-ವನ್ನು ನೋಡುವುದಿಲ್ಲ; ಔದ್ಯೋಗೀಕೃತ ಭಾರತ. ಅದಕ್ಕೆ ಬೇಕಾದ ಕರ್ಮಕೌಶಲವನ್ನು ಈ ಯುದ್ಧ ಪರಿಸ್ಥಿತಿಯ ಮೂಲಕ ಜನತೆ ಪಡೆದಿದೆ. ಯುದ್ಧ ಪರಿಸ್ಥಿತಿಯ ಮೂಲಕ ಭಾರತವು ಇಂದು ಸಾಲಗಾರ ರಾಷ್ಟ್ರವಲ್ಲ; ಸಾಹುಕಾರ ರಾಷ್ಟ್ರವಾಗಿದೆ. ಒಂದೆಡೆಗೆ ಸಾಹುಕಾರಿಕೆ; ಇನ್ನೊಂದೆಡೆಗೆ ಕರ್ಮಕೌಶಲ; ಒಂದೆಡೆಗೆ ತಲೆಯೆತ್ತಿ ನಿಲ್ಲುವ ನಿರ್ಧಾರ; ಇನ್ನೊಂದೆಡೆಗೆ ಔದ್ಯೋಗೀಕರಣದಲ್ಲಿ ವಿಶ್ವಾಸ. ಈ ಸಂದರ್ಭವು ನಾಳೆಯ ಭಾರತವನ್ನು ವ್ಯವಸಾಯದ ಮಬ್ಬಿನಿಂದ ಎಬ್ಬಿಸದೆ ಬಿಡದು. ಉದ್ಯೋಗಗಳ ಕಡೆಗೆ ಹರಿಯಿಸದೆ ಬಿಡದು.

ಇವೆಲ್ಲ ಆಂತರಾಳ ವಿಚಾರಗಳಿಗೆ ಪುಟ ಸಿಕ್ಕು ಬೆಳೆಯಬೇಕಾದರೆ, ಭಾರತಕ್ಕೆ ರಾಷ್ಟ್ರೀಯ ಸರಕಾರ ಬೇಕು. ವಾತಾವರಣದಲ್ಲಿ ಅದರ ಸುಚಿಹ್ನಗಳೂ ಕಾಣತೊಡಗಿವೆ. ರಾಜಕೀಯ ಆಂದೋಲನದಿಂದ, ಭಾರತೀಯರ ಯುದ್ಧಸಹಾಯದಿಂದ ಇಂದು ಭಾರತೀಯರ ಅಧಿಕಾರವನ್ನು ಯಾರೂ ಅಲ್ಲಗಳೆಯಲಾರರು. ಒಂದು ವೇಳೆ ಅಲ್ಲ-ಗಳೆದರೆ ಪರಿಸ್ಥಿತಿ ವಿಕೋಪಕ್ಕೆ ಹೋಗುವುದು. ಪರಿಸ್ಥಿತಿ ವಿಕೋಪಕ್ಕೆ ಹೋಗದಂತೆ—ಭಾರತೀಯರ ತಲೆ ಕೆಡದಂತೆ—ನೋಡಿಕೊಳ್ಳಬೇಕೆಂದು ಸದ್ಯ ಆಳರಸರ ಮನದಲ್ಲಿ ಮೂಡತೊಡಗಿದೆಯೆಂಬುದು ಅನೇಕ ಸಂಗತಿಗಳಿಂದ ಗೊತ್ತಾಗುತ್ತಲಿದೆ. ಭಾರತೀಯರ ಮನಸ್ಸಿಗೆ ತಕ್ಕಂತೆ ರಾಷ್ಟ್ರೀಯ ಸರಕಾರದ ಸ್ಥಾಪನೆಯಾಗದಿದ್ದರೂ ಭಾರತೀಯರದೆ ಸರಕಾರ ಎನ್ನುವ ಭ್ರಮೆಯುಂಟಾಗುವಷ್ಟು ಅಧಿಕಾರ ಭಾರತೀಯರಿಗೆ ಸಿಕ್ಕೇ ಸಿಕ್ಕುವುದು; ಇದು ಮಾತ್ರ ಖಂಡಿತ.

ಅಂತರರಾಷ್ಟ್ರೀಯ ವಾತಾವರಣವೂ ಇದಕ್ಕೆ ಅನುಕೂಲವಾಗಿದೆ. ಇಂಗ್ಲೆಂಡ್, ಅಮೇರಿಕಾ, ರಶಿಯಾ ಇವುಗಳಲ್ಲಿ ಭಿನ್ನಾಭಿಪ್ರಾಯವುಂಟಾ-ಗಿದೆಯೆಂಬುದು ಪತ್ರಿಕೆಗಳಿಂದ ಸಿದ್ಧವಾಗಿದೆ. ಅವರವರ ಧೋರಣೆ-ಗಳ ಬಗೆಗೆ ತಿರಸ್ಕಾರ, ಅಸಹನೆ, ಅವಿಶ್ವಾಸ, ನಿಷೇಧಗಳೂ ವ್ಯಕ್ತವಾಗತೊಡಗಿವೆ. ಇಂದಿನವರೆಗೆ ಭಾರತವು ಇಂಗ್ಲಂಡಿನ ಆಂತರಿಕ ಆಡಳಿತದ ಮಾತಾಗಿದ್ದರೂ, ಇಂದು ಮಾತ್ರ ಅಮೇರಿಕೆಯ ಸಂಬಂಧ ಬೆಳೆಯುತ್ತಲಿದ್ದುದು ಕಂಡುಬರುತ್ತಿದೆ. ಯುದ್ಧದಲ್ಲಿ ಗೆದ್ದ ರಸಿಯವು ಭಾರತದ ತರುಣರ ವಿಚಾರಗಳನ್ನು ಸೆಳೆದಿದೆ. ಮುಖ್ಯತಃ ಕಂಡು-ಬರುವುದೇನೆಂದರೆ: ಭಾರತದ ವ್ಯಾಪಾರಿಗರ ಮನಸ್ಸು ಅಮೇರಿಕೆಯ ಕಡೆಗೆ ಹರಿಯತೊಡಗಿದೆ; ವಿಚಾರಿಗರ ಮನಸ್ಸು ರಸಿಯದ ಕಡೆಗೆ ಹರಿಯತೊಡಗಿದೆ. ಉನ್ಮಾದಕ್ಕೆ ಅವಕಾಶ ಕೊಡದ ವಿವೇಕವು ಚೀನದ ಕಡೆಗೆ ನೋಡುತ್ತಲಿದೆ. ಈ ಮೂರು ಪ್ರವಾಹಗಳು ಬ್ರಿಟಿಶರ ಆಡ-ಳಿತಕ್ಕೆ ಬಾರಕೋಲು ಆಗುವುದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ; ಬ್ರಿಟಿಶರ ಬಗ್ಗೆ ಅನಾಸಕ್ತಿ—ಅವಿಶ್ವಾಸ ಬೆಳೆಯುತ್ತಲಿದೆ; ಅಮೇರಿಕೆ-ರಸಿಯ-ಚೀನದ ಬಗ್ಗೆ ಆದರ—ವಿಶ್ವಾಸ ಹೆಚ್ಚುತ್ತಲಿದೆ.

ಯುದ್ಧದಲ್ಲಿ ಮೊಗ ಮೇಲೆ ಮಾಡಿಕೊಂಡುವು ರಸಿಯ—ಅಮೇರಿಕೆ. ರಸಿಯವು ತನ್ನ ಬುದ್ಧಿ, ಚಾಣಾಕ್ಷತನ, ಸೈನಿಕಶಕ್ತಿ, ಸಾಹಸಗಳಿಂದ ಮೇಲೆ ಬಂತು. ಅಮೇರಿಕೆಯಾದರೂ ಸೈನ್ಯಶಕ್ತಿ ಸಾಹಸಗಳಿಂದಲ್ಲದೆ ಧನ-ಸಾಮಗ್ರಿಗಳ ವೈಪುಲ್ಯದಿಂದ ಮೇಲೇರಿ ಬಂದಿದೆ. ಯಾವ ಮಾರ್ಗದಿಂದ ಬಂದರೂ ಏರಾಟದಲ್ಲಿ ಮೇಲಿನ ಸ್ಥಾನಗಳು ಅಮೇರಿಕೆ—ರಸಿಯಕ್ಕೆ ಸಿಕ್ಕುವುವು. ಇಂಗ್ಲಂಡ್ ಹಿಂದು-ಳಿಯುವುದು. ಆಗ ಅದು ಭಾರತೀಯರನ್ನು ಅಸಂತುಷ್ಟಗೊಳಿಸುವ ಗೋಜಿಗೆ ಹೋಗುವುದಿಲ್ಲ. ಇಂಗ್ಲಂಡಿಗೆ ಎದುರಾಳಿಗಳು ಹೆಚ್ಚು-ವರು. ರಸಿಯ-ಅಮೇರಿಕೆ-ಇಂಗ್ಲಂಡ್ ಈ ಮೂರು ಜನರೂ ಭಾರತವನ್ನು ತಮ್ಮ ತಮ್ಮ ಪ್ರಭಾವಕ್ಕೆ ಸಿಲುಕಿಸಬೇಕೆಂದರೆ, ಹೆಚ್ಚು ಸಾಧ್ಯವಾಗುವುದು ಇಂಗ್ಲಂಡಿನವರಿಗೆ. ಅವರು ಸಾಧ್ಯಮಾಡಿಕೊಳ್ಳಬೇಕಿದ್ದರೆ ಮೊದಲು ಅವರು ಭಾರತೀಯರ ವಿಶ್ವಾಸ ಪಡೆಯಬೇಕು. ಸರಕಾರದಲ್ಲಿ ಭಾರತೀಯರ ಬಹುಭಾಗ ಬಾರದ ವಿನಾ ಭಾರತೀಯರಿಗೆ ಇಂಗ್ಲಂಡಿನವರ ಮೇಲೆ ವಿಶ್ವಾಸ ಕೂಡದು. ಇಡಿಯದನ್ನು ಕಳೆದುಕೊಳ್ಳುವು-ದಕ್ಕಿಂತ ಅರ್ಧವನ್ನು—ಕೆಲಭಾಗವನ್ನು—ಕಳೆದುಕೊಳ್ಳುವುದು ಹಿತ-ವೆಂದು ಇಂಗ್ಲಿಶರಿಗೆ ಎನ್ನಿಸುವುದು. ಭಾರತೀಯರಿಗೆ ಅಧಿಕಾರ ಸಿಕ್ಕ ಕೂಡಲೆ, ಅರ್ಧಕಸುವು ಕಡಿಮೆಯಾಗುವುದು.

ಈ ಎಲ್ಲ ಕಾರಣವಿವೇಚನೆಯಿಂದ ಎರಡು ಮಾತುಗಳು ಹೊರ-ಬರುವುವು:

೧. ನಾಳೆಯ ಭಾರತದ ಏಳ್ಗೆಗಾಗಿ ಭಾರತದಲ್ಲಿ ಔದ್ಯೋಗೀ-ಕರಣವಾಗಬೇಕು.

೨. ಅದು ಯಶಸ್ವಿಯಾಗಬೇಕಾದರೆ ಭಾರತೀಯರಿಗೆ ಸರ-ಕಾರದಲ್ಲಿ ಹೆಚ್ಚು ಅಧಿಕಾರ ಬೇಕು.

ಈ ಎರಡು ಮಾತುಗಳನ್ನು ಲಕ್ಷ್ಯವಾಗಿಟ್ಟುಕೊಂಡು ಮುಂದಿನ ಮಾತುಗಳನ್ನು ಹೇಳಲಿರುವೆ.

———

ಅಡಕೆ

('ಕಿಂಚಿತ್ ವ್ಯಾವಹಾರಿಕ-ದ್ರವ್ಯ')

卐

ಶ್ರೀ. ಶಂ. ಬಾ. ಜೋಶಿ, ಧಾರವಾಡ

ಇಪ್ಪತ್ತು-ಇಪ್ಪತ್ತೈದು ವರುಷಗಳ ಹಿಂದೆ ಕವಡೆಗಳೂ ಒಂದು ವಿನಿಮಯದ ಸಾಧನವಾಗಿತ್ತು. ಒಂದು ದುಡ್ಡಿಗೆ ಅರುವತ್ತುನಾಲ್ಕು ಕವಡೆಗಳು ಬರುತ್ತಿದ್ದುವು. ಒಂದು ದುಡ್ಡಿಗಿಂತ ಕಡಿಮೆಯ ನಾಣ್ಯವನ್ನು ಕೊಟ್ಟು ಕೊಳ್ಳುವ ಎಡೆಗಳಲ್ಲಿ, ಕವಡೆಯನ್ನೇ ಬಳಸುವುದನ್ನು ನಾನು ಕಂಡಿದ್ದೇನೆ. ಪುಣೆಯಲ್ಲಿ ಈ ಪದ್ಧತಿಯು ೧೯೩೪ರ ವರೆಗೂ ಬಳಕೆಯಲ್ಲಿದ್ದಿತು. ಇದರಂತೆ ಅಡಕೆಯೂ ಒಂದು ಕಾಲಕ್ಕೆ ವ್ಯವಹಾರದಲ್ಲಿರಬೇಕೆಂದು ತೋರುತ್ತದೆ.

ಪಂಪನ ದ್ರೋಣನು ತಾನು ನಿರ್ಧನನೆಂದು ಹೇಳುವಾಗ, 'ಕೈಯ್ಯೊಳ್ ಅಡಕೆಯುಂ ಇಲ್ಲ,' (೨.೪೬) ಎನ್ನುತ್ತಾನೆ. ಇಲ್ಲಿ 'ಅಡಕೆ' ಎಂಬುದು ಪಡೆನುಡಿ (idiom). 'ಅಡಕೆ'ಯೆಂದರೆ ಅಡಕೆಯೆಂದೇ ಅರ್ಥವಲ್ಲ; ತೀರ ಕ್ಷುಲ್ಲಕವಾದ ನಾಣ್ಯವು ಕೂಡ ಕೈನಲ್ಲಿ ಇಲ್ಲವೆಂದು ಹೇಳುವ ಆಶಯವು ಇದರಲ್ಲಿದೆ.

ಯಾವುದಾದರೊಂದು ವ್ಯವಹಾರವನ್ನು ನಿರ್ಧರಿಸುವಾಗ, ತಕ್ಕೊಳ್ಳುವವನಿಗೆ ಅಡಕೆಯನ್ನು ಕೊಡುವ ವಾಡಿಕೆಯಿದೆ. ಇಂದು ಕೆಲಸಕ್ಕೊಂದು ಕನಿಷ್ಠ ಹಣವನ್ನು ಕೊಡುವುದು ಹೆಚ್ಚಾಗಿ ರೂಢವಾಗುತ್ತಲಿದೆ. ಇದುವೆ ಆ ಕೆಲಸಕ್ಕೆ ಸಂಚಕಾರ. ಹಿಂದಕ್ಕೆ ಸಂಚಕಾರದಂತೆ ಉಪಯೋಗಿಸುತ್ತಲಿದ್ದ ಅಡಕೆಯು, ಇಂದು ತಂಬುಲದೊಡನೆ ಸೇರಿ 'ವೀಳ್ಯ' ಕೊಡುವ ವಾಡಿಕೆಯಾಗಿ ಮಾರ್ಪಟ್ಟಿರಬೇಕು.

ಸಭೆ-ಸಮ್ಮೇಲನಗಳಲ್ಲಿ ದಕ್ಷಿಣೆಯ ರೂಪದಿಂದ—ಸನ್ಮಾನಾರ್ಥವಾಗಿ—ಕೊಡುವ ಕನಿಷ್ಠದ್ರವ್ಯವು ಅಡಕೆಯಾಗಿರಬೇಕು. ಈಗಲೂ ಒಂದು ದುಡ್ಡು ಅಥವಾ ಆಣೆಯೊಡನೆ ಅಡಕೆಯನ್ನೂ ಕೊಡುವ ಸಂಪ್ರದಾಯವಿದೆ. 'ಅಡಕೆಗೆ ಹೋದ ಮಾನ, ಆನೆಕೊಟ್ಟರೂ ಬಾರದು' ಎಂಬ ಗಾದೆಯು ಇದಕ್ಕೆ ನಿದರ್ಶನವಾಗಿದೆ ತಾನು ಯಾವ ಒಂದು 'ಅಡಕೆಹೂಗಿನೊಳಗೂ ಇಲ್ಲ' ಎಂಬ ಲೋಕೋಕ್ತಿಯು ಅಡಕೆಯ ದ್ರವ್ಯತ್ವವನ್ನೇ ಸಿದ್ಧಪಡಿಸುತ್ತಲಿದೆ. ಬಸವ ಪುರಾಣ (೬೧.೫೫)ದಲ್ಲಿ 'ಅಡಕೆ-ಹೂಗಿನ' ಮಾತು ಬರುತ್ತದೆ.

ಮರ್ಹಾಟಿಯ ರೂಢಿ, ಸಂಪ್ರದಾಯಗಳೂ ಇವಕ್ಕೆ ಬೆಂಬಲವನ್ನೀಯುತ್ತಿವೆ: ಮರ್ಹಾಟಿಯಲ್ಲಿ 'ಪೈಸಾ-ಅಡಕಾ' (ದುಡ್ಡು-ದುಗ್ಗಾಣಿ) ಎಂಬ ಜೋಡುನುಡಿಯೊಂದುಂಟು. ಇವೆರಡೂ ಕಾಗದ-ಪತ್ರವೆಂಬಂತೆ ಒಂದೇ ಅರ್ಥದ ಎರಡು ಮಾತುಗಳು. ಇಲ್ಲಿ 'ಅಡಕಾ' ಎಂಬುದು ದ್ರವ್ಯವಾಚಿಯೆಂಬಲ್ಲಿ ಸಂದೇಹವೇ ಇಲ್ಲ. ಮಹಾರಾಷ್ಟ್ರ ಶಬ್ದಕೋಶವು '೧ ಅಡಕಾ=¼ ರುಕ್ಕಾ' ಎಂದು ಹೇಳುತ್ತದೆ. ಮತ್ತು '೧ ರುಕ್ಕಾ=೧ ಪೈ' ಎಂದೂ ಅದರಲ್ಲೇ ಉಂಟು. ಅದುದರಿಂದ ೧ ಆಣೆಗೆ ೪೮ 'ಅಡಕಾ' ಎಂಬುದು ನಿಶ್ಚಿತವಾಗುತ್ತದೆ. ಇನ್ನು ಇಲ್ಲಿ 'ಅಡಕಾ' ಎಂಬುದಕ್ಕೆ ಏನು ಅರ್ಥ?—ಎಂಬುದು ತಿಳಿಯಬೇಕಾದ ಸಂಗತಿ.

'ಅಡಕಾ' ಶಬ್ದವು ಹೇಗೆ ಬಂದಿತೆಂಬುದನ್ನು 'ಮಹಾರಾಷ್ಟ್ರ ಶಬ್ದ-ಕೋಶ'ವು ಒಂದು ಬಗೆಯಿಂದ ಸೂಚಿಸಿದೆ: 'ಅರ್ಧರುಕಾ ∠ ಅಡಕಾ, ಅಥವಾ ಅರ್ಧಕ-∠ ಅಡಕಾ' ಹೀಗೆ ಎರಡು ಬಗೆಯಲ್ಲಿ ನುಡಿದಿರುವುದರಿಂದ, ಇದರ ಬರುವಳಿಯು 'ಮಹಾರಾಷ್ಟ್ರ ಶಬ್ದಕೋಶ'ಕಾರರಿಗೆ ಸರಿಯಾಗಿ ಬಗೆಹರಿದಿಲ್ಲವೆಂಬುದು ಬೇರೆ ಹೇಳಬೇಕಾಗುತ್ತದೆ 'ಅರ್ಧರುಕ್ಕಾ' ಎಂಬಲ್ಲಿ ಅರಿ ಸಮಾಸವಿದೆ: ಅರ್ಧ+ರುಕ್ಕಾ. ಒಂದು ಸಂಸ್ಕೃತ; ಇನ್ನೊಂದು ಅರಬೀ 'ರುಕ್ಅ'! 'ಅರ್ಧ ರುಕ್ಕಾ ∠ ಅಡಕಾ' ಎಂದು ಒಪ್ಪಲು ಇನ್ನೂ ಒಂದು ತೊಂದರೆ: ¼ ರುಕ್ಕಾ=೧ ಅಡಕಾ ಎಂದೇ ವ್ಯವಹಾರದಲ್ಲಿದ್ದಿತು. ಇನ್ನು 'ಅರ್ಧಕ'ದ ವಿಚಾರ: 'ಅರ್ಧಕ' ಎಂಬುದು ಎಂದಾದರೂ ನಾಣ್ಯವಿದ್ದಿತೆ-ಎಂಬುದು ನನಗೆ ತಿಳಿಯದು ಮತ್ತು ಇದು ಯಾತರ ಅರ್ಧಕ? ಇದಕ್ಕಿಂತಲೂ ಮರ್ಹಾಟಿಯ ಈ 'ಅಡಕಾ' ಎಂಬುದು ಕಂದಮಿಳು ವರ್ಗದ 'ಅಡಕೆ'ಯೆ ಎಂದು ಹೇಳುವುದು ಹೆಚ್ಚು ಯುಕ್ತವಾಗಿದೆ. ಏಕೆಂದರೆ 'ಅಡಕಾ' ಎಂಬುದರೊಳಗಿನ ಕೊನೆಯ 'ಕಾ' ಇದನ್ನು ಪ್ರತ್ಯಯವೆಂದು ಗ್ರಹಿಸಿದರೆ ಈ ತೊಡಕು ಬಿಡುವಂತಿದೆ. ಮರ್ಹಾಟಿಯಲ್ಲಿ ಸಂಸ್ಕೃತದಂತೆ, ಕನ್ನಡದಲ್ಲಿ ಕಾಣಿಸಿಕೊಂಬ ಕೊನೆಯ ಎಕಾರಾಂತಗಳು, ಆಕಾರಾಂತಗಳಾಗುತ್ತವೆ ಆ ಮೇರೆಗೆ 'ಅಡಕೆ' ಎಂಬುವರೊಳಗಿನ 'ಕೆ' ಅರೇಮಾತಿನಲ್ಲಿ 'ಕಾ' ಎಂದು ಮಾರ್ಪಟ್ಟಿರುವುದು ಸಹಜವಿದೆ.

ಕಾ (ಕೆ) ಎಂಬುದು ಪ್ರತ್ಯಯವೆಂದಾದರೆ ಇನ್ನುಳಿದ 'ಅಡ' ಎಂದರೇನು? ಕಂದಮಿಳವರ್ಗದಲ್ಲಿ 'ಅಡಕೆ' ಎಂಬ ಮಾತು ಎಷ್ಟು ಬಗೆಯಾಗಿ ಬಳಕೆಯಲ್ಲಿದೆ ಎಂಬುದನ್ನು ವಿಚಾರಿಸಿದರೆ, ಈ ಪ್ರಶ್ನೆಯು ಬಗೆಹರಿಯುವಂತಿದೆ. ತಮಿಳಿನಲ್ಲಿ 'ಅಡಯ್‌ಕ್ಕಾಯ್' ಅಥವಾ 'ಅಡಯ್‌ಕಾಯ್' ಎಂದಿದೆ. ತೆಲುಗಿನಲ್ಲಿ ಅಡಕಾಯ;' ಮಲಿಯಾಳಿನಲ್ಲಿ 'ಅಡಕ್ಕ'; ಕನ್ನಡದಲ್ಲಿ 'ಅಡಕೆ' ಇವೆಲ್ಲವುಗಳನ್ನು ವಿಮರ್ಶಿಸಿ ನೋಡಿದಲ್ಲಿ, ಅಡಯ್ ಅಥವಾ ಅಡ ಎಂಬುದು ಮೂಲ (ಬೀಜ) ಶಬ್ದವೆಂದು ನಿಶ್ಚಿತವಾಗುತ್ತದೆ. 'ಅಡೈ' ಎಂದು ತಮಿಳಿನಲ್ಲಿರುವ ಶಬ್ದವು ಕನ್ನಡದಲ್ಲಿ 'ಅಡ' ಎಂದು ಕಾಣಿಸಿಕೊಳ್ಳುತ್ತದೆ. ಅಡೈಕಲ್ಲು—ಅಡಗಲ್ಲು; ಮಾಡಿನ ಅಡಿ ಇ. ಕನ್ನಡ 'ಅಡಕೊಯ್ತು' ಮತ್ತು ತೆಲುಗಿನ ಅಡಗತ್ತಿಗಳ ಮೂಲಶಬ್ದವು 'ಅಡ' ಎಂಬುದನ್ನೆ ಪುಷ್ಟಿಗೊಳಿಸುತ್ತವೆ. ಆದುದರಿಂದ ಕೆ ಪ್ರತ್ಯಯಾಂತ 'ಅಡ' ಶಬ್ದವೆ ಮರ್ಹಾಟಿಯಲ್ಲಿ 'ಅಡಕಾ' ಎಂದಾಗಿರಬೇಕು. ಇಂಗ್ಲಿಷಿನಲ್ಲಿ areca

ಶ್ರೀರಂಗರ
ಸ್ವಪ್ನದಲ್ಲಿ ಸ್ವಾರಸ್ಯ
(ವಿನೋದ ಪ್ರಚುರ ಹರಟೆಗಳು)
ಪ್ರಕಟವಾಗಿದೆ! ಬೇಗನೆ ನಿಮ್ಮ ಪ್ರತಿ ತರಿಸಿಕೊಳ್ಳಿರಿ!
ಹರಟೆಗಳ ತಂತ್ರವನ್ನು ಕುರಿತು ಸ್ವಾರಸ್ಯವಾಗಿ
ಬರೆದ ಮುನ್ನುಡಿಯನ್ನೊಳಗೊಂಡಿದೆ
ಬೆಲೆ ೧—೦—೦
ಮಾರಾಟದ ಅಧಿಕಾರಿಗಳು:
ಮನೋಹರ ಗ್ರಂಥಭಾಂಡಾರ, ಧಾರವಾಡ

ಶ್ರೀಮದ್ ಭಗವದ್ಗೀತೆ

ಲೇಖಕರು: ಭಟ್ಟಾಚಾರ್ಯ ಶ್ರೀ. ಸಾತವಳೇಕರ

ಕನ್ನಡ ಅನುವಾದಕರು: ಶ್ರೀ ಶಂ. ಬಾ. ಜೋಶಿ

ಇದು ಹಿಂದಿ, ಮರಾಠಿ, ಗುಜರಾತಿ, ಇಂಗ್ಲಿಷ್ ಭಾಷೆಗಳಲ್ಲಿ ಪ್ರಕಟವಾಗಿ ಲೋಕಪ್ರಿಯವಾಗಿದೆ. ಇಷ್ಟು ವಿಸ್ತೃತವಾದ ಟೀಕೆ ಇನ್ನೂ ಎಲ್ಲಿಯೂ ಪ್ರಸಿದ್ಧವಾಗಿಲ್ಲ. ಅನ್ವಯ, ಅರ್ಥ ಸಹಿತವಾಗಿದೆ ಇದೀಗ ಕನ್ನಡದಲ್ಲಿಯೂ ಪ್ರಕಟವಾಗುತ್ತಲಿದೆ. ಪ್ರತಿ ಅಧ್ಯಾಯಕ್ಕೆ ೧ ರೂ. ಮುಂಗಡ. ೧೮ ಅಧ್ಯಾಯಗಳಿಗೆ ೧೫ ರೂ

ಅಂಚೆಯ ವೆಚ್ಚ ಬೇರೆ.

ಸರಸ್ವತೀ ನಿಲಯ, ಧಾರವಾಡ.

ಎಂಬಿರುವ ಮಾತು. ಪೋರ್ತುಗೀಜರಿಂದ ಇಂಗ್ಲಿಷಿನಲ್ಲಿ ಬಂದಿರುವುದೆಂದು ಆಕ್ಸ್‌ಫರ್ಡ್ ಕೋಶವು ಹೇಳುತ್ತದೆ. ಪಡುವಣ ಕರಾವಳಿಯಲ್ಲಿಯೆ ಮೊದಲು ಬಂದಿಳಿದ ಪೋರ್ತುಗೀಸರು ಮಲಬಾರ್ ಅಥವಾ ಕನ್ನಡ ಜಿಲ್ಹೆಯಿಂದಲೆ ಈ ಮಾತನ್ನು ಎತ್ತಿಕೊಂಡಿರಬೇಕೆಂಬುದು ಸ್ಪಷ್ಟವಿದೆ. ಆದುದರಿಂದ Areca ಇದಕ್ಕೆ ಅಡಕ್ಕ ಅಥವಾ ಅಡಕೆ ಎಂಬುದು ಮೂಲವಾಗಿರಲಿಕ್ಕೆ ಸಾಕು. ಅದೇನೇ ಇರಲಿ; ಪ್ರಸ್ತುತ ಬೇಕಾಗಿರುವ ಮಾತು ಇದು: ಕಂದಮಿಳು ವರ್ಗದ 'ಅಡಕೆ' ಎಂಬುದು ಇಂಗ್ಲಿಷಿನಲ್ಲಿ ಅರೆಕಾ (Areca) ಆಗಿರುವಂತೆ, ಅರೆಮಾತಿನಲ್ಲಿ '**ಅಡಕಾ**' ಎಂಬ ರೂಪತಾಳಿರುವುದು ಸಹಜವಾಗಿದೆ. ಅರೆಮಾತಿನಲ್ಲಿ 'ಅಡಕಿತ್ತಾ' ಅಥವಾ 'ಅಡಕೋತಾ' ಎಂಬುದು, ಕನ್ನಡದಿಂದ ಬಂದಿತೆಂದು ಮರ್‍ಹಾಟಿಗರೇ ಒಪ್ಪುತ್ತಾರೆ.

'ಅಡ' ಅಥವಾ 'ಅಡ್ಕೆ' ಎಂದರೆ 'ಸಮೂಹ, ಗುಂಪು' ಎಂಬ ಮೂಲಾರ್ಥವಿದೆ. ಕನ್ನಡದಲ್ಲಿ ಅಡಿ (ಮಾಡಿಸಿದ ಮಂ) ಎಂಬಲ್ಲಿ ಈ ಅರ್ಥವನ್ನು ಕಾಣಬಹುದು. ಆದಕಾರಣ 'ಅಡಕೆ' ಎಂದರೆ 'ಗೊಂಚಲು (ಕಾಯಿ)' ಎಂದು ಅದು ಅರ್ಥವನ್ನು ಸೂಚಿಸುತ್ತದೆ. ಮತ್ತು ಗೊಂಚಲುಗೊಂಚಲಾಗಿ ಅಡಕೆಯ ಗೊನೆಗಳು ಗಿಡಕ್ಕೆ ಅಂದವಾಗಿ ನೇತಾಡುವುದನ್ನು ಕಣ್ಣಾರೆ ಕಂಡವರಿಗೆ 'ಅಡಕೆ' ಎಂಬ ಪದದ ಔಚಿತ್ಯವು ಆನಂದದಾಯಕವಾಗದೆ ಇರದು.

ಹಿಂದಿನ ಪಡೆನುಡಿಯಿಂದ ಅಡಕೆಯು ಒಂದು ಕಾಲಕ್ಕೆ ವ್ಯವಹಾರದ್ರವ್ಯವಾಗಿರಬೇಕೆಂದು ಸೂಚನೆ ದೊರೆಯುತ್ತದೆ. ಅದರ ಮರ್‍ಹಾಟಿಯ ಪಡೆನುಡಿಗಳಿಂದ ಈ ಮಾತು ಸಂಪೂರ್ಣ ಸ್ಪಷ್ಟವಾಗುತ್ತಲಿದೆ; 'ಏಕ್ ಗುರು ಅಡಕ್ಯಾಚೇ ತೀನ। ಮುಕ್ತೀ ತರೀ ತ್ಯಜಾವೇ' ಎಂದು ದಾಸಬೋಧದಲ್ಲಿದೆ. 'ಅಡಕಾ (ಕೆ) ಗೆ ಮೂವರು ಗುರುಗಳು ದೊರೆತರೂ ಅವರನ್ನು ತೊರೆಯಬೇಕು' ಎಂಬಲ್ಲಿ 'ಅಡಕಾ' ಎಂಬುದು ದ್ರವ್ಯವಾಚಿಯಾಗಿದೆ. 'ಕುರ್ವಡಿ ಬೇಕೇ ಕುರ್ವಡಿ' ಎಂಬರ್ಥದ ಮಕ್ಕಳನ್ನಾಡಿಸುವ ಒಂದು ಆಟವು ಮರ್‍ಹಾಟಿಯಲ್ಲಿಯೂ ಉಂಟು. ಅದರಲ್ಲಿ 'ಕೋಕರೂ ಹರೀ ಕಾ ಕೋಕರೂ.......;' 'ಕಿತಕ್ಯಾಲಾ?' ....'**ಅಡಕ್ಯಾಲಾ**' 'ಜಳಲಾ ತುಮಚಾ ಅಡಕಾ; ಅಮಚಾ ಕೋಕರೂಚ ಲಾಡಕಾ' ಎನ್ನುವರು. ಇಲ್ಲಿಯೂ 'ಅಡಕಾ' ಬೆಲೆಯನ್ನು ಹೇಳುವುದಾಗಿದೆ. ತಮಿಳಿನಲ್ಲಿ 'ಅಡ್ಕೈ' ಎಂದರೆ ಬೆಲೆ (Price) ಎಂದೂ ಒಂದು ಅರ್ಥವಿದೆ. 'ಇದಕ್ಕೆ ಎಷ್ಟು ದುಡ್ಡು; ಅಥವಾ ಎಷ್ಟು ರೂಪಾಯಿ.?' ಎಂದು ಕೇಳುವ ರೂಢಿಯಿಂದ ದುಡ್ಡು ಅಥವಾ ರೂಪಾಯಿ ಎಂಬುದೇ ಬೆಲೆ ಎಂಬರ್ಥವನ್ನು ತಾಳಬಹುದಾಗಿರುವಂತೆ (ಕೆಲವೊಮ್ಮೆ ತಾಳಿರುವಂತೆ), 'ಅಡಕೆ' ಎಂಬುದು ಬೆಲೆ ಎಂಬರ್ಥವನ್ನು ಪಡೆದಿರುವುದು ಸ್ವಾಭಾವಿಕವಾಗಿದೆ. ಮರ್‍ಹಾಟಿಯಲ್ಲಿ ಇನ್ನೂ ಸೊಗಸಾದ, ಒಂದು ಗಾದೆಯಿದೆ: 'ಹಾತೀ ನಾಹೀ **ಅಡಕಾ**, ಬಾಜಾರಾಂತ ಚಾಲಲಾ ಧಡಕಾ' (ಕೈಯಲ್ಲಿ ಅಡಕೆಯೂ ಇಲ್ಲ, ಜೋರಿನಿಂದ ಪೇಟೆಗೆ ಮಾತ್ರ ಹೊರಟನಂತೆ ।) ಇಲ್ಲಿ ನಮ್ಮ 'ಕೈಯೊಳಗ್ ಅಡಕೆಯೂ ಇಲ್ಲ' ಎಂಬ ಮಾತಿನ ನೆನಪಾಗದೆ ಇರದು. ಇವೆಲ್ಲ ಉಲ್ಲೇಖಗಳಿಂದ ಅಡಕೆ (ಅಡಕಾ), ಒಂದು ಕಾಲದ ತೀರ ಕನಿಷ್ಠ ನಾಣ್ಯದಂತೆ ಬಳಕೆಯಲ್ಲಿರಬೇಕೆಂದು ಸ್ಪಷ್ಟವಾಗುತ್ತದೆ. ಮತ್ತು ಮಹಾರಾಷ್ಟ್ರದಲ್ಲಿರುವ ಹಳೆಯ ಲೆಕ್ಕದಂತೆ ಒಂದು ಕಾಲಕ್ಕೆ ಅಡಕೆಯು ಒಂದು ಆಣೆಗೆ ನಾಲ್ವತ್ತೆಂಟು ದೊರೆಯುತ್ತಿದ್ದವೆಂದೂ ತಿಳಿಯುತ್ತದೆ.

ಒಂದು ಮಾತು

ಶ್ರೀ. ಜಿ. ವರದರಾಜರಾವ್, ಎಂ. ಎ. ಮೈಸೂರು

✻

ಏನು ನಾಚಿಕೆ ನಿನಗೆ ! ಏನು ಲಜ್ಜೆಯೆ ನಿನಗೆ !
  ಮಂಜು ಕವಿದಂತೆ ಕವಿದಿಹುದು ನಡುವೆ;
ನೋಡಿ ನೋಡುವ ಮುನ್ನ ಓಡಿ ಅಡಗುವೆ ಒಳಗೆ
  ಒಲಿದ ಹೃದಯದ ಎದುರು ಏನು ಭಯವೆ ?

ನುಡಿ ತೊದಲು; ನಡೆ ಮಿಂಚು; ಕಣ್ಣ ನೋಟವೂ ಕೊಂಕು;
  ಏಕಿನಿತು ಮುಚ್ಚುಮರೆ ನಿನಗೆ ?
ಸಾಕು ಬಿಡು; ಬಿಂಕ-ಬಿನ್ನಾಣಗಳ ಹೊರನೂಕು
  ನೀ ಕಲಿತ ಧೈರ್ಯವನು ತೋರಿಸೆನಗೆ.

ಮೊಟ್ಟಮೊದಲಿನ ನೋಟ ಒಲುಮೆಯನು ಉಕ್ಕಿಸಲು
  ಮನವಾರೆ ಮೆಚ್ಚಿದೆವು ಅರೆಚಣದಲಿ.
ಬಂಧು ಬಳಗದ ಹರಕೆ, ಶಾಸ್ತ್ರಗಳು ಸುತಿಗೊಡಲು
  ಒಂದುಗೂಡಿದೆವು—ಎಲ್ಲರೆದುರಿನಲಿ.

ಹೊಸದೊಂದು ಸೃಷ್ಟಿಯೇ ಕಾದಿಹುದು ನಮಗಾಗಿ
  ನಮ್ಮ ನುಡಿ- ನೋಟದಲಿ, ಕಣ್ಣ ತೆರೆಯೆ.
ನಿನ್ನೆ ಮೊನ್ನೆಯ ಕನಸು ನಿಜದ ಮೂಲುಮೆಗಾಗಿ
  ಕಾತರಿಸಿ ಕಾಯುತಿದೆ ಜೀವ ತಳೆಯೆ

    ಒಲುಮೆ ಬೆಳಕೆರೆವ ಭಾಗ್ಯಧಾರೆಯಲಿ
    ಮಂಜಿನಂದದ ಲಜ್ಜೆ ಕರಗಿ ಬರಲಿ !
    ಸದ್ದಿರದೆ ಮೊಗ್ಗರಳಿ ಬಿರಿವ ತೆರದಿ
    ಮೆಲು-ಮೆಲನೆ ನಮ್ಮ ನಾವರಿವ ಮುದದಿ !

ಈ ಸಮ್ಮೇಳನದ ಸಿಂಹಾವಲೋಕನ

"ನರಸಿಂಹ"

ಈ ಸಲದ ಸಾ. ಸಮ್ಮೇಳನವು ಯಶಸ್ವಿಯಾಗಿ ಕೊನೆಗಂಡಿತು.... ನಿಜವಾಗಿ ನೋಡಿದರೆ, ಈಗಿನ ಪದ್ಧತಿಯು ಮೇರೆಗೆ ನಡೆಯುವ ಇಂತಹ ಸಮ್ಮೇಳನಗಳ ವರದಿಯು ಇದೊಂದೇ ವಾಕ್ಯದಲ್ಲಿ ಪೂರ್ಣ ನೆನಸುವದು. ಏಕೆಂದರೆ ಅವುಗಳ ವರದಿಯಲ್ಲಿ ಬರೆಯುವುದಾದರೂ ಇಂತಹದೇನು ಇರುವುದು? ಈ ದೃಷ್ಟಿಯಿಂದ ನೋಡುತ್ತ ಮೇಲಿನ ಪ್ರಶ್ನೆಗೆ ಉತ್ತರಕೊಡಬೇಕಾದರೆ, ಈ ಸಲದ ಸಮ್ಮೇಳನದ ಕಾರ್ಯಕಲಾಪಗಳನ್ನು ಪರೀಕ್ಷಿಸಿ ನೋಡಬೇಕಾಗುತ್ತದೆ; ಸ್ಥಳೀಯ ವ್ಯವಸ್ಥೆಯ ನಿಮರ್ಶೆಯನ್ನು ಮಾಡಬೇಕಾಗುತ್ತದೆ; ಅಧಿಕಾರಿಗಳ ಮತ್ತು ಕಾರ್ಯಕರ್ತರುಗಳ ಮನೋಗತವನ್ನು ಒಳಹೊಕ್ಕು ನೋಡಬೇಕಾಗುತ್ತದಲ್ಲದೆ, ಜನಸಮೂಹದ ಆಕಾಂಕ್ಷೆ-ಅಪೇಕ್ಷೆಗಳನ್ನು ತಿಳಿದುಕೊಳ್ಳಬೇಕಾಗುತ್ತದೆ.

'ಸಮ್ಮೇಳನವು ಯಶಸ್ವಿಯಾಯಿತು' ಎಂದರೇನು? ಸಮ್ಮೇಳನದ ಕಾರ್ಯದಲ್ಲಿ ಮುಖ್ಯವಾಗಿ ಸ್ವಾಗತಸಮಿತಿ, ಕಾರ್ಯಸಮಿತಿ ವಿವಿಧ ಗೋಷ್ಠಿಗಳಲ್ಲಿ ಭಾಗ ವಹಿಸುವವರ, ಮನರಂಜನದ ಇಲ್ಲವೆ ಮಿಕ್ಕ ಇಂತಹ ವಿಷಯಗಳಿಗೆ ಅವಶ್ಯವಾಗಿದ್ದ ಕಲಾವಿದರು ಮತ್ತು ಜನಸಮೂಹ....ಈ ಐದು ಅಂಗಗಳು ಹೊಣೆಗಾರಿಕೆಯುಳ್ಳವೆಂದು ತಿಳಿಯಬಹುದು. ಈ ಪಂಚಾಂಗಗಳು ಒಂದೊಂದಾಗಿ ಅದೆಷ್ಟು ಕೌಶಲ್ಯ-ನಿಷ್ಠೆಯಿಂದ ಕೆಲಸಮಾಡಿದರೂ ಅದು ಅಪೂರ್ಣವೆನಿಸದಿರಲಾರದು. ಇವುಗಳೆಲ್ಲ ಸಹಕಾರದಿಂದ, ಸಾನುರಾಗದಿಂದ, ಸ್ವಸಂತೋಷದಿಂದ ಸಮ್ಮೇಳನದ ಕಾರ್ಯವನ್ನು ಕೈಕೊಂಡರೆ ಮಾತ್ರ ಅದು ಯಶಸ್ವಿಯಾಗಲಿಕ್ಕೆ ಸಹಾಯಕವಾಗಬಹುದು. ಇವೇ ಐದು ಭಾಗಗಳನ್ನೂ. ಈ ಸಲದ ಸಮ್ಮೇಳನ-ನಾಟಕದಲ್ಲಿ ಆ ಆ ಪಾತ್ರಗಳು ಹೇಗೆ ಹುರಿಸಿದುವು ಎಂಬುದನ್ನು ನೋಡಿದರೆ, ಈ ಸಮ್ಮೇಳನವು ಎಷ್ಟು ಮಟ್ಟಿಗೆ ಯಶಸ್ವಿಯಾಯಿತು ಎಂಬುದು ತಾನೇ ವಿಶದವಾಗುವುದು.

ರಬಕವಿಯ ಸ್ವಾಗತ ಸಮಿತಿಯು ಸಂಪೂರ್ಣವಾಗಿ ಧನ್ಯವಾದಗಳಿಗೆ ಅರ್ಹವಾದುದು ಎಂದು ಹೇಳಬಹುದು. ಆ ಧನ್ಯವಾದ ಅಭಿಮಾನವು ಉಕ್ಕೇರಿ ಬರುವಂತಹ—ಸಭಾಮಂಟಪ, ಆ ಇಳಿದುಕೊಳ್ಳುವ ಏರ್ಪಾಡು, ಇಪ್ಪತ್ತನಾಲ್ಕು ಗಂಟೆ ದೊರೆಯುತ್ತಿದ್ದ ಬಿಸಿನೀರಿನ ವ್ಯವಸ್ಥೆ, ಈ ಸಾಲ್ಲಾಗಿ ಮರುಷ ಎಲ್ಲೆಲ್ಲಿಯೂ ನೋಡಲಿಕ್ಕೆ ಸಿಗುವ ಶಿಸ್ತಿನ ಒಳ್ಳೆಯ ಆ ಧಾನ್ಯ-ದವಸಗಳು, ಮೇಲೆ ಯಾವಾಗಲೂ ನಗುಮೊಗದಿಂದ ಕಾರ್ಯತತ್ಪರರಾಗಿ ನಿಂತ ಆ ಹಿರಿಯ-ಕಿರಿಯ ಕೆಲಸಗಾರರು ಇವರನ್ನು ಕಂಡರೆ, ಔದ್ಯೋಗಿಕ ಕೇಂದ್ರವಾದ, ಅಂತೆಯೆ ಉರ್ಷೆ-ನೇಣಸಾಟಗಳಿಂದ ತುಂಬಿ ಕೆಲವು ಸಲ ಕಾರ್ಯವನ್ನೆ ಮರೆಯಬಹುದಾದ—ಆಧುನಿಕ ಅಚ್ಚು-ಮೆಚ್ಚುಗಳನ್ನು ಅರಿಯದ ಇಂತಹ ಊರುಗಳಲ್ಲಿ, ಈ ಬಗೆಯ ಕಾರ್ಯವು ಈ ರೀತಿಯಿಂದ ಕೊನೆಗಾಣುವುದು ಅಭಿನಂದನೀಯ ಎಂದೆನಿಸದಿರಲಾರದು.

ಕನ್ನಡವು ಸಾಂಸ್ಕೃತಿಕ ಏಕೀಕರಣವನ್ನು ಪಡೆಯುವ ಮಾರ್ಗದಲ್ಲಿ ಕೂಡ ಇನ್ನೂ ಅನೇಕ ವಿಷಯಗಳನ್ನು ಗಮನಕ್ಕೆ ತಂದುಕೊ ಡಿಲ್ಲ. ಅವರಲ್ಲಿ ಊಟವೊಂದು ಮಹತ್ತ್ವದ—ತೀರ ಮಹತ್ತ್ವದ ವಿಷಯವಾಗಿದೆ. ಒಂದು ಕಡೆಯಲ್ಲಿ "ಇದೇನು ಕೇವಲ ಅನ್ನ—ಸಾರು,—ಇಲ್ಲಿ ಜೋಳ!" ಎಂಬ ಕೂಗು ಕೇಳ ಬರುತ್ತಿದ್ದರೆ, ಇನ್ನೊಂದು ಕಡೆ "ಜೋಳದ ರೊಟ್ಟಿ—ಹುಂಬ ಜಟ್ಟಿ" ಎಂಬ ದನಿಯೂ ಇರುತ್ತದೆ. ಇವನ್ನೆಲ್ಲ ಬಿಟ್ಟು ಇತ್ತೀಚೆಗೆ ಸಾರು-ಅನ್ನ-ಪಲ್ಯ-ಚಟ್ನಿ-ಗೋಧಿಯ ರೊಟ್ಟಿಗಳ ಮೂರನೆಯ ಅಡುಗೆಯನ್ನು ಆರಂಭ ಮಾಡಿದುದು ನೋಡಲಿಕ್ಕೆ ಸಿಗುತ್ತದೆ (ಉಣ್ಣಲಿಕ್ಕೆ ಅಲ್ಲ ಮತ್ತೆ) ಅದನ್ನು ಎಲ್ಲ ಕನ್ನಡಿಗರು ಸ್ವೀಕರಿಸುತ್ತಿದ್ದರೂ, ಮಿಕ್ಕ ಬಗೆಯ ತೊಂದರೆಗಳೇನು ಊಟದ ವಿಷಯದಲ್ಲಿ ಕಡಿಮೆಯಿರುವುದಿಲ್ಲ. ಮೊನ್ನೆಯ ಸಮ್ಮೇಳನದಲ್ಲಿ ಉಣ್ಣುವವರು 'ಮೂರುದಿನಗಳ ಮಾತು, ತುಸು ಸಹನೆ-ಶಾಂತತೆಗಳಿಂದ ಸಾಗಿಸಿಕೊಂಡರಾಯಿತು!' ಎಂದುಕೊಂಡಿದ್ದರೆ, ವ್ಯರ್ಥವಾಗಿ ಅತ್ತಿತ್ತ ಹಗಲು-ಇರುಳು ಎನ್ನದೆ ಅಲೆದಾಡಿ, ಸ್ಥಳೀಯ ಕಾರ್ಯಕರ್ತರುಗಳನ್ನು ತೊಂದರೆಗೀಡುಮಾಡುತ್ತಿರಲಿಲ್ಲ; ಇತ್ತ ಇನ್ನಿಷ್ಟು ಸ್ವಚ್ಛತೆ ಮತ್ತು ಆಧುನಿಕ ವ್ಯವಸ್ಥೆಗಳ ವಿಷಯವಾಗಿ ಲಕ್ಷ್ಯವನ್ನು ತಳೆದಿದ್ದರೆ, 'ಇಲ್ಲಿಗೇ ಊಟಕ್ಕೆ ಬರಬೇಕು' ಎಂದು ಎಳೆದು ತರುವ ತೊಂದರೆಯೂ, 'ಇವರಿಗೆ ನಮ್ಮ ಸಹವಾಸವೇ ಬೇಡ' ಎಂಬ ಭಾವನೆಯು ಮೂಡುವ ಸಂಭವವೂ ಉಂಟಾಗುತ್ತಿರಲಿಲ್ಲ.

ಈ ಸಲದ ಪರಿಷತ್ತಿನ ವಾರ್ಷಿಕಾಧಿವೇಶನದ ಕಾರ್ಯವು ಮಿಂಚಿನ ವೇಗದಿಂದ ಮುಗಿಯಿತು ಎಂದು ಹೇಳಬೇಕಾಗುವುದು. ಮೊದಲೇ ಆ ಕಾರ್ಯಯುಕ್ತದಲ್ಲಿ ಭಾಗ ವಹಿಸುತ್ತಿದ್ದ ಭಟರು ಹೆಚ್ಚು ಜನರು ಬಂದಿರಲಿಲ್ಲ. ಆದರೂ, ಆಕಸ್ಮಿಕವಾಗಿ ಈ ಕಾರ್ಯಸೂಚಿಯೊಳಗೆ ಅಡಕವಾಗಿದ್ದ ಒಂದು ಕೊರತೆಯು ಗೊತ್ತಾಗಿರದಿದ್ದರೆ, ಮೊದಲಿನ ಕಲಾಪಗಳ ಒಂದು ಸಣ್ಣ ಪ್ರತೀಕವನ್ನಾದರೂ ನೋಡಬಹುದಾಗಿತ್ತು. ವಿಷಯ ಹೀಗಿದ್ದ ಮೇರೆಗೆ ಬಂದಿದ್ದರೆನ್ನಬಹುದು. ಅಂದಿನ ಸಭೆಗೆ ಬಂದಿದ್ದ ನೂರಾಇಪ್ಪತ್ತು ಜನ ಸದಸ್ಯರಲ್ಲಿ, ಸುಮಾರಾಗಿ ಇಪ್ಪತ್ತು ಜನರಷ್ಟು ಪಕ್ಷಿಲದಿದ್ದುದನ್ನು ನೋಡಿದರೆ, ಈ ಕಾರ್ಯದಲ್ಲಿ ಇಷ್ಟು ಆಸಕ್ತಿಯನ್ನು ವಹಿಸುವ ಇವರಿಗಾಗಲಿ, ಇಂತಹ ಕೆಲಸವನ್ನೇ ಮಾಡುತ್ತಿರುವ ಪರಿಷತ್ತಿನ ಸಿಬ್ಬಂದಿಯ ಜನರಿಗಾಗಲಿ, ಕಾಯಿದೆಯ ವಿವರವಾದ ಈ ಸಂಗತಿಯು ಸಮುಚಿತವಾಗಿ ಹೇಗೆ ಹೊಳೆಯಲಿಲ್ಲವೊ ಎಂದು ಆಶ್ಚರ್ಯವುಂಟಾಗುವುದು. ಅಂತೂ ಅಂದಿನ ಕಾರ್ಯದ ಮುಖ್ಯ ಮತ್ತು ಯೋಜಿತ ಭಾಗವೆ ಕಡಿಮೆಯಾದ ಮೇಲೆ, ಮಿಕ್ಕ ಭಾಗವು ಕೂಡಲೆ ಕೊನೆಗಂಡಿದ್ದುದು ವಿಶೇಷವಲ್ಲ. ಆದರೂ ಪರಿಷತ್ತಿನ ಕಾರ್ಯಮುಖವನ್ನು ಹದಿನಾರು ಪ್ರದೇಶಗಳಲ್ಲಿ ವಿಂಗಡಿಸಿದುದು, ಸದಸ್ಯತ್ವದ ಹಣವನ್ನು ಪೂರಾ ನಾಲ್ಕು ರೂಪಾಯಿ ಮಾಡಿದುದು, ವೈಯಕ್ತಿಕ ಟೀಕೆಯು ಸಂಸ್ಥೆಯ ಬೆಳವಣಿಗೆಗೆ ಘಾತುಕವಾದುದು ಎಂಬುದನ್ನು

ತಿಳಿದು ಒಪ್ಪಿದ ದೊಡ್ಡ ಮನಸ್ಸು—ಇವು ಪರಿಷತ್ತಿನ, ಅದರ ಮುಖ್ಯವಾಗಿ ಕನ್ನಡದ ಕೆಲಸದ ದಾರಿಯಲ್ಲಿ ಹೆಚ್ಚು ಉಪಯುಕ್ತವಾದುವು. ಇಲ್ಲಿ ಒಂದು ಸಂಗತಿಯು ಇನ್ನೂ ಸ್ಪಷ್ಟವಾಗಿರಬೇಕಾದುದಾಗಿದೆ. ಪರಿಷತ್ತಿನ ಕಾರ್ಯಭಾರವು ಹಗುರಾದ ಕೂಡಲೆ, ಆ ಜನರು ಸಮ್ಮೇಳನದ ಮಿಕ್ಕ ಕಾರ್ಯದಿಂದ ಕಾಲ್ತೆಗೆಯುವುದು ಉಚಿತವಲ್ಲ. ಕನ್ಯಾಗತಕ್ಕೊಮ್ಮೆ 'ಒಂದೂರಲ್ಲಿ ಕೂಡಬಹುದಾದ ಇಂತಹ ಸಭೆ-ಸಮ್ಮೇಳನಗಳಲ್ಲಿ, ಕಾರ್ಯ ಮಾಡುವವರು-ಇಂದಿನ ಪರಿಸ್ಥಿತಿಯಲ್ಲಿಯಂತೂ—ಬಹುಶಃ ಹೊಸಬರೂ ಅನನುಭವಿಕರೂ ಇರುವರು. ಅಂತೆಯೆ ಊಟ, ವಸತಿ, ಗೊತ್ತುವಳಿಗಳು, ಭಾಷಣಗಳ ಏರ್ಪಾಡು. ಮನರಂಜನದ ಕಾರ್ಯಕ್ರಮ ಮುಂತಾದ ವಿಷಯಗಳಲ್ಲಿ ನುರಿತವರ ಸಹಾಯ-ಸಹಕಾರಗಳು ಅವರಿಗೆ, ಹೆಚ್ಚಾಗಿ ಕೂಡಿದ ಜನರ ಹಿತದ ಸಲುವಾಗಿ, ಇಷ್ಟ ಅಲ್ಲದೆ ಅವಶ್ಯಕ ಎನಿಸುತ್ತದೆ. ಈ ಬಗೆಯ ನೆರವನ್ನು ನುರಿತ ಜನರು—ಅವರು ಅಧಿಕಾರಿಗಳೇ ಇರಲಿ, ಅನುಭವಿಕರೇ ಇರಲಿ—ನೀಡಿದರೆ, ಇಂತಹ ಸಭೆಯ ಕಾರ್ಯವು ಕೇವಲ ಗಾಳಿಯೊಡನೆ ಮಾತುಗಳ ರೂಪದಲ್ಲಿ ತೇಲಿಹೋಗದೆ ಕೃತಿಯಾಗಿ, ಸ್ಫೂರ್ತಿಯಾಗಿ, ಸಂಸ್ಥೆಯಾಗಿ, ಶಕ್ತಿಯಾಗಿ ನಿಲ್ಲುವುದು. ಈ ಸಾಲ್ಕೈದು ಸಮನಗಳ ಅಡಳಿತದಲ್ಲಿ, ಪರಿಷತ್ತು ಸಾಮಾನ್ಯ ಜನರ ಪ್ರಾತಿನಿಧ್ಯವನ್ನೂ ಐಕ್ಯವನ್ನೂ ಹೆಚ್ಚಾಗಿ ಗಳಿಸಿಕೊಂಡು, ತುಸು ಭದ್ರವಾಗಿದೆ. ಇನ್ನು ಆ ಭದ್ರವಾದ ತಳಹದಿಯ ಮೇಲೆ, ಇಂದಿನ ಹದಿನಾರು ಪ್ರದೇಶಗಳಲ್ಲಿ ಪ್ರಧಾನಿಗಳಾದ ಕಾರ್ಯಕರ್ತರುಗಳನ್ನೂ, ಆಕರ್ಷಕವೆನಿಸುವಂತಹ ಪ್ರಬಲ ಸಂಸ್ಥೆಗಳನ್ನೂ ಕಟ್ಟಿ, ಕನ್ನಡದ ಶಕ್ತಿಯನ್ನು ತಿಳಿದುಕೊಳ್ಳಬೇಕು; ಪಡೆದುಕೊಳ್ಳಬೇಕು. ಎಂದರೆ ಉತ್ಸಾಹವು ಬೇಕಾದಷ್ಟಿದ್ದರೂ, ಅಪೇಕ್ಷೆಯನ್ನು ಮೀರಿ ಕೈವಾಡ ತಪ್ಪುವಷ್ಟು ಕೆಲಸವುಂಟಾದಲ್ಲಿ, ಹತಾಶರಾಗಿ ವಿಭ್ರಮೆಗೊಳ್ಳುವ ಹೊತ್ತು ಕಾರ್ಯಕರ್ತರುಗಳಿಗೂ ಬರುವದಿಲ್ಲ; ಇತ್ತ 'ನಿರಂತರವಾಗಿ ಕನ್ನಡದಕೆಲಸವನ್ನು ಮಾಡುವ ಕೆಲಸಗಾರರು ಸಿಕ್ಕುವುದೇ ಕಠಿಣ, ಎಂಬ ದೂರು ಇಲ್ಲವೆ ಕೊರತೆಯನ್ನು ಕೇಳುವ ಹೊತ್ತು ಜನರಿಗೂ ಬರುವುದಿಲ್ಲ ಈಗ ಪರಿಷತ್ತು ಹೂಡಿದ ಸಮ್ಮೇಳನಗಳಲ್ಲಿ ಸ್ವೀಕರಿಸಿದ ಅನೇಕ ಗೊತ್ತುವಳಿಗಳ ಭವಿತವ್ಯ ಅಥವಾ ಕಾರ್ಯರೂಪವನ್ನು ನೋಡಬಯಸಿದರೆ, ಇಂತಹ ಬಗೆಯ ಸಹಕಾರ-ಸೌಹಾರ್ದಗಳು ಎಷ್ಟು ಆವಶ್ಯಕ ಎಂಬುದು ತಿಳಿಯುವುದು.

ಈ ಸಲದ ಸಮ್ಮೇಳನದಲ್ಲಿ ಹೆಸರು ಪಡೆದ ಮೂರು ಗೋಷ್ಠಿಗಳು ಜರುಗಿದುವು: ಸಾಹಿತ್ಯಗೋಷ್ಠಿ, ಜನಪದ ಸಾ ಗೋಷ್ಠಿ ಮತ್ತು ಮಹಿಳಾಗೋಷ್ಠಿ, ಇವುಗಳ ಉದ್ದೇಶವು ತುಂಬಾ ಪ್ರಶಂಸನೀಯವಾದುದು. ನಿಜವಾಗಿಯೂ ಇಂತಹ ಗೋಷ್ಠಿಗಳಿಂದ ಜನರಲ್ಲಿ ಜಾಗೃತಿಯನ್ನುಂಟುಮಾಡುವ ಪ್ರಥಮಕಾರ್ಯಕ್ಕಿಂತ ಹೆಚ್ಚಿನ, ಮಹತ್ತ್ವವಾದ ಕಾರ್ಯವಾಗಬೇಕು. ಇದು ನಮ್ಮ ಕೊಟೆಯನ್ನು ಕಾಯ್ದುಕೊಳ್ಳುವ ಎರಡನೆಯ ಬಲವಾಗಬೇಕು. ಆದರೆ ಅದೇಕೋ, ಕಾರ್ಯಪದ್ಧತಿಯ ಅಭಾವ-ದುರ್ಲಕ್ಷ್ಯಕ್ಕಾಗಿಯೊ, ಮುಂದಾಳುಗಳ ಅಲಕ್ಷ್ಯ-ಅನನುಭವಕ್ಕಾಗಿಯೊ, ಆ ಬಗೆಯ ಒಂದು ಸೈನ್ಯವು ನಮ್ಮಲ್ಲಿ ಇನ್ನು ವರೆಗೆ ಉದ್ಭವಿಸಿಲ್ಲ ಎಂದೇ ಹೇಳಬೇಕಾಗುವುದು. ಉದ್ಘಾಟಕ, ಅಧ್ಯಕ್ಷ ಇವರುಗಳ ಭಾಷಣಗಳ ಹೊರತು ಮಿಕ್ಕಿದ್ದೆಲ್ಲ ಹಬ್ಬದ ಮಟ್ಟಿಗಿನ ಹುರುಪೇ ಆಗಿರುವುದು. ಆಗಿನ ಹೊತ್ತಿಗೆ ಸಿಕ್ಕ ಒಬ್ಬಿಬ್ಬ ಕಿರಿಯ ಕವಿಗಳನ್ನು ಹಿಡಿದು ತಂದು, ಇದ್ದ ಬಿದ್ದ ಕೃತಿಮಾತುಗಳನ್ನೆ ಕಿರುಚಲು ಹಚ್ಚುವುದು ಈಗ ನಡೆದ ಸಂಗತಿಯಾಗಿದೆ. ಇದರಲ್ಲಿ ಸುಧಾರಣೆಯನ್ನು ಕಂಡು ಒಂದು ಪೂರ್ವರಚಿತ ಯೋಜನೆಯಂತೆ ಇಂತಹ ಗೋಷ್ಠಿಗಳನ್ನು ಸಾಗಿಸುವ ಹೊಣೆ, ಸ್ವಾಗತಸಮಿತಿಯನ್ನೆ ಆ ಆ ಅಧ್ಯಕ್ಷರದೂ ಆಗಿದೆ. ಕೃತಿಯ ಕೌಶಲವನ್ನು ತೋರಿಸಬೇಕಾದ ಮಹಿಳೆಯರೂ ಸಹಿತ ಈಗ ಮಾತಿನ ಸುರುಳಿಗೇ ಸಿಲುಕುತ್ತಿರುವುದು ಕೃತ್ರಿಮವೊ, ಚಮತ್ಕೃತಿಯೊ ತಿಳಿಯದು.

ಇದೇ ಸಮಯದಲ್ಲಿ ಎರಡು ಭಾಷಣಮಾಲೆಗಳೂ ಜನರ ಕೊರಳೊಳಗೆ ಬಿದ್ದುವು. ಅವು ಎರಡೂ ಇಂದಿನ ನಮ್ಮ ಪರಿಸ್ಥಿತಿಯನ್ನು ಚೆನ್ನಾಗಿ ಬಿಚ್ಚಿ ತೋರಿಸುವಂತಹವು. ಗಡಿನಾಡಿನ ಪ್ರಶ್ನೆಯ ವಿಷಯವಾಗಿ ಕನ್ನಡದ ಚಳವಳಿಯಲ್ಲಿ ಮೊದಲಿನಿಂದಲೂ ವಿಚಾರ-ವಿನಿಮಯ, ಭಾಷಣ, ಚರ್ಚೆ, ಗೊತ್ತುವಳಿಗಳ ಸ್ವೀಕೃತವಾಗುವುದು ಇವೆಲ್ಲ ನಡೆದಿವೆ. ಇಷ್ಟೆ ಅಲ್ಲ, ಕನ್ನಡದ ಕಾರ್ಯವೇ ಅದರಿಂದ ಆರಂಭವಾಯಿತು, ಕನ್ನಡಿಗರಿಗೆ ತಮ್ಮ ಅರಿವು ಆ ಸಮಸ್ಯೆಯ ಅಭ್ಯಾಸದಿಂದ ಆಯಿತು. ಎಂದರೂ ಸಲ್ಲುವುದು. ಇತ್ತ ನಮ್ಮ ಸಾಹಿತ್ಯದ ದಾರಿಯದಾದರೂ ಅದೇ ಹಾಡು. ಆದರೆ ಈ ವಿಷಯಗಳಲ್ಲಿ ಆದ ಕೃತಿ ಎಷ್ಟು....ನೋಡಬೇಕು. ಗಡಿಗಳ ದೀನ, ಹೀನ, ಶೋಚನೀಯ ಪರಿಸ್ಥಿತಿಯ ಬಗೆಯನ್ನು ಕುರಿತು ಪ್ರತಿಯೊಂದು ಸಮ್ಮೇಳನ-ಸಭೆಗಳಲ್ಲಿ ಮಾತುಗಳು ಕೇಳಬರುತ್ತವೆ; ಆದರೆ ಇಂದಿನ ಪರಿಸ್ಥಿತಿಯನ್ನು ನೋಡಿದರೆ ಇತ್ತ ಸೊಲ್ಲಾಪುರ, ಬೆಳಗಾಂವಿ, ಅತ್ತ ಬಳ್ಳಾರಿ, ಮಂಗಳೂರುಗಳಲ್ಲಿ ಕನ್ನಡದ ನೆಲವು ಕಾಲ ಬುಡದಿಂದ ಕುಸಿದು

(೪೧ನೇ ಪುಟದ ಅಡಿಯಲ್ಲಿ)

ವಾಗ್ವಿಲಾಸ ಬುಕ್‌ಡಿಪೋದಲ್ಲಿ ದೊರೆಯುವ

ಪುಸ್ತಕಗಳು

ಪ್ರೋಲೀಸಗಾಯಿಡು (ಶಿಕೋಟೆಕೃತ)	೩—೮—೦
ಒಕ್ಕಲತನದ ಸಾಂಪತ್ತಿಕ ಸ್ಥಿತಿ	೩—೩—೦
ಉತ್ಪನ್ನದ ಮೇಲಿನ ಕರದ ಕೈಪಿಡಿ	೩—೭—೦
ಮುಂಬೈ ಇಲಾಖೆಯ ಸಹ. ಸಂ. ಕಾಯಿದೆ	೧—೮—೦
ಪಂಡಿತ ಜಗನ್ನಾಥರ ಚರಿತ್ರ	೧—೦—೦
ಸಂತಾನಶಾಸ್ತ್ರ (ಸಬರದಕೃತ)	೧—೪—೦

ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬೇಕು.

ಎ. ಆರ್. ಶಿವನಾಗಪ್ಪ ಆ್ಯಂಡ್ ಸನ್ಸ್,

ವಾಗ್ವಿಲಾಸ ಬುಕ್‌ಡಿಪೊ
ಪಾವರ್ ಪ್ರಿಂಟಿಂಗ್‌ಪ್ರೆಸ್
ದುರ್ಗದಬೈಲು, ಹುಬ್ಬಳ್ಳಿ

ತೀರಿನ ಒಪ್ಪಿದ ದೊಡ್ಡ ಮನಸ್ಸು—ಇವು ಪರಿಷತ್ತಿನ, ಅದರ ಮುಖ್ಯವಾಗಿ ಕನ್ನಡದ ಕೆಲಸದ ದಾರಿಯಲ್ಲಿ ಹೆಚ್ಚು ಉಪಯುಕ್ತವಾದುವು. ಇಲ್ಲಿ ಒಂದು ಸಂಗತಿಯು ಇನ್ನೂ ಸ್ಪಷ್ಟವಾಗಿರಬೇಕಾದುದಾಗಿದೆ. ಪರಿಷತ್ತಿನ ಕಾರ್ಯಭಾರವು ಹಗುರಾದ ಕೂಡಲೆ, ಆ ಜನರು ಸಮ್ಮೇಳನದ ಮಿಕ್ಕ ಕಾರ್ಯದಿಂದ ಕಾಲ್ತೆಗೆಯುವುದು ಉಚಿತವಲ್ಲ. ಕನ್ಯಾಗತಕ್ಕೊಮ್ಮೆ 'ಒಂದೂರಲ್ಲಿ ಕೂಡಬಹುದಾದ ಇಂತಹ ಸಭೆ-ಸಮ್ಮೇಳನಗಳಲ್ಲಿ, ಕಾರ್ಯ ಮಾಡುವವರು-ಇಂದಿನ ಪರಿಸ್ಥಿತಿಯಲ್ಲಿಯಂತೂ—ಬಹುಶಃ ಹೊಸಬರೂ ಅನನುಭವಿಕರೂ ಇರುವರು. ಅಂತೆಯೆ ಊಟ, ವಸತಿ, ಗೊತ್ತುವಳಿಗಳು, ಭಾಷಣಗಳ ಏರ್ಪಾಡು. ಮನರಂಜನದ ಕಾರ್ಯಕ್ರಮ ಮುಂತಾದ ವಿಷಯಗಳಲ್ಲಿ ನುರಿತವರ ಸಹಾಯ-ಸಹಕಾರಗಳು ಅವರಿಗೆ, ಹೆಚ್ಚಾಗಿ ಕೂಡಿದ ಜನರ ಹಿತದ ಸಲುವಾಗಿ, ಇಷ್ಟು ಅಲ್ಲದೆ ಅವಶ್ಯಕ ಎನಿಸುತ್ತದೆ. ಈ ಬಗೆಯ ನೆರವನ್ನು ನುರಿತ ಜನರು—ಅವರು ಅಧಿಕಾರಿಗಳೇ ಇರಲಿ, ಅನುಭವಿಕರೇ ಇರಲಿ—ನೀಡಿದರೆ, ಇಂತಹ ಸಭೆಯ ಕಾರ್ಯವು ಕೇವಲ ಗಾಳಿಯೊಡನೆ ಮಾತುಗಳ ರೂಪದಲ್ಲಿ ತೇಲಿಹೋಗದೆ ಕೃತಿಯಾಗಿ, ವ್ಯಕ್ತಿಯಾಗಿ, ಸಂಸ್ಥೆಯಾಗಿ, ಶಕ್ತಿಯಾಗಿ ನಿಲ್ಲುವುದು. ಈ ನಾಲ್ಕೈದು ವರುಷಗಳ ಅಡಳಿತದಲ್ಲಿ, ಪರಿಷತ್ತು ಸಾಮಾನ್ಯ ಜನರ ಪ್ರಾತಿನಿಧ್ಯವನ್ನೂ ಲಕ್ಷ್ಯವನ್ನೂ ಹೆಚ್ಚಾಗಿ ಗಳಿಸಿಕೊಂಡು, ತುಸು ಭದ್ರವಾಗಿದೆ. ಇನ್ನು ಆ ಭದ್ರವಾದ ತಳಹದಿಯ ಮೇಲೆ, ಇಂದಿನ ಹದಿನಾರು ಪ್ರದೇಶಗಳಲ್ಲಿ ಪ್ರಧಾನಿಗಳಾದ ಕಾರ್ಯಕರ್ತೃಗಳನ್ನೂ, ಆಕರ್ಷಕವೆನಿಸುವಂತಹ ಪ್ರಬಲ ಸಂಸ್ಥೆಗಳನ್ನೂ ಕಟ್ಟಿ, ಕನ್ನಡದ ಶಕ್ತಿಯನ್ನು ತಿಳಿದುಕೊಳ್ಳಬೇಕು; ಪಡೆದುಕೊಳ್ಳಬೇಕು. ಎಂದರೆ ಉತ್ಸಾಹವು ಬೇಕಾದಷ್ಟಿದ್ದರೂ, ಅಪೇಕ್ಷೆಯನ್ನು ಮೀರಿ ಕೈಮಾಡ ತಪ್ಪುವಷ್ಟು

ವಾಗ್ವಿಲಾಸ ಬುಕ್‌ಡಿಪ್ಪೋದಲ್ಲಿ ದೊರೆಯುವ

ಪುಸ್ತಕಗಳು

ಪ್ರೋಲೀಸಗಾಯುಡು (ಕಾಕೋಟಿಕೃತ)	೩—೮—೦
ಒಕ್ಕಲತನದ ಸಾಂಪತ್ತಿಕ ಸ್ಥಿತಿ	೨—೬—೦
ಉತ್ಪನ್ನದ ಮೇಲಿನ ಕರದ ಕೈಪಿಡಿ	೩—೭—೦
ಮುಂಬೈ ಇಲಾಖೆಯ ಸಹ. ಸಂ. ಕಾಯಿದೆ	೧—೮—೦
ಪಂಡಿತ ಜಗನ್ನಾಥರ ಚರಿತ್ರ	೧—೦—೦
ಸಂತಾನಶಾಸ್ತ್ರ (ಸಬರದಕೃತ)	೧—೪—೦

ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬೇಕು.

ಎ. ಆರ್. ಶಿವನಾಗಪ್ಪ ಆ್ಯಂಡ್ ಸನ್ಸ್,

ವಾಗ್ವಿಲಾಸ ಬುಕ್‌ಡಿಪೊ
ಪಾವರ್ ಪ್ರಿಂಟಿಂಗ್‌ಪ್ರೆಸ್
ದುರ್ಗದಬೈಲು, ಹುಬ್ಬಳ್ಳಿ

ಕೆಲಸವುಂಟಾದಲ್ಲಿ, ಹತಾಶರಾಗಿ ವಿಭ್ರಮೆಗೊಳ್ಳುವ ಹೊತ್ತು ಕಾರ್ಯಕರ್ತೃಗಳಿಗೂ ಬರುವದಿಲ್ಲ; ಇತ್ತ 'ನಿರಂತರವಾಗಿ ಕನ್ನಡದಕೆಲಸವನ್ನು ಮಾಡುವ ಕೆಲಸಗಾರರು ಸಿಕ್ಕುವುದೇ ಕಠಿಣ, ಎಂಬ ದೂರು ಇಲ್ಲವೆ ಕೊರತೆಯನ್ನು ಕೇಳುವ ಹೊತ್ತು ಜನರಿಗೂ ಬರುವುದಿಲ್ಲ ಈಗ ಪರಿಷತ್ತು ಹೂಡಿದ ಸಮ್ಮೇಳನಗಳಲ್ಲಿ ಸ್ವೀಕರಿಸಿದ ಅನೇಕ ಗೊತ್ತುವಳಿಗಳ ಭವಿತವ್ಯ ಅಥವಾ ಕಾರ್ಯರೂಪವನ್ನು ನೋಡಬಯಸಿದರೆ, ಇಂತಹ ಬಗೆಯ ಸಹಕಾರ-ಸೌಹಾರ್ದಗಳು ಎಷ್ಟು ಅವಶ್ಯಕ ಎಂಬುದು ತಿಳಿಯುವುದು.

ಈ ಸಲದ ಸಮ್ಮೇಳನದಲ್ಲಿ ಹೆಸರು ಪಡೆದ ಮೂರು ಗೋಷ್ಠಿಗಳು ಜರುಗಿದುವು: ಸಾಹಿತ್ಯಗೋಷ್ಠಿ, ಜನಪದ ಗಾನ ಗೋಷ್ಠಿ ಮತ್ತು ಮಹಿಳಾಗೋಷ್ಠಿ, ಇವುಗಳ ಉದ್ದೇಶವು ತುಂಬಾ ಪ್ರಶಂಸನೀಯವಾದುದು. ನಿಜವಾಗಿಯೂ ಇಂತಹ ಗೋಷ್ಠಿಗಳಿಂದ ಜನರಲ್ಲಿ ಜಾಗೃತಿಯನ್ನುಂಟುಮಾಡುವ ಪ್ರಥಮಕಾರ್ಯಕ್ಕಿಂತ ಹೆಚ್ಚಿನ, ಮಹತ್ವದ ಕಾರ್ಯವಾಗಬೇಕು. ಇದು ನಮ್ಮ ಕೋಟೆಯನ್ನು ಕಾಯ್ದುಕೊಳ್ಳುವ ಎರಡನೆಯ ಬಲವಾಗಬೇಕು. ಆದರೆ ಅದೇಕೋ, ಕಾರ್ಯಪದ್ಧತಿಯ ಅಭಾವ-ದುರ್ಲಕ್ಷ್ಯಕ್ಕಾಗಿಯೊ, ಮುಂದಾಳುಗಳ ಅಲಕ್ಷ್ಯ-ಅನನುಭವಕ್ಕಾಗಿಯೊ, ಆ ಬಗೆಯ ಒಂದು ಸೈನ್ಯವು ನಮ್ಮಲ್ಲಿ ಇನ್ನು ವರೆಗೆ ಉದ್ಭವಿಸಿಲ್ಲ ಎಂದೇ ಹೇಳಬೇಕಾಗುವುದು. ಉದ್ಘಾಟಕ, ಅಧ್ಯಕ್ಷ ಇವರುಗಳ ಭಾಷಣಗಳ ಹೊರತು ಮಿಕ್ಕಿದ್ದೆಲ್ಲ ಹಬ್ಬದ ಮಟ್ಟಿಗಿನ ಹುರುಪೇ ಆಗಿರುವುದು. ಆಗಿನ ಹೊತ್ತಿಗೆ ಸಿಕ್ಕ ಒಬ್ಬಿಬ್ಬ ಕಿರಿಯ ಕವಿಗಡಿಗಳನ್ನು ಹಿಡಿದು ತಂದು, ಇದ್ದ ಬಿದ್ದ ಕೃತಿಮಾತುಗಳನ್ನೆ ಕಿರುಚಲು ಹಚ್ಚುವುದು ಈಗ ನಡೆದ ಸಂಗತಿಯಾಗಿದೆ. ಇದರಲ್ಲಿ ಸುಧಾರಣೆಯನ್ನು ಕಂಡು ಒಂದು ಪೂರ್ವರಚಿತ ಯೋಜನೆಯಂತೆ ಇಂತಹ ಗೋಷ್ಠಿಗಳನ್ನು ಸಾಗಿಸುವ ಹೊಣೆ, ಸ್ವಾಗತಸಮಿತಿಯಷ್ಟೆ ಆ ಆ ಅಧ್ಯಕ್ಷರದೂ ಆಗಿದೆ. ಕೃತಿಯ ಕೌಶಲವನ್ನು ತೋರಿಸಬೇಕಾದ ಮಹಿಳೆಯರೂ ಸಹಿತ ಈಗ ಮಾತಿನ ಮರುಳಿಗೇ ಸಿಲುಕುತ್ತಿರುವುದು ಕೃತ್ರಿಮವೊ, ಚಮತ್ಕೃತಿಯೊ ತಿಳಿಯದು.

ಇದೇ ಸಮಯದಲ್ಲಿ ಎರಡು ಭಾಷಣಮಾಲಿಗಳೂ ಜನರ ಕೊರಳೊಳಗೆ ಬಿದ್ದುವು. ಅವು ಎರಡೂ ಇಂದಿನ ನಮ್ಮ ಪರಿಸ್ಥಿತಿಯನ್ನು ಚೆನ್ನಾಗಿ ಬಿಚ್ಚಿ ತೋರಿಸುವಂತಹವು. ಗಡಿನಾಡಿನ ಪ್ರಶ್ನೆಯ ವಿಷಯವಾಗಿ ಕನ್ನಡದ ಚಳವಳಿಯಲ್ಲಿ ಮೊದಲಿನಿಂದಲೂ ವಿಚಾರವಿನಿಮಯ, ಭಾಷಣ, ಚರ್ಚೆ, ಗೊತ್ತುವಳಿಗಳ ಸ್ವೀಕೃತವಾಗುವುದು ಇವೆಲ್ಲ ನಡೆದಿವೆ. ಇಷ್ಟೆ ಅಲ್ಲ, ಕನ್ನಡದ ಕಾರ್ಯವೇ ಅದರಿಂದ ಆರಂಭವಾಯಿತು, ಕನ್ನಡಿಗರಿಗೆ ತಮ್ಮ ಅರಿವು ಆ ಸಮಸ್ಯೆಯ ಅಭ್ಯಾಸದಿಂದ ಆಯಿತು. ಎಂದರೂ ಸಲ್ಲುವುದು. ಇತ್ತ ನಮ್ಮ ಸಾಹಿತ್ಯದ ದಾರಿಯದಾದರೂ ಅದೇ ಹಾಡು. ಆದರೆ ಈ ವಿಷಯಗಳಲ್ಲಿ ಆದ ಕೃತಿ ಎಷ್ಟು....ನೋಡಬೇಕು. ಗಡಿಗಳ ದೀನ, ಹೀನ, ಶೋಚನೀಯ ಪರಿಸ್ಥಿತಿಯ ಬಗೆಯನ್ನು ಕುರಿತು ಪ್ರತಿಯೊಂದು ಸಮ್ಮೇಳನ-ಸಭೆಗಳಲ್ಲಿ ಮಾತುಗಳು ಕೇಳಬರುತ್ತವೆ; ಆದರೆ ಇಂದಿನ ಪರಿಸ್ಥಿತಿಯನ್ನು ನೋಡಿದರೆ ಇತ್ತ ಸೊಲ್ಲಾಪುರ, ಬೆಳಗಾಂವಿ, ಅತ್ತ ಬಳ್ಳಾರಿ, ಮಂಗಳೂರುಗಳಲ್ಲಿ ಕನ್ನಡದ ನೆಲವು ಕಾಲ ಬುಡದಿಂದ ಕುಸಿದು

(೪೧ನೇ ಪುಟದ ಅಡಿಯಲ್ಲಿ)

ಸರಿಯುತ್ತಿರುವುದು. ಸಾಹಿತಿಗಳು ಮತ್ತೆ ಅದೇ ಬಗೆಯ ನೀರಸವಾದ ಹರಟೆ-ಕತೆ-ಕವನಗಳನ್ನು ಬರೆಯುತ್ತಿರುವರು. ಇವೆಲ್ಲ ಸಂಬಂಧದಲ್ಲಿ ಗುಣ ಬೇಕು ಎಂಬುದು ಸರ್ವಸಮ್ಮತವಾದ ಸಂಗತಿಯಾದರೂ, ಮತ್ತೆ ಅದೇ ವಿಷಯವನ್ನು ಚರ್ವಿತ ಚರ್ವಣ ಮಾಡುವರು ಹೊರತು ಕೃತಿಯಲ್ಲಿ ಆ ಭಾವನೆಯನ್ನು ರೂಪುಗೊಳಿಸುವುದಿಲ್ಲ. ಇದೂ ಒಂದು ವಿಚಾರ ಮಾಡುವಂತಹ ಮಾತು.

ಬಂದ ಜನರನ್ನು ಕೇವಲ ಭಾಷಣಗಳಿಂದ ಬೇಸರಿಸಬಾರದು ಎಂಬುದಕ್ಕೆ ಅದರೊಡನೆ ನಾಡಹಾಡು, ಗುಡಿಯನ್ನೇರಿಸುವುದು, ನಾಟಕ, ಹಾಡುಗಾರಿಕೆ, ನೃತ್ಯ, ಕರಡಿಯ ಮಜಲು, ಗೊಂಬೆಯ ಮತ್ತು ಬಯಲಾಟಗಳು ಇಂತಹವೂ ಕೆಲವು ಸಾಧನಗಳಿರುತ್ತವೆ. ಆದರೆ ಎಷ್ಟೋ ಸಲ ಇಂತಹ ವಿಷಯಗಳು ಕಾರ್ಯಕ್ರಮದಲ್ಲಿ ತೀರ ಭಾರವಾಗಿ, ಅವು ಕೂಡ ಬೇಸರ-ಕೀಸರಗಳನ್ನುಂಟುಮಾಡುತ್ತವೆ; ಒಮ್ಮೊಮ್ಮೆ ಇಂತಹ ದೊಡ್ಡ ಜನಸಮುದಾಯಕ್ಕೆ ಅನುಚಿತ ಎನಿಸುತ್ತವೆ. ಮೊದಲೇ ಮಾತನ್ನು ಕೇಳಿ. ಸಾಕಾದ ಜನರಿಗೆ ಮತ್ತೆ ಎರಡೆರಡು ನಾಟಕ, ಜೋಡು ಕಾರ್ಯಕ್ರಮ ಹೀಗೆ ಮಾಡಿದರೆ ಉದ್ದೇಶದ ಸಾಧನೆಯ ಬದಲು ನಾಶವಾಗುವುದು ಖಂಡಿತ. ಈ ಸಲ ಶ್ರೀ. ಮನ್ಸೂರ ಮಲ್ಲಿಕಾರ್ಜುನರ ಗಾಯನವು ಒಂದು ಆಕರ್ಷಣೆಯಾಗಿತ್ತು. ಗುಡಿಯನೇರಿಸುವುದು ಒಂದು ಚೆಲುವಿನ ನೋಟವಾಗಿತ್ತು; ಕೆಲವು ಜನರ ಹಾಡುಗಳು ಒಳ್ಳೆಯವಾಗಿದ್ದುವು. ಆದರೆ ಒಂದು ಜಡವಾದ–ಭಾರವೆನಿಸುವ–ಭಾಗವು ಮುಗಿದೊಡನೆ–ಮತ್ತೆ ನಾಟಕ ಇಲ್ಲವೆ ಆಟ ಹೀಗೆ ಮಾಡಿ ಜನಾದರಣೆಯನ್ನು ಕಳೆದುಕೊಳ್ಳುವುದು ಉಚಿತವಲ್ಲ. ಕೇವಲ ಹಟಕ್ಕೆ ಬಿದ್ದು—ಎಂದರೆ ಆ ಕಾರ್ಯವನ್ನು ಮಾಡಿಯೆ ಮುಂದಿನ ಮಾತು ಎಂದು "ಭೀಷ್ಮಪ್ರತಿಜ್ಞೆ" ಮಾಡುವುದಕ್ಕಿಂತ ಉಚಿತ ಪ್ರಸಂಗವನ್ನು ಸಾಧಿಸುವುದು ಮೇಲು.

ಸಮ್ಮೇಳನಗಳಿಗೆ ಜನರು ಏಕೆ ಬರುತ್ತಾರೆ? ಆ ಮಂಟಪ, ಆ ಬೆಳಕು, ಆ ಅಧಿಕಾರಿಗಳ ಥಳುಕು ಇವುಗಳನ್ನು ನೋಡಿ ಆನಂದದಿಂದ ಬೆರಗಾಗುತ್ತಿದ್ದರೂ, ಜನರು ಇವುಗಳಿಗಾಗಿ ಮಾತ್ರ ಬರುವರೆ? ಬರಬೇಕೆ? ಇದೆಲ್ಲ ಏತಕ್ಕಾಗಿ ನಡೆದಿದೆ ಎಂಬುವರ ಸ್ಪಷ್ಟವಾದ ಅಭಿಪ್ರಾಯವನ್ನು ಸಂಯಮದಿಂದ ಮಾಡಿಕೊಡಬಾರದೆ? ೪೦–೫೦ ಸಾವಿರ ಮಂದಿ ಕೂಡಿದ ಆ ಸಮ್ಮರ್ದದಲ್ಲಿ, ೧೫–೨೦ ಸಾವಿರ ರೂಪಾಯಿಗಳನ್ನು ವೆಚ್ಚಮಾಡುವ ಆ ಪ್ರಸಂಗದಲ್ಲಿ, ಕೇವಲ ಹಾಡಿದ್ದನ್ನೇ ಹಾಡುವ ಕೆಲಸವನ್ನೆ ಮಾಡಬೇಕೆ? ಜನರಿಗೆ ನಾಡಿನ ಅರಿವು ಬೇಕು; ಅದಾದ ಕೂಡಲೆ ಮುಂದೇನು ಬೇಕು; ಏನು ಮಾಡಿದರೆ ಅವರ ಹಿತ-ಆಕಾಂಕ್ಷೆಗಳು ಸಾಧಿಸಬಹುದು ಎಂಬುದನ್ನು ಅವರಿಗೆ ತಿಳುಹಬೇಕಾಗುತ್ತದೆ ಎಂಬುದು ನಮಗೆ ತಿಳಿಯಬೇಕು. ಈ ಕಾರ್ಯವು ಎಷ್ಟು ಮಟ್ಟಿಗೆ ಸಾಧಿಸುತ್ತದೆಯೊ ಅಷ್ಟು, ಈ ಬಗೆಯ ಸಮ್ಮೇಳನಗಳು ಯಶಸ್ವಿಯಾದಂತೆ. ಇಷ್ಟು ಜನ, ಇಷ್ಟು ಧನ, ಇಷ್ಟು ಉತ್ಸಾಹ ಇದ್ದಾಗ ಅದನ್ನು ಸರಿಯಾದ ಮಾರ್ಗದಿಂದ ಆದರ್ಶಸಾಧನೆಗಾಗಿ ಹೆಣಗುವ ಹತ್ತಾರು ಜನ ಕೆಲಸಗಾರರನ್ನಾದರೂ ಇಂತಹ ಪ್ರಸಂಗಗಳು ನಮಗೆ ನೀಡಬಾರದೆ? ನಾಲ್ಕಾರು ಸಂಸ್ಥೆಗಳಾದರೂ ಆ ಆ ಕಾರ್ಯಕ್ಕೆ ಸನ್ನದ್ಧವಾಗಿ ನಿಲ್ಲುವ ನಿರ್ಧಾರವನ್ನು ಇಂತಹ ಸಂದರ್ಭಗಳಲ್ಲಿ ಮಾಡಬಾರದೆ? ಜನಜಾಗುಳಿಯಿಂದಲೇ ಕಾರ್ಯಪಥಕವು ಸಿದ್ಧವಾಗುವುದು; ಇಂತಹ ಪಥಕಗಳಲ್ಲಿಯೆ ಕಾರ್ಯಕರ್ತೃಗಳು ಹುಟ್ಟುವರು; ಆ ಕೆಲಸಗಾರರಿಂದಲೇ ಭದ್ರವಾದ ಕೆಲಸ ಆಗುವುದು. ಹೀಗೆ ಸಂಸ್ಥೆಗಳಿಂದ ವ್ಯಕ್ತಿಗಳು ಹುಟ್ಟುವುದು, ವ್ಯಕ್ತಿಗಳಿಂದ ಸಂಸ್ಥೆಗಳನ್ನು ಕಟ್ಟುವುದು, ನಡೆಯಬೇಕು. ಇಲ್ಲವಾದರೆ ಮಾತು; ಮತ್ತೆ ಮಾತು; ಬರಿಯ ಮಾತು! ಹೀಗೆ ಕಡೆತನಕ ನಡೆಯುವುದು .

ಈ ಸಮ್ಮೇಳನವು ಯಶಸ್ವಿಯಾಗಿ ಕೊನೆಗಂಡಿತು; ಇನ್ನು.... ಕಾರ್ಯ....ಆರಂಭ....ಆಗಲಿ!

ಸಾಹಿತ್ಯ ವಿಹಾರ

" ವಿಹಾರಿ "

ಕಳೆದ ವರ್ಷದ ಸಾಹಿತ್ಯಸಿಂಹಾವಲೋಕನದಲ್ಲಿ ಉಳಿದುವುಗಳು; 'ವಿಹಾರಿ' ಎಂದರೆ ಯಾರು? ಕಾವ್ಯಾಲಾಪದ ಸ್ವಾರಸ್ಯ—ಇ.

ಹಿಂದಿನ ಸಂಚಿಕೆಯಲ್ಲಿ, ಕಳೆದ ವರ್ಷದಲ್ಲಿ ಪ್ರಕಟವಾದ ಪುಸ್ತಕಗಳನ್ನು ನಿರ್ದೇಶಿಸುವಾಗ, ತೀರ ಇತ್ತೀಚೆಗೆ ಹೊರಬಿದ್ದ ಹಲವಾರು ಪುಸ್ತಕಗಳನ್ನು ಹೆಸರಿಸಲಾಗಲಿಲ್ಲ. ಅವುಗಳಲ್ಲಿ ಕೆಲವು ತೀರ ಮಹತ್ತ್ವದ ಪುಸ್ತಕಗಳು. ಅವುಗಳನ್ನು ಇಲ್ಲಿ ಹೇಳದಿದ್ದರೆ ೧೯೪೪ನೆಯ ವರ್ಷದ ಸಾಹಿತ್ಯನಿರ್ಮಿತಿಯ ಬಗೆಯಲ್ಲಿ ತಪ್ಪು ಕಲ್ಪನೆಯನ್ನು ಕೊಟ್ಟಂತಾಗಬಹುದಾದ್ದರಿಂದ, ಈ 'ಪುರವಣಿ'ಯನ್ನು ಕೊಡುತ್ತಿದ್ದೇನೆ. ಈ ಪುಸ್ತಕಗಳೆಂದರೆ ಶ್ರೀರಂಗರ 'ಸಗೆ' ಮತ್ತು 'ಆಪ್ತೇ'; ಶ್ರೀ. ಶಂ. ಬಾ. ಜೋಶಿ ಅವರ 'ಕನ್ನಡ ನುಡಿಯ ಜೀವಾಳ'; ಪ್ರೊ. ಸವಣೂರ ಅವರ 'ವಿಜ್ಞಾನ ಮತ್ತು ಸಾಹಿತ್ಯ' ಮತ್ತು ಶ್ರೀ. ವರದರಾಜರಾವ್ ಅವರ ಪುರಂದರ ದಾಸರ ಕೃತಿಗಳ ಬಗೆಯ ವಿಮರ್ಶಾಗ್ರಂಥ. ಇದಲ್ಲದೆ, ಶ್ರೀ. ಕಾರಂತರು ಮೈಲುಗಲ್ಲಿನೊಡನೆ ನಡೆಯಿಸಿದ ಮಾತುಕತೆಗಳ ಸಾರಾಂಶವೂ ಹೊರಬಿದ್ದಿದೆ. ಡಾಕ್ಟರ್ ನಂದೀಮಠ ಅವರ 'ಕರ್ನಾಟಕದ ಧರ್ಮಗಳು' ಎಂಬ ಹಿರಿಹೊತ್ತಿಗೆ, ಪರಿಷತ್ತಿನಿಂದ ಪ್ರಕಟವಾಗುತ್ತಿರುವ ಕನ್ನಡ ನಾಡಿನ ಚರಿತ್ರೆಗೆ ಎರಡನೆಯ ಭಾಗವಾಗಿ ಹೊರಬಂದಿದೆ. ಶ್ರೀ. ಅ. ನ. ಕೃಷ್ಣರಾಯರಿಂದ ಸಂಪಾದಿತವಾದ ಗಾರ್ಕಿಯ ಜೀವನ ಚರಿತ್ರೆಯನ್ನೊಳಗೊಂಡ ಕೆಲವಾರು ಸಣ್ಣದೊಡ್ಡ ಕತೆಗಳ ಅನುವಾದಗಳು, ವಿಮರ್ಶಾತ್ಮಕ ಲೇಖನಗಳೊಂದಿಗೆ ಪ್ರಕಟವಾಗಿವೆ. ಈ ಎಲ್ಲ ಪುಸ್ತಕಗಳೂ ವಿಶೇಷವಾಗಿ ಗಮನಾರ್ಹವಾದುವುಗಳು. ಶ್ರೀರಂಗರು ರಸವಿಮರ್ಶೆಯನ್ನು ಮಾಡಿದ್ದರೆ ಶಂ. ಬಾ. ಅವರು ಭಾಷೆಯ ಮೂಲ ಶೋಧಿಸಹೊರಟು, ಕನ್ನಡ ಭಾಷಾಭ್ಯಾಸಿಗಳಿಗೆ ಮರೆಯ-

ಲಾಗದ ಸಹಾಯ ಮಾಡಿದ್ದಾರೆ. ಶ್ರೀ. ಸವಣೂರ ಮತ್ತು ವರದರಾಜರಾಯರು "ಸಾಹಿತ್ಯವಿಮರ್ಶೆ"ಯನ್ನು ಸಲ್ಲಿಸಿದ್ದಾರೆ. ಕಾರಂತರು ಮಾತನಾಡಿಸಿದ ಮೈಲುಗಲ್ಲುಗಳು ಬೀದಿಯ ಬದಿಯವಲ್ಲ; ಸಂಸ್ಕೃತಿಯ ಮೈಲುಗಲ್ಲುಗಳು ಎಂಬುದನ್ನು ಲಕ್ಷ್ಯದಲ್ಲಿಟ್ಟರೆ, ಸುಲಭವಾದ ಶೈಲಿಯಲ್ಲಿ ಹಾಸ್ಯ ವ್ಯಂಗ್ಯಗಳನ್ನು ಕೂಡಿದ ಸಮಾಜ ವಿಮರ್ಶೆಯನ್ನು ಮಾಡಿದ ರೀತಿ, ನಮ್ಮಲ್ಲಿ ಬೆಳೆಯಬೇಕಾಗಿದ್ದ ಹೊಸ ತೆರದ ನಿಬಂಧ ಅಥವಾ ನಗೆಬರೆಹಕ್ಕೊಂದು ಮಾದರಿಯಾದಂತಿದೆ. ಶ್ರೀ. ನಂದಿಮಠ ಅವರ ಪುಸ್ತಕದ ವಿಚಾರವಾಗಿ ಹೆಚ್ಚಿಗೆ ಹೇಳುವ ಆವಶ್ಯಕತೆಯೇ ಇಲ್ಲ. ಇತಿಹಾಸ ಲೇಖನಕ್ಕೆ ಬೇಕಾದ ಪಾಂಡಿತ್ಯ, ಪೂರ್ವಗ್ರಹಗಳಿಗೆ ಎಡೆಗೊಡದ ಮನಸ್ಸು, ಸಹಜವಾದ ಬರೆವಣಿಗೆಯ ರೀತಿ ಇವೆಲ್ಲವುಗಳನ್ನು ನಾವಿಲ್ಲಿ ನೋಡಬಹುದು.

ಆದರೆ ಇವೆಲ್ಲವನ್ನೂ ಮೀರಿಸುವಂಥ, ಮರೆಯಿಸುವಂಥ, ಪುಸ್ತಕವೆಂದರೆ ಶ್ರೀರಂಗರ 'ಆಹ್ವಾನ'. 'ಅಂಥದೇನಿರಬಹುದಪ್ಪಾ ಈ ಬಡಕಲಾದ ಕವನಸಂಗ್ರಹದಲ್ಲಿ?' ಎಂದು ಯಾರಾದರೂ ಸೋಜಿಗದಿಂದ ಬೆಚ್ಚಿಬಿದ್ದು ಎದ್ದು ಕೇಳಬಹುದು. ಉಳಿದ ಕವಿಗಳ ಕವನಗಳನ್ನು ಇವು ಮೀರಬಹುದೋ, ಮರೆಯಿಸಬಹುದೋ ಎಂಬುದನ್ನು ವಾಚಕರು ನಿರ್ಣಯಿಸಿಕೊಳ್ಳಬೇಕಾದ ವಿಷಯ. ಉಳಿದುವುಗಳನ್ನು ಇವು ಮರೆಯಿಸದಿದ್ದರೂ, ಇವನ್ನು ಮಾತ್ರ ಮರೆಯುವಂತಿಲ್ಲವೆಂಬುದನ್ನು ಮಾತ್ರ ನಾನು ಹೇಳಬಲ್ಲೆ. ಒಂದು ದೃಷ್ಟಿಯಿಂದ ಇದು ಸೋಜಿಗದ ಸಂಗತಿಯೇನೋ ಸರಿ. ಮೊದಲನೆಯದಾಗಿ ತಲೆಕಟ್ಟಿನಿಂದಲೇ ಪ್ರಾರಂಭ ಸೋಜಿಗಕ್ಕೆ. ಆಹ್ವಾನ! ಯಾರಿಗೆ? ಉಳಿದ ಕವಿಗಳಿಗೆಯೆ? ವಿಖ್ಯಾತ ಕವಿಗಳ ಕಾವ್ಯಶಕ್ತಿ ಬತ್ತಿಹೋಗುತ್ತಿರುವ ಸಂಶಯ ಬಂದುದರಿಂದ, ಕನ್ನಡದ ಕಾವ್ಯಸ್ಫೂರ್ತಿಗೆ ತಡೆಯಿಲ್ಲವೆಂದು ತೋರಿಸಿಕೊಡಲು ಬರೆದಿರಬಹುದೆ ಈ ಕವನಗಳನ್ನು? ಏನಿದ್ದರೂ ಕನ್ನಡಿಗರಿಗೆ ಈ "ಹತ್ತೊಂಬತ್ತು ದಿವಸಗಳ 'ಸ್ಫೂರ್ತಿ' ಪರಿಶ್ರಮ" ಸೋಜಿಗವನ್ನುಂಟು ಮಾಡಿದ್ದರೆ ಸೋಜಿಗವೇನೂ ಇಲ್ಲ. ಇದಕ್ಕೆ ಮುಖ್ಯ ಕಾರಣವೆಂದರೆ, ಯಾವ ಕಾರಣಕ್ಕಾಗಿಯೊ ಯಾರು ಬಲ್ಲರು, 'ಶ್ರೀರಂಗರಿಗೂ ಕವಿತೆಗೂ ಇಲಿ-ಬೆಕ್ಕುಗಳ ಪ್ರೇಮ' ಎಂಬ ಪ್ರಮೇಯವನ್ನು ಕನ್ನಡ ಓದುಗರಲ್ಲದೆ ಕನ್ನಡ ಲೇಖಕರೂ ಇದುವರೆಗೆ ಒಪ್ಪಿಕೊಂಡು ಸಾಗಿದ್ದರು. ಇತ್ತೀಚೆಗೆ ನಡೆದ ಸಾಹಿತ್ಯಸಮ್ಮೇಲನವೊಂದರಲ್ಲಿ, ಕವಿಗಳೊಬ್ಬರು ಕಾವ್ಯದ ವಿಚಾರವಾಗಿ ಉಪನ್ಯಾಸವೊಂದನ್ನು ಶ್ರೀರಂಗರ ಅಧ್ಯಕ್ಷತೆಯಲ್ಲಿ ಕೊಡುವ ಮೊದಲು, ಅವರೊಂದಿಗೆ ಮುಂಗಡವಾಗಿ ಒಪ್ಪಂದ ಮಾಡಿಕೊಂಡು ಉಪನ್ಯಾಸ ಪೀಠವನ್ನೇರಿದರಂತೆ; ಅಧ್ಯಕ್ಷರು ಸಮಾರೋಪದಲ್ಲಿ ತಮಗೂ ಕಾವ್ಯಕ್ಕೂ ಯಾವ ವೈರವೂ ಇಲ್ಲವೆಂದು ಹೇಳುವಾಗ, ಉಪನ್ಯಾಸಕರ ಕಾವ್ಯದ ಬಗೆಯಲ್ಲಿಯ ವಿಧಾನಗಳನ್ನು ಸಹಾನುಭೂತಿಯಿಂದ—ಎಂದಿನಂತೆ ಸ್ವಾನುಭವದ ಮೇಲಿಂದ—ಸಮಾಲೋಚನೆ ಮಾಡಿದಾಗ, ಶ್ರೀರಂಗರಿಗೂ ಕವಿತಾಕಾಮಿನಿಯ ಮೋಹವಿದೆ ಎಂಬುದು ಸ್ಪಷ್ಟವಾದ ಬಗ್ಗೆ ನಮ್ಮ ಕಡೆಗೆ ವರದಿ ಬಂದಿದೆ. ಅದರ ನಿದರ್ಶನ ಇಲ್ಲಿದೆ 'ಆಹ್ವಾನ'ದಲ್ಲಿ. 'ನಾಟಕವ ಬರೆದ, ನಗೆಯಾಟಗಳನಾಡಿದ, ಕೀಟಕಗಳೆನೆ ಲೋಕಚರಿತದೋಷಗಳ ಉಚ್ಚಾಟನೆಗೆ ವೀಳ್ಯವನು ಎತ್ತಿದ' ಶ್ರೀರಂಗರು ಕೂಡ, ಕವಿಸಮಯ ನೆವ ಮಾಡಿ ಹೇಳುವ ಕವಿಜಾತಿಗೂ ಸೇರಿದರಲ್ಲ ಎಂಬುದು ಇನ್ನೊಂದು ಕಾರಣ—ಸಾಮಾನ್ಯ ಓದುಗನ ಆಶ್ಚರ್ಯಕ್ಕೆ. ಆದರೆ ಕವಿಜಾತಿಗೆ ಸೇರಲು 'ಪಾಸ್‌ಪೋರ್ಟ್' ಸಿಕ್ಕರೂ ಅಲ್ಲಿಯೂ ಇವರದು ಖಂಡಿತವಾಗಿ ಬಹಿರಂಗದ ಅಧಿವೇಶನವೇ! ಯಾಕೆಂದರೆ ಇವರು ಕವಿಸಮಯಕ್ಕೆ ಶರಣು ಹೊಡೆದ, "ನೆವ ಮಾಡಿ ಹೇಳದ, ನವಿಮಾಡಿ ಹೇಳದ" ಕವಿಗಳು! 'ಬಾಳನುರಿಕಾಟ'-ಕಷ್ಟಗಳ ಹೊರೆ ಇದು ತಡೆಯದಾಗೆ, ಸುರಿಯುವ ಕಣ್ಣ ನೀರ ಝುರಿಯಲಿ ಬಡವ ಹೌಹಾರಿ ತೇಲುವುದ ತೊಳಲುವುದ ತಪ್ಪದಲೆ ಬಳಲುವುದ' ಕಾಣುವ ಕವಿ! ಕವಿಯಾದರೂ "ಲೋಕಚರಿತದ ಉಚ್ಚಾಟನೆ"ಯನ್ನು ಬಿಡಲಿಲ್ಲ. ಇದೇ ಇಲ್ಲಿಯ ಕವಿತ್ವದ ವೈಶಿಷ್ಟ್ಯ. ಇದೇ ಮುಖ್ಯವಾದ ಸೋಜಿಗ. ಕೇರಿಯ ನಾಯಿ ರಂಗನ ಕುದುರೆಗಳನ್ನು ಕಟ್ಟಿಕೊಂಡು, ಇಲಿಗಳ ಸಭೆಯಲ್ಲಿ ಇಣಿಕಿ, ಹೊಸವಿಶ್ವವನ್ನೇ ಸುತ್ತಿ ಬಂದ ಇಲ್ಲಿಯ ಕಾವ್ಯಾನುಭವ ಒಂದು ಆಹ್ವಾನವೇ ಸರಿ! ಯಾಕೆಂದರೆ ಇಲ್ಲಿ ಅಳುವಿದೆ, ನಗುವಿದೆ, ಅಳಬಾರದ್ದಕ್ಕೆ ನಗುವ ನಗುವಿದೆ, ಎಂದಿಗೂ ನಗಲಾರದಂತಹ ಅಳುವಿದೆ. ಏನೋ ಒಂದು ವಿಚಿತ್ರ ಅನುಭವ ಈ ಆಹ್ವಾನವನ್ನು ಓದುವುದೆಂದರೆ. "ಕವಿಯ ಕಿವಿ, ರಸದ ಗವಿ....!" ನಕ್ಕು ನಗಿಸಿ, ನಗಿಸಿ ಅಳಿಸುವ ಈ ಕವನಸಂಗ್ರಹವನ್ನಲ್ಲದೆ, ನಾವು ನಕ್ಕಾಗ ನಗುವೆವೇಕೆಂಬುದರ ವಿವೇಚನೆಯನ್ನು 'ನಗೆ'ಯಲ್ಲಿ ಹೇಳಿದ್ದಾರೆ. ಅದರ ವಿವೇಚನೆ ಇನ್ನೊಂದು ಸಲ. ಅದರಂತೆ ಶಂ. ಬಾ. ಅವರ ಶಬ್ದ-ಸಾಸ್ತ್ರ ವಿಚಾರ.

× × × ×

ನೋಡಿದಿರಾ, ಹೇಗೆ ಪ್ರಗತಿಶೀಲರು ಸಿಡಿಮಿಡಿಗೊಂಡರ್, ಸಿಡಿಮಿಡಿಗೊಂಡುದಕ್ಕಾಗಿ ಸಿಡಿದೆದ್ದರ್! ಸಿಡಿದೆದ್ದುದಕ್ಕಾಗಿ ಕಡಿದು ಬಿದ್ದರ್, ಪಾಪ, ಇನಾಮದಾರರ ಮೇಲೆ! ಅದೂ 'ವಿಹಾರಿ' ಎಂದರೆ ಇನಾಮದಾರರೇ—ಎಂಬ 'ಭರತ್' ಮುನಿಯ ಅಧಿಕಾರವಚನದ ಮೇಲಿಂದ. ಶ್ರೀ. ಪಾಟೀಲ ಪುಟ್ಟಪ್ಪನವರಿಗೂ ಇನಾಮದಾರರಿಗೂ ಏನು ಜಗಳ ಯಾರು ಬಲ್ಲರು? 'ವಿಹಾರಿ' ಬರೆದ ಮಾತಿಗಾಗಿ ಅವರ ಮೇಲೆ ಹರಿಹಾಯಿದಿದ್ದಾರೆ. ನಿಷ್ಕಾರಣವಾಗಿ ಸಿಟ್ಟಿಗೆದ್ದವನಿಗೆ ವಿವೇಕ ಉಳಿಯುವುದಿಲ್ಲವೆನ್ನುವುದು ಸುಳ್ಳೆ? ಹೇಗಿದ್ದರೂ 'ವಿಹಾರಿ'ಯು ಡಿಸೆಂಬರ್ ಜಯಂತಿಯಲ್ಲಿ ಮಾಡಿದ ಆಪಾದನೆಗಳಿಗೆ ಏನಾದರೂ ಉತ್ತರರೂಪವಾಗಿ ಬರೆದುಬಂದಿದ್ದರೆ—ಇನಾಮದಾರರ ಪರವಾಗಿಯಾದರೂ—ಒಂದೆರಡು ಸಮಾಧಾನದ ಮಾತುಗಳನ್ನು ಹೇಳಬಹುದಿತ್ತು. "ಹೋಗಲಿ ಬಿಡಿ, ವೈಯಕ್ತಿಕ ನಿಂದೆ ಮಾಡುವವರನ್ನು ಕಟ್ಟಿಕೊಂಡು ಏನು ಮಾಡಬಹುದು?" ಎಂದು ಇನಾಮದಾರರೇ ಬರೆದು ತಿಳಿಸಿದ್ದಾರೆ. ಆದ್ದರಿಂದ ಆ ಮಾತಿಗೆ ಇಲ್ಲಿಗೇ ಪೂರ್ಣ ವಿರಾಮ!

'ವಿಹಾರಿ' ಎಂದರೆ ಯಾರು? ಎಂಬುದು ಎಷ್ಟೋ ಜನವನ್ನು ಗೊಂದಲಕ್ಕೀಡು ಮಾಡಿದೆ. ಕೆಲವರಂತೂ 'ವಿಹಾರಿ' ಗಂಡುಸೋ, ಹೆಂಗುಸೋ ಇತ್ಯಾದಿಯಾಗಿ ಕೇಳಿ, ಕೆಲವು ಸರ್ವಜ್ಞರಿಂದ, ಸರ್ವಜ್ಞರಿಗೆ ತಕ್ಕ ಉತ್ತರಗಳನ್ನು ಪಡೆದಿದ್ದಾರೆ. ಹೀಗೆ ಕೇಳುವವರು ವರಾನ್ವೇಷಿಗಳೋ, ಕನ್ಯಾನ್ವೇಷಿಗಳೋ ಯಾರಿಗೆ ಗೊತ್ತು? ಇನ್ನೂ ಕೆಲವರಿಗೆ 'ವಿಹಾರಿ' ಎಂದರೆ ಇನಾಮದಾರರಲ್ಲ....ಎಂದು ತಮ್ಮ ಹೊಣೆಗಾರಿಕೆಯನ್ನರಿತ ಜಯಂತಿಯ ಸಂಪಾದಕರು ಸ್ಪಷ್ಟವಾಗಿ ತಿಳಿಸಿ

ನಾಗೂ ಅದು ಕುಂಟುನೆಪವೆನಿಸಿತಂತೆ! ‘ ವಿಹಾರಿ ’ ಎಂದರೆ ಇನಾಮುದಾರರೇ ಎಂಬ ಹಟ ‘ ವಿಹಾರಿ ’ಯ ಲೇಖನಕ್ಕೆ ಉತ್ತರ ಕೊಡಬಯಸುತ್ತಿದ್ದವರಿಗೆ ಯಾಕೆ ಬೇಕಾಗಿತ್ತೋ! ‘ ವಿಹಾರಿ ’ಗೆ ಉತ್ತರ ಎಂದು ಬರೆದು ಕಳುಹಿದ್ದರೆ ಜಯಂತಿಯ ಸಂಪಾದಕರಿಗೆ ಆ ಬರೆಹವನ್ನು ತಿರುಗಿ ಕಳಿಸಲಾಗುತ್ತಿತ್ತೇ? ಅದು ಹೇಗಿದ್ದರೂ, ಒಂದು ಪತ್ರಿಕೆಯ ಸಂಪಾದಕರ ವಿಷಯವಾಗಿ ಇನ್ನೊಂದು ಪತ್ರಿಕೆಯ ಸಂಪಾದಕರು, ಸಂದಿಗ್ಧವಾದ ಅವಿಶ್ವಾಸವನ್ನು ಯಾವ ಕಾರಣವೂ ಇಲ್ಲದೆ ಸ್ಪಷ್ಟಪಡಿಸುವುದು ಯಾಕೋ ಸರಿದೋರುವುದಿಲ್ಲ. ‘ ಭರತ ’ ಸಾರಿದ್ದೆಲ್ಲ ಸಂಪೂರ್ಣ ಸತ್ಯವೆ? ಮೇಲಾಗಿ ಇನಾಮುದಾರರೇ ಉತ್ತರ ಬರೆದಾಗ ತಾವು ‘ ವಿಹಾರಿ ’ ಅಲ್ಲವೆಂದು ಹೇಳಲಿಲ್ಲವಂತೆ. ತಮಗೆ ಯಾವ ಸಂಬಂಧವೂ ಇಲ್ಲದಾಗ ಅವರೇಕೆ ಇಲ್ಲದುದನ್ನೆಲ್ಲ ಅಲ್ಲಗಳೆಯುತ್ತ ಹೋಗಬೇಕೋ ತಿಳಿಯದು. ಹೇಗಿದ್ದರೂ ‘ ವಿಹಾರಿ ’ ಎಂದರೆ ಯಾರು?--ಎಂಬುದನ್ನು ತಿಳಿಯಬೇಕೆನ್ನುವವರು, ಈಗ ಕೆಲವು ತಿಂಗಳ ಹಿಂದೆ ‘ ಮುಚ್ಚುಹೆಸರುಗಳ ಮೀಮಾಂಸೆ ’ಯನ್ನು ಬರೆದಾಗ ‘ ವಿಹಾರಿ ’ ಹೇಳಿದ್ದನ್ನೇ ನೋಡಬೇಕು. “ ಸಾಹಿತ್ಯ ವಿಹಾರ ”ವನ್ನು ಬರೆವವರು ಬರೆಯುವವರು ‘ ವಿಹಾರಿ ’ ಅಷ್ಟೆ!

* * * *

“ ರಬಕವಿಯಲ್ಲಿ ಸೇರಿದ ಈ ಸಲದ ‘ ಸಾಹಿತ್ಯ-ಸಮ್ಮೇಲನ ’ ಮೂರು ದಿನ ವಿಜೃಂಭಣೆಯಿಂದ, ಎಂದಿನಂತೆ ಯಶಸ್ವಿಯಾಗಿ ನಡೆಯಿತು. ಅದಕ್ಕೂ ಮೊದಲು ಧಾರವಾಡದಲ್ಲಿ ಪ್ರಗತಿಶೀಲ ಲೇಖಕರ ಅನೌಪಚಾರಿಕ ಸಭೆಯೊಂದು ಸೇರಿತ್ತು. ಕಾರ್ಯಯೋಜನೆಯನ್ನು ಗೊತ್ತುಮಾಡಲಿಕ್ಕೆಂದು ನಿಯಮಿಸಿದ ಸಮಿತಿಯ ಸದಸ್ಯರು, ಕಾರಣಾಂತರಗಳಿಂದ ನಿಯಮಿತ ವೇಳೆಗೆ ಬರದ್ದರಿಂದ, ಏನೂ ನಿರ್ಣಯವಾಗದೆ ಸಭೆ ಮುಕ್ತಾಯವಾಯಿತು. ”

—ಸ್ವ. ಸು.

ಸಾಹಿತ್ಯದಲ್ಲಿ ಹಳೆ–ಹೊಸದುಗಳ ವಾದ ನಿರರ್ಥಕ. ಇಂದು ಹೊಸದಾಗಿದ್ದು ನಾಳೆಗೆ ಹಳೆಯದಾಗಬಲ್ಲದ್ದು ದೊಡ್ಡ ಸಾಹಿತ್ಯ ಸಂಪ್ರದಾಯಕ್ಕೆ ಸೇರಲಾರದು. ಸಾಹಿತ್ಯಸತ್ತ್ವದ ಮಾತು ಹೇಗೆ ಇರಲಿ; ಭಿನ್ನರುಚಿಗಳಿಗೂ ಅವಕಾಶ ಬೇಡವೆ? ತಾವು ಹಳೆಯದೆಂದು ತಿಳಿದುಕೊಂಡದ್ದನ್ನು ತಮ್ಮಿಂದ ಹೊಗಳುವುದಾಗದಿದ್ದರೂ ತೆಗಳುವ ವ್ಯರ್ಥೋತ್ಸಾಹವೇಕೆ?—ಎಂಬ ಹಲವಾರು ಮಾತುಗಳನ್ನು ಇತ್ತೀಚೆಗೆ ಕವಿಗಳೊಬ್ಬರು ಕವನರೂಪದಲ್ಲಿ ಸುಂದರವಾಗಿ ಕೇಳಿದ್ದಾರೆ. ಅವರ ಸರಸವಾದ ಮಾತನ್ನೇ ಕೇಳಿ:—

‘ ಹಳೆಯದೆಲ್ಲವು ಹೊಲ್ಲ, ಹಾಕು ಬೆಂಕಿಗೆ ಎಲ್ಲ,
ಹೊಸದೊಂದೆ ನಲ್ಲದೆನುವೀ ಕೂಗು ಏಕೆ?
ಹಳಬರೆನಿಸಿದ ನಿನ್ನ ಹಡೆದ ತಾಯಿ-ತಂದೆಗಳ
ಕೊರಲ ಕೊಯ್ಯದೆ ಸುಮ್ಮನಿರುವೆಯೇಕೆ?’

ಇದನ್ನು ಬರೆದ ಕವಿಗಳು ಸಾಂಪ್ರದಾಯಿಕರು ಎಂಬುದು ಇದರ ಮೇಲಿಂದ ಸ್ಪಷ್ಟವೇ ಇದೆ. ಅದಕ್ಕೆಯೇ ಅವರು ಹೇಳುವುದು:—

‘ ತನ್ನ ನಡೆಯೇ ಪ್ರಗತಿಯಿನ್ನುಳಿದುದಪ್ರಗತಿ
ಎಂಬ ತಿಳುವಳಿಕೆಯಿರೆ— ದೇವರೆ ಗತಿ!’

ಸಾರ್ಥಕವಾದ ಪ್ರಶ್ನೆಯೊಂದನ್ನು ಕೇಳಿದಾರೆ:—

‘ರಾಮಾಯಣದ ಸುಡಿರೊ, ಭಾರತವ ಬಿಸುಡಿರೋ
ಎಂದೆನಲು ಅವು ಬರಿಯ ಹಾಳೆ ಕಟ್ಟೆ?
ಆ ಮಹಾಕಾವ್ಯಗಳು ನಮ್ಮ ಜನಜೀವನದ
ಹಾಸು-ಹೊಕ್ಕುವ ತೆಗಳೆ ನೀನೆ ಕೆಟ್ಟೆ!’

ಹೊಸಮನೆಗಳನ್ನು ಕಟ್ಟಬೇಕೆಂದವರು ಕಟ್ಟಲಿ; ಆದರೆ “ ಹೊಸದೆಂಬ ಮೋಹದಲಿ ಕಲೆಯ ಹಳೇಬೀಡುಗಳ, ಒಡೆಯದಿರು; ಮುರಿಯದಿರು: ಅವು ನಾಡಕೋಡವು. ” ಈ ರೀತಿ ಬರೆ, ಇನ್ನೊಂದು ರೀತಿಯಲ್ಲಿ ಬರೆಯಬೇಡಿರೆಂದು ಯಾರಿಗಾದರೂ ವಿಧಿಸಬಹುದೆ? ಅದಕ್ಕಾಗಿಯೇ ಕೇಳಿದ್ದು: “ ಸಾಹಿತ್ಯ ನೀಮೊ ಪ್ರೊಕ್ರಸ್ಟಿಸನ ಹಾಸಿಗೆಯೆ! ಬರೆಹಾರರು ನಿನ್ನ ವಶರೆ, ಬಲಿಯೆ? ” “ ಕೋಣೆಯೊಳು ಕುಳಿತು ಬಡವನ ಬಾಳ ಚಿತ್ರವನು ಚಿತ್ರಿಸೆಯಲಾ? ” ಏನು ಪ್ರಯೋಜನ ಅದರಿಂದ? “ ನಾಡಿನರಿಯಮೆಯ ಕತ್ತಲೆಯನ್ನು ಮೊದಲು ಕಳೆ, ಅವರಿಗೊದಗಿಸು ಮೊದಲು ಅನ್ನ ಬಟ್ಟೆ ” ಅಲ್ಲದೆ “ ಬರಿ ಬೋಧನೆಯ ಬಿಟ್ಟು, ಧುಮುಕು ಕಾರ್ಯದ ಕಳಕೆ ” ಎಂದು ಕೊನೆಯಲ್ಲಿ ಕವಿ ಆಹ್ವಾನಿಸಿದ್ದಾನೆ.

ಇದರಲ್ಲಿಯ ಕೆಣಕುನುಡಿ, ಅಣಕುನುಡಿ ಯಾರನ್ನು ಸಂಬೋಧಿಸಲಾಗಿದೆ ಎಂಬುದನ್ನು ಬಿಚ್ಚಿ ಹೇಳುವ ಆವಶ್ಯಕತೆ ತೋರುವುದಿಲ್ಲ. ಬರೆದವರ ಹೆಸರನ್ನು ಹೇಳುವಂತಿಲ್ಲ. ಯಾಕೆಂದರೆ ಅವರು “ಕವಿಮಿತ್ರ” ಎಂಬ ಕಾವ್ಯನಾಮದ ಹಿಂದಿನಿಂದ ಕಾಣದವರಾಗಿದ್ದಾರೆ. ಈ ದೀರ್ಘ ಕವನದ ಹೆಸರು “ ಕಾವ್ಯಾಲಾಪ ”. ಬೆಂಗಳೂರಿನ ತರುಣ ಸಾಹಿತಿಗಳಾದ ಶ್ರೀ. ಎಂ. ವಿ. ಸೀತಾರಾಮಯ್ಯನವರು ಸಂಪಾದಿಸಿ ಪ್ರಕಟಿಸಿದ್ದಾರೆ. ಕವಿ ಯಾರಿರಬಹುದೆಂಬ ಊಹೆ ನಿಷ್ಪ್ರಯೋಜಕ; ಕವನ ಚೆನ್ನಾಗಿದೆ. ಗಳಗಿದಕ್ಕೆ ಸರಳ ಶೈಲಿಯಲ್ಲಿ. ಸರಳ ಶೈಲಿಯ ಜೊತೆಯಲ್ಲಿ ಸರಳವಾದ ವಿಚಾರ. ಎಲ್ಲವೂ ಸೇರಿ ಸಮಕಾಲೀನ ಸಾಹಿತ್ಯಕ್ಕೆ ಸಂಬಂಧಪಟ್ಟ ವಿಮರ್ಶನಾತ್ಮಕ ಕವನವೊಂದನ್ನು ಕನ್ನಡಿಗರಿಗೆ ಕೊಟ್ಟುದಕ್ಕಾಗಿ, ಶ್ರೀ. “ ಕವಿಮಿತ್ರ ” ರಿಗೂ ಸಂಪಾದಕರಾದ ಶ್ರೀ. ಸೀತಾರಾಮಯ್ಯನವರಿಗೂ ವಂದನೆಗಳು.

* * * *

ಈ “ ಕಾವ್ಯಾಲಾಪ ”ದ ಪ್ರಕಟನೆಯ ರೀತಿ ಹೊಸದು. ಒಳ್ಳೆಯದೆಂದೇ ಹೇಳಬೇಕು. ಹನ್ನೆರಡು ಪುಟಗಳ ಈ ಚಿಕ್ಕ ಹೊತ್ತಿಗೆಯ ಬೆಲೆ ಕೇವಲ ಎರಡಾಣೆ. ಕಾಗದದ ಮುಗ್ಗಟ್ಟಿನ ಈ ಕಾಲದಲ್ಲಿ ದೊಡ್ಡ ದೊಡ್ಡ ಪುಸ್ತಕಗಳನ್ನು ಪ್ರಕಟಿಸುವುದೊಂದು ಸಾಹಸದ ಕೆಲಸವಾದಾಗ, ಒಳ್ಳೆಯ ಕೃತಿಗಳನ್ನು ಒಂದನ್ನೊ ಎರಡನ್ನೊ ಸೇರಿಸಿ ಈ ರೀತಿ ಜನರ ಮುಂದಿಡುವುದು ಸುಲಭವಲ್ಲದೆ ಓದುಗನ ದೃಷ್ಟಿಯಿಂದಲೂ ಹಿತಕರವಾದದ್ದು. ವಿಶೇಷವಾಗಿ ಕವನ ಸಂಗ್ರಹಗಳನ್ನು ಒಂದು ತುದಿಯಿಂದ ಮತ್ತೊಂದು ತುದಿಯ ವರೆಗೆ ಸಮಗ್ರವಾಗಿ ಓದುವವರು ತೀರ ವಿರಲವೆಂದೇ ಹೇಳಬೇಕು. ಹೀಗಿದ್ದಾಗ ಕೆಲವಾರು ಕವನಗಳನ್ನು ಮಾತ್ರ ಸೇರಿಸಿ ಜನರ ಮುಂದಿಟ್ಟರೆ ಕೊಂಡುಕೊಳ್ಳುವವರಿಗೂ ಸುಲಭವಾಗುವುದು; ಓದುವುದಕ್ಕೂ ಬೇಸರವಾಗದು. ಉತ್ತಮ ಕವನಗಳನ್ನಲ್ಲದೆ ಉತ್ತಮ ಕತೆಗಳನ್ನೂ ಈ ರೀತಿ ಪ್ರಕಟಿಸಬಹುದಾಗಿದೆ. ಇದೇ ರೀತಿ ಬಂಗಾಲ ಸಾಹಿತ್ಯ ಪ್ರಪಂಚದಲ್ಲೂ

(೨೪೫ನೆಯ ಪುಟದ ಆದಿಯಲ್ಲಿ)



ಏಕೀಕರಣ ಮತ್ತು ಜನತೆ

ಕಳೆದ ಡಿಸೆಂಬರಿನ ಏಕೀಕರಣದ ಸಮ್ಮೇಳನದಿಂದ ಮತ್ತು ದೇಶದ ರಾಜಕೀಯ ಭವಿತವ್ಯತೆಯ ದೃಷ್ಟಿಯಿಂದ, ಈಗ ಏಕೀಕರಣವು ಕನ್ನಡಿಗರಿಗೆ ಅಗತ್ಯದ ಮತ್ತು ಅವಸರದ ಪ್ರಶ್ನೆಯಾಗಿದೆ— ಎಂಬುದರಲ್ಲಿ ಸಂದೇಹವಿಲ್ಲ. ಮುಂದಾಳುತನದ ಅಭಾವಕ್ಕಾಗಿ ಈ ಪ್ರಶ್ನೆ ಹಿಂದೆ ಬಿದ್ದು ಕನ್ನಡನಾಡಿಗೆ ಅಪಾರ ಹಾನಿಯಾಗಿದೆ ಎಂಬುದು ನಿಜವಿದ್ದರೂ, ಈಗಲಾದರೂ ಜನತೆ ತನ್ನ ಅಭಿಪ್ರಾಯವನ್ನು ಹಟದಿಂದ ಎತ್ತಿ ಹಿಡಿದರೆ, ಶಾಶ್ವತಹಾನಿಯಾದರೂ ತಪ್ಪಬಹುದಾಗಿದೆ. ಈ ವಿಷಯದಲ್ಲಿ ಜನತೆಯಿಂದ ಒಂದು ಘೋಷಣವನ್ನು ನಾವು ಅಪೇಕ್ಷಿಸುತ್ತೇವೆ. ಏಕೀಕರಣ ಚಳವಳವು ಪ್ರತಿಯೊಬ್ಬ ಕನ್ನಡಿಗನ ಚಳವಳವು, ಅದಕ್ಕಾಗಿ ಪ್ರತಿಯೊಬ್ಬನೂ ಅದರಲ್ಲಿ ಭಾಗವನ್ನು ವಹಿಸಬೇಕೆಂಬ ಸದುದ್ದೇಶದಿಂದ ಕಳೆದ ಸಮ್ಮೇಳನದಲ್ಲಿ ಸದಸ್ಯತ್ವದ ವಂತಿಗೆಯನ್ನು ವರ್ಷಕ್ಕೆ ಬರಿಯ ನಾಲ್ಕಾಣೆಗೆ ಇಳಿಸಿದೆ. ಇದರ ಮಹತ್ತ್ವವನ್ನೂ ಲಾಭವನ್ನೂ ಜನತೆಯು ಕೃತಿಯಿಂದ ತೋರಿಸಬೇಕು. ಪ್ರತಿಯೊಬ್ಬ ಕನ್ನಡಿಗನು ನಾಲ್ಕಾಣೆಯನ್ನೂ ಅಖಂಡ ಕರ್ನಾಟಕತ್ವದ ಧ್ಯೇಯವನ್ನೂ ಒಪ್ಪಿ, ಕೂಡಲೆ ಏಕೀಕರಣ ಸಂಘದ ಸದಸ್ಯನಾಗಬೇಕು.

ಉತ್ಸಾಹಿಗಳ ಹೊಣೆ

ಅದರಂತೆಯೆ ಏಕೀಕರಣಕ್ಕಾಗಿ ನಿಜವಾದ ಕಳಕಳಿಯನ್ನೂ ಉತ್ಸಾಹವನ್ನೂ ತೋರಿಸುತ್ತಿರುವವರಾದರೂ, ಈಗ ಅವೆರಡೂ ಗುಣಗಳನ್ನು ಕಾರ್ಯರಥಕ್ಕೆ ಹೂಡಬೇಕು. ಇಂದು ಪ್ರತಿಯೊಬ್ಬ ಉತ್ಸಾಹಿಯೂ ತಾನೇ ಮುಂದಾಳು ಎಂಬಂತಹ ಆತ್ಮವಿಶ್ವಾಸದಿಂದ ಮುಂದಾಗಬೇಕು. 'ಮುಂದಾಳು' ಎಂದರೆ ಹಿಂದೆ ಕುಳಿತು ಮಂದಿಯನ್ನು ಮುಂದೆ ನೂಕುವುದಲ್ಲ, ಇಲ್ಲವೆ ಮಂದಿಗೆ ಇದಿರಾಗಿ ಕಾರ್ಯಕ್ಕೆ ಬೆನ್ನು ಮಾಡಿ ಹಿಂದಾಳುಗಳ ಹಾರ-ಚಪ್ಪಾಳೆಗಳಿಗೆ ತಲೆಬಾಗಿಸುವುದಲ್ಲ— ಎಂಬುದನ್ನು ಎಲ್ಲರೂ ಲಕ್ಷ್ಯದಲ್ಲಿಡಬೇಕು. ಕಾರ್ಯದ ಸಂಘಟನಾ ಶಕ್ತಿಯಲ್ಲಿ, ಜನತೆಯು ತನ್ನ ಜನತೆಯ ಶಕ್ತಿ-ವಿಶ್ವಾಸಗಳನ್ನು ತಿಳಿದುಕೊಳ್ಳುವಂತೆ ಮಾಡುವಲ್ಲಿ, ಧ್ಯೇಯವನ್ನು ಎಲ್ಲರಿಗೆ ಕಾಣುವಂತೆ ಎತ್ತಿ ಹಿಡಿಯುವುದರಲ್ಲಿ ಮುಂದಾಳುತನವಿದೆ. ಇಂದು ಪ್ರತಿಯೊಂದು ಹಳ್ಳಿಯಲ್ಲಿ, ತಾಲೂಕಿನಲ್ಲಿ ಇಂತಹ ಮುಂದಾಳುತನ ಇದೆ ಎಂಬ ಭರವಸೆ ನಮಗೆ ಇದೆ. ಅಖಿಲ ಕರ್ನಾಟಕ ಏಕೀಕರಣ ಸಂಘವು ಈ ಕೋಟಿಗಟ್ಟಲೆಯ 'ಉತ್ಸಾಹಿ'ಗಳ ಹೃದಯಗಳಲ್ಲಿದ್ದ ಭಾವನೆಯ ಪ್ರತೀಕದಂತೆ. ನಿಜವಾದ ಸಂಘವು (ಎಂದರೆ ಶಕ್ತಿಯು) ಪ್ರತಿಯೊಬ್ಬ ಉತ್ಸಾಹಿ ಕನ್ನಡಿಗನೆ. ಈ ಮಾತನ್ನರಿತು ಉತ್ಸಾಹಿಗಳು ಏಕೀಕರಣ ಚಳವಳವು ಯಶಸ್ವಿಯಾಗುವಂತೆ ತಮ್ಮ ಹೊಣೆಯನ್ನು ಹೊತ್ತುಕೊಳ್ಳಬೇಕು. ವ್ಯಕ್ತಿಗೆ ಭಾರವಾಗದಂತೆ ನೋಡುವ ಹೊಣೆ ಅಖಿಲ ಕರ್ನಾಟಕ ಏಕೀಕರಣ ಸಂಘದ್ದು ಎಂಬುದನ್ನೂ ಲಕ್ಷ್ಯದಲ್ಲಿಡಬೇಕು.

ಶೀಘ್ರ ಮತ್ತು ಸುಲಭ

ಆಯಾ ಹಳ್ಳಿ-ತಾಲೂಕು-ಜಿಲ್ಲೆಗಳಲ್ಲಿ ಸ್ಥಳೀಯ ಉತ್ಸಾಹಿಗಳು ಮುಂದಾದರೆ, ಚಳವಳದ ಕಾರ್ಯವು ಸುಲಭವಾಗುವುದಲ್ಲದೆ, ಧ್ಯೇಯ ಸಾಧನೆಯೂ ಶೀಘ್ರದಲ್ಲಿಯೆ ಆಗಬಹುದಾಗಿದೆ. ನಾಲ್ಕಾಣೆಯ ಸದಸ್ಯರನ್ನು ಕೂಡಿಸುವುದು ಮೊದಲ ಕೆಲಸ; ಹಾಗೆ ಮಾಡುವುದರಿಂದ ಚಳವಳವು ಸಾಮಾನ್ಯನವರೆಗೆ ಮುಟ್ಟುವುದಲ್ಲದೆ, ಚಳವಳಕ್ಕೆ ಅಖಂಡ ಕರ್ನಾಟಕದ ನೈತಿಕ ಬೆಂಬಲವೂ ಇದೆ ಎಂಬುದು, ಮಿಕ್ಕವರಿಗೂ ಸರಕಾರಕ್ಕೂ ಸ್ಪಷ್ಟವಾಗುವುದು. ಇದಾದಮೇಲೆ ಮುಖ್ಯವಾದ ಕೆಲಸ ಎರಡು ತರದ್ದಿದೆ; ಒಂದು ಸದ್ಯದ ವಿಭಕ್ತ ಸ್ಥಿತಿಗಾಗಿ ಆಗುತ್ತಿರುವ ಅನ್ಯಾಯ-ಅನನುಕೂಲತೆಗಳನ್ನು ಬಯಲಿಗೆ ತರುವುದು; ಎರಡು, ತಮ್ಮಲ್ಲಿ ಯಾವ ಕಾರ್ಯದಿಂದ ಇವು ದೂರವಾಗಬಹುದೆಂಬುದನ್ನು ಕಂಡುಹಿಡಿಯುವುದು. ಮೊದಲನೆಯದು ಪ್ರಚಾರದ ವಿಷಯವಾಗುವುದು, ಎರಡನೆಯದು ಸಂಘಟನೆಯದಾಗುವುದು. ಪ್ರಚಾರದ ಕೆಲಸವನ್ನು ಯಾವಾಗಲೂ ಕೇಂದ್ರಸಂಘಕ್ಕೆ ಒಪ್ಪಿಸುವುದುತ್ತಮ; ಹಾಗೆ ಮಾಡಿದಲ್ಲಿ ಪ್ರಚಾರಕ್ಕೆ ಮಹತ್ತ್ವ-ಗೌರವ-ಪ್ರಸಾರಗಳು ದೊರೆಯುವುವು; ಅದಕ್ಕಾಗಿ ಸ್ಥಳೀಯ ಉತ್ಸಾಹಿಗಳು ತಮ್ಮಲ್ಲಿಯ ಅನ್ಯಾಯ-ಅನನುಕೂಲತೆಗಳನ್ನು ಸರಿಯಾಗಿ ಮತ್ತು ವಿವರವಾಗಿ ಕೇಂದ್ರ ಕಚೇರಿಗೆ ತಿಳುಹಿಸಬೇಕು. ಇವಲ್ಲದೆ ತಮ್ಮಲ್ಲಿ ಯಾವ ಕಾಲಕ್ಕಾದರೂ ದೊಡ್ಡ ಅಧಿಕಾರಿಗಳು ಇಲ್ಲವೆ ಮುಂದಾಳುಗಳು ಬರುವಂತಿದ್ದರೆ, ಮುಂಚಿತವಾಗಿಯೆ ಕೇಂದ್ರದಿಂದ ಸಹಾಯವನ್ನು ಪಡೆದುಕೊಂಡು ಈ ಅಧಿಕಾರಿಗಳೆದುರು ತಮ್ಮ ಬೇಡಿಕೆಗಳನ್ನಿಡಬೇಕು.

ಸ್ಥಳೀಯ ಸಂಘಟನೆ

ಸ್ಥಾನಿಕವಾಗಿ ಯಾವ ಕಾರ್ಯವನ್ನು ಕೈಕೊಳ್ಳುವುದಗತ್ಯ. ಎಂಬುದನ್ನು, ಯಾವಾಗಲೂ ಅಲ್ಲಿಯವರೇ ನಿರ್ಣಯಿಸುವುದು ಒಳಿತು.

ಸ್ಥಳೀಯ ಪರಿಸ್ಥಿತಿ, ಅಗತ್ಯ ಅವಸರ ಇವೆಲ್ಲ ಅವರಿಗೆ ಹೆಚ್ಚು ಮತ್ತು ಚೆನ್ನಾಗಿ ಗೊತ್ತು. ಇಂತಹ ಕಾರ್ಯವನ್ನು ಮಾಡಬೇಕೆಂದು ಗೊತ್ತಾದ ಮೇಲೆ ಅದು ಸಂಘಟನೆಯ ವಿಷಯವಾಗುವುದು ಎಂದು ಮೇಲೆಯೆ ಹೇಳಿದೆಯಷ್ಟೆ? ಸಂಘಟನೆಯ ವಿಷಯದಲ್ಲಿ ಮಾತ್ರ ಕೇಂದ್ರಸಂಘವನ್ನೆ ಮುಂದೆ ಮಾಡಬೇಕು. ಅಲ್ಲಿ ಅನುಭವದವರಿರಬಹುದು, ಕೇಂದ್ರಸಂಘವೆಂಬ ಅಧಿಕಾರವೂ ಇರುವುದು. ಆದರೂ ಕಾರ್ಯವನ್ನು ನಿರ್ವಹಿಸುವ ಹೊಣೆಯನ್ನು ಮಾತ್ರ ಪರಿಸ್ಥಿತಿಗೆ ಪರಿಚಿತರಾದ ಸ್ಥಳೀಯರೆ ಹೊರುವುದುತ್ತಮ. ಅನುಭವದ ಕೆಲಸಗಾರರನ್ನೊ ಮತ್ತಾವ ರೀತಿಯ ಸಹಾಯವನ್ನೊ ಕೇಂದ್ರಸಂಘದಿಂದ ಪಡೆದುಕೊಂಡರೆ ಸಾಕು. ಪ್ರತಿಯೊಂದಕ್ಕೂ ಕೇಂದ್ರಸಂಘದ್ದೆ ಹೊಣೆ ಎಂಬ ವೃತ್ತಿಯು ಸ್ಥಳೀಯ ಕಾರ್ಯಕರ್ತರಿಗೆ ಗೌರವವಲ್ಲ, ಕಾರ್ಯಸಾಧನೆಗೆ ಪೋಷಕವಲ್ಲ; ಇಂತಹ ವೃತ್ತಿ ಬೇಡ ಎಂದೇ ಪ್ರತಿಯೊಬ್ಬ ಉತ್ಸಾಹಿಯೂ ತಾನೇ ಮುಂದಾಳು ಎಂದು ತಿಳಿಯಬೇಕು ಎಂದು ಹೇಳುತ್ತಲಿದ್ದೇವೆ. ಆದರೆ ಇದರಿಂದ ಕೇಂದ್ರಸಂಘವು ತನ್ನ ಕಾರ್ಯವನ್ನು ಉಳಿಸಿಕೊಂಡಂತಾಗುವುದು ಎಂದೂ ತಿಳಿಯಲಾಗದು. ಯಾಕೆಂದರೆ, ಕೇಂದ್ರಸಂಘಕ್ಕೆ ಮುಖ್ಯವಾಗಿ ಸಂಬಂಧಿಸಿದ ಬೇರೆ ಅನೇಕ ಮಹತ್ತ್ವದ ಸಂಗತಿಗಳಿರಬಹುದಾಗಿದೆ. ದೃಷ್ಟಾಂತವಾಗಿ, ಗಡಿನಾಡಿನ ಕೆಲವು ಭಾಗಗಳ ಪ್ರಶ್ನೆ. ಕೆಲವೆಡೆ ಕನ್ನಡಿಗರೇ ಪರಭಾಷೆಯ ಮತ್ತು ಪರಸಂಸ್ಕೃತಿಯ ಬಲೆಯಲ್ಲಿ ಸಿಕ್ಕಿರಬಹುದಾಗಿದೆ. ಆಗ ಜನತೆಯನ್ನು ಎಚ್ಚರಿಸುವುದು ಅಧಿಕಾರಯುಕ್ತವಾದ ಕೇಂದ್ರ-ಸಂಘದ ಮುಖ್ಯ ಹೊಣೆಯಾಗುವುದು.

ತಜ್ಞರ ಹೊಣೆ

ಏಕೀಕರಣ ಚಳವಳಿಕ್ಕೆ ಸಕಾಲದಲ್ಲಿ ಯಶಸ್ಸು ದೊರೆಯಬೇಕಾದರೆ ಇನ್ನೂ ಕೆಲವು ಮಹತ್ತ್ವದ ಸಂಗತಿಗಳಿವೆ, ಅವನ್ನು ಕೇಂದ್ರಸಂಘವೆ ಮಾಡಬೇಕಾಗುವುದು. ಕಳೆದ ಡಿಸೆಂಬರಿನ ಸಮ್ಮೇಳನದ ಕಾರ್ಯಕಲಾಪದಲ್ಲಿ ಈ ಸಂಗತಿಗಳು ಬಂದಿವೆ. ಒಂದು, ಏಕೀ-ಕರಣದ ಬೇಡಿಕೆಯ ಮತ್ತು ಅಗತ್ಯದ ಸಾಧಕ-ಬಾಧಕಗಳನ್ನು ಸಪ್ರಮಾಣವಾಗಿ ಮಂಡಿಸುವ ಕೆಲಸ, ಇದಕ್ಕಾಗಿ ಸಮ್ಮೇಳನವು ಒಂದು ತಜ್ಞರ ಉಪಸಮಿತಿಯನ್ನು ನಿಯಮಿಸಿದೆ. ಅದರಂತೆಯೆ ಯುದ್ಧೋ-ತ್ತರ ಪುನರ್ರಚನೆಯಲ್ಲಿ ಕರ್ನಾಟಕಕ್ಕೆ ಅಲಕ್ಷ್ಯವಾದಲ್ಲಿ, ಏಕೀಕರಣದ ಸತ್ತ್ವವೆ ಜಾರಿದಂತಾಗುವುದು. ಈ ಮಾತನ್ನು ಸಮ್ಮೇಳನವು ಒಪ್ಪಿಕೊಂಡಿದೆ; ಆದರೆ ಕೂಡಲೆ ಈ ವಿಷಯದಲ್ಲೂ ಸಂಘವು ಬೇಗನೆ ಕಾರ್ಯಪ್ರವೃತ್ತವಾಗಲೆಂದು ಹಾರಯಿಸುತ್ತೇವೆ. ಇಲ್ಲಿಯೂ ತಜ್ಞರ ಸಹಾಯವೆ ಬೇಕು. ಸುದೈವದಿಂದ ಇಂತಹ ಕೆಲಸಕ್ಕೆ ಅಗತ್ಯವಿದ್ದ ತಜ್ಞ ಕನ್ನಡಿಗರ ಕೊರತೆ ಇಲ್ಲ. ಆದರೆ ಇದುವರೆಗೆ ಏಕೀಕರಣಕ್ಕಾಗಿ ಸಂಘಟನೆಯಾಗಲಿ ಭಾವನೆಯಾಗಲಿ ಬಲಗೊಂಡಿಲ್ಲ. ಇಂದು ಕೆಲವು ತಜ್ಞರಾದರೂ ಕರ್ನಾಟಕಕ್ಕಾಗಿ ಈ ಒಂದೆರಡು ಕೆಲಸಗಳನ್ನು ಮಾಡಲು ಮುಂದೆ ಬಂದರೆ ಸಾಕು ಎನ್ನುವಂತಹ ನಿರಾಶಾಜನಕ ವಾತಾವರಣ ಇದುವರೆಗೆ ಬೆಳೆದಿದೆ. ಏಕೀಕರಣ ಸಂಘವು ತನ್ನ ಚಟುವಟಿಕೆಗಳಿಂದ ಈ ವಾತಾವರಣವನ್ನು ಆದಷ್ಟು ಬೇಗ ಬದಲಾ-ಯಿಸಬೇಕಾಗಿದೆ.

ಧನಿಕರ ಕರ್ತವ್ಯ

ಈ ಸಂದರ್ಭದಲ್ಲಿ ಒಂದು ಮಾತನ್ನು ಮಾತ್ರ ಎಷ್ಟು ಸಲ ಹೇಳಿದರೂ ನಮಗೆ ತೃಪ್ತಿಯಾಗದು. ಮೇಲೆ ವಿವರಿಸಿದ ಕಾರ್ಯವನ್ನು, ವಿಶೇಷವಾಗಿ ತಜ್ಞರ ಲಾಭ ಪಡೆದುಕೊಳ್ಳುವುದನ್ನು, ಫಲಕಾರಿಯಾಗಿ ಮಾಡಬೇಕಾದರೆ ಹಣದ ಅಗತ್ಯವಿದೆ. ಯೋಗ್ಯವಾದ ಪುಸ್ತಕಗಳ, ಆಧಾರ ಗ್ರಂಥಗಳ, ಸರಕಾರೀ ಪ್ರಕಟನೆಗಳ ಸಂಗ್ರಹ ಅವಶ್ಯವಿದೆ; ಕೆಲವೆಡೆ ಕಾರ್ಯಕರ್ತರು ಸಮಕ್ಷ ಹೋಗಿ ಸಂಖ್ಯೆಗಳನ್ನು ಕೂಡಿಸಬೇಕಾಗುವುದು; ಮಾಡಿದ ಕೆಲಸವನ್ನು ಜನತೆಯ ಮತ್ತು ಸರಕಾರದ ಲಕ್ಷ್ಯಕ್ಕೆ ತರುವಂತೆ ಪ್ರಕಟಿಸಬೇಕಾಗುವುದು; ಚಳವಳವನ್ನು ಕೇಂದ್ರೀಕರಿಸಿ ಮತ್ತು ಅಖಂಡವಾಗಿ ಸಾಗಿಸಲು, ಕೇಂದ್ರ ಕಚೇರಿಯಲ್ಲಿ ಸಂತತವಾಗಿ ದುಡಿಯುವ ಬುದ್ಧಿವಂತ ಉತ್ಸಾಹಿ ತರುಣರು ಬೇಕು; ಪ್ರಚಾರಕ್ಕಾಗಿ ಚಿಕ್ಕ ಪ್ರಕಟನೆಗಳು ಬೇಕು — ಇದೆಲ್ಲ ಕೆಲಸಕ್ಕೆ ಪ್ರಾರಂಭದಿಂದಲೆ ಧನದ ತೊಂದರೆ ತಪ್ಪಬೇಕು. ಅಲ್ಲಲ್ಲಿ ಭಿಕ್ಷೆ ಬೇಡಿ

(೨೪೩ನೆಯ ಪುಟದಿಂದ ಮುಂದುವರಿದುದು)

ಪ್ರಕಟನೆ ನಡೆದಿದೆ. ಕಲಕತ್ತೆಯಲ್ಲಿಯ ಕವಿತಾಭವನದವರು ಈ ತೆರದ ಚಿಕ್ಕ ಚಿಕ್ಕ ಕವನ ಸಂಗ್ರಹಗಳನ್ನಲ್ಲದೆ "ಫೋಟಾಗಲ್ಪ" ಎಂಬ ಸಾಮಾನ್ಯ ಹೆಸರಿನಲ್ಲಿ ತಿಂಗಳಿಗೊಂದರಂತೆ ಸಣ್ಣ ಕತೆಗಳನ್ನೂ ಪ್ರಕಟಿ-ಸುತ್ತಿದ್ದಾರೆ. ಬಂಗಾಲದ ಸುಪ್ರಸಿದ್ಧ ಲೇಖಕರ ಕೃತಿಗಳು ಈ ಚಿಕ್ಕ ಹೊತ್ತಿಗೆಗಳಲ್ಲಿ ಇಂದು ಹೊರಬೀಳುತ್ತಿವೆ. ಜನ ಅವುಗಳನ್ನು ಬಹು ಆದರದಿಂದ ಬರಮಾಡಿಕೊಳ್ಳುತ್ತಿದ್ದಾರೆ. ಅಂದವಾಗಿ ಮುದ್ರಿತ-ವಾದ ಅಚ್ಚುಕಟ್ಟಾದ ಹೊರವೈಯುಳ್ಳ ಆ ಪ್ರಕಟನೆಗಳನ್ನು ನೋಡಿದವರಾರೂ ಈ ಕನ್ನಡ ಕೃತಿಗಳಾದರೂ ಅಷ್ಟೇ ಅಂದವಾಗಿ, ಅಚ್ಚುಕಟ್ಟಾಗಿ ಬರಬೇಕೆಂದು ಬಯಸದಿರಲಾರರು. ಬೆಲೆ ಇನ್ನೊಂ-ದಾಣೆ ಏರಬಹುದು ಅಷ್ಟೆ! ಆದರೆ ಅಂತರಂಗದಂತೆ ಬಹಿರಂಗವೂ ಸುಂದರವಾಗಿರಬೇಕಲ್ಲವೆ? ಶ್ರೀ. ಸೀತಾರಾಮಯ್ಯನವರು ಈ ಸೂಚನೆಯನ್ನು ಮನ್ನಿಸಬೇಕು.

× × × ×

ಭಾರತದ ರಾಜಕೀಯ ವಿಚಾರದಲ್ಲಿ, ಅದರಲ್ಲಿ ವಿಶೇಷವಾಗಿ ಹಿಂದೀ ಸಂಸ್ಥಾನಗಳ ವಿಚಾರದಲ್ಲಿ ಶ್ರೀ. ಡಿ. ವಿ. ಗುಂಡಪ್ಪನವರ ಹೊರತಾಗಿ ಇದುವರೆಗೆ ಕನ್ನಡಿಗರಾದವರು ಬೇರೆ ಯಾರೂ ಲೆಕ್ಕಣಿಕೆ-ಯನ್ನು ಎತ್ತಿರಲಿಲ್ಲ. ಇತ್ತೀಚೆಗೆ ಬೆಳಗಾಂವಿಯ ಶ್ರೀ. ವಿ. ಬಿ. ಕುಲ-ಕರ್ಣಿಯವರು ಎರಡು ಪುಸ್ತಕಗಳನ್ನು ಇಂಗ್ಲಿಷಿನಲ್ಲಿ ಪ್ರಕಟಿಸಿದ್ದುದು ಶ್ಲಾಘ್ಯ. ಅವರ "ಹಿಂದೀ ಸಂಸ್ಥಾನಗಳ ಭವಿತವ್ಯ" ಮತ್ತು "ಪಾಕಿಸ್ತಾನ ಅವಶ್ಯವೆ?" ಎಂಬೆರಡೂ ಪುಸ್ತಕಗಳು, ದೇಶದಲ್ಲಿಯ ಬೇರೆ ಬೇರೆ ಪಂಡಿತರಿಂದ ಪತ್ರಿಕೆಗಳಿಂದ ಸ್ವಾಗತಿಸಲ್ಪಡುತ್ತಿದ್ದುದು ಆನಂದದ್ದಲ್ಲದೆ ಹೆಮ್ಮೆಯ ವಿಷಯ. ಆಳವಾದ ಅಭ್ಯಾಸ, ರಾಷ್ಟ್ರೀಯ ದೃಷ್ಟಿಕೋನ; ನಿರ್ದಾಕ್ಷಿಣ್ಯವಾದ ವಿಮರ್ಶಬುದ್ಧಿ, ಇಂಗ್ಲಿಷ್ ಭಾಷೆಯ ಮೇಲಿನ ಪ್ರಭುತ್ವ ಇವೆಲ್ಲವೂ ಸೇರಿ, ಅವರ ಪ್ರಕಟನೆಗಳಿಗೆ ಒಂದು ಅಧಿಕಾರದ ಸ್ಥಾನವನ್ನು ತಂದುಕೊಡುವುದರಲ್ಲಿ ಸಂಶಯವಿಲ್ಲ. ಯುದ್ಧೋತ್ತರ ರಚನೆಯಲ್ಲಿ ಭಾರತದ ಸ್ಥಾನದ ಬಗ್ಗೆ ಇನ್ನೊಂದು ಪುಸ್ತಕವನ್ನು ಬರೆಯುತ್ತಿದ್ದಾರೆಂದೂ ಕೇಳಿದ್ದೇನೆ. ಕುಲಕರ್ಣಿಯವರಿಗೆ ಅಭಿ-ನಂದನೆಗಳು.

ಮಾಡತಕ್ಕ ಕೆಲಸವಿದಲ್ಲ, ಮಾಡುವ ಸಮಯವೂ ಇದಲ್ಲ. ಈ ಕೆಲಸ ಸಾಧ್ಯವಾಗಬೇಕಾದರೆ, ಧನವಂತರ ಸಹಾಯದಿಂದಲೇ ಶಕ್ಯವಿದೆ. ಪ್ರಾರಂಭದ ಒಂದೆರಡು ವರ್ಷಗಳ ಮಟ್ಟಿಗಾದರೂ, ಚಳವಳಿಕ್ಕೊಂದು ಆತ್ಮಬಲ ಬರುವ ಮಟ್ಟಿಗಾದರೂ, ಕೈಯಿಂದ ನೀಡುವ ಕೃಪಾಳುಗಳ ಅಗತ್ಯವಿದೆ. ನಿಜವಾಗಿ ನೋಡಿದರೆ, ನಮ್ಮಲ್ಲಿಯ ಲಕ್ಷ್ಮೀಪುತ್ರರು ಮನಸ್ಸು ಮಾಡಿದರೆ ಎರಡು ವರ್ಷಗಳ ಮಟ್ಟಿಗೆ (೧) ತಜ್ಞರ ಕೆಲಸಕ್ಕಾಗಿ, (೨) ಗಡಿನಾಡಿನ ಕೆಲಸಕ್ಕಾಗಿ, (೩) ಕಚೇರಿಯ ವೆಚ್ಚಕ್ಕಾಗಿ ಮತ್ತು (೪) ಪ್ರಚಾರಕ್ಕಾಗಿ— ಹೀಗೆ ಒಂದೊಂದಕ್ಕೆ ವಿಶಿಷ್ಟವಾಗಿ ೫೦೦೦ ರೂ. ಗಳಂತೆ ಇಪ್ಪತ್ತು ಸಾವಿರ ರೂ. ಗಳ ದಾನ ಮಾಡುವುದು— ಮನಸ್ಸು ಮಾಡಿದರೆ— ತೀರ ಸಣ್ಣ ಮಾತು ಎನ್ನಿಸಬಹುದಾಗಿದೆ. ಕೊಟ್ಟ ಧನದ ಸದ್ವಿನಿಯೋಗವಾಗುವಂತೆ ಕರಾರುಗಳನ್ನು ಸ್ಪಷ್ಟ ಮಾಡಿಸಿ ಕೊಟ್ಟರೆ. ಕೆಲಸಗಾರರಿಗೂ ಹಗುರಾಗುವುದು. ಇದು ಧನವಂತರ ಹೊಣೆ ಎಂದಿಷ್ಟೆ ನಾವು ಹೇಳುವುದಿಲ್ಲ, ಇಂದಿನ ಪ್ರಸಂಗದಲ್ಲಿ ಇದು ನಮ್ಮ ಧನವಂತರ ಕರ್ತವ್ಯವಾಗಿದೆ ಎಂದು ಹೇಳುತ್ತೇವೆ.

ಪ್ರಚಾರ ಮತ್ತು ಸಂಘಟನೆ

ಯಾವುದನ್ನು ಮಾಡಿದರೂ ಪ್ರಚಾರ ಮತ್ತು ಸಂಘಟನೆ ಅಗತ್ಯವಾಗಿವೆ ಎಂಬುದನ್ನು ಮರೆಯುವಂತಿಲ್ಲ. ಇದಲ್ಲದೆ ಇಂದಿನ ಕಾಲದಲ್ಲಿ ಪ್ರಚಾರಕ್ಕೂ ಸಂಘಟನೆಗೂ ನಿರ್ದಿಷ್ಟವಾದ ಉದ್ದೇಶ ಬೇಕಾಗಿದೆ. ಪ್ರಚಾರವು ಕನ್ನಡಿಗರಿಗಾಗಿ ಅಲ್ಲ, ಕನ್ನಡೇತರರಿಗಾಗಿ ಇರಬೇಕು: ಪ್ರಚಾರದ ಬಗೆಯು ಭಾವನೆಯುಳ್ಳದ್ದಾದರೂ ಪ್ರಚಾರಕ್ಕೆ ಬಲವು ಮಾತ್ರ ತರ್ಕದಿಂದ ಮತ್ತು ಸಿದ್ಧಸಂಗತಿಗಳಿಂದಲೇ ಬರಬೇಕಾದುದು. ಇನ್ನು ಸಂಘಟನೆ ನಮಗಾಗಿ, ಕನ್ನಡಿಗರಿಗಾಗಿ; ಒಂದು, ನಮ್ಮ ಕಾರ್ಯಶಕ್ತಿಯನ್ನು ಫಲಕಾರಿಯಾಗುವಂತೆ ಮಾಡಲು; ಇನ್ನೊಂದು, ನಮ್ಮವರೆ ನಮಗೆ ಕಾಲ್ತೊಡಕಾಗದಂತೆ ನೋಡಲು— ಹೀಗೆ ಇವೆರಡು ಮಾತುಗಳು ಸಂಘಟನೆಯ ಮೂಲದಲ್ಲಿರಬೇಕು. 'ಯಾರಿಗೂ ಗೊತ್ತಿಲ್ಲದ್ದು ನಮಗೇ ಗೊತ್ತಿದೆ' ಎಂಬ ಹೆಮ್ಮೆಯಲ್ಲಿ, ಉಪದೇಶದ ರೀತಿಯಲ್ಲಿ ಇದನ್ನು ನಾವು ಹೇಳುತ್ತಿರುವುದಿಲ್ಲ. ಆದರೆ ಅನೇಕರಿಗೆ ಈ ವಿಷಯಗಳು ಗೊತ್ತಿದ್ದರೂ ಇಂದು ಇವುಗಳಿಗೆಯೆ ಮಹತ್ತ್ವವಿದೆ ಎಂದು ತೋರಿಸಲು ನಾವು ಇದನ್ನೆಲ್ಲ ಇಲ್ಲಿ ಹೇಳುತ್ತಿದ್ದೇವೆ. ಆದಕಾಗಿಯೆ ಆವಶ್ಯ ಕಂಡಲ್ಲಿ ಪ್ರಚಾರ ಮತ್ತು ಸಂಘಟನೆ ಇವೆರಡರ ಬಗ್ಗೆ ನಮ್ಮ ಅಭಿಪ್ರಾಯವನ್ನು ವಿವರವಾಗಿ ಹೇಳುವೆವು. ಒಟ್ಟು, ಇಂದು ಮೂಡಿದ ಚಳವಳಿಯು ಯಶಸ್ವಿಯಾಗಬೇಕು, ಶೀಘ್ರದಲ್ಲಿ ಮುಕ್ತಾಯಗೊಳ್ಳಬೇಕು; ಈ ಸಲವೂ ನಮ್ಮ ಚಳವಳಿಯು ಹಿಂದೆ ಅನೇಕಸಲವಾದಂತೆ ಭಾವನೆಯ ತೆರೆಯಾಗಿ ನಿಷ್ಕ್ರಿಯತೆಯ ದಂಡೆಗೆ ಅಪ್ಪಳಿಸಿ ಒಡೆದು ಹೋದರೆ ಮುಂದೆ ಕರ್ನಾಟಕವು ಎಂದೂ ತಲೆ ಎತ್ತದಂತೆ ಮಾಡಿದ ಅಪರಾಧವು ನಮ್ಮಿಂದ ಘಟಿಸಿದಂತಾಗುವುದು. ಇದನ್ನು ಮರೆಯುವಂತಿಲ್ಲ.

ಸಂಸ್ಥಾನಗಳಲ್ಲಿ ಕನ್ನಡ ಶಾಲೆಯ ಬೇಡಿಕೆ

ಸಾಹಿತ್ಯ ಸಮ್ಮೇಳನವು ಈ ಸಲ ವೈಭವದಿಂದಲೂ ಉತ್ಸಾಹದಿಂದಲೂ ನೆರವೇರಿತು ಸರಿ; ಆದರೆ ಅಲ್ಲಿ ಪಾಸಾದ ಗೊತ್ತುವಳಿಗಳನ್ನು ನೋಡಿದರೆ ಕೇವಲ ಬಿನ್ನಹ, ಪ್ರಾರ್ಥನೆ, ಸೂಚನೆಗಳಿಂದ ಕೂಡಿರುವುವಲ್ಲದೆ, ಕಾರ್ಯಯೋಜನೆಯ ಗೊತ್ತುವಳಿ ಇಲ್ಲವೆ ಇಲ್ಲ ಎಂದು ಹೇಳಬಹುದು. ಬಿನ್ನಹ-ಪ್ರಾರ್ಥನೆ-ಸೂಚನೆಗಳ ಕಾಲ ಎಂದೋ ಹೊರಟುಹೋಗಿದೆಯೆಂಬುದಕ್ಕೆ ಭಾರತ ರಾಷ್ಟ್ರೀಯ ಮಹಾಸಭೆಯ ಕಾರ್ಯಕ್ರಮಗಳೂ, ಗೊತ್ತುವಳಿಗಳೂ, ಅದು ಹಿಡಿದ ದಾರಿಯೂ ಪ್ರತ್ಯಕ್ಷ ಪ್ರಮಾಣಗಳಾಗಿವೆ. ಕನ್ನಡಿಗರು ಈಗ ಆಡಳಿತದವರನ್ನು ಆಸೆಗಣ್ಣಿನಿಂದ ನೋಡುವುದಕ್ಕಿಂತ ತಮ್ಮ ಕಾರ್ಯ-ಸಂಘಟನೆಗಳ ಕಡೆಗೆ ಹೆಚ್ಚು ಲಕ್ಷ್ಯ ಕೊಡಬೇಕಾದ ಕಾಲವಿದು. ಕನ್ನಡ ಶಿಕ್ಷಣ ಪ್ರಚಾರಕ್ಕಾಗಿ ಆಡಳಿತದವರನ್ನು ಒತ್ತಾಯಪಡಿಸೋಣ; ಆದರೆ ಅವರ ದಯೆಯ ದಾರಿಯನ್ನು ನೋಡುತ್ತ ಕುಳಿತುಕೊಳ್ಳುವುದು ಬೇಡ. ಕನ್ನಡಿಗರೆಲ್ಲ ಕನ್ನಡವನ್ನೇ ಕಲಿಯಬೇಕೆಂಬ ಉತ್ಕಟ ಅಭಿಮಾನವನ್ನು ತೋರಿಸಿದರೆ, ಯಾವ ಸಂಸ್ಥಾನಿಕನಿಗೂ ಮರಾಠಿಯನ್ನೊ ಬೇರೆ ಭಾಷೆಯನ್ನೊ ಕನ್ನಡಿಗರಿಗೆ ಕಲಿಸಿಯೆ ತೀರಬೇಕೆಂಬ ಧೈರ್ಯವಾಗದು. ಹೆದರಿಕೆಯಿಂದಲೊ, ಸ್ವಾರ್ಥ ಸಾಧನೆಯ ಉದ್ದೇಶದಿಂದಲೊ, ದಾಕ್ಷಿಣ್ಯಕ್ಕಾಗಿಯೊ, ನಾವೆ ನಮ್ಮ ಕನ್ನಡತನಕ್ಕೆ ಎಳ್ಳು-ನೀರು ಬಿಡಲು ಸಿದ್ಧರಾದಲ್ಲಿ, ಯಾರೇನು ಮಾಡಬೇಕು? ಈಗ ಜಮಖಂಡಿಯಲ್ಲಿ ಕನ್ನಡ ಹುಡುಗಿಯರ ಶಾಲೆ ಬೇಕೆಂಬುದೊಂದು ಬಿನ್ನಹದ ಗೊತ್ತುವಳಿ ಪಾಸಾಗಿದೆ. ಈ ಮೊದಲೆ ಅಲ್ಲಿ ಇರುವ ಕನ್ನಡ ಗಂಡು ಹುಡುಗರ ಶಾಲೆಯಲ್ಲಿ ವಿದ್ಯಾರ್ಥಿಗಳ ಸಂಖ್ಯೆಯೆಷ್ಟಿದೆ? ಅಧಿಕಾರಿ-ಕನ್ನಡಿಗರೂ, ಹಣಗಾರ ಕನ್ನಡಿಗರೂ, ಬಿಳಿಬಟ್ಟೆಯ ಕನ್ನಡಿಗರೂ ತಮ್ಮ ಮಕ್ಕಳನ್ನು ಆ ಶಾಲೆಗೆ ಕಳುಹುವರೆ? ಇಂತಹರು ಕಳುಹದಿರುವಾಗ 'ಯದ್ಯದಾಚರತಿ ಶ್ರೇಷ್ಠಃ ತತ್ತದೇವೇತರೋ ಜನಃ!' ಮಿಕ್ಕವರು ತಮ್ಮ ಮಕ್ಕಳನ್ನು ಅಲ್ಲಿಗೆ ಏತಕ್ಕೆ ಕಳುಹುವರು? ಆಡಳಿತದವರಿಗೆ ಸಾಕ್ಷಿ ತೋರಿಸಲು ಕನ್ನಡ ಹುಡುಗರ ಸೊರಗಿ ಸಾಯಲಾದ ಶಾಲೆ ಕಣ್ಣಮುಂದಿರುವಾಗ, ಹುಡುಗಿಯರ ಶಾಲೆಯ ಬೇಡಿಕೆಯನ್ನದು ಹೇಗೆ ಒಪ್ಪೀತು? ಬಯಕೆ ತಲೆದೋರಿದೊಡನೆ ಅದು ಕೃತಿಯಲ್ಲಿ ಬರುವಂತೆ ಕನ್ನಡಿಗರು ನೋಡಿಕೊಳ್ಳಬೇಕು. ಅಲ್ಲಿಯೆ ಇದ್ದ ಮಹಾಲಿಂಗಪುರದ ಕನ್ನಡಿಗರು—ಆಡಳಿತದ ಆಸೆಯನ್ನು ಬಿಟ್ಟು ಕನ್ನಡ ಶಾಲೆ ತೆಗೆದು, ತಮ್ಮ ಮಕ್ಕಳಿಗೆ ಕನ್ನಡ ಕಲಿಸಿದರು, ಈಗ ಆಡಳಿತವೂ ಕನ್ನಡದ ಸ್ಥಾನ-ಮಾನಗಳನ್ನು ಒಪ್ಪಿಕೊಂಡು, ಅಲ್ಲಿಯ ಜನತೆಯೆದುರು ಮಣಿಯಿತು. ಈ ಮಾತನ್ನು ಕನ್ನಡಿಗರೆಲ್ಲ ನೆನಪಿನಲ್ಲಿಟ್ಟುಕೊಂಡರೆ ಕರ್ತವ್ಯದ ಅರಿವು ಅವರಿಗಾದೀತು.

ಒಡನಾಡಿ

"ಆನಂದಕಂದ"ರ ಕವನಸಂಗ್ರಹ

ಬಹಳ ದಿನಗಳಿಂದ ಅಚ್ಚಿನಲ್ಲಿದ್ದುದು

ಬೇಗನೆ ಬರಲಿದೆ.



ಶಿಲಾಪ್ರವಂಗ

SHILAPRAVANG

ಯಾವುದೇ ವಿಧವಾದ ಉಷ್ಣತೆಯಿಂದ ಬಳಲಿರುವ ನಿಮ್ಮ ಹೃದಯ, ಮಿದುಳು, ರಕ್ತ, ವೀರ್ಯಗಳಿಗೆ, ಆಯಾಸವನ್ನು ಹೋಗಲಾಡಿಸಿ, ತಂಪು ಕೊಟ್ಟು, ಶರೀರದಲ್ಲಿ ನವಚೈತನ್ಯವನ್ನು ಹುಟ್ಟಿಸುವುದಕ್ಕೆ ಶ್ರೇಷ್ಠವಾದ ಔಷಧವು.

卐

ಶ್ರೀಧೂತಪಾಪೇಶ್ವರ
ಪನವೇಲ, ಲಿಮಿಟೆಡ್.

ಪನವೇಲ TRADE MARK ಕುಲಾಬಾ

Shri Dhootapapeshwar
Panvel Ltd., Panvel.

ದಿ ಯುನಾಯಿಟೆಡ್ ಕರ್ನಾಟಕ ಇನ್ಶ್ಯೂರೆನ್ಸ್ ಕಂಪನಿ, ಲಿ. ಧಾರವಾಡ

ಹೆಡ್ ಆಫೀಸ್ ಧಾರವಾಡ

- **ವಿಮೆ ಮಾಡುವ ಅನುಕೂಲವುಳ್ಳ ಕರ್ನಾಟಕಸ್ಥರು, ಭರದಿಂದ ಬೆಳೆಯುತ್ತಿರುವ ಈ ಕನ್ನಡ ಕಂಪನಿಯ ಪಾಲಿಸಿಯನ್ನೇ ಪಡೆಯಬೇಕು!**
- ಮೊದಲನೆಯ ಮೌಲ್ಯಮಾಪನದಲ್ಲಿ (Valuation) ಲಾಭವನ್ನು ಹಂಚುವುದಲ್ಲದೆ, ಹೊಸ ವಿಮಾಕಾಯಿದೆಯ ನಿರ್ಬಂಧಗಳಿಗೆ ತಕ್ಕಂತೆ ನಡೆದು, ಎಲ್ಲ ಪಾಲಿಸಿದಾರರ ಪ್ರೋತ್ಸಾಹಕ್ಕೂ ಪಾತ್ರವಾಗಿದೆ.
- ಮರಣಹೊಂದಿದ ಪಾಲಿಸಿದಾರರ ವಾರಸದಾರರಿಗೆ ವಿಳಂಬವಿಲ್ಲದೆ ಹಕ್ಕಿನ ಹಣ (Claim) ವನ್ನು ಸಲ್ಲಿಸಿರುವುದರಿಂದ, ಎಲ್ಲರ ಸ್ತುತಿಗೆಗೂ ಕಾರಣವಾಗಿದೆ.
- ಕರ್ನಾಟಕದ ಏಳ್ಗೆಗಾಗಿ ಹಂಬಲಿಸುವವರೂ, ಸ್ವನಾಡಿನ ಹಿತಚಿಂತಕರೂ, ಇದೇ ಕಂಪನಿಯ ಪಾಲಿಸಿಗಳನ್ನೂ ಪಾಲುಗಳನ್ನೂ ಕೊಂಡುಕೊಳ್ಳಲೇಬೇಕು.

ಏಜಂಟರಿಗೆ ಧಾರಾಳವಾದ ಕಮಿಶನ್ ಕೊಡಲಾಗುವುದು.

ವಿಶೇಷ ವಿವರಕ್ಕೆ ಬರೆಯಬೇಕು:- ಎಂ. ಗೋವರ್ಧನರಾವ, ಮ್ಯಾನೇಜರ್

ಕೆಮ್ಮನ್ನು ಅಲಕ್ಷಿಸಿದ ವಿಶೇಷ ದುಷ್ಪರಿಣಾಮಗಳಿಂದ, ಸಾವಿರಾರು ಜನರನ್ನು, ಪ್ರಸಿದ್ಧಿಹೊಂದಿದ ಈ ಔಷಧವು ಸಂರಕ್ಷಿಸಿದೆ.

'ಕಾಸಿನೊ'ದಲ್ಲಿ ಎರಡು ರೀತಿಯ ಗುಣಗಳಿವೆ:— ಹೊರಭಾಗದಿಂದ:— ಅದರ ಸವಿಯಾದ ಶಕ್ತಿಯು ಗಂಟಲೊಳಗೆ ಇಳಿಕೊಂಡು ಕೆಮ್ಮನ್ನು ಹೊರಡಿಸುವ ನರಗಳನ್ನು ಶಾಂತಪಡಿಸುತ್ತದೆ. ಒಳಭಾಗದಿಂದ:— ಅದು ಗಂಟಲೊಳಗಿನ ಸ್ವಾಭಾವಿಕವಾದ ಒಸರುವಿಕೆಗೆ ಚೈತನ್ಯವನ್ನುಂಟುಮಾಡುತ್ತದೆ, ಕಫವನ್ನು ಕತ್ತರಿಸಲು ಸಹಾಯ ಮಾಡುತ್ತದೆ. ಶ್ವಾಸೋಚ್ಛ್ವಾಸದ ನಾಳಗಳನ್ನು ಶುದ್ಧಪಡಿಸುತ್ತದೆ. ಮತ್ತು ಕೆಮ್ಮನ್ನು ಹೊರಡಿಸುವ ಸೋಂಕನ್ನು ಅಲ್ಪಕಾಲದಲ್ಲಿಯೆ ನಿರ್ಮೂಲಪಡಿಸಿ, ಎಂದೆಂದಿಗೂ ಕೆಮ್ಮಿನ ಬಾಧೆಯನ್ನು ನಿಲ್ಲಿಸುತ್ತದೆ. ಪ್ರಿಸ್ಕ್ರಿಪ್ಶನಂತೆ ಒಂದು ಬಿಲ್ಲೆಯನ್ನು ೨-೩ ಗಂಟೆಗೊಮ್ಮೆ ಕೆಮ್ಮು ಶಮನವಾಗುವತನಕ ತೆಗೆದುಕೊಳ್ಳುವುದು.

ಎಲ್ಲಾ ಔಷಧಾಲಯಗಳಲ್ಲಿಯೂ ದೊರಕುವುದು.

ಆಶ್ಚರ್ಯಕರವಾದ ಕೆಮ್ಮು-ನಿವಾರಕ ಬಿಲ್ಲೆಗಳು

ಹುಬ್ಬಳ್ಳಿ ಶಾಖೆ:— ಸ್ಟೇಶನ್ ರೋಡ, ಹುಬ್ಬಳ್ಳಿ

ಜಯಂತಿ

ಮಾರ್ಚ
೧೯೪೫
ಸಂಪುಟ ೭ ಸಂಚಿಕೆ ೧೨

ಸಂಪಾದಕರು:—ಬೆಟಗೇರಿ ಕೃಷ್ಣಶರ್ಮ

ಮುಖ್ಯ ವಿಷಯಗಳು

ಏಕೆ ಮನವೆ ಕೊರಗುವೆ? (ಕವನ) ೨೪೭
'ರಾಮಚಂದ್ರ' ವಿಜಾಪುರ

ಸಂದೇಶ (ರೂಪಕಪ್ರಬಂಧ) ೨೫೦
ಕುಮಾರಿ ದೇವಾಂಗನಾ ಶಾಸ್ತ್ರಿ, ಗೋಕರ್ಣ

ಏಕೀಕರಣದ ಪಾಂಚಜನ್ಯ (ಕಾರ್ಯಸೂಚನೆ) ೨೫೨
ಶ್ರೀ. ಕೆ. ಚೆನ್ನಬಸಪ್ಪ, ಬಿ. ಎ. ಬೆಳಗಾಂವಿ

ವಿರಾಮಕಾಲ (ಸಣ್ಣ ಕತೆ) ೨೫೪
ಶ್ರೀ. ಎಸ್. ಸುಬ್ಬರಾಮಯ್ಯ, ಬಿ. ಎ. ಬೆಂಗಳೂರು

ಕಣ್ಣು ಬಿತ್ತು (ಕವನ) ೨೫೯
ಶ್ರೀ. ವಿ. ಜಿ. ಭಟ್ಟ, ಕಡತೋಕಾ

ವಿವಿಧ ವರ್ಣಮಯ ವಿಚಿತ್ರ ವಿಶ್ವ (ಆಕಾಶಪರಿಚಯ) ೨೬೦
ಶ್ರೀ. ವಿ. ವಿ. ಗೋಖಲೆ, ಬಿ. ಎಸ್‌ಸಿ. (ಟೆಕ್) ಮುಂಬೈ

ಹುಚ್ಚು (ಹರಟೆ) ೨೬೩
ಶ್ರೀ. ಎನ್. ಎಸ್. ಗದಗಕರ್, ಬಿ. ಎ. ಧಾರವಾಡ

ನಮ್ಮನ್ನಗಲಿದ ಪೋತದಾರ ಶೀನಪ್ಪ (ಸ್ಮೃತಿಯ ಶ್ರದ್ಧಾಂಜಲಿ) ೨೬೫
ಶ್ರೀ. ಬೆಟಗೇರಿ ಕೃಷ್ಣಶರ್ಮ, ಧಾರವಾಡ

ಚೆಲುವು ಹಿರಿಯದೊ, ಹೃದಯದೊಲವು ಹಿರಿಯದೊ? .... ೨೬[illegible]
ಶ್ರೀ. ಸಿ. ಡಿ. ಫಾರಗಿ, ಕರ್ನಾಟಕ ಕಾಲೇಜ್, ಧಾರವಾಡ

ಅಲ್ಲದೆ

ಸಂಪಾದಕೀಯ, ಮಂಗನ ಮಲ್ಲಿನಾಥತನ, ಪುಸ್ತಕವಿಮರ್ಶೆ,
ಸಾಹಿತ್ಯವಿಹಾರ, ನಾಲ್ಕು ನಿಟ್ಟಿನ ನೋಟ.

೬ ಆಣೆ

ಸಾದರ ಸ್ವೀಕಾರ

●

೧೧೫. ಮಹಾದ್ವಾರ (ಮರಾಠಿ ಮಾಸ-ಪತ್ರಿಕೆ). ಸಂಪಾದಕರು ಶ್ರೀ. ವೆಂ. ನ. ಕುಲಕರ್ಣಿ ಬಿ. ಎ., ಎಲ್‌ಎಲ್. ಬಿ. ಮಹಾದ್ವಾರ ಮುದ್ರಣಾಲಯ ಕೊಲ್ಹಾಪುರ. ಕ್ರಾ. ೪ದ ೪೪ ಪುಟಗಳು. ವಾರ್ಷಿಕ ಚಂದಾ ೬-೦-೦; ಬಿಡಿ ಸಂಚಿಕೆಗೆ ೦—೧೦—೦.

‘ಸಂಕಲನಾತ್ಮಕ ಅಭಿನವ ಮಾಸಿಕ (Marathi Reader's Digest)’ ಎಂದು ಈ ಪತ್ರಿಕೆಗೆ ವಿಶೇಷಣ ಬರೆದುಕೊಳ್ಳಲಾಗಿದೆ. ಅದರಂತೆಯೆ ಇದರಲ್ಲಿಯ ಲೇಖನ-ಕವನಗಳು, ಬೇರೆ ಭಾಷೆಯ ಪತ್ರಿಕೆ-ಪುಸ್ತಕಗಳಲ್ಲಿಯ ಅನುವಾದಿತ ಭಾಗಗಳೂ, ಮರಾಟಿ ಪತ್ರಿಕೆ-ಗ್ರಂಥ-ಭಾಷಣಗಳ ಒಳ್ಳೊಳ್ಳೆಯ ಭಾಗಗಳ ಅವತರಣಗಳೂ ಆಗಿವೆ. ಅಲ್ಲದೆ ಸ್ವತಂತ್ರ ಲೇಖನ, ವಿನೋದ, ಸಂಪಾದಕೀಯ ವಿಭಾಗಗಳಿಗೂ ಎಡೆಯುಂಟು. ನಮ್ಮ ಕೈಸೇರಿದ ಜನವರಿ ಸಂಚಿಕೆಯಲ್ಲಿ ಮಾಲತೀ ಕರ್ವೆ, ಮಾಮಾ ವರೇರಕರ್, ಡಾ. ನಾ. ಬಾ. ಖರೆ, ಪ್ರೊ. ಸ. ಬಿ. ದೇಶಪಾಂಡೆ, ಪ್ರೊ. ವಿ. ಮ. ಕುಲಕರ್ಣಿ ಮೊದಲಾದ— ಮಹಾರಾಷ್ಟ್ರದ— ಸುಪ್ರಸಿದ್ಧ ಲೇಖಕರ ಲೇಖನಗಳಿವೆ. ಇದೇ ಫೆಬ್ರುವರಿ ಸಂಚಿಕೆಯಿಂದ ಪತ್ರಿಕೆಗೆ ೨ನೆಯ ವರ್ಷ ಪ್ರಾರಂಭವಾಗುವುದು.

೧೧೬. ಪುರಂದರ ದಾಸರು ಮತ್ತು ಅವರ ಕೀರ್ತನೆಗಳು. (ವ್ಯಕ್ತಿ ಮತ್ತು ಕೃತಿಯ ಪರಿಚಯ). ಲೇಖಕರು ಶ್ರೀಮಾನ್ ಜಿ. ವರದರಾಜರಾವ್ ಎಂ. ಎ ನಂ. ೨೧ 'B' ಸ್ಟ್ರೀಟ್, ಕೋಟೆ, ಬೆಂಗಳೂರು ಸಿಟಿ. ಪ್ರಕಾಶಕರು ಶ್ರೀ. ಎಚ್. ಎನ್. ದೊರೆಸ್ವಾಮಿ, ಬಿ ಎಸ್‌ಸಿ. ‘ಮಿತ್ರಸಂಘ’ ಬೆಂಗಳೂರು. ಕ್ರಾ ೮. ೬೦ ಪುಟಗಳು; ಬೆಲೆ ೦—೧೦—೦.

೧೧೭. ಕುಕನೂರಿನ ವಿದ್ಯಾನಂದ ಗುರುಕುಲ ಸಂಸ್ಥೆಯ ೨೭ನೆಯ ವರ್ಷದ ವರದಿ ಕ್ರಾ ೮. ೨೮ ಪುಟಗಳು.

ವರದಿಯ ವರ್ಷದಲ್ಲಿ ೪೮೭೦ ರೂ. ೪ ಆ. ೬ ಪೈ. ಗಳಿಕೆಯುಸ್ಸು, ೪,೫೬೯ ರೂ. ೧೩ ಆ. ೯ ಪೈ. ವೆಚ್ಚವಾಗಿದೆ. ಶಿಕ್ಷಣ ಕ್ಷೇತ್ರದಲ್ಲಿನ ಸಂಸ್ಕೃತ ಪ್ರಚಾರದ ಹಲವು ಮಹತ್ವದ ಕಾರ್ಯವನ್ನೂ ಈ ಸಂಸ್ಥೆ ಮಾಡುತ್ತಲಿದ್ದು ಬೇಗನೆ ರಜತಮಹೋತ್ಸವವನ್ನು ಮಾಡಿಕೊಳ್ಳಲಿರುವ ಈ ಕನ್ನಡದ ಅಭಿಮಾನದ ಸಂಸ್ಥೆ ಚಿರಜೀವಿಯಾಗಿ ಬಾಳಿ, ನಾಡಿನ ಕಾರ್ಯ ಮಾಡುತ್ತಿರಲಿ!

೧೧೮. ಎಂಟಿ ಮಲೇರಿಯಲ್ (ಔಷಧದ ಗುಳಿಗೆಗಳ ಬಾಟ್ಲಿ).

ಬಾಗಿಲುಕೋಟೆಯ ಕರ್ನಾಟಕ ಆಯುರ್ವೇದ ಫಾರ್ಮಸಿಯವರ ನಿರ್ಮಿತಿಯಿದು. ಎಲ್ಲ ಮಾದರಿಯ ಚಳಿಜ್ವರವನ್ನೂ ನಿವಾರಿಸುವುದು. ಕ್ವಿನೈನಿನ ಅಭಾವದ ಈ ಕಾಲದಲ್ಲಿ ಲಕ್ಷವಿರದಷ್ಟು ಜನರು ಈ ಗುಳಿಗೆಗಳನ್ನು ಬಳಸಿ ಪ್ರಯೋಜನ ಪಡೆದಿದ್ದಾರೆಂಬುದು ನಂಬತಕ್ಕಂತಹ ಸಂಗತಿ. ಮಲೇರಿಯಾ ಪಿಡುಗು ಇದ್ದ ಊರಿನ ವೈದ್ಯರೂ ಕುಟುಂಬದ ಯಜಮಾನರೂ ಈ ಗುಳಿಗೆಗಳನ್ನು ತರಿಸಿ ಸಂಗ್ರಹದಲ್ಲಿರಿಸಿಕೊಳ್ಳಬೇಕು. ಕರ್ನಾಟಕ ಆಯುರ್ವೇದ ಫಾರ್ಮಸಿಯು ಕನ್ನಡಿಗರಿಗಾಗಿ ದೈನಂದಿನ ಜೀವನದಲ್ಲಿ ಅವಶ್ಯವಾಗಿರುವ ಹಲವು ಸುಲಭೌಷಧಿಗಳನ್ನು ನಿರ್ಮಿಸಿ, ಎಲ್ಲೆಲ್ಲಿಯೂ ಅವು ಸಿಕ್ಕುವಂತೆ ಏರ್ಪಾಡನ್ನು ಮಾಡಬೇಕೆಂದು ನಮ್ಮ ಅಪೇಕ್ಷೆ.

೧೧೯. ಪರ್ಯಾಯ ಪ್ರಶಂಸೆ (ಪದ್ಯಗಳಲ್ಲಿ). ಬರೆದವರು ಶ್ರೀಮಾನ್ ಕೆ. ಪದ್ಮನಾಭಾಚಾರ್ಯರು, ಸಂ ಗೀ ತಾ ಧ್ಯಾ ಪ ಕ ಉಡುಪಿ. ಕ್ರಾ. ೮. ಪುಟಗಳು.

ಉಡುಪಿಯ ಶ್ರೀ ಪುತ್ತಿಗೆ ಶ್ರೀಗಳವರು ತಾ. ೧೮-೧-೪೪ ರಂದು ಪರ್ಯಾಯ ಪೀಠವನ್ನೇರುವ ಸಮಾರಂಭದಲ್ಲಿ ಲೇಖಕರು ಓದಿ ಅರ್ಪಿಸಿದ ಕವಿತಾ ಕಾಣಿಕೆಯಿದು, ೨೪ ವಾರ್ಧಕ ಷಟ್ಪದಿಗಳಿಂದ ಕೂಡಿದೆ. ಸಾಂಪ್ರದಾಯಿಕ ಶಬ್ದಾಲಂಕಾರ. ಅರ್ಥಾಲಂಕಾರಗಳನ್ನು ಬಳಸಿಕೊಂಡಿರುವರಾದರೂ, ಲೇಖಕರಿಗೆ ಸಾಹಿತ್ಯಜ್ಞಾನ ಸ್ಥೂಲವಾಗಿರುವುದೆಂಬುದು ಅನುಚಿತ ಪದಪ್ರಯೋಗ, ಸಂಧಿದೋಷ, ಛಂದೋಭಂಗ, ಪ್ರಾಸದೋಷ ಇವುಗಳಿಂದ ಕಂಡು ಬರುವುದು

೧೨೦. ಹುಬ್ಬಳ್ಳಿ ಗೆಜೆಟ್ (ವಾರಪತ್ರಿಕೆಯ ೭ನೆಯ ಜನ್ಮ ದಿನಾಂಕ) ಸಂಚಾಲಕರು ಡಾ ನಾ. ಸು. ಹರಡೀಕರರು. ಸಂಪಾದಕರು ಶ್ರೀ. ರಾ. ವೆಂ. ಕರಿಗುದರಿ ಅವರು. ಪ್ರಕಾಶಕರು ಶ್ರೀ. ಎಸ್. ಬಿ. ಮುನಗೋಳ, ೧೦೫೩೭ ದಾಜೀಬಾನ ಪೇಟೆ, ಹುಬ್ಬಳ್ಳಿ ಕ್ರೌನ್ ಫೋಲಿಯೊ ೩೨. ಪುಟಗಳು. ಬೆಲೆ. ೦-೪-೦.

ಜನತೆಯ ಸಾಂದರ್ಭಿಕ ಕಷ್ಟನಷ್ಟಗಳನ್ನು ಅರಿತು ಅಭ್ಯಾಸ ಮಾಡಿ, ಅವುಗಳ ವಿವೇಚನೆಯನ್ನೂ ನಿಮೋಜನೆಯ ದಾರಿಯನ್ನೂ ವಿವರಿಸಿದ ಲೇಖನಗಳನ್ನು ಹುಬ್ಬಳ್ಳಿ ಗಜೆಟು ಮೊದಲಿನಿಂದಲೂ ಕೊಡುತ್ತ ಬಂದಿರುವುದು. ಅದರಂತೆಯೇ ಈ ಸಂಚಿಕೆಯಲ್ಲೂ ಸದ್ಯದ ತೊಡಕಿನ ವಿಷಯವಾದ ‘ಲೆವ್ಹಿ ಪದ್ಧತಿ’ಯನ್ನು ಅಭ್ಯಾಸ ಮಾಡಿ ಬರೆದ ಅನೇಕ ತಜ್ಞರ ಲೇಖನಗಳು ಪ್ರಕಟವಾಗಿವೆ. ಅಲ್ಲದೆ ಬೇರೆ ಬೇರೆ ಲೇಖಕರ ದೇಶ-ವಿದೇಶಗಳಿಗೆ ಸಂಬಂಧಿಸಿದ ರಾಜಕಾರಣ ವಿಷಯಕ ಲೇಖನಗಳೂ ಬಂದಿವೆ. ಎಲ್ಲರೂ ಓದಿ ಪ್ರಯೋಜನ ಪಡೆಯಬೇಕಾದ ಸಂಚಿಕೆ. ‘ಹುಬಳಿ ಗಜೆಟ್’, ಎಂಬ ಹೆಸರಿನಲ್ಲಿಯ ‘ಹುಬಳಿ’ ಎಂಬುದು ವಿದೇಶೀಯ ಸೊಲ್ಲಿನಿಂದ ಕೂಡಿದ್ದು, ಕನ್ನಡಿಗರಿಗೆ ಆತ್ಮೀಯವೆನಿಸದಂತಿದೆ. ಇಷ್ಟೇ ಅಲ್ಲ, ಈ ಪತ್ರಿಕೆ ನಡೆಯಿಸಿರುವ ಕಾರ್ಯದ ವ್ಯಾಪಕತೆಯನ್ನು ನೋಡಿದರೆ ‘ಹುಬಳಿ ಗಜೆಟ್’ ಎಂಬ ಹೆಸರು ತೀರ ಸಂಕುಚಿತಾರ್ಥದ್ದಾಗಿ ಕಾಣುವುದು. ಸಂಚಾಲಕರೂ ಸಂಪಾದಕರೂ ಇದನ್ನು ಸರಿಗೊಳಿಸಬಲ್ಲರೆ?

೧೨೧. ಸುಬೋಧ (ಹೊಸ ಆಕಾರವನ್ನು ತಳೆದ ಹಳೆಯ ಮಾಸ ಪತ್ರಿಕೆ.) ಸಂಪಾದಕರು ಶ್ರೀ. ಎಂ. ರಾಮರಾಯರು. ಪ್ರಕಾಶಕರು ಶ್ರೀ. ಬಿ. ರಂಗನಾಥರಾವ್, ಸುಬೋಧ ಪ್ರಕಟನಾಲಯ, ಬೆಂಗಳೂರು ನಗರ. ಡೆ. ೮. ೫೪ ಪುಟ. ವಾ. ಚಂದಾ ೩—೦—೦. ಬಿಡಿ ಸಂಚಿಕೆಗೆ ೦-೪-೦

ಕಾಲೋಚಿತ ಅಚ್ಚುಕಟ್ಟಿನ ಕಲ್ಪನೆಯ ಆಕಾರವನ್ನು ತಳೆದ ಈ ಪತ್ರಿಕೆಯು, ಕಾಲೋಚಿತ ವಿಚಾರ-ಚರ್ಚೆಗಳಿಂದ ತುಂಬಿರುವ ಲೇಖನಗಳನ್ನೂ ಕೊಟ್ಟು ಕನ್ನಡಿಗರ ಉನ್ನತಿಗೆ ಕಾರಣವಾಗಲಿ.

೧೨೨. ಚರಕ ಸಂಹಿತೆ (ಭಾಗ ೧ ಚಿಕಿತ್ಸಾಸ್ಥಾನ). ಅನುವಾದಕರು ‘ಆಯುರ್ವೇದ ತೀರ್ಥ’ ಶ್ರೀಮಾನ್ ಆಪ್ಟೆ ಅನಂತಾಚಾರ್ಯರು, ವಿಜಾಪುರ. ಅನುವಾದಕರೆ ಪ್ರಕಾಶಕರು. ಡೆ. ೮. ೪೪೦ ಪುಟಗಳು. ಬೆಲೆ ೬—೦—೦.

ಮುದ್ರಕರು: ಶ್ರೀ. [illegible] ಮುದ್ರಣಾಲಯ, ಧಾರವಾಡ

ಪ್ರಕಾಶಕರು: ಶ್ರೀ. ಎಂ. ವಿ. ಮೊಳೆಗಟ್ಟಿ, ಜಯಂತಿ ಕಾರ್ಯಾಲಯ, ಧಾರವಾಡ

ಜಯಂತಿ

ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

ವಾ. ವರ್ಗಣಿ ಅಂಚೆವೆಚ್ಚ ಸೇರಿ ೪—೪—೦ ಆರು ತಿಂಗಳಿಗೆ ೨—೪—೦ ಬಿಡಿ ಸಂಚಿಕೆಗೆ ೬ ಆಣೆ.

ಸಂಪುಟ ೭ | ೧ನೆಯ ಮಾರ್ಚ್ ೧೯೪೫ | ಸಂಚಿಕೆ ೧೦

ಏಕೆ ಮನವೆ ಕೊರಗುವೆ?

ಶ್ರೀ. ರಾಮಚಂದ್ರ, ವಿಜಾಪೂರ

೧

ಚಿಗಿವ ಬೇವಿನೆಸಳ ನೋಡು
ಚಿಂತೆಯಿದೆಯೆ ಎದೆಯಲಿ?
ನೂರುಬಗೆಯ ಕಾಡುಸುಮಗ-
ಳಲ್ಲೊ ಅರಳಿ ಪೊದೆಯಲಿ!
ನಾಳೆಯೆಂಬ ಹಾಳು ಬಾಳ-
ನೊಂದು ಸಲವು ನೆನೆಯದೆ
ಮಧುರ ಲಾಸ್ಯವನ್ನು ಮೆರೆದು
ಇಹವೆ ಗಾಳಿಗಲೆಯುವೆ?

ಮನವೆ ಏಕೆ ಕೊರಗುವೆ-
ಚಿಂತೆಯಲ್ಲಿ ಬೇಯುವೆ?

೨

ಹರೆಯತುಂಬಿ ಸೂಸುತಿಹುದು
ಮೀರಿ ಎದೆಯ ಎಲ್ಲೆಯ;
ಜಗವ ಮೆಟ್ಟಿ, ನಿಲುವೆನೆಂಬ
ಶಕ್ತಿಯಿಹುದ ಬಲ್ಲೆಯಾ?
ಏನನೆಲ್ಲ ಮರೆದು ನೀನು
ಸಾವನಪ್ಪಲೋಡುವೆ,
ಕಾಮಧೇನು ಎದೆಯಲಿಹುದು
ಅರಿಯದದನು ಬಾಡುವೆ!

ಏಕೆ ಮನವೆ ಕೊರಗುವೆ-
ಚಿಂತೆಯಲ್ಲಿ ಬೇಯುವೆ?

೩

ನಿನ್ನ ವಿಭವಕೇನು ಕಡಿಮೆ
ನೀನು ದೇವಕನ್ಯೆಯು
ಅದನು ಮರೆದು ನಡೆಯಬೇಡ
ಇರುವೆ ಸರ್ವಮಾನ್ಯೆಯು!
ಬಗೆದು ನೋಡು ಎದೆಯ ಆಳ
ಬೆಳಗುತಿಹರು ರವಿ-ಶಶಿ;
ಅಲ್ಲ ನೀನು ಶಪಿತಳಂತೆ
ಪತಿತಳಾದ ಊರ್ವಶಿ!

ಏಕೆ ಮನವೆ ಕೊರಗುವೆ-
ಚಿಂತೆಯಲ್ಲಿ ಬೇಯುವೆ?

೪

ಬೆಳೆವ ಬಯಕೆ ತೊರೆದ ನಿನ್ನ
ಬಾಳು ಕಾಡದಾಗಿದೆ,
ಕುಡಿಯನಿಟ್ಟು ಕೊನರಿಸೆಂಬ
ಕುರುಡುಭಾವ ಮೂಡಿದೆ;
ಹರಿದುಮುಸದ ಭ್ರಾಂತಿಯೊಮ್ಮೆ
ಮಿಂಚು ಬೆಳಗದಾಗಿದೆ,
ನಿಬಿಡತಮದ ಗರ್ಭದಲ್ಲಿ
ಬಾಳು ಸೆರೆಯದಾಗಿದೆ!

ಅದಕೆ ಮನವೆ ಕೊರಗುವೆ-
ಚಿಂತೆಯಲ್ಲಿ ಬೇಯುವೆ!

ಸಂಪಾದಕೀಯ

ಸರಕಾರ, ಸಮಾಜಹಿತ

ಸಮಾಜ ಸರಕಾರವನ್ನು ನಿರ್ಮಿಸಿಕೊಂಡುದು ತನ್ನ ಸುಖ-ಶಾಂತಿಗಳನ್ನು ಸಂರಕ್ಷಿಸಬೇಕೆಂದಲ್ಲದೆ, ತನ್ನನ್ನು ಆಳಿಸಂತೆ ತಿಳಿದು ಆಳಬೇಕೆಂದಲ್ಲ. ಈ ಸರಕಾರದ ಶಕ್ತಿಯನ್ನು ವಿಧಾಯಕವಾಗಿ ಉಪಯೋಗಿಸಿಕೊಂಡ ಆಡಳಿತಗಳೂ ಅರಸುತನಗಳೂ ಜನತೆಯಿಂದ ಆದರದ ಕಾಣಿಕೆಯನ್ನು ಒಪ್ಪಿಸಿಕೊಂಡವು; ಪ್ರೀತಿಯ ಪೂಜೆಯನ್ನು ಪಡೆದುವು. ಇದೇ ಶಕ್ತಿಯನ್ನು ಸ್ವಾರ್ಥಸಾಧನೆಗಾಗಿ ಉಪಯೋಗಿಸತೊಡಗಿದ ಆಡಳಿತ-ಅರಸುತನಗಳು, ಹೆದರಿಕೆ-ಬೆದರಿಕೆಗಳನ್ನು ಹಾಕಿ ಒತ್ತಾಯದಿಂದ ಜನರ ಮನ್ನಣೆ-ಪೂಜೆಗಳನ್ನು ಸುಲಿಗೆ ಮಾಡಿದುವು. ಅಜ್ಞಾನ, ಕರ್ತವ್ಯಬುದ್ಧಿ, ಅವಿಶ್ರಾಂತ ಕಾರ್ಯ, ಹುಚ್ಚು ಭಾವನೆ ಮೊದಲಾದ ಜನತೆಯ ಗುಣಾವಗುಣಗಳನ್ನು ಸರಕಾರ ತನ್ನ ಸ್ವಾರ್ಥಕ್ಕೆ ಬಳಸಿಕೊಳ್ಳುತ್ತಿರುವುದು ಎಂದಿನಿಂದಲೂ ನಡೆದುಕೊಂಡು ಬಂದಿರುವುದು. ಆಡಳಿತದ ತೊಂದರೆ ವಿಪರೀತಕ್ಕಿಟ್ಟಾಗ, ಸಮಾಜ ರೇಗಿ ಆಡಳಿತವನ್ನು ಎದುರಿಸಿ ನಿಂತ ಉದಾಹರಣೆಗಳೂ ಇತಿಹಾಸಲೋಕದಲ್ಲಿ ಅಲ್ಲಲ್ಲಿ ಕಾಣಲು ಸಿಕ್ಕುವುವು. ಆದರೂ ಎಂತಹ ಕೆಟ್ಟ ಆಡಳಿತವನ್ನೂ ಸಹಿಸಿಕೊಂಡು ಹೋಗುವ ಸಮಾಜದ ಸಂಯಮ ಬುದ್ಧಿಯ ಉದಾಹರಣೆಗಳೇ ಹೆಚ್ಚಾಗಿರುವುವು.

ಸಮಾಜ ತನ್ನ ಘಟಕಗಳಾದ ವ್ಯಕ್ತಿಗಳಲ್ಲಿಯ ವಿಷಮಬಲ, ವಿಷಮಬುದ್ಧಿ, ವಿಷಮ ಮನೋವೃತ್ತಿ ಇವುಗಳನ್ನೂ ಇವುಗಳ ದುಷ್ಪರಿಣಾಮಗಳನ್ನೂ ಕಂಡುಹಿಡಿದು, ಇವುಗಳಲ್ಲಿ ಒಂದು ಸಮತೆಯನ್ನು ಕಾಯಬೇಕೆಂಬ ಅಭಿಲಾಷೆಯಿಂದಲೆ ಸರಕಾರವನ್ನು ನಿರ್ಮಿಸಿತು; ಅದರ ಅಧಿಕಾರಕ್ಕೆ ತಾನಾಗಿಯೆ ಒಪ್ಪಿ ತಲೆಬಾಗಿತು. ಇದು ಸಮಾಜದ ಸಮಂಜಸ ಬುದ್ಧಿಯ ಗುರುತು. ಸರಕಾರವು ತನ್ನ ನಿರ್ಮಿತಿಯ ಕಾರಣವನ್ನೂ, ನಿರ್ಮಾತೃವಿನ ಆಂತರಿಕ ಉದ್ದೇಶವನ್ನೂ ಅರಿತುಕೊಂಡು, ಸಮಾಜ ಕಲ್ಯಾಣಕ್ಕೆಂದು ದುಡಿಯುತ್ತಿದ್ದರೆ, ಅದು ಸಮಾಜಪಕ್ಷಪಾತಿಯೆನಿಸುವುದು. ಅದನ್ನು ಬಿಟ್ಟು, ಭಸ್ಮಾಸುರನಂತೆ ದೇವರು ಕೈಯನ್ನೆತ್ತಿ ಸಮಾಜದ ತಲೆಯ ಮೇಲಿಡಲು ತೊಡಗಿದರೆ, ವಿಧಾಯಕ ಶಕ್ತಿಯಾದ ವಿಷ್ಣುವಿನ ಮೋಹಿನೀ ರೂಪ ಬರಲೇಬೇಕು; ಭಸ್ಮಾಸುರನ ಕೈಯನ್ನು ಅವನ ತಲೆಯ ಮೇಲೆಯೆ ಇರಿಸಿಕೊಳ್ಳುವಂತೆ ಮಾಡಿ, ಆ ಸರಕಾರ-ಭಸ್ಮಾಸುರನನ್ನು ಉರುಹಿ ಬಿಡಲೇಬೇಕು.

ಸಮಾಜ ತನ್ನ ಶಾಂತತೆಗಾಗಿ ಮುಖ್ಯವಾಗಿ ಅಪೇಕ್ಷಿಸುವ ಸಂಗತಿಯೆಂದರೆ ಬಲಿಷ್ಠರಿಂದ ಬಲಹೀನರಿಗೆ ತೊಂದರೆಯಾಗದಂತಿರಬೇಕೆಂದು; ಸಮಾಜದ ಘಟಕಗಳಾದ ವ್ಯಕ್ತಿಗಳಿಗೆ ಹೆಚ್ಚಿನ ಬಾಧೆ ಬಾಧಿಸಬಾರದೆಂದು. ಮುಖ್ಯವಾಗಿ ಇವೆರಡನ್ನು ಲಕ್ಷ್ಯಿಸಿಯೇ ಸರಕಾರದ ಕಡೆಗೆ ಸಮಾಜ ಅಧಿಕಾರವನ್ನು ಒಪ್ಪಿಸಿತು. ತನ್ನ ದುಡಿತದಲ್ಲಿಯ ಪಾಲನ್ನು ಇದಕ್ಕಾಗಿಯೆ ಸರಕಾರಕ್ಕೆ ಕೊಡತೊಡಗಿತು. ವಿವಿಧ ವಿಭಾಗಗಳನ್ನು ಕಲ್ಪಿಸಿಕೊಂಡು ಸರಕಾರ ತನ್ನ ಆಳಿಕೆಯನ್ನು ವಿಸ್ತರಿಸಿದುದೂ ಇವೆರಡು ಹೇತುಗಳ ಮುಂದುವರಿಕೆಯಿಂದಲೆ. ಆದರೆ ಬರು-ಬರುತ್ತ ಸರಕಾರಗಳ ಸ್ವಾರ್ಥಸಾಧನೆ, ಅಧಿಕಾರ ಲಾಲಸೆಗಳಲ್ಲಿ, ಈ ಮುಖ್ಯ ಹೇತುಗಳ ಮುಂದುವರಿಕೆ ಮರೆಯಾಗಿ ಹೋಯಿತು. ಸರಕಾರವೆಂದರೆ ಸಮಾಜವನ್ನು ಆಳುವ ಯಂತ್ರವಾಗಿ ಪರಿಣಮಿಸಿತು. ಆದುದರಿಂದಲೆ ವ್ಯಕ್ತಿಗಳಲ್ಲಿ ಬಲಿಷ್ಠರಿಂದ ಬಲಹೀನರಿಗೆ ಬಾಧೆಯಾಗತೊಡಗಿತು. ಬಹುಜನರ ಅನ್ನವನ್ನು ಕೆಲವರೆ ತಿನ್ನತೊಡಗಿ ಹಸಿವೆಯ ರೋಗ ಹಬ್ಬಿಕೊಂಡಿತು. ಇಂದಿನ ಪ್ರಗತಿಪರ ಯಾವ ದೇಶದ ಸರಕಾರವನ್ನು ನೋಡಿದರೂ, ಸ್ವಲ್ಪ ಹೆಚ್ಚು ಸ್ವಲ್ಪ ಕಡಿಮೆ ಇದೇ ಪರಿಣಾಮವನ್ನು ಉಂಟುಮಾಡಿರುವುವು. ಹಿಂದುಸ್ಥಾನದಂತಹ ಪರಾಧೀನ ದೇಶಗಳಲ್ಲಂತೂ ಈ ಪರಿಣಾಮ ಉಗ್ರಸ್ವರೂಪವನ್ನೇ ತಾಳಿರುವುದು ಕಂಡುಬಂದರೆ ದೊಡ್ಡಮಾತಲ್ಲ.

ಇಂದು ನಮ್ಮ ದೇಶದಲ್ಲಿ ಬೆಳೆಯುಳ್ಳ ಭೂಮಿಗಳಿರುವುವು. ಬೆಳೆಗಾಗಿ ದುಡಿಯುವ ರೈತರಿರುವರು. ಬೆಳೆಗೆ ಅವಶ್ಯಕವಾದ ಹವೆ-ನೀರುಗಳಿಗೂ ಅನನುಕೂಲತೆಯಿಲ್ಲ. ಅದರಂತೆಯೆ ಬೆಳೆದ ಬೆಳೆಯನ್ನು ಜನರ ಕಣ್ಣು ನೋಡುತ್ತಲೂ ಇರುತ್ತವೆ. ಆದರೆ ಆ ಬೆಳೆದ ಬೆಳೆ ಯಾರ ಬಾಯಲ್ಲಿಯೂ ಸುಸೂತ್ರವಾಗಿ ಬೀಳದಂತಾಗಿದೆ; ಎಲ್ಲಿಯೊ ಕಣ್ಣಿಗೆ ಕಾಣದಂತೆ ಮಾಯವಾಗುತ್ತಲಿವೆ. ‹ ಇದೆಲ್ಲಕ್ಕೂ ಕಾರಣ ಇಂದಿನ ಆಡಳಿತಕ್ರಮ › ಎಂಬ ಮಾತು ಎಲ್ಲೆಲ್ಲಿಯೂ ಕಳವಳದ ಕೂಗಾಗಿ ಕೇಳಬಂದರೆ ಅದೊಂದು ಆಶ್ಚರ್ಯವಲ್ಲ. ಈ ಮಾತು ನಿಜವಾದರೆ—ಕಾಯುವ ಬೇಲಿಯೆ ಹೊಲವನ್ನು ಮೇಯುತ್ತಿದ್ದುದು ದಿಟವಾದರೆ—ತಕ್ಕ ಉಪಾಯವನ್ನೇನಾದರೂ ಜನತೆ ಮಾಡಬೇಕಲ್ಲವೆ? ಮಾಡದೆ ಹೋದರೆ ಬದುಕುವುದು ಹೇಗೆ?

‹ ಸರಕಾರ › ಎಂಬುದು ನಿಜವಾಗಿಯೂ ಒಂದು ಅವ್ಯಕ್ತಶಕ್ತಿ. ಅದರ ವ್ಯಕ್ತಸ್ವರೂಪವೆಂದರೆ ಆಡಳಿತವನ್ನು ನಡೆಯಿಸುವ ಅಧಿಕಾರಿ ವರ್ಗ. ಈ ಅಧಿಕಾರಿ ವರ್ಗದಲ್ಲಿ ಇನ್ನಾರೂ ದೇವಲೋಕದ ಜನರಿರರು. ನಮ್ಮ ಸಮಾಜದ ಘಟಕಗಳಾದ ಕೆಲವು ವ್ಯಕ್ತಿಗಳೆ ಇರುವರು. ಭಾರತದಲ್ಲಿಯ ಕೆಳತರಗತಿಯ ಅಧಿಕಾರಗಳೆಲ್ಲ ನಮ್ಮ ಜನರ ಕೈಯಲ್ಲಿದ್ದಂತೆ ಕಂಡರೂ, ಆ ಕೈಗಳನ್ನಾಡಿಸುವ ಲಗಾಮು ಭಾರತೀಯ ಸಮಾಜದ ಘಟಕಗಳ ಕಡೆಗಿಲ್ಲವೆಂಬ ಮಾತನ್ನು ನಾವು ಯಾವಾಗಲೂ ಮರೆಯಬೇಕಾಗಿಲ್ಲ. ಈ ವಿದೇಶೀಯ ಶಕ್ತಿಗೆ ಭಾರತೀಯರ ಬದುಕಿಗಿಂತ ಹೆಚ್ಚಾಗಿ ತಮ್ಮ ಶತ್ರುಗಳ ಸೋಲಿನ ಆವಶ್ಯಕತೆ ಹೆಚ್ಚಾಗಿದೆ. ‹ ಅವರ ಶತ್ರುಗಳು ಭಾರತೀಯರಿಗೆ ಶತ್ರುಗಳು ಅಲ್ಲವೆ? › ಎಂದೂ ಯಾರಾದರೂ ಕೇಳಬಹುದು. ಆದರೆ ಇಂದು ಭಾರತೀಯರಿಗೆ ಎಲ್ಲೆಲ್ಲಿಯೂ ಶತ್ರುಗಳು ತೋರುವರು. ಒಳಗೂ ಶತ್ರುಗಳು, ಹೊರಗೂ ಶತ್ರುಗಳು! ಸ್ವಾರ್ಥಸಾಧನೆಗಾಗಿ ಭಾರತೀಯ ಸಮಾಜವನ್ನು ಆಳಬೇಕೆಂದು ಬಯಸುವ ಯಾವ ವ್ಯಕ್ತಿಯೂ ಇಂದು ಭಾರತಕ್ಕೆ ಶತ್ರುವಾಗಿದ್ದಾನೆ. ಕೇವಲ ಭಾರತೀಯರಿಂದ ಕೂಡಿದ ಈ ಮನೋವೃತ್ತಿಯ ಅಧಿಕಾರಿವರ್ಗವಿದ್ದರೂ, ಇಂದು ಅದು ಭಾರತೀಯರಿಗೆ ಬೇಡವಾಗಿದೆ. ಆದುದರಿಂದ ನಾವು ಈ ಒಳ-ಹೊರಗಿನ ಶತ್ರುಗಳಿಬ್ಬರ ಜೊತೆಗೂ ನಮ್ಮ ನೈತಿಕಬಲದಿಂದ ಹೋರಾಡಬೇಕಲ್ಲವೆ? ಇಂತಹ ಕಾಲದಲ್ಲಿ ಬರಿ ಹಸಿವೆಯಿಂದ ನಾವು ಕಂಗೆಟ್ಟು ಮುಂಗಾಣದೆ ಕುಳಿತುಕೊಂಡರೆ ಹೇಗೆ ನಡೆಯಬೇಕು? ಈ ಹಸಿವೆಯನ್ನು ಹಿಂಗಿಸುವ ಮಾರ್ಗ ಇಲ್ಲವೇ ಇಲ್ಲವೇನು?

ನಮ್ಮಲ್ಲಿಯ ಬಂಡವಾಳಗಾರರ ಲಾಭಲೋಲುಪ್ತಿ, ನಮ್ಮವರೇ ಆದ ಅಧಿಕಾರಿಗಳ ಕರ್ತವ್ಯಲೋಪ, ಸಮಾಜದಲ್ಲಿಯ ಅಜ್ಞಾನ ಮೂಲಕ ಭೀತಿ ಅನೈಕ್ಯಗಳು ಇವೆಲ್ಲ ಸೇರಿ ಇಂದು ನಮ್ಮಲ್ಲಿ ಹಸಿವೆಯ ಭೂತಕ್ಕೆ ರಾವಿನ ಬಣ್ಣ ಬಳಿಯುತ್ತಲಿವೆ. ಅದಕ್ಕಾಗಿ ಜನತೆ ಇನ್ನಿಷ್ಟು ನಿರ್ವೀಣವಾಗಿ ನೆಲವನ್ನು ಹಿಡಿಯುತ್ತಲಿವೆ. ಇಂದಿನ ವಿಪ್ಲವೋತ್ತರ ಜಗತ್ತಿನಲ್ಲಿ, ಭಾರತವೂ ಒಂದು ಸ್ವತಂತ್ರ ರಾಷ್ಟ್ರವಾಗಿ ನಿಲ್ಲಬೇಕೆಂಬ ಅಪೇಕ್ಷೆಯಿದ್ದರೆ, ನಮ್ಮ ಬಂಡವಳಗಾರರು ಅತ್ಯಾಶೆಯ ಮೋಹ ಬಿಡಬೇಕು; ಅಧಿಕಾರಿವರ್ಗ ಕರ್ತವ್ಯಬುದ್ಧಿಯಿಂದ ಜನಹಿತದ ಕೆಲಸ ಮಾಡಬೇಕು. ಜನತೆ ತುಂಬುತಿಳಿವಳಿಕೆಯಿಂದ - ಹೆದರಿಕೆಯಿಲ್ಲದೆ —ತನ್ನ ಕಾಲಮೇಲೆ ತಾನ ನಿಂತು, ತನ್ನ ಹಿತವನ್ನು ಸಾಧಿಸಲು ಹಗಲಿರುಳು ಜಾಗೃತವಾಗಿರಬೇಕು. ಇವರು ಹೀಗೆ ಮಾಡದೆ ಹೋದರೆ, ಭಾರತ ಸ್ವಾತಂತ್ರ್ಯದ ಹಾರಯಿಕೆ ಹಳವಂಡವಾಗಿ ಪರಿಣಮಿಸದಿರದು!

—ಸಂಪಾದಕರು.



೧. ಮಿಳ-ಮೇಳ-ಸಮ್ಮೇಳನ

ಶ್ರೀಶಿವಗಂಗಾಕ್ಷೇತ್ರದಲ್ಲಿ ನೆರೆದ ಅಖಿಲ ಮೈಸೂರು ಪತ್ರಿಕೋದ್ಯೋಗಿಗಳ ಸಮ್ಮೇಳನದಲ್ಲಿ, ಸ್ವಾಗತಾಧ್ಯಕ್ಷರ ಭಾಷಣ ಮತ್ತು ಸಮ್ಮೇಳನಾಧ್ಯಕ್ಷರ ಭಾಷಣಗಳು ಇಂಗ್ಲಿಷಿನಲ್ಲಿ ನಡೆದುವಲ್ಲದೆ, ಅನೇಕರು ನಿರ್ಣಯಗಳನ್ನು ಸಹ ಇಂಗ್ಲಿಷಿನಲ್ಲಿ ಕಳುಹಿದ್ದರು ಎಂದು ಮೈಸೂರು ವಾಚಕರೊಬ್ಬರು ಮಂಗರಾಯನಲ್ಲಿ ಗೋಳಿಟ್ಟಿದ್ದಾರೆ! ಪಾಪ! ಈ ವಾಚಕರಿಗೆ ಕರ್ನಾಟಕದ ಪರಂಪರೆಯೆ ಗೊತ್ತಿದ್ದಂತಿಲ್ಲ: ಇಲ್ಲವಾದರೆ 'ಮೈಸೂರು ಕನ್ನಡದೇಶ' ಎಂಬ ತಪ್ಪು ಕಲ್ಪನೆಯಾಗುತ್ತಿರಲಿಲ್ಲ. ಈಗಾದರೂ 'ಕಸ್ತೂರಿ ಬಾ ನಿಧಿ' ಮೊದಲ್ಗೊಂಡು ಯಾವತ್ತೂ ಸಾರ್ವಜನಿಕ ಚಟುವಟಿಕೆಗಳಲ್ಲಿ 'ಅಖಿಲ ಕರ್ನಾಟಕ' ಬೇರೆ, ಮೈಸೂರು ಬೇರೆ—ಎಂದಿದ್ದುದನ್ನು ಈ ವಾಚಕರು ಮರೆಯದಿರಲಿ. ಇದಲ್ಲದೆ—ಸಾರ್ವಜನಿಕರ ಹಿತದ ದೃಷ್ಟಿಯಿಂದ ನೋಡಿದರೂ—ಗಂಗಾಕ್ಷೇತ್ರದಲ್ಲಿ ಯೋಗ್ಯವಾದದ್ದೆ ಸಿದ್ಧವಾಗಿದೆ—ಅಲ್ಲಲ್ಲ,—ಸಿದ್ಧ ಗಂಗಾ ಕ್ಷೇತ್ರದಲ್ಲಿ ಯೋಗ್ಯವಾಗಿದೆ....ಎನ್ನಬಹುದು. ಕನ್ನಡ ಪತ್ರಿಕೆಗಳನ್ನು (ವಿಶೇಷವಾಗಿ ದಿನಪತ್ರಿಕೆಗಳನ್ನು) ಓದಿದ ಯಾವ ಕನ್ನಡಿಗನು, ಈ ಪತ್ರಿಕಾಕರ್ತರಿಗೆ ಕನ್ನಡ ಬರುವುದೆಂದು ನಂಬುವನು? ಮೂರನೆಯ ಮಾತು; ಕರ್ನಾಟಕದಲ್ಲಿ ಕನ್ನಡ ಭಾಷೆ ಬಡವರ ಭಾಷೆ; ದೇವ-ಗುರು-ಹಿರಿಯ-ಸಂಪನ್ನರ ಭಾಷೆ ಯಾವಾಗಲೂ ಬೇರೆಯೆ. ಕರ್ನಾಟಕದ ಕೇಂದ್ರವಾದ ಧಾರವಾಡದ ದತ್ತಾತ್ರೇಯ ಗುಡಿಯ ಹೊರಗೋಡೆಯ ಜಾಹೀರಾತುಗಳಿಂದ ಒಳಗಿನ ವರೆಗೆ ಮರಾಠಿ ಇದ್ದುದು, ಅಧಿಕಾರಿಗಳು ಕನ್ನಡೇತರರಾಗಿದ್ದುದು, ದಿವಾಣರು ತಮಿಳು ತೆಲುಗರಿರುವುದು—ಒಟ್ಟಾರೆ ಪತ್ರಿಕಾ ಸಮ್ಮೇಳನದಲ್ಲಿ ಕನ್ನಡಕ್ಕೆ ಕತ್ತರಿ ಇದ್ದುದು—ಅಲ್ಲ—ಅಂದ್ರೆ—ಪತ್ರಿಕಾಕರ್ತರ ಭಾಷೆಯಲ್ಲಿ ಸಮ್ಮೇಳನ—ಥೂ!—ಅಂದ್ರೆ—ಸಾಕು, ವಾಚಕ ಮಹಾಶಯಾ, ಬೆಚ್ಚಗೆ ಹೇಳುವುದೇನು?

ದಾಸನು—ತಾನು ಮಂಗಯ್ಯ,
ಒಡೆಯನು ಅವನಿಗೆ ರಾಮಯ್ಯ,
ಕಂಡುದ ಕೂಡಿಸೆ ಸಮ್ಮೇಳನ
ಹೀಗಿರೆ ಕನ್ನಡವೇಕಯ್ಯ?

೨. ತಲೆಗೂದಲಿನ ಭವಿಷ್ಯ

ಮಂಗರಾಯನಿಗೆ ಬರುವ ಅನೇಕ ಸೂಚನೆಗಳಲ್ಲಿ ಈ ಸಲದ ಎರಡು ಸೂಚನೆಗಳು ಮನನೀಯವಾಗಿವೆ:—(೧) ಭವಿಷ್ಯವಿಲ್ಲದ ಯಾವ ದೇಶೀಯ ಪತ್ರ-ಪತ್ರಿಕೆಗಳೂ ಇಲ್ಲವಾದ್ದರಿಂದ, ಮಂಗರಾಯನು 'ಮಾಸಭವಿಷ್ಯ'ವನ್ನು ಬರೆಯಬಾರದೇಕೆ, ಎಂದು; (೨) ಪ್ರಗತಿಶೀಲ ಸಾಹಿತ್ಯಕ್ಕೂ ತಲೆಗೂದಲಿನ ಆಳತೆಗೂ ಸಂಬಂಧವಿದೆ ಎಂಬುದಿನ್ನೊಂದು. ಇವೆರಡೂ ಸೂಚನೆಗಳನ್ನು ಏಕದೃಷ್ಟಿಯಿಂದ ನೋಡುವ ಮಂಗರಾಯನು, ಈ ತಿಂಗಳು ಲೇಖಕರಿಗೆ ಕುಂಭರಾಶಿ ಇದ್ದು ಕೊಡದ ಮೇಲೆ ಕೂದಲು—ಅಲ್ಲಲ್ಲ—ಅಂದರೆ ತಲೆಯ ಮೇಲೆ ಕೂದಲು ಉದ್ದವಾಗುವುದು ಎಂದು ಭವಿಷ್ಯವನ್ನು ನುಡಿದಿದ್ದಾನೆ. ಇಷ್ಟೇಕೆ—ಈಗ ಕೆಲವು ವರ್ಷಗಳಿಂದ—ಇನ್ನೂ ಕೆಲವು ವರ್ಷಗಳ ವರೆಗೆ ಪತ್ರಿಕೆಯ ಭವಿಷ್ಯ ಲೇಖಕರಿಗೂ ವಾಚಕರಿಗೂ ಕುಂಭರಾಶಿ ಬಿಡುವಂತಿಲ್ಲ, ಎಚ್ಚರ! ತಲೆ ಎಂದರೆ ದಬ್ಬು ಹಾಕಿದ ಕೊಡ (ಕುಂಭ) ದಂತೆ ಹಗುರೆನಿಸೀತು; ತಲೆ ಹಗುರು, ಮಿಕ್ಕದ್ದು ಜಡ ಆದರೆ ಢೋಲಿ ತಪ್ಪೀತೆಂದು ಸಮತೂಕ ಮಾಡಲು, ತಲೆಯಮೇಲೆ ಭಾರವಾದ ಕೂದಲು, ಹೀಗೆ ಕುಂಭರಾಶಿ ಅನೇಕ ವರ್ಷಗಳ ವರೆಗೆ ನಡೆಯುವುದರಿಂದ, ಬೇಕಾದ ವಾರದ ಭವಿಷ್ಯ ಬೇಕಾದ ವಾರಕ್ಕೆ ಸಲ್ಲುವುದು. ಎಂತೆಂತಹ ಕರ್ಮವೀರರಿಗೆ ಕೂಡ ತಪ್ಪದ ಈ ಭವಿಷ್ಯ ಪ್ರಗತಿಶೀಲ ಸಾಹಿತಿಗಳಿಗೆ ತಪ್ಪೀತು ಹೇಗೆ? ಇಷ್ಟೇಕೆ? ಪ್ರಗತಿ ಹೀಗೆಯೆ ಸಾಗಿದರೆ ತಲೆಯ ಒಳಗೂ ಕೂದಲು ಬೆಳೆಯುವುದೆಂದು ಮಂಗರಾಯನ ಭವಿಷ್ಯ. ತಲೆಯೊಳಗೆ ಏನೂ ಇಲ್ಲದ್ದನ್ನು ಮುಚ್ಚಲು ಮೇಲೆ ಕೂದಲಿನ ಭಾರ ಎಂದು ತಿಳಿಯುವುದು ತಪ್ಪು—ಅದಕ್ಕೆ ಜ್ಯೋತಿಷ್ಯದ ಆಧಾರವಿಲ್ಲ. ಶಿಷ್ಯರಿಗೆ ಶಾಪ ಕೊಡುವುದು ಪ್ರ. ಶೀ. ಸಾ. ದ ಗುರಿ, ಶಾಪ ಕೊಡುವ ಅಧಿಕಾರ ಬರಲು ತಲೆಗೆ ಜಟಾಭಾರ ಬೇಕು ಎಂಬುದು ಜೀವನದ ಅನುಭವದಿಂದ ಸುಳ್ಳೆನಿಸಬಹುದಾದ್ದರಿಂದ, ಕುಂಭರಾಶಿಯೆ ಅದಕ್ಕೆ ಕಾರಣ ಎಂದು ತಿಳಿಯುವುದುತ್ತಮ. ಕುಂಭರಾಶಿಯ ಪ್ರಭಾವವಿರುವ ವರೆಗೆ ಮಂಗಗಳಿಂದ ದೂರವಿರುವುದುತ್ತಮ.

೩. ಅಹಿಂಸಾ 'ಗೌಡಬಂಬಯೀ'!

ಕಾಂಗ್ರೆಸಿನಿಂದ ಕಮ್ಯುನಿಸ್ಟರನ್ನು ಹೊರಗೆ ಹಾಕುತ್ತಿದ್ದುದು ನಿಜವೆ?—ಎಂದು ಯುವಕ ವಾಚಕನೊಬ್ಬನು ದೀನವಾಣಿಯಿಂದ ಮಂಗರಾಯನಲ್ಲಿ ಮೊರೆ ಇಟ್ಟಿದ್ದಾನೆ. ಆದರೆ ಸ್ವತಃ ಮಂಗರಾಯನಿಗೇ ಈ ಪ್ರಶ್ನೆಗಾಗಿ ದಿಗಿಲು. ಯಾಕೆಂದರೆ, ಎಂದಿನಿಂದಲೂ 'ಇವರು ಹರಿಜನರು, ಇವರು ಮುಸಲ್ಮಾನರು' ಎಂದು ಜಾತಿಯ ದೃಷ್ಟಿಯಿಂದಲೆ ಜನರನ್ನು ಬೇರೆ ಮಾಡುವುದು ಕಾಂಗ್ರೆಸಿನ ಉದಾರ ಧೋರಣೆಯಾಗಿದೆ. 'ಕಮ್ಯುನಿಸ್ಟ್' ಎಂಬುದು ಜಾತಿಯಲ್ಲವಲ್ಲ—ಆದ್ದರಿಂದ—ಅಥವಾ ಜಾತಿಗಳನ್ನು ನಿರ್ಮಿಸುವವನು ಪರಮಾತ್ಮನು, ಅವನು ಅಗಾಧಶಕ್ತಿಯುವನು, ಇಷ್ಟರಲ್ಲಿ 'ಕಮ್ಯುನಿಸ್ಟ್' ಎಂಬ ಜಾತಿಯನ್ನು ಹುಟ್ಟಿಸಿರಬಹುದೆ? ಇದಲ್ಲದೆ ಕಾಂಗ್ರೆಸು ಅಂತಿಂತಹರನ್ನು ಹೊರಗೆ ಹಾಕಲು ಹೋಗುವುದಿಲ್ಲ; ರಾಜಾಜಿ, ಸುಭಾಷ ಬಾಬು ಇಂತಹ ಅಸಾಧಾರಣ ವ್ಯಕ್ತಿ ಇದ್ದರೇನೆ ಕಾಂಗ್ರೆಸು ಅವರನ್ನು ಹೊರಗೆ ಹಾಕುವುದು. ಕಾಂಗ್ರೆಸಿಗೊಂದು ಗೌರವವಿದೆಯಲ್ಲವೆ? ಹೀಗಿರುವಾಗ 'ಕಮ್ಯುನಿಸ್ಟ' ಎಂಬವನೂ ಅಸಾಮಾನ್ಯ ವ್ಯಕ್ತಿಯಾಗಿರಬಹುದೆ? ಅಥವಾ—ಛೆ!—ಎಷ್ಟೊಂದು ಮೈ ತುರಿಸಿದರೂ ಮಂಗರಾಯನ ದಿಗಿಲು ಬಿಡುವಂತಿಲ್ಲ. ಅಥವಾ—? ಹಾಂ!—ಹೊಳೆಯಿತು—ಬೆಳಕು ಸೆಳೆಯಿತು—ಮಂಗರಾಯನ ಮುಸುಡಿ ಅಳೆಯಿತು! ಕಮ್ಯುನಿಸ್ಟನು ತೀರ ಸಾಮಾನ್ಯ, ಬಡವ, ಕೆಲಸಗಾರ—ಛೆ! ಇಂತಹ ಪಾಪಾತ್ಮನಿಗೆ ಪುಣ್ಯಪುರುಷರ ಸಂಸ್ಥೆಯಲ್ಲಿ ಸ್ಥಾನ ಸಿಕ್ಕುವುದೆಂತು? ಬೋಲೊ!

ಅಹಿಂಸಾ ಝಿಂದಾಬಾದ್
ಕಮ್ಯುನಿಸ್ಟನ ಕೊಂದಾಬಾದ್

ಶ್ರೀರಂಗರು ಬರೆದ
ಜಾತೀಯ ಸಮಸ್ಯೆ
೧—೪—೦ ಮಾತ್ರ
ಮಾರಾಟಮಾಡಲು ಅಪೇಕ್ಷಿಸುವ ಜಯಂತಿಯ ಏಜಂಟರು ತಮಗೆ ಬೇಕಾಗುವಷ್ಟು ಪ್ರತಿಗಳಿಗಾಗಿ ಬರೆಯಬೇಕು. ಯೋಗ್ಯ ಕಮಿಶನ್ ದೊರೆಯುವುದು.

ಸಂದೇಶ

(ರೂಪಕಪ್ರಬಂಧ)

ಕುಮಾರಿ ದೇವಾಂಗನಾಶಾಸ್ತ್ರಿ, ಗೋಕರ್ಣ

✲

ಮುಚ್ಚಂಜೆಯ ಸಂಜನು ಹೀರಿ ಬರುವ ಹಾಲುಬೆಳುದಿಂಗಳನು ಕರಾಳಕಾರ್ಗತ್ತಲೆಯು ನುಂಗಿನಿಂತಿದೆ. ಅದಕೆ ಹೆದರಿ ಅಪುರಿ, ಮಂದ ಮಾರುತನು ಕೂಡ ಉಸಿರುಬಿಗಿದು ಎತ್ತಲೋ ಮರೆಯಾಗಿಹನು. ಪರ್ಜನ್ಯದ ಪದವಿನಲ್ಲಿ ವಾಯುಮಂಡಲವದು ಸೇರಿಹುದು. ಇಂತು ಕತ್ತಲು ಮುತ್ತಿದ್ದರೂ ಅಲ್ಲಿ—ಪುರದಂಚಿನಲ್ಲಿ—ಕುಮುದವೊಂದು ಅರಳಿ ನಿಂತು. ಕಾವಲನನು ಕರೆಯುತಿಹುದು. ಅದೆಂತಹ ಸುಮದ ಸೌರಭ! ಕಾಡಿಮುಳಿನಲ್ಲಿಯೂ ತನ್ನನರಸುತ ಬಪ್ಪಂತೆ ಮನಸೆಳೆಯುತಿಹುದು. ನುಂಗುತಿಹ ನೋಡರಾಹುವಿನೊಡನೆ ಮುಗಿಲರಾಜನನು ಬೇಡುತಿಹುದು. ಹೂವಿನಲಿ ರಾಣಿಯೆನಿಸಿದ ಕುಮುದಿನಿಯ ರಾಜನನು ನುಂಗಿ ಬೀಗಿದ ನೋಡವದು, ಜಾಡ್ಯವೇರಿ ಕತ್ತಲೆಯ ಕಾರುತಿಹುದು. ಜವತೆಯನು ಲಕ್ಷಿಸದೆ ಒಂದೆ ತೆರನೆ ಕಂಪುಕಂಬನಿಯಿಂದ ಕರಕರಿಸುತಿಹುದು ಕುಮುದ!

ಇನಿಸಾದರೂ ದಯವಿಲ್ಲ ಕರ್ಕಶದ ಕತ್ತಲೆಗೆ!

ಧರ್ಮವನು ಬದಿಗಿರಿಸಿ, ಕರ್ತವ್ಯವನು ಕಡೆಗಣಿಸಿ, ಅಬಲೆಯ ಅನುನಯದ ಅನುತಾಪಕ್ಕೆ ಮರುಕಗೊಂಡು, ಸಾಧ್ವಿಸಾವಿತ್ರಿಗೆ ಸತ್ಯವಾನನನಿತ್ತ ಯಮರಾಯನಿಗಿಂತ, ನೋಡರಾಯನ ಹೃದಯವದು ಬಲುಗಡುಸು! ಸುತ್ತಲೆತ್ತಲೂ ರೌದ್ರರಾತ್ರಿ! ನೀರವತೆ, ನಿಸ್ಪಂದ! ಇಂತು ಸಲಿಸ್ವೈರ್ಯದಲಿ ಇನಿಯನನು ಬೇಡುತಲಿ ಸೆಣಸಾಡುತಿಹುದು ಕುಮುದ; ಇನಿತು ಬೇಡಿದರು ಕತ್ತಲೆಯ ಆಳದಿಂದ ಎದ್ದುಬಾರನ್ನು ಇತ್ತ ಮತ್ತೆ! ರಾತ್ರಿಯ ಗಂಭೀರತೆ ಹೃದಯವನು ಸ್ತಂಭಿಸುವುದು ಪ್ರಕೃತಿಯು ಉಸಿರುಬಿಡುತ್ತ ಜಗವನುತಬ್ಬಿ ನಿದ್ದೆಯಾಳದಲಿ ಹೊಕ್ಕು, ನ್ನೆಮರೆತು ಮಲಗಿಹುದು.

" ನನ್ನಿನಿಯ ನನ್ನನರಸುತ ಬರನೇ ? "

" ಬಂದೆ, ಇದೋ.......ಎಂದು ಮರುದನಿಯಕೊಡದಿಪ್ಪನೇ " ಎಂಬ ಕಳವಳದಲ್ಲಿ ಕಳೆಗೆಟ್ಟು ಕೊರಗುತಿಹುದು ಕುಮುದ!

ಆಕಾಶದಂಚಿನಲಿ ಮಿಂಚಿನೆಳೆಯೊಂದು ಮಿಂಚಿ ಮಂಚಿಸಿ ಮಾಯಗೊಂಡಿತು. ಚಂದಿರನ ಬರವಿನ ಒಸಗೆಯನು ತಂದಿರುವ ಮಿಂಚಿ ಮರೆಯಾದ ಬೆಳಕಿನ ಹಿಗ್ಗು, ಮರುನಿಮಿಷದಲಿ ಬೆನ್ನಟ್ಟಿ ಬಂದ ಕತ್ತಲೊಡನೆ ಕುಗ್ಗಿ ಕುಕ್ಕರಿಸಿತು. ಇಂತು ಚಣಚಣಕೆ ಚೆನ್ನಾಟ ವಾಡುತ್ತ ಮೋಡವದು:

" ಇಂದಿನಿರುಳಿಗೆ ಇಳೆಗೆ ಚಂದ್ರಮನನು ದಯಮಾಡೆ! " ಎಂದು ಸಾರುತಿದ್ದಿತು. ಬೆಂಬತ್ತಿ ಬರುತಿದ್ದ ನಿರಾಶೆಯೊಡನೆ ಹೋರಾಡಿ ಕಡೆಯಲ್ಲಿ ಬಾಡುವುದರಲ್ಲಿತ್ತು ಕುಮುದ!

\+ + + +

" ಕೊರಗುತಿಹೆ ಏಕಿಂತು ? "

"........................"

" ಅಳಲಿಗಾಹುತಿಯಾಗಿ ಅಳಿದುಹೋಗಲು ಬೇಡ, ಬೆಳಕುಕತ್ತಲೆಗಳವು ಸೃಷ್ಟಿ ವಿಧಿಸಿದ ನಿಯಮವು! "

"........................"

" ಮುದುಡುವುದನೆ ಬಿಡು, ಕುಮುದಿನಿ! ಕವಿದ ಕತ್ತಲದು ಬೆಳ್ಳಗೆ ಬೆಳಕಾಗಿ ಬೆಳಗುವುದೊಂದು ದಿನ! ಸಟೆಯಿದರೊಳನಿತಿಲ್ಲ ಮರೆಯಾದ ಚಂದ್ರನು ಮೋಡವನೆ ಹರಿದು ಬಂದು ಮತ್ತೆ ಬೆಳಗುವನು ದಿಟವು! "

ಇಂತು ಇನಿದು ಸಂದೇಶವೊಂದು ಕತ್ತಲೆಯ ಕಣಕಣವ ಕತ್ತರಿಸುತ್ತ, ಜಗದ ಚೈತನ್ಯದ ಉಸಿರು ತಣ್ಣನೆಯ ತಂಬೆಲರೊಡನೆ ಕುಮುದದೆಡೆಗೆ ತೂರಿ ತಂದಿತು. ಬಾಡಿದರಳು ಮುಗುಳುನಗುವನೊಮ್ಮೆ ಚೆಲ್ಲಿತು. ಇನಿತು ಕುಲುಕುಲು ನಗು ಚೆಲ್ಲಿ ಅರಳದೊಡೆ ನಾಳೆಯ ವಿನ್ಯಾಸದಲಿ ಕೊರತೆ ಬಹುದೆಂದೋ ಮರೆಯಾದ ಮನದನ್ನನು ಇಂದಿಲ್ಲನೆಂದೊ....ಅಂತು ಮತ್ತೆ ಅರಳುವ ಆಶೆಯಲಿ ಮುದುಡಿಕೊಂಡಿತು ಕುಮುದ!

'ಒಡನಾಡಿ' ಎಂಬ ಹೆಸರಿನ 'ಆನಂದಕಂದ'ರ ಕವನ ಸಂಗ್ರಹ ಬೇಗನೆ ಬೆಳಕಿಗೆ ಬರಲಿದೆ!

ವಾಗ್ವಿಲಾಸ ಬುಕ್‍ಡಿಪೋ ದುರ್ಗದಬೈಲು, ಹುಬ್ಬಳ್ಳಿ
ಇವರಲ್ಲಿ ದೊರೆಯುವ ಪುಸ್ತಕಗಳು

ಪೋಲೀಸನಾಯಿಡು (ಕಲಕೋಟಿಕೃತ)	೨—೮—೦
ಒಕ್ಕಲತನದ ಸಾಂಪತ್ತಿಕ ಸ್ಥಿತಿ	೨—೬—೦
ಉತ್ಪನ್ನದ ಮೇಲಿನ ಕರದ ಕೈಪಿಡಿ	೨—೮—೦
ಮುಂಬೈ ಇಲಾಖೆಯ ಸಹ. ಸಂ. ಕಾಯಿದೆ	೧—೮—೦
ಪಂಡಿತ ಜಗನ್ನಾಥರ ಚರಿತ್ರ	೧—೦—೦
ಸಂತಾನಶಾಸ್ತ್ರ (ಸಬರದಕೃತ)	೧—೪—೦
ತರುಣ ಪತ್ನಿ	೦—೮—೦
ಕಲಿತರೆ ಹೀಗೆ ಕಲಿಯಬೇಕು	೦—೫—೦
ಗೀತಾರ್ಥ ಬೋಧಿನಿ	೦-೧೨—೦
ತತ್ವಲಾವಣಿ	೦—೪—೦

ಏಕೀಕರಣದ ಪಾಂಚಜನ್ಯ

ಶ್ರೀ. ಕೆ. ಚೆನ್ನಬಸಪ್ಪ, ಲಾ ಕಾಲೇಜ್ ಬೆಳಗಾಂವಿ *

ಅಖಿಲಕರ್ನಾಟಕ ಏಕೀಕರಣ ಸಂಘವು ಹುಟ್ಟಿ ಕಾಲುಶತಮಾನ ಕಳೆದಿದ್ದರೂ, ಅಂತಹ ಸಂಸ್ಥೆಯೊಂದಿದೆ ಎಂಬುದೂ ಬಹುಜನರಿಗೆ ತಿಳಿದಿರಲಿಲ್ಲ. ಆ ಸಂಸ್ಥೆಗೆ ಕೀರ್ತಿಕಟ್ಟಿಕೊಳ್ಳಬೇಕೆಂಬ ವ್ಯಾಮೋಹವೇ ಇರಲಿಲ್ಲ! ನಿರಾಡಂಬರ ಜೀವಿಯಾಗಿ ಕಾಲುಶತಮಾನ ಕಳೆಯಿತು. ಒಮ್ಮೊಮ್ಮೆ, 'ಸತ್ತುಹೋಯಿತು' ಎನ್ನುವಷ್ಟು ಮಲಗಿತ್ತು. ಆದರೆ ಅಗ್ನಿಸಂಸ್ಕಾರ ಮಾಡಿಬಿಟ್ಟಾರೆನ್ನುವ ಭಯದಿಂದ ಎಂದಾದರೊಮ್ಮೆ ಎಚ್ಚೆತ್ತು ಮತ್ತೆ ಮಲಗಿ ನಿದ್ರಿಸುತ್ತಿತ್ತು.

ಹೀಗೆ ಎಚ್ಚೆತ್ತು ಮಲಗಿ, ಮಲಗಿ ಎಚ್ಚೆತ್ತು, ಸತ್ತುಹುಟ್ಟಿ-ಹುಟ್ಟಿ ಸಾಯುತ್ತಿದ್ದ ಸಂಸ್ಥೆ ಸೋಮಾರಿತನದ ದೂಳನ್ನು ಕೊಡಹಿಕೊಂಡು ಎದ್ದುನಿಂತಿದೆ! 'ಅಖಿಲ ಕರ್ನಾಟಕದ ಏಕೀಕರಣವಾಗುವವರೆಗೆ ಚಳುವಳಿ ನಿಲ್ಲಿಸಲಿಕ್ಕಿಲ್ಲ!' ಎಂದು ಘೋರ ಪ್ರತಿಜ್ಞೆ ಮಾಡಿದೆ: 'ಏಕೀಕರಣದ ಕಹಳೆ' ಯನ್ನು ಊದಿದೆ! ಕಡೆಗೊಮ್ಮೆ ಕಾರ್ಯರಂಗಕ್ಕೆ ಇಳಿದಿದೆ!

ಹಾಗಾದರೆ ಅದರ ಕಾರ್ಯಕ್ರಮವೇನು?

ಕಾಗದದಲ್ಲಿ ಕಹಳೆ ಊದಿ ಎಲೆಯ ಮುಂದೆ ಕಾಳಗ ಹೂಡುವ ಕೆಲಸ ನಮಗಿನ್ನು ಸಾಕು! ಆ ಕೆಲಸ ಹಿಂದೆ ಬೇಕಾದಷ್ಟಾಗಿದೆ. ಅಲ್ಲದೆ ಬರಿ ಕಾಗದದ ಕಹಳೆ ಕೇಳಿ ಎದೆಯೊಡೆದು ಶರಣು ಬರುವ ಅಳ್ಳೆದೆಯ ಅನ್ಯರಲ್ಲ ನಮ್ಮೆದುರಾಳುಗಳು. ಅಷ್ಟು ಮಾತ್ರವಲ್ಲ, 'ಮಂತ್ರಿಸಿದರೆ ಮಾವಿನಕಾಯಿ 'ಉದುರುವುದಿಲ್ಲ' ಎಂಬುದು ಸಿದ್ಧಾಂತವಾದ ಸತ್ಯ. ಆದ ಕಾರಣ ಈ ಕಾಗದ, ಮಂತ್ರ ಮಂತ್ರಾದುವುಗಳನ್ನು ಬಿಟ್ಟು ವಾಸ್ತವ ಪ್ರಪಂಚಕ್ಕೆ ಬಂದು ಹೋರಾಡಬೇಕು. ಹಾಗಾದರೆ ಅ. ಕ. ಏ. ಸಂಘದ ಕಾರ್ಯಕ್ರಮವೇನು?

ಸದಸ್ಯರ ಸಂಖ್ಯೆ

ಬಹುಶಃ ಪ್ರತಿಯೊಂದು ಸಂಸ್ಥೆಯ ಕಾರ್ಯಕ್ರಮವೂ ಸದಸ್ಯರನ್ನು ಮಾಡುವುದರಿಂದಲೇ ಪ್ರಾರಂಭವಾಗುವುದು. ಆದಕಾರಣ ಸದಸ್ಯರನ್ನು ಮಾಡುವುದೇ ಮೊದಲ ಮೆಟ್ಟಲು. ಸದಸ್ಯತ್ವದ ಹಣವನ್ನು ಕೇವಲ ನಾಲ್ಕಾಣೆಯ ಕಡಮೆ ಮೊತ್ತಕ್ಕಿಳಿಸಿರುವುದೂ, ಮೂರೇ ತಿಂಗಳಲ್ಲಿ ಇಪ್ಪತ್ತೈದುಸಾವಿರ ಸದಸ್ಯರನ್ನಾಗಿಸುವಂತೆ ತೀರ್ಮಾನಿಸಿರುವುದೂ ಗಮನಿಸಬೇಕಾದ ಅಂಶ. ಇದರಿಂದ ಸಂಘಕ್ಕೆ ಸದಸ್ಯರನ್ನಾಗಿಸುವುದು ಅವರ ಆರ್ಥಿಕ ಸಹಾಯಕ್ಕೇನೂ ಅಲ್ಲ ಎಂಬುದು ನಿರ್ವಿವಾದ. ಇಪ್ಪತ್ತೈದು ಸಾವಿರ ಸದಸ್ಯರಿಂದ ಆರು ಸಾವಿರ ರೂಪಾಯಿ ಕೂಡ ಬಹುದು. ಕೇವಲ ಆರು ಸಾವಿರ ರೂಪಾಯಿ ಮಾತ್ರ ಬೇಕಾಗಿದ್ದರೆ, ಸದಸ್ಯರನ್ನಾಗಿಸಲು ಇಷ್ಟು ಶ್ರಮಪಡುವ ಅಗತ್ಯವಿರಲಿಲ್ಲ. ಅಷ್ಟು ಧನಸಹಾಯ ಮಾಡುವ ಉದಾರಬುದ್ಧಿಯ ಜನ ಕನ್ನಡಿಗರಲ್ಲಿ ಬೇಕಾದಷ್ಟಿದ್ದಾರೆ. ದೇಸಾಯಿಗಳಿಗೆ ಕಡಮೆಯಿಲ್ಲ. ಸೆಟ್ಟಿ-ಸಾಹುಕಾರರಿಗೆ ಕಡಮೆಯಿಲ್ಲ. ಆಳುವ ದೊರೆಗಳೂ ಬೇಕಾದಷ್ಟಿದ್ದಾರೆ. ಆದರೆ ನಮಗೆ ಬೇಕಾದುದು ಧನಮಾತ್ರವಲ್ಲ. ಜನ ಬೇಕು. ಜನರ ಬೆಂಬಲ ಬೇಕು. ಅವರ ನೈತಿಕ ಸಹಾಯ ಬೇಕು. ಯುದ್ಧಸಿದ್ಧಿಯನ್ನು ತಿರುಕರಿಂದಲೂ ತೆಗೆದುಕೊಳ್ಳುವದು, ಬ್ರಿಟಿಷ್ ಸರ್ಕಾರ ಅಷ್ಟು ದರಿದ್ರ ಎಂದಲ್ಲ; ಭಾರತದ ನಲವತ್ತು ಕೋಟಿ ಪ್ರಜೆಗಳೂ ಸ್ವಾತಂತ್ರ್ಯರಕ್ಷಣೆಯ ಯುದ್ಧದಲ್ಲಿ ಸಹಕರಿಸುತ್ತಾರೆ ಎಂಬುದನ್ನು ಜಗಜ್ಜಾಹೀರು ಮಾಡುವುದಕ್ಕೆ. ಅದರಂತೆ ಏಕೀಕರಣ ಸಂಸ್ಥೆಯ ಸದಸ್ಯರನ್ನಾಗಿಸಲು ಹೊರಟವರಿಗೆ ಧನ ಪಿಶಾಚಿ ಹಿಡಿದಿಲ್ಲ; ಜನರ ನೈತಿಕಬಲ, ಸಂಖ್ಯಾಬಲ ಬೇಕಾಗಿದೆ.

ಕೇವಲ ಸಂಖ್ಯಾಬಲವೇ ನಮ್ಮ ಗುರಿ ಎಂದು ಯಾರೂ ತಿಳಿಯುವ ಅಗತ್ಯವಿಲ್ಲ. ಕೇವಲ ಸಂಖ್ಯಾಬಲವೇ ಬೇಕಾದರೆ ಕಾಳ, ಮೂಳ, ಮಾದ.... ಮುಂತಾದ ಸಾವಿರ ಹೆಸರುಗಳನ್ನು ಸೇರಿಸಿ ಒಬ್ಬರೇ ಹಣವನ್ನು ಕಳುಹಿಬಿಡಬಹುದು. ಆದರೆ ಅದು ನಮಗೆ ಬೇಡ. ಮುಖ್ಯವಾಗಿ ಕ. ಏಕೀಕರಣ ಸಂಘದ ಧ್ಯೇಯ, ಧೋರಣೆ, ಕಾರ್ಯಕ್ರಮ ಜನತೆಗೆ ಮುಟ್ಟಬೇಕು; ಆ ಧ್ಯೇಯ, ಧೋರಣೆಯ ಪ್ರಚಾರವನ್ನು ಮಾಡುತ್ತಾ ಹೋಗುವುದೇ ಪ್ರತಿಯೊಬ್ಬ ಏಕೀಕರಣ ಸಂಘದ ಕಾರ್ಯಕರ್ತನ ಗುರಿಯಾಗಬೇಕು.

ಸದಸ್ಯರ ಅರ್ಹತೆ

ಜನರ ನೈತಿಕಬೆಂಬಲವನ್ನು ಬಯಸುವ ಸಂಸ್ಥೆ ಮಂದಿಯ ಸಂಸ್ಥೆ (Mass Organization) ಆಗಿರಬೇಕಾದುದು ಅತ್ಯಗತ್ಯ; ಅನಿವಾರ್ಯ. ಕಾರ್ಯರಂಗಕ್ಕಿಳಿದಾಗ ಕೆಲಸವಾಗುವುದು, ಆರಾಮಕುರ್ಚಿಯ ರಾಜಕಾರಣಿಗಳಿಂದಲ್ಲ. ಅರ್ಜಿಗಳಿಗೆ ದಸ್ಕತ್ತು ಹಾಕುವ ಅಕ್ಷರಬಲ್ಲ ವಿದ್ಯಾವಂತರಿಂದ ಮಾತ್ರವೇ ಅಲ್ಲ. ಥಳಥಳಿಸುವ ಜರಿಯ ರುಮಾಲದ ಹಿರಿತಲೆಯವರಿಂದ ಮಾತ್ರವಲ್ಲ. ರಂಗಸ್ಥಳದ ಮೇಲೆ ನಿಂತು ಮೇಜು ಗುದ್ದಿ ಭಾಷಣ ಮಾಡುವವರಿಂದ ಮಾತ್ರವಲ್ಲ. ಅದಕ್ಕೆ ಕರೆದಾಗ ಮುನ್ನುಗ್ಗಿ ಸಡ್ಡುಹೊಡೆದು ನಿಲ್ಲುವ ಜಟ್ಟಿಗಳು ಬೇಕು. ಕೈಗೆ ಕೈ ಹತ್ತಿದಾಗ ಹಿಂಜರಿಯದೆ ಹೋರಾಡುವ ಮಲ್ಲರಾಗಬೇಕು. ಆ ದೃಷ್ಟಿಯಿಂದ ಸದಸ್ಯರ ಅರ್ಹತೆ ಸಾಹಿತ್ಯಜ್ಞಾನವಲ್ಲ; ಕಾವ್ಯಗಾಯನ ವಿದ್ಯೆಯಲ್ಲ; ವಾಕ್ಚಾತುರ್ಯವಲ್ಲ; ಕಾವ್ಯಶಕ್ತಿಯಲ್ಲ; ಲೇಖನಕಲೆಯಲ್ಲ; ಇಂಗ್ಲಿಷ್ ವಿದ್ಯೆಯಲ್ಲ. ಕೇವಲ ಕನ್ನಡನಾಡಿನಲ್ಲಿದ್ದು, ಕನ್ನಡನಾಡಿನ ಏಕೀಕರಣದ ಬಗ್ಗೆ ಕಳಕಳಿ, ವಿಶ್ವಾಸವಿದ್ದ ಸಾಧಾರಣ ಯೋಗ್ಯತೆ. ಈ ಯೋಗ್ಯತೆಯುಳ್ಳ ಜನ ಕನ್ನಡನಾಡಿನಲ್ಲಿ ೨೫,೦೦೦ ಮಾತ್ರವಲ್ಲ, ೭೫,೦೦೦ ಬೇಕಾದರೂ ಇದೆ. ಅದನ್ನೆಲ್ಲ ಒಮ್ಮುಖವಾಗಿ ಹರಿಯುವಂತೆ ಮಾಡುವುದು ಅ. ಕ. ಏಕೀಕರಣ

* ಇವರು ಏಕೀಕರಣ ಸಂಘದ ಕಾರ್ಯಕಾರಿ ಮಂಡಲಿಯಲ್ಲಿರುವರು. —ಸಂ

ಸಂಘದ ಕಾರ್ಯಕರ್ತರ ಒಂದೇ ಒಂದು ಗುರಿ. ಆ ಗುರಿಯ ಸಿದ್ಧಿಗಾಗಿ ಮೇಲಿನ ಅರ್ಹತೆಯುಳ್ಳ ಪ್ರತಿಯೊಬ್ಬರನ್ನೂ ಸದಸ್ಯರನ್ನಾಗಿ ಮಾಡಬೇಕು.

ಏಕೀಕರಣ ಸಂಘ ವಿರುದ್ಧ ಸಂಸ್ಥೆಯಲ್ಲ!

'ಅ. ಕ. ಏಕೀಕರಣ ಸಂಘ ಮುಂದಿಯ ಸಂಸ್ಥೆಯಾಗಬೇಕು!' ಎಂದಾಕ್ಷಣ, ಈಗಿರುವ ಮುಂದಿಯ ಸಂಸ್ಥೆ-ಕಾಂಗ್ರೆಸ್ಸಿಗೆ ವಿರುದ್ಧ ಮೆಂದಾಗಲಿ, ಪ್ರತಿಸ್ಪರ್ಧಿಯೆಂದಾಗಲಿ ಭಾವಿಸುವ ಅಸಮಂಜಸ ತರ್ಕ ನಮ್ಮಲ್ಲಿ ಯಾರಿಗೂ ಇಲ್ಲವೆಂದೇ ನಂಬುಗೆ. ಕಾಂಗ್ರೆಸು ಸಂಸ್ಥೆಯ ಜೊತೆಗೆ ತನ್ನದೂ ಮಿತಿಸಹಾಯವನ್ನೊದಗಿಸುವ ಪೋಷಕಸಂಸ್ಥೆ ಪೂರಕಸಂಸ್ಥೆ. ಅಖಿಲಭಾರತ ಕಿಸಾನ್ ಸಭೆಯಿದ್ದಂತೆ. ಕಿಸಾನ್‌ಸಭೆ ಕಾಂಗ್ರೆಸ್ಸಿಗೆ ವಿರೋಧಿಯೆಂದು ಯಾರೂ ಹೇಳುವುದಿಲ್ಲ.

ಹಾಗೆಯೇ ಕನ್ನಡಸಾಹಿತ್ಯ ಪರಿಷತ್ತಿನ ವಿರೋಧಿಯೆಂದು ಯಾರಾದರೂ ಏಕೀಕರಣ ಸಂಘದ ವೈರಿಗಳು ಅಪಪ್ರಚಾರ ನಡೆಯಿಸಬಹುದು; ಎಂದಿಗೂ ಹಾಗಲ್ಲ ಎಂಬುದನ್ನು ಬಲ್ಲವರು ಯೋಚಿಸಿ ತಿಳಿಯಬೇಕು. ಮತಿಯ ಒರೆಗಲ್ಲಿಗೆ ತಿಕ್ಕಿ ನೋಡಬೇಕು. ಸತ್ಯಾಸತ್ಯದ ತುಲನೆ ಮಾಡಬೇಕು. ಹಾಗೆ ಮಾಡಿದರೆ, ಅ. ಕ. ಏಕೀಕರಣ ಸಂಸ್ಥೆಯು ಮತ್ತಾವ ಸಂಸ್ಥೆಗೂ ವಿರುದ್ಧವಲ್ಲ.... ಕನ್ನಡ ನಾಡು-ನುಡಿಯ ಏಳ್ಗೆಯ ಬಗ್ಗೆ, ಕಾಂಗ್ರೆಸಿನಿಂದಲೂ ಪರಿಷತ್ತಿನಿಂದಲೂ ಇದುವರೆಗೆ ಆಗದಿದ್ದ ಕಾರ್ಯವನ್ನು ಕೈಕೊಂಡ ಸಂಸ್ಥೆ.... ಎಂಬುದು ತಿಳಿಯದಿರದು.

ಮುಂದಿನ ಕೆಲಸ

ಅ. ಕ. ಏಕೀಕರಣ ಸಂಘವು ಧನವನ್ನೂ ಜನವನ್ನೂ ಕೂಡಿಸುತ್ತದೆ. ಸದಸ್ಯರನ್ನು ಮಾಡುವುದು ಅಷ್ಟೊಂದು ಕಷ್ಟದ ಕೆಲಸವಲ್ಲ. ಆದರೆ ಸದಸ್ಯರ ಸದಸ್ಯತ್ವವು ಮರೆತು ಹೋಗದಂತೆ ನೋಡಿಕೊಳ್ಳುವುದು ಸಾಹಸದ ಕೆಲಸ. ನಾಲ್ಕಾಣೆ ಕೊಟ್ಟು, ಸದಸ್ಯರಾಗಿ, ಚಹ ಕುಡಿದು ಕಾಸು ಕೊಟ್ಟು ಮರೆತಂತೆ ಮರೆತುಹೋಗುವ ಸಂಭವ ಬಹಳ. ಬಹುಶಃ ಎಲ್ಲ ಸಂಸ್ಥೆಗಳಲ್ಲೂ ಎದ್ದು ಕಾಣುವ ಕುಂದು ಎಂದರೆ ಇದೊಂದು. ಈ ಕುಂದನ್ನು ಆದಷ್ಟು ಕಡಮೆ ಮಟ್ಟಕ್ಕಿಳಿಸಿಕೊಂಡಿರುವ ಸಂಸ್ಥೆ ಕಾಂಗ್ರೆಸು ಎನ್ನಬಹುದು. ಕಮ್ಯೂನಿಸ್ಟರೂ ಈ ದಿಕ್ಕಿನಲ್ಲಿ ಶೂರರು. ಸದಸ್ಯರನ್ನು ಮಾಡಿ ಸುಮ್ಮನೆ ಕೂಡುವ ದುರ್ಬುದ್ಧಿ ಅವರದಲ್ಲ. ಮುಂದಿಯೊಡನೆ ಒಡನಾಟ (Mass Contact) ಇಟ್ಟುಕೊಂಡೇ ಇರಬೇಕು. ಅವರು 'ಇಂಥಾ ಸಂಸ್ಥೆಯ ಸದಸ್ಯರು ನಾವು; ಅದರ ಧ್ಯೇಯವಿದು. ಧೋರಣೆಯಿದು. ಇಂಥಾ ಕೆಲಸ ಮಾಡಿದೆ, ಮಾಡುತ್ತಿದೆ; ಇನ್ನು ಮುಂದೆ ಇಷ್ಟು ಕೆಲಸ ಮಾಡಬೇಕು' ಎಂದು ಸದಾ ನೆನಪಿನಲ್ಲಿಟ್ಟುಕೊಂಡು ಮುಂದುವರಿಯುತ್ತಿರಬೇಕು. ಅದಕ್ಕಾಗಿ ಸಾಧನೆ ಮಾಡಬೇಕು. ಈ ಸಾಧನೆ ಸಾಧಿಸುವುದು ಮುಂದಿಯ ಒಡನಾಟದಿಂದ.

ಪ್ರಚಾರ ಕಾರ್ಯ.

ಸಂಘದ ಧ್ಯೇಯ, ಧೋರಣೆ, ಕಾರ್ಯಕ್ರಮಗಳನ್ನು ಪ್ರಚಾರ ಮಾಡುವುದು ಮುಂದಿನ ಒಂದು ಮುಖ್ಯವಾದ ಪ್ರಶ್ನೆ. ಅದಕ್ಕೊಂದು ವೃತ್ತಪತ್ರಿಕೆಯಾಗಬೇಕು. ಹಿಂದೆ ಮಾಡಿದ ಕೆಲಸವನ್ನೂ, ಮಾಡುತ್ತಿರುವ ಕೆಲಸವನ್ನೂ, ಮಾಡಬೇಕಾದ ಕೆಲಸವನ್ನೂ ಅ. ಕರ್ನಾಟಕದ ಮುಂದೆ ಇಟ್ಟು, ಸೂಕ್ತ ಸಲಹೆ, ಸಹಾಯಕ್ಕಾಗಿ ವೃತ್ತಪತ್ರಿಕೆಯು ಬೇಕೇಬೇಕು. ಅದನ್ನು ಸಂಘ ಬೇಗನೆ ಮಾಡುವುದರಲ್ಲೂ ಇದೆ.

ಏಕೀಕರಣಕ್ಕೆ ಸಂಬಂಧಪಟ್ಟ ಸಾಹಿತ್ಯಪ್ರಕಟನೆಯ ಕಾರ್ಯವನ್ನೂ ಸಂಘ ಕೈಕೊಳ್ಳಬೇಕು. ಸಂಘದ ಕಾರ್ಯಕರ್ತರು ಏಕೀಕರಣಕ್ಕೆ ಸಂಬಂಧಿಸಿದ ಪ್ರತಿಯೊಂದು ಸಮಸ್ಯೆಯನ್ನೂ ಆಮೂಲಾಗ್ರವಾಗಿ ಅಭ್ಯಸಿಸಲು ಸಹಾಯವಾಗುವಂತೆ, ಸಂಘ ಸಾಹಿತ್ಯವನ್ನೊದಗಿಸಬೇಕು. ಅಖಿಲಭಾರತದ ಹಿತದೃಷ್ಟಿಯಿಂದ ಏಕೀಕರಣವು ಎಷ್ಟು ಉಪಯುಕ್ತವಾದುದೆಂಬುದುದನ್ನು ಸಮರ್ಥಿಸಲು, ಸಾಕಷ್ಟು ಸರಕನ್ನು ತಲೆಯಲ್ಲಿ ತುಂಬಿಟ್ಟುಕೊಳ್ಳಬೇಕಾಗುವುದು. ಗಡಿನಾಡುಗಳ ರಾಜಕೀಯ ಇತಿಹಾಸ, ಆರ್ಥಿಕ ಮಟ್ಟ, ಸಾಮಾಜಿಕ ಆಚಾರಪದ್ಧತಿಗಳ ಸಮಗ್ರ ಜ್ಞಾನ ಅತ್ಯಾವಶ್ಯಕ. ಆಯಾ ನಾಡುಗಳ ಕವಿ-ಕಾವ್ಯಗಳ ಐತಿಹ್ಯದ ಅರಿವೂ ಪರಿಪೂರ್ಣವಾಗಿರಬೇಕು. ಸಂಘದ ಕಾರ್ಯಕರ್ತರಿಗೆ, ಗಡಿನಾಡಿನ ಜನಗಣತಿಯನ್ನು ಪ್ರತ್ಯೇಕವಾಗಿ ಅಭ್ಯಸಿಸಿ ನಿಷ್ಣಾತರಾದವರು ಬೇಕಾಗುತ್ತಾರೆ. ಗಡಿನಾಡಿಗೆ ಸಂಬಂಧಪಟ್ಟ ಅಂಕೆ-ಅಂಶಗಳನ್ನು ತುದಿನಾಲಿಗೆಯಲ್ಲಿಟ್ಟುಕೊಂಡು ಕೇಳಿದವರಿಗೆ ಮಾರುತ್ತರವನ್ನು ಕೊಡುವ ಅರ್ಹತೆ ಪಡೆಯಬೇಕು. ಅಂತಹ ಸರಕು ತಲೆಯಲ್ಲಿರದಿದ್ದರೆ ಮುಗ್ಗರಿಸಿ ಬೀಳಬೇಕಾಗುವುದು. ಕಾರ್ಯರಂಗಕ್ಕಿಳಿದಾಗ 'ಬಹುದುಗಿಹುದಿನ ರಾಜ್ಯ'ದಿಂದ ಹೊರಗಿರಬೇಕು. ವಾಸ್ತವ ಸ್ಥಿತಿಯ ಸಾಕ್ಷಿಯಿಂದ ನಮ್ಮ ಹೇಳಿಕೆಯನ್ನು ಸಿದ್ಧಾಂತ ಮಾಡಿ ತೋರಿಸುವ ಯೋಗ್ಯತೆ ಬೇಕು. ಸಾಹಸ ಬೇಕು. ಕೆಚ್ಚು ಬೇಕು.

ಇಷ್ಟೆಲ್ಲ ಅರ್ಹತೆ ಪಡೆಯಲು ಸಂಘವು ಕೇಂದ್ರಕಚೇರಿಯಲ್ಲಿ ಅಭ್ಯಾಸಕೂಟಗಳನ್ನೇರ್ಪಡಿಸಿ ಮಾತಿನ ಮಲ್ಲರ ಪಡೆಯನ್ನು ತಂಬಿಯತ್ತು ಮಾಡಬೇಕು. ಸಂಘದ ಶಾಖೋಪಶಾಖೆಗಳಿಗೆ ಇವರ ಸಂದೇಶ ಮುಟ್ಟುವಂತೆ ಮಾಡಬೇಕು. ಈ ದೃಷ್ಟಿಯಿಂದ 'ಏಕೀಕರಣ ಪ್ರಚಾರಪುಸ್ತಕಮಾಲೆ'ಯೊಂದನ್ನು ತೆಗೆದು ಸಂಘದ ಕೆಲಸಗಾರರಿಗೂ ಸದಸ್ಯರಿಗೂ ಏಕೀಕರಣ ಸಮಸ್ಯೆಯನ್ನು ಅರಿವುಮಾಡಿ ಕೊಡಬೇಕು.

ಕೆಲಸಗಾರರ ಪಡೆ.

ಇಷ್ಟು ಕೆಲಸ ಮಾಡಬೇಕಾದರೆ ಅಖಿಲಕರ್ನಾಟಕದ ಸಹಕಾರ, ಸಹಾನುಭೂತಿ ಮತ್ತು ಸಹಾಯ ಎಷ್ಟು ಅಗತ್ಯ ಎಂದು ಪ್ರತ್ಯೇಕವಾಗಿ ಹೇಳುವುದು ಮೂಕುತನವಾದೀತು. ಆದಕಾರಣ ಅಖಿಲ ಕರ್ನಾಟಕದ ಸಹಾಯಬೇಕು ಎಂಬುದರಲ್ಲಿ ಸಂಶಯವಿಲ್ಲ.

ಆದರೆ ಒಂದೆರಡು ಅಡಚಣೆ: ಏಕೀಕರಣದ ಕಾರ್ಯ ಹೆಚ್ಚಾಗಿ ನಡೆಯಬೇಕಾದುದು ಗಡಿನಾಡುಗಳಲ್ಲಿ; ಗಡಿನಾಡಿನ ಕೆಲಸಕ್ಕೆ ಒಳನಾಡಿನ ಗೊಡವೆ ಏನು ?–ಎಂದು ಯಾರಾದರೂ ಪ್ರಶ್ನಿಸಬಹುದು. ಇದಕ್ಕೆ ಒಂದೇ ಉತ್ತರ: ಕರ್ನಾಟಕದ ಹೃದಯದಂತಹ ಭಾಗಗಳ ಸಹಾಯಬೇಕು; ಗಡಿನಾಡಿನಲ್ಲಿ ಕೆಲಸವಾಗಬೇಕು. ಗಡಿನಾಡು ಎಂದರೆ ಸ್ವಲ್ಪ ಹಿಂದುಳಿದ ನಾಡು ಎಂದು ಎಲ್ಲರೂ ಒಪ್ಪುತ್ತಾರೆ. ಹಿಂದುಳಿದ ನಾಡನ್ನು ಮುಂದುಮಾಡಲು ಮುಂದಾದ ನಾಡು, ಜನ-

೫೨ ವರ್ಷಗಳಿಂದ ಅನುಭವ ಪಟ್ಟ
ಕರ್ಕರ್ ಮತ್ತು ಕಂಪನಿ
ಇವರ
ಜ್ವರದ ಗುಳಿಗೆಗಳು
ಬಾಟ್ಲಿಗೆ ೧-೮-೦
ಎಲ್ಲ ಪ್ರಕಾರದ ಜ್ವರಗಳಿಗೂ ದಿವ್ಯೌಷಧ.
ವಿಳಾಸ:- ಗಣೇಶ ರಾಮಚಂದ್ರ ಕರ್ಕರ್ ಮತ್ತು ಕಂಪನಿ
ಗಿರಗಾಂವ, ಮುಂಬಯಿ

ಧನ ಸಹಾಯ ಮಾಡಬೇಕಾಗುವುದು. ಈ ದೃಷ್ಟಿಯಿಂದ ಕನ್ನಡ ನಾಡಿನ ಭೂಪಟದಲ್ಲಿ ಸೇರಿರುವ ಪ್ರತಿಯೊಂದು ಅಂಗುಲ ಭೂಭಾಗದ ಜನರಿಗೂ ಈ ಬಗ್ಗೆ 'ಕಾಳಜಿ' ಯಿದೆ. ಕಾಲು ನೋವಾದರೆ ತಲೆಯಲ್ಲಿರುವ ಮೆದುಳು ಯೋಚನೆಮಾಡಿ, ಕೈಗಳಿಂದ ತಕ್ಕ ಚಿಕಿತ್ಸೆ ಮಾಡಿಸಬೇಕು. ಒಂದು ನಾಡು ಎಂದರೆ ಸಜೀವ ಇಂದ್ರಿಯ.

ಮತ್ತೊಂದು ದೊಡ್ಡ ಅಡಚಣೆ: ನಮ್ಮ ನಾಡು ಜಾತೀಯ, ಕೋತಿಗಳ ನೆಲೆವೀಡು ಎಂದು ಪ್ರಸಿದ್ಧವಾಗಿದೆ! ಸಾವಿರಾರು ವರುಷದಿಂದ ಅನುಭವಿಸಿಯೂ ಕೂಡ ಈಗಲೂ ಜಾತಿ-ಜಾತಿಯೆಂದು ಕಿರುಲುವುದು ಅತ್ಯಂತ ಲಜ್ಜೆಪಡುವ ವಿಷಯ. ಆದರೂ ಅದೊಂದು ಕರಾಳ ಸತ್ಯ. ಕ್ರೂರಸತ್ಯ. ಅದನ್ನೆದುರಿಸಬೇಕು!

ನಮ್ಮ ಕುಲ ಬೇರೆಬೇರೆಯಾಗಿರಬಹುದು. ಆದರೆ ಕನ್ನಡನಾಡಿನ ಸಮಸ್ಯೆ ಬಂದಾಗ ನಮ್ಮದು 'ಕನ್ನಡಕುಲ' ಎಂಬುದನ್ನು ಮರೆಯದೆ, ಕೈಯಲ್ಲಿ ಕೈಕೊಟ್ಟು, ಹೆಗಲಿಗೆ ಹೆಗಲು ಜೋಡಿಸಿ, ದುರಾಕ್ರಮಣಕಾರರಿಗೆ ಸೀಗ್‌ಫ್ರಿಡ್ ಲೈನನ್ನು ಕಟ್ಟೋಣ! 'ಮ್ಯಾಜಿನಾ' ಕೋಟೆಯನ್ನು ನಿರ್ಮಿಸೋಣ! ಜಾತಿಕಲಹದಿಂದ ಜಾತಿಕೆಟ್ಟು ಹೋಗಿದ್ದೇವೆ! ಒಳಕಲಹದಿಂದ ಹೊರಗಿನವರಿಗೆ ಆಸ್ಪದ ಕೊಟ್ಟಿದ್ದೇವೆ! 'ಒಲವಾವುದು ಸತ್ಯಸುಖವುಳ್ಳವರಿಗೆ?' ಎಂದು ಬಾಯಲ್ಲಿ ಹೇಳಿ ಎದೆಯಲ್ಲಿ ವಿಷ ತುಂಬಿಕೊಂಡ 'ವಿಷಕಂಠ'ರನ್ನು ಕತ್ತು ಹಿಡಿದು ನೂಕಬೇಕು 'ಸಕಲ ಜೀವಾವಳಿಗೆ ಲೇಸನೇ ಬಯಸುವವರು ಅಜರಮ್ಯಾ' ಎಂದು ನಾಲಗೆಯಲ್ಲಿ ಬೊಗಳಿ ಹೃದಯದಲ್ಲಿ ಕತ್ತಿ ಮಸೆಯುವ ಖೂಳರ ಕುಲಕ್ಕೇ ಕಠಾರಿ ಎತ್ತಿ ಮುಂದುವರಿಯಬೇಕು! ಅಂತಹ ದುರಾತ್ಮರಿಂದ ಸಹಾಯವು ಸಿಕ್ಕದಿರುವುದೊಂದೇ ಅಲ್ಲ, ಅಪಾರ ಹಾನಿಯೂ ಉಂಟು! ಈ ದೃಷ್ಟಿಯಿಂದ 'ಜಾತಿಯ ಕೋತಿಗಳ' ತಂಡವು ಸಂಘದಲ್ಲಿ ಸೇರಿಕೊಂಡು ಹಾವಳಿ, ಕೀಟಲೆ, ಕಿಡಿಗೇಡಿತನ ಮಾಡದಂತೆ ಆಗತ್ಯವಾಗಿ ನೋಡಿಕೊಳ್ಳಬೇಕಾದುದು ಕರ್ತವ್ಯ.

ಇನ್ನೂ ಒಂದು ತೊಡಕು: ಈಗ ಕನ್ನಡ ನಾಡಿನಲ್ಲಿ ಸಾಹಿತ್ಯ ರಂಗದಲ್ಲೂ ಪಕ್ಷಗಳು ಏಳುತ್ತಿವೆ. ಸಾಂಪ್ರದಾಯಿಕ ಸಾಹಿತಿಗಳು, ಪ್ರಗತಿಶೀಲ ಸಾಹಿತಿಗಳು ಎಂದು ಎಲ್ಲೆಲ್ಲೂ ಆರ್ಭಟ ನಡೆದಿದೆ. ನಡೆಯಲಿ, ಒಬ್ಬರ ಹೇಳಿಕೆಗೆ, ಅಭಿಪ್ರಾಯಕ್ಕೆ ಇನ್ನೊಬ್ಬರು ಕಿವಿಗೊಡಬಾರದೆಂದಲ್ಲ. ನಮ್ಮ ವಿರುದ್ಧಾಭಿಪ್ರಾಯ ಉಳ್ಳವರು ನಮಗೆ ವಿರೋಧಿಗಳೇ ಆಗಬೇಕಾಗಿಲ್ಲ. ಒಬ್ಬರಿಗೊಬ್ಬರು ಬಾಕು ಹಿರಿದು ನಿಲ್ಲುವ ಅಗತ್ಯವಿಲ್ಲ. ಆದರೆ ಭಿನ್ನತೆಯಲ್ಲಿ ಐಕ್ಯತೆಯನ್ನು ಹುಡುಕಿಕೊಂಡು ಹೋಗಬೇಕಾದುದು ಸಭ್ಯರ ಲಕ್ಷಣ. 'ಅವನು ಹೇಳುವುದರಲ್ಲಿ ಒಂದಕ್ಷರವನ್ನೂ ಒಪ್ಪದಿರಬಹುದು; ಆದರೆ ಅವನು ಹೇಳುವ ಸ್ವಾತಂತ್ರ್ಯವನ್ನುಳಿಸಲು ನನ್ನ ಪ್ರಾಣ ಕೊಡಲೂ ಸಿದ್ಧ!' ಎಂಬ ಆ ಗ್ರೀಕ ತತ್ತ್ವಜ್ಞಾನಿಯ ಮಾತು ನಮ್ಮ ಹಿರಿಯರ ನೆನಪಿನಲ್ಲಿರಬಾರದೇಕೆ? ನಾವು ಯಾವ ಸಾಹಿತ್ಯ ಪಕ್ಷಪಾತಿಗಳಾದರೂ, ಕನ್ನಡ ಏಕೀಕರಣದ ಬಗ್ಗೆ ಒಮ್ಮತವಿದ್ದರೆ ಒಂದಾಗಿ ನಿಲ್ಲಬಾರದೇಕೆ?

ಮಹಾಭಾರತವನ್ನೆಲ್ಲ ಹೃದ್ಗತ ಮಾಡಿದ ಮಂದಿಗೆ ಇಷ್ಟು ವಿಚಾರ ಗೊತ್ತಿಲ್ಲದೆ ಇಲ್ಲ. ಆದರೂ ಹೇಳಬೇಕಾಗಿದೆ. ಈ ದೃಷ್ಟಿಯಿಂದ ನಮ್ಮ ರಾಜಕೀಯ ಪಕ್ಷ, ಸಂಗಡಗಳು ಬೇರೆಬೇರೆಯಾದರೂ, ಜಾತಿ ಮತಗಳು ಬೇರೆಬೇರೆಯಾದರೂ, ಸಾಹಿತ್ಯರಂಗ ಬೇರೆಯಾದರೂ ಏಕೀಕರಣದ ಮಟ್ಟಿಗೆ ಇಡೀ ಕರ್ನಾಟಕವು ಒಂದೇ ಎಂದು ಹಿರಿಯರು ಕಿರಿಯರು ಮುಂದೆ ಬರಬಾರದೇಕೆ?

ನಮ್ಮ ಗಾಯತ್ರಿ

ಇಷ್ಟೆಲ್ಲ ಕೆಲಸ ಮಾಡಲು ಆತ್ಮಪ್ರಶಂಸೆ, ಸ್ವಪ್ರತಿಷ್ಠೆ, ಕೀರ್ತಿ ಲಾಲಸೆಗಳಿಲ್ಲದ ನಿಸ್ಪೃಹ ಜೀವಿಗಳಾಗಬೇಕು. 'ಅಯ್ಯೋ! ನಾವಿಷ್ಟು ಕೆಲಸ ಮಾಡಿದರೂ ನಮ್ಮ ಯೋಗ್ಯತೆಯನ್ನು ಗಣನೆ ಮಾಡಲಿಲ್ಲವಲ್ಲ!' ಎಂದು ಕಣ್ಣೀರು ಕರೆಯುವ ಶೂರರು ಈ ರಂಗದಿಂದ ದೂರವಾಗಿ! 'ಎಷ್ಟು ಕೆಲಸ ಮಾಡಿದರೂ ನಮಗೆ ಮರ್ಯಾದೆ ಮಾಡಲಿಲ್ಲ' ಎಂದು ದೂರುವವರು ದೂರವೇ ನಿಂತಿರಿ! ಅಂತಹ ಕ್ಷುಪ್ರಜೀವಿಗಳಿಂದ ಪ್ರಪಂಚದಲ್ಲಿ ಏನೊಂದೂ ಕಾರ್ಯವಾಗುವ ಸಂಭವವಿಲ್ಲ. ಅಂತಹ ಕುತ್ಸಿತಬುದ್ಧಿಯ ಪಾಮರರು ನಾಡು-ನುಡಿಗಾಗಿ ದುಡಿಯುವ ಸಂಬಂಧವಿಲ್ಲ. ಆದಕಾರಣ ಹಾರ-ತುರಾಯಿಗಳಿಂದ ಅಲಂಕೃತರಾಗಿ ಮೆರೆವಣಿಗೆ ಮಾಡಿಸಿಕೊಳ್ಳಬೇಕೆಂದು ಬಾಯಿಬಿಡುವ ಕೀರ್ತಿರಸಿಹತ್ತಿದ ರಸಿಗಳು ನಮಗೆ ಬೇಡ. ಹಾರ-ತುರಾಯಿ ಹಿಡಿದು ಅಪ್ಪನಿಗೆ ಮನ್ನಣೆ ಮಾಡುವವರು ಯಾರೂ ಇಲ್ಲ. 'Grand receptions arrange' ಮಾಡುವವರಂತೂ ದರಿದ್ರಭಾರತದಲ್ಲಿ ಸಿಕ್ಕುವುದಿಲ್ಲ. ಆದಕಾರಣ ಏಕೀಕರಣಕ್ಕಾಗಿ ದುಡಿಯುವ ಇಚ್ಛೆಯುಳ್ಳವರು ಮೆತ್ತನೆಯ ಹಾಸುಗೆಯನ್ನು ಬಯಸದೆ, ಸವಿಯಾದ ಊಟ ಬಯಸದೆ, ಎದುರುಗೊಳ್ಳಲು ಬ್ಯಾಂಡು ಬಜಂತ್ರಿ ಆಶಿಸದೆ ಕೀರ್ತಿಗಾಗಿ ಹಾತೊರೆಯದೆ, ವೀರ ಸಂನ್ಯಾಸಿಗಳಂತೆ ಮುನ್ನುಗ್ಗಿ ಬರಲಿ. 'ಇರಲಿ ಹೊಸ ಹೆಣ್ಣು ಮದುವೆಯ ಶೃಂಗಾರ! ಬರಲಿ ಕಾರಾಗಾರ ಮೃತ್ಯುವೈತರಲಿ!' ಎನ್ನುವ ಭಕ್ತರು ಮುಂದೆ ಬರಲಿ.

'ಕೀರ್ತಿಶ್ರುಂಗನೆ ಎದುಗೊಲಿವುದು ಬೇಡ,
ಜಾತ್ಯಂಧರ ಸಹವಾಸವು ಬೇಡ;
ಕನ್ನಡ ನಾಡೊಂದಾಗುವುದೆಮ್ಮಯ
ಬಾಳಿನೊಳಿರುವುದು ಒಂದೇ ಧ್ಯೇಯ'

ಎಂಬುದೇ ನಮ್ಮ ಗಾಯತ್ರಿ.

ವಿರಾಮಕಾಲ*

(ಸಣ್ಣಕತೆ)

ಶ್ರೀ. ಎಸ್. ಸುಬ್ಬರಾಮಯ್ಯ ಬಿ. ಎ. (ಆನರ್ಸ್)
ಬೆಂಗಳೂರು

卐

ಹೀರಾಲಾಲ್ ಮತ್ತು ಮಾಣಿಕಚಂದ ಕಂಪೆನಿಯಲ್ಲಿ ನಾನು ೩೫ ವರ್ಷಗಳ ಕಾಲ ಪಾಲುಗಾರನಾಗಿದ್ದೆನು. ಅದರಲ್ಲಿಯೂ ಕೊನೆಯ ಹತ್ತು ವರ್ಷಗಳಂತೂ ಕಾರ್ಯನಿರ್ವಾಹಕನೆಲ್ಲಾ ನಾನೇ ಮುಖ್ಯ ಪಾಲುಗಾರ. ಕಂಪೆನಿಯ ಎಲ್ಲಾ ವ್ಯಾಪಾರ-ವ್ಯವಹಾರಗಳಲ್ಲಿಯೂ ನಾನೇ ಬಲಗೈಯಾಗಿದ್ದೆನು. ನನ್ನ ಗೋಚರಕ್ಕೆ ಬಾರದೆ ಯಾವ ಕಾಗದ-ಪತ್ರಗಳೂ ಹೋಗುವಂತಿರಲಿಲ್ಲ. ಹೆಚ್ಚೇನು, ಕಂಪೆನಿಗೆಲ್ಲಾ ನಾನೇ ಆಧಾರಸ್ತಂಭವಾಗಿದ್ದೆನು. ಆಡಳಿತದ ಸೂತ್ರಗಳು ನನ್ನ ಕೈಗೆ ಬಂದ ಮೇಲೆ, ಕಂಪೆನಿಯ ಆರ್ಥಿಕ ಸ್ಥಿತಿಯಲ್ಲಿ ಅಸಾಧಾರಣ ಬದಲಾವಣೆಯುಂಟಾಗಿದ್ದಿತು. ಇದರಿಂದ ಮೊದಲು ಕಂಪೆನಿಯ ವಿಷಯದಲ್ಲಿ ಪೂರ್ಣ ನಿರಾಶರಾಗಿದ್ದ ಹೀರಾಲಾಲ್ ಮತ್ತು ಮಾಣಿಕಚಂದರಿಬ್ಬರಿಗೂ ನನ್ನಲ್ಲಿ ಬಹಳ ವಿಶ್ವಾಸ-ಗೌರವಗಳುಂಟಾದುವು. ಆದುದರಿಂದಲೇ ಎಲ್ಲಾ ವ್ಯವಹಾರದಲ್ಲಿಯೂ ನಾನೇ ನಾನಾಗಿದ್ದುದು.

ಹೀಗೆಯೇ ಒಂಬತ್ತು ವರ್ಷಗಳ ಕಾಲ ಕಳೆಯಿತು. ಸುಖಮಯವಾಗಿದ್ದ ನನ್ನ ಜೀವನದಲ್ಲಿ ಕಷ್ಟಪರಂಪರೆಗಳು ದಾಳಿಮಾಡಲಾರಂಭಿಸಿದುವು. ಮೊದಲಿನಿಂದಲೂ ನನ್ನ ಪತ್ನಿಯ ದೇಹಸ್ಥಿತಿ ಬಹಳ ಸೂಕ್ಷ್ಮ; ಅವಳ ನಿಶ್ಶಕ್ತಿ ಹೆಚ್ಚುತ್ತಾ ಬಂದು, ಕಡೆಗೆ ಅದು ಕ್ಷಯಕ್ಕೆ ತಿರುಗಿತು. ಇದರಿಂದ ನಾನು ಕೆಲಸಕ್ಕೆ ಹೋಗುವುದೂ ಕಷ್ಟವಾಯಿತು. ಕಂಪೆನಿಗೆ ಆರು ತಿಂಗಳ ರಜೆಗೆ ಬರೆದುಕೊಂಡು ಹಗಲಿರುಳೂ ಅವಳ ಸೇವೆ ಮಾಡಿದೆನು. ವೈದ್ಯನಿಗೆ ಸಾವಿರಾರು ರೂಪಾಯಿಗಳನ್ನು ಸುರಿದೆನು. ಆದರೆ ಇವೊಂದೂ ಫಲಕಾರಿಯಾಗಲಿಲ್ಲ. ಕಡೆಗೆ ಒಂದು ದಿನ, ಎರಡು ತಿಂಗಳ ಹಸುಗೂಸನ್ನು ಹಿಂದೆ ಬಿಟ್ಟು ನನ್ನ ಹೆಂಡತಿ ತನ್ನ ಕಷ್ಟದಿಂದ ಮುಕ್ತಳಾದಳು. ನನ್ನ ಒಬ್ಬಳೇ ಮಗಳಾದ ೧೬ ವರ್ಷದ ಸರೋಜಳ ಮೇಲೆಯೇ ಆ ಮಗುವನ್ನು ಪೋಷಿಸುವ ಭಾರವೂ ಬಿದ್ದಿತು. ಆದರೆ ಕೆಲವು ದಿನಗಳಲ್ಲಿಯೇ ಮಗುವೂ ತಾಯಿಯನ್ನೇ ಅನುಸರಿಸಿತು.

ನಾನು ರಜೆ ಪಡೆದು ಆಗಲೇ ಆರು ತಿಂಗಳಾಯಿತು. ಈ ಅವಧಿಯಲ್ಲಿ ನನ್ನಲ್ಲಿ ಬಹಳ ಬದಲಾವಣೆಯುಂಟಾಗಿದೆ. ಪ್ರತಿಯೊಬ್ಬ ಮನುಷ್ಯನಿಗೂ ಜೀವನದಲ್ಲಿ ವಿಧವಿಧವಾದ ಕಷ್ಟಗಳು ಬರುತ್ತವೆ. ದೈವವು ಮಾನವನನ್ನು ಅನೇಕ ರೀತಿಯಲ್ಲಿ ಪರೀಕ್ಷಿಸುತ್ತದೆ. ಆದರೆ ಇವುಗಳಲ್ಲೆಲ್ಲಾ ಅತ್ಯುಗ್ರವಾದ ಪರೀಕ್ಷೆಯೆಂದರೆ ನಾವು ಪ್ರೀತಿಸುವ ವಸ್ತುವನ್ನು ನಮ್ಮಿಂದ ಕಸಿದುಕೊಳ್ಳುವುದು. ಎಂತಹ ಧೀರನಾದರೂ ಇದರ ಮುಂದೆ ಮಣಿಯಲೇಬೇಕು. ಪ್ರೇಮವು ವಯಸ್ಸಾದಂತೆಲ್ಲಾ ಪರಿಪಕ್ವ ಹೊಂದುತ್ತದೆ. ಇಪ್ಪತ್ತು ವರ್ಷಗಳ ಕಾಲ ನನ್ನ ಕಷ್ಟ-ಸುಖಗಳಲ್ಲಿ ಭಾಗಿಯಾಗಿ, ನನ್ನ ಹೃದಯಕ್ಕೆ ಪ್ರೇಮದ ಹಾಲನ್ನು ಎರೆದಿದ್ದ ನನ್ನ ಪ್ರೀತಿಯ ಮಡದಿಯನ್ನು ಕಳೆದುಕೊಂಡ ಮೇಲೆ, ನನ್ನ ಮೊದಲಿನ ದರ್ಪವೆಲ್ಲಾ ಮಾಯವಾಗಿ, ನನ್ನ ಪ್ರತಿಯೊಂದು ಕಾರ್ಯದಲ್ಲಿಯೂ ದೈನ್ಯವು ಮನೆಮಾಡಿತು. ಬದುಕಿನ ಜಂಭವೆಲ್ಲಾ, ಬರಿಯ ಒಂದು ನೆಲೆ ತೋರಲಾರದ ಬಿಸಿಲುಗುದುರೆಯೆಂದು ನನಗೆ ತೋರಿತು.

ಹೀಗೆಯೇ ಈ ಆರು ತಿಂಗಳಲ್ಲಿ ಕಂಪೆನಿಯಲ್ಲಿಯೂ ಬಹಳ ಬದಲಾವಣೆ ಆಗಿದ್ದಿತು. ನನ್ನ ಪಾಲಿನ ಕೆಲಸವನ್ನೆಲ್ಲಾ ಮಾಣಿಕ್ ಚಂದ್ ಮತ್ತು ಹಿರಾಲಾಲರು ತಮ್ಮಲ್ಲಿಯೇ ಹಂಚಿಕೊಂಡು ಎಲ್ಲವನ್ನೂ ತಾವೇ ಸ್ವತಃ ಮಾಡುತ್ತಿದ್ದರು. ನನಗೂ ಅಲ್ಲಿಯ ಕೆಲಸವು ಮೊದಲಿನಂತೆ ಸುಲಭವಾಗಿ ತೋರಲಿಲ್ಲ. ಹರಿದು ಹೋದ ಅನೇಕ ವಿಷಯಗಳೂ ತೊಂದರೆ ಕೊಡಲಾರಂಭಿಸಿದುವು. ಇದರಿಂದ ನಾನು ಎಷ್ಟೋ ಸಾರಿ ನನ್ನ ಕೈಕೆಳಗಿನವರ ಸಹಾಯವನ್ನು ಅಪೇಕ್ಷಿಸುವಂತಾಯಿತು. ಈಗ ಎಷ್ಟೋ ಕಾಗದ-ಪತ್ರಗಳು ನನಗೆ ತಿಳಿಯದಂತೆಯೆ ಹೊರಟುಹೋಗುತ್ತಿದ್ದುವು. ಬಂದವರೆಲ್ಲಾ ಮೊದಲಿನಂತೆ ನನ್ನನ್ನು ಹುಡುಕಿಕೊಂಡು ಬಾರದೆ, ನೇರವಾಗಿ ಹೀರಾಲಾಲ್ ಅಥವಾ ಮಾಣಿಕಚಂದರ ಬಳಿಗೇ ಹೋಗುತ್ತಿದ್ದರು. ಆದರೆ ಅಧಿಕಾರವನ್ನು ಸುಲಭವಾಗಿ ಬಿಟ್ಟುಕೊಡಲು ನನಗೆ ಇಷ್ಟವಿರಲಿಲ್ಲ. ಆದುದರಿಂದ ಬಂದವರನ್ನೆಲ್ಲಾ ನನ್ನ ಕೊಠಡಿಗೇ ಕಳುಹಿಸುವಂತೆ ಜವಾನನಿಗೆ ಅಪ್ಪಣೆ ಮಾಡಿದೆನು. ಆದರೆ ಇದರಿಂದ ನನಗೆ ಹೆಚ್ಚು ತೊಂದರೆಯೇ ಆಯಿತು. ಹೊರಗಿನವರು ಬಂದಾಗ, ಮೊದಲಿನಂತೆ ತಕ್ಷಣ ಸಮರ್ಪಕವಾದ ಉತ್ತರ ಕೊಡುವುದು ಈಗ ನನಗೆ ಸಾಧ್ಯವಿರಲಿಲ್ಲ. ಎಲ್ಲಾ ವ್ಯವಹಾರದಲ್ಲಿಯೂ ನನಗೆ ಇತರರ ಸಹಾಯ ಅವಶ್ಯಕವಾಗಿದ್ದಿತು. ಒಂದು ಸಲ ಹೀಗೆಯೇ ಯಾವುದೋ ಕೆಲಸದ ಮೇಲೆ ಬಂದಿದ್ದ ಒಬ್ಬರು ನನ್ನ ಜವಾಬಿಗಾಗಿ ಕಾದು ಬೇಸತ್ತು, ಕೊನೆಗೆ ನನ್ನ ಉತ್ತರದಿಂದ ತೃಪ್ತರಾಗದೆ ಮಾಣಿಕಚಂದನ ಬಳಿಗೆ ಹೋಗಿ, ಅಲ್ಲಿ ಎಲ್ಲವನ್ನೂ ತೀರ್ಮಾನ ಮಾಡಿಕೊಂಡರು. ಕೆಲವು ದಿನಗಳಲ್ಲಿಯೇ ನನಗೆ ಇಂತಹ ಅನೇಕ ಅನುಭವಗಳುಂಟಾದುವು.

ಇಷ್ಟೇ ಅಲ್ಲ, ನನಗೆ ಅವರಿಬ್ಬರೂ ಕೊಡುತ್ತಿದ್ದ ಸಲಹೆಗಳನ್ನೆಲ್ಲಾ ಮೊದಲು ನಾನು ನಿರಾಕರಿಸಿದರೂ, ಕಡೆಗೆ ನನ್ನ ತಪ್ಪನ್ನೊಪ್ಪಿಕೊಂಡು ಅವರಂತೆಯೇ ನಡೆಯಬೇಕಾಗುತ್ತಿತ್ತು. ಒಂದು ಸಲ ನಮ್ಮ ಅಭಿಪ್ರಾಯಗಳ ಘರ್ಷಣವುಂಟಾಯಿತು. ನಮಗೆ ಮೊದಲಿನಿಂದ ಸಾಮಾನುಗಳನ್ನೊದಗಿಸುತ್ತಿದ್ದ ಒಂದು ಕಂಪೆನಿಯ ನಡೆವಳಿಕೆ ಇತ್ತೀಚೆಗೆ ಸಮರ್ಪಕವಾಗಿರಲಿಲ್ಲವೆಂದು ಅವರು ಎಷ್ಟು ಹೇಳಿದರೂ ಕೇಳದೆ, ನನ್ನ ಹಟವನ್ನೇ ಸಾಧಿಸಿ, ಕಡೆಗೂ ನನ್ನ ತೀರ್ಪನ್ನೇ ಒಪ್ಪುವಂತೆ ಅವರನ್ನು ಒತ್ತಾಯಪಡಿಸಿದೆನು. ನನ್ನ ಈ ಅಚಾತುರ್ಯದಿಂದ ನಮ್ಮ ಕಂಪೆನಿಗೆ ಹತ್ತು ಸಾವಿರ ರೂಪಾಯಿಗಳ ನಷ್ಟವಾಯಿತು. ಅವರೀರ್ವರೂ ಈ ನಷ್ಟಕ್ಕೆ ನಾನು ಹೊಣೆಯೆಂದು ಹೇಳಲಿಲ್ಲ. ನನ್ನ ಜವಾಬ್ದಾರಿಯನ್ನು ನನಗೆ ತೋರಿಸಿಕೊಡಲೂ ಪ್ರಯತ್ನಿಸಲಿಲ್ಲ. ಆದರೂ ಇದಕ್ಕೆ ನಾನೇ ಕಾರಣನೆಂದು ನನಗೆ ಸಂಪೂರ್ಣವಾಗಿ ಮನದಟ್ಟಾಯಿತು. ಇನ್ನು ಮುಂದೆ ಈ ಕೆಲಸಕ್ಕೆ ನಾನು ಅಪ್ರಯೋಜಕನೆಂಬ ಭಾವನೆ ನನ್ನಲ್ಲಿ ಬೆಳೆದು ಬಂದು, ಕಡೆಗೆ ವಿರಾಮ ಪಡೆಯಬೇಕೆಂದು ತೀರ್ಮಾನಿಸಿದೆನು. ಇದರಂತೆ ನಾನು ರಾಜೀನಾಮೆ ಕೊಟ್ಟಿದ್ದೂ

* ಇಂಗ್ಲಿಷ್ ಕತೆಯೊಂದರ ಪ್ರೇರಣೆಯಿಂದ ಬರೆದುದು. ಲೇ.

ಆಯಿತು. ಅವರೂ ನನ್ನನ್ನು ಕೆಲಸದಲ್ಲೇ ಇರಬೇಕೆಂದು ಹೆಚ್ಚು ಒತ್ತಾಯ ಪಡಿಸದೆ ನನ್ನ ರಾಜೀನಾಮೆಯನ್ನು ಸ್ವೀಕರಿಸಿದರು. ೧೯೩೮ನೆಯ ಇಸವಿ ಅಕ್ಟೋಬರ್ ೩೧ನೆಯ ತಾರೀಖಿಗೆ ಸರಿಯಾಗಿ, ನಾನು ಕಂಪೆನಿಯ ಕೆಲಸದಿಂದ ಮುಕ್ತನಾದೆನು; ಪುನಃ ಎಂದೂ ಅಲ್ಲಿಗೆ ಕಾಲಿಡುವಂತಿರಲಿಲ್ಲ.

ಇದುವರೆಗಿನ ನನ್ನ ಜೀವನದಲ್ಲಿ ಎಲ್ಲವೂ ನನ್ನ ಇಷ್ಟದಂತೆಯೇ ನಡೆದಿದ್ದಿತು. ಚಿಕ್ಕವಯಸ್ಸಿನಲ್ಲಿಯೆ ಕಂಪೆನಿಗೆ ಸೇರಿದ್ದೆನು. ೨೫ ವರ್ಷಗಳ ಕಾಲ ಉತ್ತಮ ಅಧಿಕಾರದಲ್ಲಿದ್ದೆನು; ಮಾತ್ರವಲ್ಲ, ಬೇಕಾದಷ್ಟು ಹಣವನ್ನೂ ಉಳಿಸಿದ್ದೆನು. ೪೭ನೆಯ ವಯಸ್ಸಿನಲ್ಲಿ ವಿರಾಮವನ್ನು ಪಡೆದುದೂ ಆಯಿತು. ಇದುವರೆಗೂ ಒಂದು ನಿಮಿಷವೂ ಬಿಡುವಿಲ್ಲದೆ ದುಡಿದು ಬೇಸತ್ತಿದ್ದ ಜೀವನವು, ಇನ್ನು ಮುಂದಾದರೂ ಆರಾಮವಾಗಿರಬಹುದೆಂದೆ. ವಿರಾಮವನ್ನು ಪಡೆದ ಮೇಲೆ ಒಂದೆರಡು ವಾರಗಳು ನನ್ನ ಆನಂದಕ್ಕೆ ಪಾರವೇ ಇಲ್ಲ. ಆ ಮೇಲೆ ನನ್ನ ರೀತಿಯೇ ಬದಲಾಯಿತು. 'ನಾನು ನಿರುದ್ಯೋಗಿ' ಎಂಬ ಭಾವನೆ ನನ್ನನ್ನು ನಾಲ್ಕೂ ಕಡೆಗಳಿಂದ ಇರಿಯಲಾರಂಭವಾಯಿತು. ಈಗ ನನಗೆ ಉಳಿದುದೆಂದರೆ ಆಗಿನ ಅಧಿಕಾರದ ನೆನಪು ಮಾತ್ರ. ಅಂದಿನ ಜೀವನವನ್ನು ನೆನೆ-ನೆನೆದು ಸಂತೋಷ ಪಡುತ್ತಿದ್ದೆ. ಆಗ ಎಲ್ಲಾ ಕೆಲಸವೂ ಅವಸರವಾಗಿಯೇ ಸಾಗಬೇಕಾಗಿತ್ತು. ಒಂದು ಕಡೆ ಟೆಲಿಫೋನಿನ ಕರೆಗಳಿಗೆ ಉತ್ತರ ಕೊಡಬೇಕು, ನೋಡಲು ಬಂದವರೊಡನೆ ಸರಿಯಾಗಿ ಮಾತನಾಡಬೇಕು; ಇನ್ನೊಂದು ಕಡೆ ಅವಸರವಸರವಾಗಿ ಗುಮಾಸ್ತರಿಗೆ ಕೆಲಸದ ವಿಷಯದಲ್ಲಿ ಸಲಹೆಗಳನ್ನು ಕೊಡಬೇಕು. ಈಗಲೂ ಈ ಕೆಲಸಗಳೆಲ್ಲಾ ಅಲ್ಲಿ ನಡೆಯುತ್ತಲೇ ಇವೆ. ಆದರೆ ನಾನು ಮಾತ್ರ ಅಲ್ಲಿಲ್ಲ, ಅಷ್ಟೆ. ನೆರೆಹೊರೆಯವರೆಲ್ಲಾ ಈಗಲೂ, ಬೆಳಗ್ಗೆ ಎದ್ದ ಕೂಡಲೆ ಅವಸರವಸರವಾಗಿ ಕೆಲಸದ ಮೇಲೆ ಹೊರಟು ಹೋಗಿ ಪುನಃ ಸಂಜೆಗೆ ಹಿಂದಿರುಗುತ್ತಾರೆ. ಅವರನ್ನೆಲ್ಲಾ ನೋಡಿ ನನಗೆ ಸಹಿಸಲು ಅಸಾಧ್ಯವಾದ ವೇದನೆಯುಂಟಾಗುತ್ತಿತ್ತು. ನಾನೂ ಹಿಂದಿನ ಅವಸರದ ಊಟವನ್ನೇ ಪುನಃ ಬಯಸಲಾರಂಭಿಸಿದೆನು. ವಿರಾಮವಿಲ್ಲದೆಯೇ ಕೆಲಸ ಮಾಡುವುದರಲ್ಲಿ ಮನುಷ್ಯನಿಗೆ ಒಂದು ವಿಧವಾದ ಆನಂದವಿದೆ, ಸುಖವಿದೆ; ಆದರೆ ಅದೇ ಮನುಷ್ಯನಿಗೆ ವಿರಾಮಕಾಲದಲ್ಲಿ ಒಂದೊಂದು ನಿಮಿಷವೂ ಒಂದೊಂದು ಯುಗವಾಗಿ ಪರಿಣಮಿಸುತ್ತದೆ. ನನ್ನ ಪಾಡೂ ಹೀಗೆಯೆ ಆಯಿತು.

ಈಗ ನನ್ನನ್ನು ನೋಡಲು ಬರುವ ಜನರ ಜಾತಿಯೇ ಬೇರೆ. ಶ್ರೀಮಂತನೆಂದು ಅರಿತು ನನ್ನನ್ನು ಅನೇಕ ಸಂಘಗಳ ಕಾರ್ಯದರ್ಶಿಗಳು ಬಂದು ನೋಡುವರು. ಆದರೆ ಅವರ ಯಾವ ಮಾತಿನಲ್ಲಿಯೂ ಏನೂ ಹುರುಳಿಲ್ಲ. ಅವರಿಗೆ ಬೇಕಾದುದು ಮುಖ್ಯವಾಗಿ ನನ್ನ ಹಣ. ಇವರಲ್ಲದೆ ಅನೇಕ ಕನ್ಯಾಪಿತೃಗಳು, ನನ್ನ ವಿವಾಹದ ವಿಷಯದಲ್ಲಿ ನನಗಿಂತ ಹೆಚ್ಚು ಉತ್ಸಾಹದಿಂದ ಮಾತನಾಡುತ್ತಿದ್ದರು. ನನ್ನ ವಯಸ್ಸನ್ನೂ ಲಕ್ಷ್ಯಮಾಡದೆ, ನನ್ನ ಹಣಕ್ಕೋಸ್ಕರ ತಮ್ಮ ಎಳೆಯ ಮಕ್ಕಳನ್ನು ನನಗೆ ಧಾರೆಯೆರೆಯಲು ಸಿದ್ಧರಾಗಿದ್ದರು ಇವರು. ಆದರೆ ನಾನು ಪುನಃ ಮದುವೆಯಾಗುವಷ್ಟು ಮೂರ್ಖನಾಗಿರಲಿಲ್ಲ. ಮೊದಲಿನ ಸ್ನೇಹಿತರೂ ಈಗ ನನ್ನೊಡನೆ ಹೆಚ್ಚಾಗಿ ಸೇರುತ್ತಾ ಇರಲಿಲ್ಲ. ಒಂದು ಸಾರಿ ನಾನು ಸರೋಜಳೊಡನೆ ಪೇಟೆಗೆ ಹೊರಟೆನು. ಅವಳನ್ನು ಒಂದು ಜವಳಿ-ಅಂಗಡಿಯಲ್ಲಿ ಬಿಟ್ಟು, ನಾನು ಬಹಳ ಕೆಲಸವಿದ್ದವನಂತೆ ನಟಿಸುತ್ತಾ ಪೇಟೆಯಲ್ಲಿ ಓಡಾಡುತ್ತಿದ್ದೆನು. ಇಷ್ಟರಲ್ಲಿ ನನ್ನ ಹಳೆಯ ಸ್ನೇಹಿತ ರಾಮಣ್ಣನು, ಅವಸರವಾಗಿ ಹೋಗುತ್ತಾ ಇದ್ದವನು ನನ್ನನ್ನು ನೋಡಿ, 'ಏನಯ್ಯಾ, ಬಹಳ ದಿನದಿಂದ ಕಾಣಲಿಲ್ಲ; ನೀನೇ ಬಹಳ ಅದೃಷ್ಟಶಾಲಿ ಬಿಡು! ನಿನ್ನ ಹಾಗಿರಲು ನಾನು ಪುಣ್ಯಮಾಡಿಲ್ಲ. ಹೊತ್ತಾಯಿತು, ಹೋಗಬೇಕು! ಇನ್ನೊಂದಾದರೂ ನೋಡೋಣ' ಎಂದು ಒಂದೇ ಉಸಿರಿನಲ್ಲಿ ಹೇಳಿ ಒತ್ತರದಿಂದ ಸಾಗಿಬಿಟ್ಟನು. ಇದೇ ಮನುಷ್ಯನು ನಾನು ಕೆಲಸದಲ್ಲಿದ್ದಾಗ ಎಂತಹ ತಲೆ ಹೋಗುವ ಕಾರ್ಯವನ್ನಾದರೂ ಬಿಟ್ಟು, ನನ್ನ ಮುಂದೆ ಎಷ್ಟು ವೇಳೆ ಬೇಕಾದರೂ ನಿಂತಿರುತ್ತಿದ್ದನು. ಆದರೆ ಈಗ?

ಹಿಂದೆ ಹಗಲೆಲ್ಲಾ ದುಡಿದು ಬಂದು ರಾತ್ರಿ ಸುಖವಾಗಿ ನಿದ್ರೆ ಮಾಡುತ್ತಿದ್ದೆನು. ಬೆಳಗಿನ ಜಾವ ಏಳುವ ವೇಳೆಗೆ ಮನಸ್ಸು ಉತ್ಸಾಹದಿಂದ ತುಂಬಿರುತ್ತಿದ್ದಿತು. ಒಂದು ಇಡೀ ದಿನದ ಕೆಲಸ ನನಗಾಗಿ ಕಾದಿರುತ್ತಿತ್ತು. ನನ್ನ ಕಾಗದಗಳಲ್ಲೇನಿರುವುದೋ, ಯಾವ ಯಾವ ಕೆಲಸ ಹೇಗೆ ಆಗುವುದೋ ಎಂದು ಮನಸ್ಸಿನಲ್ಲಿ ಆತಂಕ ತುಂಬಿರುತ್ತಿದ್ದಿತು. ಆದರೆ ಈಗ ಹಾಸಿಗೆಯಿಂದ ಎದ್ದ ಮೇಲೆ, ನೀರಸವಾದ ಹದಿನೈದು ಗಂಟೆಗಳ ಕಾಲವನ್ನು ಕಳೆದು ಬೇರೆ ಯಾವುದನ್ನೂ ನಾನು ನಿರೀಕ್ಷಿಸುವಂತಿಲ್ಲ. ನನ್ನ ಈ ಸ್ಥಿತಿ ನೋಡಿ ಸರೋಜಳು, ಯಾವುದಾದರೂ ಕ್ಲಬ್ಬಿಗೆ ಸೇರಬೇಕೆಂದು ಸೂಚಿಸಿದಳು. ಆದರೆ ಅಲ್ಲಿಯ ಜನರ ಮನೋಭಾವವು ನನಗೆ ಹೊಂದದ್ದರಿಂದ ನಾನು ಸೇರಲಿಲ್ಲ. ಕಡೆಗೆ ಕಾಲಕಳೆಯಲು ಬೇರೆ ಯಾವ ಮಾರ್ಗವೂ ಇಲ್ಲದೆ, ನಮ್ಮ ಮನೆಯ ಉದ್ಯಾನವನದ ಕಡೆಗೆ ತಿರುಗಿದೆನು. ಮೊದಲಿನಿಂದಲೂ ನನಗೆ ಹೂವಿನ ಗಿಡಗಳೆಂದರೆ ಬಹಳ ಆಸಕ್ತಿ. ತೋಟಗಾರಿಕೆಯ ಮೇಲಿನ ಅನೇಕ ಪುಸ್ತಕಗಳನ್ನು ಕೊಂಡುಕೊಂಡೆನು. ಅವುಗಳಲ್ಲಿ ಹೇಳಿದ್ದಂತೆ ಅನೇಕ ಹೊಸ ಗಿಡಗಳನ್ನು ಹಾಕಿದೆನು. ಆದರೆ ಎಲ್ಲಾ ಗಿಡಗಳ ವಿಷಯವೂ, ಪುಸ್ತಕಗಳಲ್ಲಿದ್ದುದಕ್ಕಿಂತ ನನ್ನ ತೋಟಗಾರನಿಗೇ ಚೆನ್ನಾಗಿ ತಿಳಿದಿದ್ದಿತು. ಆದುದರಿಂದ ಕಡೆಗೆ ಎಲ್ಲವನ್ನೂ ಅವನ ಸಲಹೆಯಂತೆಯೇ ಮಾಡಬೇಕಾಗುತ್ತಿತ್ತು. ಕೆಲವು ದಿನಗಳಲ್ಲಿಯೆ ಇದರಲ್ಲಿಯೂ ಬೇಸರು ಬಂದು, ಗಿಡಗಳ ಮೇಲ್ವಿಚಾರಣೆಯನ್ನು ಪುನಃ ತೋಟಗಾರನಿಗೇ ಬಿಟ್ಟುಕೊಟ್ಟೆನು.

ಸ್ವಲ್ಪ ಕಾಲ ವಾಸಸ್ಥಳವನ್ನು ಬದಲಾಯಿಸಬೇಕೆಂದು ಮನಸ್ಸು ಮಾಡಿ, ಬೊಂಬಾಯಿಗೆ ಪ್ರಯಾಣ ಮಾಡಿದೆವು. ತಿಂಗಳಿಗೆ ೧೦೦ ರೂ. ಬಾಡಿಗೆಗೆ ವಸತಿಗೃಹವನ್ನು ತೆಗೆದುಕೊಂಡೆವು. ಮುಂಬಯಿಯನ್ನೆಲ್ಲಾ ಒಂದು ಮೂಲೆಯಿಂದ ಇನ್ನೊಂದು ಮೂಲೆಯವರೆಗೂ ಮೋಟಾರಿನಲ್ಲಿ ಸುತ್ತಿದೆವು. ಆದರೆ ನನಗೆ ಅಜೀರ್ಣ ರೋಗ ಆರಂಭವಾದುದರಿಂದ, ವೈದ್ಯನು ನನಗೆ ಹೆಚ್ಚು ವ್ಯಾಯಾಮ ತೆಗೆದುಕೊಳ್ಳುವಂತೆ ಹೇಳಿದನು. ಆದರೆ ಅಭ್ಯಾಸದ ಅಭಾವದಿಂದ ಹೆಚ್ಚು ದೂರ ನಡೆಯುವುದು ಕೂಡ ಕಷ್ಟವಾಗುತ್ತಿತ್ತು. ಎಷ್ಟೋ ಸಲ ಮುಂಬಯಿಯ ಪಾರ್ಕಿನಲ್ಲಿ ನಿಂತು ಕಾರ್ಖಾನೆಗಳಿಂದ ಕಪ್ಪು ಹೊಗೆ ದಟ್ಟವಾಗಿ ಹೋಗುತ್ತಾ ಇರುವುದನ್ನು ನೋಡಿ 'ಆ ಕಪ್ಪು ಕೋಟೆಯ ಒಳಗಿನ ಅತ್ಯಧಮ ಕೂಲಿಕಾರರಲ್ಲಿ ನಾನೂ ಒಬ್ಬನಾಗಿರಬಾರದಾಗಿತ್ತೆ?' ಎಂದು ನನ್ನ ಜೀವವು ಮಿಡಿದಿದೆ. ನಾವು ಅಲ್ಲಿಗೆ ಬಂದ

ಒಂದು ತಿಂಗಳಲ್ಲಿ ಮುಂಬಯಿಯಲ್ಲಿ ನೋಡಬೇಕಾದುದು ಹೊಸದೇನೂ ಉಳಿಯಲಿಲ್ಲ. ಪುನಃ ಹಿಂದಿರುಗಿದೆವು.

ಈ ವೇಳೆಗೆ ನನ್ನ ಸರೋಜಳಿಗೂ ವಯಸ್ಸಾಗುತ್ತಾ ಬಂದಿತು. ನನಗೆ ಬೇರೆ ಯಾರೂ ದಿಕ್ಕಿಲ್ಲದಿದ್ದರೂ, ಅವಳಿಗೆ ಮದುವೆ ಮಾಡಿ ಕಳುಹಿಸಿ ಬಿಡಬೇಕಾದ ಸ್ಥಿತಿ ಬಂದಿತು. ನನ್ನ ಹಣದ ಸಲುವಾಗಿ ಅವಳ ಕೈ ಹಿಡಿಯಲು ಎಷ್ಟೋ ಜನ ಶ್ರೀಮಂತ ಪುತ್ರರು ಹಾತೊರೆಯುತ್ತಿದ್ದರು. ಅವಳಿಗೆ ಮದುವೆ ಮಾಡಿ, ಅನಂತರ ಕೆಲವು ಕಾಲ ಹಳ್ಳಿಯಲ್ಲಿರಬೇಕೆಂದು ಯೋಚಿಸಿದ್ದೆನು. ಆದರೆ ಹೆಂಡತಿಯ ನೆನಪು ಕ್ರಮೇಣ ಹೆಚ್ಚಾಗುತ್ತಾ ಬಂದಿತು. ಮನಸ್ಸು ಬಹಳ ವಿಷಮ ಸ್ಥಿತಿಯನ್ನು ಮುಟ್ಟಿತು. ಮದುವೆಗೆ ಇನ್ನೆರಡು ದಿನಗಳು ಮಾತ್ರ ಉಳಿದುವು. ಆದರೆ ನನ್ನ ಮನಸ್ಸು ಬದಲಾಯಿಸಿ, ಮಗಳಿಗೆ ಇನ್ನೂ ಒಂದು ವರ್ಷ ಮದುವೆ ಮಾಡುವುದಿಲ್ಲವೆಂದು ಹೇಳಿಬಿಟ್ಟೆನು. ಇಷ್ಟೇ ಅಲ್ಲ. ನನ್ನ ಹಳ್ಳಿಯ ಪ್ರಯಾಣವನ್ನೂ ನಿಲ್ಲಿಸಿದೆನು. ಹೀಗೆ ಯಾವ ವಿಷಯದಲ್ಲಿಯೂ ಒಂದು ನಿರ್ಧಾರವಿಲ್ಲದೆ ಮನಸ್ಸು ದುರ್ಬಲವಾಗಿ ಹೊಯ್ದಾಡತೊಡಗಿತು. ಇದು ವಾರ್ಧಕ್ಯದ ಪ್ರಥಮ ಕುರುಹೇನೋ? ಇದರ ಪರಿಣಾಮವಾಗಿ ನನ್ನಲ್ಲಿ ದುರಭ್ಯಾಸಗಳು ಆರಂಭವಾದುವು. ಕುದುರೆಯ ಜೂಜಿನಲ್ಲಿ ನನ್ನ ಆಸ್ತಿಯ ಬಹುಭಾಗವನ್ನು ಕಳೆದೆನು. ಬೆಣಚುಕಲ್ಲಿನ ಮೇಲೆ ಹಣ ಹಾಕಿ, ಅದರ ಮುಕ್ಕಾಲು ಭಾಗವನ್ನೆಲ್ಲಾ ಕಳೆದುಕೊಂಡೆನು. ನನ್ನ ಹಣವಿದ್ದ ಒಂದು ಪ್ರಸಿದ್ಧ ಬ್ಯಾಂಕೂ ಈ ವೇಳೆಗೇ ದಿವಾಳಿಯಾಯಿತು. ಇವೆಲ್ಲದರ ಪರಿಣಾಮವಾಗಿ ನಾನೂ ಬಡತನಕ್ಕೆ ಈಡಾಗುವ ಸ್ಥಿತಿ ಬಂತು. ಸೇವಕರನ್ನೆಲ್ಲಾ ವಜಾ ಮಾಡಿ, ಮನೆಯಲ್ಲಿದ್ದ ಉತ್ತಮವಾದ ಮರದ ಸಾಮಾನುಗಳನ್ನೆಲ್ಲಾ ಮಾರಿ, ನಾವು ಆಗ ವಾಸಿಸುತ್ತಿದ್ದ ದೊಡ್ಡ ಬಂಗಲೆಯನ್ನು ಬಾಡಿಗೆಗೆ ಕೊಟ್ಟು, ದೂರದಲ್ಲಿ ಒಂದು ಸಣ್ಣ ಮನೆಯನ್ನು ಬಾಡಿಗೆಗೆ ತೆಗೆದುಕೊಂಡೆನು.

ಇಷ್ಟಾದರೂ ನನ್ನ ಆದಾಯ ನಮಗೆ ಸಾಕಾಗುತ್ತಿರಲಿಲ್ಲ. ಆದುದರಿಂದ ಬೇರೆ ಕಡೆ ಎಲ್ಲಾದರೂ ಕೆಲಸ ಹುಡುಕಬೇಕಾಯಿತು. ನಾನು ಕಂಪೆನಿಯಲ್ಲಿ ಕೆಲಸದಲ್ಲಿದ್ದಾಗ, ನನಗೆ ಸಾಮಾನ್ಯವಾಗಿ ಇತರ ಎಲ್ಲಾ ಕಂಪೆನಿಗಳವರೂ ಮತ್ತು ಮುಖ್ಯ ಶ್ರೀಮಂತರೂ ಪರಿಚಯದವರಾಗಿದ್ದರು. ನನ್ನಂತಹ ಅನುಭವಶಾಲಿಯನ್ನು ಅವರಲ್ಲಿ ಯಾರಾದರೂ ನೇಮಿಸಿಕೊಳ್ಳಬಹುದೆಂದು ನಂಬಿ, ಅವರಲ್ಲಿ ಎಷ್ಟೋ ಜನರನ್ನು ಈಗ ಹೋಗಿ ನೋಡಿದೆನು. ಅವರೆಲ್ಲರೂ ನನ್ನ ಸ್ಥಿತಿಯನ್ನು ಕಂಡು ಮರುಗುತ್ತಿದ್ದರು; ಆದರೆ ಯಾವ ಕೆಲಸವೂ ಖಾಲಿ ಇಲ್ಲದ್ದರಿಂದ, ನನ್ನನ್ನು ಸೇರಿಸಿಕೊಳ್ಳಲಾಗಲಿಲ್ಲವಲ್ಲಾ—ಎಂದು ಎಲ್ಲರೂ ತಮ್ಮ ವ್ಯಸನವನ್ನು ಸೂಚಿಸುತ್ತಿದ್ದರು. ಕಡೆಗೆ ನಮ್ಮ ಕಂಪೆನಿಯೊಡನೆ ಬಹಳ ಮಟ್ಟಿಗೆ ವ್ಯಾಪಾರ ನಡೆಯಿಸುತ್ತಿದ್ದ ದೇವದಾಸ್ ಮತ್ತು ರಾಮದಾಸ್ ರವರ ಬಳಿಗೆ ಹೋದೆ. ಮೊದಲಾಗಿದ್ದರೆ, ಸ್ವಲ್ಪವೂ ಹಿಂದು ಮುಂದು ನೋಡದೆ ‘private’ ಎಂದು ಹಾಕಿದ್ದ ಅವರ ಕೊಠಡಿಗೆ ಯಾವ ತಡೆಯೂ ಇಲ್ಲದೆ ನುಗ್ಗುತ್ತಿದ್ದೆ. ಆದರೆ ಈಗ ಮೊದಲು ಗುಮಾಸ್ತರ ಕೊಠಡಿಗೆ ಹೋಗಿ, ಅಲ್ಲಿದ್ದವನೊಬ್ಬನಿಗೆ ನಮಸ್ಕಾರ ಮಾಡಿ ‘ದೇವದಾಸ್ ಅಥವಾ ರಾಮದಾಸ್ ಬಿಡುವಾಗಿದ್ದಾರೆಯೇ?’ ಎಂದು ಕೇಳಿದೆನು. ಯಾರೂ ನನ್ನನ್ನು ಕುಳಿತುಕೊಳ್ಳುವಂತೆ ಕೂಡ ಹೇಳಲಿಲ್ಲ. ಇದೇ ಗುಮಾಸ್ತರು, ಹಿಂದೆ ನಾನು ಬಂದಾಗಲೆಲ್ಲಾ ತಕ್ಷಣ ಎದ್ದು ನಿಂತುಕೊಳ್ಳುತ್ತಿದ್ದರು. ಆದರೇನಂತೆ, ನನ್ನ ಪ್ರಶ್ನೆಗೆ ಜವಾಬಾದರೂ ಬಂದಿತು:—ಇನ್ನೆರಡು ಗಂಟೆಗಳ ಕಾಲವಾದ ಮೇಲೆ, ಬೇಕಾದರೆ ಬಂದು ನೋಡಬಹುದೆಂದು.

ಎರಡು ಗಂಟೆಗಳ ಕಾಲವಾದ ಮೇಲೆ, ಪುನಃ ಬಂದು ಒಳಕ್ಕೆ ಸಮಾಚಾರ ಕಳುಹಿಸಿದೆನು. ಹತ್ತು ನಿಮಿಷಗಳು ಹೊರಗೇ ನಿಂತಿದ್ದ ಮೇಲೆ, ಅವರ ಕೊಠಡಿಯಿಂದ ಹೋಟಲು ಮಾಣಿಯು ಖಾಲಿ ತಟ್ಟೆಗಳೊಡನೆ ಹೊರಕ್ಕೆ ಬಂದನು. ಒಡನೆಯೆ ದೇವದಾಸನ ಬಳಿಗೆ ನನ್ನನ್ನು ಬಿಟ್ಟರು. ಆಗ ಅವನು ವರ್ತಮಾನ ಪತ್ರಿಕೆಯನ್ನು ಓದುವಂತೆ ನಟಿಸುತ್ತಿದ್ದನು. ಅವನ ಮುಂದೆ ಮದ್ಯದ ಪಾತ್ರೆ ಹಾಗೆಯೇ ಇದ್ದಿತು. ನಾನು ಅವನನ್ನು ಸಾಲ ಕೇಳಲು ಬಂದಿರುವೆನೆಂದು ಭಾವಿಸಿ ಮಾತನಾಡಲಾರಂಭಿಸಿದನು. ‘ಏನು, ಇಷ್ಟು ಹೊತ್ತಿನಲ್ಲಿ ಬಂದು ಬಿಟ್ಟಿರಲ್ಲಾ! ಇದು ಬಹಳ ಅನ್ಯಾಯ! ಮನುಷ್ಯರಿಗೆ ವಿರಾಮಕಾಲವಾರಂಭವಾದೊಡನೆಯೆ ದುಂದುಗಾರಿಕೆಗೆ ಬಿದ್ದು ಹಣ ಕಳೆದುಕೊಳ್ಳುತ್ತಾರೆ. ಇದು ಬರೀ ನಿಮ್ಮ ಮಾತಲ್ಲ; ಎಲ್ಲರೂ ಹೀಗೆಯೇ! ಹೋಗಲಿ, ನಮ್ಮಿಂದ ನಿಮಗೇನಾಗಬೇಕು? ಈಗ ನಮಗೂ ಬಹಳ ತೊಂದರೆಯ ಕಾಲ!’ ಎಂದು ಒಂದೇ ಉಸಿರಿನಲ್ಲಿ ಒದರಿಬಿಟ್ಟನು. ಆದರೆ ನಾನು ಸಾಲ ಕೇಳಲು ಬಂದಿಲ್ಲವೆಂದು ತಿಳಿದ ಮೇಲೆ ಅವನ ಧ್ವನಿ ಬದಲಾಯಿತು: ‘ನಿಮ್ಮ ವಿಷಯವನ್ನು ಕೇಳಿ ನನಗೆ ಬಹಳ ವ್ಯಸನವಾಯಿತು. ಆದರೆ ಕ್ಷಮಿಸಿ, ಅದು ಬಹಳ ಅವಿವೇಕದ ಕೆಲಸ!’ ಎಂದು ತನ್ನ ಮಾತನ್ನು ಮುಂದುವರಿಸಿದನು. ನನ್ನ ಮೊದಲಿನ ಮರ್ಯಾದೆಯನ್ನೆಲ್ಲಾ ಹೃದಯದ ಒಂದು ಮೂಲೆಯಲ್ಲಿ ಗುಪ್ತವಾಗಿ ಅಡಗಿಸಿಕೊಳ್ಳಬೇಕಾಯಿತು. ಬಹಳ ಪ್ರಯಾಸದಿಂದ ದೈನ್ಯದ ಧ್ವನಿಯಲ್ಲಿ ಹೇಳಿದೆ: ‘ನನ್ನ ಆಸ್ತಿ ಪೂರ್ತಿಯಾಗಿ ಹೋಗಿಲ್ಲ; ಆದರೆ ಉಳಿದಿರುವುದು ನನ್ನ ಜೀವನಕ್ಕೆ ಸಾಲದು. ನಿಮ್ಮಲ್ಲಿ ಯಾವುದಾದರೂ ಕೆಲಸ ಸಿಗಬಹುದೆಂದು ಬಂದೆ. ನನ್ನ ೩೫ ವರ್ಷಗಳ ಅನುಭವ ನಿಮಗೂ ಉಪಯೋಗವಾಗಬಹುದು!’ ನಾನೂ ಹಿಂದೆ ಎಷ್ಟೋಸಾರಿ ನೂರಾರು ರೂಪಾಯಿಗಳನ್ನು ಇವನ ಜೇಬಿಗೆ ತುಂಬಿದ್ದೆ; ಆದರೂ ಅದನ್ನೆಲ್ಲಾ ಈಗ ಜ್ಞಾಪಿಸಲಿಲ್ಲ. ತಕ್ಷಣ ಅವನ ನಿರ್ದಾಕ್ಷಿಣ್ಯ ಜವಾಬು ಬಂದಿತು: ‘ಅದಕ್ಕೇನು, ಬಹಳ ಸಂತೋಷದಿಂದ ಕೊಡುತ್ತಿದ್ದೆ; ಆದರೆ ನಿಮಗೆ ಸರಿಯಾದ ಕೆಲಸ ಯಾವುದೂ ಖಾಲಿ ಇಲ್ಲ; ಮುಚ್ಚುಮರೆಯೇಕೆ? ನಿಜ ಹೇಳುವುದಾದರೆ ನಿಮಗೆ ಬಹಳ ವಯಸ್ಸಾಗಿ ಹೋಗಿದೆ. ದಿನಕ್ಕೆ ೩ ಆಣೆಗೆ ಕೆಲಸ ಮಾಡುವ ಕೂಲಿಯೊಬ್ಬನಿಂದ ನಮಗೆ ಇದಕ್ಕಿಂತ ಹೆಚ್ಚು ಉಪಯೋಗವಾಗುತ್ತದೆ!’ ಆದರೆ ಇಂತಹ ಅಪಮಾನವಾದರೂ ನಾನು ಸುಮ್ಮನೆ ಹೊರಟುಹೋಗುವಂತಿರಲಿಲ್ಲ. ಕಡೆಯ ಪ್ರಯತ್ನ ಮಾಡಿಬಿಡಬೇಕೆಂದು ಯೋಚಿಸಿ ಹೇಳಿದೆನು: ‘ನನ್ನ ಅನುಭವ ಮತ್ತು ತಿಳಿವಳಿಕೆ ಇವು....’

ನನ್ನ ಮಾತನ್ನು ಪೂರ್ತಿ ಕೇಳುವಷ್ಟು ತಾಳ್ಮೆ ಅವನಿಗಿರಲಿಲ್ಲ. ಗಡುಸಾಗಿ ಉತ್ತರ ಕೊಟ್ಟನು: ‘ಯಾರ ಅನುಭವವೂ ನಮಗೆ ಆವಶ್ಯಕವಿಲ್ಲ. ಎಲ್ಲಾ ಕಾರ್ಯಗಳಿಗೂ ನಮ್ಮಿಬ್ಬರ ಅನುಭವವೇ ಸಾಕು. ಕೆಲಸಗಾರರು ನಾವು ಹೇಳಿದಂತೆ ಮಾತ್ರ ಕೇಳುತ್ತಾರೆ. ಅದೂ ಅಲ್ಲದೆ ನಿಮ್ಮ ಮಾತಿಗೂ ಈಗ ಹೊರಗೆ ಹೆಚ್ಚಿನ ಬೆಲೆಯೇನೂ ಇಲ್ಲ!’

ಇಷ್ಟರಲ್ಲಿಯೇ ಕೊಟಡಿಯ ಬಾಗಿಲು ತೆರೆಯಿತು. ರಾಮದಾಸನು ಒಳಕ್ಕೆ ಬಂದವನೇ ನನ್ನನ್ನು ನೋಡಿ, 'ಇದೇನು, ಇಷ್ಟು ಅಪರೂಪ' ಎಂದು ಹೇಳಿ ದೇವದಾಸನ ಕಡೆ ತಿರುಗಿ 'ಆ ಆರ್ಡರಿನ ವಿಷಯ ಮುಂದೆ ನಾವು ಏನು ಮಾಡೋಣ?' ಎಂದು ಹೇಳುತ್ತಾ ಹೊರಟುಹೋದನು. ಅವರಲ್ಲಿ ಒಬ್ಬರೂ ಪುನಃ ಈ ಕಡೆಗೆ ತಿರುಗಲಿಲ್ಲ. ಕಡೆಗೆ ನಾನೇ ಅವರಿಗೆ ನಮಸ್ಕಾರ ಹೇಳಿ ಅಲ್ಲಿಂದ ಹೊರಕ್ಕೆ ಹೊರಟೆ.

ಈ ಹೊತ್ತಿನಲ್ಲಿ ಪೇಟೆಯ ರಸ್ತೆಯಲ್ಲಿ ನಡೆಯುವವರಾರೂ ನನಗೆ ಪರಿಚಿತರಲ್ಲ. ಬೆಳಗ್ಗೆ ಮತ್ತು ಸಾಯಂಕಾಲ ಇಲ್ಲಿ ಓಡಾಡುವವರು ಮಾತ್ರ ನನಗೆ ತಿಳಿದವರು. ನಡುಹಗಲಿನಲ್ಲಿ ಇಲ್ಲೆಲ್ಲಾ ಅಲೆದಾಡುವವರು, ಬೀದಿಯ ಭಿಕಾರಿಗಳು—ರೀತಿ ನೀತಿಗಳನ್ನು ಮೀರಿದವರು—ಎಂದು ಇದುವರೆಗೂ ನನ್ನ ಭಾವನೆಯಿತ್ತು. ಅಂತೂ ಈಗ ನಾನು ಅವರಲ್ಲೊಬ್ಬನಾದೆ. ನನ್ನ ಮನಸ್ಸಿನ ಸ್ಥಿತಿಯು ನನ್ನನ್ನು ದಾರಿಯಲ್ಲೆಲ್ಲೂ ನಿಲ್ಲಗೊಡಲಿಲ್ಲ. ಬಿಸಿಲನ್ನೂ ಲಕ್ಷ್ಯ ಮಾಡದೆ, ಒಂದೇ ಸಮನಾಗಿ ವೇಗವಾಗಿ ನಡೆದು ಬಂದುದರಿಂದ, ಮನೆ ಸೇರುವ ವೇಳೆಗೆ ತುಂಬಾ ದಣಿವಾಗಿತ್ತು. ಊಟದ ಶಾಸ್ತ್ರ ಮಾಡಿ ನೇರವಾಗಿ ಹಾಸಿಗೆಯ ಮೇಲೆ ಹೋಗಿ ಬಿದ್ದುಕೊಂಡೆ.

ಆದರೆ ಮರುದಿನ ಟಪಾಲಿನಲ್ಲಿ ದೇವದಾಸ್–ರಾಮದಾಸ್ ಕಂಪೆನಿಯಿಂದ ನನಗೆ ಕಾಗದ ಬಂದಿತು. ಅವರ ಕಂಪೆನಿಯಲ್ಲಿ ನನ್ನನ್ನು ತಿಂಗಳಿಗೆ ೪೦ ರೂ. ಸಂಬಳದ ಮೇಲೆ ನೇಮಿಸಿಕೊಂಡಿದ್ದರು. ಇದೇ ಹಣಕ್ಕೆ ಅವರಿಗೆ ಇನ್ನೂ ಹೆಚ್ಚು ಉಪಯೋಗಕರವಾದವರು ಸಿಕ್ಕುತ್ತಿದ್ದರಂತೆ; ಆದರೂ ನನ್ನ ಹಿಂದಿನ ಋಣಕ್ಕಾಗಿ ನನ್ನನ್ನೇ ಕೆಲಸಕ್ಕೆ ತೆಗೆದುಕೊಂಡಿದ್ದರಂತೆ. ಇದರ ನಿಜಾಂಶವು ಕೆಲವು ಕಾಲದ ಮೇಲೆ ನನಗೆ ತಿಳಿಯಿತು. ನನ್ನಂತಹವನನ್ನು ನೇಮಿಸಿಕೊಂಡರೆ, ತಮ್ಮ ಕಂಪೆನಿಯ ಹೆಸರು ಎಲ್ಲೆಲ್ಲಿಯೂ ಪ್ರಚಾರಕ್ಕೆ ಬರುವುದೆಂದು ರಾಮದಾಸನು ದೇವದಾಸನಿಗೆ ತಿಳಿಯಹೇಳಿದ್ದನಂತೆ. ರಾಮದಾಸನಿಗೂ ಕೆಲಸದ ವಿಷಯದಲ್ಲಿ ಬೇಸರವಾರಂಭವಾಗಿದ್ದುದರಿಂದ, ಅವರಿಗೆ ಕೆಲಸದ ಗುಟ್ಟನ್ನೆಲ್ಲಾ ತಿಳಿದ ನನ್ನಂತಹವನ ಆವಶ್ಯಕತೆ ಇದ್ದಿತು. ಇದೂ ಅಲ್ಲದೆ ಅವರೊಡನೆ ವ್ಯಾಪಾರ ಮಾಡುವ ಎಲ್ಲಾ ಶ್ರೀಮಂತರೂ ನನ್ನ ಪರಿಚಯಸ್ಥರಾದ್ದರಿಂದ, ಅವರ ಮನೆಗಳಿಗೆಲ್ಲಾ ನನಗೆ ಸುಲಭವಾಗಿ ಪ್ರವೇಶ ಸಿಕ್ಕುತ್ತಿತ್ತು. ಆದರೆ ಇದು ಇತರರಿಗೆ ಯಾರಿಗೂ ಸಾಧ್ಯವಾಗುತ್ತಿರಲಿಲ್ಲ. ಇವೆಲ್ಲ ಕಾರಣಗಳೂ ಸೇರಿ ಅಂತೂ ನನಗೆ ಅವರ ಕಂಪೆನಿಯಲ್ಲಿ ಸ್ಥಳ ಸಿಕ್ಕಿತು.

ಆದರೆ ಕೆಲಸದ ವೇಳೆ ನನಗೆ ಬಹಳ ಅನಾನುಕೂಲವಾಗಿತ್ತು; ಬೆಳಗಿನ ೧೦ ಘಂಟೆಯಿಂದ ಸಂಜೆಯ ೬ ಘಂಟೆಯವರೆಗೆ. ಇದನ್ನು ಸ್ವಲ್ಪವೂ ಮೀರುವಂತಿರಲಿಲ್ಲ. ಇನ್ನು ಮುಂದೆ ಮಧ್ಯಾಹ್ನದ ಊಟ ನನ್ನ ಮನೆಯಲ್ಲಿ ಮಾಡುವಂತಿಲ್ಲ. ಮನೆಯಿಂದ ತೆಗೆದುಕೊಂಡು ಹೋಗಿ ಅಲ್ಲಿಯೇ ಮಾಡಬೇಕು. ನನಗಿಂತ ಕೀಳಾಗಿದ್ದ ಗುಮಾಸ್ತರೊಡನೆ ಓಡಾಡಬೇಕು. ನನ್ನ ಸರಿಸಮಾನದವರ ಮುಂದೆ ವಿಧೇಯ ಸೇವಕನಂತೆ ದೈನ್ಯದಿಂದ ನಿಲ್ಲಬೇಕು. ಆದರೂ ಇದಾವುವನ್ನೂ ನಾನು ಲಕ್ಷ್ಯ ಮಾಡುವುದಿಲ್ಲ; ಇನ್ನು ಮುಂದೆ ನಾನು ನಿರುದ್ಯೋಗಿಯಲ್ಲ, ಅಷ್ಟೇ ಸಾಕು! ಈ ಭಾವನೆ ಬಂದು ಅನೇಕ ತಿಂಗಳುಗಳಿಂದ ನನ್ನಿಂದ ದೂರವಾಗಿದ್ದ ಆನಂದವು ಪುನಃ ನನ್ನ ಮನಸ್ಸಿನಲ್ಲಿ ಮೂಡಿತು.

ನನಗೆ ಕಂಪೆನಿಯಿಂದ ಕೆಲಸದ ಅಪ್ಪಣೆ ಚೀಟಿ ಬಂದುದು ಗುರುವಾರ ಬೆಳಗು. ನಾನು ಕೆಲಸಕ್ಕೆ ಹೋಗಬೇಕಾಗಿದ್ದುದು ಸೋಮವಾರದಿಂದ. ಮಧ್ಯೆ ಇನ್ನೂ ಮೂರು ದಿನಗಳನ್ನು ಕೆಲಸವಿಲ್ಲದೆಯೆ ಕಳೆಯಬೇಕು. ಈ ದಿನಗಳನ್ನು ರಜಾದಿನಗಳೆಂದು ಭಾವಿಸಲು ಎಷ್ಟೋ ಪ್ರಯತ್ನಪಟ್ಟೆ. ಆದರೂ ಮನಸ್ಸಿನ ಉದ್ವೇಗ ಮಾತ್ರ ಕಡಿಮೆಯಾಗಲಿಲ್ಲ. ಹಿಂದೆ ಕೆಲಸದಲ್ಲಿದ್ದಾಗಲೂ, ಯಾವಾಗಲೂ ನಾನು ಒಟ್ಟಿಗೆ ಮೂರು ದಿನಗಳ ರಜಾ ತೆಗೆದುಕೊಳ್ಳುತ್ತಿರಲಿಲ್ಲ. ಸೋಮವಾರವನ್ನೇ ಎದುರು ನೋಡುತ್ತಾ ಬಹಳ ಕಷ್ಟದಿಂದ ಕಾಲ ಕಳೆದೆ. ಕಡೆಗೊಮ್ಮೆ ಆ ಸೋಮವಾರವೂ ಬಂದಿತು. ೮ ಘಂಟೆಗೇ ಬೆಳಗಿನ ತಿಂಡಿಯನ್ನು ಮುಗಿಸಿ, ೯ ಘಂಟೆಗೆ ಮನೆಯಿಂದ ಹೊರಟೆ. ಮನೆಯ ಹೊಸಿಲನ್ನು ದಾಟ ಮೊದಲಿನಂತೆಯೆ ನಾನು ಪುನಃ ಒಬ್ಬ ಮನುಷ್ಯನಾದೆನೆಂದು ಹೊರಟಾಗಿನ ನನ್ನ ಆನಂದವನ್ನು ಹೇಳತೀರದು. ನನ್ನಂತೆಯೇ ಇನ್ನೂ ಎಷ್ಟೋ ಜನರು ಮನೆಯಿಂದ ಹೊರಬಿದ್ದರು. ರಸ್ತೆಯಲ್ಲಿ ಜನಸಂದಣಿ ದೊಡ್ಡ ಮೆರೆವಣಿಗೆಯಂತೆಯೇ ಹೊರಟಿತ್ತು. ಆ ಜನರ ಗುಂಪಿನಲ್ಲಿ ನಾನೂ ಒಬ್ಬ. ಪ್ರಪಂಚದ ಕಾರ್ಯನಿರ್ವಹಣದಲ್ಲಿ ನನ್ನ ಭಾಗವೂ ಸ್ವಲ್ಪ ಇದೆ. ನನಗೇನೋ ಐವತ್ಮೂರು ವರುಷಗಳು, ನಿಜ! ಆದರೇನು? ಎಷ್ಟೋ ಜನರು ತಮಗೆ ೫೦ ವರ್ಷವಾದೊಡನೆಯೆ ಹೊಸ ಹುರುಪನ್ನೂ ಉತ್ಸಾಹವನ್ನೂ ತೋರಿಸುವುದಿಲ್ಲವೇ?

ಮನಸ್ಸಿನ ಈ ಉದ್ವೇಗವು ಕೆಲವು ದಿನಗಳಲ್ಲಿಯೇ ಇಳಿಮುಖವಾಯಿತು. ಕಂಪೆನಿಯವರು ನನ್ನನ್ನು ಕೇಳದಿದ್ದರೂ, ನಾನು ಎಷ್ಟೋ ಸಲ ಮೊದಲಿನಂತೆಯೇ ಈಗಲೂ ಸಲಹೆ ಕೊಡಲಾರಂಭಿಸಿದೆನು. ಇಂತಹ ಸಂದರ್ಭಗಳಲ್ಲೆಲ್ಲಾ ನನ್ನನ್ನು ಗದರಿಸಿ ಬಾಯಿ ಮುಚ್ಚಿಸುವುದರಲ್ಲಿ ದೇವದಾಸನಿಗೆ ಬಹಳ ಸಂತೋಷವಿದ್ದಂತೆ ತೋರುತ್ತದೆ. ಇದೂ ಅಲ್ಲದೆ ನಾನೂ ಇತರ ಗುಮಾಸ್ತರೊಡನೆಯೇ ಕುಳಿತುಕೊಳ್ಳಬೇಕಾಯಿತು. ಒಟ್ಟಿನಲ್ಲಿ ಇದೂ ನನಗೆ ಒಂದು ಪರೀಕ್ಷೆಯ ಕಾಲವಾಗಿಯೇ ಪರಿಣಮಿಸಿತು. ಹೆಚ್ಚು ಖರ್ಚಾದರೂ ನಾನು ಉತ್ತಮವಾದ ಆಹಾರವನ್ನೇ ತೆಗೆದುಕೊಳ್ಳುತ್ತಿದ್ದೆ. ಮೊದಲಿನಿಂದ ಬಂದ ಅಭ್ಯಾಸವನ್ನು ಈಗ ಬದಲಾಯಿಸುವುದು ಸಾಧ್ಯವಿರಲಿಲ್ಲ. ಇದೂ ಅಲ್ಲದೆ ವಯಸ್ಸಾದ ನನಗೆ ಒರಟು ಆಹಾರ ಒಗ್ಗುತ್ತಿರಲಿಲ್ಲ. ಇದರಿಂದ ನನ್ನ ಜೊತೆಯ ಗುಮಾಸ್ತರೆಲ್ಲ ನನ್ನನ್ನು ಹಾಸ್ಯ ಮಾಡುವಂತಾಯಿತು. ನಾನು ಉಪಯೋಗಿಸುತ್ತಿದ್ದ ಶುಭ್ರವಾದ ಕರವಸ್ತ್ರವನ್ನು ನೋಡಿ, ವ್ಯಂಗ್ಯವಾಗಿ ನಕ್ಕು, ಅದನ್ನು ಒಗೆಸಲು ತಿಂಗಳಿಗೆ ನನಗೆ ಎಷ್ಟು ರೂ. ಗಳ ಸಾಬೂನು ಖರ್ಚಾಗುತ್ತಿದೆಯೆಂದು ಕೇಳಿ ನಗುತ್ತಿದ್ದರು. ಅವರೆಲ್ಲರೂ ಬಹಳ ಕೊಳಕರು. ಕೈಯೆಲ್ಲಾ ಶಾಯಿಯಾಗಿದ್ದರೂ ತೊಳೆದುಕೊಳ್ಳದೆಯೆ ಊಟ ಮಾಡುತ್ತಿದ್ದರು. ಕಿವಿಯ ಹಿಂದೆ ಲೇಖನಿ ಇಡುತ್ತಿದ್ದುದರಿಂದ, ಅವರ ಕಿವಿಗಳಿಗೆ ಒಂದು ವಿಚಿತ್ರ ವರ್ಣವು ಬಂದಿದ್ದಿತು. ಆದರೆ ಇದಾವುದೂ ಅವರಿಗೆ ಲಕ್ಷ್ಯವೇ ಇರಲಿಲ್ಲ.

ನನ್ನ ಹಳೆಯ ವ್ಯಾಪಾರೀ ಸ್ನೇಹಿತರು ಬಂದಾಗಿನ ನನ್ನ ಸ್ಥಿತಿ

ಇನ್ನೂ ಕಷ್ಟಕರವಾಗಿತ್ತು. ಒಳಗಿನ ಕೊಠಡಿಯ ಬಾಗಿಲನ್ನು ತಟ್ಟಿ ಇಂತಹವರು ಬಂದಿರುವರೆಂದು ಹೇಳುವುದು ಮಾತ್ರ ನನ್ನ ಕೆಲಸ. ಏಕೆಂದರೆ ಅವರು ಬಂದ ಉದ್ದೇಶವು ನನಗೆ ತಿಳಿದಿರುತ್ತಿರಲಿಲ್ಲ. ಅವರಲ್ಲಿ ಕೆಲವರು ಮಾತ್ರ ನನ್ನನ್ನು ಮರ್ಯಾದೆಯಿಂದ ಕಾಣುತ್ತಿದ್ದರು; ಉಳಿದವರಿಗೆ ನನ್ನನ್ನು ಕಡೆಗಣಿಸಿ ಕೀಳಾಗಿ ಕಾಣುವುದರಲ್ಲೇ ದೊಡ್ಡ ಸಂತೋಷ. ಒಂದು ಸಲ ನಾನು ಕೆಲಸಕ್ಕೆ ಸೇರಿದ ಹೊಸದರಲ್ಲಿಯೇ, ಮೊದಲು ನನ್ನ ಕೈಕೆಳಗೆ ಕೆಲಸ ಮಾಡುತ್ತಿದ್ದ ಕೃಷ್ಣಮೂರ್ತಿ ಕೊಠಡಿಯೊಳಕ್ಕೆ ಬಂದು, ನಾನು ಒಬ್ಬನೇ ಇದ್ದುದನ್ನು ನೋಡಿ, ಆದರೂ ನನ್ನನ್ನು ಗಮನಿಸದವನಂತೆ, 'ದೇವದಾಸ್ ಒಳಗೆ ಇರುವರೋ?' ಎಂದು ಗಡಸು ದನಿಯಲ್ಲಿ ಕೇಳಿದನು. ಈಗ ಅವನೂ ಒಂದು ಹೊಸ ಕಂಪೆನಿಯನ್ನು ತೆರೆದಿದ್ದನಂತೆ. ಆದ್ದರಿಂದ ನಾನು ಅವನ ಪ್ರಶ್ನೆಗೆ ಸಾಧ್ಯವಾದಷ್ಟು ಗೌರವದಿಂದ, 'ಇಲ್ಲ ಸಾರ್, ಏನಾದರೂ ಹೇಳಬೇಕೆ?' ಎಂದು ಕೇಳಿದೆನು. ಆದರೆ ಆತ, ಇದಕ್ಕೆ ಪ್ರತಿಯಾಗಿ ಒಂದು ಮಾತನ್ನೂ ಆಡದೆ, ಬಾಗಿಲನ್ನು ಬಲವಾಗಿ ಎಳೆದುಕೊಂಡು ಹೊರಕ್ಕೆ ಹೊರಟು ಹೋದನು.

ಆದರೂ ನಾನೇನೂ ಉತ್ಸಾಹಹೀನನಾಗಲಿಲ್ಲ. ಸಂಜೆಯ ೫॥ ಗಂಟೆಗೆ ಕಾಗದ-ಪತ್ರಗಳನ್ನೆಲ್ಲಾ ರುಜು ಮಾಡಿಸುವ ಆತುರ. ಆಗ ನನಗೆ ಮನೆಯ ನೆನಪಾಗುತ್ತಿತ್ತು. ನನ್ನ ಮನೆಯ ಬೀದಿಯಲ್ಲಿ ಇಷ್ಟು ಹೊತ್ತಿನಲ್ಲಿ ಸ್ವಲ್ಪವೂ ಜೀವವೇ ಇರುವುದಿಲ್ಲ. ಅಲ್ಲಿ ಈಗ ಓಡಾಡುವವರೆಂದರೆ ನಾಲ್ಕಾರು ಮಂದಿ ಹಾಲು ಮಾರುವವರು ಮತ್ತು ರೊಟ್ಟಿ ಮಾರುವ ಹುಡುಗ. ಆದರೆ ನಾನು ಮಾತ್ರ ನಗರದ ಮಧ್ಯೆ ಕಾರ್ಯತತ್ಪರನಾಗಿರುವುದು ನನಗೆ ಹೇಳಲಾರದಷ್ಟು ಹಿಗ್ಗು. ೬ ಘಂಟೆಯಾದೊಡನೆಯೆ ಬಸ್ಸಿನಲ್ಲಿ ಸ್ಥಳಕ್ಕೋಸ್ಕರ ನೂಕುನುಗ್ಗಾಟ. ಅದರಲ್ಲಿಯೂ ಮಳೆ ಬರುತ್ತಾ ಇದ್ದರಂತೂ ಹೇಳಬೇಕಾಗಿಯೇ ಇಲ್ಲ. ದಾರಿಯಲ್ಲಿ ಎಷ್ಟೋ ಜನ ನನ್ನ ಸ್ನೇಹಿತರು ಸಿಕ್ಕಿ ಮಾತನಾಡಿಸುವರು; ಈಗೇನೂ ಅವರ ಮುಂದೆ ನಾನು ನಾಚಿಕೆಯಿಂದ ತಲೆ ತಗ್ಗಿಸಬೇಕಾಗಿಲ್ಲ. ಕಾಲ ಕಳೆಯಲು ಬೇರೆ ದಾರಿ ಕಾಣದೆ ಮನೆಯ ಹಿಂದಿನ ತೋಟದಲ್ಲಿ ಕಳೆ ಕೀಳಬೇಕಾಗಿಲ್ಲ; ಬೀಜಗಳನ್ನು ನೆಟ್ಟು ಅದು ಸಸಿಯಾಗಲಿಲ್ಲವಲ್ಲಾ ಎಂದು ಅಸಮಾಧಾನ ಪಡಬೇಕಾಗಿಲ್ಲ. ನಡು ಹಗಲಿನಲ್ಲಿ ಅಂಗಡಿಯ ವ್ಯಾಪಾರಕ್ಕೂ ಹೋಗುವ ಅವಶ್ಯಕತೆಯಿಲ್ಲ. ನನಗೇನೋ ಈಗ ಮನೆಗೆ ಬರುವ ವೇಳೆಗೆ ಬಹಳ ಆಯಾಸವಾಗಿರುತ್ತದೆ. ಆದರೆ ಕೆಲಸ ಮಾಡಿ ಸುಸ್ತಾಗುವುದೇ ಮನುಷ್ಯನಿಗೆ ಒಂದು ಹಿರಿಮೆಯಲ್ಲವೇ? ರಾತ್ರಿಯ ವೇಳೆ ಹಿಂದೆ ಎಂದೂ ಇಲ್ಲದಷ್ಟು ಗಾಢವಾಗಿ ನಿದ್ರೆಯೂ ಬರುತ್ತದೆ.

ಕೆಲಸಕ್ಕೆ ಸೇರಿದ ಒಂದು ವರ್ಷದಲ್ಲಿ ನನ್ನ ಸ್ಥಿತಿಯೂ ಸ್ವಲ್ಪ ಉತ್ತಮಗೊಂಡಿತು. ಇಷ್ಟರಲ್ಲಿಯೆ ತೃಪ್ತಿಪಡುವುದನ್ನು ಕಲಿತೆ. ಕಂಪೆನಿಯಲ್ಲಿಯೂ ನನಗೆ ಸಂಬಳ ಹೆಚ್ಚಾಗುವ ಸಂದರ್ಭ ಬಂದೊದಗಿತು. ದೇವದಾಸನಿಗೆ ಮದ್ಯದಲ್ಲಿ ಆಸಕ್ತಿ ಮಿತಿಮೀರಿ ಎಷ್ಟೋ ಸಾರಿ ಅವನು ಇತರರ ಎದುರಿಗೆ ಕಾಣಿಸಿಕೊಳ್ಳುವ ಸ್ಥಿತಿಯಲ್ಲಿ ಕೂಡ ಇರುತ್ತಿರಲಿಲ್ಲ. ಇದರಿಂದ ಕ್ರಮೇಣ ಅವನ ದೇಹಸ್ಥಿತಿಯೂ ಸಡಿಲವಾಗುತ್ತಾ ಬಂದಿತು. ಆದ್ದರಿಂದ ರಾಮದಾಸನಿಗೆ ಅವನ ವಿಷಯದಲ್ಲಿ ಅಸಮಾಧಾನಕ್ಕೆ ಅವಕಾಶವಾಯಿತು. ಇದೇ ವೇಳೆಗೆ ೩೦ ರೂ. ಸಂಬಳದ ಇಬ್ಬರು ಗುಮಾಸ್ತರೂ ಕೆಲಸ ಬಿಟ್ಟರು. ಆ ಸಂಜೆಯನ್ನು ನಾನು ಎಂದೂ ಮರೆಯುವಂತಿಲ್ಲ; ರಾಮದಾಸನು ನನ್ನನ್ನು ಕರೆದು, 'ಈಚೆಗೆ ದೇವದಾಸರ ದೇಹಸ್ಥಿತಿ ಸರಿಯಾಗಿಲ್ಲ, ನನಗೂ ಕೆಲಸ ಹೆಚ್ಚು; ನಾನು ಇಲ್ಲದಿರುವಾಗ ಯಾರಾದರೂ ಬಂದರೆ ನೀವೇ ಅವರಿಗೆ ಜವಾಬು ಹೇಳಿ ಕಳುಹಿಸಿ; ಆದರೆ ಅಕಾರಣವಾಗಿ ಹೆಚ್ಚು ಮಾತಾಡಿ ತೊಂದರೆಗೆ ಮಾತ್ರ ಸಿಕ್ಕಬೇಡಿ! ಇದಕ್ಕಾಗಿ ನಿಮಗೆ ಇನ್ನು ಮೇಲೆ ತಿಂಗಳಿಗೆ ಹತ್ತು ರೂಪಾಯಿ ಹೆಚ್ಚು ಮಾಡಿದ್ದೇವೆ' ಎಂದು ಹೇಳಿದನು.

ಅವನ ಈ ಮಾತುಗಳನ್ನು ಕೇಳಿ ಸಂತೋಷದಿಂದ ಕುಣಿದಾಡಿದೆನು. ಇದುವರೆಗೂ ನಾನು ಉಪಯೋಗಿಸುತ್ತಿದ್ದ ಹಳೆಯ ಕಪ್ಪು-ಕೋಟನ್ನು ಆ ರಾತ್ರಿಯೇ ಒಳಗೆ ಹಾಕಿ, ಮೊದಲು ಉಪಯೋಗಿಸುತ್ತಿದ್ದ ಟ್ವೀಡ್ ಕೋಟನ್ನು ಹೊರಕ್ಕೆ ತೆಗೆದು ಅದನ್ನೇ ಉಪಯೋಗಿಸಲಾರಂಭಿಸಿದೆನು. ಇನ್ನು ಮುಂದೆ ನಾನೂ ಮೊದಲಿನಂತೆಯೇ ಆಲೋಚನೆ ಮಾಡಿ, ನನ್ನ ಬುದ್ಧಿಶಕ್ತಿಯನ್ನು ಪ್ರಯೋಗಿಸಿ,— ಬಹಳ ಅಲ್ಪ ಪ್ರಮಾಣದಲ್ಲಿ ಎಂಬುದೇನೋ ನಿಜ—ಅದರೂ ಯಾವ ಕೆಲಸವನ್ನೂ ಮಾಡುವ ಮೊದಲು, ನಾನು ಸ್ವಂತವಾಗಿ ಆಲೋಚಿಸಿ ನನ್ನ ತೀರ್ಮಾನದಂತೆಯೇ ನಡೆಯಬೇಕು. ರಾಮದಾಸನೂ ಆಗಾಗ ಬಂದು ನನ್ನನ್ನು ವಿಚಾರಿಸಿ, 'ಸರಿ, ಹಾಗೆ ಮಾಡುವುದೇ ಸರಿ' ಎಂದು ತಲೆದೂಗಿ ಒಂದೊಂದು ಮಾತನಾಡಿ ಹೊರಟು ಹೋಗುವನು.

ನಾನು ಈ ಕೆಲಸಕ್ಕೆ ಸೇರಿಯೂ ಆಗಲೇ ಆರು ವರ್ಷಗಳಾದುವು. ಆದರೂ ನಾನು ಮಾತ್ರ ಒಂದು ದಿನವೂ ರಜಾ ತೆಗೆದುಕೊಂಡಿಲ್ಲ. ಏನಾದರೂ ಆಗಲಿ, ಕಡೆಯ ದಿನದವರೆಗೂ ಹೀಗೆಯೇ ಇರಬೇಕೆಂಬುದೇ ನನ್ನ ಹಾರಯಿಕೆ. ಆದರೆ ಕೆಲಸ ಹೆಚ್ಚಾದಾಗ ನನಗೆ ಕಣ್ಣುಗತ್ತಲೆ ಬಂದಂತಾಗುತ್ತದೆ. ಹೇಗಾದರೂ ಸರಿ, ಹೀಗೆಯೇ ಕಷ್ಟಪಟ್ಟು ಕೆಲಸ ಮಾಡುತ್ತಾ ಇದ್ದು ಮನೆಗೆ ಹೋಗಿ, ಎಂದಾದರೂ ಒಂದು ದಿನ ಕಣ್ಣು ಮುಚ್ಚಿದರೆ ಸಾಕು. ಆದರೆ ಮಾತ್ರ ಹಗಲಿರುಳೂ ಹಾಸಿಗೆಯ ಮೇಲೆ ಉರುಳಿಕೊಂಡು ನಿದ್ರೆ ಬಾರದೆ ಕಣ್ಣುಗಳನ್ನು ಪೂರ್ತಿಯಾಗಿ ತೆರೆದುಕೊಂಡು ಕೆಲಸದ ವಿಷಯದಲ್ಲಿ ಕಳವಳ ಪಡುತ್ತಾ ನಿಟ್ಟುಸಿರು ಬಿಡುತ್ತಾ, ಒಂದು ಮಗ್ಗುಲಿನಿಂದ ಇನ್ನೊಂದು ಮಗ್ಗುಲಿಗೆ ಹೊರಳುತ್ತಿರುವುದು ಮಾತ್ರ ಎಲ್ಲಕ್ಕಿಂತ ದುಸ್ಸಹವಾದುದು.

ಸೊಲ್ಲಾಪುರದಲ್ಲಿ ನಮ್ಮ ಏಜಂಟರು:

ಶ್ರೀ. ಎಸ್. ಎಚ್. ದೇಶಪಾಂಡೆ

ನ್ಯೂಜ್ ಏಜನ್ಸಿ

ಝುಂಬ್ರೇವಾಡಾ, ಸೌಥ್ ಕಸ್ಬಾ, ಮನೆ ನಂ. ೫೩೬.

ಕಣ್ಣು ಬಿತ್ತು

ಶ್ರೀ. ವಿ. ಜಿ. ಭಟ್ಟ, ಕಡತೋಕಾ

(ಚಿಕ್ಕ ದೊಡ್ಡ ಮಕ್ಕಳಿಗಾಗಿ)

ರಾಯರ ಮನೆಯಲಿ ಪಾಯಸ-ಪುರಿ-ಕಡ
ಬಿನ ಹಿರಿ ರಾಶಿಯನೊಟ್ಟಿತ್ತು-
ಸಂಟರಿಗೌತಣ ಕೊಟ್ಟಿತ್ತು.

* * *

ಬಡಿಯಲು ಹನ್ನೊಂದನು ಗಡಿಯಾರ,
ತಡಮಾಡದೆ ಬಳಗವು ಪರಿವಾರ,
ಊಟದೆಡೆಯ ಕಡೆ ಸಾಗಿತ್ತು-
ಹೊಟ್ಟೆಯು ಬೆನ್ನಿಗೆ ತಾಗಿತ್ತು-
ಭೋಜನಕೆಂದುಪವಾಸವ ಮಾಡಿದ
ದೇಹದ ತುಂಬಾ ಮೂಗಿತ್ತು!

* * *

ಭೀಮಭೋಜನದಿ ಬಳಗಗಳಿರಲು-
ಬಾಗಿಲ ಬಳಿಯಲಿ ಹರಿಯಿತು ನರಳು-
ಅನ್ನದ ತುತ್ತನು ಬೇಡಿತು ಬರಗಾ-
ಲದ ಮುದುಕಿಯ ಕೊರಳು!

* * *

"ಔತಣದೂಟದ ಸಮಯದಿ ಬೋನಸ
ಬೇಡಲು ಬಂದೆಯ? ಮುರಿವೆನು ಗೋಣ!
ತೊಲಗೇ ಮುದುಕಿ!
ಹೋಗೇ ಮುದುಕಿ!
ನಿಮಿಷವು ನಿಂತರೆ ನೀಸಿರ ಬದುಕಿ!"

* * *

ಎಂದಬ್ಬರಿಸುತ 'ಛೀ ಥೂ' ಮಾಡಿ
ನಾಯನು ತೋರಿಸೆ, ಮುದುಕಿಯು ನೋಡಿ
ಕುಳಿಬಿದ್ದಗಣ್ಣಿನಲೂಟವನು-
ದುಃಖಗಳುಕ್ಕುತ ಮುಮ್ಮಡಿ ಬಾಡಿ,
ಕೋಲನು ಮೆಲ್ಲಕೆ ಮುಂದಕೆ ದೂಡಿ,
ಶಪಿಸುತ ಹಸಿವೆಯ ಕಾಟವನು-
ದೇಹವನೆಳೆಯುತ ನಡೆದಳು ಮುಂದೆ,
ಗಪ-ಗಪಿಸಿತ್ತಾ ಜನ ನಗೆಯಿಂದೆ!

* * *

ರಾಯರ ಬಾಯಿದು ಗಂಟಲ ಕುಳಿವರೆ-
ಗೂಟವ ಬಡದಲಿ ಮಾಡಿತ್ತು;
ಉಬ್ಬಿದ ಹೊಟ್ಟೆಯು ಹೊಕ್ಕಳ ಕಣ್ಣೊಳು
ಮೂಗಿನ ತುದಿಯನು ನೋಡಿತ್ತು!

* * *

ಸಂಜೆಯ ಸಮಯದಿ ರಾಯರ ಹೊಟ್ಟೆ
ತಳಮಳಗೊಳ್ಳಲು 'ಕೆಟ್ಟೆ ಕೆಟ್ಟೆ!'
ಎಂದುರುಳಾಡುತ ಚೀರಿದರು;
ತಿಂದುದನೆಲ್ಲವ ಕಾರಿದರು.

* * *

ಜೀಟಿಯನಾಡಿತು, ತೇಗಿತು ಕುತ್ತು;
ತೀರಾ ಹಸಿದಿರಲೊಂದೇ ತುತ್ತು
ಅನ್ನವ ಬೇಡಿದ ಮುದುಕಿಯ ಕಣ್ಣು
ರಾಯರ ಹೊಟ್ಟೆಗೆ ಜೀವಕೆ ಬಿತ್ತು!
ಹಸಿದಾ ಮುದುಕಿಯ
ಉಂಡಿಹ ರಾಯರ
ಒಂದೇ ತಾಸಿನಲೊಯ್ಯಿತು ಮೃತ್ಯು;
ಸ್ಮಶಾನ ಗರ್ಭದಿ ಮುದುಕಿ ರಾಯಂಗೆ
ಒಂದೇ ತಳಿಗೆಯ ಬಡಿಸಿತ್ತು!

ಸುಖಸ್ವಪ್ನ

ಶ್ರೀ. ಎನ್. ಅನಂತನಾರಾಯಣ, ಮೈಸೂರು.

ಒಮ್ಮೊಮ್ಮೆ ಎನಿಸುವುದು ಜೀವವಾರಿದ ಮೇಲೆ
ಸುಖಸ್ವಪ್ನಗಳ ಬಿಂಬ ಮೂಡುವುದು ಎಂದು:
ಕೊಳದ ನೀರಲಿ ಅಳಿದು ಮೌನದಲಿ ಮಲಗಿರಲು
ಸೌಂದರ್ಯದಾಗಸವ ಬಿಂಬಿಸುವ ತೆರದಿ! ೧

ಆದರೆಂತೋ ಅರಿಯೆ! ಅಂತಾದರೆನಿತುಸುಖ
ಬಾಳಗೀತೆಯ ನಿಜವನರಿಯಬಹುದಾಗ;
ಜೀವದೊಳಗಿಲ್ಲದುದ ಕಂಡು ಸವಿಗನಸಿನಲಿ
ನೋವಿಲ್ಲದೊಲವೊಂದ ಪಡೆಯಬಹುದಾಗ! ೨

ವಿವಿಧ ವರ್ಣಮಯ ವಿಚಿತ್ರ ವಿಶ್ವ

(ಪೂರ್ವಾರ್ಧ)

ಶ್ರೀ. ವಿ. ವಿ. ಗೋಖಲೆ ಬಿ. ಎಸ್‌ಸಿ., ಬಿ. ಎಸ್‌ಸಿ. (ಟೆಕ್), ಮುಂಬಯಿ

ಆಕಾಶದಲ್ಲಿ ರತ್ನಗಳಂತೆ ಶೋಭಿಸುವ ನಕ್ಷತ್ರಸಮೂಹ ವೆಂದರೇನು ?

ಆಕಾಶದಾಚೆಗೆ ಏನಾದರೂ ಇರುವುದೇ ?

ರಾತ್ರಿಯ ಸಮಯದಲ್ಲಿ ಸ್ವಚ್ಛವಾದ ಆಕಾಶದಲ್ಲಿ ಹೊಳೆಯುವ ಹಾಗೂ ಮಿಣುಕುವ ನಕ್ಷತ್ರಸಮುದಾಯದ ಕಡೆಗೆ ನೋಡಿದರೆ, ಯಾರ ಮನಸ್ಸೂ ಕುತೂಹಲದಿಂದಲೂ ಆಶ್ಚರ್ಯದಿಂದಲೂ ಚಲಿಸದೆ ಇರದು. ಹುಣ್ಣಿಮೆಯ ಶುಭ ಚಂದ್ರನು, ಹಗಲೆಲ್ಲ ತೇಜಃಪುಂಜನಾಗಿ ಹೊಳೆಯುತ್ತಿರುವ ಸಹಸ್ರಾರು ಕಿರಣಗಳುಳ್ಳ ಸೂರ್ಯನು. ರಾತ್ರಿಯಲ್ಲಿ ರತ್ನಗಳಂತೆ ಶೋಭಿಸುವ ನಕ್ಷತ್ರಗಳು ಇವೆಲ್ಲವೆಂದರೇನು ? ಇವುಗಳಲ್ಲಿ ಬೆಳಕು ಎಲ್ಲಿಂದ ಬಂತು ? ಇವೆಲ್ಲವುಗಳೂ ನಮ್ಮಿಂದ ಎಷ್ಟು ದೂರದಲ್ಲಿವೆ ? ನಾವು ಇವುಗಳದ್ದೆಡೆಗೆ ಹೋಗಬಹುದೇ? ಇವೆಲ್ಲವುಗಳು ಯಾವ ಆಕಾಶದಲ್ಲಿರುವುವೋ ಆ ಆಕಾಶವೆಂದರೇನು ? ಅದು ಕೇವಲ ಒಂದು ಪೊಳ್ಳು ಆವರಣವಿದ್ದರೆ ಅದರಾಚೆಗೆ ಇರುವುದಾದರೂ ಏನು ?

ಮಾನವನ ಬುದ್ಧಿಯನ್ನು ಕುಗ್ಗಿಸುವ ಇವೆಲ್ಲ ಸಮಸ್ಯೆಗಳಿಗೆ ಉತ್ತರವನ್ನು ಕೊಡುವುದಕ್ಕಾಗಿಯೇ ಜ್ಯೋತಿಷ ಶಾಸ್ತ್ರವು ನಿರ್ಮಿತವಾಗಿದೆ. ಇಲ್ಲಿಯ ವರೆಗೆ ಗಣಿತಶಾಸ್ತ್ರದ ಸಹಾಯದಿಂದ ಈ ಪ್ರಶ್ನೆಗಳಿಗೆ ಉತ್ತರವನ್ನೀಯಲು ಪ್ರಯತ್ನ ಮಾಡಲ್ಪಟ್ಟಿತು : ಆದರೆ ಇತ್ತೀಚೆಗೆ ಕೆಲವು ವರ್ಷಗಳಿಂದ ದೊಡ್ಡ ದೊಡ್ಡ 'ದುರ್ಬಿಣಿ'ಗಳ ಮತ್ತು ಇನ್ನು ಬೇರೆ ಸಲಕರಣೆಗಳ ಸಂಶೋಧನೆಯಿಂದ, ಈ ಶಾಸ್ತ್ರದ ಬಗ್ಗೆ ಜ್ಞಾನವು ಬಹಳ ವಿಸ್ತೃತವಾಗಿ ಬೆಳೆದಿರುತ್ತದೆ.

ಸೂರ್ಯನಿಂದ ಪೃಥ್ವಿಯು ಉತ್ಪನ್ನವಾಗಿ ಈಗ ೨ ಅಬ್ಜ ವರ್ಷಗಳಾಗಿವೆ. ಪೃಥ್ವಿಯು ಶಾಂತವಾಗಿ, ಅಲ್ಲಿ ಜೀವಜಾತಿ ಉತ್ಪತ್ತಿಯಾಗಿ ೬೦ ಕೋಟಿ ವರ್ಷಗಳಾದುವು. ಮೊದಲು ನೀರಿನಲ್ಲಿಯ ಪ್ರಾಣಿಗಳು, ಅನಂತರ ಕ್ರಿಮಿ-ಕೀಟಕಗಳ..... ಈ ರೀತಿ ಜೀವದ ವಿಕಾಸವಾಗುತ್ತ, ಪ್ರತ್ಯಕ್ಷ ಮನುಷ್ಯಪ್ರಾಣಿಯು ಪೃಥ್ವಿಯ ಮೇಲೆ ಹುಟ್ಟಿ ಕೇವಲ ೩ ಲಕ್ಷ ವರ್ಷಗಳಾಗಿವೆ. ಈ ಮಾನವನು ತನ್ನ ಬುದ್ಧಿ-ಸಾಮರ್ಥ್ಯದಿಂದ ಜ್ಯೋತಿಷ ಶಾಸ್ತ್ರದ ಜ್ಞಾನವನ್ನು ಪಡೆಯತೊಡಗಿದುದು ಕೇವಲ ೬೦೦೦ ವರ್ಷಗಳ ಹಿಂದೆ. ಅದರಲ್ಲಿಯೂ ದೊಡ್ಡ ದೊಡ್ಡ 'ದುರ್ಬಿಣಿ' ಯಂತ್ರಗಳನ್ನು ತಯಾರಿಸಿ, ಅವುಗಳಿಂದ ಪ್ರತ್ಯಕ್ಷ ನಿರೀಕ್ಷಿಸಿ ನಿರ್ಮಿಸಿದ ಶಾಸ್ತ್ರ ೩೦೦ ವರ್ಷಗಳಿಂದಿತ್ತೀಚೆಗಿನದೆಂದು ಹೇಳಬಹುದು.

ಈ ನಮ್ಮ ಪೃಥ್ವಿಯು ಸೂರ್ಯನ ಸುತ್ತಲೂ ತಿರುಗುತ್ತಿರುವ ಅನೇಕ ಗ್ರಹಗಳಲ್ಲಿಯ ಒಂದು ಗ್ರಹವೆಂಬುದು ಸಾಮಾನ್ಯವಾಗಿ ಎಲ್ಲರಿಗೂ ಗೊತ್ತಿದ್ದ ವಿಷಯ. ಚಂದ್ರನು ಪೃಥ್ವಿಯ ಸುತ್ತಲೂ ೨೮ ದಿವಸಗಳಲ್ಲಿ ಒಂದು ಪ್ರದಕ್ಷಿಣೆಯನ್ನು ಹಾಕುತ್ತಾನೆ. ಪೃಥ್ವಿಯು ೩೬೫ ದಿವಸಗಳಲ್ಲಿ, ಸೂರ್ಯನ ಸುತ್ತಲೂ ಒಂದು ಪ್ರದಕ್ಷಿಣೆಯನ್ನು ಮುಗಿಸುವುದು. ಅದರಂತೆಯೆ ಸೂರ್ಯನಾದರೂ ಸ್ವತಃ ೧ ಸೆಕಂದಿಗೆ ೧೩ ಮೈಲು ವೇಗದಿಂದ ಯಾವುದೋ ಒಂದು ನಕ್ಷತ್ರದ ಸುತ್ತಲೂ ತಿರುಗುತ್ತಿದ್ದಾನೆ. ವಿಶ್ವದಲ್ಲಿ ಯಾವುದೇ ವಸ್ತುವು, ಯಾವ ಕಾಲದಲ್ಲಿಯೂ ನಿಶ್ಚಲವಾಗುದಿಲ್ಲ. ಪದಾರ್ಥದ ಪ್ರತಿಯೊಂದು ಪರಮಾಣುವೂ ಚಲಿಸುತ್ತಿದೆ ಎಂಬುದು ಸಿದ್ಧಾಂತವು.

ಪೃಥ್ವಿ ಮೊದಲ್ಗೊಂಡು ಎಲ್ಲ ಗ್ರಹಗಳೂ ಸೂರ್ಯನಿಂದಲೇ ಹುಟ್ಟಿವೆ. ಯಾವುದೋ ಒಂದು ಕಾಲಕ್ಕೆ ಬಹು ದೊಡ್ಡದಾದ ನಕ್ಷತ್ರವು, ತನ್ನ ಚಲನಕ್ರಿಯೆಯ ಸಮಯದಲ್ಲಿ ಸೂರ್ಯನಿಗೆ ಅತ್ಯಂತ ಸಮೀಪಿಸಿತೆಂದೂ, ಆ ಸಮಯದ ಅದರ ಆಕರ್ಷಣೆಯ ಮೂಲಕ ಸೂರ್ಯನಲ್ಲಿಯ ದ್ರವರೂಪ ಪದಾರ್ಥವು ಎಳೆಯಲ್ಪಟ್ಟಿತೆಂದೂ, ಅದೇ ಒಂದು ಗುಳ್ಳೆಯಾಕಾರದ್ದಾಯಿತೆಂದೂ ಹೇಳಿಕೆ. ಮೊದಲು ಈ ಗುಳ್ಳೆಯಾಕಾರಕ್ಕೆ ಸೂರ್ಯನ ಕಡೆಗೆ ಒಂದು ಮೊನೆ ಇತ್ತೆಂದೂ, ಆ ಸಮೀಪಿಸಿದ ನಕ್ಷತ್ರವು ದೂರ ಹೋದಂತೆ ಇನ್ನೊಂದು ಬದಿಗೂ ಮೊನೆಯಾಗಿ ಚಿಣಿಯ ಆಕಾರದ್ದಾಯಿತೆಂದೂ ಹೇಳುವರು. ಇದೇ ಮುಂದೆ ಮುಂಡಗಾಗಿ, ಸೂರ್ಯನ ಸುತ್ತಲೂ ಮತ್ತು ತನ್ನಷ್ಟಕ್ಕೆ ತನ್ನ ಸುತ್ತಲೂ ತಿರುಗತೊಡಗುವುದು. ಹೀಗಾದದ್ದೇ ಗ್ರಹವೆನಿಸಿಕೊಳ್ಳುವುದು. ಇನ್ನೂ ದ್ರವರೂಪದ ಸ್ಥಿತಿಯಲ್ಲಿರುವಾಗಲೇ, ಸೂರ್ಯನ ಆಕರ್ಷಣೆಯ ಮೂಲಕ ಅದರಲ್ಲಿಯ ಕೆಲವೊಂದು ಭಾಗವು ಎಳೆಯಲ್ಪಟ್ಟು, ಸ್ವತಂತ್ರವಾದ ಆಕರವನ್ನು ಹೊಂದುವುದೇ 'ಚಂದ್ರ' ಎಂದೆನಿಸಿಕೊಳ್ಳುವುದು. ಗುರು ಮತ್ತು ಶನಿ ಗ್ರಹಗಳಿಂದ ಪ್ರತ್ಯೇಕವಾಗಿ ಒಂಬೊಂಬತ್ತು ಚಂದ್ರಗಳಾಗಿವೆ. ವರುಣನ ಸುತ್ತಲೂ ನಾಲ್ವರು ಚಂದ್ರರೂ, ಮಂಗಳನ ಸುತ್ತಲು ಇಬ್ಬರು ಚಂದ್ರರೂ, ಪೃಥ್ವಿ ಮತ್ತು ಪ್ರಜಾಪತಿಯ ಸುತ್ತಲು ಒಬ್ಬೊಬ್ಬ ಚಂದ್ರರೂ ಇರುವರು. ಕರಿಯ ಕಾಜಿನ ದುರ್ಬಿಣಿಯಲ್ಲಿ ನೋಡಿದರೆ, ಅನೇಕ ವೇಳೆ ಸೂರ್ಯನು ಸ್ವಚ್ಛವಾಗಿ ಕಾಣದೆ, ಅವನ ಮೇಲೆ ಕೆಲವೊಂದು ಕಪ್ಪು ಕಲೆಗಳು ಕಂಡುಬರುತ್ತವೆ. ಇದಕ್ಕೆ ಶಾಸ್ತ್ರಜ್ಞರು, ಸೂರ್ಯನಿಗೆ ಕೆಲವು ಸಮಯ ಹೊಟ್ಟೆನೋವು ತಗಲುತ್ತದೆಂದೂ, ಅಂತಹ ಸಮಯದಲ್ಲಿ ಪ್ರಚಂಡವಾದ ಜ್ವಾಲಾಮುಖಿಗಳು ಅವನ ಉದರದಿಂದ ಹೊರಬಿದ್ದು ಅವನ ಮೇಲ್ಭಾಗಕ್ಕೆ ಬರುವುವೆಂದೂ ಹೇಳುತ್ತಾರೆ. ಇವೇ ಹಾಗೆ ತೋರುವ ಕಪ್ಪುಕಲೆಗಳೆಂದು ನಂಬುವರು. ಈ ಕಲೆಗಳು ಸುಮಾರು ೧ ತಿಂಗಳ ವರೆಗೆ ಮತ್ತು ಕೆಲವು ಸಮಯ ವರ್ಷಾನುವರ್ಷಗಟ್ಲೆ ಇರುವುದು ತಿಳಿದುಬಂದಿದೆ.

ಸೂರ್ಯನಿಗೆ ಖಗ್ರಾಸ ಗ್ರಹಣ ಹಿಡಿದ ಸಮಯವು ಬಹು ಅಲೌಕಿಕ ಪ್ರಸಂಗವೆನ್ನಬಹುದು. ಇನ್ನು ಮುಂಬರುವ ಖಗ್ರಾಸ ಗ್ರಹಣವು ಹಿಂದುಸ್ತಾನದಲ್ಲಿ ೧೯೫೫ ನೆಯ ಜೂನ್ ೨೦ ನೆಯ ತಾರೀಖಿಗೆ ಸಂಭವಿಸುವುದು. ಅದು ಸುಮಾರು ೭ ಮಿನಿಟು ಉಳಿಯುವುದು. ಇಂತಹ ಖಗ್ರಾಸ ಗ್ರಹಣ ಸಮಯದಲ್ಲಿ, ಆಕಾಶದಲ್ಲಿಯ ಎಲ್ಲ ಗ್ರಹಗಳನ್ನೂ ಅನೇಕ ತೇಜೋಮಯವಾದ ನಕ್ಷತ್ರಗಳನ್ನೂ ನೋಡಲು ಶಕ್ಯವಾಗುವುದು. ಅಂತಹ ವಿಚಿತ್ರ ಪ್ರಸಂಗದಲ್ಲಿ ಜೇನ್ನೊಣಗಳು ತಮ್ಮ ಹುಟ್ಟಿನ ಕಡೆಗೆ ತಿರುಗುತ್ತವೆ. ಪಂಜರದಲ್ಲಿರುವ ಹಕ್ಕಿ-ಪಕ್ಷಿಗಳು ತಮ್ಮ ರೆಕ್ಕೆಗಳ ಮಧ್ಯದಲ್ಲಿ ತಲೆ ಇಕ್ಕಿ ಅವಿತುಕೊಳ್ಳುತ್ತವೆ. ನಾಯಿಗಳು ಗೋಳಿಡುತ್ತವೆ. ವಾಹನದ ಕುದುರೆಗಳು ಹೆಜ್ಜೆ ಇಕ್ಕದೆ ದಾರಿಯಲ್ಲಿಯೆ ನಿಂತುಬಿಡುತ್ತವೆ. ಎಲ್ಲಾ ಪ್ರಾಣಿವರ್ಗಕ್ಕೂ ಈ ಪ್ರಸಂಗವು ಬಹು ವಿಚಿತ್ರವಾಗಿ ತೋರುವುದು. ಸೂರ್ಯಗ್ರಹಣದ ವೇಳೆಯಲ್ಲಿ ಚಂದ್ರನು ಪೃಥ್ವಿ ಮತ್ತು ಸೂರ್ಯನ ನಡುವೆ ಬರುತ್ತಾನೆ. ಆ ಚಂದ್ರನ ನೆರಳು ಪೃಥ್ವಿಯ ಎಷ್ಟು ಭಾಗದ ಮೇಲೆ ಬೀಳುವುದೋ ಆ ಭಾಗದಲ್ಲಿ ಮಾತ್ರ ಖಗ್ರಾಸ ಗ್ರಹಣವಾಗಿ ತೋರುವುದು ಆದರೆ ನಾಳೆ ಟೆಲಿವಿಜನನ್ನು ಚೆನ್ನಾಗಿ ಉಪಯೋಗಿಸಲು ಬಂದಿತೆಂದರೆ, ಈ ಖಗ್ರಾಸ ಗ್ರಹಣವನ್ನು ಪೃಥ್ವಿಯಮೇಲಿನವರೆಲ್ಲರೂ ಕಾಣಬಹುದು. ಈ ಗ್ರಹಣವಾದಾಗ, ಪೃಥ್ವಿಯ ಮೇಲೆ ಬೀಳುವ ಚಂದ್ರನ ಎಲ್ಲಕ್ಕೂ ದೊಡ್ಡ ನೆರಳಿನ ವ್ಯಾಸವು ೧೬೭ ಮೈಲು ಆಗುವುದು. ಅತ್ಯಂತ ಎತ್ತರ ಸ್ಥಳಕ್ಕೆ ವಿಮಾನವನ್ನು ಒಯ್ದು ಅಲ್ಲಿಂದ ಈ ನೆರಳಿನ ಫೋಟೊವನ್ನು ತೆಗೆಯಲು ಸಾಧ್ಯವಿದೆಯೆಂದು ಒಬ್ಬ ಶಾಸ್ತ್ರಜ್ಞನು ಅಭಿಪ್ರಾಯಪಟ್ಟಿರುವನು; ಅದರಂತೆಯೆ ಡಾ. ಜಫ್ರೇಜ್ ಎಂಬವನು ೧೦,೦೦೦ ಅಡಿ ಎತ್ತರದ ಮೇಲೆ ವಿಮಾನವನ್ನು ಒಯ್ದು, ಅಲ್ಲಿಂದ ಈ ಅಭೂತಪೂರ್ವ ದೃಶ್ಯವನ್ನು ತೆಗೆದಿದ್ದಾನೆ.

ಸಾಮಾನ್ಯವಾಗಿ ಕುದಿಯುವ ನೀರಿನ ಉಷ್ಣತೆಯು ೧೦೦ ಡಿಗ್ರಿ ಸೆಂಟಿಗ್ರೇಡ್ ಇರುತ್ತದೆ. ಇದೇ ಮಾನದಿಂದ ಅಳೆದರೆ, ಸೂರ್ಯನ ಮಧ್ಯಸ್ಥಳದ ಉಷ್ಣತೆಯು ಸುಮಾರು ೪ ಕೋಟಿ ಡಿಗ್ರಿಯೂ ಮೇಲ್ಭಾಗದಲ್ಲಿ ೭೦೦೦ ಡಿಗ್ರಿಯೂ ಆಗುತ್ತದೆ. ಈ ಅತಿ ಭಯಂಕರವಾದ ಸೆಕೆಯು ಮೂಲಕ ಸೂರ್ಯನಲ್ಲಿರತಕ್ಕ ಅನೇಕ ಪದಾರ್ಥಗಳ ಅಣುಗಳು ನಾಶವಾಗಿ, ಪ್ರಚಂಡ ಶಕ್ತಿಯಲ್ಲಿ ರೂಪಾಂತರ ಹೊಂದುತ್ತವೆ. ಸೂರ್ಯನ ಸೆಕೆಯು ಕಡಿಮೆಯಾಗದಿರಲಿಕ್ಕೆ ಇದೇ ಕಾರಣವು, ಮತ್ತು ಇದೇ ಕಾರಣದಿಂದಲೇ ಶಕ್ತಿಯ ಕೆಲವೊಂದು ಭಾಗವು ಉಷ್ಣತಾರೂಪದಲ್ಲಿಯೂ ಬೆಳಕಿನ ರೂಪದಲ್ಲಿಯೂ ನಮಗೆ ದೊರೆಯುತ್ತದೆ. ಸೂರ್ಯನಲ್ಲಿಯ ಪದಾರ್ಥದ ನ್ಯಾಶವು ಪ್ರತಿ ಸೇಕಂದಿಗೆ ೪೨ ಟನ್ ಭಾರದಷ್ಟಾಗುವುದು. ಇದೇ ಪ್ರಕಾರವಾಗಿ ಸೂರ್ಯನ ಜನ್ಮದಿಂದಲೂ ಎಂದರೆ ಸುಮಾರು ೭೩ ಅಬ್ಜ ವರ್ಷಗಳಿಂದಲೂ ನಡೆದಿದೆ. ಇಷ್ಟು ದೊಡ್ಡ ಪ್ರಮಾಣದಲ್ಲಿ ನಾಶ ಹೊಂದುತ್ತಿದ್ದರೂ ಸೂರ್ಯನಲ್ಲಿರುವ ಪದಾರ್ಥಸಂಗ್ರಹವು ೧೬,೦೦೦ ಅಬ್ಜ ವರ್ಷ ಸಾಕಾಗುವಷ್ಟಿರುವುದು. ಏಕೆಂದರೆ ೨ರ ಮುಂದೆ ೨೭ ಪೂಜ್ಯ ಟನ್ನಿನಷ್ಟು ಸೂರ್ಯನ ಭಾರ ಇರುವುದು. ಭೂಮಿಯ ಮೇಲೆ ಪ್ರವಾಸ ಮಾಡುವಂತೆ ಉಗಿಬಂಡಿಯಲ್ಲಿ ಕುಳಿತು ಆಕಾಶದಲ್ಲಿ ಹೋದರೆ, ಸರಾಸರಿ ತಾಸಿಗೆ ೬೦ ಮೈಲು ಓಡುವ ಡೆಕ್ಕನ್ ಕ್ವೀನ್‌ನಲ್ಲಿ ಎಲ್ಲಿಯೂ ನಿಲ್ಲದೆ ಹಗಲು ರಾತ್ರಿ ಪ್ರವಾಸ ಮಾಡಿದರೆ, ನಾವು ಆರು ತಿಂಗಳ ಅವಧಿಯಲ್ಲಿ ಚಂದ್ರನವರೆಗೆ ಹೋಗಿ ತಲ್ಪಬಹುದು. ಎಂದರೆ ಮುಂಬೈಯಿಂದ ಪೇಶಾವರದವರೆಗೆ ಹೋಗಿ ತಿರುಗಿ ಬರುವುದು ಒಂದು ಸರತಿ ಎಂದರೆ, ಇಂಥವು ೮೧ ಸರತಿಗಳಾಗುವುವು. ಇದೇ ವೇಗದಿಂದ ಸೂರ್ಯನನ್ನು ಮುಟ್ಟಲು ಸುಮಾರು ೨೧೦ ವರ್ಷಗಳು ಹಿಡಿಯುವುವು. ಮುಂಬೈ-ಪೇಶಾವರದ ಸರತಿಗಳು ೩೪,೦೦೦ದಷ್ಟು ಆಗುವುವು. ಸೂರ್ಯನ ಬೆಳಕು ಹುಣ್ಣಿಮೆಯ ರಾತ್ರಿಯಲ್ಲಿ, ೪,೬೫,೦೦೦ ಚಂದ್ರರು ಒಮ್ಮೆಲೆ ಬೆಳಗುವಷ್ಟು ಆಗುವುದು.

ಅಮಾವಾಸ್ಯೆಯ ರಾತ್ರಿಯಲ್ಲಿ ನಾವು ಚಂದ್ರನ ಮೇಲೆ ಏರಿ, ಪೃಥ್ವಿಯ ಚಮತ್ಕಾರಿಕ ಸೌಂದರ್ಯವನ್ನು ನೋಡಬಹುದೆಂದು ಶಾಸ್ತ್ರಜ್ಞರ ಅಭಿಪ್ರಾಯ. ಚಂದ್ರನ ಮೇಲೆ ನಿಂತ ನಮಗೆ, ಚಂದ್ರನ ವ್ಯಾಸಕ್ಕಿಂತ ನಾಲ್ಕರಷ್ಟು ವ್ಯಾಸವುಳ್ಳ-ನೀಲವರ್ಣದಿಂದ ಪ್ರಕಾಶಿಸುವಂತಹ-ಒಂದು ಗೋಲಾಕಾರವು ಕಂಗೊಳಿಸುವುದು. ಅದೇ ಈ ಪೃಥ್ವಿಯು. ಇದರ ಬೆಳಕು ಚಂದ್ರನ ಮೇಲೆ ಬೀಳುವುದು, ಇದರ ಪ್ರಕಾಶವು ೪೦ ಚಂದ್ರರ ಬೆಳಕಿನಷ್ಟಾಗುವುದು. ಪೃಥ್ವಿಯಿಂದ ನಾವು ೧೫೦೦ ಮೈಲು ದೂರ ಹೋದರೆ, ಅಟ್ಲಾಂಟಿಕ ಮಹಾಸಾಗರದಲ್ಲಿಯ ಹಗಲನ್ನೂ ಧಾರವಾಡದ ಬೆಳಗನ್ನೂ ಟೋಕಿಯೊ ನಗರದ ರಾತ್ರಿಯ ದೃಶ್ಯಗಳನ್ನೂ ಅಲ್ಲಿಂದ ಏಕಕಾಲಕ್ಕೆ ಅವಲೋಕಿಸಬಹುದು

ಪೃಥ್ವಿಯಿಂದ ಸೂರ್ಯ ಮತ್ತು ಚಂದ್ರರು ಎಷ್ಟು ದೂರ ಇರುವರೆಂಬುದನ್ನು ಈಗ ನಾವು ತಿಳಿದೆವು. ಆದರೆ ನಕ್ಷತ್ರಗಳ ಅಂತರವನ್ನು ತಿಳಿಯಹೋದರೆ, ಇವರು ಬಹಳ ಸಮೀಪದವರೆನಿಸುವರು. ನಕ್ಷತ್ರಗಳ ಅಂತರಗಳನ್ನು ಮೈಲಳತೆಗಳಲ್ಲಿ ಹೇಳಲು ಸಾಧ್ಯವಿಲ್ಲ. ಅದಕ್ಕಾಗಿ ಶಾಸ್ತ್ರಜ್ಞರು ಬಹು ದೊಡ್ಡ ಅಳತೆಯನ್ನು ಕಲ್ಪಿಸಿದ್ದಾರೆ. ಅದರ ಹೆಸರು "ಪ್ರಕಾಶವರ್ಷ" ಎಂದಿರುವದು. ಬೆಳಕಿನ ಕಿರಣದ ವೇಗವು ೧ ಸೇಕಂದಿಗೆ ೧೮೬೦೦೦ ಮೈಲು ಇರುವುದೆಂದು ನಿಶ್ಚಯವಾಗಿದೆ. ಈ ವೇಗದಿಂದ ೧ ವರ್ಷದಲ್ಲಿ ಬೆಳಕು ಎಷ್ಟು ದೂರ ಹೋಗುವುದೋ ಆ ಅಂತರಕ್ಕೆ (೧೮೬೦೦೦×೬೦×೨೪×೩೬೫) ಪ್ರಕಾಶವರ್ಷವೆನ್ನುವರು. ಸೂರ್ಯನ ಕಿರಣಗಳು ಅಲ್ಲಿಂದ ಹೊರಟು ಪೃಥ್ವಿಯನ್ನು ಮುಟ್ಟಲು ೮ ಮಿನಿಟುಗಳು ಬೇಕಾಗುವುವೆಂದು ಸಿದ್ಧವಾಗಿದೆ. ಆದುದರಿಂದ ಮೇಲಿನ ಲೆಕ್ಕದ ಪ್ರಕಾರ ಸೂರ್ಯನು ನಮ್ಮಿಂದ "೮ ಪ್ರಕಾಶ ಮಿನಿಟು" ಅಥವಾ (೧/೬೬೦೦೦) ಪ್ರಕಾಶವರ್ಷ ದೂರವಿರುವನೆಂದು ಅಳತೆ ಮಾಡಿರುವರು. ಅದರಂತೆಯೆ ಪೃಥ್ವಿಗೆ ಅತಿ ಸಮೀಪಿಸಿದ ನಕ್ಷತ್ರದ ಅಂತರ (ಅಲ್ಫಾ ಸೆಂಟಾರಿ) ೪೩ ಪ್ರಕಾಶವರ್ಷ ಎಂದರೆ ಸೂರ್ಯನ ಅಂತರದ ೨೬೬೦೦೦ ಮಡಿ ಇರುವುದೆಂದು ಕಂಡುಹಿಡಿದ್ದಾರೆ. ಎಂದರೆ ಆ ನಕ್ಷತ್ರದ ಮೇಲೆ ೪೩ ವರ್ಷಗಳ ಹಿಂದೆ ನಡೆದ ದೃಶ್ಯವನ್ನು ಈ ಹೊತ್ತು ನಾವು ನೋಡುತ್ತಿದ್ದೇವೆ. ಇದು ಎಲ್ಲಕ್ಕಿಂತ ಸಮೀಪದಲ್ಲಿದ್ದದ್ದು; ಉಳಿದುವುಗಳು ಇನ್ನೂ ಹೆಚ್ಚು ದೂರದಲ್ಲಿರುವುವು,

ಉದಾಹರಣಾರ್ಥವಾಗಿ ಕೆಲವೊಂದು ನಕ್ಷತ್ರ ಮತ್ತು ಅವುಗಳ ಪೃಥ್ವಿಯಿಂದಿರುವ ಅಂತರಗಳನ್ನು ಕೆಳಗೆ ಕೊಟ್ಟಿದೆ:

ನಕ್ಷತ್ರ	ಅಂತರ
ಶ್ರವಣ. (ಅಲ್ಫಾ ಅಕ್ವಿಲಾ)	೧೬ ಪ್ರಕಾಶ ವರ್ಷ
ಸಪ್ತರ್ಷಿಗಳು (ಗ್ರೇಟ್ ಬೇಅರ್)	೫೦ ,, ,,
ಧ್ರುವನಕ್ಷತ್ರ (ಪೋಲ್‌ಸ್ಟಾರ್)	೫೪.೫ ,, ,,
ಪೂ. ಭಾದ್ರಪದ (ಅಲ್ಫಾ ಪೆಗಾಸಿ)	೬೯ ,, ,,
ಧನಿಷ್ಠಾ (ಡಾಲ್ಫಿನ್)	೧೦೨ ,, ,,
ರೇವತಿ (ಪಿಸಿಯಮ್)	೧೪೩ ,, ,,
ಆರಿದ್ರಾ (ಅಲ್ಫಾ ಓರಿಯಾನಿಸ್)	೧೯೨ ,, ,,
ಚಿತ್ರಾ (ಅಲ್ಫಾ ವ್ಹಿರ್ಗಿನಸ್)	೨೩೩ ,, ,,
ಅಗಸ್ತ್ಯ (ಅಲ್ಫಾ ಅರ್ಗಿಸ್)	೬೫೨ ,, ,,

ಅನೇಕ ನಕ್ಷತ್ರಗಳ ಅಂತರವಷ್ಟೇ ವಿಶಾಲವಿರದೆ, ಅವುಗಳ ಆಕಾರವಾದರೂ ಅಷ್ಟೇ ವಿಶಾಲವಿರುವುದು. ಸ್ವಂತ ಕಲ್ಪನಾಶಕ್ತಿಯ ಬಗ್ಗೆ ಅಭಿಮಾನವಿದ್ದವರು ಈ ವಿಷಯದಲ್ಲಿ ಮಗ್ನರಾದರೆ ಅವರ ಹೆಮ್ಮೆಯು ತಗ್ಗದಿರಲಾರದು.

ನಕ್ಷತ್ರ	ಪೃಥ್ವಿಗಿಂತ ಇಷ್ಟು ಪಟ್ಟು ದೊಡ್ಡದು
ಶ್ರವಣ	೩೬ ಲಕ್ಷ
ಮಘಾ	೧೬ ಕೋಟಿ ೩೫ ಲಕ್ಷ
ಸ್ವಾತಿ	೩೫ ಅಬ್ಜ.
ಜ್ಯೇಷ್ಠಾ	೧೫ ಲಕ್ಷ.

ಈ ಭವ್ಯಾಕಾರವನ್ನು ನೋಡಲಾಗಿ ಅವುಗಳ ತೂಕವು ಮಾತ್ರ ಅಷ್ಟು ಬಹಳವಿಲ್ಲವೆಂದು ಹೇಳಬಹುದು. ಈ ಜ್ಯೇಷ್ಠಾ ನಕ್ಷತ್ರದ ತೂಕವು ಪೃಥ್ವಿಗಿಂತ ಬರೇ ೬೨ ಲಕ್ಷ ಪಟ್ಟು ಇದ್ದಿರುವುದೆಂದು ಕಂಡು ಹಿಡಿದಿರುವರು. ಈ ನಕ್ಷತ್ರಗಳ ಉಷ್ಣತೆಯು ಬಹಳ ಪ್ರಚಂಡವಾಗಿರುವುದು. ಕೆಲವೊಂದು ನಕ್ಷತ್ರಗಳು ಜೋಡಿಜೋಡಿಯಾಗಿಯೂ, ಕೆಲವು ಗುಂಪಾಗಿಯೂ ಇರುವುವು. ಇವುಗಳು ಬೇರೆಬೇರೆ ವರ್ಣದುಳ್ಳವಿರುವುವು. ಕೆಲವು ಬಂಗಾರದ ಬಣ್ಣ, ಕೆಲವು ಅಚ್ಚನೀಲಿ, ಕೆಂಪು, ಹಸಿರು, ಗುಲಾಬಿ ಮುಂತಾದ ಬೇರೆ ಬೇರೆ ಬಣ್ಣದವಿರುವುವು.

ರಾತ್ರಿಯ ವೇಳೆಯಲ್ಲಿ ಆಕಾಶದ ಕಡೆಗೆ ನೋಡಿದರೆ ಅದರ ಒಂದು ತುದಿಯಿಂದ ಮತ್ತೊಂದು ತುದಿಯ ವರೆಗೂ ಒಂದು ಬಿಳಿಯ ಪಟ್ಟಿಯು ಹಬ್ಬಿದಂತೆ ತೋರುವುದು. ಅದು ಮೋಡಗಳ ಪರಿಯಲ್ಲಿ ಗೋಚರಿಸುವುದು; ಆದರೆ ದುರ್ಬಿಣಿಯಲ್ಲಿ ನೋಡಿದರೆ, ಅದೊಂದು ನಕ್ಷತ್ರಗಳ ಸಮೂಹವೆಂದು ತಿಳಿಯುವುದು. ಇದಕ್ಕೇ 'ಆಕಾಶಗಂಗೆ' ಎನ್ನುವರು. ಸೂರ್ಯ–ಚಂದ್ರರು, ಸೂರ್ಯನ ಸುತ್ತಲೂ ತಿರುಗುತ್ತಿರುವ ಗ್ರಹಗಳು ಮತ್ತು ಅನೇಕ ನಕ್ಷತ್ರಗಳೆಲ್ಲವೂ ಈ ಸಮೂಹದೊಳಗೇ ಸೇರಿರುತ್ತವೆ. ಈ ಆಕಾಶಗಂಗೆಯೇ ನಮ್ಮ ವಿಶ್ವವೆಂತಲೂ, ಸರ್ವವೂ ಗತಿಮಯವಾದದ್ದೆಂತಲೂ ಸಿದ್ಧಾಂತವಿದೆ. ದುರ್ಬಿಣಿಯ ಸಹಾಯದಿಂದ ಈ ಆಕಾಶಗಂಗೆಯ ಫೋಟೋವನ್ನು ತೆಗೆದಿರುತ್ತಾರೆ. ಅದರಲ್ಲಿ ೧ ಅಬ್ಜ ೫೦ ಕೋಟಿ ನಕ್ಷತ್ರಗಳು ತೋರಿವೆ. ಆದರೂ ಆಕಾಶಗಂಗೆಯಲ್ಲಿ ಒಟ್ಟಿಗೆ ೩೦೦ ರಿಂದ ೧೦೦೦ ಕೋಟಿಯ ವರೆಗೆ ನಕ್ಷತ್ರಗಳಿರುವುವೆಂದು ತಿಳುವಳಿಕೆ ಇದೆ. ಆಕಾಶಗಂಗೆಯ ಪಟ್ಟಿಯ ಅಗಲಳತೆಯು ೨೨೦೦೦೦ ಪ್ರಕಾಶವರ್ಷದ್ದಿರುವುದು. ಕೋಟ್ಯಾವಧಿ ನಕ್ಷತ್ರಗಳಿದ್ದರೂ ವಿಶ್ವದಲ್ಲಿ ಏನೂ ಗೊಂದಲವಿದ್ದಿಲ್ಲ; ಇದಕ್ಕೆ ಕಾರಣವೆಂದರೆ ವಿಶ್ವದ ವ್ಯಾಪಕತೆಯು ಅತಿ ವಿಸ್ತಾರವಿದ್ದು ಒಂದೊಂದರ ನಡುವಿನ ಅಂತರವೇ ಬಹಳವಿದೆ. ಇಡಿ ಹಿಂದುಸ್ಥಾನದ ಪ್ರದೇಶದಲ್ಲಿ ಮೂರು ಜೇನ್ನೊಣಗಳನ್ನು ಹಾರುಬಿಟ್ಟರೆ ಎಷ್ಟು ಗೊಂದಲವು ಸಾಧ್ಯವೋ ಅಷ್ಟು ವಿಶ್ವದಲ್ಲಿಯ ಗೊಂದಲವೆಂದು ಊಹಿಸಬಹುದು.

ಇಷ್ಟೆಲ್ಲ ವಿಶಾಲ, ವಿಸ್ತೀರ್ಣ ಹಾಗೂ ನಿರಾತಂಕ ವಿಶ್ವದ ಸರಳ ಪಂಚಾಂಗವು ಇಲ್ಲಿಗೇ ಮುಗಿಯದೆ (ನಿಮ್ಮಲ್ಲಿನ್ನೂ ತಾರ್ಕಿಕ ಶಕ್ತಿ ಇದ್ದರೆ) ಇನ್ನೂ ಮುಂದೆ ಹೋಗಬಹುದು. ಈ ನಮ್ಮ ಆಕಾಶಗಂಗೆಯ ಆಚೆಗೂ ಇನ್ನೂ ಅನೇಕ ನಕ್ಷತ್ರಗಳ ಸಮೂಹವಿರುವುವೆಂದು ದೊಡ್ಡ ದೊಡ್ಡ ದುರ್ಬಿಣಿಗಳ ಸಹಾಯದಿಂದ ಕಂಡುಬಂದಿದೆ. ಇವುಗಳು ಈ ನಮ್ಮ ವಿಶ್ವದಂತೆ ಇನ್ನೂ ಅನೇಕ ಸ್ವತಂತ್ರ ವಿಶ್ವಗಳೆಂದು ತಿಳಿಯಬೇಕು. ಇವು ಈ ವಿಶ್ವದಿಂದ ಕಲ್ಪನೆಗೆ ನಿಲುಕದಷ್ಟು ದೂರದಲ್ಲಿರುವುವು. "ಆಡುವ ನೋಡ" ಎಂಬ ನಕ್ಷತ್ರ ಸಮೂಹವು ನಮ್ಮಿಂದ ೯೦೦೦೦೦ "ಪ್ರಕಾಶವರ್ಷ" ದೂರದಲ್ಲಿರುವುದೆಂದು ಕಂಡುಹಿಡಿದಿದ್ದಾರೆ. ನಮಗೆ ಅತ್ಯಂತ ಸಮೀಪಕ್ಕಿರುವ ವಿಶ್ವವು ೮೫೦೦೦೦ ಪ್ರಕಾಶವರ್ಷದ ಅಂತರದಲ್ಲಿರುವುದೆಂದೂ ಮತ್ತು ಅತಿ ದೂರದಲ್ಲಿರುವ ವಿಶ್ವ ೧೪೦ ೦೦೦ ೦೦೦ ಪ್ರಕಾಶವರ್ಷದ ಅಂತರದ ಮೇಲಿರುವುದೆಂದೂ ಸಂಶೋಧಿಸಿರುವರು. ಒಂದು ಸಮೂಹದಿಂದ ಮತ್ತೊಂದು ಸಮೂಹವು ೨೦೦೦೦೦ ಪ್ರಕಾಶವರ್ಷದ ದೂರದಲ್ಲಿರುವುವು, ಇಂತಹ ವಿಶ್ವಗಳು ಸುಮಾರು ೨೦೦೦ ೦೦೦ ಇರುವುವು; ಪ್ರತಿಯೊಂದರಲ್ಲಿ ಸಾಧಾರಣವಾಗಿ ೨೦೦೦ ೦೦೦ ೦೦೦ ನಕ್ಷತ್ರಗಳಿರುವುವು.

ತಾಳ್ಮೆ, ವಿನಯ, ಮುಂತಾದ ಸದ್ಗುಣಗಳು ನಮ್ಮಲ್ಲಿ ನೆಲೆಗೊಳ್ಳಬೇಕಾಗಿದ್ದರೆ, ಈ ಗಣಿತ–ಜ್ಯೋತಿಷ್ಯ ಶಾಸ್ತ್ರದ ಅಭ್ಯಾಸವನ್ನು ಮಾಡಬೇಕು ಈ ಅನಂತ ವಿಶ್ವಗಳ ಅಪಾರತೆಯ ಮುಂದೆ ಮಾನವನ ಕ್ಷುಲ್ಲಕತೆಯನ್ನು ಕಂಡು ಯಾರು ತಲೆ ತಗ್ಗಿಸಲಿಕ್ಕಿಲ್ಲ? ಇವುಗಳ ತುಲನೆಯನ್ನು ಮಾಡಲು ಸರಿಯಾದ ಶಬ್ದಗಳು ಕೂಡ ದೊರಕುವುದಿಲ್ಲ. ಈ ಅನಂತ ವಿಶ್ವಗಳು ನಿಸ್ಸೀಮವಾದುವಾಗಿವೆ, ಅಥವಾ ಅವಕ್ಕೆ ಮರ್ಯಾದೆ ಉಂಟೋ ಎಂಬ ಬಗ್ಗೆ ಶಾಸ್ತ್ರಜ್ಞರಲ್ಲಿ ಭಿನ್ನಾಭಿಪ್ರಾಯಗಳಿವೆ. **ಐನ್‌ಸ್ಟಾಯಿನ್** ಎಂಬ ಶಾಸ್ತ್ರಜ್ಞನು, ಪೃಥ್ವಿಯ ಮೇಲ್ಭಾಗವು ಮರ್ಯಾದಿತವಾಗಿದ್ದರೂ ಅದರ ಅಂತವು ನಮಗೆ ಹೇಗೆ ಹತ್ತುವುದಿಲ್ಲವೋ, ಅದೇ ಪ್ರಕಾರವಾಗಿ ವಿಶ್ವವು ಮರ್ಯಾದಿತವಿದ್ದರೂ ಅನಂತವಾಗಿದೆಯೆಂದು ಅಭಿಪ್ರಾಯ ಪಡುತ್ತಾನೆ. ವಿಶ್ವದಲ್ಲಿಯ ಪ್ರತಿಯೊಂದು ಜಡರೂಪಿ ಪದಾರ್ಥವು ಸಂಪೂರ್ಣನಾಶಹೊಂದುತ್ತಿದ್ದರೆ, ಅದರ ಅಂತವನ್ನು ಕಾಣಲು ಶಕ್ಯವಿದೆ. ಆದರೆ ಹಾಗಾಗದೆ ಪದಾರ್ಥಗಳು ಬೆಳೆಯುತ್ತಿರುವುದನ್ನು ನೋಡಿದರೆ, ವಿಶ್ವವು ಅನಂತವೆಂದೂ ಅದು ಒಂದೇ ಸಮನೆ ವ್ಯಾಪಿಸುತ್ತಿರುವುದೆಂದೂ ಅವನ ಅಭಿಪ್ರಾಯವು. ಇನ್ನು ಕೆಲವು ಶಾಸ್ತ್ರಜ್ಞರು ವಿಶ್ವವು ಕೆಲವೊಂದು ಕಾಲ ವ್ಯಾಪಿಸುತ್ತಿರುವುದೆಂದೂ ಮತ್ತೆ ಕೆಲವು ಕಾಲ ಆಕುಂಚನ ಹೊಂದುವುದೆಂದೂ ಹೇಳುವರು. ಈ ತರದ ವ್ಯಾಪಾರವು ಅನಂತ ಕಾಲದ ವರೆಗೂ ನಡೆಯುವುದೆಂದು ಅವರ ಅಭಿಪ್ರಾಯ.

ಹುಚ್ಚು ★

ಶ್ರೀ. ಎನ್. ಎಸ್. ಗದಗಕರ ಬಿ. ಎ.
ಧಾರವಾಡ

(ಹರಟೆ)

ಸಾಮಾನ್ಯವಾಗಿ ಹುಚ್ಚರು ಕಲ್ಲು ಒಗೆಯುವರೆಂದೂ, ಸಮಾಜಕ್ಕೆ ತೀರ ವಿಚಿತ್ರವೆನಿಸುವ ತಮ್ಮವೇ ಆದ–ನಗೆಗೀಡಾದ–ಚಟಗಳನ್ನು ಆಳವಡಿಸಿಕೊಂಡಿರುವರೆಂದೂ, ಲೋಕೋಪಕಾರಿಯಾದ ಸರಕಾರವು ಲೋಕದ ಹಿತದ ದೃಷ್ಟಿಯಿಂದ ಅವರಿಗಾಗಿ ಆಸ್ಪತ್ರೆಗಳನ್ನು ನಿರ್ಮಿಸಿರುವುದಲ್ಲವೇ? ಸುಸಂಸ್ಕೃತರೆಂದು ತಿಳಿದುಕೊಳ್ಳುವ ಸಮಾಜದ ಇನ್ನಿತರ ಎಷ್ಟೋ ಹುಚ್ಚರ ತಂಡಗಳು ಆಸ್ಪತ್ರೆಯನ್ನಲಂಕರಿಸದಿದ್ದರೂ ಹೊರಗಿದ್ದುಕೊಂಡೇ ಎಬ್ಬಿಸಿದ ಗಲಭೆ ಅಷ್ಟಿಷ್ಟಲ್ಲ! ಕಲ್ಲು ಒಗೆಯದಿದ್ದರೂ, ಒಂದಿಲ್ಲೊಂದು ಬಗೆಯಿಂದ ಹುಚ್ಚರಾಗುವವರ ರೀತಿನೀತಿ, ನಡೆನುಡಿ ಮೊದಲಾದುವು ಪ್ರಸ್ತುತ ಹರಟೆಗೆ ವಿಷಯ. ಹಾಗಾದರೆ ಈ ಬಗೆಯ ಹುಚ್ಚರ ವ್ಯಾಪಕತೆ ಎಷ್ಟು? ಅವರಿಂದ ಸಮಾಜಕ್ಕಾದ ಅಡೆ-ತಡೆ ಗಳಾವುವು? ಸಂಸ್ಕೃತಿಯ ಆಳತೆಗೋಲಿನಿಂದ ಅಳೆದರೆ ಅವರ ಸ್ವರೂಪವೆಂತಹದು?— ಇವೇ ಪ್ರಶ್ನೆಗಳು ಕುತೂಹಲಿಗಳಾದ ಓದುಗರನ್ನು ಪೀಡಿಸತೊಡಗಲು ಕೆಣಕುವುವಲ್ಲವೆ?

ನಮ್ಮ ಜೀವನದಲ್ಲಿ ಹುಚ್ಚಿನ ಅವತಾರಗಳಿಗೇನು ಕೊರತೆ? ಮುಕು, ಮಬ್ಬು, ಭ್ರಮೆ, ಬೆಪ್ಪು, ಗುಂಗು, ಮರುಳು, ದಂಗಾಗುವುದು, ಹುಂಬತನ, ಪೆಚ್ಚುತನ, ಪೆದ್ದತನ, ಅರೆಹುಚ್ಚು, ಜುಂಭತನ, ತಲೆತಿರುಕತನ, ಭೃಗುತನ– ಎಂಬ ಹುಚ್ಚಿನ ವಿವಿಧ ಸ್ವರೂಪಗಳು ಆಗಾಗ ನಮ್ಮ ನಿದರ್ಶನಕ್ಕೆ ಒದಿರಲು ಸಾಕು.

ನಮ್ಮ ಸಮಾಜದಲ್ಲಿ ಕಾಣುವ ಹುಚ್ಚಿನ ವೈವಿಧ್ಯವಾದರೂ ಎಂತಹದು? ಪ್ರತಿಯೊಂದು ವ್ಯವಸಾಯದಲ್ಲಿಯೂ ಒಂದೊಂದು ಅದರ ವೈಶಿಷ್ಟ್ಯ; ಎಂದಮೇಲೆ ಈ ಸಮಾಜದಲ್ಲಿ ಉಂಟಾಗಿರುವ ಎಲ್ಲ ವ್ಯವಸಾಯಗಳಿಗೂ ಹುಚ್ಚು ಅನ್ವಯಿಸುವುದೆಂದು ತಿಳಿದು, ತಟಸ್ಥವೃತ್ತಿಯನ್ನೇನೂ ಯಾರೂ ಅವಲಂಬಿಸಬೇಕಿಲ್ಲ. ಹಾಗೆ ಸಂಶಯ ಪಿಶಾಚಿಗೆ ಎಡೆಗೊಟ್ಟರೆ ಸಮಾಜದ ರಚನೆಗೆ ತೊಡಕಾಗಿ, ಮನುಷ್ಯ ಪಶುಗಳ ಭೇದಭಾವವೇ ಅಳಿದೀತು! ಇದೇ ಗಲಭೆಯಲ್ಲಿ ನಿಃಸ್ವಾರ್ಥತೆ, ಸಹಿಷ್ಣುಬುದ್ಧಿ ಮಾಯವಾದರೆ ತಪ್ಪೇನು? ಅಂತೇ ಹುಚ್ಚಿಗಾಗಿ ಇಷ್ಟೊಂದು ತರ್ಕ–ವಿತರ್ಕ–ಕುತರ್ಕ!

ಮಾದರಿಗೆಂದು ಮೊದಲು ಸಾಹಿತಿಯನ್ನೇ ತೆಗೆದುಕೊಂಡರೆ ಅವನ ಹುಚ್ಚು ಅಪೂರ್ವವೇ! ತನ್ನ ಕವನದ ಸೊಬಗು, ವಿಚಾರ-ಲಹರಿ, ಕಾದಂಬರಿಯ ಕಲ್ಪಕತೆ, ಕತೆಗಳ ವಿಲಾಸ ಇವುಗಳ ಹೊರತಾಗಿ ಅವನಿಗೆ ಜಗತ್ತು ಶೂನ್ಯ. ಉಂಡುಟ್ಟು, ಸುಖದಿಂದಿದ್ದರೆ, ಸಾಹಿತ್ಯದ ಸವಿಸಿಕ್ಕರೆ ಸಾಕು ಇವನಿಗೆ. ನೆರೆ-ಹೊರೆಯವರ ಇಲ್ಲವೆ ಮನೆಯವರ ಶ್ರಾದ್ಧವಾದರೂ ಎಚ್ಚರವಿರುವುದಿಲ್ಲ. ಒಮ್ಮೊಮ್ಮೆ ತನ್ನ ಆಹಾರದ ಸಮಸ್ಯೆ, ಮೈಮೇಲಿನ ಎಚ್ಚರು, ನಾಳೆಯ ಕಲ್ಪನೆ ಇವೂ ಇರುವುದಿಲ್ಲ. ಹುದ್ದೇದಾರರ ಬಗೆಗೆ ಯೋಚಿಸಿದರೆ, ಅವರು ಗಾಣದ ಎತ್ತುಗಳಿದ್ದಂತೆ ಅಥವಾ ಎಡಕ್ಕೂ ಬಲಕ್ಕೂ ನೋಡದೆ ಪುರೋಗಾಮಿಯಾದ ಟಾಂಗಾದ ಕುದುರೆಗಳಂತೆ. ತಮ್ಮ ಕಾಗದ, ಪತ್ರವ್ಯವಹಾರ, ಆರ್ಥಿಕ ವಿರಿಕೆ ಇಷ್ಟೇ ಅವರ ಮುಖ್ಯ ಸಂಬಂಧ. ಸಾಹಿತ್ಯ-ಚಟುವಟಿಕೆ, ಸಂಸ್ಕೃತಿಯ ಅರಿವು—ಸ್ವಚ್ಛ ಮೂರ್ಖರ ಮಾರ್ಗವೆಂದು ಅವರ ತಿಳಿವಳಿಕೆ ಡಾಕ್ಟರನಿದ್ದರೆ ತೀರಿತು; ಅಂಗಸೌಷ್ಠವದ ಹೊರಗೆ ಜಗತ್ತೇ ಇಲ್ಲವೆಂದು ಅವನಿಗೆ ಭ್ರಮೆ. 'ಜಗತ್ತಿನ ಅರಿವು, ಸಮಾಜ ಸುಧಾರಣೆ, ಮಾನವತೆ– ಎಲ್ಲವೂ ವೈದ್ಯಕವೃತ್ತಿಯಲ್ಲಿಯೇ ಹುದುಗಿವೆ' ಎಂದು ಸಾರುವ ಮಹಾವೀರರಿವರು. ಇನ್ನು ರಾಜಕಾರಣಿಯಂತಹ ಹವ್ಯಾಸ ಮಹಾಮುನಿಗಳಷ್ಟು ಕವಡುಗಂಟಕರು ಯಾರೂ ಇರಲಿಕ್ಕಿಲ್ಲ! ಗಾಳಿಯಂತೆ ದಿಕ್ಕು ಬದಲಿಸುವ ಪ್ರಾಮಾಣಿಕ(?) ಕೋಳಿಯಂತೆ ಇವರ ವ್ಯಾಪಾರವು. ಬುದ್ಧಿ, ಸದಸದ್ವಿವೇಕಕ್ಕಿಂತ ನಾಲಗೆಯ ಚಪಲತನ ಇವರಿಗೆ ಬಹಳ. ಇವರ ಅಭಿಪ್ರಾಯದಂತೆ ರಾಜಕಾರಣದಲ್ಲಿ ಇಲ್ಲದ್ದೇನು? ಧರ್ಮ, ಆಚಾರ, ವಿವೇಕ— ಎಲ್ಲವೂ ಇವೆ. ಆದರೇನು? ಮುಖ್ಯ ತಲೆಯೊಂದು ಮಾತ್ರ ಇಲ್ಲ! ಅಂತೇ ಹಿಂದು ಮುಂದು ನೋಡದೆ, ರಾಜಕಾರಣದ ಹೆಸರಿನಲ್ಲಿ ಸಭ್ಯತೆಯನ್ನೂ ವಿವೇಕವನ್ನೂ ಕಾಸಿಗೆ ಸಂಭೇದಾಗಿ ಮಾರಿ, ತಮ್ಮ ವಿಚಿತ್ರ ಧೋರಣೆಯನ್ನು– ಎಂದೆಂದಿಗೂ– ಮುತ್ಸದ್ದಿಗಳು ಹಟಮಾರಿತನದಿಂದ ಆಶ್ರಯಿಸುವರಲ್ಲವೇ? ಶಿಕ್ಷಕರದೂ ಅದೇ ಮಾತು. ವರ್ಷೆರಡು ವರ್ಷ ಕೈಯಲ್ಲಿ ಕಲಿತು, ಮುಂದೆ ಎಷ್ಟೋ ವರ್ಷಗಳನಂತರ ತಮ್ಮ ಒಬ್ಬ ವಿದ್ಯಾರ್ಥಿಯು ಆಕಸ್ಮಾತ್ತಾಗಿ ದೊಡ್ಡ ಅಧಿಕಾರಿಯಾದರೆ— "ಅದೋ ನಮ್ಮ '.......' ಹುಡುಗನು ....ಖಾತೆಯಲ್ಲಿ ಸುಪರಿಂಟೆಂಡೆಂಟ್ ಆಗಿದ್ದಾನೆ; ಇನ್ನೊಬ್ಬ ಆ ನಮ್ಮ ....ರಾಯರ ಮಗನು ನಮ್ಮ ಕೈಯಲ್ಲಿಯೇ ಕಲಿತು, ಈಗ ಪ್ರೌಢಶಿಕ್ಷಣಕ್ಕಾಗಿ ಪರದೇಶಕ್ಕೆ ಹೊರಡುವವನಿದ್ದಾನೆ!" ಎಂದು ಹೆಮ್ಮೆಯಿಂದ ಹೇಳುವರು. ಇನ್ನೂ ಕೆಲವರು ಹಾಗೆ ಹೀಗೆ ಎಂದು ನಿರರ್ಥಕವಾಗಿ ತಾಸೆರಡು ತಾಸು ಮಾತಾಡಿ ಸಮಾಧಾನ ಹಚ್ಚಿಕೊಳ್ಳುವರು. ಪಾಪ! ಹೀಗೆ ಪೆನ್ಶನ್ ಪಡೆದ ಆ ಗೃಹಸ್ಥರಿಗೆ ಎಂದೋ ಒಂದು ಕಾಲಕ್ಕೆ 'ವರ್ಣಮಾತ್ರಂ' ಪಾಠ ಕಲಿಸಿದ ಬಡಶಿಕ್ಷಕನ ನೆನಪು ಉಳಿಯುವ ಬಗೆ ಹೇಗೆ? ಹಾಗೆಯೆ ಪಂಡಿತ, ಶಾಸ್ತ್ರಿ, ಮೌಲ್ವಿ, ಪಾದ್ರಿ, ಅಯ್ಯನವರಿಗೆ ತಮ್ಮ ಗ್ರಂಥಾವಲೋಕನದ ಹಾಗೂ ಶುಷ್ಕ-ಪಾಂಡಿತ್ಯದ ಹೊರಗೆ ಜಗತ್ತೇ ಇಲ್ಲ; ಇದ್ದುದಾದರೆ ಬರೀ ಕಾರಿರುಳು! ಜಗತ್ತು ಜ್ವಾಲಾಮುಖಿಯಲ್ಲಿ ಮುಳುಗಿ ತಳಮಳಗೊಂಡರೂ, ಈ ಜ್ಞಾನೋದಧಿಯಲ್ಲಿಯ ಹಡಗುಗಳಾದ ತರ್ಕ, ನ್ಯಾಯ, ವೇದಾಂತ, ವ್ಯಾಕರಣ, ಶ್ರುತಿ, ಸ್ಮೃತಿಗಳು ಪಂಡಿತರಿಗೆ ಉಳಿದರೆ ಸಾಕು. ಮೈಮೇಲಿನ ಸ್ಮೃತಿಗಂತೂ ಎಂದೋ ತಿಲಾಂಜಲಿ! ನಾಳೆಯ ಪ್ರಶ್ನೆ ಉದ್ಭವಿಸಿದರೆ ತೀರಿತು— 'ನಾಳೆ ಎಂಬೆಯೋ? ನಾಳೆ ಸೇರುವುದು ನೂರ್ಕೋಟಿ ಜನ್ಮಗಳ ಜೊತೆಗೆ—' ಎಂಬ ಅವರ ಪಲ್ಲವಿಯು 'ಎಲ್ಲ ರೋಗಗಳಿಗೂ ಒಂದೇ ರಾಮಬಾಣ' ಎಂಬಂತಹ ಗಂಡು ಉಪಾಯದಂತೆ ಸಿದ್ಧವೇ ಇದೆ. ತತ್ತ್ವಾನ್ವೇಷಣೆಗಿಂತ ನೋಗಿಗೆ ಹೆಚ್ಚು ಪ್ರಾಶಸ್ತ್ಯವುಂಟಾಗಿ, ಗ್ರಂಥದ ಹುಚ್ಚುಹೊಳೆಯು ಈ ಹುಚ್ಚರಿಗೆ ಮಾರ್ಗದರ್ಶಕವಾಗುವುದು. ಪ್ರಣಯಿಗಳೂ ಅಂಥವರೇ! ತಮ್ಮ ಶೃಂಗಾರದ ಆಲಾಪ ಪ್ರಾರಂಭವಾಯಿತೆಂದರೆ, ಜಗತ್ತಿನಲ್ಲಿ ಉಳಿದವರೆಂದರೆ ತಾವಿಬ್ಬರು ಗಂಡ–ಹೆಂಡಿರೆಂದು ಅವರ ಭಾವನೆ. ವಿಶ್ವದ ಈ ರಂಗಭೂಮಿಯ ಮುಖ್ಯಪಾತ್ರಗಳಾದ ನಾಯಕ-ನಾಯಿಕೆಯರೆಂದರೆ ತಾವಿರ್ವರೇ! ಉಳಿದುದೆಲ್ಲ ಶೂನ್ಯತೆ, ಶಂಕರಾಚಾರ್ಯರ

ಡೋಂಗರೆ ಬಾಲಾಮೃತ
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

ಮಾಯಾವಾದ! ಸಂಶೋಧಕರ, ಸಂಗೀತಗಾರರ ಹುಚ್ಚೂ ಒಂದು ಬಗೆಯಿಂದ ಇನ್ನೊಂದು ತೂಕ ಹೆಚ್ಚಿನದೆಂದೇ ಹೇಳಬೇಕು. ಸಂಶೋಧನೆಯ ಪ್ರಯೋಗಗಳ ಯಶಸ್ಸು ಅವರ ಜೀವದ ಪರಿವೆಗಿಂತಲೂ ಹೆಚ್ಚಿಂಟ ತಿಳಿವಳಿಕೆಯುಂಟಾದುದು ನಿಜವಾಗಿಯೂ ಶೋಚನೀಯವಲ್ಲವೇ? ಕಾಲಕ್ರಮದ ಹಾಗೂ ಜೀವಿತದ ಕ್ಷಣಭಂಗುರತೆಯ ಕಲ್ಪನೆ ಇವರಿಗಿಲ್ಲವಲ್ಲ! 'ಕಮಲದಳೆಯ ಮೇಲೆ ಮುತ್ತಿನಂತೆ ಕಂಗೊಳಿಸುವ ಮಂಜಿನ ಹನಿಯಂತೆ ಮಾನವನ ಬಾಳು' ಎಂದು ತಾತ್ತ್ವಿಕರು ಉಸಿರುವುದು ಇವರಿಗೆ ವಿದಿತವಾಗಿಲ್ಲವಲ್ಲ! ಆಯಿತು, ಇಂತಹ ಮನೆಮುರುಕರ ಬೆನ್ನುಹತ್ತಿದ ಮನೆಯ ಪರಿವಾರವು ನೀರಿಗಾಗಿ ಬಿಸಿಲುಗುದುರೆಯನ್ನು ಬೆನ್ನಟ್ಟುವ ಚಿಗರಿಯಂತೆ ನಿರಾಶವಾಗುವುದುಂಟು. ಇನ್ನು ಸಂಗೀತಗಾರರೇನು? ತಮ್ಮ ಭಾವಲೋಕದಲ್ಲಿಯ ರಾಗ-ತಾನ-ಆಲಾಪಗಳೇನೂ ತಾನೇನೂ! ಸಂಗೀತವೆ ಅವರ ಉಸಿರು. ಮೇಲೆ ಕೆಳಗೆ ಕೈಮಾಡುತ್ತ ಬಾಯಿ ಸೊಟ್ಟ ಮಾಡಿ, ಸ್ವರದ ಏರಿಳಿತಗಳಲ್ಲಿ ಲೀನರಾದರೆ ಮನೆ, ಮಾರು, ತಾವು, ಪರರು ಎಂಬ ಭಾವನೆ ಸಹ ಅಂತರ್ಲೀನವಾಗುವುದು. ಸಂತೆಯ ಚಿಂತೆ ಇನ್ನಿತರರಿಗೆ. ಆದರೆ ರಾಗ–ತಾಳ ಶಾಂತಿಯ ಸಂತೆ ಇವರಿಗೆ. ಒಟ್ಟು ಗಂಧರ್ವಲೋಕದ ನಿವಾಸಿಗಳೇನೋ ತಾನೆಂಬ ಠೀವಿ ಇವರದು.

ಇದುವರೆಗೆ [illegible], [illegible] ಅಧಿಕಾರಗಳ ಅಥವಾ ಪೆನ್ಶನ್‌ದಾರರದು ಒಂದು ವಿಚಿತ್ರ ಬಗೆಯ ಹುಚ್ಚೆಂದರೆ ನಡೆದೀತು. ಕೈಹಾಕಿದ ಕೆಲಸದಲ್ಲಿ ಉತ್ಸಾಹವಿಲ್ಲವೆಂದೂ, ನಿರುದ್ಯೋಗ ಸಮಸ್ಯೆ ತಲೆದೋರಿತೆಂದೂ, ತಾವು ನಿವೃತ್ತರಾದಾಗಲೂ ಮೇಲಿಂದ ಮೇಲೆ ಆಫೀಸಿಗೆ ಹೋಗುವುದು ಅವರ ಪರಿಪಾಠ. ಒಂದು ವೇಳೆ, ನಿಜವಾಗಿ ಕೆಲಸದ ಮೇಲಿದ್ದ ಮುಖ್ಯ ಹುದ್ದೇದಾರನು ಇವರಷ್ಟು ನಿಯಮಿತತನದಿಂದ ಬರುವನೋ ಇಲ್ಲವೋ! ಅಷ್ಟೊಂದು–ಇದೀಗ ನಿವೃತ್ತರಾದ ಅಧಿಕಾರಿಗಳಿಗೆ– ವೇಳೆಯ ಮಹತ್ತ್ವ. ಸಂಜೆಯಾಯಿತೆಂದರೆ ಒಂದು ಕೈಯಲ್ಲಿ ಕೋಲು, ಇನ್ನೊಂದು ಕೈಯಲ್ಲಿ ಪಲ್ಲೆಯ ಚೀಲ ಹಿಡಿದುಕೊಂಡು ಉಗಿಬಂಡಿಯ ನಿಲ್ದಾಣದ ಕಡೆಗೆ ಇವರು ಹೊರಡುವರು. ಆಯಿತು. ಹಾದಿಯಲ್ಲಿ ಮಾತಾಡಿದರೂ ಎಂತಹವು? ಅಂದಿನ ಇಲ್ಲವೇ ಹಿಂದಿನ ದಿನದ ವರ್ತಮಾನ ಪತ್ರದ ಸಂಗತಿಗಳ ಹುಚ್ಚು ಚರ್ಚೆ! ಅಕಸ್ಮಾತ್ತಾಗಿ ಕೊಂಡ—ತಾವು ಅಥವಾ ಬೇರೆಯವರು—ವರ್ತಮಾನಪತ್ರವೇ ಇದ್ದುದಾದರೆ, ಮೇಲ್ಭಾಗದಲ್ಲಿ ಬರೆದ ಸಂಪಾದಕರ ಹೆಸರಿನಿಂದ ಪ್ರಾರಂಭಿಸಿ, ಪತ್ರಿಕೆ ಪ್ರಕಟವಾದ ಬೀದಿಯ ಹೆಸರು, ಪ್ರೆಸ್ಸಿನ ವಿಳಾಸದ ವರೆಗೆ ಅತ್ಯಂತ ಸೂಕ್ಷ್ಮವಾಗಿ ಓದುವುದು. ಕೊನೆಗೆ ನಿಲ್ದಾಣದ ಗೇಟಿನ ಹತ್ತಿರ ಹೋದಾಗ, ಇವರು ಕೊಚ್ಚುವ ಹರಟೆಯ ಸರಣಿಯಾದರೂ ಯಾವ ಬಗೆಯದು? ಅದನ್ನು ಕೇಳಿಯೇ ತೀರಬೇಕು! "ಇಂದು ಮುಂಜಾವು ಬಂದ ಎಂಜಿನ್ನಿನ ನಂಬರು ಇದೋ ಇಲ್ಲವೇ ಬೇರೊಂದೊ? ಡ್ರಾಯವ್ಹರನು ಬದಲಿರುವನೋ ನಿನ್ನಿನವನೊ? ನಾಳೆ ಸರಕುಗಳನ್ನು ತುಂಬಿಕೊಂಡು ಬರುವ ವಾಹನಗಳ ಸಂಖ್ಯೆ ಎಷ್ಟು? ಎಂಜಿನ್ನಿನ ಮಾಟವೆಂತಿರಬಹುದು? ನಾಡದು?" —ಪಾಪ! ಬಡ ರೆಲ್ವೆ ಕಂಪನಿಯ ಸಂಚಾಲಕರಿಗೆ ಯಂತ್ರಗಳ ಬಗೆಗೆ ಇಷ್ಟೊಂದು ಆಸ್ಥೆ ಇರಬಹುದೋ ಇಲ್ಲವೋ ದೇವರೇ ಬಲ್ಲ!

ಜೀವನದಲ್ಲಿ ಆಶೆ–ಆಕಾಂಕ್ಷೆಗಳನ್ನಿರಿಸಿಕೊಂಡ ಅನೇಕರಿಗೆ ಇನ್ನೂ ಹುಚ್ಚು ಹೆಚ್ಚು. ಇಳಿವಯಸ್ಸಿನಲ್ಲಿ ಎಷ್ಟೋ ಜನರಿಗೆ ಲಗ್ನದ ಇಲ್ಲವೆ ಮಕ್ಕಳ ಹುಚ್ಚು. 'ನಾಳೆ ಸತ್ತರೆ ರೊಕ್ಕವು ಯಾರ ಪಾಲು?' —ಎನ್ನುವುದೇ ಅವರ ಸಮಸ್ಯೆ. ಅಥವಾ ರೊಕ್ಕವಿದ್ದರೂ, 'ಇನ್ನೂ ಹೇಗೆ ಹೆರರನ್ನು ಮೋಸಗೊಳಿಸಿ ಹೆಚ್ಚು ಸಿರಿವಂತನಾಗಲಿ?'— ಎಂದು ಹಲವರಿಗೆ ಹಿರಿಯಾಸೆ.

ಯಾವ ವಸ್ತುಗಳನ್ನು ಎಲ್ಲಿಂದ ಹೇಗೆ ತರಿಸಿ ಯಾರಿಗೆ ಎಷ್ಟು ಲಾಭ ತೆಗೆದುಕೊಂಡು ಮಾರಬೇಕು?—ಎಂಬ ಗಾಳಿಗೋಪುರಗಳೇ ಅವರಿಗೆ ನಿತ್ಯದ ಸವಿಗನಸುಗಳು. ಹಗಲು ಹಣದ ಹಂಬಲು; ರಾತ್ರಿ ತಲೆತುಂಬ ವಿಚಾರ. ಅಂತೆಯೆ ಹಂಬಲಕ್ಕೆ ಮಿತಿ ಇಲ್ಲ. ನಿದ್ರೆಗೆ ಅನುವಿಲ್ಲ. ಇಂತು ನಿರಂತರ ಹುಚ್ಚಿಗೆ ಕವಲು. ಕಲ್ಲು ಒಗೆಯುವುದನ್ನಷ್ಟೇ ಈ ಹುಚ್ಚರು ಬಿಟ್ಟಿರುವರೆಂಬುದು ಸಮಾಜದ ಪೂರ್ವಾರ್ಜಿತ ಪುಣ್ಯವಲ್ಲವೆ?

ಈ ಬಗೆಯಾಗಿ ಒಬ್ಬನು ಮಾಡಿದ ಕೆಲಸ ಆಡಿದ ಮಾತು ಬೇರೊಬ್ಬನ ಮನಸ್ಸಿಗೆ, ಬಾರದಿದ್ದರೆ, ಸಹಜವಾಗಿ ಅವರಿರ್ವರು ಒಬ್ಬರನ್ನೊಬ್ಬರು ಹುಚ್ಚನೆಂದು ಹೇಳುವ ವಾಡಿಕೆ ನಮ್ಮ ಸಮಾಜದಲ್ಲಿ ಎಂದಿನಿಂದಲೂ ಬೇರೂರಿದೆ. ವಿಶಿಷ್ಟ ಇಬ್ಬರ ಮಾತೇ ಏಕೆ? ಈ ಇಬ್ಬಿಬ್ಬರಂತೆ ಸಮಾಜದಲ್ಲಿಯ ಸಹಸ್ರಾರು ಲಕ್ಷೋಪಲಕ್ಷ ವ್ಯಕ್ತಿಗಳೂ, ಭೇದಭಾವಕ್ಕಾಗಿ ಒಬ್ಬರನ್ನೊಬ್ಬರು ಹುಚ್ಚರೆಂದೇ ಪರಿಗಣಿಸುತ್ತಿರುವರು. ಹಾಗೆ ನೋಡಿದರೆ, ಕೊನೆಗೆ ಜಗತ್ತೇ ಒಂದು ಹುಚ್ಚರ ಸಂತೆ!

(೨೬೭ನೇ ಪುಟದ ಅಡಿಯಲ್ಲಿ ನೋಡಿರಿ!)

ನಮ್ಮನ್ನಗಲಿದ ಪೋತದಾರ ಶೀನಪ್ಪ (ಸ್ಮೃತಿಯ ಶ್ರದ್ಧಾಂಜಲಿ)

ಶ್ರೀ. ಬೆಟಗೇರಿ ಕೃಷ್ಣಶರ್ಮ

●

ಇಂದಿನ ಸುಶಿಕ್ಷಿತ ಕನ್ನಡ ಲೋಕಕ್ಕೆಲ್ಲ ನಮ್ಮ ಪೋತದಾರ ಶೀನಪ್ಪ ಪರಿಚಿತನಷ್ಟೇ ಅಲ್ಲ; ತನ್ನ ಅನೇಕ ಗುಣಗಳ ಮೂಲಕ ಹಲವರ ಹೃದಯದಲ್ಲಿ ಹೊಕ್ಕು ಕುಳಿತವನು. ಶೀನಪ್ಪ ಬರಿ ಚಿತ್ರಗಾರ, ಪಡಿಯಚ್ಚುಗಾರ ಅಲ್ಲ; ಕನ್ನಡನಾಡುನುಡಿಗಳ ಅಬಿಮಾನದ ಮೂರ್ತಿ. ತನ್ನ ವ್ಯವಹಾರದಿಂದ ಆತ ತನ್ನ ಮನೆಯೊಂದನ್ನೆ ಕಟ್ಟಿಕೊಳ್ಳಲು ಬಯಸಿದವನಲ್ಲ; ಕನ್ನಡದ ಮಹಾಮನೆಯನ್ನು ಕಟ್ಟಬೇಕೆಂಬ ಮಹದಾಶೆಯೂ ಉಳ್ಳವನಾಗಿದ್ದ. ಕನ್ನಡನಾಡಿನ ರಾಜಕೀಯ ಚಟುವಟಿಕೆಯಲ್ಲಿಯೂ ಶೀನಪ್ಪನ ಮುಖ ಮುಂದೆ ಕಾಣುತ್ತಿದ್ದಿತು; ಸಾಹಿತ್ಯಿಕ ಚಟುವಟಿಕೆಯಲ್ಲಿಯೂ ಮುಂದೆ ಇರುತ್ತಿದ್ದಿತು. ಹೊಸ ಕನ್ನಡನಾಡನ್ನು ಕಟ್ಟಬೇಕೆಂದು ಹವಣಿಸುತ್ತಿರುವ ಭಾಗ್ಯವಿಧಾತನಿಗೆ ಮೊದಲ ನೆರವಿಗನಾಗಿಯೆ ಈ ಪೋತದಾರ ಶೀನಪ್ಪ ಬಂದವನೆಂದು ಹೇಳಬಹುದು.



ಶೀನಪ್ಪನ ಚಿಕ್ಕತನದ ಬಾಳು ಸುಖದ್ದಲ್ಲ. ನಾನು ಮೊದಲನೆಯ ಸಲ ಆತನನ್ನು ಕಂಡುದು, ೧೯೧೮ನೆಯ ಇಸ್ವಿಯ ಡಿಸೆಂಬರ್‌ನಲ್ಲಿ-ಬೆಳಗಾಂವಿಯ ಡಾಕ್ಟರ್ ಸವಣೂರ ಅವರಲ್ಲಿ. ಇಂಗ್ಲಿಷ್ ೬ನೆಯ ತರಗತಿಯ ವಿದ್ಯಾರ್ಥಿಯಾಗ ವಯಸ್ಸು ಸುಮಾರು ೧೪-೧೫ ಇರಬಹುದು ದೇಹ ಬಡಕಲೂ ಅಲ್ಲ; ದಪ್ಪಗಿನದೂ ಅಲ್ಲ. ನಸುಗಪ್ಪು ಮೈಬಣ್ಣ ಕಣ್ಣು ಮೂಗುಗಳು ಮುಖವನ್ನು ಚೆಲುವಾದುದೆಂದು ಹೇಳಿಸುವಂತಹವು-ತಲೆಯ ಮೇಲೆ ಉದ್ದ ಕೂದಲಿನ ಕ್ರಾಪು ಇದ್ದರೂ ಹಿಕ್ಕಿ ಅಚ್ಚುಕಟ್ಟಾದುದು. ಅಂದಿನ ಅವನ ರೂಪ, ಚಟುವಟಿಕೆ, ಚುರುಕುಮಾತು ಯಾರ ಮನವನ್ನೂ ಆಕರ್ಷಿಸುವಂತಹವು. ಅದರಲ್ಲಿಯೂ ಅವನ ಮಾತುಗಳಲ್ಲಿ ಆಗಾಗ ಹೊರಡುತ್ತಿದ್ದ ಕನ್ನಡದ ಅಭಿಮಾನ ನನ್ನ ಮನಸ್ಸನ್ನು ಸಂಪೂರ್ಣವಾಗಿ ಸೆಳೆಯಿತು. ಡಾಕ್ಟರರ ಮನೆಯಲ್ಲಿರುವ ಶೀನಪ್ಪನ ಸಲುಗೆಯನ್ನು ನೋಡಿದರೆ, ಅವರ ಶೀರ ಹತ್ತಿರದ ಬಳಗಕ್ಕೆ ಇವನು ಸೇರಿದವನೆಂದು **ಯಾರಿಗೂ** ಎನಿಸಬಹುದಾಗಿತ್ತು; ಅದರೆ ಅಲ್ಲಿ ಅವನು ಕೇವಲ ಆಶ್ರಯಕ್ಕಾಗಿ ಇದ್ದ ಬಡ ವಿದ್ಯಾರ್ಥಿಯೆಂಬುದು ತಿಳಿದಾಗ, ಆಶ್ಚರ್ಯವೆನಿಸಿತು. ಚಿಕ್ಕತನದಲ್ಲಿಯೆ ತಾಯಿ ತೀರಿಹೋಗಿದ್ದರು. ತಂದೆ ಇದ್ದರೂ, ಶೀನಪ್ಪನ ಪಾಲಿಗೆ ಇಲ್ಲದಂತೆ ಆಗಿದ್ದರು. ಬೆಳಗಾಂವಿಯ ಸರದಾರ್ ಹೈಸ್ಕೂಲಿನಲ್ಲಿರುವಾಗ ಈತ ಒಂದು ಸಲ ವಾರ್ಷಿಕೋತ್ಸವದ ಕಾಲದಲ್ಲಿ- ಕೆರೂರ ವಾಸುದೇವಾಚಾರ್ಯರ 'ನಲದಮಯಂತಿ' ನಾಟಕದಲ್ಲಿ— ದಮಯಂತಿಯ ಪಾತ್ರವನ್ನು ವಹಿಸಿ ಉತ್ತಮರೀತಿಯಿಂದ ಅಭಿನಯಿಸಿದನಂತೆ; ಅಂದಿನಿಂದಲೂ ಈತನಿಗೆ ಕೆರೂರ ವಾಸುದೇವಾಚಾರ್ಯರ ವಿಷಯದಲ್ಲಿ ತುಂಬ ಅಭಿಮಾನ, ವಿಶ್ವಾಸ × × × ×

ನಾಗಪುರ ಕಾಂಗ್ರೆಸ್ಸು ಅಸಹಕಾರ ನಿರ್ಣಯವನ್ನು ಘೋಷಿಸಲು ಎಲ್ಲರೊಂದಿಗೆ ಶೀನಪ್ಪನೂ ಶಾಲೆಗೆ ಶರಣು ಹೊಡೆದ, ಬೆಳಗಾಂವಿಯಲ್ಲಿ ಹೊಸತಾಗಿ ಪ್ರಾರಂಭವಾದ 'ಕರ್ನಾಟಕ ಮಿತ್ರ' ವಾರಪತ್ರಿಕೆಗೆ ಪ್ರಾರಂಭದ ನೆರವುಗಾರನಾಗಿ ನಿಂತ. ಬಳಿಕ ಬೆಳಗಾಂವಿ ಜಿಲ್ಲಾ ಕಾಂಗ್ರೆಸ್ ಕಮಿಟಿಗೆ ನೂಲುವ ರಾಟೆಗಳನ್ನು ತಯಾರಿಸಿಕೊಡುವ ಹೊಣೆ ಹೊತ್ತು, ರಳಕವಾಡಿಯಲ್ಲಿ, ನಾನಿದ್ದ 'ಸ್ವರಾಜ್ಯಾಶ್ರಮ'ದ ಪಕ್ಕದಲ್ಲಿಯೆ ಕಾರ್ಯಾಲಯ ತೆರೆದಿದ್ದ. ಬಡಿಗತನವನ್ನು ಶೀನಪ್ಪ ಚೆನ್ನಾಗಿ ಅರಿತಿದ್ದನೆಂಬುದು ನನಗೆ ಅಲ್ಲಿ ಗೊತ್ತಾಯಿತು. ಕೊರೆತ, ಕೊಯ್ತ, ಕೆತ್ತಿಗೆ ಎಲ್ಲ ಕೆಲಸವನ್ನೂ ತಾನೆ ಮಾಡುತ್ತಿದ್ದ ಜೊತೆಗೆ ದುಡಿಯಲು ೩-೪ ಜನ ಆಳುಗಳೂ ಇದ್ದರು ಈ ಕೆಲಸ ಮಾಡುತ್ತಲೆ ಶೀನಪ್ಪ ಟಿಳಕ ಮಹಾವಿದ್ಯಾಲಯದ ಪ್ರವೇಶ ಪರೀಕ್ಷೆಗಾಗಿ ಓದುತ್ತಿದ್ದ. ಪರೀಕ್ಷೆಗೆ ಕಟ್ಟಿ ಉತ್ತೀರ್ಣನೂ ಆದ. ಆ ಮೇಲೆ ಮುಂಬಯಿ-ಕಲಕತ್ತೆಗಳತ್ತ ಹೋದವನು, ೧೯೨೪ನೆಯ ಇಸ್ವಿಯ ಕೊನೆಯ ಭಾಗದಲ್ಲಿ- ಬೆಳಗಾಂವಿಯಲ್ಲಿ, ರಾಷ್ಟ್ರೀಯ ಸಭೆಯ ೩೯ನೆಯ ಅಧಿವೇಶನ ಸೇರಿಸುವ ಸಿದ್ಧತೆ ನಡೆದಾಗ ಮತ್ತೆ ಬೆಳಗಾಂವಿಗೆ ಬಂದುದನ್ನು ಕಂಡೆ ಆಗ ಶೀನಪ್ಪ ಬಂದುದು ಆಗಂತುಕನಾಗಿ ಅಲ್ಲ; ರಾಷ್ಟ್ರೀಯ ಮಹಾಸಭೆಯ ಅಲಂಕಾರ ವಿಭಾಗದಲ್ಲಿ ಒಬ್ಬ ಪ್ರಮುಖ ಕೆಲಸಗಾರನಾಗಿ. ಅಂದು ಶೀನಪ್ಪ ದುಡಿದುದು ಯಂತ್ರದಂತೆ; ಅವರೆ ಮಾಡಿ ಮುಗಿಸಿದ ಕೆಲಸ ಕನ್ನಡ ಕಲೆಯ ಜೀವದಿಂದ ತುಂಬಿದುದು. ಸಭಾಮಂಟಪದ ಮಹಾದ್ವಾರದ ಗೋಪುರದ ಶ್ರೇಯಸ್ಸಿಗೆ ಸಂಪೂರ್ಣವಾಗಿ ಶೀನಪ್ಪನ ಕಲಾದೃಷ್ಟಿಯೂ, ಕಾರ್ಯಕೌಶಲ್ಯವೂ, ಕನ್ನಡದ ಅಭಿಮಾನವೂ ಕಾರಣ. ಸ್ವಾಗತ ಮಂಡಲಿಯ ಕೊನೆಯ ಸಭೆಯೊಂದರಲ್ಲಿ, ಸ್ವಾಗತಾಧ್ಯಕ್ಷ ಗಂಗಾಧರರಾಯರು, ಶೀನಪ್ಪನ ಕಾರ್ಯಕೌಶಲ್ಯವನ್ನು ಮಾತು ಸಾಲದಷ್ಟು ಹೊಗಳಿದರು; ಸುವರ್ಣಪದಕವನ್ನು ಕೊಟ್ಟು ಸನ್ಮಾನ ಮಾಡಿದರು.

ಮುಂದೆ ೧೯೨೫ನೆಯ ಮೇ ತಿಂಗಳಲ್ಲಿ ಬೆಳಗಾಂವಿಯಲ್ಲಿ ಸೇರಿದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿಯೂ ಶೀನಪ್ಪನಿಂದ ನಮಗೆ ತುಂಬ ಸಹಕಾರ ದೊರೆಯಿತು.

× × × ×

ಮುಂಬಯಿಯಲ್ಲಿ ಶೀನಪ್ಪನ ಉದ್ಯಮ ಆರ್ಥಿಕದೃಷ್ಟಿಯಿಂದ ಸಾಕಷ್ಟು ಚೆನ್ನಾಗಿ ಸಾಗಿದ್ದಿತು. ಅಲ್ಲಿಯೆ ಇದ್ದರೆ ಈಗಿದ್ದುದಕ್ಕಿಂತ ಹೆಚ್ಚಾಗಿ ಆತನ ಸಾಂಪತ್ತಿಕ ಪರಿಸ್ಥಿತಿ ಮೇಲುಮಟ್ಟದ್ದಾಗಿರಬಹುದಾಗಿದ್ದಿತು. ಆದರೂ ಮುಂಬಯಿಯಲ್ಲಿ ನೆಲೆಗೊಳ್ಳಲು ಆತನ ಕನ್ನಡ ಪ್ರೀತಿ ಸಮ್ಮತಿಕೊಡಲಿಲ್ಲ; ಆದುದರಿಂದಲೆ ಆತನ ಕಾರ್ಯಾಲಯವು ಕನ್ನಡದ ಕೇಂದ್ರವಾದ ಧಾರವಾಡಕ್ಕೆ ಬಂದಿತು. ಮಾಳಮಡ್ಡಿಯಲ್ಲಿ 'ಶ್ರೀನಿವಾಸ ಕಂಪನಿ'ಯಾಗಿ ನಿಂತುಕೊಂಡಿತು. ಶೀನಪ್ಪ ಧಾರವಾಡಕ್ಕೆ ಬರುವುದಕ್ಕೆ ಮೊದಲು, ಕನ್ನಡದಲ್ಲಿ ಸಚಿತ್ರವಾಗಿ ಪುಸ್ತಕ-ಪತ್ರಿಕೆಗಳು ಹೊರಡುತ್ತಿರಲೆ ಇಲ್ಲವೆಂದು ಹೇಳಬಹುದು. ಹುಬ್ಬಳ್ಳಿಯಲ್ಲಿ ಹೊರಟ 'ಸಚಿತ್ರ ಭಾರತ'ವು, ಮೊದಲು ಒಂದೆರಡು ವರ್ಷ ಕೈಗಡ ತಂದ ಚಿತ್ರಗಳಿಂದ 'ಸಚಿತ್ರ'ವೆನಿಸಿಕೊಂಡಿತಾದರೂ, ಮುಂದದು ಅಶಕ್ಯವಾಗಲು 'ಸಚಿತ್ರ ಭಾರತ' ಎಂಬ ಹೆಸರಿನಿಂದ ಮಾತ್ರ ಹೊರಡತೊಡಗಿದ್ದಿತು. ಆದರೆ 'ಶ್ರೀನಿವಾಸ ಫೋಟೋದಾರ' ಅವರ ಸಾನಿಧ್ಯದಿಂದ 'ಜಯಕರ್ನಾಟಕ' ಸಚಿತ್ರವಾಗಿ ಹೊರಡಲು ಅನುಕೂಲವಾಯಿತು; 'ಜಯಂತಿ' ಚಿತ್ರಪೂರಿತವಾಗಿ ಹೊರಡಲು ಸಹಾಯವಾಯಿತು. 'ಸಂಯುಕ್ತ ಕರ್ನಾಟಕ' 'ಲೋಕಮತ', 'ತರುಣಕರ್ನಾಟಕ', 'ಕರ್ನಾಟಕ ಬಂಧು'ಗಳಿಗೆ ಸಾಂದರ್ಭಿಕ ಚಿತ್ರಗಳು ಕಾಲಕ್ಕೆ ಸರಿಯಾಗಿ ಸಿಕ್ಕಲು ಅವಕಾಶವಾಯಿತು. ಅದಲ್ಲದೆ ಕನ್ನಡ ಪುಸ್ತಕಗಳು ಆಕರ್ಷಕವಾದ ಮುಖಚಿತ್ರದಿಂದಲೂ, ಸುಂದರವಾದ ಸಂದರ್ಭಚಿತ್ರದಿಂದಲೂ ಕೂಡಿ ಪ್ರಕಟವಾಗಲು ಸಹಕಾರ ಸಿಕ್ಕಿತು. ಇನ್ನೊಂದು ವಿಶೇಷವೆಂದರೆ, ಶೀನಪ್ಪನ ಕೈವಾಡವಿರದೆ ಹೋಗಿದ್ದರೆ ಅನೇಕ ಔಷಧಿಯ—ಸುಗಂಧದೆಣ್ಣೆಯ—ಬೀಡಿಗಳ ಲೇಬಲುಗಳ ಚಿತ್ರದಲ್ಲಿ, ಕನ್ನಡಕ್ಕೆ ಸ್ಥಾನವಿಲ್ಲದೆ ಹೋಗಬಹುದಾಗಿತ್ತು. ಇವೆಲ್ಲ ಸಣ್ಣ ಮಾತೆಂದು ಹಲವರು ನಕ್ಕು ಬಿಡಬಹುದು; ಆದರೆ 'ಇಂತಹ ದೊಡ್ಡತನದಿಂದಲೆ ನಾವು ಸಣ್ಣವರಾದುದು' ಎಂಬ ಮಾತು ಶೀನಪ್ಪನ ಎದೆಯನ್ನು ನಿರಂತರವಾಗಿ ಮಿಡಿಯುತ್ತಿತ್ತು.

× × × ×

ವಿಜಯನಗರದ ೬೦೦ ವರ್ಷಗಳ ಮಹೋತ್ಸವದ ಕಾರ್ಯದಲ್ಲಿ ಮೊದಲಿನಿಂದ ಕೊನೆಯವರೆಗೂ ಶೀನಪ್ಪ ನಿಜವಾದ ಕಾರ್ಯಕರ್ತನಾಗಿ ದುಡಿದ. ಆಗ ಆತನ ಕಲಾಭಿಜ್ಞತೆ ಕನ್ನಡಿಗರಿಗೆ 'ಸಚಿತ್ರ ವಿಜಯನಗರ'ವನ್ನು ಕೊಟ್ಟಿತು. ಸಾಹಿತ್ಯಸಮ್ಮೇಳನಾಧ್ಯಕ್ಷರ ಚಿತ್ರಗಳುಳ್ಳ ಕ್ಯಾಲೆಂಡರುಗಳನ್ನು ಹೊರಡಿಸುತ್ತಿದ್ದುದೂ 'ಶ್ರೀನಿವಾಸ ಫೋಟೋದಾರ'ರ ಕನ್ನಡ ಪ್ರೀತಿಗೆ ಸಾಕ್ಷಿ. ೧೯೪೦ನೆಯ ಡಿಸೆಂಬರಿನಲ್ಲಿ ಧಾರವಾಡದಲ್ಲಿ ಸೇರಿದ ಕನ್ನಡ ಸಾಹಿತ್ಯಸಮ್ಮೇಳನದ ಮಂಟಪದ ಅಲಂಕಾರದ ಹೊಣೆಯೆಲ್ಲ ಶೀನಪ್ಪನ ತಲೆಯ ಮೇಲೆ ಇದ್ದಿತು. ಸಮ್ಮೇಳನ ಮುಗಿದ ಮೇಲೆ, ಕನ್ನಡದ ಕಾರ್ಯಕರ್ತರಿಗೆಲ್ಲ ಶೀನಪ್ಪ ಕೊಟ್ಟ ಆತಿಥ್ಯವೆಂದರೆ—ಅಂದು ಅಲ್ಲಿ ಇದ್ದವರು—ಎಂದೂ ಮರೆಯದಂತಹದು. ಚಿತ್ರಶಾಲೆಯ ಒಂದೊಂದು ಅಂಗವಲ್ಲಿಯೂ ಶೀನಪ್ಪನ ಸೌಂದರ್ಯದೃಷ್ಟಿಯ ಕೈಚಳಕ ಒಡೆದು ಕಾಣುತ್ತಿದ್ದಿತು.

ಮಾತಿನಲ್ಲಿ ಶೀನಪ್ಪ ಸ್ವಲ್ಪ ದುಡುಕನಾಗಿ ಕಾಣುತ್ತಿದ್ದ; ಆದರೆ ಅವನ ಕೃತಿ ಯಾರ ಮನವನ್ನೂ ನೋಯಿಸುವಂತಹದಲ್ಲ. ಕನ್ನಡದ ಕೆಲಸಗಾರರೆಂದರೆ ತೀರಿತು; ಏನೆಲ್ಲವನ್ನೂ ಮರೆತು ಶೀನಪ್ಪ ಅವರ ಒಡನಾಡಿಯಾಗಲು ಬಯಸುತ್ತಿದ್ದ. ಅವರನ್ನು ಆದರದಿಂದ ಮನೆಗೆ ಕರೆಯುತ್ತಿದ್ದ. ಸಿರಿವಂತಿಕೆಯ ಸ್ವಾಗತ ಕೊಡುತ್ತಿದ್ದ. ಶುಚಿಯಾದ–ರುಚಿಯಾದ ತಿಂಡಿ-ತಿನಿಸುಗಳಿಂದ ತಣಿಸುತ್ತಿದ್ದ. ಶೀನಪ್ಪನ ಮನೆಯ ಆತಿಥ್ಯ ಪಡೆಯದ ಕನ್ನಡ ಕಾರ್ಯಕರ್ತರೆ ಇಲ್ಲವೆಂದು ಹೇಳಿದರೆ ಅದು ಅತಿಶಯೋಕ್ತಿಯೆನಿಸುವಂತಿಲ್ಲ.

ಕರ್ನಾಟಕದ ದೃಷ್ಟಿಯಿಂದ ಫೋಟೋದಾರ ಶ್ರೀನಿವಾಸರಾಯರು ಬರಿ ಒಂದು ವ್ಯಕ್ತಿಯಾಗಿರಲಿಲ್ಲ; ಸಂಸ್ಥೆಯಾಗಿದ್ದರು. ಕನ್ನಡ ನಾಡಿನ ಉನ್ನತಿಗಾಗಿ ಹೊರಟ ಯಾವ ಸಂಸ್ಥೆಯಲ್ಲಿಯೂ ಫೋಟೋದಾರರ ಹೆಸರು ಇಲ್ಲದೆ ಇಲ್ಲ. ಇಂತಹ ಅಭಿಮಾನಿ ಜೀವಿ ಕರ್ನಾಟಕಕ್ಕೆ ಇಂದು ಇಲ್ಲವಾದುದು ತುಂಬಿ ಬರಲಾರದಂತಹ ಕೊರತೆ.

× × × ×

ಇದೇ ಫೇಬ್ರುವರಿ ತಿಂಗಳ ಮೊದಲನೆಯ ತಾರೀಖು; ಎಂದಿನಂತೆ ಬೆಳಗಿನ ೯॥ ಗಂಟೆಗೆ ಕಾರ್ಯಾಲಯಕ್ಕೆ ಬಂದೆ. ಕಾರ್ಯಾಲಯದಲ್ಲಿಯ ಕೆಲಸಗಾರರೊಬ್ಬರು ಹೇಳಿದರು:

"ಫೋಟೋದಾರ ಶೀನಪ್ಪನನ್ನು ನಿನ್ನೆ ಯಾರೋ ಹೊಡೆದಿದ್ದಾರಂತೆ!"

ನಾನು ಗಾಬರಿಯ ದನಿಯಲ್ಲಿ ಕೇಳಿದೆ:

"ಯಾರು, ಕಳ್ಳರೇನು?"

ಶ್ರೀಮದ್ ಭಗವದ್ಗೀತೆ

ಲೇಖಕರು: ಭಟ್ಟಾಚಾರ್ಯ ಶ್ರೀ. ಸಾತವಳೇಕರ

ಕನ್ನಡ ಅನುವಾದಕರು: ಶ್ರೀ. ಶಂ. ಬಾ. ಜೋಶಿ

ಇದು ಹಿಂದಿ, ಮರಾಠಿ, ಗುಜರಾತಿ, ಇಂಗ್ಲಿಷ್ ಭಾಷೆಗಳಲ್ಲಿ ಪ್ರಕಟವಾಗಿ ಲೋಕಪ್ರಿಯವಾಗಿದೆ. ಇಷ್ಟು ವಿಸ್ತೃತವಾದ ಟೀಕೆ ಇನ್ನೂ ಎಲ್ಲಿಯೂ ಪ್ರಸಿದ್ಧವಾಗಿಲ್ಲ. ಅನ್ವಯ, ಅರ್ಥ ಸಹಿತವಾಗಿದೆ. ಇದೀಗ ಕನ್ನಡದಲ್ಲಿಯೂ ಪ್ರಕಟವಾಗುತ್ತಲಿದೆ. ಪ್ರತಿ ಅಧ್ಯಾಯಕ್ಕೆ ೧ ರೂ. ಮುಂಗಡ; ೧೮ ಅಧ್ಯಾಯಗಳಿಗೆ ೧೫ ರೂ.

ಅಂಚೆಯ ವೆಚ್ಚ ಬೇರೆ.

ಸರಸ್ವತೀ ನಿಲಯ, ಧಾರವಾಡ.

" ಕಳ್ಳರಲ್ಲವಂತೆ, ಅವರ ಮನೆಯಲ್ಲಿ ಜೀತದಾಳಾಗಿದ್ದವನೇ ಹೊಡೆದಿದ್ದಾನಂತೆ....ಕೊಡಲಿಯಿಂದ! ಹಾಸ್ಪಿಟಲಿಗೆ ತಂದಿದ್ದಾರಂತೆ!"

ನನ್ನೆದೆ ಗಡಗಡನೆ ನಡುಗಿತು; ಗಾಬರಿಯ ಧ್ವನಿಯಲ್ಲಿಯೆ ಕೇಳಿದೆ:

" ಏಟು ಬಹಳ ಬಿದ್ದಿದೆಯೇನು ? "

ನಾನು ಈ ಮಾತನ್ನು ಕೇಳುತ್ತಿರುವಾಗಲೆ ಶ್ರೋತದಾರರ ನೆರೆಮನೆಯ ಹುಡುಗನೊಬ್ಬ—ಕೊಲೆಯನ್ನು ಕಂಡವನು—ಬಂದು ಹೇಳತೊಡಗಿದ:

" ಶ್ರೋತದಾರ ಶೀನಪ್ಪನ್ನ ಅವರ ಮನ್ಯಾಗಿನ ಆಳೇ ಕೊಡ್ಲಿಯಿಂದ ಕಡಿದು ಕೊಂದು ಬಿಟ್ಟ್ನ......"

ನನ್ನೆದೆಯಲ್ಲಿ ಬರ್ಫ ಹಾಕಿ ಜಡಿದಂತಾಯಿತು. ಒಂದೆರಡು ನಿಮಿಷ ದಿಙ್ಮೂಢನಾದೆ. ಆಮೇಲೆ ಸ್ವಲ್ಪ ಚೇತನವುಂಟಾದಂತಾಗಿ, ಒಂದೊಂದಾಗಿ ಎಲ್ಲ ಸಂಗತಿಯನ್ನೂ ಕೇಳಿಕೊಂಡೆ:

' ಮನೆಯಲ್ಲಿ ಪ್ರಸ್ಥದ ಸವಿಯೂಟ....ಮನೆತುಂಬ ಆನಂದದ ನಲಿದಾಟ....ಅನೇಕ ಅತಿಥಿಗಳು ಬಂದು ಉಂಡು ಹೋಗಿದ್ದರು...ಎರಡನೆಯ ಪಙ್ಕ್ತಿ ಊಟಕ್ಕೆ ಕುಳಿತವರು ಎದ್ದು, ಪಡಸಾಲೆಯಲ್ಲಿ ವಿನೋದವಾಗಿ ಎಲೆಯಡಿಕೆ ಮೆಲ್ಲುತ್ತ ಹರಟುತ್ತ ಕುಳಿತಿದ್ದರು....ಎರಡು ಪಙ್ಕ್ತಿಗಳಿಗೂ ಶೀನಪ್ಪ ಸ್ವತಃ ಬಡಿಸಿದ್ದಾನೆ; ತಾನಿನ್ನೂ ಉಂಡಿರಲಿಲ್ಲ.... ಆಳಿಗೆ ಊಟಕ್ಕೆ ಹಾಕಲೋ ಹಾಕಿಸಲೋ ಆತನ ಕೋಣೆಯೊಳಕ್ಕೆ ಹೋದನಂತೆ....ಆಳಿಗೆ ಹುಚ್ಚೊ, ಸೇಡಿನ ಬುದ್ಧಿಯೊ ಯಾವುದರ ಕಲ್ಪನೆಯೂ ಅವನಿಗಿಲ್ಲ....ಉಲ್ಲಾಸದಿಂದ ಮೈ ಮರೆತಿರುವಾಗಲೆ ಕುತ್ತಿಗೆಗೆ ಕೊಡಲಿಯೇಟು ಬಿತ್ತು....ಮೊದಲನೆಯ ಏಟಿಗೇ ಆತನ ಪ್ರಾಣ ಹಾರಿರಬಹುದು!.......'

ದೇಹ-ಹೃದಯ-ಮನಸ್ಸು ಎಲ್ಲವೂ ನಡುಗುತ್ತಿರುವಾಗಲೇ, ಹೇಗೋ ಎದ್ದು ಸಂಗಡಿಗರೊಂದಿಗೆ ಹಾಸ್ಪಿಟಲಿಗೆ ಹೊರಟೆ. ಹೋಗಿ ನೋಡಿದೆ; ಕಲಾಭಿಜ್ಞ—ಕನ್ನಡದ ಕಡುಗಲಿ - ಶೀನಪ್ಪನ ರಕ್ತಮಯ ದೇಹ, ಆಸ್ಪತ್ರೆಯ ಟೇಬಲಿನ ಮೇಲೆ ಬಿದ್ದುಕೊಂಡಿದ್ದಿತು. 'ಅಯ್ಯೊ, ಎಂತಹನಿಗೆ ಎಂತಹ ಮರಣ! ' ಎಂದು ಜೀವ ಒಳಗೊಳಗೆ ತಳಮಳಿಸಿ ಅಳತೊಡಗಿತು.

× × × ×

ಆಯಿತು, ಶೀನಪ್ಪ ನಮ್ಮನ್ನು ಅಗಲಿ ನಡೆದ. ಆತನ ಕುಟುಂಬದ ಜನರಿಗಾದ ವ್ಯಥೆ ಅಷ್ಟಿಷ್ಟಲ್ಲ. ಮನೆಯಲ್ಲಿ ಚಿಕ್ಕ ಚಿಕ್ಕ ಏಳು ಹೆಣ್ಣು ಮಕ್ಕಳು; ೧೦-೧೨ ವರ್ಷದ ಒಬ್ಬನೆ ಒಬ್ಬ ಗಂಡುಮಗ; ವಿಧವೆಯಾದ ಈ ಮಕ್ಕಳ ತಾಯಿ! ಎಲ್ಲರನ್ನೂ ಕಲಾವಿದನಾದ ಶೀನಪ್ಪ ಹೂವಿನಂತೆ ಸಾಕಿ ಸಲಹಿದ್ದ. ಎಂದೂ ದುಃಖವನ್ನೆ ಕಂಡರಿಯದ ಈ ಕುಟುಂಬ, ಶೀನಪ್ಪನ ಮರಣದಿಂದ ಅಪಾರವಾದ ಶೋಕಸಾಗರದಲ್ಲಿಯೆ ಮುಳುಗಿದೆ. ಶೀನಪ್ಪನ ಮಿತ್ರರೂ ಅವನ ಅಗಲಿಕೆಯ ಕೊರತೆಯ ದುಃಖವನ್ನು ಇನ್ನೂ ವರ್ಣಿಸಲೂ ಮರೆಯಲಾರರು. ದಿವಂಗತ ಶ್ರೋತದಾರರಿಗೆ ಸದ್ಗತಿ ದೊರೆಯಲೆಂದು ಹಾರಯಿಸುವುದು ಒಂದು ಸಂಪ್ರದಾಯ; ಆದರೆ ಶೀನಪ್ಪನ ಇರುವಿಕೆಯನ್ನು ನೋಡಿದವರಿಗೆ ಹೀಗೆ ಎನಿಸುವುದು ಸ್ವಾಭಾವಿಕ: ' ಕನ್ನಡನಾಡು ಉನ್ನತಿಪಥದಲ್ಲಿ ನಡೆದು ಸ್ವಯಂಪೂರ್ಣವಾಗಿ ಬದುಕುವ ವರೆಗೆ, ಶೀನಪ್ಪನ ಜೀವಕ್ಕೆ ತೃಪ್ತಿಯಿಲ್ಲ, ಶಾಂತಿ-ಸಮಾಧಾನಗಳಿಲ್ಲ! '

(೨೬೪ನೆಯ ಪುಟದಿಂದ ಮುಂದುವರಿದುದು.)

ಅಹುದು. ಹೀಗೆ ಹುಚ್ಚು ಒಂದು ಲಹರಿಯೆಂದು ಸಾಮಾನ್ಯವಾಗಿ ಬುದ್ಧಿವಂತರು ತಿಳಿದರೂ, ಅದನ್ನು ತಕ್ಕ ಪ್ರಮಾಣದಲ್ಲಿ ಅಳವಡಿಸಿಕೊಳ್ಳದಿದ್ದರೆ ಜೀವನವು ಸಾಗುವುದೇ ದುಸ್ತರವೆನಿಸೀತು. ತನ್ಮಯನಾಗಿರುವನೆಂದು ಒಬ್ಬನು ಹುಚ್ಚನೆನಿಸಿಕೊಂಡರೆ, ಅವನು ಅದರ ಮಿತಿಯನ್ನರಿತಿಲ್ಲವೆಂದು ಹೇಳಬೇಕು. ಹಾಗೆ ಯೋಚಿಸಿದಲ್ಲಿ, ಕರ್ಮದಲ್ಲಿ ಕೌಶಲ ತೋರಬೇಕೆನ್ನುವವನು ಹಿಡಿದ ಕೆಲಸದಲ್ಲಿ ತನ್ಮಯನಾಗಲೇ ಬೇಕು, ಸಮರಸವಾಗಲೇ ಬೇಕು. ಅದೇ ಯೋಗ. ತದ್ವಿರುದ್ಧವಾಗಿ ಅದೇ ತನ್ಮಯತೆಯ ಹುಚ್ಚು ಕೆಲಮಟ್ಟಿಗಾದರೂ ವ್ಯಕ್ತಿಯಲ್ಲಿ ಕಂಡುಬಾರದಿದ್ದರೆ, ಮಾಡುವ ಕೆಲಸಕ್ಕೆ ತೊಂದರೆ—ಇದ್ದ ಸಮಾಜಕ್ಕೆ ಅಸ್ಪೃಶ್ಯತೆ! ಸ್ವಲ್ಪ ವಿಚಾರಿಸಿದರೆ ಪ್ರಸಿದ್ಧ ಸಮಾಜ ಸುಧಾರಕರಾದ ಸಾಕ್ರೆಟೀಸ್, ಈಶ್ವರಚಂದ್ರ ವಿದ್ಯಾಸಾಗರ, ರಾಜಾರಾಮಮೋಹನರಾಯ, ಅಕ್ಕ ಮಹಾದೇವಿಯವರು-ತಮ್ಮನ್ನೇ ತಾವು ಮರೆತು ಮನಸ್ಸಿನ ಏಕಾಗ್ರತೆಯಲ್ಲಿ ಲೀನರಾದರೂ, ಕೊನೆಗೆ ಲೋಕಕಲ್ಯಾಣಕ್ಕಾಗಿ ಹೋರಾಡಬೇಕೆಂಬ ಉನ್ನತ ಉದ್ದೇಶವಿಟ್ಟುಕೊಂಡು, ಅದರಂತೆ ಆತ್ಮಾರ್ಪಣೆ ಮಾಡಿದುದು ಅವರ ಹೆಚ್ಚಿನ ಹವ್ಯಾಸವೇ ಹೊರತು ಹುಚ್ಚು ಹಾರಯಿಕೆಯಲ್ಲ. ಆದರೆ ಅವರನ್ನೂ ಹುಚ್ಚರೆಂದು ಹೇಳುವವರು ಸಮಾಜದಲ್ಲಿ ದೊರೆಯದಿರಲಿಕ್ಕಿಲ್ಲ.

ಇಂತು ಸಮಾಜದ ಪ್ರಶಾಂತವಾದ ಹಾಗೂ ಪವಿತ್ರ ವಾತಾವರಣದಲ್ಲಿಯೇ ಬೆಳೆದು, ಹಿರಿಮೆ ಸಾಧಿಸಿ, ಕೊನೆಗೆ ಅವನ್ನೇ ಮರೆತು ಸ್ವಾರ್ಥಲೋಲುಪನಾಗುವುದೆಂದರೆ– ಸಿಜ್ಞಾಣಿಕೆಯ ಕೊನೆಯ ಹಲ್ಲನ್ನು ಮುಟ್ಟಿರುವೆನಲ್ಲಾ ಎಂಬ ಉನ್ಮಾದದಲ್ಲಿ ಅವನ್ನೇ ಒದ್ದು ಬಿಟ್ಟಂತೆ! ಹಾನಿ ಯಾರಿಗೆ? ತನಗೊ ಅಥವಾ ತನ್ನನ್ನಾಶ್ರಯಿಸಿದ ಸಮಾಜಕ್ಕೊ? ಮಹಾಪುರುಷರ ತನ್ಮಯತೆ ಹೀಗೆ ಪರಿಣಾಮದಲ್ಲಿ ಸುಖ ತರುವುದೆಂದಮೇಲೆ, ಅದಕ್ಕೆ ಹುಚ್ಚೆನ್ನಲಾಗುವುದೇ? ಈ ಬಗೆಯಾಗಿ ಯೋಚಿಸಿದಾಗ, ಹುಚ್ಚಿನ ವೈಶಿಷ್ಟ್ಯವು ತನ್ಮಯತೆಯಲ್ಲಿ ಇದೆಯಾದರೂ, ಅದರಹ ನಡವರಿತು ಸಮಾಜದಲ್ಲಿಯ ವ್ಯಕ್ತಿಗಳೆಲ್ಲರೂ ವ್ಯವಹರಿಸತೊಡಗಿದರೆ, ಈ ಅಪೂರ್ವ ಹುಚ್ಚಿನಿಂದಲೇ ಜಗತ್ತು ಹುಚ್ಚರ ಆಸ್ಪತ್ರೆಯಾಗದೇ ಸುರಲೋಕವೇ ಆದೀತು! ನಂದನವನವಾಗಿಯೋ ಪರಿಣಮಿಸೀತು! ಇದೀಗ ಹುಚ್ಚಿನ ಆವಶ್ಯಕತೆ, ವ್ಯಾಪಕತೆ, ರಸಿಕತೆ!

ಚೆಲುವು ಹಿರಿಯದೊ, ಹೃದಯದೊಲವು ಹಿರಿಯದೊ ?

(ಇನ್ನೊಂದು ಅಭಿಪ್ರಾಯ)

ಶ್ರೀ. ಸಿ. ಡಿ. ಘಾರಗಿ ಕರ್ನಾಟಕ ಕಾಲೇಜ್, ಧಾರವಾಡ

'ಚೆಲುವಿನಿಂದ ಒಲವೊ, ಒಲವಿನಿಂದ ಚೆಲುವೊ ?' ಎಂಬ ಸಮಸ್ಯೆಯು ನಮ್ಮ ನಿತ್ಯಜೀವನದಲ್ಲಿ ಆಗಾಗ ಒದಗುತ್ತಿರುವುದು; ಎಂತಲೇ ಚೆಲುವನ್ನು ಕಾಣುವ, ಒಲವನ್ನು ಅರಿಯುವ ರೀತಿಯನ್ನು ಸ್ವಲ್ಪ ವಿಚಾರಿಸುವುದು ಅವಶ್ಯವಿದೆ. ಚೆಲುವೆಂದರೆ ಒರ್ವ ವ್ಯಕ್ತಿಯು ಎರಡನೆಯ ವ್ಯಕ್ತಿಯಲ್ಲಿ ಅಥವಾ ವಸ್ತುವಿನಲ್ಲಿ ಕಾಣುವ ವ್ಯಕ್ತ ಅಥವಾ ಅವ್ಯಕ್ತ ಗುಣವು; ಒಲವು ಎಂಬುದು ವ್ಯಕ್ತಿಯ ಹೃದಯದಿಂದ ಹೊರಹೊಮ್ಮುವ ಚೆಲುವು. ಪ್ರೀತಿ, ಸ್ನೇಹ, ಆದರ, ವಿಶ್ವಾಸ ತ್ಯಾಗ ಇವುಗಳ ಘಟ್ಟಿಯೇ ಒಲವು ಚೆಲುವು– ಒಲವುಗಳನ್ನು ಅರಿಯಬೇಕಾಗಿದ್ದರೆ, ತಾವು ಚೆಲುವಾದ ವಸ್ತುವಾಗಿದ್ದರೆ ಒಲಿದವರ ದೃಷ್ಟಿಯಿಂದ—ತಮಗೆ ಒಂದು ವಸ್ತು ಚೆಲುವಾಗಿ ಕಂಡಿದ್ದರೆ ತಮ್ಮ ದೃಷ್ಟಿಯಿಂದ—ನೋಡಬೇಕು. ಕೇವಲ ಮೂರನೆಯ ವ್ಯಕ್ತಿಯಾಗಿ ಚೆಲುವು-ಒಲವುಗಳನ್ನು ಅಳೆದರೆ, ವಿಶಾಲವಾದ ಬಾವಿಯನ್ನು ಕಂಡು ಮೇಲಿನಿಂದಲೆ ಅದರ ಆಳವನ್ನು ಹೇಳಿದಂತಾಗುವುದು.

'ಆತ್ಮದ ಚೆಲುವಿನ ಬಯಕೆಯನ್ನು ತಣಿಸುವುದಕ್ಕೆಂದೇ ಈ ಜಗವಿದೆ. ಈ ಪ್ರಸಂಗದಲ್ಲಿ ಆತ್ಮದಷ್ಟು ನೀರಡಿಸಿದ ವಸ್ತು ಬೇರೊಂದಿಲ್ಲ; ಅಲ್ಲದೆ ಆತ್ಮವನ್ನು ಬಿಟ್ಟರೆ ಸೌಂದರ್ಯವು ಅಷ್ಟೊಂದು ಆತುರತೆಯಿಂದ ಅಂಟಿಕೊಳ್ಳುವ ಬೇರೊಂದು ವಸ್ತುವಿಲ್ಲ!' ಎಂದು **ಮೆಟರ್‌ಲಿಂಕ**ರು ಪ್ರತಿಪಾದಿಸಿರುವರು ಈ ಮಹನಿಯರ ಮಾತಿನಲ್ಲಿರುವ ಆತ್ಮದ ಅರ್ಥವನ್ನು ಉದಾಹರಿಸಬೇಕಾಗಿದೆ: ಆತ್ಮವು ಚೆಲುವಿನಂತೆ ದೃಷ್ಟಿಗೆ ವಿಷಯವಾಗುವ ವಸ್ತುವಲ್ಲ. ಇದೇ ಒಲವಿನ ಆಗರವು. ಆತ್ಮ ಮತ್ತು ಸೌಂದರ್ಯಗಳನ್ನು ಕೂಡಿಸುವ ಶಕ್ತಿಯೆ ಒಲವು. ಇದೇ ಆತ್ಮೀಯತೆಯ ಮೂಲವು. ಮಾನವನು ಕಾರುಣ್ಯಮಯ ಜೀವಿ. ಆತನ ಆತ್ಮದಿಂದ ಒಲವು ಹರಿಯುತ್ತಲಿರುವುದು ಈ ಒಲವು ಚಂದ್ರನ ಬೆಳುದಿಂಗಳಂತೆ ವಸ್ತುಗಳ ಮೇಲೆ ಹರಡುವುದರಿಂದ, ಅವು ಚೆಲುವಾಗಿ ಕಾಣುವವು. ಆ ಚೆಲುವನ್ನು ಆತ್ಮವು ಅನುಭವಿಸುವುದು, ತೃಪ್ತಿಪಡುವುದು.

ವಸ್ತುಗಳಲ್ಲಿ ಚೆಲುವಿಕೆಯು ಹುಟ್ಟುಗುಣವಾಗಿದ್ದರೆ, ಪ್ರತಿಯೊಬ್ಬನಿಗೂ ಆ ವಸ್ತುವು ಅಷ್ಟೇ ಚೆಲುವಾಗಿ ತೋರಬಹುದಾಗಿತ್ತು. ಒಂದು ದಿನ ನನ್ನ ಗೆಳೆಯನೂ ನಾನೂ ತಿರುಗಾಡಲಿಕ್ಕೆ ಹೋಗಿದ್ದೆವು ಸಮಯವು ತುಂಬ ಚೆಲುವಾಗಿ ಇದ್ದಿತು. ನಾನು ಆ ಚೆಲುವನ್ನು ಅನುಭವಿಸುತ್ತ ಕುಳಿತಿರಲು, ನನ್ನ ಮಿತ್ರನು 'ನಡೆಯಪ್ಪಾ, ಕತ್ತಲಾಗತಾ ಬಂತು' ಎಂದ. ಅದಕ್ಕೆ 'ಏನಪ್ಪಾ, ಇಂಥ ಸೊಗಸನ್ನು ಅನುಭವಿಸಲು ಇಷ್ಟವಿಲ್ಲವೆ ?' ಎಂದು ನಾನು ಕೇಳಿದೆ. 'ಇದರಲ್ಲೇನಿದೆ? ಕೇವಲ ಹಸಿರು ಹೊಲ, ನೀಲಾಕಾಶ! ನಿತ್ಯ ಕಾಣುವೆನು!' ಎಂದು ನನ್ನನ್ನು ಕರೆದನು. ನೋಡಿ, ಚೆಲುವಿನಿಂದ ಒಲವು ಹುಟ್ಟುತ್ತಿದ್ದರೆ, ನನ್ನ ಮಿತ್ರನಲ್ಲಿ ಸೃಷ್ಟಿಯ ಸೊಬಗು ಅದೇಕೆ ಒಲವನ್ನು ಹುಟ್ಟಿಸಲಿಲ್ಲ? ನನ್ನ ಆತನ ಸೊಬಗನ್ನು ನೋಡುವ ದೃಷ್ಟಿಕೋನವು ಭಿನ್ನವಿತ್ತಲ್ಲವೆ? ಈ ದೃಷ್ಟಿಯೇ ಒಲವು. ಈ ಒಲವು ಇರದಿದ್ದರೆ ಎಷ್ಟು ಚೆಲುವು ಇದ್ದರೇನು ? ಈ ಒಲವಿದ್ದರೆ ತಾನು ಒಲಿದ ವಸ್ತು ಎಷ್ಟು ಕುರೂಪಿಯಾಗಿದ್ದರೂ ಚೆಲುವಾಗಿ ಕಾಣುವುದರಲ್ಲಿ ಸಂಶಯವಿಲ್ಲ. ಚೆಲುವಿನಿಂದ ಒಲವಲ್ಲ, ಒಲವಿನಿಂದ ಚೆಲುವು!

ತಾಯಿ, ಮಗು ಹುಟ್ಟುವ ಪೂರ್ವದಲ್ಲಿಯೆ "ನಾನು ಬಂಗಾರದಂಥ ಮಗುವನ್ನು ಹೆರುವೆನು, ಅದಕ್ಕೆ ಮುದ್ದಾದ ಹೆಸರಿಡುವೆನು ...." ಎಂದು ಏನೇನೋ ತಾಯ್ತನದ ಒಲವಿನ ಮೂಲಕ ಎಣಿಕೆ ಹಾಕಿಡುವಳು; ಅದರೆ ದುರ್ದೈವದ ಮೂಲಕ ಒಂದು ಕುರೂಪಿಯಾದ ಮಗು ಹುಟ್ಟಿದರೆ, ತಾಯಿ ಅದನ್ನು ಪೋಷಿಸುವುದಿಲ್ಲವೆ ? "ಹೆತ್ತವರಿಗೆ ಹೆಗ್ಗಣ ಮುದ್ದು" ಎಂಬ ಗಾದೆಯಂತೆ ತಾಯಿಗೆ ಆ ಮಗುವು ಕೂಡ ಆಕೆಯ ಒಲವಿನ ಮೂಲಕ ಮುದ್ದಾಗಿ ತೋರುವುದು. ಅದೇ ಮಗುವು ಮೃತಪಟ್ಟಾಗ ತಾಯಿ 'ನನ್ನ ಭಂಗಾರದ ಗಿಳಿಯೇ, ನನ್ನ ಜೀವನಾಧಾರವೆ...........' ಎಂದು ಅಳುವುದಿಲ್ಲವೇ ? ನಾವು ಮಾತ್ರ 'ಕುರೂಪಿ ಸತ್ತಿತು, ಪಾಪ!' ಎನ್ನುವೆವು. ನಮಗೇಕೆ, ಭಂಗಾರದ ಗಿಳಿಯಾಗಿ ತೋರಲಿಲ್ಲ? ತಾಯ್ತನದ ಒಲವು ಮಗುವಿಗೆ ಬಂಗಾರದಷ್ಟು ಬೆಲೆ ಕೊಟ್ಟಿತಲ್ಲವೆ ? ಎಂದ ಬಳಿಕ ವಸ್ತುಗಳಿಗಿರುವ ಚೆಲುವಿಕೆಯು, ನಮ್ಮ ಒಲವು ಕೊಟ್ಟ ಬೆಲೆಯು ಮಾತ್ರ. ವಸ್ತುಗಳು ಚೆಲುವಾಗಿ ಕಾಣಬೇಕಾದರೆ, ಅವುಗಳಿಗೆ ಬೆಲೆಬೇಕು, ಆ ಬೆಲೆಯು ನಮ್ಮ ಒಲವಿನಿಂದ ಮಾತ್ರ ಬರುವುದು.

ಮಹಾತ್ಮಾ ಗಾಂಧಿಯವರ ತ್ಯಾಗದ ಮೂಲಕ ಅವರು ನಮಗೆ ಚೆಲುವಾಗಿ ಕಂಡರಲ್ಲವೆ? ತ್ಯಾಗವು ಚೆಲುವಿನ ಗುಣವಾಗಿದ್ದರೆ, ಜರ್ಮನ್ ರಾಷ್ಟ್ರಕ್ಕೋಸ್ಕರ ತ್ಯಾಗಮಾಡುತ್ತಿರುವ ಹಿಟ್ಲರನ ನಮಗೆ ಯಾಕೆ ಚೆಲುವಾಗಿ ತೋರುವುದಿಲ್ಲ? ನಾವು ಮಹಾತ್ಮರನ್ನು ದೇವರೆಂದು ಭಾವಿಸುವಂತೆ, ಜರ್ಮನ್‌ರಾಷ್ಟ್ರವು ಆತನನ್ನು ದೇವರೆಂದು ಭಾವಿಸುತ್ತಿರುವುದೆಂಬದನ್ನು ಮರೆಯಬಾರದು 'ನನ್ನದು' 'ನಮ್ಮದು' ಎಂಬ ಭಾವನೆಯ ಮೂಲಕ ಚೆಲುವಾಗಿದ್ದರೆ ಅದು ಚೆಲುವಲ್ಲ: ನನ್ನದೆಂಬುದರ ಮೂಲಕ ಹುಟ್ಟಿದ ಒಂದು ಮನೋಭ್ರಾಂತಿ.' ಇನ್ನು ರಾಮಾಯಣದಲ್ಲಿಯ ದೃಷ್ಟಾಂತಗಳನ್ನು ವಿಚಾರಿಸೋಣ. ರಾಮನು ತಂದೆಯ ಮಾತನ್ನು ಪಾಲಿಸುವುದರಲ್ಲಿ ಚೆಲುವನ್ನು ಕಂಡಿರಲ್ಲವೆ? ಈ ಚೆಲುವನ್ನು ನಮಗೆ ಕೊಡಲು ಕಾರಣೀಭೂತವಾದ ಅಂಶವನ್ನು ತಿಳಿಯುವುದು ಅವಶ್ಯವಿದೆ. ತಾನು ಜನರಿಗೆ ಚೆಲುವಾಗಿ ಕಾಣಬೇಕು ಎಂದು ಆತ ರಾಜ್ಯವನ್ನು ತ್ಯಜಿಸಲಿಲ್ಲ ಮಾನವತೆಯಿಂದ ರಾಮನನ್ನು ಅತಿಮಾನವತನಕ್ಕೆ ಏರಿಸಿದ್ದುದು ತಂದೆಯಲ್ಲಿಯ ರಾಮನ ಒಲವು. ಈ ಒಲವಿಲ್ಲದಿದ್ದರೆ, ತಂದೆಯ ಮಾತನ್ನುವನ್ನು ಪಾಲಿಸುತ್ತಿದ್ದನೆ? ಅಂತಹ ರಾಮನು ಚೆಲುವಾಗಿ ತೋರುತ್ತಿದ್ದನೆ? ಭರತನು ರಾಮನಲ್ಲಿ ಒಲವಿಟ್ಟಿದ್ದನು; ಕುಂಭಕರ್ಣನೂ ರಾವಣನಲ್ಲಿ ಒಲವಿಟ್ಟಿದ್ದನೆಂತಲೇ ರಾವಣನಲ್ಲಿ ಚೆಲುವನ್ನು

ಕಂಡನು. ಈ ಭ್ರಾತೃಭಾವನೆಯ ಒಲವಿನ ಮೂಲಕ ಭರತನು ಭೋಗವನ್ನು ಧಿಕ್ಕರಿಸಿದನು; ಕುಂಭಕರ್ಣನು ಪ್ರಾಣವನ್ನು ನಿವೇದಿಸಿದನು. ನಮ್ಮ ದೃಷ್ಟಿಯಿಂದ ಆ ಒಲವು ದೈವಿಕವಾಗಿರಬಹುದು, ಅಥವಾ ಪೈಶಾಚಿವಾಗಿರಬಹುದು; ಅವರವರ ದೃಷ್ಟಿಯಿಂದ ಅದು ಒಲವು, ಕೇವಲ ಒಲವು! ಅದರಲ್ಲಿ ಭೇದವಿಲ್ಲ!

ಇನ್ನು ನಮ್ಮಾಕೆಯ ಮಾತು: 'ನಾನು ನಿಮ್ಮಾಕೆ' ಎಂದ ಮಾತ್ರಕ್ಕೆ ಕೇವಲ ಅದರಂತೆ ನಟಿಸುವುದರಿಂದ—ನಾನು ಬಾಳಲಾರೆನು. ಆ ಮಾತಿನ ಹಿಂದೆ ಒಲವಿನ ಸುಳಿಗಾಳಿ ಸುಳಿಯುತ್ತಿರಬೇಕಲ್ಲವೆ? ಒಲವು ತೋರಿಸಲಿಕ್ಕೆ ಬಾರದ್ದರಿಂದ, ಮೂಕನು ಕೈಸನ್ನೆಯಿಂದ ತನ್ನ ಭಾವನೆಗಳನ್ನು ತಿಳುಹುವಂತೆ, ನಮ್ಮಾಕೆಯು 'ನಾನು ನಿನ್ನವಳು' 'ನಾನು ನಿನಗಾಗಿ' ಎಂದು ನುಡಿಯುವಳು. ಆಕೆಯು ನನ್ನನ್ನು ಒಲಿದಿರುವಳು; ಆ ಮೂಲಕ ಚೆಲುವನ್ನು ಕಂಡಿರುವಳು. ಆಕೆಯ ನಡೆ-ನುಡಿಯು ಅದರ ಕುರುಹು.

ಒರ್ವ ತರುಣಿಯಲ್ಲಿ ಯಾವುದೋ ಒಂದು ಗುಣದ ಮೂಲಕ ಚೆಲುವನ್ನು ಕಂಡು ನೀವು ಒಲಿದಿದ್ದೀರೆಂದು ತಿಳಿಯಿರಿ! ನಿಮ್ಮ ಒಲುಮೆಯನ್ನು ತೋರಿ 'ನೀನು ನನ್ನವಳಾಗು' ಎಂದು ಕೇಳಿದಾಗ, 'ಆಗದು' ಎಂಬ ಉತ್ತರ ಬಂದರೆ, ಮುಂದೆ ಆಕೆಯು ಚೆಲುವೆಯೆಂದು ಒಂದು ಸಲವಾದರೂ ನುಡಿಯುವಿರಾ? ಅದೇ ಆ ಸಂದರ್ಶನವು ಒಲವಿನ ತಳಹದಿಯ ಮೇಲೆ ಆಗಿದ್ದರೆ, ಆಕೆಯ ರೂಪವನ್ನು ಲಕ್ಷ್ಯಿಸದೆ ಚೆಲುವನ್ನು ಕಾಣಲಿಕ್ಕಾಗುವುದಿಲ್ಲವೆ?

ಒಲವು ಒಲವಿಗಾಗಿ, ಚೆಲುವಿಗಾಗಿಯಲ್ಲ! ಒಲಿದ ಹೃದಯಗಳು ಚೆಲುವನ್ನು ಬಯಸುವುದಿಲ್ಲ. ಒಲವು ಒಲವು ಕೂಡಿದಾಗ ಚೆಲುವು-ಅನಪೇಕ್ಷಿತವಾಗಿ-ಬೆಳೆಯುವುದು.

'ಒಲವಿನಿಂದಲೇ ಜನರು ಬದುಕುವರೆ?' ಎಂದು ಒಲವಿನ ಮರ್ಮವನ್ನು ಅರಿಯದ ಜನರು ಕೇಳಬಹುದು. ಅಹುದು, ಬದುಕುವರು! ಈಗ ನನ್ನೊಲವಿನ ಒರ್ವ ಗೆಳೆಯರಿರುವರು. ಅವರ ನನ್ನ ಪೂರ್ವ ಪರಿಚಯದಲ್ಲಿ ಕೂಡಿ ಕಾಲ ಕಳೆದೆವು; ಕಷ್ಟ-ಸುಖಗಳಲ್ಲಿ ಭಾಗಿಗಳಾದೆವು. ನನ್ನ ಗೆಳೆಯರು 'ನಿನ್ನೊಲವಿನ' ಎಂದು ಕೇವಲ ನುಡಿಯರು. ಅವರು ನನಗೆ ಬೇಕಾಗುವ ಸಕಲ ವಸ್ತುಗಳನ್ನೂ ಒದಗಿಸಿಕೊಟ್ಟು, ತಮ್ಮ ಒಲವನ್ನು ತೋರಿಸುತ್ತಲಿರುವರು. ಆ ಮೂಲಕ ಎರಡನೆಯವರಿಗೆ ಕೇವಲ ಒರ್ವ ವ್ಯಕ್ತಿಯಂತಿರುವ ನನ್ನ ಗೆಳೆಯರು, ನನಗೆ 'ಚೆಲುವಾಗಿ' ತೋರುವರು. ನಾವು ಎರಡನೆಯವರ ಅಭಿಪ್ರಾಯಕ್ಕೆ ಲಕ್ಷ್ಯಕೊಡುವುದಿಲ್ಲ. ಹೀಗೆ ಮಾಡದಿದ್ದರೆ ಅವರಾಡಿದ 'ಒಲವಿನ' ಎಂಬ ನುಡಿಯು ಕೇವಲ ಅಕ್ಷರಗಳ ಸಂಕಲನವಲ್ಲದೇ ಮತ್ತೇನು? ಆ ಒಲವಿನ ಮೂಲಕ ಅವರು ನಾನು ಕೊರತೆಯಲ್ಲಿರುವುದನ್ನು ಸಹಿಸರು; ಆ ಒಲವಿನ ಪ್ರಭಾವವು ನನಗೆ ಒಂದು ಭದ್ರತೆಯನ್ನು ಕೊಟ್ಟಿರುವುದು; ಆ ಮೂಲಕ ನಾನು ನಿಶ್ಚಿಂತನಾಗಿರುವೆನು. ನಾನು ಒಲವಿನಿಂದ ಬದುಕಿದಂತಲ್ಲವೇನು?

ಹರಿಶ್ಚಂದ್ರನನ್ನು ಶೂಲಕ್ಕೇರಿಸುವ ದೃಶ್ಯವನ್ನು ಎಲ್ಲರೂ ಕಂಡಿರಲಿಕ್ಕೆ ಸಾಕು. ಅಲ್ಲಿ ಲೋಹಿತಾಸ್ಯನು ಸೇನಾನಾಯಕನಿಗೆ ಆಡಿದ ಮಾತು—'ನಮ್ಮ ತಂದೆಯನ್ನು ಬಿಡಿರಿ, ನನ್ನನ್ನು ಕೊಲ್ಲಿರಿ'—ತ್ಯಾಗ ಸೂಚಕವಲ್ಲವೆ? ಈ ಕೇವಲ ಮಾತಿನಲ್ಲಿ ಯಾವ ಚೆಲುವಿದೆ? ಆದರೆ ಅದೆಂತಹ ಒಲವಿನ ಮಾತು! ಆ ಮಾತುಗಳು; ಎಲ್ಲರ ಆತ್ಮದಲ್ಲಿ ಅಡಕವಾಗಿರುವ ಒಲುಮೆಯ ಬುಗ್ಗೆಯನ್ನು ಹರಿಸುವುವು. ಈ ಮೂಲಕ ನಮ್ಮಲ್ಲಿ ಒಂದು ಅನುಭವ ಬರುವುದು, ಆ ಅನುಭವವು ಚೆಲುವಾಗಿ ತೋರುವುದು. ಇಷ್ಟು ಆಳವಾಗಿ ವಿಚಾರಿಸದೆ, ಕೇವಲ 'ದೃಶ್ಯವು ಚೆಲುವಾಗಿದೆ' ಎಂದರೆ, ಅದು ಎರಡನೆಯವರ ದುಃಖದಲ್ಲಿ ಆನಂದಪಡುವ ಮಾನವನ ಸಹಜಸ್ವಭಾವದ ಮೂಲಕ ಇಲ್ಲವೆ ಎರಡನೆಯವರಿಗೆ ಆಗುವ ತೊಂದರೆಗಳಿಂದ ತಾವು ಅಲಿಪ್ತರಾಗಿರುವೆವೆಂಬ ನಿಶ್ಚಯದ ಮೂಲಕ—ಎಂದೇ ಹೇಳಬಹುದು.

ಒರ್ವ ಭಕ್ತನು ದೇವತಾರಾಧನೆಯನ್ನು ಮಾಡಬೇಕೆಂಬ ಒಲವಿನಿಂದ ತನ್ನ ಮುಂದೆ ಒಂದು ವಿಗ್ರಹವನ್ನು ಇರಿಸಿ, ಗಂಧ-ಪುಷ್ಪಗಳನ್ನು ಅರ್ಪಿಸಿ ಏಕಚಿತ್ತದಿಂದ ಧ್ಯಾನಾಸಕ್ತನಾಗುವನು. ಪರಮಾತ್ಮನಲ್ಲಿಯ ಒಲವಿನ ಮೂಲಕ ತನ್ನನ್ನು ತಾನು ಮರೆಯುವನು. ಕೈಗಳು ಯಂತ್ರವಂತೆ ತಾಳಹಾಕುತ್ತಲಿರುವುವು. ಬಾಯಿ ದೇವರ ನಾಮವನ್ನು ಸ್ಮರಿಸುವುದು. ಅಂತರ್ದೃಷ್ಟಿಯ ಮುಂದೆ ಅವ್ಯಕ್ತವಾದ ಒಂದು 'ಚೆಲುವಾದ' ಮೂರ್ತಿ ಕಾಣುವುದು. ಅದೇ "ಚೆಲುವಾದ" ವಸ್ತು. ಅದನ್ನು ಗಳಿಸಲಿಕ್ಕೆ ಬೇಕಾದದ್ದು ಇಂತಹ 'ಒಲವು'. ಒಲವಿನಿಂದ ಎಂತಹ ಚೆಲುವನ್ನಾದರೂ ಕಾಣಬಹುದು; ಅದೇಕೆ ದಿವ್ಯ, ಏಕಮೇವ, ಅದ್ವಿತೀಯ 'ಚೆಲುವು' ತೋರುವುದು. ಅದೇ ನಮ್ಮ ಗುರಿ. ಅದಕ್ಕಿರುವ ಸಾಧನವು ಒಲವು! ಮಾನವನು ಬಾಳುವುದು ಒಲವಿನಿಂದ! ಈ ಒಲವಿನಿಂದಲೇ ಆ ದಿವ್ಯ ಚೆಲುವು, ಮುಕ್ತಿ! ಇದೇ ಜೀವನದ ಧ್ಯೇಯ, ಧರ್ಮ.

ಏಜಂಟರು ಬೇಕು!

ಬೆಂಗಳೂರು, ಮೈಸೂರು, ಚಿಂತಾಮಣಿ, ಸಂಕೇಶ್ವರ, ಚಿತ್ರದುರ್ಗ, ಬೈಲಹೊಂಗಲ, ರಾಯಚೂರು, ಚಿಕ್ಕೋಡಿ, ಇಳಕಲ್ಲು, ಜಮಖಂಡಿ, ರಬಕವಿ, ಹೊಸಪೇಟೆ, ಹರಿಹರ, ಅರಸಿಕೇರೆ, ಕುಂದಾಪುರ, ಸಾಗರ, ಕುಮಟೆ, ಕಾರವಾರ ಮೊದಲಾದ ಕನ್ನಡನಾಡಿನ ದೊಡ್ಡ ದೊಡ್ಡ ಪುರ-ಪಟ್ಟಣಗಳಲ್ಲಿ ಜಯಂತಿಗೆ ಏಜಂಟರು ಬೇಕಾಗಿದ್ದಾರೆ. ಕಮಿಶನ್ ದರವನ್ನು ಮೊದಲಿಗಿಂತ ಹೆಚ್ಚಿಸಲಾಗಿದೆ. ಬೇಕಾದವರು ಕೂಡಲೆ ಪತ್ರವ್ಯವಹಾರ ಮಾಡಿ ಏಜನ್ಸಿಯ ಕರಾರುಗಳನ್ನು ತಿಳಿದುಕೊಳ್ಳಬೇಕು.

ಮ್ಯಾನೇಜರ್ 'ಜಯಂತಿ' ಧಾರವಾಡ

ಕನ್ನಡ ನುಡಿಯ ಜೀವಾಳ

(ಭಾಷಾಶಾಸ್ತ್ರ ವಿಷಯಕ ಗ್ರಂಥ)

ಲೇಖಕರು ಶ್ರೀನಿವಾಸ ಹಂ. ಹಾ. ಜೋಶಿಯವರು, ಧಾರವಾಡದ ಸರಸ್ವತೀ ನಿಲಯದ ಪ್ರಕಟಣೆ

'ಕನ್ನಡ ನುಡಿಯ ಹುಟ್ಟು' ಬರೆದ ಕೈಯೇ ಇಂದು 'ಕನ್ನಡ ನುಡಿಯ ಜೀವಾಳ'ವನ್ನು ಬರೆದು ಬೆಳಕಿಗೆ ತಂದಿದೆ. ಮೊದಲಿನದು ಶಬ್ದಶಾಸ್ತ್ರ ಕುರಿತ ಗ್ರಂಥ; ಇದೀಗ ಭಾಷಾಶಾಸ್ತ್ರವನ್ನು ವಿವೇಚಿಸುವ ಗ್ರಂಥ. ಪುರಾತನ ಕನ್ನಡಸಾಹಿತ್ಯಿಕರಲ್ಲಿ ಕನ್ನಡ 'ಶಬ್ದಶಾಸ್ತ್ರ'ವನ್ನು ಎಂದರೆ ವ್ಯಾಕರಣವನ್ನು ಬರೆದವರೂ, ಅದನ್ನು ಕುರಿತು ಸಾಂಪ್ರದಾಯಿಕ ಕಲ್ಪನೆಯಿಂದ ವಿಚಾರಮಾಡಿದವರೂ ಕೆಲವರು ಇರುವರು; ಆದರೆ ಕನ್ನಡನುಡಿಯ ಸ್ವತಂತ್ರ ಅಸ್ತಿತ್ವವನ್ನೊಪ್ಪಿ, ಅದರ ಮೂಲವನ್ನು ಕುರಿತು ನೋಡಹೊರಟ ಭಾಷಾಶಾಸ್ತ್ರಿಗಳಾರೂ ನಮಗೆ ಕಾಣುವುದಿಲ್ಲ. 'ಶಬ್ದಮಣಿದರ್ಪಣ' ಕರ್ತೃವಾದ ಕೇಶಿರಾಜ 'ನಾಭಿಮೂಲದೊಳ್ ಕಹಳೆಯ ಪಾಂಗಿನವೋಲ್ ಶಬ್ದದ್ರವ್ಯಂ ಜನಿಯಿಸುಗುಂ; ಶ್ವೇತಂ; ಅದರ ಕಾರ್ಯಂ ಶಬ್ದಂ' ಎಂದ. ಶಬ್ದದ ಮೂಲದ್ರವ್ಯವನ್ನು ಕುರಿತು ಒಂದೆರಡು ಸಲ ಮಾತನ್ನು ತೆಗೆದುದುಂಟು. ಆದರೆ ಅದರ ಸಂಪೂರ್ಣ ಸ್ವರೂಪದ ವಿವೇಚನೆಯನ್ನು ಎಲ್ಲಿಯೂ ಮಾಡಿಲ್ಲ. ಹಾಗೆ ನೋಡಿದರೆ ಅವನ 'ಶ್ವೇತಂ ಶಬ್ದದ್ರವ್ಯಂ' ಎಂಬುದು ಜೈನಾಗಮಶಾಸ್ತ್ರದ ಆದೇಶ. ಅನುಭಾವಸಂಕೇತವೆಂದು ಭಾವಿಸಬಹುದಾಗಿದೆ. ಸಂಸ್ಕೃತವೊಂದನ್ನು ಬಿಟ್ಟರೆ ಭಾರತದ ಯಾವ ಭಾಷೆಯ ಶಬ್ದಗಳಿಗೂ ಯಾರೂ 'ನಿರುಕ್ತ'ವನ್ನು ಒದಗಿಸಿಲ್ಲ. ಜೇತೃವಾದ ಆರ್ಯ ಸಂಸ್ಕೃತಿಯ ಪ್ರಭಾವದ ಮೂಲಕ, ಭಾರತದ ಎಲ್ಲ ಭಾಗದವರಿಗೂ ಆರ್ಯಕುಲದ ಸಂಬಂಧವನ್ನು ತಂದುಕೊಳ್ಳಬೇಕಾಗಿ ಬಂದುದರಿಂದ, ತಮ್ಮ ಭಾಷೆ-ಸಂಸ್ಕೃತಿಗಳ ಸ್ವತಂತ್ರ ಅಸ್ತಿತ್ವವನ್ನು ಅಂದಿನವರು ಒಪ್ಪದೆ ಹೋಗಬೇಕಾಯಿತು. ಅದುದರಿಂದಲೇ ಎಲ್ಲ ಭಾಷೆಗಳು ಗೀರ್ವಾಣವಾಣಿಯ ಅಭಾಸಗಳೆಂದೂ, ಎಲ್ಲ ಲಿಪಿಗಳು ಬ್ರಾಹ್ಮಿಲಿಪಿಯ ವಿಕಾರಗಳೆಂದೂ ಇರುವ ತಿಳಿವಳಿಕೆ ಆಟವಾಡುತ್ತ ಬಂದಿತು. ಬಹು ಸಂಖ್ಯಾಕರಲ್ಲಿ ಈಗಲೂ ಇದೇ ತಿಳಿವಳಿಕೆ ಆಟವಾಡುತ್ತಲಿದೆ. ಭಾರತದ ಬೇರೆ ಬೇರೆ ಭಾಷೆಗಳಲ್ಲಿ ಕಾವ್ಯ-ನಾಟಕಾದಿ ಸಾಹಿತ್ಯಗ್ರಂಥಗಳೂ ವ್ಯಾಕರಣ-ಛಂದಸ್ಸು-ಅಲಂಕಾರ-ರಸವಿಷಯಕ ಲಕ್ಷಣಗ್ರಂಥಗಳೂ ಧಾರಾಳವಾಗಿ ಹುಟ್ಟಿಕೊಂಡಿದ್ದರೂ, ಯಾಸ್ಕಾಚಾರ್ಯರ 'ನಿರುಕ್ತ'ದಂತಹ ಗ್ರಂಥಗಳು ಇರದಿರುವುದಕ್ಕೆ, ಈ ಜಿತಸಂಸ್ಕೃತಿಯ 'ದೀನತನ'ವೆ ಕಾರಣವಾಗಿದೆ.

ಜೀವಿಗೊಂದು ವೈಶಿಷ್ಟ್ಯದಿಂದ ಕೂಡಿದ **ಜೀವವಿರು**ವಂತೆ ಭಾಷೆಗೊಂದು ವೈಶಿಷ್ಟ್ಯದಿಂದ ಕೂಡಿದ **ಜೀವಾಳ**ವಿರುವುದು. ಅದರಂತೆಯೆ ವೈಭವಯುಕ್ತ **ಪೂರ್ಣಚರಿತ್ರೆ**ಯಿಂದ ಕೂಡಿದ ಕನ್ನಡ ನುಡಿಗೂ **ಒಂದು** ಸ್ವತಂತ್ರ ಜೀವವಿರುವುದೆಂಬುದನ್ನು ವಿವೇಚಿಸಿ ಸಿದ್ಧಗೊಳಿಸುವುದೇ ಈ ಪುಸ್ತಕದ ಗುರಿಯಾಗಿದೆ. ಈ ಪುಸ್ತಕದ ಗುರಿಯನ್ನು ಕುರಿತು ಲೇಖಕರು ತಮ್ಮ ಮುನ್ನುಡಿಯಲ್ಲಿ ಈ **ಮಾತು**ಗಳನ್ನು ಹೇಳಿರುವರು:

"....... ತಮ್ಮ ನಾಡನುಡಿಯನ್ನು ಕಡೆಗಣಿಸುವವರು **ಕೀಳ್ಮೆ**ಯನ್ನು ಹೊಂದುವರು. ನುಡಿಯನ್ನು ಕಡೆಗಣಿಸುವುದು ಅವರ ಸರ್ವನಾಶದ ಪೂರ್ವಸೂಚನೆ......."

"ಹೊರಮಿಂಚಿಗೆ ಮನಸೋತು ಕನ್ನಡಿಗರು ಅರಿವುಗೇಡಿಗಳಾದರು. ತಮ್ಮ ನುಡಿಯ ಜೀವಾಳವೆಲ್ಲಿದೆಯೆಂಬುದನ್ನು ಮರೆತರು ತಮ್ಮ ಸೊಲ್ಲಿನ ಸವಿಯನ್ನು ತಿಳಿಯದಾದರು. ವ್ಯಾಕರಣದ ಕೃತ್ರಿಮ **ಕಟ್ಟು**-ಕಟ್ಟಳೆಗಳು ಹೆಚ್ಚಾದುವು. ಅವು ಕನ್ನಡ ನುಡಿಯ ಬೆಡಗನ್ನು—ಶಬ್ದಸಂಪತ್ತನ್ನು—ಹೆಚ್ಚಿಸಲು ನೆರವಾಗುವ ಬದಲು ಮುರುಡು**ಗೆಡಿಸುವುದಕ್ಕೆ** ಕಾರಣವಾದುವು.......ಹೆರವರ ಮಾತಿಗೆ ತಲೆ**ದೂಗುವಾಗ ತಮ್ಮ** ಮಾತನ್ನು ಮರೆತವರು ಇನ್ನೊಬ್ಬರ ಆಳಾಗುವುದಕ್ಕೆ ತಡವಿಲ್ಲ......."

"....ಕನ್ನಡ ನುಡಿಯ ಜೀವಾಳವು ಎಲ್ಲಿದೆಯೆಂಬುದನ್ನು ಕಂಡುಕೊಳ್ಳುವುದೂ ನಾಡಿನ ಏಳ್ಗೆಯ ದೃಷ್ಟಿಯಿಂದ ಅತ್ಯಂತ ಅವಶ್ಯಕವಾದ ಕೆಲಸವಾಗಿದೆ. ಆ ದೃಷ್ಟಿಯಿಂದ ಮಾಡಿದ ಅಲ್ಪಸ್ವಲ್ಪ ಕೆಲಸವಿದು. ಇದು **ಒಬ್ಬಿ**ಬ್ಬರಿಂದ ಕೊನೆಗಾಣತಕ್ಕುದಲ್ಲ. ಹಿರಿಯ ಕೆಲಸ "

"....ಇದರಲ್ಲಿ ನುಡಿಯ ಪುದುಗಲು (ಶಬ್ದದ್ರವ್ಯ) ಆವುದು? ಅದು **ಎಷ್ಟು** ವಿಪುಲವಾಗಿದೆ ಮತ್ತು ಅದರಿಂದ ಬೇರೆ ಬೇರೆ ಭಾಷೆಯವರು ಎಷ್ಟು ಅಂದ-ಚೆಂದದ ಬಗೆಬಗೆಯ ಮಾತುಗಳನ್ನು ನಿರ್ಮಿಸಿಕೊಂಡಿರುವರು ಎಂಬುದನ್ನು ತೋರಿಸುವುದು ಈ ಕಿರಿಯ ಹೊತ್ತಿಗೆಯ ಗುರಿಯಾಗಿದೆ ... ..."

"ಕನ್ನಡದ ಬೆಳವಿಗೆ ಹೊಸ ನುಡಿಗಳ ಆವಶ್ಯಕತೆಯಿರುವಂತೆ ವಿವಿಧ ಸೂಕ್ಷ್ಮಾರ್ಥಕ ಪದಗಳ ಅಗತ್ಯವೂ ಇದೆ....

ಇವೇ ಮೊದಲಾದ ಮಾತುಗಳಿಂದ ಈ ಪುಸ್ತಕದಲ್ಲಿರುವ ವಿಷಯದ ಕಲ್ಪನೆ ವಾಚಕರಿಗಾಗಬಹುದು. ಪುಸ್ತಕದ ಮೊದಲಿನ ೫೩ ಪುಟಗಳಲ್ಲಿ, ಭಾಷಾಶಾಸ್ತ್ರದ ಕೆಲವು ಮೂಲಸಿದ್ಧಾಂತಗಳನ್ನು ಪರಿಚಯ ಮಾಡಿಕೊಡಬಹುದಾದ ವಿವೇಚನೆಯೊಂದಿದೆ. 'ನುಡಿಯು ಮುಖ್ಯವಾಗಿ ಕಿವಿಯ ವಿಷಯ!' ಎಂಬ ಚರ್ಚೆಯಿಂದ ಮೊದಲಾದುದು, ಲೇಖಕರ ವಿವಿಧ ಗ್ರಂಥವಾಚನದ ಬಹುಶ್ರುತತ್ವವನ್ನು ಆಗಾಗ ಅನುಭವಕ್ಕೆ ತಂದುಕೊಡುತ್ತ 'ನುಡಿ' 'ನುಡಿತನ' 'ಮಾತು' 'ಧ್ವನಿ' ಮೊದಲಾದ ಭಾಷೆಯ ವಿಕಾಸಕ್ರಮವನ್ನು ಅದರಲ್ಲಿ ಸೋದಾಹರಣವಾಗಿ ಹೇಳಲಾಗಿದೆ.

ಮುಂದಿನ ಭಾಗದಲ್ಲಿ 'ನುಡಿಯ ಪುದುಗಲು' ಎಲ್ಲ ಭಾಷೆಗೂ ಒಂದೆಂಬುದನ್ನು ತೋರಿಸುವಂತೆ ತಮಿಳು, ತೆಲುಗು, ಮಲೆಯಾಳ,

ಮರಾಟಿ, ತುಳು, ಸಂಸ್ಕೃತ ಶಬ್ದಗಳ ಹೋಲಿಕೆಮಾತುಗಳೊಂದಿಗೆ ಅಕಾರಾದಿಯಾದ 'ಹುಟ್ಟುನುಡಿಗಳ ಪಟ್ಟಿ' ಇದೆ. ಕೊನೆಯಲ್ಲಿ ನುಡಿಯ ಹುಟ್ಟನ್ನು ಕುರಿತು ಪುರಾತನರ ಕೆಲವು ಮತಗಳು ಇವೆ.

ಇದು 'ಕನ್ನಡನುಡಿಯ ಜೀವಾಳ'ದ ಸ್ಥೂಲ ಪರಿಚಯ ಮಾತ್ರ. ಇಂತಹ ಗ್ರಂಥಗಳನ್ನು ತೂಗಿ ವಿಮರ್ಶೆ ಮಾಡುವ ಕಾಲ ನಮ್ಮಲ್ಲಿ ಇನ್ನೂ ಬಂದಿಲ್ಲ. 'ಭಾಷಾಶಾಸ್ತ್ರವೆಂಬುದು ಇನ್ನೂ ಅಪೂರ್ಣ ಶಾಸ್ತ್ರ—ಆಭಾಸಶಾಸ್ತ್ರ' ಎಂಬುದು ಹಲವು ಪಂಡಿತರ ಮತ. ಆದರೂ ಅದರ ಆವಶ್ಯಕತೆಯನ್ನು ಎಲ್ಲರೂ ಒಪ್ಪುತ್ತಾರೆ. ಕನ್ನಡದಲ್ಲಿಯ ಈ ಆವಶ್ಯಕತೆಯನ್ನು ತುಂಬಲು ಶ್ರೀ. ಶಂ. ಬಾ. ಜೋಶಿಯವರು ಮೊದಲಿಗರಾಗಿ ಈ ಕಾರ್ಯ ಮಾಡಿದ್ದಾರೆ. ಇವರೂ ಇವರಂತೆಯೆ ಇನ್ನುಳಿದವರೂ ತಮ್ಮ ಅಭ್ಯಾಸ-ಅನುಭವಗಳ ಫಲಗಳೆಂದು ಬೇರೆ ಬೇರೆ 'ಕನ್ನಡ ನುಡಿಯ ಜೀವಾಳ'ಗಳನ್ನು ಹೊರಗೆ ತರಲಿ; ಅಂದು ಪಂಡಿತರಾದ ವಿಮರ್ಶಕರು ಎಲ್ಲವನ್ನೂ ತೂಗಿ ನೋಡಬಹುದು; ಆಭಾಸವೆನಿಸಿದುದರಲ್ಲಿಯೂ ಒಂದು ಸತ್ಯವನ್ನು ಕಾಣಬಹುದು.

—ಬಿ. ಪಾ. ಸಾ. ರಾವ್

ವಿಜ್ಞಾನ ಮತ್ತು ಸಾಹಿತ್ಯ

ಬರೆದವರು, ಪ್ರೊ. ಕೆ. ಎಸ್. ಪವಣೂರ; ಪ್ರಕಾಶಕರು, ಸ್ಟೂಡಂಟ್ಸ್ ಓನ್ ಬುಕ್‌ಡಿಪೊ, ಧಾರವಾಡ; ಪ. ಸಂ. ೬೬ ; ೧೧. ಬೆಲೆ ೧-೧೨-೦.

'ಸಂಯುಕ್ತ ಕರ್ನಾಟಕ' ದಿನಪತ್ರಿಕೆಯಲ್ಲಿ ಲೇಖನಮಾಲೆಯಾಗಿ ಪ್ರಕಟವಾದ ತಮ್ಮ ಲೇಖಗಳನ್ನು ಗ್ರಂಥಕರ್ತರು ಪುಸ್ತಕರೂಪವಾಗಿ ಪ್ರಕಟಿಸಿದ್ದಾರೆ. ಪಠ್ಯಪುಸ್ತಕಗಳು (ವಿಶೇಷವಾಗಿ ಶಾಲೋಪಯೋಗಿಗಳು), ಮೈಸೂರು ವಿಶ್ವವಿದ್ಯಾಲಯದ ಕೆಲವು ಚಿಕ್ಕ ಹೊತ್ತಿಗೆಗಳು, ಒಂದೊ-ಎರಡೊ ಬೇರೆ ಪುಸ್ತಕಗಳು—ಇಷ್ಟನ್ನುಳಿದರೆ ಕನ್ನಡದಲ್ಲಿ ವಿಜ್ಞಾನಕ್ಕೆ ಸಂಬಂಧಿಸಿದ ಗ್ರಂಥಗಳೇ ಇಲ್ಲವೆಂದು ಹೇಳಬಹುದು. ಅದರಲ್ಲೂ ಆಧುನಿಕ ವಿಜ್ಞಾನ ಪ್ರಗತಿಯ ಸಮಗ್ರಚಿತ್ರವನ್ನು ಕೊಡುವ ಕನ್ನಡಗ್ರಂಥವೆಂದರೆ ಇದೇ ಮೊದಲನೆಯದೆಂದು ಹೇಳಬಹುದು.

ವಿಜ್ಞಾನವೆಂದರೇನು, ಶುದ್ಧ ವಿಜ್ಞಾನ-ಉಪಯುಕ್ತ ವಿಜ್ಞಾನ, ವಿಜ್ಞಾನಯುಗ, ವಿಜ್ಞಾನ-ಸಾಹಸದ ಐತಿಹಾಸಿಕ ಚಿತ್ರ....ಇವೇ ಮೊದಲಾದ ವಿಷಯಗಳ ಬಗ್ಗೆ ಸಾಮಾನ್ಯನಿಗೂ ತಿಳಿಯುವಂತಹ ಶೈಲಿಯಲ್ಲಿ ಚರ್ಚೆ ನಡೆಯಲ್ಲಿದೆ, ಒಟ್ಟು ವಿಜ್ಞಾನದ ಬಗ್ಗೆ ಸರ್ವಸಾಮಾನ್ಯರಲ್ಲಿ ಇರುವ ತಪ್ಪು ತಿಳವಳಿಕೆಯ ಸಮಾಧಾನವೂ ಇದರಲ್ಲಿ ಇದೆ. ಬೇರೆ ಬೇರೆ ದೇಶಗಳಲ್ಲಿ ವಿಜ್ಞಾನಕ್ಕಿರುವ ಸ್ಥಾನ, ಆಯಾ ಮುಂದಾಳುಗಳ ಮತ್ತು ತಜ್ಞರ ಅಭಿಪ್ರಾಯ—ಇವುಗಳ ಮಾರ್ಮಿಕವಾದ ಚಿತ್ರ ಇಲ್ಲಿವೆ. ಇದಲ್ಲದೆ ಇಂದಿನ ಯುದ್ಧ ಮತ್ತು ಯುದ್ಧೋತ್ತರ ಪುನರ್ರಚನೆ—ಇವುಗಳ ವಿಚಾರದಲ್ಲಿ ವಿಜ್ಞಾನಕ್ಕೆ ಯಾವ ಸ್ಥಾನವಿದೆ ಎಂಬುದರ ವಿವರಣೆಯೂ ಈ ಗ್ರಂಥದಲ್ಲಿದೆ.

ಆದರೆ ಇವೆಲ್ಲವುಗಳಿಗಿಂತ ಮಹತ್ವದ್ದಾದ ಕೆಲವು ಸಂಗತಿಗಳನ್ನು ಗ್ರಂಥಕರ್ತರು ತಮ್ಮ ವಿವೇಚನೆಯಲ್ಲಿ ಹೇಳಿದ್ದಾರೆ: (೧) ವಿಜ್ಞಾನದ ಶೋಧದ-ಸಾಹಸ-ಪ್ರಗತಿಗಳಿಗೆ ತವರ್ಮನೆಯಾದ ಪಾಶ್ಚಾತ್ಯ ಭೂಭಾಗದಲ್ಲಿ, ವಿಜ್ಞಾನವು ಹೇಗೆ ಜೀವನದ ಬೆಲೆ-ಬಾಳಿಕೆ (Valuation) ಯನ್ನು ಬದಲಾಯಿಸುತ್ತಿದೆ, ಅದರ ನಿಮಿತ್ತವಾಗಿ ಹಕ್ಸ್ಲೀ—ಬರ್ಟ್ರಾಂಡ್ ರಸೆಲ್ ಮೊದಲಾದವರು ಹೇಗೆ ಹೊಸತೊಂದು ತಾತ್ತ್ವಿಕ ದೃಷ್ಟಿಯನ್ನು ಮುಂದೆ ಮಾಡುತ್ತಲಿದ್ದಾರೆ ಮತ್ತು ಚೀನ—ರಶಿಯಾಗಳಂತಹ ವಿಸ್ತಾರದ ದೇಶಗಳಲ್ಲಿ ವಿಜ್ಞಾನವು ಹೇಗೆ ಸಮಾಜಕ್ಕೆ ಪೋಷಣ ಮತ್ತು ಶಕ್ತಿಯುತ ಘಟಕಗಳನ್ನು ತಯ್ಯಾರಿಸುತ್ತಲಿದೆ—ಎಂಬ ಮಾತುಗಳನ್ನು ಗ್ರಂಥಕರ್ತರು ಯೋಗ್ಯ ವೇಳೆಗೆ ನಮ್ಮ ಜನರ ಮುಂದಿಟ್ಟಿದ್ದಾರೆ.

ಎರಡನೆಯದಾಗಿ, ವಿಜ್ಞಾನವು ಮಾನವನ ಸಹಜಗುಣವಾದ ಒಂದು ಸಾಹಸಬುದ್ಧಿಯ ಫಲವಾಗಿದ್ದು, ಮಾನವನ ಜೀವನದಲ್ಲಿ ಮತ್ತು ಪ್ರಗತಿಯಲ್ಲಿ ವಿಜ್ಞಾನವು ಮೈಗೂಡಿಸಿಕೊಂಡು ನಿಂತಿದೆ; ವಿಜ್ಞಾನದಿಂದ ಮಾನವನ ಬೌದ್ಧಿಕಜೀವನದಲ್ಲಿ ಬದಲಾವಣೆಗಳಾಗಿವೆ; ಇದನ್ನು ಲಕ್ಷ್ಯದಲ್ಲಿಟ್ಟುಕೊಂಡರೆ ವಿಜ್ಞಾನದಿಂದಲೆ ಮಾನವನ ಭಾವನಾಪ್ರಪಂಚದಲ್ಲೂ ಬದಲಾವಣೆಗಳಾಗಬಾರದೇಕೆ—ಎಂದು ಸಮಂಜಸ ಆಶಾವಾದವನ್ನು ಗ್ರಂಥಕರ್ತರು ನಿಲ್ಲಿಸಿದ್ದಾರೆ.

ಕೊನೆಯದಾಗಿ, ಪ್ರಗತಿ-ನಾಗರಿಕತೆ-ಸಾಹಿತ್ಯಗಳ ಸಂಬಂಧದಲ್ಲಿ ವಿಜ್ಞಾನದ ದೃಷ್ಟಿಯನ್ನು ಕಾಣಿಸಿ, ವಿಜ್ಞಾನವಾದರೂ ಸಾಹಿತ್ಯದಂತೆ ಜೀವನದ ಮಟ್ಟವನ್ನು ಉತ್ತಮಗೊಳಿಸಲು ಶಕ್ತವಾದುದು ಎಂಬುದನ್ನು ತೋರಿಸಿದ್ದಾರೆ. 'ವಿಜ್ಞಾನದ ಪ್ರಗತಿಯು ಅನಿವಾರ್ಯವೆ?.... ಅವನತಿಯ ಬೀಜವನ್ನು ಒಳಗೊಂಡಿದೆಯೆ?' ಎಂಬುದರ ವಿವೇಚನೆ ತಮ್ಮ ಮುಖ್ಯ ಉದ್ದೇಶ ಎಂದು ಗ್ರಂಥಕರ್ತರು 'ಅರಿಕೆ'ಯಲ್ಲಿ ಹೇಳಿದ್ದಾರೆ. ಆ ಉದ್ದೇಶವು ಫಲಪ್ರದವಾಗಿ ಸಾಧಿಸಿದೆ ಎಂದು ಹೇಳಬಹುದು. ಇಂತಹ ಪ್ರಕಟನೆಗಳು ಕನ್ನಡ ಸಾಹಿತ್ಯದ ಬೆಳವಣಿಗೆಯ ಚಿಹ್ನಗಳಾಗಿವೆ ಎಂದು ಅಭಿಮಾನವನ್ನೂ ಓದುಗನಿಗೆ ಆನಂದವನ್ನೂ ಹುಟ್ಟಿಸುವಂತಹ ಈ ಚಿಕ್ಕ ಪುಸ್ತಕಕ್ಕಾಗಿ ಕನ್ನಡಿಗರು ಗ್ರಂಥಕರ್ತರಿಗೆ ಋಣಿಯಾಗಿದ್ದಾರೆ.

—ಆರ್. ವಿ. ಜಾಗಿರದಾರ

ಜಯಂತಿ ಕಾರ್ಯಾಲಯದಲ್ಲಿ ದೊರೆಯುವ ಪುಸ್ತಕಗಳು

'ಶ್ರೀರಂಗ' ಬರೆದುವು

ಗೀತಾಗಾಂಭೀರ್ಯ	೩	೦	೦
ನಗೆ (ರಸವಿಚಾರ)	೧	೮	೦
ಆಹ್ವಾನ (ಕವನಸಂಗ್ರಹ)	೧	೦	೦
ನಿರಾಹಾರ	೦	೧೨	೦

'ಆನಂದಕಂದ'ರು ಬರೆದುವು

ಸುದರ್ಶನ (ಕಾದಂಬರಿ)	೧	೦	೦
ವಿರಹಿಣಿ (ಕವನಸಂಗ್ರಹ)	೦	೧೨	೦
ಕರ್ನಾಟಕ ಜನಜೀವನ	೧	೮	೦

ಜಯಂತಿ

ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

ವಾ. ವರ್ಗಣಿ ಅಂಚೆವೆಚ್ಚ ಸೇರಿ ೪—೪—೦ ಆರು ತಿಂಗಳಿಗೆ ೨—೪—೦ ಬಿಡಿ ಸಂಚಿಕೆಗೆ ೬ ಆಣೆ.

ಸಂಪುಟ ೭ | ೧ನೆಯ ಎಪ್ರೀಲ್ ೧೯೪೫ | ಸಂಚಿಕೆ ೧೧

ಯುಗಾಂತರ

ಶ್ರೀ. ಬಂಕಾಪುರ ದತ್ತರಾಯ, ಹಾನಗಲ್ಲು

(೧)

ಹಳೆಯುಗ ಹೋಗಿ, ಹೊಸ ಯುಗ ಬರುತಿದೆ
ಧರಾತಲದ ಮೇಲೆ!
ಹಳೆಯ ಮೋಟುಮರದಲ್ಲಿ ತೋರುತಿವೆ-
ಹೊಸತು ಚಿಗುರ ಮಾಲೆ!
ಹಳೆಯ ರಾಗ ಮರೆತಿಹುದು; ಕೇಳುತಿದೆ
ಕವಿಯ ಕಿವಿಯ ಸೋಲೆ-
ಹೃದಯವೀಣೆಯಾ ತಂತಿತಂತಿಯಲಿ
ನವ್ಯ ನಾದಲೀಲೆ!

(೨)

ನಯನ ಪಟಲದಲಿ ಎಂದೊ ಮೂಡಿರುವ
ಹಳೆಯ ಚಿತ್ರವಳಿನು,
ಉಸುರು-ಉಸುರಿನಾ ಚಿತ್ರ ಮೂಡುತಿದೆ
ಹೊಸತು ರೇಖೆವಡೆದು!
ಜನದ ಜನದ ಮನದಲ್ಲಿ ಮೊಳೆಯುತಿದೆ
ಶುದ್ಧ ಭಾವ ಕಂದ!
ಪರಿಮಳಿಸುತಿಹುದು ಮಕರಂದದಿಂದ
ಮಾನವ್ಯ-ಕುಂಜವೃಂದ!

(೩)

ಉಜ್ವಲತೆಯಿಂದ ಪಾವನತೆ ಪೊಣ್ಮೆ, ಮಲಿ-
ನತೆಯು ಮಸಣದಲ್ಲಿ
ನವಯುಗದ ಉಷೆಯು ನವಕಿರಣ ಸೂಸುತಿವೆ
ದಿಗ್ದಿಗಂತದಲ್ಲಿ!
ಚಿರನವೀನತೆಯ ವೀಣೆಯ ಮೆಲ್ಲುಲಿ
ಕಿವಿಗೆ ಕೇಳಿದೆಂತೋ!
ದೀನ-ದಲಿತ ಜನರಾಗ 'ಯುಗಾಂತರ'
ಈ ಭೂಮಿಗೆ ಬಂತೊ!!

(೪)

ಹಳೆಯುಗ ಹೋಗಿ, ಹೊಸಯುಗ ಬರುತಿದೆ
ಧರಾತಲದ ಮೇಲೆ;
ಹಳೆಯ ಮೋಟುಮರದಲ್ಲಿ ನಲಿಯುತಿವೆ
ಹೊಸ ಚಿಗುರಿನ ಮಾಲೆ!
ಹಳೆಯ ರಾಗ ಮರೆಯಾಯ್ತು; ಕೇಳುತಿದೆ-
ಕವಿಯ ಕಿವಿಯು ಸೋಲೆ-
ಹೃದಯ ವೀಣೆಯಾ ತಂತಿ-ತಂತಿಯಲಿ
ನವ್ಯ ನಾದಲೀಲೆ!

ಸಂಪಾದಕೀಯ

ಹೊರನಾಡಿನ ಕನ್ನಡಿಗರು

ಈ ಸಂಚಿಕೆ ಪ್ರಕಟವಾಗುತ್ತಿರುವ ಕಾಲದಲ್ಲಿಯೆ ಮುಂಬಯಿ ನಗರದಲ್ಲಿ ಹೊರನಾಡಿನ ಕನ್ನಡಿಗರ ಸಮ್ಮೇಳನ (ತಾ. ೨೮-೨೯ ಮಾರ್ಚ್ ೧೯೬೫) ಸೇರಲಿರುವುದು. ಎಚ್ಚೆತ್ತ ಕನ್ನಡಿಗರದೊಂದು ನೂತನ ಉಪಕ್ರಮವಿದು. ಇಂತಹ ಸಮ್ಮೇಳನಗಳು ಈ ಮೊದಲೇ ಎಷ್ಟೋ ಕೂಡಬೇಕಾಗಿದ್ದಿತು; ಕೂಡಿಲ್ಲವೆಂಬುದು ನಿಜ ಸಂಗತಿ. ಈಗ ಕನ್ನಡದ ಅಭಿಮಾನದ ಬೀಜವನ್ನು ಎದೆಯಲ್ಲಿ ಬಿತ್ತಿಕೊಂಡು ಹೊರನಾಡುಗಳಿಗೆ ಹೋದ ಕನ್ನಡ ತರುಣರ ಸಂಖ್ಯೆ ಹೆಚ್ಚಿದೆ; ಅಂತಹ ತರುಣರೆ ಹಿರಿಯರನ್ನೂ ಬರಮಾಡಿಕೊಂಡು—ಈಗ ಈ ಆವಶ್ಯಕ—ಉಪಯುಕ್ತ—ಕಾರ್ಯಕಲಾಪವನ್ನು ನಡೆಸಿಗುತ್ತಿದ್ದಾರೆ.

ಇಂದು ಹೊರನಾಡಿನಲ್ಲಿ ಹೋಗಿ ವಾಸಿಸುವ ಕನ್ನಡಿಗರೆಂದರೆ ಬರಿ ಸಾಮಾನ್ಯ ಜನಜಂಗುಳಿಗೆ ಸೇರಿದವರಲ್ಲ; ನಾಡಿನ ಬುದ್ಧಿ, ಭಾವನೆ, ಕಾರ್ಯಗಳ ಕೇತುಗಳೆಂದು ಹೇಳಬಹುದು. ತಮ್ಮ ಜ್ಞಾನದ-ಬುದ್ಧಿಯ-ಕಾರ್ಯಕೌಶಲದ ಪ್ರವೇಶಕ್ಕೆ ಹರಿದು ಹಂಚಿಹೋದ ಕನ್ನಡನಾಡಿನಲ್ಲಿ ಎಡೆದೊರೆಯದ ಹೋದುದರಿಂದ, ಅನಿವಾರ್ಯವಾಗಿ ಅವರು ಹೊರನಾಡುಗಳಿಗೆ ಹೋಗಿರುವರು. ಇಂತಹ ಜನರು ತಾವು ಕನ್ನಡಿಗರೆಂಬುದನ್ನು ಮರೆತುಬಿಟ್ಟರೆ, ಕನ್ನಡನಾಡಿಗೊಂದು ದೊಡ್ಡ ಹಾನಿಯಷ್ಟೇ ಅಲ್ಲ; ಕನ್ನಡನಾಡಿನ ಉಳಿಗಾಲವನ್ನೇ ಸಂದೇಹದಿಂದ ನೋಡಬೇಕಾಗುವುದು.

ದೊಡ್ಡ ನಗರಗಳೂ ವ್ಯಾಪಾರ ಕೇಂದ್ರಗಳೂ ಬಂದರಗಳೂ ನಮ್ಮ ನಾಡಿನಲ್ಲಿ ಇಲ್ಲವಾದುದರಿಂದ, ಕಲಿತು ಪದವಿಗಳನ್ನು ಪಡೆದ ತರುಣರೂ, ಬಂಡವಾಳವುಳ್ಳ ವ್ಯಾಪಾರಸ್ಥರೂ, ಕೈಗಾರಿಕೆ—ಸ್ಥಾಪತ್ಯ ಶಾಸ್ತ್ರಗಳನ್ನರಿತವರೂ ತಮಗೆ ತಕ್ಕ ಎಡೆಗಳನ್ನು ಅಯ್ದು ಅಲ್ಲಿಗೆ ತೆರಳುವುದು ಸಹಜ. ನಮ್ಮ ಇದುವರೆಗಿನ ಅನುಭವವೆಂದರೆ, ಹೀಗೆ ಹೋದವರೆಲ್ಲ ತಮ್ಮ ಕನ್ನಡತನ ಕಳೆದುಕೊಂಡು ಬಿಟ್ಟಿರುವರು. ಕೆಲವು ಜನರಂತೂ ತಾವು ಕನ್ನಡಿಗರೆಂದು ಹೇಳಿಕೊಳ್ಳಲು ಕೂಡ ನಾಚುವರಲ್ಲದೆ, ಕನ್ನಡ ನಾಡನ್ನೂ ನುಡಿಯನ್ನೂ ಜನರನ್ನೂ ತಿರಸ್ಕಾರದಿಂದ ಕಾಣುವರು. ನಾಡಿನ ಏಳಿಗೆಯ ದಾರಿಯಲ್ಲಿ ಇದೊಂದು ಭಯಂಕರ ಸಂಕಟ.

ಬಂಗಾಲಿಗಳೂ ಗುಜರಾತಿಗಳೂ ಹೀಗೆ ಹೊರನಾಡುಗಳನ್ನು ಹಿಡಿಯಲು ಪ್ರಾರಂಭಿಸಿ, ಒಳನಾಡಿನಲ್ಲಿ ತಮ್ಮ ಸಂಸ್ಥೆಗಳೂ ಚಳವಳಿಗಳೂ ಸಾಕಷ್ಟು ಪ್ರೋತ್ಸಾಹ ದೊರೆಯುವಂತೆ, ನೆರವು ನೀಡುತ್ತಿರುವುದು ಎಲ್ಲರ ಅನುಭವ. ಆ ಭಾಗಗಳಲ್ಲಿ ಇರುವ ಸುಸಂಸ್ಕೃತರ—ಸಿರಿವಂತರ—ವರ್ಗ ಹೆಚ್ಚಾಗಿ ಕನ್ನಡಿಗರಲ್ಲದವರದು; ಕೆಲವರು ಕನ್ನಡಿಗರಿದ್ದರೂ ಅವರಲ್ಲಿ ಹೆಚ್ಚಿನ ಜನ ಬಡವರ ವರ್ಗಕ್ಕೆ ಸೇರಿರುವರು. ಕಾರ್ಯವಾಡಬೇಕೆಂಬ ಹಂಬಲದಿಂದ ಹೊರಟ ಜನರು ಅಲ್ಲಿ ಇಲ್ಲಿ ಒಬ್ಬರು ಇಬ್ಬರು ಕಂಡರೂ, ನೆರವನ್ನು ಕಾಣದೆ ನಿರಾಶರಾಗಿ ಇರುವವರು. ಇವರಿಗೆ ಆಶೆಯನ್ನುಂಟು ಮಾಡುವುದಕ್ಕೆ ಹೊರನಾಡಿನ ಕನ್ನಡಿಗರ ಸಹಾನುಭೂತಿ—ಸಹಕಾರಗಳ ಆವಶ್ಯಕತೆ ತುಂಬ ಇದೆ.

ಇಂದು ಕನ್ನಡನಾಡಿನ ಕೇಂದ್ರನಗರಗಳಲ್ಲಿ ಕೂಡ ಪರಭಾಷೆಯವರ ಸಾಂಸ್ಕೃತಿಕ—ಸಾಮಾಜಿಕ—ಸಾಹಿತ್ಯಿಕ ಸಂಸ್ಥೆಗಳು ಇದ್ದು, ಅವು ಸಂಚಾಲಕರ ದೇಶಾಭಿಮಾನದ ಮೂಲಕ ಪ್ರಭಾವಶಾಲಿಯಾಗಿ ನಡೆದಿವೆ ಇಷ್ಟೇ ಅಲ್ಲ, ಸಂಚಾಲಕರ ಅಧಿಕಾರ, ಸಾಮಾಜಿಕ ಸ್ಥಾನ-ಮಾನಗಳ ಮೂಲಕ ಅವು ಕನ್ನಡಿಗರ ಕಡೆಯಿಂದ ಒತ್ತಾಯದ ನೆರವನ್ನೂ ಪಡೆಯುತ್ತಲಿವೆ. ಪರನಾಡಿನಲ್ಲಿದ್ದು ಈ ರೀತಿಯ ದೇಶಾಭಿಮಾನವನ್ನು ತೋರಿಸುವ ಕನ್ನಡದ ಹಿರಿಯರು ನಮ್ಮಲ್ಲಿ ಎಷ್ಟು ಜನರಿರುವರು? ಅವರಂತೆಯೆ, ಕರ್ನಾಟಕದಲ್ಲಿ ನೆಲೆಯಾಗಿದ್ದು ಕನ್ನಡಿಗರಿಂದ ಸಂಪಾದಿಸಿದ ದುಡ್ಡನ್ನೆ ಆ ಜನರು, ತಮ್ಮ ದೇಶದ ಉನ್ನತಿಗಾಗಿ ಹೋರಾಟ ಸಂಸ್ಥೆ-ಚಳವಳಿಗಾಗಿ ಬೇಕಾದಷ್ಟು ಸಲ್ಲಿಸುವರು. ಕನ್ನಡನಾಡಿನ ಯಾವ ಸಂಸ್ಥೆ-ಚಳವಳಿಗಳಿಗೂ ಒಂದು ಕಾಸಿನ ನೆರವೂ ಇವರಿಂದ ದೊರೆಯುತ್ತಿರುವುದಿಲ್ಲ. ಹೊರನಾಡುಗಳಲ್ಲಿ ಇರುವ ನಮ್ಮ ಜನರು ಹೀಗೆ ಮಾಡುವರೇನು? ಮಾಡದೆ ಇದ್ದರೆ ಮಾಡುವ ಆವಶ್ಯಕತೆಯಿದೆಯಲ್ಲವೆ?

ಇಂದು ತಮ್ಮ ಕೆಲಸಕ್ಕಾಗಿ ಬಂದು ನಮ್ಮಲ್ಲಿ ಇರುವ ಪರನಾಡಿಗರ ಮಕ್ಕಳಿಗಾಗಿ, ಅವರ ಮಾತೃಭಾಷೆ ಕಲಿಯುವ ಏರ್ಪಾಡನ್ನು ನಾವು ಮಾಡಿಕೊಟ್ಟಿರುತ್ತೇವೆ. ನಾವು ಮಾಡಿಕೊಡದಿದ್ದರೂ ಅವರು ಹಟ ಹಿಡಿದು, ಚಳವಳಿ ಹೂಡಿ ನಮ್ಮಿಂದ ಮಾಡಿಸಿಕೊಳ್ಳುವರು. ಸಾಧ್ಯವಿಲ್ಲದ ಸಣ್ಣ ಊರುಗಳಲ್ಲಿ ಇರುವವರು, ಮನೆಯಲ್ಲಿಯೆ ತಮ್ಮ ಮಾತೃಭಾಷೆಯನ್ನು ಕಲಿಸಾರಲ್ಲದೆ ಕನ್ನಡವನ್ನು ಕಲಿಯರು. ಅವರೆಲ್ಲ ಕನ್ನಡ ಕಲಿಯದಿದ್ದುದರಿಂದ, ಕನ್ನಡ ಪತ್ರಿಕೆ-ಪುಸ್ತಕಗಳು ಅವರ ಹೊಸತಿಲೊಳಕ್ಕೆ ಹನಿಯಿಕ್ಕುವಂತಿಲ್ಲ. ಆದುದರಿಂದಲೆ ಕನ್ನಡ ಅಂಚೆಯ ಕಾರ್ಯಾಲಯಗಳಲ್ಲಿ ಅನ್ಯಭಾಷೆಯ ಪತ್ರಿಕೆಗಳು ಒಂದು-ಹಿಂಡಾಗಿ ಬರುತ್ತಿರುವುದನ್ನು ನಾವು ನೋಡಬಹುದು. ಹೊರನಾಡಿನಲ್ಲಿರುವ ಕನ್ನಡಿಗರಿಗೆ ಇದರ ಅರಿವು ಇರಬೇಕಾಗಿಲ್ಲವೆ? ಸಾವಿರಗಟ್ಟಲೆ ಗುಂಪುಗೂಡಿ ವಾಸಿಸುವ ಕನ್ನಡಿಗರಿದ್ದಲ್ಲಿಯೂ ಇಂದು, ಅವರ ಮಕ್ಕಳಿಗೆ ಕನ್ನಡ ಕಲಿಯುವ ಏರ್ಪಾಡನ್ನು ಅಲ್ಲಿಯ ಶಿಕ್ಷಣಸಂಸ್ಥೆಗಳು ಕಲ್ಪಿಸಿಕೊಟ್ಟಿಲ್ಲ. ಹಾಗೆ ಕಲ್ಪಿಸಿಕೊಟ್ಟಿಲ್ಲವೆಂದು ಕನ್ನಡಿಗರು ಚಳವಳಿ ಮಾಡುವ ಗೋಜಿಗೂ ಹೋಗುವುದಿಲ್ಲ. ಹೋಗಲಿ, ಮನೆಯಲ್ಲಿಯೆ ಆದರೂ ಕನ್ನಡ ಕಲಿಸುವರೇ, ಕೇಳಬೇಡಿ. ಇಂದು ಹೊರನಾಡುಗಳಲ್ಲಿರುವ ಕನ್ನಡಿಗರ ಮಕ್ಕಳು, ಕನ್ನಡ ನುಡಿಯಿಂದ ಹೊರತಾದವರೆಂದೇ ಹೇಳಬಹುದು. ಇಂತಹ ಮನೆಯನ್ನಾದರೂ ಕನ್ನಡ ಪತ್ರಿಕೆ-ಪುಸ್ತಕಗಳು ಏಕೆ ಪ್ರವೇಶಿಸುವುವು?

ಕಾರ್ಯಾರ್ಥಿಗಳಾಗಿ— ತಾತ್ಕಾಲಿಕವಾಗಿ — ಹೊರನಾಡುಗಳಿಗೆ ಹೋದವರ ರೀತಿ ಬೇರೆ; ನಿರಂತರವಾಗಿ ಅಲ್ಲಿಯೆ ನೆಲಸಲು ಹೋದ ಕನ್ನಡಿಗರ ರೀತಿ ಬೇರೆ. ಇವರು ತಾವಿರುವ ಪ್ರಾಂತದ ಸಾಮಾಜಿಕ ರಾಜಕೀಯ ಜೀವನದಲ್ಲಿ ಸಮರಸರಾಗಿ ನಡೆಯಬೇಕಾದುದು ಆವಶ್ಯಕವಾಗಿರುವುದರಿಂದ, ಅಲ್ಲಲ್ಲಿಯ ಬಹುಸಂಖ್ಯಾಕರ ಭಾಷೆಯನ್ನು ಕಲಿಯಬೇಕಾದುದು ಅನಿವಾರ್ಯ; ಆದರೆ ತಮ್ಮ ಕುಲವು ಕನ್ನಡ ಕುಲಕ್ಕೆ ಸಂಬಂಧದ ಅರಿಕೆ ತಮ್ಮ ಸಂತಾನದಲ್ಲಿ ಪರಂಪರೆಯಾಗಿ ಉಳಿಯುವಂತೆ ಜಾಗ್ರತರಾಗಿರಬೇಕಾದುದೂ ಅನಿವಾರ್ಯ. ಆದುದರಿಂದ ಕನ್ನಡ ಕುಲಕ್ಕೆ ಸೇರಿದವರು ಎಲ್ಲಿಯೆ ಇದ್ದರೂ, ತಮ್ಮ ಮನೆಮಾತನ್ನು ಕನ್ನಡವನ್ನೆ ಇರಿಸಿಕೊಳ್ಳಬೇಕು. ಕನ್ನಡ ನುಡಿಯ ಮೂಲಕವೇ ತಮ್ಮ ಜೀವನದ ವಿಕಾಸವನ್ನು ಮಾಡಿಕೊಳ್ಳಬೇಕು. ವ್ಯವಸಾಯ-ವ್ಯವಹಾರಗಳ ನುಡಿಯು ಮಾತ್ರ ಅಲ್ಲಿಯ ಪ್ರಾದೇಶಿಕ ಭಾಷೆಯಾಗಬೇಕು. ಈ ಮಾತನ್ನು ನಮ್ಮ ಜನ ಮರೆತು ನಡೆದರೆ, ನಮ್ಮ ನಾಡಿಗೆ ಆಘಾತ ಬೀಳದಿರದು.

ಹೊರನಾಡಿನ ಕನ್ನಡ ಜನರು ಪರ್ಯಾಲೋಚಿಸಬೇಕಾದ ಸಮಸ್ಯೆಗಳು ಹಲವು ಇರುವುವು. ಮುಖ್ಯವಾಗಿ ಅವರು ಮಾಡಬೇಕಾದ ಕೆಲಸವೆಂದರೆ, ತಾವು ಎಲ್ಲಿಯೆ ಇದ್ದರೂ ಕನ್ನಡಿಗರಾಗಿ ಇದ್ದುಕೊಂಡು, ಕನ್ನಡ ನಾಡಿನ ಉನ್ನತಿಯ ಕಡೆಗೆ ಕಣ್ಣಿರಿಸಿ ಬಾಳುತ್ತಿರಬೇಕು. ಅವರ ಅಧಿಕಾರ ಸಂಪತ್ತು-ಜ್ಞಾನ-ಬುದ್ಧಿ-ಕಾರ್ಯಗಳು ಕರ್ನಾಟಕದ ಹಿರಿಮೆಯನ್ನು ಹೊರನಾಡುಗಳಲ್ಲಿ ಹಬ್ಬಿಸಲಿಕ್ಕೂ, ಒಳನಾಡಿನ ಜೀವನವನ್ನು ಸುಖಮಯವಾಗಿಸಲಿಕ್ಕೂ ಉಪಯೋಗವಾಗುತ್ತಿರಬೇಕು.

ಸಿರಿಗನ್ನಡಂ ಬಾಳ್ಗೆ!

—ಸಂಪಾದಕರು

೧. ಪುಕ್ಕಟ್ಟಿನ ಪಾಕಿಸ್ತಾನ

ಸಿಂಧ ಪ್ರಾಂತದಲ್ಲಿ ಎಷ್ಟು ಸಲ ಮಂತ್ರಿಮಂಡಳದ ಬಿಕ್ಕಟ್ಟು ಒದಗಿದರೂ, ಸರ್ ಗುಲಾಮ ಹುಸೇನ ಹಿದಾಯತುಲ್ಲಾರವರೆ ಮುಖ್ಯಮಂತ್ರಿಗಳಾಗಿ ಉಳಿದಿರುವರಲ್ಲ— ಎಂದು ರಾಜಕಾರಣ ಸೂಕ್ಷ್ಮವನ್ನರಿಯುವ ಮರುಳ ವಾಚಕನೊಬ್ಬನು ಮಂಗರಾಯನಿಗೆ ಬರೆಯುತ್ತಾನೆ. ಪಾಪ! ಬಿಕ್ಕಟ್ಟು ಮಂತ್ರಿ ಮಂಡಳಕ್ಕೆ ಮುಖ್ಯಮಂತ್ರಿಗಲ್ಲ ಎಂಬುದು ಈ ವಾಚಕನಿಗೆ ಹೊಳೆದಿಲ್ಲವೇನೊ! ಬಿಕ್ಕಟ್ಟು ಎಂದರೆ ‘ಬಿಗಿದು ಕಟ್ಟು’ ಎಂದು ರಾಜಕಾರಣಕೋಶದಲ್ಲಿ ಅರ್ಥವಿದೆ. ಆ ಮೇರೆಗೆ ಸರ್ ಗುಲಾಮರನ್ನು ಮುಖ್ಯಮಂತ್ರಿತನಕ್ಕೆ ಬಿಗಿದು ಕಟ್ಟಲಾಗಿದೆ! ಈ ಸ್ಥಿತಿಯಲ್ಲಿ ಗುಲಾಮರಾದರೂ ಮಾಡಬೇಕೇನು? ಇದಲ್ಲದೆ ‘ಬಿಕ್ಕದೆ ಅಟ್ಟುವುದೂ’ ಒಂದು ಅರ್ಥವಿದೆ. ಆ ರೀತಿ ಮುಖ್ಯಮಂತ್ರಿಗಳು ಒಂದು ಉಸಿರನ್ನು ಬಿಕ್ಕದೆ, ತಮ್ಮ ಹತ್ತಿರದವರನ್ನೆ ಅಟ್ಟುತ್ತಿದ್ದಾರೆ. ಈ ಎಲ್ಲ ದೃಷ್ಟಿಯಿಂದಲೂ ಸರ್ ಗುಲಾಮರಿಗೆ ಬಿಕ್ಕಟ್ಟಿನ ಅಧಿಕಾರವಿದೆ— ಅದಕಾಗಿಯೆ ಮುಂಬಯಿ ಪ್ರಾಂತದಿಂದ ಸರ್ ಗುಲಾಮ ಹುಸೇನರನ್ನೂ ಇಡಿಯ ಸಿಂಧಪ್ರಾಂತವನ್ನೂ ಬಿಡಿಸಿ ಕಟ್ಟದು ಮುಂಬಯಿ ಪ್ರಾಂತದ ಭಾಗ್ಯ ಎಂದು ಮಂಗರಾಯನ ಅಭಿಪ್ರಾಯ. ಆದರೂ ಮಂಗರಾಯನು ಒಂದು ಮಾತನ್ನು ಜಾಹೀರ್ ಪಡಿಸಲು ಮೈತುಂಬಿ ಎದ್ದಿದ್ದಾನೆ. ಅದೆಂದರೆ :—

‘ಸಿಂಧದ ಬಿಕ್ಕಟ್ಟನ್ನು ಬಿಡಿಸುವವರಿಗೆ ಪಾಕಿಸ್ತಾನವು ಪುಕ್ಕಟ್ಟೆಯಾಗಿ ದೊರೆಯಬಹುದು.’

ಗುಲಾಮ ಹುಸೇನ್ ಸಿಂಧಾಬಾದ್!

* * * *

೨. ಲಖಪತಿ-ರಾಘವ ಖರೇ ರಾಮ!

ಶ್ರೀರಾಮಚಂದ್ರನು ವನವಾಸಕ್ಕೆ ತೆರಳಿದಾಗ ಭರತನು, ಅಣ್ಣನ ಹಕ್ಕಿನ ರಾಜ್ಯವನ್ನು ಶ್ರೀರಾಮ ಪಾದುಕೆಗಳನ್ನು ಅಗ್ರಾಸನದಲ್ಲಿರಿಸಿ ನಡೆಸಿದನಂತೆ! ಇದೇನೊ ಪುರಾಣದ ಕಂತೆ, ನಂಬಲಾಗದ ನೀತಿಪಾಠದ ಜೊಳ್ಳು ಎಂದು ಕಲಿಯುಗದ ಕುದುರೆ ಕುನ್ನಿಗಳು ಹೇಳುವಾಗ, ಮಂಗರಾಯನ ಬಾಲ ದಂಡಕ್ಕೆ ಲಂಕಾದಹನದ ಬೆಂಕಿಯ ಕಾಷ್ಠದ ಸ್ಮರಣೆಯಾಗುತ್ತಿತ್ತು, ಸ್ಮರಣೆ ಅಂಕುರಿಸುತ್ತಿತ್ತು. ಆದರೆ ಇಂದು ಕಲಿಯುಗದಲ್ಲಿಯೆ ಭರತನ ಸಾಕ್ಷಾತ್ಕಾರವಾಗಿ ಮಂಗರಾಯನ ಕಂಠ ‘ಖರೆ’ ಭಯಭಕ್ತಿಗಳಿಂದ ತುಂಬಿದೆ; ನಿಂತ ಟೊಂಗೆ ನಡುಗುತ್ತಿದೆ. ಶ್ರೀರಾಮಚಂದ್ರನು ಬರುವವರೆಗೆ ಖರೆ ಸಾಹೇಬರು ಅದೆಷ್ಟು ‘ಪಾದುಕೆ’ಗಳನ್ನು ಕೂಡಿಸಿಟ್ಟದ್ದಕ್ಕಾಗಿ ಯಾರಿಗಾದರೂ ಕುತೂಹಲವಿದ್ದರೆ ಅದೀಗ ಬಯಲಾಗಬಹುದು. ಮಧ್ಯಪ್ರಾಂತದ ಮುಖ್ಯಮಂತ್ರಿತನದಿಂದ ಹೊರಬಿದ್ದು ದಿಲ್ಲಿಯ ಎಗ್ಸಿಕ್ಯೂಟಿವ್ ಕೌನ್ಸಿಲರನ ಪದವಿಯ ವರೆಗೂ ಈ ‘ಪಾದುಕೆ’ಗಳನ್ನು ಹೊತ್ತುಕೊಂಡು ಹೋದ ಖರೇ ಸಾಹೇಬರ ಭಕ್ತಿಯು ಇದಿರು ಮಂಗರಾಯನಿಗೂ ನಾಚಿಕೆಯಾಗುವಂತಿದೆ. ಖರೆ ಸಾಹೇಬರ ಭಕ್ತಿ ತನ್ಮಯತೆಯಾದರೂ ಎಂತಹದು! ಪಾದುಕೆಗಳ ಸೇವೆಯಲ್ಲಿ ನಿರತರಾಗಿ ಶ್ರೀರಾಮಚಂದ್ರನಾರು ಎಂಬುದನ್ನೆ ಮರೆತಿದ್ದಾರೆ!

ರಘುಪತಿ ರಾಘವ ರಾಜಾರಾಮ,
ಖರೇಗೆ ದಿಲ್ಲಿಯ ಐಷಾರಾಮ!

* * * *

೩. ಮಂಗರಾಯನ ಸೀದಾ ಚಾರ್ಟರ್

ಯುದ್ಧ ಮುಗಿದರೂ ಸೀದಾ ಪದ್ಧತಿ ಮುಗಿಯುವುದಿಲ್ಲವೆಂದು ಕೇಳಿ ಮಂಗರಾಯನು ಯಾಲ್ಟಾ-ಉಲ್ಲಾಕೀ ಜೈ ಎಂದು ಹಾರಾಡುತ್ತಿದ್ದಾನೆ. ಸೀದಾ ಮಹಿಮೆಯ ಮರ್ಮ ಮಂಗರಾಯನಿಗೇ ಗೊತ್ತು.

೧. ಸೀದಾ ಬರುವವರೆಗೆ ಕಟ್ಟಿಗಾಳು ಒಡವರಿಗೆ ಮಾತ್ರ ಸಲ್ಲುತ್ತಿತ್ತು; ಸೀದಾದಿಂದ ಪ್ರಜಾಪ್ರಭುತ್ವವಾಗಿದೆ.

೨. ಸೀದಾಪದ್ಧತಿ ಎಂದರೆ ಸೌಂದರ್ಯೋಪಾಸನೆ. ಸುಂದರವಾದ ಹೂವನ್ನು ಕಡಿದೊಗೆದರೆ ಅದೆಂತಹ ಪಾಪ? ಅದರಂತೆಯೆ ಉತ್ತಮವಾದ ಕಾಳನ್ನು ತಿಂದು ಧ್ವಂಸ ಮಾಡಿದರೆ ಪಾಪವಲ್ಲವೆ?

೩. ಯಂತ್ರವನ್ನು ಜಗತ್ತಿನಿಂದ ತೆಗೆದುಹಾಕಿ ಚಿರಸ್ಥಾಯಿಯಾದ ಶಾಂತಿಯನ್ನು ಸ್ಥಾಪಿಸಲು ಸೀದಾಪದ್ಧತಿಯೆ ಯೋಗ್ಯವಾದ ಉಪಾಯ, ಸೀದಾದಂಗಡಿಗಳ ಕಾಳನ್ನು ತಿಂದು ಯಾವನು ಯುದ್ಧವನ್ನಾಡಬಯಸುವಷ್ಟು ಕಸುವುಳ್ಳವನಾದಾನು?

೪. ಇದಲ್ಲದೆ ಇಷ್ಟು ದಿವಸ ಈ ಹಿಂದುಸ್ತಾನದಲ್ಲಿ ಜೀವದಿಂದಿರುವುದಕ್ಕಿಂತ ಸಾಯುವುದೆ ಲೇಸೆಂದು ಎಲ್ಲರೂ ಹಲ್ಲು ಕಿರಿದು ಸಾಯುತ್ತಿದ್ದರು; ಕಟ್ಟಿಗೆಯ ಸೀದಾ ಬಂದಂದಿನಿಂದ ಮೆಡಿಕಲ್ ಸರ್ಟಿಫಿಕೇಟಿನಂತ ಮಾಮಲೇದಾರರಿಂದ ಸೀದಾ ಪರ್ಮಿಟ್ ಪಡೆದೇ ಸಾಯಬೇಕಾದ್ದರಿಂದ, ಈಗ ಇರುವವರೂ ಹೋಗುವವರೂ ಹಲ್ಲು ಕಿರಿದು ತಿರುಗುತ್ತಿದ್ದಾರೆ!

೫. ಕೊನೆಯದಾಗಿ, ಬರಿಮೈಲೆ ತಿರುಗುವ ಜನರ ದೇಶದಲ್ಲಿ ಮೈತುಂಬ ಬಟ್ಟೆ ತೊಡುವ ಅರಿಸ್ಟಾಕ್ರಸಿ ಇದುವರೆಗೆ ಇದ್ದು, ಈಗ ಧೋತರಕ್ಕೂ (ಜೋಡಿಗಲ್ಲ, ಒಂದಕ್ಕೆ) ಸೀದಾ ಸುರುವಾಗಿ, ಮತ್ತೆ ಎಂದಿನಂತೆ ಇಡಿಯ ದೇಶದಲ್ಲಿ ಋಷಿಗಳ ತಂಡಗಳು ಪ್ರಾರಂಭವಾಗಬಹುದಾಗಿದೆ. ಅಂತೂ, ಸ್ವರ್ಗದ ಸಮೀಪಕ್ಕೆ ದೇಶದ ಜನತೆ ಬರುತ್ತಿದ್ದುದು ಈ ಮಂಗಭಾರತದ ಮಹಾ ಸೌಭಾಗ್ಯ!

ಒಂದು ಒಗಟು

(ಆಹಾರ ವಿಚಾರ)

ಶ್ರೀ. ವೆಂಕಟರಾವ ಬಿದರಕುಂದಿ, ನಂದಗಡ

ಪ್ರಪಂಚದಲ್ಲಿ ಜೀವಿಸುವ ಎಲ್ಲ ಪ್ರಾಣಿಗಳಿಗೂ ಬಿಡಿಸಲಾರದ ಒಂದು ಒಗಟು ನಿಂತಿರುವುದು. ನಾಕಿದ ಪ್ರಾಣಿಗಳ ವ್ಯತಿರಿಕ್ತ ವನವಾಸೀತರ ಪ್ರಾಣಿಗಳಿಗೆಲ್ಲ ಈ ಒಗಟನ್ನು ಬಿಡಿಸಿ ಮುಂದುವರಿವ ಸಾಮರ್ಥ್ಯವಿದ್ದುದು. ಆದರೆ ಮಾನವ ಜೀವನಾಧಾರವಾದ ಈ ಒಗಟು ಬಿಡಿಸಲಾರದಷ್ಟು ಅಸಾಧ್ಯವೆನಿಸಿತು. ಸ್ವಾತಂತ್ರ್ಯದಲ್ಲಿರುವ ಜನಸಾಮಾನ್ಯರು ನಂಬಿರುವುದರಲ್ಲಿ ಆಶ್ಚರ್ಯವಿಲ್ಲ. ಇಂತಹ ಕಠಿಣವಾದ ಸಮಸ್ಯೆಯನ್ನು ಸುಲಭ ರೀತಿಯಿಂದ ಬಿಡಿಸುವ ಕಲೆಯು, ಶ್ರೀ ಎಸ್‌. ಆರ್‌. ಮಸಾನಿ, ಬಾರ್ ಅಟ್ ಲಾ, ಮುಂಬೈ ಅವರಿಗೆ ಸಾಧಿಸಿರುವುದು. ಈ ಮಹನೀಯರು ಈವರೆಗೆ ಬರೆದಿರುವ "ಅವರ್ ಇಂಡಿಯಾ" "ಸೋಶಾಲಿಝಮ್" ಮತ್ತು "ರೀಕನ್ಸೀಡರ್ಡ್" ಎಂಬ ಪುಸ್ತಕಗಳು, ಈ ನಮ್ಮ ಅಜ್ಞಾನಾಂಧಕಾರಕ್ಕೆ ದೀವಟಿಗೆಗಳಾಗಿರುವುವು

ಬಂಗಾಲದ ಕ್ಷಾಮವು ಮಾನವಹೃದಯಕ್ಕೆ ಸಹಿಸಲಾರದಷ್ಟು ಭಯಾನಕವೆನಿಸಿ ಅನ್ನಾನ್ನವೆಂದು ಪ್ರಾಣಬಿಟ್ಟ ಲಕ್ಷಾವಧಿ ಪ್ರೇತಗಳ ಮೇಲೆ, ಶ್ರೀ. ವಾಜಪೇಯಿಯವರು ಮುಸುಕು ಎಳೆಯುವ ಪತ್ರದ್ವಾರೆ ಹಿಂದೀ ಬಂಡವಾಳಗಾರರೇ ಆಹಾರಧಾನ್ಯವನ್ನು ಬಚ್ಚಿಟ್ಟು ಕಳ್ಳ ಮಾರ್ಕೆಟನ್ನು ನಿರ್ಮಾಣ ಮಾಡಿ, ಈ ಬಂಗಾಲ ಬರಗಾಲಕ್ಕೆ ಕಾರಣರಾಗಿರುವರೆಂದು ಅಮೇರಿಕೆಯಲ್ಲಿ ಪ್ರಚಾರ ಮಾಡುತ್ತಿರುವರು.

ಭಾರತ ಮಂತ್ರಿ ಅಮೇರಿ ಸಾಹೇಬರು 'ಇದು ಕೊಳಬಕ್ಕತನದ ಪರಿಣಾಮ.' ಎಂದು ಬೊಟ್ಟು ಮಾಡಿ ತೋರಿಸಿದರೆ, ಪ್ರಧಾನ ಸಚಿವ ರಾವ ಚರ್ಚಿಲ್ ಸಾಹೇಬರು 'ಪ್ರಜಾವೃದ್ಧಿಯೇ ಹಿಂದುಸ್ತಾನದ ಅನ್ನಾನ್ನಗತಿಗೆ ಕಾರಣ' ಎಂದು ಘಂಟಾಘೋಷವಾಗಿ ಸಾರಿರುವರು. ಇಂತಹ ವೇದವಾಕ್ಯಗಳು ಗಾಳಿಮಂಟಪದಲ್ಲಿ ತೂಗಾಡುತ್ತಿರುವಾಗ, ಶ್ರೀ. ಮಸಾನಿಯವರ "**ಯುವರ್ ಫುಡ್** (ನಿಮ್ಮ ಅನ್ನ)" ಎಂಬ ಪುಸ್ತಕದ ವಾಯುಶಕ್ತಿಯಿಂದ ಆ ಪಟಗಳು ಅಲ್ಲೋಲ ಕಲ್ಲೋಲವಾಗಿ ಚಾರಾಡಿ ಹರಿದುಹೋಗಿವೆ.

ಶ್ರೀ. ಮಸಾನಿಯವರು ತಮ್ಮ "ಯುವರ್ ಫುಡ್" ಪುಸ್ತಕದಲ್ಲಿ ಮೊದಲು ಈ ಪ್ರಶ್ನೆಗಳನ್ನು ಎತ್ತಿರುವರು:—

ಜಗತ್ತಿನ ಎಲ್ಲ ದೇಶಗಳ ಮನುಷ್ಯರಿಗಿಂತ ಹಿಂದೀಯರು ಶಕ್ತಿ, ಸ್ಥೈರ್ಯ, ಸಂಶೋಧನೆ, ಕಾರ್ಯಕರ್ತೃತ್ವ ಇತ್ಯಾದಿ ಗುಣಗಳಲ್ಲಿ ಹಿಂದುಳಿದವರಾಗಿ ಕಾಣಿಸುವರೇಕೆ?

ಅಮೇರಿಕೆಯಲ್ಲಿ ಕೆಲಸ ಮಾಡುವ ಕೂಲಿಕಾರರ ಕೆಲಸದ ಪ್ರಮಾಣವನ್ನು ಸರಾಸರಿಯಿಂದ ತೆಗೆದರೆ, ಒಬ್ಬ ಕೂಲಿಯವನು ವರುಷದಲ್ಲಿ ೫೮೯ ಟನ್ನಿನಷ್ಟು ಉತ್ಪಾದನೆ ತೆಗೆಯುತ್ತಾನೆ. ಇಂಗ್ಲಂಡಿನಲ್ಲಿ ೩೨೦ ಟನ್ನು ಹೊರಡುತ್ತಿದ್ದರೆ, ಜರ್ಮನಿಯಲ್ಲಿ ಇದರ ಪ್ರಮಾಣವು ೨೪೩ ಟನ್ನು ಬೀಳುವುದು; ಆದರೆ ನಮ್ಮ ಹಿಂದುಸ್ತಾನದಲ್ಲಿ ಬರಿ ೮೨ ಟನ್ನು ಮಾತ್ರ! ಏಕೆ?

ಮೃತ್ಯುವಿನ ಪ್ರತಿ ಸಾವಿರದ ಪ್ರಮಾಣವು. ಅಮೇರಿಕೆಯಲ್ಲಿ ೧೧.೨ ಇದ್ದರೆ ಹಿಂದುಸ್ತಾನದಲ್ಲಿ ಅದರ ಇಮ್ಮಡಿ. ಇದರಲ್ಲಿ ಹತ್ತು ವರುಷದ ಒಳಗಿನ ಬಾಲಕರ ಮೃತ್ಯುವಿನ ಸಂಖ್ಯೆಯು ಅರ್ಧದಷ್ಟು. ಮೂರು ವರುಷದ ಒಳಗಿನ ಶಿಶುಗಳು ಪ್ರತಿ ಸಾವಿರಕ್ಕೆ ೧೬೨ ಯಮಸದನಕ್ಕೆ ಹೋಗುವುವು. ಬಾಲಮೃತ್ಯುವಿಗಂತೂ ಅಳತೆಯಿಲ್ಲ ಅಲ್ಲದೆ ಪ್ರತಿ ವರುಷ ೨,೦೦೦,೦೦ ಮಾತೆಯರು (ಬಾಣಂತಿಯರು) ಇಹಲೋಕದಿಂದ ತೆರಳುವರು. ಹೀಗೇಕೆ?

ಹಿಂದುಸ್ತಾನದ ದುರ್ದಶೆಯು ಹೀಗೇಕಾಗುತ್ತ ನಡೆದಿದೆ? ನಮ್ಮ ಅಂಗೈಯೊಳಗಿನ ಆಯುಷ್ಯರೇಷೆಯೇ ಆಕುಂಚನಗೊಂಡಿರುವುದೋ?

೨೦ ವರುಷಗಳಿಗೆ ಮೊದಲು ರಶಿಯಾದಲ್ಲಿ (ಝಾರ್ ರಶಿಯಾ) ಬಾಲಮೃತ್ಯುವಿನ ಸಂಖ್ಯೆಯು ಅತಿಯಾಗಿತ್ತು; ಅದು ಕೇವಲ ಮಾನವ ಪ್ರಯತ್ನದಿಂದಲೆ ಅಲ್ಲಿ (ಸಮತಾವಾದ ರಶಿಯಾ) ಕಡಿಮೆಯಾಗಿದೆ. ಆದರೆ ಹಿಂದುಸ್ತಾನದಲ್ಲಿ ಮಾತ್ರ ಅದರ ಪ್ರಮಾಣ ಬೆಳೆಯುತ್ತ ನಡೆದಿರುವುದೇಕೆ?

ಇವೆಲ್ಲಕ್ಕೆ ಪರಕೀಯ ಸರಕಾರದ ಅನಾಸ್ಥೆಯೇ ಮುಖ್ಯ ಕಾರಣ ಇದ್ದರೂ, ನಮ್ಮದೂ ಕೆಲ ಭಾಗ ಈ ಅಕಾರಣ ಮಾನವ ಸಂಹಾರದಲ್ಲಿ ಕೈ ಇರುವದೋ ಹೇಗೆ?

ಇವೇ ಮೊದಲಾದ ಪ್ರಶ್ನೆಗಳನ್ನೊಡ್ಡಿ ಶ್ರೀ. ಮಸಾನಿಯವರು, ತಮ್ಮ "ಯುವರ ಫುಡ್" ಪುಸ್ತಕದಲ್ಲಿ ಎಲ್ಲರೂ ಕಣ್ಣು ತೆರೆಯುವಷ್ಟು ಸ್ಪಷ್ಟಶಬ್ದಗಳಿಂದ ಉತ್ತರವನ್ನಿತ್ತಿರುವರು.

ಹಿಂದುಸ್ತಾನದಲ್ಲಿ ಜನಸಂಖ್ಯೆಯು ೫/೭ ದಷ್ಟು ಜನರಿಗೆ ಮಾತ್ರ ಹೊಟ್ಟೆ ತುಂಬುವಷ್ಟು ಇಲ್ಲಿ ಅನ್ನ ನಿರ್ಮಾಣವಾಗುತ್ತದೆ. ಶಾಸ್ತ್ರೀಯ ದೃಷ್ಟಿಯಿಂದ ಅವಶ್ಯವಿದ್ದಷ್ಟೇ ಆಹಾರವನ್ನು ಎಲ್ಲರೂ ತೆಗೆದುಕೊಳ್ಳಬೇಕೆಂದು ನಿರ್ಧರಿಸಿದರೆ, ಏಳು ಜನರಲ್ಲಿ ಇಬ್ಬರು ನಿರಾಹಾರ ಮಾಡಬೇಕಾಗುತ್ತದೆ.

ಪ್ರತಿಯೊಬ್ಬ ಮನುಷ್ಯನಿಗೆ ೨,೮೦೦ ಕೆಲರಿ ಉಷ್ಣತೆಯನ್ನು ಉತ್ಪನ್ನ ಮಾಡುವ ಅನ್ನದ ಅವಶ್ಯಕತೆ ಇದೆ; ಆದರೆ ಹಿಂದೀ ಜನರಿಗೆ ೨,೦೦೦ ಕೆಲರಿಯಷ್ಟು ಮಾತ್ರ ಸಿಕ್ಕುತ್ತದೆ. ಇಷ್ಟರಿಂದ ಉತ್ಸಾಹಶಕ್ತಿ ಎಲ್ಲಿಂದ— ಹೇಗೆ—ಬರಬೇಕು? ಧೈರ್ಯದ ಕೆಲಸ ಹೇಗಾಗಬೇಕು?

ಯುದ್ಧಕಾಲದಲ್ಲಿ ಕೂಡ ಜರ್ಮನಿಯು ಕೂಲಿಕಾರರ ರೇಶನಿಂಗ್ ೪,೦೦೦ ಕೆಲರಿ ಉಷ್ಣತೆಯದು ಇರುತ್ತದೆ. ಅಮೇರಿಕೆಯು ನಾಗರಿಕರಿಗೆ ೩,೫೦೦ ಕೆಲರಿ ಉಷ್ಣತೆಯ ಅನ್ನವನ್ನು ಕೊಟ್ಟರೆ, ಸೈನಿಕರಿಗೆ ೪,೫೦೦ ಕೆಲರಿ ಉಷ್ಣತೆಯ ಅನ್ನವನ್ನು ಪೂರೈಸುವರು. ಎಂದರೆ ನಮ್ಮ ಎರಡರಷ್ಟು ಅನ್ನ ಅವರಿಗೆ ಸಿಕ್ಕುವುದು. ಅನ್ನವೆಂದರೆ ಅಕ್ಕಿ ಗೋದಿ, ಬೇಳೆ, ಪಲ್ಲೆ—ಕಾಯಿ, ಹಣ್ಣು—ಹಂಪಲ, ಹಾಲು-ಹೈನ ತತ್ತಿ—ಮಾಂಸ ಇತ್ಯಾದಿ.

ಹಿಂದುಸ್ತಾನದಲ್ಲಿ ನಿಸ್ಸತ್ತ್ವ ಮತ್ತು ಅರೆಹೊಟ್ಟೆ ಅನ್ನ ಸಿಕ್ಕು-ವುದರಿಂದಲೇ ಜನರು ಜ್ವರ-ಕ್ಷಯದಂತಹ ಸಾಂಕ್ರಾಮಿಕ ರೋಗಗಳಿಗೆ ಬಲಿ ಬೀಳುವರು. ಬರಗಾಲದಲ್ಲಿ ಕ್ರಿಮಿ-ಕೀಟಕಗಳಂತೆ ಪಟಪಟ ಬಿದ್ದು ಸಾಯುವರು. ಅಂತೆಯೆ ಜನಸಂಖ್ಯೆಯು ಕರಗುವುದು.

ಚರ್ಚಿಲ್ ಸಾಹೇಬರು ಬಾಯ್ಗೆ ಬಂದುದನ್ನು ಹೇಳಲಿ; ಇತಿಹಾಸದಿಂದ ಸಿದ್ಧವಾಗುವ ಸತ್ಯ ಹೀಗಿದೆ:-೧೮೭೦ರಿಂದ ೧೯೩೦ರ ವರೆಗಿನ ೬೦ ವರುಷದಲ್ಲಿ, ಹಿಂದುಸ್ತಾನದ ಲೋಕಸಂಖ್ಯೆಯು ೧೦೦ಕ್ಕೆ ೩೭ ದಷ್ಟು ಬೆಳೆದಿದೆ. ಆದರೆ ಇಂಗ್ಲಂಡಿನಲ್ಲಿ ಈ ಅವಧಿಯು ೧೦೦ ರ ಪ್ರಮಾಣವು ೭೭ ರಷ್ಟು ಬೆಳೆದಿದೆ. ಜಪಾನಿನದು ೧೧೩ ರ ವರೆಗೆ ಬೆಳೆದಿರುವುದು; ರಶಿಯಾ ದೇಶದ ಪ್ರಮಾಣವಂತೂ ೧೦೦ಕ್ಕೆ ೧೧೫ ರಷ್ಟು ವೃದ್ಧಿಂಗತವಾಗಿರುವುದು

ಹಿಂದುಸ್ಥಾನದಲ್ಲಿಯ ದಾರಿದ್ರ್ಯ, ದೌರ್ಬಲ್ಯ, ಅಪಮೃತ್ಯುವಿನ ಕಾರಣಗಳು ಪ್ರಜಾವೃದ್ಧಿಯಿಂದಲ್ಲ; ಕೃಷಿ, ಕೈಗಾರಿಕೆ, ವ್ಯಾಪಾರಗಳ ಧಂದೆಯು ಬೆಳವಣಿಗೆಯು ಕುಗ್ಗಿರುವದರಿಂದ. ಇದನ್ನು ಶ್ರೀ. ಮಿಚೆಲ-ರಂತಹ ಸಮಾಜ ಶಾಸ್ತ್ರಜ್ಞರು ಸ್ವಚ್ಛವಾಗಿ ಹೇಳುತ್ತಾರೆ.

ಇಂತಹ ಪರಿಸ್ಥಿತಿಯಲ್ಲಿ "ಹೆಚ್ಚು ಧಾನ್ಯ ಬೆಳೆಯಿರಿ'' ಎಂಬ ಶಾಬ್ದಿಕ ಪ್ರಚಾರದಿಂದ ಏನಾಗುವುದು? ಒಂದೆಡೆ ಎಲ್ಲ ಮಹಾವೃಕ್ಷ-ಗಳ ಸತ್ತ್ವವನ್ನು ಹೀರಿ, ಮತ್ತೊಂದೆಡೆ ಎಲೆಗಳ ಮೇಲೆ ನೀರು ಸಿಂಪಡಿಸಿದಂತೆ ಈ ಪ್ರಚಾರವಿರುವುದು.

ಈಗ ಹಿಂದುಸ್ಥಾನದಲ್ಲಿ ೩೬,೦೦,೦೦,೦೦೦ ಎಕರೆ ಭೂಮಿ ಯಲ್ಲಿ ಪಯಿರನ್ನು ತೆಗೆದುಕೊಳ್ಳುವರು; ಮತ್ತು ೨೫,೦೦ ೦೦,೦೦೦ ಎಕರೆ ಭೂಮಿ ಸಾಗುವಳಿ ಮಾಡುವಂತಹದಿರುವುದು. ಆದರೆ ಈ "ಹೆಚ್ಚು ಧಾನ್ಯ ಬೆಳೆಯಿರಿ'' ಎಂಬ ಚಳವಳಿಯಿಂದ ೭೫,೦೦,೦೦೦ ಎಕರೆ ಭೂಮಿ ಮಾತ್ರ ಸಾಗುವಳಿಯಾಯಿತು. ಇವರಲ್ಲಿ ಅಕ್ಕಿ, ಗೋದಿಗಳಬೆಳೆಗಳು ಹೆಚ್ಚಾಗಿರುವುದಿಲ್ಲ.

ಸ್ವತಂತ್ರದೇಶವು ತನ್ನದೆಂಬ ಭಾವನೆಯಿಂದ ಎಷ್ಟು ಕಾರ್ಯ ತತ್ಪರತೆಯಿಂದ ನಡೆಯುವುದೆಂಬುದಕ್ಕೆ ಇಂಗ್ಲಂಡಿನ ಉದಾಹರಣೆ ಯೊಂದು ಸಾಕು. ಯುದ್ಧಕ್ಕೆ ಮೊದಲು ಒಂದು ವರುಷದ ಹಿಂದೆ ಎಂದರೆ ೧೯೩೮ರಲ್ಲಿ, ಅವಶ್ಯವಿದ್ದ ಅನ್ನಧಾನ್ಯಗಳಲ್ಲಿ ೧೦೦ಕ್ಕೆ ೪೦ ರಷ್ಟು ಮಾತ್ರ ಅಲ್ಲಿ ಬೆಳೆಯುತ್ತಿದ್ದರು. ಆವರ ಯುದ್ಧ ಪ್ರಾರಂಭವಾಗಿ ಇಂಗ್ಲಂಡಿನ ಬಾಗಿಲವರೆಗೆ ಬಂದಾಗ—೧೯೪೨ರಲ್ಲಿ—೧೦೦ಕ್ಕೆ ೬೦ ರಷ್ಟು, ಮುಂದೆ ೧೯೪೩ರಲ್ಲಿ ೧೦೦ಕ್ಕೆ ೭೫ ರಷ್ಟು— ಅನ್ನಧಾನ್ಯ ಬೆಳೆಯ ತೊಡಗಿದ್ದಾರೆ.

ಹಿಂದುಸ್ತಾನದ ಹೊಲಗಳಲ್ಲಿ ಉತ್ತಮ ಪಯಿರನ್ನು ಬೆಳೆಯಿ-ಸುವ ಪ್ರಯತ್ನ, ಹಿಂದಿನ ೧೫೦ ವರುಷಗಳಲ್ಲಿ ಸರಕಾರದ ಕನಸಿನಲ್ಲಿ ಕೂಡ ಬರಲಿಲ್ಲ. ಇದೀಗ ಮಾತ್ರ ಒಂದು ಶಾಸ್ತ್ರಶುದ್ಧ ಗೊಬ್ಬರದ ಕಾರಖಾನೆಯನ್ನು ತೆಗೆಯುವ ವಿಚಾರವನ್ನದು ಮಾಡತೊಡಗಿದೆ. ಇಂತಹ ಅನಾಸ್ಥೆಯಿಂದಲೆ ಹಿಂದುಸ್ತಾನದ ಹೊಲಗಳಲ್ಲಿ, ಒಂದು ಎಕರೆಗೆ ೪೦೦ ಸೇರು ಮಾತ್ರ ಅಕ್ಕಿಯನ್ನು ಬೆಳೆಯುತ್ತಾರೆ. ಚೀನ ದಲ್ಲಿ ಒಂದು ಎಕರೆ ಹೊಲದಲ್ಲಿ ೬೦೦ ಸೇರು ಅಕ್ಕಿಯನ್ನು ಒಕ್ಕುತ್ತಿ-ದ್ದರೆ, ಅಮೇರಿಕೆಯವರು ೭೨೫ ಸೇರು ಒಕ್ಕುವರು. ಇಜಿಪ್ತದ ಪ್ರಮಾಣವು ೧೦೦೦ ಸೇರು ಇದ್ದರೆ, ಜಪಾನಿನ ಒಂದು ಎಕರೆ ಹೊಲ ದಲ್ಲಿ ೧೧೫೦ ಸೇರಿನ ವರೆಗೆ ಅಕ್ಕಿಯನ್ನು ಒಕ್ಕುವರು. ಇಟಾಲಿ ಯಲ್ಲಿ ಒಂದು ಎಕರೆ ಹೊಲದಲ್ಲಿಯೆ ೧೫೦೦ ಸೇರಿನ ವರೆಗೆ ಅಕ್ಕಿ ಯನ್ನು ಬೆಳೆಯುತ್ತಾರೆ. ಇದರಂತೆ ಗೋದಿ, ಕಬ್ಬು ಇತ್ಯಾದಿಗಳ ಉತ್ಪಾದನೆಗಳಲ್ಲಿಯೂ ವ್ಯತ್ಯಾಸವಿರುವುದು. ಹೊಲಗಳ ವಿಸ್ತಾರ ಮತ್ತು ಶಕ್ತಿ ಈ ಎರಡನ್ನೂ ಹೆಚ್ಚಿಸುವ ಸಾಮರ್ಥ್ಯ ಸರಕಾರಕ್ಕೇ ಇರುವುದು.

ಇನ್ನು "ಹುಟ್ಟಿಸಿದ ದೇವರು ಹುಲ್ಲು ಮೇಯಿಸುವನೇ?" ಎಂದು ವಿಧಿಲಿಖಿತದ ಕಡೆಗ ಬೊಟ್ಟುಮಾಡಿ, ಸರಕಾರಕ್ಕೆ ದೋಷ ಕೊಟ್ಟು ಸ್ವಸ್ಥವಾಗಿ ಕುಳಿತುಕೊಳ್ಳುವುದು ಮನುಷ್ಯಧರ್ಮಕ್ಕೆ ಶೋಭಿಸಲಾರದು. ಪರತಂತ್ರ ಪ್ರಜೆಗಳೂ ಅಲ್ಪಸ್ವಲ್ಪ ಪ್ರಗತಿಯ ಕಾರ್ಯ ಮಾಡಲು ಸಾಧ್ಯವಿದೆ. ಕೇವಲ ಜನರ ಅಲಕ್ಷ್ಯದಿಂದಲೇ ಪ್ರತಿ ವರುಷ ೩೩ ಲಕ್ಷ ಟನ್ನು ಧಾನ್ಯವು ನಾಶವಾಗುತ್ತದೆ. ಇದ ರಲ್ಲಿ ೧೦ ಲಕ್ಷ ಟನ್ನಿನಷ್ಟು ಅನ್ನಧಾನ್ಯಗಳನ್ನು ಇಲಿಗಳೇ ತಿಂದು ನಾಶಮಾಡುತ್ತವೆ. ಉತ್ತಮವಾದ ಹಗೆ, ಕಣಜುಗಳನ್ನು ಕಟ್ಟಿಸಿದಲ್ಲಿ ಈ ನಾಶವು ಆಗಲಿಕ್ಕಿಲ್ಲ.

ಎಮ್ಮೆ-ಆಕಳುಗಳ ಸಂಗೋಪನವನ್ನು ಮಾಡಿ ಹಾಲಿನ ಉತ್ಪಾದನೆಯನ್ನು ಹೆಚ್ಚಿಸಿದರೆ, ೧೦೦೦ ಕೋಟಿ ರೂಪಾಯಿಗಳ ಉತ್ಪನ್ನವು ಒಕ್ಕಲಿಗರ ಪದರಿನಲ್ಲಿ ಬೀಳುವುದು. ಈಗಿನ ಹಾಲು-ಹೈನದ ಸ್ಥಿತಿಗತಿಯನ್ನು ನೋಡಿದರೆ, ಒಬ್ಬನಿಗೆ ಸರಾಸರಿ ಸಿಂಧದಲ್ಲಿ ೧೮ ಔಂಸು, ಪಂಜಾಬದಲ್ಲಿ ೧೫.೨ ಔಂಸು, ಸಂಯುಕ್ತ ಪ್ರಾಂತದಲ್ಲಿ ೭, ಮುಂಬೈ ೫.೫, ಮದ್ರಾಸ ೩.೭, ಬಂಗಾಲ ೨.೮, ಮಧ್ಯಪ್ರಾಂತ ೧.೮ರಂತೆ ಇರುವುದು. ಮನುಷ್ಯಸಂವರ್ಧನೆಗೆ ಇದು ತೀರ ಕಡಿಮೆಯಾದ ಪ್ರಮಾಣವಾಗುವುದು. ಹಿಂದೀಯರಿಗಿಂತ ಇಂಗ್ಲಂಡ್, ಅಮೇರಿಕೆಯ ಜನರು ೪-೫ ಮಡಿ ಹೆಚ್ಚು ಹಾಲು ಕುಡಿಯುವರು; ಬೆಣ್ಣೆಯನ್ನು ತಿನ್ನುವರು. ಚೀಜ್-ಆಯಸ್ಕ್ರೀಮಿನಂತಹ ಶಕ್ತಿವರ್ಧಕ ಪದಾರ್ಥಗಳನ್ನು ಸೇವಿಸುವರು. ಅಂತಹ ಸ್ಥಿತಿಯು ನಮ್ಮಲ್ಲಿ ಬರಬೇಕಾದರೆ, ನಮ್ಮ ನವಕೋಟಿ ನಾರಾಯಣರು ಕೇವಲ ಲಾಭಬಡಕತನದ ಬೆನ್ನುಹತ್ತಿ ಮೋಟಾರ್-ವಿಮಾನ ಕಾರಖಾನೆಗಳನ್ನು ತೆಗೆಯುವುದಕ್ಕಿಂತ, ದೊಡ್ಡ ಪ್ರಮಾಣದ ದುಗ್ಧಾ-ಲಯವನ್ನು ನಿರ್ಮಿಸಿದರೆ???

ಜನರ ದಾರಿದ್ರ್ಯದಷ್ಟೇ ಅಜ್ಞಾನವನ್ನೂ ಸರಕಾರದವರು ಬಚ್ಚಿಟ್ಟಿರುವರು. ಬಹುಸಂಖ್ಯಾಕ ನಾಗರಿಕರನ್ನು ನಿರಕ್ಷರರನ್ನಾಗಿ ಇಟ್ಟಿರುವುದರಿಂದ, ಅವರಿಗೆ ಪರಿಸ್ಥಿತಿಯ ಲೆಕ್ಕಾಚಾರ ತಿಳಿಯದಿರು-ವುದು ಸೋಜಿಗವಲ್ಲ. ಸುಶಿಕ್ಷಿತರಿಗೇ ಆರೋಗ್ಯದ ವಿಷಯವಾಗಿ ಸಾಕಷ್ಟು ಜ್ಞಾನವಿರುವುದಿಲ್ಲ.

ಗಿರಣಿಗಳಲ್ಲಿ ಪಾಲೀಶ್ ಮಾಡಿದ ಶುಭ್ರವಾದ ಅಕ್ಕಿಯನ್ನು, ಕುದಿಸುವಾಗ ಬಸಿದು ಅನ್ನ ಮಾಡಿ ತಿನ್ನುವುದೆಂದರೆ, ಅಜ್ಞಾನವಲ್ಲದೆ ಮತ್ತೇನು? ಪ್ರೋಟೀನ್, ಲೋಹ, ಫಾಸ್ಫರಸ್ ಮತ್ತು ಜೀವನ ಸತ್ತ್ವ (ಬ) ಇವನ್ನು, ಅಕ್ಕಿಯನ್ನು ಪಾಲೀಶ್ ಮಾಡಿ ಕುದಿಸಿ ನೀರು ತೆಗೆದು ಚೆಲ್ಲಿ ಬಿಡುತ್ತೇವೆ.

(೩೦೬ನೆಯ ಪುಟ ನೋಡಿರಿ)

ಕರ್ನಾಟಕ ಏಕೀಕರಣ

'ಚಾಣಿಯ ಚಾಣಕ್ಯ'

ಪ್ರಸ್ತುತ ಲೇಖಕನು ತಜ್ಞನಲ್ಲ, ಆದರೆ ಪೂರ್ತಿಯಾಗಿ **ಅಜ್ಞನೂ ಅಲ್ಲ;** ತನ್ನ ಹಿತ ಯಾವುದು ಎಂಬುದನ್ನು ಚೆನ್ನಾಗಿ ತಿಳಿದುಕೊಳ್ಳುವ ಮತ್ತು ಅಷ್ಟೆ ಚೆನ್ನಾಗಿ ಅನ್ಯರಿಗೆ ತಿಳುಹಿಸಬಲ್ಲ ಯೋಗ್ಯತೆಯ ಸಾಮಾನ್ಯ ಕನ್ನಡಿಗನಾಗಿದ್ದಾನೆ. ಈ ಚಿಕ್ಕ ಹೊತ್ತಿಗೆಯಲ್ಲಿ ಏಕೀಕರಣದ ವಿಷಯವಾಗಿ ಸರ್ವಸಾಮಾನ್ಯನಿಗೂ ತಿಳಿಯುವಂತ ಶೈಲಿ ಇದೆ. ದುಂಡುಮೇಜಿನ ಪರಿಷತ್ತಿನ ಕಾಲಕ್ಕೆ ಸಿಂಧಪ್ರಾಂತ ನಿರ್ಮಾಣದ ಉಪಸಮಿತಿಯ ವಿವರಗಳು, ಅದೇ ಕಾಲಕ್ಕೆ ಶ್ರೀ. ಪಿ. ಶಿವರಾಯರು ಏಕೀಕರಣದ ಬಗ್ಗೆ ಒಪ್ಪಿಸಿದ ಮನವಿ ಮತ್ತು ಶ್ರೀ. ಪಿ. ಚಂದ್ರಶೇಖರ ಹೆಗ್ಡೆ ಅವರು (ಮಾರ್ಚ ೧೯೪೮ರಲ್ಲಿ) ಪ್ರಕಟಿಸಿದ 'ಕರ್ನಾಟಕದ ದಿಗ್ದರ್ಶನ, 'Whither Karnataka?' ಎಂಬ ಹೊತ್ತಿಗೆ—ಈ ಮೂರರ ಅಭ್ಯಾಸದ ತಳಹದಿಯ ಮೇಲೆ ಸದ್ಯದ ಚಿಕ್ಕ ಹೊತ್ತಿಗೆ ನಿಂತಿದೆ. ಆದರೆ ಇಲ್ಲಿ ಕಂಡುಬರುವ ವಿಚಾರಸರಣಿಗೆ ಮಾತ್ರ ಲೇಖಕನು ಯಾರಿಗೂ ಋಣಿಯಾಗಬೇಕಾಗಿಲ್ಲ. ಸದ್ಯದ ಕಾಲದಲ್ಲಿ ಈ ಚಿಕ್ಕ ಹೊತ್ತಿಗೆಯು ಕನ್ನಡಿಗರನ್ನು ಕೆಣಕಿದರೆ ಸಾಕು, ಲೇಖಕನು ಕೃತಾರ್ಥನಾಗುವನು

'ಚಾ. ಚಾ.'

ಏಕೀಕರಣವು ಇಂದಿನ ರಾಜಕೀಯ ತತ್ತ್ವ

೧೯೧೪ರ ಯುದ್ಧವನ್ನು ಕಂಡವರು ಅನೇಕರಿದ್ದಾರೆ; ಆ ಯುದ್ಧವನ್ನು ಮರೆಯುವವರು ಯಾರೂ ಇರಲಿಕ್ಕಿಲ್ಲ. ಆ ಯುದ್ಧದಲ್ಲಿ ಅಡಕವಾದ ರಾಜಕೀಯ ತತ್ತ್ವವನ್ನು ತರುವಾಯದ ಘಟನೆಗಳಿಂದ ಒಂದು ವೇಳೆ ಯಾರಾದರೂ ಮರೆತಿದ್ದರೆ, ಸನ್ಯಕ್ತೆ ನಡೆದ ಯುದ್ಧವು ಅವರ ಸ್ಮೃತಿಯನ್ನು ಹೊಡೆದೆಬ್ಬಿಸುವುದು. ಮುವ್ವತ್ತು ವರ್ಷಗಳ ಹಿಂದೆ ಜರ್ಮನ್ ಸೇನೆಯು ಬೆಲ್ಜಿಯಂದಲ್ಲಿ ಕಾಲಿಟ್ಟೊಡನೆ ಇಂಗ್ಲೆಂಡ್-ಫ್ರಾನ್ಸುಗಳು ಸಿಡಿದೆದ್ದುವು. ಯಾಕೆ? ರಾಜಕಾರಣದ ರಂಗದಲ್ಲಿ ಸ್ವಾತಂತ್ರ್ಯದ ಮತ್ತು ಸ್ವಯಂನಿರ್ಣಯದ ತತ್ತ್ವಗಳ ಸಂರಕ್ಷಣೆಗಾಗಿ. ರಾಷ್ಟ್ರವು ಚಿಕ್ಕದಿರಲಿ ದೊಡ್ಡದಿರಲಿ, ತನ್ನ ಜೀವನವನ್ನು ನಡೆಯಿಸುವ ಮತ್ತು ತನ್ನ ಭವಿತವ್ಯತೆಯನ್ನು ನಿರ್ಣಯಿಸುವ ಹಕ್ಕು-ಸ್ವಾತಂತ್ರ್ಯಗಳು ಅದಕ್ಕಿವೆ. ಒಂದು ದೇಶ, ಒಂದು ಜನಾಂಗ, ಒಂದು ಸಂಪ್ರದಾಯ ಇವುಗಳ ಮೇಲೆ ಇನ್ನೊಂದರ ಬಲವಂತಿಕೆ ಇರಕೂಡದು. ವಿಶ್ವದ ಶಾಂತಿಗಾಗಿ ವಿಶ್ವದ ಘಟಕಗಳಾದ ರಾಷ್ಟ್ರಗಳಿಗೆ ಸ್ವಯಂನಿರ್ಣಯದ ಹಕ್ಕು ಅಗತ್ಯವಿದೆ. ಇದೇ ಮಾತನ್ನು ಅನ್ವಯಿಸುವುದಾದರೆ—ಈ ಮಾತು ನಿಜವಾದ ತತ್ತ್ವವಾಗಿದ್ದರೆ ಅದರ ಅನ್ವಯವಾಗಲೇಬೇಕು—ಇಂದು ತನ್ನದೆ ಇತಿಹಾಸ, ತನ್ನದೆ ಸಂಪ್ರದಾಯ, ತನ್ನದೆ ಸಂಸ್ಕೃತಿ ಉಳ್ಳ ಕರ್ನಾಟಕಕ್ಕೂ ಸ್ವಯಂನಿರ್ಣಯದ ಅಧಿಕಾರ ಬೇಕಲ್ಲವೆ? ಭಾರತದ ಶಾಂತಿ-ಪೋಷಣಗಳಿಗಾಗಿ, ಕರ್ನಾಟಕಕ್ಕೆ ತನ್ನ ಜೀವನವನ್ನು ತಾನು ನಡೆಯಿಸುವ ಅಧಿಕಾರ ಬೇಕಲ್ಲವೆ?

ಏಕೀಕರಣದಿಂದ ರಾಷ್ಟ್ರೀಕರಣಕ್ಕೆ ಹಾನಿ ಇಲ್ಲ!

ಕರ್ನಾಟಕವು ಬೆಲ್ಜಿಯಂದಂತೆ ಒಂದು ಸ್ವತಂತ್ರ ರಾಷ್ಟ್ರವಲ್ಲ, ಭಾರತದ ಒಂದು ಅಂಗ, ಇಂದು ಭಾರತವನ್ನೆ ಒಂದಾಗಿ ರಾಷ್ಟ್ರೀಕರಿಸುವಾಗ ಕರ್ನಾಟಕ ಏಕೀಕರಣವು ಅನಾವಶ್ಯಕ, ಅಪಾಯಕಾರಕ—ಎಂದು ಮುಂತಾಗಿ ಕೆಲವರು ವಾದಿಸಬಹುದಾಗಿದೆ. ಆದರೆ ಆ ವಾದದಲ್ಲಿ ಅಜ್ಞಾನವೆ ಹೆಚ್ಚು ಎಂದು ಹೇಳಬೇಕಾಗುವುದು. ಮಹಾರಾಷ್ಟ್ರ, ಬಂಗಾಲ, ಪಂಜಾಬ, ಸಂಯುಕ್ತಪ್ರಾಂತ ಮೊದಲಾದುವುಗಳೊಡನೆ ಕರ್ನಾಟಕವನ್ನು ಹೋಲಿಸಿ ನೋಡಿದರೆ, ಭಾರತದ ರಾಷ್ಟ್ರೀಕರಣದಲ್ಲಿ ವಿಚ್ಛಿನ್ನ ಕರ್ನಾಟಕವು ಹೇಗೆ ಹಿಂದುಳಿದಿದೆ ಎಂಬುದು ಸ್ಪಷ್ಟವಾಗುವುದು. ಅಖಂಡ ಭಾರತದ ರಾಜಕಾರಣದಲ್ಲಿ ನೇತೃತ್ವವನ್ನು ಪಡೆಯುವ ಯೋಗ್ಯತೆ ಮಿಕ್ಕ ಪ್ರಾಂತಗಳಂತೆ ಕರ್ನಾಟಕಕ್ಕಿಲ್ಲ. ಇದಕ್ಕಾಗಿ ಅಸಹಕಾರ ಚಳವಳದಲ್ಲಿಯಂತೆ ಜಾತೀಯ ಚಳವಳಗಳಲ್ಲೂ ಧುಮುಕುವ ಕುರಿತನವಲ್ಲದೆ ಹೆಚ್ಚಿನ ರಾಷ್ಟ್ರೀಯ ಜಾಗೃತಿಯು ಕರ್ನಾಟಕದಲ್ಲಿಲ್ಲ. ಈ ಮಾತು ಅಭಿಮಾನದ್ದಲ್ಲ ಎಂಬ ಕಾರಣಕ್ಕೆಯೆ ಇದನ್ನು ಅಲ್ಲಗಳೆಯಲಾಗದು. ಸಾರ್ವಜನಿಕ ಜೀವನದಲ್ಲೂ ರಾಷ್ಟ್ರೀಯ ಜಾಗೃತಿಯಲ್ಲೂ ಕರ್ನಾಟಕವು ಹಿಂದುಳಿದರೆ, ಅದೇ ನಿಜವಾಗಿ ಭಾರತ ರಾಷ್ಟ್ರೀಯ ನಿರ್ಮಾಣಕ್ಕೆ ಅಪಾಯಕಾರಕವಲ್ಲವೆ?

ಏಕೀಕರಣವು ತರ್ಕಕ್ಕೆ ಹೊಂದಿದೆ

ಏಕೀಕರಣವು ರಾಷ್ಟ್ರೀಕರಣಕ್ಕೆ ಅಪಾಯಕಾರಕವಲ್ಲ, ರಾಷ್ಟ್ರೀಕರಣದ ಬಲ ಬೆಳೆಯಬೇಕಾದರೆ ಏಕೀಕರಣ ಅಗತ್ಯ ಎಂದು ಹೇಳಬಹುದು. ಮುಂಬಯಿ, ಮದ್ರಾಸ, ಕೊಡಗು, ದೇಶೀಯ ಸಂಸ್ಥಾನಗಳಲ್ಲಿ ಕನ್ನಡಿಗರು ಹರಿದು ಹಂಚಿಹೋಗಿದ್ದಾರೆ. ಕನ್ನಡಿಗರಿಗೆ ಒಂದು ವಿಶಿಷ್ಟ ಇತಿಹಾಸ, ವಿಶಿಷ್ಟ ಸಂಸ್ಕೃತಿ ಇವೆ. ಅಲ್ಲಲ್ಲಿ ಹಂಚಿ ಹೋಗಿ ಎಲ್ಲಿಯೂ ಶಕ್ತಿ ಸಾಲದ್ದಕ್ಕೆ ಈ ಸಂಸ್ಕೃತಿ, ಮಿಕ್ಕ ಸಂಸ್ಕೃತಿಯ ಇದಿರಿನಲ್ಲಿ ನಿರ್ಬಲವಾಗಬೇಕು ಇಲ್ಲವೆ ನಿಷ್ಫಲವಾಗಬೇಕು. ಎರಡರಲ್ಲಿ ಯಾವುದೆ ಪರಿಣಾಮವಾದರೂ ಭಾರತಕ್ಕೆ ಹಾನಿಯೆ ಇದೆ. ಸಂಸ್ಕೃತಿ ನಿರ್ಬಲವಾದಲ್ಲಿ ಜನತೆಯೂ ನಿರ್ಬಲವಾಗುವುದು; ಸಂಸ್ಕೃತಿ ನಿಷ್ಫಲವಾದಲ್ಲಿ ಬೆಳೆವಣಿಗೆ ನಿಂತುಹೋಗುವುದು. ಯಾಕೆಂದರೆ ಒಂದು ಸಂಸ್ಕೃತಿಯ ಜನತೆಯು ತನ್ನ ಸಂಸ್ಕೃತಿಯನ್ನು ಬಿಟ್ಟು ಇನ್ನೊಂದು ಸಂಸ್ಕೃತಿಯನ್ನು ಪಡೆಯುವುದು ಇತಿಹಾಸದಲ್ಲಿ ಕಾಣದು, ನಿಸರ್ಗದಿಂದ ಅಶಕ್ಯ. ಅದಕ್ಕಾಗಿ ಕನ್ನಡ ಸಂಸ್ಕೃತಿ ಉಳಿದರೇನೆ ಕನ್ನಡ ಜನ ಉಳಿಯುವುದು; ಕನ್ನಡ ಜನ ಅಳಿದರೆ ಭಾರತದ ಬಲವೂ ಅಳಿಯುವುದು. ಹೀಗೆ ಭಾರತದ ಭವಿತವ್ಯತೆಯ ದೃಷ್ಟಿಯಿಂದ ಕರ್ನಾಟಕ ಏಕೀಕರಣ ಅನಿವಾರ್ಯ ಎಂದೇ ಹೇಳಬೇಕಾಗುವುದು.

ಮಧ್ಯಸ್ಥ ತಜ್ಞರ ಅಭಿಪ್ರಾಯ

ಸುಮಾರು ಇಪ್ಪತ್ತು ವರ್ಷಗಳ ಹಿಂದೆ ಭಾರತದ ರಾಜಕೀಯ ಘಟನೆಯನ್ನು ನಿರ್ಣಯಿಸುವುದಕ್ಕೆ ಸೈಮನ್ ಕಮಿಶನ್ ಎಂಬ ಮಂಡಳಿ ಬಂದಿತ್ತಷ್ಟೆ? ಅವರಲ್ಲಿ ಬೇರೆ ಯಾವ ಗುಣಗಳಿದ್ದರೂ, ತಮ್ಮ ಮುಂದಿದ್ದ ವಿಷಯದ ಬಗ್ಗೆ ಸಾಕಷ್ಟು ಅನುಭವ ಮತ್ತು ತಜ್ಞತೆ

ಇತ್ತೆಂಬುದು ಅನೇಕರು ಒಪ್ಪುವ ಮಾತು. ಆ ಮಂಡಳದವರು ಭಾರತದ ಪ್ರಾಂತಗಳ ಬಗ್ಗೆ ಹೀಗೆ ಹೇಳಿದ್ದಾರೆ*:—

The existing provincial boundaries in more than one case embrace areas and peoples of no natural affinity; and sometimes separate those who might under a different scheme be more naturally united...if those who speak the same language form a compact and self-contained area, so situated and endowed as to be able to support its existence as a seperate province there is no doubt that the use of a common speech is a strong and a natural basis for provincial individuality. But it is not the only test—race, religion, economic interests, geographical contiguity, a due balance between country and town and between coast-line and interior, may all be relevent factors

ಜನತೆಯ ಐಕಮತ್ಯದ ಬೇಡಿಕೆ

ಸ್ವಯಂನಿರ್ಣಯ ತತ್ತ್ವ, ಪ್ರಾಂತಿಕ ಸ್ವಾಯತ್ತತೆ, ಭಾರತದ ರಾಷ್ಟ್ರೀಕರಣ, ರಾಜಕೀಯ ಪ್ರಾಂತೀಕರಣ— ಇವೆಲ್ಲ ತತ್ತ್ವಗಳ ಒರೆಗೆ ಹಚ್ಚಿ ನೋಡಿದಲ್ಲಿ, ಕರ್ನಾಟಕ ಏಕೀಕರಣವು ಅಗತ್ಯ ಮತ್ತು ಅನಿವಾರ್ಯ ಎಂದು ಸಿದ್ಧವಾಗುತ್ತದೆ. ನಿಜವಾಗಿ ನೋಡಿದರೆ ಇಂದು ಇವೆಲ್ಲ ತತ್ತ್ವಗಳು ವ್ಯವಹಾರದಲ್ಲಿ ತಲೆಯೆತ್ತಿ ನಿಂತಿವೆ. ಹೀಗಿರುವಾಗ, ಇವುಗಳಿಗಾಗಿಯೆ ಅನಿವಾರ್ಯವೆನಿಸುವ ಏಕೀಕರಣಕ್ಕಾಗಿ ಬೇರೊಂದು ಚಳವಳದ ಅಗತ್ಯವೆ ಇಲ್ಲ. ಆದರೂ ತಾತ್ತ್ವಿಕವಾಗಿ ಅನಿವಾರ್ಯವಾಗಿದ್ದರೂ ಜನತೆಗೆ ಬೇಡವಾಗಿದ್ದರೆ ಹೇಗೆ?—ಎಂಬ ಸಂಶಯ ಬರಬಹುದಾಗಿದೆ. ಅಂತಹ ಸಂಶಯಕ್ಕಂತೂ ಎಳ್ಳಷ್ಟೂ ಆಸ್ಪದವಿಲ್ಲ. ಇಂದಿಗೆ ೨೫–೩೦ ವರ್ಷಗಳಿಂದ ಏಕೀಕರಣದ ಬೇಡಿಕೆ ಸತತವಾಗಿ ಜನತೆಯಿಂದ ಕೇಳಬರುತ್ತಿದೆ. ಮುಂದಾಳುಗಳು, ಸ್ಥಾನಿಕ ಸಂಸ್ಥೆಗಳು, ಸಾಹಿತ್ಯ-ಸಂಸ್ಕೃತಿ ಸಂಸ್ಥೆಗಳು, ಸಭೆ-ಸಮ್ಮೇಳನಗಳು, ಶಾಸನಸಭೆಗಳು, ವಾಣಿಜ್ಯಸಂಸ್ಥೆಗಳು, ಜಾತೀಯ ಸಂಸ್ಥೆಗಳು, ವ್ಯವಸಾಯ ಸಂಘಗಳು —ಇವೆಲ್ಲ ಏಕಕಂಠವಾಗಿ ಏಕೀಕರಣವನ್ನು ಬೇಡುತ್ತಲಿವೆ. ನೆಹರು ವರದಿಯಲ್ಲಿ ಈ ಬೇಡಿಕೆಗೆ ಮಾನ್ಯತೆ ದೊರೆತಿದೆ. ಕಾಂಗ್ರೆಸಿನ ಆಡಳಿತದಲ್ಲಿ ಈ ಬೇಡಿಕೆಗೆ ಉತ್ತರ ದೊರಕಿದೆ. ದುಂಡುಮೇಜು ಪರಿಷತ್ತಿನಲ್ಲಿ ಶ್ರೀ. ಬಿ. ಶಿವರಾಯರು ಈ ಬೇಡಿಕೆಯನ್ನು ಮಂಡಿಸಿದ್ದಾರೆ.

ಭೂವಿಸ್ತಾರ ಮತ್ತು ಸಂಪತ್ತು

'ಏಕೀಕರಣವು ಜನತೆಯ ಬೇಡಿಕೆಯಾಗಿದ್ದರೂ ಏಕೀಕೃತ ಕರ್ನಾಟಕವು ಸಾಕಷ್ಟು ದೊಡ್ಡ ಪ್ರಾಂತವಾಗದು, ಆದುದರಿಂದ ಇದು ಅವ್ಯವಹಾರ್ಯ' ಎಂದು ಯಾರೂ ವಾದಿಸುವಂತಿಲ್ಲ. ಏಕೆಂದರೆ, ಒಂದು ವೇಳೆ ಸಂಸ್ಥಾನಗಳ ಕರ್ನಾಟಕವನ್ನು ಬಿಟ್ಟರೂ, ಉಳಿದ ಬ್ರಿಟಿಶ್ ಕರ್ನಾಟಕವು ವಿಸ್ತಾರದಲ್ಲಿ ೩೬,೦೦೦ ಚದರುಮೈಲಿನಷ್ಟಿದೆ; ಎಂದರೆ ಭೂವಿಸ್ತಾರದಲ್ಲಿ ಯುರೋಪದ ಬೆಲ್ಜಿಯಂ, ಡೆನ್ಮಾರ್ಕ್ ಎರಡೂ ದೇಶಗಳನ್ನು ಕೂಡಿಸಿದರೆ ಅದಕ್ಕೂ ತುಸು ದೊಡ್ಡದು ಬ್ರಿಟಿಶ್ ಕರ್ನಾಟಕ! ಸದ್ಯದ ಒಡಿಸಾ ಪ್ರಾಂತಕ್ಕಿಂತಲೂ ೪,೦೦೦ ಚದರು ಮೈಲಿನ ಹೆಚ್ಚಿನ ವಿಸ್ತಾರ. ಅದರಂತೆಯೆ ಜನಸಂಖ್ಯೆಯ ದೃಷ್ಟಿಯಿಂದ ಸಿಂಧಪ್ರಾಂತಕ್ಕೆ ಸರಾಸರಿ ಇಮ್ಮಡಿ ಜನಸಂಖ್ಯೆ ಬ್ರಿಟಿಶ್ ಕರ್ನಾಟಕದಲ್ಲಿ ಎನ್ನಬಹುದು. ಆದಾಯದ ದೃಷ್ಟಿಯಿಂದಲೂ ಬ್ರಿಟಿಶ್ ಕರ್ನಾಟಕವು ಸಿಂಧ-ಆಸಾಮ-ಓರಿಸಾ ಪ್ರಾಂತಗಳಿಗಿಂತ ಹೆಚ್ಚು ಆದಾಯವುಳ್ಳುದು. ಇದಲ್ಲದೆ ಜಲಪಾತ-ಕಾನನ-ದರ್ಶನೀಯ ಕ್ಷೇತ್ರಗಳು ಇವಂತೂ ಕರ್ನಾಟಕದಲ್ಲಿದ್ದಷ್ಟು ಭಾರತದ ಬೇರೆ ಯಾವ ಪ್ರಾಂತದಲ್ಲೂ ಇಲ್ಲ.

ಬೇಡಿಕೆಯ ಅನಾದರವೆ ಮೊದಲ ದೃಷ್ಟಾಂತ

ಹೀಗೆ ಎಲ್ಲ ದೃಷ್ಟಿಗಳಿಂದಲೂ ನ್ಯಾಯವಾದ ಮತ್ತು ಎಲ್ಲರಿಂದಲೂ ಏಕಕಂಠವಾಗಿ ಬಂದ ಬೇಡಿಕೆಯ ಹಣೆಬರೆಹವೇನು? ಪ್ರಾಂತಿಕ ಸರಕಾರಗಳು ಹಾರಿಸಿಕೊಳ್ಳುವುವು, ಕೇಂದ್ರ ಸರಕಾರವು ಕಿವುಡಾಗಿರುವುದು. ಈ ಸಂಗತಿಯೆ ಏಕೀಕರಣದ ಅಗತ್ಯಕ್ಕೆ ಮೊದಲ ದೃಷ್ಟಾಂತ ಮತ್ತು ಕಾರಣ ಎಂದು ಹೇಳಬಹುದು. ಜಾತಿ-ಪ್ರಾಂತ-ರಾಜಕೀಯ ಪಕ್ಷಗಳಿಂದ ಪರಸ್ಪರ ಭಿನ್ನರಾದ ಜನರು ಒಂದುಗೂಡಿ ಬೇಡಿದ್ದಕ್ಕೆ ಸರಕಾರವು ಹೀಗೆ ಅನಾದರವನ್ನು ತೋರಿಸಿದರೆ, ಸದ್ಯದ ಸ್ಥಿತಿಯಲ್ಲಿ ಆಯಾ ಪ್ರಾಂತಗಳಲ್ಲಿ ಅಲ್ಪಸಂಖ್ಯಾಕರಾಗಿದ್ದ ಕನ್ನಡಿಗರ ಬೇಡಿಕೆಗಳಿಗೆ ಆಯಾ ಸರಕಾರಗಳು ಎಷ್ಟೊಂದು ಅನಾದರವನ್ನು ತೋರಿಸುತ್ತಿರಬಹುದು? ಧಾರವಾಡದಲ್ಲಿ ಸ್ಥಾಪಿತವಾದ ಒಂದು ಸಂಸ್ಥೆಗೆ ಸರಕಾರದ ಮನ್ನಣೆಯನ್ನು ಪಡೆಯುವುದಕ್ಕೆ ಇಡಿಯ ಮುಂಬಯಿ ಕರ್ನಾಟಕದಲ್ಲಿ ಚಳವಳವನ್ನು ಹೂಡಬೇಕು! ಇಷ್ಟೊಂದು ಬೆಲೆ ಬಾಳದ ಕನ್ನಡಿಗರು ಮುಂಬಯಿ ಸರಕಾರಕ್ಕೆ. ಸರಕಾರದ ಸಹಾಯದಿಂದ ಅಸ್ತಿತ್ವದಲ್ಲಿ ಬಂದ ಸಾರ್ವಜನಿಕ ಸಂಸ್ಥೆಗಳು ಕರ್ನಾಟಕದಲ್ಲಿ—ಸ್ಥೂಲ ದೃಷ್ಟಿಯಿಂದ—ಇಲ್ಲವೇ ಇಲ್ಲ ಎಂದು ಹೇಳಬಹುದು. ಉಚ್ಚ ಶಿಕ್ಷಣ, ವಿಶಿಷ್ಟ ಶಿಕ್ಷಣ, ಔದ್ಯೋಗಿಕ ಶಿಕ್ಷಣ, ಒಕ್ಕಲತನದ ಶಿಕ್ಷಣ —ಇವನ್ನು ಪಡೆಯಬೇಕೆನ್ನುವ ಕನ್ನಡ ವಿದ್ಯಾರ್ಥಿಯು, ೩೦೦ ರಿಂದ ೫೦೦ ಮೈಲು ದೂರದಲ್ಲಿರುವ ಪುಣೆ-ಮುಂಬಯಿಗಳಿಗೆಯೆ ಹೋಗಬೇಕು! ನಾಲ್ಕು ಜಿಲ್ಲೆಯ ಕರ್ನಾಟಕದಲ್ಲಿ ಸಾಕಷ್ಟು ಕಲಿತವರಿಲ್ಲ ಎಂಬ ನೆವದಿಂದ ಕನ್ನಡೇತರರನ್ನೆ ಕರ್ನಾಟಕ ಜಿಲ್ಲೆಗಳಿಗೆ ಅಧಿಕಾರಿಗಳನ್ನಾಗಿ ಮುಂಬೈ ಸರಕಾರವು ನಿಯಮಿಸಬೇಕು. ಮುಂಬಯಿ ಶಾಸನಸಭೆಯಲ್ಲಿ ಇಂಗ್ಲಿಶ್ ಇಲ್ಲವೆ ಮರಾಠಿ ಬಲ್ಲ ಕನ್ನಡಿಗನೆ ಕರ್ನಾಟಕದ ಪ್ರತಿನಿಧಿಯಾಗಬೇಕು. ತೋರಿಕೆಗೆ ಕೂಡ ಕಾಣಬರುವ ಈ ಅನ್ಯಾಯಗಳು ಸರಕಾರದ ಅನಾದರದ ಚಿಹ್ನೆಗಳು. ಇಷ್ಟು ವರ್ಷ ಮುಂಬಯಿ ಪ್ರಾಂತಕ್ಕೆ ಸೇರಿದ್ದರೂ ಕರ್ನಾಟಕ ಭಾಗವೆ ಯಾಕೆ ಎಲ್ಲ ದೃಷ್ಟಿಗಳಿಂದ ಮಹಾರಾಷ್ಟ್ರ-ಗುಜರಾತ ಭಾಗಗಳಿಗಿಂತ ಹಿಂದುಳಿಯಬೇಕು?

ಹಿಂದುಳಿದದ್ದಕ್ಕೆಯೆ ಏಕೀಕರಣ

ಮುಂಬಯಿ ಪ್ರಾಂತದಲ್ಲಿಯಂತೆ ಮದ್ರಾಸದಲ್ಲೂ ಕರ್ನಾಟಕ ಭಾಗವು ಹಿಂದುಳಿದಿದೆ. ಕರ್ನಾಟಕವು ಹಿಂದುಳಿದಿದೆ ಎಂದು ಸರಕಾರವು

* Simon Commission Report Vol. II—Vol. 2 Recommendation, pp. 24—25.

ನಮಗೆ ಹೇಳಬೇಕಾಗಿಲ್ಲ; ನಾವೇ ಆ ಮಾತನ್ನು ಒಪ್ಪುತ್ತೇವೆ. 'ಹಿಂದುಳಿದ ಕರ್ನಾಟಕವು ಸ್ವತಂತ್ರ ಪ್ರಾಂತವಾಗಲಾರದು' ಎಂದೂ ಸರಕಾರವು ಹೇಳಲಾರದು. ಯಾಕೆಂದರೆ 'ಹಿಂದುಳಿದದ್ದಕ್ಕಾಗಿಯೆ ಇಂದು ಏಕೀಕರಣ ಅಗತ್ಯ' ಎಂದು ನಾವು ಹೇಳುತ್ತಲಿದ್ದೇವೆ. ಅಲ್ಲಲ್ಲಿ ನಮ್ಮನ್ನು ಜೋಡಿಸಿದ್ದಕ್ಕಾಗಿ ಎಲ್ಲಿಯೂ ಶಕ್ತಿಯು ಸಾಲದೆ ನಾವು ಹಿಂದುಳಿದಿದ್ದೇವೆ; ಹೀಗೆಯೆ ನಾವು ವಿಚ್ಛಿನ್ನರಾಗಿ ಬೇರೆ ಬೇರೆ ಪ್ರಾಂತಗಳ ತುದಿಯಲ್ಲಿ ಜೋತುಬಿದ್ದರೆ, ನಾವು ಮುಂದಾಗುವುದು ಶಕ್ಯವೇ ಇಲ್ಲ; ಆದಕಾರಣ ಈ ವಿಚ್ಛಿನ್ನ ವೈಧವ್ಯ ನಮಗಿನ್ನು ಸಾಕು—ಎಂದು ನಾವು ಸಾರುತ್ತಿದ್ದೇವೆ. 'ಏಕೀಕರಣವನ್ನು ಮಾನ್ಯ ಮಾಡದ ಯಾವ ಘಟನೆಯನ್ನೂ ಕನ್ನಡಿಗರು ಒಪ್ಪುವುದಿಲ್ಲ' ಎಂದು ಏಕೀಕರಣ ಪರಿಷತ್ತು ಸಾರಿದ್ದು ಸರಕಾರದ ಅನಾದರಕ್ಕಾಗಿ ಮತ್ತು ಕನ್ನಡಿಗರ ದುಃಸ್ಥಿತಿಗಾಗಿ ಕಳವಳಗೊಂಡು.

ಸದ್ಯದ ದುಃಸ್ಥಿತಿ ಅಸಹನೀಯ

ಅನೇಕ ಆಡಳಿತಗಳಲ್ಲಿ ಹರಿದು ಹಂಚಿ ಹೋದ ಕರ್ನಾಟಕ ಪ್ರದೇಶಗಳನ್ನು ಒಂದೇ ಆಡಳಿತದಲ್ಲಿ ಸೇರಿಸುವುದು ಅತ್ಯಂತ ಅನನುಕೂಲವಾದ ಪ್ರಶ್ನೆ ಎಂದು ಹೇಳಲಾಗುತ್ತಿದೆ. ಈ ಮಾತಿನ ಅರ್ಥವೇನು? ಬ್ರಿಟಿಶರು ಆ ಕಾಲದಲ್ಲಿ ತಾವು ಗೆದ್ದಂತೆ ಪ್ರದೇಶಗಳನ್ನು ಆಯಾ ಜಿಲ್ಲೆಗಳಿಗೆ ಜೋಡಿಸುತ್ತ ಹೋದರಲ್ಲದೆ, ಆಡಳಿತದ ಅನುಕೂಲತೆಯನ್ನು ನೋಡಿಕೊಂಡು ಪ್ರಾಂತಗಳನ್ನು ರಚಿಸಲಿಲ್ಲ. ಹೀಗಿರುವಾಗ ಅನುಕೂಲತೆಯ ಪ್ರಶ್ನೆಗೆ ಈಗೇಕೆ ಇಷ್ಟು ಪ್ರಾಮುಖ್ಯ? ಇದಲ್ಲದೆ, ಇಂದು ಕರ್ನಾಟಕವನ್ನು ಒಂದುಗೂಡಿಸುವುದೆಂದರೆ ಯಾರಿಗೆ ಅನನುಕೂಲ? ಈ ಪ್ರಶ್ನೆಗೆ ಪ್ರಜೆಗಳ ದೃಷ್ಟಿಯಿಂದ ಉತ್ತರ ಕೊಡಬೇಕೆ? ಆಡಳಿತಗಾರಿಕೆಯ ದೃಷ್ಟಿಯಿಂದಲೆ? ಮನೆಯ ಅನುಕೂಲತೆಗಾಗಿ ಸಂಸಾರವೆ? ಸಂಸಾರದ ಅನುಕೂಲತೆಗಾಗಿ ಮನೆಯು ಆಡಳಿತವೆ? ಮುಂಬಯಿ ಪ್ರಾಂತಕ್ಕೆ ಸೇರಿದ ಕನ್ನಡ ಜಿಲ್ಲೆಯನ್ನು ಕಡಿದು, ದಕ್ಷಿಣ ಕನ್ನಡ ಜಿಲ್ಲೆಯೊಂದು ಮದ್ರಾಸ ಪ್ರಾಂತಕ್ಕೆ ಸೇರಿಸುವುದಕ್ಕಿಂತ, ಕಡಿದ ಜಿಲ್ಲೆಗಳನ್ನು ಒಂದುಗೂಡಿಸುವುದು ಅನನುಕೂಲವೇ? ಒಂದು ವೇಳೆ ಸದ್ಯಕ್ಕೆ ದೇಶೀಯ ಸಂಸ್ಥಾನಗಳು ಹೀಗೆಯೆ ಉಳಿದರೂ, ಇಂದು ಮುಂಬಯಿ-ಮದ್ರಾಸಗಳಲ್ಲಿ ನಡುನಡುವೆ ದ್ವೀಪಗಳಂತೆ ದೇಶೀಯ ಸಂಸ್ಥಾನಗಳ ಪ್ರದೇಶ ಹೊಕ್ಕಿರುವಾಗ ಎಷ್ಟು ಅನುಕೂಲವೊ ಅದರಂತೆಯೆ ಕರ್ನಾಟಕವು ಪ್ರತ್ಯೇಕ ಪ್ರಾಂತವಾದಾಗ ಮಧ್ಯದಲ್ಲಿ ಸಂಸ್ಥಾನದ ತುಣುಕುಗಳು ಸಿಕ್ಕಿಕೊಂಡರೆ ಅಷ್ಟೇ ಅನುಕೂಲವೆನ್ನಿಸಬಾರದೇಕೆ? ಬ್ರಿಟಿಶ್ ಕರ್ನಾಟಕವನ್ನೆ ತೆಗೆದುಕೊಂಡರೂ ಆ ಪ್ರಾಂತೀಯವಾದ ಜಿಲ್ಲೆಗಳು ಇನ್ನುಳಿದ ಪ್ರದೇಶಗಳು ಎರಡು ಜಿಲ್ಲೆಗಳಷ್ಟು, ಎಂದರೆ ಒಟ್ಟು ಬ್ರಿಟಿಶ್ ಕರ್ನಾಟಕದಲ್ಲಿ ಹತ್ತು ಜಿಲ್ಲೆಗಳು. ಸಿಂಧದಲ್ಲಿ ೭ (ಏಳು), ಓಡಿಸಾದಲ್ಲಿ ೫ (ಐದು) ಜಿಲ್ಲೆಗಳಿದ್ದಾಗ ಆಗದ ಅನನುಕೂಲ ಹತ್ತು ಜಿಲ್ಲೆಗಳ ಪ್ರದೇಶದಲ್ಲಿ ಯಾಕಾಗಬೇಕು?

ಪ್ರಾಂತಾಧಿಕಾರವು ವೆಚ್ಚದ ವಿಷಯ

ಇನ್ನೂ ಒಂದು ಮಾತನ್ನು ಏಕೀಕರಣದ ವಿರೋಧಿಗಳು ಹೇಳಬೇಕಾಗಿದೆ. ಕರ್ನಾಟಕವು ಪ್ರತ್ಯೇಕ ಪ್ರಾಂತವಾಗುವುದೆಂದರೆ ಕೇವಲ ಜಿಲ್ಲೆಗಳನ್ನು ಒಂದು ಆಡಳಿತದಲ್ಲಿ ತರುವುದಷ್ಟೆ ಅಲ್ಲ; ಆ ಆಡಳಿತಕ್ಕೆ ಒಂದು ಮೂರ್ತಸ್ವರೂಪ ಬೇಕು. ಅದನ್ನೆ ಬಿಚ್ಚುಮಾತಿನಲ್ಲಿ ಹೇಳುವುದಾದರೆ ಪ್ರಾಂತದ ಅಧಿಕಾರಕ್ಕೆ ತಕ್ಕುದಾದ ಸ್ಥಾನ ಬೇಕು ಮೇಲಧಿಕಾರಿ, ಎಲ್ಲ ಖಾತೆಗಳ ಅಧಿಕಾರಿಗಳು, ನ್ಯಾಯಸ್ಥಾನ ಮುಂತಾಗಿ ಅನೇಕ ದೊಡ್ಡ ದೊಡ್ಡ ಕಟ್ಟಡಗಳು ಬೇಕು. ಅದೊಂದು ವಿಶಾಲದ ಮತ್ತು ನಿರರ್ಥಕ ವೆಚ್ಚ ಎಂದು ಹೇಳಬಹುದು. ನಿಜ, ಪ್ರತ್ಯೇಕ ಪ್ರಾಂತವಾದಲ್ಲಿ ರಾಜಧಾನಿ ಮತ್ತು ಸರಕಾರೀ ಕಟ್ಟಡಗಳು ಬೇಕು, ನಿಜ; ಈಗ ಅಂತಹ ಕಟ್ಟಡಗಳು ಕರ್ನಾಟಕದಲ್ಲಿಲ್ಲ, ನಿಜ. ಆದರೆ ಈ ಮಾತಿನಿಂದ ನಿಷ್ಪನ್ನವಾಗುವುದೇನು? ಮುಂಬಯಿಯಲ್ಲಾಗಲಿ ಮದ್ರಾಸದಲ್ಲಾಗಲಿ ಕನ್ನಡ ಜಿಲ್ಲೆಗಳು ಪ್ರಾಂತಕ್ಕೆ ಒಳಪಟ್ಟು ಇಷ್ಟು ವರ್ಷಗಳಾದರೂ, ಹೇಳಿಕೊಳ್ಳುವಂತಹ ಸರಕಾರೀ ಕಟ್ಟಡಗಳಿಲ್ಲ ಒಂದು ಕನ್ನಡ ಜಿಲ್ಲೆಯಲ್ಲಿ! ಆದರೆ ಕನ್ನಡಿಗರ ದುಡ್ಡು ಸಿಂಧದ ಸಕ್ಕರ ಬರಾಜ್, ಮುಂಬಯಿಯ ಬ್ಯಾಕ್‌ಬೇ ಸ್ಕೀಮ್, ಮದ್ರಾಸಿನ ಮೆಟ್ಟೂರ ಡ್ಯಾಮ್ ಇವುಗಳಿಗಾಗಿ ಧಾರಾಳವಾಗಿ ವೆಚ್ಚವಾಗಿದೆ! ಇದು ನಿಜವಾದ ಅನನುಕೂಲ. ಈ ಪರಿಸ್ಥಿತಿಯನ್ನು ಹೋಗಲಾಡಿಸುವುದೆ ಅನುಕೂಲ. ಇದು ಎಷ್ಟೊಂದು ವೆಚ್ಚದ ವಿಷಯವೆನ್ನಿಸಿದರೂ ಅದನ್ನು ಸಾಧಿಸುವುದೆ ಅನುಕೂಲ. ಮಿಕ್ಕದ್ದೆಲ್ಲ ಅನನುಕೂಲ, ಅಪಾಯಕರ.

ಪ್ರಾಣಘಾತಕ

ಅಪಾಯಕರ ಎಂಬುದು ಅಲಂಕಾರವೂ ಅಲ್ಲ, ಅತಿಶಯೋಕ್ತಿಯೂ ಅಲ್ಲ. ಈಗ ಒಂದೆರಡು ಅನುಭವಗಳನ್ನು ನೋಡಿಕೊಳ್ಳೋಣ. ಮುಂಬಯಿ ಪ್ರಾಂತದಲ್ಲಿ ಮುಂಬಯಿ ರಾಜಧಾನಿ ಪುಣೆ ಪಟ್ಟಣ, ಅಹಮ್ಮದಾಬಾದು ವ್ಯಾಪಾರ-ಕಾರಖಾನೆಗಳ ಕೇಂದ್ರ. ವಿಶ್ವವಿದ್ಯಾಲಯ, ಮುಖ್ಯ ನ್ಯಾಯಕಚೇರಿ, ಔದ್ಯೋಗಿಕ ಶಿಕ್ಷಣ ಸಂಸ್ಥೆಗಳು, ದೊಡ್ಡ ದೊಡ್ಡ ಆಸ್ಪತ್ರೆಗಳು, ಅನೇಕ ಸರಕಾರೀ ಖಾತೆಗಳ ಕೇಂದ್ರ ಕಚೇರಿಗಳು, ದೊಡ್ಡಳತೆಯ (Broad guage) ರೈಲುದಾರಿ — ಇವೆಲ್ಲ ಮುಂಬಯಿ-ಪುಣೆ-ಅಹಮ್ಮದಾಬಾದುಗಳಲ್ಲಿ ಇವೆ. ಇದಕಾಗಿ ನಮ್ಮಲ್ಲಿಯ ಸಾಹಸಿಕರು-ಶೆಟ್ಟಿಗಳು-ವಕೀಲರು - ವಿದ್ಯಾವಂತರು - ಮೇಧಾವಿಗಳು ಅನೇಕರು ಕರ್ನಾಟಕವನ್ನು ಬಿಟ್ಟು, ಆ ಪ್ರದೇಶಗಳಲ್ಲಿಯೆ ನೆಲಸಿರುವರು. ಕ್ರಮೇಣ ಕನ್ನಡವನ್ನೂ ಕನ್ನಡತನವನ್ನೂ ಬಿಟ್ಟು ಮರಾಠಿಗೊ ಗುಜರಾತಿಗೊ ಮೊರೆಹೋಗುವರು. ಕಾಲಾನುಸಾರ, ಇವರು, ತಾವು ಕನ್ನಡಿಗರೇ ಅಲ್ಲ ಎಂದು ಹೇಳಿಕೊಳ್ಳುವ ಪರಿಸ್ಥಿತಿಗೆ ಮುಟ್ಟುವರು! ಇದರ ಅರ್ಥವೇನು? ಕರ್ನಾಟಕದ ಸಿರಿ-ಸಂಪತ್ತಲ್ಲದೆ ಬುದ್ಧಿವಂತಿಕೆ ಕೂಡ ಕ್ರಮೇಣ ಕರ್ನಾಟಕದಿಂದ ಮಾಯವಾಗುವುದು ಎಂದರ್ಥ ಕರ್ನಾಟಕದ ಪ್ರಾಣವೆ ಕ್ರಮೇಣ ಜಾರುತ್ತಲಿದೆ ಎಂದು ಹೇಳಬಹುದು.

ಇನ್ನೊಂದು ಅನುಭವ

ಕರ್ನಾಟಕದ ಹೊರಗೆ ಕಂಡುಬರುವಂತೆ ಅಪಾಯವು ಕರ್ನಾಟಕದ ಒಳಗೂ ಇದೆಯಲ್ಲದೆ, ದಿನದಿನಕ್ಕೆ ಬೆಳೆಯುತ್ತಲಿದೆ. ಪ್ರಾರಂಭದಿಂದಲೂ ಶಿಕ್ಷಣವೂ ಶಿಕ್ಷಣಸಂಸ್ಥೆಗಳೂ ಸರಕಾರಕ್ಕೆ ಕರ್ನಾಟಕಕ್ಕಿಂತ ಸನಿಯದ ಕನ್ನಡೇತರ ಜಿಲ್ಲೆಗಳಲ್ಲಿಯೇ ಹೆಚ್ಚಾಗಿ ಇದ್ದುದರಿಂದ,

ಸರಕಾರೀ ಅಧಿಕಾರಿಗಳಲ್ಲಿ (ಎಂದರೆ ಶಿಕ್ಷಣ ಪಡೆದವರಲ್ಲಿ) ಕನ್ನಡೇತರರ ಸಂಖ್ಯೆಯೆ ಹೆಚ್ಚು. ಇಂದಿಗೂ ಈ ಪ್ರಮಾಣ ಹಾಗೆಯೆ ಉಳಿದಿದೆ ಕನ್ನಡ ಜಿಲ್ಲೆಗಳ ಮೇಲಧಿಕಾರಿಗಳೆಲ್ಲ ಸಾಮಾನ್ಯವಾಗಿ ಕನ್ನಡೇತರರೆ. ಮೇಲಧಿಕಾರಿಗಳ ಭಾಷೆಯೆ ಮಿಕ್ಕವರ ಎಂದರೆ ಚಿಕ್ಕಧಿಕಾರಿಗಳ ಭಾಷೆ. ಮೊದಲಿನ ಸ್ಥಾನ, ಹೆಚ್ಚಿನ ಅಭಿಮಾನ ಆ ಭಾಷೆಗಾಗಿಯೆ ಎಂದರೆ ಕನ್ನಡೇತರ ಭಾಷೆಗಾಗಿಯೆ. ಹೀಗಾಗಿ ಕ್ರಮೇಣ ಕನ್ನಡ ನುಡಿಯ ಅಭಿಮಾನ—ಕ್ಷೇತ್ರವೆ ಚಿಕ್ಕದಾಗುತ್ತ ನಡೆಯಿತು. ಹತ್ತು-ಹತ್ತು ವರುಷಗಳ ಜಾನೇಸುಮಾರಿಗೊಮ್ಮೆ ಕನ್ನಡ ಜನರ ಸಂಖ್ಯೆಯ ಪ್ರಮಾಣವು ಕಡಮೆಯಾಯಿತಲ್ಲದೆ ಕನ್ನಡದ ಕ್ಷೇತ್ರವೂ ಕಡಮೆಯಾಗತೊಡಗಿತು. ಇಂದು ಕರ್ನಾಟಕದ ಗಡಿನಾಡಿನ ಸಮಸ್ಯೆಗೆ ಈ ಸಂಗತಿಯೂ ಕಾರಣವಾಗಿದೆ. ಮಹಾರಾಷ್ಟ್ರಕ್ಕೆ, ಆಂಧ್ರಕ್ಕೆ ಹೊಂದಿದ ಕನ್ನಡ ಪ್ರದೇಶವು ಕ್ರಮೇಣ ಒಳಸೇರುತ್ತ ನಡೆದಿದೆ. ಇದನ್ನು ತಡೆಹಿಡಿಸಲು ಕನ್ನಡ ಅಧಿಕಾರಿಗಳ ನೆರವು ಬೇಕು. ಆದರೆ ಎರಡೂ ಪ್ರಾಂತಗಳಲ್ಲಿ ಅಲ್ಪಸಂಖ್ಯಾಕರಾದ ಕನ್ನಡಿಗರಲ್ಲಿ ಅಷ್ಟು ಪ್ರಮಾಣದ, ಅಷ್ಟು ಧೈರ್ಯದ, ಅಂತಹ ಅಭಿಮಾನದ ಕನ್ನಡ ಮೇಲಧಿಕಾರಿಗಳು ಬೇಕಲ್ಲವೆ?

ಸತ್ತ್ವಭಂಗವಾಗುತ್ತಲಿದೆ

ಕನ್ನಡಿಗರಲ್ಲಿ ಧೈರ್ಯದವರಾಗಲಿ ಅಭಿಮಾನಿಗಳಾಗಲಿ ಇಲ್ಲವೆಂದಲ್ಲ; ಆದರೆ ಅವುಗಳ ಜೊತೆಗೆ ಅಧಿಕಾರವೂ ಬೇಕು. ಆ ಅಧಿಕಾರವುಳ್ಳ ಅಂತಹ ಕನ್ನಡಿಗರು ವಿರಳ ಎಂದು ಅಭಿಪ್ರಾಯ. ಇದೆ ಸಂದರ್ಭದಲ್ಲಿ ಸದ್ಯದ ಪರಿಸ್ಥಿತಿಯಿಂದ ಕರ್ನಾಟಕಕ್ಕೆ ಅಪಾಯಕಾರಕವಾಗುವಂತೆ ಕನ್ನಡಿಗರ ಸತ್ತ್ವಭಂಗ ಹೇಗಾಗುತ್ತಿದೆ ಎಂಬುದನ್ನೂ ನೋಡಬಹುದು. ಇಂದಿಗೂ ಅನೇಕ ಕನ್ನಡಿಗರು ಕರ್ನಾಟಕದ ಹೊರಗಿನ ಪಟ್ಟಣಗಳಲ್ಲಿ ಹೆಚ್ಚಿನ ಶಿಕ್ಷಣ ಪಡೆಯಬೇಕಾಗುತ್ತದೆ ಎಂದು ಮೇಲೆ ಸೂಚಿಸಿದೆಯಷ್ಟೆ? ತರುಣ ವಯಸ್ಸಿನಲ್ಲಿ ಇದರ ಪರಿಣಾಮವು ಅನಿವಾರ್ಯವಾಗಿ—ಆದರೂ ಕರ್ನಾಟಕದ ದೃಷ್ಟಿಯಿಂದ—ಅತ್ಯಂತ ಅಪಾಯಕಾರಕವಾಗುತ್ತಲಿದೆ. ಕನ್ನಡ ತರುಣರು ಮರಾಠಿ ಇಲ್ಲವೆ ಆಂಧ್ರ ವ್ಯಕ್ತಿಗಳ, ಸಾಹಿತ್ಯದ ವರ್ಚಸ್ಸಿಗೆ ಮೋಹಗೊಳ್ಳುತ್ತಾರೆ. ಹಾಗೆ ಮೋಹಾಂಧರಾಗಿಯೆ ಕರ್ನಾಟಕಕ್ಕೆ ಮರಳುತ್ತಾರೆ. ಕರ್ನಾಟಕ-ಕನ್ನಡ ಇವುಗಳ ಬಗ್ಗೆ ಆತ್ಮೀಯತೆಯಾಗಲಿ ಅಭಿಮಾನವಾಗಲಿ ಅಷ್ಟೊಂದು ಸಹಜವಾಗಿ ಇವರ ಹೃದಯದಲ್ಲಿ ಉದ್ಭವಿಸುವುದಿಲ್ಲ. ಇದೊಂದರೆ ಕನ್ನಡಿಗರ ವ್ಯಕ್ತಿತ್ವದ ನಾಶವೆಂದೇ ಹೇಳಬೇಕಾಗುವುದು. ಇಂದಿಗೂ ಅನೇಕ ಕರ್ನಾಟಕ ಮುಂದಾಳುಗಳು ಎಷ್ಟೋ ತರುಣರು ಕರ್ನಾಟಕ-ಕನ್ನಡಗಳಿಗಾಗಿ ಅನಾಸ್ಥೆಯನ್ನು ತೋರಿಸುತ್ತಿರುವುದು ಈ ಕಾರಣಕ್ಕಾಗಿಯೆ. ಎಂದರೆ ವಿಚ್ಛಿನ್ನ ಕರ್ನಾಟಕಕ್ಕಾಗಿ ಪ್ರಾಣಿಮಾತ್ರಕ್ಕೆ ಸಹಜವಾದ ಸ್ವಾಭಿಮಾನ ಕೂಡ ಅನೇಕ ಕನ್ನಡಿಗರಲ್ಲಿಲ್ಲ!

ಏಕೀಕರಣ ಇಲ್ಲವೆ ಮರಣ

ಮೇಲಿನ ಅನುಭವಗಳನ್ನು ಸರಿಯಾಗಿ ತಿಳಿದುಕೊಂಡರೆ ಒಂದು ಮಾತು ಸ್ಪಷ್ಟವಾಗಿ ನಮ್ಮನ್ನು ದಿಟ್ಟಿಸುವಂತೆ ಎದ್ದು ನಿಲ್ಲುವುದು. ಅದೇದರೆ ಕರ್ನಾಟಕವು ಈಗಿನಂತೆ ಹರಿದು ಹಂಚಿಯೆ ಉಳಿದುಕೊಂಡರೆ, ಕ್ರಮೇಣ ಕನ್ನಡತನವೆ ಅಳಿದುಹೋಗಬಹುದಾಗಿದೆ. ಕರ್ನಾಟಕದ ಪ್ರದೇಶವು ಕಡಮೆಯಾಗುತ್ತ ನಡೆದರೂ ಅಷ್ಟೊಂದು ನಾವು ಹೆದರಬೇಕಾಗಿಲ್ಲ. ಆದರೆ ಕನ್ನಡತನವೆ ಅಳಿದು ಹೋಗುವುದಾದರೆ ನಾವು ಹೆದರದಿದ್ದರೆ ಬುದ್ಧಿಶೂನ್ಯರೆನ್ನಿಸುವೆವು. ಅಳಿದ ಸಂಪತ್ತನ್ನು ಮರಳಿ ಪಡೆಯಬಹುದು; ಕಳೆದ ಪ್ರಾಣವು ಮಾತ್ರ ಕಲಿಯುಗ ಮುಗಿದರೂ ಮರಳಿ ಬರುವಂತಿಲ್ಲ. ಈ ಮಾತಿಗಾಗಿಯೆ ಏಕೀಕರಣದ ಪ್ರಶ್ನೆ ಎಂದರೆ ಕನ್ನಡಿಗರಿಗೆ ಜೀವದ ಪ್ರಶ್ನೆಯಾಗಿದೆ ಎಂದು ಹೇಳುವುದು. ಹೇಗೆ ರಾಜಕೀಯ ತತ್ತ್ವದಿಂದ, ವಸ್ತುಸ್ಥಿತಿಯ ತರ್ಕದಿಂದ ಏಕೀಕರಣವು ಅನಿವಾರ್ಯವೋ, ಹಾಗೆಯೆ ಕನ್ನಡತನದ ಸಂಸ್ಕಾರವನ್ನು ಉಳಿಸುವ ದೃಷ್ಟಿಯಿಂದಲೂ ಏಕೀಕರಣವು ಅನಿವಾರ್ಯ. ಇದಲ್ಲದೆ ಸದ್ಯದ ಪರಿಸ್ಥಿತಿಯಲ್ಲಿ, ಭಾರತದ ಭವಿತವ್ಯತೆಯಲ್ಲಿ ಕರ್ನಾಟಕದ ಏಕೀಕರಣವು ಕೂಡಲೆ ವ್ಯವಹಾರರಂಗಕ್ಕೆ ಬರಲೇಬೇಕಾಗಿದೆ. ಏಕೀಕರಣವು ಅನಿವಾರ್ಯವೆಂದರೆ ಮೋಕ್ಷದಂತೆ ಕೊನೆಗೊಮ್ಮೆ ಸಾಧಿಸಬೇಕಾದ ಧ್ಯೇಯ ಎಂದು ತಿಳಿಯುವಂತಿಲ್ಲ. ಸಾಧಿಸಲೇ ಬೇಕು ಮತ್ತು ಕೂಡಲೇ ಸಾಧಿಸಬೇಕು—ಎಂದು ಇಂದಿನ ಭಾರತದ ಪರಿಸ್ಥಿತಿಯೆ ನಮ್ಮನ್ನು ಒತ್ತಾಯಪಡಿಸುತ್ತಲಿದೆ ಎಂಬುದನ್ನು ನಾವು ತಿಳಿದುಕೊಳ್ಳೋಣ

ಕರ್ನಾಟಕದ ಕೀಳುದೆಸೆ

ಯುದ್ಧ ಮುಗಿದ ಸಮಯಕ್ಕೆ ಭಾರತದ ರಾಜಕೀಯ ಘಟನೆಯಲ್ಲಿ ಬದಲಾವಣೆಗಳಾಗುವುದು ಖಂಡಿತ ಎಂದು ತಜ್ಞರ, ಅನುಭವಿಕರ ನಿರೀಕ್ಷಣೆ ಇದೆ. ಯುದ್ಧ ಮುಗಿವ ಕಾಲ ಕೂಡ ತೀರ ಸಮೀಪದಲ್ಲಿದೆ ಎಂಬುದೂ ಸ್ಪಷ್ಟವಾಗುತ್ತಲಿದೆ. ಭಾರತದ ಸ್ವಾತಂತ್ರ್ಯದ ಬಗ್ಗೆ, ಭವಿತವ್ಯತೆಯ ಬಗ್ಗೆ ಎಷ್ಟೇ ನಿರಾಶೆಯನ್ನು ತಾಳಿದರೂ,—೧೯೩೯-೪೨ರ ಘಟನೆಗಿಂತ ಒಂದು ಗುಂಜಿ ತೂಕದಷ್ಟಾದರೂ, ಅಧಿ-

---

ವಾಗ್ವಿಲಾಸ ಬುಕ್‌ಡಿಪೋ ದುರ್ಗದಬೈಲು, ಹುಬ್ಬಳ್ಳಿ
ಇವರಲ್ಲಿ ದೊರೆಯುವ ಪುಸ್ತಕಗಳು

ಪೋಲೀಸಗಾಯಿಡು (ಕಲಕೋಟಿಕೃತ)	೨—೮—೦
ಒಕ್ಕಲತನದ ಸಾಂಪತ್ತಿಕ ಸ್ಥಿತಿ	೨—೬—೦
ಉತ್ಪನ್ನದ ಮೇಲಿನ ಕರದ ಕೈಪಿಡಿ	೨—೮—೦
ಮುಂಬೈ ಇಲಾಖೆಯ ಸಹ. ಸಂ. ಕಾಯಿದೆ	೧—೮—೦
ಪಂಡಿತ ಜಗನ್ನಾಥರ ಚರಿತ್ರ	೧—೦—೦
ಸಂತಾನಶಾಸ್ತ್ರ (ಸಬರದಕೃತ)	೧—೪—೦
ತರುಣ ಪತ್ನಿ	೦—೮—೦
ಕಲಿತರೆ ಹೀಗೆ ಕಲಿಯಬೇಕು	೦—೫—೦
ಗೀತಾರ್ಥ ಬೋಧಿನಿ	೦—೧೨—೦
ತತ್ವಲಾವಣಿ	೦—೪—೦

ಕಾರಕ್ಷೇತ್ರವಾಗಲಿ ಆಡಳಿತದ ಸ್ವಾತಂತ್ರ್ಯವಾಗಲಿ ಹೆಚ್ಚುವುದೆಂಬುದು ನಿರ್ವಿವಾದ. ಇದಲ್ಲದೆ ಬ್ರಿಟಿಶರ ಸಹಾಯದಿಂದ, ಅಮೇರಿಕೆಯ ಆಶೀರ್ವಾದದಿಂದ, ನಮ್ಮ ಧನಿಕರ ಸ್ವಾರ್ಥಸಾಹಸಗಳಿಂದ ಭಾರತದ ಔದ್ಯೋಗೀಕರಣ ಮತ್ತು ಆರ್ಥಿಕ ಸಂಪತ್ತು ಮೊದಲಿಗಿಂತಲೂ ದೊಡ್ಡ ಪ್ರಮಾಣದಲ್ಲಿಯೆ ಬೆಳೆಯಬಹುದು. ಈ ಘಟನೆಗಳಿಗೆ ಆಯಾ ಪ್ರಾಂತಿಕ ಸರಕಾರಗಳ ಸಂಪೂರ್ಣ ಸಹಾಯವಿರುವುದೂ ಸಹಜ. ಈ ಪ್ರಾಂತಿಕ ಸರಕಾರಗಳ ಮಾದರಿ ೧೯೩೬-೩೭ರದೆ ಹೆಚ್ಚುಕಡಮೆ ಮಾದರಿಯಾಗಬಹುದು. ಈ ಮಾದರಿಯಲ್ಲಿ ಮುಂಬಯಿ-ಮದ್ರಾಸ ಪ್ರಾಂತಗಳಲ್ಲಿ ಕರ್ನಾಟಕದ ಸ್ಥಾನವೇನು? ಮುಂಬಯಿ ಶಾಸನಸಭೆಯ ಒಟ್ಟು ೧೭೫ ಸದಸ್ಯರಲ್ಲಿ ೨೯ ಮಾತ್ರ ಕರ್ನಾಟಕದವರು; ಮದ್ರಾಸ ಶಾಸನಸಭೆಯ ೨೧೫ರಲ್ಲಿ ಕೇವಲ ಹನ್ನೆರಡು ಕನ್ನಡಿಗರು. (ಕೇಂದ್ರ ಶಾಸನಸಭೆಯ ೧೪೪ರಲ್ಲಿ ಕನ್ನಡಿಗರು ಇಬ್ಬರೇ ಇಬ್ಬರು!). ಸಂಖ್ಯೆ ಒಂದು ವೇಳೆ ಹೆಚ್ಚುಕಡಿಮೆಯಾದರೂ ಒಟ್ಟು ಸಂಖ್ಯೆಗೆ ಕರ್ನಾಟಕದ ಪ್ರಮಾಣವು ಹೆಚ್ಚೀತೆಂದು ನಂಬಲು ಯಾವ ಕಾರಣವೂ ಇಲ್ಲ.

ಒಂದೇ ಒಂದು ಸಾಧನ

ಇಂತಹ ಕಡಮೆ ಪ್ರಮಾಣದಲ್ಲಿರುವ ಕನ್ನಡ ಸದಸ್ಯರು ಆಯಾ ಸರಕಾರಗಳಲ್ಲಿ ಯಾವ ಸ್ಥಾನ, ಇಲ್ಲವೆ ದರ್ಜೆಯನ್ನು ಪಡೆಯಬಹುದು? ಹಿಂದಿನ ಅನುಭವದಿಂದಲೆ ಈ ಮಾತನ್ನೂ ತಿಳಿದುಕೊಳ್ಳಬಹುದು. ಮುಂಬಯಿ ಕಾಂಗ್ರೆಸ್ ಮಂತ್ರಿಮಂಡಳದಲ್ಲಿ ಪೂರ್ತಿಯಾದ ಒಬ್ಬ ಕರ್ನಾಟಕ ಮಂತ್ರಿ ಇಲ್ಲ! (ಇದ್ದವರೊಬ್ಬರು ಅರ್ಧಕನ್ನಡಿಗರು). ಮದ್ರಾಸಿನ ಮಂತ್ರಿಮಂಡಳದಲ್ಲೂ ಹಾಗೆಯೆ. ಎಂದರೆ ಸರಕಾರದ ಸಿದ್ಧಾಲೋಚನೆಗಳಲ್ಲಿ, ಆಡಳಿತದ ಧೋರಣವನ್ನು ನಿಶ್ಚಯಿಸುವಲ್ಲಿ, ಕರ್ನಾಟಕದ ಹಿತವನ್ನು ಯಾವಾಗಲೂ ಎತ್ತಿಹಿಡಿಯುವವನು ಒಬ್ಬನೂ ಇಲ್ಲ. ಪ್ರಾಂತಗಳು ಈಗಿದ್ದಂತೆ ಉಳಿದರೆ ಈ ಪರಿಸ್ಥಿತಿ ಸುಧಾರಿಸುವ ಭರವಸೆ ಇಲ್ಲ. ಒಂದು ವೇಳೆ ಕಾಂಗ್ರೆಸ್-ಲೀಗಗಳ ಸಮ್ಮಿಶ್ರ ಮಂತ್ರಿಮಂಡಳಗಳು ಅಸ್ತಿತ್ವದಲ್ಲಿ ಬಂದರೆ, ಕರ್ನಾಟಕಕ್ಕೆ ಪಾರ್ಲಿಮೆಂಟರಿ ಸೆಕ್ರೆಟರಿ ಜಾಗೆಗಳು ಕೂಡ ದೊರೆಯಲಿಕ್ಕಿಲ್ಲ. ಹೀಗೆ ಹೇಳುವುದು ಕನ್ನಡಿಗರಿಗೆ ಕೇವಲ ಹುದ್ದೆಗಳು ಬೇಕೆಂಬ ಅಭಿಪ್ರಾಯದಿಂದಲ್ಲ; ಆದರೆ ಪ್ರಾಂತದ ಜನರ ಕಷ್ಟ-ನಷ್ಟಗಳ ಪರಿಹಾರಕ್ಕೆ, ಸಂಪದಭಿವೃದ್ಧಿಯ ಚಿಂತನೆಗೆ ಅಧಿಕಾರವು ಕನ್ನಡಿಗರಿಗೆ ಬೇಕು ಎಂದು. ಆದರೆ ಶಾಸನಸಭೆಯಲ್ಲಿಯ ಸದಸ್ಯರ ಸಂಖ್ಯೆಯ ಪ್ರಮಾಣವು ತೀರ ಸಣ್ಣದಿದ್ದುದರಿಂದ, ಮಂತ್ರಿತನದ ಅಧಿಕಾರದಲ್ಲಿ ಭಾಗ ದೊರೆಯುವುದು ಅಸಾಧ್ಯವೆನ್ನಬಹುದು—ಮಿಕ್ಕವರಿಗೆ. ಕನ್ನಡಿಗರು ೧॥ ಕೋಟಿ ಜನರಾದರೂ, ಎಲ್ಲ ಕಡೆಯೂ ಅಲ್ಪಸಂಖ್ಯಾಕರಾಗಿರಲು ಕರ್ನಾಟಕವು ವಿಚ್ಛಿನ್ನವಾಗಿದ್ದುದೆ ಕಾರಣ. ಈ ಸ್ಥಿತಿ ಸುಧಾರಿಸಲು ಏಕೀಕರಣ ಒಂದೇ ಒಂದು ಸಾಧನ. ಎಷ್ಟು ಮಂತ್ರಿತನದ ಜಾಗೆಗಳನ್ನು ಇಂದು ಕೊಟ್ಟರೂ, ಏಕೀಕರಣಕ್ಕೆ ಅದು ಸರಿಗಟ್ಟಲಾರದು.

ಸಂಪದಭಿವೃದ್ಧಿಯ ಮೂಲ

ಇಂದಿನ ಸಂಸ್ಕೃತಿಯಲ್ಲಿ ಯಾವ ಪ್ರದೇಶದ ಸಂಪತ್ತಾದರೂ ಬೆಳೆಯುವುದಾದರೆ, ಅದಕ್ಕೆ ಮುಖ್ಯವಾದ ಕಾರಣಗಳಲ್ಲಿ ಸಾರಿಗೆ (Communications) ಸೌಕರ್ಯವು ಒಂದು ಎಂದು ಧೈರ್ಯವಾಗಿ ಹೇಳಬಹುದು. ಈ ದೃಷ್ಟಿಯಿಂದ ನೋಡಿದಲ್ಲಿ ಕನ್ನಡ ಜಿಲ್ಲೆಗಳ ಸ್ಥಿತಿ ಅತ್ಯಂತ ಹೀನಾಯಮಾನವಾಗಿದೆ. ಮುಂಬಯಿ-ಮದ್ರಾಸು ಪ್ರಾಂತಗಳ ಕನ್ನಡ ಜಿಲ್ಲೆಗಳನ್ನು ಒಟ್ಟು ನೋಡಿದರೆ, ರೈಲುದಾರಿ (ಅದೂ ಹೆಚ್ಚಾಗಿ ಚಿಕ್ಕಳತೆಯ—Metre guage ದು) ಯಾವುದಕ್ಕೂ ಸಾಲದ್ದು ಮತ್ತು ಉಪಯೋಗವಿಲ್ಲದ್ದು ಎಂದು ಹೇಳಬಹುದು. ಮೊದಲ ಮಾತೆಂದರೆ ಕನ್ನಡ ಜಿಲ್ಲೆಗಳೊಳಗೆ ಪರಸ್ಪರ ಸಂಪರ್ಕವನ್ನು ಬೆಳೆಯಿಸುವುದು ಈ ದಾರಿಯ ಉದ್ದೇಶವೆ ಆಗಿಲ್ಲ. ಮುಂಬಯಿ ಪ್ರಾಂತದ ಕೆಲವು ಕನ್ನಡ ಸ್ಥಳಗಳನ್ನು ಮುಂಬಯಿ ನಗರಕ್ಕೆ, ಮದ್ರಾಸ ಪ್ರಾಂತದಲ್ಲಿ ಮದ್ರಾಸ ನಗರಕ್ಕೆ ಜೋಡಿಸುವುದೆ ಮುಖ್ಯ ಉದ್ದೇಶ. ಹೀಗಾಗಿ ಕನ್ನಡ ಜಿಲ್ಲೆಗಳಲ್ಲಿಯೆ ಒಂದು ನಗರದಿಂದ ಇನ್ನೊಂದು ನಗರಕ್ಕೆ ನೇರ ದಾರಿ ಇಲ್ಲದ ಸಂಗತಿ ಇದೆ. ರೈಲು ದಾರಿಯನ್ನು ಹಾಕುವಾಗ ಕಂಡು ಬರುವ ಧೋರಣೆಯೆ ವಾಹನದಾರಿಯ ಯೋಜನೆಯಲ್ಲೂ ಕಂಡು ಬರುವುದು. ಈ ದಾರಿಯ ಹೆಚ್ಚಿನ ಹೊಣೆಯು ಜಿಲ್ಲಾ ಬೋರ್ಡುಗಳದೆಂಬ ನೆವದಿಂದ ಸರಕಾರವು ಹೆಚ್ಚು ಹಣವನ್ನು ವಿನಿಯೋಗಿಸಿಲ್ಲ. ಜಿಲ್ಲಾ ಬೋರ್ಡುಗಳ ಉತ್ಪನ್ನಕ್ಷೇತ್ರವು ತೀರ ಸಂಕುಚಿತವಿದ್ದುದರಿಂದ, ದಾರಿ ಹಾಕುವುದು ಇವುಗಳಿಗೆ ದುಸ್ತರ, ಹಾಕಿದ ದಾರಿಯೂ ವ್ಯಾಪಾರದ ಸರಕುಗಳ ಭಾರದ ಸಾರಿಗೆಯನ್ನು ತಡೆಯುವಂತಹದಲ್ಲ. ಮುಂಬಯಿ ಪ್ರಾಂತದ ಮಿಕ್ಕ ಭಾಗಗಳೊಡನೆ ಹೋಲಿಸಿದಾಗ, ಕರ್ನಾಟಕ ಭಾಗವು ಈ ವಿಷಯದಲ್ಲಿ ಕಲ್ಪನೆಗೆ ಮೀರಿದ ಅನನುಕೂಲತೆಗೆ ಒಳಗಾಗಿದೆ ಎಂಬುದು ಸ್ಪಷ್ಟವಾಗಿ ಕಂಡುಬರುವುದು.

ಸಂತಾಪಜನಕ ಸೋಜಿಗ

ಮುಂಬಯಿ ಪ್ರಾಂತದಲ್ಲಿ ಬಯಲುಸೀಮೆಯ ಕನ್ನಡ ಪ್ರದೇಶ, ಮದ್ರಾಸ ಪ್ರಾಂತದಲ್ಲಿ ಬಳ್ಳಾರಿ ಜಿಲ್ಲೆ ಇವೆರಡು ಸತತವಾಗಿ ಬರಗಾಲಕ್ಕೆ ಆಹುತಿಯಾಗುವುದನ್ನು ನಾವು ಕಾಣುತ್ತೇವೆ. ಮಹಾರಾಷ್ಟ್ರದ ಕೆಲವು ಜಿಲ್ಲೆಗಳು ಬರಗಾಲಕ್ಕೆ ಗುರಿಯಾಗುವುವೆಂದು ಕಂಡು ನಿವಾರಣೆಯ ಒಂದು ಉಪಾಯವಾಗಿ ಸರಕಾರವು ತನ್ನ ವೆಚ್ಚದಿಂದ ದಾರಿ-

ಜಯಂತಿ ಕಾರ್ಯಾಲಯದಲ್ಲಿ ದೊರೆಯುವ ಪುಸ್ತಕಗಳು

'ಶ್ರೀರಂಗ' ಬರೆದುವು

ಗೀತಾಗಾಂಭೀರ್ಯ	೩	೦	೦
ನಗೆ (ರಸವಿಚಾರ)	೧	೮	೦
ಆಹ್ವಾನ (ಕವನಸಂಗ್ರಹ)	೧	೦	೦
ನಿರಾಹಾರ	೦	೧೨	೦

'ಆನಂದಕಂದ'ರು ಬರೆದುವು

ಸುದರ್ಶನ (ಕಾದಂಬರಿ)	೧	೦	೦
ವಿರಹಿಣಿ (ಕವನಸಂಗ್ರಹ)	೦	೧೨	೦
ಕರ್ನಾಟಕ ಜನಜೀವನ	೧	೮	೦

ಯನ್ನು ಹಾಕಿಸಿತಂತೆ. ಆದರೆ ವಿಜಾಪುರ ಜಿಲ್ಲೆಗೆ ಆ ಮಾತು ಅನ್ವಯಿಸಲಿಲ್ಲ. ಅದೂ ಹೋಗಲಿ, ಮದ್ರಾಸ ಕರ್ನಾಟಕದಲ್ಲಿ ತುಂಗಭದ್ರೆ, ಮುಂಬಯಿಯ ಕರ್ನಾಟಕದಲ್ಲಿ ಕೃಷ್ಣಾ ಹರಿಯುತ್ತಿವೆಯಲ್ಲವೆ? ಈ ದೊಡ್ಡ ಪ್ರವಾಹಗಳು ಕನ್ನಡಿಗರ ಕಣ್ಣೀರಿನ ಪ್ರವಾಹವಾಗಿವೆಯಲ್ಲದೆ, ಇವುಗಳ ನೀರಾವರಿ ಯೋಜನೆಯನ್ನು (ಮಹಾರಾಷ್ಟ್ರದಲ್ಲಿ ನೀರಾ ನದಿಗೆ ಮಾಡಿದಂತೆ) ಸರಕಾರವು ಮಾಡಲಿಲ್ಲ. ಪ್ರಜೆಗಳು ನಿತ್ಯದ ಅನ್ನ-ಬಟ್ಟೆಗಾಗಿಯೂ ಚಳವಳವನ್ನು ಹೂಡುವುದೆಂದರೆ ಆಡಳಿತದ ಗೌರವವಲ್ಲ. ಪ್ರಾಂತದಲ್ಲಿ ಉತ್ತಮ ತರಗತಿಯ ಹತ್ತಿ ಮತ್ತು ಧಾನ್ಯಗಳನ್ನು ಬೆಳೆಯುವಂತಹ ನೆಲವಿದ್ದಲ್ಲಿ, ಇಂದಿನ ವರೆಗೂ ಎರಡರಿಂದ—ನಾಲ್ಕುವರ್ಷಗಳಿಗೊಮ್ಮೆ ಬರಗಾಲದ ಪೀಡೆ ತಪ್ಪಬಾರದೆಂದರೆ ಆಡಳಿತವು ಈ ಪ್ರದೇಶಕ್ಕೆ ಅವಶ್ಯ ಲಕ್ಷ್ಯವನ್ನಾಗಲಿ ವೆಚ್ಚವನ್ನಾಗಲಿ ಪೂರಯಿಸಿಲ್ಲ ಎಂದೇ ಹೇಳಬಹುದು.

ಕರಾವಳಿಯೊ ಕರ-ಹಾನಳಿಯೊ?

ಸಾರಿಗೆ ಮತ್ತು ಸಂಪದಭಿವೃದ್ಧಿಗೆ. ಇನ್ನೊಂದು ಮಹತ್ತ್ವದ ಕಾರಣವಿದೆ. ಸಾರಿಗೆಯಿಂದ ಪ್ರದೇಶದ ಒಳಗೆ ವ್ಯಾಪಾರದ ಬೆಳವಣಿಗೆಯಾಗುವಂತೆ, ಹೊರಗಿನ ಪ್ರದೇಶಗಳೊಡನೆ ವ್ಯಾಪಾರ ಬೆಳೆಯುವ ಸೌಕರ್ಯವೂ ಧನವಂತಿಕೆಯ ಮೂಲವಾಗುವುದು. ಆದರೆ ಒಂದು ವಿಶೇಷ: ಸಾರಿಗೆಯ ಸೌಕರ್ಯ ಮನುಷ್ಯಪ್ರಯತ್ನಕ್ಕೆ ಸಾಧ್ಯವಾದುದು; ಆದರೆ ಪರದೇಶಗಳೊಡನೆ ವ್ಯಾಪಾರ ಮಾಡುವ ಸೌಕರ್ಯ ನಿಸರ್ಗದ ಅಧೀನವಲ್ಲಿದೆ. ಕರ್ನಾಟಕಕ್ಕೆ ಈ ದೃಷ್ಟಿಯಲ್ಲಿ ನಿಸರ್ಗವು (ಮನುಷ್ಯನಿಗಿಂತಲೂ) ಹೆಚ್ಚು ಅನುಕೂಲ ಮತ್ತು ಸಹಾಯಕಾರಕವಾಗಿದೆ. ಕರ್ನಾಟಕದ ಪಶ್ಚಿಮದಲ್ಲಿ ೩೦೦ ಮೈಲಿಗಳ ಸಂತತವಾದ ಕರಾವಳಿ ಇದೆ. ಈ ಕರಾವಳಿಯಲ್ಲಿ ಬಂದರಗಳನ್ನು ಮಾಡಿಕೊಂಡು ಕನ್ನಡಿಗರು ಹಿಂದಿನ ಕಾಲದಲ್ಲೂ ಪರದೇಶಗಳೊಡನೆ ವ್ಯಾಪಾರವನ್ನು ಸಾಗಿಸುತ್ತಿದ್ದರು. 'ಹಿಂದಿನ ಕಾಲದಲ್ಲೂ' ಎನ್ನುವುದಕ್ಕಿಂತ 'ಹಿಂದಿನ ಕಾಲದಲ್ಲಿಯೆ' ಎನ್ನುವುದು ಹೆಚ್ಚು ಸಮರ್ಪಕವಾದೀತು. ಯಾಕೆಂದರೆ, ಇಂದಿನ ಕಾಲದಲ್ಲಿ ಈ ಕರಾವಳಿಯಲ್ಲಿ ಕರ್ನಾಟಕದ ಪ್ರದೇಶವನ್ನು ಈ ಕರಾವಳಿಗೆ ಜೋಡಿಸುವ ಸಾರಿಗೆಯ ಸೌಕರ್ಯವೂ ಇಲ್ಲ. ಮುಂಬಯಿ ಪ್ರಾಂತದ ದೃಷ್ಟಾಂತದಿಂದ ಒಂದು ಮಾತನ್ನು ಹೇಳಬಹುದಾಗಿದೆ. ಈ ಪ್ರಾಂತಕ್ಕೆ ಉದ್ಯೋಗಗಳ ಮತ್ತು ವ್ಯಾಪಾರದ ಕೇಂದ್ರವೆಲ್ಲ ಮುಂಬಯಿಯ ಸುತ್ತುಮುತ್ತಲಿನಲ್ಲಿಯೆ ಇದೆ; ಅದರಿಂದ ಮುಂಬಯಿ ಬಂದರ ಬೆಳೆದಿದೆ, ಬೆಳೆಯಿಸುವುದು ಇಷ್ಟವೂ ಇದೆ. ಕರ್ನಾಟಕದಲ್ಲಿ ಉದ್ಯೋಗವೂ ಇಲ್ಲ, ವ್ಯಾಪಾರವೂ ಇಲ್ಲ; ಅದರಿಂದ ಬಂದರಗಳನ್ನು ಕಟ್ಟಿಸುವ ವೆಚ್ಚ ಯಾಕೆ? ಕನ್ನಡಿಗರು ಮುಂಬಯಿ ಬಂದರಕ್ಕಾಗಿಯೆ ಕರ ಕೊಡುವಂತಾದರೆ ತಪ್ಪೇನು?

ಹೊಟ್ಟೆ ಕಿವಿದು ಕಣ್ಣೀರು ಯಾಕೆ ಎಂದಂತೆ

ಮೇಲಿನ ಮಾತು ಎಷ್ಟು ಮೋಜಿನದಾಗಿದೆಯೊ ಅಷ್ಟೆ ಮನಸ್ತಾಪವನ್ನೂ ಉಂಟುಮಾಡುವಂತಹದಾಗಿದೆ. ಯಾಕೆಂದರೆ, ಉದ್ಯೋಗ-ವ್ಯಾಪಾರಗಳಿಲ್ಲ, ಅದಕಾಗಿ ಬಂದರಗಳ ಆವಶ್ಯಕತೆ ಇಲ್ಲವೆನ್ನುವುದು ಎಷ್ಟು ತೋರಿಕೆಗೆ ಸತ್ಯವೆನ್ನಿಸುವದೊ ಅಷ್ಟೆ ಬಂದರಗಳೂ ಸಾರಿಗೆಯ ಸೌಕರ್ಯವೂ ಇದ್ದರೆ ಉದ್ಯೋಗ-ವ್ಯಾಪಾರಗಳು ಬೆಳೆಯುವುವು ಎಂಬುದು ನಿಜವಾದ ಸತ್ಯವಾಗಿದೆ. ಕನ್ನಡ ಜಿಲ್ಲೆಗಳ ವಿಷಯದಲ್ಲಂತೂ ಈ ಮಾತಿನ ಸತ್ಯತೆ ನಿರ್ವಿವಾದವಾಗಿದೆ. ಏಕೆಂದರೆ, ಉದ್ಯೋಗಗಳಿಗೆ ಅವಶ್ಯವಿದ್ದ ಕಚ್ಚಾಮಾಲು ಕನ್ನಡ ಜಿಲ್ಲೆಗಳಲ್ಲಿ ಹೇರಳವಾಗಿ ದೊರೆಯುವುದು. ಹತ್ತಿ, ಅರಣ್ಯಸಂಪತ್ತು, ಕಣಿಗಳು, ಖನಿಜಗಳು—ಇವುಗಳು ಕನ್ನಡ ಜಿಲ್ಲೆಗಳಲ್ಲಿದ್ದಷ್ಟು ಮುಂಬಯಿ-ಮದ್ರಾಸ್ ಪ್ರಾಂತಗಳ ಬೇರೆ ಯಾವ ಭಾಗಗಳಲ್ಲೂ ಇಲ್ಲ. ಆದರೆ ಇವರ ಲಾಭವನ್ನು ಪಡೆಯಲು ಸದ್ಯಕ್ಕೆ ಯಾವ ಅನುಕೂಲವೂ ಇಲ್ಲ. ಯಾವ ಉದ್ಯೋಗವನ್ನು ಸ್ಥಾಪಿಸಿದರೂ ಉತ್ಪನ್ನವಾದ ಸರಕುಗಳನ್ನು ಶೀಘ್ರವಾಗಿ ವ್ಯಾಪಾರದಲ್ಲಿ ಹರಡಿಸಲು ಸಾರಿಗೆಯ ಸೌಕರ್ಯ ಮುಖ್ಯ. ಶೀಘ್ರವಿದ್ದಷ್ಟೆ ಮಿತವ್ಯಯದ್ದೂ ಇರಬೇಕಾಗುವುದು, ಇಲ್ಲವಾದರೆ ಜನತೆಗೆ ಶಕ್ಯವಾದ ಮತ್ತು ಆಕರ್ಷಕವಾದ ಬೆಲೆಗೆ ಆ ಸರಕುಗಳನ್ನು ಮಾರುವುದು ಕಠಿಣವಾಗಿ, ಉದ್ಯೋಗವೆ ಹಾನಿಗೀಡಾಗಬಹುದು. ಆದರೆ ಇದುವರೆಗೆ ಹೇಳಿದಂತೆ ಕನ್ನಡ ಜಿಲ್ಲೆಗಳಲ್ಲಿ ಸಾರಿಗೆಯ ಸೌಕರ್ಯವೆ ಇಲ್ಲ. ಇದ್ದಷ್ಟು ಸೌಕರ್ಯ ಇಲ್ಲಕಲಾಗದೆ ಎನ್ನಬಹುದು; ಎಂದರೆ ಹೊರಗಿನ ಸರಕುಗಳು ನಮ್ಮಲ್ಲಿ ಜಾರುತ್ತ ಬರುವುವು, ನಮ್ಮ ಸರಕುಗಳು ಹೊರಗೆ ಹೋಗುವುದಾದರೆ ಏರುತ್ತ ಹೋಗಬೇಕಾಗುವುದು. ತೋರಿಕೆಗೆ ಸತ್ಯದಂತಿದ್ದ ಕಾರಣವನ್ನು ಕೊಟ್ಟು ನಮ್ಮ ಹೊಟ್ಟೆನ್ನೆ ನಮ್ಮ ಕಣ್ಣಲ್ಲಿ ತಿವಿಯುವ ಜಾಣತನವಲ್ಲದೆ ಬೇರೆ ಯಾವ ಭಾವನೆಯೂ ಆಡಳಿತದಲ್ಲಿ ಕಾಣದು.

ಆರ್ಥಿಕ ಬಲ

ಮೇಲಿನ ಚರ್ಚೆಯಲ್ಲಿ ಇನ್ನೊಂದು ಸಂಶಯದ ಉತ್ತರವೂ ಅಡಕವಾಗಿದೆ. ಅದೆಂದರೆ, ಕನ್ನಡ ಜಿಲ್ಲೆಗಳನ್ನು ಪ್ರತ್ಯೇಕವಾದ ಪ್ರಾಂತವನ್ನಾಗಿ ಮಾಡುವುದು ಪ್ರಾರಂಭದಲ್ಲೂ ನೆಚ್ಚದ ವಿಷಯವಲ್ಲದೆ, ವರುಷ-ವರುಷಕ್ಕೂ ಹೆಚ್ಚಿನ ವೆಚ್ಚ ತಗಲುವಂತಹದು. ಕನ್ನಡ ಜಿಲ್ಲೆಗಳ ಆರ್ಥಿಕ ಶಕ್ತಿ, ಉತ್ಪನ್ನದ ಮಿತಿ ಈ ವೆಚ್ಚವನ್ನು ತಡೆಯಬಹುದೆ ಎಂದು. ಕನ್ನಡ ಜಿಲ್ಲೆಗಳು ಎಷ್ಟು ಸುಸಮೃದ್ಧವಾದುವೆಂಬುದನ್ನು ಹಿಂದೆ ಸೂಚಿಸಿದೆ. ಇಂತಹ ಸುಸಮೃದ್ಧ ಪ್ರದೇಶವು ಪ್ರತ್ಯೇಕ ಪ್ರಾಂತವಾಗದಷ್ಟು ಆರ್ಥಿಕವಾಗಿ ಬಡವಾಗಿದ್ದರೆ ಆ ಮಾತು ಏಕೀಕರಣದ ಅಗತ್ಯವನ್ನೆ ಸೂಚಿಸುವುದೆಂದು ನಮ್ಮ ಅಭಿಪ್ರಾಯ. ಸಮೃದ್ಧ ಪ್ರದೇಶವು ಕ್ರಮೇಣ ಬಡವಾಗುವುದು ಸದ್ಯದ ಸ್ಥಿತಿಗೆ ಪೋಷಕವೆನ್ನಿಸುವುದಿಲ್ಲ, ಹೀಗೆಯೆ ಕರ್ನಾಟಕವು ವಿಚ್ಛಿನ್ನವಾಗಿ ಉಳಿದರೆ ಬಡತನ ಹೆಚ್ಚಬಹುದೆಂದೇ ಹಿಂದಿನ ಅನುಭವದಿಂದ ಹೇಳಬೇಕಾಗುವುದು. ಆದರೆ ಇಂತಹ ವಾದವು ಔಪಚಾರಿಕವೆ ಆಗದೆಯಲ್ಲದೆ, ವಾಸ್ತವಿಕವಾಗಿಲ್ಲ. ಬ್ರಿಟಿಶ ಕರ್ನಾಟಕದ ಜಿಲ್ಲೆಗಳನ್ನೆ ಲಕ್ಷ್ಯದಲ್ಲಿಟ್ಟುಕೊಂಡರೂ ಈ ಜಿಲ್ಲೆಗಳ ಉತ್ಪನ್ನ (ಇದರಲ್ಲಿ ಎಷ್ಟೊ ಈ ಜಿಲ್ಲೆಗಳ ಹಿತಕ್ಕಲ್ಲ) ೬೧೦ ಲಕ್ಷದಷ್ಟಿದೆ. ಎಂದರೆ ೪೮ ಲಕ್ಷದಷ್ಟು ಉಳಿತಾಯವನ್ನು ಕರ್ನಾಟಕ ಪ್ರಾಂತವು ತೋರಿಸುವುದು. ಪ್ರತ್ಯೇಕ ಪ್ರಾಂತವಾಗುವಾಗ ಅವಶ್ಯವಿದ್ದ ಸೆಕ್ರೆಟರಿಯೇಟ್, ಹೈಕೋರ್ಟ್, ವಿಶ್ವವಿದ್ಯಾಲಯ — ಮುಂತಾದ ಎಲ್ಲವುಗಳನ್ನೂ ಸ್ಥಾಪಿಸಿಕೊಳ್ಳಲು ಸಾಕಷ್ಟು ಉಳಿತಾಯವಿದೆ. ಯುದ್ಧದ ಮುಂಚಿನ ಕಾಲದಲ್ಲಿ ಹೊಸ

ಪ್ರಾಂತದ ಮುಖ್ಯಸ್ಥಾನಗಳ (Headquarters) ನಿರ್ಮಾಣಕ್ಕೆ ೯ ಲಕ್ಷ ವೆಚ್ಚ ತಗುಲುವುದೆಂದು ಅಂದಾಜಿದ್ದಿತು. ಈಗ ಅದರ ಎರಡರಷ್ಟನ್ನು ಲೆಕ್ಕಕ್ಕೆ ಹಿಡಿದರೂ, ಕರ್ನಾಟಕ ಪ್ರಾಂತದ ಉಳಿತಾಯವು ಇದೆಲ್ಲಕ್ಕೆ ಸಾಲುವಷ್ಟಿದೆ.

ಬೆಳೆವಣಿಗೆ

ಈ ಸಂದರ್ಭದಲ್ಲಿ ಒಂದು ಮಾತನ್ನು ನಾವು-ಕನ್ನಡಿಗರು-ವಿಶೇಷವಾಗಿ ಲಕ್ಷ್ಯದಲ್ಲಿಟ್ಟುಕೊಳ್ಳಬೇಕು. ಒಂದು ಕಡೆ ಈಗಿದ್ದ ಕರ್ನಾಟಕದ ಬಡತನ, ಇನ್ನೊಂದೆಡೆ ನಮ್ಮ ಪ್ರಾಂತದ ನಿಧಿ— ಸಮೃದ್ಧತೆ— ಇವುಗಳಿರುವಾಗ, ಮೇಲಿನ ಅಂಕಿಗಳು ಉಸುಕಿನಲ್ಲಿ ಬರೆದಂತಹವುಗಳು. ಪ್ರಾಂತದ ಜೀವನಕ್ಕೆ ಅವಶ್ಯಕವಾದ ಅನೇಕ ಯೋಜನೆಗಳನ್ನು ಕೈಕೊಳ್ಳಬೇಕಾಗುವುದು. ಭಾರತದ ಮಿಕ್ಕ ಪ್ರಾಂತೀಯ ಸರಕಾರಗಳೂ ತಂತಮ್ಮ ಪ್ರಾಂತಗಳಲ್ಲಿ ಕೋಟ್ಯವಧಿ ವೆಚ್ಚದ ಯೋಜನೆಗಳನ್ನು ಕೈಕೊಳ್ಳಲಿವೆ. ಪ್ರಾಂತಗಳಿಗೆ ಅದು ಶಕ್ಯವಾಗುವುದಾದರೆ ಕರ್ನಾಟಕ ಪ್ರಾಂತಕ್ಕೆ ಇನ್ನಷ್ಟು ಸುಲಭವಾಗಿ ಶಕ್ಯವಾಗಬಹುದು ಯಾಕೆಂದರೆ ಕರ್ನಾಟಕವು ಬಂದರ, ಕೈಗಾರಿಕೆ, ರಸ್ತೆ, ನೀರಾವರಿ, ಉದ್ಯೋಗಕಾರಖಾನೆಗಳು— ಮುಂತಾದವುಗಳಿಗೆ ಅನುಕೂಲವಾಗುವಂತೆ ನಿಧಿಸಮೃದ್ಧವಾಗಿದೆ. ಇನ್ನೂ ಒಂದು ಮಾತು ಇಪ್ಪತ್ತನೆಯ ಶತಮಾನದಲ್ಲಿ ನಮ್ಮ ಪ್ರಾಂತವನ್ನು ರಚಿಸಿಕೊಳ್ಳುವ ಸಂದರ್ಭವು ಅತ್ಯಂತ ಸ್ವಾಗತಾರ್ಹವಾದ ಸುಯೋಗ ಎಂದು ನಾವು ತಿಳಿಯತಕ್ಕದ್ದು. ಯಂತ್ರಯುಗ, ವಿಜ್ಞಾನದ ಪ್ರಗತಿ, ಆರೋಗ್ಯಶಾಸ್ತ್ರ— ಇವೆಲ್ಲವುಗಳ ಪೂರ್ತಿ ಲಾಭವನ್ನು ನಾವು ಪಡೆದುಕೊಳ್ಳಬೇಕು. ಇದಲ್ಲದೆ ಹೊಸ ಪ್ರಾಂತ ರಚನೆಯಲ್ಲಿ ಸದ್ಯದ ಅನನುಕೂಲತೆಗಳ ನಿವಾರಣೆಯಂತೆ ಅವುಗಳ ಪುನರಾವೃತ್ತಿ ಯಾಗದಂತೆ ನೋಡುವುದೂ ನಮ್ಮ ಕರ್ತವ್ಯವಾಗಿದೆ. ಹೊಸ ಪ್ರಾಂತದಂಥ ಮಾತ್ರಕ್ಕೆ ಒಬ್ಬ ಗವರ್ನರ್, ೮-೧೦ ಮಂತ್ರಿಗಳು ಇರಲೇಬೇಕೆಂಬ ನಿಯಮವಿಲ್ಲ. ಹಿಂದಿನ ಕಾಲದಂತ ಚೀಫ್ ಕಮಿಶನರಂತಹ ಕಡಮೆ ಸಂಬಳದ ಹಿರಿಯಧಿಕಾರಿ, ಕಾಂಗ್ರೆಸ್ ಮಂತ್ರಿಮಂಡಲದಂತೆ ತೀರ ಕಡಿಮೆ ಸಂಬಳ ತೆಗೆದುಕೊಳ್ಳುವ ಸಂಖ್ಯೆಯಿಂದ ಸಣ್ಣದಾದ ಮಂತ್ರಿಮಂಡಳ— ಈ ರೀತಿ ಮೇಲಿನಿಂದಲೆ ವೆಚ್ಚವನ್ನು ಕಡಮೆ ಮಾಡುತ್ತ ಹೋಗಬಹುದು. ಅದರಂತೆಯೆ ಒಂದು ಪ್ರಾಂತದಂಥ ಮಾತ್ರಕ್ಕೆ ಒಂದೇ ವಿಶ್ವವಿದ್ಯಾಲಯ (ಅನೇಕರಿಗೆ ಸಮೀಪದ ಸಂಬಂಧ ಬಾರದು ಹೀಗಿದ್ದರೆ), ಶಿಕ್ಷಣವೆಂದರೆ ಸಾಕ್ಷರತೆ ಎಂದ ಹಟ ಹಿಡಿಯದೆ ಬೇರೆ ಬೇರೆ ತರದ, ಎಲ್ಲ ಜಿಲ್ಲೆಯವರಿಗೂ ಅನುಕೂಲವಾಗುವಂತೆ ಶಿಕ್ಷಣದ ಏರ್ಪಾಡನ್ನು ಮಾಡಬಹುದು.

ಕೊನೆಯ ಮಾತು

ಕೊನೆಯದಾಗಿ ಒಂದು ವಿಷಯ: ಹೊಸಪ್ರಾಂತದ ನಿರ್ಮಾಣವಾದಲ್ಲಿ ಅನೇಕ ಯೋಜನೆಗಳಿಗೆ ಅವಶ್ಯವಾದ ತಜ್ಞರ ಕೊರತೆಯುಂಟಾಗುವದು ಎಂದೂ ಕೆಲವರು ವಾದಿಸುವುದುಂಟು. ಆದರೆ ಸಿಂಧ-ಓರಿಸಾ ಪ್ರಾಂತಗಳ ಪರಿಸ್ಥಿತಿ ಏನೇ ಇದ್ದಿರಲಿ, ಕರ್ನಾಟಕಕ್ಕೆ ಮಾತ್ರ ಈ ಮಾತು ತುಸುಮಟ್ಟಿಗೂ ಅನ್ವಯಿಸುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಬಹುದು. ಯಾಕೆಂದರೆ, ಕೇಂದ್ರ ಮತ್ತು ಮುಂಬಯಿ ಮದ್ರಾಸ್ ಪ್ರಾಂತಗಳ ಸರಕಾರಗಳ ಅಧೀನದಲ್ಲಿ ಯೋಗ್ಯತೆಯ ಮತ್ತು ಹೊಣೆಗಾರಿಕೆಯ ಕನ್ನಡ ಮೇಲಾಧಿಕಾರಿಗಳದ್ದಾರೆ ಇಷ್ಟೇ ಅಲ್ಲ. ಎಂಜಿನಿಯರಿಂಗ, ಅಗ್ರಿಕಲ್ಚರ್, ಫೈನಾನ್ಸ್, ಸಿವ್ಹಿಲ್ ಸರ್ವಿಸ್, ಪೋಸ್ಟ ಮತ್ತು ರೇಲ್ವೆ, ಫಾರೆಸ್ಟ್, ಶಿಕ್ಷಣ, ಅರ್ಥಶಾಸ್ತ್ರ— ಮೊದಲಾದ ಅನೇಕ ಉಪಯುಕ್ತ ಶಾಖೆಗಳಲ್ಲಿಯೆ ಅನುಭವಿಕರಾದ, ತಜ್ಞರೆನ್ನಿಸಿಕೊಂಡ ಕನ್ನಡ ಮೇಲಧಿಕಾರಿಗಳದ್ದಾರೆ; ಹೈಕೋರ್ಟಿನ ನ್ಯಾಯಾಧೀಶರಿದ್ದಾರೆ, ಪೋಲೀಸ್ ಮೇಲಧಿಕಾರಿಗಳದ್ದಾರೆ. ಇಂದಿನ ಸರಕಾರಗಳ ಆಡಳಿತದಲ್ಲಿ ಇವರಿಂದ ಕರ್ನಾಟಕಕ್ಕೆ ಆಗದ ಲಾಭವನ್ನು ತುಂಬಿಕೊಳ್ಳುವುದಕ್ಕಾದರೂ ಆಯಾ ಸರಕಾರಗಳು ಅವರನ್ನು ಕರ್ನಾಟಕ ಪ್ರಾಂತಕ್ಕೆ ಸ್ಥಳಾಂತರಿಸಲು ಒಪ್ಪಬೇಕು. ತಜ್ಞ ಆಡಳಿತಗಾರರಿಗೆ ಎಷ್ಟು ಕೊಟ್ಟರೂ ಅದು ವೆಚ್ಚವೆನ್ನಿಸದು; ಅದರ ಹತ್ತರಷ್ಟು ಫಲದಾಯಕಗಳಾದ ಯೋಜನೆಗಳನ್ನು ಕರ್ನಾಟಕವು ಪಡೆಯಬಹುದು. ನಿಜವಾಗಿ ನೋಡಿದರೆ ವಿಚ್ಛಿನ್ನ ಕರ್ನಾಟಕಕ್ಕಾಗುವ ಅನನುಕೂಲತೆ— ಅನ್ಯಾಯಗಳನ್ನು ಪರಿಹರಿಸಿಕೊಳ್ಳುವುದು ಕನ್ನಡಿಗರ ಮೂಲಭೂತ ಹಕ್ಕು. ಕರ್ನಾಟಕವು ಏಕೀಕೃತವಾಗುವುದರಿಂದ ಭಾರತಕ್ಕೂ ಹಿತರಕ್ಷಿಗಳ ಸಂವರ್ಧನ. ಹೀಗಿರುವಾಗ ವೆಚ್ಚವಾಗಲಿ, ಶುಷ್ಕತರ್ಕವಾಗಲಿ, ಸದ್ಯದ ಆಡಳಿತದ ಅನುಕೂಲವಾಗಲಿ ನಮ್ಮನ್ನು ಹೆದರಿಸಲಾರದು. ಕರ್ನಾಟಕವು ಉಳಿಯುವುದಾದರೆ ಏಕೀಕರಣ ಒಂದೇ ಒಂದು ಉಪಾಯ; ಏಕೀಕರಣದ ಆಗತ್ಯ ಇಲ್ಲವೆ ಅವಸರ ಇಲ್ಲವೆನ್ನುವುದೆಂದರೆ ಕರ್ನಾಟಕವು ಅಳಿಯುವುದೆ ಯೋಗ್ಯ ಎಂದಂತೆ.

ಹಾನಗಲ್ಲದಲ್ಲಿ ನಮ್ಮ ಏಜಂಟರು :
ವಿಶ್ವನಾಥ ಸೋಮೇಶ್ವರ ಕಾಶೀಕರ
ನ್ಯೂಜ್ ಏಜಂಟ್

ಶಿರಶಿ-ಸಿದ್ದಾಪುರದ ಏಜಂಟರು :
ಎಸ್. ಕೆ. ಭಗತ್
ನ್ಯೂಜ್ ಏಜಂಟ್

ದಾವಣಗೇರಿಯಲ್ಲಿ ನಮ್ಮ ಏಜಂಟರು :
ಎ. ಎಸ್. ಆಚಾರ್ಯ ಮತ್ತು ಬ್ರದರ್ಸ್
ನ್ಯೂಜ್ ಏಜಂಟ್

ಮಂಗಳೂರಲ್ಲಿ ನಮ್ಮ ಏಜಂಟರು :
ಎಂ. ದಾಸಪ್ಪ ಕಾಮತ
ನ್ಯೂಜ್ ಏಜಂಟ್

ನೊಬೆಲ್ ಬಹುಮಾನ

(ಸಣ್ಣಕತೆ)

ಶ್ರೀ ಜಯತೀರ್ಥ ಅಷ್ಟಪುತ್ರೆ,
ಪುಣೆ.

ವಿಜಯ ಒಳ್ಳೆಯ ಶ್ರೇಷ್ಠ ವಿಜ್ಞಾನಿ; ಆದರೂ ಮನುಷ್ಯ-ಸ್ವಭಾವಸಿದ್ಧವಾದ ದುರ್ಗುಣ— ಸ್ವಾರ್ಥ—ದ ಆಶೆಗೆ ಬಲಿಬಿದ್ದ. ಪರಿಣಾಮವಾಗಿ ಜಗತ್ತು ಎರಡು ಶ್ರೇಷ್ಠ ಮಾನವರತ್ನಗಳಿಗೆ ಎರವಾಗಬೇಕಾಯಿತು.

*   *   *   *

ಅದೇ ಊಟ ಮುಗಿಸಿ **ವಿಜಯ** ಪುನಃ ತನ್ನ ಪ್ರಯೋಗ ಶಾಲೆಯಲ್ಲಿ ಕಾಲಿಕ್ಕಿದ. ಒಳಗಿನ ದೃಶ್ಯ ಅವನಿಗೆ ತುಸು ವಿಸ್ಮಯವನ್ನುಂಟು ಮಾಡಿತು **ಶಾರದೆ** ಕುರ್ಚಿಯೊಂದರಲ್ಲಿ ಕುಳಿತು, ತನ್ನ ವಿಷಯವಾವುದರಲ್ಲಿಯೊ ತಲ್ಲೀನಳಾಗಿದ್ದಾಳೆ. ಆಕೆಯ ಹೇಳಿಕೆಯ ಪ್ರಕಾರ ತಾನೇ ಅಡಿಗೆಯವಳಿಂದ ಕಳಿಸಿದ ಊಟ ಬಡಿಸಿದ ತಾಟು, ಅಲ್ಲಿಯೆ ಮೇಜೊಂದರ ಮೇಲೆ ತಣ್ಣಗಾಗಿ ಕುಳಿತಿತ್ತು. ಅವಳ ಸುತ್ತು ಕಾಗದಗಳೂ, ತೆರೆದ ಅದೆಷ್ಟೋ ದೊಡ್ಡ ಪುಸ್ತಕಗಳೂ ಅಸ್ತ-ವ್ಯಸ್ತವಾಗಿ ಬಿದ್ದಿವೆ. ದೀರ್ಘಾಲೋಚನೆಯ ಗಂಭೀರ ಮುದ್ರೆಯೂ, ಬರೆವಣಿಗೆಯ ಶ್ರಮವೂ ಅವಳ ಮೋರೆಯ ಮೇಲೆ ಒಡೆದು ಕಾಣುತ್ತಿವೆ.

ವಿಜಯ ಮೆಲುದನಿಯಿಂದ ನುಡಿದ: 'ಶಾರದಾ, ಇನ್ನೂ ಊಟ ಮಾಡಿಲ್ಲವೇ? ಅಡಿಗೆ ಆರಿದಂತೆ ತೋರುವುದಲ್ಲ!'

ಶಾರದೆ ಈ ಆಕಸ್ಮಿಕ ಧ್ವನಿಯಿಂದ ಬೆಚ್ಚಿಬಿದ್ದು, ಮೇಲೆ ಮುಖ ಮಾಡಿ ನೋಡಿದಳು 'ಕ್ಷಮಿಸಿ, ವಿಚಾರಲಹರಿಯಲ್ಲಿ ಊಟಕ್ಕೆ ಮರೆವಾಯಿತು' ಎಂದು ನುಡಿದು, ಲಗುಬಗೆಯಿಂದ ಊಟ ಮುಗಿಸಿ, ಪುನಃ ತನ್ನಾ ಆಲೋಚನೆಯಲ್ಲಿ ತನ್ಮಯಳಾದಳು. ವಿಜಯನಿಗೆ ಇದೊಂದು ಹೊಸ ಸಂದರ್ಭವಲ್ಲ; ಇಂತಹ ರೀತಿ ಆತನಿಗೂ ಚಿರಪರಿಚಿತವೇ ಆಗಿದ್ದಿತ್ತು. ಮರುಮಾತಾಡದೆ ಆತನೂ ತನ್ನ ಆಸನದೆಡೆಗೆ ತೆರಳಿ ಕಾರ್ಯಮಗ್ನನಾದ ಗೋಡೆಯ ಮೇಲಿನ ಗಡಿಯಾರವೊಂದು ಮಾತ್ರ ನಿದಾನವಾಗಿ ಧ್ವನಿ ಮಾಡುತ್ತಿತ್ತು.

*   *   *   *

ಚಿಕ್ಕವನಿದ್ದಾಗಿನಿಂದಲೂ ವಿಜಯನಿಗೆ ವಿಜ್ಞಾನಶಾಸ್ತ್ರದಲ್ಲಿ ಅಭಿರುಚಿ. ಅದನ್ನೇ ಐಚ್ಛಿಕ ವಿಷಯನ್ನಾಗಿಸಿಕೊಂಡು ಆತ ತನ್ನ ವಿದ್ಯಾಭ್ಯಾಸವನ್ನು ಮುಂದುವರಿಸಿದ. ತನ್ನ ಅಸಮಾನ್ಯ ಮೇಧಾ-ಶಕ್ತಿಯ ಬಲದಿಂದಲೂ ಮತ್ತು ಸೂಕ್ಷ್ಮ ನಿರೀಕ್ಷಣ ಗುಣದಿಂದಲೂ ಎಲ್ಲ ಪ್ರಾಧ್ಯಾಪಕರ ಮೆಚ್ಚುಗೆ ಪಡೆದ. ಸ್ವಲ್ಪ ದಿನಗಳಲ್ಲಿಯೆ ಆತ ತನ್ನ ಕೀರ್ತಿಯನ್ನೆಲ್ಲೆಡೆ ಪಸರಿಸಿ, ಎಲ್ಲ ವಿದ್ಯಾಪೀಠಗಳಿಂದಲೂ ಮನ್ನಣೆ ಪಡೆದ. ಆಗಲೆ ಆತನು ಶಾಸ್ತ್ರೀಯ ಸಂಶೋಧನೆಯ ಕಾರ್ಯ ಕೈಕೊಂಡುದು. **ಅಲ್ಲಿಂದ** ಆತನ ಕೀರ್ತಿ ಹೊರದೇಶಗಳಿಗೆ ಹಬ್ಬಲು ಕೂಡ ಕಾಲವಿಳಂಬವಾಗಲಿಲ್ಲ. ಲಂಡನ್ನಿನ ರಾಯಲ್ ಸೊಸೈಟಿಯೂ ಆತನಿಗೆ ಸದಸ್ಯತ್ವದ ಗೌರವವನ್ನಿತ್ತಿತು.

ಈಗಾಗಲೆ **ಅವನ** **ಅನೇಕ** ಸಂಶೋಧನೆಗಳು ಶಾಸ್ತ್ರಜ್ಞರ ಸಂದೇಹಗಳನ್ನೆಷ್ಟೊ ಪರಿಹರಿಸಿ ಚೆನ್ನಾಗಿ ಬೆಳಕನ್ನಿತ್ತಿದ್ದುವು. ಒಂದೆರಡು ಸಲ ವಿದೇಶಗಳನ್ನೆಲ್ಲ ತಿರುಗಿ ಆತ ಅಲ್ಲಿಯ ಪ್ರಮುಖ ಸಂಶೋಧನ ಕಾರ್ಯಾಲಯಗಳನ್ನು ಸಂದರ್ಶಿಸಿ ಬಂದಿದ್ದ 'ನೋಬೆಲ್ ಬಹುಮಾನ'ವಾದರೂ ಆತನ ಕೊರಳಿಗೆ ಇಂದು ನಾಳೆ ಬೀಳದಿರದೆಂದು ಎಲ್ಲರ ಗೃಹಿಕೆಯಾಗಿತ್ತು.

*   *   *   *

ವಿಶ್ವಸಂಸಾರದ ಸುಖ-ಶಾಂತಿಗಳಿಗಾಗಿ ಹೋರಾಡುವ ವಿಜಯನಿಗೆ ತನ್ನ ಸ್ವಂತ ಸಂಸಾರದ ಅರಿವೆ ಇರಲಿಲ್ಲ, ಬೇಕೂ ಆಗಿರಲಿಲ್ಲ. 'ಮದುವೆಯಿಂದ ತನ್ನ ಪ್ರಾಯೋಗಿಕ ಕಾರ್ಯಕ್ಕೆಲ್ಲಿ ವಿಘ್ನ ಬರುವುದೊ!' ಎಂದು ಬೆದರುತ್ತಿದ್ದ. ಅದೇ ವೇಳೆಯಲ್ಲಿ ತನ್ನಂತಹ ಸ್ಥಿತಿಯಲ್ಲಿಯೆ ಇದ್ದ ಶಾರದೆಯನ್ನು ಕಂಡ; ಅವಳೂ ಆಗ ತಾನೆ ಉಚ್ಚ ಶಿಕ್ಷಣ ಹೊಂದಿ ವಿಜ್ಞಾನಕಾರ್ಯಕ್ಕೆ ಮನಸೋತು ಅದರತ್ತ ಒಲೆದಿದ್ದಳು. ವಿಜ್ಞಾನ ಕಾರ್ಯರಂಗಕ್ಕಿಳಿದ ಅವರೆಡೆಗಳು— ಪರಿಚಯವಾದಂತೆ—ಒಂದಕ್ಕೊಂದು ಒಲಿದು, ಮೆಚ್ಚಿ, ಒಂದೇ ಆದರ್ಶಕ್ಕಾಗಿ ಒಂದುಗೂಡಿ, ಆದರ್ಶ ಜೋಡೊಂದನ್ನು ಸಿದ್ಧಿಸಿದುವು. ವಿಜಯನಿಗೆ ಅಂದಿನಿಂದಲೂ ಶಾರದೆ ಸಹಾಯಕಳು, ಶಾರದೆಗೆ ವಿಜಯ ಸಹಾಯಕ. ಇರ್ವರೂ ಸೃಷ್ಟಿಕರ್ತನ ಅಗಾಧ ಗೌಪ್ಯಗಳನ್ನು ಸ್ಪಷ್ಟಪಡಿಸಲು ಹೆಣಗಾಡುತ್ತಿದ್ದರು ಇದೀಗ ಶಾರದೆಯೂ ವಿಜಯನಿಗೆ ಸರಿಸಮನಾದ ಕೀರ್ತಿಯನ್ನು ಪಸರಿಸಿದ್ದಳು. ಅವರೀಗ ಜಗತ್ತಿನ ಶಾಸ್ತ್ರಜ್ಞಶ್ರೇಷ್ಠರ ಮುತ್ತಿನ ಸರದಲ್ಲಿಯ ಎರಡು ದಿವ್ಯ ಮಣಿಗಳು.

ಶಾರದೆ-ವಿಜಯರು ಸತಿ-ಪತಿಗಳು ಹೆಸರಿಗೆ ಮಾತ್ರ; ಇಬ್ಬರೂ ಸರ್ವತಂತ್ರ ಸ್ವತಂತ್ರರು. ಇಬ್ಬರ ದಾರಿಗಳೇ ಬೇರೆ, ವಿಚಾರಗಳೇ ಬೇರೆ, ಕೃತಿಯ ವೈಶಿಷ್ಟ್ಯವೇ ಬೇರೆ. ಅವರಿಗಾಗಿ ರಾಜಾಶ್ರಯದಿಂದ ಸ್ವತಂತ್ರ 'ಪ್ರಯೋಗಶಾಲೆ'ಯೂ ದೊರೆತಿತ್ತು. ಅಲ್ಲಿಯೆ ಹಗಲು-ರಾತ್ರಿ ಕುಳಿತು ಅವರು ಕಷ್ಟಪಡುತ್ತಿರುವರು.

ಆಗ ಶಾಸ್ತ್ರಜ್ಞರಿಗೆಲ್ಲ ಸೇಚಿಗಿಟ್ಟುಕೊಂಡಿತ್ತು ಒಂದು ವಿಷಯ. ಅದೆಂದರೆ: ಸೃಷ್ಟಿಯಲ್ಲಿ ಬಹು ಮೂಲ್ಯವಾದ ಸ್ವಯಂಪ್ರಕಾಶ ಲೋಹ (Radio active)ಗಳ ಸ್ವಯಂಶಕ್ತಿಕ್ಷಯ. ಕ್ಷಯಿಸುವ ಅಗಣಿತ ಶಕ್ತಿಯ ಅರಿವು ಎಲ್ಲರಿಗೂ ಆಗಿತ್ತು. ಆದರೆ 'ಅದನ್ನು ತಡೆಗಟ್ಟುವುದು ಹೇಗೆ? ಏನಾದರೂ ಸಾಧನವಿದೆಯೇ?' ಎಂಬ ವಿಚಾರ-ಸಾಗರದಲ್ಲಿ ಜಗತ್ತಿನ ಶಾಸ್ತ್ರಜ್ಞರೆಲ್ಲ ತೇಲುಗಣ್ಣು ಮೇಲುಗಣ್ಣು ಹಾಕುತ್ತಿದ್ದರು ಅಮೇರಿಕೆಯ ಸಂಸ್ಥೆಯೊಂದು ೧೦ ಲಕ್ಷ ಡಾಲರುಗಳ ಬಹುಮಾನ ಸಾರಿತು— ಈ ವಿಷಯದಲ್ಲಿ ಯಶಸ್ಸು ಸಂಪಾದಿಸಿದವರಿಗಾಗಿ.

ಎಲ್ಲೆಡೆಯ ಕೋಲಾಹಲವು ವಿಜಯನ ಚಿಕ್ಕ ಮಂದಿರವನ್ನೂ ಪ್ರವೇಶಿಸಿತು. ಅಂದಿನಿಂದ ದಂಪತಿಗಳಿರ್ವರಿಗೂ ಮನಶ್ಶಾಂತಿಯಿಲ್ಲ. ಎಡೆಬಿಡದೆ ಹವಣಿಕೆ ಹೆಣಗಾಟ ಸಾಗಿತ್ತು. ಸಾವಿರಾರು ರೂಪಾಯಿಗಳ ಹೋಮವೂ ಆಗಿತ್ತು. ಇಬ್ಬರ ವಿಚಾರಸರಣಿಗಳೂ ತಮ-

ತನಗೆ ತೋಚಿದ ದಾರಿಯಲ್ಲಿ ಮುಂದುವರಿದು, ಪ್ರಾಯೋಗಿಕ ಸ್ವರೂಪವನ್ನೋ— ಗಣಿತ ಶಾಸ್ತ್ರದಲ್ಲಿ ಪರ್ಯವಸಾನವನ್ನೋ ಹೊಂದುತ್ತ ನಡೆದಿದ್ದುವು.

ವಿಜಯನ ಒಂದೆರಡು ಯತ್ನಗಳಿಗೆ ಆಗಲೇ ಯಶ ದೊರೆಯಲಿಲ್ಲ; ಆದರೆ ವಿಜ್ಞಾನಿ ತಾಳ್ಮೆಗೆಡುವನೇ? ನೂರಾರು ಸಲ ಅಯಶಸ್ವಿಯಾದರೂ ಸತತ ಪ್ರಯತ್ನವನ್ನು ಬಿಡದೆ ಮತ್ತೆ ಯಶಸ್ಸು ಗಳಿಸಿದ ಅದೆಷ್ಟೋ ಶಾಸ್ತ್ರಜ್ಞರನ್ನು ಕಂಡಿದ್ದ— ವಿಜಯ.

ಶಾರದೆಯಾದರೊ ತನ್ನ ಸಂಶೋಧನಕಾರ್ಯದ ಬಗ್ಗೆ ಮಾತುಗಳನ್ನು ಎರಡು ಮಾಡಿರಲಿಲ್ಲ. ವಿಜಯ ಏನನ್ನಾದರೂ ಕೇಳಿದರೆ, 'ಏನಡ್ಡಿಯಿಲ್ಲ, ಕಾರ್ಯ ಚೆನ್ನಾಗಿ ಮುಂದೆ ಸಾಗಿದೆ' ಎಂದು ತನ್ನ ಒಂದೇ ಉತ್ತರವಿತ್ತು ಸುಮ್ಮನಾಗುವಳು. ವಿಜಯನೂ ನಸುನಕ್ಕು ತನ್ನ ಆಲೋಚನೆಗಳಲ್ಲಿ ಮಗ್ನನಾಗುವನು. ಕಾಲಚಕ್ರ ಮಂದಗತಿಯಿಂದ ಮುಂದೆ ಸಾಗುತ್ತಿತ್ತು.

* * * *

ಕೊನೆಗೆ ಒಂದು ದಿನ ಬಂದಿತು. ಆ ದಿನದ ಬರುವಿಕೆಯನ್ನು ಜಗತ್ತೇ ಉತ್ಸುಕತೆಯಿಂದ ಕಾದಿತ್ತು. ಆ ದಿನ ಕಡೆಗೂ ಬಂದಿತು. ಯಾವ ದಿನ ಜಗವೆಲ್ಲ ಸಂತಸದಿಂದ ಹಾಡಿಕೊಂಡಿರಬೇಕಾಗಿತ್ತೋ ಅದೇ ದಿನ ದುಃಖಾಶ್ರುಪೂರ್ಣವಾಯಿತು. 'ಸೃಷ್ಟಿಕರ್ತನ ಇಚ್ಛೆಗೆ ಉಪಾಯವಿಲ್ಲ!' ಶಾಸ್ತ್ರಜ್ಞರಿಗೂ ಈ ಕಡೆಯ ವಾಕ್ಯ ಉಚ್ಚರಿಸಬೇಕಾಗಿ ಬಂದಿತು!

ಮುಂಜಾವಿನ ಸೂಸುಗಾಳಿ ಬೀಸುತ್ತಿತ್ತು. ವಿಜಯನ ಪ್ರಯೋಗಶಾಲೆಯಲ್ಲಿ ವಿದ್ಯುದ್ದೀಪವೊಂದು ತನ್ನ ಅಸ್ಫುಟ ಪ್ರಕಾಶವನ್ನೆಲ್ಲೆಡೆ ಬೀರುತ್ತಿತ್ತು. ಶಾಂತ ವಾತಾವರಣವೆಲ್ಲೆಡೆ ಪಸರಿಸಿತ್ತು. 'ಶಾರದೆ'ಯ ಆಕಸ್ಮಿಕವಾದ ಆನಂದೋದ್ಗಾರದಿಂದ 'ವಿಜಯ'ನ ವಿಚಾರಸಮಾಧಿಗೆ ತಡೆಯುಂಟಾಯಿತು. ಕೂಡಲೆ ತನ್ನ ಆಸನದಿಂದೆದ್ದು ಶಾರದೆಯೆಡೆಗೆ ಬಂದ. ಎಂದಿಲ್ಲದ ಸಂತಸದಿಂದ ಶಾರದೆಯ ಮೊಗ ಅರಳಿತ್ತು. ಶಾರದೆ ವಿಜಯನನ್ನು ಕಂಡು ಗೆಲುವಿನ ನಸುನಗೆಯಿಂದ ಕೈ ಕುಲುಕಿದಳು. ವಿಜಯ ವಿಚಾರಿಸಿದ: "ಏನು ಸಮಾಚಾರ?" "ಪ್ರಕೃತಿ ಬಗೆಹರಿಯಿತು!" ಶಾರದೆ ಉತ್ತರವಿತ್ತಳು.

"ಹಾಂ!" ವಿಜಯನ ಕಣ್ಣು ಆಶ್ಚರ್ಯದಿಂದ ಇನ್ನಿಷ್ಟು ಅರಳಿದುವು. "ನನಗಿನ್ನು ಕೆಲವು ದಿನ ವಿಶ್ರಾಂತಿ!" ನಸುನಗುತ್ತಲೆ, ಶಾರದೆ ಮಾತನ್ನು ಮುಂದುವರಿಸಿದಳು: "ಇದು ನೋಡಿ, ಸ್ವಯಂ ಪ್ರಕಾಶ ಲೋಹಗಳ ಸ್ವಯಂ ಶಕ್ತಿಕ್ಷಯಕ್ಕೆ ಸಕಾರಣ ವಿವರಣೆ ಮತ್ತು ಅದನ್ನು ತಡೆಯುವ ಬಗೆ, ಅದಕ್ಕಾಗಿ ರಚಿಸಬೇಕಾದ ವಿಶಿಷ್ಟವಾದ ಸಾಧನದ ರಚನೆ, ಇದರಿಂದ ಜಗತ್ತಿಗಾಗುವ ಅಮೌಲ್ಯ ಲಾಭ ಮೊದಲಾದುವುಗಳನ್ನೊಳಗೊಂಡ ಬರವಣಿಗೆ!" ಎಂದು ಆದೇ ಬರೆದು ಮುಗಿಸಿದ—ಮೇಜಿನ ಮೇಲಿನ— ಕಾಗದದ ಕಟ್ಟನ್ನು ವಿಜಯನ ಕೈಯಲ್ಲಿತ್ತಳು.

ವಿಜಯನಿಗೆ ತಿಳಿಯದೆಯೆ ಆತನ ಮನಸ್ಸಿನಲ್ಲಿ ಆನಂದಾಶ್ಚರ್ಯಗಳು ಏಕಕಾಲಕ್ಕೆ ಉದ್ಭವಿಸಿದುವು. ಕಾಗದದ ಹಾಳೆಗಳನ್ನೆಲ್ಲ ಆಮೂಲಾಗ್ರವಾಗಿ, ಏಕಚಿತ್ತದಿಂದ ಓದಿದ. ಆದರಲ್ಲಿಯ ಗಣಿತ ಕ್ರಮವನ್ನು ಪರಿಶೀಲಿಸಿದ. ಎಲ್ಲವೂ ಸರಿಯಾಗಿತ್ತು. "ಸರಿ" ಎಂದುಸುರಿ ತಲೆಯನ್ನು ಮೇಲೆ ಎತ್ತಿದ.

"ಹಾಗಾದರೆ ನಾಳೆಯೇ ರಾಯಲ್ ಸೊಸೈಟಿಗೆ ಫೋನ್ ಮಾಡಬಹುದಲ್ಲವೇ?" ಅಲ್ಲಿಯೇ ನಿಂತಿದ್ದ ಶಾರದೆ ಕೇಳಿದಳು.

"ಸರಿ, ನಾಳೆ ಇನ್ನೊಮ್ಮೆ ವಿಚಾರಿಸುವಾ!" ವಿಜಯ ಉತ್ತರವಿತ್ತ.

ಅಂದಿನ ಅವರ ಕಾರ್ಯವು ಅಷ್ಟಕ್ಕೇ ನಿಂತಿತು. ವಿಜಯನಿಗೇಕೋ ಮನಸ್ಸಿನಲ್ಲಿ ಅಸಮಾಧಾನ. ಏಕೆನ್ನುವುದು ಆತನಿಗೂ ಅರ್ಥವಾಗಲೊಲ್ಲದು. ನಿಜವಾಗಿ ನೋಡಿದರೆ ಒಳ್ಳೆಯ ಸಂತಸವಾಗಬೇಕವನಿಗೆ ಊಟದ ವಿಷಯದಲ್ಲಿ ಪ್ರತಿದಿನದ ಅನಾದರದೊಡನೆ ಇಂದು ಸ್ವಲ್ಪ ಮನಃಕ್ಷೋಭವೂ ಜೊತೆಗೂಡಿತ್ತು. ಶಾರದೆಯೊಡನೆ ಬಲುಮೆಯ ನಗೆಯೊಂದಿಗೆ ಕೂಡ ಬಿಚ್ಚುಮನದಿಂದ ಮಾತನಾಡಲಾಗಲಿಲ್ಲ. ಉಲ್ಲಾಸದಿಂದ ತುಂಬಿದೆದೆಯ ಅವಳಿಗಾದರೊ, ಜಗತ್ತೇ ಉಲ್ಲಸಿತವಾಗಿರುವಂತೆ ಕಾಣುತ್ತಿತ್ತು.

ಮಧ್ಯಾಹ್ನದ ಉರಿಬಿಸಿಲಲ್ಲೇ ವಿಜಯ ಮನೆಯ ಹೊರಕ್ಕೆ ಹೊರಟ. ಮನೆಯಲ್ಲಿಯಾಗಲಿ, ಪ್ರಯೋಗಶಾಲೆಯಲ್ಲಾಗಲಿ ಆತನಿಗೆ ಸಮಾಧಾನವೆನಿಸಲಿಲ್ಲ. ಹಾಗೆಯೇ ದೂರ ದೂರ ಹೊರಟ. ಪ್ರತಿನಿತ್ಯದ ರೂಢಿಯ ಏಕಾಂತಸ್ಥಳವಾದ ನದಿಯ ದಂಡೆಯಲ್ಲಿಯ ಗಿಡದ ನೆರಳಾಸರೆಗೆ ಕುಳಿತು, ಶೂನ್ಯದೃಷ್ಟಿಯಿಂದ ಕ್ಷಿತಿಜವನ್ನವಲೋಕಿಸತೊಡಗಿದ. ನದಿಯ ಮಂಜುಳನಾದವಾಗಲಿ, ಪಕ್ಷಿಗಳ ಕಿಲಿಬಿಲಿಯಾಗಲಿ, ಸೃಷ್ಟಿಸೌಂದರ್ಯವಾಗಲಿ ಯಾವುದೂ ಆತನ ಕವಡಿದ ಮನಸ್ಥಿತಿಯನ್ನು ಸ್ತಿಮಿತಕ್ಕೆ ತರಲು ಸಮರ್ಥವಾಗಲಿಲ್ಲ. ಅಲ್ಲಿಯ ಪ್ರಶಾಂತ ಮೌನವು ಭಯಾನಕವಾಗಿ ಕಂಡಿತು. ಎಲ್ಲ ದಿಕ್ಕುಗಳಿಂದಲೂ ಅದೃಶ್ಯವಾದ ಭೀಕರ ಆಕೃತಿಯೊಂದು ತನ್ನನ್ನು ಅಟ್ಟಿಕೊಂಡು ಬರುವಂತೆ ಭಾಸವಾಯಿತು— ವಿಜಯನಿಗೆ. ಮನದಲ್ಲಿ ಭೀಕರ ದ್ವಂದ್ವವೆಸಗುತ್ತಿತ್ತು. ಮನವನ್ನು ಸಾಂತ್ವನಗೊಳಿಸಲು ವಿಚಾರಿಸತೊಡಗಿದ: "ಶಾರದೆಯು ಹೆರವರವಳೇ? ಆಕೆ ನನ್ನವಳು! ಅವಳು ಕೀರ್ತಿವಂತಳಾದರೆ ನನಗೇಕೇ ಸಮಾಧಾನ? ನನಗೊಬ್ಬನಿಗೇ ಎಲ್ಲ ಕೀರ್ತಿ ದೊರೆಯಬೇಕೆಂಬುದು ಇದೆಂತಹ ಹೀನಾಯವಾದ ಮಹತ್ವಾಕಾಂಕ್ಷೆ..........." ಇತ್ಯಾದಿ —

ಆತನ ಹೃದಯದ ಮೂಲೆಯೊಂದರಿಂದ ವಿಚಾರದ ಪ್ರತಿಧ್ವನಿಯೊಂದು ಹೊರಹೊಮ್ಮಿತು; ವಿಜಯ ಏಕಚಿತ್ತದಿಂದ ಕೇಳತೊಡಗಿದ: "ಶಾರದೆ ನಿನ್ನವಳು ನಿಜ. ಅಂತೆಯೇ ಆಕೆಗೆ ನಿನಗಿಂತಲೂ ಹೆಚ್ಚಿನ ಸನ್ಮಾನ ದೊರೆಯಕೂಡದು, ನಿಶ್ಚಯವಾಗಿಯೂ ಕೂಡದು! 'ನೋಬೆಲ್ ಬಹುಮಾನ' ಒಂದೇ ಆಕೆಗೆ ನಿನ್ನನ್ನು ಮೀರಿಸಲು ಸಾಕು, ಮೇಲೆ '೧೦ ಲಕ್ಷ ಡಾಲರುಗಳ ಬಹುಮಾನ, ವಿದೇಶಗಳಲ್ಲಿ ಪ್ರಯಾಣ;' ಎಲ್ಲೆಲ್ಲಿಯೂ ಆಕೆಗೆ ಸತ್ಕಾರಕೂಟ, ಜಗತ್ತಿನಲ್ಲೆಲ್ಲ ಆಕೆಯ ಯಶೋದುಂದುಭಿ... ....ಇದಕ್ಕೂ ಹೆಚ್ಚಿಗಿನ್ನೇನು ಬೇಕು? ಆದರೆ?........ ಆದರೆ........ನೀನು?........ಗಂಡಸಾದ ನೀನು?.... ಅವಳ ಸ್ವಾಮಿಯಾದ ನೀನು?....ಅವಳಿಗೆ ಆಶ್ರಯವಿತ್ತು ಬೆಳಸಿದ ನೀನು? ...ಛೀ....ನಿನ್ನನ್ನಾರು ಲಕ್ಷ್ಯಕ್ಕೆ ತರುವರು? ಜಗತ್ತಿಗೆ

ನಿನ್ನಂಥವರು ಹೊರೆಯಾಗಿದ್ದಾರೆ....ಹೊರೆ! ಹೊರಲಾರದ ಹೊರೆ! ಅಯ್ಯೋ! ಇಂತಹ ವೇಳೆಯಲ್ಲಿ ನಿಜವಾಗಿ ಗಂಡುಸಾದವನು........ ನಿಜವಾದ ಜಾಣನು.... ಇಂತಹ ಮಹತ್ತರ ಕೀರ್ತಿಗಾಗಿ ಬೇಕಾದುದನ್ನು ಮಾಡಲೂ................"

'ಶಾಂತಂ ಪಾಪಂ!' ಎಂದು ವಿಜಯ ಎರಡೂ ಕೈಗಳಿಂದ ಗಟ್ಟಿಯಾಗಿ ಕಿವಿ ಮುಚ್ಚಿಕೊಂಡ. ತಲೆ ಕಾಯ್ದಿತ್ತು. ಮನದಲ್ಲಿ ಪುನಃ ವಿಕೃತ ವಿಚಾರಗಳ ತಾಂಡವನೃತ್ಯ! ದೂರದಲ್ಲಿ, ಬಿಸಿಲ ಬೇಗೆಯಲ್ಲಿ ಸುಂಟರ ಗಾಳಿಯ ಅಬ್ಬರವೊಂದು ಕೇಳಬರುತ್ತಿತ್ತು.

"ನಿಜಕ್ಕೂ ನಾನು ಆಕೆಯ ಸ್ವಾಮಿಯೇ? ಸ್ವಾಮಿಯಾದ ಪಕ್ಷಕ್ಕೆ ಆಕೆಗೆ........" ಇನ್ನೂ ಏನೇನೋ ವಿಚಾರಿಸುತ್ತಿದ್ದ ವಿಜಯ.

"ಛೀ, ಕೈಲಾಗದ ಹೇಡಿ!" ವಿಜಯ ಧ್ವನಿಗೆ ಬೆಚ್ಚಿಬಿದ್ದ ಯಾರೋ ಮಾತನಾಡುತ್ತಿರುವಂತೆ ತೋರಿತು ಆತನಿಗೆ.

"ಅಯ್ಯೋ! ಸ್ವಾಮಿ-ಸೇವಕರ ಬಗ್ಗೆ ವಿಚಾರಿಸುವ ಪ್ರಶ್ನೆ ಇನ್ನೂ ವಿಚಾರವೇ? ಜಗತ್ತಿನಲ್ಲೆಲ್ಲ ಆಚಂದ್ರಾರ್ಕವಾಗಿ ಕೀರ್ತಿಯನ್ನು ಪೊಳಗಿಸಲು ಯೋಗ್ಯ ಸಂಧಿ ಬಂದಿದೆ ಈಗ. ಮಾಡುವ ಕಾರ್ಯವಾದರೋ ತೀರ ಚಿಕ್ಕದು, ಕ್ಷುಲ್ಲಕವಾದುದು! ಶಾರದೆಯನ್ನು ಜಗತ್ತಿನಲ್ಲಿ ಇಲ್ಲದಂತೆ ಮಾಡುವುದು................"

"ಹಾ!" ವಿಜಯನಿಗೆ ಆಕಾರ ಕಡಕೊಂಡು ಬಿದ್ದಂತಾಗಿ ಕಣ್ಣಿಗೆ ಕತ್ತಲು ಕವಿದಂತಾಯಿತು. ಎದೆ ವೇಗವಾಗಿ ಹಾರುತ್ತಿತ್ತು.

ಮತ್ತೆ ಅಸ್ಪಷ್ಟ ಧ್ವನಿ ವೇಗವಾಗಿ ಮುಂದುವರೆಯಿತು: "ಇಲ್ಲವಾದರೆ........ಈ ಕಾರ್ಯ ಮಾಡಲಸಮರ್ಥನಾದರೆ....ನೀನಾದರೂ ಈ ಜಗತ್ತಿನಲ್ಲಿದ್ದು ಸಾಧಿಸಿದುದೇನು? ಹೇಡಿಗಳಿಗಾಸರವಾದ ನ್ಯಾಯ, ನೀತಿ, ದಯೆಗಳಿಗೆ ಧೂರ್ತನ ಹತ್ತಿರ ಸ್ಥಳವಿಲ್ಲ. ಚೆನ್ನಾಗಿ ತಿಳಿ! ಇಂತಹ ಬಂಗಾರದಂತಹ ಸಂಧಿ ಸಿಗುವುದಿನ್ನಾವಾಗಲೋ ಕಂಡುದಿಲ್ಲ! ಆಕೆಯಾದರೂ ಅಂತಹ ಮಹತ್ತಾದುದನ್ನೇನು ತಾನೇ ಮಾಡಿದ್ದಾಳೆ?........

ಈಗ ನೀನು ಕೂಡ ಮಾಡಬಲ್ಲೆ. ಎರಡನೆಯವರಿಗೆ ಆಕೆಗಿಂತಲೂ ಚೆನ್ನಾಗಿ ತಿಳಿಹೇಳಬಲ್ಲೆ. ಜಗತ್ತಿನಲ್ಲಿ ಹೆಚ್ಚಿನ ಯೋಗ್ಯತೆಗೆ— ಮರ್ಯಾದೆಗೆ 'ಗಂಡುಸು' ತಕ್ಕವನು. ಈ ನಿಯಮಕ್ಕೆ ಅಪವಾದವಾಗಲೆಳಸುವುದನ್ನೆಲ್ಲ ತೊಡೆದು ಹಾಕುವುದು ಗಂಡುಸೆಂಬವನ ಧರ್ಮ. ಆತನ ಧರ್ಮ ಹೇಡಿಧರ್ಮವಲ್ಲ..........."

ವಿಜಯನ ಮನಸ್ಸು ಸ್ತಿಮಿತಕ್ಕೆ ಬಂದಿತು. ಆದರೆ ಈ ಸ್ತಿಮಿತದ ವಿಧವೇ ಬೇರೆಯಾಗಿತ್ತು. ಸುತ್ತುಕಡೆಗೂ ಗಾಳಿಯ ಅಬ್ಬರ ಹೆಚ್ಚಿತ್ತು. ಆಗಸವೆಲ್ಲ ಕಾರ್ಮೋಡಗಳಿಂದ ತುಂಬಿತ್ತು. ಕತ್ತಲೆಯ ಸಾಮ್ರಾಜ್ಯವೆಲ್ಲೆಡೆ ಹಬ್ಬತೊಡಗಿತ್ತು. ವಿಜಯನಿಗೆ ಬಾಹ್ಯಸೃಷ್ಟಿಯ ಅರಿವೇ ಇರಲಿಲ್ಲ. ಅಂತರ್ಮುಖಿಯಾಗಿಯೆ ಎದ್ದು ನಿಂತು ನುಡಿದ 'ಇದರಲ್ಲೇನು ತಪ್ಪಿಲ್ಲ;' ಆ ಮೇಲೆ ಸುತ್ತಲೂ ನೋಡಿ ಒಂದು ಸಲ ವಿಕಟವಾಗಿ ನಕ್ಕ. ನಗೆ ಗಾಳಿಯಲ್ಲಿ ತೇಲಿಹೋಯಿತು. ದೂರದಲ್ಲಿ ಗುಡುಗು ಮಾರ್ದನಿಕೊಟ್ಟಿತು. ಮೋಡ ಹನಿಯೊಡೆಯಿತು. ನಿಸರ್ಗವು ಗಡಗಡನೆ ನಡುಗಿತು. ಭಯಾನಕ ಸೃಷ್ಟಿ ಈಗ ವಿಜಯನಿಗೆ ಏನೂ ಭೀತಿ ಹುಟ್ಟಿಸಲಿಲ್ಲ. 'ತನ್ನನ್ನು ಹೆದರಿಸುತ್ತಿದ್ದ ಭೀಕರ ಅದೃಶ್ಯವ್ಯಕ್ತಿ ಈಗ ತನ್ನ ಹೆಗಲಮೇಲೆ ಕೈಹಾಕಿಕೊಂಡು ನಡೆದಿದೆ' ಎಂದು ವಿಜಯನಿಗೆ ಎನ್ನಿಸಿತು.

ವಿಜಯ ವೇಗವಾಗಿ ನಡೆದು ಮನೆಮುಟ್ಟಿದ. ದಾರಿಯಲ್ಲೇಕೋ ಜನರ ಓಡಾಟ ಕಡಮೆಯಾಗಿತ್ತು. ಬಾಗಿಲನ್ನು ನೂಕಿ ಮನೆಹೊಕ್ಕಾಗ, ವಿಜಯನ ಎದೆ ಏಕೋ ಧಡಧಡನೇ ಹಾರಿ ಸುಮ್ಮಗಾಯಿತು. ಮೆಟ್ಟಿಲನ್ನೇರುವಾಗ ಕಾಲುಸಪ್ಪುಳು ಕೂಡ ಭೀತಿಯನ್ನು ಹುಟ್ಟಿಸಿತು. ಮನೆಯೇ ಒಂದು ವಿಧವಾಗಿ ಬದಲಾದಂತೆ ಕಂಡಿತವಗೆ. ಮನದ ವಿಚಾರವನ್ನು ಕಾರ್ಯರಂಗಕ್ಕೆ ತರುವುದು ಸ್ವಲ್ಪ ದುಸ್ತರವೇ ಎನ್ನಿಸಿತು.

ಮನೆ ಎಲ್ಲವೂ ನೀರವವಾಗಿದ್ದಿತು. ಪರರ ಮನೆಯಲ್ಲಿ ಹೊಕ್ಕ ಕಳ್ಳನಂತಾಗಿತ್ತು—ಆತನ ಮನಸ್ಥಿತಿ. ಹಾಗೆಯೆ ಪ್ರಯೋಗಶಾಲೆಯಲ್ಲಿ ಹೊಕ್ಕ. ಪೂರ್ಣವಾಗಿ ಒಳಗೆ ಸೇರದೆ, ಅಲ್ಲೇ ಬಾಗಿಲಿಗೆ ಆತು ಕೆಲ ಹೊತ್ತು ಒಳಗಡೆ ನಿರೀಕ್ಷಿಸಿದ. ಪ್ರಯೋಗಶಾಲೆಯನ್ನು ಇಂದೆಯೆ ಮೊದಲಿಗೆ ನೋಡಿದಂತೆ ಆಯಿತು – ಆತನಿಗೆ. ವಿದ್ಯುದ್ದೀಪದ ಬೆಳಕಿನಲ್ಲಿ ಅಲ್ಲಿ—ಮೇಲ್ಗಡೆ ಜಗತ್ತಿನಲ್ಲಿ ಆಗಿಹೋಗದ ಹಾಗೂ ಸದ್ಯ ಇದ್ದ ಶ್ರೇಷ್ಠ ವಿಜ್ಞಾನಿಗಳ ಚಿತ್ರಪಟಗಳು ಝಗಝಗಿಸುತ್ತಿದ್ದುವು. ಒಂದೊಂದನ್ನೇ ಸಾಲಾಗಿ ವಿಜಯ ನಿರೀಕ್ಷಿಸತೊಡಗಿದ. 'ಆರ್ಕಿಮಿಡಿಸ್'. 'ಗ್ಯಾಲಿಲಿಯೋ,' 'ನ್ಯೂಟನ್', 'ಫ್ಯಾರೆಡೇ', 'ಎಡಿಸನ್' ....ಕಡೆಗೆ ಕಡೆಗೆ ಕಂಡಿತು ಚಿತ್ರಪಟ—'ನೋಬೆಲ್-ಬಹುಮಾನ'ವನ್ನು ಎರಡುಸಲ ಪೊರೆಕಿಸಿನ ಮೇಡಮ್ ಕ್ಯೂರಿಯದು! ಒಮ್ಮೆಲೇ ಅದರ ಹತ್ತಿರವೇ ತನ್ನ ಚಿತ್ರಪಟ ಕಂಡಂತಾಯಿತು. ಹಾಗೆಯೇ ನೋಡುತ್ತ ನಿಂತ! ಆತನ ಪಟ ಅದೃಶ್ಯವಾಗಿ ಅದರ ಸ್ಥಳದಲ್ಲಿ ಶಾರದೆಯ ನಗುಮೊಗ ಕಂಗೊಳಿಸಿತು. ಕಣ್ಣನ್ನು ಒರಸಿಕೊಂಡು ಪುನಃ ನೋಡಿದ; ಮೇಡಮ್ ಕ್ಯೂರಿಯ ಪ್ರಶಾಂತ ದೃಷ್ಟಿ ಕಂಡಿತು. ಕೂಡಲೆ ಆತನ ಲಕ್ಷ್ಯಕ್ಕೆ ಬಂದಿತು. 'ಹೆಚ್ಚಿನ ಗೌರವ................ಗಂಡುಸೇ ತಕ್ಕವ!................'

ಕಣ್ಣುಮುಚ್ಚಿ ದೃಷ್ಟಿ ಬೇರೆಡೆ ಚೆಲ್ಲಿದ. ಕಪಾಟಿನ ಬಾಗಿಲುಗಳನ್ನೆಲ್ಲ ತೆರೆದು ನೋಡಿದ. ಉಪಕರಣಗಳೆಲ್ಲ ಅಸ್ತವ್ಯಸ್ತವಾಗಿ ಬಿದ್ದಿದ್ದುವು. ತೆರೆದ ಪುಸ್ತಕಗಳು ತೆರೆದೇ ಇದ್ದುವು. ಶಾರದೆಯು ತನ್ನ ಆಸನದಲ್ಲಿ ಪುನಃ ವಿಚಾರಮಗ್ನಳಾಗಿ ಕುಳಿತಿದ್ದಳು. ಹತ್ತಿರವೇ ಉಗಿ ಏಳುತ್ತಿದ್ದ ಬಿಸಿ-ಬಿಸಿ ಕಾಫಿಯ ಬಟ್ಟಲು ತುಂಬಿದ್ದುದೇ ಇತ್ತು. ಮೇಜಿನ ಮೇಲೆ ಆಕೆಯ ಬರೆವಣಿಗೆಯ ಕಾಗದದ ಕಟ್ಟು ವ್ಯವಸ್ಥಿತವಾಗಿ ಪೋಸ್ಟಿಗೆ ಹೋಗಲು ಸಿದ್ಧವಾಗಿತ್ತು. ವಿಜಯನ ಹೃದಯದಲ್ಲಿ ಪುನಃ ಬೆಂಕಿ ಹೊಗೆಯಾಡಿತು. ಸದ್ದಿಲ್ಲದೆಯೆ ಆತನ ಕೈಯು ಬಾಟಲಿಯೊಂದರೊಳಗಿನ ದ್ರವ್ಯವನ್ನು ಕಾಫಿಯಲ್ಲಿ ಹಾಕಿತು. ಹೊರಗೆ ಪ್ರಕಾಶಿತವಾದ ಕೋಲ್ಮಿಂಚು ಬೆಳಗಿತು.

ವಿಜಯ ಎರಡು ಹೆಜ್ಜೆ ಮುಂದಿಟ್ಟ. ಮೈಯಲ್ಲಿ ನಡುಕ ತುಂಬಿತ್ತು. ಮಾತನಾಡಲು ಯತ್ನಿಸಿದರೆ ಗಂಟಲು ಕಟ್ಟಿತ್ತು. ಅಂತೂ ಪ್ರಯತ್ನಿಸಿ ಗಂಟಲನ್ನು ಸರಿಪಡಿಸಿಕೊಂಡ. ಸಪ್ಪಳಕ್ಕೆ ಶಾರದೆ ಮೇಲೆ ನೋಡಿದಳು. ವಿಜಯ ಬೆಚ್ಚಿಬಿದ್ದ. ಕೂಡಲೆ ಸರಿಪಡಿಸಿಕೊಂಡು ನುಡಿದ: "ಶಾರದಾ, ಕಾಫಿ........" ಮುಂದೆ ಧ್ವನಿ

(ಮುಂದಿನ ಪುಟದ ಅಡಿಯಲ್ಲಿ)

ವಿವಿಧ ವರ್ಣಮಯ ವಿಚಿತ್ರ ವಿಶ್ವ

(ಉತ್ತರಾರ್ಧ)

ಶ್ರೀ. ವಿ. ವಿ. ಗೋಖಲೆ, ಬಿ. ಎಸ್‌ಸಿ., ಬಿ. ಎಸ್‌ಸಿ. (ಟೆಕ್), ಮುಂಬಯಿ

●

ಇಷ್ಟು ದೊಡ್ಡ ವಿಶ್ವದಲ್ಲಿ ಕೇವಲ ಧೂಳಿನ ಕಣದಂತಿರುವ ಈ ಪೃಥ್ವಿಯ ಮೇಲಷ್ಟೇ ಮಾನವಜೀವನವಿರುವುದೆಂಬುದು ಬಹು ಆಶ್ಚರ್ಯದ ಸಂಗತಿಯು. ಆದರೂ ಹೀಗಿದ್ದದ್ದೇನೋ ನಿಜ. ಸೂರ್ಯನ ಸುತ್ತಲೂ ತಿರುಗುತ್ತಿರುವ ಗ್ರಹಗಳ ಸಮೂಹದಂತೆ ಬೇರೆ ಗ್ರಹಗಳ ಸಮೂಹವಿರುವುದಿಲ್ಲ. ಯಾಕೆಂದರೆ ಇಂತಹ ಗ್ರಹ-ಮಾಲಿಕೆಯು ಸಂಭವಿಸಬೇಕಾದರೆ, ಒಂದು ನಕ್ಷತ್ರದ ತೀರ ಸಮೀಪಕ್ಕೆ ಮತ್ತೊಂದು ನಕ್ಷತ್ರ ಬರಬೇಕಾಗುವುದು. ವಿಶ್ವದ ವಿಶಾಲತೆಯಲ್ಲಿ ಹೀಗೆ ಸಂಭವಿಸುವುದು ಅತಿ ವಿರಳ. ಮೊದಲು ಕೊಟ್ಟ ಉದಾಹರಣೆಯಂತೆ, ಮೂರು ಜೇನ್ನೊಣಗಳನ್ನು ಇಡೀ ಹಿಂದುಸ್ತಾನದ ವಿಸ್ತೀರ್ಣತೆಯಲ್ಲಿ ಬಿಟ್ಟರೆ ಒಂದಕ್ಕೊಂದು ಭೆಟ್ಟಿಯಾಗುವುದು ಅಸಂಭವವು.

ನಕ್ಷತ್ರಗಳಲ್ಲಿಯ ಉಷ್ಣತೆಯೂ ಅತಿ ಪ್ರಚಂಡವಿರುವುದರಿಂದ ಒಂದೇಸವನೆ ಅವರಲ್ಲಿಯ ಎಲ್ಲ ಪದಾರ್ಥಗಳು ನಾಶಹೊಂದುತ್ತಲೇ ಇರುವುವು. ಪರಾರ್ಧಾನವಧಿ ವರ್ಷಗಳ ನಂತರ ಅವು ಬೂದಿಬೂದಿಯಾಗಬಹುದು. ಸೂರ್ಯನಿಂದ ಈ ಗ್ರಹಗಳು ಹುಟ್ಟಿದ ಸಮಯದಲ್ಲಿ, ಅವನಿಂದ ಹೀಗೆ ಸಂಭವಿಸಿದ ಬೂದಿಯು ಹೊರಹೊರಟಿರಬೇಕು; ನಮ್ಮ ಪೃಥ್ವಿಯು ಇಂತಹ ಬೂದಿಯಿಂದಲೇ ನಿರ್ಮಿತವಾಗಿರಬೇಕು. ಈ ಬೂದಿಯು ಕೂಡ ಕೊನೆಗೆ ನಾಶಹೊಂದಿ ಶಕ್ತಿಯಲ್ಲಿ ರೂಪಾಂತರ ಹೊಂದುವುದಿದೆ. ಆದರೂ ನಕ್ಷತ್ರಗಳ ಮೇಲಿನ ಪದಾರ್ಥಗಳಿಗಿಂತ ಈ ಭೂಮಿಯ ಮೇಲಿನ ಪದಾರ್ಥಗಳ ರೂಪಾಂತರವು ಬಹು ಸಾವಕಾಶವಾದದ್ದು. ಆದುದರಿಂದಲೇ ಮಾನವನು ಈ ಭೂಮಿಯ ಮೇಲೆ ಇರಲು ಸಾಧ್ಯವು. ಇನ್ನೊಂದು ಜೀವನಕ್ಕೆ ಅವಶ್ಯಕವಾದ ಸೌಕರ್ಯ-ವೆಂದರೆ ಪೃಥ್ವಿಯ ಮೇಲಿನ ಉಷ್ಣತಾಮಾನವು. ಇವೆಲ್ಲ ಜೀವನದ ಅವಶ್ಯಕತೆಗಳನ್ನು ಅವಲೋಕಿಸಿದರೆ ಪೃಥ್ವಿಯನ್ನು ಬಿಟ್ಟು ಉಳಿದ ಗ್ರಹಗಳೊಳಗೆ ಮಂಗಳ ಮತ್ತು ಶುಕ್ರರ ಮೇಲೆ ಜೀವನವು ಸಂಭವವೆಂದು ಕಂಡುಹಿಡಿದಿದ್ದಾರೆ. ದುರ್ಬಿಣಿಯ ಸಹಾಯದಿಂದ ಶುಕ್ರನನ್ನು ನೋಡಿದರೆ, ಅವನ ಮೇಲೆ ಅನೇಕ ವೇಳೆ ಒಂದು ತರದ ದಟ್ಟವಾದ ಮಂಜು ಹಬ್ಬಿದಂತೆ ತೋರುವುದು. ಈ ಆವರಣವು ಶುಕ್ರನದೋ ಅಥವಾ ಮತ್ತೇನಾದರೂ ಇದೆಯೋ ಏನೂ ನಿಶ್ಚಿತವಾಗಿ ಹೇಳಲು ಸಾಧ್ಯವಿಲ್ಲ. ಮಂಗಳ ಗ್ರಹದ ಮೇಲೆ ಇಲ್ಲಿಯಂತೆಯೆ ಹವೆಯಲ್ಲಿ ಆಮ್ಲಜನವೂ ಮತ್ತು ನೀರಿನ ಕಣಗಳೂ ಇರುವುವೆಂದು ಕಂಡುಹಿಡಿದಿದ್ದಾರೆ ಮಂಗಳನ ಮೇಲೆ ಕಾಣುವ ಕಪ್ಪುಕಲೆಗಳ ವರ್ಣವು ವರ್ಷಕ್ಕೆ ೨-೩ ಸಲ ಬದಲಾಗುತ್ತದೆ. ಇದರ ಮೇಲಿಂದ ಅಲ್ಲಿಯೂ ಗಿಡಗಂಟಿಗಳಿರಬೇಕೆಂದು ತರ್ಕವು. ಅಲ್ಲದೆ ಮಂಗಳನ ಮೇಲೆ ಅಮೋನಿಯಾ ಹವೆ ಇರುವುದೆಂದು ಶೋಧಿಸಿದ್ದಾರೆ. ಎಂದಮೇಲೆ ಇದು ಜೀರ್ಣಿಸಲ್ಪಟ್ಟ ವನಸ್ಪತಿಗಳಿಂದ ಸಂಭವಿಸುವುದರಿಂದ, ಅಲ್ಲಿ ವನಸ್ಪತಿಗಳ ಮೇಲೆ ಉಪಜೀವಿಸುತ್ತಿರುವ ಪ್ರಾಣಿಗಳಿರಬಹುದೆಂದು ತರ್ಕವಿದೆ. ಆದರೆ ಮಾನವನಿರುವನೆಂಬ ಬಗ್ಗೆ ಏನೂ ನಿಶ್ಚಿತ ಆಧಾರವಿಲ್ಲ. ಎಂದಮೇಲೆ ಈ ಪೃಥ್ವಿಯನ್ನು ಬಿಟ್ಟರೆ ಇನ್ನೆಲ್ಲಿಯೂ ಮಾನವನಿಲ್ಲವೆಂದೇ ಹೇಳಬಹುದು. ಆದರೆ ಈ ಕಲ್ಪನೆಯು ಸಂಪೂರ್ಣ ಸತ್ಯವೆಂದು ಹೇಳಲಾಗುವುದಿಲ್ಲ. ನಮಗೆ ಗೊತ್ತಾಗದಿರುವ ಕೆಲವು ಗ್ರಹಗಳ ಮೇಲೆ ಜನರಿರಬಹುದು. ಅವರು ನಮಗಿಂತ ಬುದ್ಧಿವಂತರಿದ್ದರೂ ಇರಬಹುದು. ಅವರು ನಮ್ಮನ್ನು ನೋಡಿ, ನಮ್ಮ ಕ್ಷುದ್ರ

([illegible]ನೆಯ ಪುಟದಿಂದ ಮುಂದುವರಿದುದು.)

ನಡುಗಿತು. ಶಾರದೆಯೊಡನೊ ಕೂಡಲೆ ಎಚ್ಚತ್ತವಳಂತೆ ಕಾಫಿ ಬಟ್ಟಲನ್ನು ತುಟಿಗೆ ಒಯ್ದಳು; ಕ್ಷಣಮಾತ್ರದಲ್ಲಿ ಕಾರ್ಯ ಕೊನೆಗಂಡಿತ್ತು. ಅರ್ಧ ಕುಡಿದ ಕಾಫಿಯ ಬಟ್ಟಲೂ, ಆಕೆಯ ಶರೀರವೂ ಅಲ್ಲಿಯೇ ಸ್ಥಿರವಾಗಿದ್ದುವು. ಕಂಗಳು ಮಾತ್ರ ವಿಜಯನೆಡೆಗೆ ತಿರುಗಿದ್ದುವು.

ಶಾರದೆಯ ನೆಟ್ಟ ದೃಷ್ಟಿಯನ್ನು ಕಂಡು ವಿಜಯನ ಮೈ ಜುಮ್ಮೆಂದಿತು. ಮೈಯೆಲ್ಲ ಬೆವರಿತು. ಮುಂದೋಡಿ ಆಕೆಯ ಕೈಹಿಡಿದು ನೋಡಿದ. ಎಲ್ಲವೂ ಬರ್ಫದಂತೆ ತಣ್ಣಗಾಗಿತ್ತು. ವಿಜಯ ಲಗುಬಗೆಯಿಂದ ಕಾಗದದ ಕಟ್ಟನ್ನೆಲ್ಲ ಪರೀಕ್ಷಿಸಿದ. ಕೊನೆಗೆ ಇದ್ದಿತು ಶಾರದೆಯ ಪತ್ರ— ರಾಯಲ್ ಸೊಸೈಟಿಯ ಸೆಕ್ರೆಟರಿಯ ಹೆಸರಿಗೆ; ಎಲ್ಲವನ್ನೂ ಓದಿದ, ಒಮ್ಮೆಲೇ ಅವಾಕ್ಕಾದ. ಕೆಳಗಡೆ ವಿಜಯನ ಅಂಕಿತದ ಮುದ್ರೆ.

‘ ಏನಿದು ? ’ ಶಾರದೆಯೆಡೆಗೆ ನೋಡಿದ. ತೆರೆದ ಕಣ್ಣು ತೆರೆದೇ ಇದ್ದುವು. ಎಲ್ಲೆಡೆಯಲ್ಲಿಯೂ ಒತ್ತರದಿಂದ ನಕ್ಕ ಸಪ್ಪಳ ಕೇಳಿತು, ಚಿತ್ರಪಟಗಳೆಲ್ಲ ಇವನೆಡೆಗೆ ದುರದುರನೆ ನೋಡಿದುವು ಪ್ರಯೋಗ ಶಾಲೆ ಕಣ್ಣ ಮುಂದೆ ಗಿರಿಗಿರಿ ತಿರುಗುತ್ತಿತ್ತು.

ವಿಜಯ ಪುನಃ ನಸುನಕ್ಕ. ಈಗಿನ ನಗೆಯಲ್ಲಿ ಆಳವಾದ ದುಃಖವಡಗಿತ್ತು. ಹೊರಕ್ಕೆ ಮುಗಿಲು ತಿಳಿಯಾಗುತ್ತಿತ್ತು. ಗಾಳಿಯ ಜೋರು ಎಷ್ಟೋ ಇಳಿದಿತ್ತು ಅಲ್ಲಿಯೆ ಇದ್ದ ದೀಪಕ್ಕೆ ವಿಜಯ ಕಾಗದದ ಒಂದೊಂದೇ ಹಾಳೆಯನ್ನು ಅರ್ಪಿಸಿದ. ಅಗ್ನಿನಾರಾಯಣನಿಗೆ ‘ ಇದು ಜಗತ್ತಿಗೆ ಬೇಕಾದ್ದು, ಇದು ಬೇಡವಾದದ್ದು ’ ಎಂಬ ತಾರತಮ್ಯ ಭಾವವಿರಲಿಲ್ಲ. ಕಡೆಗುಳಿದದ್ದು ಒಂದು ಹಿಡಿ ಬೂದಿ ಮಾತ್ರ. ವಿಜಯ ಕೃತಕೃತ್ಯನಾದ. ಅರ್ಧಾಂಗಿಯುಳಿಸಿದ ಉಳಿದರ್ಧ ಬಟ್ಟಲು ಕಾಫಿಯನ್ನು ತಾನು ತೆಗೆದುಕೊಂಡ. ಆಕಾಶದಲ್ಲೀಗ ತಿಳಿಯಾಗಿ ತಾರೆಗಳು ಮೂಡಿದ್ದುವು. ಚಂದಿರನ ಕಿರಣವೊಂದು ಕಿಟಕಿಯೊಳಗಿಂದ ತೂರಿಬಂದು, ದಂಪತಿಗಳ ಮುಖಗಳನ್ನು ಬೆಳಗಿಸಿತ್ತು

ಅಭಿಮಾನದ ಬಗ್ಗೆ ನಗುತ್ತ ಹಾಸ್ಯ ಮಾಡುತ್ತಿರಬಹುದು. ಮಾನವನೇ ಸರ್ವಶ್ರೇಷ್ಠನೆಂದು ಹೇಳಿಕೊಳ್ಳುತ್ತಿರುವಂಥ ನಾವು, ನಮ್ಮ-ನಮ್ಮೊಳಗೇ ಕಾದಾಡಿ ಒಬ್ಬರನ್ನೊಬ್ಬರು ಕೊಲ್ಲುತ್ತಿರುವುದನ್ನು ನೋಡಿ ನಮ್ಮನ್ನು ತಿರಸ್ಕರಿಸುತ್ತಿರಬಹುದು. ಇದೆಲ್ಲವೂ ಕಲ್ಪನಾ ವಿಲಾಸ. ಒಬ್ಬ ಕುರುಡನು ಅಮವಾಸ್ಯೆಯ ರಾತ್ರಿ ಕತ್ತಲೆಯ ಕೋಣೆಯಲ್ಲಿ, ಕಾಲ್ಪನಿಕ ಕರಿಯ ಬೆಕ್ಕನ್ನು ಹುಡುಕುವಂತೆ ಇದೆಲ್ಲ ವಿಚಾರವೆಂದು ಹೇಳಬಹುದು.

ಇಲ್ಲಿಯವರೆಗೆ ತಯಾರಿಸಲ್ಪಟ್ಟ ದೊಡ್ಡ ದುರ್ಬಿಣಿಯ ಕಾಜಿನ ವ್ಯಾಸವು ೧೦೦ ಇಂಚು ಇತ್ತು. ಆದರೆ ಕೆಲವೊಂದು ದಿನಗಳ ಹಿಂದೆ ೨೦೦ ಇಂಚು ವ್ಯಾಸದ ಅತಿ ದೊಡ್ಡ ದುರ್ಬಿಣಿಯನ್ನು ಅಮೇರಿಕೆಯಲ್ಲಿ ತಯಾರಿಸಿದ್ದಾರೆ. ಈ ಕಾಜನ್ನು ತಯಾರಿಸಲು ಪೂರ್ಣ ಎರಡು ವರ್ಷ ಕಾಲ ಸಂಶೋಧನೆಯು ನಡೆಯಿತು. ಈ ಅವಧಿಯಲ್ಲಿ ೩೦ ಇಂಚು ೬೦ ಇಂಚು ೧೨೦ ಇಂಚಿನ ಕಾಜನ್ನು ತಯಾರಿಸಿದ್ದಾಯಿತು. ೧೯೩೪ನೆಯ ಇಸ್ವಿಯಲ್ಲಿ ಇದನ್ನು ಸಿದ್ಧಿಸುವ ಕಾರ್ಯವನ್ನು ಕೈಕೊಂಡರು ಈ ಕಾಜಿನ ಮೂಲಪದಾರ್ಥವನ್ನು ಕರಗಿಸುವುದಕ್ಕೋಸ್ಕರ ೩೦ ಫೂಟು ವ್ಯಾಸದ ಒಂದು ದೊಡ್ಡ ಭಟ್ಟಿಯನ್ನು ಕಟ್ಟಿದರು. ಇದನ್ನು ಮೊದಲು ೧೦ ದಿವಸಗಳ ವರೆಗೆ ಬರೇ ಕಾಯಿಸಿ, ಅನಂತರ ಅದರಲ್ಲಿ ೪೦ ಟನ್ನು ಮೂಲಪದಾರ್ಥಗಳನ್ನು ಹಾಕಿ, ಭಟ್ಟಿಯ ಉಷ್ಣತಾಮಾನವನ್ನು ೨೪೦೦ ಡಿಗ್ರಿ ಫಾರ್ಹನ್ ಹಾಯಿಟನ ವರೆಗೆ ಏರಿಸಿ, ಮೂರು ವಾರದ ವರೆಗೆ ಇಡಬೇಕಾಯಿತು ಅನಂತರ ಆ ದ್ರವವನ್ನು ಎರಗಲು ೧೦ ದಿವಸಗಳು ಹಿಡಿದುವು. ಅದನ್ನು ಬಹು ಸಾವಕಾಶವಾಗಿ ತಣ್ಣಗಾಗಲು ೧೧ ತಿಂಗಳವರೆಗೆ ಬಿಟ್ಟಿದ್ದರು. ಇಷ್ಟು ಪ್ರಯಾಸಪಟ್ಟು ಮಾಡಿದ್ದು, ನಡುವೆ ಒಂದು ಪೊಳ್ಳುಭಾಗವು ಉಳಿದದ್ದರಿಂದ ವ್ಯರ್ಥವಾಗಿ, ಪುನಃ ಮತ್ತೊಂದನ್ನು ಸಿದ್ಧಿಸಬೇಕಾಯಿತು ಹೀಗಾಗಿ ೧೯೩೯ರಲ್ಲಿ ಈ ಕೆಲಸವು ಪೂರ್ಣಗೊಂಡಿತು ಒಟ್ಟು ಇದಕ್ಕೆ ೧೩ ಲಕ್ಷ ರೂಪಾಯಿ ಖರ್ಚಾಯಿತು. ಈ ಕಾಜನ್ನು ಠಿಕ್ಕ ಸಮಗೊಳಿಸುವುದಕ್ಕೋಸ್ಕರ ೧೪೭ ಫೂಟು ಉದ್ದ, ೧೦೦ ಟನ್ ತೂಕದ ಬೇರೆ ಯಂತ್ರವನ್ನು ನಿರ್ಮಿಸಿದ್ದರು ಒಟ್ಟಿನಲ್ಲಿ ಈ ದುರ್ಬಿಣಿಯು ೬೬ ಫೂಟು ಉದ್ದ ೨೦ ಫೂಟು ವ್ಯಾಸವಿದ್ದಿತು. ಇಷ್ಟು ಭಯಂಕರ ದೊಡ್ಡದಿದ್ದರೂ ಇದನ್ನು ಯಾವುದೇ ದಿಕ್ಕಿನಲ್ಲಿ ತಿರುಗಿಸುವ ಸೌಕರ್ಯವಿದೆ. ಈ ದುರ್ಬಿಣಿಯನ್ನು ೫,೬೦೦ ಫೂಟು ಎತ್ತರವಿದ್ದ ತಪ್ಪಲಿನ ಮೇಲೆ ಒಂದು ವೇಧಶಾಲೆಯಲ್ಲಿಟ್ಟಿದ್ದಾರೆ ಇದನ್ನಿಡಲು ಜಗುಲಿಯನ್ನು ತಯಾರಿಸಲು ೧೨ ವರ್ಷ ಹಿಡಿಯಿತು ಈ ದುರ್ಬಿಣಿಯಲ್ಲಿ ಚಂದ್ರನು ಕೇವಲ ೨೫ ಮೈಲು ದೂರದಲ್ಲಿದ್ದಂತೆ ತೋರುವನು ೧೦,೦೦೦ ಮೈಲು ದೂರದಲ್ಲಿ ಉರಿಯುತ್ತಿರುವ ಒಂದು ಸಣ್ಣ ಮೇಣಬತ್ತಿಯ ಪ್ರಕಾಶವನ್ನು ಇದರಿಂದ ನೋಡಬಹುದು. ೪,೦೦೦ ಮೈಲು ದೂರದಲ್ಲಿರುವ ಪಟ್ಟಣದ ಕಟ್ಟಡದಲ್ಲಿ, ನಳದ ಮೇಲೆ ನೀರು ತುಂಬುವ ನಾರಿಯರ ಗದ್ದಲವನ್ನು ಸ್ವಚ್ಛವಾಗಿ ಕಾಣಬಹುದು. ಎಂದೂ ಕಾಣಿಸದಿದ್ದ ಅತಿ ದೂರವಿರುವ ಸಾವಿರಾರು ಹೊಸ ಹೊಸ ನಕ್ಷತ್ರಗಳನ್ನು ಕಂಡಿರುವರು. ಜೋತಿಷ್ಯ ಶಾಸ್ತ್ರಜ್ಞರು ಕೇವಲ ಸೂರ್ಯ-ಚಂದ್ರ-ಪೃಥ್ವಿಗಳದಷ್ಟೇ ಅಲ್ಲದೆ ಸಂಪೂರ್ಣ ವಿಶ್ವದ್ದೇ ಭವಿಷ್ಯವನ್ನು ನಿಶ್ಚಯಿಸಿದ್ದಾರೆ. ಅವರ ಪ್ರಕಾರ ಚಂದ್ರನು ದಿವಸ-ದಿವಸಕ್ಕೂ ಪೃಥ್ವಿಯಿಂದ ದೂರ ಹೋಗುತ್ತಿರುವನೆಂದೂ, ಆದುದರಿಂದ ಪೃಥ್ವಿಯು ಪ್ರದಕ್ಷಿಣೆ ಹಾಕಲು ಹೆಚ್ಚು ಹೆಚ್ಚು ವೇಳೆ ಹಿಡಿಯುವುದೆಂದೂ ಹೇಳುವರು. ಇದರ ಪರಿಣಾಮವೇನಾಗುವುದೆಂದರೆ ಒಂದು ಹಗಲೆಂದರೆ ಒಂದು ತಿಂಗಳಿನಷ್ಟು ದೊಡ್ಡದಾಗುವುದು. ಒಂದು ದಿವಸವೆಂದರೆ ೫೫ ದಿವಸದಷ್ಟಾಗಬಹುದು. ಇಷ್ಟಾದ ಮೇಲೆ ಪುನಃ ಚಂದ್ರನು ಪೃಥ್ವಿಯ ಸಮೀಪಕ್ಕೆ ಬರಲು ಹತ್ತುವನು. ಹೀಗೆ ಅತಿ ಸಮೀಪವೆಂದರೆ ೧೩,೦೦೦ ಮೈಲು ದೂರದಲ್ಲಿ ಬರುವನು. ಪೃಥ್ವಿಯನ್ನು ಇಷ್ಟು ಸಮೀಪದಿಂದ ನೋಡುವಲ್ಲಿ ಚಂದ್ರನ ಅಂತರ್ಭಾಗದಲ್ಲಿ ಒಂದು ವಿಲಕ್ಷಣವಾದ ತಳಮಳಹತ್ತಿ, ಬಹು ಪ್ರಚಂಡವಾದ ಆಕಂಪವೇಳುವುದು ಮತ್ತು ಚಂದ್ರ ನೂರಾರು ಚೂರುಚೂರಾಗುವನು. ಇವೇ ಚೂರುಗಳು ಚಂದ್ರನ ಬದಲು ಸ್ವತಂತ್ರವಾಗಿ ಪೃಥ್ವಿಯ ಸುತ್ತಲೂ ತಿರುಗಹತ್ತುವುವು. ಇದರಿಂದ ಮಾತ್ರ ಚಂದ್ರನ ಪ್ರಕಾಶವು ಕಡಿಮೆಯಾಗದೆ ಇನ್ನೂ ಹೆಚ್ಚಾಗುವುದು. ಆದರೆ ಇದನ್ನು ಓದಿ ಯಾರೂ ಗಾಬರಿಯಾಗಲೂ ಬೇಕಿಲ್ಲ, ದುಃಖಿಸಲೂ ಬೇಕಿಲ್ಲ. ಯಾಕೆಂದರೆ ಇದೆಲ್ಲವೂ ಲಕ್ಷಾವಧಿ ವರ್ಷಗಳನಂತರ ಸಂಭವಿಸುವ ಮಾತು.

ಸೂರ್ಯನ ಮೇಲಿನ ಪದಾರ್ಥವು ನಾಶ ಹೊಂದಿದಂತೆ ಪೃಥ್ವಿಯು ಸೂರ್ಯನಿಂದ ದೂರ ಸರಿಯುವುದು. ಆದರೆ ಇದು ಸಾವಕಾಶ. ಎಂದರೆ ಸುಮಾರು ೧೦೦ ವರ್ಷದಲ್ಲಿ ಒಂದು ವಾರದಷ್ಟು ದೂರ ಸರಿಯುವುದು. ಜ್ಯೋತಿಷ ಶಾಸ್ತ್ರಜ್ಞರಿಗೆ ಉದ್ದಳತೆಯನ್ನು ಮಾಡುವ ಪ್ರತ್ಯೇಕ ಫೂಟುಪಟ್ಟಿಯಂತೆ ವೇಳೆಯನ್ನು ಅಳೆಯಲು ಬಹು ವಿಚಿತ್ರವಾದ ಗಡಿಯಾರವೂ ಇದೆ. ಈ ಮಾನದಂತೆ ದೂರ ಹೋಗುತ್ತಾ ೧೦೦೦ ಅಬ್ಜ ವರ್ಷಗಳನಂತರ, ಪೃಥ್ವಿಯಿಂದ ಸೂರ್ಯ ಈಗಿನ ೬% ದಷ್ಟು ದೂರ ಸರಿಯುವನು. ಆವಾಗ ಬೆಳಕು ಮತ್ತು ಉಷ್ಣತೆಯು ೨೦% ನಷ್ಟು ಕಡಿಮೆಯಾಗುವುದು. ಆಗ ಸಾಗರಗಳು ಹೆಪ್ಪುಗಟ್ಟುವುವು. ಮತ್ತು ಪರ್ವತಗಳು ಪುಡಿಪುಡಿಯಾಗಿ ಬಯಲಾಗುವುವು.

ಸರ್ವ ವಿಶ್ವದಲ್ಲಿಯ ಜಡಪದಾರ್ಥವೆಲ್ಲವೂ ಒಂದೇಸಮನೆ ನಾಶ ಹೊಂದುತ್ತಿರುವುದರಿಂದ, ಕೊನೆಗೆ ಎಲ್ಲವೂ ತೀರ ಶಕ್ತಿಯಲ್ಲಿ ರೂಪಾಂತರ ಹೊಂದುವುದು. ಅನಂತಸ್ವರೂಪ ಶಕ್ತಿಯಿಂದ ಈ ವಿಶ್ವವು ನಿರ್ಮಿಸಲ್ಪಟ್ಟಿದೆ. ಮೊದಲು ಅತಿ ವಿರಳವಾದ ಗಾಳಿಯು ಇಡೀ ವಿಶ್ವವೆನ್ನೆಲ್ಲಾ ವ್ಯಾಪಿಸಿತ್ತು; ಅನಂತರ ಈ ಗಾಳಿಯ ಗಂಟು ಅಥವಾ ನೆಬ್ಯುಲಿ ತಯಾರಾಯಿತು. ಇದರಿಂದ ನಕ್ಷತ್ರಗಳು ತಯಾರಾದುವು. ಕೊನೆಗೆ ಇದೆಲ್ಲವೂ ಅನಂತ ಶಕ್ತಿಯಲ್ಲಿ ಲಯ ಹೊಂದುವುದು.

ಚಂದ್ರ, ಮಂಗಳ, ಶುಕ್ರ ಮುಂತಾದ ಗ್ರಹಗಳ ಮೇಲೆ ನಮಗೆ ಹೋಗಲು ಸಾಧ್ಯವಿದೆಯೊ ಇಲ್ಲವೊ ಎಂಬುದನ್ನು ಈಗ ನಿಶ್ಚಿತವಾಗಿ ಹೇಳುವುದು ಕಠಿನವಿದೆ. ಆದರೆ ಈ ಬಗ್ಗೆ ಪ್ರಯತ್ನವು ಮಾತ್ರ ನಡೆದಿದೆ. ಬರ್ಲಿನ್ನಿನಲ್ಲಿ **ಪ್ರೊಫೆಸರ್ ನೆಬೆಲ್** ಎಂಬ ತಜ್ಞನ ನೇತೃತ್ವದಲ್ಲಿ, ಜಗತ್ತಿನ ಆಕಾಶಸಂಚಾರ ಸಂಸ್ಥೆಯು ಸ್ಥಾಪಿಸಲ್ಪಟ್ಟಿದೆ. ರಾಕೆಟ್ಟಿನ ಸಹಾಯದಿಂದ (ಇನ್ನೂ ೧೫ ವರ್ಷ ಸಂಶೋಧನ ಮಾಡಿದರೆ) ಈ ಪ್ರವಾಸವನ್ನು ನೆರವೇರಿಸಲು ಸಾಧ್ಯವೆಂದು ಅವನ ಆಶೆಯು. 'ರಾಕೆಟ್' ಎಂದರೆ ಏನೆಂಬುದನ್ನು ಸ್ವಲ್ಪದರಲ್ಲಿಯೆ ಹೇಳಬೇಕೆಂದರೆ: ಅತ್ಯಂತ ಉಜ್ವಲವಾದ ಸ್ಫೋಟಕ ಪದಾರ್ಥಗಳ ಉರಿಯ ಶಕ್ತಿಯನ್ನು

೫೨ ವರ್ಷಗಳಿಂದ ಅನುಭವ ಪಟ್ಟ

ಕೆರ್ಕಿ ಮತ್ತು ಕಂಪನಿ

ಇವರ

ಜ್ವರಗಡ್ಡೆಯ ಗುಳಿಗೆಗಳು

ಬಾಟ್ಲಿಗೆ ೧-೮-೦

ಎಂತಹ ಜ್ವರಗಡ್ಡೆಯನ್ನೂ ಕಳೆಯುವುದು

ವಿಳಾಸ:- ಗಣೇಶ ರಾಮಚಂದ್ರ ಕೆರ್ಕಿ ಮತ್ತು ಕಂಪನಿ

ಉಪಯೋಗಿಸಿ, ಆಕಾಶದಲ್ಲಿ ಅತಿವೇಗದಿಂದ ಬಹಳ ಎತ್ತರದ ವರೆಗೆ ಹಾರುವ ಸಾಹಸವೆಂದು ಹೇಳಬಹುದು. ಒಬ್ಬ ಅಮೇರಿಕನ್ನನು 'ಟ್ರಾಯರ್ ಮೀ ಫ್ಲೈಲ್ ಟ್ರಾಯರ್ ಸ್ಟೆಟ್ರೋ ಅಮಿನ್' ಎಂಬ ಹೆಸರಿನ ಒಂದು ಪದಾರ್ಥವನ್ನು ತಯಾರಿಸಿದ್ದಾನೆ. ಇದನ್ನು ಉಪಯೋಗಿಸಿದರೆ ಸೆಕಂಡಿಗೆ ಎರಡು ಮೈಲು ವೇಗದಿಂದ ಆಕಾಶದಲ್ಲಿ ಏರಬಹುದೆಂದು ಅವನ ವಿಶ್ವಾಸವಿದೆ. ಪ್ರೊಫೆಸರ್ ನೆಬೆಲ್ ಅವರ ಭಾವೀ-ಸ್ವಪ್ನಗಳು ಅತಿ ಮನೋರಂಜಕವಿವೆ. ರಾಕೆಟ್ಟಿನ ಸಹಾಯದಿಂದ ಬರ್ಲಿನ್ನಿನಿಂದ ಆಸ್ಟ್ರೇಲಿಯಾಕ್ಕೆ ಅರ್ಧ ತಾಸಿನಲ್ಲಿ ಹಾರಬಹುದೆಂದು ಅವರ ತರ್ಕವಿದೆ. ಸೆಕಂಡಿಗೆ ೭ ಮೈಲು ಲೆಕ್ಕದಂತೆ ತಿರುಗುತ್ತ ತಿರುಗುತ್ತ ೧೫೦ ಮೈಲು ಅದು ಎತ್ತರ ಹಾರಿ, ಪುನಃ ಆಸ್ಟ್ರೇಲಿಯಾದಲ್ಲಿ ಕೆಳಗೆ ಇಳಿಯಬಹುದೆಂದು ಅವರ ಅಭಿಪ್ರಾಯ.

ರಾಕೆಟ್ಟಿನಲ್ಲಿ ಕುಳಿತು ಗ್ರಹಗಳನ್ನು ಕುರಿತು ಸಂಚಾರ ಮಾಡುವ ಬಗ್ಗೆ ಈ ಕೆಲವೊಂದು ಸಂಗತಿಗಳನ್ನು ನೆನಪಿನಲ್ಲಿಡತಕ್ಕದ್ದು. ನಾವು ಹೇಗೆ ಹೇಗೆ ಆಕಾಶದಲ್ಲಿ ಮೇಲೆ ಏರುವೆವೋ ಹಾಗೆ, ಹವೆಯ ಪ್ರತಿ-ಸ್ಪರ್ಧಿತನವು ಹೆಚ್ಚುವುದು. ಆದರೆ ಇಂತಿಷ್ಟು ದೂರ ಹೋದ ಮೇಲೆ ಪೃಥ್ವಿಯ ಗುರುತ್ವಾಕರ್ಷಣೆಯು ಬಹಳೇ ಕಡಿಮೆಯಾಗಿ ಅನಂತರ ಪ್ರವಾಸವು ಸುಲಭವೆನಿಸುವುದು. ರಾಕೆಟ್ಟು ಸುಮಾರು ೬೦ ಮೈಲು ಎತ್ತರ ಹೋದ ಮೇಲೆ, ಅದನ್ನು ಒಂದುವೇಳೆ ಬಿಡಿದರೆ, ಅದು ಕೆಳಗೆ ಬಾರದೆ ಅಲ್ಲಿಯೇ ನಿಲ್ಲುವುದು. ಯಾಕೆಂದರೆ ಅಷ್ಟು ಎತ್ತರದ ಮೇಲೆ ಒಂದೆಡೆಯ ಆಕರ್ಷಣೆ ಅಷ್ಟೇ ಇರಲಾರದು. ಇಷ್ಟು ಎತ್ತರ ಹಾರುವ ರಾಕೆಟ್ಟನ್ನು ತಯಾರಿಸಿದರೆ, ಈ ಸಾಹಸವು ಕೈಗೂಡಿದಂತಾಗುವುದು. ಅಲ್ಲಿ ಹವೆ ಏನೂ ಇರಲಿಕ್ಕಿಲ್ಲ. ಆದಕ್ಕಾಗಿ ಅಲ್ಲಿ ಕೃತ್ರಿಮಹವೆಯ ಸಂಚಯವನ್ನು ಮಾಡಬೇಕಾಗುವುದು. ಅಷ್ಟು ಎತ್ತರದ ಮೇಲೆ ಯಾವುದೇ ವಸ್ತುವಿನ ತೂಕವು ಬಹಳಾಗದ್ದರಿಂದ, ಆ ಪ್ರದೇಶದಲ್ಲಿ ಒಂದು ನಿಲ್ದಾಣವನ್ನು ಕಟ್ಟಲು ಸಾಧ್ಯವಿದೆ. ಇಂತಹ ಎಷ್ಟೋ ನಿಲ್ದಾಣಗಳನ್ನು ಆಕಾಶದಲ್ಲಿ ದೂರ-ದೂರದ ಅಂತರದ ಮೇಲೆ ಕಟ್ಟಲು ಸಾಧ್ಯವಿದೆ. ಇವು ಅಂತರದಲ್ಲಿಯೇ ಇದ್ದು ಪೃಥ್ವಿಯ ಸುತ್ತಲೂ ಅಥವಾ ಸಮೀಪದಲ್ಲಿರುವ ಗ್ರಹದ ಸುತ್ತಲೋ ಪ್ರದಕ್ಷಿಣೆ ಹಾಕುವುವು. ಈ ಪ್ರಕಾರ ಒಂದೊಂದನ್ನಾಗಿ ದಾಟಿ ಬೇರೆ ಬೇರೆ ಗ್ರಹಗಳನ್ನು ಮುಟ್ಟಲು ಶಕ್ಯವಿದೆ. ಬೇರೆ ಬೇರೆ ನಿಲ್ದಾಣಗಳಲ್ಲಿ ಇಲ್ಲಿಂದ ಚಂದ್ರನಿಗೆ ಇಲ್ಲಿಂದ ಶುಕ್ರನಿಗೆ ಹೋಗಲು, ಗಾಡಿ ಬದಲಾಯಿಸಲು ಸೂಚಕ ಹಲಗೆಗಳನ್ನು ತಗುಲಿಸಬಹುದು. ಮತ್ತು ಇವುಗಳಲ್ಲಿ ದೊಡ್ಡ ದೊಡ್ಡ ಕನ್ನಡಿಗಳನ್ನು ತಗುಲಿಸಿ ಸೂರ್ಯನ ಕಿರಣಗಳು ಅವುಗಳ ಮೇಲೆ ಬಿದ್ದು ನಮಗೆ ಬೇಕಾಗುವಷ್ಟು ಬೆಳಕನ್ನು ರಾತ್ರಿಯ ಸಮಯದಲ್ಲಿ ಕೊಡಬಹುದು. ಅದರಂತೆ ಧ್ರುವಗಳ ಸಮೀಪದಲ್ಲಿಯ ಬರ್ಫನ್ನು ಕರಗಿಸಿ ಅಲ್ಲಿಯೂ ವಾಸಿಸಲು ಸೌಕರ್ಯ ಒದಗಿಸಬಹುದು. ಈ ತರದ ನಿಲ್ದಾಣದಲ್ಲಿ ದುರ್ಬಿಣಿಗಳನ್ನಿರಿಸಿ ಬಹು ರಮ್ಯವಾದ ಪೃಥ್ವಿಯ ಮೇಲಿನ ಸೌಂದರ್ಯವನ್ನು ನೋಡಬಹುದು. ೧೦ ವರ್ಷ ಪೃಥ್ವಿಯ ಮೇಲೆ ಒಂದೇ ಸವನೆ ಮಳೆಯಾಗುವುದೆಂದು ಕೇಳಿ, ಪ್ರಾಚೀನ ಕಾಲದಲ್ಲಿ ದಶರಥರಾಜನು ಶನಿಗ್ರಹಕ್ಕೆ ಹೋಗಿ ಅಲ್ಲಿಯೇ ಅನೇಕ ಯುದ್ಧ-ಗಳನ್ನು ಮಾಡಿದನೆಂದು ಪುರಾಣದಲ್ಲಿದೆ. ಇದು ಅಸಂಭವವೆಂದು ಹೇಳಲಾಗುವುದಿಲ್ಲ. ಸಾವಿರಾರು ವರ್ಷಗಳ ನಂತರ ಪುನಃ ಇಂತಹ ಪ್ರಕಾರವು ನಡೆಯಬಹುದು.

ಪಾಶ್ಚಿಮಾತ್ಯರ ಸಾಹಸವನ್ನೂ ಮಹತ್ವಾಕಾಂಕ್ಷೆಯನ್ನೂ ನೋಡಿ ನಮ್ಮ ಭರತಖಂಡದ ಸದ್ಯದ ಪರಿಸ್ಥಿತಿಯನ್ನು ನೆನೆದರೆ ಬಹು ವಿಷಾದವೆನಿಸುವುದು. ಪೂರ್ವದಲ್ಲಿ ನಮ್ಮ ಹಿಂದೂ ಜ್ಯೋತಿಷಶಾಸ್ತ್ರಜ್ಞರು ಈ ಶಾಸ್ತ್ರದಲ್ಲಿ ಬಹು ಪ್ರಗತಿಯನ್ನು ಪಡೆದಿದ್ದರು. ಆದರೆ ಈಗಿನವರು ಮಾತ್ರ ಕೇವಲ ವಾರ್ಷಿಕ ಭವಿಷ್ಯ, ವಾರದ ಭವಿಷ್ಯ, ಹೆಚ್ಚೆಂದರೆ ದಿವಸ-ದಿವಸದ ಭವಿಷ್ಯ ಎಂಬ ಕ್ಷುಲ್ಲಕ ಜ್ಞಾನದಲ್ಲಿಯೇ ಆಸಕ್ತರಾಗಿದ್ದಾರೆ. ಸಾಮಾನ್ಯ ಜನರದಂತೂ ಹೇಳಲೇ ಬೇಕಿಲ್ಲ. ಅವರೂ ಇದರಲ್ಲೇ ಅಭಿರುಚಿ ಹೊಂದುತ್ತಾರೆ. ಈಗಿನ ತರುಣ-ತರುಣಿಯರಿಗೆ ಉತ್ಕೃಷ್ಟವಾದ ಈ ಶಾಸ್ತ್ರದ ಐತಿಹಾಸಿಕ ಪುಸ್ತಕವನ್ನು ಓದಲು ಕೊಟ್ಟರೆ, ಆ ಬಗ್ಗೆ ಅವರು ಮೂಗು ಮುರಿಯುವರು; ಒಂದು ವೇಳೆ ಕುಚೇಷ್ಟೆಯನ್ನು ಮಾಡುವರು. ಆದರ ಬದಲು ಒಂದು ಕಾದಂಬರಿ ಅಥವಾ ಒಂದು ಸಿನೆಮಾ ಎಂದರೆ ಅವರ ಮುಖದ ಕಳೆಯೇ ಬದಲಾಗುವುದು. ನನ್ನ ಪರಿಚಯದ ಒಬ್ಬ ಆಂಗ್ಲೋ ಇಂಡಿಯನ್ ಪೆನ್ಶನರನು ಒಂದು ಉತ್ತಮವಾದ ದುರ್ಬಿಣಿಯನ್ನು ಕೊಂಡು, ರಾತ್ರಿಯ ಸಮಯದಲ್ಲಿ ಅತ್ಯಂತ ಉತ್ಸಾಹದಿಂದ ನಕ್ಷತ್ರಗಳ ಪರಿಚಯವನ್ನು ಪಡೆಯುತ್ತಿರುತ್ತಾನೆ. ಆದರೆ ನಮ್ಮ-ಲ್ಲಿಯ ಅನೇಕ ಪೆನಶನ್‌ದಾರರಿಗೂ ಹಾಗೂ ಶ್ರೀಮಂತರಿಗೂ ಹೇಗೆ ಸುವಿಲಾಸ ಮಾಡಬೇಕೆಂಬುದು ತಿಳಿಯುವುದಿಲ್ಲ. ನಮ್ಮ ಮನೆಯ ಮುಂದೆ ಒಬ್ಬ ಆಗರ್ಭ ಶ್ರೀಮಂತನಿದ್ದಾನೆ. ಆತನು ಸ್ವತಃ ಯಾವ ಉದ್ಯೋಗವನ್ನೂ ಮಾಡದೆ ಪಿತ್ರಾರ್ಜಿತ ಆಸ್ತಿಯ ಮೇಲೆ ತೇಲಾಡುತ್ತಿದ್ದಾನೆ. ಅವನ ದಿನಚರ್ಯವೆಂದರೆ ಅರ್ಧ ತಾಸು ಪಿಯಾನು ಎರಡು ತಾಸು ನಿದ್ರೆ, ಒಂದು ಘಂಟೆ ಟೈಮ್ಸ್ ಪತ್ರ ಓದುವುದು, ಎರಡು ತಾಸು ಮೋಟಾರಿನಲ್ಲಿ ಕುಳಿತು ವ್ಯಾಯಾಮ ಮಾಡುವುದು, ಇನ್ನುಳಿದ ವೇಳೆಯಲ್ಲಿ ಊಟ ತಿನಿಸು; ಹೆಚ್ಚೆಂದರೆ ಸಿನೆಮಾ.... ಇವುಗಳಲ್ಲಿಯೇ ಕಾಲಕ್ಷೇಪ. ಈ ಎಲ್ಲ ಪರಿಸ್ಥಿತಿಯನ್ನು ನೆನೆದರೆ ನನ್ನ ಮನಸ್ಸನ್ನು ಒಂದೇ ಒಂದು ವಿಚಾರ ಮಿಡಿಯುತ್ತದೆ: "ನಮ್ಮ ಹಿಂದುಸ್ತಾನವು ಎಂದು ಜಾಗೃತಗೊಳ್ಳುವುದು?"

———

ಸನ್ಮಾನ್ಯ ಸೂಲಗಿತ್ತಿ

ಶ್ರೀಮತಿ ಕಾಂತಯಾಬಾಯಿ ಹೊಸಬೆಟ್ಟು

(ವ್ಯಕ್ತಿ ಪರಿಚಯ) • ಶ್ರೀ. **ಹೊ. ಸೋಮನಾಥ,** ಮುಂಬಯಿ

ಬಾಣಂತಿಯರ ಮರಣಕ್ಕೆ ಭಾರತವು ಪ್ರಸಿದ್ಧಿ ಪಡೆದಷ್ಟು ಬೇರಾವ ರಾಷ್ಟ್ರವೂ ಪಡೆದಿಲ್ಲ. ಬಹುಶಃ ಪಡೆಯಲಿಕ್ಕೂ ಇಲ್ಲ. ಅರಿತು ನುರಿತ— ಬಿರುದಾಂಕಿತ (qualified)– ಸೂಲಗಿತ್ತಿಯರ ಅಭಾವವೇ ಇದಕ್ಕೆ ಕಾರಣವೆನ್ನಲಡ್ಡಿ ಇಲ್ಲ. ಈ ಅಭಾವವು ಭಾರತದ ಎಲ್ಲೆಡೆಯಲ್ಲಿಯೂ ಕಾಣಬರುವುದು. ನವನಾಗರಿಕತೆಯ ತುಟ್ಟತುದಿಯವರೆಗೆ ಬಂದಿರುವೆವು ಎಂದು ಹೊಗಳಿಕೊಳ್ಳುವ ಇಂತಹ ಕಾಲದಲ್ಲೂ ಅಸಂಖ್ಯಾತ ಜನ ಬಾಣಂತಿಯರ ಮರಣದ ವಾರ್ತೆಗಳನ್ನು ಕೇಳುವುದು ಎಷ್ಟು ವ್ಯಸನಾಸ್ಪದ? ಎಷ್ಟು ನಾಚಿಕೆಗೇಡು? ಯಾರು ಈ ದುರವಸ್ಥೆಯನ್ನು ಇಲ್ಲದಂತೆ ಮಾಡಲು ಹೊಣೆಗಾರರೋ ಅವರು ಕಣ್ಣಿಗೆ ಎಣ್ಣೆ ಹಾಕಿಕೊಂಡು ಜನರ ತಮಾಷೆ ನೋಡುತ್ತಿರುವರು.

ಯಾವುದಿಲ್ಲವೆಂದರೂ ಬೇರೊಂದು ರೀತಿಯ ವೈಶಿಷ್ಟ್ಯ ಭಾರತಕ್ಕೆ ಇದ್ದೇ ಇದೆ. ಅದರಲ್ಲಿಯೂ ನಮ್ಮ ಕನ್ನಡ ನಾಡು ಪ್ರತಿಯೊಂದು ವಿಷಯದಲ್ಲೂ ಇತರ ಪ್ರಾಂತಗಳಿಗೆ ಮೇಲ್ಪಂಕ್ತಿಯಲ್ಲಿದೆ. ಹಾಗೆಯೆ ಸೂಲಗಿತ್ತಿಯ ಸಂದರ್ಭದಲ್ಲೂ. ಸೂಲಗಿತ್ತಿತನ ಕಲಿಯಲು ಇಲ್ಲಿ ಸಾಕಷ್ಟು ಉತ್ತೇಜನವಿಲ್ಲ, ಎಡೆಯಿಲ್ಲ ಅನುಕೂಲತೆ ಮೊದಲೇ ಇಲ್ಲ. ಹುಟ್ಟುಸೂಲಗಿತ್ತಿಯರೆ ಹೆಚ್ಚುತ್ತ ಹೋಗಬೇಕಾಗಿದೆ. ಇಂತಹ ಹುಟ್ಟುತನಗಳೇ ಕರ್ನಾಟಕದಲ್ಲಿ ಕಾಣಸಿಕ್ಕುವುವು. ಇಂತಹ ಹುಟ್ಟುಸೂಲಗಿತ್ತಿಯರಲ್ಲಿ ನಾನು ಕೇಳಿದುದು ಕಂಡುದು ಮೊನ್ನೆ ತಾನೆ, **ಹೊಸಬೆಟ್ಟು ಮೊಗವೀರ ಸಭಾ, ಮುಂಬಯಿ** ಅವರಿಂದ 'ಸನ್ಮಾನ್ಯ ಸೂಲಗಿತ್ತಿ' (Honarary Midwife) ಎಂಬ ಬಿರುದು ಪಡೆದ ಶ್ರೀಮತಿ **ಕಾಂತಯಾಬಾಯಿ ಹೊಸಬೆಟ್ಟು** ಅವರನ್ನು.

'ಮುಂಬಯಿಯನ್ನೊಮ್ಮೆ ನೋಡಿಹೋಗುವಾ' ಎಂದು ಬಂದಿರುವ ಶ್ರೀಮತಿಯವರನ್ನು ಸತ್ಕರಿಸಲು ಮೊನ್ನೆ ಮೊನ್ನೆ ಸಭೆ ಸೇರಿದ್ದಿತು. "ಏನಾದರೂ ಎರಡು ಮಾತು ಆಡಿಬಿಡಿ" ಎಂದು ಅಧ್ಯಕ್ಷರೂ ಕಾರ್ಯದರ್ಶಿಗಳೂ ಒತ್ತಾಯಪಡಿಸುತ್ತಿದ್ದರು. "ಇಲ್ಲ, ನನ್ನಿಂದಾಗುವುದಿಲ್ಲ" ಎಂದು ಅವರ ಉತ್ತರ. ಹೌದು. ಕೈಚಳಕ ತೋರಿಸುವವರಿಗೆ ಮಾತಾಡಲು ಹೇಗೆ ಬರಬೇಕು? ಹುಟ್ಟಿ ಬೆಳೆದು, ೫೦ ವರ್ಷದ ಪ್ರಾಯವಾದರೂ ಆಟಕೂಟಗಳ ಗಂಧಗಾಳಿಯನ್ನರಿಯದವರಿಗೆ— ಅದು ಕೂಡ ಹದಿನಾರಾಣೆ ಹಳ್ಳಿಯ ಹೆಂಗುಸರಿಗೆ— ಸಭೆಯಲ್ಲಿ ನಿಂತು ಮಾತನಾಡಲು ಧೈರ್ಯವೆಲ್ಲಿಂದ ಬರಬೇಕು?

* * * *

ಮಂಗಳೂರಿನಿಂದ ಒಂಭತ್ತು ಮೈಲು ಉತ್ತರಕ್ಕಿರುವುದು **ಹೊಸಬೆಟ್ಟು**; ಅಲ್ಲಿ ತಾಯಿ **ಅಂಗರೆಕ್ಕನ** ಆರೈಕೆಯಲ್ಲಿ ಕಾಂತಯಕ್ಕ ತನ್ನ ಬಾಲ್ಯದ ದಿನಗಳನ್ನು ಕಳೆದರು. ಆಸ್ತಿ-ಪಾಸ್ತಿ ಎಂದರೇನೆಂಬುದು ತಾಯಿ ಮಕ್ಕಳಿಬ್ಬರಿಗೂ ಗೊತ್ತಿಲ್ಲ. ಆದುದರಿಂದ 'ಅದರ ಮೇಲ್ವಿಚಾರಣೆ ನೋಡಬೇಕಲ್ಲಾ' ಎಂಬ ಚಿಂತೆಯಿಲ್ಲ. ಸಮುದ್ರರಾಜನು ಕೊಟ್ಟರೆ ಏನಾದರೂ ಉಂಟು, ಇಲ್ಲದಿದ್ದರೆ ಇಲ್ಲ. ತಾಯಿ ಸೂಲಗಿತ್ತಿ ಆಗಿದ್ದರು; ಎಂದರೆ ಶಾಲೆಗೆ ಹೋಗಿ ಕಲಿತು, ಬಿರುದು ಪಡೆದುಕೊಂಡು ಅಲ್ಲ. ಅದೇ ಹುಟ್ಟು ಸೂಲಗಿತ್ತಿ! ಕಾಂತಯಕ್ಕ ಪ್ರಾಯಕ್ಕೆ ಬರುತ್ತಲೂ, ತಾಯಿ ಹೆರಿಗೆ ಮಾಡಿಸಲು ಹೋಗಿರುವಲ್ಲಿ ತಾನೂ ಹೋಗಿ ನೆರವಾಗುತ್ತಿದ್ದರು. ನಾಲ್ಕಾರು ಕಡೆಗಳಲ್ಲಿ ಗರ್ಭಿಣಿಯರನ್ನು ಹೆರಿಗೆ ಮಾಡಿಸುವುದನ್ನು ಕಂಡುದರಿಂದ, ಸೂಲಗಿತ್ತಿತನದ ಕೈಚಳಕ "ಡಿಪ್ಲೊಮಾ" ಪಡೆದುದಕ್ಕಿಂತಲೂ ಹೆಚ್ಚು ತಿಳಿಯಿತು. ಈ ಅನುಭವವು ಅವರನ್ನು ಆ ಕೆಲಸಕ್ಕೆ ಕೈ ಹಾಕುವಂತೆ ಪ್ರೇರೇಪಿಸಿತು. ಆದರೂ ತಾನೊಬ್ಬಳೇ ಅಷ್ಟು ದೊಡ್ಡ ಹೊಣೆ ಹೊರಲು ಮೊದಮೊದಲು ಭಯ ಪಡುತ್ತಿದ್ದರು. ಸಮಯವು ಯಾರನ್ನೂ ಕಾಯುವುದಿಲ್ಲ. ಅಂತೆಯೆ ತಾಯಿಯು ಇಲ್ಲದಿರುವಾಗ ತಾನೇ ಆ ಭಾರವನ್ನು ಹೊರಲು ಪ್ರಾರಂಭ ಮಾಡಿದರು. ತಾನು ಮಾಡಿದ ಕೆಲಸವನ್ನು ಚಾಚೂ ತಪ್ಪದೆ, ತಾಯಿ ಮನೆಗೆ ಬಂದಾಗ—ವಿವರಿಸುತ್ತಿದ್ದರು. ಮಗಳ ನೈಪುಣ್ಯವನ್ನು ಕಂಡು ಅವರಿಗೆ ಸಂತೋಷವಾಗುತ್ತಿತ್ತು. ಮಗಳು ಅನುಭವಸ್ಥಳಾಗುತ್ತಿದ್ದುದನ್ನೂ ತನಗೆ ವಯಸ್ಸು ತುಂಬ ಹೆಚ್ಚುತ್ತಿರುವುದನ್ನೂ ಕಂಡು ತಾಯಿ, ಮೆಲ್ಲಗೆ ಸೂಲಗಿತ್ತಿಯ ಕೆಲಸದಿಂದ ಜಾರಲು ಮೊದಲು ಮಾಡಿದರು. ಕಾಂತಯಕ್ಕನಿಗೆ ಆಗ ಸುಮಾರು ೨೦-೨೨ ವರ್ಷ ಪ್ರಾಯವಿರಬಹುದು.

ಸುರತ್ಕಲ್ಲಿಗೆ ಕೊಟ್ಟು ಮದುವೆಯಾದರೂ ಕಾಂತಯಕ್ಕ ತಮ್ಮ ಪತಿಯೊಂದಿಗೆ ಹೊಸಬೆಟ್ಟಿನಲ್ಲಿ ಜೀವನ ಸಾಗಿಸುವಂತಾಯಿತು. "ನಮ್ಮನ್ನು ಬಿಟ್ಟು ಎಲ್ಲಿಗೆ ಮತ್ತೆ ಹೋಗುತ್ತೇನೆಂದು ಭಾವಿಸಿದಿರಿ? ನಾವು ಕರೆದರೂ ಬ್ರಹ್ಮ ಬರಲೊಪ್ಪುತ್ತಿದ್ದಿಲ್ಲ." ಎಂದು ಹೊಸಬೆಟ್ಟಿನವರು ಈಗಾಗಲೆ ಅವರ ಕಾರ್ಯದ ಸೂಕ್ಷ್ಮತೆ, ಚತುರತೆ, ತತ್ಪರತೆಗಳನ್ನರಿತು ಪರಿಹಾಸ್ಯ ಮಾಡಿದರು. ತನ್ನನ್ನು ಬ್ರಹ್ಮನೆಂದು (ಹೆಂಗುಸಾಗಿದ್ದರು ಕೂಡ) ಮೇಲೇರಿಸಿದರಲ್ಲಾ ಎಂದು ಅವರು ಉಬ್ಬಿ ಉಕ್ಕಲಿಲ್ಲ. ಅದು ತನ್ನ ಕರ್ತವ್ಯ; ತಾಯಿ ತನಗಾಗಿ ಬಿಟ್ಟು

ಹೋದ ಆಸ್ತಿ. ಅವನ್ನು ಸರಿಯಾಗಿ ಉಪಯೋಗಿಸಿಕೊಳ್ಳದಿದ್ದರೆ ಯಾರಿಗೂ ಪ್ರಯೋಜನವಾಗಲಿಕ್ಕಿಲ್ಲ, ತಾನು ಮನುಷ್ಯ ವರ್ಗದಲ್ಲಿ ಹುಟ್ಟಿದ್ದಕ್ಕೆ ಸಾರ್ಥಕವಲ್ಲ— ಎಂದವರ ಭಾವನೆ. ಗರ್ಭಿಣಿಯರ ಮನೆಯಿಂದ ಕರೆ ಬರಲು ಎಂದೋ ಪ್ರಾರಂಭವಾಗಿತ್ತು. ದಿನ ಹೋದಂತೆಲ್ಲಾ ಕರೆ ಹೆಚ್ಚಾಯಿತು. ಬಂದ ಕರೆಯೆಲ್ಲವಕ್ಕೂ 'ಓ' ಕೊಡುವಷ್ಟು ಬಿಡುವಾಗದ ಸಂದರ್ಭವೂ ಒದಗಿತ್ತವರಿಗೆ. ರಾತ್ರಿಯೆಂದಿಲ್ಲ, ಹಗಲೆಂದಿಲ್ಲ. ಎರಡು ಗಂಟೆ ರಾತ್ರಿಯಾದರೂ 'ಬರಲಿಕ್ಕಾಗುವುದಿಲ್ಲ' ಎಂದು ಯಾರನ್ನೂ ಈವರೆಗೆ ನಿರಾಶೆಗೊಳಿಸಿಲ್ಲ. ಮನೆಯ 'ಕರ್ತೆದಿ (ಯಜಮಾನ್ತಿ)' ಯಾದವಳಿಗೆ ಅಷ್ಟಮಿ-ಚೌತಿ ಮುಂತಾದ ಹಬ್ಬಗಳಿರುವುವು. ಅಂದು ಮನೆಯಲ್ಲಿ ಇದ್ದು ಸಂಸಾರಕ್ಕೆಲ್ಲ ಬಡಿಸಿ ಉಡಿಸುವುದೊಂದು ಭಾಗ್ಯ. ಆದರೆ ಕಾಂತಯಕ್ಕ ಅಂತಹ ಎಷ್ಟೋ ಸಂತೋಷದ ದಿನಗಳನ್ನು 'ಅಮೆ (ಸೂತಕ)'ಯ ಮನೆಯಲ್ಲಿ ಕಳೆದಿದ್ದರು. ಕೆಲವು ವೇಳೆ ವಿಾಸು ಮಾಡುವುದನ್ನು ಬೇರೆಯವರ ವಶಕ್ಕೆ ಕೊಟ್ಟು, ಬಂದು ಹೆರಿಗೆಯ ಕೆಲಸ ಮಾಡಿದ್ದೂ ಉಂಟು. ಹೀಗಾಗಿ ಹೊತ್ತು ಹೆತ್ತ ಹೆಂಗುಸರೆಲ್ಲ ಶ್ರೀಮತಿಯವರನ್ನು ತಮ್ಮ ಮತ್ತು ತಮ್ಮ ಮಕ್ಕಳ ತಾಯಿಯೆಂದೇ ಭಾವಿಸಿದರು ಇಷ್ಟೇ ಕಾಂತಯಕ್ಕನನ್ನು ಸಂತೋಷಸಾಗರದಲ್ಲಿ ಮುಳುಗಿಸಿತು. ಪೈಯೊಂದರ ಸಂಪಾದನೆ ಇಲ್ಲದಿದ್ದರೂ, ಕಾಂತಯಕ್ಕ ತನ್ನ ಕೆಲಸದಲ್ಲಿ ಅಸಡ್ಡೆ-ಅಸೂಯೆಗಳನ್ನು ತೋರಿಸಿಲ್ಲ. ತಾನು ಹೆರಿಗೆ ಮಾಡಿಸಿದ ಮಗು ಮತ್ತು ತಾಯಿಯರ ಸೌಖ್ಯವೇ ತನಗೆ ಪ್ರತಿಫಲ; ಅದಕ್ಕಿಂತ ಮೇಲೆ ತನಗೇನು ಬೇಕಾಗಿದೆ?— ಎಂದು ಅವರ ಅಭಿಮತ. ಹೆಚ್ಚಿನ ಆಶೆಗೆ ಅವರ ಮನಸ್ಸು ತಿರುಗಲಿಲ್ಲ. ಹಣದ ಕಡೆಗೆ ಕಣ್ಣೆತ್ತಿಯೂ ನೋಡಲಿಲ್ಲ. ಬಹಳವೆಂದರೆ ಮಗುವಿಗೆ ಹೆಸರಿಡುವಂದು ಒಂದೂಟ; ಅದೂ ಕೂಡ ನೆರೆಕರೆಯ ಮನೆಯಲ್ಲಾದರೆ.

ಕಾಂತಯಕ್ಕನ ಕಾರ್ಯದ ಎಲ್ಲೆ ಬರೀ ಸ್ವಗ್ರಾಮವಾದ ಹೊಸಬೆಟ್ಟಿನಲ್ಲಿ ಅಥವಾ ಸ್ವಜಾತೀಯರಾದ ಮೊಗವೀರರಲ್ಲೇ ಇರಲಿಲ್ಲ. ಪಡುಬದಿಯಲ್ಲಿ ಸಮುದ್ರವನ್ನು ಬಿಟ್ಟು ಅಕ್ಕ ಪಕ್ಕದ ಹಲವು ಗ್ರಾಮಗಳಲ್ಲಿ ವಿಸ್ತರಿಸಿಕೊಂಡಿದೆ. ಹಿಂದುಗಳಲ್ಲಿ ಮೊದಲಿಂದ ಕೊನೆಯ ವರ್ಗದ ವರೆಗೂ ಇವರು ಹೋಗುವರು. ಮಾಪಿಳ್ಳೆ, ಕ್ರೈಸ್ತ ಮುಂತಾದ ಎಲ್ಲ ಜಾತಿಯವರಿಗೂ ತನ್ನ ಸೇವೆ ಸಲಿಸಿದ್ದಾರೆ. ಇವರ ಪ್ರಭಾವವನ್ನು ಅಳೆಯಲು ಸಾಧ್ಯವಿಲ್ಲ. ಏಕೆಂದರೆ ಇವರು ಹೆರಿಗೆಯ ಕೆಲಸಕ್ಕೆ ಕೈಹಾಕಿದಂದಿನಿಂದ ಮೊದಲು ಮಾಡಿ ಈ ದಿನದ ವರೆಗೆ, ಒಬ್ಬಳೇ ಒಬ್ಬಳು ತಾಯಿಯ ಪ್ರಾಣಕ್ಕೆ ಅಪಾಯ ಬರಲಿಲ್ಲ. ಹೀಗಿದೆ ಇವರ ಕಾರ್ಯದಕ್ಷತೆ. ಸೂಲಗಿತ್ತಿತನ ಕಲಿತು ನುರಿತ ಸೂಲಗಿತ್ತಿಯರು, ಗರ್ಭಿಣಿಯ ಪ್ರಾಣಾಪಾಯದ ಭಯದಿಂದ ಬಿಟ್ಟು ಹೋದ ಸುಮಾರು ಆರು ಜನ ಗರ್ಭಿಣಿಯರ ಹೆರಿಗೆಯನ್ನು ಏನೊಂದೂ ಅಪಾಯವಿಲ್ಲದೆ ಇವರು ಮಾಡಿಸಿದ್ದಾರೆ. ಈ ತರದ ನೈಪುಣ್ಯವನ್ನು ಹೊಂದಿರುವಾಗ, ಇವರನ್ನು ಹೆತ್ತತಾಯಿಗಿಂತಲೂ ಮಿಕ್ಕಿ ಎಣಿಸುವುದರಲ್ಲಿ ಆಶ್ಚರ್ಯವಿಲ್ಲ. ಆಸ್ಪತ್ರೆಯಲ್ಲಾದರೆ 'ಒಪರೇಶನ್' ವಿನಾ ಸಾಧ್ಯವಿಲ್ಲದ— ಗರ್ಭದಲ್ಲೇ ಸತ್ತ— ಮಗುವನ್ನು, ತಾಯಿಯ ಪ್ರಾಣಕ್ಕಾಗಲಿ ದೇಹಕ್ಕಾಗಲಿ ಏನೂ ಧಕ್ಕೆ ತಗಲದಂತೆ ಹೆರಿಗೆ ಮಾಡಿಸಿರುವ ಸಂಖ್ಯೆ ಹದಿಮೂರಂತೆ. ಇವರ ಕೈಚಳಕ ಎಂತಹದಿರಬೇಕು?

ಆಸ್ಪತ್ರೆಯಲ್ಲಿರುತ್ತಿದ್ದರೆ ತನ್ನ ಸೂಲಗಿತ್ತಿತನದ ರಜತೋತ್ಸವವನ್ನು ಮುಗಿಸಿ ಇವರು Matron ಪದವಿಗೇರುತ್ತಿದ್ದುದರಲ್ಲಿ ಆಶ್ಚರ್ಯವಿಲ್ಲ. ೫೦೦ಕ್ಕೆ ಮಿಕ್ಕಿದ ಮಕ್ಕಳ ಸುಖಪ್ರಸೂತಿಗೆ ಕಾರಣರಾದ ಸೂಲಗಿತ್ತಿಯರು ಎಲ್ಲಿದ್ದಾರೆ? ಎಂಟು ಅವಳಿ (ಹದಿನಾರು) ಮಕ್ಕಳನ್ನೂ, ಕಳೆದ ಡಿಸೆಂಬರಿನಲ್ಲಿ (ಈಗಲೂ ಸೌಖ್ಯವಾಗಿರುವ) ಒಂದೇ ಗರ್ಭದಿಂದ ಮೂರು ಗಂಡುಮಗುಗಳನ್ನೂ ಹಡೆಯಿಸುವ ಭಾಗ್ಯ ಬೇರಾರಿಗಿದೆ? ಇಂತಹ ಸೂಲಗಿತ್ತಿಯರು ಪ್ರಾಂತಕ್ಕೊಬ್ಬರಂತಾದರೂ ಇರುತ್ತಿದ್ದಲ್ಲಿ, ಎಷ್ಟು ಜನ ತಾಯಂದಿರ ಬಾಳನ್ನು ಬೆಳಗಿಸಬಹುದಾಗಿತ್ತು! ತನ್ನ ಕಸಬಿನಲ್ಲಿ ಸಂಪಾದನೆಯ ಗಂಧವಿಲ್ಲದಿದ್ದರೂ, ಕೈಚಮತ್ಕಾರದಿಂದ ಸಾಕಷ್ಟು ಯಶಸ್ಸನ್ನಿವರು ಪಡೆದರು. ಆದರೆ ನಾಲ್ಕು ಜನರ ಕಣ್ಣೆದುರು ಬೀಳುವ ಗೋಜಿಗೆ ಹೋಗಲಿಲ್ಲ.

ಇವರ ಕಾರ್ಯದ ಕೌಶಲದ ಕಿರಣ ಮೂಲ್ಕಿಯವರೆಗೂ ಹೋಗಿತ್ತು. ಕಳೆದ ಬಾರಿ ಅಲ್ಲಿಯ ಆಸ್ಪತ್ರೆಯವರು ಇವರ ಪ್ರಖ್ಯಾತಿಯನ್ನು ಕೇಳಿ, ತಮ್ಮ ಆಸ್ಪತ್ರೆಯಲ್ಲಿ ಕೆಲಸ ಕೊಡುವುದಾಗಿ ಹೇಳಿದರು. ಆಗ "ಎಂಕ್ ಮಾಯೆಗಾಸ್ಪತ್ರೆದ ಕೆಲಸ ಬರವು ಸರವು ಪಾಂತಿಳೆಗ್? ಎನ್ನ ದೂಕ್ಯೊಂಜಿ ಉಪ್ಪೆ ನೆಟ್ಟ ಮುಲ್ಪನೆ ತೀರಿನಾತ್ ಸೇವೆ ಸಂದಾವೆ. ಮುಲ್ತು ಪೋಯಿನಾಂಡ ಬೇತೆ ಏರೆ ಉಳ್ಳೆರ್ ನೆಟ್ಟ?" (ನನಗೇಕೆ ಆಸ್ಪತ್ರೆಯ ಕೆಲಸ ಓದು-ಬರೆಹ ಇಲ್ಲದವಳಿಗೆ? ನನ್ನ ಉಸಿರೊಂದಿರುವವರೆಗೆ ಸಾಧ್ಯವಿದ್ದಷ್ಟು ಸೇವೆ ಇಲ್ಲೇ ಸಲಿಸುತ್ತೇನೆ. ಇಲ್ಲಿಂದ ಹೋದರೆ ಬೇರೆಯಾರಿದ್ದಾರಿಲ್ಲಿ?) ಎಂದವರನ್ನು ಸಮಾಧಾನಪಡಿಸಿದ್ದರು. ಇದು ಅವರ 'ದೀನಭಾವನೆ (Inferioriyt complex)' ಎಂದು ಯಾರಾದರೆನಬಹುದು. ಅದು ತಪ್ಪು! ಇದರಿಂದ ಅವರು ಹಳ್ಳಿಯ ಜನರ ಕಷ್ಟ-ನಷ್ಟದ ಪರಿಚಯವನ್ನು ಚೆನ್ನಾಗಿ ಮಾಡಿದಂತೆ ಕಂಡು ಬರುತ್ತದೆ.

ಇನ್ನೊಂದು ಶೋಚನೀಯ ಸಂಗತಿ ನಮ್ಮಲ್ಲಿ ತುಂಬಿ ಹೋಗಿದೆ; ಅದನ್ನು ಅಸಡ್ಡೆಯೆನ್ನಲೂ ಅಡ್ಡಿಯಿಲ್ಲ; ಸ್ವಾರ್ಥವೆಂದೂ ಹೇಳಬಹುದು. ಅದೆಂದರೆ: ತನ್ನಿಂದ ಒಂದು ಕೆಲಸವಾದರೆ— ತನಗೆ ಒಂದು ವಿಷಯವು ತಿಳಿದಿದ್ದರೆ— ಅದು ಇನ್ನೊಬ್ಬನಿಗೆ ತಿಳಿಯಬಾರದು; ತನ್ನಿಂದ ಆಗಬೇಕು, ತನ್ನಿಂದಲೇ ಹೋಗಬೇಕೆಂಬ ಮಹತ್ವಾಕಾಂಕ್ಷೆ. ಬೇರೊಬ್ಬನಿಗೆ ಗಾಳಿಯಿಂದಲಾದರೂ ಅದರ ವಾಸನೆ ತಿಳಿಯಬಾರದೆಂಬ ಜಾಗ್ರತೆ ವಹಿಸುತ್ತೇವೆ. ಆದರೆ ಓದು-ಬರೆಹ, ವಿದ್ಯೆಯ ಗಂಧ ಕೂಡ ಅರಿಯದ ಹಳ್ಳಿಯ ಹೆಂಗುಸಾದ ಶ್ರೀಮತಿ ಕಾಂತಯಕ್ಕ, ಅಂತಹ ಸ್ವಾರ್ಥತೆಯ ಧೂರ್ತತನವನ್ನು ಮೆಟ್ಟಿನಿಂತು, ತನ್ನಿಂದ ಸಾಗುವಷ್ಟು ಮಟ್ಟಿನ ಸಹಾಯವಾಗಬೇಕೆಂದು ಕೆಲವು ಜನರಿಗಾದರೂ ಸೂಲಗಿತ್ತಿತನವನ್ನು ಕಲಿಸಿಕೊಡುವುದಾಗಿ ಭರವಸೆಯನ್ನಿತ್ತಿರುವರು. ೫೦೦ಕ್ಕೂ ಮಿಕ್ಕಿದ ಮಕ್ಕಳಿಗೆ 'ಬ್ರಹ್ಮ'ನೂ ತಾಯಿಯೂ ಆಗಿರುವ, ಹಲವಾರ ತಾಯಿಯರ ಉಸಿರನ್ನುಳಿಸಿದ ಇಂತಹ ಮಹಿಳೆಯನ್ನು ಹಡೆದ ಕರ್ನಾಟಕ ತಾಯಿ ಧನ್ಯೆ!

— — —

ಕರ್ನಾಟಕಾಂಬೆ ನೀ ಧನ್ಯೆ ಧನ್ಯೆ!

ಶ್ರೀ. ಕೆ. ಚೆನ್ನಬಸಪ್ಪ ಬಿ. ಎ. ಬೆಳಗಾಂವಿ

೧

ಸಂಪೂರ್ಣ ಗುಜರಾತಿಯಲ್ಲಿ ಅಚ್ಚು ಹಾಕಿಸಿದ ಒಂದು ಓಲೆಯನ್ನು ನನಗೆ ಕೊಟ್ಟರು ನನ್ನ ಗುಜರಾತೀ ಗೆಳೆಯರು. ನನಗೆ ಏನೊಂದೂ ಅರ್ಥವಾಗಲಿಲ್ಲ. "ಏನಿದು ?" ನಾನು ಕೇಳಿದೆ.

"ಮದುವೆಯ ಕರೆಯೋಲೆ" ಎಂದರು. ಮದುವೆ ಯಾರದು, ಯಾವಾಗ ಇನ್ನೇ ಮುಂತಾದ ವಿಚಾರಗಳು ನನಗೆ ಮೊದಲೇ ಗೊತ್ತಿತ್ತು, ನಾನು ಸುಮ್ಮನಾದೆ. ನನ್ನ ಗೆಳೆಯರು ಇನ್ನೂ ಕೆಲವು ಓಲೆಗಳನ್ನು ಕೊಟ್ಟು, ಕನ್ನಡದಲ್ಲಿ ವಿಳಾಸ ಬರೆದು ಅವರ ಕನ್ನಡ ಗೆಳೆಯರಿಗೆ ಕೊಡುವಂತೆ ನನಗೆ ಹೇಳಿದರು.

"ಈ ಗುಜರಾತಿ ಯಾರಿಗೆ ಅರ್ಥವಾಗಬೇಕು! ಇಂಗ್ಲೀಷಿನಲ್ಲಿ ಅಚ್ಚು ಹಾಕಿಸಬಾರದಾಗಿತ್ತೆ ?" ಎಂದೆ ನಾನು.

"ಓಲೆ ಕೊಟ್ಟಾಗ ಬಾಯಿಮಾತಿನಿಂದ ತಿಳಿಸಿದರಾಯಿತು; ಇನ್ನೆಷ್ಟು ಅರ್ಥವಾಗಬೇಕು? ಓಲೆಯ ಉದ್ದೇಶ ಅಷ್ಟೇ ತಾನೇ ?"

"ಸರಿಯೇ. ಇಂಗ್ಲೀಷಿನಲ್ಲಿ ಇದ್ದಿದ್ದರೆ ಎಲ್ಲರಿಗೂ ಅರ್ಥವಾಗುತ್ತಿತ್ತು; ನೋಡುವರ ಇಚ್ಛೆ!" ಎಂದೆ ಮತ್ತೆ.

"ನೋಡಬಹುದಿತ್ತು; ಆದರೆ ನಮ್ಮ ಗುಜರಾಥಿಯಲ್ಲಿ ಕರೆಯೋಲೆಯನ್ನು ಇಂಗ್ಲೀಷಿನಲ್ಲಿ ಅಚ್ಚು ಹಾಕಿಸುವ ಪದ್ಧತಿ ಇಲ್ಲವೇ ಇಲ್ಲ; ಗುಜರಾಥಿಯಲ್ಲೇ ನಾವು ಅಚ್ಚು ಹಾಕಿಸುವುದು!" ಎಂದರು ನನ್ನ ಗೆಳೆಯರು. ನನಗೊಂದಿಷ್ಟು ಆಶ್ಚರ್ಯವಾಯಿತು.

"ಗುಜರಾತಿ ಬಾರದವರಿಗೆ ಆಮಂತ್ರಣ ಕೊಟ್ಟರೂ, ಗುಜರಾತಿಯಲ್ಲಿ ಬರೆದುದನ್ನೇ ಕಳಿಸುತ್ತೀರಾ ?" ಎಂದೆ.

"ಹೌದು, ಹೌದು, ಪೂರ್ವ ಆಫ್ರಿಕಾದಲ್ಲಿ, ಇಂಗ್ಲೀಷಿನವರ ಕಿರಿಸ್ತಿ ಜನ ಸ್ನೇಹಿತರಿದ್ದಾರೆ. ಅವರಿಗೆಲ್ಲ, ಇವನ್ನೇ ನಾವು ಕಳಿಸುವುದು. ಇಂಗ್ಲೀಷು ಕರೆಯೋಲೆ ನಾವು ಮಾಡಿಸುವುದಿಲ್ಲ. ನಿಮ್ಮ ಕರ್ನಾಟಕದಲ್ಲಿ ಹೇಗೆ ?"

ನಾನು ಇದಕ್ಕೆ ಬೇಗನೆ ಉತ್ತರ ಕೇಳಲಾರದೆ ಹೋದೆ. ಬಹುಶಃ ನನ್ನ ಗೆಳೆಯರ ಮನೆಯ ವಿಚಾರ ಗೊತ್ತಿರದಿದ್ದರೆ ನಾನು ಹೀಗೆ ತೀರ್ಮಾನಿಸುತ್ತಿದ್ದೆ: 'ಇವರ ಮನೆಯಲ್ಲಿ ಯಾರಿಗೂ ಇಂಗ್ಲೀಷಿನ ಗಂಧವಿಲ್ಲ....ಸಂಬಂಧಿ ಕಡೆಯಲ್ಲೂ ಯಾರಿಗೂ ಬಾರದು....ಅವರ ದೂರದ ಬಂಧುವರ್ಗದವರಿಗೂ ಇಂಗ್ಲೀಷು ಬಾರದು....ನನ್ನ ಗೆಳೆಯರಿಗೇನೋ ಬರುತ್ತೆ, ಆದರೆ ಅವರ ಹಿರಿಯರ ಕೆಲಸದಲ್ಲಿ ಇವರದೇನೂ ಕೈಯಿಲ್ಲದಿರಬೇಕು....ಇಲ್ಲದಿದ್ದರೆ ಇವರಾದರೂ ತಮ್ಮ ಪ್ರಗತಿಪರ ಸುಸಂಸ್ಕೃತಬುದ್ಧಿಯಿಂದ ಇಂಗ್ಲೀಷಿನಲ್ಲಿ ಅಚ್ಚು ಹಾಕಿಸುತ್ತಿದ್ದರು. ಪಾಪ! ಓಬೀರಾಯನ ಕಾಲದ ಹಡಿಗೆ ರುಮಾಲದ ಸಂಪ್ರದಾಯಸಂತರು....ಟೀ, ಕಾಫಿ ಕುಡಿಯುವುದೂ ಪಾಪವೆಂದು ತಿಳಿದುಕೊಂಡಿರುವವರು........' ಇತ್ಯಾದಿ.

ಆದರೆ ಅವರ ಮನೆಯವರ ವಾಸ್ತವ ಸ್ಥಿತಿ ಬೇರೆ: ನನ್ನ ಗೆಳೆಯರ ತಂದೆಯವರು ಪೂರ್ವ ಆಫ್ರಿಕಾದಲ್ಲಿ ಇಂಗ್ಲೀಷ್ ಫಾರ್ಮ್ ಮ್ಯಾನೇಜರರು. ತಿಂಗಳಿಗೆ ಒಂದು ಸಾವಿರದ ಮೇಲೆ ತಲಬು. ಮನೆಯಲ್ಲಿರುವ ಆರು ಜನರಲ್ಲಿ ನಾಲ್ವರು ಇಂಗ್ಲೀಷು ಬೇಕಾದಷ್ಟು ಕಲಿತಿದ್ದಾರೆ. ನನ್ನ ಗೆಳೆಯರು ಗ್ರ್ಯಾಜುಯೇಟ್. ಬೇಕಾದಷ್ಟು ಹಣವಿದೆ ಎಂದಮೇಲೆ ಕರೆಯೋಲೆಯನ್ನು ಇಂಗ್ಲೀಷಿನಲ್ಲಿ ಹಾಕಿಸಲು ಏನು ಅಡಚಣೆ?

"ನಿಮ್ಮ ಕರ್ನಾಟಕದಲ್ಲಿ ಹೇಗೆ ಮಾಡುತ್ತಾರೆ?" ನನ್ನ ಗೆಳೆಯರು ಮತ್ತೆ ಜಗ್ಗಿಸಿ ಕೇಳಿದರು!

"ಛೆ, ಛೆ, ಕನ್ನಡದಲ್ಲಿ ಅಚ್ಚು ಹಾಕಿಸುವ 'ದುರಭ್ಯಾಸ' ಎಲ್ಲಿಯಾದರೂ ಇಟ್ಟುಕೊಳ್ಳಬಹುದೆ? ಸಾಧ್ಯವಿಲ್ಲ!" ಎಂದೆ ನಾನು.

"ಕನ್ನಡದಲ್ಲಿ ಅಚ್ಚುಹಾಕಿಸುವುದು ಅಂಥಾ ಪಾಪವೇನು ನಿಮ್ಮ ಕರ್ನಾಟಕದಲ್ಲಿ ?"

"ಪಾಪ ಮಾತ್ರವಲ್ಲ. ವಿಶ್ವಶಾಂತಿ ಭಂಗಕಾರಿ!" ಎಂದೆ.

ನನ್ನ ಗೆಳೆಯರು ಮೂರ್ಛೆ ಹೋಗುವುದರಲ್ಲಿದ್ದರು! ಮತ್ತೆ ನಾನು ಮುಂದುವರಿಸಿದೆ: "ಅಹುದು. Dont be abhorred" ನಮ್ಮ ಮದುವೆಯ ಓಲೆಯನ್ನು ಕನ್ನಡದಲ್ಲಿ ಅಚ್ಚು ಹಾಕಿಸುವುದು ವಿಶ್ವಶಾಂತಿಭಂಗಕಾರಿ!" ಎಂದೆ.

"ಈ ಸವಾದ ಅರ್ಥವಾಗದು ನನಗೆ!" ಭಯ ಸುಳಿಯುತ್ತಿತ್ತು ನನ್ನ ಗೆಳೆಯನ ಮುಖದ ಮೇಲೆ!

"ಹೆದರಬೇಡಿ, ಕನ್ನಡಿಗರದು ಕುತ್ಸಿತ ಬುದ್ಧಿಯಲ್ಲ! ವಿಶಾಲ ಹೃದಯ! ಬೆಟ್ಟ, ನದಿ, ಸಾಗರಗಳನ್ನು ಎದೆಯಲ್ಲಿಟ್ಟುಕೊಳ್ಳಬಲ್ಲರು; ವಿಶ್ವಪ್ರೇಮವನ್ನು ಬೆಳೆಯಿಸಲು ಹೊರಟವರು!" ಎಂದೆ ನಾನು, ಅಸ್ಖಲಿತವಾಗಿ! ವೀರವಾಣಿಯಿಂದ!

ಆದರೆ ಅವರಿಗೆ ಇನ್ನೂ ಅರ್ಥವಾದಂತೆ ಕಾಣಲಿಲ್ಲ. "ನೋಡಿ, ಕರೆಯೋಲೆಯನ್ನು ಕನ್ನಡದಲ್ಲಿಯೇ ಅಚ್ಚುಹಾಕಿಸುವುದರಿಂದ ಎಂತಹ ಅನಾಹುತವಿದೆ ಎಂಬುದು ನಿಮಗೆ ತಿಳಿಯಲಿಲ್ಲವೆಂದು ತೋರುತ್ತದೆ. ಇಂಗ್ಲೀಷು ಅಂತರ ರಾಷ್ಟ್ರೀಯ ಭಾಷೆ; ಕನ್ನಡ ಪ್ರಾಂತೀಯ ಭಾಷೆ. ಕನ್ನಡದಲ್ಲಿ ಅಚ್ಚುಹಾಕಿಸಿದರೆ ಎಷ್ಟು ಜನಕ್ಕೆ ಅರ್ಥವಾದೀತು? ಎಷ್ಟು ಜನರಲ್ಲಿ ಪ್ರೇಮ ಹುಟ್ಟಿಸಬಹುದು? ಇಂಗ್ಲೀಷಾದರೆ ಎಷ್ಟು ಜನರಿಗೆ ಸಂತೋಷವಾಗುತ್ತೆ! ಎಷ್ಟು ಪ್ರೇಮ ಬೆಳೆಯುತ್ತೆ! ವಿಶ್ವಪ್ರೇಮ ಬೆಳೆಯುತ್ತೆ! ಆದ ಕಾರಣ ವಿಶ್ವಪ್ರೇಮ—ವಿಶ್ವಶಾಂತಿಗಾಗಿ ನಾವು ಇಂಗ್ಲೀಷಿನಲ್ಲೇ ಹಾಕಿಸುತ್ತೇವೆ!"

"ಹಾಗಾದರೆ ನಿಮ್ಮ ಜನರಿಗೆಲ್ಲ ಇಂಗ್ಲೀಷು ಬರಬೇಕು!" ಎಂದರು ನನ್ನ ಗೆಳೆಯರು....ಕೌತುಕವಾಣಿಯಿಂದ.

"ನಮ್ಮ ಜನರಿಗೆಲ್ಲ ಇಂಗ್ಲೀಷು ಬರುವುದಿಲ್ಲ. ಅದು ಬೇರೆ! ಆದರೆ ವಿಶ್ವಶಾಂತಿಗಾಗಿ ಈ ಉದ್ಯಮ. ಕನ್ನಡದಲ್ಲಿ ಅಚ್ಚು ಹಾಕಿಸದೆ ಇರುವುದು ವಿಶ್ವಪ್ರೇಮದ ಅಮೃತಶಿಲೆಯ ತಳಹದಿ ಹಾಕಿ, ಸಾಮ್ಯವಾದದ ರೌಪ್ಯಮಯಮಂದಿರವನ್ನು ಕಟ್ಟಿ, ಜಾಗತಿಕ ಶಾಂತಿಯ ಸುವರ್ಣಕಲಶವಿಟ್ಟು, ಶಾಶ್ವತಶಾಂತಿಯ ವಜ್ರದ ಮೂರ್ತಿ ಪ್ರತಿಷ್ಠಾಪನೆಗಾಗಿ!" ಎಂದು ವ್ಯಾಖ್ಯಾನ ಮಾಡಿದೆ!

ನನ್ನ ಗೆಳೆಯರ ಬಾಯಿ 'ಬಂದ್' ಆಯಿತು!



೨

" ವಲ್ಲಭಭಾಯಿ ಪಟೇಲರು ಒಂದು ದಿನ ಅಹಮ್ಮದಾಬಾದ್ ಕಾಮರ್ಸ್ ಕಾಲೇಜಿನಲ್ಲಿ ಭಾಷಣ ಮಾಡುತ್ತಾ........ "

" ಯಾವ ಭಾಷೆಯಲ್ಲಿ ಭಾಷಣ ಮಾಡಿದರು ? " ಎಂದೆ ನಾನು.

" ಅದೇಕೆ ಹಾಗೆ ಕೇಳುತ್ತೀರಿ ? ಗುಜರಾತಿಯಲ್ಲಿ; ಇನ್ಯಾವ ಭಾಷೆಯಲ್ಲಿ ? ಇದೋ, ನೀವು ಇನ್ನು ಮೇಲೆ ಮಾತುಮಾತಿಗೆ ' ಯಾವ ಭಾಷೆಯಲ್ಲಿ ? ' ಎಂದು ಕೇಳಬೇಡಿ. ಗುಜರಾತಿನಲ್ಲಿ ಯಾರು ಮಾತನಾಡಿದರೂ ಗುಜರಾತಿಯಲ್ಲೇ ಮಾತನಾಡುವುದು. ಅದರಲ್ಲೂ ವಲ್ಲಭಭಾಯಿ ಪಟೇಲರು ಎಂದರೆ ಯಾವಾಗಲೂ ಗುಜರಾತಿಯಲ್ಲಿಯೇ ಮಾತನಾಡುವವರು! "

" ಯಾವಾಗಲೂ ? " ನನಗೆ ಆಶ್ಚರ್ಯವಾಯಿತು.

" ಆಗೋ, ಮತ್ತೆ ! ಯಾವಾಗಲೂ ಎಂದರೆ ಯಾವಾಗಲೂ ಎಂತಲೇ; ಅದಕ್ಕೆ ಹೊರತು ಇಲ್ಲವೇ ಇಲ್ಲ! ಇಂಗ್ಲೀಷು ಅಧಿಕಾರಿಯೊಡನೆ ಮಾತನಾಡಿದರೂ ಅಷ್ಟೆ! ಪಕ್ಕದಲ್ಲಿ ಅನುವಾದಕ ಇದ್ದೇ ಇರುತ್ತಾನೆ. "

"ಛೇ, ಛೇ, ಇದು ಕುತ್ಸಿತ ಬುದ್ಧಿ; ತರವಲ್ಲ, ಎಷ್ಟೂ ತರವಲ್ಲ! ಅದೂ ರಾಷ್ಟ್ರೀಯ ವ್ಯಕ್ತಿ ಪಟೇಲರಿಗೆ! "

" ನೀವು ಬೇಕಾದ್ದು ಎನ್ನಿ. ಕುತ್ಸಿತ ಬುದ್ಧಿ ಎನ್ನಿ, Fanatism, ಎನ್ನಿ. ಅವರ ನಮ್ಮ ಗುಜರಾಥಿಯ ಮಂದಿಯೇ ಅಷ್ಟು. ಅವರ ಮನೆಮಾತಿನಲ್ಲಿ ಅವರು ಮಾತನಾಡುತ್ತಾರೆ. ಅದು ಫ್ಯಾನಾಟಿಜಂ ಎಂದರೆ ಆ ದೇವರಿಗೇ ಗೊತ್ತು ! "

" ಅಲ್ಲದೆ ಮತ್ತೇನ್ರಿ, ಇಂಗ್ಲೀಷಿನವರೊಡನೆ ಮಾತನಾಡಿದರೂ ಅನುವಾದಕನ ಸಹಾಯದಿಂದ ಗುಜರಾತಿ ಮಾತನಾಡಬೇಕಾದರೆ ? "

" ಸರಿಯೇ. ಗುಜರಾತಿನಲ್ಲಿ ಅಧಿಕಾರ ಚಲಾಯಿಸಲು ಬಂದವನು ಗುಜರಾತಿ ಕಲಿತಿರಬಾರದೇನ್ರಿ ? ಗುಜರಾತಿಯ ಗಂಧವಿಲ್ಲದೆ, ಗುಜರಾತೀ ಜನರ ಪ್ರಜಾಪಾಲನೆ ಮಾಡಲು ಅವನಿಗೇನು ಹಕ್ಕು? ಆದಕಾರಣ ಗುಜರಾತೀ ಜನರೊಡನೆ ಇರುವವನು ಗುಜರಾತಿ ಕಲಿತು ಬರಲಿ! ಪಟೇಲರು ಇಂಗ್ಲೆಂಡಿಗೆ ಹೋಗಿ ಗುಜರಾತಿ ಮಾತನಾಡಿದ್ದರೆ ಕುತ್ಸಿತಬುದ್ಧಿ, ಫ್ಯಾನಾಟಿಜಂ ಎನ್ನಬಹುದಿತ್ತು! "

ಇವರ ತರ್ಕಶಾಸ್ತ್ರ ಸಮ್ಮತವಾದರೂ ನನ್ನ ವಿಶಾಲ ಹೃದಯ ವಿಶ್ವಪ್ರೇಮದ ' ಕಾಳಜಿ 'ಯಿಂದ ಅವರ ಮಾತು ' ಸರಿ ' ಎಂದು ಪೂರ್ತಿ ಒಪ್ಪಗೊಡಲಿಲ್ಲ.

" ಹಾಗಾದರೆ ನಿಮ್ಮ ಕರ್ನಾಟಕದಲ್ಲಿ ಹೇಗೆ ? "

" ಛೆ, ಛೆ, ಮಡಿಯಲ್ಲಿದ್ದಾಗ ಮನೆಯಲ್ಲೇ ಕನ್ನಡ ಮಾತನಾಡುವುದಿಲ್ಲ ನಮ್ಮ ಜನ ! ಮಹಾಸಭೆ ಸೇರಿ–ಮಲ್ಲಿಗೆಯ ಹಾರ ಹಾಕಿ ಮನ್ನಣೆ ಮಾಡುವಾಗ, ಮನೆಮಾತಿನಲ್ಲಿ ಮಾತನಾಡುತ್ತಾರೆಯೇ ? ಅದು ಅವರ ಅಂತಸ್ತಿಗೆ ಕುಂದು! ಮಹಾ ಲಜ್ಜಾಸ್ಪದ ವಿಷಯ ! "

ನನ್ನ ಗೆಳೆಯರು ಸುಸ್ತು ಹೊಡೆದು ಹಾಸುಗೆಯ ಮೇಲೆ ಕೈಕಾಲು ಬಡಿಯುತ್ತಾ ಬಿದ್ದುಬಿಟ್ಟರು ! 'ಅಯ್ಯೋ, ಇದ್ದಕ್ಕಿದ್ದ ಹಾಗೆ ಏನೋ ಅನಾಹುತವಾಯಿತಲ್ಲ' ಎಂದು ಹೂಜೆಯನ್ನು ತಂದು ನೆತ್ತಿಯ ಮೇಲೆ ಕಚ್ಚುವ ತಣ್ಣೀರು ಸುರಿದೆ! ಐದಾರು ನಿಮಿಷಗಳ ಮೇಲೆ ತಿಳಿದು ನನ್ನನ್ನೇ ನೋಡುತ್ತಾ ತೆಪ್ಪಗೆ ಬಿದ್ದಿದ್ದರು!

" ದಯಮಾಡಿ ಮನಸ್ಸಿಗೆ ಏನೂ ತಿಳಿದುಕೊಳ್ಳಬಾರದು; ನಿಮಗೆ ಪ್ಯಾರಾಲಿಸಿಸ್ ಏನ್ರಿ ? " ಎಂದೆ ನಾನು.

" ಅಲ್ಲ, ನಿಮ್ಮ ಕನ್ನಡಿಗರ ವಿಚಾರ ಸುಳ್ಳು ಹೇಳ್ತಾಯಿಲ್ವೆ ? " ಎಂದರು ಕುಗ್ಗಿದ ದನಿಯಲ್ಲಿ.

" ಅಯ್ಯೋ, ಅವರ ವಿಚಾರ ಹೋಗ್ಲಿ ಬಿಡಿ. ನಿಮಗೊಳ್ಳೇ ಭ್ರಾಂತಿ ಹಿಡೀತಲ್ಲ! ನಿಮಗೆ ಪ್ಯಾರಾಲಿಸಿಸ್ ಏನ್ರೀ ಎಂದ್ರೆ ! "

" ನಿಮ್ಮ ಕನ್ನಡಿಗರ ಅಭಿಮಾನ ಕೇಳಿ ನನಗೆ ಪ್ಯಾರಾಲಿಸಿಸ್ ಬಂದಾಯ್ತು ಅಷ್ಟೆ! ಎಲ್ಲಿಯ ರೋಗ! " ಎಂದರು.

" ಸದ್ಯ ಬದುಕಿದೆ ಬಿಡಿ ! ಅಲ್ಲರೀ, ಸುಮ್ಮನೆ ಹಾಸುಗೆ ತೋಯ್ದು ಹೋಯ್ತಲ್ಲ ನೀರು ಸುರಿದು ! " ಎಂದೆ ನಾನು.

" ಗಾಂಧೀಜಿ ಅಷ್ಟೇ. ಪಟೇಲರು ಅಷ್ಟೇ ! ಠಾಕೂರರೂ ಕಲ್ಕತ್ತಾ ವಿಶ್ವವಿದ್ಯಾಲಯದ ಪದವೀದಾನೋತ್ಸವದಲ್ಲಿ ಬಂಗಾಲಿಯಲ್ಲಿ ಮಾತನಾಡಿದರು. ಅದೇಕೆ, ನಿಮ್ಮ ಜನರಿಗೆ ನಿಮ್ಮ ಭಾಷೆಯ ಮೇಲೆ ಅಭಿಮಾನವಿಲ್ಲ? " ಎಂದರು ನನ್ನ ಗೆಳೆಯರು.

" ಇಲ್ಲ, ನಾನು ಹೇಳುವುದಿಲ್ಲ! ಮತ್ತೆ ನಿಮಗೆ ಏನಾದರೂ ಅನಾಹುತವಾದೀತು! ಬೇಡ, ಹೋಗಲಿಬಿಡಿ ! " ಮಾತು ನಿಲ್ಲಿಸಿದೆ.

೩

" ಅದೇನು, ಅಷ್ಟು ದೊಡ್ಡ ಪತ್ರ ಬಂದಿದೆಯಲ್ಲ!, ಯಾರು ಬರೆದಿರೋದು ? " ನಾನು ಸ್ವಲ್ಪ ವ್ಯಂಗ್ಯವಾಗಿ ಕೇಳಿದೆ.

" ಅಂಥವರಿಂದ ಏನೂ ಅಲ್ಲ; ನನ್ನ ತಂದೆಯವರು ಬರೆದಿದ್ದಾರೆ!" ಎಂದರು ನನ್ನ ಗೆಳೆಯರು.

" ಗುಜರಾತಿಯಲ್ಲಿ ಬರೆದ ಹಾಗೆ ಕಾಣುತ್ತೆ!" ಎಂದೆ.

" ಗುಜರಾತಿಯಲ್ಲಿ ಅಲ್ಲದೆ ಇನ್ನೇತರಲ್ಲಿ ಬರೆಯುತ್ತಾರೆ? ನಿಮಗೆ ಮೊದಲೇ ಹೇಳಿದ್ದೇನೆ. ಹೀಗೆ ಮಾತು-ಮಾತಿಗೂ "ಗುಜರಾತಿಯಲ್ಲೇ" ಎಂದು ಕೇಳಬೇಡಿ ಎಂದು. ಮತ್ತೆ ಕೇಳುತ್ತೀರಿ." ಎಂದರು ನನ್ನ ಗೆಳೆಯರು. ಅವರು ಅಂದು ಹೇಳಿದ್ದ ಎಚ್ಚರದ ಮಾತನ್ನು ಮರೆತು ಬಿಟ್ಟಿದ್ದೆ!

" ನಿಮ್ಮ ತಂದೆಯವರಿಗೆ ಇಂಗ್ಲೀಷು ಚೆನ್ನಾಗಿ ಬರುತ್ತಿದೆಯಲ್ಲ, ಅದಕ್ಕೆ ಕೇಳಿದೆ! ಕ್ಷಮಿಸಿ!" ಎಂದೆ ನಾನು.

" ಇಂಗ್ಲೀಷು ಬಂದರೆ ಗುಜರಾತಿಯಲ್ಲಿ ಪತ್ರ ಬರೆಯಬಾರದೇನು? ಚೆನ್ನಾಗಿದೆ ನಿಮ್ಮ ತರ್ಕ! ನಿಮ್ಮ ತಂದೆಯವರು ಇಂಗ್ಲೀಷಿನಲ್ಲಿಯೇ ಏನು ಬರೆಯುವುದು?"

" ಛೆ, ಛೆ, ಅವರಿಗೆ ಇಂಗ್ಲೀಷು ಬಾರದು. ಇಂಗ್ಲೀಷು ಬಂದವರ ವಿಚಾರ ಹೇಳುತ್ತಿದ್ದೆ. ತಮ್ಮ ಪುತ್ರರಿಗೆಲ್ಲ ಅವರು ಇಂಗ್ಲೀಷಿನಲ್ಲಿ ಬರೆಯುವುದೊಂದೇ ಅಲ್ಲ; ಮಕ್ಕಳೂ ಇಂಗ್ಲೀಷಿನಲ್ಲಿಯೇ ಬರೆಯಬೇಕೆಂದು ಅಪ್ಪಣೆಮಾಡಿ ಬಿಡುತ್ತಾರೆ. ಪತ್ರಬರೆಯದಿದ್ದರೆ ಇಂಗ್ಲೀಷು 'improve' ಆಗುವುದಾದರೂ ಹೇಗೆ? ಕನ್ನಡ ಹೇಗಾದರೂ ಮನೆ-ಮಾತು, ಬಂದೇ ಬರುತ್ತೆ; ಆದರೆ ಇಂಗ್ಲೀಷು!"

" ಹಾಗಾದರೆ ನಿಮ್ಮ ಇಂಗ್ಲೀಷು ಬಲ್ಲ ಹೆತ್ತವರಿಗೆಲ್ಲ ಕನ್ನಡ ಚೆನ್ನಾಗಿ ಬರುತ್ತದೆಯೋ?"

" ಅದು ನನಗೆ ತಿಳಿಯದು! ಆದರೆ ನಮ್ಮ ನೃಪತುಂಗ ಕವಿಯು 'ಕುರಿತೋದದೆಯುಂ ಕಾವ್ಯಪ್ರಯೋಗ ಪರಿಣತಮತಿಗಳ್' ಎಂದಿದ್ದಾನೆ. ಆ ಆಧಾರದ ಮೇಲೆ ನಾವು ಮುಂದುವರಿಯುವವರು. ವಾಸ್ತವವಾಗಿ ಏನು ಪರಿಸ್ಥಿತಿಯೋ: ನಾನರಿಯೆ!"

" ಒಳ್ಳೆ ವಿಚಿತ್ರವಾಗಿದೆ. ಮತ್ತೆ?" ನನ್ನ ಗೆಳೆಯರು ಕೇಳಿದರು.

" ಇಂಗ್ಲೀಷು ಸ್ವಲ್ಪ ಸ್ವಲ್ಪ ಬರುತ್ತೆ ಅಂತ ಇಟ್ಟುಕೊಳ್ಳಿ ನಮ್ಮ ಹೆತ್ತವರಿಗೆ. ಮಗ ಹೆಚ್ಚು ವಿದ್ಯಾವಂತನಾಗಿದ್ದರೆ ತಂದೆಯವರು ಆಜ್ಞೆ ಮಾಡುತ್ತಾರೆ: 'ಇನ್ನು ಮೇಲೆ ನೀನು ಇಂಗ್ಲೀಷಿನಲ್ಲಿ ಪತ್ರ ಬರೆಯಬೇಕು. ನನಗೂ "improve" ಆಗುತ್ತೆ, ನಿನಗೂ ಉತ್ತಮ' ಎಂದು. ಅಂತೂ ಕನ್ನಡವನ್ನು ಪತ್ರವ್ಯವಹಾರದಲ್ಲಿ ಬಳಸುವುದು ಇಂಗ್ಲೀಷಿನ ಗಂಧವಿದ್ದವರಿಗೆ ಅವಮಾನ!"

ಮತ್ತೊಂದು ದಿನ ಇನ್ನೊಂದು ಪತ್ರ, ಆರು ಪುಟಗಳ ಪತ್ರ ಬಂದಿತ್ತು! ಓದುತ್ತಾ ಕುಳಿತಿದ್ದರು! ಕೇಳಿದೆ:—"ಯಾರ ಪತ್ರ?" ಎಂದು. ಇದು ದುರಭ್ಯಾಸ ಎಂದು ನೀವೆನ್ನಬಹುದು. ಆದರೆ ಅವರ ನನ್ನ ಮೈತ್ರಿಯ ಆಳ ಹೆಚ್ಚು. ಅಲ್ಲದೆ ಗುಜರಾತಿಯಲ್ಲಿತ್ತು ಪತ್ರ!

" ನನ್ನ ಗೆಳೆಯನದು, ರಾಜಮಹೇಂದ್ರಿಯಲ್ಲಿದ್ದಾನೆ!" ಎಂದರು ನನ್ನ ಗೆಳೆಯರು

" ಅಲ್ಲ. ಗುಜರಾತಿಯಲ್ಲಿ ಬರೆದಿದ್ದರು ಅದಕ್ಕೆ................"

" ಅಗ್ಗೋ, ಮತ್ತೆ ಅದೇ ಅನುಮಾನ! ಸ್ನೇಹಿತರು ಸ್ನೇಹಿತರಿಗೆ ಮಾತೃಭಾಷೆಯಲ್ಲಿ ಬರೆಯದೆ ಏನು? ನಿಮ್ಮಲ್ಲಿ ಹೇಗೆ?" ಎಂದರು ನನ್ನ ಗೆಳೆಯರು.

" ಕೆಲವರ ಹೊರತಾಗಿ ಮಿಕ್ಕವರು ಇಂಗ್ಲೀಷಿನಲ್ಲೇ ಪತ್ರವ್ಯವಹಾರ ನಡೆಯಿಸುವುದು. ಈಗ ನೋಡಿ ನನ್ನ ಗೆಳೆಯರೊಬ್ಬರು ಲಿಟರೇಚರ್ ಗ್ರಾಜುಏಟ್ ಇದ್ದಾರೆ. ಅವರಿಗೆ ನಾನು ಪತ್ರಬರೆದಾಗ ಇಂಗ್ಲೀಷಿನಲ್ಲೇ ಬರೆಯುತ್ತೇನೆ. ನನ್ನ ಉದ್ದೇಶವಿಷ್ಟೇ: ನನಗೂ ಇಂಗ್ಲೀಷು ಚೆನ್ನಾಗಿಯೇ ಬರುತ್ತೆ ಎಂಬುದನ್ನು ತೋರಿಸಲು! ನನ್ನಷ್ಟೇ ಓದಿದವರಿದ್ದರೆ ಆಗಲೂ ಇಂಗ್ಲೀಷಿನಲ್ಲೇ! ಆಗ ನನ್ನ ಉದ್ದೇಶ: ನಿಮಗಿಂತಲೂ ಉತ್ತಮ ಇಂಗ್ಲೀಷು ಬರುತ್ತೆ ಎಂದು ತೋರಿಸಿಕೊಳ್ಳಲು! ನನಗಿಂತ ಕಡಮೆ ಓದಿದವರಿದ್ದರೆ: 'ನನಗೆ ಇಂಗ್ಲೀಷು ಬರುತ್ತೆ, ನಿಮಗೆ ಅಷ್ಟು ಬಾರದು' ಎಂಬುದನ್ನು ತೋರಿಸಬೇಕೆಂದು! ಅಂತೂ ಕನ್ನಡ ಪತ್ರವ್ಯವಹಾರದಲ್ಲಿ ಕಡಮೆ!"

" ಶಹಬಾಸ್! ಸಾರ್ಥಕ ನಿಮ್ಮ ಜನ್ಮ! ಧನ್ಯೆ ನಿಮ್ಮ ತಾಯ್ನಾಡು! ಪುಣ್ಯವಂತೆ ನಿಮ್ಮ ತಾಯ್ನುಡಿ!" ಎಂದರು ನನ್ನ ಗೆಳೆಯರು! ನನಗೆ ಎದೆ ಉಬ್ಬಿ ಹೋಯ್ತು!

ಮತ್ತೊಂದು ದಿನ ಇನ್ನೊಂದು ಪತ್ರ ಬಂದಿತ್ತು. ಅದೂ ಗುಜರಾತಿಯಲ್ಲಿತ್ತು. ನನ್ನ ದುರ್ಬುದ್ಧಿ "ಯಾರದು?" ಎಂದು ಕೇಳದೆ ಬಿಡಲಿಲ್ಲ, ಅವರ ತಂಗಿಯ ಪತ್ರವಂತೆ. ಈ ಬಾರಿ ಆ ಪ್ರಶ್ನೆ ಕೇಳಲಿಲ್ಲ. ಆದರೆ "ನಿಮ್ಮ ತಂಗಿಗೆ ಇಂಗ್ಲೀಷು ಬಾರದೋ?" ಎಂದು ಪರೋಕ್ಷವಾಗಿ ಕೇಳಿದೆ.

" ಬರುತ್ತೆ. ಸ್ವಲ್ಪಸ್ವಲ್ಪ. ಆದರೆ ವಿಟ್ಠಲ್ ಕನ್ಯಾವಿದ್ಯಾಲಯದಲ್ಲಿ ಇಂಗ್ಲೀಷು ಕಲಿಸುವುದಿಲ್ಲ. ಬರೀ ಗುಜರಾತಿ. ಗುಜರಾತಿ ಬಿ. ಎ. ಪರೀಕ್ಷೆಗಳೂ ಇವೆ!" ಎಂದರು ನನ್ನ ಗೆಳೆಯರು.

" ಬರೀ ಗುಜರಾತಿ? ಇಂಗ್ಲೀಷಿಲ್ಲವೇ ಇಲ್ಲ?" ಎಂದೆ.

" ಕೇಳಕೂಡದು; ಗುಜರಾತಿಯಲ್ಲಿರುವುದನ್ನು ನೋಡಿ ಕೇಳರಬೇಕು. ಮತ್ತೆ ನಿಮ್ಮ ಕರ್ನಾಟಕದಲ್ಲಿ ಹೇಗೆ?"

" ನಮ್ಮ ಅಕ್ಕ-ತಂಗಿಯರಿಗೆ ವಿದ್ಯೆಯೇ ಕಡಮೆ. ಅದರಲ್ಲೂ ಇಂಗ್ಲೀಷು ತೀರಾ ಕಡಮೆ. ಆದರೂ ಅವರಿಗೆ ಇಂಗ್ಲೀಷು ಬಾರದು ಎಂದು ಒಪ್ಪಿಕೊಳ್ಳಲಾರೆ! ನಮ್ಮ ಅರ್ಧಾಂಗಿನಿಯರಿಗೆ ಪೂರ್ಣ ಇಂಗ್ಲೀಷು ಬಾರದಿದ್ದರೆ ಮಾತ್ರ ಕನ್ನಡದಲ್ಲಿ ಓಲೆ ಬರೆಯುತ್ತಾರೆ. ಒಂದು ವೇಳೆ ಸ್ವಲ್ಪ ಬರುತ್ತಿದ್ದರೆ, ಮೇಲೆ ಸ್ಥಳ, ತಾರೀಕು, ಕೆಳಗೆ ದಸ್ಕತ್ತು ಇಂಗ್ಲೀಷಿನಲ್ಲಿಯೇ ಇರಬೇಕು! ಇಂಗ್ಲೀಷು ಎಷ್ಟು ಬರದಿದ್ದರೂ ತಾರೀಕು ಬರೆಯುವಾಗ 'D' ಎಂದಾದರೂ ಬರೆಯುತ್ತಾರೆ ಬಿಡುವುದಿಲ್ಲ! ವಿಳಾಸವಂತೂ ಇಂಗ್ಲೀಷಿನಲ್ಲಿರಲೇ ಬೇಕು!"

ಈ ಎಲ್ಲ ಪಾಂಡಿತ್ಯ ಕಂಡು ನನ್ನ ಗೆಳೆಯರಿಗೆ ಹೊಟ್ಟೆಯುರಿ ಎದ್ದಿರಬೇಕು: 'ಅಯ್ಯೋ, ನನಗೆ ಇಂಗ್ಲೀಷಿನಲ್ಲಿ ಪತ್ರ ಬರೆಯುವ ಅಕ್ಕತಂಗಿ- ಅರ್ಧಾಂಗಿನಿಯರಿಲ್ಲವಲ್ಲ' ಎಂದು. ಯಾರಿಗೆ ತಾನೆ ಉರಿ ಏಳದು? ಅಯ್ಯೋ, ಎಲ್ಲಿಯಾದರೂ ಉಂಟೆ! ಗಂಡ ಹೆಂಡತಿ ಇಬ್ಬರೂ ಇಂಗ್ಲೀಷು ಕಲಿತವರಾದರೆ!....ಆದರೆ! ಏನು ಸುಖ....... ಏನು ಸುಖ!

೪

ನನ್ನ ಗೆಳೆಯರ ತಲೆಗೊಂಬಿಗೆ ಗುಜರಾತಿ ಅಕ್ಷರದಲ್ಲಿ "ಚ. ಕ. ಪ." ಎಂದು ಹೆಣಿಗೆ ಹಾಕಿದ್ದರು. ಅದನ್ನು ನೋಡಿ ನಾನು ಕೇಳಿದೆ: "ಇಂಗ್ಲೀಷಿನಲ್ಲಿ ಹಾಕಿಸಿಲ್ಲವೇಕೆ?"

"ಅದೇಕೆ ಹಾಕಿಸಬೇಕು?"

"ಅಲ್ಲ, ಈಗ ಕರ್ನಾಟಕದಲ್ಲಿದ್ದೀರಿ. ಇದು ಯಾರಿಗೆ ತಿಳಿಯ ಬೇಕು? ಅದಕ್ಕೆ ಕೇಳಿದೆ."

"ಯಾರಿಗಾದರೂ ಏತಕ್ಕೆ ತಿಳಿಯಬೇಕು?" ನನ್ನ ಗೆಳೆಯ ರೆಂದರು.

"ನೋಡಿ, ಯಾರಾದರೂ ತಲೆಗೊಂಬು ಕಳ್ಳತನ ಮಾಡಿದರು ಎಂದು ಇಟ್ಟುಕೊಳ್ಳಿ. ಯಾರಾದರೂ ನೋಡಿದರೆ ಪತ್ತೆ ಹಚ್ಚುತ್ತಾರೆ. ಪೋಲೀಸರಿಗೆ ಅನುಕೂಲ! ಅಥವಾ ಅಗಸ ಬೇರೆಯವರಿಗೆ ಕೊಟ್ಟ.... ಅವನಾದರೂ ಹಿಂದಕ್ಕೆ ಕಳಿಸುತ್ತಾರೆ! ಅಥವಾ ನೀವೇ ಕಳೆದರೂ...."

"ಇಲ್ಲಿ ಗುಜರಾತೀ ಜನರಿಗೆ ಅಷ್ಟು ಮುಂದಾಲೋಚನೆಯಿಲ್ಲ! ಶುದ್ಧ ಮಂಕರು! ದೇವರಾಣೆ ನಿಮ್ಮ ಹಣಿಗೆ ಬಲ್ಲವರು ಸಮ್ರಾಷ ಸಂಸ್ಕೃತಿಯರು! ಅಹಹಾ! ವಂದೇ...."

"ಅಷ್ಟೇ ಅಲ್ಲ, ಇನ್ನೂ ಕೇಳಿ! ನಮ್ಮ ಹೆಂಗುಸರು ಹೆಣಿಗೆ ಹಾಕಿದರೆ, ತಮ್ಮ ಕಲಾಕೃತಿಯ ಮೇಲೆ ಇಂಗ್ಲೀಷಿನಲ್ಲೇ ನಾಮಲಿಖಿತ ಮಾಡುವುದು! ಅವರಿಗೆ ಬಾರದಿದ್ದರೂ ಊರಿನಲ್ಲಿರುವ ಇಂಗ್ಲೀಷು ಬಲ್ಲವರೊಡನೆ ಹೆಸರಾದರೂ ಇಂಗ್ಲೀಷಿನಲ್ಲಿ ಬರೆಯಿಸಿಕೊಂಡು ಹೆಣೆಯುತ್ತಾರೆ.... ಬರುವ ವರ, ಅವರ ಜ್ಞಾನದ ಆಳವನ್ನು ನೋಡಿ ತಲೆತಿರುಗಿ ನೆಲಕ್ಕೆ ಬೀಳಬೇಕೆಂದು. ಎಂಥ ಮುಂಜಾಗ್ರತೆ! ಎಂಥ ಜ್ಞಾನ!" ಎಂದೆ.

ನನ್ನ ಗೆಳೆಯರು ಎರಡೂ ಜೊತೆ ಬೂಟನ್ನು ಕೈಚೀಲಕ್ಕೆ ತುರುಕಿ, ಹಾಸುಗೆಯನ್ನು ಬಗಲಲ್ಲಿ ಸಿಕ್ಕಿಸಿಕೊಂಡು, ಎರಡೂ ಟ್ರಂಕುಗಳನ್ನು ಎರಡೂ ಕೈಯಲ್ಲಿ ಹಿಡಿದುಕೊಂಡು, ಹೊರಟು ನಿಂತು: "ಮುಂದಿನ ಗಾಡಿ ಯಾವಾಗ ನೋಡಿ, ಮುಂಬಯಿ ಕಡೆ...." ಎಂದರು ಏಳುತ್ತಾ. "ಅದೇಕೆ ಸ್ವಾಮಿ?...." ಅತ್ಯಾಶ್ಚರ್ಯದಿಂದ ಕೇಳಿದೆ. "ನನ್ನದು ಏನಾದರೂ ಸಾಮಾನಿದ್ದರೆ ಹಿಂದಿನಿಂದ ಕಳಿಸಿಕೊಡಿ, ನಮ್ಮೂರಿಗೆ. ನಾನು ಹೋಗಿಬಿಡುತ್ತೇನೆ!" ಎಂದು ಬಾಗಿಲ ಕಡೆ ಹೊರಟೇಬಿಟ್ಟರು.

"ಅದೇಕೆ? 'ವ್ಹೈ' ದಯಮಾಡಿ ಹೇಳಬಾರದೆ? ಟೆಲಿಗ್ರಾಂ ಯಾವಾಗ ಬಂತು? ಏನು ಕತೆ?" ಬೇಡಿಕೊಂಡೆ ನಾನು.

"ನಾನು ಗುಜರಾತಿಗೆ ಓಡುತ್ತೇನೆ. ನಿಮ್ಮ ಕರ್ನಾಟಕದಲ್ಲಿ ಇದ್ದರೆ ಖಂಡಿತ ನನಗೂ ಇಂಗ್ಲೀಷು ಕಟ್ಟೆ ಹಿಡಿಯುತ್ತೆ! ಈಗ ತಿಂಗಳಿಂದ ಕನಸಿನಲ್ಲಿ ಇಂಗ್ಲೀಷು ದೆವ್ವಗಳು ಕಾಣಿಸಿಕೊಳ್ಳುತ್ತಿವೆ! ಇಲ್ಲ, ನಾನು ಹೋಗಲೇ ಬೇಕು! ದಯಮಾಡಿ ಕಳಿಸಿಕೊಡಿ ಸಾವುಕಾರ! ಒಂದು ಅರೆಗಳಿಗೆ ನಾನಿಲ್ಲಿ ನಿಲ್ಲಲಾರೆ! ಉಹು, ಸಾಧ್ಯವೇ ಇಲ್ಲ!"

"ಇನ್ನು ಮೇಲೆ ಕರ್ನಾಟಕದ ವಿಷಯ ಎತ್ತುವುದಿಲ್ಲ; ದಯ ಮಾಡಿ ಹೋಗಬೇಡಿ! ಪರೀಕ್ಷೆ ತಿಂಗಳು ಮಾತ್ರ ಇದೆ. ಮುಗಿಸಿ ಕೊಂಡು ಹೋಗಿ. ಅಲ್ಲದೆ ಕರ್ನಾಟಕ ಕಲಾಸೌಂದರ್ಯ ನೋಡಬೇಕು ನೀವು!" ಎಂದು ದಮ್ಮಯ್ಯ ಗುಡ್ಡೆ ಹಾಕಿ ನಿಲ್ಲಿಸಿಕೊಂಡು, ವಿಜಯ-ನಗರ, ಹಳೇಬೀಡು, ಬೇಲೂರು, ಶ್ರವಣಬೆಳಗೊಳ, ಸೋಮನಾಥಪುರ, ಜೋಗ್ ಜಲಪಾತ, ಮುಂತಾದುವುಗಳ ವಿಷಯ ಹೇಳಿದೆ. ಆಗ ಸಮಾಧಾನವಾಯಿತು ಅವರಿಗೆ.

ಅಂತೂ ಕರ್ನಾಟಕದಲ್ಲಿರುವ ಸಾಹಸ ಮಾಡಿದರು.

ಸೋಮಾರಿಯ ಹಾಡು

ಶ್ರೀ. ಜಿ. ವಿ. ಕಟ್ಟಿ ವಕೀಲರು, ಬೆಳಗಾಂವಿ

(ಸೋಮಾರಿಯೊಬ್ಬ ಸಂಜೆ–ಮುಂಜಾವಿನಲ್ಲಿ ಹೇಳಬೇಕಾದ ಪ್ರಾರ್ಥನಾಗೀತವಿದು.)

ಪಲ್ಲವಿ

ಉಳಿದವರನ್ ಬೇಕಾದ್ರೆ ಹೆಣಬೀಳ ದಣಿಸು!
ಉಳಿಸು ನನ್ ಮೈ ಮಾತ್ರ ಕೂತಲ್ಲೇ ಉಣಿಸು!

೧

ಗಡಿಯಾರದ ಕೈಯಂತೆ ದುಡಿಯುವನ ಬಾಳು,
ಮಡಿವಾಳನಾ ಕತ್ತೆಗಿಂತಲೂ ಕೀಳು!

೨

ಕೋಳಿ ಕೂಗದ ಮುನ್ನ ಏಳುವಾ ಜನರು
ಏಳೇಳು ಜನ್ಮದಲಿ ಕೋಳಿಯಾಗುವರು!

೩

ಹಣ್ಣು ತರುವವನು ಭಕ್ತ ನಡೆದು ಹರದಾರಿ,
ನೈವೇದ್ಯ ನುಂಗುವನು ನಮ್ಮ ಪೂಜಾರಿ!

೪

ಜೇನ ಹುಳು ದುಡಿ-ದುಡಿದು ಪಡೆಯುವುದು ಸಾವು,
ಜೇನುತುಪ್ಪವ ತಿಂದು ತೇಗುತಿವು ನಾವು!

೫

ದುಡಿವ ಒಕ್ಕೈತನಿಗೆ ಸಾಲ ಉಪವಾಸ—
ದುಡಿಯದಾ ದೇಸಾಯಿಗರಮನೆಯ ವಾಸ!

೬

ಶ್ರಮವಿಲ್ಲದೆಯೆ ಸಿರಿಯ ನೀಡು ನೀ ದೇವಾ,
ಶ್ರಮಪಟ್ಟು ಸಾಯುವುದು ಬೇಡ ಮಾದೇವಾ!

ಸಾಹಿತ್ಯ ವಿಹಾರ

ಆಕ್ಷೇಪಣೆಗೆ ಸಮಾಧಾನ, ಜನಪದ ಸಾಹಿತ್ಯದ ಬಗೆಗೆ ನಮ್ಮ ಕರ್ತವ್ಯ.

ಜನವರಿ ಫೆಬ್ರುವರಿ ತಿಂಗಳುಗಳಲ್ಲಿ ಪ್ರಕಟವಾದ ೧೯೪೪ರ 'ಸಾಹಿತ್ಯ ಸಿಂಹಾವಲೋಕನ'ದ ವಿಚಾರದಲ್ಲಿಯ ಪತ್ರವ್ಯವಹಾರಕ್ಕೆ ಪ್ರಾಸ್ತಾವಿಕವಾಗಿ ಜಯಂತಿಯ ಸಂಪಾದಕರು ಹೇಳಬೇಕಾದ ಸಮಾಧಾನವನ್ನು ಹೇಳಿಯೇ ಇದ್ದಾರೆ. ಅದರ ಜೊತೆಯಲ್ಲಿ ಇನ್ನೂ ಒಂದೆರಡು ಮಾತುಗಳನ್ನು ಹೇಳುವುದು ಅವಶ್ಯವಿದೆ. ಇಂದಿನ ನಮ್ಮ ಸ್ಥಿತಿಯಲ್ಲಿ—ವಿಶೇಷವಾಗಿ ಲೇಖಕರು, ಪ್ರಕಾಶಕರು ವಿಮರ್ಶಕರ ಮತ್ತು ಪತ್ರಿಕಾಕರ್ತರ ಬಗೆಯಲ್ಲಿ ತಳುವ ಅನಾಸ್ಥೆಯ ಪರಿಸ್ಥಿತಿಯಲ್ಲಿ—ಸಮಗ್ರವಾದ ವರದಿಯನ್ನು ಸಿದ್ಧಪಡಿಸುವುದು ಸಾಹಸದ ಕೆಲಸ. ವರ್ಷ ಮುಗಿದು ಒಂದೆರಡು ತಿಂಗಳುಗಳಲ್ಲಿಯೆ ಸಿದ್ಧಪಡಿಸುವುದಂತೂ ಅಸಾಧ್ಯವೇ. ಅದರಲ್ಲಿಯೂ ಈ ರೀತಿಯ ಸಮಾಲೋಚನೆ ಕನ್ನಡಕ್ಕೆ ಹೊಸದು. ಅದನ್ನು ನಡಸುವವರು ಸರ್ವಜ್ಞರಲ್ಲ. ಅದಕ್ಕೆ ಹತ್ತಿರದ ಪ್ರಕಾಶಕರ, ಲೇಖಕರ ಸಹಕಾರ ಅವಶ್ಯಕ. ನಾಲ್ಕಾರು ಪ್ರಕಾಶಕರಿಗೆ ಈ ಬಗೆಯಲ್ಲಿ ಪತ್ರ ಬರೆದರೆ ಉತ್ತರ ಬರೆಯುವ ಸೌಜನ್ಯವನ್ನು ತೋರಿಸುವುದಿಲ್ಲ. ಆದುದರಿಂದ ನನ್ನ ಸಿಂಹಾವಲೋಕನದಲ್ಲಿಯ ಕೊರತೆಗಳನ್ನು ಬೆಳಕಿಗೆ ತಂದು ನನ್ನ ಕೆಲಸಕ್ಕೆ ಸಹಕಾರ ನೀಡಿದ ಶ್ರೀ. ಮೋಪುಂಡಿ ಮಲ್ಲಾರಿಯವರಿಗೂ ಶ್ರೀ. ಕುಲಕರ್ಣಿ ದತ್ತರಾಯರಿಗೂ ಅಭಿನಂದನೆಗಳು. ನನ್ನ ಸಿಂಹಾವಲೋಕನ ಹೆಚ್ಚಾಗಿ ಲಲಿತ ಸಾಹಿತ್ಯಕ್ಕೆ ಸಂಬಂಧಿಸಿದ್ದು. ಅದರಲ್ಲಿಯೂ ಅನುವಾದ–ಪುನರ್ಮುದ್ರಣಗಳಿಗಿಂತ ಹೆಚ್ಚಾದ ಪ್ರಾಶಸ್ತ್ಯ ಸ್ವತಂತ್ರ ಕೃತಿಗಳಿಗೆ ಸಲ್ಲಬೇಕಾದದ್ದು. ಆದಕಾರಣ ಅನುವಾದ-ಪುನರ್ಮುದ್ರಣಗಳ ಪಟ್ಟಿಯನ್ನು ಇನ್ನಷ್ಟು ಬೆಳೆಯಿಸಲು ನಾನು ಬಯಸಲಿಲ್ಲ. ಸ್ವತಂತ್ರ ಕೃತಿಗಳಿಗಿಂತ ಅನುವಾದಗಳು ಹೆಚ್ಚಾಗಿದ್ದುದನ್ನೂ, ಪೇಟೆಯಲ್ಲಿಲ್ಲದ ಪುಸ್ತಕಗಳ ಪುನರ್ಮುದ್ರಣದ ಪ್ರಸಂಗವನ್ನೂ ಪ್ರಸ್ತಾಪಿಸಿದ್ದೇನೆ. ಆದುದರಿಂದ ಲಲಿತ ಸಾಹಿತ್ಯದಲ್ಲಿಯ ಸ್ವತಂತ್ರಕೃತಿಗಳ ಪ್ರಮಾಣವನ್ನೂ ಅದರಲ್ಲಿಯ ಹೆಚ್ಚು-ಕಡಿಮೆಗಳನ್ನೂ ತೋರಿಸುವುದೇ ಒಂದು ಮುಖ್ಯ ಉದ್ದೇಶವಾಗಿದ್ದಾಗ, ಅನುವಾದ-ಪುನರ್ಮುದ್ರಣಗಳನ್ನು ನಿದರ್ಶನರೂಪವಾಗಿ ಹೆಸರಿಸುವುದೇ ಯೋಗ್ಯವಲ್ಲದೆ, ಸಮಗ್ರತೆಗೆ ಇನ್ನೆಲ್ಲಿಯೋ ಇರಬೇಕಾದ ಮಹತ್ತ್ವ ಇಲ್ಲಿ ಇರಬೇಕಾಗಿಲ್ಲ. ಕೆಲವಾರು ಅನುವಾದಗಳನ್ನು ಪುನರ್ಮುದ್ರಣಗಳನ್ನು ಬಿಟ್ಟುಕೊಟ್ಟಾಗ, ಈ ವಿಚಾರ ನನ್ನಲ್ಲಿ ಇರದೆ ಇರಲಿಲ್ಲ.

ಇನ್ನುಳಿದ "೩೦ ಸ್ವತಂತ್ರ ಕೃತಿ"ಗಳನ್ನು ಮೂರು ರೀತಿ ವಿಭಾಗಿಸಬಹುದು. (೧) ಕಲವು ಗಾತ್ರದಲ್ಲಿ ತೀರ ಚಿಕ್ಕವು. ವಿಷಯ ವಿವೇಚನೆಯಲ್ಲಿಯಾದರೂ ಯಾವ ವಿಶೇಷವೂ ಇಲ್ಲ. (೨) ಕೆಲವು ನಾವು ಇಲ್ಲಿ ಗಮನಿಸಬೇಕಾಗಿದ್ದ ಲಲಿತಲೇಖನಕ್ಕೆ ಹೊರಪಟ್ಟವುಗಳು (೩) ಇನ್ನೂ ಕೆಲವುಗಳ ಪ್ರಕಾಶನ ೧೯೪೪ರಲ್ಲಿ ಆಗಿರಬಹುದಾಗಿದ್ದರೂ, ಹೊಸ ವರ್ಷದಲ್ಲಿಯ ೪-೫ ವಾರಗಳ ಅವಧಿಯನಂತರವೇ ಓದುಗರ ಕೈಸೇರಿದಂಥವುಗಳು. ಈ ರೀತಿ ನೋಡಿದರೆ ನನ್ನ ಎಣಿಕೆಯಲ್ಲಿ ಬರಬೇಕಾಗಿದ್ದು ಬಾರದೆ ಇದ್ದವುಗಳ ಸಂಖ್ಯೆ ತೀರ ಸಣ್ಣದಾಗುವುದೆಂಬುದರಲ್ಲಿ ಸಂದೇಹವಿಲ್ಲ. ಉದಾಹರಣೆಗೆಂದು ಒಂದೆರಡನ್ನು ಹೇಳಬಹುದಾದರೆ, "ಮನೆಗೆ ಬಂದ ಮಹಾಲಕ್ಷ್ಮಿ," "ಮಲಮಗಳು" ಮತ್ತು "ನಟ ಸಾರ್ವಭೌಮ" ಈ ಕಾದಂಬರಿಗಳಲ್ಲಿ ಯಾವುದೂ ೧೯೪೪ರಲ್ಲಿ ಓದುಗರಿಗೆ ಸಿಕ್ಕಿಲ್ಲವೆಂದು ಖಂಡಿತವಾಗಿ ಹೇಳಬಹುದು. ಬಹುಮಟ್ಟಿಗೆ ಈ ವರೆಗಿನ ಆತ್ಮ ಸಮರ್ಥನೆ ಯಥಾರ್ಥವಾದರೂ, ಮೊದಲಿಗೆಯೇ ಹೇಳಿದಂತೆ ಕೆಲವಾರು ಕೃತಿಗಳು ಮರೆತು ಹೋಗಿರುವುದು ಸಾಧ್ಯ. ಆದರೆ ಲಲಿತಸಾಹಿತ್ಯದ ದೃಷ್ಟಿಯಿಂದ ನನ್ನ ಸಿಂಹಾವಲೋಕನದಲ್ಲಿ ಮರೆತುಹೋದುವುಗಳೆಂದು ಈಗ ತೋರಿಸಿದ ಪ್ರಕಟನೆಗಳ ಪಟ್ಟಿಯಲ್ಲಿ ಕೆಲವು ಕಾದಂಬರಿಗಳನ್ನು ಮತ್ತು ಸಣ್ಣಕತೆಗಳನ್ನು ಹೊರತುಪಡಿಸಿದರೆ, ಉಳಿದುವುಗಳು ಸಿಂಹಾವಲೋಕನದಲ್ಲಿ ಬಂದುವುಗಳಷ್ಟು ಮಹತ್ತ್ವದ್ದಾಗಿವೆಯೋ ಹೇಗೆ ಎಂಬ ಪ್ರಶ್ನೆಯನ್ನು ವಾಚಕರು ಬಿಡಿಸಿಕೊಳ್ಳಬೇಕು.

ನನ್ನ ಸಿಂಹಾವಲೋಕನದಲ್ಲಿ ಯಾವ ಮಾತನ್ನೂ "ಎದೆತಟ್ಟಿ' ಹೇಳಿಲ್ಲ. ಬರೆವಣಿಗೆಯಲ್ಲಿ ವಿನಯವಿಲ್ಲವೆಂದು ಹೇಳಬಹುದಾದ ರೀತಿಯಲ್ಲಿ ಬರೆದಿಲ್ಲವೆಂದೂ ಹೇಳಬಹುದು. ಹೀಗಿದ್ದರೂ ತಮ್ಮ ಪತ್ರದಲ್ಲಿ ರೀತಿಯ ವಿನಯವನ್ನು ನನಗೆ ತಿಳಿಹೇಳುವ ಅನಾವಶ್ಯಕವಾದ ಹೊಣೆಯನ್ನು ತಮ್ಮ ಮೇಲೆ ತೆಗೆದುಕೊಂಡಿದ್ದಾರೆ. ಹೀಗೆ ಹೇಳಿದ್ದಕ್ಕಾಗಿ ಅವರಾದರೂ ತಪ್ಪು ತಿಳಿದುಕೊಳ್ಳಲಾರರೆಂದು ಆಶಿಸಿದ್ದೇನೆ.

× × × ×

ಸಾಹಿತ್ಯವೆಂದಕೂಡಲೆ ನಮ್ಮೆಲ್ಲರ ಕಣ್ಣೆದುರಿಗೆ ಸುಳಿಯುವುವು ಕಥೆ, ಕಾದಂಬರಿ, ಕವನ, ನಾಟಕ. ಪುಸ್ತಕಗಳನ್ನು ಓದಿಕೊಂಡು ಅರ್ಥವಾಗಿಯೋ, ಅರ್ಥವಾಗದೆಯೋ ನಿರರ್ಥಕವಾದ ವಾದವಿವಾದಗಳನ್ನು ಹೂಡುವ ನಾವು, ಓದುಬರೆಯುವುದನ್ನು ತಿಳಿಯದ ಹಳ್ಳಿಗರ ಬದುಕಿನಲ್ಲಿಯೂ ಕೂಡ ಸಾಹಿತ್ಯಸೃಷ್ಟಿಗೆ, ಅದರ ಸೊಬಗನ್ನು ಸವಿಯುವ ಹೃದಯಕ್ಕೆ, ಆಸ್ಪದವಿರುವುದೆಂಬುದನ್ನು ನಾವು ಮರೆತಿದ್ದೇವೆ. ಇತ್ತೀಚೆಗೆ ವಿಶೇಷವಾಗಿ ಮರೆಯುತ್ತಿದ್ದೇವೆ. ಇಂದಿನ ಸಾಹಿತ್ಯ ನಿಜವಾಗಿಯೂ ಒಂದು ನವಚೇತನೆಯಿಂದ ಹೊರಹೊಮ್ಮಲಿಕ್ಕೆ ಮೊದಲು ಮಾಡಿದಾಗ, ಈ ಜನಪದ ಸಾಹಿತ್ಯಕ್ಕೆ ಒಂದು

ಕರ್ನಾಟಕ ಉಳಿದು, ಕನ್ನಡಿಗರು ಮಾನಸನ್ಮಾನದಿಂದ ಬಾಳಬೇಕೆಂಬ ಅಪೇಕ್ಷೆ ಇದ್ದಲ್ಲಿ,

ನಾಲ್ಕಾಣೆ ಕೊಟ್ಟು

ಏಕೀಕರಣ ಸಂಘದ ಸದಸ್ಯರಾಗಿರಿ!

ಶೇಲಧಾ

ಎಂಟೀಮಲೇರಿಯಾ ವನಸ್ಪತಿ ಪಿಲ್ಸ್.

ಎಲ್ಲ ತರದ ಜ್ವರ, ಜ್ವರಗಡ್ಡೆ, ತಜ್ಜನ್ಯ ಅಶಕ್ತತೆಯು ಮೇಲೆ ರಾಮಬಾಣ! ಲಿವರ್, ಹೊಟ್ಟೆನೋವು, ಮಲಬದ್ಧತೆ ಸುಧಾರಿಸಿ ಶಕ್ತಿ ಬೆಳೆಯಿಸುತ್ತದೆ! ಕ್ವಿನ್ಯಾನ್ ಬದಲು ವೈದ್ಯ-ಡಾಕ್ಟರರು ದವಾಖಾನೆಗಳಲ್ಲಿ ವಾಪರಿಸುವರು. ೧೦೦೦ ಗುಳಿಗೆಗಳಿಗೆ ರೂ. ೧೫; ೯೦ಕ್ಕೆ ೧-೧೪-೦. ಔಷಧದಲ್ಲಿ ಗುಣವಿಲ್ಲವೆಂದು ಸಿದ್ಧ ಮಾಡಿದವರಿಗೆ ೧೦೦೦ ರೂಪಾಯಿ ಬಹುಮಾನ. ಪ್ರತಿ ಊರಲ್ಲಿಯೂ ಮಾರುವ ಏಜಂಟರು ಬೇಕು.

ರೇಲಧಾ ಕೆಮಿಕಲ್ ಕಂಪನಿ, ಸಿರಸಿ, ಉ. ಕ.

ಸೋಲ್ ಏಜೆಂಟರು:—

ಎಸ್. ಎಲ್. (ಅಪ್ಪುರಾವ) ಧಾರಪ್ಪಾ

ಬಡವರ ಔಷಧಿ ಸರ್ವಿಸ್, ಸಿರಸಿ, ಉ. ಕಾನಡಾ

ಒಳ್ಳೆಯ "ಹಂಗಾಮು" ಬಂದಿತ್ತು. ಆದರೆ ಕಳೆದ ಹತ್ತು ವರ್ಷಗಳಲ್ಲಿ ಒಂದು ಕಾಲ ತನ್ನೆಡೆಗೆ ಸೆಳೆದುಕೊಂಡ ಆಸಕ್ತಿಯನ್ನೂ ಅಭಿಮಾನ ದೃಷ್ಟಿಯನ್ನೂ ಅದು ಕಳೆದುಕೊಂಡಿದೆ ಎಂದೇ ಹೇಳಬಹುದು. ಇದರಿಂದ ಕನ್ನಡಕ್ಕೆ ಸಂಭವಿಸುತ್ತಿರುವ ಹಾನಿ ಅಪಾರವಾದುದು. ಮಿಕ್ಕ ಪ್ರಾಂತಗಳಲ್ಲಿಯಂತೆ ಹಳ್ಳಿಯ ಹಾಡುಗಳನ್ನು ಲಾವಣಿಗಳನ್ನು, ಹಳ್ಳಿಗಳಲ್ಲಿಯೇ ವಿಶೇಷವಾಗಿ ಪ್ರಚುರವಾಗಿದ್ದ ಜೀವಿತದ ಅನೇಕ ಸಂದರ್ಭಗಳಲ್ಲಿ ಹೊರಬರುವ ಸಾಹಿತ್ಯ ಪ್ರಕಾರಗಳನ್ನು ನಮ್ಮಲ್ಲಿ ಇಂದು ಒಂದು ಸುಸಂಘಟಿತವಾದ ರೀತಿಯಲ್ಲಿ ಕಲೆ ಹಾಕಿ ಪ್ರಸಿದ್ಧಿಸುವ ಕೆಲಸ ನಡೆದಿಲ್ಲ. ಕೆಲವೊಂದು ಹಾಡುಗಳು ನಾಲ್ಕಾರು ಪುಸ್ತಕಗಳಲ್ಲಿ ಪ್ರಸಿದ್ಧವಾಗಿವೆ. ಅಷ್ಟೇ. ಈ ಜನಪದ ಸಾಹಿತ್ಯಕ್ಕೆ ಕೆಲವಾರು ಪುಟಗಳನ್ನು ಕನ್ನಡ ಪತ್ರಿಕೆಗಳು ಮೀಸಲಾಗಿರಿಸಿ ಕಾಲವೊಂದಿತ್ತು. ಇಂದು ಕಾಣಬರುವುದು ಕೇವಲ ಒಂದು ನಿರಭಿಮಾನದ ಅನಾಸ್ಥೆ. ಲಿಪಿಯ ಸಂಬಂಧವಿಲ್ಲದೆ ನಾಲಗೆಯಿಂದ ನಾಲಗೆಗೆ ನಡೆದು ಹೋಗುವ ಈ ಸಾಹಿತ್ಯಸಂಪ್ರದಾಯವನ್ನು, ನಾವು ಪ್ರಯತ್ನದಿಂದ ಉಳಿಸಿಕೊಳ್ಳಲಿಕ್ಕೆ ಯತ್ನಿಸದಿದ್ದರೆ, ಕಾಲಾಂತರದಲ್ಲಿ ಈ ಹಳ್ಳಿಯ ಚೊಕ್ಕ ಚಿನ್ನದಂತಹ ಸಾಹಿತ್ಯಕ್ಕೆ ನಾವು ಎರವಾಗಬೇಕಾದೀತು. ಈಗಾಗಲೇ ನಾವು ಎಷ್ಟನ್ನು ಕಳೆದುಕೊಂಡಿದ್ದೇವೆಯೋ ಯಾರು ಬಲ್ಲರು? ನಮ್ಮ ಸಾವಿರಾರು ಹಳ್ಳಿಗಳಲ್ಲಿ ಕಷ್ಟಗಳ ಕಾರ್ಮೋಡಗಳು ಕವಿಯುತ್ತಿದ್ದಾಗ, ಆ ಕಷ್ಟಗಳನ್ನು ತಪ್ಪಿಸಿಕೊಳ್ಳುವುದಕ್ಕಾಗಿಯೋ, ಪಟ್ಟಣಗಳ ಜೀವನದಲ್ಲಿ ಸುಖವಿದೆಯೆಂಬ ಒಂದು ಭ್ರಮೆಯನ್ನು ಬೆನ್ನಟ್ಟಿಯೊ, ಅಥವಾ ಅಚಿಂತ್ಯವಾದ ಕಾಲಶಕ್ತಿಯೊಂದನ್ನನುಸರಿಸಿಯೊ, ಹಳ್ಳಿಯ ಜನ ಇಂತು ಹಳ್ಳಿಗಳಿಂದ ಹೊರಬಿದ್ದು, ಶತಮಾನಗಳನು ಮೆಟ್ಟಿ ನಿಂತ ಜೀವನಪರಂಪರೆಯೊಂದನ್ನು ನಾಶಗೊಳಿಸುತ್ತಿದ್ದಾರೆ ಅದರ ಜೊತೆಯಲ್ಲಿ ಅಲ್ಲಿಯ ಸಾಹಿತ್ಯ ಯಾವುದೋ ಒಂದು ದಾರಿಯಲ್ಲಿ ಕಣ್ಮರೆಯಾಗಹತ್ತಿದೆ. ತುಂಬಿದ ಹೃದಯ ಸಾಹಿತ್ಯರಸಕ್ಕೊಂದು ಸೆಲೆಯೆಂಬ ಮಾತು ನಿಜವಾಗಿದ್ದರೆ, ಜನಪದ ಸಾಹಿತ್ಯದಲ್ಲಿಯಷ್ಟರಮಟ್ಟಿಗೆ ನಿರ್ಮಲವಾದ, ನಿಷ್ಕಲ್ಮಷವಾದ ಸಾಹಿತ್ಯ ಸ್ಫೂರ್ತಿಯನ್ನು ನಾವು ಇನ್ನೆಲ್ಲಿಯೂ ಕಾಣಲಾರೆವು. ಅದು ಒಂದು ಸಂಸ್ಕೃತಿಯ ಪ್ರತೀಕವಲ್ಲದೆ, ಮಾನವನ ಅನುಭವಪ್ರಪಂಚದಲ್ಲಿ ಸಾಹಿತ್ಯವೆಂಬುದೇಕೆ ಹುಟ್ಟಿಕೊಂಡಿತು, ಯಾವ ರೀತಿಯಲ್ಲಿ ಹುಟ್ಟಿತು / ಯಾವ ಸಾವಿರಾರು ರೀತಿಯಲ್ಲಿ ಹೊಸತಾಗಿ ಹರಿಯಿತೆಂಬುದನ್ನು ತೋರಿಸುವ ಮೂಲ ಮೂರ್ತಸ್ವರೂಪವಾಗಿದೆ. ಸಾಹಿತ್ಯ ಬಾಳಚಿತ್ರವಾಗಿರಬೇಕು, ಆದರಿಂದ ಬಾಳ್ನೀತಿ ಬೆಳಗಬೇಕು ಇತ್ಯಾದಿಯಾಗಿ ಪ್ರಗತಿ-ವಿಗತಿಗಳ ಮಾತಿನಲ್ಲಿ ಹೊತ್ತುಗಳೆಯುತ್ತಿರುವ ನಾವು, ಬಾಳತಿದಿಯಲ್ಲಿ ಬೆಂದು ಬಂಗಾರವಾಗಿ ಬಂದಿರುವ ಸಾಹಿತ್ಯದ ಬಗ್ಗೆ ಇಂದು ಏನು ಮಾಡುತ್ತಿದ್ದೇವೆ? ಕಷ್ಟ-ಕಾರ್ಪಣ್ಯಗಳ ಜೀವನದಲ್ಲಿಯ ಆಸೆ, ಬಯಕೆ ನೆಚ್ಚು, ಕೆಚ್ಚು, ಭಯ, ನಯ, ರಾಗ, ದ್ವೇಷ ಇವೆಲ್ಲವುಗಳನ್ನೂ ಸರಳವಾಗಿ, ನೇರವಾಗಿ ಸನಾತನ ಯಾವ ಆಡಂಬರವೂ ಇಲ್ಲದೆ, ಹಾಡಾಗಿ ಹರಿಸುವ ಈ ಇಡೀ ಸಾಹಿತ್ಯ ಪ್ರಪಂಚವನ್ನೇ ನಾವು ಪಟ್ಟಣಿಗರ ಕನಸಿನ ಸಾಹಿತ್ಯದ ಹೆಮ್ಮೆಯಲ್ಲಿ ಮರೆಯುತ್ತಿದ್ದೇವೆ. ನಾವಿಂದು ಈ ಸಾಹಿತ್ಯ ಪ್ರಕಾರಕ್ಕೆ ಸಲ್ಲಿಸುತ್ತಿರುವ ಕಾಣಿಕೆಯೆಂದರೆ ಆಗೀಗ ಜನಪದ ಗೋಷ್ಠಿಗಳನ್ನೇರ್ಪಡಿಸುವುದು. 'ನಮ್ಮ ಜನಪದ ಸಾಹಿತ್ಯ ವಿಶಾಲವಾದುದು, ಸುಂದರವಾದುದು, ಇಂಥದು ಅಂಥದು' ಎಂದು ನಾವು ಪುಕ್ಕಟ್ಟೆಯಾಗಿ ಸಿಗುವ ವಿಶೇಷಣಗಳನ್ನೆಸೆದು, ನಮ್ಮ ಮಟ್ಟಿಗೆ ನಾವು ದೂರವಾಗಿಯೇ ಉಳಿಯುತ್ತಿದ್ದೇವಲ್ಲದೆ, ಅವುಗಳನ್ನು ಕಲೆಹಾಕಿ, ಪ್ರಸಿದ್ಧಿಸಿ, ಅದರ ಸೊಬಗನ್ನೂ ಸತ್ವವನ್ನೂ ನಮ್ಮ ಜನರೆದುರಿಗಿಟ್ಟು ನಮ್ಮ ಹಳ್ಳಿಯವನ ವಿಚಾರದಲ್ಲಿ ನಾವಿಟ್ಟುಕೊಳ್ಳಬೇಕಾಗಿದ್ದ ಆದರವನ್ನೂ ಔದಾರ್ಯವನ್ನೂ ಬೆಳೆಸಿಕೊಂಡು ಬರುತ್ತಿಲ್ಲ. ಈ ಸಲ ರಬಕವಿಯಲ್ಲಿಯ ಜನಪದಗೋಷ್ಠಿ ಒಳ್ಳೇ ಸೊಗಸಾಯಿತೆಂದು ಕೇಳಿದೆ. ಈ ಸೊಗಸಿನ ಕಾರ್ಯಕ್ರಮವಾದ ಕಾರ್ಯಕ್ಕೆ ಸ್ಫೂರ್ತಿಯನ್ನು ಕೊಟ್ಟು ಮಾಯವಾಗುತ್ತಿದ್ದ ಈ ಸೊಗಸಿನ ಸಂಪ್ರದಾಯವನ್ನು ಉಳಿಸಿಕೊಳ್ಳುವ ಕೆಲಸವನ್ನೂ ಅವಶ್ಯವಾದ ತ್ವರೆಯಿಂದ ಮೊದಲು ಮಾಡಲಿ ಎಂದು ಕನ್ನಡಿಗರಲ್ಲಿ ಕೇಳಿಕೊಳ್ಳುವೆ—

೨-೩—೧೯೪೫

ಸೊಲ್ಲಾಪುರದಲ್ಲಿ ನಮ್ಮ ಏಜಂಟರು:

ಶ್ರೀ. ಎನ್. ಎಚ್. ದೇಶಪಾಂಡೆ

ನ್ಯೂಜ್ ಏಜನ್ಸಿ

ಝುಂಬ್ರೇವಾಡಾ, ಸೌಥ್ ಕಸ್ಬಾ, ಮನೆ ನಂ. ೫೩೬.

ಸಾದರ ಸ್ವೀಕಾರ

●

೧೨೩. **ಬೀಸಣಿಕೆ** (ಗದ್ಯಪದ್ಯ ಸಂಗ್ರಹ). ಬರೆದವರು ದಿವಂಗತ ಜಿ. ಎಸ್. ಶಾಸ್ತ್ರಿ, ಹೊನ್ನಾವರ. ಪ್ರಕಾಶಕರು ಶ್ರೀ. ಎಸ್. ಡಿ. ಕುಲಕರ್ಣಿ ಬಿ. ಎ. (ಆನರ್ಸ್) ಪರ್ಣಕುಟಿ, ಹೊನ್ನಾವರ. ಕ್ರಾ. ಅ. ೩೭ ಪುಟಗಳು; ಬೆಲೆ ೦-೮-೦

ಮುಗುಳಾಗಿರುವಾಗಲೆ ಮುದುಡಿಹೋದ ಕಿರಿಯ ಸಾಹಿತ್ಯಿಕನೋರ್ವನ ಕೃತಿಯ ಎಸಳುಗಳು ಇದರಲ್ಲಿವೆ: ೩ ಪ್ರಬಂಧಗಳು, ೨ ಹಾಡುಗಳು, ಎರಡು ಕತೆಗಳು ಇವುಗಳನ್ನು ಓದಿದವರೆಲ್ಲ, ಮುನ್ನುಡಿಯಲ್ಲಿ ಶ್ರೀ. ಮು. ಗ. ಶೆಟ್ಟಿಯವರು ಹೇಳಿದಂತೆ 'ಹೀಟಿನಲ್ಲಿಯೆ ಇಷ್ಟು ಜನಪ್ರಿಯನಾದವನಿನ್ನು ಇಲ್ಲವಲ್ಲ.....' ಎಂದು ನಿಟ್ಟುಸಿರಿನೊಂದಿಗೆ ನುಡಿಯದಿರರು. ಹೊನ್ನಾವರದ 'ಪರ್ಣಕುಟಿ'ಯ ಪ್ರಕಟನೆಗಳು ಹೆಚ್ಚು ಹೆಚ್ಚಾಗಿ ಹೊರಟು ಜನಪ್ರಿಯವಾಗಲಿ!

೧೨೪. **ಅಖಿಲ ಮೈಸೂರು ಪತ್ರಿಕೋದ್ಯೋಗಿಗಳ ಸಮ್ಮೇಳನ.** ಅಧ್ಯಕ್ಷರಾದ ಶ್ರೀಮಾನ್ ಪಿ. ಆರ್ ರಾಮಯ್ಯನವರ ಭಾಷಣ ಡೆ. ಅ. ೨೦ ಪುಟಗಳು.

ಈ ಸಮ್ಮೇಳನದ ೩ನೆಯ ಅಧಿವೇಶನವು ತುಮಕೂರು ನಗರದಲ್ಲಿ ತಾ. ೧೬-೧-೪೩ನೆಯ ದಿನ ಸೇರಿದ್ದಿತು. ಜನಸೇವೆ, ಪ್ರಜೆಗಳ ಹಕ್ಕು-ಬಾಧ್ಯತೆಗಳ ಸಂರಕ್ಷಣೆ, ಸಮಾಜ ಶಿಕ್ಷಣ ಮೊದಲಾದುವುಗಳ ಬಗೆಗೆ ಜೀವನವನ್ನೆ ಧಾರೆಯೆರೆದ ಶ್ರೀ. ಪಿ. ಆರ್. ರಾಮಯ್ಯನವರು, ಪತ್ರಿಕೋದ್ಯೋಗಿಗಳಾಗಬೇಕೆನ್ನುವವರಿಗೆಲ್ಲ ತಮ್ಮ ಅನುಭವದ ಮಾತುಗಳನ್ನು ಸಾರಿಸಾರಿ ಹೇಳಿದ್ದಾರೆ 'ಪತ್ರಿಕೋದ್ಯೋಗಿಯಾಗಲು ಅರ್ಹತೆ', ಪತ್ರಿಕೆಗಳ ಭಾಷೆ' 'ಪತ್ರಿಕೋದ್ಯೋಗಿ ಸಂಘಗಳು' 'ಪತ್ರಿಕೋದ್ಯೋಗಿವೃತ್ತಿಯ ಭವಿಷ್ಯ' ಮೊದಲಾದ ವಿಷಯಗಳನ್ನು ಕುರಿತು ಹೇಳಿರುವ ಮಾತುಗಳು ವಿಚಾರಪೂರ್ಣವಾಗಿವೆ.

೧೨೫. **ಆಹಾರ** (ಜೀವನ ಸ್ವಾಸ್ಥ್ಯ ವಿಚಾರ ಬೋಧಕ ಪ್ರಬಂಧ) ಬರೆದವರು ಶ್ರೀ. ಜೆ. ಆರ್. ಲಕ್ಷ್ಮಣರಾವ್ ಎಂ. ಎಸ್. ಸಿ. ಮೈಸೂರು ಅವರು. ಮೈಸೂರು ವಿ. ವಿ. ನಿಲಯದ ಪ್ರಚಾರೋಪನ್ಯಾಸ ಮಾಲೆಯ ೪೫ನೆಯ ಪ್ರಕಟನೆ. ಫೂ. ಅ. ೮೦ ಪುಟಗಳು; ಬೆಲೆ. ೦-೩-೦

ಸತ್ತ್ವಹೀನವಾದ—ಆರೋಗ್ಯಹೀನತೆಗೆ ಕಾರಣವಾಗುವಂತಹ—ಅಶಾಸ್ತ್ರೀಯ ಆಹಾರವನ್ನು ಉಣ್ಣುವವರೆಂದರೆ ಇಂದು ಹಿಂದೀಯರಲ್ಲದೆ ಇನ್ನಾರೂ ಇಲ್ಲವೆಂದು ಹೇಳಿದರೆ ಅತಿಶಯೋಕ್ತಿಯೆನಿಸುವಂತಿಲ್ಲ. ಬಡವನಿಗೆ ಸತ್ತ್ವಯುಕ್ತ ಆಹಾರ ಸಿಕ್ಕುವುದಿಲ್ಲ; ಹಣಗಾರನಿಗೆ ನಾಲಗೆಯ ರುಚಿ, ಆರೋಗ್ಯಕರವಾದ ಆಹಾರವನ್ನು ತಿನ್ನಗೊಡುವುದಿಲ್ಲ. ಈ ಆಹಾರದೋಷವೇ ಇಂದಿನ ಹಿಂದೀಯರ ಹೇಡಿತನ, ಕೆಲಸಗೇಡಿತನ, ತಿಳಿಗೇಡಿತನಗಳಿಗೆ ಕಾರಣವೆಂದು ಬಲ್ಲವರು ಕಂಡು ಹಿಡಿದಿದ್ದಾರೆ. ಎಂತೆಂತಹ ಆಹಾರವನ್ನು ಹೇಗೆ ಹೇಗೆ ಉಣ್ಣಬೇಕೆಂಬುದನ್ನು ಈ ಪುಟ್ಟ ಪುಸ್ತಕ ಚನ್ನಾಗಿ ವಿವೇಚಿಸುವುದು. ಎಲ್ಲರೂ ಓದಬೇಕು.

೧೨೬. **ನವಯುಗ ಶಂಖಧ್ವನಿ** (ಕವನ ಸಂಗ್ರಹ) ಶ್ರೀಮಾನ್ ಕೆ. ಗಣಪತಿ ಭಟ್ಟರಿಂದ ರಚಿತವಾದುದು. ಪ್ರಕಾಶಕರು 'ಕುಂತಳ ಸಾಹಿತ್ಯಸೇವಾ ಕುಟೀರ' ಬಸವನ ಗುಡಿ, ಬೆಂಗಳೂರು. ಫೂ. ಕ್ರಾ. ಅ. ೨೮ ಪುಟಗಳು; ಬೆಲೆ ೦-೨-೦.

'ನವಯುಗ ಶಂಖಧ್ವನಿ'ಯು ಕನ್ನಡ ಜಗತ್ತು ಕಣ್ದೆರೆಯುವಂತೆ ಮಾಡುವ ಹೊರೆಯನ್ನು ಹೊತ್ತು ಹೊರಟಿದೆ" ಎಂದು 'ಮುನ್ನುಡಿ' ಬರೆದ 'ಸಂಸ್ಕೃತ ಕನ್ನಡ ಉಭಯ ಭಾಷಾವಿದ್ವಾನ್' ಪಂಡಿತ ರಾಜಭಟ್ಟಾಚಾರ್ಯ ಅವರು ಹೇಳಿದ್ದಾರೆ. 'ಈ ಕವನಗಳನ್ನು ಸಾಹಿತ್ಯ ಶಾಸ್ತ್ರದ ಕಟ್ಟುಗಳಿಂದ ಬಿಗಿದು ಕಟ್ಟಿಲ್ಲ' ಎಂದು ಕವಿಗಳು ಹೇಳಿದ್ದಾರೆ. ಇದರಲ್ಲಿ ೧೦ ಶಂಖಧ್ವನಿ (ಕವನ)ಗಳಿವೆ ಶಂಖಧ್ವನಿಗೂ ಒಂದು ಕಟ್ಟು ಬೇಕೇಬೇಕು ಇಲ್ಲದಿದ್ದರೆ ಇತರ ಧ್ವನಿಯೆಂಬುದು ಜನರಿಗೆ ತಿಳಿಯಬೇಕು ಹೇಗೆ?

೧೨೭. **ಭಕ್ತಿಸುಧಾಸಾರ** (ತತ್ತ್ವಪದಗಳ ಸಂಗ್ರಹ). ಶ್ರೀಘನಮಠ ಶಿವಯೋಗಿಗಳಿಂದ ವಿರಚಿತವಾದುವುಗಳನ್ನು ಪ್ರೊ. ಸಂ. ಶಿ. ಭೂಸನೂರ ಮಠ ಅವರು ಸಂಪಾದಿಸಿರುವರು. ಪ್ರಕಾಶಕರು ಶ್ರೀಮ. ನಿ. ಪ್ರ. ಮೃತ್ಯುಂಜಯ ಸ್ವಾಮಿಗಳು, ಮುರಘಾಮಠ; ಸ್ಥಾಪಕರು ಮತ್ತು ಸಂಚಾಲಕರು ಶ್ರೀಮ ನಿ. ಜ. ಮುರುಘಾರಾಜೇಂದ್ರ ಪ್ರಸಾದನಿಲಯ, ಹಾವೇರಿಪೇಟೆ, ಧಾರವಾಡ. ಶ್ರೀ ಬಾಲಲೀಲಾ ಮಹಾಂತ ಶಿವಯೋಗೀಶ್ವರ ಗ್ರಂಥಮಾಲೆಯ ೫ನೆಯ ಕುಸುಮ, ಕ್ರಾ. ಅ. ೩೮+೪೨ ಪುಟಗಳು. ಬೆಲೆ. ೧-೮-೦.

೧೨೮. **ಯಾವ ಗುರಿ? ಯಾವದಾರಿ?** (ರಾಜಕೀಯ ಮತ ಪ್ರಚಾರಾತ್ಮಕ ಪ್ರಬಂಧ) ಪ್ರಕಾಶಕರು ರ್‍ಯಾಡಿಕಲ್ ಡೆಮೊಕ್ರೆಟಿಕ್ ಪಾರ್ಟಿಯ ಪರವಾಗಿ ಶ್ರೀ. ಎಂ. ಆರ್. ನಿಲೇಕಣಿ. ಆಫೀಸ್, ಬ್ಯಾಂಕ್‌ರೋಡು ಧಾರವಾಡ ಅವರು ಫೂ. ಕ್ರಾ. ಅ. ೧೨ ಪುಟಗಳು. ಬೆಲೆ ೦-೧-೦

೧೨೯. **ಜನತೆಯ ಯೋಜನೆ** (ರಾಜಕೀಯ ಮತಪ್ರಚಾರಾತ್ಮಕ-ಕಿರುಹೊತ್ತಗೆ). ಪ್ರಕಾಶಕರು ಶ್ರೀ. ಎಂ. ಆರ್. ನಿಲೇಕಣಿ, ರ್‍ಯಾಡಿಕಲ್ ಪಾರ್ಟಿ ಆಫೀಸ್, ಬ್ಯಾಂಕ್ ರೋಡು, ಧಾರವಾಡ. ಡೆ. ಅ. ೧೨ ಪುಟಗಳು ಬೆಲೆ ೦-೨-೦

ಮೇಲಿನ ಎರಡೂ ಕಿರುಹೊತ್ತಗೆಗಳು ಕನ್ನಡದಲ್ಲಿ 'ರಾಯವಾದವನ್ನು' ತಿಳುಹಲು ಹೊರಟಿರುವವು. ಎಲ್ಲರೂ ಈ ವಿಷಯವನ್ನು ಕುರಿತು ವಿಚಾರ ಮಾಡಿ, ತಮ್ಮ ರಾಜಕೀಯ ಅಭಿಪ್ರಾಯಗಳನ್ನು ದೃಢಪಡಿಸಿಕೊಳ್ಳುವುದು ಅವಶ್ಯಕ, ಆದುದರಿಂದ ಈ ಹೊತ್ತಗೆಗಳನ್ನು ಓದಿನೋಡಬೇಕು.

೧೩೦. **ಅರುಣೋದಯ** (ಕಥಾಸಂಗ್ರಹ) ಲೇಖಕರು ಶ್ರೀಮಾನ್ ಎಸ್. ಜಿ. ನಾಯಕರು; ಸಂಪಾದಕರು ಶ್ರೀಮಾನ್ ಮ. ಸಾಂತಯ್ಯ ಭಟ್ಟರು. ಮಂಗಳೂರಿನ ಸಾಹಿತ್ಯ ಪ್ರಕಾಶನ ಸಂಘದ ಮೊದಲನೆಯ ಕಿರಣ. ಕ್ರಾ. ಅ. ೩೦ ಪುಟಗಳು. ಬೆಲೆ ೦-೬-೦.

೧೩೧. **ಚಕಮಕಿ** (ಕಥಾ ಸಂಗ್ರಹ) ಬರೆದವರು ಶ್ರೀ. ಬೇಂದ್ರೆ ಲಕ್ಷ್ಮಣರಾಯರು. ಧಾರವಾಡದ ಪ್ರತಿಭಾಗ್ರಂಥಮಾಲೆಯ ೭. ನೆಯ ಕಿರಣ. ಪ್ರಕಾಶಕರು ಶ್ರೀ. ಭಾಲಚಂದ್ರ ಘಾಣೇಕರ, ಸಮಾಜ ಪುಸ್ತಕಾಲಯ, ಧಾರವಾಡ. ಕ್ರಾ. ಅ. ೮+೧೪೪ ಪುಟಗಳು. ಬೆಲೆ ೨-೦-೦.



ಪಾಕಿಸ್ತಾನದ ಪ್ರದರ್ಶನ

ಕಳೆದ ತಿಂಗಳು ಸಿಂಧದಲ್ಲಿ ನಡೆದ ಮಂತ್ರಿಮಂಡಳದ ಬಿಕ್ಕಟ್ಟಿನ ಬಿಸಿಲು-ನೆರಳುಗಳನ್ನು ನೋಡಿದರೆ, ಕಣ್ಣಿಗೆ ಕತ್ತಲು ಬರುವಂತಿದೆ. ಸಿಂಧವು ಮುಸ್ಲಿಂಲೀಗದ ತತ್ತ್ವಕ್ಕನುಸರಿಸಿ, ಬರಬಹುದಾದ ಪಾಕಿಸ್ತಾನದ ಒಂದು ಪ್ರಾಂತ. ಜನಸಂಖ್ಯೆಯಲ್ಲಿ ಮುಸಲ್ಮಾನರ ಬಹುಮತವಿದ್ದುದೇನೋ ನಿಜ; ಆದರೆ ಆ ಬಹುಮತದ ಮುಸಲ್ಮಾನರು ಏಕಕಂಠದಿಂದ ಪಾಕಿಸ್ತಾನವನ್ನು ಬೇಡುವುದಿಲ್ಲ ಎಂಬುದನ್ನು ಮಾತ್ರ ಈ ಬಿಕ್ಕಟ್ಟುಗಳ ಅನುಭವದಿಂದ ಹೇಳಬಹುದು. ಮೊದಲ ಮಾತು: ಸಿಂಧದಲ್ಲಿ ಹಿಂದುಗಳ ಸಹಕಾರವಿಲ್ಲದೆ ಯಾವ ಮಂತ್ರಿಮಂಡಳವೂ ದಕ್ಕುವಂತಿಲ್ಲ. ಎರಡನೆಯದಾಗಿ, ಹಾಜಿ ಮೌಲಾಬಕ್ಷರಂತಹ ಮುಸಲ್ಮಾನರು ಮುಸ್ಲಿಂ ಲೀಗವನ್ನು ಎಂದೂ ಸೇರಲಿಕ್ಕಿಲ್ಲ ಎಂದು ಪ್ರತಿಜ್ಞೆಯನ್ನು ನಡೆಸುವುದು. ಮೂರನೆಯದಾಗಿ, ಮುಸ್ಲಿಂಲೀಗದ ಕೇಂದ್ರ ಅಧಿಕಾರ(High command)ವು ಲೀಗದ ತತ್ತ್ವಕ್ಕೆ ಹೆಚ್ಚು ಪ್ರಾಮಾಣಿಕವಾಗಿ ಅಂಟಿಕೊಂಡ ಮತ್ತು ಪ್ರಾಂತಿಕ ಮುಸ್ಲಿಂಲೀಗದ ಅಧ್ಯಕ್ಷರಾದ ಶ್ರೀ. ಜಿ ಎಮ್. ಸಯ್ಯದರಿಗಿಂತ ಮುಖ್ಯ ಮಂತ್ರಿಪದಕ್ಕೇನೆ ಅಂಟಿಕೊಂಡ, ಸ್ವಾರ್ಥದ ಹೊರತು ಬೇರೆ ತತ್ತ್ವವನ್ನೊಪ್ಪದ ಮತ್ತು ಸಮಯ ಸಾಧಕತೆಯ ಕೂರರಾದ ಸರ್ ಗುಲಾಮ ಹುಸೇನರನ್ನೆ ಎತ್ತಿ ಹಿಡಿದದ್ದು.

ಜಿನ್ನಾರ ಧೋರಣೆಯ ರಹಸ್ಯವೇನು?

ಪ್ರಾಂತಿಕ ಶಾಸನ ಸಭೆಯಲ್ಲಿ ಅಧಿಕೃತ ಮುಸ್ಲಿಂಲೀಗ ಸದಸ್ಯರಿಂದ ಮಂಡಿಸಲ್ಪಟ್ಟ ಅವಿಶ್ವಾಸದ ಗೊತ್ತುವಳಿ ಪಾಸಾದ ಮೇಲೆ, ಮುಖ್ಯಮಂತ್ರಿಗಳಾದ ಸರ್ ಗುಲಾಮ ಹುಸೇನರು (ಇವರೂ ಲೀಗದವರೆ!) ರಾಜೀನಾಮೆಯನ್ನು ಕೊಡದೆಯೆ, ಲೀಗದ ಹೊರಗಿದ್ದ ಮುಸಲ್ಮಾನರಾದ ಮೌಲಾಬಕ್ಷರನ್ನು—ಇವರು ತಾವು ಯಾವಕಾರಣಕ್ಕಾಗಿಯೂ ಎಂದಿಗೂ ಲೀಗದ ಸದಸ್ಯರಾಗುವುದಿಲ್ಲ ಎಂದಾಗಲೂ—ಮಂತ್ರಿಮಂಡಳದಲ್ಲಿ ಸೇರಿಸಿಕೊಂಡರು. ಸರ್ ಗುಲಾಮ ಹುಸೇನರ ನಡತೆ ಪ್ರಜಾಪ್ರಭುತ್ವ ತತ್ತ್ವಕ್ಕೂ ಪಕ್ಷನೀತಿಗೂ ಅತ್ಯಂತ ವಿರುದ್ಧವಾದುದು. ಇದೇ ಮಾತನ್ನು ಶ್ರೀ. ಸಯ್ಯದರು ಬ್ಯಾ. ಜಿನ್ನಾ ಅವರಿಗೆ ತಂತಿಯಿಂದ ತಿಳುಹಿಸಿ, ಅವರ ಸಲಹೆಗಳನ್ನು ಕೇಳಲು ಜಿನ್ನಾ ಸಾಹೇಬರು ಕೊಟ್ಟ ಉತ್ತರ ಯಾವುದು? ಮುದುಕಿಯ ಬೈಗಳು!—ರೂಢಿಯ ಮಾತಿನಲ್ಲಿ ಹೇಳುವುದಾದರೆ. ಸರ್ ಗುಲಾಮರನ್ನು ಪ್ರಕಟವಾಗಿ ಜಿನ್ನಾ ಅವರು ನಿಷೇಧಿಸಿದ ಸುದ್ದಿ ಇಂದಿಗೂ ಇಲ್ಲ! ಯಾಕೆ? ಪ್ರಾಂತಿಕ ಮುಸ್ಲಿಂಲೀಗದ ಅಧ್ಯಕ್ಷನ ಮೇಲೆ ಹರಿಹಾಯುವುದೇಕೆ? ಮುಸ್ಲಿಂಲೀಗದ ಇಜ್ಜತ್ತನ್ನು—ಮೌಲಾಬಕ್ಷರನ್ನು ಮಂತ್ರಿಮಂಡಳದಲ್ಲಿ ಸೇರಿಸಿ—ಧಕ್ಕೆಗೀಡುಮಾಡಿದ ಸರ್ ಗುಲಾಮರ ಕೃತಿಯನ್ನು ಸಹಿಸಿಕೊಳ್ಳುವುದೇಕೆ? ಅಥವಾ, ಏನೆ ಆದರೂ ಸರ್ ಗುಲಾಮರೆ ಮುಖ್ಯಮಂತ್ರಿಗಳಾಗಿ ಉಳಿದರೆ ಸಾಕು.... ಎಂದು ಜಿನ್ನಾರವರ ಅಭಿಪ್ರಾಯವೆ? ಮುಖ್ಯ ಮಂತ್ರಿಪದವಿ ಹೋದರೆ ಸರ್ ಗುಲಾಮರಿಗೂ ಲೀಗದಲ್ಲಿ ಆಸಕ್ತಿ ಉಳಿಯಲಿಕ್ಕಿಲ್ಲ; ಹಾಗಾದರೆ, ಮೌಲಾಬಕ್ಷರ ಪಕ್ಷ, ಸರ್ ಗುಲಾಮರ ಪಕ್ಷ, ಹಿಂದುಗಳು ಇವರು ಕೂಡಿದರೆ ಸಯ್ಯದರ ಪಕ್ಷಕ್ಕಿಂತ ಬಹುತರವಾಗಿ ಲೀಗದ ಅಧಿಕಾರವೆ ಜಾರಿಹೋಗಬಹುದಲ್ಲ! ಎಂದರೆ ಸಿಂಧದ ಶಾಸನ ಸಭೆಯಲ್ಲಿ ಲೀಗದ ಬಹುಮತವಿಲ್ಲ, ಅದನ್ನು ಹೇಗಾದರೂ—ಸರ್ ಗುಲಾಮರೆ ಆಶೆ ಹಚ್ಚಿಯಾದರೂ—ಉಳಿಸಿಕೊಳ್ಳಬೇಕು ಎಂದು ಜಿನ್ನಾ ಅವರ ಹಂಬಲ! ಶ್ರೀ. ಸಯ್ಯದರ ಕೃತಿಯಿಂದ ಈ ಹಂಬಲು ಬಯಲಿಗೆ ಬರಬೇಕಾಯಿತಲ್ಲ ಎಂದು, ಜಿನ್ನಾ ಅವರು ಸಯ್ಯದರ ಮೇಲೆ ಬೈಗಳ ಮಳೆಯನ್ನು ಸುರಿದಿರಬಹುದೆ?

(೧೫-೩-೧೯೪೫)

ಜಾತಿಯ ತತ್ತ್ವ ಪೊಳ್ಳಾಗಿದೆ!

ಸೂಕ್ಷ್ಮದೃಷ್ಟಿಯಿಂದ ನೋಡಿದರೆ ಸಿಂಧದ ಪರಿಸ್ಥಿತಿಯು, ಪಾಕಿಸ್ತಾನದ ಬೇಡಿಕೆ ಅಸತ್ಯ ಮತ್ತು ಅನ್ಯಾಯವಾದುದೆಂದು ತೋರಿಸಿಕೊಡುತ್ತದೆ. ಸರ್ ಗುಲಾಮರಿಗೆ ಯಾವ ಲಾಲಸೆ ಇದೆಯೊ ಅದೇ ಲಾಲಸೆ ಮಿಕ್ಕ ಪ್ರಾಂತಗಳ ಮುಸಲ್ಮಾನರ ಮುಂದಾಳುಗಳಿಗಿರಲಿಕ್ಕಿಲ್ಲವೆಂದು ಹೇಗೆ ಹೇಳಬಹುದು? ಸ್ವಂತದ ಅಧಿಕಾರಪದಕ್ಕಾಗಿ ಈ ಮುಂದಾಳುಗಳು ಮುಸ್ಲಿಂಲೀಗಕ್ಕೆ ತಮ್ಮ ಬೆಂಬಲವನ್ನು ಕೊಡುತ್ತಿಲ್ಲ ಎಂದಾದರೂ ಹೇಗೆ ಹೇಳಬಹುದು? ತನ್ನ ಪಕ್ಷದವರೆ ಅವಿಶ್ವಾಸದ ಗೊತ್ತುವಳಿಯನ್ನು ಮಂಡಿಸಿದ್ದಾರೆ, ತನ್ನ ಪಕ್ಷದಲ್ಲಿಯೆ ಬಹುಮತವು ಆ ಗೊತ್ತುವಳಿಗೆ ಬೆಂಬಲ ಕೊಟ್ಟಿದೆ, ಮುಂದೆ ಮುಸಲ್ಮಾನರ ಸಾರ್ವಜನಿಕ ಸಭೆ ಸೇರಿ 'ಶ್ರೀ. ಸಯ್ಯದರಲ್ಲಿ ಮುಸಲ್ಮಾನರ ವಿಶ್ವಾಸವಿದೆ' ಎಂದು ಸಾರಿದೆ; ಹೀಗೆ ಒಳಗೂ ಹೊರಗೂ ವಿಶ್ವಾಸವನ್ನು ಕಳೆದುಕೊಂಡವನು ಮಿಕ್ಕ ಪಕ್ಷಗಳೊಡನೆ ಮರುಗಳಿಗೆಯಲ್ಲಿಯೆ ಸೇರಿಕೊಳ್ಳುತ್ತಾನೆ, ಕೊನೆಗೆ ಅವರಿಗೂ ಕೊಟ್ಟವಚನವನ್ನು ಆ ಸುದ್ದಿ ಪ್ರಕಟವಾಗುವುದರೊಳಗಾಗಿ ಮುರಿಯುತ್ತಾನೆ—

ಇಂತಹ ವ್ಯಕ್ತಿಗೆ ಲೀಗ—ಲೀಗದ ತತ್ತ್ವ—ಮುಸಲ್ಮಾನರ ಹಕ್ಕು—ಪಾಕಿಸ್ತಾನದ ಬೇಡಿಕೆ—ಇವುಗಳಿಗಾಗಿ ಶ್ರದ್ಧೆ ಇದೆ ಎಂದು ಬ್ಯಾರಿಸ್ಟರರೆಂದು ಹೆಸರಾದ ಜಿನ್ನಾರವರು ಕೂಡ ಸಾಧಿಸಲಾರರು! ಅಂತೂ, ಜಾತಿಯ ತತ್ತ್ವವು ಮುಖ್ಯವಾಗಿ ಅಧಿಕಾರ ಲಾಲಸೆಯ ತತ್ತ್ವವು ಎಂದೇ ಹೇಳಬೇಕಾಗುವುದು.

ನಿಜವಾದ ತತ್ತ್ವ ಬೇರೊಂದಿದೆ!

ಸರ್ ಗುಲಾಮ್ ಹುಸೇನರು ಸಿಂಧದ ಜಮೀನುದಾರರಲ್ಲಿ ಒಬ್ಬರಾಗಿದ್ದಾರೆ. ಹಿಂದುಗಳಲ್ಲಿಯೂ ಹೆಚ್ಚಾಗಿ ಧನಿಕರು, ವ್ಯಾಪಾರಸ್ಥರು, ಜಮೀನುದಾರರು ಇದ್ದಾರೆ. ಸಿಂಧದ ಬಹುಸಂಖ್ಯಾಕ ಮುಸಲ್ಮಾನರೆಲ್ಲರೂ ಬಡವರು. ಬಡವರಿಗೆ ಉಪಕಾರಕವಾಗಬಹುದಾದ ಕಾನೂನುಗಳನ್ನು ಮಾಡಬೇಕೆಂದು ಮುಸ್ಲಿಂಲೀಗದ ವತಿಯಿಂದ ಶ್ರೀ. ಸಯ್ಯದರು ಎಂದಿನಿಂದಲೂ ಹಟ ಹಿಡಿದಿದ್ದಾರೆ, ಸರ್ ಗುಲಾಮರು ಅಂದಿನಿಂದಲೂ ಆ ವಿಷಯವನ್ನು ಮುಂದೆ ಹಾಕುತ್ತಾ ನಡೆದಿದ್ದಾರೆ. ಈ ತಿಕ್ಕಾಟದಲ್ಲಿ ಹಿಂದು ಜಮೀನ್‌ದಾರರ ಸಹಕಾರವು ಅರ್ಥಾತ್ ಸರ್ ಗುಲಾಮರಿಗೆಯೆ ಮೀಸಲಾಗಿದೆ. ಎಂದರೆ ಈ ಹಿಂದುಗಳು ಜಾತಿತತ್ತ್ವಕ್ಕಿಂತ ಜಮೀನುದಾರಿಕೆಯ ರಕ್ಷಣೆಗಾಗಿ ಸಯ್ಯದ್ ಮುಸ್ಲಿಂಲೀಗಿಗೆ ವಿರೋಧಕರಾಗಿದ್ದಾರೆ. ಹಿಂದುಗಳನ್ನೂ ಸರ್ ಗುಲಾಮರನ್ನೂ ಹೊಂದಿಸಿದ್ದು ಆರ್ಥಿಕ ಕಾರಣ; ಸರ್ ಗುಲಾಮರನ್ನೂ ಸಯ್ಯದರನ್ನೂ ಇದಿರಿದಿರಾಗಿ ನಿಲ್ಲಿಸಿದ್ದೂ ಆರ್ಥಿಕ ಕಾರಣ. ಎಂದರೆ ತೋರಿಕೆಗೆ ಜಾತಿ ಎನ್ನಿಸಿದರೂ, ನಿಜವಾಗಿ ಪಕ್ಷಭೇದದ ಕಾರಣವು ಆರ್ಥಿಕ ಪರಿಸ್ಥಿತಿಯದಾಗಿದೆ ಎಂದು ನಿಸ್ಸಂದೇಹವಾಗಿ ಹೇಳಬಹುದು. ಜಾತಿಯ ತತ್ತ್ವವನ್ನು ಹಿಂದೆ ಹಾಕಿ, ಆರ್ಥಿಕ ತತ್ತ್ವವನ್ನು—ಇದೇ ನಿಜವಾದ ತತ್ತ್ವ—ಮುಂದೆ ಮಾಡುವ ದೃಷ್ಟಿಯಾಗಲಿ, ವ್ಯಕ್ತಿಯಾಗಲಿ, ಮುಸ್ಲಿಂಲೀಗಿಗೆ ಬೇಡ!

(೧೭-೩-೪೫)

ತತ್ತ್ವಘಾತಕತನ

ಸಿಂಧದಲ್ಲಿ ನಡೆದ ಈ ಸಮಯಸಾಧಕತೆಯನ್ನು ನೋಡಿದರೆ, ಮುಸ್ಲಿಂಲೀಗದ ಹಿರಿಯಾಳುಗಳು ಅದರ ಬಗ್ಗೆ ತಾಳಿದ ಧೋರಣೆಯನ್ನೂ ಲಕ್ಷ್ಯದಲ್ಲಿಟ್ಟುಕೊಂಡರೆ ಒಂದು ಸಂದೇಹ ಬರುವುದು. ಪಾಕಿಸ್ತಾನದ ಪುರಸ್ಕರ್ತರಲ್ಲಿ ಅಧಿಕಾರಲಾಲಸೆಯೆ ಮುಖ್ಯವಾಗಿದ್ದು, ತಮ್ಮ ಪಾಕಿಸ್ತಾನದ ಯೋಜನೆಯಲ್ಲಿ ಜಿನ್ನಾ ಸಾಹೇಬರು ಅಲ್ಪಸಂಖ್ಯಾಕರ ಸಂರಕ್ಷಣೆಗೆ ಕೊಡುವ ಆಶ್ವಾಸನಗಳ ಬೆಲೆ ಏನು? ಅಧಿಕಾರವನ್ನು ನಡೆಯಿಸುವುದಕ್ಕೆ ಬೇಕಾದ್ದನ್ನು ಮಾಡಲು ಸಿದ್ಧರಿದ್ದವರಲ್ಲಿ ಅಲ್ಪಸಂಖ್ಯಾಕರ ವಿಶ್ವಾಸ ಹುಟ್ಟುವುದೆಂತು? ಅಲ್ಪಸಂಖ್ಯಾಕರ ಮಾತನ್ನು ಬಿಡೋಣ; ಮುಸ್ಲಿಂಲೀಗವು 'ಮುಸಲ್ಮಾನರ ಹಿತಕ್ಕಾಗಿಯೆ ಇದೆ' ಎಂದಾದರೂ ಹೇಳಬಹುದೆ? ಸರ್ ಗುಲಾಮ ಹುಸೇನರಂತಹ ತತ್ತ್ವಘಾತಕರಿಗೆ ಪುರಸ್ಕಾರವಿದ್ದಲ್ಲಿ ಆ ಮಾತನ್ನೂ ಹೇಳಲಾಗದು. ಪಾಕಿಸ್ತಾನವು ನಿಜವಾದ ಪ್ರಜಾಪ್ರಭುತ್ವ ತತ್ತ್ವದ ಕಳಹದಿಯ ಮೇಲೆ ನಿಂತಿದೆ ಎಂಬ ಜಂಬದ ಮಾತು ಎತ್ತ? ಶಾಸನಸಭೆಯ ಮತ್ತು ಜನತೆಯ ಅವಿಶ್ವಾಸವಿದ್ದಾಗಲೂ ಮುಖ್ಯಮಂತ್ರಿ ಪದಕ್ಕೆ ಅಂಟಿಕೊಳ್ಳುವ ವ್ಯಕ್ತಿಯನ್ನು ಪಕ್ಷಗಟ್ಟುವುದೆತ್ತ?

ಸರಹದ್ದಿನ ಶಿಸ್ತು

ಈ ದೃಷ್ಟಿಯಿಂದ ನೋಡಿದರೆ ಸರಹದ್ದು ಪ್ರಾಂತದಲ್ಲಿಯ ಘಟನೆ ಹೆಚ್ಚು ಸಮಂಜಸವೆನ್ನಿಸುವುದು. ಇದುವರೆಗೆ ಅಲ್ಲಿ ಸರದಾರ್ ಔರಂಗಜೇಬ ಖಾನರ ನೇತೃತ್ವದಲ್ಲಿ ಮುಸ್ಲಿಂಲೀಗದ ಮಂತ್ರಿಮಂಡಳವಿದ್ದಿತು. ಈ ಮಂತ್ರಿಮಂಡಳದಲ್ಲಿ ಜನತೆಗೆ ಅವಿಶ್ವಾಸ ಎಂದು ಕಾಂಗ್ರೆಸ್ ಪಕ್ಷದ ಧುರೀಣರಾದ ಡಾಕ್ಟರ್ ಖಾನಸಾಹೇಬರು ಪದೇ ಪದೇ ಹೇಳುತ್ತಲಿದ್ದರು. ಆದರೆ ಎಲ್ಲಿಯವರೆಗೆ ಡಾಕ್ಟರ್ ಖಾನಸಾಹೇಬರು ಆಡಳಿತದ ಹೊಣೆಯನ್ನು ಹೊರಲು ಸಿದ್ಧರಿರಲಿಲ್ಲವೋ ಅಲ್ಲಿಯವರೆಗೆ ಲೀಗ ಮಂತ್ರಿಮಂಡಳದ ವಿರುದ್ಧ ಶಾಸನ ಸಭೆಯಲ್ಲಿ ಅವಿಶ್ವಾಸದ ಗೊತ್ತುವಳಿಯನ್ನು ಮಂಡಿಸಲಿಲ್ಲ. ಇದು ಯೋಗ್ಯ. ಯಾಕೆಂದರೆ, ಹಾಗೆ ಮಾಡಿದಲ್ಲಿ ಗವರ್ನರರ ಆಳಿಕೆಯೇ ಅನಿವಾರ್ಯವಾಗುತ್ತಿದ್ದಿತು. ಕಳೆದ ತಿಂಗಳು ಡಾಕ್ಟರ್ ಖಾನಸಾಹೇಬರು ಮಹಾತ್ಮರೊಡನೆ ವಿಚಾರವಿನಿಮಯವನ್ನು ಮಾಡಿ ಮಂತ್ರಿಪದವನ್ನು ಸ್ವೀಕರಿಸುವ ನಿರ್ಣಯಕ್ಕೆ ಬಂದರು. ಶಾಸನ ಸಭೆಯಲ್ಲಿ ಅವಿಶ್ವಾಸದ ಗೊತ್ತುವಳಿಯನ್ನು ಮಂಡಿಸಿದರು, ಅದು ಸ್ವೀಕೃತವಾಗಿ ಲೀಗ ಮಂತ್ರಿಮಂಡಳವು ರಾಜೀನಾಮೆಯನ್ನು ಕೊಟ್ಟಿತು; ಈಗ ಡಾಕ್ಟರ್ ಖಾನ್‌ಸಾಹೇಬರೆ ಮಂತ್ರಿಮಂಡಳವನ್ನು ರಚಿಸಿದ್ದಾರೆ, ಎರಡುವರೆ ವರ್ಷಗಳಲ್ಲಿ ಇದೇ ಮೊದಲನೆಯ ಕಾಂಗ್ರೆಸ್ ಮಂತ್ರಿಮಂಡಳ.

ಪಾಕಿಸ್ತಾನದ ಬಲಾಬಲ

ಈ ಘಟನೆಯಲ್ಲಿ ಸರದಾರ್ ಔರಂಗಜೇಬ್ ಖಾನರು ಸರ್ ಗುಲಾಮ ಹುಸೇನರಂತೆ ಮಂತ್ರಿಪದಕ್ಕೆ ಅಂಟಿಕೊಳ್ಳಲಿಲ್ಲ. ಇದು ಅವರ ಬುದ್ಧಿಯ ಲಕ್ಷಣವೆನ್ನಬಹುದು; ಕಾಂಗ್ರೆಸ್ ಪಕ್ಷದ ಶಿಸ್ತು ಸಂಘಟನೆಗಳಿಗಾಗಿ ಅನಿವಾರ್ಯವಾಯಿತೆನ್ನಬಹುದು. ಆದರೆ ಇಲ್ಲಿಯೂ ಕಾಂಗ್ರೆಸ್ ಪಕ್ಷ ಎನ್ನುವಾಗ ಕಾಂಗ್ರೆಸಿನ ನೇತೃತ್ವದಲ್ಲೂ ಅನುಯಾಯಿಗಳಲ್ಲೂ ಹೆಚ್ಚಾಗಿ ಮುಸಲ್ಮಾನರೆ ಇರುವರೆಂಬುದನ್ನು ಮರೆಯುವಂತಿಲ್ಲ. ಸಿಂಧ ಮತ್ತು ಸರಹದ್ದು ಪ್ರಾಂತಗಳ ಒಟ್ಟು ಪರಿಸ್ಥಿತಿಯನ್ನು ನೋಡಿದರೆ, ಅನೇಕ ಮುಸಲ್ಮಾನರು ಮತ್ತು ಬಹುಸಂಖ್ಯಾಕ ಮುಸಲ್ಮಾನ್ ಮುಂದಾಳುಗಳು ಪಾಕಿಸ್ತಾನಕ್ಕೆ ಮರುಳಾಗಿಲ್ಲ ಎಂದು ಹೇಳಬಹುದು. ಇಷ್ಟೇಕೆ? ಜಾತಿಯ ತತ್ತ್ವದ ಮೇಲೆ ಮುಸ್ಲಿಂ ಲೀಗವನ್ನು ನಿಲ್ಲಿಸುವುದಾದರೆ, ಅದಕ್ಕೆ ಮುಸಲ್ಮಾನರದೆ ಒಮ್ಮತದ ಬೆಂಬಲವಿಲ್ಲ ಎಂದು ಧೈರ್ಯವಾಗಿ ಹೇಳಬಹುದು. ಇವೆರಡು ಪ್ರಾಂತಗಳಿಗಿಂತ ಹೆಚ್ಚಾಗಿ ಪಂಜಾಬದಲ್ಲಿ ಲೀಗಕ್ಕಾಗಿ ಅನಾಸ್ಥೆ ಇದೆ. ಕಳೆದ ಒಂದು ವರ್ಷದಿಂದ ಪಂಜಾಬದ ಮಂತ್ರಿಮಂಡಳಕ್ಕೂ ಲೀಗದ ಹಿರಿಯಾಳುಗಳಿಗೂ ಸಂಬಂಧವಾಗಲಿ ಸಖ್ಯವಾಗಲಿ ಕಾಣದು. ಪಾಕಿಸ್ತಾನವು ಮುಸಲ್ಮಾನರ ನ್ಯಾಯದ ಬೇಡಿಕೆಯೆಂಬ ಮಾತಂತೂ ಉಳಿಯಲಿ, ಪಾಕಿಸ್ತಾನವು ಮುಸಲ್ಮಾನರ ಬೇಡಿಕೆ ಎಂಬ ಮಾತು ಕೂಡ ಸಂದೇಹಾಸ್ಪದವಾಗಿದೆ.

ಸರಹದ್ದ ಘಟನೆಯ ಮಹತ್ತ್ವ

ಸರಹದ್ದ ಪ್ರಾಂತದಲ್ಲಿ ಕಾಂಗ್ರೆಸ್ ಪಕ್ಷದ ಶಾಸನಸಭೆಯ ಧುರೀಣರಾದ ಡಾಕ್ಟರ್ ಖಾನ್‌ಸಾಹೇಬರು ಮಂತ್ರಿಮಂಡಳವನ್ನು ರಚಿಸಿದ್ದು ಅನೇಕ ದೃಷ್ಟಿಗಳಿಂದ ಮಹತ್ತ್ವದ ಸಂಗತಿಯಾಗಿದೆ. ಪ್ರಾಂತಿಕ ಕಾಂಗ್ರೆಸ್ ಧುರೀಣರು ಜನತೆಯ ಹಿತದ ದೃಷ್ಟಿಯನ್ನೆ ಮುಖ್ಯವಾಗಿ ಇಟ್ಟುಕೊಂಡಿದ್ದಾರೆ ಎಂಬುದಕ್ಕೆ ಈ ಸಂಗತಿ ದೃಷ್ಟಾಂತವಾಗಿದೆ. ಕಾಂಗ್ರೆಸಿಗರಿಗೆ ಅಸಹಕಾರ ತತ್ತ್ವವೆ ಯಾವಾಗಲೂ ಹೆಚ್ಚಿನದು ಎಂಬ ಆರೋಪವನ್ನು ಡಾಕ್ಟರ್ ಖಾನ್‌ಸಾಹೇಬರು ತಮ್ಮ ಕೃತಿಯಿಂದ ಅಲ್ಲಗಳೆದಿದ್ದಾರೆ. ಸರಹದ್ದ ಪ್ರಾಂತದ ಮಂತ್ರಿಮಂಡಳ ರಚನೆಗೆ ಮಹಾತ್ಮಾ ಗಾಂಧಿಯವರ ಮತ್ತು ವರ್ಕಿಂಗ್ ಕಮಿಟಿಯ ಸದಸ್ಯರಾದ ಖಾನ್ ಅಬ್ದುಲ್‌ಗಫರ್‌ಖಾನರ ಬೆಂಬಲವಿದೆ ಎಂಬುದರಿಂದ ಮಹಾತ್ಮರು ಇತ್ತೀಚೆಗೆ ಹೇಳುತ್ತಿರುವಂತೆ ಕಾಂಗ್ರೆಸಿನ ಧೋರಣೆ ಬದಲಾಯಿಸಿದೆ, ಬದಲಾಯಿಸಬಲ್ಲದು ಎಂಬುದೂ ಸ್ಪಷ್ಟವಿದೆ. ಇದಲ್ಲದೆ ಸರಹದ್ದ ಪ್ರಾಂತದ ಗವರ್ನರರಾದ ಸರ್ ಜಾರ್ಜ ಕನಿಂಗಹಮರು ಕಾಂಗ್ರೆಸ್ ಮಂತ್ರಿಮಂಡಳ ರಚನೆಗೆ ಒಪ್ಪಲು ಸಿದ್ಧರಾದರೆಂದರೆ, ಅಧಿಕಾರಿಗಳಿಗೂ ಕಾಂಗ್ರೆಸು ಹೊಣೆಗಾರಿಕೆಯ ಸಂಸ್ಥೆ ಎಂಬುದು ಮನದಟ್ಟಾಗಿರಲು ಸಾಕು. ಈ ಸಂದರ್ಭದಲ್ಲಿ 'ಅನಿಯತಕಾಲದ ವರೆಗೆ ಕಾಂಗ್ರೆಸ್ ಮುಂದಾಳುಗಳನ್ನು ಬಂಧನದಲ್ಲಿರಿಸುವುದು ನಮ್ಮ ಉದ್ದೇಶವಿಲ್ಲ' ಎಂದು, ಅಮೆರಿಸಾಹೇಬರು ಎರಡು ವರ್ಷಗಳ ವರೆಗೆ ಹಾಡಿದ ಹಾಡನ್ನು ಬದಲಾಯಿಸಿದ್ದಾರೆ. ಸ್ವಲ್ಪಾವಧಿಯಲ್ಲಿಯೆ ಕಾಂಗ್ರೆಸ್ ಮುಂದಾಳುಗಳನ್ನು ಬಂಧಮುಕ್ತ ಮಾಡುವುದು ಸರಕಾರಕ್ಕೆ ಅನಿವಾರ್ಯವಾಗುವುದು. ಒಂದು ಪ್ರಾಂತದಲ್ಲಿ ಕಾಂಗ್ರೆಸ್ ಮಂತ್ರಿಮಂಡಳವು ಆಡಳಿತದ ಹೊಣೆಗಾರಿಕೆಯನ್ನು ಹೊತ್ತಾಗ, ಮಿಕ್ಕ ಪ್ರಾಂತಗಳಲ್ಲಿ ಕಾಂಗ್ರೆಸ್ ಮುಂದಾಳುಗಳು ದೇಶಹಿತದ ದೃಷ್ಟಿಯಿಂದ ಗಂಡಾಂತರ ಎನ್ನುವುದು ಶುದ್ಧ ಹುಚ್ಚು ಇಲ್ಲವೆ ಹಟ ಎನ್ನಿಸುವುದು.

(೧೯-೩-೪೫)

ಏಕೀಕರಣ ಚಳವಳದ ಮುನ್ನಡೆ

ಕಳೆದ ಡಿಸೆಂಬರ್ ತಿಂಗಳಿಂದ ಹೊಸ ಹುರುಪಿನಿಂದ ಪ್ರಾರಂಭವಾದ ಏಕೀಕರಣ ಚಳವಳವು ಹುರುಪಿಗೆ ತಕ್ಕಂತೆ ಕಾರ್ಯಾಂಗಕ್ಕೂ ಇಳಿಯುತ್ತಿರುವುದು ಸಂತೋಷದ ಸಂಗತಿ. ಏಕೀಕರಣ ಸಂಘದ ಕಾರ್ಯಾಧ್ಯಕ್ಷರು ಪ್ರಚಾರಕ್ಕೆ ಹೋಗುತ್ತಿದ್ದಾರೆ; ಸಂಘದ ಕಾರ್ಯದರ್ಶಿಗಳು ಕಳೆದ ತಿಂಗಳು ಮದ್ರಾಸಿನಲ್ಲಿ ಸರ್ ತೇಜ ಬಹಾದ್ದೂರ್ ಸಪ್ರು ಅವರ ಕಡೆಗೆ ಶಿಷ್ಟಮಂಡಳವನ್ನೊಯ್ದಿದ್ದರು; ಇದಕ್ಕೂ ಮುಂಚಿತವಾಗಿಯೆ ಅಧ್ಯಕ್ಷರಾದ ಶ್ರೀ. ಜಿನರಾಜ ಹೆಗಡೆಯವರು ಸಪ್ರು ಸಮಿತಿಯ ಪ್ರಶ್ನಾವಳಿಗೆ ಉತ್ತರರೂಪವಾಗಿ ಏಕೀಕರಣದ, ಅಂಕಿಸಂಖ್ಯೆಗಳಿಂದೊಡಗೂಡಿದ ಬೇಡಿಕೆಯನ್ನು ಮಂಡಿಸಿದ್ದಾರೆ. ಸಪ್ರು ಸಮಿತಿಯು ಭಾವೀ ರಾಜ್ಯಘಟನೆಯ ಯೋಜನೆಯನ್ನು ಮಾಡುವುದೆ ಇಲ್ಲವೆ ಎಂಬುದು ಸಂದೇಹಾಸ್ಪದವಾಗಿದ್ದರೂ, ಯಾವುದೆ ರಾಜ್ಯಘಟನೆ ಬರಲಿ ಭಾಷಾನ್ವಯ ಪ್ರಾಂತರಚನೆ ಅಗತ್ಯವಲ್ಲದೆ ಜಾತೀಯ ಸೌಹಾರ್ದಕ್ಕೂ ಪೋಷಕವಾಗುವುದು ಎಂಬ ಸಂಘದ ಶಿಷ್ಟಮಂಡಳದ ಮಾತನ್ನು ಸರ್ ತೇಜರು ಒಪ್ಪುವರಲ್ಲದೆ, ೧೯೩೮ರಿಂದ ತಾವು ಏಕೀಕರಣಕ್ಕೆ ಅಭಿವಚನಬದ್ಧರಾಗಿದ್ದಾರೆಂದು ತಿಳಿಸಿದ್ದು ಅತ್ಯಂತ ಸಂತೋಷದ ಸಂಗತಿ. ಸದ್ಯದ ಅನುಕೂಲವಾತಾವರಣದಲ್ಲಿ ಏಕೀಕರಣ ಚಳವಳವನ್ನು ಜಾಗೃತವಾಗಿಡುವುದು ಕನ್ನಡಿಗರ ಕರ್ತವ್ಯ. ಕಾರ್ಯಕಾರಿ ಮಂಡಳದವರೂ ಮಿಕ್ಕ ಅಭಿಮಾನಿಗಳೂ ಸಂಘಕ್ಕೆ ನಾಲ್ಕಾಣೆಯ ಸದಸ್ಯರನ್ನು ಸಾವಿರಗಟ್ಟಲೆ ಕೂಡಿಸಿ ಸಹಕಾರ ಮಾಡುವರೆಂದು ನಂಬಿದ್ದೇವೆ

(೩೮ನೆಯ ಪುಟದಿಂದ ಮುಂದೆ ಸಾಗಿದ್ದು)

ತೊಪ್ಪಲ ಪಲ್ಲೆಯು ಅಗ್ಗವಾಗಿ ಇದ್ದು ಸತ್ತ್ವಸಂಪನ್ನವಿದ್ದರೂ ಅದನ್ನು ತಿನ್ನುವುದಿಲ್ಲ. ಹಣ್ಣು-ಹಂಪಲುಗಳ ಸ್ಪರ್ಶ ಕಾಯಿಲೆಯಾದಾಗ ಮಾತ್ರ.

ಮೃತ್ಯುವಿನ ದವಡೆಯೊಳಗಿಂದ ಹಿಂದೀ ಜನತೆಯನ್ನು ಮುಕ್ತ ಮಾಡುವುದಕ್ಕೋಸ್ಕರ ಸರಕಾರವು—

(೧) ಅನ್ನಧಾನ್ಯಗಳನ್ನು ಪರದೇಶಕ್ಕೆ ಕಳುಹುವುದನ್ನು ಬಿಡಬೇಕು. (೨) ಒಕ್ಕಲಿಗರಿಗೆ ಕೃಷಿಜ್ಞಾನ ಮಾಡಿಕೊಟ್ಟು ಹೊಸ ಸಾಧನಗಳನ್ನೂ ಪೂರಯಿಸಬೇಕು. (೩) ಹೊಲದ ತೆರಿಗೆ (ಹಫ್ತೆ) ಮತ್ತು ಒಕ್ಕಲಿಗರ ಸಾಲದ ಭಾರವನ್ನು ಕಡಿಮೆ ಮಾಡಬೇಕು. (೪) ಬೀಳುಭೂಮಿಗಳನ್ನು ಸಾಗುವಳಿ ಮಾಡಲು, ಯುದ್ಧಕಾರ್ಯದಿಂದ ನಿವೃತ್ತರಾದ ಸೈನಿಕರಿಗೆ ಅಮೇರಿಕೆಯಲ್ಲಿಯ ಟ್ರ್ಯಾಕ್ಟರ್ ಕೊಟ್ಟು, ಭೂಮಿಯ ಸುಧಾರಣೆಯನ್ನು ಮಾಡಿಸಬೇಕು. (೫) ಹೈನದ ದನಗಳ ಹತ್ಯವನ್ನು ನಿಲ್ಲಿಸಿ, ದುಗ್ಧವ್ಯವಸಾಯಕ್ಕೆ ಉತ್ತೇಜನ ಕೊಡಬೇಕು.

ಅದರಂತೆಯೆ ನಾಗರಿಕರು—

(೧) ಹಾಲು-ಹೈನ, ತೊಪ್ಪಲುಪಲ್ಲೆ, ಹಣ್ಣು-ಹಂಪಲ ಇತ್ಯಾದಿ ಸತ್ತ್ವಯುಕ್ತ ಪದಾರ್ಥಗಳಿಂದ ಕೂಡಿದ ಅನ್ನವನ್ನು ಉಣ್ಣಬೇಕು. (೨) ಹತ್ತಿಯಂಥ ಬೆಳೆಗಳನ್ನು ತೆಗೆದುಕೊಳ್ಳುವ ಮೊದಲು ಆಹಾರಧಾನ್ಯದ ಬೆಳೆಗಳನ್ನೇ ಹೆಚ್ಚಾಗಿ ಬೆಳೆಯಬೇಕು. (೩) ಧಾನ್ಯ ನಾಶಗೊಳಿಸದಂತೆ ಜಾಗ್ರತರಾಗಿರಬೇಕು. (೪) ಮನೆಯೊಳಗೇ ಕುಟ್ಟಿದ ಅಕ್ಕಿಯ ಅನ್ನ, ತೌಡು ಸಹ ಗೋದಿಯ-ಜೋಳದ ಹಿಟ್ಟಿನ ರೊಟ್ಟಿಯನ್ನೇ ಮಾಡಿಸಿ ತಿನ್ನಬೇಕು. (೫) ಬಯಲುಹವೆ, ಶುದ್ಧ ನೀರು, ಸ್ವಚ್ಛ ಪ್ರಕಾಶ ಸೇವಿಸಬೇಕು. ಮತ್ತು ನಿಯಮಿತ ವ್ಯಾಯಾಮ ಮಾಡಬೇಕು.

ಎಂದರೆ ಈ ಮಹತ್ತರವಾದ ಒಗಟವನ್ನು ನೀವೇ ಬಿಡಿಸಿಕೊಂಡಂತಾಗುವುದು.

ಮುದ್ರಕರು:
ಶ್ರೀ ಎಸ್. ಎಸ್. ಬೆಂಗೇರಿ, ವಿಜಯ ಮುದ್ರಣಾಲಯ, ಧಾರವಾಡ.

ಪ್ರಕಾಶಕರು:
ಶ್ರೀ. ಎಂ. ವ್ಹಿ. ಪೊಳ್ಳಗಟ್ಟಿ, ಜಯಂತಿ ಕಾರ್ಯಾಲಯ, ಧಾರವಾಡ.

ಜಪಾನೀಯರ ಯೋಗ್ಯತಾ ಪ್ರದರ್ಶನ ಪ್ರಸಂಗಗಳು

ನಮ್ಮ ಗಾಳೀಪಟಗಳು ಕೊಹೀಮಾ

(KOHIMA) ಕೊಹೀಮಾ ಮತ್ತು ಕಾಬಾ (KABAW)

ಕ್ಷೇತ್ರಗಳ ಮೇಲೆ ಆಡುತ್ತಿವೆ

"ಈ ದಿನ ನಮ್ಮ ವಿಮಾನ ಸೈನ್ಯವು ಶತ್ರುರಾಜ್ಯದ ಮೇಲೆ ಹಾರಿಹೋಗಿ, ಸಾವಿರಾರು ಪೌಂಡ್ (ರತಲ್) ತೂಕದಷ್ಟು ಬಾಂಬುಗಳನ್ನು ಹಾಕಿ, ಶತ್ರುಗಳ ನೆಲೆಗಳನ್ನೂ, ಅವರ ಕೋಟೆ ಕೊತ್ತಲಗಳನ್ನೂ, ಅವರ ಸೈನ್ಯ ಸಂಗ್ರಹಸ್ಥಾನಗಳನ್ನೂ, ನಾಶಗೊಳಿಸುತ್ತಿವೆ."

ಈ ರೀತಿ ನಮ್ಮ ಸರ್ಕಾರದವರಿಂದ ಬರುವ ವಾರ್ತೆಯು ಒಂದೇ ಪ್ರಕರಣದ ವಿಚಾರದಲ್ಲಿಯುಳ್ಳ ಈಗ ನಡೆಯಬಾರಂಭಿಸಿರುವ ಮಹತ್ವದ್ದಾಗಿ ಲಕ್ಷಣಸೂಚಕವಾಗಿರುತ್ತದೆ (Typical) ಇದಲ್ಲದೆ ನಾವು ತಿಳ್ಕೊಂಡಿರುವ ಭರವಸೆಗೆ ಇನ್ನು ಆಕರ್ಷ ದೇಬುದನ್ನು ಸ್ಥಾಪಿಸುತ್ತಿರುವ ಭಾರತೀಯ ವೈಮಾನಿಕ ಸೈನ್ಯದವರ ಅಸಾಧಾರಣ ಪರಾಕ್ರಮದ ಚರಿತ್ರೆಗಳು ಈ ವಾರ್ತೆಯಲ್ಲಿ ಗರ್ಭಿತವಾಗಿರುತ್ತದೆ. ಅವರ ಧೈರ್ಯ, ಚತುರತೆ ಅಂತರಿಕ್ಷ ಮತ್ತು ಭೂಮಿಯ ಯುದ್ಧಗಳ ಕಷ್ಟಗಳನ್ನು ಸಹಿಸುವ ಶಕ್ತಿ ಅತ್ಯಂತ ಕೆಟ್ಟದಾದ ಮತ್ತು ಎದೆಗುಂದಿಸುವಕಷ್ಟಗಳಿಂದ ಯುಕ್ತವಾದಪ್ರದೇಶಗಳಲ್ಲಿಯೂ ಒಂದೇಸಮನಾಗಿ ನಡೆಸಿಕೊಳ್ಳುವ ಸ್ಥೈರ್ಯ. ಈ ಗುಣಗಳನ್ನೂ, ಅವರನ್ನೂ ಮತ್ತು ಅವರ ಕಾರ್ಯಗಳನ್ನೂ ನೋಡಿದವರೆಲ್ಲರೂ ಶ್ಲಾಘಿಸುವರು.

ಈಗ ಯುದ್ಧಮಾಡುವ ವೈಮಾನಿಕಸೈನ್ಯ (Fighters) ಬಾಂಬುಗಳನ್ನು ಹಾಕಿ ಕೆಳಗೆ ಬಂದು ಬಾಂಬುಗಳನ್ನು ಹಾಕುವ ವೈಮಾನಿಕರ (Dive bombers) ಶತ್ರುಗಳ ವರ್ತಮಾನವನ್ನು ತರುವ ವಿಮಾನಗಳ (Reconnaissance) ಎಂಬ ನಮ್ಮ ಭಾರತೀಯ ವೈಮಾನಿಕ ಸೈನ್ಯದ ಮೂರು ದಾಳಿಗಳೂ, ಅರಕಾನ್ (Arakan) ಮತ್ತು ಬರ್ಮಾ ಗಳಲ್ಲಿ ಶತ್ರುಗಳು ಆಕ್ರಮಿಸಿರುವಪ್ರದೇಶಗಳಮೇಲೆಲ್ಲಾ ಹೆಚ್ಚು ಸಂಖ್ಯೆಗಳಲ್ಲಿ ಹೋಗಿ, ತಮ್ಮ ತಮ್ಮ ಕಾರ್ಯಗಳನ್ನು ಬಹು ದಕ್ಷತೆಯಿಂದ ನಡೆಸುತ್ತಿವೆ.



ಇದಕ್ಕೆ ಮೊದಲು ಶತ್ರುಪಕ್ಷದ ಗಾಳೀಪಟಗಳು (ವಿಮಾನಗಳು) ಕೊಹೀಮಾ ಮತ್ತು ಕಾಬಾ ಎಂಬ ಸ್ಥಳಗಳ ಮೇಲೆ ಹಾರಾಡಲು ಪ್ರಾರಂಭಿಸಿದ್ದವು. ಈಗ ನಮ್ಮ ಪಕ್ಷದ "ಹರಿಕೇನ್ಸ್" ಮತ್ತು "ವಲ್ಟಿವೆಂಜೆರ್ಸ್" ಎಂಬ ಹೆಸರಿನ ವಿಮಾನಗಳು ಜಪಾನೀಯರ ಪಾಳೆಯದ ಮೇಲೆ ಮತ್ತು ನೆಲೆಗಳನ್ನು ಹೊಡೆಯುತ್ತವೆ.

ಭಾರತವಾಸಿಯು ಇಂಡಿಯಾದ ವೈಮಾನಿಕ ಸೈನ್ಯದವರು (I. A. F.) ಮತ್ತು ಜಪಾನೀಯರನ್ನು ಸೋಲಿಸುವ ... ಹೋರಾಡುವದಲ್ಲದೆ, ಅವರನ್ನು ಸೋಲಿಸಿ ಓಡಿಸುವುದಕ್ಕೂ ಪ್ರಾರಂಭಿಸಿರುವನೆಂಬುದನ್ನು ... ಈ ... ಗರ್ವಪಡುತ್ತದು ಯುಕ್ತವೇ ...

ಮತ್ತು ನಾವು ಅವರನ್ನು ಹಿಂದಕ್ಕೆ ಅಟ್ಟುತ್ತಲೇ ಇದ್ದೇವೆ

ಭಾರತೀಯ ... ಮುಖದವರಿಂದ ಪ್ರಕಟಿಸಲ್ಪಟ್ಟಿದು

AAA 1306 KN

ಮುಖ್ಯ ವಿಷಯಗಳು

ಸಂಪಾದಕರ ಅಂಚೆಯಿಂದ (ಒಂದು ಪತ್ರದ ನಮೂನೆ)	ಸಂಪಾದಕರು	೧
ಕಡಲು (ಕವನ)	ಶ್ರೀ. 'ಮನು' ಬಳ್ಳಾರಿ	೩೦೭
ಸಂಪಾದಕೀಯ (೭ನೆಯ ವರ್ಷದ ಕೊನೆ)	ಸಂಪಾದಕರು	೩೦೮
ಸಂಗನ ಮಲ್ಲಿನಾಥತನ	'ಮಲ್ಲಿನಾಥ'	೩೦೯
ಏಕೀಕರಣವ ಘೋಷಿಸಿರಿ! (ಕವನ)	ಶ್ರೀ. ಬಿ. ಎಚ್. ಶ್ರೀಧರ, ಎಂ. ಎ. ಭಟಕಳ	೩೧೦
ಶಿಕ್ಷಣತಪಸ್ವಿ ತೊರವಿ ಗುರುರಾಯರು (ಪರಿಚಯ)	ಶ್ರೀ. ಕೆ. ಎಸ್. ಹೆಬ್ಬಳ್ಳಿ, ಎಂ. ಎ., ಬಿ. ಟಿ., ಹುಬ್ಬಳ್ಳಿ.	೩೧೧
ಅವಳ ಬಾಳು (ಸಣ್ಣ ಕತೆ)	ಶ್ರೀ. ಪ್ರಾಣನಾಥ ಗಲಗಲಿ, ಬೆಳಗಾಂವಿ	೩೧೫
ಕಲೆಯೂ ಮನೋರಂಜಕತೆಯೂ	ಶ್ರೀ. ಖಾನೋಳಕರ ಶ್ರೀಧರರಾಯರು, ಪುಣೆ	೩೧೯
ಬರಗಾಲ (ಒಂದು ಅನುಭವಚಿತ್ರ)	ಶ್ರೀ. 'ಗಿರೀಶ' ಮುಂಬಯಿ	೩೨೧
ಬೆಳಕು ಬಾಳೆ (ಮನೋವಿಶ್ಲೇಷಣಾತ್ಮಕ ಕಥೆ)	ಶ್ರೀ. ಸಚ್ಚಿದಾನಂದ ಶಿರೋಡಕರ, ಪುಣೆ	೩೨೪
ಸಾಹಿತ್ಯವಿಹಾರ (ಸಾಹಿತ್ಯಿಕ ಟಿಪ್ಪಣಿಗಳು)	'ವಿಹಾರಿ'	೩೨೭
ಪುಸ್ತಕ ವಿಮರ್ಶೆ	ಶ್ರೀ. ಬಿ. ಪಿ. ಎಸ್. ರಾವ್	೩೨೯
ಮುಂಬಯಿಯಲ್ಲಿ ನಡೆದ ಒಂದು ಸಮಾರಂಭ	'ಸಾಹಿತ್ಯಸಂಜಯ'	೩೩೦
ನಾಲ್ಕೂ ನಿಟ್ಟಿನ ನೋಟ	'ನಿರೀಕ್ಷಕರು'	೩೩೨
ಸಾದರ-ಸ್ವೀಕಾರ	ಮೇಲೋಲೆಯ ಪುಟ	೨

ಸಂಪಾದಕರ ಅಂಚೆಯಿಂದ

(ಒಂದು ಪತ್ರವ್ಯವಹಾರದ ನಮೂನೆ)

ಇತ್ತೀಚಿಗೆ ಹಲವು ಜನ ತರುಣರು ಬರಹಗಾರರಾಗಬೇಕೆಂಬ ಬಯಕೆಯಿಂದ ಮುಂದೆ ಬರುತ್ತಿರುವುದು ಸಂತೋಷದ ಸಂಗತಿ. ಆಶಾದಾಯಕವೆನಿಸುವ ತರುಣ ಲೇಖಕರ ಬರಹಗಳಿಗೆ ಜಯಂತಿ ಅವಕಾಶವನ್ನು ಕೊಟ್ಟೇ ಕೊಡುವುದು. ಕಳೆದ ಏಳು ವರ್ಷಗಳ ಜಯಂತಿಯ ಸಂಪುಟಗಳನ್ನು ತೆರೆದು ನೋಡಿದವರಿಗೆ ಖಂಡಿತ ಗೊತ್ತಾಗುವುದು: ಈ ಪತ್ರಿಕೆ ಎಷ್ಟೊಂದು ಜನ ಹೊಸ ಲೇಖಕರನ್ನು ಬೆಳಕಿಗೆ ತಂದಿದೆಯೆಂಬ ಮಾತು. ಇಂತಹ ಲೇಖಕರಲ್ಲಿ ವಿಶ್ವವಿದ್ಯಾನಿಲಯದ ಪದವಿ ಪಡೆದವರೂ ಕೆಲವರಿರಬಹುದು; ಆದರೆ ಹೆಚ್ಚು ಜನರು ವಿಶ್ವವಿದ್ಯಾಲಯದ ಮುಖದರ್ಶನವಿರದವರೆಂಬುದನ್ನು ಯಾರೂ ಮರೆಯಲಾಗದು.

ಬೇರೆ ನಿರಾಶಾಜನಕ ಲೇಖನಗಳು ನಿರಾಕೃತವಾಗುವುದು ಸಹಜ. ಹಾಗೆ ನಿರಾಕೃತವಾದ ಲೇಖನಗಳ ಲೇಖಕರು ಇತ್ತೀಚೆಗೆ, ರೇಗಿಕೊಂಡು ಪತ್ರಿಕೆಯ ಮೇಲೆ ಕ್ರೋಧವನ್ನು ಕಾರುವುದು ಹೆಚ್ಚಾಗತೊಡಗಿದೆ. ಲೇಖನದೊಂದಿಗೆ ಬರೆದ ಪತ್ರದಲ್ಲಿ ಜಯಂತಿಯೆಂದರೆ ಕಾಮಧೇನು-ಕಲ್ಪವೃಕ್ಷವಾಗಿರುವುದು; ಸಂಪಾದಕರು ಸ್ವರ್ಗದಿಂದ ಇಳಿದು ಬಂದ ಸರಸ್ವತಿಯ ಅವತಾರವಾಗಿರುವರು. ಸರಿ, ಲೇಖನ ನಿರಾಕೃತವಾಯಿತೋ, ಅದೇ ಜಯಂತಿ ಕೀಳು ಕಸವಾಗುವುದು; ಅವರೇ ಸಂಪಾದಕರು ದಡ್ಡರಿಗಿಂತ ದಡ್ಡರಾಗುವರು. ಇದರ ಅನುಭವ ದಿನದಿನವೂ ಬರುತ್ತಲಿದೆ. ಆದರೆ ಹೀಗಾಗುವುದು ಒಳ್ಳೆಯದಲ್ಲವೆಂಬುದನ್ನು ಪ್ರಕಾಶನಾತುರದಿಂದ ಕಾತರರಾದ ತರುಣ ಲೇಖಕರು ಅರಿತುಕೊಳ್ಳಬೇಕು. ಇದೇ ಉದ್ದೇಶದಿಂದಲೆ, ಮೊನ್ನೆ ಮೊನ್ನೆಯೆ ನಮಗೆ ಬಂದಿರುವ ಒಂದು ಪತ್ರವನ್ನು ಇಲ್ಲಿ ಪ್ರಕಟಿಸಲಾಗಿದೆ. ಪತ್ರವನ್ನು ಓದಿದೊಡನೆಯೆ—ಅಥವಾ ಓದುತಿರುವಾಗಲೆ—ಈ ಲೇಖಕರ ಲೇಖನವನ್ನು ಸಂಪಾದಕಮಂಡಲಿ ನಿರಾಕರಿಸಿದುದು ತಪ್ಪಲ್ಲವೆಂಬ ವಿಷಯ ಯಾರಿಗೂ ಮನವರಿಕೆಯಾಗಬಹುದು. ಊರು, ಹೆಸರುಗಳನ್ನು ಮಾತ್ರ ಬಿಟ್ಟು ನಮಗೆ ಬಂದ ಆ ಪತ್ರವನ್ನು, ಇದ್ದುದಿದ್ದ ಹಾಗೆಯೆ ಕೆಳಗೆ ಪ್ರಕಟಿಸಲಾಗಿದೆ. 'ವ್ಯರ್ಥ ಪುಟಗಳ ಹಾನಿ' ಎಂದು ನಮ್ಮ ವಾಚಕರು ಕೆಲವರು ನೊಂದು ನುಡಿಯಬಹುದು. ಅಂತಹರಲ್ಲಿ ಕ್ಷಮೆಯನ್ನು ಬೇಡುವೆವು. ಈ ಕಾಗದ ಬರೆದ ಲೇಖಕರ ಮೇಲೂ ಸಂಪಾದಕ ಸಮಿತಿಯ ಯಾವ ಬಗೆಯ ತಿರಸ್ಕಾರ—ಕ್ರೋಧಗಳಿಲ್ಲ; ಕೇವಲ ಅಂತಹ ಪತ್ರಗಳಿಗೆ ಪ್ರಾತಿನಿಧಿಕವಾಗಿ ಅವರ ಪತ್ರವನ್ನಿಲ್ಲಿ ಬಳಸಿಕೊಂಡಿದೆ. ಇದಕ್ಕಾಗಿ ಯಾವ ವಿಪರೀತ ಭಾವನೆಯನ್ನೂ ಅವರು ಮಾಡಿಕೊಳ್ಳಬಾರದಾಗಿ ನಮ್ಮ ಬೇಡಿಕೆ. ಪತ್ರವು ಹೀಗಿದೆ:

\+ − + ÷

" ಸಂಪಾದಕ ಬೆಟಗೇರಿ ಕೃಷ್ಣಶರ್ಮ—

ಮಹಾಶಯರೇ ನಿಮಗೆ ನಮಸ್ಕಾರಗಳು.... ತಮ್ಮ ೧೧-೪-೪೫ನೆಯ ಪತ್ರವು ೧೭-೪-೪೫ಕ್ಕೆ ಬಂದು ಮುಟ್ಟಿತು. ಅದನ್ನು ಕಂಡು ನಾನು ನಿಜವಾಗಿ ಆಶ್ಚರ್ಯಚಕಿತನಾದೆನು. ಅಷ್ಟೇ ಅಲ್ಲ ನಮ್ಮ "........" ಕನ್ನಡ ಸಂಘಕ್ಕೆ ದಿಗಿಲು ಬಿತ್ತು. ಯಾಕೆಂದರೆ ನಿಮ್ಮ ಅರ್ಥವಿಲ್ಲದ ಪತ್ರದ ತುಣುಕನ್ನು ನೋಡಿ ಅಷ್ಟೇ ಅಲ್ಲ, ತಮ್ಮ ಸಂಪಾದಕೀಯ ಮಂಡಲದ ನಿರ್ಣಯವನ್ನು ನೋಡಿ.

ನಾನು ವಿಚಾರಿಸಿದೆನೆಂದರೆ—ನಾನು ತಮಗೆ ನನ್ನ ಲೇಖನವನ್ನು ಕೊಟ್ಟದ್ದು ಅಜ್ಞಾನತನವೋ, ಅಥವಾ ತಾವು ದೊಡ್ಡವರೆಂದು

ಅಡ್ಡಹಾದಿ ಹಿಡಿದಿದ್ದೀರೊ? ಅಯ್ಯೋ—ಪಾಪ! ನೀವಾದರೂ ಮಾಡುವದೇನು? ಕಲಿಯುಗದಲ್ಲಿ ಅಜ್ಞಾನಿಗಳೇ ಅಡ್ಡಹಾದಿ ಹಿಡಿಯುತ್ತಾರೆ ಅನ್ನಲು ಬರುವದಿಲ್ಲ—, ಆದರೆ ಸುಜ್ಞಾನಿಗಳೂ ಅಜ್ಞಾನಾಂಧಕಾರದಲ್ಲಿ ಮುಳುಗಿ ಹೋಗುವದುಂಟು. ಯಾಕೆಂದರೆ ಕಲಿಯುಗದಲ್ಲಿಯೇ ಅಂಥ ಪರಿಸ್ಥಿತಿ ಬಂದಿದೆ. ಕಲಿಯುಗದಲ್ಲಿ ಹೆಚ್ಚಾಗಿ ಕಲಿತು ಕಪಟಗಳು ಜನಿಸಿದ್ದರಿಂದ ಕಪ್ಪರವನ್ನು ಹಿಡಿಯುವ ಪ್ರಸಂಗವು ಬಂತು. ವಿದ್ಯೆಯು ಶೂನ್ಯವಾಯಿತು. ಶಿಷ್ಯರನ್ನು ಮುಂದೆ ತರುವದು ನಿಂತಿತು. ಕನ್ನಡ ಮಾತೆಯ ರಥವನ್ನು ಎಳೆಯಲು ದೊಡ್ಡವರಷ್ಟೇ ಸಾಕೇ? ಮರೆಯದಿರಿ, ತರುಣರ ರಕ್ತವೂ ಬೇಕೆಂಬುದನ್ನು. ಪ್ರಗತಿಶೀಲ ಸಾಹಿತ್ಯವು ಕುಗ್ಗದೆ—ತಗ್ಗದೆ—ಹಿಗ್ಗುತ್ತ ಹರಿಧ್ವಜವನ್ನು ನಡೆಸಲು ಬೇಕು? ಯಾರು? ತರುಣ ಸಾಹಿತಿಗಳು ಮರೆಯದಿರಿ!

ಪದವಿಧರ (Dregree holders) ಬರಹಗಳನ್ನು ಹಾಕುವದು ಈಗಿನ ಸಂಪಾದಕರ ವಾಡಿಕೆಯಾದ ಮಾತು (ನಿಯಮ). ಪದವ್ರಾಂತಗಳ ತರುಣ ಬರಹಗಾರರನ್ನು ನೋಡಿದರೆ ನಿಮಗೆ ಅಸಹ್ಯವಲ್ಲದಿದ್ದರೂ ನಿಮ್ಮ ಚಿಕ್ಕ ತಮ್ಮಂದಿರಿಗೆ ಅಸಹ್ಯ. ಕನ್ನಡಿಗರ ಅಂಧಕಾರ. ಅಯ್ಯಾ ಇನ್ನಾದರೂ ಕಣ್ಣು ತೆರೆಯಿರಿ. ನಿಮ್ಮ ಕರ್ನಾಟಕದ ಚಿಕ್ಕ ಬಾಂಧವರನ್ನು ನೋಡಿರಿ. "ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು'' ಬಿಟ್ಟು ಉದಯವಾಯಿತು ನಮ್ಮ ಚೆಲುವ ಕನ್ನಡನಾಡು'' ಅನ್ನಿರಿ—ಎಂದು ನನ್ನ ಬಿನ್ನಹವಲ್ಲ. ಆದರೆ "....ಸಂಘದ ಸಹಿಯಿಂದ'' ಕಳಕಳಿಯ ಬಿನ್ನಹ.

ಪತ್ರಿಕೆ ಮಹಾಶಯರೇ ನಿಮ್ಮ ಪತ್ರಿಕೆಯಾದ ಜಯಂತಿಯನ್ನು ಪ್ರತಿತಿಂಗಳು ಓದುತ್ತಿದ್ದೇನೆ. ಓದುವೆನು. ಆದರೆ ಒಂದು ಸಂಶಯ. ನಿಮ್ಮ ಪತ್ರಿಕೆಗಿಂತಲೂ ಕೈಬರಹದ ಪತ್ರಿಕೆಯು ಉತ್ತಮ ತೋರುತ್ತವೆ (ಬಹುಶಃ ಆ ಕೈಬರಹದ ಪತ್ರಿಕೆ ಆ ಲೇಖಕರ "......ಸಂಘ"ದ್ದೇ ಇರಬಹುದು. ಸಂ. ಜ.) ಆದ್ದರಿಂದ ಈಗ ಬರುತ್ತಿರುವ ನಿಮ್ಮ ಪತ್ರಿಕೆಯಲ್ಲಿಯ ಕಥೆಗಳು—ಅನುವಾದಗಳು, ಪ್ರಗತಿಶೀಲ ಸಾಹಿತ್ಯಕ್ಕೆ ಏನು ಉಪಯೋಗವಾದವು? ಇದಕಿಂತ ಉತ್ತಮ ತರಗತಿಯ ಕಥೆಗಳನ್ನೂ, ಅನುವಾದಗಳನ್ನೂ, ಆರಿಸಿರಿ ಉತ್ತಮ ಬರಹಗಳಲ್ಲಿ ಸ್ವಲ್ಪ ತಪ್ಪಿದ್ದರೂ ಅವನ್ನು ತಿದ್ದಿಸಿ ಮಾಡಿಸಿರಿ. ಅಂದರೆ ಕನ್ನಡ ನುಡಿಗೂ, ಕನ್ನಡ ಸಾಹಿತ್ಯಕ್ಕೂ ನಿಮ್ಮ ಚಂದನ್ನು ಪುಸ್ತಕಕ್ಕೂ ಭೂಷಣ. ನಿಟ್ಟಾಗಬೇಡಿರಿ ತಿಳಿದು ನೋಡಿರಿ

ಮಹಾಶಯರೇ ನಿಮಗೆ ನಾನು ಒಂದು ನಮ್ರ ವಿನಂತಿಯನ್ನು ಮಾಡಿಕೊಳ್ಳುವೆನು. ಏನಂದರೆ ಏಕೆ ನಿಮ್ಮ ಸಂಪಾದಕೀಯ ಮಂಡಲದವರು ನನ್ನ ಅನುವಾದವನ್ನು ಬೇಡೆಂದರು? ಏನು ತಪ್ಪು ಕಂಡಿತು? ಮೂಲ ಲೇಖನವನ್ನು ಬರೆದವರೇ ಅಜ್ಞಾನಿಗಳೇ? ಮೂಲ ಲೇಖನವನ್ನು ಬೇಕೆಂದರೆ ಕಳಿಸುವೆನು. ಅದಕ್ಕಿಂತಲೂ ಉತ್ತಮವಿದ್ದರೆ ಹಾಕುವದಿಲ್ಲವೋ? ಅದಕ್ಕಿಂತ ಕೆಟ್ಟದಿದ್ದರೆ ಹಾಕುವಿರೊ? ಇದೆಲ್ಲವನ್ನು ಎನಗೆ ಸರಿಯಾಗಿ ಅರುಹದಿದ್ದರೆ, ನಾನು ನಿಮ್ಮ ಸಂಪಾದಿಕೆಯ ಮಂಡಲವು ಒಂದು ಮೋಸಗಾರರ ತಂಡ ಎಂದು ಕರೆಯುವದಲ್ಲದೆ, ಪ್ರಸಾರ ಕಾರ್ಯ ಮತ್ತು ಟೀಕಿಸದೆ ಬಿಡಲಿಕ್ಕಿಲ್ಲ. ಆದ್ದರಿಂದ ಸಮರ್ಪಕ ಉತ್ತರ ಕೊಡಿರಿ. ಇದರಲ್ಲಿ ಏನಾದರೂ ತಪ್ಪಿದ್ದರೆ ಕ್ಷಮಿಸಬೇಕು. ನಾನು ಏನೆಂದರೂ ಅಜ್ಞಾನಿ.

ತಮ್ಮ ಕರುಣೆಯನ್ನು ಇಚ್ಛಿಸುವ
(ಲೇಖಕರ ಅಂಕಿತವಿದೆ.)

ಜೀವನ

ಶಕ್ತಿಹೀನರೆಲ್ಲರೂ ಹಾರಯಿಸುವ ಪ್ರಭಾವಶಾಲಿಯಾದ

ಪೌಷ್ಟಿಕ ಮಿಶ್ರಣವು

ಇದರ ಸೇವನೆಯಿಂದ ಹಸಿವೆಯು ಚೆನ್ನಾಗಿ ಆಗತೊಡಗಿ ರಕ್ತವು ವೃದ್ಧಿಯಾಗುವುದಲ್ಲದೆ, ರಕ್ತದಲ್ಲಿಯ ಕೆಂಪುಕಣಗಳ ಪ್ರಮಾಣವು ಹೆಚ್ಚಿ, ಉತ್ಸಾಹವುಂಟಾಗುವುದು. ನರಗಳು ಬಲಪಟ್ಟು ಸರ್ವ ಅವಯವಗಳಲ್ಲಿಯೂ ಸಾಮರ್ಥ್ಯ ಬರುವುದು. ಬೇನೆಯಿಂದ ಬಳಲಿ ಎದ್ದವರಿಗಂತೂ ಇದು ಸಂಜೀವಿನಿಯೇ ಸರಿ!

ಕರ್ನಾಟಕ ಆಯುರ್ವೇದ ಫಾರ್ಮಸಿ ಲಿಮಿಟೆಡ್

ಬಾಗಲಕೋಟೆ

ಹುಬ್ಬಳ್ಳಿಯ ಶಾಖೆ:

ಮಿತ್ರಮಂಡಲ ಕೋಟೆ, ಹುಬ್ಬಳ್ಳಿ.

ಈಗ್ಗೆ ನಾನು ಸ್ವಂತ ಒಂದು ಹಾಡವನ್ನು ಕಳಿಸಿದ್ದೇನೆ. ಅದನ್ನು ಹಾಕುವದಿದ್ದರೆ ಹಾಕಿರಿ. ಅದನ್ನು ವಿಮರ್ಶಿಸಿ ಕಳಿಸಿರಿ.

ಓಲೆಯು ಮುಟ್ಟಿದ ಕೂಡಲೆ ಉತ್ತರ ಬರೆಯಿರಿ. ಈ ಸಾರೆ ನಾನು ಪಾಕೀಟ ಅಥವಾ ಕಾರ್ಡ ಇಟ್ಟಿಲ್ಲ. ಯಾಕೆಂದರೆ ನಾನು ಬಡವನಿದ್ದೇನೆ. ಸಾಹಿತ್ಯದಲ್ಲಿ ಘುಮುಕಬೇಕೆಂಬ ನನ್ನ ಹಂಬಲಕ್ಕೆ ತಾವು ಬೆಂಬಲ ಕೊಡಿರಿ.

ಓಲೆಗೆ ಉತ್ತರ ಕೊಡದಿದ್ದರೆ ಏನಾದರೊಂದು ಕಪಟಕಾರಸ್ಥಾನ ನಡೆದಿದೆ ಎಂದು ತಿಳಿಯಬೇಕಾಗುತ್ತದೆ. ಕನ್ನಡ ಬಾಳಲಿ! ಕನ್ನಡಿಗರು ಬೆಳಗಲಿ!! ಸಾಹಿತ್ಯವು ಪಸರಿಸಲಿ!!!

(ಇಲ್ಲಿ ಇಂಗ್ಲಿಷ್ ಅಂಕಿತವಿದೆ.)

(ಮೇಲಿನ ಪತ್ರದಲ್ಲಿ ಮುದ್ರಣ ದೋಷಗಳೇನೂ ಉಳಿಯದಂತೆ ಸಾಕಷ್ಟು ಲಕ್ಷ್ಯಕೊಡಲಾಗಿದೆ.)

ಸಂಪಾದಕರಿಗೂ ಒಂದು ಬಗೆಯ ಸ್ವಾತಂತ್ರ್ಯವಿರುತ್ತದೆಯೆಂಬುದನ್ನು ನಮ್ಮ ತರುಣ ಬರೆಹಗಾರರು ಅರಿಯಲಿ. ಪತ್ರಿಕೆ ತನ್ನದೊಂದು ವಿಶಿಷ್ಟಗುರಿಯನ್ನಿಟ್ಟುಕೊಂಡು ನಡೆದಿರುತ್ತದೆ. ಎಷ್ಟೋ ಸಲ ಸಂಪಾದಕರು ಗುರಿಗೆ ಸರಿಯಾಗಿ ಕಾಣದ ಬರೆಹಗಳನ್ನು (ಬೇರೆ ದೃಷ್ಟಿಯಿಂದ ಒಳ್ಳೆಯವಾಗಿ ಇದ್ದರೂ) ನಿರಾಕರಿಸಬೇಕಾಗುವುದು. ಅನುವಾದಿತ ಲೇಖನಗಳ ಮೂಲ ವಿಷಯ ಚೆನ್ನಾಗಿರಬಹುದು; ಆದರೆ ಅನುವಾದದ ಭಾಷೆ ಸಂದಿಗ್ಧವಾಗಿದ್ದರೆ—ದೋಷಪೂರ್ಣವಾಗಿದ್ದರೆ—ಅಂತಹ ಬರೆಹಗಳನ್ನೂ ಅನಿವಾರ್ಯವಾಗಿ ನಿರಾಕರಿಸಬೇಕಾಗುವದು. ತೀರ ಪ್ರಾರಂಭದ ಪ್ರಯತ್ನಗಳನ್ನು ಪ್ರೋತ್ಸಾಹದೃಷ್ಟಿಯಿಂದ ಪ್ರಕಟಿಸುತ್ತ ಕುಳಿತರೆ ಎಷ್ಟೆಂದು ಪ್ರಕಟಿಸಬೇಕು? ತನ್ನ ಪ್ರಾರಂಭಪ್ರಯತ್ನ ತನಗೆ ಆಕರ್ಷಕವಾಗಿ ಕಂಡಂತೆ ಇನ್ನೊಬ್ಬರಿಗೆ ಆಕರ್ಷಕವೆನಿಸದೆಂಬುದನ್ನು ನಮ್ಮ ಹೊಸ ಬರೆಹಗಾರರು ಲಕ್ಷ್ಯದಲ್ಲಿ ಇರಿಸಿಕೊಳ್ಳಬೇಕು. ಜಯಂತಿಯ ಸಂಪಾದಕಸಮಿತಿ ಮೋಸಗಾರರ ತಂಡವಾಗಿ ಯಾರನ್ನೂ ಮೋಸಗೊಳಿಸುತ್ತಿಲ್ಲ; ಆದರ್ಶದ ಹುಚ್ಚಿನಿಂದ ತಾನೆ ತನ್ನ ಕೈಯನ್ನು ಬರಿಯದನ್ನಾಗಿ ಮಾಡಿಕೊಳ್ಳುತ್ತಿದೆಯೆಂಬುದನ್ನು ಕನ್ನಡ ಜನತೆ ಸಾಕಷ್ಟು ಅರಿತಿದೆ. ಮೋಂಗ ಮುನಿದಂತ ನಿಷ್ಠುರ ಮಾತುಗಳನ್ನಾಡಿ ಕೆಣಕುವುದು ಹೊಸ ಕಾಲದ ಕನ್ನಡಿಗರಿಗೆ ಒಪ್ಪದ ಮಾತು

—ಸಂಪಾದಕ

ಜಯಂತಿ

ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

ವಾ. ವರ್ಗಣಿ ಅಂಚೆವೆಚ್ಚ ಸೇರಿ ೪—೪—೦ ಆರು ತಿಂಗಳಿಗೆ ೨—೪—೦ ಬಿಡಿ ಸಂಚಿಕೆಗೆ ೬ ಆಣೆ.

ಸಂಪುಟ ೭ | ೧ನೆಯ ಏಪ್ರೀಲ್ ೧೯೪೫ | ಸಂಚಿಕೆ ೧೨

ಕಡಲು

‘ಮನು’ ಬಳ್ಳಾರಿ

ಕಡಲು ಮೊರೆದಿತ್ತು....ಒಡಲು ತೆರೆದಿತ್ತು,
ಮುಗಿಲಿಡಿದ ಬಾಳಿನಲಿ ಮಿಂಚು ನೆರೆದಿತ್ತು,
ಬಸವಳಿದ ನಾಡಿನೊಳು ಚೇತನವನೂಡಿ
ಎದೆದೆಗೆದ ಸಂಗರದಿ ಹುಮ್ಮಸವ ತೀಡಿ,
ಭೋರು ಭೋರೆಂದು—
ಏಳೇಳಿರಿ ಎಂದು
ಜೀವನದ ತೀರದಲಿ ಕಡಲು ಮೊರೆಯುತಿದೆ!
ಬೊಬ್ಬಿರಿದು-ಕಡಲು ಮೊರೆಯುತಿದೆ!

ಯುಗ-ಯುಗಾಂತರದಿರವಿನಲಿ ಮೆರೆದ ಒಲ್ಮೆ
ಹಗಲಿರುಳು ಸಿರಿಗೂಡಿ ವ್ಯೆಮರೆದ ಬಲ್ಮೆ
ಕೀರ್ತಿಕಿರಣದ ಚಂದ್ರನುದಯದಲಿ ಸಿಗಿದ—
ಆನಂದದೇರಿನಲಿ ಬಾಂದಳಕೆ ನೆಗೆದ:
ಅಂದಿನಾ ನೆನಪು—
ಸಂದ ವಿಭವದ ಕನಪು
ಬಗೆಯುರಿಯ ಕರಗಿಸುತ ಕುದಿಸಿ ಸಿಡಿಸುತಿದೆ:
ಹೊಡೆಹೊಡೆದು-—ನವಿರ ನಿಲಿಸುತಿದೆ!

ದರ್ಪದಲಿ ಹೊಳೆವಾತ್ಮದಸಿಗಳನೆ ಹಿರಿದು—
ಚಿಮ್ಮುತಿಹ ಕೆನ್ನೀರ ಧಾರೆಯನೆ ಸುರಿದು—
ನಾಡಿಗರ ಪೀಡಿಸುವ ರಾಹುಗಳ ಬಡಿದು
ದುರಿತದಾಳಿಯ 'ಗುರುತು-ಸೋಹುಗಳ ತೊಡೆದು
ಬನ್ನವನು ಸಾರಿ—
ತನ್ನತನವನು ತೋರಿ
ಆಳಿದರ ನಿಟ್ಟುಸಿರ ನಿಡುಕಿ ಮೊರೆಯುತಿದೆ—
ಅಲಸಿಗರ—ಸಿವಿದು ಕೊರೆಯುತಿದೆ.

ಗೀತದೋಟದಲಿ ನರಸಿಂಹತನ ಪುಟಿಸಿ
ಶಕ್ತಿಯನು ಸಂಚರಿಸಿ ಕಡುಪ ಸಂಘಟಿಸಿ,
ವಿಶ್ವಸಂಸ್ಕೃತಿಯು ಚಿರಗೊಳಿಸೆ ಸುಧೆಯಿತ್ತು
ಬಾಳುವಯ ಬಯಲ ಪಾಳ್ಗೆಡೆಯಗೊಡದುತ್ತು,
ಪ್ರಭೆಗೊಂಡ ರನ್ನ—
ಮಧುರ ಮುದ್ದಣ ಹೊನ್ನ-
ರೆಸೆದ ರತ್ನಾಕರನ ಮಡಿಲು ಬಿರಿಯುತಿದೆ,
ಸಾಹಿತ್ಯ—ಮಡಿಲು ಉರಿಯುತಿದೆ!

ಅನುಭವದ ಆಳದಲಿ ನೆಲೆನಿಂತ ಕಾರ್ಯ
ಶಾಂತಿಯಲೆಯಲಿ ನೊರೆವ ತೇಜ ಗಾಂಭೀರ್ಯ
ಪರಿಭವದ ಚುಕ್ಕಿಗಳ ಹೊಗರ ಪಡಿನೆಳಲು;
ಶಾಶ್ವತವನೈದಿರುವ ಶೇಖರರ ಹೊಳಲು!
ಸತತ ಎದೆದೆರೆದು—
ಹೇಡಿಗಳ ತರಿ-ತರಿದು
ಮುಂದು ಮುಂದಕೆ ಕಣ್ಣೋಡಿದು ಕೂಗುತಿದೆ-
ಕನ್ನಡದ—ಕಡಲು ಬೇಗುತಿದೆ!

ನಿದ್ದೆಯಲಿ ಬಿದ್ದಿರುವ ಜನರನೆಚ್ಚರಿಸಿ
ಸದ್ದಿಲ್ಲದಡಗಿರುವ ನಾಡಿಗರ ಹುರಿಸಿ
ಅನುಗಾಲ ಧೀಂಕಿಡುವ ರಣಗೀತ ಹಾಡಿ,
ಕಂಗಾಲಗತಿಗೆಳೆವ ಉಬ್ಬೆಗವ ತೋಡಿ,
ಕ್ರಾಂತಿಯನು ಕಲಿಸಿ—
ಬದುಕಿನಾಶೆಯ ನಿಲಿಸಿ
ಒಳಹೊಕ್ಕು ಜೀವಭೇರಿಯನು ಬಡಿಯುತಿದೆ
ಕೇಳಿರೈ— ಕನ್ನಡದ ಕಡಲು ಬಡಿಯುತಿದೆ!



ಏಳನೆಯ ವರ್ಷದ ಕೊನೆ

ಈ ಸಂಚಿಕೆ ಜಯಂತಿಯ ೭ನೆಯ ವರ್ಷದ ಕೊನೆಯ ಸಂಚಿಕೆ. ಜಯಂತಿಯ ದಾರಿಯಲ್ಲಿ ಈ ವರ್ಷ ಬಂದಷ್ಟು ಅಡೆ-ತಡೆಗಳು ಹಿಂದಿನ ಆರು ವರ್ಷಗಳಲ್ಲಿ ಎಂದೂ ಬಂದಿರಲಿಲ್ಲ; ಮುಂದೆ ಕೂಡ ಬರಲಾರವೆಂದು ನಿರೀಕ್ಷೆಯಿರಿಸಿಕೊಂಡರೆ ತಪ್ಪೆನಿಸುವಂತಿಲ್ಲ. ಸಿಡಿಲಿನಂತೆ ಆಕಸ್ಮಿಕವಾಗಿ ಬಂದೆರಗಿದ ಕಾಗದ ನಿಯಂತ್ರಣದ ಶಾಸನವು ಸಂಚಾಲಕರೆದುರು ಮುಂಗಾಣದ ಯೋಜನೆಯನ್ನೇ ತಂದೊಡ್ಡಿತು. ಅಂತಹದರಲ್ಲಿಯೂ ಗಡಬಡಿಸಿ ನ್ಯೂಜ್ ಪ್ರಿಂಟ್ ಪೇಪರಿಗಾಗಿ ಮಧ್ಯವರ್ತಿ ಸರಕಾರಕ್ಕೆ ಬರೆದು ಕೇಳಲಾಯಿತು. ಒಂದು ರೀತಿಯಿಂದ ಜಯಂತಿಯ ಸುಭಾಗ್ಯವೆಂದೇ ಹೇಳಬಹುದು. ೨-೩ ತಿಂಗಳ ಅವಧಿಯಲ್ಲಿಯೆ ನಮಗೆ ನ್ಯೂಜ್ ಪ್ರಿಂಟ್ ಕಾಗದ ಬಳಸುವ ಒಪ್ಪಿಗೆ ದೊರೆಯಿತು. ಸರಿ, ಒಪ್ಪಿಗೆ ದೊರೆತರೂ ವಾಹನದ ಅಸೌಕರ್ಯದ ಮೂಲಕ ಕೂಡಲೆ ನಮಗೆ ಆ ಕಾಗದ ದೊರೆಯುವಂತಿರಲಿಲ್ಲ. ಅಂತಹುದರಲ್ಲಿ ಸಂಯುಕ್ತ ಕರ್ನಾಟಕದ ಸಂಪಾದಕರಾದ ಶ್ರೀಮಾನ್ ಮೋಹರೆ ಹಣಮಂತರಾಯರು, ಕೂಡಲೆ ನಮಗೆ ಕಾಗದ ದೊರೆಯುವಂತೆ ಏರ್ಪಾಡನ್ನು ಮಾಡಿಕೊಟ್ಟರು. ಇದಕ್ಕಾಗಿ ಜಯಂತಿ ಶ್ರೀ. ಮೋಹರೆಯವರಿಗೆ ತನ್ನ ಕೃತಜ್ಞತೆಯ ವಂದನೆಗಳನ್ನು ಸಲ್ಲಿಸುವುದು. ಅವರ ಸಹಕಾರವಿಲ್ಲದಿದ್ದರೆ ನ್ಯೂಜ್ ಪ್ರಿಂಟ್ ಕಾಗದಗಳನ್ನು ಬೇಗನೆ ಸಂಪಾದಿಸುವುದು ನಮಗೊಂದು ಸಮಸ್ಯೆಯೆ ಆಗುತ್ತಿತ್ತೆಂದು ಹೇಳಬಹುದು. ಇಷ್ಟೇ ಅಲ್ಲ, ಜಯಂತಿ ಈಗ ಕೊಡುತ್ತಿರುವಷ್ಟು ಪುಟಗಳನ್ನು ಕೊಡಲಿಕ್ಕೂ ಸಾಧ್ಯವಾಗುತ್ತಿರಲಿಲ್ಲ.

ಸರಕಾರ ನಮಗೆ ಬಳಸಲು ಒಪ್ಪಿಗೆ ಕೊಟ್ಟ ಕಾಗದದ ಪ್ರಮಾಣ ನಾವು ಕೇಳಿದುದರ ಕಾಲುಪಾಲು ಮಾತ್ರ ಇದೆ. ಈಗ ಕೊಟ್ಟಿರುವ ಪ್ರಮಾಣದ ಕಾಗದದಲ್ಲಿ, ನಮಗೆ ಬೇಡಿಕೆ ಇರುವಷ್ಟು ಪ್ರತಿಗಳನ್ನು ಹೊರಡಿಸಲಿಕ್ಕೆ ಸಾಧ್ಯವಿಲ್ಲದಂತಾಗಿದೆ. ಈಗ ಸಿಕ್ಕುವುದರ ಇಮ್ಮಡಿ ಕಾಗದ ನಮಗೆ ದೊರೆತರೆ, ತಕ್ಕಮಟ್ಟಿಗೆ ಬೇಡಿಕೆಯನ್ನು ಪೂರಯಿಸಲಿಕ್ಕೆ ಆದೀತು. ಹಾಗೆ ದೊರೆಕಿಸಲು ಪ್ರಯತ್ನ ನಡೆದಿದೆ ದೊರೆತೀತೆಂಬ ನಿರೀಕ್ಷೆಯೂ ಇದೆ.

ಇತ್ತೀಚೆಗೆ ಜಯಂತಿಯಲ್ಲಿ ಸಂದರ್ಭಚಿತ್ರಗಳನ್ನು ಕೊಡಲು ಸಾಧ್ಯವಾಗಿರಲಿಲ್ಲ; ೮ನೆಯ ವರ್ಷದಿಂದ ಕೊಡಬೇಕೆಂದು ಯೋಜನೆ ಮಾಡಿಕೊಂಡಿದ್ದೆವು. ಆದರೆ ಆ ಯೋಜನೆಗೆ ದಿವಂಗತ ಫೋಟೋಗ್ರಾಫರ ಶ್ರೀನಿವಾಸರಾಯರ ಅಗಲಿಕೆಯು ದೊಡ್ಡ ಆಘಾತವಾಗಿ ಪರಿಣಮಿಸಿದೆ. ಧಾರವಾಡದಂತಹ ಪ್ರಕಾಶನ ಕೇಂದ್ರದಲ್ಲಿ, ಸಧ್ಯ ಒದಗಿರುವ ಪಡಿಯಚ್ಚುಗಾರರ ಕೊರತೆ ತುಂಬ ಅನನುಕೂಲತೆಯದಾಗಿ ಪರಿಣಮಿಸಿದೆ. ಬೇಗನೆ ಈ ಕೊರತೆ ತುಂಬುವಂತೆ ಯಾರಾದರೂ ಕಲಾವಿದರು ಧಾರವಾಡದಲ್ಲಿ ಈ ಕಾರ್ಯವನ್ನು ಪ್ರಾರಂಭಿಸಬೇಕು. ಹೀಗಾದರೆ ಮತ್ತೆ ಜಯಂತಿ ಚಿತ್ರಮಯವಾಗಿ ರೂಪುಗೊಳ್ಳಲು ಸಹಕಾರಿಯಾಗಬಹುದು.

ಕಾಲದ ಪರಿಣಾಮ ಜಯಂತಿಯ ಪುಟಸಂಖ್ಯೆಯ ಮೇಲೆ ಹೇಗೆ ಆಗಿರುವುದೆಂಬುದನ್ನು ತೋರಿಸುವುದಕ್ಕಾಗಿ ಬೇರೆ ಬೇರೆ ಸಂಪುಟಗಳ ಪುಟಸಂಖ್ಯೆಯನ್ನು ಇಲ್ಲಿ ಕೊಡಲಾಗಿದೆ. ೧ನೆಯ ಸಂಪುಟ ೮೩೮, ೨ನೆಯ ಸಂಪುಟ ೮೦೨, ೩ನೆಯ ಸಂಪುಟ ೭೦೬, ೪ನೆಯ ಸಂಪುಟ ೫೮೨, ೫ನೆಯ ಸಂಪುಟ ೫೬೪, ೬ನೆಯ ಸಂಪುಟ ೪೮೮; ೭ನೆಯ ಸಂಪುಟದಲ್ಲಿ ೩೩೪ ಪುಟಗಳು ಮಾತ್ರ. ಇಷ್ಟು ಪುಟಗಳನ್ನು ಕೊಡಲು ಸಮರ್ಥರಾದುದೂ ನಮಗೂ ವಾಚಕರಿಗೂ ಸಂತೋಷದ ಮಾತಾಗಿದೆ. ಪುಟಸಂಖ್ಯೆ ಕಡಿಮೆಯಾದುದರಿಂದಲೂ ಪಡಿಯಚ್ಚು ಚಿತ್ರಗಳನ್ನು ಮೊದಲಿನಂತೆ ಕೊಡಲು ಸಾಧ್ಯವಾಗದುದರಿಂದಲೂ ಜನಸಾಮಾನ್ಯರಿಗೆ ಜಯಂತಿಯ ಮಟ್ಟ ಇಳಿದಂತೆ ತೋರಬಹುದು. ಆದರೆ ಅದರ ಆಂತರಿಕ ಸತ್ವ ಸ್ವಲ್ಪವೂ ಕಡಿಮೆಯಾಗಿಲ್ಲವೆಂಬುದು ಸುಶಿಕ್ಷಿತ ವಾಚಕರಿಗೆ ಗೊತ್ತಾಗಿ ಬಿಟ್ಟಿದೆ; ಆದುದರಿಂದಲೆ ಜಯಂತಿಯ ವಾಚಕರ ಸಂಖ್ಯೆ, ಇಂತಹ ವಿಷಮ ಪರಿಸ್ಥಿತಿಯಲ್ಲಿಯೂ ಹೆಚ್ಚುತ್ತಲಿದೆ.

ಏಳನೆಯ ವರ್ಷದಲ್ಲಿ ಹಲವು ಲೇಖಕರಿಗೆ ಅವಕಾಶ ಸಿಕ್ಕದೆ ಹೋಯಿತು. ಅನೇಕರನ್ನು ದಾರಿ ಕಾಯುತ್ತ ಕುಳ್ಳಿರಿಸಬೇಕಾಯಿತು. ಸ್ಥಳಸಂಕೋಚದ ಮೂಲಕ ಪ್ರಾರಂಭಲೇಖಕರಿಗೆ ಸ್ಥಳ ಸಿಕ್ಕದೆ ಹೋಯಿತು. ಅದಕ್ಕಾಗಿ ಅವರೆಲ್ಲ ನಮ್ಮನ್ನು ಕ್ಷಮಿಸಬೇಕಾಗಿ ಬೇಡುವೆವು. ಅದರಂತೆಯೆ ರಸವತ್ತಾದ, ವಿಚಾರಪೂರ್ಣವಾದ ಲೇಖನಗಳಿಂದ ಜಯಂತಿಯ ಸಂಚಿಕೆಗಳನ್ನು ಜನಪ್ರಿಯವಾಗಿ ಮಾಡಿದ ನಮ್ಮ ಲೇಖಕವರ್ಗಕ್ಕೆಲ್ಲ ಕೃತಜ್ಞತೆಯ ವಂದನೆಗಳನ್ನು ಸಲ್ಲಿಸುತ್ತೇವೆ. ಜಯಂತಿಯಲ್ಲಿ ಪ್ರಕಟವಾಗುವ ಲೇಖನಗಳಿಗೆಲ್ಲ ಹೂವಿಲ್ಲ ಹೂವಿನೆಸಳಿನಂತೆ ಪ್ರತಿಫಲ ಕೊಡಬೇಕೆಂಬ ಆಶೆ ಸಂಚಾಲಕರಿಗಿದೆ. ಪ್ರತಿಫಲಕ್ಕೆ ಅರ್ಹವೆನಿಸುವಂತೆ ತಜ್ಞ ಲೇಖಕರಿಂದ ಬರೆಹಗಳು ಬರಲೆಂದು ನಮ್ಮ ಅಪೇಕ್ಷೆ.

ಜಯಂತಿ ಆರ್ಥಿಕ ದೃಷ್ಟಿಯಿಂದ ಭದ್ರವಾದ ತಳಹದಿಯನ್ನು ಕಟ್ಟಿಕೊಳ್ಳಲಿಕ್ಕೆ ಅಲ್ಲಲ್ಲಿಯ ನಮ್ಮ ಏಜಂಟರು ವಿಶ್ವಾಸದಿಂದಲೂ ಅಭಿಮಾನದಿಂದಲೂ ವ್ಯವಹಾರ ನಡೆಯಿಸಿ ಕೊಡುತ್ತಿದ್ದುದು ಮುಖ್ಯ ಕಾರಣವಾಗಿದೆ. (ಇದೇ ಸಂಚಿಕೆಯಲ್ಲಿ ಮುಂಬಯಿ ಏಜಂಟರಿಗೆ ಮನ್ನಣೆ ಸಲ್ಲಿಸಿದ ವರದಿ ಬಂದಿದೆ.) ಏಜಂಟರು ಕೇವಲ ವ್ಯಾಪಾರಿ ದೃಷ್ಟಿಯಿಂದ ಜಯಂತಿಯತ್ತ ನೋಡದೆ, ಒಂದು ಬಗೆಯ ಆತ್ಮೀಯ ಭಾವದಿಂದ ಕಾಣುತ್ತಿರುವುದು ಅದರ ಆರೋಗ್ಯಕ್ಕೆ ಕಾರಣವಾಗಿದೆ. ಆದುದರಿಂದ ನಮ್ಮ ಎಲ್ಲ ಏಜಂಟರ ಉಪಕಾರವನ್ನೂ ನೆನೆಯಬೇಕಾದುದು ನಮ್ಮ ಕರ್ತವ್ಯವಾಗಿದೆ.

ಪ್ರತಿ ತಿಂಗಳ ೧ನೆಯ ತಾರೀಖಿಗೆ ತಪ್ಪದೆ ನಮ್ಮ ಚಂದಾದಾರರಿಗೆ ತಲ್ಪುವಂತೆ ಸರಿಯಾದ ಸಮಯಕ್ಕೆ ನಮಗೆ ಸಂಚಿಕೆಗಳನ್ನು ಮುದ್ರಿಸಿ ಕೊಟ್ಟು, ನಮ್ಮ ಸಮಯನಿಷ್ಠತೆಗೆ ಸಂಪೂರ್ಣ ಸಹಾಯಕರಾಗಿ ನಿಂತ 'ವಿಜಯ' ಮುದ್ರಣಾಲಯದ ಒಡೆಯರಾದ ಶ್ರೀ. ಎನ್. ಎ. ಹೊಸಕೆರೆಯವರಿಗೆ ನಮ್ಮ ಒಲವುಗಳನ್ನು ಅರ್ಪಿಸಲೇಬೇಕು. ಇಂದಿನ ದಿನಗಳಲ್ಲಿ ಮುದ್ರಣಾಲಯಗಳು ಕೆಲಸಗಾರರಿಲ್ಲದೆ ಎಷ್ಟೊಂದು ಅಡಚಣೆಯಲ್ಲಿ ಇವೆ ಎಂಬುದರ ಅನುಭವ ನಮಗೆ ಸಂಪೂರ್ಣವಾಗಿ ಇದೆ. ಇಂತಹ ಅಡಚಣೆಯಲ್ಲಿಯೂ ಜಯಂತಿಗೆ ಮುಂದುವರಿಯಲು ದಾರಿಯನ್ನು ಮಾಡಿಕೊಡುತ್ತಿರುವ ಶ್ರೀ. ಹೊಸಕೆರೆಯವರ ಉಪಕಾರ ಮಹತ್ವದ್ದಾಗಿದೆ.

ಚಂದಾದಾರರ ನೆರವು ಜಯಂತಿಗೆ ಜೀವನದಾಯಿಯಾದುದು. ಮೊದಲಿನಿಂದಲೂ ಜಯಂತಿ ಅವರ ಆಧಾರದಿಂದಲೆ ಬದುಕಿಬಂದಿದೆ. ಇಂದಿನ ಕಡಿಮೆ ಪುಟಗಳ ಪತ್ರಿಕೆಗೆ ಬೆಲೆ ಹೆಚ್ಚಿಸಿದರೂ, ಯಾವ ಆಕ್ಷೇಪವನ್ನೂ ಮುಂದೆ ಮಾಡದೆ ಸಂತೋಷವಾಗಿ ಚಂದಾದಾರರಾಗಿ ಉಳಿದು ಸಹಕಾರವಿತ್ತ ಬಂಧುಜನಕ್ಕೆಲ್ಲ ಆದರದ ಅಭಿವಂದನೆಗಳು. ಜಯಂತಿಯ ಹೊಸ ವರ್ಷ, ಕನ್ನಡನಾಡಿನಲ್ಲಿ ಹೊಸ ಬೆಳಕನ್ನು ಹರಡುವಂತಾಗಲಿ: ಇಂದಿನ ಕಂಗೆಡಿಸುವ ಕಗ್ಗತ್ತಲೆಯನ್ನು ಹೊಡೆದುಹಾಕುವಂತಾಗಲಿ!

—ಸಂಪಾದಕರು

೧ ವೇವೆಲ್‌ರ 'ವಯ್ಯಾಟ'

ವೇವೆಲ್ ಸಾಹೇಬರು ವಿಲಾಯತಿಗೆ ಹೋದದ್ದಕ್ಕಾಗಿ ಮಂಗರಾಯನೂ ತರ್ಕ-ವಿತರ್ಕ-ಕುತರ್ಕಾಕ್ರಾಂತನಾಗಿದ್ದಾನೆ. ಸಾಹೇಬರು ವೈಸರಾಯರಾಗಿ ನೇಮಕರಾದಾಗ ತಮ್ಮ ಹತ್ತಿರ ಜಾದು ಪೆಟ್ಟಿಗೆಯೊಂದಿದೆ ಎಂದಿದ್ದರು. ಅದರ ಕೀಲಿ (ಬೀಗದ) ಕೈಯನ್ನು ಮರೆತು ಬಂದಿರಬಹುದೆ ಆಗ? ಅದನ್ನು ಪಡೆಯಲು ಹೋಗಿರಬಹುದೆ ಈಗ? ಹೋಗಿ ಇಷ್ಟೊಂದು ದಿನ ಅಲ್ಲಿಯೆ ಉಳಿದುದರಿಂದ, ಕೀಲಿಕೈ ಅಲ್ಲಿ ದೊರೆತರೂ ಅವಸರದಿಂದ ಹೋಗುವಾಗ ಪೆಟ್ಟಿಗೆಯನ್ನು ಇಲ್ಲಿಯೆ ಮರೆತು ಬಿಟ್ಟಿರಬಹುದೆ ಹೇಗೆ? ಅದಕ್ಕಾಗಿಯೆ ಹೋಂ ಮೆಂಬರರು 'ಮುದಿ'ಯಾಗಿ ಆ ಪೆಟ್ಟಿಗೆಯನ್ನೊಯ್ಯಲು ಹಿಂದಿನಿಂದ ಇಂಗ್ಲಂಡಕ್ಕೆ ಹೋಗಿರಬಹುದೇ? ಅಥವಾ 'ಮುದಿ' (mudio) ಸಾಹೇಬರು ಮತ್ತೊಂದು ಪೆಟ್ಟಿಗೆಯನ್ನೆ ಒಯ್ದಿರಬಹುದೇ? ಪರಸ್ಪರ ಸಂದೂಕ ಬಂದೇಶ್ವರಾ! ಬಂದಾವ ಈ ಸಂದೂಕದ ಕೈ ಎಲ್ಲಾಳಿರಬಹುದು? ಇಲ್ಲವೆ, ಯುದ್ಧರಂಗದಿಂದ ವೈಸ್‌ರಾಯರಾಗುವ ಛಂದದಲ್ಲಿ, ವೇಷ ತರಿಸುವಾಗ ವೇವೆಲ್ ಸಾಹೇಬರು ರಣರಂಗದಲ್ಲಿಯೆ ಅದನ್ನು ಚೆಲ್ಲಿರಬಹುದೆ? ಅಥವಾ ಯಾವಾಗಲೂ ಕೈಯಲ್ಲಿಯೆ ಹಿಡಿದಿದ್ದು ಸಪ್ರು ಸಾಹೇಬರೊಡನೆ ಕೈ ಕುಲುಕುವಾಗ ಹಸ್ತಾಂತರಿಸಿರಬಹುದೆ? ಉಂಗುರವನೊಯ್ದು ಲಂಕೆಗೆ ಹಾರಿದ ವಾಯುಸುತನ ಆಣೆ, ಮಂಗರಾಯನಿಗೆ ಈ ತೊಡಕು ತಿಳಿಯದಂತಾಗಿದೆ; ಈ ಗೂಢ ತಿಳಿಸದಂತಾಗಿದೆ.

ಬಂದೂಕವಂ ಬಿಟ್ಟ ವೇವೆಲ್ಲ ದೊರೆಗಳಿಗೆ।
ಸಂದೂಕ ತೆಗೆಯುಲ್ಕೆ ತೋಚದಾಯ್ತೆ?।
ಸಂದೂಕ ತೆಗೆಯುಲ್ಕೆ ತೋಚದಾಗುತ ಜಲಧಿ-
ಯಂ ತೂಕಲಾಡಿಸುತ ತೇಲಬೇಕೆ? ॥

೨. ಹಿಟ್ಲರನ 'ಹೋಂ-ಫ್ರಂಟ್'

ಯುದ್ಧ ಅದಷ್ಟು ಬೇಗ ಮುಗಿಯುವುದರಲ್ಲಿ ಮಂಗರಾಯನಿಗೆ ಎಳ್ಳಷ್ಟೂ ಸಂದೇಹವಿಲ್ಲ—ಎಂಬುದಕ್ಕೆ ಹಿಟ್ಲರ್ ಪ್ರಾಣಿಯು ಮದುವೆ ಮಾಡಿಕೊಂಡ ಸುದ್ದಿಯೆ ಸಾಕ್ಷಿ. ಆರು ವರ್ಷಗಳ ಸಂತತ ಯುದ್ಧವನ್ನು ಹಿಟ್ಲರನು ಯಾಕೆ ನಡೆಯಿಸಿದನೆಂಬುದು ಮಂಗರಾಯನಿಗೆ ಈಗ ಸ್ಪಷ್ಟೀಕರಿಸಿದೆ. ಪಾಪ! ಮದುವೆಗಾಗಿ ತರಬೇಕಾಗಬೇಕಾಗಿತ್ತು ಆ 'ಬಾಲ-ಬ್ರಹ್ಮಚಾರಿ'ಗೆ! ಅಂತೂ ಕೊನೆಗೊಮ್ಮೆ ಹಿಟ್ಲರನು 'ಗೃಹಸ್ಥ'ನಾಗುವುದು ಖಂಡಿತವಾಯಿತು...ಆದರೂ ಒಂದು ಸಂದೇಹ ಮಂಗರಾಯನಿಗೆ...ಆರು ವರ್ಷಗಳ ಹಿಂದೆ ಯುದ್ಧ ಹೂಡಿದ ಹಿಟ್ಲರು, ಈಗ ಮದುವೆಯಾದ ಹಿಟ್ಲರು...ಒಂದೇ ವ್ಯಕ್ತಿಯಾಗಿರಬಹುದೆ? ಯಾಕೆಂದರೆ, ಈ ಆರು ವರ್ಷಗಳಲ್ಲಿ ಆ ಹಿಟ್ಲರನು ಮೂರು ಸಲ ಆತ್ಮಹತ್ಯೆಯನ್ನು ಮಾಡಿಕೊಂಡಿದ್ದಾನೆ, ಎರಡು ಸಲ ಅವನಿಗೆ ಹುಚ್ಚು ಹಿಡಿದಿದೆ, ಎರಡು ಸಲ ಬಂಧಿತನಾಗಿದ್ದಾನೆ. ಇದನ್ನೆಲ್ಲ ಪಾರಾಗಿ ಮದುವೆಯಾಗುವ ಹಿಟ್ಲರನಿಂದ ಜಗತ್ತಿಗೆ ಹೆಚ್ಚಿನ ಹೆದರಿಕೆ ಇರಬಹುದೆ? ಹಿಟ್ಲರನ ವಂಶ, ಹಿಟ್ಲರತನ, ಮರಿ ಹಿಟ್ಲರುಗಳು ಸ್ಥಿರವಾಗಬಹುದೆ? ಅಥವಾ—ಈ ಮದುವೆಯ ಹಿಟ್ಲರನು ಮತ್ತೊಬ್ಬನೆ? ಅಂತೂ—ಹಿಟ್ಲರನ ವಿಷಯವಾಗಿ ಬೇಕಾದಂತಹ ಚಮತ್ಕಾರಗಳನ್ನು ಕೇಳಿದ ಜಗತ್ತಿಗೆ ಮದುವೆಯ ಸುದ್ದಿಯಿಂದ ಆಶ್ಚರ್ಯವಾಗಲಿಕ್ಕಿಲ್ಲ. ಅಷ್ಟೇಕೆ?—ನಾಳೆ ಹಿಟ್ಲರನ ಹೆಸರು ಧಾರವಾಡ ಮ್ಯುನಿಸಿಪಾಲಿಟಿ ಮತದಾರರ ಪಟ್ಟಿಯಲ್ಲಿ ಕಂಡುಬಂದರೂ ಮಂಗರಾಯನಿಗೆ ಆಶ್ಚರ್ಯವಿಲ್ಲ....

* * * *

ಭೇದ ಸತ್ಯ, ಅಭೇದ ಅಸತ್ಯ!

ಮಂಗರಾಯನ ಬುದ್ಧಿಬಲದ ಮೇಲೆ ಜನತೆಯ ಶ್ರದ್ಧೆ ದಿನದಿನಕ್ಕೆ ಹೆಚ್ಚುತ್ತಲಿದೆ. ಇದಕ್ಕಾಗಿ ಸಂತೋಷ ಪಡಬೇಕೋ ಅಸಮಾಧಾನ ಪಡಬೇಕೋ ಎಂಬುದೆ ಅವನಿಗೆ ತಿಳಿಯದಾಗಿದೆ. ಏಕೆಂದರೆ ನಾಡಿನಲ್ಲಿ ಎಲ್ಲರಿಗೂ ಸ್ವತಂತ್ರ ಸ್ವತಂತ್ರ ಬುದ್ಧಿಗಳೂ, ಸ್ವತಂತ್ರ ಸ್ವತಂತ್ರ ಅಭಿಪ್ರಾಯಗಳೂ ಇರಬೇಕೆಂಬುದು ಮಂಗರಾಯನ ಮನದ ಬಯಕೆ. ಒಬ್ಬ ನಾಯಕನ ಬುದ್ಧಿಯನ್ನು ಅವಲಂಬಿಸಿ ಬಾಯಿಮುಚ್ಚಿ ಬೆನ್ನು ಹತ್ತುವುದು ನಾಗರಿಕತೆಯ ಲಕ್ಷಣವಲ್ಲವೆಂದು ಅವನ ಅಭಿಮತ. ಸದ್ಯದ ಹಿಂದುಸ್ಥಾನದ ಪರಿಸ್ಥಿತಿ ಅಂತಹ ನಾಗರಿಕತೆಯ ಲಕ್ಷಣವನ್ನು ಸಮೀಪಿಸುತ್ತಿರುವುದು ಸಂತೋಷದ ಸಂಗತಿ. ಯಾಕೆಂದರೆ ಮುಸ್ಲಿಂ ಲೀಗದ ಮುಂದಾಳು ಜಿನ್ನಾ ಅವರ ಅನುಯಾಯಿಗಳು ಸ್ವತಂತ್ರ-ಸ್ವತಂತ್ರ, ಅಭಿಪ್ರಾಯಕ್ಕೆ ಬರತೊಡಗಿದ್ದಾರೆ. ಕಾಂಗ್ರೆಸ್ ಮುಂದಾಳು ಗಾಂಧಿಯವರನ್ನಂತೂ ಅವರ ಅನುಯಾಯಿಗಳ ಸ್ವತಂತ್ರ ವ್ಯಕ್ತಿತ್ವ ಬೇಸರಕ್ಕೀಡು ಮಾಡತೊಡಗಿದೆ. ಹಿಂದೂ ಮಹಾಸಭೆಯ ಸದಸ್ಯರು ಯಾವಾಗಲೂ ಒಂದು ಬಗೆಯ ಮಾತುಗಳನ್ನಾಡುವುದಿಲ್ಲ. ಪ್ರಾಗತಿಕ ಪಕ್ಷದವರ ಅಭಿಪ್ರಾಯಗಳು ಯಾವಾಗಲೂ ಒಬ್ಬೊಬ್ಬರವು ಒಂದೊಂದು ರೀತಿಯವಿರುವವು. ದೂರವೇಕೆ, ನಮ್ಮ ಧಾರವಾಡದ ನಗರಸಭೆಯ ಸದಸ್ಯರ ಕಂಠಗಳು ಕೂಡ ಒಂದೇ ವೇಳೆಯಲ್ಲಿ ಒಂದೆ ಬಗೆಯ ಧ್ವನಿಯನ್ನು ಮಾಡಲಿಕ್ಕೆ ಸಾಧ್ಯವಿಲ್ಲ. ಇಷ್ಟೆಲ್ಲ ಇದ್ದರೂ, ಎಲ್ಲರೂ ಮಂಗರಾಯನ ಅಭಿಪ್ರಾಯದತ್ತ ಕಿವಿಗೊಟ್ಟು ಕುಳಿತಿರುವುದು ಅವನ ಅಸಂತೋಷಕ್ಕೆ ಕಾರಣವಾಗಿದೆ- ಭಾರತದಲ್ಲಿಯ ಜನರೆಲ್ಲರೂ ಬೇರೆ ಬೇರೆ ಧ್ವನಿಯಿಂದ ಕೂಗುತ್ತ ಕೂಗುತ್ತ, ಬೇಗನೆ ಬೇರೆಯಾಗಿ, ಎಲ್ಲರ ಬೇರೆಬೇರೆ ಕೂಗಿನ ಅಭಿಪ್ರಾಯವು ಒಂದೆ ಬಗೆಯದಾಗುವ ತನಕ ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕದು; ಒಂದು ವೇಳೆ ಬ್ರಿಟಿಶರು ಬೇಕಷ್ಟು ಸವಲತ್ತನ್ನು ಕೊಟ್ಟರೂ ಶಾಂತಿಸಮಾಧಾನ ಸಿಕ್ಕದು. ಇತಿ ಮಂಗಾಭಿಪ್ರಾಯಃ

ಬೇರೆ ಬೇಕು, ಬೇರೆ ಬೇಕು, ಬೇರೆ ಬೇರೆ ಬೇಕು!
ಬೇಡ ಒಂದು ಬೇಡ ಒಂದು, ಒಂದೆಂಬುದು ಸಾಕು!

> ಜೂನ್ ತಿಂಗಳಿಂದ ಹೊಸವರ್ಷ ಪ್ರಾರಂಭವಾಗುವ ಚಂದಾದಾರರೆಲ್ಲರೂ ನಮ್ಮ ನೆನಪೋಲೆಯ ದಾರಿ ಕಾಯದೆ, ತಂತಮ್ಮ ಚಂದಾಹಣವನ್ನು ಕೂಡಲೆ ಕಳುಹುವ ಉಪಕಾರ ಮಾಡಬೇಕು. ವ್ಯ. ಜ.

ಏಕೀಕರಣವ ಘೋಷಿಸಿರಿ!

ಶ್ರೀ. ಬಿ. ಎಚ್. ಶ್ರೀಧರ ಎಂ. ಎ. ಭಟಕಳ

(ಲಾವಣಿ)

ಪೌರುಷದಿಂದಲಿ ಪರನ ಕಟ್ಟ ಕೆಡೆದೊಗೆದು ಬಂದ ಈ ಕುಲವಲ್ಲಿ
ತಾರುಣ್ಯವೆ ಇರದಾಯಿತೆಂಬುವಕೆ 'ಸುಳ್ಳೆ'ಂಬರು ಕನ್ನಡದಲ್ಲಿ!

೧

ಪರನ ನಿಂದೆಯನು ಸಹಿಸಿಕೊಂಬ ಔ-
ದಾರ್ಯ ಸಾಕು, ಬಿಟ್ಟರೆ ಇನ್ನು
ಕರವ ಕೊಯ್ವರಾ ಕೌರವರಂದದಿ
ಹಿಡಿದು ಬನ್ನಿ ಹರಧನುವನ್ನು!
ಕಡಲುಗನ್ನಡದ ಗುಡುಗುಗಳೇ— ಆ-
ಕೊಡಗುಗನ್ನಡದ ಸಿಡಿಲುಗಳೇ!
ಮೈಸೂರಿನ ಮದ್ದಾನೆಗಳೇ—ಮೇಣ್
ಬಡಗುನಾಡ ಬಿರುಗಾಳಿಗಳೇ!
ಗುಡುಗಿ ಸಿಡಿದು ಘೀಳಿಟ್ಟು ಬೀಸಿ ಕಾ-
ಳೆಗಕೆ ಬನ್ನಿ ಕಟ್ಟಾಳುಗಳೆ!

೨

ಕರ್ನಾಟಕ ನಂದನದಲಿ ಅನ್ಯರು
ಬೇಲಿಗಳನು ಕಟ್ಟುವರೇಕೆ?
ಕರ್ನಾಟಕ ಭಾಂಡಾರಕೆ ಇತರರು
ಬೀಗಮುದ್ರೆಯೊತ್ತುವರೇಕೆ?
ಕನ್ನಡಮರದಲಿ ಬದನಿಕೆಯೆ?—ಏನ್
ಕನ್ನಡ ಗುಡಿಯಲಿ ಜವನಿಕೆಯೆ?
ಕನ್ನಡವಕ್ಕಿಯು ಪರಭೃತವೇ?—ಛೀ
ಕನ್ನಡದೊಳಗೇಂ ಬಹುಮತವೆ?
ಒಮ್ಮತ ಒಮ್ಮತ ಒಕ್ಕೊರಲೊಕ್ಕಣೆ
ಒಂದೇ ಬಗೆ ನುಡಿ-ನಡೆ-ನಿಲುವು!

೩

ಒಕ್ಕಲ ಒಡೆಯರ ವಣಿಜರ ವೈದ್ಯರ
ವಿದ್ಯಾನಿಧಿಗಳ ವೀರರಲಿ
ಇಕ್ಕಿಂಗೊಳಗೆ ಪೇಸಿಹುದನ್ಯರ,
ತಕ್ಕುದ ಹೊಡಲೆ ಬೇಕು ಛಲ!
ಸಂಪತ್ತಿನ ತವರೂರಿನಲಿ—ಒ-
ಪ್ಪತ್ತನು ಮಾಳ್ಪುದೆ? ಅನ್ಯರಲಿ
ಮಾನಸ್ಥಾನವ ಬೇಡುವುದೆ?—ಅಭಿ-
ಮಾನವನೆತ್ತಲೊ ದೂಡುವುದೆ?
ಕೈಗಾರಿಕೆ-ಕಲೆ-ಕುಶಲತೆಯೆಲ್ಲವ-
ನನ್ಯರ ಸೇವೆಗೆ ಸಲಿಸುವುದೆ?

೪

ಬೊಂಬಾಯ್—ಮದ್ರಾಸಿಕ್ಕುಳ ಬಾಯಲಿ
ಸಿಕ್ಕಿಸಿ ಕನ್ನಡವಳಿಸುತಿರೆ—
ಕಂಬನಿದುಂಬದ ಹುಂಬನು ಇರುವನೆ?
ಕೆಚ್ಚೀರದ ಕವಿ ಬದುಕಿಹನೆ?
ಶತಯೋಜನ ದೂರದ ದಾರಿ—ಮ-
ತ್ತಲ್ಲಿಯು ಪರ ತಾನಧಿಕಾರಿ;
ನಮ್ಮವರಿಗೆ ಕರವನು ಹೇರಿ—ಮ-
ತ್ತಿನ್ನಾರನೊ ಹೊರೆವರು ಸೇರಿ;
ತೆಗೆಯಿರಿ ನಿಷೇಧದಸ್ತ್ರವ ಸುಮ್ಮನೆ
ಕುಳಿತರಾಗದದು ಫಲಕಾರಿ!

೫

ವಿಶಾಸೆ ಹೊತ್ತ ಕನ್ನಡದೆದೆಗಾರರೆ
ಏಕೀಕರಣವ ಘೋಷಿಸಿರಿ!
ಏಸು ದಿವಸ ಹಾರಯಿಸುವುದನ್ಯರ
ದಯೆಗೆ? ಏಳಿ, ತಡಮಾಡದಿರಿ!
ಬಂದರು ನಮಗೊಂದಿರಬೇಕು—ಹಿರಿ
ವಿದ್ಯಾಲಯ ಬೇಕೇ ಬೇಕು!
ಔದ್ಯೋಗಿಕ ಮಂದಿರಗಳಲಿ—ಸರ-
ಕಾರದಿಲಾಖೆಯ ಶಾಖೆಯಲಿ-
ಕನ್ನಡ ತರುಣ-ತರುಣಿಯರು ತರಬೇ-
ತಾಗಬೇಕು ಅತಿ ಶೀಘ್ರದಲಿ!

೬

ಹಿಂದಿನ ವೈಭವ ಹೋದುದ ನೆನೆದರೆ
ಕಂಬನಿ ಥಟ್ಟನೆ ಬೀಳುವುದು,
ಇಂದಿನ ಹರಿಹಂಚಿಸಗಿದಾಳಿಕೆಯ
ಕಂಡರೆ ಕಿಡಿ ಸಿಡಿವೇಳುವುದು!
ಪ್ರತಿಜ್ಞೆ ಮಾಡಿರಿ ಭೀಷ್ಮರಿರ!—ತೊಡೆ
ಯಿರತ್ತ ಸರ್ವಪ ಕರ್ಣರಿರ!
ಧನುಸ್ಸವೆತ್ತಿರಿ ಪಾರ್ಥರಿರ!—ರಥ-
ವನತ್ತ ತಿರುಹಿರಿ ಕೃಷ್ಣರಿರ!
ಕರ್ನಾಟಕವೊಂದಾದುದ ಕಾಣದೆ
ಬೆಂಗೊಡದಿರಿ ಹೇ ಕಲಿಗಳಿರ!

ಶಿಕ್ಷಣತಪಸ್ವಿ ಶ್ರೀ. ತೊರವಿ ಗುರುರಾಯರು

(ವ್ಯಕ್ತಿಪರಿಚಯ)

ಶ್ರೀ. ಕೃಷ್ಣಮೂರ್ತಿ ಹೆಬ್ಬಳ್ಳಿ, ಎಂ. ಎ., ಬಿ. ಟಿ. ಮಿತ್ರಮಂಡಳಿ, ಹುಬ್ಬಳ್ಳಿ.

ಮೊದಲಮಾತು

"ಈ ಶಾಲೆಯು ನನ್ನ ಹೊಟ್ಟೆಯ ಮಗುವಿದ್ದಂತೆ. 'ಆ ರಕ್ಷಿ, ಈ ರಕ್ಷಿ, ಕಣ್ಗೆ ಕಾಮನ ರಕ್ಷಿ, ಬೆನ್ಗೆ ಭೀಮನ ರಕ್ಷಿ, ಸಕಲಾಂಗಗಳಿಗೆ ಸರ್ವೇಶ್ವರನ ರಕ್ಷಿ' ಎಂದು ರಕ್ಷಾಗಾನವನ್ನು ಹೇಳುವ ವಿದ್ಯಾಧರ ಯಕ್ಷನಾಗಿ ನನ್ನ ಆತ್ಮವು ಇನ್ನು ಮುಂದೆ ಈ ಶಾಲೆಯಲ್ಲಿ ನಡೆಯುವ ಎಲ್ಲ ಚಟುವಟಿಕೆಗಳಿಗೂ ಸಾಕ್ಷಿಯಾಗಿರುವುದು" ಎಂದು ಹೇಳುತ್ತಿರುವಾಗ **ಶ್ರೀಮಾನ್ ತೊರವಿಯವರನ್ನು** ಕಂಡವರ ಕಣ್ಮನಗಳು ಕರಗದಿರಲಿಲ್ಲ ಅಂದಿನ ಸಭೆಯಲ್ಲಿ. ಒಂದೆರಡು ದಿನಗಳಲ್ಲಿ ಸೇವಾನಿವೃತ್ತರಾಗಲಿದ್ದ ಅವರನ್ನು ಬೀಳ್ಕೊಡಲು ನೆರೆದಿದ್ದ ಅಂದಿನ ಸಭೆಗೆ ಅನೇಕರು ಬಂದಿದ್ದರು; ವಿದ್ಯಾರ್ಥಿಗಳು, ಶಿಕ್ಷಕರು, ಅಧಿಕಾರಿಗಳು, ಆಮಂತ್ರಿತರು, ವಿದ್ಯಾರ್ಥಿಗಳ ಪಾಲಕರು ಹೀಗೆ ಬಹುಜನರು ಬಂದಿದ್ದರು. ಔಪಚಾರಿಕ ಭಾಷಣಗಳು ಮುಗಿದ ಮೇಲೆ, ನಾಲ್ಕು ಮಾತುಗಳನ್ನು ಆಡಲೆಂದು ಶ್ರೀ. ತೊರವಿ ಗುರುರಾಯರು ಕೈಯಲ್ಲಿ ನಾಲ್ಕು ಹಾಳೆಗಳನ್ನು ಹಿಡಿದುಕೊಂಡು ಎದ್ದರು. ಅವರು ಏಳುತ್ತಲೆ, ಸಭಿಕರಲ್ಲಿ ತೊರವಿಯವರನ್ನು ಆ ವರೆಗೆ ನೋಡದಿದ್ದ ಅನೇಕರು 'ಇವರೇ ಏನು ತೊರವಿಯವರು? ಎಷ್ಟು ಗಿಡ್ಡ ಇದ್ದಾರೆ!' ಎಂದರು; 'ನೆಟ್ಟಗಿದ್ದಾರೆ ದುಂಡಗಾಗಿ, ಕೆಂಪಗಾಗಿ!' ಎಂದರು ಮಹಿಳೆಯರನೇಕರು. 'ಅವರ ಹೊಟ್ಟೆ ನೋಡಿರಿ' ಎಂದು ನಕ್ಕರು ಚಿಕ್ಕ ಮಕ್ಕಳನೇಕರು. ಈ ಬಗೆಯಾಗಿ ಶ್ರೋತೃವರ್ಗದಲ್ಲಿ ನಡೆದ ಗುಣುಗಾಟವು ನಿಲ್ಲಲೆಂದು ಒಂದೆರಡು ನಿಮಿಷ ಸುತ್ತಲೂ ನಿರೀಕ್ಷಿಸುತ್ತಿರುವಾಗಲೆ, ತೊರವಿಯವರ ಅಂತಃಕರಣವು ಉಕ್ಕೇರತೊಡಗಿತು. ಸಭಿಕರನ್ನು ಉದ್ದೇಶಿಸುತ್ತಲೆ ಕಣ್ಣುಗಳಿಂದ ಹೊರಚೆಲ್ಲಲಾರಂಭಿಸಿತು, ಕುತ್ತಿಗೆಯು ಬಿಗಿದು ಬಂದಿತು; ಮಾತುಗಳು ಹೊರಡದಾದುವು; ಹಸುಗೂಸಿನಂತೆ ಅಳುವು ಬಂದು ಬಿಟ್ಟಿತು. ಕಣ್ಣುಗಳನ್ನು ಒರಸಿಕೊಳ್ಳುತ್ತ ತಾವಾಗಿಯೆ ಸಂತಯಿಸಿಕೊಂಡು, ಹಾಗೂ ಹೀಗೂ ತಮ್ಮ ಮಾತುಗಳನ್ನು ಓದಿ ಮುಗಿಸಿದರು. ಸಭಿಕರೆಲ್ಲ ಸ್ತಬ್ಧರಾಗಿ ಕುಳಿತಿದ್ದರು; ಕೆಲವು ಮಹಿಳೆಯರಂತೂ ಕಂಬನಿಗರೆದರು. ಅಷ್ಟೊಂದು ಭಾವನಾಮಯವಾಗಿದ್ದಿತು ಅಂದಿನ ಪ್ರಸಂಗ.

ಯಾರ ಅಂತಃಕರಣವು ಉಕ್ಕೇರಲಿಕ್ಕಿಲ್ಲ! ಮೂವತ್ತೈದು ವರುಷಗಳವರೆಗೆ ಜೀವನವನ್ನೇ ಧಾರೆಯೆರೆದು ನಿಲ್ಲಿಸಿದ ವಿದ್ಯಾಸಂಸ್ಥೆಯನ್ನು ತೊರೆಯಬೇಕಾಗಿ ಬಂದಾಗ ಕಳವಳವಾಗುವುದು ಸಹಜ. ತಾವು ಸಹಿಸಿದ ಕಷ್ಟ-ನಷ್ಟಗಳು ಅಂದಿನ ದಿನ ಒಂದೊಂದಾಗಿ ನೆನಪಾಗಿರಬೇಕು ತೊರವಿಯವರಿಗೆ. ಸರಿಕರ--ಸಂಬಂಧಿಕರ-ನಿರುತ್ಸಾಹಕರ ನುಡಿಗಳೂ, ಸಂಬಂಧವಿಲ್ಲದವರ ಚುಚ್ಚುಮಾತುಗಳೂ ಅವರ ಒಳಗಿವಿಯಲ್ಲಿ ಸುಳಿದಿರಬೇಕು. ಮೊದ-ಮೊದಲು ಹಿಂದೆಳೆಯಲು ಯತ್ನಿಸಿದವರೆಷ್ಟೋ, ಹೀಗಳೆದವರೆಷ್ಟೋ! ಇದೆಲ್ಲವನ್ನೂ ನುಂಗಿಕೊಂಡು ತಾಳ್ಮೆಯಿಂದ ದುಡಿದು **ಹುಬ್ಬಳ್ಳಿಯ ನ್ಯೂ ಇಂಗ್ಲೀಷ್ ಶಾಲೆಯನ್ನು** 'ಹಿರಿಯ ಶಿಕ್ಷಣ ಸಂಸ್ಥೆಗಳಲ್ಲಿ ಒಂದು' ಎಂಬ ಮಟ್ಟಕ್ಕೆ ಏರಿಸಿದ್ದು ಕೇವಲ ತೊರವಿಯವರ ಸಂಕಲ್ಪ-ಕಾರ್ಯಶಕ್ತಿಗಳೆ.

ಶಾಲೆ-ಸಂಗಡಿಗರು.

'ಒಂಟಿಗನಾಗಿಯೆ ಬೇಕಾದುದನ್ನು ಮಾಡಬಲ್ಲೆ' ಎಂಬ ಜಂಭವಿಲ್ಲ ರಾಯರಿಗೆ. ಸಂಗಡಿಗರ ಸಹಕಾರ ತೀರ ಆವಶ್ಯವೆಂದು ಮೇಲಿಂದ ಮೇಲೆ ಹೇಳುತ್ತಿರುತ್ತಾರೆ. "ಒಂದು ಶಿಕ್ಷಣಸಂಸ್ಥೆಯನ್ನು ಸ್ಥಾಪಿಸಿ ಅದನ್ನು ದೊಡ್ಡ ಸಂಸ್ಥೆಯನ್ನಾಗಿ ಮಾಡುವುದು ನನ್ನಂತಹ ಸಾಮಾನ್ಯನಾದ ಒಬ್ಬ ವ್ಯಕ್ತಿಯ ಕೆಲಸವಲ್ಲ; ಅದೊಂದು ಸೌಹಾರ್ದವುಳ್ಳ ಸಂಘದ ಕಾರ್ಯ" ಎಂದು ಹೇಳಿದ್ದಾರೆ. ಈ ಬಗೆಯಾದ ನಂಬುಗೆಯುಳ್ಳವರು 'ಸೌಹಾರ್ದವುಳ್ಳ ಸಂಘ'ವನ್ನು ಕಟ್ಟಿಕೊಳ್ಳಲು ಬಹಳ ಹೆಣಗಿದ್ದಾರೆ; ಸಾಕಷ್ಟು ಕಷ್ಟಪಟ್ಟಿದ್ದಾರೆ. ಶಾಲೆಯು ಮೊದಲಾದದ್ದೇ ಕೇವಲ ನಮ್ರರೀತಿಯಲ್ಲಿ; ಇಪ್ಪತ್ತು-ಇಪ್ಪತ್ತೈದು ವಿದ್ಯಾರ್ಥಿಗಳನ್ನು ಕೂಡಿಸಿಕೊಂಡು. ಸ್ಥಳದಿಂದ ಸ್ಥಳಕ್ಕೆ ಅಲೆದಾಡುತ್ತ ಶಾಲೆಯನ್ನು ನಡೆಯಿಸಬೇಕಾಗಿತ್ತು. ಇಂಥಲ್ಲಿ ಕಾಲೂರಿ ನಿಲ್ಲುವ ಸಹೋದ್ಯೋಗಿಗಳು ಸಿಕ್ಕುವುದಾದರೂ ಹೇಗೆ? **ಶ್ರೀಮಾನ್ ಪದಕಿ ಹನುಮಂತರಾಯರು, ಹಾರನಹಳ್ಳಿ ಅನಂತರಾಯರು, ಸಾಲಿ ರಾಮಚಂದ್ರರಾಯರು** ಮೊದಲಾದವರು ಶಾಲೆಯಲ್ಲಿ ಸೇರಿ ಕೆಲದಿನ ಕೆಲಸಮಾಡಿ, ಹೊಟ್ಟೆಯ ಪಾಡಿಗಾಗಿ ಬೇರೆಕಡೆಗೆ ಹೋಗಬೇಕಾಯಿತು. ಸ್ವಲ್ಪ ವಿದ್ಯಾರ್ಥಿಗಳಿದ್ದರೆ ಶಾಲೆಯು ಕೊನೆಯವರೆಗೆ ನಡೆಯಲಾರದೆಂದು, ವಿದ್ಯಾರ್ಥಿಗಳ ಸಂಖ್ಯೆಯನ್ನು ಹೆಚ್ಚಿಸುವ ಚಿಂತೆಯೊಡನೆ, ಕಾಲೂರಿ ನಿಂತು ದುಡಿಯುವ ಶಿಕ್ಷಕರನ್ನು ಗಳಿಸುವ ಚಿಂತೆಯೂ ಶ್ರೀ. ತೊರವಿಯವರ ಬೆನ್ನನ್ನು ಬಹು ದಿವಸ ಬಿಡಲಿಲ್ಲ. ಶಾಲೆ ಪ್ರಾರಂಭವಾಗಿ ಒಂದೆರಡು ವರುಷಗಳಾದಾಗ, 'ಕೆಲಕಾಲವಾದರೂ ಇವರಿಗೆ ಸಮಾಧಾನವು ದೊರಕಲಿ' ಎನ್ನುವ ಹಾಗೆ **ಶ್ರೀಮಾನ್ ಆರ್. ಎಸ್. ಕುಲಕರ್ಣಿಯವರು** ಶಾಲೆಗೆ ಬಂದರು. ಇವರು ಬಿ. ಎ. ಆಗಿದ್ದರು. ತೊರವಿಯವರ ಹಿತೈಷಿಗಳಲ್ಲಿ ಒಬ್ಬರಾಗಿದ್ದ ಹಾಗೂ ಆಗ ಮಾಮಲೇದಾರರಾಗಿದ್ದ ಶ್ರೀ. ಟಿ. ವ್ಹಿ. ನಾಯಕರವರ ಅಳಿಯಂದಿರು ಅವರು. ಶ್ರೀ. ನಾಯಕರ ಉಪದೇಶದಿಂದ ಈ ಶಾಲೆಯಲ್ಲಿ ಆಸ್ಥೆವಹಿಸಿ ದುಡಿಯಲೆಂದು ಶ್ರೀ. ಕುಲಕರ್ಣಿಯವರು ಬಂದರು. ಇವರ ಬಗ್ಗೆ ತೊರವಿಯವರು ಈಗಲೂ ಅಭಿಮಾನ ಪಡುತ್ತಿರುತ್ತಾರೆ. ಶ್ರೀ. ಕುಲಕರ್ಣಿಯವರು ಬಂದೊಡನೆ, ಶಾಲೆಯು ಭರದಿಂದ ಬೆಳೆಯತೊಡಗಿತು. ವಿದ್ಯಾರ್ಥಿಗಳ ಸಂಖ್ಯೆ ನೂರಾಅರುವತ್ತನ್ನು ಮುಟ್ಟಿತು. ಶ್ರೀ. ಕುಲಕರ್ಣಿಯವರು ಮುಖ್ಯಾಧ್ಯಾಪಕರ ಕಾರ್ಯವನ್ನೂ ಇಂಗ್ಲೀಷ್

ಅಧ್ಯಾಪಕರ ಕಾರ್ಯವನ್ನೂ ಒಳ್ಳೆ ಯೋಗ್ಯತೆಯಿಂದ ನಿರ್ವಹಿಸುತ್ತಿದ್ದರು. ಅಂತೂ ತಮ್ಮ ಪ್ರಯತ್ನಗಳೂ ಕೊನರಬಲ್ಲವು ಎಂದು ತೊರವಿಯವರು ಸಂತೋಷಪಟ್ಟರು. ಆದರೇನು! ಈ ಸಂತೋಷ ಕೊನೆಯವರೆಗೆ ಉಳಿಯಲು ಬಂದಿರಲಿಲ್ಲ. ಶ್ರೀ. ಟಿ. ವ್ಹಿ. ನಾಯಕರು ಅನಿವಾರ್ಯವಾಗಿ ಸೇವಾನಿವೃತ್ತರಾದರು; ಅವರೊಡನೆ ಶ್ರೀ. ಕುಲಕರ್ಣಿಯವರೂ ಶಾಲೆಯ ಸೇವಾನಿವೃತ್ತರಾದರು. 'ಮುಂದೆ ಹೇಗೆ?' ಎಂದು ಮತ್ತೆ ಚಿಂತೆ ತೊರವಿಯವರಿಗೆ. ಶ್ರೀ. ಡಿ. ಎ. ಟೆಂಬೆ B. A ಅವರನ್ನು ಗಳಿಸಿದರು. ಅಂತೂ ಕಾರ್ಯವನ್ನು ನಿಲ್ಲಗೊಡದೆ ಸಾಗಿಸಲು ಹೆಣಗಿದರು. ಇಷ್ಟರಲ್ಲಿಯೆ ಮತ್ತೊಂದು ವಿಪತ್ತು ತೊರವಿಯವರನ್ನು ಕೆಣಕಿತು. ಇದೇ ಸಮಯದಲ್ಲಿ ಹುಬ್ಬಳ್ಳಿಯಲ್ಲಿ ಮಿಶನ್ ಸ್ಕೂಲು ಪ್ರಾರಂಭವಾಯಿತು. ಇದರ ಬಗ್ಗೆ ಪ್ರಚಾರಕಾರ್ಯವೂ ಭರದಿಂದ ನಡೆಯಿತು. ತತ್ಪರಿಣಾಮವಾಗಿ ತೊರವಿಯವರ ಶಾಲೆಯಿಂದಲೂ ವಿದ್ಯಾರ್ಥಿಗಳು ಹೋಗಲಾರಂಭಿಸಿದರು. ಪ್ರತಿ ತಿಂಗಳೂ ಹತ್ತಿಪ್ಪತ್ತರಂತೆ ನೂರಾರು ವಿದ್ಯಾರ್ಥಿಗಳು ಶಾಲೆ ಬಿಟ್ಟು ಹೋದರು. ಶಾಲೆಯ ಸಂಖ್ಯೆ ನೂರಾ ಅರುವತ್ತರಿಂದ ಕೇವಲ ಅರುವತ್ತಕ್ಕೆ ಇಳಿಯಿತು. ವಿದ್ಯಾರ್ಥಿಗಳು ಕರಗಿದಂತೆ ಆದಾಯವೂ ಸೊರಗಿತು ಶಿಕ್ಷಕರ ಸಂಬಳ ಪೂರಯಿಸುವುದೂ ದುಸ್ಸಾಧ್ಯವಾಯಿತು ಇದನ್ನು ತಿಳಿದ ಕೆಲವರು ತೊರವಿಯವರಿಗೆ ಚೇಷ್ಟೆ ಮಾಡಿದ್ದೂ ಉಂಟು: "ಆ ಶಾಲೆಯಲ್ಲಿ ಸಂಬಳವನ್ನೆಲ್ಲಿ ಕೊಡುತ್ತಾರೆ? ಸಂತೆಗಿಷ್ಟೆಂದು ವೆಚ್ಚಕ್ಕೆ ಕೊಡುವರು" ಎಂದು. ಆದರೂ ತೊರವಿಯವರು ಎದೆಗೆಡಲಿಲ್ಲ. ಇದೇ ಬಗೆಯ ಆರ್ಥಿಕ ತೊಂದರೆಯು ಉಳಿದದ್ದೆ ಆದರೆ, ಶಿಕ್ಷಕರೂ ಉಳಿಯಲಿಕ್ಕಿಲ್ಲವೆಂಬ ಹೆದರಿಕೆಯು ಬಾಧಿಸತೊಡಗಿತು. ಬಹಳ ವಿಚಾರ ಮಾಡಿ ಕೊನೆಗೆ ಧೈರ್ಯ ಮಾಡಿದರು; ಮನೆಯಲ್ಲಿಯ ಬಂಗಾರವನ್ನೆಲ್ಲ ಮಾರಿ ಶಾಲೆಯ ಒಂದು ವರ್ಷದ ವೆಚ್ಚವನ್ನು ಸಾಗಿಸಿದರು. ಈ ವಿಷಯದಲ್ಲಿ ಅನೇಕರು ತೊರವಿಯವರಿಗೆ ತುಂಬ ಬುದ್ಧಿ ಹೇಳಿದರು: "ಈ ಹುಚ್ಚುತನ ಬೇಡ; ಇದ್ದುದನ್ನೆಲ್ಲ ಕಳೆದುಕೊಂಡು ಪಶ್ಚಾತ್ತಾಪ ಪಡಬೇಕಾದೀತು; ಸುಮ್ಮನೆ ಎಲ್ಲಿಯಾದರೂ ನೌಕರಿ ಹಿಡಿದುಬಿಡಿರಿ!" ಎಂದು ತೊರವಿಯವರು ಮಾತ್ರ ಎಷ್ಟೂ ಧೈರ್ಯಗೆಡಲಿಲ್ಲ. ಇಷ್ಟರಲ್ಲಿಯೆ ತೊರವಿಯವರ ಸಾಹಸಕ್ಕೆ ಸಹಾಯವೂ ಸಿಕ್ಕಿತು. ಕೀರ್ತನಕೇಸರಿ ಶ್ರೀ. ಜಯರಾಮಾಚಾರ್ಯರ ನಾಟಕ ಮಂಡಳಿಯು ಹುಬ್ಬಳ್ಳಿಯಲ್ಲಿ ಸಹಾಯಾರ್ಥಕ ಆಟವನ್ನಾಡಿ ಸುಮಾರು ೪೦೦ ರೂಪಾಯಿಗಳನ್ನು ಕೊಟ್ಟಿತು. ಜೊತೆಗೆ ವಿದ್ಯಾರ್ಥಿಗಳ ಸಂಖ್ಯೆಯೂ ೧೨೦ಕ್ಕೆ ಮುಟ್ಟಿತು. ಅಲ್ಲದೆ ಕೆಲಮಟ್ಟಿಗೆ ಸರಕಾರದ ಸಹಾಯಧನವೂ ದೊರಕಲಾರಂಭಿಸಿತು. ಇದರಿಂದ ಶಾಲೆಯು ಸ್ವಯಂಪೋಷಿತವೆನಿಸತೊಡಗಿತು. ಆದರೆ ಆಪತ್ ಪರಂಪರೆಗಳು ಮಾತ್ರ ಇಷ್ಟಕ್ಕೆ ತೀರಲಿಲ್ಲ. ತೊರವಿಯವರ ಕೊನೆಯದಾದ ಸತ್ತ್ವಪರೀಕ್ಷೆಯ ಕಾಲ ಬಂತು.

ಸಂಸ್ಥೆಗಳನ್ನು ಸ್ಥಾಪಿಸಿ ಕಷ್ಟ-ನಷ್ಟಗಳನ್ನು ಎದುರಿಸಿ, ಅವನ್ನು ನಡೆಯಿಸಬೇಕೆಂಬ ಸಾಹಸಿಗಳು ನಮ್ಮಲ್ಲಿ ವಿರಳ: ಆದರೆ ಯಾರಾದರೂ ಅಂತಹದನ್ನು ಸ್ಥಾಪಿಸಿ ಬೆಳೆಯಿಸಿದ್ದಾದರೆ, ಅದನ್ನು ಆಳಬೇಕು ಎಂಬ ಹಂಬಲದವರು ಬಹಳ. ಇಂಥವರ ಪಿಡುಗಿಗೆ ತೊರವಿಯವರ ಶಾಲೆಯೂ ಗುರಿಯಾಗಿತ್ತು. ಹತ್ತು ವರುಷಗಳ ವರೆಗೆ ಒಂಟಿಗರಾಗಿ ಹೆಣಗಿ ಕಟ್ಟಿದ ಸಂಸ್ಥೆಯನ್ನು ಬೇರೊಬ್ಬರ ಸೊತ್ತನ್ನಾಗಿಸುವ ಪ್ರಸಂಗ ಬಂದಿತು. 'ಸಂಸ್ಥೆಗಳು ವ್ಯಕ್ತಿಗತ ಒಡೆತನಕ್ಕೆ ಸೇರಿರುವುದು ಒಳಿತಲ್ಲ, ಸಾರ್ವಜನಿಕರ ಸೊತ್ತಾಗಿರುವುದು ಹಿತ!' ಎಂದು ಪ್ರತಿಪಾದಿಸುತ್ತ, ಈ ಸಂಸ್ಥೆಯ ಮೇಲೆಯೂ ಕೆಲವರ ಕಣ್ಣು ಬಿತ್ತು. ಧಾರವಾಡದ 'ಕರ್ನಾಟಕ ಎಜ್ಯುಕೇಶನ್ ಸೊಸಾಯಿಟಿ'ಯವರಿಗೆ ಶಾಲೆಯನ್ನು ಒಪ್ಪಿಸಬೇಕೆಂಬುದಾಗಿ ಸೂಚನೆಗಳು ಬಂದುವು. ಆಪತ್ ಪರಂಪರೆಗಳನ್ನು ಅನುಭವಿಸಿದ ತೊರವಿಯವರ ಸಂಕಲ್ಪಶಕ್ತಿಯೂ ಸ್ವಲ್ಪ ಹೊಯ್ದಾಡಿತು. 'ಸಂಸ್ಥೆಯು ದಿನದಿನಕ್ಕೆ ಬಲಿಯತೊಡಗಿದೆ; ಇನ್ನು ಮುಂದೆ ನನ್ನಿಂದ ನಿರ್ವಹಿಸುವುದು ಸಾಧ್ಯವಾದೀತೆ?' ಎಂಬ ಸಂದೇಹಕ್ಕೊಳಗಾದರು. ಅಂತೂ ಸಮ್ಮತವೆನಿಸಬಹುದಾದ ಕರಾರುಗಳಿಗೆ ಒಪ್ಪುವುದಾದರೆ, ತಮ್ಮ ಶಾಲೆಯನ್ನು ಆ ಸಂಸ್ಥೆಗೆ ಒಪ್ಪಿಸಲೇಬೇಕೆಂದು ಮನದಲ್ಲಿ ನಿರ್ಧರಿಸಿಕೊಂಡಿದ್ದರೂ ಸಾಧನಗಳು ಎಡೆಬಿಡದೆ ನಡೆದಿದ್ದುವು, ಶ್ರೀಯುತರಾದ ಹುಕ್ಕೇರಿಕರ, ಎಸ್. ಟಿ. ಪಪ್ಪು ಮೊದಲಾದವರು, ಶಾಲೆಯನ್ನು ಒಪ್ಪಿಸುವುದು ಹಿತವೆಂದು ಉಪದೇಶಿಸಿದ್ದರು. ಆದರೆ ಆಕಸ್ಮಾತ್ತಾಗಿ ಪ್ರಮುಖರನೇಕರು ಶ್ರೀ ವಾಮನರಾವ ದೇಸಾಯಿಯವರ ಮನೆಯಲ್ಲಿ ಕಾರಣಾಂತರದಿಂದ ಕೂಡಿದಾಗ, ಈ ವಿಷಯವು ಮುಂದೆ ಬಂದು ಚರ್ಚೆಯು ನಡೆಯಲು, ಡಾ. ಗೋರೆಯವರು ಮಾತ್ರ ಒಳ್ಳೆ ಮಾರ್ಮಿಕವಾಗಿ ನುಡಿದರು: "ಹತ್ತು ವರುಷಗಳ ವರೆಗೆ ಒಂಟಿಗರಾಗಿ ದುಡಿದು ಶಾಲೆಯನ್ನು ಕಟ್ಟಿದ್ದಾರೆ; ಹುಬ್ಬಳ್ಳಿಯ ಜನತೆಯು ಕೊಂಚವೂ ಸಹಾಯ ಮಾಡಲೆಂದು ಮುಂದೆ ಬರಲಿಲ್ಲ; ಎಂದ ಮೇಲೆ ನಾನು ಯಾವ ಮುಖದಿಂದ ತೊರವಿಯವರಿಗೆ ಶಾಲೆಯನ್ನು ಒಪ್ಪಿಸಿರಿ ಎಂದು ಹೇಳಲಿ?" ಎಂದು. ತೊರವಿಯವರಿಗೆ ಮತ್ತೆ ಧೈರ್ಯ ಬಂತು: 'ಅಂತೂ ತಮ್ಮ ಸಾಹಸಕ್ಕೆ ಸಹಾನುಭೂತಿಯುಳ್ಳವರು ಒಬ್ಬರಾದರೂ ಇದ್ದಾರೆ ಎಂದು ಹೊಯ್ದಾಟವು ಹೋಗಿ ಶಾಲೆಯನ್ನು ತಾವೇ ನಡೆಯಿಸಬೇಕೆಂಬ ನಿರ್ಧಾರವು ದೃಢವಾಯಿತು.

ಶಾಲೆಯು ತಮ್ಮ ಸ್ವಂತದ ಸೊತ್ತಾಗಿರಬೇಕೆಂದು ತೊರವಿಯವರು ಎಂದೂ ಹಟಹಿಡಿದಿರಲಿಲ್ಲ ಯಾವುದಾದರೊಂದು ಯೋಗ್ಯ ವಿದ್ಯಾಸಂಸ್ಥೆಗೆ ಒಪ್ಪಿಸಲು ಯಾವಾಗಲೂ ಸಿದ್ಧರಿದ್ದರು. ತಮ್ಮ ಸಂಸ್ಥೆಯು ಯಾವ ರೀತಿಯಿಂದಾದರೂ ಉತ್ತರೋತ್ತರ ಅಭಿವೃದ್ಧಿ ಹೊಂದಬೇಕೆಂಬುದೆ ಅವರ ಆಕಾಂಕ್ಷೆಯಾಗಿತ್ತು. ಪರವೂರಿನ ವಿದ್ಯಾಸಂಸ್ಥೆಗೆ ಒಪ್ಪಿಸುವ ವಿಚಾರವು ಕೊನೆಗಂಡ ಮೇಲೆ, ಹುಬ್ಬಳ್ಳಿಯಲ್ಲಿಯೆ ಒಂದು ವಿದ್ಯಾಸಂಸ್ಥೆಯು ಏಕೆ ಉದಯಿಸಬಾರದೆಂದು ಯೋಚಿಸಿದರು. ಈ ವಿಚಾರಕ್ಕೆ ಅನೇಕರಿಂದ ಬೆಂಬಲ ದೊರೆತು, ಶ್ರೀಯುತರಾದ ಡಾ. ಗೋರೆ, ಉಭೇಕರ, ಕೆ. ಅನಂತರಾವ ಮೊದಲಾದ ಮುತ್ಸದ್ದಿಯರನ್ನೊಳಗೊಂಡ 'New Education Society' ಎಂಬ ಸಂಸ್ಥೆಯು ೧೯೧೯ರಲ್ಲಿ ಸ್ಥಾಪಿತವಾಯಿತು. ಸದಸ್ಯರನೇಕರು ಉದಾರ ಹೃದಯದಿಂದ ಸಹಾಯ ನೀಡಿದರು.

ಇದೇ ಸುಮಾರಿಗೆ **ಪ್ರೊ ಗೋಖಲೆ ಜಿ. ಕೆ.** ಅವರು ಹುಬ್ಬಳ್ಳಿಯಲ್ಲಿ ಬಂದು ಇರತೊಡಗಿದ್ದರು. ಇವರನ್ನು ತಮ್ಮ ಶಾಲೆಗಾಗಿ ಪಡೆಯಲು ತೊರವಿಯವರು ಬಹಳ ಹಾತೊರೆದರು ಈ ವಿಷಯದಲ್ಲಿ ಸದ್ಯ ಸಿಟಿ ಹಾಯ್‌ಸ್ಕೂಲಿನಲ್ಲಿ ಅಧ್ಯಾಪಕರಾಗಿರುವ ಶ್ರೀ. ಬಿ. ಎನ್. ಬೈಚವಾಳರವರು ಬಹಳ ಪ್ರಯತ್ನಿಸಿದರು. ತೊರವಿಯವರು ಈ ವರೆಗೂ ಅದನ್ನು ನೆನೆಯುತ್ತಾರೆ. ಅಂತೂ ಗೋಖ

ಯವರು ಒಪ್ಪಿಕೊಂಡು ಶಾಲೆಗೆ ಬಂದರು. ಅಂದಿನಿಂದಂತೂ ಶಾಲೆಯು ಬಹಳ ಕಳೆಗೊಂಡಿತು. ಗೋಖಲೆಯವರನ್ನೊಡಗೊಂಡು ಪ್ರಚಾರ-ಕಾರ್ಯವನ್ನು ಸಾಗಿಸಿದರು. ಸಾರ್ವಜನಿಕರ ದೃಷ್ಟಿಯಲ್ಲಿ ಅದರಂತೆ ವಿದ್ಯಾಖಾತೆಯ ಅಧಿಕಾರಿಗಳ ದೃಷ್ಟಿಯಲ್ಲಿ, ಶಾಲೆಯ ಬಗ್ಗೆ ಸದಭಿಪ್ರಾಯವು ತುಂಬ ಹೆಚ್ಚಿತು. ಶಾಲೆಯು 'A' ಗ್ರೇಡ್ ಸ್ಕೂಲ ಆಗಿದ್ದು ಎಲ್ಲ ದೃಷ್ಟಿಯಿಂದಲೂ ವಿಕಾಸಹೊಂದಿದೆ. ಇದಕ್ಕೆ ಶ್ರೀಮಾನ್ ತೊರವಿಯವರ ಸಾಹಸ ಹಾಗೂ ಪ್ರೊ. ಗೋಖಲೆಯವರ ಸಹಕಾರಗಳೆ ಕಾರಣ.

" ವಕೀಲನಾಗು—ಶಿಕ್ಷಕನಾಗುವೆ ! "

'ವಿದ್ಯೆಯ ದೃಷ್ಟಿಯಿಂದ ತೊರವಿಯವರು ಶಿಕ್ಷಣಸಂಸ್ಥೆಯನ್ನು ನಡೆಯಿಸಲು ಅಸಮರ್ಥರು' ಎಂದು ಅನೇಕರ ಭಾವನೆ. 'ವಿಶ್ವವಿದ್ಯಾಲಯದ ಪದವಿಯೊಂದನ್ನೂ ಇವರು ಗಳಿಸಿರುವುದಿಲ್ಲ; ಎಂದ ಮೇಲೆ ಶಿಕ್ಷಣಪ್ರಸಾರ ಕಾರ್ಯದಲ್ಲಿ ಇಷ್ಟೊಂದು ಉತ್ಸಾಹವೆಲ್ಲಿಂದ ಬಂತು ಇವರಿಗೆ ? ' ಎಂದು ಹಲವರಿಗೆ ಆಶ್ಚರ್ಯ; ಆದರೆ ತೊರವಿಯವರಿಗೆ ತಮ್ಮ ಧ್ಯೇಯ-ಧೈರ್ಯಗಳ ಬಗ್ಗೆ ಎಷ್ಟೂ ಸಂದೇಹವಿರಲಿಲ್ಲ.

ಶ್ರೀ. ತೊರವಿಯವರು ಅಷ್ಟೊಂದು ಉಚ್ಚ ಶಿಕ್ಷಣ ಪಡೆದವರಲ್ಲ. ಮಾಧ್ಯಮಿಕ ಶಿಕ್ಷಣವನ್ನು ವಿಜಾಪುರದಲ್ಲಿ ಮುಗಿಸಿದ ಮೇಲೆ, ಡೆಕ್ಕನ್ ಕಾಲೇಜನ್ನು ಸೇರಿದರು. ಮೊದಲನೆಯ ವರುಷದ ಅಭ್ಯಾಸ ಮುಗಿಯುವಷ್ಟರಲ್ಲಿಯೆ ಬೇನೆಗೆ ಈಡಾಗಿ, ಪರೀಕ್ಷೆಗೆ ಕೂಡಲಾರದಾದರು. ಮರುವರುಷ ಮತ್ತೆ ಪರೀಕ್ಷೆಗೆ ಕುಳಿತರು, ಆದರೆ ತೇರ್ಗಡೆ ಹೊಂದಲಿಲ್ಲ. ಆಗಿನ ನಿಯಮಗಳಿಗನುಸರಿಸಿ ಕಾಲೇಜಿನ ಯಾವುದೇ ಪರೀಕ್ಷೆಗೆ ಎರಡು ಸಲಕ್ಕಿಂತ ಹೆಚ್ಚಿಗೆ ಕಟ್ಟಲು ಅವಕಾಶವಿರಲಿಲ್ಲ. ಹೀಗಾಗಿ ಕಾಲೇಜಿನ ಅಭ್ಯಾಸಕ್ಕೆ ಶರಣುಹೊಡೆಯಬೇಕಾಯಿತು. ಮರಳಿ ಊರಿಗೆ ಬಂದರು. ಬರುತ್ತಲೆ 'ಮುಂದೇನು ? ' ಎಂಬ ಪ್ರಶ್ನೆಯು ಮುಂದೆ ಬಂದಿತು. 'ರೆವ್ಹಿನ್ಯೂ' ಖಾತೆಯಲ್ಲಿ ನೋಕರಿಯನ್ನು ಮಾಡಬಾರದೆಂಬ ಇವರ ನಿರ್ಧಾರವು ಕೇವಲ ದೃಢವಾಗಿತ್ತು. ಯಾಕೆಂದರೆ ಇವರ ತಂದೆಯ ಕೈಯಲ್ಲಿಯೆ ದುಡಿಯುತ್ತಿದ್ದ ಅನೇಕರ ಯಾತನೆಗಳನ್ನು ಕಂಡು, ಅದರ ಬಗ್ಗೆ ಇವರಲ್ಲಿ ಅಷ್ಟೊಂದು ತಿರಸ್ಕಾರ ವುಂಟಾಗಿತ್ತು. 'ಹಾಗಾದರೆ ವಕೀಲಿಗಾಗಿ ಓದು ! ' ಎಂದು ಇವರ ತಂದೆ ಆಗ್ರಹಪಡಿಸಿದರು. 'ಇಲ್ಲ, ಒಳ್ಳೆ ವಕೀಲನೆನಿಸುವ ಆತ್ಮವಿಶ್ವಾಸ ನನ್ನಲ್ಲಿ ಇಲ್ಲ! ಅದಕಾಗಿ ನಾನು ಒಲ್ಲೆ ! ' ಎಂದು ಗುರುರಾಯರ ಹಟ. 'ನಾನು ಶಿಕ್ಷಕನಾಗುವೆ; ಅಲ್ಲದೆ ನನಗೆ ಅದರಲ್ಲಿ ಅಭಿರುಚಿಯೂ ಇದೆ. ನಾನು ಉತ್ತಮ ಶಿಕ್ಷಕನಾಗಬಹುದು ! ' ಎಂದು ಇವರ ಆಗ್ರಹ. ಅಂತೂ ತಂದೆ-ಮಕ್ಕಳಲ್ಲಿಯ ಮತಭೇದವು ಬಹುಕಾಲ ಮುಗಿಯಲಿಲ್ಲ. ಕೊನೆಗೆ ಗುರುರಾಯರೆ ಸೋಲಬೇಕಾಯಿತು. ಮನಸ್ಸಿಲ್ಲದಿದ್ದರೂ ಒತ್ತಾಯದ ಮೂಲಕ ವಕೀಲಿಯ ಅಭ್ಯಾಸವನ್ನು ನಡೆಯಿಸಿದರು. ಆದರೆ ಕೆಲದಿನಗಳಲ್ಲಿಯೆ ಅನಿರೀಕ್ಷಿತವಾಗಿ ಇವರ ತಂದೆಯವರು ತೀರಿದರು. ಇದರಿಂದ ಗುರುರಾಯರೇ ಮನೆತನದ ಹೊರೆಯನ್ನು ಹೊರುವ ಪ್ರಸಂಗ ಬಂದಿತು. ಇದರ ಸಂಗಡ ಬೇಡವಾದ ವಕೀಲಿಯ ಅಭ್ಯಾಸವನ್ನೂ ಬಿಟ್ಟು, ಬೇಕಾದ ಶಿಕ್ಷಕವೃತ್ತಿಯನ್ನೂ ಸ್ವೀಕರಿಸುವ ಸಂದರ್ಭವು ಒದಗಿತು. ಮೊದಲು ಹುಬ್ಬಳ್ಳಿಯ ಲ್ಯಾಮಿಂಗ್‌ಟನ್ ಶಾಲೆಯಲ್ಲಿ ನೌಕರನಾಗಿ ನಿಂತರು. ಕೆಲ ವರುಷಗಳಲ್ಲಿಯೆ 'ಸ್ವತಂತ್ರ ಶಾಲೆಯನ್ನು ಪ್ರಾರಂಭಮಾಡುವುದೆ ಯೋಗ್ಯ; ಬೇರೆಯವರ ಕೈಯಲ್ಲಿ ದುಡಿಯುವುದಾದರೆ ಶಿಕ್ಷಣದ ಸೇವೆಯನ್ನು ದಕ್ಷತೆಯಿಂದ ಮಾಡಲು ಸಾಧ್ಯವಾಗುವುದಿಲ್ಲ' ಎಂಬ ವಿಚಾರಗಳು ರೂಪುಗೊಂಡು, ಸಂಕಲ್ಪವನ್ನೂ ಮಾಡಿಯಾಯಿತು. ಕಾರಣಾಂತರಗಳಿಂದ ನೋಕರಿಯನ್ನು ಬಿಟ್ಟು ಶಾಲೆಯನ್ನು ಪ್ರಾರಂಭಮಾಡಿದರು. ಹೀಗೆ ಒತ್ತಾಯಕ್ಕಾಗಿ ವಕೀಲರಾಗಬಹುದಿದ್ದ ತೊರವಿಯವರು ತಮ್ಮ ಅಪೇಕ್ಷೆಯ ಮೇರೆಗೆ ಶಿಕ್ಷಕರಷ್ಟೆ ಅಲ್ಲ, ದೊಡ್ಡ ಶಿಕ್ಷಣಸಂಸ್ಥೆಯ ಸಂಸ್ಥಾಪಕರೂ ಆದರು.

ವ್ಯಕ್ತಿ-ವೈಶಿಷ್ಟ್ಯ

ತೊರವಿಯವರು ಬಹುಮಟ್ಟಿಗೆ 'ಹಟಮಾರಿ' ಎಂದು ಹೇಳಬಹುದು. ಅಂತೆಯೆ ಅವರು ಕೈಕೊಂಡ ಕಾರ್ಯಗಳನ್ನೆಲ್ಲ ಯಶಸ್ವಿಯಾಗಿ ನಡೆಯಿಸಲು ಸಮರ್ಥರಾಗಿದ್ದಾರೆ. ಯಾವುದೇ ವಿಷಯವನ್ನು ಕೈಕೊಳ್ಳುವುದಿದ್ದರೂ ತಮಗೆ ಆಪ್ತ-ಮಿತ್ರರೆನಿಸಿದ ಕೆಲವರೊಡನೆ ಅದರ ವಿಷಯ ಸಾಕಷ್ಟು ಚರ್ಚಿಸುವುದು ಇವರ ಸ್ವಭಾವ. ಯಾವುದೇ ಪ್ರಸಂಗದಲ್ಲಿ ತಮ್ಮ ವಿಚಾರಗಳು ತಪ್ಪಿವೆ ಎಂದು ಮನಗಂಡ ಹೊರತು, ಅವುಗಳನ್ನು ಎಂದೂ ಪರರ ವಿಚಾರಗಳಿಗೆ ಬಲಿಗೊಡರು. ಆದುದರಿಂದಲೆ ತಮ್ಮ ಶಾಲೆಯನ್ನು ತಮ್ಮ ಧ್ಯೇಯಗಳಿಗೆ ಹೊಂದಿಕೆಯಾಗುವಂತೆ ಬೆಳೆಯಿಸಿದ್ದಾರೆ. ಶಾಲೆಯ ಆಡಳಿತದ ವಿಷಯದಲ್ಲಿಯಂತೂ ಇವರ ಈ ಸ್ವಭಾವವು ತೀರ ಅನುಕೂಲವಾಗಿದ್ದಿತು. ಶಾಲೆಗಾಗಿ ಶಿಕ್ಷಕರನ್ನು ಆರಿಸುವ ಅಧಿಕಾರವನ್ನು ಇವರು ತಮ್ಮ ಕೈಯಲ್ಲಿಯೆ ಇಟ್ಟುಕೊಂಡಿದ್ದರು. ಇದರ ಬಗ್ಗೆ ಒಂದು ಸಮಿತಿಯಿರುತ್ತಿದ್ದರೂ, ಅದು ಇವರ ಅನುವರ್ತಿಯಾಗಿದ್ದಿತು. ಯಾಕೆಂದರೆ ಶಾಲೆಯ ಬಗ್ಗೆ ಇವರಷ್ಟು ಕಳಕಳಿಯಿಂದ ದುಡಿಯುವುದು ಬೇರೆಯವರಿಗೆ ಹೇಗೆ ಸಾಧ್ಯ ? " ನನ್ನ ಶಾಲೆಯಲ್ಲಿಯ ಪ್ರತಿಯೊಬ್ಬ ಶಿಕ್ಷಕನೂ ಒಂದೊಂದು ವಿಷಯದಲ್ಲಿಯಾದರೂ ಪ್ರವೀಣನಿರಬೇಕು; ಹಾಗಿದ್ದರೆಯೆ ಸಂಸ್ಥೆಗೆ ಭೂಷಣ! " ಎಂದು ಯಾವಾಗಲೂ ಇವರು ಎನ್ನುವರು. " ಏನು? ಐದು, ಹತ್ತು ರೂಪಾಯಿಗಳನ್ನು ಉಳಿಸುವದರೊಳಗೆ ಬಾದ್ ಜನರನ್ನ ತರಬೇಕಾಗತದ. ಸ್ವಲ್ಪ ಉತ್ತೇಜನ ಕೊಟ್ಟರ 'ಉತ್ತಮೋತ್ತಮ' ಜನರು ಸಿಗತಾರ; ಯಾಕ ನಾವು ಅಂಥವರನ್ನ ತರಬಾರದು ?" ಮುಂತಾಗಿ ಅವರ ಪ್ರತಿಪಾದನೆ. ಇದರ ಮೂಲಕವೆ ಇಂದಿನ ವರೆಗೂ ಇವರ ಸಂಸ್ಥೆಯಲ್ಲಿಯ ಶಿಕ್ಷಣದ ಹಂತವು ಮೇಲ್ತರಗತಿಯದಾಗಿದೆ.

ಇವರು ತೀರ ಕುಶಲ ಮುಖ್ಯಾಧ್ಯಾಪಕರಲ್ಲಿ ಒಬ್ಬರು-ಎಂದು ಹೇಳಬಹುದು. ಶಾಲೆಯ ಆಡಳಿತದಲ್ಲಿಯ ಯಾವುದೇ ವಿಷಯವನ್ನೂ ವಿಕೋಪಕ್ಕೆ ಹೋಗಗೊಡುತ್ತಿರಲಿಲ್ಲ. ಎಲ್ಲ ಗಡುಬಿನ ಪ್ರಶ್ನೆಗಳನ್ನೂ ಕೇವಲ ಉಪಾಯದಿಂದ ಬಿಡಿಸುತ್ತಿದ್ದರು. ಅಧಿಕಾರದ ದರ್ಪವನ್ನು ತೋರಿಸುವ ಆಡಂಬರ ಇವರಿಗೆ ಸೇರುತ್ತಿರಲಿಲ್ಲ. ಕೈಕೆಳಗಿನ ಶಿಕ್ಷಕರಿಗೆ ಮೇಲಧಿಕಾರಿ ಎನ್ನಿಸುವದಕ್ಕಿಂತ " ಹಿರಿಯ ಗೆಳೆಯ " ಎನ್ನಿಸುವಂತೆ ವರ್ತಿಸುತ್ತಿದ್ದರು. ಪ್ರಸಂಗ ಬಂದಾಗ ತಮ್ಮ ಅಧಿಕಾರ ತಮ್ಮ ವ್ಯಕ್ತಿತ್ವಗಳನ್ನು ಉಪಯೋಗಿಸುವುದರಲ್ಲಿಯೂ ಹಿಂದೆಮುಂದೆ ನೋಡುತ್ತಿರಲಿಲ್ಲ. ಆದರೆ ಒಂದು ಮಾತು ಮಾತ್ರ ನಿಶ್ಚಿತ. ಹೀಗೆ ಮಾಡುವುದಿದ್ದಲ್ಲಿ ಕೇವಲ ತಮ್ಮ ಸಂಸ್ಥೆಯ ಹಿತವೆ ಇವರ ದೃಷ್ಟಿಯಲ್ಲಿರುತ್ತಿತ್ತಲ್ಲದೆ ಬೇರೆ ಯಾವ ಸಂಕುಚಿತ ಭಾವನೆಯೂ ಇರಲು ಸಾಧ್ಯವಿಲ್ಲ. ಶ್ರೀಮಾನ್ ತೊರವಿಯವರ ಅಧಿಕಾರದಲ್ಲಿ

ವಾಗ್ವಿಲಾಸ ಬುಕ್‌ಡಿಪೋ ದುರ್ಗದಬೈಲು, ಹುಬ್ಬಳ್ಳಿ
ಇವರಲ್ಲಿ ದೊರೆಯುವ ಪುಸ್ತಕಗಳು

ಪೋಲೀಸಗಾಯಿಡು (ಕಲಕೋಟಿಕೃತ)	೨—೮—೦
ಒಕ್ಕಲತನದ ಸಾಂಪತ್ತಿಕ ಸ್ಥಿತಿ	೨—೬ ೦
ಉತ್ಪನ್ನದ ಮೇಲಿನ ಕರದ ಕೈಪಿಡಿ	೨—೪—೦
ಮುಂಬೈ ಇಲಾಖೆಯ ಸಹ. ಸಂ. ಕಾಯಿದೆ	೧—೮—೦
ಪಂಡಿತ ಜಗನ್ನಾಥರ ಚರಿತ್ರ	೧—೦—೦
ಸಂತಾನಶಾಸ್ತ್ರ (ಸಬರದಕೃತ)	೧—೪—೦
ತರುಣ ಶಕ್ತಿ	೦—೮ ೦
ಕಲಿತರೆ ಹೀಗೆ ಕಲಿಯಬೇಕು	೦—೫—೦
ಗೀತಾರ್ಥ ಬೋಧಿನಿ	೦ ೧೨—೦
ತತ್ವಲಾವಣಿ	೦ ೬—೦

ಅನ್ಯಾಯಕ್ಕೆ ಈಡಾದವರು ತೀರ ವಿರಳ. ಯಾರಾದರೂ ತಮಗೆ ಅನ್ಯಾಯವಾಗಿದೆಯೆಂದು ಭಾವಿಸುವುದಾದರೆ, ಅದರ ದೋಷವನ್ನು, ತೊರವಿಯವರ ಮೇಲೆ ಆರೋಪಿಸಲು ಬರುವಂತಿಲ್ಲ. ಯಾಕೆಂದರೆ ಸಂಸ್ಥೆ ಹಾಗೂ ವ್ಯಕ್ತಿಗಳಲ್ಲಿ ತಿಕ್ಕಾಟ ಬಂದಾಗ, ಕೇವಲ ಸಂಸ್ಥೆಯ ಹಿತದ ಪಕ್ಷ ವಹಿಸುವುದು ಇವರ ಸ್ವಭಾವ.

ಗೆಳೆತನಕ್ಕೆ ತೊರವಿಯವರು ತೀರ ಯೋಗ್ಯರೆಂದು ಅವರ ಎಲ್ಲ ಗೆಳೆಯರೂ ಅಭಿಪ್ರಾಯಪಡತ್ತಾರೆ. ಸ್ವಾರ್ಥ, ಮೋಸ ಮೊದಲಾದ ಸಂಕುಚಿತ ಭಾವನೆಗಳಿಗೆ ಇವರಲ್ಲಿ ಎಳ್ಳಷ್ಟು ಎಡೆಯಿಲ್ಲ. ಯಾವಾಗಲೂ ಆಶಾವಾದಿಗಳಾಗಿರುವುದರಿಂದ ಇವರ ಸ್ನೇಹದಲ್ಲಿದ್ದವರು ನಿರಾಶಾವಾದಿಗಳಾಗಿರುವುದು ಸಾಧ್ಯವೇ ಇಲ್ಲ. ತಮ್ಮಿಂದ ಯಾರಿಗಾದರೂ ಉಪಕಾರವಾಗುತ್ತಿದೆ ಎಂಬುವಾಗಲೆಲ್ಲ ಸಂಪೂರ್ಣ ಸಹಾಯವನ್ನು ನೀಡುವವರಿವರು. ಇಷ್ಟೇಕೆ: ತಮ್ಮ ಶಾಲೆಯಲ್ಲಿ ಕೆಲಸ ಮಾಡುವ ಬೇಕಾದ ಶಿಕ್ಷಕನಿಗೂ ಹೊರಗೆ ಹೋದರೆ ಹೆಚ್ಚು ಲಾಭ ಸಿಕ್ಕುವ ಭರವಸೆಯಿರುವಾಗ, ಅವರಿಗೆ ಎಂದೂ ಆತಂಕವೊಡ್ಡುವವರಲ್ಲ ಇವರು. ಅದಕ್ಕೆ ಬದಲಾಗಿ ಅವರ ಹಾಗೂ ತಮ್ಮ ಸಂಸ್ಥೆಯ ಮಧ್ಯೆ ಆಗಿದ್ದ ಕರಾರುಗಳನ್ನು ಕೂಡ ಬದಿಗಿಟ್ಟು, ಅನುವು ಮಾಡಿಕೊಡುವ ಉದಾರತೆ ಇವರಿಂದ ಕಲಿಯಬೇಕಾದುದು. ತಮ್ಮ ಸಂಸ್ಥೆಯ ಹಿತಕ್ಕೆಂದು ಬೇರೆಯವರ ಭವಿತವ್ಯವನ್ನು ಬಲಿಗೊಡುವುದು ಇವರಿಗೆ ಎಷ್ಟೂ ಸೇರುವುದಿಲ್ಲ.

ಗುಣ-ದೋಷಗಳು

ತೊರವಿಯವರೆಂದರೆ ಹರಟೆಯ ಮಲ್ಲರೆಂದು ಹೇಳಬಹುದು. ತಾಸುಗಟ್ಟಲೆ ಹರಟೆ ಹೊಡೆದರೂ ಇವರಿಗೆ ಬೇಸರಿಕೆಯಿಲ್ಲ. ಉಪಹಾಸವಿಲ್ಲ ಹರಟೆಯ ಶೈಲಿಯಲ್ಲಿ ಕೂಡ ಇವರದೇ ಆದ ಒಂದು ವೈಶಿಷ್ಟ್ಯ. ಕೇವಲ ಹಾಳುಹರಟೆಯನ್ನು ಹೊಡೆಯುವವರೂ ಅಲ್ಲ. ಅವರ ಸಂಗಡ ಮಾತನಾಡಿ ಬಂದಮೇಲೆ ಸ್ವಲ್ಪ ವಿಚಾರಿಸಿ ನೋಡಿದರೆ, ಮುಕ್ಕಾಲು ಪಾಲಿಗಿಂತ ಹೆಚ್ಚು ಅವರೇ ಮಾತನಾಡುತ್ತಿದ್ದರೆಂಬುದು ಮನಗಂಡು ಬರುವುದು. ಅವರ ಸ್ವಭಾವಕ್ಕೆ ಅಪರಿಚಿತರಾದವರಿಗೆ ಒಮ್ಮೊಮ್ಮೆ ಅವರ ಮಾತಿನ ಬಗ್ಗೆ ಬೇಸರವೂ ಎನಿಸುವುದುಂಟು. ವಿಜಯದಶಮಿಗೊಮ್ಮೆ ಹಾಗೂ ಸಂಕ್ರಮಣಕ್ಕೊಮ್ಮೆ ಶ್ರೀಮಾನ್ ತೊರವಿಯವರ ಮನೆಗೆ ‘ ಬಂಗಾರ ’ಕೊಡಲಿಕ್ಕೆಂದು ಹಾಗೂ ‘ಎಳ್ಳು’ ಕೊಡಲಿಕ್ಕೆಂದು ಅನೇಕರು ಹೋಗುತ್ತಿರುವುದು ವಾಡಿಕೆ. ಹೋಗುತ್ತಿರುವವರೆಲ್ಲರನ್ನೂ ಕೇಳಿದರೂ ಸರಿ: “ ಏನಪಾ, ತೊರವಿ ಮಾಸ್ತರ ಮನಿಗೆ ಹೋಗಬೇಕಾಗೇದ, ಆತು ಕಡೀಕ ಹೋದರಾತು; ಇಲ್ಲದಿದ್ದರೆ ಹರಟೆ ಹಚ್ಚಿದರಂದ್ರ ಆಯಿತು. ಉಳಿದ ಕಡೆಗೆ ಹೋಗುವದೆ ಆಗುವದಿಲ್ಲ. ” ಎಂದೇ ಹೇಳುವರು. ಆದರೆ ತೊರವಿಯವರು ಹರಟೆ ಹೊಡೆ-ಹೊಡೆಯುತ್ತ ತಮಗೆ ಬೇಕಾಗಿದ್ದ ಸಂಗತಿಯನ್ನು ಬಂದವರಿಂದ ಅವರಿಗೆ ತಿಳಿಯದಂತೆ ತಿಳಿದುಕೊಳ್ಳುವರು. ಅದೇ ಅವರ ಹರಟೆಯೊಳಗಿನ ರಹಸ್ಯ. ಹರಟೆಯಲ್ಲಿ ಮಲ್ಲರೆನಿಸಿದಂತೆ ಊಟಗಾರಿಕೆಯಲ್ಲಿಯೂ ಅವರು ಸಾಕಷ್ಟು ಸವಿಗಾರರು. ಅದಕ್ಕೆ ಅನುಕೂಲವಾಗುವಂಥ ದೇಹದಾರ್ಢ್ಯವೂ ಉಂಟು. ತಮ್ಮ ದಾರ್ಢ್ಯದ ಬಗ್ಗೆ ಅವರು ಮೇಲಿಂದಮೇಲೆ ಪ್ರಸಂಗ ಬಂದಾಗ ಹೇಳುವ ಮಾತುಗಳೆಂದರೆ: “ ನನ್ನ ಹಲ್ಲು ಇನ್ನೂ ಗಟ್ಟಿ ಅವ. ಎರಡೂ ಹೊತ್ತು ಊಟಮಾಡತೇನಿ ನಾನು. ಬೇಕಾದ್ಹಾಂಗ ಪಚನ ಆಗತದ ನನಗ ” “ ರಾತ್ರಿ ‘ಎರಡು ಮೂರರ ತನಕಾ ಓದತೇನಿ ಬರಿತೀನಿ. ’ ಮುಂತಾಗಿ. ತೊರವಿಯವರಿಗೆ ರೊಕ್ಕದ ಮೇಲೆ ಮಮತೆಯಿಲ್ಲ. ಹಣಗಳಿಸಿ ಸಿರಿವಂತರೆನಿಸಬೇಕೆಂಬ ಆಸೆಯು ಅವರಲ್ಲಿ ಅಂಕುರಿಸಿದಂತೆಯೆ ತೋರುವುದಿಲ್ಲ ಇದಕ್ಕೆ ಇವರು ಇರುವ ಮನೆಯೂ ಇವರ ಸರಳ ಜೀವನವೂ ಸಾಕ್ಷಿ. ಅರಿಯದವರಾರಾದರೂ ಇವರ ಮನೆಗೆಂದು ಹೊರಟು, ಅಲ್ಲಿ ಬಂದೊಡನೆ ಬೆಚ್ಚುವುದು ತೀರ ಸಹಜ: “ ಇದೇ ತೊರವಿಯವರ ಮನೆಯೆ? ” ಎಂದು. ಹಳೆಯ ತರದ ಮನೆ, ಗಿಡ್ಡ ಚೌಕಟ್ಟು, ಬಿದ್ದಿದ್ದರೂ ತಿರುಗಿ ಅದನ್ನು ಕಟ್ಟಿಸದ ಮನೆಯ ಮುಂದಿನ ಕೋಣೆ. ಹಣ ಗಳಿಸಿ ಅಂದಚೆಂದದ ಮನೆಯಲ್ಲಿ ಮೆರೆಯಬೇಕೆಂಬ ಅಭಿಲಾಷೆಯೆ ಇವರಲ್ಲಿಲ್ಲ ಶಿಕ್ಷಕನಿಗೆ ಅನುಗುಣವಾದ ಸಾದಾ ಜೀವನ ಅವರದು.

ತೊರವಿಯವರಿಗೆ ಕೈಯೊಡ್ಡುವ ಕಲೆ ಅಷ್ಟೊಂದು ಸಾಧಿಸಿಲ್ಲ ಎಂದು ಹೇಳಬಹುದು “ ಭಿಕ್ಷೆಬೇಡಿ ಸಂಸ್ಥೆ ಕಟ್ಟಬೇಕು! ” ಎಂಬ ತತ್ತ್ವದವರಲ್ಲ. ‘ ಸಂಸ್ಥೆಯನ್ನು ಕಟ್ಟಬೇಕು ಹಾಗೂ ಅದು ತನ್ನ ಯೋಗ್ಯತೆಯಿಂದಲೇ ಬಾಳಬೇಕು. ’ ಎನ್ನುವವರು ಸಹಾಯ ಸಹಕಾರಗಳನ್ನು ಕೇಳಲು ಹೋಗುವುದು ಅವರಿಗೆ ಒಗ್ಗದ ವಿಷಯ ಇದೊಂದು ಕಲೆಯು ಇವರಿಗೆ ಸಾಧಿಸಿದ್ದರೆ ಇನ್ನೂ ನಾಲ್ಕಾರು ಸಂಸ್ಥೆಗಳನ್ನು ಇವರು ಕಟ್ಟಬಹುದಿತ್ತು. ಇದು ಸಾಧಿಸದಿರಲಿಕ್ಕೆ ಅವರು ಬೆಳೆದಿದ್ದ ಮನೆತನದ ಒಳ್ಳೆ ಸ್ಥಿತಿಯೆ ಕಾರಣ. ಇವರು ತುಂಬಾ ಸ್ವಾಭಿಮಾನಿಗಳು ಶಿಕ್ಷಣಕ್ಕಾಗಿ ಇವರು ಇಷ್ಟೊಂದು ನಿಸ್ವಾರ್ಥ ಬುದ್ಧಿಯಿಂದ ದುಡಿದಿದ್ದಾರೆ ನಿಜವಾಗಿಯೆ ಇವರಿಂದು ಶಿಕ್ಷಣ ಪ್ರಚಾರಕ್ಕೆಂದ ಕೈಯೊಡ್ಡಿ ಹೊರಟರೆ, ಎಲ್ಲಿಯೂ ಬರಿಗೈಯಾಗುವ ಸಂಭವವಿಲ್ಲ.

ಸರಳ ಜೀವನವನ್ನು ಸಾಗಿಸಿ, ಶಿಕ್ಷಣದ ಉದಾತ್ತ ಸೇವೆಗಾಗಿ ದೇಹ ಸವೆಸಿದ ತೊರವಿಯವರಿಗೆ, ಭಾಗ್ಯವಿಧಾತ ಆಯುರಾರೋಗ್ಯವನ್ನು ಕೊಟ್ಟು ಕರ್ನಾಟಕದ ಸೇವೆಯನ್ನು ಮಾಡಿಸಲಿ!

ಅವಳ ಬಾಳು

(ಸಣ್ಣಕತೆ)

ಶ್ರೀ. ಪ್ರಾಣನಾಥ ಗಲಗಲಿ, ಬೆಳಗಾಂವಿ

' ಅಮ್ಮಾs 'ಎಂಬ ಕೂಗು ಆಕೆಗೆ ಎಚ್ಚರವನ್ನುಂಟುಮಾಡಿತು. ನೆನಹು ಮರಳಿತು. ತಾನು ಪೇಟೆಗೆ ಹೋದುದು, ಜನ ತನ್ನನ್ನು ಕಂಡು ಉಪಹಾಸಮಾಡಿದುದು, ರೇಶನಿಂಗ್ ತೆಗೆದುಕೊಳ್ಳಲೂ ಹಣ ವಿಲ್ಲದೆ ಬಳಲಿ, ಕೈಗಡ ಕೇಳಿದರೆ, " ನೀನು ಕೇಳಿದರೆ ಕೈಗಡವೇಕೆ, ಹಾಗೇ ಬೇಕಾದಷ್ಟು ಹಣ ಕೊಡುವೆ! " ಎಂದಾಗ ಮನೆಗೆ ಓಟಕಿತ್ತುದು, ಬಂದು ಹಾಸಿಗೆಯಲ್ಲಿ ಬಿದ್ದುಕೊಂಡು ಬಿಕ್ಕಿ ಬಿಕ್ಕಿ ಅಳುತ್ತಿದ್ದುದು ಇದಿಷ್ಟೇ ನೆನಪು; ಮುಂದೆ.......... ' ಅಮ್ಮಾ ' ಎಂಬ ಕೂಗೇ ಎಚ್ಚರಿಸಿದುದು. " ಅಮ್ಮಾs, ಹಸಿವು! " ಎಂಬ ಕೂಗಿಗೆ ತುಂಗಾ (ಬಾಯಿ) ಮೆಟ್ಟಿಬಿದ್ದಳು. ನಾಲ್ಕು ವರುಷದ ಮಗು, ಎರಡು ದಿನ ನೀರಿನ ಮೇಲೆಯೇ ಇದ್ದು ಸಾಯಲಾಗಿದ್ದಿತು. ಅದರ ಬಳಿಯಲ್ಲಿಯೆ ಅಸಹಾಯನಾದ ಪತಿದೇವ! ಹಾಂ, " ಪತಿ " ಏನು? ಪತಿಯೇ! ಇದನ್ನು ನೆನೆದಾಗಳೇ ' ಅಮ್ಮಾ ಹಸಿವು ' ಎಂಬ ಅಳುದನಿ ಕರುಳನ್ನೇ ಕೊಯ್ದಿತು. ' ಮ..ಗೂss ' ಎಂದು ಗಟ್ಟಿಯಾಗಿ ತುಂಗಾ ಎದೆಗವಚಿಕೊಂಡಳು ತನ್ನನ್ನೇ ತಿಂದು, ಮಗು ಹಸಿವನ್ನು ಹಿಂಗಿಸಿಕೊಳ್ಳುವಂತಿದ್ದರೆ, ತುಂಗಾ ಅದಕ್ಕೆ ಸಂತೋಷದಿಂದ ಒಪ್ಪುತ್ತಿದ್ದಳು. ಆ....ದ....ರೆ....ಮಗುವಿಗೆ, ಹೇಗೋ ಜೀವ ಹಿಡಿದಿದ್ದ—ಅಸಹಾಯನಾದ—ಪತಿದೇವನಿಗೆ ಏನನ್ನು ಕೊಡುವುದು? ತುಂಗಾ ನೆನೆದಂತೆ, ನೆನಹು ಕಣ್ಣಲ್ಲಿ ನೀರ ರೂಪದಿಂದ ಕಾಣಿಸಿಕೊಂಡಿತು. ಹೊಟ್ಟೆಯ ಉರಿ ನಂದುವುದೆಂತು? ಕೂಳು ಹೊಟ್ಟೆಗಿಲ್ಲ, ಎದೆಗಿಲ್ಲ! " ಮುಂದೇನು " ಎಂಬುದು ಹೃದಯದಲ್ಲಿ ದೊಡ್ಡ ಕೋಲಾಹಲವನ್ನೇ ಎಬ್ಬಿಸಿದೆ. ಹೃದಯ ಸ್ಫುರಿಸತೊಡಗಿತು. ಮಗುವನ್ನು ಇನ್ನೂ ಗಟ್ಟಿಯಾಗಿ ಅವಚಿಕೊಂಡು, ನೆಟ್ಟನೋಟದಿಂದ, ಎದುರಿಗಿದ್ದ ರಾತ್ರಿಯ ಕರಾಳ ರೂಪವನ್ನೇ ನೋಡತೊಡಗಿದಳು. ಬಾನಿನ ಚುಕ್ಕಿಗಳು ತನ್ನನ್ನು ಕಂಡು ಅಣಕಿಸಿ ನಗುತ್ತಿರುವಂತೆ, ಗಾಳಿ ಹಂಗಿಸುವಂತೆ ತೋರಿತು. ಆದರೂ ಆ ಕಡೆಗೇ, ಆ ಅನಂತ ಆಗಸದಲ್ಲಿಯೇ ಕಣ್ಣು ನೆಟ್ಟು, ಹಸಿವನ್ನು ತಡೆಯಲಾರದೆ, ಕಳೆದ ಜೀವನವನ್ನು ಮೆಲುಕು ಹಾಕತೊಡಗಿದಳು....................

೨

ತುಂಗೆಗೆ ತನ್ನ ಯೌವನವನ್ನು ನೆನೆದಾಗ ಬಾಳಬವಣೆ ಸ್ವಲ್ಪ ಹಗುರೆನಿಸಿದಂತಾಯ್ತು ಎದುರಿಗಿದ್ದ ವಿಶಾಲ ಆಗಸದಲ್ಲಿ, ಕಳೆದ ಬಾಳು ಕಾಣತೊಡಗಿತು. ಪ್ರತಿಯೊಂದು ತಾರೆಯೂ ತನ್ನ ಕಳೆದ ಬಾಳನ್ನು ಹೇಳುತ್ತಿರುವಂತೆ ಭಾಸವಾಯಿತು:

ತುಂಗೆಯ ಯೌವನದ ಆಕಾಂಕ್ಷೆಗಳು-ಒಳ್ಳೆಯ ಪತಿಯನ್ನಾಶ್ರಯಿಸಬೇಕು—ಆತ ತನ್ನನ್ನು ಪ್ರೀತಿಸಬೇಕು—ಮುಂತಾದವುಗಳು. ವಿಚಾರಗಳು ತರಂಗ-ತರಂಗವಾಗಿ ಕೊನೆಯಿಲ್ಲದೆ ಸಾಗಿದುವು: ಪತಿ ತಂದು ಹಾಕುವುದು, ತಾನು ಸಿದ್ಧಮಾಡಿ ಉಣಬಡಿಸುವುದು; ' ನಿನ್ನ ಅಡಿಗೆ ನಳಪಾಕ ನೋಡೆ, ' ಎಂದು ತನ್ನ ಪತಿ ಪ್ರಶಂಸೆ ಮಾಡಿದಾಗ, ' ಸಾಕು ಬಿಡಿ ಅಂದ್ರೆ ' ಎಂದು ಕಣ್ಣು ಕುಣಿಸಿ, ಮುಖದಲ್ಲಿ ನಗೆಯನ್ನು ತೇಲಿಸುವುದು; ಪತಿಗೆ ತಾಂಬೂಲ ಕೊಡಲು ಹೋದಾಗ, " ಎಲ್ಲಿ ಕೈಯ್ಯಲ್ಲಿ ತಾ! " ಎಂದು ತನ್ನನ್ನೇ ಜಗ್ಗಿಕೊಳ್ಳುವುದು.......ಮುಂತಾದ ಮುಂದಿನ ಕಲ್ಪನೆಗಳು, ತುಂಗೆಯ ಮೈಯಲ್ಲಿ ರೋಮಾಂಚಗಳನ್ನೆಬ್ಬಿಸಿದುವು ಹರ್ಷಿತಳಾದಳು. ಈ ಆನಂದ ಕ್ಷಣವೆ ಆದರೂ ಆನಂದ ತಾನೆ ಒಂದು ಕ್ಷಣ ಕಷ್ಟ ಮರೆತು ಕಣ್ಣು ಹಿಗ್ಗಿಸಿದಳು.......

ಆಗಸ ಇನ್ನೂ ನಿರಭ್ರವಾಗಿದ್ದಿತು ಅವೇ ಸುಂದರ ತಾರಾಗಣ. ಆದರೆ ಈ ಸುಂದರ ಬಾನನ್ನು ಮುತ್ತಲು, ದೂರದಲ್ಲಿ ಒಂದು ಮೋಡ ಹೊಂಚಿ ಇತ್ತ ಸರಿಯುತ್ತಿದ್ದಿತು.

....ತಾನು ಮತ್ತು ಪತಿಯು, ಎರಡು ದೇಹ ಒಂದು ಜೀವವಾಗಿ ಬದುಕಬೇಕು—ಎಂದು ತುಂಗೆಯ ಪ್ರಬಲ ಮನೀಷೆ. ತುಂಗೆಯ ಮನ ಹೀಗೆ ಕಲ್ಪನಾಲೋಲವಾದಾಗ, ತನ್ನ ತಂದೆ ವರಾನ್ವೇಷಿಯಾಗಿದ್ದುದು ತಿಳಿದುಬಂದಿತು ತನ್ನನ್ನು ಎರಡು ಮೂರು ಸಲ ತೋರಿಸಲು ಕರೆದೊಯ್ದರೂ, ಕನ್ಯಾ ಮನಸ್ಸಿಗೊಪ್ಪಿದರೂ, ವರದಕ್ಷಿಣೆಗಾಗಿ ಮುರಿದುಹೋದುದು ಈಕೆಯ ಚಿತ್ತವನ್ನು ಕೆರಳಿಸಿತು. ಅಂತಹ ಕನ್ಯಾ-ಪರೀಕ್ಷೆ, ಆಕೆಗೆ ಏಕೋ ಅಸಹ್ಯಕ್ಕಿಟ್ಟುಕೊಂಡಿತ್ತು. ಕನ್ಯೆಯನ್ನು ನೋಡಲು ಬಂದಾಗ, ಹೆಸರು ಕೇಳುವುದು, ಎಲ್ಲಿ ತೊದಲಿಸುವಳೊ—ಎಂಬಂಜಿಕೆಯಿಂದ ಓದಿಸುವುದು, ಕೊನೆಗೆ ಓಡಾಡಿಸುವುದು—ಹೆಳವೆಯೇ? — ಎಂಬಂಜಿಕೆಯನ್ನು ದೂರ ಮಾಡಿಕೊಳ್ಳುವುದಕ್ಕಾಗಿ. ತುಂಗೆಗೆ ಇದು ಸರಿಬೀಳಲಿಲ್ಲ. ' ದನಗಳನ್ನು ಕೊಳ್ಳುವವರೂ ಇಷ್ಟು ಚಿಕಿತ್ಸೆ ಮಾಡಲಾರರು ' ಎಂದು ತುಂಗೆಯ ವಾದ....

....ಹೀಗೆಯೇ ಕುಳಿತಾಗ ತುಂಗೆ ತನ್ನ ನಿಶ್ಚಯದ ಸುದ್ದಿಯನ್ನು ಕೇಳಿದಳು. " ನನ್ನ ಲಗ್ನದ ನಿಶ್ಚಯವೇ? " ಎಂದುಕೊಂಡಳು. ಎದೆ ಬಡಿದುಕೊಳ್ಳಲಾರಂಭಿಸಿತು. " ಲಗ್ನ " ಎಂಬ ವಿಚಾರ ಯಾವುದೋ ಒಂದು ತನ್ಮಯದ ಲೋಕಕ್ಕೆ ಒಯ್ಯುವುದು. ತನ್ನನ್ನು ನೋಡಲು ಬಾರದೆ, ಪರೀಕ್ಷಿಸದೆ ' ಗಂಡು ' ಲಗ್ನಕ್ಕೊಪ್ಪಿತೇ? ಅಥವಾ ' ಇದ್ದಂತೆ ಇರಲಿ ' ಎಂಬ ಉದಾಸೀನ ಭಾವವೋ? ಅಥವಾ..........ಮುಂದಿನ ವಿಚಾರಕ್ಕೆ ತುಂಗೆಯ ಮನ ಒಲಿಯಲಿಲ್ಲ. ಆದರೂ ಇದು ಆಕೆಗೆ ಸಮಸ್ಯೆಯಾಯಿತು. ಕೊನೆಗೆ ತಾಯಿಯೆಡೆಗೆ ಹೋಗಿ, ಮರೆಗೆ ನಿಂತು ಕೇಳಿಕೊಂಡಾಗ—ತನ್ನ ಪತಿಯಾಗುವವನು ತಾಯಿಯ ತಮ್ಮನೆಂದೂ, ತಾಯಿ ತನ್ನ ತವರು ಮನೆಯನ್ನು ನಿಲ್ಲಿಸಲು ತನ್ನ ತಮ್ಮನೊಡನೆ ತುಂಗೆಯು ಲಗ್ನವನ್ನು ಸ್ವತಃ ಮಾಡುವುದಾಗಿಯೂ—ತಿಳಿದುಬಂದಿತು. ತುಂಗೆ ತಾಯಿಯ ತಮ್ಮನನ್ನು ಎಂದೂ ನೋಡಿರಲಿಲ್ಲ. ಎಲ್ಲಿಯೋ ದೂರ ಇರುವನಂತೆ ಇವನ್ನು ಕೇಳಿದಾಗಲೇ, ತುಂಗೆಯ ವಿಚಾರಕ್ಕಾರಂಭವಾಯಿತು. ' ಪತಿ ಹೇಗಿರಬಹುದು? ರಸಿಕನೇ? ಸುಂದರನೇ? ನಗೆಗಾರನೋ? ಸಿಡುಕಿನವನೋ? ' ಎದೆಯಲ್ಲಿ ದೊಡ್ಡ ಕೋಲಾಹಲವೇ ನಡೆಯಿತು: ' ತನ್ನ ಯೌವನದ ಕನಸುಗಳು ಸತ್ಯವಾಗುವ ದಿನ ಸಮೀಪಿಸಿತೇ? ತನ್ನ ಜೀವವಿರುವವರೆಗೆ, ಎಂದರೆ ತನ್ನ ತಂದೆ-ತಾಯಿ ಯಾರೂ ಇಲ್ಲದಾಗ, ತನಗೆ ಜೊತೆಗಾರನಾಗುವವ ಹೇಗಿರಬಹುದು? ನನಗೆ ಸ್ವಾಮಿಯಾಗುವವ ಹೇಗಿರಬಹುದು? ನನ್ನ ಇಹಪರದ ಸಾರ-ಸರ್ವಸ್ವದ ಮೂರ್ತಿಯಾಗಿ

ಶೇಲಧಾ

ಎಂಟೀಮಲೇರಿಯಾ ವನಸ್ಪತಿ ಪಿಲ್ಸ್

ಎಲ್ಲ ತರದ ಜ್ವರ, ಜ್ವರಗಡ್ಡೆ, ತಜ್ಜನ್ಯ ಅಶಕ್ತತೆಯ ಮೇಲೆ ರಾಮಬಾಣ! ಲಿವರ್, ಹೊಟ್ಟೆನೋವು, ಮಲಬದ್ಧತೆ ಸುಧಾರಿಸಿ ಶಕ್ತಿ ಬೆಳೆಯಿಸುತ್ತವೆ! ಕ್ವಿನ್ಯಾನ್ ಬದಲು ವೈದ್ಯ-ಡಾಕ್ಟರರು ದವಾಖಾನೆಗಳಲ್ಲಿ ವಾಪರಿಸುವರು. ೧೦೦೦ ಗುಳಿಗೆಗಳಿಗೆ ರೂ. ೧೫; ೯೦ಕ್ಕೆ ೧-೧೩-೦. ಔಷಧದಲ್ಲಿ ಗುಣವಿಲ್ಲವೆಂದು ಸಿದ್ಧಮಾಡಿದವರಿಗೆ ೧೦೦೦ ರೂಪಾಯಿ ಬಹುಮಾನ. ಪ್ರತಿ ಊರಲ್ಲಿಯೂ ಮಾರುವ ಏಜಂಟರು ಬೇಕು.

ಶೇಲಧಾ ಕೆಮಿಕಲ್ ಕಂಪನಿ, ಸಿರಸಿ, ಉ. ಕ.

ಸೋಲ್ ಏಜೆಂಟರು:—

ಎಸ್. ಎಲ್. (ಅಪ್ಪುರಾವ) ಧಾಕಪ್ಪಾ

ಬಡವರ ಔಷಧಿ ಸರ್ವಿಸ್, ಸಿರಸಿ, ಉ. ಕಾನಡಾ

ಬಲಿರುವವ ಎಂತಿರುವ?" ಎಂದು ತುಂಗೆಯ ವಿಚಾರ ಮುನ್ನಡೆಯಿತು. ತನಗೆ "ಅವರು" ಎನ್ನುವವರು ಬರುವರು. ತಾನು "ಅವರಾಕೆ" "ಆಕೆ"...........ತುಂಗೆಗೆ ಮೈ-ಮುಳ್ಳು ಎದ್ದುವು. ಏನೇ ಇರಲಿ, ಎಂತೇ ಇರಲಿ, ತನ್ನ "ಅವರಿಗೆ" ತನ್ನನ್ನೇ ಅರ್ಪಿಸಿ ತಾನು ನಿಶ್ಚಿಂತಳಾಗಬೇಕು; "ಅವರಿಗೆ" ನೆರವಾಗಿ, "ಅವರ" ಕಲ್ಯಾಣಕ್ಕೆ ನೆರವಾಗಬೇಕು ಎಂದುಕೊಂಡು "ಅವರು ನನ್ನವರೇ" ಎಂದು ಅಭಿಮಾನಿತಳಾದಳು ತುಂಗೆಗೆ "ಅವರ"ನ್ನು ನೋಡುವ ಹಂಬಲ. "ನನ್ನ ಸ್ವಾಮಿಯನ್ನು ನನಗೆ ನೋಡಲು ಅವಕಾಶವಿಲ್ಲವೇ?" ಎಂದು ಮನದಲ್ಲಿಯೇ ವಾದಿಸಿದಳು. ಆದರೆ ಆ ಸ್ವಾಮಿಯ ದರ್ಶನವು ಅಕ್ಷತಾಕಾಲವನ್ನು ಉಳಿದು ಇತರ ಸಮಯಗಳಲ್ಲಿ ಸಾಧ್ಯವಿಲ್ಲ ಎಂಬುದನ್ನರಿತು ಆ ಸುಮುಹೂರ್ತಕ್ಕಾಗಿ ಕಾದು ಕುಳಿತಳು

"ಅವರ" ನೆನಪಿನಲ್ಲಿ ತುಂಗೆಯ ಕಣ್ಣು ಅರಳಿದುವು ಆಕಾಶದ ದೂರದ ಮೋಡ, ಅಗಣಿತ ತಾರಾಗಣವನ್ನು ಗರ್ಭೀಕರಿಸಿಕೊಳ್ಳುತ್ತ, ಇನ್ನೂ ಇನ್ನೂ ಸನಿಹಕ್ಕೆ ಬರತೊಡಗಿತ್ತು

ಶುಭದಿನ. ಮುಹೂರ್ತ ಸಮೀಪಿಸಿತು. ತುಂಗೆಯು, "ಇನ್ನೇನು ಅವರನ್ನು ನೋಡುವೆ" ಎಂದುಕೊಳ್ಳುತ್ತಿರುವಾಗಲೇ, ಪುರೋಹಿತರ "ವಧೂನ್ನ ಕರೀರಿ" ಎಂಬ ಧ್ವನಿಗೆ ಬೆಚ್ಚಿದಳು. ತುಂಗೆಯ ಎದೆ ತೋಪ, ಲಜ್ಜೆಯಿಂದ ಹಾರತೊಡಗಿತು.

ಅಂತಃಪಟ ಸರಿದು, "ಅವರ"ನ್ನು ಕದ್ದು ನೋಡಿದಾಗ, "ಅವರು" ಚೆಲುವಿನಲ್ಲಿ ತನಗೂ ಮಿಗಿಲು ಎಂಬುದನ್ನರಿತು, ಹಿಗ್ಗಿದಳು. ಮತ್ತೆ ಮತ್ತೆ ನೋಡಿದಳು. ಆದರೂ ಕಣ್ಣಿಗೆ ತಣಿವಿಲ್ಲ. ಲಜ್ಜೆ ತಡೆಯದಿದ್ದರೆ, ಆ ಕಣ್ಣುಗಳು ಅಲ್ಲಿಯೇ ನೆಡುತ್ತಿದ್ದುವೋ, ಏನೋ! ಆದರೆ ಪತಿಯ ಗಾಂಭೀರ್ಯ ಕಂಡು ಚಕಿತಳಾದಳು. "ಒಂದು ಮಾತನ್ನೂ ಆಡಬಾರದೇ?" ಎಂದು ನಸು ಮುನಿಸಿನಿಂದ "ಅವರ"ನ್ನು ಕಣ್ಣಿನಿಂದಲೇ ಕೇಳಿದಳು. "ನನ್ನ 'ಅವರಿ'ಗೆ ಈ ಶ್ರೀಮದ್ಗಾಂಭೀರ್ಯವೂ ಶೋಭೆಯೆ!" ಎಂದು ಪತಿಯನ್ನು ಒಪ್ಪಿಕೊಂಡಳು. "ಗಂಡುಸರು ಹಾಗೆಯೇ ಇರಬೇಕು!" ಎಂದುಕೊಂಡು, ಮತ್ತೆ ಮತ್ತೆ ತನ್ನ ಕಣ್ಣುಗಳನ್ನು 'ಅವರ' ಮೇಲೆ ಹರಿಬಿಟ್ಟಳು ಆದರೆ 'ಅವರ' ಕಣ್ಣಲ್ಲಿ ದೀನಭಾವದ ಹೊರತು ಮತ್ತೇನೂ ಕಾಣಲಿಲ್ಲ. 'ಅವರ' ಉಸಿರಲ್ಲಿ, ದೃಷ್ಟಿಯಲ್ಲಿ ಅಪರಾಧದ ಧ್ವನಿ ಧ್ವನಿಸುತ್ತಿದ್ದಿತೇ ಹೊರತು, ನಗುವಿನ ಲಹರಿ, ಗೆಲುವಿನ ಕುರುಹು, ಹೊಸ ಬಾಳಿಗಾಗಿ ಆತುರತೆ, ಇವಾವುವೂ ಕಾಣಲಿಲ್ಲ ಮುಖ ಉದಾಸೀನತೆಯಿಂದ ಕೂಡಿದ್ದಿತು. ದೀರ್ಘಚಿಂತಾಮುದ್ರಿತವಾಗಿದ್ದಿತು. ಇದನ್ನು ಕಂಡ ತುಂಗೆ, "ಹೀಗೇಕೆ ಅವರು?" ಎಂದು ಅದೇ ಗಳಿಗೆಗೆ ಚಿಂತಿಸಿದಳು. "ಈಗೇನು ಅವರಿಗೆ ಚಿಂತೆ? ಲಗ್ನಕ್ಕೆ ಮನಸ್ಸಿಲ್ಲವೇ? ನಾನು ಮನಸ್ಸಿಗೆ ಒಪ್ಪಲಿಲ್ಲವೇ? ಏನು........" ಎಂದು ಯೋಚನಾ ತರಂಗಗಳು ಒಂದರ ಹಿಂದೊಂದು ನಡೆದುವು. "ನಾನೇ ಮಾತನಾಡಿಸಲೇ?" ಎನಿಸಿಬಿಟ್ಟಿತು ತುಂಗೆಗೆ. ಆದರೆ ತಾನು ನೆಲವನ್ನು ಬಿಟ್ಟು ಬೇರೆಡೆಗೆ ನೋಡಲಾರದವಳಾಗಿದ್ದಳು. ಲಜ್ಜೆ ಆಕೆಯ ಶಿರವನ್ನು ಬಾಗಿಸಿತ್ತು. ತುಂಗೆಯ ಕಣ್ಣು ಭೂಮಿಯಲ್ಲಿ ನೆಟ್ಟಿದ್ದರೂ, ಕಿವಿ ಮೇಲೆಯೆ ಯಾರು ಮಾತನಾಡಿದರೂ, "ಪತಿಯೊಡನೆ ಮಾತನಾಡುವರೇ?" ಎಂದು ಶಂಕಿಸುವಳು ಯಾವ ಹೊಸ ದನಿಯನ್ನು ಕೇಳಿದರೂ, "ಅವರದೇ ಧ್ವನಿ" ಎನ್ನುವಳು. ಆಕೆಯ ಕಿವಿ ಎಲ್ಲರ ಬಾಯಿ (ಮುಖ)ಗಳನ್ನು ನೋಡುತ್ತಿದ್ದಿತು. ಹತ್ತಿರದಲ್ಲಿ ತನ್ನ ತಾಯಿ ಯಾರೊಡನೆಯೊ ಮಾತನಾಡುತ್ತಿದ್ದುದು ಕೇಳಿಸಿತು. ತಾಯಿಗೆ ಉತ್ತರವಾಗಿ, "ಆಂ, ಉಂ, ಊಂ, ಏ, ಊಂ, ಹುಂ," ಎಂಬ ಮೂಕನ ಮಾತುಗಳು ಕೇಳಿಸಿದುವು. 'ತಾಯಿಗೆ ಗುರುತಿದ್ದ ಮೂಕನಾವ?' ಎಂದು ತುಂಗೆಯ ವಿಚಾರ 'ಯಾರನ್ನಾದರೂ ಕೇಳೋಣವೇ' ಎನ್ನಿಸಿತು. 'ಮೇಲೆ ಕಣ್ಣೆತ್ತಿ ನೋಡಿಬಿಡಲೇ' ಎಂದು ತವಕಿಸಿದಳು ತುಂಗೆ. ಲಜ್ಜೆ ಆಕೆಯನ್ನು ತಡೆಯಿತು. ಮತ್ತೆ ತನ್ನ ಸನಿಹಕ್ಕೇ ಆ ಮೂಕನೊಡನೆ ಮಾತನಾಡುವುದು, ಆ ಮೂಕನ ಸ್ವಸೂಚಕ (ಆಂ, ಊಂ, ಹುಂ.) ಉತ್ತರ ಕೇಳತೊಡಗಿತು. 'ಯಾರಿರಬಹುದು?' ಎಂಬ ಯೋಚನೆಯೊಡನೆ, ಮತ್ತಾವುದೋ ವಿಚಾರ ತುಂಗೆಯ ಎದೆಯನ್ನು "ಧಸಕ್" ಎನ್ನಿಸಿತು. ಮತ್ತೆ ತಾನೇ, "ಛೆ, ಹಾಗೆಂದಿಗೂ ಶಕ್ಯವಿಲ್ಲ. ತಾಯಿ-ತಂದೆಗೆ ಅಷ್ಟು ವಿಚಾರವಿಲ್ಲವೆ?" ಎಂದು ಸಮಾಧಾನಪಡಿಸಿಕೊಂಡರೂ, ಎದೆ ಬಹು ವೇಗದಿಂದ ಹಾರತೊಡಗಿತು "ಹೀಗೇಕೆ?" ಎಂದು ಎದೆಯನ್ನು ಕೇಳಿ ನಿರಾಶಳಾದಳು. ಮನಸ್ಸಿಗೆ ಸಮಾಧಾನವಾಗಲಿಲ್ಲ "ದೇವಾ........... ಛೀ. ಇಲ್ಲದ ಸುಟ್ಟು ಕಲ್ಪನೆ, ಶುಭ ಸಮಯದಲ್ಲಿ!" ಎಂದು ಹೃದಯದ ಕಳವಳ ನಿಲ್ಲಿಸಲು ಯತ್ನಿಸಿದಳು. ಎದೆ ಕೇಳಲಿಲ್ಲ. ಇನ್ನೂ ದಡದಡಿಸತೊಡಗಿತು. ಎದೆಗೆ ಕೈಯಿಟ್ಟು, "ಇಂದೇ ಒಡೆದು ಹೋಗುವುದೋ?" ಎಂದು ಸಿಡುಕಿದಳು. ಅಷ್ಟರಲ್ಲಿ ಪುರೋಹಿತರು, "ಎಲ್ಲಿ ಕೈ ಹಚ್ಚವ್ವಾ" ಎಂದರು, ಲಜ್ಜೆಯ ಅತಿಭಾರದಿಂದ ಕೈ ಜಡವಾಗಿಯೇ—ಮೆಲ್ಲನೇ—ಮುಂದೆ ಸಾಗಿ, ಹಾದೋ ಅಲ್ಲೋ, ಎನ್ನು-

ನಂತೆ ಪತಿಯನ್ನು ಸ್ಪರ್ಶಿಸಿದಳು. ಎದೆ ಇನ್ನೂ ಜೋರಾಗಿ ಬಡಿದು ಕೊಳ್ಳಲಾರಂಭಿಸಿತು. ಮತ್ತೆ ಅದೇ ಮೂಕಧ್ವನಿ ತನ್ನ ತೀರ ಸನಿಹಕ್ಕೆ ಕೇಳಿಸಿತು. ತುಂಗೆ ತನ್ನ ಕಿವಿಯನ್ನು ತಾನು ನಂಬಲಿಲ್ಲ. ತನ್ನ ತಾಯಿ-ತಂದೆಯೊಡನೆ ಅದೇ ಧ್ವನಿ. 'ಏನು ? ಏನು ?' ಎಂದು ಎದೆ ನಡ್ಕುಳಸಮೇತ ಹಾರತೊಡಗಿತು ಬೆಚ್ಚಿದಳು. ಚಣ ಲಜ್ಜೆತೊರೆದು, ಮೇಲೆ ನೋಡಿದಳು; ಪತಿ ಕೈಸನ್ನೆಯಿಂದ ತಾಯಿಯೊಡನೇ—ಮಾತ ನಾಡುತ್ತಿದ್ದಾನೆ. ಎದೆಗೆ ಕೈಯಿಟ್ಟಳು. ತನ್ನ ಕಣ್ಣನ್ನೇ ತಾನು ನಂಬದಾದಳು. ಕಣ್ಣನ್ನು ಇನ್ನೂ ಅಗಲವಾಗಿ ಹಿಗ್ಗಿಸಿದಳು. ಮತ್ತೆ......ಮತ್ತೆ........ನೋಡಿದಳು. ಅದೇ ದೃಶ್ಯ. ಎದೆ ಒಡೆಯು ವಂತಾಯ್ತು. ಸ್ವಲ್ಪ ಹಿಂದೆ ಸರಿದು " ನ.......ನ್ನ.........ಪ.........ತಿ ....ಮೂ.........ಕ ! ಅಯ್ಯೋ ! " ಎಂದಳು ತುಂಗೆ. ಬ್ರಹ್ಮಾಂಡವೇ ಒಡೆದಂತೆ ತೋರಿತು ಆಕೆಗೆ. ಜಗತ್ತು ತಿರುಗುತ್ತಿರುವಂತೆ ಭಾಸವಾಯಿತು. ಪ್ರಲಯ ಇದಕ್ಕಿಂತಲೂ ಬೇರೆ ಉಂಟೇ ? ಎನುವಂತಾಯ್ತು. ಆ ಕನಸು, ಕಲ್ಪನೆ, ಆಶೆಗಳೆಲ್ಲಾ ಸಮಾಧಿ ತಳೆದುವು. ತುಂಗೆಗೆ "ಮುಂದೆ" ಮುಂದೆಯಾಗಿಯೆ ತೋರಿತು. ಆ "ಮುಂದೆ"ಗೆ ಅಂತವಿಲ್ಲವೇ ? ಮುಂದು, ತನ್ನ ಮುಂದಿನ ಬಾಳು, " ಅಯ್ಯೋ-ಅಯ್ಯೋ " ಎಂಬ ದುಃಖದ ಧ್ವನಿಯಿಂದ ಪ್ರತಿಧ್ವನಿತವಾಗುತ್ತಿದ್ದುದನ್ನು, ತುಂಗೆಯ ಕಣ್ಣು ಕಂಡಂತಾಯ್ತು. ದುಃಖವನ್ನೇ ಉಂಡು, ಅವನ್ನೇ ತೊಟ್ಟು, ಅದನ್ನು ಬಳಸಿ, ಕಣ್ಣೀರಿಡುತ್ತ ಬಾಳುವೆ ನಾಗಿಸುವ ಚಿತ್ರ, ತುಂಗೆಯ ಚಿತ್ತದಲ್ಲಿ ಸುಳಿಯಿತು. ಕಣ್ಣಿನ ನೀರು, ಕಪೋಲದಿಂದ ಸೆರಗಿಗೆ ಧಾರೆಯಿಟ್ಟಿತು........ತುಂಗೆಗೆ ತನ್ನ ಭವಿಷ್ಯಜೀವನ ಪ್ರಗಾಢ ಅಂಧಕಾರಮಯವಾಗಿ ತೋರಿತು........

\+ + + + + +

ಆ ಹಿಂದಿನ ನೆನಪು, ಇಂದೂ ತುಂಗೆಗೆ ದುಃಖವನ್ನುಂಟು ಮಾಡಿತು. ಕಣ್ಣೀರನ್ನೊರಸಿ, ಕಣ್ಣನ್ನು ಪಿಳುಕಿಸಿದಳು ಬಾನಿನ ಮೋಡ ತನ್ನನ್ನೆ ನುಂಗುವಂತೆ—ತೀರ ಸನಿಹಕ್ಕೆ ಬಂದಂತೆ—ತೋರಿತು. ಮತ್ತೆ ಅದೇ ನೆನಪನ್ನು ಮೆಲ್ಲತೊಡಗಿದಳು:

ತುಂಗೆಯ ಮುಂದಿನ ಜೀವನವು ದುಃಖದ ಮಡುವು. ಮೂಕನು ಮೂಕನೇ. ಆತನಿಗೆ ಸಮಾಜದಲ್ಲಿ ಯಾವ ಸ್ಥಾನ? ಆದರೂ ಒಪ್ಪತ್ತು ತಿಂದು ಒಂದು ವರುಷದ ವರೆಗೆ ಬಾಳುವೆ ಮಾಡುವಷ್ಟು, ಮೂಕನ ಪಿತ್ರಾರ್ಜಿತ ಆಸ್ತಿಯಿದ್ದಿತು. ಮೂಕನನ್ನು ಕುರಿತು ಜನ ಆಡಿಕೊಂಡಾಗ, ತುಂಗೆಗೆ ಬರೆ ಕೊಟ್ಟಂತಾಗುವುದು. " ಮೂಕಾ, ನಿನ್ನ ಹೆಂಡತಿ ಹೇಗೆ ' " ಎಂದು ಕೇಳಿ ಹಾಸ್ಯ ಮಾಡುತ್ತಿದ್ದುದ. ಆಕೆಗೆ ಅಸಹನೀಯವಾಯಿತು. ತುಂಗೆ ಓಣಿಗುಂಟ ಹೊರಟರೆ, " ಅದೋ ಮೂಕನ ಹೆಂಡತಿ " ಎಂದು ಬೊಟ್ಟು ಮಾಡಿ " ಮೂಕನಿಗೂ ಇಂತಹ ಹೆಂಡತಿಯೇ ? " ಎಂದು ನೆರವಿ ಉಪಹಾಸ ಮಾಡುತ್ತಿದ್ದಿತು ತುಂಗೆಗೆ ದುಃಖಮಿಶ್ರಿತ ಆಶ್ಚರ್ಯ: ಬಾಯಿ ಇಲ್ಲದಿದ್ದರೆ ಮನುಷ್ಯತ್ವವೇ ಇಲ್ಲವೇ ? ಹಸಿವೆ, ನೀರಡಿಕೆ, ಕಾಮನೆ, ಸುಖ-ದುಃಖ ಮೂಕನಿಗಿಲ್ಲವೇ ? ' ಮೂಕನೂ ಮನುಷ್ಯ 'ಎಂದು ತಿಳಿಯುವಷ್ಟು, ಸಮಾಜಕ್ಕೆ ಸಹಾನುಭೂತಿ ಎಲ್ಲಿ ? ಇದು ತುಂಗೆಗೆ, ತಾನು ಮಗುವನ್ನು ಹಡೆದಾಗ, ಇನ್ನೂ ಸ್ಪಷ್ಟವಾಯಿತು. " ಮೂಕನಿಗೂ ಮಗು ಅಂತೆ " ಎಂದು ಜನ ಅಚ್ಚರಿಪಡುತ್ತಿದ್ದಿತು. " ಮಗು ಏನು


ಡೋಂಗರೆ ಬಾಲಾಮೃತ
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

ಮೂಕನದೋ ಮತ್ತ್ಯಾ.............." ಎನ್ನುವವರೆಗೂ ಜನಗಣ ಮುಂದುವರೆಯಿತು. ತುಂಗೆಗೆ ಇವನ್ನು ಕೇಳಿದಾಗ, ' ಬದುಕಿಗಿಂತ ಸಾವಿನಲ್ಲಿ ಸುಖವಿರಬಹುದು ' ಎನಿಸಿದಲ್ಲಿ ಆಶ್ಚರ್ಯವೇನು ?

ಮೂಕನಿಗೆ ಇದೆಲ್ಲ ತಿಳಿಯದೇ ? ತನ್ನಿಂದ ಹೆಂಡತಿಗೆ ಸುಖವಿಲ್ಲ, ಎಂಬುದನ್ನು ಚೆನ್ನಾಗಿ ಅರಿತಿದ್ದನು. ಆದರೆ ಹೆಂಡತಿಯಿಂದ ತನಗೆ—ಮೂಕನಿಗೆ—ಸುಖವಿತ್ತು. ಹೆಂಡತಿಯ ಸುಖಕ್ಕಾಗಿ, ತಾನು ಸಂನ್ಯಾಸ ಸ್ವೀಕರಿಸುವಷ್ಟು ದೇವಭಾವ, ಉದಾರತೆ ಮೂಕನಲ್ಲಿರಲಿಲ್ಲ, ಇರುವುದೂ ಸಾಧ್ಯವಿಲ್ಲ. ಮೂಕ ಸಾಮಾನ್ಯ ಮನುಷ್ಯ ಮಾತ್ರ, ದೇವಜಾತಿಯವನಲ್ಲ. ಮೂಕ ಮೂಕತನದಿಂದಲೇ ಬೋಧಿಸಿದ್ದು, ತುಂಗೆ ತಿಳಿದ ವಿಷಯ. ಮೂಕನ ಈ ದೀನ-ಅಸಹಾಯ-ಪರಿಸ್ಥಿತಿಗೆ ತುಂಗೆ ಕನಿಕರಪಟ್ಟದ್ದು, ಕಣ್ಣೀರ ಹರಿಸಿದ್ದು ಅಷ್ಟಿಷ್ಟಲ್ಲ. ತನ್ನ ಈ ಪರಿಸ್ಥಿತಿಗೆ, ಯಾರು ಕಾರಣರೆಂದು ತಿಳಿಯದೆ, ಯಾರಿಗೆ ದೋಷ ಕೊಡಬೇಕು ಎಂಬುದು ಹೊಳೆಯಲಾರದೆ, " ದೇವಾ, ನಿನ್ನ ಇಂತಹ ಸೃಷ್ಟಿಗಿಂತ ಪ್ರಲಯವೇ ಲೇಸು! " ಎಂದು ಬಿಸುಸುಯ್ಯುತ್ತಿದ್ದಳು.

ಆದರೆ ಇತ್ತೀಚೆಗೆ, ಆ ದುಃಖ ವಿಪರೀತಕ್ಕಿಟ್ಟುಕೊಂಡಿತ್ತು. ಯುದ್ಧದ ಜ್ವಾಲೆ, ಮೊದಲೇ ಬೇಯುತ್ತಿದ್ದ ಬಾಳ-ಬಣವೆಯನ್ನು ಇನ್ನೂ ಬೇಯಿಸತೊಡಗಿತ್ತು. ಬೆಳೆದು ಬಂದುದೆಲ್ಲ ಸರಕಾರಕ್ಕೆ. ಕಾಳು ಬೇಕಾದವರು ರೇಶನಿಂಗಿಗೆ ಓಡಬೇಕು. ಗುದ್ದಾಡಿ ಬಾಯಿ ಮಾಡಿ ತರಬೇಕು. ಇದು ಮೂಕನಿಗೆ ಸಾಧ್ಯವೇ ? ರೊಕ್ಕವಾದರೂ ಬೇಡವೇ ? ಬೇಡ; ರೊಕ್ಕ ತಂದರೂ ಮೂಕನಿಗೆ ಲೆಕ್ಕ ತಿಳಿದೀತೆ ?

ಸೊಲ್ಲಾಪುರದಲ್ಲಿ ನಮ್ಮ ಏಜಂಟರು :

ಶ್ರೀ. ಎಸ್. ಎಚ್. ದೇಶಪಾಂಡೆ

ನ್ಯೂಜ್ ಏಜನ್ಸಿ

'ಝುಂಬ್ರೇವಾಡಾ, ಸೌಥ್ ಕಸ್ಬಾ, ಮನೆ ನಂ. ೫೩೭.

ಕಾರಣ ತುಂಗೆ ಸ್ವತಃ ಹೋಗಬೇಕು. ಹೋದರೆ...........ಕಾಮಿಗಳ ಚುಚ್ಚುಗಣ್ಣು; ಇಲ್ಲದಿದ್ದರೆ ಏಕಾದಶಿ ಮಾಡಬೇಕು. ಎಷ್ಟು! ದಿನ? ಮಗುವಿಗೆ ಸಾಧ್ಯವೆ?

*

ಇಂದು ತುಂಗೆ ತನ್ನ ಬದುಕಿನ ಈ ದೀರ್ಘ ಸಿಂಹಾವಲೋಕನದಿಂದ, ಮತ್ತೆ ಅದೇ ವಿಷಯಕ್ಕೆ ಬಂದಳು; "ಹೊಟ್ಟೆಗೇನು? ಮುಂದೇನು?" ಎಂಬ ಪ್ರಶ್ನೆ ಮತ್ತೆ ಮುಂದೆ ಧುತ್ತೆಂದಿತು. ಈ ತಪ್ತಹೃದಯದಿಂದ, "ಇಂತಹ ನನ್ನ ಬದುಕು ಬದುಕೇ?" ಎಂಬ ವಿರಾಗಭಾವಕ್ಕೆ ಮುಟ್ಟಿದಳು. "ನನ್ನ ಬದುಕೇ ಸಾವು; ನನಗೆ ಸಾವು ಬದುಕಿನ ಭೇದವೆಂದರೆ, ಒಂದು ನಿತ್ಯ; ಇನ್ನೊಂದು ಶಾಶ್ವತ! ಶಾಶ್ವತ ಸಾವು ಒಂ............ದ............" ಸಾವಿನ ವಿಚಾರಕ್ಕೆ ಎದೆ 'ಝುಲ್' ಎಂದಿತು. "ಸಾ... ....ವೇ?........" ಎಂದು ನಿಡಿದುಸಿರು ಬಿಟ್ಟು, "ಮ........ಗೂ......." ಎಂದುಕೊಂಡು ಕಣ್ಣೀರ ಹರಿಸತೊಡಗಿದಳು. 'ಬದುಕುವುದೇ, ಸಾಯುವುದೇ?' ಎಂಬುದು ಸಮಸ್ಯೆಯಾಯಿತು. ಬದುಕುವುದೋ—ಮೂಕನ ಹೆಂಡತಿಯಾಗಿ ಅವಮಾನಿತಳಾಗಿ, ದಾರಿದ್ರ್ಯ ಮಗು, ಅದರ ದುಃಖ ಕಣ್ಣಿಂದ ಕಾಣುತ್ತ ಬದುಕುವುದು ಬದುಕೇ? "ಅಯ್ಯೋ" ಎಂದಳು. ವಿಚಾರ ಕುಂಠಿತವಾಯಿತು. "ಜೀವದಿಂದ ಇದ್ದು ಈ ಕಣ್ಣಿಂದ ಮಗು ದುಃಖ ಪಡುವುದನ್ನು ನೋಡಲಾರೆ. ನಾನೇ ಕಣ್ಣು ಮುಚ್ಚಬೇಕು!" ಎಂದು ತನ್ನ ಸಾವಿನ ವಿಚಾರಕ್ಕೆ ಬಂದಳು. ತಾನು ಹೋದರೆ........ಮಗುವನ್ನು ನೋಡುವವರಾರು? ಮೂಕನೇ? ಅವನನ್ನೇ ಒಬ್ಬರು ನೋಡಬೇಕು! ಮಗು........ಅನಾಥವಾಗಿ—ಮೂಕನ ಮಗನಾಗಿ....! ಅದರ ಕಷ್ಟ, ದುಃಖ, ಅವಮಾನ ತುಂಗೆ ತಿಳಿದಿದ್ದಳು. "ಮೂಕನಿಗೆ, ಮೂಕನ ಸಂಸಾರಕ್ಕೆ ಈ ವಿಶ್ವದಲ್ಲಿ ಸ್ಥಾನವಿಲ್ಲ; ಸಮಾಜ ನಮ್ಮನ್ನು ಧಿಕ್ಕರಿಸಿದೆ: ಸಮಾಜ ದುಡ್ಡಿದ್ದವರಿಗೆ ಮಣೆ ಕೊಟ್ಟೀತು. ನನ್ನ ಮಗುವಿಗೆ ಅಂತಹ ಸಮಾಜದಲ್ಲಿ ತಿರಸ್ಕಾರವಲ್ಲದೆ ಮತ್ತೇನು ದೊರಕೀತು? ಮೇಲೆ ಮೂಕನ ಮಗ........ಅಯ್ಯೋ, ಮೂಕನ ಹೆಂಡತಿಯಾಗಿ ನಾನು ಅನುಭವಿಸಿದ ಕಷ್ಟ ನನಗೇ ಮುಕ್ತಾಯವಾಗಲಿ; ಈ ಮಗುವಿಗೇಕೆ? ಮಗು ಅಷ್ಟು ಕಷ್ಟಪಡಬೇಕೆ? ಅಂತಹ ದುಃಖಕ್ಕಿಂತ ಸಾವೇ ಮೇಲು! ಅದು ನನ್ನ ಅನುಭವ. ಹಾಗಾದರೆ........ಮಗೂ........ಸಾ........" ಮುಂದೆ ವಿಚಾರ ತಡೆಯಿತು ಮಗುವನ್ನು ಗಟ್ಟಿಯಾಗಿ ಅಪ್ಪಿದಳು. "ಅಯ್ಯೋ, ಹಡೆದೊಡಲು ಒಪ್ಪುವುದೇ? ಒಪ್ಪದಿದ್ದರೆ........ಸಾವು ಸಿದ್ಧ! ಇದ್ದು ನಿತ್ಯ ಬದುಕಿ ಸಾಯುವುದಕ್ಕಿಂತ, ಒಮ್ಮೆಲೆ ಸಾಯುವುದು ಸಾವಿರ ಪಾಲು ಮೇಲು!" ಎಂದು ವಿಚಾರಿಸಿದಳು ತುಂಗೆ. ಕಂಠ ಬಿಗಿಯಿತು. ಎದೆ ತುಂಬಿತು. ಮಗುವನ್ನು ಇನ್ನೂ ಗಟ್ಟಿಯಾಗಿ ಎದೆಗೊತ್ತಿಕೊಂಡು "ನಡೆ ಮಗು, ಈ ಸ್ವಾರ್ಥಮಯ ಪ್ರಪಂಚದಿಂದ ದೂರ, ದೂರ! ಸ್ವಾರ್ಥ, ಕಪಟ, ದುಃಖದ ನೆರಳೂ ಇಲ್ಲದಲ್ಲಿ ಬದುಕೋಣ! ಅದು ಸಾವಿನಲ್ಲೇ ಇದ್ದರೆ ಅಲ್ಲೇ—ಸಾವಿನಲ್ಲೇ ಬದುಕೋಣ!" ಎಂದು ಏನನ್ನೋ ಎನ್ನುತ್ತ ಅದೇ ಭಾವದಲ್ಲಿ ತನ್ಮಯಳಾದಳು.

ಕ್ಷಣಮಾತ್ರದಲ್ಲಿ ತುಂಗೆಯ ಮುಖ ಬದಲಾಯಿತು. ಮುಖದಲ್ಲಿ ರುದ್ರತೆ ತೋರಿಕೊಂಡಿತು. ಕಣ್ಣು ನೀರನ್ನು ನಿಲ್ಲಿಸಿ ನಿಚ್ಚಳವಾದುವು. ರಾತ್ರಿ ಭೀಕರ ರೂಪವಾಂತು, ತುಂಗೆಯನ್ನೇ ನುಂಗುವಂತೆ ತೋರಿತು.

"ಹೆಣ್ಣು..........ಮಾರಿ" ಎಂಬುವುದೋ ನಾಣ್ಣುಡಿಯನ್ನು ತುಂಗೆಯನ್ನು ನೋಡಿ ಒಪ್ಪಬೇಕು, ಎನಿಸುತ್ತದೆ. ತುಂಗೆ ರುದ್ರಕಾರ್ಯಕ್ಕೆ ಪ್ರವೃತ್ತಳಾದ ಮರುಚಣವೇ, "ಅಯ್ಯೋ, ಅಮ್ಮಾಽಽ" ಎಂಬ ಆರ್ತಸ್ವರ, ಒಂದು ವಿಕಟಾಟ್ಟಹಾಸದೊಡನೆ ಕತ್ತಲೆಯಲ್ಲಿ ತೇಲಿ ನಡೆಯಿತು. ಬಡತನವು ಮನುಷ್ಯನನ್ನು ರಾಕ್ಷಸನನ್ನಾಗಿಯೂ ಮಾಡುವುದೇ?

ತುಂಗೆಯ ಭಯಂಕರ ರೂಪ ನೋಡುವಂತಿದ್ದಿತು. ದೊಡ್ಡ-ದೊಡ್ಡ ಕಣ್ಣು ಅಗಲವಾಗಿ ತೆರೆದು, ಕೇಶರಾಶಿಯನ್ನು ಉಚ್ಛೃಂಖಲವಾಗಿ—ಮುಂದೆ ಹಿಂದೆ ಇಳಿಬಿಟ್ಟು, ಹಣೆ ತುಂಬ ಕುಂಕುಮ ಬಳೆದುಕೊಂಡು, ಮೂಕ-ಪತಿ-ಗೆ ನಮಿಸಿದಳು. ಪತಿ—ಏನೇ ಆದರೂ—ಅಗ್ನಿ ಸಾಕ್ಷಿಯಾಗಿ, ಅಷ್ಟದಿಕ್-ಪಾಲಕರ ಸಾಕ್ಷಿಯಾಗಿ, ಗುರು-ಹಿರಿಯರ ಎದುರು "ಸ್ವಾಮಿ!" ಎಂದು ಒಪ್ಪಿಕೊಂಡ ಮೇಲೆ, ಯಾವಾಗಲೂ ಸ್ವಾಮಿಯೇ! ಹಿಮಾಚಲ ಚಲಿಸೀತು, ಸೂರ್ಯ ಪಶ್ಚಿಮದಲ್ಲಿ ಉದಯವಾದಾನು, ಆದರೆ ಭಾರತೀಯ ಸ್ತ್ರೀಯರು, ಒಮ್ಮೆ ಅಗ್ನಿಸಾಕ್ಷಿಯಾಗಿ "ಸ್ವಾಮಿ" ಎಂದು ಒಪ್ಪಿಕೊಂಡ ಮೇಲೆ, ಬದಲಾಯಿಸಲಾರರು. ತುಂಗೆಯೂ ಅದೇ ಉಚ್ಚ ಸಂಸ್ಕೃತಿಯಲ್ಲಿ ಬೆಳೆದವಳು. ಮೂಕ ಬಾಯಿಲ್ಲದೆ ಅಸಮರ್ಥನಾಗಿ, ಪ್ರಪಂಚದ ದೃಷ್ಟಿಯಲ್ಲಿ ತಿರಸ್ಕೃತನಾದರೂ, ತುಂಗೆಗೆ "ಸ್ವಾಮಿ" ಅಲ್ಲವೇ? ಅವಳಾಗ ಇಂತಹ ಸಮಯದಲ್ಲೂ ಬಂದು ಮೂಕನನ್ನು ನಮಿಸಿದಳು. "ಇದು ನನಗೆ ಭಾಗ್ಯ!" ಎಂದಾಗ, ಕಣ್ಣಲ್ಲಿ ಎರಡು ಹನಿ ಕಾಣಿಸಿಕೊಂಡರೂ, ಮತ್ತೆ ಮರುಚಣದಲ್ಲಿ ಮೊದಲಿಗೂ ಭೀಷಣಳಾದಳು. ಕಾಳರಾತ್ರಿ ತಾನು ಭಯಂಕರವೆನ್ನುತ್ತಿದ್ದರೆ, "ನೀನೇನು, ನಾನು ರುದ್ರಭಯಂಕರಳು!" ಎನ್ನುವಳು ತುಂಗೆ. ಕೈಯ್ಯಲ್ಲಿಯ ಹಗ್ಗವನ್ನು ಮತ್ತೊಮ್ಮೆ ಗಟ್ಟಿಯಾಗಿ ಹಿಸುಕಿ, "ನಡೆ" ಎಂದಳು. ಮತ್ತೊಮ್ಮೆ ಪತಿಯೆಡೆಗೆ ನೋಡಿ, ಏನನ್ನೋ ನೆನೆದು ದೊಡ್ಡ ಧ್ವನಿಮಾಡಿದಳು. ಅದು ಅಳುವೋ, ಪ್ರಪಂಚವನ್ನು ಕುರಿತಾದ ಉಪಹಾಸವೋ, ತಿಳಿಯಲು-ಅಸದಳ. ಕೊನೆಗೆ ಗಂಭೀರ ಧೀರ ಪದಗತಿಯಿಂದ ಒಳಗೆ ನಡೆದಳು.

ಕರಾಳರಾತ್ರಿ ಭೂಮಿಯನ್ನು ಮುತ್ತುತ್ತಿದ್ದಾಗ, ಕ್ರೂರ ಮೋಡ ಸುಂದರ ಆಕಾಶವನ್ನೆಲ್ಲಾ ನುಂಗತೊಡಗಿತ್ತು.

ಕಲೆಯೂ ಮನೋರಂಜಕತೆಯೂ

(ವಿವೇಚನಾತ್ಮಕ ಪ್ರಬಂಧ)

ಶ್ರೀ. ಖಾನೋಳಕರ ಶ್ರೀಧರರಾಯರು, ಪುಣೆ

ಚಿತ್ರ, ಸಂಗೀತ, ವಾಸ್ತು, ಶಿಲ್ಪ, ಕಾವ್ಯ— ಈ ಕಲಾಪಂಚಕದಲ್ಲಿ ಮನೋರಂಜಕತೆಯು ಇರುವುದೇ? ಹೌದು, ರಂಜಕತೆ ಇರದಂತಹದು ಕಲೆಯಲ್ಲ. ಕಲೆಯ ಮುಖ್ಯ ಗುಣವೆಂದರೆ ಜನಸಾಮಾನ್ಯರ (ಪಂಡಿತರದಷ್ಟೇ ಅಲ್ಲ) ರಂಜನವಾಗಬೇಕು. ಇಲ್ಲವಾದರೆ ಅದಕ್ಕೆ ಕಲೆಯೆಂದೆನ್ನಲಾಗದು. ಮಹಾ ಪಂಡಿತನೂ ರಸಿಕನೂ ಆದಂಥವನಿಗಷ್ಟೇ ಆಲ್ಹಾದವನ್ನುಂಟುಮಾಡಿದರೆ ಆ ಕೃತಿಗೆ ಕಲೆಯೆಂದೆನ್ನುವುದಕ್ಕಾಗುವುದಿಲ್ಲ. ಪಂಡಿತರಿಗೂ ಪಾಮರರಿಗೂ ಆಲ್ಹಾದವನ್ನುಂಟುಮಾಡುವುದೇ ಕಲೆಯೆಂದು ಹೇಳಬಹುದು.

ಹೇಗಿದ್ದರೂ, ಕಲಾವಂತರಲ್ಲಿ ಎರಡುವಿಧ. ಮೊದಲನೆಯವರು ಎನ್ನುವುದು : "ನಾವು ಬರೆಯುವುದು, ಹಾಡುವುದು, ಕುಣಿಯುವುದು, ರಚನೆಗೆಯ್ಯುವುದು ಜನರ ರಂಜನೆಗಲ್ಲ; ನಮಗೆ ದೇವರು ಕೊಟ್ಟ ಸ್ಫೂರ್ತಿಯಿಂದ ನಮಗೆ ಬೇಕಾದ ಹಾಗೆ—ನಮಗೆ ಆನಂದವೆನ್ನಿಸುವಂತೆ— ನಾವು ಕಲಾಕೃತಿಗಳನ್ನು ನಿರ್ಮಿಸುವೆವು. ಬೇಕಾದವರು ನಮ್ಮ ಬಳಿಗೆ ಬರಬೇಕು, ಕೇಳಬೇಕು, ಬೇಡವಾದವರು ಬಿಡಬೇಕು," ಎಂದು. ಇವರಿಗೆ ಸಮಾಜಹಿತದ ಧ್ಯೇಯವಿರುವುದಿಲ್ಲ. ಕಲೆಯ ಭಕ್ತಿ—ನಿಷ್ಕಾಮಭಕ್ತಿ—ಮಾಡುವರಿವರು. ಎರಡನೆಯವರು ಎನ್ನುವುದು: "ನಮಗೆ ದೇವರು ದಯಪಾಲಿಸಿದ ಸ್ಫೂರ್ತಿಯಿಂದಲೇ ನಾವು ನಮ್ಮಷ್ಟಕ್ಕೆ ಕಲೆಯ ಸೇವೆಯನ್ನು ಮಾಡುತ್ತಲೇ ಇರುವೆವು. ಕಲಾಕೃತಿಗಳನ್ನು ಮಾಡುವಾಗ ಮಾತ್ರ ಜನಸಾಮಾನ್ಯಕ್ಕೂ ಆನಂದವನ್ನುಂಟುಮಾಡುವುದೇ ಕಲೆಯ ಧ್ಯೇಯ. ದೇವರು ನದಿಯ ನೀರು, ಸೂರ್ಯ, ಚಂದ್ರ, ಬೆಳುದಿಂಗಳು, ಋತುಗಳು ಇವುಗಳನ್ನು ನಿರ್ಮಿಸಿದ ಹಾಗೆ ಕಲೆಯನ್ನೂ ನಿರ್ಮಿಸಿರುವುದು, ಮಾನವನ ಆನಂದಕ್ಕಾಗಿ; ಆದುದರಿಂದ ಎಲ್ಲರಿಗೂ ಈ ದೇವಕೃಪೆಯ ಆನಂದ ಮುಟ್ಟಲಿ, ನಾವೊಬ್ಬರೇ ಈ ಆನಂದವನ್ನು ಸವಿಯಲಾರೆವು! ನಮ್ಮ ತಂದೆ, ತಾಯಿ, ಅಣ್ಣ, ತಮ್ಮ, ಅಕ್ಕ, ತಂಗಿ—ಇವರನ್ನು ಬಿಟ್ಟು ನಮಗೇ ಹಣ್ಣು ಸಿಕ್ಕಿದೆಯೆಂದು ನಾವೊಬ್ಬರೇ ಒಂದು ಅಡವಿಯೊಳಗೆ ಕುಳಿತು ಸವಿಯುವೆವೋ? ಇಲ್ಲ. ಅದರಂತೆಯೇ ಈ ಕಲೆಯೆಂಬ ಅಮೃತಫಲವು ನಮ್ಮ ಕೈಗೆ ಸಿಕ್ಕಿದೆ. ಇದರ ರಸವನ್ನು ಎಲ್ಲರೂ ಸವಿಯೋಣ— ಎಲ್ಲರೂ ಬನ್ನಿರಿ!" ಇವರ ಕಲೆಗೆ ಧ್ಯೇಯವಿದೆ. ಕಲೆಯು ಸಮಾಜವನ್ನು ಸಿಂಗರಿಸಬಲ್ಲುದು. ಸಮಾಜದ ಜನರ ಕಣ್ಣುಗಳಿಗೂ ಕಿವಿಗಳಿಗೂ ಹಬ್ಬವನ್ನುಂಟುಮಾಡುವುದು ಕಲೆಯು. ಸಮಾಜದ ಹೃದಯದೊಳಗೆ ಆನಂದದ ಬೀಜಗಳನ್ನು ಬಿತ್ತಿ ಎಲ್ಲರಿಗೂ ಸೌಖ್ಯವನ್ನುಂಟುಮಾಡುವುದು. ಜ್ಞಾನಯೋಗಿಯ ಧ್ಯೇಯವು ದೇವರು ಪ್ರತ್ಯಕ್ಷವಾಗಿ ಕಾಣಬೇಕೆಂದು. ಕರ್ಮಯೋಗಿಯ ಧ್ಯೇಯವೂ ಅದೇ. ಜ್ಞಾನಯೋಗಿಗೆ ದೇವರು ಕಂಡ ಮೇಲೆ ಅವನ ಯೋಗ ಮುಗಿಯಿತು. ಕರ್ಮಯೋಗಿಗೆ ದೇವರು ಕಂಡಮೇಲೆ ಅವನ ಯೋಗಕ್ಕೆ ಪ್ರಾರಂಭ—ಜಗದುದ್ಧಾರ. ವೈದ್ಯಕ ಶಾಸ್ತ್ರದಂತೆ. ನಾಲ್ಕಾರು ವರ್ಷ ಕಾಲೇಜಿನಲ್ಲಿ ಕಲಿತರೆ ತೀರಲಿಲ್ಲ. ಕಲಿತು ನೈಪುಣ್ಯ ಪಡೆದ ಮೇಲೆ ಸಮಾಜದಲ್ಲಿ ನಿಂತು, ಹಣವನ್ನು ಗಳಿಸುವುದು ಧ್ಯೇಯ; ಅದರಂತೆಯೇ ಕರ್ಮಯೋಗಿಯು ತನ್ನ ಸಾಧನೆ ಮುಗಿದ ಮೇಲೆ ಸಮಾಜೋದ್ಧಾರವನ್ನು ಮಾಡುವುದು....ಕಲಾವಂತನು ಸಮಾಜದಲ್ಲಿ ಆನಂದವನ್ನುಂಟುಮಾಡುವುದು.

ಇದೆಲ್ಲ ವೇದಾಂತವಾಯಿತು. ಪ್ರತ್ಯಕ್ಷ ಸಮಾಜದಲ್ಲಿ ಕಲಾವಿದನು ಏನು ಮಾಡುತ್ತಾನೆಂಬುದನ್ನು ನೋಡುವಾ: ಸಮಾಜದಲ್ಲಿಯ ಚಿತ್ರಶಿಲ್ಪಿಯ ಕಡೆಗೆ ಹೋಗಿರುವಿರೋ? ಇಲ್ಲ! ಅವರೆಲ್ಲಿರುವರು? ಎಂದಾದರೂ ತಮಗೆ ಮಗಳು ಹುಟ್ಟಿರುವಳೋ? ಹೌದು! ಆ ಮಗಳ ಸಂಗಡ ಮಾವನು ಕಳುಹಿದ ತೊಟ್ಟಿಲು ಬಂದಿರಬಹುದು. ಅದರ ಮೇಲಿನ ಚಿತ್ರಗಳು! ಅವುಗಳನ್ನು ಇನ್ನೂ ನೋಡಿಲ್ಲವೆ? ನೋಡಿರಿ. ತೊಟ್ಟಿಲುಗಳನ್ನು ಮಾಡುವವನಲ್ಲಿಗೆ ಹೋದರೆ ಇಬ್ಬರು ಭೆಟ್ಟಿಯಾಗುವರು. ಒಬ್ಬ ತೊಟ್ಟಿಲ ಮಾಡುವವ; ಇನ್ನೊಬ್ಬ ಬಣ್ಣಗಾರ. ಇವನೇ ನಮ್ಮ ಸಣ್ಣ ಊರಿನ ಚಿತ್ರಶಿಲ್ಪಿ. ತೊಟ್ಟಿಲ ಮೇಲಿನ ಚಿತ್ರಗಳೋ? ದೇವರವು. ಯಾವಾವ ದೇವರು? ಕೃಷ್ಣ, ಬಲರಾಮ, ವರಾಹ..........ದಶಾವತಾರ. ಲಕ್ಷ್ಯಗೊಟ್ಟು ನೋಡಿದ ಮೇಲೆ ಗೊತ್ತಾಗುವುದು ಬಣ್ಣಗಾರನ ಕೌಶಲ್ಯ. ತೊಟ್ಟಿಲ ನಾಲ್ಕೂ ಕಡೆಗೆ ಭಾಗಗಳನ್ನು ಮಾಡಿದ್ದಾನೆ. ದೊಡ್ಡವಿದ್ದ ಕಡೆಗೆ ಆರಾರು; ಸಣ್ಣವಿದ್ದ ಕಡೆಗೆ ಮೂರು ಮೂರು! ಒಟ್ಟು ಹದಿನೆಂಟು. ಹದಿನೆಂಟರಲ್ಲಿ ಹತ್ತು ಅವತಾರ, ಸೂರ್ಯ, ಚಂದ್ರ, ನಕ್ಷತ್ರಗಳು, ಬೇವಿನಗಿಡ, ಹಂಸರಾಜ, ಆಕಳು, ಎತ್ತು, ಸ್ವಸ್ತಿಕ. ಸೂರ್ಯ-ಚಂದ್ರರು ಈ ತೊಟ್ಟಿಲು ಬೆಳಗಲಿ, ನಕ್ಷತ್ರಗಳು ಸದೈವ ಮಿನುಗಲಿ, ಬೇವಿನ ಗಿಡವನ್ನು ಕಂಡು ದೆವ್ವ-ಭೂತಗಳು ಓಡಿ ಹೋಗಲಿ, ಆರೋಗ್ಯವಾಗಲಿ, ಹಂಸರಾಜನಷ್ಟು ಸುಂದರವೂ ಶುದ್ಧವೂ ಆಗಿರಲಿ ನಿಮ್ಮ ಮಗು, ಆಕಳಂತೆ ಸಭ್ಯವಾಗಲಿ, ಎತ್ತಿನಂತೆ—ಬಸವನಂತೆ ಎಲ್ಲರಿಗೂ ಪ್ರಿಯವಾಗಿ ಸಮಾಜದ ಆಧಾರವಾಗಲಿ, ಸ್ವಸ್ತಿಕ—ಎಲ್ಲರಿಗೂ ಮಂಗಲವಾಗಲಿ, ದೇವರು ದಶಾವತಾರವಾಗಿ ನಿಮ್ಮ ಮಗುವನ್ನು ಆಕಾಶದಲ್ಲಿಯೂ, ನೀರಿನಲ್ಲಿಯೂ, ಭೂಮಿಯಲ್ಲಿಯೂ ಕಾವಲಾಗಿರಲಿ! ಇಷ್ಟಿದೆ ಈ ಚಿತ್ರಗಳಲ್ಲಿ. ಇಷ್ಟೆಲ್ಲ ಸುಲಭವಾಗಿಯೂ ಸುಂದರವಾಗಿಯೂ ಬರೆದು ಪ್ರತಿಯೊಂದು ಚಿತ್ರ ಬರೆಯುವ ಮುಂದೆ ಹರಸಿದ್ದಾನೆ ನಿಮ್ಮ ಮಗುವನ್ನು. ಇದು ಶಿಲ್ಪಿಯ ಕಲೆ. ಕಬ್ಬಿಣದ ತೊಟ್ಟಿಲಿದ್ದಿದ್ದರೆ—ಎಂದರೆ ನಿಮ್ಮ ಮಾವ ಸ್ವಲ್ಪ ಸುಧಾರಕರಾಗಿದ್ದರೆ—ಕಬ್ಬಿಣ ಪಟ್ಟಿಗಳ ಸ್ಕ್ರೂ-(ತಿರವು)ಗಳೇ ಅಲ್ಲಲ್ಲಿ ಕಾಣುತ್ತಿದ್ದುವು. ಅಂತೂ ತೊಟ್ಟಿಲಿನಿಂದ ಮೊದಲಾಯಿತು ಕಲಾಪ್ರಪಂಚ. ಇದೆಲ್ಲ ತಿಳಿಯಬೇಕಾದರೆ ಚಿತ್ರಶಿಲ್ಪಿಯು ತಮ್ಮೆಲ್ಲರ ಮನೋರಂಜನೆಯಾಗುವಂತೆಯೆ ಬರೆದಿರಬೇಕಾದುದು ಅವಶ್ಯ. ತೊಟ್ಟಿಲಿಗೆ ಕೊಡುವುದೇ ೩-೪ ರೂಪಾಯಿ. ತೊಟ್ಟಿಲಿನ ಕ್ರಯವಿರಬೇಕು ೨-೨॥ ರೂಪಾಯಿ. ಬಣ್ಣಗಾರನಿಗೆ ಸಿಕ್ಕುವುದು ೧-೧॥ ರೂಪಾಯಿ. ಇದರಲ್ಲಿ ಬಣ್ಣಗಾರನು ತಮ್ಮ ಚಿತ್ರಸಂಪ್ರದಾಯದಿಂದ ಕಲಿತದ್ದನ್ನು ಎಲ್ಲರ ಕಣ್ಣಿಗೂ ಕಾಣುವಂತೆ ತನ್ನ

ಕಲೆಯನ್ನು ತಂದು ಬಿಟ್ಟಿರುವನು ನಿಮ್ಮ ಮನೆಯಲ್ಲಿ. ರಸಗಣ್ಣು ಇದ್ದವರು ಇನ್ನೂ ನೋಡಿ ಆನಂದಪಡಬಹುದು; ದಿನದಿನಕ್ಕೂ ಆನಂದಪಡಬಹುದು.

ಸಂಗೀತದ ಮಾತೂ ಅದೇ. ಅದರಲ್ಲಿಯೂ ಸುಲಭತೆಯೂ ಮನೋರಂಜನವೂ ಕೂಡಿದ್ದರೆಯೆ ಅದು ಸಾರ್ವಜನೀನವಾಗುವುದು. ನಾನೊಮ್ಮೆ ಒಬ್ಬ ಡಾಕ್ಟರ ಕಡೆಗೆ ಹೋಗಿದ್ದೆ. ಕನ್ನಡಿಗರು ಅವರಿಗೆ ಸಂಗೀತ ಬಹಳ ರುಚಿ. ತಮಗೆ ಬಾರದಿದ್ದರೂ ಸರಿ, ತಮ್ಮ ಮಗಳಿಗೆ ಬರಬೇಕು ಎಂದು ಅವರ ಹಂಬಲ. ನಾನು ತಕ್ಕಮಟ್ಟಿಗೆ ಮನೆಯಲ್ಲಿ ಹಾರ್ಮೋನಿಯಂ ಬಾರಿಸುತ್ತಿದ್ದೆ. ಅದುದರಿಂದ ಅವರು, ತಮ್ಮ ಮಗಳಿಗೆ ನಾನು ಕಲಿಸುವೆನೆಂದು ಒಪ್ಪಿದರೆ ಅವಳಿಗೊಂದು ಪೇಟಿಯನ್ನು ತಂದು ಕೊಡುವೆನೆಂದರು. ನಾನು ಒಪ್ಪಿದೆ. ಪ್ರಾರಂಭದ ದಿನ 'ಸಾರೆಗಮ'ವಾಯಿತು. ಎರಡನೆಯ ದಿನ ಒಂದು ಹಾಡು ತೆಗೆದೆ: 'ಮಾಧವನಿನ್ನಾ'. ಆ ಹುಡುಗಿಗೆ ಕನ್ನಡ ಬರುತ್ತಿದ್ದಿಲ್ಲ. ಆದುದರಿಂದ ಒಂದು ಮರಾಠೀ ಹಾಡು ಪ್ರಾರಂಭ ಮಾಡಿದೆ. "ಕುಲಭೂಷಣಾ, ರಾಮಾ ಲಕ್ಷುಮಣಾ, ಬಾಳಾ ಜೋ ಜೋರೇ!" ಅವರ ಮಿತ್ರರೊಬ್ಬರು ಬಂದಿದ್ದರು. ಅವರೆಂದರು: "ಸಾರಂಗ ಕಲಿಸುತ್ತೀರೇನು?" ನಾನು ಹೇಳಿದೆ: "ಬರೀ ಹಾಡು!" ಎಂದು. ಮನೆಗೆ ಬಂದು ಸ್ವರಗಳನ್ನು ನೋಡಿದೆ. ಆ ಹಾಡು ಸಾರಂಗ ರಾಗದ್ದಿತ್ತು. ಸಾರಂಗದಂತಹ ದೊಡ್ಡ ರಾಗದ ಸ್ವರಗಳನ್ನು ತಮಗೆ ಬೇಕಾದ ಹಾಗೆ ತೆಗೆದುಕೊಂಡು, ಅದರಲ್ಲಿ ಹಾಡುಕಟ್ಟಿ ಅದನ್ನು ರಾಮಚಂದ್ರನ ಜೋಗುಳದ ಹೊತ್ತಿಗೆ ಹೆಂಗುಸರೂ ಹಾಡುವಂತೆ ಮಾಡಿರುವ ಕವಿವರನೇ ಧನ್ಯನು. ಇಲ್ಲದಿದ್ದರೆ 'ನಮ್ಮ ಪುಸ್ತಕಗಳನ್ನೆಲ್ಲ ಹತ್ತು ರೂಪಾಯಿಗೆ ತೆಗೆದುಕೊಂಡು, ಇಪ್ಪತ್ತು ವರ್ಷ ಅಧ್ಯಯನ ಬೆಳೆಸಿರಿ; ಎಂದರೆ ಅದರ ರಸ ತಿಳಿದೀತು, ಎನ್ನುವ ಕವಿಗಳ ಕಾವ್ಯ ಅವರಿಗೇ ಆನಂದವನ್ನುಂಟುಮಾಡಲಿ! ನಿಜವಾದ ಸಂಗೀತದ ಕಲಾವಂತರೆಂದರೆ ಪುರಂದರ ದಾಸರು. ಹಲವು ರಸಗಳನ್ನೊಳಗೊಂಡ ಸುಂದರವಾದ, ಸರಸವಾದ, ಮನೋಹರವಾದ, ಮಧುರವಾದ ಪದಗಳನ್ನು ದರಬಾರೀ ಕಾನಡಾ, ಮಧ್ಯಮಾವತಿ, ಖಮಾಜ ಜಂಜೋಟಿ, ಬಿಹಾಗ ಮುಂತಾದ ನೂರಾರು ಗಹನ ರಾಗಗಳಲ್ಲಿ ಸಾವಿರಾರು ಪದ ಕಟ್ಟಿ, ಜಗತ್ತಿನಲ್ಲಿ ಹರಿಭಕ್ತಿಯನ್ನು ಪ್ರಸಾರ ಮಾಡಿದ ಪುರಂದರದಾಸರು ಅದೆಷ್ಟು ಧನ್ಯರೊ, ಅಪರೆಷ್ಟು, ಮಾನ್ಯರೋ ತಿಳಿಯದು. ಮುಂಜಾವ ಎದ್ದು "ಏಳು ನಾರಾಯಣಾ" ಎಂಬ ಭೂಪಾಳಿ ಸಂಗೀತದಿಂದ ಮಕ್ಕಳ ಮನಸಿನಲ್ಲಿಯೂ ಸಂಗೀತದ ರುಚಿ ಹುಟ್ಟುವುದು. ಎಂದಮೇಲೆ ದೊಡ್ಡವರಿಂದ ತುಂಬಿದ ಸಮಾಜದಲ್ಲಿ ಆನಂದವು ತುಂಬಿ ಹರಿದಾಡಿ ಹೋಗುವುದೆಂಬದರಲ್ಲಿ ಏನೂ ಸಂಶಯವಿಲ್ಲ. ಗಹನತತ್ತ್ವಗಳನ್ನು ಹಾಲಿಗಿಂತಲೂ ಹಸನಾಗಿ ಜೇನಿಗಿಂತಲೂ ಸವಿಯಾಗಿ ಮಾಡಿ ಮನೋರಂಜನೆ ಮಾಡುವುದೆ ಕಲೆಯ ಧ್ಯೇಯ.

ವಾಸ್ತು ಮತ್ತು ಶಿಲ್ಪಗಳಿಗೂ ಮನೋರಂಜಕತೆಯು ಅವಶ್ಯವಿರುವುದೇ ಯೋಗ್ಯವಾಗಿರುವುದು. ವಾಸ್ತುವು ಅದರ ಹುಟ್ಟುಗುಣದಿಂದಲೇ ಸ್ಥೂಲಮಾನಕ್ಕೆ ಸೇರಿದ್ದು. ಅದರಲ್ಲಿಯೂ ಆಕಾರ, ಕಂಭದ ಉದ್ದಗಲಕತೆ, ಅಲ್ಲಲ್ಲಿ ಗೋಪುರಗಳ ವಿವಿಧತೆ, ಕಳಸದ ಸೊಗಸು ಮುಂತಾದ್ದು ತನ್ನಿಂದತಾನೇ ಮನೋರಂಜಕವಾಗುವುದು.

ಕಾವ್ಯವು ಸಂಗೀತದಲ್ಲಿ ಅಡಕವಾಗಿರುವಂತೆ ವಾಸ್ತುವಿನಲ್ಲಿ ಶಿಲ್ಪವೂ ಅಡಗಿರುವುದು. ಮೂರ್ತಿಶಿಲ್ಪಿಯು ನಮ್ಮ ಸಮಾಜದಲ್ಲಿ ಆನಂದವನ್ನುಂಟುಮಾಡುವನೆಂಬುದಕ್ಕೇನೂ ಸೂಕ್ಷ್ಮವಾದ ಬುದ್ಧಿಯು ಬೇಕಾಗಿರುವುದಿಲ್ಲ, ಗಣಪತ್ಯುತ್ಸವದಲ್ಲಿಯ ಗಣಪತಿಗಳು ಮನೆ-ಮನೆಯಲ್ಲಿ ಹೋಗಿ ಕೂಡುತ್ತವೆ. ಪೂಜೆಮಾಡಿಸಿಕೊಳ್ಳುತ್ತವೆ. ಅದರಲ್ಲಿಯೂ ಶ್ರೀಮಂತರ ಮನೆಯ ಗಣಪತಿಗಳನ್ನೂ, ಸಾರ್ವಜನಿಕ ಗಣಪತಿಗಳನ್ನೂ ನೋಡುವುದಕ್ಕೆ ಎಲ್ಲ ಜನರೂ ಹೋಗುವುದುಂಟು. ಇಲ್ಲಿ ಶಿಲ್ಪಿಯು ತನ್ನ ಕೌಶಲ್ಯವನ್ನು ತೋರಿಸಿಯೇ ಬಿಡುತ್ತಾನೆ. ಚಿಕ್ಕ ಮಕ್ಕಳಲ್ಲಿಯೂ ಸೌಂದರ್ಯದ ಆನಂದ ಉಕ್ಕೇರುವುದು ಕೆಲ-ಕೆಲವು ಗಣಪತಿಗಳನ್ನು ನೋಡಿ. ಕರ್ನಾಟಕದಲ್ಲಿ ಕಾಮನ ಹಬ್ಬ ಮತ್ತೂ ಪ್ರಸಿದ್ಧವಿದೆ. ಇದರಲ್ಲಿ ಪ್ರತಿಕೂಟಿಗೂ ಓಣಿ ಓಣಿಗೂ ತಮ್ಮ ತಮ್ಮ ಯೋಗ್ಯತೆ ಮೀರಿ ಕಾಮಣ್ಣಗಳು ಕುಳಿತಿರುತ್ತವೆ. ಕಾಮನ ಮುಂದೆ ರತಿದೇವಿ ಈ ಹಬ್ಬದಲ್ಲಿಯೂ ಮೂರ್ತಿಶಿಲ್ಪಿಯು ಎಲ್ಲರಿಗೆ ಮನೋರಂಜನವಾಗುವಂತೆ ಕಾಮ-ರತಿಯರನ್ನು ರಸಗೊಳಿಸುತ್ತಾನೆ, ಇದಲ್ಲದೆ ಚಿಕ್ಕಮಕ್ಕಳ ಆಡುವ ಆಟಿಗೆಯ ಸಾಮಾನುಗಳನ್ನು ನೋಡಿದರಂತೂ ಮನೋರಂಜನೆಯೆ ಕಲೆಯ ಮುಖ್ಯ ಭಾಗವಾಗಿರುವುದೆಂಬುದು ತಿಳಿದೇ ಹೋಗುತ್ತದೆ.

ಮನೋರಂಜಕವಾದದ್ದೆಲ್ಲ ಅನೀತಿಯುಳ್ಳದೆಂದು ನಮ್ಮ ಹಿರಿಯರಲ್ಲಿ ಗ್ರಹಿಕೆ ಇತ್ತು. ಇಸ್ಪೇಟು ಆಡುವುದು, ಆಟ ಆಡುವುದು, ನಾಟಕಕ್ಕೆ ಹೋಗುವುದು ಘಟಿಂಗರ ಲಕ್ಷಣವೆಂದೂ ಗ್ರಹಿಕೆ ಇತ್ತು. ಮನೋರಂಜನದಿಂದಲೇ ನೀತಿಯು ಬಯಲಾಗುವುದೆಂದ ಮೇಲೆ, ಮನೋರಂಜನಪೂರ್ವಕವಾಗಿ ಸೌಂದರ್ಯವನ್ನು ಕಲಿಸುವ ಕಲೆಗೆ ಯಾರು ಮಹತ್ತ್ವ ಕೊಡುವರು? ಅದರಂತೆಯೇ ಕಲೆಯೂ ಒಂದಾಗಿತ್ತು. ಕಲೆಯು ನಿಸರ್ಗದೊಳಗಿನ ಸೌಂದರ್ಯವನ್ನು ಮನೋರಂಜಕತೆಯ ಪರದೆಯನ್ನು ಹಿಡಿದು ಮನದಟ್ಟಾಗುವಂತೆ ತೋರಿಸುವುದು. ಕಲೆಯು ನೀತಿಯನ್ನು ಹೇಳಹೊರಟ ಯೋಗಿಯಲ್ಲ. ಕಲೆಯ ಬಾಜಾರದಲ್ಲಿ ಸೌಂದರ್ಯ ವಸ್ತುಗಳ ಸಂತೆಯೇ ನೆರೆದಿರುತ್ತದೆ. ನೀತಿಯ ಮಠ ಅಲ್ಲಿಂದ ಬಲುದೂರವಿರದಿದ್ದರೂ, ನೀತಿಗೆ ಅದರಲ್ಲಿ ಮುಖ್ಯಸ್ಥಾನವಿಲ್ಲ. ಕಲೆಯೊಂದು ಸುಂದರವಾದ ಹೂವು, ತಮ್ಮ ಪ್ರೇಮದ ದೇವರ ಸಂಗಡ ಅದನ್ನು ಪೂಜೆಗೆಂದು ಹಾಕಿದರೂ ಸರಿಯೆ, ದೇವರ ಕಾಲಿನ ಮೇಲಿಟ್ಟರೂ ಸರಿಯೇ. ತಮ್ಮ ಪ್ರೇಮದ ಯುವತಿಗೆ ಮುಡಿಸಿದಲ್ಲಿ ಆ ಹೂವಿಗೆ ಸಂತೋಷ.

— — —

ಕರ್ನಾಟಕ ಉಳಿದು, ಕನ್ನಡಿಗರು ಮಾನ-
ಸನ್ಮಾನದಿಂದ ಬಾಳಬೇಕೆಂಬ ಅಪೇಕ್ಷೆ ಇದ್ದಲ್ಲಿ,

ನಾಲ್ಕಾಣೆ ಕೊಟ್ಟು

ಏಕೀಕರಣ ಸಂಘದ ಸದಸ್ಯರಾಗಿರಿ!

ಬರಗಾಲ

(ಒಂದು ಅನುಭವ)

ಶ್ರೀ. ಗಿರೀಶ, ಮುಂಬಯಿ

"ಅಲ್ಲಿಯ ಸ್ಥಿತಿ-ಗತಿಯನ್ನು ಕಣ್ಣಾರೆ ಕಂಡಿದ್ದೇನೆ. ಇಡಿಯ ದೇಶವೆಲ್ಲ ಬಣಗುಟ್ಟುತ್ತದೆ. ನಂದನವನದಲ್ಲಿ ಭೂತಗಳ ಸಂಚಾರವಾದಂತೆ ಇಡಿಯ ಜಿಲ್ಲೆಯೆಲ್ಲ ವಿಕಾರವಾಗಿ ಕಾಣುತ್ತಲಿದೆ. ನನ್ನ ಮಾತು ಸುಳ್ಳು ಎನಿಸಿದರೆ ನೀನೇ ಹೋಗಿ ನೋಡು. ನಿನ್ನ ಕಲ್ಲು ಮನಸ್ಸೂ ಕರಗೀತು. ಸಿಕ್ಕಿದವರೆದುರು ತಮ್ಮ ದುಸ್ಥಿತಿಯನ್ನು ತೋಡಿಕೊಂಡು ಅಳುತ್ತಾರೆ, ಅಲ್ಲಿಯ ಜನ. 'ಕೂಳು ಇಲ್ಲದೆ ಸಾಯುತ್ತಿದ್ದೇವೆ. ನಮ್ಮನ್ನೂ ನಮ್ಮ ಕೂಸು-ಕುನ್ನಿಗಳನ್ನೂ ಬದುಕಿಸಿರಿ' ಎಂಬ ಅವರ ಮೊರೆ ಇಲ್ಲಿ ಚಕ್ಕಂದಮಾಡುವ ನಿಮಗೆ ಹೇಗೆ ಕೇಳೀತು?"

"ಏನು ಮಹಾರಾಯಾ, ನಿನ್ನ ಲೆಕ್ಚರು ಇಲ್ಲಿಯೇ ಪ್ರಾರಂಭಿಸಿಬಿಟ್ಟೆಯಲ್ಲ?"

"ಇದು ನನ್ನ ಮನಸ್ಸಿನ ಕುದಿತ; ನೀನು ಬೇಕಾದ ಚೇಷ್ಟೆ ಮಾಡು!"

"ಆಹಾಹಾ! ಹೌದು!"

"ಏ ಗುಗ್ಗು, ನಾನು ಈಗ ಇಲ್ಲಿ ಬಂದದ್ದು ಯಾಕೆ ಎಂಬುದನ್ನು ಯೋಚಿಸಿದ್ದೀಯೇನು?"

"ಅಂತೂ ಕೆಲಸವಿದ್ದಾಗ ಮಾತ್ರ ಬರಬೇಕೆನ್ನು. ಬಹಳ ದೊಡ್ಡ ಮನುಷ್ಯನಾಗಿ ಬಿಟ್ಟೆಯಪ್ಪಾ! ಮೊದಲಿನ ನಿನ್ನ ಆ ಸ್ನೇಹ ಎಲ್ಲಿಗೋ ಹೋಯಿತೆಂದು ಕಾಣುತ್ತದೆ!"

"ನಾನು ಹೇಳುವ ಮಾತನ್ನು ಹಾಗೆ ಅರ್ಥ ಮಾಡಬೇಡ. ಈ ಊರಿಗೆ ನಾನು ಬಂದದ್ದು ಒಂದು ಕೆಲಸಕ್ಕಾಗಿ, ಅನ್ನಾನ್ನಗತಿಕರಾಗಿ ತೊಳಲುತ್ತಿರುವ ಆ ನಿರಾಧಾರಿಗಳಿಗೆಂದು ಹಣ ಸಂಗ್ರಹ ಮಾಡುತ್ತಿದ್ದೇನೆ ಕನ್ನಡಿಗರ ಸಂಖ್ಯೆ ಇಲ್ಲಿ ಬಹಳ. ದೊಡ್ಡ ಊರು ಏನನಾದರೂ ಸಹಾಯ ದೊರೆತೀತು ಎಂಬ ಆಶೆ!"

"ಹೌದು, ನೀನಲ್ಲವೆ ಮತ್ತೆ ಯಾರು ಇಂಥ ದೇಶಕಾರ್ಯ ಮಾಡಬೇಕು! ಬಹಳ ಸ್ತುತ್ಯ. ನೀನು ಅಂದಂತೆ ಇಲ್ಲಿ ಸಿರಿವಂತರು ಬಹಳ. ನಮ್ಮಂತಹ ಚಿಕ್ಕ ಸಂಬಳದವರನ್ನು ಬಿಟ್ಟರೂ ನಿನ್ನ ಕೈ ತುಂಬುವದು. ಗುಜರಾಥಿ, ಪಾರಸಿ ಜನ ಬಹಳ ಉದಾರಿಗಳು!"

"ಇದು ಪಾರಾಗುವ ಹವಣಿಕೆಯೇನು ಮತ್ತೆ? ಇಕಾ, ಸಾರ್ವಜನಿಕ ಕೆಲಸಗಳಿಗೆ ಬಲ ದೊರೆಯಬೇಕಾದರೆ ಎಲ್ಲರ ಸಹಾಯವೂ ಬೇಕು!"

"ಆದೇನೋ ಸರಿ, ಆದರೆ ಇಲ್ಲಿಯ ಪರಿಸ್ಥಿತಿ ನಿನಗೆ ಗೊತ್ತಿಲ್ಲ. ನಮ್ಮ ಸಂಸಾರವೇ ನಮಗೆ ಜಡವಾಗುತ್ತದೆ. ಇಂತಹ ಸಾರ್ವಜನಿಕ ಕೆಲಸದ ಮಾತು ಬಂದಾಗ ಹಣದ ಚೀಲ ಬರಿದೇ!"

"ಯಾವ ನೆವ ಹೂಡಿದರೂ ಅಷ್ಟೇ. ನಾನು ಹಾಗೆಯೆ ಹೋಗಲಾರೆ!"

"ಒಳ್ಳೆಯ ಪೇಚಾಟ ಮಹಾರಾಯಾ!"

"ಐದು ರೂಪಾಯಿ ನಿನಗೆ ಹೆಚ್ಚೇನೋ?"

ಈ ಮಾತು ಅಷ್ಟಕ್ಕೆ ನಿಲ್ಲುವುದಿಲ್ಲೆಂದು ಗೆಳೆಯನೂ ತಿಳಿದ. ಶೀನೂನ ಮಾತಿಗೆ ಒಪ್ಪಿದಂತೆ ಮಾಡಿ 'ನಾಳೆ ನೋಡೋಣ' ಎಂದು "ಚಿಂತೆಯಿಲ್ಲ. ಇನ್ನು ಹೊರಡುತ್ತೇನೆ; ನಾಳೆ ಈ ಹೊತ್ತಿಗೆ ಬರಲೇ?" ಶೀನೂ ಕೇಳಿದ.

"ಅವಶ್ಯ ಬಾ!"

ಶೀನೂ ಹೊರಟ.

ಅದು ಬಾಲ್ಯದ ಗೆಳೆತನ. ಬೆಳಗಾಂವಿಯಲ್ಲಿ ಇಬ್ಬರೂ ಕೂಡಿ ಆಡಿದವರು, ಓದಿದವರು. ಈ ಸ್ನೇಹಿತ ಮುಂಬಯಿಗೆ ಬಂದು ೬-೭ ವರ್ಷಗಳಾಗಿದ್ದುವು. ಶೀನು ಪ್ರಯತ್ನದಿಂದ ವಿಳಾಸ ದೊರೆಕಿಸಿ ಮನೆಗೆ ಬಂದಿದ್ದ.

ತಲೆಬಾಗಿಲು ಇನ್ನೂ ದಾಟಿರಲಿಲ್ಲ; ಅಸ್ಪಷ್ಟ ಧ್ವನಿಯೊಂದು ಕೇಳಿಸಿತು......."ಓಹೋ, ಇವನೇನು?.......ಹುಂ—ಮನೆಯಲ್ಲಿ ತಂದೆ-ತಾಯಿ ಮಗನ ಹೆಸರಿನಿಂದ ಕಲ್ಲು ಒಡೆಯುತ್ತಾರೆ; ಬರುವ ೨೫ ರೂಪಾಯಿ ಸಂಬಳದಿಂದ ಹೇಗೆ ಜೀವನ ನಡೆಯಿಸಬೇಕು ಎಂಬುದೂ ಅವರ ಚಡಪಡಿಕೆ.......ಆದರೆ.......ಈತನ......."

ಶೀನೂ ಅವಸರದಿಂದ ಮೆಟ್ಟಿಲು ಇಳಿದು ಹೋಗಿಬಿಟ್ಟ.

ಕೆಳಗೆ ಬಂದು ಜೇಬಿನಲ್ಲಿಯ ದಿನಚರಿ ತೆಗೆದು ನೋಡಿದ. ವಿಳಾಸಗಳ ಪಟ್ಟಿಯೊಂದಿತ್ತು.

"ಶ್ರೀ. ರಾ. ಕುಲಕರ್ಣಿ,—ಬಿಲ್ಡಿಂಗ್, ಗೋಖಲೇ ರೋಡ್, ದಾದರ್" 'ಓಹೋ, ಈತನ ಪರಿಚಯವೂ ಸ್ವಲ್ಪ ಇದೆ. ಭೆಟ್ಟಿಯಾಗೋಣ' ಎಂದುಕೊಂಡು ಹೊರಟ.

ಆ ದಿನ ರವಿವಾರ. ಕುಲಕರ್ಣಿಯವರು ಗೆಳೆಯರೊಂದಿಗೆ ಕೋಣೆಯಲ್ಲಿಯೆ ಇದ್ದರು. ಬೇರೆ ಮೂರು-ನಾಲ್ಕು ಜನ 'ಸಹವಾಸಿ'ಗಳು. ಒಟ್ಟು ಇಸ್ಪೀಟು ಆಟ ನಡೆದಿತ್ತು. ಕುಲಕರ್ಣಿಯವರು ಮಾತ್ರ ಬೆಳಗಿನ ಕ್ಷೌರದ ಸಿದ್ಧತೆಯಲ್ಲಿದ್ದರು.

"ಬಾರಪ್ಪಾ, ಶೀನು, ಯಾವಾಗ ಬಂದದ್ದು? ರೇಶನಿಂಗೋ, ಸಪ್ಲಾಯೋ, ಯಾವ ಡಿಪಾರ್ಟಮೆಂಟು? ಅಲ್ಲೋ, ಗ್ರಾಮ ಸುಧಾರಣೆ, ಖಾದಿ, ಕಾಂಗ್ರೆಸ್ಸು—ನಿನ್ನ ಆ 'ಜೀವನದ ಧ್ಯೇಯ'ಗಳೆಲ್ಲ ಎಲ್ಲಿ ಹೋದುವು?"

ಶೀನು ಒಂದು ಮುಗುಳ್ನಗೆ ನಕ್ಕು ನುಡಿದ:

"ಯಾವುದೂ ಹೋಗಿಲ್ಲ. ಎಲ್ಲವೂ ಇದೆ!"

"ನಿನ್ನ ಕಾರ್ಯಕ್ಷೇತ್ರ ಈಗ ಬೃಹತ್ಕರ್ನಾಟಕವಾಯಿತೇನು ಹಾಗಾದರೆ? ಸರಿ, ಆದರೆ ಇಲ್ಲಿ ಸಾರ್ವಜನಿಕ ಕೆಲಸ ನಡೆಯಬೇಕಾದರೆ 'ಕನ್ನಡ, ಕನ್ನಡ' ಎಂದು ಉಪಯೋಗವಿಲ್ಲ; ನೀನು ಬೇರೆ ಭಾಷೆಯನ್ನು ಕಲಿಯಬೇಕಾಗುತ್ತದೆ!"

"ಅಂತೂ ನಿನ್ನ ವಾಚಾಳತನ ಮೊದಲಿನಂತೆಯೇ ಇದೆ. ಹೂಂ ಮೊದಲು ಹೇಳಬೇಕಾದದ್ದನ್ನೆಲ್ಲ ಹೇಳಿ ಮುಗಿಸು; ಆ ಮೇಲೆ ನಾನು ಮಾತಾಡುತ್ತೇನೆ!"

ಗೆಳೆಯರು ಆಟ ನಿಲ್ಲಿಸಿದರು. ಎಲ್ಲರ ಲಕ್ಷ್ಯ ಇವರ ಮಾತಿನ

ಕ

“ನಾನು ಇಲ್ಲಿಗೆ ಬಂದ ಕೆಲಸವೆಂದರೆ, ವಿಜಾಪುರದಲ್ಲಿಯ ಸಂಕಟಗ್ರಸ್ತ........” ಶೀನುವಿನ ಮಾತು ಪೂರ್ಣವಾಗಿರಲಿಲ್ಲ. ಕುಲಕರ್ಣಿಯವರು ನುಡಿದರು.

“ಏ ಮಹಾರಾಯಾ! ಆ ಸಂಕಟ ನಿವಾರಣೆಗೆ ಈಗಿನ ಕಾಲದಲ್ಲಿ ಇಲ್ಲಿಯ ವರೆಗೆ ಪ್ರವಾಸ ಮಾಡುವಂಥ ಮಹಾಸಂಕಟಕ್ಕೆ ಯಾಕೆ ಕೈಹಾಕಿದೆ?”

“ಬರಗಾಲ ಸಹಾಯಕ ಸಮಿತಿಗೆ ನಾನು ಕಾರ್ಯದರ್ಶಿಯಾಗಿದ್ದೇನೆ; ನಿನ್ನಿಂದ ಏನಾದರೂ ಧನಸಹಾಯ ಸಿಕ್ಕೀತು, ಎಂಬ ಆಶೆ....”

“ಅಂತೂ ಈ ಬರಗಾಲದಿಂದ ನಿನಗೆ ಮತ್ತೊಂದು ಉದ್ಯೋಗ ದೊರೆಯಿತೆನ್ನು.”

ಇದನ್ನೆಲ್ಲ ಕೇಳುತ್ತಿದ್ದ ಗೆಳೆಯರಲ್ಲಿ ಒಬ್ಬನೆಂದ :

“ಹೌದು, ಮಿಸ್ಟರ್ ಕುಲಕರ್ಣಿ, ನಾಳೆ ರವಿವಾರ ಇಲ್ಲಿ ಒಂದು ಕನ್ನಡ ನಾಟಕವಿದೆಯಂತೆ. ಅದು ಕೂಡ ಈ ವಿಜಾಪುರದವರಿಗಾಗಿಯೇ!”

“ಇತರರಿಗೆ ಸಹಾಯ ಮಾಡಿ ಮಾಡಿ ಸಾಯುತ್ತಿರುವ ನಮಗೆ ಸಹಾಯ ಮಾಡುವವರು ಯಾರು? ಇರಲಿ ಬಿಡು, ಶೀನು! ನೀನು ಮೊದಲು ಸ್ವಲ್ಪ ವಿಶ್ರಾಂತಿ ತೆಗೆದುಕೊ!” ಕುಲಕರ್ಣಿ ಮುಖ ಒರೆಸುತ್ತ ಹೇಳಿದರು.

“ವಿಶ್ರಾಂತಿ ಇದ್ದೇ ಇದೆ—ನಾನು ಹೇಳುವುದಿಷ್ಟು : ನಮ್ಮವರಿಗೆ ನಾವು ತುತ್ತು ಅನ್ನ ಹಾಕದಿದ್ದರೆ ಮತ್ತೆ ಯಾರು ಹಾಕಬೇಕು? ಮೊದಲೇ ಕನ್ನಡಿಗರು........”

“ಏ ಪ್ರಾಣಿ, ಆ ‘ಕನ್ನಡ’ ಶಬ್ದ ಎತ್ತಬೇಡ. ಕನ್ನಡ, ಕನ್ನಡಿಗ, ಕರ್ನಾಟಕ ಏಕೀಕರಣ ಇದನ್ನೆಲ್ಲ ಕೇಳಿ ಕೇಳಿ ನಮ್ಮ ಕಿವಿ ಹೋಗಿವೆ. ಅಲ್ಲೋ, ಕನ್ನಡಿಗರು ಎಂದುಕೊಳ್ಳದಿದ್ದರೆ ನೀವು ಮನುಷ್ಯರಲ್ಲವೇನು?”

“ಅದು ನಮ್ಮ ರಾಷ್ಟ್ರೀಯತ್ವದ ದ್ಯೋತಕ... ....ಭಾಷೆಯ ಅಭಿಮಾನ ಬೇಕು! ಕನ್ನಡಿಗರಲ್ಲದವರು ನಮ್ಮ ನಾಟಕವನ್ನು ಇಲ್ಲಿ ಹೇಗೆ ನೋಡಬಲ್ಲರು? ನೀನೇ ಯೋಚಿಸು!”

“ನಿನ್ನ ‘ಮಾಸ್ತರಿಕೆ’ ಸುರುವು ಮಾಡಿದೆಯಲ್ಲ, ಮತ್ತೆ! ಒಂದೇ ಮಾತಿನಲ್ಲಿ ಹೇಳಬೇಕೆಂದರೆ, ಏ ಶೀನು, ನಿನ್ನ ತಿಳುವಳಿಕೆಯ ಮಟ್ಟ ಇನ್ನೂ ‘ಎಲಿಮೆಂಟರಿ ಸ್ಟೇಜ್’ ನಲ್ಲಿದೆ.”

“ಇರಬಹುದು. ಆದರೆ ಅದರಿಂದ ಜನಕ್ಕೆ ಉಪಕಾರವೇ ಹೊರತು ಅಪಕಾರವಲ್ಲ!”

ಗೆಳೆಯರಲ್ಲೊಬ್ಬ ಹೇಳಿದ :

“ನೀವು ಸಿಟ್ಟಿಗೇಳಕೂಡದು. ಮಿಸ್ಟರ್! ಕನ್ನಡ ನಾಟಕ ನೋಡುವುದೆಂದರೆ ಮೈ ಮೇಲೆ ಮುಳ್ಳು ಬರುತ್ತವೆ. ಹಣ ಖರ್ಚು, ವ್ಯರ್ಥ ನಿದ್ದೆ ಕಟ್ಟುವುದು!........ಬರೆಯುವವರೂ, ಆ ನಾಟಕ ಆಡುವವರೂ ಎಲ್ಲರೂ ಪಂಡಿತರೇ! ಹತ್ತಾರು ನಾಟಕ ನೋಡಿ ಈ ಮಾತನ್ನು ಖಾತ್ರಿ ಮಾಡಿಕೊಂಡಿದ್ದೇನೆ. ಯಾಕೆ, ಏನೆನ್ನುತ್ತೀರಿ? ಶ್ರೇಷ್ಠವಾದ ಒಂದು ಕನ್ನಡ ನಾಟಕದ ಹೆಸರು ಹೇಳಿರಿ ನೋಡೋಣ!”

ಶೀನು ಮಾತನಾಡಲಿಲ್ಲ. ‘ಇವರದು ಅಗಾಧ ಕನ್ನಡಪಾಂಡಿತ್ಯ’ ಎಂದುಕೊಂಡನು ಮನದಲ್ಲಿಯೆ.

× × × ×

ಕುಲಕರ್ಣಿ ಹೇಳಿದರು:

“ಇವು ನಮ್ಮ ವೈಯಕ್ತಿಕ ಅಭಿಪ್ರಾಯಗಳು, ಅನ್ಯಥಾ ಭಾವಿಸಬೇಡ........ಶೀನು, ನಿಜವಾಗಿಯೂ ನಮ್ಮ ‘ಫ್ರೆಂಡ್ಸ್ ಗ್ರುಪ್’ನಿಂದ ಕೆಲವು ಹಣ ಸಂಗ್ರಹಿಸಿ ಕೊಡಬೇಕೆಂದಿದ್ದೆ. ಆದರೆ ತಿಂಗಳ ಕೊನೆ....

“ಪರವಾ ಇಲ್ಲ, ನಾನು ಹೊರಡುತ್ತೇನೆ. ನಮಸ್ಕಾರ!”

ಗೆಳೆಯರೆಲ್ಲರೂ ಒಬ್ಬರ ಮುಖವನ್ನೊಬ್ಬರು ನೋಡಿಕೊಂಡರು.

ಹೊರಗೆ ಬಂದಾಗ ಸ್ವಲ್ಪ ನಿರುತ್ಸಾಹ ಎನಿಸಿತು ಶೀನುವಿಗೆ. ‘ನಮ್ಮ ಜನ ಇಷ್ಟು ನಿರ್ದಯರೇ? ಸಾರ್ವಜನಿಕ ಸ್ವಾಸ್ಥ್ಯದ ಕಡೆಗೆ ಇಷ್ಟು ಕುರುಡುಗಣ್ಣಿನಿಂದ ನೋಡತೊಡಗಿದರೇ?—ಛೇ! ಈ ಇಬ್ಬರು ಪೋಕರಿಗಳ ಮೇಲಿಂದ ಇಡೀ ಸಮಾಜದ ಗುಣಾವಗುಣಗಳನ್ನು ಎಣಿಸಬಾರದು. ಸಾಧ್ಯವಿದ್ದ ಎಲ್ಲ ಜನರನ್ನೂ ಭೆಟ್ಟಿಯಾಗುತ್ತೇನೆ. ಈ ಜೋಳಿಗೆ ಒಡ್ಡುತ್ತೇನೆ. ಯಾರೂ ಪುಣ್ಯವಂತರಿರಲಿಕ್ಕಿಲ್ಲವೇ?’........ವಿಚಾರ ಪ್ರವಾಹ ಸಾಗಿತ್ತು.

ಆ ಕುದಿತ, ಕಳವಳ, ಆರ್ತರ ಕೊರಗು ಈತನನ್ನು ನಿರ್ವಿಣ್ಣ ಮಾಡಿದ್ದುವು. ಇಂದಿನ ಸೋಲು ಎಲ್ಲಕ್ಕೂ ಹೆಚ್ಚು ಮನಸ್ಸನ್ನು ಹಿಂಡಿತ್ತು.

ಅವನು ಇಳಿದುಕೊಂಡ ಸ್ಥಳ ಗಿರಗಾಂವಿಯಲ್ಲಿ. ಊಟದ ಹೊತ್ತು, ಗೆಳೆಯರು ದಾರಿ ಕಾಯುತ್ತಿದ್ದಾರು, ಇನ್ನು ಅಲ್ಲಿಗೆ ಹೊರಡಬೇಕೆಂದು ತಿಕೀಟು ಪಡೆದುಕೊಂಡ. ಗಾಡಿ ಬರಲು ಇನ್ನೂ ಕೆಲವು ನಿಮಿಷ. ಮತ್ತೆ ಮನಸ್ಸಿನಲ್ಲಿ ಯೋಚನೆಯ ಮೊಲಕಾಟಕ್ಕೆ ಪ್ರಾರಂಭವಾಯಿತು.

ನೋಡಿಬಂದವರು ಮುಂಬಯಿಯನ್ನು ಎಷ್ಟೆಷ್ಟೋ ವರ್ಣಿಸುತ್ತಾರೆ. ಆದರೆ ನನಗೆ ಕಾಣುವುದೇನು? ಒಂದು ಹೊಟ್ಟೆ ಹೊರೆಯಲು ಇಲ್ಲಿಯ ಜನ ಎಷ್ಟು ಪರಿಶ್ರಮಪಡುತ್ತಾರಲ್ಲ! ಮನಸ್ಸು, ಭಾವನೆ ಅಂತಃಕರಣ ಎಲ್ಲವನ್ನೂ ಗಂಟುಕಟ್ಟಿ ಒಗೆದು, ಇಲ್ಲಿಯ ಜನ ಗಡಿಯಾರದ ಮುಳ್ಳಿನ ಮೇಲೆಯೇ ನಿಲ್ಲಬೇಕು! ಯಾತರ ನೋವೂ ಇಲ್ಲ; ನರಳಾಟ ಇಲ್ಲ. ಹೊಟ್ಟೆಗಾಗಿ ಮನುಷ್ಯ ಕ್ರಿಮಿಗಿಂತ ಕಡೆಯಾಗಿದ್ದಾನೆ. ‘ಬ್ರೆಡ್ಡು-ಭಜಿ’ ತಿಂದು, ನಿಲ್ದಾಣದ ಪೌಳಿಯಲ್ಲಿ ಬಾಳುವೆ ನಡೆಯಿಸಿದ ಇಂತಹ ಜನದ ಕೊರಗು ಯಾರ ಸ್ಮರಣೆಗೆ ಬರಬೇಕು? ನಾಗರಿಕತೆಯ ದರ್ಜೆ, ಸಂಸ್ಕೃತಿಯ ಘಟನೆ ಎಲ್ಲ ಇವರಿಗೆ ಸುಳ್ಳು........

ಇಂತಹ ಜನರಿಗಾಗಿ ಚಿಂತಿಸುವ ನನ್ನ ಗತಿಯಾದರೂ ಏನು? ಬೆಳಗ್ಗೆ ಆ ಮುದುಕ ಒದರಿದಂತೆ ನನ್ನ ಸಂಸಾರದ ಕಷ್ಟ ನನಗೇ ಹೊರಲಾರದ ಭಾರ. ಹೆಚ್ಚಿನ ವರಮಾನಕ್ಕೆ ಯತ್ನಿಸಿ ಆರ್ಥಿಕ ಬವಣೆಯನ್ನು ಕಡಿಮೆ ಮಾಡಿಕೊಳ್ಳುವುದು ನನಗೆ ಅಸಾಧ್ಯವಲ್ಲ. ಎದೆ ಸೀಳಿದರೆ ಅಕ್ಷರ ಹೊರಡದವರೂ ಈ ಯುದ್ಧಕಾಲದಲ್ಲಿ ಬೊಗಸೆತುಂಬ ಗಳಿಸುತ್ತಾರೆ........ಆದರೆ ಮಂದಿಯ ಸುಖ-ದುಃಖದ ಗುತ್ತಿಗೆ ಹಿಡಿಯುವ ಹುಚ್ಚು ನನಗೆ ಯಾಕೆ?........

“ಊಂ........ಹೊಂ........”ತಲೆ ಕೊಡಹಿದ.

ಜಯಂತಿ ಕಾರ್ಯಾಲಯದಲ್ಲಿ ದೊರೆಯುವ ಪುಸ್ತಕಗಳು

‘ಶ್ರೀರಂಗ’ ಬರೆದುವು

ಗೀತಾಗಾಂಭೀರ್ಯ	೩	೦	೦
ನಗೆ (ರಸವಿಚಾರ)	೧	೮	೦
ಆಹ್ವಾನ (ಕವನಸಂಗ್ರಹ)	೧	೦	೦
ನಿರಾಹಾರ	೦	೧೨	೦

‘ಆನಂದಕಂದ’ರು ಬರೆದುವು

ಸುದರ್ಶನ (ಕಾದಂಬರಿ)	೧	೦	೦
ವಿರಹಿಣಿ (ಕವನಸಂಗ್ರಹ)	೦	೧೨	೦
ಕರ್ನಾಟಕ ಜನಜೀವನ	೧	೮	೦

ಬಲಕ್ಕೆ ತಿರುಗಿ ನೋಡಿದ. ಲಕ್ಷ್ಯಹೋಯಿತು: “Bijapur Famine Relief” ಇಂಗ್ಲೀಷ್ ಅಕ್ಷರ! ಆಶ್ಚರ್ಯ, ಸಂತೋಷ ಅವನಿಗೆ. ಒಬ್ಬ ಸ್ವಯಂಸೇವಿಕೆಯ ಕೈಯಲ್ಲಿ ‘ಧರ್ಮಾರ್ಥ’ ಪೆಟ್ಟಿಗೆ. ಅದರ ಮೇಲೆ ಈ ಅಕ್ಷರ! ಅವಳು ಕನ್ನಡಿಗಳೇ? ಅಲ್ಲ. ವೇಷ-ಭೂಷಣದಿಂದ ಪಾರಸಿ. ಜೊತೆಯವನ ಕೂಡ ಮಾತನಾಡುತ್ತಿದ್ದದು ಹಿಂದೀ ಭಾಷೆಯಲ್ಲಿ. ಶೀನುವಿನ ತವಕ ಹೆಚ್ಚಿತು. ಕಿವಿ ನೆಟ್ಟಗಾದುವು. ಆ ಮನುಷ್ಯ ಸ್ವಯಂಸೇವಿಕೆಗೆ ಉತ್ತರ ಕೊಟ್ಟ

“ಈ ಮಾತು ಸತ್ಯವಾದುದು! ಅಹಮ್ಮದಾಬಾದಿನಲ್ಲಿಯೂ ನಾನು ವೈಯಕ್ತಿಕವಾಗಿ ಈ ಕೆಲಸ ಪ್ರಾರಂಭಿಸಿದ್ದೇನೆ ಇಷ್ಟರಲ್ಲಿಯೇ ಒಂದು ರಿಲೀಫ್ ಕಮಿಟಿ ಸ್ಥಾಪಿತವಾಗುತ್ತದೆ. ಆದರೆ ಅಲ್ಲಿಯ ಸ್ಥಿತಿಯೂ ಚೆನ್ನಾಗಿಲ್ಲ. ಎಲ್ಲಿ ನೋಡಿದರೂ ಕಾಳಿನ ಅಭಾವ; ಜನ ಕಂಗೆಟ್ಟಿದೆ!’

“ಹೌದು—ಆದರೆ ಈ ವಿಷಯವಾಗಿ ಹೇಳಬೇಕೆಂದರೆ, ನಿಸ್ವಾರ್ಥ ಕೆಲಸಗಾರರ ತಂಡ ಒಂದು ಇದ್ದರೆ ಎಲ್ಲಿಯೂ ಹಣ ಶೇಖರಿಸಬಹುದು! ಕೈ ಮುಂದೆ ಮಾಡಿದರೆ ಕಾಸಿಲ್ಲ ಕಾಸು ಸಿಕ್ಕೇ ಸಿಕ್ಕುತ್ತದೆ. ನಿಮಗೆ ಆಶ್ಚರ್ಯವಾಗಬಹುದು, ಆದರೆ ಸತ್ಯ ಹೇಳುತ್ತೇನೆ ಈ ಪೆಟ್ಟಿಗೆಯಲ್ಲಿ ಮೊನ್ನೆ ಒಂದೇ ವಾರದಲ್ಲಿ ಮೂರು ನೂರು ರೂಪಾಯಿ ಸಂಗ್ರಹಿಸಿದ್ದೇನೆ........ನಿಮಗೆ ಗುಜರಾತಿ ಬರುವುದಿಲ್ಲವೇ?”

“ಕ್ಷಮಿಸಿ, ನಾನು ಆಡುವುದನ್ನು ಸ್ವಲ್ಪ ತಿಳಿಯುತ್ತದೆ, ಆದರೆ ಚೆನ್ನಾಗಿ ಮಾತಾಡಲಾರೆ.......ನಮಸ್ಕಾರ, ನನ್ನ ಗಾಡಿ ಬಂತು. ಮತ್ತೊಮ್ಮೆ ಭೆಟ್ಟಿಯಾಗುತ್ತೇನೆ.” ಆ ಗೃಹಸ್ಥನೆಂದ

ಎಲ್ಲ ಮಾತು ಸ್ಪಷ್ಟವಾಗಿ ತಿಳಿದುವು. ಇದು ಒಂದು ಬಗೆಯ ಮುಂಬಯಿಯ ಕೆಚ್ಚು. ಇಂತಹ ಕೆಲಸಗಾರರಿದ್ದ ಮೇಲೆ ಹೊಸ ಹೊಸ ಸಂಘ-ಸಂಸ್ಥೆಗಳನ್ನು ಕಟ್ಟಿ ಪೋಷಿಸಿ, ಅಖಂಡಭಾರತದ ಹಿತ ಸ್ವಾರ್ಥಗಳ ಸಂರಕ್ಷಣೆಯ ದೊಡ್ಡ ಹೊಣೆಯನ್ನು ಈ ಪಟ್ಟಣ ಹೊತ್ತಿದ್ದರೆ ಆಶ್ಚರ್ಯವೇನು? ನಮ್ಮಲ್ಲಿಯ ಹೆಂಗುಸರೋ, ಛೆ.......ನೆನೆಸಬಾರದು. ಅದು ಹೋಗಲಿ. ಈ ಕಾರ್ಯಾಸಕ್ತಿ, ಸೇವಾಕಾಂಕ್ಷೆ, ನೂರಾರು ಮೈಲು ನಡೆದು ಬಂದು ಇಲ್ಲಿ ನೆಲಸಿದ ಗಂಡುಸರಲ್ಲಿಯಾದರೂ ಮೈಗೂಡಬಾರದೇ? ಈ ಪ್ರಾಣಿ ಒಂದು ವಾರದಲ್ಲಿ ಮುನ್ನೂರು ರೂಪಾಯಿ ಸಂಗ್ರಹಿಸಿದಳಂತೆ! ನಾನು ಭಿಕಾರಿಯಂತೆ ಮನೆ ಮನೆ ತಿರುಗಿದರೂ ಹಾದಿಯ ವೆಚ್ಚಕ್ಕೆ ಸಾಲ ಮಾಡಿಯೇ ತೀರಬೇಕು........

ಆ ಹೆಣ್ಣುಮಗಳು ಇವನ ಕಡೆಗೆ ಬಂದು ಪೆಟ್ಟಿಗೆ ಮುಂದೆ ಮಾಡಿದಳು. ಶೀನು ಕಿಸೆಯಲ್ಲಿಯ ಪಾವಲಿಯ ತುಣುಕೊಂದನ್ನು ಪೆಟ್ಟಿಗೆಯಲ್ಲಿ ಒಗೆದು, ವಿನಯದಿಂದ “ನಾನೂ ವಿಜಾಪೂರದವನೇ!” ಎಂದು ಇಂಗ್ಲಿಷಿನಲ್ಲಿ ಹೇಳಿದ.

“ಹೀಗೇನು?”

“ಅಲ್ಲಿಯ ರಿಲೀಫ್ ಕಮಿಟಿಯಲ್ಲಿ ಕೆಲಸ ಮಾಡುತ್ತೇನೆ!”

“ಓಹೋ, ತುಂಬ ಸಂತೋಷ. ಇಲ್ಲಿ ಯಾವಾಗ ಬಂದದ್ದು?”

“ನಾಲ್ಕು ದಿನವಾಯಿತು. ನಮ್ಮ ಜನರಲ್ಲಿ ಸ್ವಲ್ಪ ಪ್ರಚಾರ ಮಾಡಬೇಕೆಂದಿದ್ದೇನೆ; ಇಲ್ಲಿ ನನ್ನ ದೇಶದ ಜನರ ಸಂಖ್ಯೆ ಬಹಳ!”

“ಅದೂ ಸರಿಯೇ; ಆದರೆ ನಮಗಿಂತ ನಿಮ್ಮ ಕೆಲಸ ಮಹತ್ತ್ವದ್ದು. ನಾವು ಕಳಿಸಿದ ಹಣದ ವಿನಿಯೋಗಕ್ಕೆ ಯೋಗ್ಯರು ನೀವೇ. ನಿಮ್ಮವರ ಬೇಡಿಕೆ. ಆವಶ್ಯಕತೆ ನಿಮಗೇ ಹೆಚ್ಚು ಗೊತ್ತು!”

“ಆ ಕೆಲಸ ಪ್ರಾರಂಭಿಸಿದ್ದೇವೆ. ನಮ್ಮಲ್ಲಿ ದುಡಿಯುವ ಜನ ಕಡಿಮೆ.......”

“ಎಲ್ಲ ಕಡೆಗೂ ಆ ಕೊರತೆ ಇದ್ದದ್ದೇ—ಈ ವಿಳಾಸಕ್ಕೆ ಸಂಜೆಯ ಆರು ಗಂಟೆಗೆ ಬನ್ನಿ. ಹಲವು ಜನರ ಪರಿಚಯ ಮಾಡಿ ಕೊಡುಕೊಡುತ್ತೇನೆ.” ಮಹಿಳಾಮಂಡಲದ ವಿಳಾಸ ಕೊಟ್ಟಳು.

“ಆಗಲಿ!”

“ನಮಸ್ಕಾರ!”

ಶೀನುವಿನ ಮನಸ್ಸು ಹಿಗ್ಗಿತು. ಬೆಳಗಿನಿಂದ ಮನಸ್ಸನ್ನು ಹಣ್ಣು ಮಾಡಿದ ನಿರಾಶೆ ಈಗ ಮಾಯವಾಯಿತು. ಈ ಎರಡು ಗಳಿಗೆ ಸಂತಸದಾಯಕ ರಸನಿಮಿಷ ಎನ್ನಿಸಿದುವು. ಧ್ಯೇಯವಾದದ ಹುಚ್ಚು!

ಮತ್ತೊಮ್ಮೆ ಪ್ರಶ್ನಿಸಿಕೊಂಡ:

‘ನಮ್ಮ ಜನರೂ ಹೀಗೆ ಸಮಾಜಸೇವೆಗೆ ಯಾಕೆ ಕಂಕಣಕಟ್ಟುವುದಿಲ್ಲ?’

ಅನ್ನವಿಲ್ಲದೆ ಕಂಗೆಟ್ಟ ನಮ್ಮ ಅಣ್ಣ-ತಮ್ಮಂದಿರನ್ನು ನಾವು ಕಣ್ಣೆತ್ತಿ ನೋಡುವುದಿಲ್ಲ. ಆದರೆ ನಮಗಾಗಿ, ಬಲು ದೂರದವರಾದ ಇವರು ಇಷ್ಟು ದುಡಿಯುತ್ತಾರಲ್ಲ!

ಕಾರಣ?

ಮಾನವತೆಯ ಬೆಲೆ ನಮಗೆ ತಿಳಿದಿಲ್ಲ!

ನಮ್ಮಲ್ಲಿ ಬರಗಾಲವಿದೆ!”

ಗಾಡಿ ಬಂತು. ಶೀನು ಎದ್ದ *

* ಕಥಾಪಾತ್ರಗಳೆಲ್ಲ ಕಲ್ಪಿತವಾದುವು. —ಲೇಖಕ

ಬೆಳಕು ಬಾಲೆ

(ಮನೋವಿಶ್ಲೇಷಣಾತ್ಮಕ ಸಣ್ಣಕತೆ)

ಶ್ರೀ. ಸಚ್ಚಿದಾನಂದ ಶಿರೋಡಕರ, ಪುಣೆ

●

ವಿಚಾರದ ಬಿರುಗಾಳಿಗೆ ಸಿಕ್ಕ ನಾವೆ! ನಿರಾಶೆಯ ಮೋಡಗಳಿಗೆ ಬಲಿ! ತನ್ನ ಸ್ಥಿತಿಯನ್ನು ಕಂಡು ಸೋಜಿಗ-ಸಂತಾಪಗಳನ್ನು ಸೂಚಿಸುವ ಮುಖವನ್ನು, ವೃಥಕಾಯನಾದರೂ ನಿರಂತರವಾಗಿ ಬಲಹೀನವಾದ ಶರೀರದ ಅಂಗವಾದ ಬಲಗೈಯಲ್ಲಿ ಹಿಡಿದುಕೊಂಡು, ಸುಧೀರನು—ಬ್ರಹ್ಮಚಾರಿ—ಹಾಸಿಗೆಯ ಮೇಲೆ ಕುಳಿತಿದ್ದನು. ತನ್ನನ್ನು ಮುಕುರಿದ್ದ ಕಾರ್ಮೋಡಗಳನ್ನು ದೂರ ಓಡಿಸಲೋ ಏನೋ ಎನ್ನುವಂತೆ, ಒಂದರ ಹಿಂದೊಂದು ಸಿಗರೇಟು ಕುಡಿಯುತ್ತ ವಿಚಾರಮಗ್ನನಾಗಿದ್ದನು. ಸುತ್ತಲೂ ನೋಡುತ್ತಾನೆ—ಬಾಗಿಲು ಮುಚ್ಚಿದೆ-ಕಿಟಕಿಗಳು ತೆರೆದಿರಲಿಲ್ಲ, ಕೋಣೆಯ ಒಳಗೆಲ್ಲ ಹೊಗೆ. ಒಮ್ಮೆಲೆ ಎದ್ದು ಕಿಟಕಿಯ ಬಾಗಿಲುಗಳನ್ನು ತೆರೆದನು. ಹೊಗೆ ಹೊರಕ್ಕೆ ಹೋಗಲಾರಂಭಿಸಿತು. ಕ್ರಮೇಣ ಬೆಳಕು ಒಳಗೆ ಬರಲಾರಂಭಿಸಿತು. ಆದರೆ ಆ ಬೆಳಕು ಕೋಣೆಯ ಬೇಗೆಯನ್ನು ಬಗೆಹರಿಸಿತು ಮಾತ್ರ; ಸುತ್ತಲಿನ ಬೆಳಕಿನಲ್ಲಿಯೂ ಕತ್ತಲೆಯನ್ನು ಅನುಭವಿಸುತ್ತಿದ್ದ ಸುಧೀರ! ಜೀವನವು ಒಂದು ಕರುಣಾಜನಕ ಸತ್ಯ! ಸುತ್ತಲೆಲ್ಲ ಹರುಷ ಹೂಗಳು ಪ್ರಸ್ಫುಲ್ಲಿತವಾಗಿ, ತಮ್ಮ ಸುಗಂಧವನ್ನು ಸೃಷ್ಟಿದೇವಿ ಹಾಕಿಕೊಟ್ಟ ಪಾರದ ಪೇರಿಗೆ, ಉದಾರಹಸ್ತಗಳಿಂದ ದಶದಿಕ್ಕುಗಳಲ್ಲಿ ಹರಡಿದರೂ, ಅನೇಕರಿಗೆ ಅವುಗಳ ಆನಂದವನ್ನು ಸವಿಯುವುದು ಸಾಧ್ಯವಾಗುವುದಿಲ್ಲ. ಕೆಲವೊಮ್ಮೆ ಅವರೇ ತಮ್ಮ ದುಃಸ್ಥಿತಿಗೆ ಜವಾಬುದಾರರು; ಕೆಲವೊಮ್ಮೆ ಅವರ ಜೀವನದಲ್ಲಿ ಬೀಸುವ ಅದಮನೀಯ ಬಿರುಗಾಳಿಗಳು! ಸ್ವಪ್ರಯತ್ನದಿಂದ ತನ್ನ ಜೀವನವನ್ನು ನಿರ್ಧರಿಸುವುದು ಅನೇಕರಿಗೆ ಸಾಧ್ಯವಾಗದಿರುವುದು ವಿಚಾರಗಳನ್ನು ಕೆರಳಿಸುವ ಅನುಭವ! ಜಗತ್ತೆಲ್ಲ ದಿವಾಕರನು ಪಸರಿಸಿದ ಹೊಂಬಣ್ಣದ ಕೈಗಳ ಕೆಳಗೆ ಸುಖದಿಂದಿದೆ. ಆ ನೆರಳಿನಲ್ಲಿದ್ದೂ ಸುಧೀರನು ಮೋಡಗಳ ಮಾಯಾಜಾಲವನ್ನು ಅನುಭವಿಸುತ್ತಿದ್ದಾನೆ. ಆಶಾವಾದದ ಒಲವಿಂದ ಸಂತಾಪವನ್ನು ಹತ್ತಿಕ್ಕಬಹುದಾಗಿತ್ತು, ಆದರೆ ಸೋಜಿಗವು ಸಂತಾಪದೊಡನೆ ಆಡುತ್ತಿದ್ದುದರಿಂದ ಸಂತಾಪವು ಬಲಗೊಂಡಿತ್ತು. ಜೀವನಪಥದಲ್ಲಿ ಮೋಡವೊಂದು ಮುಂಬಂದಿತೆಂದರೆ ಕೆಲಕಾಲ ಅದು ಕತ್ತಲೆಯನ್ನು ಹರಡುವುದು. ಆದರೆ ಸುಧೀರನ ಬಾಳುದಾರಿಯಲ್ಲಿ ಬಂದು ನಿಂತದ್ದು ಮೋಡವಾಗಿರಲಿಲ್ಲ! ಆಶ್ಚರ್ಯ! ಜಗದೇಕ ಸುಂದರಿ! ಏನವಳ ಒನಪು! ಒಯ್ಯಾರ! ಸಿಂಹಕಟಿ. ಮೃಗಾಕ್ಷಿ: ಮೀನಾಕ್ಷಿ! ಮಂದಗಮನೆಯಲ್ಲದಿದ್ದರೂ ಅವಳ ನಡಿಗೆಯಲ್ಲಿ ಪ್ರಶಂಸನೀಯವಾದ ಠೀವಿಯೊಂದು ಒಡೆದು ಕಾಣುತ್ತಿತ್ತು; ನೋಡುವವರ ಮೋರೆಗಳನ್ನು ಪ್ರತಿಬಿಂಬಿಸುವ ಮೋಹಕ ಗಲ್ಲಗಳು! ಸೃಷ್ಟಿಸೌಂದರ್ಯದಂತೆ ವಿಶಾಲವಾದ ಹಣೆ! ಹೃದಯಗಳನ್ನು ಭೇದಿಸಿ ಒಳಹೊಗಬಲ್ಲ ಪ್ರಭಾವಿ ಕಣ್ಣುಗಳು! ಹದಿನಾರು ವಸಂತಗಳ ಒಲವನ್ನು ಉಂಡ ಯೌವನ! ಶುಭ್ರವಸ್ತ್ರಗಳು ಕೂಡ ಕೆಲವು ಸಲ ನೋಡ, ಬಿರುಗಾಳಿಗಳನ್ನು ತಂದೊಡ್ಡುವುದು ಬಾಳಿನ ಅಗಾಧತೆಯ ಸಂಕೇತ! ಇಂತಹ ಶುಭ್ರ ಯುವತಿಯು, ಸುಧೀರನ ಬಾಳಿನಲ್ಲಿ ಕತ್ತಲೆಯನ್ನು ಕಾರಿದ್ದಳು.

ಮೊನ್ನೆಯೆ, ಅವನು ಅವಳಿಗೊಂದು ಪ್ರೇಮಪತ್ರವನ್ನು ಬರೆದು ತನ್ನಲ್ಲಿ ಹಗಲಿರುಳು ರಂಜಿಸುವ ಪ್ರೇಮದ ಸಂದೇಶವನ್ನು ಸಾರಿದ್ದನು. ಅವಳು ಕೂಡ ಪ್ರತಿಸಂದೇಶವನ್ನು ಕಳುಹಿ, ತನ್ನನ್ನು ಪ್ರೇಮಸ್ವರ್ಗದಲ್ಲಿ ನಲಿಸುವಳೆಂದು ತಿಳಿದು, ಕಲ್ಪನಾತರಂಗಗಳೊಡನೆ ರಮಿಸುವುದರಲ್ಲಿದ್ದನು. ಆದರೆ ಅವನು ಬರೆದ ಪತ್ರವು ಹಾಗೆಯೆ ಅವಳಿಂದ ತಿರುಗಿ ಬಂದಿತ್ತು! ಪ್ರೇಮಸಮರದ ಗಾಯಾಳು! 'ಮುಂದೇನು?' ಎಂದು ಚಿಂತಿಸುತ್ತ ಕನ್ನಡಿಯಲ್ಲಿ ತನ್ನ ಮುಖವನ್ನು ನೋಡುತ್ತ "ಪ್ರೇಮಿಯೊಬ್ಬ ಹುಚ್ಚ" ಎಂದು ಮಧ್ಯೆ ಮಧ್ಯೆ ಗೊಣಗುತ್ತಿದ್ದನು. ಕೊಂಚ ಸಮಯದನಂತರ ಸುಧೀರನ ದೃಷ್ಟಿಯು ಅಂದೆಯೆ ತಿರುಗಿ ಬಂದಿದ್ದ ಪತ್ರದ ಕಡೆಗೆ ಹೊರಳಿತು. ಗಾಯಗೊಂಡ ಪ್ರೇಮಯುದ್ಧದ ನಿಸ್ಸೀಮ ಸೈನಿಕನು, ತನ್ನ ಸಂದೇಶವನ್ನು ತಡವರಿಸುತ್ತ ಓದತೊಡಗಿದನು. ವಿದ್ಯುದ್ದೀಪವೂ ತನ್ನ ಪ್ರಕಾಶವನ್ನು ಒಮ್ಮೆಲೆ ಹೊರಚಿಮ್ಮಿತು:

ಪುಣೆ
೧೦-೨-೪೪

ಪ್ರಿಯ ಪ್ರೇಮಾ,

ಭಾವನೆಗಳ ಪ್ರಪಂಚದಲ್ಲಿ ಸಿಲುಕಿದ ನನ್ನಿಂದ ಶಬ್ದಗಳೇ ಹೊರಕ್ಕೆ ಬರಲಾರವು. ಆದರೆ ಪ್ರೇಮವು ಉದ್ರೇಕಿಸುತ್ತಿದೆ. ಪ್ರೇಮ! ಅದೊಂದು ದಿವ್ಯ ಪ್ರಕಾಶ! ಕಾಂತಿಯುತ ಬೆಳಕು! ಪ್ರತಿಯೊಬ್ಬ ಸ್ತ್ರೀಪುರುಷನಲ್ಲಿ ಆದಿಯಿಂದ ಮುದಿವರೆಗೆ ಚಿನ್ನದಂತಹ ಚೈತನ್ಯವನ್ನು ಚಲಿಸುವ ಆದರ್ಶಶಕ್ತಿ! ಅದನ್ನು ಅಡಗಿಸಬಾರದು! ಅದು ಅಂಕುರಿಸಿದೊಡನೆಯೆ ತಡವಾಗದೆ ಮನದ ನೀರನ್ನು ಹನಿಸಿ ಅದನ್ನು ಪೋಷಿಸಬೇಕು. ಪ್ರೇಮವು ಬಲಗೊಂಡಿತೆಂದರೆ ಅದನ್ನು ಮುಕ್ತಕಂಠದಲ್ಲಿ ಸಾರಬೇಕು. ಪ್ರೇಮವನ್ನು ಅಡಗಿಸುವುದು ಅಪರಾಧ!

ಪ್ರೇಮಾ, ನೀನೊಂದು ಬೆಡಗಿನ ಬನ. ನಿನ್ನಷ್ಟು ಸುಂದರ ಕುಮಾರಿಯನ್ನು ಇದುವರೆಗೆ ಕಂಡಿಲ್ಲ. ನಿನ್ನ ಮನಸೆಳೆವ ಸೌಂದರ್ಯವನ್ನು ನೋಡಿ ವಿಶಾಲಾಕ್ಷಿ, ನನ್ನ ಜನ್ಮವು ಪುನೀತವಾದಂತಾಯಿತು. ದಿನ-ರಾತ್ರಿ ನನ್ನ ಕಣ್ಣುಗಳು ನಿನ್ನ ಹೃದಯಂಗಮ ಮೂರ್ತಿಯನ್ನು ನೋಡುತ್ತಲಿವೆ! ಹಗಲಿರುಳೂ ನನ್ನ ಹೃದಯಾಕಾಶದಲ್ಲಿ ಪ್ರೇಮಸೂರ್ಯನು ನಲಿಯುತ್ತಲಿದ್ದಾನೆ. ನನ ಪ್ರೇಮಾ, ಮನಬಿಚ್ಚಿ ಬರೆಯುತ್ತಲಿದ್ದೇನೆ. ಇನ್ನಾರಿಗೂ ನನ್ನಲ್ಲಿ ಸ್ಥಾನವಿಲ್ಲವಾಗಿದೆ. ನೀನೇ ನನ್ನ ಸರ್ವಸ್ವ! ನನ್ನ ಜಗತ್ತು! ನಾನು ಮನಸಾರೆ ನಿನ್ನನ್ನು ಪ್ರೀತಿಸುತ್ತೇನೆ. ನಿನ್ನ ಒಲವಿಗಾಗಿ ಹಂಬಲಿಸುತ್ತಲಿದ್ದೇನೆ. ಈ ಬಾಯಾರಿದ ಪ್ರೇಮಯಾತ್ರೆಯ ಪ್ರವಾಸಿಗೆ ಒಲವುನೀರನ್ನು ಕುಡಿಸು!

ಒಲವುರಾಣಿ, ನಿನ್ನನ್ನು ನನ್ನ ಕಾಲೇಜಿನಲ್ಲಿ ನೋಡಿ ಎರಡು ತಿಂಗಳುಗಳಾದುವು, ಪ್ರತಿದಿನವೂ ನಿನ್ನನ್ನು ಮಾತನಾಡಿಸಬೇಕೆಂದು ಸಂಕಲ್ಪ ಮಾಡುತ್ತೇನೆ; ಆದರೆ ನನ್ನ ದುರ್ದೈವ! ಏಕಾಂತದಲ್ಲಿ ನಿನ್ನ ಭೆಟ್ಟಿಯೇ ಆಗುವುದಿಲ್ಲ. ಅಂದಿನಿಂದ ನಾನು ನಿನ್ನಲ್ಲಿ, ನಿನ್ನ ಧ್ಯಾನದಲ್ಲಿ ನಿರತನಾಗಿ ಬಿಟ್ಟಿದ್ದೇನೆ. ಎತ್ತ ನೋಡಿದತ್ತ ನೀನೇ ನನಗೆ ಕಾಣುತ್ತಿರುವೆ. ಗೆಳತಿ, ಅಚಲಪ್ರೇಮವು ಪ್ರತಿರೂಪವಾಗಿ ಹೊರಬಿದ್ದಿದೆ. ನನ್ನನ್ನು ಪ್ರೇಮದೃಷ್ಟಿಯಿಂದ ನೋಡು; ನನ್ನ ಒಲವಿನೋಟವನ್ನು ಎಂದೋ ಚೆಲ್ಲಿದ್ದೇನೆ ನಿನ್ನತ್ತ. ನೀನು ಕೂಡ ಪ್ರೇಮಕಟಾಕ್ಷವನ್ನು ನನ್ನತ್ತ ತಿರುಗಿಸು; ಎಂದರೆ ಎರಡೂ ಕೂಡಿ ಪ್ರೀತಿಯ ಅಮರ ಸೇತುವೆಯಾಗುವುದು. ಪ್ರೇಮರಾಗವನ್ನು ಹಾಡುತ್ತ ಪ್ರೇಮಭಿಕ್ಷೆಯನ್ನ

ಬೇಡುತ್ತ ನಿನ್ನ ದಾರಿ ಕಾಯುತ್ತಿದ್ದೇನೆ. ಮೋಹಿನಿ, ಜೀವನದಲ್ಲಿ ಪ್ರೇಮ-ದಂತಹ ಶಕ್ತಿ ಇನ್ನೊಂದಿಲ್ಲ. ಪ್ರೇಮವೇ ಈ ಬಾಳಿನ ಸರ್ವಸ್ವ! ಪ್ರೇಮಾ, ನಿನ್ನ ದಾಸಾನುದಾಸನ ವಿನಂತಿಯನ್ನು ಮಾನ್ಯಮಾಡಿ, ಮರುಪತ್ರ ಬರೆ! ತಪ್ಪದೆ ಬರೆ!

"... ಇತಿ ನಿನ್ನ ಪ್ರೇಮಿ
ಸುಧೀರ"

ಅವಳು ಆ ಪತ್ರದ ಮೇಲೆ ಕೆಂಪು ಮಸಿಯಲ್ಲಿ ಒಂದೇ ಒಂದು ವಾಕ್ಯವನ್ನು ಬರೆದಿದ್ದಳು: "ಮರುಪತ್ರಕ್ಕಾಗಿ ಸ್ಟ್ಯಾಂಪುಗಳನ್ನು ಕಳುಹಿಸದ್ದು ಒಳ್ಳೆಯದಾಯಿತು. ಇಲ್ಲವಾದರೆ ನಿಮ್ಮ ಪತ್ರಕ್ಕೆ ಕಸಬರಿಗೆಯ ಏಟುಗಳ ಪ್ರಸಾದವು ಲಭಿಸುತ್ತಿತ್ತು!" ಕಣ್ಮುಚ್ಚಿ ಹಾಲು ಕುಡಿಯುವ ಬೆಕ್ಕು, ತನ್ನಂತೆಯೆ ಇತರರು ಕೂಡ ಕಣ್ಮುಚ್ಚಿಕೊಂಡಿರುವರೆಂದು ತಿಳಿದು ದುಃಖಕ್ಕೀಡಾಗುತ್ತದೆ. ಸುಧೀರನ ಅವಸ್ಥೆಯೂ ಹೀಗೆಯೇ ಆಯಿತು. ತನ್ನ ಸ್ವಪ್ನಸೃಷ್ಟಿಯ ಶೃಂಗಾರವನ್ನು ನೆನೆದು ಕಂಬನಿಗರೆಯುತ್ತಲಿದ್ದನು. "ಪ್ರೇಮವು ಜೀವನದ ಅತಿ ಮಹತ್ತ್ವದ ಸಮಸ್ಯೆ: ಆನಂದದೇಗುಲದ ಗರ್ಭಗುಡಿ. ಈ ವಿಷಯದಲ್ಲಿ ಎಷ್ಟೋ ಕರ್ತೃತ್ವಶಾಲಿಗಳೂ ಆತ್ಮಹತ್ಯೆ ಮಾಡಿಕೊಂಡಿದ್ದಾರೆ!" ಎಂದು ನಿಟ್ಟುಸಿರಿಟ್ಟನು ಪ್ರೇಮಾ ವಿಕಟನಗೆ ನಗುವಂತೆ ಭಾಸವಾಯಿತು; ಪೆಟ್ಟು ಇನ್ನಿಷ್ಟು ನೋವನ್ನುಂಟುಮಾಡಿತು.

ಯಾರನ್ನೂ ಲಕ್ಷಿಸದೆ ವೇಳೆಯು ಸಾಗಿತ್ತು. ಕಾರ್ಯವೇ ಈಶ್ವರನೆಂದು ನೆರೆನಂಬಿದ ಮಹತ್ತ್ವಾಕಾಂಕ್ಷಿಗಳು ವೇಳೆಯ ಓಟದತ್ತ ದೃಷ್ಟಿಯಿಟ್ಟು ಕಾರ್ಯತತ್ಪರರಾಗಿದ್ದರು. ಇರುಳಿನ ಬರುವಿಕೆಯನ್ನು ಸೂಚಿಸುವ ತಂಬೆಲರು ನಿಧಾನವಾಗಿ ಬೀಸುತ್ತ ಸುಧೀರನ ಕೋಣೆಯನ್ನು—ತೆರೆದಿಟ್ಟ ಕಿಟಕಿ ಬಾಗಿಲುಗಳಿಂದ—ಪ್ರವೇಶಿಸಿ, ತನ್ನ ತಂಪಿನ ಆನಂದವನ್ನು ಪಡೆಯಲಾರದೆ ಕಸಿವಿಸಿಪಡುತ್ತ ಬಿದ್ದಿರುವ ಸುಧೀರನನ್ನು ಮೂದಲಿಸುತ್ತಿತ್ತು. ಗಂಟೆಗಳ ಕಾಲ ಹೀಗೆಯೇ ಕಳೆದು ಹೋಯಿತು. ಒಂಬತ್ತರೆ ಗಂಟೆ ರಾತ್ರಿಯಾಯಿತು. ಸಂತಪ್ತ ಸುಧೀರನಿಗೆ ನಿದ್ರಾದೇವಿಯು ತನ್ನ ತೊಡೆಗಳ ಮೇಲೆ ಆಶ್ರಯವನ್ನು ಕೊಟ್ಟಳು

× × × ×

"ಸುಧೀರ, ಸುಧೀರ!" ಯಾರೋ ಕರೆದಂತಾಯಿತು. ಸುಧೀರನು ಹೊರಗೆ ಹೋಗಿ ನೋಡಿದನು, ಯಾರೂ ಇಲ್ಲ. ಒಳಗೆ ಬಂದನು, ಹಾಸಿಗೆಯ ಮೇಲೆ ಹೊರಳಾಡತೊಡಗಿದನು. ಖೊಳ್ಳೆಂದು ಯಾರೋ ನಕ್ಕಂತಾಯಿತು. ಎದ್ದು ನೋಡುತ್ತಾನೆ, ಸುಂದರಾಂಗಿ! ಅವಳೇ ಪ್ರೇಮಾ! ಜರತಾರಿಯ ಸೀರೆ ನಕ್ಷತ್ರಗಳಿಂದ ಭೂಷಿತವಾದ ಗಗನವನ್ನೇ ಉಟ್ಟಂತೆ ತೋರುತ್ತಲಿತ್ತು! ಎರಡು ವೀಣೆಗಳು! ಅವಳ ಸುಂದರ ಕಂಕಣಗಳು ಮಳೆಬಿಲ್ಲುಗಳಂತೆ ಶೋಭಿಸುತ್ತಿದ್ದುವು. ಅವಳ ವೀಣೆಗಳೊ, ಅವು ಸ್ವರ್ಗವನ್ನೇರಲಿಕ್ಕಿದ್ದ ಹಗ್ಗಗಳು! ಅಚ್ಚುಕಟ್ಟಾದ ಬೈತಲೆ! ಅದು ಸ್ವರ್ಗದ ದಾರಿ....ಎವೆಯಿಕ್ಕದೆ ಅವಳನ್ನು ನೋಡಿದನು. ಕಾಲುಗಳು ಎದ್ದುನಿಂತುವು. ಕೈಗಳು ಮುಂದೆ ಧಾವಿಸಿದುವು ಅವಳು ಮಾಯವಾದಳು. ಹತಾಶನಾಗಿ ಪುನಃ ಒರಗಿದನು ಇನ್ನೊಮ್ಮೆ ಖೊಳ್ಳೆಂದು ನಗುತ್ತ ವ್ಯಕ್ತಿಯು ಮುಂದೆ ಬಂದು ನಿಂತಿತು. ಸುಧೀರನು ಧೈರ್ಯದಿಂದೆದ್ದು ಕೇಳಿದನು:

"ಪ್ರೇಮಾ, ಈ ರೀತಿ ಪ್ರೇಮಿಯನ್ನು ಮೂದಲಿಸುವುದೆ?"

"ಪ್ರೇಮಿ ಯಾರು?" ಅವಳು ಗಂಭೀರಳಾಗಿ ಕೇಳಿದಳು.

"ನಾನು ಪ್ರೇಮಾ!"

"ಯಾರನ್ನು ಪ್ರೀತಿಸುತ್ತಿರುವೆ?"

"ನಿನ್ನನ್ನು!"

"ಯಾಕೆ?" ಗುಡುಗಿನಂತೆ ಗಂಭೀರಧ್ವನಿಯಲ್ಲಿ ಅವಳು ಕೇಳಿದಳು.

"ನೀನು ಸುಂದರಿ—ಯುವತಿ; ನಿನ್ನನ್ನು ಯಾರು ತಾನೇ ಪ್ರೀತಿಸರು? ನಾನು ನಿನ್ನ ಬಳಿ ಭಿಕ್ಷುಕ!" ನಮ್ರನಾಗಿ ಉತ್ತರವಿತ್ತನು ಸುಧೀರ. ಅವಳ ಮೊಗವು ಕೆಂಪೇರಿತು. ಆವೇಗದ ಭರದಲ್ಲಿ ಗುಡುಗಲಾರಂಭಿಸಿದಳು:

"ನಿಜ, ನೀನು ಭಿಕ್ಷುಕ! ಬೇಡಿದ್ದೆಲ್ಲ ಸಿಕ್ಕರೆ ಜಗತ್ತಿನಲ್ಲಿ ದುಃಖವೆಂಬುದು ಇರುತ್ತಿರಲಿಲ್ಲ. ಹುಚ್ಚಾ! ಬಾಳಿನ ಆಘಾತಗಳನ್ನು ನೀನು ಪ್ರಥಮತಃ ಎದುರಿಸುತ್ತಿರುವಂತೆ ತೋರುತ್ತದೆ. ಬಂಗಾಲದಲ್ಲಿ ಐವತ್ತು ಲಕ್ಷ ಜನರು ಬೇಡಿ ಬೇಡಿ ಸತ್ತರು. ನಿನ್ನ ಪಾಡೂ ಹೀಗಾಗದಂತೆ ನೋಡಿಕೊಳ್ಳು!"

"ಪ್ರೇಮಾ, ಪ್ರೇಮವೇ ಜೀವನ. ಅದೊಂದು ದಿವ್ಯ ಪ್ರಕಾಶ! ಅವಲ್ಲದೆ ಪ್ರೇಮಿಸಿದವನನ್ನು ಪ್ರೀತಿಸದಿರುವುದು ಮಹಾಪಾಪ!" ಸಂದೇಶ ಸಾರುವವನಂತೆ ಗಟ್ಟಿಯಾಗಿ ನುಡಿದ ಸುಧೀರ.

"ನಿಗ್ರೋ ಹುಡುಗಿಯೊಬ್ಬಳು ನಿನ್ನಲ್ಲಿ ಅನುರಕ್ತಳಾದರೆ ನೀನು ಅವಳನ್ನು ಪ್ರೇಮಿಸಲು ಸಿದ್ಧನಿರುವೆಯಾ? ಹುಚ್ಚಾ! ಪ್ರೇಮ ಪ್ರೇಮ ಎಂದು ಕೂಗಿ ಪ್ರೇಮದ ಉಚ್ಚಸ್ಥಾನವನ್ನು ಕೆಳಕ್ಕೆ ಇಳಿಸಬೇಡ. ಉನ್ಮಾದವು ಪ್ರೇಮವಲ್ಲ! ಪ್ರೇಮದ ಹೆಸರಿನಲ್ಲಿ ನೂರಾರು ಜನ ಉನ್ಮತ್ತರು ದುರ್ಬಲ ಮನಸ್ಸಿನ ಯುವತಿಯರನ್ನು ಮೋಸಗೊಳಿಸುವುದು ಸಮಾಜದ ಅನುಭವವಾಗಿದೆ. ದುರ್ದೈವದಿಂದ ಅದು ಇಂದಿನ ವ್ಯವಹಾರವಾಗಿ ಬಿಟ್ಟಿದೆ. ಪ್ರೇಮವೆಂದರೆ ಸುಂದರ ಕುಮಾರಿಯರನ್ನು ಕಂಡು ಹುಚ್ಚರಾಗುವುದಲ್ಲ. ಇಂತಹ ಕಲುಷಿತ ಪ್ರೇಮದಿಂದ ಬಾಳಿನ ಪ್ರಗತಿಪಥದಲ್ಲಿ ಮುಳ್ಳುಗಳೇಳುವುವು. ಬಂಧುಪ್ರೇಮ, ಪತಿಪ್ರೇಮ, ಸತಿಪ್ರೇಮ ಇವೇ ಮೊದಲಾದ ಉಚ್ಚ, ನಿಃಸ್ವಾರ್ಥವೃತ್ತಿಯ ಪ್ರೇಮಗಳ ಮೇಲೆ ಜಗತ್ತು ನಿಂತಿದೆ ನಿನ್ನಿಂದ ಪ್ರೇಮವೆಂಬ ಹೆಸರನ್ನು ಪಡೆದ ಉನ್ಮಾದದ ಮೇಲಲ್ಲ. ಬಂಗಾರದಂತಹ ಹುಡುಗಿಯನ್ನು ನೋಡಿ ಯಾವ ಪಾಷಂಡನೂ ಹೇಳಬಹುದು: 'ನಾನು ನಿನ್ನನ್ನು ಪ್ರೀತಿಸುತ್ತೇನೆ' ಎಂದು. ಆದರೆ ಇದು ದುರಾಶೆ; ಮೋಹ; ಉನ್ಮಾದ!

"ದೇವಿ, ನಾನಂತಹ ಸ್ವಾರ್ಥಸಾಧುವಲ್ಲ. ನನ್ನ ಪ್ರೇಮವು ಉಜ್ವಲವಾಗಿದೆ ನೀನೇ ನನ್ನ ಜಗತ್ತು! ನಾನು ಇನ್ನೇನನ್ನೂ ಕಾಣೆನು! ಪ್ರೇಮಾ" ಬಹು ದೈನ್ಯದಿಂದ ಪ್ರಾರ್ಥಿಸಿದ ಸುಧೀರ. "ಹುಚ್ಚು ಪ್ರೇಮಿಯೇ, ಇದೇ ನಿನ್ನ ಘನತೆ! ಪ್ರೇಮವು ಒಂದು ಬೆಳಕು; ಆ ಪ್ರೇಮದ ಬೆಳಕಿನಲ್ಲಿ ಜಗತ್ತನ್ನು ವಿಕಸಿತ ಮನಸ್ಸಿನಿಂದ ನೋಡಬೇಕು! ನಿನ್ನ ವಿಷಯದಲ್ಲಿ ಅದು ಕತ್ತಲೆ. ಈ ಕತ್ತಲೆಯಲ್ಲಿ ಮುಳುಗಿ ಮಾನವನ ಆದ್ಯಕರ್ತವ್ಯವನ್ನು ಮರೆಯುತ್ತಲಿರುವೆ! ಇಂದು ಜಗತ್ತಿನ ಎಷ್ಟೋ ಜನರು ಅನ್ನ-ನೀರುಗಳಿಲ್ಲದೆ ಸಾಯುತ್ತಿ-

ದ್ದಾರೆ; ದಾಸ್ಯದಲ್ಲಿ ನರಳುತ್ತಿದ್ದಾರೆ. ಇಂತಹ ಜಗತ್ತಿನ ಕಡೆಗೆ ನೋಡಿ ತನ್ನಲ್ಲಿ ಕರ್ತವ್ಯ ಜಾಗ್ರತಿ ಮಾಡಿಕೊಂಡು, ಜಾಗ್ರತಿಕ ಪ್ರೇಮವನ್ನು ಹುಟ್ಟಿಸಿಕೊಳ್ಳಬೇಕು. ಇಂತಹ ಆದರ್ಶಪ್ರೇಮಿಯೇ ಒಬ್ಬ ಆದರ್ಶ ಕುಮಾರಿಯ ಪ್ರೇಮಕ್ಕೆ ಪಾತ್ರನು. ಇದಕ್ಕೆ ವಿರುದ್ಧವಾಗಿ, ಒಬ್ಬ ಸುಂದರ ಸ್ತ್ರೀಯ ಶರೀರಕ್ಕೆ ಮರುಳಾಗಿ ಜಗತ್ತನ್ನು ಮರೆತುಬಿಡುವುದು ಪ್ರೇಮವಲ್ಲ; **ಅದೊಂದು ಮುಳಿಗೆರೆಯುದ ಮೋಹ!** ”

ತನ್ನ ವೀರವಾಣಿಯನ್ನು ಸಾರಿ ಆ ದಿವ್ಯವ್ಯಕ್ತಿಯು ಮೆಲ್ಲಮೆಲ್ಲಗೆ ಹಿಂದೆ ಸರಿಯಲಾರಂಭಿಸಿತು. ಸುಧೀರನ ಸೋಜಿಗವು ಪೂರ್ಣವಾಯಿತು! ಕಾಲ ಕೆಳಗಿನ ಭೂಮಿಯೇ ಕುಸಿದುಬಿದ್ದಂತಾಯಿತು. ಗಡಗಡನೆ ನಡುಗಹತ್ತಿದನು. ತುಟಿಗಳು ಒಂದಕ್ಕೊಂದು ಕೂಡಲಾರದಾದುವು. ಅವಳು ಹಿಂದೆ ಸರಿಯುತ್ತ ಬಾಗಿಲಲ್ಲಿ ಬಂದು ನಿಂತಳು—ಅವಳು ಅಸ್ಪಷ್ಟಳಾದಳು—ಅವಳ ರೂಪವೂ ಬದಲಾಯಿತು. ಮುಖಮುದ್ರೆಯು ಸೌಜನ್ಯ-ಕಾರುಣ್ಯಗಳನ್ನು ಸೂಚಿಸುತ್ತಿತ್ತು. ಅವಳು ಶಾಂತರೀತಿಯಲ್ಲಿ ಮಾತನಾಡಲಾರಂಭಿಸಿದಳು :

“ಸುಧೀರ, ನಾನು ನಿನ್ನ ಆ ಪ್ರೇಮಾ ಅಲ್ಲ. ನನ್ನ ಹೆಸರು ಬೆಳಕುಬಾಲೆ! ಅಜ್ಞಾನದಲ್ಲಿದ್ದವರನ್ನು ಎಚ್ಚರಿಸಿ, ಅವರು ಕಾರ್ಯಪ್ರವೃತ್ತರಾಗುವಂತೆ ಮಾಡುವುದು ನನ್ನ ಕೆಲಸ! ನನ್ನ ಧ್ಯೇಯ! ಅದನ್ನೇ ಪ್ರೀತಿಸುತ್ತಿದ್ದೇನೆ! ನಾನದಕೆ ದಾಸಿ! ‘ಪ್ರೇಮ-ಪ್ರೇಮ’ ಎಂದು ಜಪಿಸುತ್ತ ತಾನು ಕೈಕೊಂಡ ಅಥವಾ ಕೈಕೊಳ್ಳಬೇಕಾದ ಕೆಲಸಗಳನ್ನು ಬದಿಗಿಡುವುದು, ಪ್ರಗತಿಪಥದಲ್ಲಿ ನಡೆದ ತನ್ನ ಪ್ರಗತಿಯನ್ನು ನಿಲ್ಲಿಸಿ ಪ್ರೇಮವೇ ಜೀವನವೆಂದು ಉನ್ಮಾದದಲ್ಲಿ ತೊಳಲಾಡುವುದು—ಇದರಲ್ಲಿ ಮಾನವನ ಹಿರಿಮೆ ಇಲ್ಲ. ಬೇಡಿದ ಮಾತ್ರಕ್ಕೆ ಏನೂ ಸಿಕ್ಕಲಾರದು. ಜಗತ್ತು ಹಾಗಿಲ್ಲ. ಜೀವನವು ಒಂದು ಯುದ್ಧ; ಒಂದು ಮಹಾಸಾಗರ! ಸಾವು-ನೋವುಗಳು ಸಂಭವಿಸದ ಯುದ್ಧವಿಲ್ಲ; ಬಿರುಗಾಳಿಗಳೇಳದ ಸಾಗರವಿಲ್ಲ. ಕರ್ತೃತ್ವವೇ ಜೀವನ; ಚೈತನ್ಯಯುಕ್ತವಾದುದೇ ಬಾಳು! ಬಾಳು ಒಂದು ಅಖಂಡ ನಲಿದಾಟವಲ್ಲ. ಅದೊಂದು ಹೋರಾಟ. ಇದು ಜೀವನದ ಸಂದೇಶ. ಸುಗಂಧ ಪಸರಿಸಬಲ್ಲ ಹೂಗಳಿದ್ದಲ್ಲಿ ರಸಿಕರು ತಾವಾಗಿಯೇ ಬರುತ್ತಾರೆ. ನಿನ್ನಲ್ಲಿ ನಿಜವಾದ ಯೋಗ್ಯತೆ ಇದ್ದರೆ, ನೀನು ಪ್ರೇಮಿಸಿದ ಪ್ರೇಮಾ ನಿನ್ನ ಪ್ರೇಮವನ್ನು ಸ್ವೀಕರಿಸಿ, ತನ್ನ ಒಲವನ್ನೂ ಸಾರುವಳು. ಈಗಲೇ ನಿನ್ನ ಕರ್ತವ್ಯವನ್ನು ಸಾಂಗವಾಗಿ ನೆರವೇರಿಸಲು ಆರಂಭಮಾಡು! ಸುಧೀರ, ನಿನ್ನ ಪ್ರೇಮವು ಹುಚ್ಚುತನವಾಗಕೂಡದು; ಅದು ಉಜ್ವಲ ಮಹತ್ವಾಕಾಂಕ್ಷೆಯಾಗಲಿ! ಪ್ರೇಮದ ಹುಚ್ಚನಾಗಬೇಡ; ಪ್ರೇಮಸಾಧಕನಾಗು! ಉದ್ಯೋಗವೇ ಈಶ್ವರ!”

ತನ್ನ ಹೃದಯದಲ್ಲಿ ಯಾವುದೋ ಒಂದು ಶಕ್ತಿಯು ಒಳಸೇರಿದಂತೆ ಸುಧೀರನಿಗೆ ಭಾಸವಾಗತೊಡಗಿತು. ಸ್ವಭಾವತಃ ಮಾನವನ ಮನಸ್ಸು ನಿರ್ವಿಕಾರವಾಗಿರುತ್ತದೆ, ನಿರ್ಮಲವಾಗಿರುತ್ತದೆ. ಆದರೆ ಜೀವನದಲ್ಲಿ ಅಬಾಧಿತವಾಗಿ ಸಾಗುವ ಕೆಲವು ಘಟನೆ ಅದನ್ನು ಕೆಡಿಸುತ್ತವೆ. ಸುಧೀರನು ತನ್ನ ಸ್ಥೈರ್ಯವನ್ನು ತಿರುಗಿ ಪಡೆಯುತ್ತಲಿದ್ದನು. ಮೈಗೆಲ್ಲ ಬೆವರೊಡೆಯಲಾರಂಭಿಸಿತು. ಅವನು ತನ್ನ ಕಣ್ಣುಗಳನ್ನು ಮುಚ್ಚಿದನು. “ಸುಧೀರ, ಇನ್ನು ನನ್ನ ಕೆಲಸ ಮುಗಿಯಿತು, ನೀನು ಕಣ್ಣು ತೆರೆ!” ಎಂದಳು ಬೆಳಕುಬಾಲೆ.

ಸುಧೀರನು ಕಣ್ಣು ತೆರೆದು ನೋಡುತ್ತಾನೆ. ತಾನು ಹಾಸಿಗೆಯ ಮೇಲೆ ಮಲಗಿದ್ದಾನೆ. ಇದೇ ಈಗ ಎಚ್ಚರವಾಗಿದೆ. ತೆರೆದಬಾಗಿಲಿನಿಂದ ಸೂರ್ಯಕಿರಣಗಳು ಒಳಕ್ಕೆ ಬರಹತ್ತಿವೆ. ಪ್ರೇಮಾನೂ ಇಲ್ಲ ಬೆಳಕುಬಾಲೆಯೂ ಇಲ್ಲ. ಆದರೆ ಬೆಳಕುಬಾಲೆಯ ಸಂದೇಶದ ನಿನಾದ ಅವನ ಕಿವಿಗಳಲ್ಲಿ ಪ್ರತಿಧ್ವನಿಸುತ್ತಲಿದೆ. “ಬೆಳಕುಬಾಲೆ” ಎಂದುಸುರುತ್ತ ಸುಧೀರನು ಹಾಸಿಗೆಯಿಂದೆದ್ದು, ಪ್ರಾತರ್ವಿಧಿಗಳನ್ನು ಮುಗಿಸಿ, ತನ್ನ ಓದಿಗಾರಂಭಮಾಡಿದನು. ಸುಪ್ರಭಾತ! ನಿನ್ನೆಯ ದಿನ ಸಂಧ್ಯಾಕಾಲದ ಮೋಡಗಳ ಬದಲಾಗಿ ಇಂದು ಪ್ರಭಾಕರನ ಪ್ರಕಾಶ! ಎಲ್ಲೆಲ್ಲಿಯೂ ಬೆಳಕೇ ಬೆಳಕು! ಕೋಣೆಯ ಹೊರಗೆ ಕೋಣೆಯಲ್ಲಿ, ಸುಧೀರನಲ್ಲಿ. ಬೆಳಕುಬಾಲೆಯ ಸಂದೇಶವು ಅವನಲ್ಲಿ ನವಜ್ಞಾನ-ನವಚೈತನ್ಯದ ಹೊನಲನ್ನು ಹರಿಸಿಬಿಟ್ಟಿದೆ. ಆ ಹೊನಲು ನಿಧಾನದಿಂದ ಹರಿಯುತ್ತಲಿತ್ತು; ಜ್ಞಾನಮಂದಿರದ ಪ್ರವಾಸಿ ಸುಧೀರನು ನಿಧಾನವಾಗಿ ಸಾಗಿದ್ದನು.

ಒಡನಾಡಿ

‘ಆನಂದಕಂದ’ರ ಹೊಸ ಕವನಸಂಗ್ರಹ

ಇದೀಗ ಅಚ್ಚಾಗಿ ಬೆಳಕಿಗೆ ಬಂದಿದೆ!

“ಮುಂಬರಯದ ಮುಗ್ಧಪ್ರಣಯದ ಆತುರ-ಕಾತರಗಳನ್ನೂ, ಹರೆಯದ ಕಾಮುಕಪ್ರಣಯದ ರತಿ-ಹಾಸವಿಲಾಸಗಳನ್ನೂ, ತುಂಬುಹರೆಯದ ಅನುಭವಪ್ರಣಯದ ಸುಖ-ದುಃಖಗಳ ಉಯ್ಯಾಲೆಯಾಟವನ್ನೂ, ಇಳಿವರಯದ ಪರಿಪಕ್ವಪ್ರಣಯದ ತತ್ವಜ್ಞತೆಯನ್ನೂ ಇಲ್ಲಿಯ ಕೃತಿಗಳಲ್ಲಿ ನೋಡಬಹುದು!”

ಹೊಸಕವನಗಳನ್ನು ವಿವಿಧರಾಗಗಳಲ್ಲಿ ಹಾಡಿಕೊಳ್ಳಬೇಕೆಂದು ಬಯಸುವವರು, ಅವಶ್ಯವಾಗಿ ಈ ಕವನಸಂಗ್ರಹದ ಸಹಕಾರ ಪಡೆಯಬೇಕು.

‘ಬಾಳಿದು ಕನಸಲ್ಲ’ ‘ಬಂತು ಬಂತು ಮಾಗಿ!’ ‘ಜಯ ಜಯ ಫಾಲ್ಗುಣ!’ ‘ಹಚ್ಚಿದ ದೀಪಾ ನಲ್ಲೆ!’ ಮೊದಲಾದ ಜನಪ್ರಿಯ ಭಾವಗೀತಗಳು ಇದರಲ್ಲಿ ಸಂಗ್ರಹಗೊಂಡಿವೆ.

ಅಂದವಾದ ಮುದ್ರಣ ಸುಂದರವಾದ ಕಟ್ಟು

ಬೆಲೆ ಒಂದು ರೂಪಾಯಿ

ಬೇಕಾದವರು ಜಯಂತಿ ಕಾರ್ಯಾಲಯಕ್ಕೆ ಬರೆಯಿರಿ!

ಸಾಹಿತ್ಯವಿಹಾರ

‘ ವಿಹಾರಿ ’

ಲೇಖಕರು, ಪ್ರಕಾಶಕರು, ವಾಚಕರು

ಜಯಂತಿಯ ಫೆಬ್ರುವರಿ ಸಂಚಿಕೆಯಲ್ಲಿ ಲೇಖಕರು, ಅದರಂತೆ ಕನ್ನಡ ಪ್ರಕಾಶಕರು, ಲಕ್ಷ್ಯಪೂರ್ವಕವಾಗಿ ಗಮನಿಸಬೇಕಾದ ಪ್ರಕಟನೆಯೊಂದು ಬಂದಿದೆ. ‘ ಆ ಪತ್ರಿಕೆಯಲ್ಲಿ ಪ್ರಕಟಿಸಲು ಯೋಗ್ಯವೆಂದು ನಿರ್ಣಯವಾದ ಕತೆಗಳಿಗೆ ಯೋಗ್ಯವಾದ ಪ್ರತಿಫಲವನ್ನು ಆಯಾ ಲೇಖಕರಿಗೆ ಕತೆ ಪ್ರಕಟವಾದ ಒಂದು ವಾರದಲ್ಲಿ ಸಲ್ಲಿಸಲಾಗುವುದು’ ಎಂಬುದೇ ಅದರ ಆಶಯ ಈ ಜಾಹೀರಾತಿನ ಹಿಂದೆ ಲೇಖಕ-ಪ್ರಕಾಶಕರ ನಡುವೆ ನಿಲ್ಲಬಹುದಾದ ಕೆಲವು ತೊಡಕಿನ ಸಮಸ್ಯೆಗಳು ಇರದೆ ಇದ್ದರೆ, ಆ ಮಾತನ್ನು ಇಲ್ಲಿ ಮತ್ತೆ ಹೇಳುವ ಆವಶ್ಯಕತೆ ಇರುತ್ತಿರಲಿಲ್ಲ ಜಯಂತಿಯ ಸಂಚಾಲಕರು ಲೇಖಕರಿಗೆ ಪ್ರತಿಫಲವನ್ನು ಕೊಡಬೇಕೆಂಬ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದುದಕ್ಕಿಂತ ಕನ್ನಡದಲ್ಲಿಯ ಪತ್ರಿಕಾ ಸಂಚಾಲಕರು, ಅದರಂತೆ ಪ್ರಕಾಶಕರು, ತಮ್ಮ ತಮ್ಮ ಲೇಖಕರಿಗೆ ಯೋಗ್ಯವಾದ ಪ್ರತಿಫಲವನ್ನು ಕೊಡುವುದು ಅಗತ್ಯವಾಗಿದೆ ಎಂಬ ಮಾತು ಹೆಚ್ಚು ಮಹತ್ತ್ವದ್ದಾಗಿದೆ. ಈ ಅಗತ್ಯವನ್ನು ಜಯಂತಿಯಂತೆ ಉಳಿದವರೂ ಕಂಡುಕೊಂಡು, ಮಾತಿನಲ್ಲಿಯಲ್ಲದೆ ಕೃತಿಯಲ್ಲಿ ಒಪ್ಪುವುದು ಲೇಖಕ-ಪ್ರಕಾಶಕರ ನಡುವೆ ಇರಬೇಕಾದ ಸಂಬಂಧದ ದೃಷ್ಟಿಯಿಂದ ಮಹತ್ತ್ವದ ವಿಷಯವಾಗಿದೆ ಎಂದೇ ಈ ವಿಚಾರವನ್ನು ಒಂದಿಷ್ಟು ವಿಸರವಾಗಿ ವಿಶದಪಡಿಸಬೇಕಾಗಿದೆ.

ಪ್ರತಿಯೊಂದು ಪ್ರಕಟನೆಗೂ ಮೂರು ಜನರ ಸಹಕಾರ ಅವಶ್ಯ. ಬರೆಯುವ ಲೇಖಕ, ಬೆಳಕಿಗೆ ತರುವ ಪ್ರಕಾಶಕ, ದುಡ್ಡು ಕೊಟ್ಟುಕೊಳ್ಳುವ ವಾಚಕ. ಇಂದು ನಮ್ಮಲ್ಲಿ ಬರೆಹಗಾರರಿಗೆ ಸಲ್ಲಬೇಕಾಗಿದ್ದ ಪ್ರತಿಫಲದ ವಿಚಾರ ಒಂದು ಸಮಸ್ಯೆಯಾಗಿ ನಿಂತಿರುವುದಕ್ಕೆ ಈ ಮೂವರೂ ಒಂದೊಂದು ರೀತಿಯಲ್ಲಿ ಕಾರಣರಾಗಿದ್ದಾರೆ. ಕನ್ನಡದಲ್ಲಿ ಪುಸ್ತಕಗಳನ್ನು ಕೊಂಡು ಓದುವವರ ಸಂಖ್ಯೆ ಕಡಿಮೆಯೇನೋ ಸರಿ; ಆದರೂ ಮುದ್ರಿಸಿದ ಪುಸ್ತಕ ಮಾರಾಟವಾಗದೆ ಇಲ್ಲದ ಇಂದಿನ ಕಾಲದಲ್ಲಿ, ಓದುಗ ತನ್ನ ಪಾಲಿನ ಹೊಣೆಗಾರಿಕೆಯನ್ನು ಬೇಕಾದ ಪ್ರಮಾಣದಲ್ಲಿಯಲ್ಲದಿದ್ದರೂ—ಪ್ರಕಾಶಕರಿಗೆ ಆಶೆ ಕೊಡುವ ಪ್ರಮಾಣದಲ್ಲಿಯಾದರೂ—ನಿರ್ವಹಿಸುತ್ತಿದ್ದಾನೆಂಬುದು, ಇತ್ತೀಚೆಗೆ ಪ್ರಕಾಶಕರೇ ಒಪ್ಪುತ್ತಿದ್ದ ಮಾತು. ಲೇಖಕ ಒಂದು ಕೃತಿಯನ್ನು ಯಾವುದೇ ದೃಷ್ಟಿಯಿಂದ ನಿರ್ಮಿಸಿರಬಹುದು ಪ್ರತಿಫಲಕ್ಕಾಗಿಯೇ ಬರೆಯಬಹುದೆಂಬುದು ಇಂದಿನ ಪರಿಸ್ಥಿತಿಯಲ್ಲಂತೂ ಸಾಧ್ಯವೇ ಇಲ್ಲ. ಅದು ಹೇಗಿದ್ದರೂ, ಲೇಖಕ ಕೂಡ ತನ್ನ ವ್ಯವಹಾರದಲ್ಲಿ ಒಂದು ಮಹತ್ತ್ವದ್ದಾದ ಅಂಗ ಎಂಬ ಮಾತನ್ನು ಪ್ರಕಾಶಕ ತನ್ನ ವ್ಯಾಪಾರ ದೃಷ್ಟಿಯಲ್ಲಿ ಮರೆತುಬಿಡುವುದು ಸಾಧ್ಯ. ಲೇಖಕನಿಗೆ ತನ್ನ ಕೃತಿ ನಾಲ್ಕು ಜನರ ಕೈಸೇರಬೇಕೆಂಬ ಆಶೆ ಇರುವುದು ಸ್ವಾಭಾವಿಕ. ಇದಿರದಿದ್ದರೆ ಆತ ತನ್ನ ಕೃತಿಯನ್ನು ಪ್ರಕಟಿಸುವ ವಿಚಾರವನ್ನೇ ಮಾಡುತ್ತಿರಲಿಲ್ಲ. ಆದರೆ ಈ ಕೆಲಸವನ್ನು ತಾನು ಮಾಡುತ್ತಿರುವ ಮಾತ್ರಕ್ಕೆ ತಾನು ಲೇಖಕನ ಮೇಲೊಂದು ಉಪಕಾರ ಮಾಡುತ್ತಿದ್ದೇನೆಂದು ಮಾತ್ರ ಪ್ರಕಾಶಕ ತಿಳಿಯಕೂಡದು. ಪ್ರಕಾಶಕನಿಗೂ ಅದರಲ್ಲಿ ಒಂದು ಸ್ವಾರ್ಥವಿರದಿದ್ದರೆ ಈ ಉಪಕಾರದ ಉಸಾಬರಿಯನ್ನೇ ಆತ ಮಾಡುತ್ತಿರಲಿಲ್ಲ. ಲೇಖಕನಿಗೆ ಪ್ರಕಾಶಕನೆಷ್ಟರಮಟ್ಟಿಗೆ ಬೇಕೋ ಅಷ್ಟರ ಮಟ್ಟಿಗೆ ಪ್ರಕಾಶಕನಿಗೆ ಲೇಖಕನೂ ಅಗತ್ಯ. ಇದುವರೆಗೆ ನಮ್ಮಲ್ಲಿ ಪ್ರಕಾಶಕರು ಕಡಿಮೆಯಾಗಿದ್ದರಲ್ಲದೆ, ಪ್ರಕಟನೆಗೆ ಅವಕಾಶವೂ ಕಡಿಮೆಯಾಗಿತ್ತು. ಲೇಖಕನಿಗೆ ತನ್ನ ಕೃತಿ ಪ್ರಕಟವಾಗುವುದೇ ಒಂದು ಕಠಿನವಾದ ಪ್ರಶ್ನೆಯಾಗಿದ್ದಾಗ, ಆತ ಸಹಜವಾಗಿಯೇ ಪ್ರತಿಫಲದ ವಿಚಾರವನ್ನೆತ್ತುತ್ತಿರಲಿಲ್ಲ. ಪ್ರಕಟನೆಯೇ ಒಂದು ಪ್ರತಿಫಲವೆಂದು ಬಗೆಯುತ್ತಿದ್ದ. ಆದರೆ ಇಂದು ಪತ್ರಿಕೆ-ಪುಸ್ತಗಳ ಬೇಡಿಕೆ ಪೂರಯಿಸಲಾಗದಷ್ಟು ಬೆಳೆಯುತ್ತಿದ್ದಾಗಲೂ, ಬರೆಹಗಾರನನ್ನು ಪ್ರಕಾಶಕ ಮರೆತುಬಿಡುವುದು ಯೋಗ್ಯವಲ್ಲವೆಂದೇ ಹೇಳಬೇಕು. ಒಂದು ಪುಸ್ತಕದ ಹಸ್ತಪ್ರತಿ ಬರೆಹಗಾರನ ಕೈಬಿಟ್ಟಾಗಿನಿಂದ ಪುಸ್ತಕರೂಪದಲ್ಲಿ ಓದುಗನ ಕೈಸೇರುವ ವರೆಗೆ ನಡುವೆ ಸಂಬಂಧ ಬರಬಹುದಾದ ಪ್ರತಿಯೊಬ್ಬನೂ ಪ್ರತಿಫಲವಿಲ್ಲದೆ ಕೆಲಸ ಮಾಡದಿರುವಾಗ, ಪ್ರಕಟನೆಯ ಇಡೀ ಕಾರ್ಯಮಾಲಿಕೆಯನ್ನೇ ಮೊದಲು ಮಾಡಿದ ಲೇಖಕ ಮಾತ್ರ ಪ್ರತಿಫಲವಿಲ್ಲದೆ ತನ್ನ ಕೆಲಸ ಮಾಡಬೇಕೆಂಬುದು ತೀರ ಅನ್ಯಾಯ. ದುಡ್ಡಿಲ್ಲದೆ ಮುದ್ರಣಾಲಯದವರು ಅಚ್ಚು ಮಾಡುವುದಿಲ್ಲ. ಅಚ್ಚಿನ ವೆಚ್ಚವನ್ನು ಕೊಟ್ಟು ತನಗೆ ಏನಾದರೂ ಉಳಿತಾಯವಾಗುತ್ತಿರದಿದ್ದರೆ ಪ್ರಕಾಶಕ ಅಚ್ಚುಹಾಕಿಸುವ ತೊಂದರೆಯನ್ನು ತೆಗೆದುಕೊಳ್ಳುತ್ತಿರಲಿಲ್ಲ. ಪುಸ್ತಕವನ್ನು ಮಾರಾಟಮಾಡುವವರೂ ತಮಗೆ ಬೇಕಾದ ದಲಾಲಿ ಸಿಗದಿದ್ದರೆ ಮಾರಾಟದ ಕೆಲಸವನ್ನು ಖಂಡಿತ ಕೈಕೊಳ್ಳುತ್ತಿರಲಿಲ್ಲ. ಹೀಗೆ ಮೊದಲಿನಿಂದ ಕೊನೆಯ ವರೆಗೆ ಪ್ರತಿಫಲಾಪೇಕ್ಷೆ ಇಲ್ಲದೆ ಯಾರೂ ದುಡಿಯುತ್ತಿರದಾಗ ಲೇಖಕ ಮಾತ್ರ ಯಾಕೆ ದುಡಿದು ತನ್ನ ವೇಳೆ ಶ್ರಮ ವೆಚ್ಚಮಾಡಬೇಕು?

ಲೇಖಕನ ದೃಷ್ಟಿಯಿಂದ ಕೇಳಿದ ಈ ಪ್ರಶ್ನೆಗೆ, ಪತ್ರಿಕೆಗಳ ಸಂಚಾಲಕರು ಒಂದು ರೀತಿಯಲ್ಲಾದರೆ ಪುಸ್ತಕಗಳ ಪ್ರಕಾಶಕರು ಇನ್ನೊಂದು ರೀತಿಯಲ್ಲಿ ಉತ್ತರ ಹೇಳುತ್ತಾರೆ : ಇಬ್ಬರ ಉತ್ತರದ ಆಶಯ ಮಾತ್ರ ಒಂದೇ: - ಲೇಖಕನಿಗೆ ಪ್ರತಿಫಲವಿಲ್ಲ ! ಹೀಗೆ ಅವರಿಬ್ಬರೂ ಉತ್ತರ ಹೇಳುವುದರಲ್ಲಿ ಕೆಲವಾರು ಸಂಗತಿಗಳು ಅವರಿಗೆ ನೆರವಾಗುತ್ತವೆ. ಪ್ರಕಾಶಕ ತನ್ನ ನೂರಾರು ತೊಂದರೆಗಳನ್ನು ಮುಂದು ಮಾಡಿ, ತಾನು ವ್ಯವಹಾರದಲ್ಲಿ ಹಾಕಿದ ಮೂಲಧನಕ್ಕೆ ಸಾಕಷ್ಟು ಬಡ್ಡಿ ಕೂಡ ಸಿಕ್ಕುವುದಿಲ್ಲವೆಂದು ಅಂಕಿ-ಸಂಖ್ಯೆಗಳಿಂದ ತೋರಿಸಬಲ್ಲ ಲೆಕ್ಕ-ಪತ್ರ ಯಾವಾಗಲೂ ಅವನ ಹತ್ತಿರ ಸಿದ್ಧನೇ ಇರುವಂತೆ, ಪತ್ರಿಕಾ ಸಂಚಾಲಕರಿಗೆ ಕೆಲವು ನಿರಪೇಕ್ಷ ಲೇಖಕರ ಸಹಕಾರ ಯಾವಾಗಲು ಸಿದ್ಧವಾಗಿರುತ್ತದೆ. ತಮ್ಮ ಹೆಸರಿನಲ್ಲಿ ಬರೆಹವೊಂದು ಅಚ್ಚಾದುದನ್ನು ಕಂಡು ಕೃತಕೃತ್ಯರಾದೆವೆಂದು ಬಗೆಯುವ

ಮಹಾನುಭಾವರು ಪ್ರಕಟನೆಗಾಗಿ ಸಂಪಾದಕರ ದುಂಬಾಲು ಬೀಳುತ್ತಿರುವಾಗ, ಪ್ರತಿಫಲವಿಲ್ಲದೆ ಬರೆಯುವುದಿಲ್ಲವೆನ್ನುವ ಬರೆಹಗಾರನನ್ನು ಯಾರು ಕೇಳಬೇಕು? ಅವರಂತೆ ಹೇಗಾದರೂ ತನ್ನ ಹೆಸರಿನಲ್ಲಿ ಪುಸ್ತಕವೊಂದು ಪ್ರಕಟವಾದರೆ ತಾನೂ ಒಬ್ಬ ಸಾಹಿತಿಯೆಂದು ಮೆರೆಯಬಲ್ಲೆನೆಂಬ ಹುಚ್ಚು ಹಂಬಲವುಳ್ಳ ಕೆಲವಾರು ಜನ ಪ್ರಕಾಶಕರ ಬಾಗಿಲೆದುರು ಕಾಯುತ್ತಿರುವಾಗ, ದುಡ್ಡಿಲ್ಲದೆ ದುಡಿಯಲಾರೆನೆಂಬುವವರನ್ನು ಮಾತನಾಡಿಸುವವರಾರು? ಆದರೆ ಪತ್ರಿಕೆಗಳ, ಪುಸ್ತಕಗಳ ಯೋಗ್ಯತೆ, ಸ್ಥಾನ-ಮಾನಗಳ ವಿಷಯದಲ್ಲಿ ಎಚ್ಚರವುಳ್ಳ ಯಾವ ಸಂಚಾಲಕರೂ ಪ್ರಕಾಶಕರೂ ಈ ತೆರದ ನಿಃಸ್ಪೃಹವನ್ನು ನಿಜವಾದ ಸಾಹಿತಿಯ ವಿಷಯದಲ್ಲಿ ತಾಳಲಾರರು. ಈ ವಿಷಯದಲ್ಲಿ ಹೊರದೇಶದವರು ತಮ್ಮ ಪತ್ರಿಕಾ-ಪ್ರಕಾಶನ ಪ್ರಪಂಚದಲ್ಲಿ ಬೆಳೆಯಿಸಿಕೊಂಡು ಬಂದ ರೀತಿ-ನೀತಿಗಳನ್ನು ನೋಡಿದರೆ, ಹೆಸರುಗಳಿಸಿದ ಯಾವ ಪತ್ರಿಕೆಯೂ, ತನ್ನದೇ ಆದ ಒಂದು ಲೇಖಕ-ವೃಂದವನ್ನೂ ಅವರವರಿಗೆ ಸಲ್ಲತಕ್ಕ ಪ್ರತಿಫಲದ ವಿವರಗಳನ್ನೂ ಅಚ್ಚುಕಟ್ಟಾಗಿ ನಿರ್ಧರಿಸಿಕೊಂಡು, ಯಾವ ತೆರದ ಅವಿಶ್ವಾಸಕ್ಕೂ ಎಡೆಗೊಡದಂತೆ ಒಂದು ವ್ಯಾವಹಾರಿಕ ಸೌಹಾರ್ದವನ್ನು ಕಟ್ಟಿಕೊಂಡು, ತನ್ನ ಕಾರ್ಯವನ್ನು ಸುಗಮವಾಗಿ ಸಾಗಿಸಿಕೊಂಡು ಹೋಗುತ್ತಿರುವುದು ಸ್ಪಷ್ಟವಾಗದಿರದು. ಮುಖ್ಯವಾಗಿ ಲೇಖಕ–ಪ್ರಕಾಶಕರ ನಡುವೆ ಬೆಳೆಯಬೇಕಾದದ್ದು ವಿಶ್ವಾಸ, ಸೌಹಾರ್ದ ಎಂಬ ಮಾತಿಗಾಗಿ ಹೊರಪ್ರದೇಶದ ಉದಾಹರಣೆಯನ್ನು ಹೇಳಿದೆ. ಅಲ್ಲಿಯ ಪರಿಸ್ಥಿತಿ ಬೇರೆ; ನಮ್ಮಲ್ಲಿಗಿಂತ ಓದುಗರ—ಓದುವುದಕ್ಕಾಗಿ ಪುಸ್ತಕ-ಪತ್ರಿಕೆಗಳನ್ನು ಕೊಂಡುಕೊಳ್ಳುವವರ—ಸಂಖ್ಯೆ ಹತ್ತುಪಾಲು ಹೆಚ್ಚು ಎಂಬೆಲ್ಲ ವಿಷಯವನ್ನು ಒಪ್ಪಿದರೂ ಲೇಖಕನ ಬೇಡಿಕೆಯನ್ನು ಅಲ್ಲಿಯಂತೆ ಇಲ್ಲಿಯೂ ಮನ್ನಿಸಲೇಬೇಕೆಂಬ ಮಾತಿಗೆ ಬಾಧೆ ಇಲ್ಲ. ಇಲ್ಲಿ ಮುಖ್ಯವಾದುದು. ಲೇಖಕನಿಗೆ ಸಲ್ಲಬೇಕಾದ ಪ್ರತಿಫಲಕ್ಕಿಂತ ಲೇಖಕ-ಪ್ರಕಾಶಕರ ನಡುವಿನ ವಿಶ್ವಾಸ ಹೆಚ್ಚಿನದು. ಅವರಿಬ್ಬರೂ ಒಟ್ಟುಗೂಡಿದಾಗಲೇ ಬರವಣಿಗೆ ಬೆಳೆಯುವುದು; ಬರೆಯಲಾದದ್ದು ಬಯಲಿಗೆ ಬಂದು ನಾಲ್ಕು ಜನರ ಸಹಾನುಭೂತಿಯಲ್ಲಿ ದೊಡ್ಡದಾಗಿ ಹೊಸ ಶಕ್ತಿಯನ್ನು ಪಡೆಯುವುದು. ಆದುದರಿಂದ ಇದೀಗ ತಡವರಿಸುತ್ತ ಮುಂದೆ ಹೆಜ್ಜೆ ಇಡುತ್ತಿರುವ ನಮ್ಮಲ್ಲಿಯ ಪ್ರಕಾಶನ ವ್ಯವಸಾಯದಲ್ಲಿ, ಲೇಖಕನ ವಿಶ್ವಾಸವನ್ನೂ ಸಹಕಾರವನ್ನೂ ಗಳಿಸುವುದು ಅಗತ್ಯವೆನಿಸಿದಲ್ಲಿ, ಗಳಿಸಬೇಕಾದ ವಿಶ್ವಾಸ-ಸಹಕಾರಗಳಿಗೆ ಸಂಕೇತರೂಪವಾಗಿಯಾದರೂ ಲೇಖಕನಿಗೆ ಅವನ ಬರೆಹಕ್ಕಾಗಿ ಪ್ರತಿಫಲ ಸಲ್ಲಬೇಕು.

ಈ ಪ್ರತಿಫಲದ ತೊಡಕನ್ನೇ ತಪ್ಪಿಸಿಕೊಳ್ಳುವುದಕ್ಕಾಗಿ ಕೆಲವಾರು ಸಂಚಾಲಕರು ಎಷ್ಟೋ ಸಲ ಪ್ರಕಾಶನ ವೃತ್ತಿಯಲ್ಲಿಯ ನೀತಿ-ರೀತಿ-ಕಾನೂನು-ನಿಯಮಗಳಿಗೆ ದೂರಗಾದ ಆಚರಣೆಗಳಿಗೆ ಎಡೆಕೊಡುವುದುಂಟು. ಸ್ವತಂತ್ರ ಕೃತಿಗಳಿಗಿಂತ ಅನುವಾದಗಳೂ ಭಾಷಾಂತರಗಳೂ ಹೆಚ್ಚಾಗಿ ಬೆಳೆಯುತ್ತಿದ್ದ ಇಂದಿನ ಕಾಲದಲ್ಲಿ, ಅನುವಾದಕರೂ ಭಾಷಾಂತರಕಾರರೂ ಮೂಲಲೇಖನಕ್ಕೆ ಇದ್ದ ತಮ್ಮ ಋಣವನ್ನು ಎಷ್ಟು ವಿಚಿತ್ರವಾಗಿ, ವಿವಿಧವಾಗಿ ಒಪ್ಪಿಕೊಳ್ಳುತ್ತಾರೆಂಬುದು ಒಂದು ಮೋಜಿನ ವಿಷಯವಾಗಿದೆ. ಮುಕ್ಕಾಲುಪಾಲು ಜನರು ಮೂಲಲೇಖಕರ ಹೆಸರನ್ನು ಕೂಡ ಹೇಳುವುದಿಲ್ಲ. "ಇಂಗ್ಲಿಷ್ ಕಥೆಯೊಂದನ್ನೋದಿ." "ಹಿಂದೀ ಕಥೆಯೊಂದನ್ನನುಸರಿಸಿ" ಇತ್ಯಾದಿಯಾದ ಮಾತುಗಳಿಂದ ಸ್ಪಷ್ಟವಾಗಿರಬೇಕಾದ ತಮ್ಮ ಋಣವನ್ನು ಸಾಧ್ಯವಾದಷ್ಟರಮಟ್ಟಿಗೆ ಸಂದಿಗ್ಧವಾಗಿ ಮಾಡಿ, ಇಲ್ಲದ ಶ್ರೇಯಸ್ಸನ್ನು ಪಡೆಯುವ ಆತುರವನ್ನು ತೋರಿಸುವುದೇ ಪತ್ರಿಕಾ ವಾಚಕರ ಸಾಮಾನ್ಯ ಅನುಭವವಾಗಿದೆ. "ಅನುಸರಿಸಿ" "ಓದಿ" ಬರೆಯುವವರ ಮಾತು ಹೇಗೂ ಇರಲಿ. ಭಾಷಾಂತರವನ್ನು ಮಾಡಿದಾಗ ಕೂಡ ಎಷ್ಟೋ ಸಲ ಮೂಲದ ಮಾತನ್ನೇ ಮರೆತು ಬಿಟ್ಟು, ಕೇವಲ 'ಇಂತಹ ಭಾಷೆಯಿಂದ ಬಂದುದೆಂಬುದನ್ನು ಹೇಳುವ ಔದಾರ್ಯವನ್ನು ಮಾತ್ರ ತೋರಿಸುತ್ತಾರೆ. ಈ ಲೇಖಕರು— ಎಂದರೆ ಪರಪುಷ್ಟ ಲೇಖಕರು— ಮೂಲ ಬರೆಹಗಾರನ ಅಪ್ಪಣೆಯನ್ನು ಪಡೆಯುವ ವಿಚಾರವನ್ನೆಂದಿಗೂ ಮಾಡಿರುವುದಿಲ್ಲ. ಪರದೇಶದ ಭಾಷೆಗಳಲ್ಲಿಯ ಕೃತಿಗಳ ಭಾಷಾಂತರಕ್ಕಂತೂ ಇಂತಹ ಅಪ್ಪಣೆಯ ಅವಶ್ಯಕತೆ ಇಲ್ಲವೆಂದೇ ಗ್ರಹಿಸಿಕೊಂಡು ನಡೆದಂತೆ ಧಾರಾಳವಾಗಿ ನಡೆಯುತ್ತಿದೆ ಈ ಅನುವಾದಕಾರ್ಯ. ಪತ್ರಿಕೆಯ ಸಂಚಾಲಕರೂ ಇದರ ಮಹತ್ತ್ವವನ್ನು, ಈ ತೆರದ ಕೃತಿಗಳಿಗೆ ಅನಧಿಕೃತವಾಗಿ ಎಡೆಗೊಡುವುದರಲ್ಲಿ ಎಂತಹ ಹೊಣೆಗಾರಿಕೆಯನ್ನು ಎದುರಿಸಬೇಕಾಗಬಹುದೆಂಬ ಪ್ರಶ್ನೆಯನ್ನು ತಮ್ಮ ಕಣ್ಣೆದುರಿಗೆ ಇಟ್ಟುಕೊಂಡಿರುವದಿಲ್ಲವೆಂಬುದೂ ಸ್ಪಷ್ಟವಾದ ಮಾತೇ ಆಗಿದೆ. ಇದಕ್ಕೆ ಕಾರಣವೆಂದರೆ ಈ ತೆರದ 'ಸರಕು' ಹೇರಳವಾಗಿ ದೊರಕುವುದಲ್ಲದೆ ಪ್ರತಿಫಲವಿಲ್ಲದೆಯೂ ದೊರಕುವುದು ಸಾಧ್ಯವಿದ್ದುದರಿಂದ, ನಿಯಮಿತ ಪುಟಗಳ ಸಂಖ್ಯೆಯನ್ನು ನಿಯಮಿತ ಕಾಲದಲ್ಲಿ ತುಂಬುವ ಕೆಲಸದಲ್ಲಿ ಒಳ್ಳೆ ಸಹಾಯ ಸಿಗುವುದುಂಟು. ಪ್ರತಿಫಲವನ್ನು ಕೊಡುವುದೇ ಇದ್ದಲ್ಲಿ, ಭಾಷಾಂತರಕಾರನಿಗೂ ಕೊಡಬೇಕಾಗುವುದಲ್ಲದೆ ಮೂಲಲೇಖಕನಿಗೂ ಸಲ್ಲಿಸಬೇಕಾಗುವುದೆಂಬುದನ್ನೂ, ಈ ಪ್ರತಿಫಲದ ವಿಚಾರಕ್ಕಿಂತಲೂ ಮೊದಲಿಗೆ ಮೂಲಲೇಖಕನ ಅಪ್ಪಣೆಯನ್ನು ಪಡೆಯುವುದು ಸಾಮಾನ್ಯ ನ್ಯಾಯದಿಂದಲ್ಲದೆ ಕಾನೂನಿನ ದೃಷ್ಟಿಯಿಂದಲೂ ಆವಶ್ಯಕವೆಂಬ ಮಾತನ್ನೂ ನಮ್ಮ ಪತ್ರಿಕಾಸಂಚಾಲಕರೂ ಪ್ರಕಾಶಕರೂ ಗಮನಿಸಬೇಕಾದ ವಿಚಾರವಾಗಿದೆ.

ನಮ್ಮಲ್ಲಿ ಲೇಖನವು ಒಂದು ಸನ್ಮಾನ್ಯವಾದ ವ್ಯವಸಾಯವಾಗಿ ಬೆಳೆಯಬೇಕಾಗಿದ್ದರೆ, ಅದರ ಜೊತೆಯಲ್ಲಿ ಪ್ರಕಾಶನ ವ್ಯವಸಾಯವೂ ಒಂದು ಸ್ಥಿರ ಸ್ವರೂಪವನ್ನು ಆರ್ಥಿಕ ದೃಷ್ಟಿಯಿಂದ ಸಾಧಿಸಬೇಕಾಗಿದ್ದರೆ, ಪ್ರಕಾಶಕ-ಲೇಖಕರಿಬ್ಬರೂ ವಿಶ್ವಾಸದಿಂದ ನಡೆದುಕೊಂಡು ವ್ಯವಹಾರದಲ್ಲಿ ಬರಬಹುದಾದ ಕಷ್ಟ-ನಷ್ಟಗಳನ್ನೂ ಲಾಭ-ಲೌಕಿಕಗಳನ್ನೂ ಹಂಚಿಕೊಳ್ಳಲು ಸಿದ್ಧರಾಗಬೇಕು. ನಮ್ಮ ಲೇಖಕ ಬಡವ, ಬರೆಹದಿಂದ ಹೊಟ್ಟೆ ಹೊರೆದುಕೊಳ್ಳುವೆನೆಂದು ನಂಬಿದವ ಕನಸುಗಾರ. ಬರೆಹಗಾರನ "ಮಧ್ಯಾಹ್ನ"ದ ಸಮಸ್ಯೆ ಸಂಜೆ-ಮುಂಜಾವುಗಳೆರಡನ್ನೂ ನುಂಗಿ ಬಿಡುವುದರಿಂದಲೇ ನಮ್ಮ ಸಾಹಿತ್ಯದಲ್ಲಿಯ ನಿರ್ಮಿತಿ ಪ್ರಮಾಣ ತೀರ ಕಡಮೆಯಾಗಿದೆ. ನಮ್ಮ ಲೇಖಕರಿಗೆ ಲೇಖನವನ್ನು ಒಂದು ವೃತ್ತಿಯನ್ನಾಗಿ ಮಾಡಿಕೊಟ್ಟರೆ, ಸಾಹಿತ್ಯ ನಿರ್ಮಿತಿಯ ಪ್ರಮಾಣವನ್ನಲ್ಲದೆ ಗುಣವನ್ನೂ ಸುಧಾರಿಸಿಕೊಳ್ಳುವುದು ಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಇದು

(೩೩೩ನೆಯ ಪುಟದ ಅಡಿಯಲ್ಲಿ)

ಪುಸ್ತಕ ವಿಮರ್ಶೆ

ಶ್ರೀಮದ್ ಭಗವದ್ಗೀತೆ

(ಪುರುಷಾರ್ಥಬೋಧಿನೀ ಟೀಕೆ ಸಹಿತ)

ಮರಾಟಿಯಲ್ಲಿ ಮೂಲಗ್ರಂಥ ಬರೆದವರು ಪಂಡಿತ ಶ್ರೀ. ದಾ. ಸಾತವಳೇಕರ, 'ಗೀತಾಲಂಕಾರ' ಅಧ್ಯಕ್ಷ ಸ್ವಾಧ್ಯಾಯಮಂಡಲ, ಔಂಧ. ಕನ್ನಡಿಸಿದವರು ಶ್ರೀಮಾನ್ ಜೋಶಿ ಶಂಕರರಾಯರು. ಬೆಲೆ ೧-೮-೦

ಗೀತಾಗ್ರಂಥದ ಮೇಲೆ ಟೀಕೆ-ಟಿಪ್ಪಣಿಗಳಾದಷ್ಟು ಭಾರತದ ಇನ್ನಾವ ಗ್ರಂಥದ ಮೇಲೂ ಆಗಿಲ್ಲವೆಂದು ಖಂಡಿತವಾಗಿ ಹೇಳಬಹುದು. ಭಾರತದ ಬೇರೆ ಬೇರೆ ಪ್ರಮುಖ ದೇಶಭಾಷೆಗಳಲ್ಲಿ ಒಂದೊಂದರಲ್ಲಿಯೂ ರಾಶಿಗಟ್ಟಲೆ ಟೀಕೆ-ಟಿಪ್ಪಣಿಯ ಗ್ರಂಥಗಳು ಸಿಕ್ಕುವುವಲ್ಲದೆ ಜಗತ್ತಿನಲ್ಲಿಯ ಎಲ್ಲ ರಾಷ್ಟ್ರಗಳ ಭಾಷೆಗಳಲ್ಲಿಯೂ ವಿಮರ್ಶೆಗಳೊಡನೆ ಗೀತೆ ಅನುವಾದಿತವಾಗಿದೆ. ಕೇವಲ ಆಧ್ಯಾತ್ಮಿಕ ದೃಷ್ಟಿಯವರೂ ಗೀತೆಯಲ್ಲಿಯ ವಿಚಾರಗಳನ್ನು ಪುರಸ್ಕರಿಸುತ್ತಾರೆ; ಕೇವಲ ಲೌಕಿಕ-ದೃಷ್ಟಿಯವರೂ ಗೀತೆಯಲ್ಲಿಯ ವಿಚಾರಗಳನ್ನು ಆದರ್ಶವೆಂದು ಒಪ್ಪುತ್ತಾರೆ. ಯುಧ್ಯಮಾನ ರಾಷ್ಟ್ರಗಳಿಗೂ ಗೀತೆ ಸಹಕಾರಿಯೆನಿಸುವುದು; ಶಾಂತಿಯನ್ನು ಬಯಸುವ ರಾಷ್ಟ್ರಗಳಿಗೂ ಇದು ಸಹಾಯಕವೆನಿಸುವುದು. ಪರತಂತ್ರ ಜನತೆಗೆ ಇದು ದುಃಖತಾರಕದ ದಾರಿಯನ್ನು ತೋರಿಸುತ್ತಿದ್ದರೆ, ಸ್ವತಂತ್ರ ಜನತೆಗೆ ಮಾನವಜೀವನದ ಗುರಿಯೇನೆಂಬುದನ್ನು ತೋರಿಸುತ್ತಲಿದೆ. ಗೀತೆಯಲ್ಲಿಯ ವಿಚಾರಗಳೂ ನಿರ್ಣಯಗಳೂ ತ್ರಿಕಾಲಾಬಾಧಿತ ವಿಚಾರ-ನಿರ್ಣಯಗಳು.

ಪ್ರಸ್ತುತ ಗ್ರಂಥದಲ್ಲಿ ಟೀಕಾಕಾರರು ಗೀತೆಯ ಟೀಕೆಯನ್ನು ವಿವರಿಸಲು, ಇಂದಿನ ಭಾರತದ ಪಾರತಂತ್ರ್ಯ ಜೀವನವನ್ನೇ ಹಿನ್ನೆಲೆಯಾಗಿಟ್ಟುಕೊಂಡು ಹೊರಟಿದ್ದಾರೆ. ಉದ್ದೇಶ 'ಪಾರತ್ರಿಕ ಮೋಕ್ಷಕ್ಕಿಂತ ಮೊದಲು ಸಾಧಿಸಬೇಕಾದುದು ಐಹಿಕ ಮೋಕ್ಷ ಎಂದರೆ ವ್ಯಕ್ತಿಸ್ವಾತಂತ್ರ್ಯ' ಎಂಬುದನ್ನು ಸಾರುವುದಿದೆ. ಇದಕ್ಕಾಗಿ ಪುರುಷಾರ್ಥ-ಸಾಧನೆಯೇ ಮಾನವ ಜೀವನದ ಗುರಿಯೆಂಬುದನ್ನು ಬೋಧಿಸಲು ಹೊರಟಿದೆ... ಪಂಡಿತರ.... ಈ ಗ್ರಂಥ.

ಇದರಲ್ಲಿ 'ಅರ್ಜುನ ವಿಷಾದಯೋಗ' ಎಂಬ ಮೊದಲನೆಯ ಅಧ್ಯಾಯದ ಟೀಕೆ-ಟಿಪ್ಪಣಿ-ವ್ಯಾಖ್ಯಾನಗಳು ಮಾತ್ರ ಇವೆ. ಎಲ್ಲಕ್ಕಿಂತ ಮೇಲೆ ದಪ್ಪ ಅಕ್ಷರದಲ್ಲಿ ಮೂಲಶ್ಲೋಕಗಳನ್ನು ಕೊಡಲಾಗಿದ್ದು, ಕೆಳಗೆ ಕ್ರಮವಾಗಿ ಅನ್ವಯ, ಕನ್ನಡದಲ್ಲಿ ಸರಳವಾದ ಅರ್ಥ, ಭಾವಾರ್ಥಗಳನ್ನು ಕೊಡಲಾಗಿದೆ. ಅದರಡಿಯಲ್ಲಿ ವಿಶದವಾದ ಟೀಕೆ-ಟಿಪ್ಪಣಿಯುಂಟು. ಇದರಿಂದ ಅಕ್ಷರವನ್ನರಿತ ಯಾವ ಸಾಮಾನ್ಯ ವಾಚಕನೂ ಗೀತೆಯ ಅರ್ಥವನ್ನು ಸುಲಭವಾಗಿ ಅರಿತುಕೊಳ್ಳುವಂತಿವೆ. ಪರಿಶಿಷ್ಟವಾಗಿ 'ಗೀತಾ ವಿಚಾರ' ಎಂಬ ವಿಸ್ತೃತ ಪ್ರಬಂಧವೂ, ಮೊದಲನೆಯ ಅಧ್ಯಾಯದೊಳಗಿನ ಸುಭಾಷಿತಗಳೂ, ಮೊದಲನೆಯ ಅಧ್ಯಾಯದ ವಿಷಯಸೂಚಿಯೂ ಬಂದಿವೆ. 'ಧೃತರಾಷ್ಟ್ರನು ಯಾರು?' ಎಂಬುದರಿಂದ ಪ್ರಾರಂಭವಾದ ಭಾರತದ ಬೇರೆ ಬೇರೆ ವ್ಯಕ್ತಿಗಳ ಮತ್ತು ಅವರವರ ಕಾರ್ಯದ ವಿವೇಚನೆಯು 'ಹೃತರಾಷ್ಟ್ರ'ರಾದ ನಮ್ಮ ಜನತೆಗೆ ಉದ್ಬೋಧಕವಾಗಿದೆ; ಸ್ವಸ್ವರೂಪದ ಪರಿಚಯ ಮಾಡಿಕೊಟ್ಟು, ಕರ್ತವ್ಯಜಾಗೃತರನ್ನಾಗಿಸುವಂತಹದಿದೆ. ಇದರಲ್ಲಿಯ ಟೀಕೆ-ಟಿಪ್ಪಣಿಗಳನ್ನು ಓದುತ್ತ ಹೋದಂತೆಲ್ಲ ನಮ್ಮ ಪರದಾಸ್ಯಜೀವನದ ಅಂಧಕಾರದಲ್ಲಿ ಅಡಗಿದ ಎಷ್ಟೋ ತೊಡಕುಗಳ ಮೇಲೆ ಬೆಳಕು ಬಿದ್ದು, ಅವುಗಳನ್ನು ಬಿಡಿಸಿ ಮುಂದುವರಿವ ದಾರಿ ಕಾಣುತ್ತದೆ. ಪಂಡಿತರು ಹೇಳಿದಂತೆಯೆ ಮೂಲಗೀತೆಯ ಅರ್ಥವಿರಲಿ, ಇಲ್ಲದಿರಲಿ. ಆ ಮಾತು ನಮಗೀಗ ಬೇಕಿಲ್ಲ. ಆದರೆ ಇವರು ಹಚ್ಚಿದ ವಿವರಿಸಿದ ಗೀತೆಯ ಅರ್ಥವೀಗ ಆವಶ್ಯಕ ಪೌರುಷಸಾಧನೆಗಾಗಿ ನಮಗೀಗ ಬೇಕಾಗಿದೆ. ಎಲ್ಲರೂ ಅವಶ್ಯವಾಗಿ ಓದಬೇಕು. ಭಾಷಾಂತರದ ಭಾಷೆ ಮೂಲದ ಓಜಸ್ಸು-ತೇಜಸ್ಸುಗಳನ್ನು ಕನ್ನಡದಲ್ಲಿ ಚೆನ್ನಾಗಿ ತಂದು ತೋರಿಸಿದೆ.

(೩೨೮ನೆಯ ಪುಟದಿಂದ ಮುಂದರಿದುದು)

ಸಾಧ್ಯವೆಂಬುದನ್ನು ಕಾಣಲಿಕ್ಕೆ ನಾವು ಬಹುದೂರ ಹೋಗಬೇಕಾಗಿಲ್ಲ. ಪಾಶ್ಚಿಮಾತ್ಯ ಲೇಖಕರ ವೃತ್ತಿ-ವ್ಯವಸಾಯಗಳ ಮಾತನ್ನಂತೂ ಇಂದಿನ ಪರಿಸ್ಥಿತಿಯಲ್ಲಿ ಎತ್ತುವಂತೆ ಇಲ್ಲ. ತಕ್ಕಮಟ್ಟಿಗೆ ಬಂಗಾಲದಲ್ಲಿ, ಅದರ ನಂತರ ಮಹಾರಾಷ್ಟ್ರದಲ್ಲಿ ಲೇಖನ ಒಂದು ವ್ಯವಸಾಯವಾಗಬಲ್ಲ ಹಂತಕ್ಕೆ ಬರತೊಡಗಿದೆ ಎಂಬುದನ್ನು ಅಲ್ಲಿಯ ಕೆಲವಾರು ಉದಾಹರಣೆಗಳಿಂದ ಕಾಣಬಹುದಾಗಿದೆ. ಆರ್ಥಿಕತೊಂದರೆಗಳಿಂದ ಲೇಖಕನ ವಿಚಾರ ದೂರವಾದ ಹೊರತು ಆತನು ತನ್ನ ತನು-ಮನಗಳೆಲ್ಲವನ್ನೂ ತನ್ನ ಸಾಹಿತ್ಯನಿರ್ಮಿತಿಗೆ ಸಂಪೂರ್ಣವಾಗಿ ಉಪಯೋಗಿಸಲಾರ. ಇದೇ ಪ್ರಶ್ನೆಯನ್ನು ಎರಡನೆಯದೊಂದು ದೃಷ್ಟಿಯಿಂದ ವಿಚಾರಿಸುವುದೂ ಅವಶ್ಯವಿದೆ. 'ದುಡ್ಡಿಗಾಗಿ ಬರೆಯಲ್ಪಡಬಹುದಾದ ಬರೆಹ ವ್ಯಾಪಾರದೃಷ್ಟಿಯ ಹೆಚ್ಚಳದಿಂದ ಗುಣವಿಶೇಷದಲ್ಲಿ ಕುಗ್ಗಬಹುದೆಂಬ ಭೀತಿ ಇಲ್ಲವೆ?' ಎಂದು ಯಾರಾದರೂ ಕೇಳಬಹುದಾಗಿದೆ. ಬರೆದದ್ದು ದುಡ್ಡಿಗಾಗಿಯೇ ಆದರೆ ಮಾತ್ರ ಈ ರೀತಿಯ ಅನುಮಾನ ಸಾಧ್ಯವೆಂಬ ಮಾತನ್ನು ಒಪ್ಪಲೇಬೇಕು. ಆದರೆ ಈ ಪರಿಸ್ಥಿತಿ ಬಹು ದೂರದ್ದಲ್ಲದೆ ನಮ್ಮಲ್ಲಿಯ ಪ್ರಕಾಶನ ವ್ಯವಸಾಯ ಹೊಸ ರೀತಿ-ನೀತಿಗಳನ್ನವಲಂಬಿಸಿ ಇಂದು ಇಂಗ್ಲಂಡ್ ಅಮೇರಿಕಾ ದೇಶಗಳಲ್ಲಿಯ ಮಟ್ಟವನ್ನು ಸಮೀಪಿಸಿದಾಗ ಸಾಧ್ಯ ಎಂಬುದನ್ನು ನಾವು ಲಕ್ಷ್ಯದಲ್ಲಿಡಬೇಕು. ಆದರೆ ನಮ್ಮಲ್ಲಿಯ ಲೇಖಕ ಈಗ ಯಾವ ಕಾರಣಕ್ಕಾಗಿ ಬರೆಯುತ್ತಿದ್ದರೂ, ಒಳ್ಳೆಯ ಕೃತಿಯೊಂದು ಹೊರಗೆ ಬಂದಾಗ ಅದಕ್ಕಾಗಿ ಅವನಿಗೆ ಯೋಗ್ಯ ಪ್ರತಿಫಲ ಸಿಗುವುದರಿಂದ ಅವನಿಗೊಂದು ರೀತಿ ಉತ್ತೇಜನ ದೊರಕಬಹುದೆಂಬ ದೃಷ್ಟಿಯಿಂದ ಈ ವಿಚಾರವನ್ನು ಇಲ್ಲಿ ಸಾಧ್ಯವಾದಷ್ಟರ ಮಟ್ಟಿಗೆ ಕೂಲಂಕಷವಾಗಿ ವಿವೇಚಿಸಲಾಗಿದೆ. ಈ ತೆರದ ಉತ್ತೇಜನದಿಂದ ಬರೆಯಬಲ್ಲವರಾಗಿದ್ದು ಬರೆದಾದರೂ ಮಾಡುವುದೇನೆಂಬ ನಿರುತ್ಸಾಹಕ್ಕೆ ಒಳಗಾದ ಕೆಲವರನ್ನಾದರೂ ಕೆಲಸಕ್ಕೆ ತೊಡಗಿಸಬಹುದು. ಅಲ್ಲದೆ ಲೇಖಕ-ಪ್ರಕಾಶಕರ ನಡುವಿನ ಸಂಬಂಧ ಒಂದು ರೀತಿಯ ವಿಶ್ವಾಸದಲ್ಲಿ ಬೆಳೆದು ನಾಡಿನ ಸಾಹಿತ್ಯ ನಿರ್ಮಿತಿಯ ಮಟ್ಟವೂ ಒಂದು ಹದಕ್ಕೆ ಬರಬಹುದೆಂಬ ಆಶೆಯೂ ಫಲಕಾರಿಯಾಗಬಹುದು. ಆದ್ದರಿಂದ ಇತ್ತ ಕಡೆಗೆ ನಮ್ಮ ಪತ್ರಿಕಾ ಸಂಚಾಲಕರೂ ಪುಸ್ತಕ ಪ್ರಕಾಶಕರೂ ಅವಶ್ಯವಾಗಿ ತಮ್ಮ ಸಹಾನುಭೂತಿಪೂರ್ವಕವಾದ ದೃಷ್ಟಿಯನ್ನು ತಿರುಗಿಸಬೇಕು.

ಮುಂಬಯಿಯಲ್ಲಿ ನಡೆದ ಒಂದು ಸಮಾರಂಭ

ಕನ್ನಡದ ಅಭಿಮಾನಿಗೆ ಮನ್ನಣೆಯ ಮೆಚ್ಚು

(ಸಾಹಿತ್ಯಸಂಜಯನಿಂದ)

ಮುಂಬಯಿಯಲ್ಲಿ ಈಗ ಕನ್ನಡಜನತೆ ಜಾಗೃತವಾಗಿದೆ. ಆದುದರಿಂದ ಯಾವುದೇ ಕನ್ನಡ ಚಟುವಟಿಕೆ ನಡೆಯಲಿ, ಜನ ಆದರದಿಂದ ಸಹಾನುಭೂತಿಯಿಂದ ಆತುರದ ಆಸ್ಥೆಯಿಂದ ಸೇರುತ್ತಾರೆ. ಉಳಿದ ದಿನಗಳಲ್ಲಿ ತಮ್ಮ ತಮ್ಮ ಕೆಲಸಗಳಲ್ಲಿ ಮೈಮರೆತು-ಮನಮರೆತು ದುಡಿದು ಬೇಸರವಾಗಿರುವುದರಿಂದ, ಕನ್ನಡದ ಚಟುವಟಿಕೆ ಸಮಾರಂಭ— ಹಬ್ಬ-ವಾಗಿ ಪರಿಣಮಿಸುವುದು. ಆಗ ಬೇರೆ ಬೇರೆ ಜನ ಒಂದೆಡೆ ಸೇರಿ ಹಬ್ಬಮಾಡುತ್ತಾರೆ. ನಗುತ್ತಾರೆ, ಕನ್ನಡದ ಸಮಸ್ಯೆಗಳ ಬಗೆಗೆ ವಿಚಾರ ಮಾಡುತ್ತಾರೆ, ಚರ್ಚಿಸುತ್ತಾರೆ. ಹೀಗಾಗಿ ಕನ್ನಡ ಜನದಲ್ಲಿ ಒಂದು ಬಗೆಯ ತಿಳಿವಳಿಕೆ-ಸೌಹಾರ್ದ ಹೆಚ್ಚುತ್ತಲಿದೆ; ಕನ್ನಡತನ ಉಜ್ವಲವಾಗುತ್ತಿದೆ; ಪ್ರಾಂತಾಭಿಮಾನವು ಪ್ರಭೆಗೊಳ್ಳುತ್ತಲಿದೆ.

ಕಳೆದ ತಿಂಗಳ ೪ನೆಯ ದಿನಾಂಕ ಮೊದಲೇ ಹಸ್ತಪತ್ರಿಕೆಗಳ ಮುಖಾಂತರ, ಇಂಗ್ಲಿಶ್ ದಿನಪತ್ರಿಕೆಗಳ ಮುಖಾಂತರ ‘ಜಯಂತಿಯ ಮುಂಬಯಿ ಶಾಖಾ ಕಚೇರಿಯಲ್ಲಿ ಮೆಚ್ಚುಕೊಡುವ ಸಮಾರಂಭವಾಗಲಿದೆ’ ಎಂದು ಪ್ರಸಿದ್ಧಮಾಡಲಾಗಿತ್ತು. ಸಾಯಂಕಾಲದ ೫||-೬ ಗಂಟೆಯ ಸಮಯ; ಮುಂಬಯಿ ಕೋಟೆಯ ಚರ್ಚ್‌ಗೇಟ್ ಬೀದಿಯ ಕಡೆಗೆ ಕನ್ನಡಿಗರು ಸಾಗಿದ್ದಾರೆ. ಆ ಬೀದಿಯ ೪೬ ನೆಯ ಕಟ್ಟಡದ ಎರಡನೆಯ ಮಾಳಿಗೆಯಲ್ಲಿ ಇರುವ ‘**ಮೊಗವೀರ ಯುವಕಸಂಘ**’ದ ಕಚೇರಿಯಲ್ಲಿ ಜನ ಸೇರತೊಡಗಿದೆ. ವೇಳೆಗೆ ಸರಿಯಾಗಿ ಕೆಲಸ ಮಾಡಲಾರರೆಂಬ ಕನ್ನಡ ಜನದ ಮೇಲಿನ ಆರೋಪವನ್ನು ಅಲ್ಲಗಳೆಯುವಂತೆ, ಜನ ಗೊತ್ತುಪಡಿಸಿದ ವೇಳೆಗೆ ಸರಿಯಾಗಿ ಸೇರಿದ್ದರು. ಕಚೇರಿಯ ತುಂಬ ಜನ ಕಿಕ್ಕಿರಿದಿದ್ದಿತು. ಬೇಸಗೆಯ ಬೇಗೆ ಹೆಚ್ಚಿದ್ದುದರಿಂದ ಜನಗಳಿಗೆ ಗಾಳಿಯ ವ್ಯವಸ್ಥೆಯಿತ್ತು—ಬೀಸಣಿಕೆಗಳಿಂದ. ಸಮಾರಂಭಕ್ಕಾಗಿ ಜನ ಬಂದಿದೆ; ನಿಯಮಿಸಿದ ಅವಧಿ ಸಮೀಪ ಬಂದಿದೆ. ಆದರೂ ಕಾರ್ಯಾರಂಭದ ಸೂಚನೆ ಕಂಡು ಬರಲಿಲ್ಲ. ಎಲ್ಲರೂ ಬಾಗಿಲ ಕಡೆ ನೋಡುವುದು— “ಬಂದರೇನ್ರೀ!” ಎಂದು ಕೇಳುವುದು. ‘ಇಲ್ಲ’ ಎಂಬ ಗೋಣು ನೋಡಿ ಮತ್ತೆ ಬೀಸಣಿಕೆಯಿಂದ ಗಾಳಿಹಾಕಿಕೊಳ್ಳುವುದು.

ಅಂದಿನ ಸಮಾರಂಭಕ್ಕೆ ನಿಯೋಜಿತ ಅಧ್ಯಕ್ಷರು **ಶ್ರೀ. ಜಿ. ಬಿ. ಮಹಾಶಬ್ದೆ**ಯವರು ಗಿರಗಾಂವದಿಂದ ಬರಬೇಕಿತ್ತು. ೬-೭ರ ಸಂಧಿಕಾಲ, ಟ್ರಾಮು ಬಸ್ಸು—ಟ್ಯಾಕ್ಸಿಗಳು ಯಾವುವೂ ಸಮಯಕ್ಕೆ ಸಿಕ್ಕದ ಕಾಲ. ಎಲ್ಲರೂ ತಮ್ಮ ದಿನದ ಕೆಲಸ ಮುಗಿಸಿಕೊಂಡು ಮಡದಿ-ಮಕ್ಕಳ ಮೊಗ ನೋಡಬೇಕೆಂಬ ಹಂಬಲದ ಮೊಗದವರಾಗಿ ಮನೆಗೆ ಹೋಗಬೇಕೆಂದಿರುವ ಕಾಲ. ಅದಕ್ಕಾಗಿ ಕೋಟೆಯ ಕಡೆಗೆ ಬರುವ ಜನಕ್ಕೆ ವಾಹನಗಳ ಅನನುಕೂಲತೆ. ಆ ಮೂಲಕ ಅಧ್ಯಕ್ಷರು ಬರುವುದಕ್ಕೆ ಸ್ವಲ್ಪ ವಿಲಂಬವಾಯಿತು—ಅನಿವಾರ್ಯವಾಗಿ ಅಧ್ಯಕ್ಷರು ಬಂದರು ೬-೩೦ಕ್ಕೆ. ಅವರು ಬಂದೊಡನೆ ಆ ದಿನದ ಕಾರ್ಯಕ್ರಮ ಮೊದಲಾಯಿತು:

ಮುಂಬಯಿಯಲ್ಲಿ ಜಯಂತಿಯ ಅಭಿಮಾನಿ ಪ್ರಚಾರಕರಾದ

ಶ್ರೀ. ಹೊ. ಸೋಮನಾಥರು

ಮೊಗವೀರ ಯುವಕಸಂಘದ ಕಾರ್ಯಕರ್ತರಲ್ಲೊಬ್ಬರಾದ ಶ್ರೀ. ಕಾಂಚನ್ ಅವರು, ತಮ್ಮ ಕಚೇರಿಗೆ ಬಂದ ಜನಕ್ಕೆಲ್ಲ ಸ್ವಾಗತ ಬಯಸಿ, ಅಂದಿನ ಕಾರ್ಯಕ್ರಮವನ್ನು ಹೇಳಿದರು. ‘ಜಯಂತಿ’ಯ ಮೆಚ್ಚುಕೊಡುಗೆಯ ಹಬ್ಬ ಅವರ ಸಂಘದ ನೇತೃತ್ವದಲ್ಲಿ ಅದೇಕೆ ನಡೆದಿದೆ-ಯೆಂಬುದನ್ನೂ ಹೇಳಿದರು; ಅಧ್ಯಕ್ಷರ ಪರಿಚಯ ಮಾಡಿಕೊಟ್ಟರು:

“ಅಧ್ಯಕ್ಷರಾದ ಶ್ರೀ ಮಹಾಶಬ್ದೆಯವರು ಮೂಲ ಕರ್ನಾಟಕದವರು—ಹುಬ್ಬಳ್ಳಿಯವರು; ಈಗ ಕಾರ್ಯನಿಮಿತ್ತ ಮುಂಬಯಿಯಲ್ಲಿ ನೆಲಸಿದ್ದಾರೆ. ‘ನವಾಕಾಳ’ದ ಉಪ-ಸಂಪಾದಕರಾಗಿದ್ದಾರೆ. ಕನ್ನಡ ನಾಡಿನ ಪರಿಸ್ಥಿತಿಯನ್ನರಿತವರು— ಸಹಾನುಭೂತಿಯುಳ್ಳವರು.” ಎಂದು ಪರಿಚಯಮಾಡಿಕೊಟ್ಟು, ಸಭಾಪತಿಸ್ಥಾನವನ್ನು ಅಂಗೀಕರಿಸಬೇಕೆಂದು ಬಿನ್ನವಿಸಿಕೊಂಡ ಮೇಲೆ, ಅವರು ಸಭಿಕರ ಕರತಾಡನದೊಂದಿಗೆ ಆಸನಸ್ಥರಾದರು. ಬಳಿಕ ಮೊದಲಮಾತೆಂದು ಅವರು ಹೀಗೆ ಹೇಳಿದರು:—

“ಇಂದು ಕನ್ನಡಿಗರ ಮಧ್ಯದಲ್ಲಿ ಈ ಸ್ಥಾನದಲ್ಲಿ ಕೂಡುವುದೆಂದರೆ ನಾನು ಸಾಹಸ ಮಾಡಿದಂತೆಯೆ. ನಾನು ಮಾತನಾಡುವ ಕನ್ನಡವು ನಿಮಗೆ ಎಷ್ಟರ ಮಟ್ಟಿಗೆ ತಿಳಿವುದೊ ನಾನರಿಯೆ. ಆದರೂ ನನ್ನನ್ನು ಅದಾವ ಪ್ರೀತಿ-ವಿಶ್ವಾಸಗಳಿಂದ ಬರಮಾಡಿಕೊಂಡಿದ್ದಾರೋ ಅದೇ ನನ್ನ ನಿಮ್ಮ ನಡುವಿನ ಕಳಿಗೆ ಅದೇ ನನ್ನ ಭಾವನೆ-ವಿಚಾರಗಳನ್ನು ನಿಮಗೆ ತಿಳಿಸಬೇಕು. ೨೦ ವರುಷ ಕರ್ನಾಟಕದಿಂದ ದೂರ ಇದ್ದು, ಕನ್ನಡ ಭಾಷಣ ಮಾಡುವಾಗ ನನಗೆ ಈ ಕಾಲಾವಧಿಯ ಅರಿವಾಗುತ್ತಿದೆ.” ಎಂದರು. ಬಳಿಕ ಅಂದಿನ ಭಾಷಣಕಾರರಾದ **ಶ್ರೀ. ನೆಗಳೂರ ರಂಗನಾಥರನ್ನು** ಮಾತನಾಡುವಂತೆ ಕೇಳಿಕೊಂಡರು. **ನೆಗಳೂರರು** “ಜಯಂತಿಯ ಎಂಟು ವರುಷ” ಎಂಬ ವಿಷಯದ ಮೇಲೆ ಮಾತನಾಡಿದರು.

ಮೊಟಲು ಎಂಟುವರುಷ ಎಂದೇಕೆ ಅರಿಸಿದ್ದೇನೆಂಬುವನ್ನು ಹೇಳಿದರು: ಜಯಂತಿಯು ೧೯೩೮ನೆಯ ಮೇ ತಿಂಗಳಿಗೆ ಮೊದಲಾಯಿತು

ಈಗ ತುಂಬ ಏಳು ವರುಷಗಳಾಗಿ ಎಂಟನೆಯ ವರುಷದ ಹಂಚಿಕೆ ಹಾಕಿದೆ. ಆದಕ್ಕಾಗಿ ಐತಿಹಾಸಿಕವಾಗಿ ಏಳು ವರುಷದ ಮಾತುಗಳನ್ನು, ಮುನ್ನೋಟದ ವಿಚಾರವಾಗಿ ಎಂಟನೆಯ ವರುಷದ ಹೊಳವನ್ನು ಹೇಳಿದರು.

"ಜಯಂತಿಯ ಹುಟ್ಟಿಗೆ ಕಾರಣವೇನು? ಈಗ ಏಳು ವರುಷದ ಹಿಂದಿನ ಕನ್ನಡನಾಡಿನ ಪರಿಸ್ಥಿತಿಯನ್ನು ವಿಚಾರಕ್ಕೆ ತಂದರೆ ಜಯಂತಿಯು ಉದಯದ ಕಾರಣ ತಟ್ಟನೆ ಹೊಳೆವುದು. ಹೊಸ ವಿಚಾರಕ್ಕೆ— ತರುಣ ಬರೆಹಗಾರರಿಗೆ ಸಾಕಷ್ಟು ಅನುವು ಇಲ್ಲದಿರುವುದೆ ಇದಕ್ಕೆ ಮೂಲ. ಅಲ್ಲದೆ ಒಂದು ಬಗೆಯಿಂದ ವಿಚಾರದಲ್ಲಿ ಕ್ರಾಂತಿ ಮಾಡಬೇಕೆಂದು ಕೆಲವು ಜನರು ಮುಂದೆ ಬಂದು 'ಜಯಂತಿ' ಎಂಬ ಹೆಸರಿನಿಂದ ಮಾಸಪತ್ರಿಕೆಯನ್ನು ಪ್ರಾರಂಭಿಸಿದರು.......

"ಪ್ರಾರಂಭದಿಂದಲೆ ಜನತೆಯು ಪತ್ರಿಕೆಯನ್ನು ತುಂಬ ಆದರದಿಂದ ಬರಮಾಡಿಕೊಂಡಿತು. **ಶ್ರೀ. ಬೆಟಗೇರಿ ಕೃಷ್ಣಶರ್ಮ** ಮತ್ತು ಪಾಟೀಲ **ಮಾಧವರಾಯರ** ಸಂಪಾದಕ–ಸಂಚಾಲಕತ್ವದಲ್ಲಿ ಪತ್ರಿಕೆಯು ದಿನದಿನಕ್ಕೆ ಹೆಚ್ಚು ಹೆಚ್ಚು ಆಕರ್ಷಕವಾಗತೊಡಗಿತು. ಹೊಸ ಬರೆಹಗಾರರಿಗೆ ಅನುವು ಕೊಟ್ಟು ಬರೆಹಗಾರರನ್ನು ಪ್ರೋತ್ಸಾಹಿಸಿತು 'ಮಂಗನ ಮಲ್ಲಿನಾಥತನ,' 'ನಾಲ್ಕು ನಿಟ್ಟಿನ ನೋಟ,' ಮಹಾಪುರುಷರ ಕನ್ನಡನಾಡಿನ ವಿಭೂತಿಗಳ ಚರಿತೆಗಳು ಲಾಕ್ಷಣಿಕ ಬರಹಗಳು, ಸಂದರ್ಭಚಿತ್ರಗಳು, ವ್ಯಂಗ್ಯಚಿತ್ರಗಳು ಇವುಗಳಿಂದ ಜಯಂತಿ ಜನಮನವನ್ನು ಹಿಡಿಯಿತು........

"ಹೊಸ ಹುರುಪಿನಿಂದ ಪ್ರಾರಂಭವಾದ ಈ ಹೊಸ ಪತ್ರಿಕೆಯನ್ನು ಕನ್ನಡ ನಾಡು ಬರಮಾಡಿಕೊಂಡಿತು. ಇಡಿ ಪ್ರಾಂತದಲ್ಲಿ ಜಯಂತಿ ಬೇಗನೆ ಪ್ರಸಾರ ಹೊಂದಿ ಕೀರ್ತಿ ಗಳಿಸಿತು. ಆದರೆ ಕಚೇರಿಯಲ್ಲಿಯ ಆಂತರಿಕ ಆಡಳಿತ ಅಷ್ಟು ತೃಪ್ತಿಕರವಾಗಿಲ್ಲದ್ದರಿಂದ— ಅನನುಭವದ ಮೂಲಕ—-ಆಡಳಿತ ತಲೆಭಾರವಾಗತೊಡಗಿದ್ದುದರ ಅರಿವು ಬಂತು. ಏಜೆಂಟರು ಹಣವನ್ನು ಸಕಾಲಕ್ಕೆ ಕಳುಹುತ್ತಿರಲಿಲ್ಲ. ಹೋದ ಪ್ರತಿಗಳು ಹಣ ತರುತ್ತಿರಲಿಲ್ಲ. ಅನೇಕ ಮಹನೀಯರು ಪತ್ರಿಕೆ ತರಿಸಿಕೊಂಡರೂ ಹಣವನ್ನೆ — ಚಂದಾ ಹಣ—-ಕಳಿಸುತ್ತಿರಲಿಲ್ಲ;— ಹೀಗಾಗಿ ಕೇವಲ ಬರಿಗೈಯ ಬಹು ಮಂದಿ 'ಭಾವು' ಎನ್ನುವವರಾದರು. ಇದರಿಂದ ಪತ್ರಿಕೆ ನಡೆವ ಬಗೆ ಹೇಗೆ? ತಪ್ಪದೆ ಒಂದನೆಯ ದಿನಾಂಕಕ್ಕೆ ಪ್ರಕಟಿಸಲೇಬೇಕೆಂಬ ಪ್ರತಿಜ್ಞೆಗಾಗಿ, ಪತ್ರಿಕೆ ಹೊರಡುತ್ತಲೆ ಇತ್ತು; ಬೇಗೆ ಒಳಗೊಳಗೆ ಹಬ್ಬುತ್ತಲೆ ಇತ್ತು.

....ಮೂರು ವರುಷ ಮುಗಿವುದರೊಳಗೆಯೆ ಬಾಲಗ್ರಹ ಬಂತು. ಪತ್ರಿಕೆ ನಿಂತುಬಿಡುವುದೆಂಬ ಗುಲ್ಲು ಅಲ್ಲಲ್ಲಿ ಹಬ್ಬಿತು. ಅನೇಕರು ಆಶೀರ್ವಾದದ ಹರಕೆ ಕಳಿಸಿದರು; ಸಹಾಯದ ಸಹಾನುಭೂತಿಯ ಮಾತುಗಳನ್ನೂ ಕಳಿಸಿದರು. ಆದರೇನು, ಹೊರಗಿನಿಂದ ಆದೆಷ್ಟು ಕಳವಳಪಟ್ಟರೂ ಒಳಗಿನ ಬೇನೆಯು ಹೇಗೆ ಗುಣವಾಗಬೇಕು— ಜನರಿಗೆ ಬಹಳ ಅಸಮಾಧಾನವಾಯಿತು. ಪತ್ರಿಕೆಯು ಮುಳುಗುವದೆಂದೇ ಅಭಿಪ್ರಾಯಪಟ್ಟರು. ಹಲವರು 'ಕನ್ನಡಿಗರಿಗೆ ಒಂದು ಕೆಲಸವನ್ನು ಕೂಡ ಕೊನೆಯ ವರೆಗೆ ನಡೆಯಿಸಲು ಬಾರದು' ಎಂಬ ಹಳೆಯ ಕಾಲದ ಮುದ್ರೆಯನ್ನು ಒತ್ತಿದರು. "ಸಂಸ್ಥೆ ಕಟ್ಟಬೇಕು ಹೊರಗಿನವರೆ! ನೋಡಿರಿ ನೆರೆನಾಡಿನವರನ್ನು!" ಎಂದು ಹೀಗಳೆವ ಮಾತುಗಳೂ ಅನೇಕರ ಬಾಯಿಂದ ಬಂದುವು........

....ಇದೆಲ್ಲ ನಡೆದಾಗ ಒಳಗೆಯೆ ಒಂದು ಬಗೆಯ ಹೊಸ ಹುಮ್ಮಸು ಬರುವಂತೆ ತೋರಿತು. ಒಬ್ಬರು ಮುಂದೆ ಬಂದು ಪ್ರತಿಜ್ಞೆ ಮಾಡಿದರು. "ಪತ್ರಿಕೆಯನ್ನು ಮುಳುಗಿಸುವಂತಿಲ್ಲ." ಎಂದು. ಆಗ ಆಡಳಿತದಲ್ಲಿ ಬದಲಾಯಿತು. ಹೊಸಬರ ಕೈವಾಡ ಬಂದಿತು. ಹೊಸ ರಕ್ತ ಹರಿಯಿತು. ಬೇನೆ ಬಯಲು ಹವೆಗೆ ಬಿದ್ದು ಅದರ ಬಾವು ಕುಂದಿ, ಆರೋಗ್ಯದ ಚಿಹ್ನೆಗಳು ಕಾಣತೊಡಗಿದುವು. ಆಗ 'ಜಯಂತಿ'ಯ ಮೊಗದ ಮೇಲಿನ ಕಳೆಯಂತೆ, ಕನ್ನಡ ಜನತೆಯ ಆದೆಷ್ಟು ಜನದ ಮೊಗದ ಮೇಲೆ ಹೊಸ ಕಳೆ ಬಂದಿತೊ! ನೋಡಿದರೆ ತಿಳಿಯಬೇಕು.

....ಬಾಲಗ್ರಹದ ಬಾಧೆಯಿಂದ ಪಾರಾಗಿ ಮೂಗು ಮೇಲಕ್ಕೆ ಮಾಡಬೇಕೆಂದು ಹವಣಿಸುತ್ತಿರುವಾಗಲೆ ಬಂತು ಯುದ್ಧದ ಬೇಗೆ. ಇಡಿ ಜಗತ್ತನ್ನಾವರಿಸಿದ ಈ ಬೇಗೆ ಭಾರತವನ್ನು ಬಳಲಿಸದಿದ್ದೀತೆ? ಸಾವಕಾಶವಾಗಿ ಎಲ್ಲ ವಿಭಾಗಗಳನ್ನೂ ಆವರಿಸಿತು. ಎಲ್ಲ ವಸ್ತುಗಳ ಬೆಲೆ ಏರತೊಡಗಿತು. ಕಳ್ಳಪೇಟೆ ಪ್ರಾರಂಭವಾಯಿತು. ಕಾಗದದ ಬೆಲೆ ಹೆಚ್ಚಾಗತೊಡಗಿತು. ಅದರಿಂದ ಸುಧಾರಣೆಯು ಅನೇಕ ವಿಚಾರಗಳು ಮುದುಡಿಕೊಂಡು ಹೋಗಿ, ಕೇವಲ ಜೀವಧಾರಣವೆ ಜಯಂತಿಗೆ ಸಮಸ್ಯೆಯಾಗತೊಡಗಿತು.

...ಬದುಕಬೇಕೆಂಬ ಹಟ — ಬಾಲಗ್ರಹದ ಬಾಧೆಯಲ್ಲಿಯ ಪ್ರತಿಜ್ಞೆಯಲ್ಲಿಯೆ ಮೂಡಿತ್ತು. ಆ ಹಟವೆ ಈ ಮಹಾಯುದ್ಧದ ಘನಘೋರ ಕಾಲವನ್ನೂ ದಾಟಿಸಿತು ಎಂದು ಹೇಳಬೇಕು. ಯಾವುದನ್ನೂ ಲೆಕ್ಕಿಸದೆ ಬದುಕಿತು ಜಯಂತಿ! ಅದಕ್ಕಾಗಿ ಸಹಾನುಭೂತಿಯಿಂದ ಸಹಾಯ ಮಾಡಿದ ಕನ್ನಡ ಜನತೆಗೆ ಸಲ್ಲಬೇಕು ಪ್ರಥಮ ಕೃತಜ್ಞತೆ. ಬೆಲೆಯೇರಿಸಿ ಪುಟ ಕಡಿಮೆಮಾಡಿದರೂ, ಜನತೆ ಕೈನೀಡುತ್ತಲೆ ಇತ್ತು. ಇದೇ 'ಜಯಂತಿ'ಯ ಜನಾದರದ ಕುರುಹು.

'ಜಯಂತಿ'ಯ ಪರಿವಾರವೂ ಟೊಂಕಕಟ್ಟಿ ನಿಲ್ಲದಿದ್ದರೆ ಯುದ್ಧಾವಧಿಯಲ್ಲಿ ಜಯಂತಿ ಕಮರಬಹುದಾಗಿತ್ತು.

ಈ ಏಳು ವರುಷದಲ್ಲಿ ಜಯಂತಿ ಏನು ಮಾಡಿದೆ? ಇದನ್ನು ಸ್ವಲ್ಪದರಲ್ಲಿ ಹೇಳುವುದು ಕಠಿಣ, ಆದರೂ ಹೊಸ ವಿಚಾರ ಪರಂಪರೆಯನ್ನೂ ಕನ್ನಡತನದ ಕಿಡಿಯನ್ನೂ ತರುಣರಲ್ಲಿ ಬಿತ್ತಿದೆಯೆಂದು ಧಾರಾಳವಾಗಿ ಹೇಳಬಹುದು. ಅದೇ ಕೆಲಸಕ್ಕೆಂದು ಜನ್ಮ ತಾಳಿತು— ಆ ಕೆಲಸ ಮಾಡುತ್ತಿದೆ— ಮಾಡಿದುದರ ಅರಿವೂ ಬಂದಿದೆ.

ಈ ಏಳು ವರುಷ ಅದು ಬದುಕಿ ಬಾಳಬೇಕಾದರೆ ಏಜೆಂಟರ ಪ್ರಾಮಾಣಿಕತೆಯೂ ಬಲವಾದ ಕಾರಣ. ಇಂದಿನ ಸಮಾರಂಭದ ಕಾರಣವಾದರೂ ಏಜೆಂಟರೊಬ್ಬರ ಸ್ವಾರ್ಥತ್ಯಾಗಕ್ಕಾಗಿ ಸನ್ಮಾನ ಮಾಡುವುದಾಗಿದೆ. ಅನೇಕ ಏಜೆಂಟರು ಪ್ರಾಮಾಣಿಕತನದಿಂದ ಕಾರ್ಯ ಮಾಡಿದ್ದಾರೆ; ಆದರೆ ಮುಂಬಯಿಯ ಏಜೆಂಟರಾದ

ಶ್ರೀ. ಹೊ. ಸೋಮನಾಥರವರು ಮಾಡಿದ ಕಾರ್ಯದ ರೀತಿಯೆ ಬೇರೆ ಮಟ್ಟದ್ದು— ಮೇಲಿನ ಮಟ್ಟದ್ದು.

ಕೇವಲ ಕನ್ನಡದ ಪ್ರೇಮದ ಮೂಲಕ, ನಾಡಿನ ಸೇವೆ ಮಾಡುವ ಹಿರಿಯ ಹುಚ್ಚುಹಂಬಲದ ಮೂಲಕ ಅವರು ಇಲ್ಲಿಯತನಕ ಒಂದು ಕಾಸು ಕೂಡ ಕಮಿಶನ್ ತೆಗೆದುಕೊಳ್ಳದೆ 'ಜಯಂತಿ'ಯ ಏಜೆನ್ಸಿ ನಡೆಯಿಸಿದ್ದಾರೆ, ಪ್ರಸಾರ ಮಾಡಿದ್ದಾರೆ. ಎಲ್ಲರೂ ಹಾಗೆಯೆ ಮಾಡಬೇಕೆಂದಲ್ಲ; ಆದರೆ ಅವರು ಮಾಡಿದುದು, ಕನ್ನಡ ನಾಡಿನಲ್ಲಿ ಅಲ್ಲಲ್ಲಿ ಮಿನುಗುತ್ತಿರುವ ಸ್ವಾರ್ಥತ್ಯಾಗಿಗಳನ್ನು ತೋರಿಸುವುದು— ಎಂದು ಹೇಳಲೇಬೇಕು.

ಅವರ ಕಾರ್ಯವನ್ನು ನೆನೆದು, ಅವರ ಸಂಬಂಧವು ಇನ್ನು ಮುಂದೆಯೂ ಬೆಳೆಯಲೆಂದು—ಸ್ನೇಹದ ಗುರುತೆಂದು— ಜಯಂತಿಯ ಪರವಾಗಿ ಇಂದು ಅವರಿಗೆ ಒಂದು ಮೆಚ್ಚನ್ನು ಕೊಡುವುದಿದೆ. ಆ ಕಾರ್ಯವನ್ನು ಅಧ್ಯಕ್ಷರಾದ ಶ್ರೀ ಮಹಾಶಬ್ದೆಯವರು ಮಾಡುತ್ತಾರೆ.......

....ಇನ್ನು ಮುಂದೆ ಒಂದೆ ಒಂದು ಮಾತನ್ನು ಹೇಳಿ ನನ್ನ ಭಾಷಣ ಮುಗಿಸುತ್ತೇನೆ. ನಿನ್ನೆ–ಇಂದಿನ ಮಾತಾಯಿತು. ನಾಳೆಯ ನಾಡು ಅನೇಕ ತರದ ಏರಾಟ-ಹೋರಾಟಗಳಿಂದ ತುಂಬಿದುದಾಗುವುದು. ಅಂತಹ ಪ್ರಸಂಗದಲ್ಲಿ ಜಯಂತಿ ಮುಂದೆ ಬರಬೇಕಾಗಿದ್ದರೆ, ಅದಕ್ಕೆ ಜನದ ಬೆಂಬಲ ಬೇಕು. ಇದುವರೆಗೆ ಮನೆಯ ಮಗುವೆಂದು ಮುದ್ದಾಡಿ ಬೆಳಸಿದುದಾಯಿತು, ಬಾಲಗ್ರಹದ ಬೇನೆಯನ್ನು ದಾಟಿ ಮುಂಬರಿಯಿತು. ಎಂಟು ವರುಷವೂ ತುಂಬಲು ಬಂದಿದೆ. ಇನ್ನು ಮುಂದೆ ಅದು ಕೇವಲ ಮನೆಯಮಗುವಾಗಿ ಮುದ್ದಾಟಕ್ಕೆ ಉಳಿಯದೆ, ಸಮಾಜದ ಸೊತ್ತಾಗಬೇಕು. ಸಮಾಜವು ಅದರ ಪಾಲನೆ-ಪೋಷಣೆಯ ಹೊಣೆ ಹೊರಬೇಕು. ಇದನ್ನು ಮಾಡಿಸುವುದು ಏಜಂಟರ ಕಾರ್ಯ. ಓದುಗರ ಮತ್ತು ಪತ್ರಿಕೆಯ ನಡುವೆ ಸಂಬಂಧ ಬೆಳೆಯಿಸುವವರೆ ಏಜೆಂಟರು. ಅವರು ಹೆಚ್ಚಿನ ಹೊಣೆ ಹೊತ್ತು ಮುಂದೆ ಬಂದು ಪ್ರಚಾರ ಮಾಡಿದರೆ, 'ಜಯಂತಿ' ಬೆಳಗೀತು; ಇದುವರೆಗೆ ಮಾಡಿದ ಕೆಲಸಕ್ಕೆ ನೂರುಮಡಿ ಕೆಲಸ ಮಾಡೀತು!"

ಶ್ರೀ. ರಂಗನಾಥರ ಭಾಷಣವಾದ ಬಳಿಕ ಅಧ್ಯಕ್ಷರು ಶ್ರೀ. ಹೊ. ಸೋಮನಾಥರಿಗೆ ಮೆಚ್ಚನ್ನು ಸಲಿಸಿದರು. ತಮ್ಮ ಸಮಾರೋಪದ ಮಾತುಗಳನ್ನು ಈ ರೀತಿ ಹೇಳಿದರು: "ಶ್ರೀ ನೆಗಳೂರ ರಂಗನಾಥರು ಜಯಂತಿಯ ಏಳು ವರುಷದ ಇತಿಹಾಸವನ್ನೂ ಎಂಟನೆಯ ವರುಷದ ಹಂಚಿಕೆಯನ್ನೂ ಹೇಳಿದ್ದಾರೆ. ಅದನ್ನು ಕೇಳಿ ನನಗೆ ನಿಜವಾಗಿಯೂ ಆನಂದವಾಗಿದೆ. ಈ ಅವಧಿಯಲ್ಲಿಯೂ ಜಯಂತಿಯಂಥ ಪತ್ರಿಕೆಯು ಅನೇಕ ತೊಂದರೆಗಳನ್ನು ದಾಟಿ ಜನಮನವನ್ನು ಹಿಡಿದು ಬದುಕಿದೆಯೆಂಬುದು ಸಾಹಸದ ಮಾತು. ಈಗ ಯುದ್ಧ ಮುಗಿಯಬಂದಿದೆ. ಇನ್ನು ಮುಂದೆ ಕನ್ನಡ ನಾಡಿನಲ್ಲಿ ಜಯಂತಿಯಂಥ ಅನೇಕ ಪತ್ರಿಕೆಗಳು ಹೊರಡಬೇಕು. ಸದ್ಯಕ್ಕೆ ಕನ್ನಡ ನಾಡಿನಲ್ಲಿ ಅಷ್ಟು ಪತ್ರಿಕೆಗಳು ಇಲ್ಲ. ಈ ಅವಸ್ಥೆಯು ದೂರವಾಗಿ, ಅನೇಕ ಮಾದರಿಯ ಪತ್ರಿಕೆಗಳು ಹೊರಡಲಿ, ಅವು 'ಜಯಂತಿ'ಯಂತೆ ತೇಜಸ್ವಿಯಾದ ವಿಚಾರಪರಂಪರೆಯನ್ನು ಬೀರಲಿ ಎಂದು ಹಾರಯಿಸುತ್ತೇನೆ.......

ಮತ್ತು ನನ್ನನ್ನು ಈ ಗೌರವದ ಸ್ಥಾನಕ್ಕೆ ಕರೆಯಿಸಿದುದಕ್ಕೆ ನಿಮ್ಮೆಲ್ಲರನ್ನು ವಂದಿಸಿ, ಹೆಚ್ಚಾಗಿ ಶ್ರೀ ಎಚ್. ಎಸ್. ಪಾಟೀಲರನ್ನು ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ."

ಬಳಿಕ ಮೊಗವೀರ ಕಾರ್ಯಕರ್ತರಾದ ಶ್ರೀ. ಕುಂದರನ್ನರು 'ಜಯಂತಿ'ಯ ಬಗೆಗಿರುವ ಜನಾದರವನ್ನು ವ್ಯಕ್ತಮಾಡಿ, ಶ್ರೀ. ಹೊ. ಸೋಮನಾಥರನ್ನು ಈ ಮಾತುಗಳಿಂದ ಪರಿಚಯ ಮಾಡಿಕೊಟ್ಟರು:—

"ಶ್ರೀಯುತರು ಇನ್ನೂ ಎಳೆಯರು. ಇನ್ನೂ ೨೦ ವರ್ಷ ತುಂಬಿರಬಹುದೋ ಇಲ್ಲವೋ ಅಷ್ಟೆ. ಮುಂಬಯಿಯ ಹೈಸ್ಕೂಲು ಒಂದರಲ್ಲಿ ಇಂಗ್ಲಿಷ್ ಐದನೆಯ ಈಯತ್ತೆಯಲ್ಲಿ ಓದುತ್ತಿದ್ದಾರೆ. ಹಗಲು ಕಾರಕೂನ, ರಾತ್ರಿ ವಿದ್ಯಾರ್ಥಿ; ಹೀಗೆ ಹೊಟ್ಟೆ–ಓದುಗಳೆರಡನ್ನೂ ನಡೆಸಿಕೊಂಡು ಬಂದಿದ್ದಾರೆ. ಬಿಡುವಿನಲ್ಲಿ ಬೇರೆ ಚಟುವಟಿಕೆಗಳೂ ಇವೆ. ಓದಿನಲ್ಲಿ ಎತ್ತಿದ ಕೈ. ನಾಟಕಾಭಿನಯ ಕಲೆಯಲ್ಲೂ ಅಭಿರುಚಿಯುಂಟು. ಚಿಕ್ಕಂದಿನಲ್ಲೆ ಭೂಮಿಕೆ ವಹಿಸಿ ಮೆಚ್ಚುಗೆ ಪಡೆದಿದ್ದಾರೆ. ಕನ್ನಡ ನಾಡು-ನುಡಿ ಎಂದರೆ ತುಂಬ ಪ್ರೇಮ, ಅಭಿಮಾನ. ಲೇಖನ, ಕವಿತೆ ಗೀಚುವುದೂ ಉಂಟು. ಅದಕ್ಕೆ ಬೇಕಾದ ಹುರುಪು ಇದೆ, ಪರಿಶ್ರಮ ಇದೆ. ಮುಂದೆ ಒಂದು ಹದಕ್ಕೆ ಬಂದೀತು ಆ ಕಲೆ. ಮಂಗಳೂರು ತಾಲೂಕಿನಲ್ಲಿದೆ ಹೊಸಬೆಟ್ಟು. ಅದು ಇವರ ಹುಟ್ಟೂರು. ಇವರ ತಂದೆ ಆ ಊರ ಗುರಿಕಾರ— ಮುಖ್ಯಸ್ಥ. ಅಣ್ಣ ಮೊಗವೀರ ಯುವಕ ಸಂಘದ ಒಳ್ಳೆಯ ಕೆಲಸಗಾರರು. ನಾಲ್ಕು ಜನರಿಗಾಗಿ ಬಾಳಬೇಕೆನ್ನುವ ಸಂಸ್ಕಾರ, ತಂದೆ-ಅಣ್ಣ ಅವರಿಂದ ಇವರ ಮೇಲೂ ಒಳತಾಗಿ ಬಿದ್ದಿದೆ. ಯುವಕ ಸಂಘದಿಂದ ನಡೆಯಿಸಲ್ಪಡುವ ಕನ್ನಡದ ಒಂದು ಆದರ್ಶಸಂಸ್ಥೆಯಾದ 'ಕರ್ನಾಟಕ ವಾಚನಾಲಯ ಮತ್ತು ಪುಸ್ತಕ ಭಾಂಡಾರ'ದ ಗೌರವ ಲೈಬ್ರೇರಿಯನರಾಗಿ ಸದ್ಯ ಕೆಲಸ ಮಾಡುತ್ತಿದ್ದಾರೆ. ಮುಂದೆ ಇವರಿಗೊಂದು ಒಳ್ಳೆಯ ಭವಿಷ್ಯ ಕಾದಿದೆಯೆಂದು ಹೇಳಲು ಅಡ್ಡಿಯಿಲ್ಲ. ಜಯಂತಿಯ ಕೆಲಸವನ್ನು ಇವರು ಕೇವಲ ಕನ್ನಡದ ಪ್ರೀತಿ-ಅಭಿಮಾನಗಳ ಮೂಲಕವೇ ಮಾಡುತ್ತಿದ್ದಾರೆಂಬುದನ್ನು ನಾನು ಸಂಪೂರ್ಣವಾಗಿ ಬಲ್ಲೆನು."

ಅನಂತರ ಅಂದಿನ ಕಾರ್ಯಕ್ರಮದ ಹೊಣೆಗಾರರಾದ—ಜಯಂತಿ ಸಂಪಾದಕ ಸಮಿತಿಯಲ್ಲಿಯ— ಶ್ರೀ ಎಚ್. ಎಸ್. ಪಾಟೀಲರು ಅತಿಥಿಗಳಿಗೆ, ಸೋಮನಾಥರಿಗೆ ಪೂಮಾಲೆ ಅರ್ಪಿಸಿ ಆಭಾರ ಮನ್ನಿಸಿದರು. ಕೃತ್ಯಪಾನೀಯದೊಂದಿಗೆ ಅಂದಿನ ಸಮಾರಂಭ ಮುಗಿಯಿತು.

ನಾಲ್ಕೂ ನಿಟ್ಟಿನ ನೋಟ

ನಿರಂಕುಶ ಆಶೆ

ಈ ನೋಟ ವಾಚಕರ ಕೈಸೇರುವಷ್ಟರಲ್ಲಿ ವೈಸರಾಯ್ ವೇವೆಲ್‍ರು ಲಂಡನಿನಿಂದ ಮರಳಿ ಬರಬಹುದಾಗಿದೆ. ಮಾರ್ಚ್ ತಿಂಗಳ ಕೊನೆಗೆ ಅಕಸ್ಮಾತ್ತಾಗಿ ವೇವೆಲ್ ಸಾಹೇಬರು ಲಂಡನಿಗೆ ಹೋದಂದಿನಿಂದ, ರಾಜಕಾರಣದ ವಾತಾವರಣದಲ್ಲಿ ತರ್ಕ-ವಿತರ್ಕಗಳ ತಾಂಡವ ನಡೆದಿದೆ. ಯುದ್ಧದ ಮತ್ತು ದೊಂಬಿಯ ಕಾಲದಲ್ಲಿಯೆ ಅಧಿಕಾರಸೂತ್ರವನ್ನು ವಹಿಸಿದ್ದಕ್ಕಾಗಿ ಹೊಣೆಯ ಪರಿಶ್ರಮವನ್ನು ಕಳೆದುಕೊಳ್ಳುವುದಕ್ಕಾಗಿ ಎಂಬುದರಿಂದ, ರಾಜಕೀಯ ಬಿಕ್ಕಟ್ಟನ್ನು ಬಿಡಿಸುವರೆಂಬುದರ ವರೆಗೆ ವೇವೆಲ್‍ರ ಯಾತ್ರೆಗೆ ಜನರೂ ಪತ್ರಿಕೆಗಳೂ ಮುಂದಾಳುಗಳೂ ಸಮಾಧಾನಗಳನ್ನು ಕಾಣಿಸುತ್ತಿದ್ದಾರೆ. ನಮ್ಮ ದೇಶದ ಈ ಪ್ರತಿಕ್ರಿಯೆಯನ್ನು ನೋಡಿದರೆ ಒಂದು ಮಾತು ಸ್ಪಷ್ಟವಾಗುವುದು; ದೇಶದಲ್ಲಿಯ ಗವರ್ನರರ ಮತ್ತು ಆರ್ಡಿನನ್ಸುಗಳ ಅನಿಯಂತ್ರಿತ ಆಡಳಿತ ಎಲ್ಲರಿಗೂ ಸಾಕುಸಾಕೆನ್ನಿಸಿದೆ. ಜನತೆಗೆ ಹೊಣೆಗಾರರಾದ, ಲೋಕನಿಯುಕ್ತ ಮಂತ್ರಿಮಂಡಳಗಳ ಆಡಳಿತ ಎಲ್ಲರಿಗೂ ಅನಿವಾರ್ಯವೆನ್ನಿಸಿದೆ. ಕೇಂದ್ರ ಶಾಸನಸಭೆಯ ಚಟುವಟಿಕೆಗಳನ್ನು ನೋಡಿದರೆ, ಈ ವಿಷಯದಲ್ಲಿ ಕಾಂಗ್ರೆಸ್ ಮತ್ತು ಲೀಗದ ಬುದ್ಧಿವಂತರ ಐಕಮತ್ಯ ಕಂಡುಬರುವುದು. ಸರಕಾರವನ್ನು ಶಾಸನಸಭೆಯಲ್ಲಿ ಸೋಲಿಸುವಾಗ ತೋರಿಸುವ ಐಕ್ಯವನ್ನು, ಯುದ್ಧಕಾಲದಲ್ಲಾದರೂ ರಾಷ್ಟ್ರೀಯ ಸರಕಾರವನ್ನು ರಚಿಸಲು ಈ ಪಕ್ಷಗಳು ತೋರಿಸಬಹುದಲ್ಲ—ಎಂಬ ಆಶೆ ಹುಟ್ಟಿದೆ. ಈ ಆಶೆಯ ವಾತಾವರಣದಲ್ಲಿ ವೈಸರಾಯರು ಅವಸರವಸರವಾಗಿ, ಅಕಸ್ಮಾತ್ತಾಗಿ, ಸಮುಕ್ಷಮ ಲಂಡನಿಗೆ ತೆರಳಿದ್ದರಿಂದ ಆಶೆ ನಿರಂಕುಶವಾಗಿದೆ.

ಬದಲಾವಣೆ ಎಂದರೆ ಸುಧಾರಣೆಯಲ್ಲ!

ಒಂದು ಮಾತು ಸ್ಪಷ್ಟವಿದೆ. ವೇವೆಲ್ ಸಾಹೇಬರು ವೈಸರಾಯ ಪದಕ್ಕೆ ಮರಳಿ ಬರುವುದಾದಲ್ಲಿ, ಇಂದಿನ ರಾಜಕೀಯ ವಾತಾವರಣವು ಬದಲಾಯಿಸಲೇ ಬೇಕು. ಇಷ್ಟಕ್ಕೆ ಕಾಂಗ್ರೆಸ್ ಮತ್ತು ಬ್ರಿಟಿಶ್ ಸರಕಾರಗಳಲ್ಲಿ ಸಂಧಾನವಾಗುವುದು ಎಂದು ಮಾತ್ರ ನಾವು ನಂಬಬೇಕಾಗಿಲ್ಲ. ಎಂದಿಗಿಂತಲೂ ಇಂದು ದೇಶದಲ್ಲಿ ರಾಜಕೀಯ ಪಕ್ಷಗಳ ಸಂಖ್ಯೆ ಬೆಳೆದಿದೆ. ಇದಲ್ಲದೆ ತತ್ತ್ವವನ್ನು ಬದಿಗಿಟ್ಟು ಸರಕಾರದೊಡನೆ ಸಹಕರಿಸಲು ಸಿದ್ಧವಾದ ಕೆಲವು ರಾಜಕೀಯ ಪಕ್ಷಗಳೂ ಇವೆ. ಇದರ ಜೊತೆಗೆ ಕಾಂಗ್ರೆಸು ಅಧಿಕಾರಕ್ಕೆ ಬಾರದಂತೆ ಯತ್ನಿಸಿ ನಡೆದುಕೊಳ್ಳುವ ಪಕ್ಷಗಳೂ ಇವೆ. ಈ ಪರಿಸ್ಥಿತಿಯಲ್ಲಿ ಬರಿಯ ರಾಜಕೀಯ ಬದಲಾವಣೆ ಎಂದ ಮಾತ್ರಕ್ಕೆ ಪರಿಸ್ಥಿತಿ ಸುಧಾರಿಸುವುದೆಂದು ನಂಬುವಂತಿಲ್ಲ. ಯುರೋಪದ ಯುದ್ಧ ಮುಗಿದರೂ, ಹಿಂದುಸ್ತಾನದ ಮಟ್ಟಿಗೆ ಮಾತ್ರ ಬ್ರಿಟಿಶರ ಯುದ್ಧಪರಿಸ್ಥಿತಿಯು ನವ ಮುಗಿದಂತಾಗುವುದಿಲ್ಲ. ಯಾಕೆಂದರೆ, ಜಪಾನದೊಡನೆ ಇನ್ನೂ ನಿಕರದ, ನಿರ್ಣಾಯಕ ಯುದ್ಧ ಡೆನಿಯಬೇಕಾಗಿದೆ; ಆ ಯುದ್ಧನಾಟಕಕ್ಕೆ ಹಿಂದುಸ್ತಾನವೆ ನೇಪಥ್ಯಗೃಹ. ಇಡಿಯ ಜನ್ಮ ಯುದ್ಧನೀತಿಯನ್ನು ಬಲ್ಲವರಾದ ವೇವೆಲ್ ದೊರೆಗಳು ಹೆಚ್ಚಾಗಿ ಈ ಯುದ್ಧಪರಿಸ್ಥಿತಿಯನ್ನೇ ಚರ್ಚಿಸಲು ಹೋಗಿದ್ದರೆ ಆಶ್ಚರ್ಯದ ಮಾತಾಗದು. ಆ ಪರಿಸ್ಥಿತಿಗೆ ಅನಿವಾರ್ಯವಾಗಿ ಅನುಕೂಲವಾಗುವಂತಹ ರಾಜಕೀಯ ಬದಲಾವಣೆಗಳಾದರೂ ಆಶ್ಚರ್ಯದ ಮಾತೆನ್ನಿಸದು. ಯಾವುದೆ ಇರಲಿ, ಯುದ್ಧ ಮುಗಿವವರೆಗೆ ಮಹತ್ತ್ವದ ರಾಜಕೀಯ ಬದಲಾವಣೆ ಒಂದೂ ಆಗುವಂತಿಲ್ಲ ಎಂದು ವೇವೆಲ್ ಸಾಹೇಬರೆ ಖಂಡತುಂಡಾಗಿ ಹೇಳಿದ್ದನ್ನು—ಅನೇಕ ಸಲ ಹೇಳಿದ ಮಾತನ್ನು—ನಾವು ಮರೆಯುವಂತಿಲ್ಲ. ವೇವೆಲ್ ಸಾಹೇಬರ ಆ ಅಭಿಪ್ರಾಯವು ಬದಲಾದ ಯಾವ ಲಕ್ಷಣವೂ ಇಲ್ಲದವರೆಗೆ, ಇನ್ನು ಬರಬಹುದಾದ ರಾಜಕೀಯ ಬದಲಾವಣೆಗಳಿಗಾಗಿ ನಾವು ಆನಂದಪಡದೆ ಎಚ್ಚರಾಗಿರಬೇಕಾಗಿದೆ. ಹಿಂದಿನ ಅನುಭವದಿಂದ ಹೇಳುವುದಾದರೆ, ಕಾಂಗ್ರೆಸಿನ ಕಟ್ಟನ್ನು ಮುರಿಯುವಂತಹ ಬದಲಾವಣೆ ಬಾರದಂತೆ ನಾವು ಜಾಗರೂಕರಾಗಿರಬೇಕಾಗಿದೆ.

‘ತಾತ್ಪೂರ್ತಿಕ ಸ್ವರಾಜ್ಯ’

ವೇವೆಲ್ ಸಾಹೇಬರ ವಿಚಾರಗಳನ್ನು ಚೆನ್ನಾಗಿ ಅರಿತುಕೊಂಡಲ್ಲಿ ಒಂದೆರಡು ಮಾತುಗಳನ್ನು ಧೈರ್ಯವಾಗಿ ಸಿದ್ಧಾಂತಿಸಬಹುದಾಗಿದೆ. ಒಂದು, ‘ಪಾಕಿಸ್ತಾನವು ಅವ್ಯವಹಾರ್ಯ, ಜಪಾನದಂತಹ ಪ್ರಬಲ ರಾಷ್ಟ್ರವನ್ನು ಎದುರಿಸುವಾಗಂತೂ ಘಾತಕ’ ಎಂದು ಸಾಹೇಬರು ಸ್ಪಷ್ಟವಾಗಿ ಹೇಳಬಹುದಾಗಿದೆ. ಹೀಗೆ ಹೇಳಿದ ಮಾತ್ರಕ್ಕೆ ಪಾಕಿಸ್ತಾನದ ಪೀಡೆ ತೊಲಗಿದಂತಾಗದೆ, ಮುಸಲ್ಮಾನರ ಅಸಂತೋಷ ಮಾತ್ರ ಹೆಚ್ಚಾಗಿ ದೇಶದಲ್ಲಿ ಅನೈಕ್ಯವು ಬೆಳೆಯುವುದು. ಎರಡನೆಯದಾಗಿ, ‘ಕಾಂಗ್ರೆಸು ನಿಜವಾಗಿಯೆ ಜಪಾನದ ಶತ್ರುವಾಗಿದ್ದರೆ ಈಗ ಅದು ಮುಂದಾಗಿ ಯುದ್ಧಪ್ರಯತ್ನದಲ್ಲಿ ಧುಮುಕಲಿ, ಪ್ರಾಂತಗಳಲ್ಲಿ ಮತ್ತು ಕೇಂದ್ರದಲ್ಲಿ ಅಧಿಕಾರವನ್ನು ವಹಿಸಲಿ’ ಎಂದೂ ಸಾಹೇಬರು ಚಾತಾಕ್ಷತೆಯಿಂದ ಹೇಳಬಹುದಾಗಿದೆ. ಮೂರನೆಯದಾಗಿ, ಕಾಂಗ್ರೆಸು ಮತ್ತು ಲೀಗವು ಈ ಮಾತುಗಳನ್ನು ಒಪ್ಪದಿದ್ದರೆ ಹಾಗೆ ಒಪ್ಪುವ ಬೇಕಾದ ಪಕ್ಷಕ್ಕೆ ‘ತಾತ್ಪೂರ್ತಿಕ ಸ್ವರಾಜ್ಯ’ವನ್ನು ಕೊಡಲು ವೇವೆಲ್ ಸಾಹೇಬರೆ ಧೈರ್ಯ ಮಾಡಬಹುದಾಗಿದೆ. (ಇದರಲ್ಲಿ ಮುಖ್ಯವಾದ ಮಾತೆಂದರೆ ಯುದ್ಧಕಾಲದಲ್ಲಿ ಕೂಡ ಕಾಂಗ್ರೆಸ್-ಲೀಗಗಳು ಒಂದಾಗದಂತಹ ವಾತಾವರಣವನ್ನು ಹುಟ್ಟಿಸುವುದು.) ಕೊನೆಯದಾಗಿ, ಬರಬಹುದಾದ ಪರಿಸ್ಥಿತಿಯ ಹೊಣೆಯನ್ನು ಹೆಚ್ಚಾಗಿ ಹಿಂದೀಯರ ಮೇಲೆ ಹೊರಿಸುವುದು.

ಭೆಟ್ಟಿಯ ಹಿನ್ನೆಲೆ

ಇಂದಿನ ಪರಿಸ್ಥಿತಿಯಲ್ಲಿ ವೇವೆಲ್ ಸಾಹೇಬರೇ ಲಂಡನಿಗೆ ನುಗ್ಗಿದ್ದಾರೆಯೊ ಇಲ್ಲವೆ ಅಮೇರಿ ಸಾಹೇಬರೆ ಅವರನ್ನು ಲಂಡನಿಗೆ ಎಳೆದಿದ್ದಾರೆಯೊ ಹೇಳಲಾಗದು. ಯುರೋಪದ ಯುದ್ಧದ ಕೊನೆ ನಿಶ್ಚಿತವಾದೊಡನೆ, ಅದೇ ಕಾಲಕ್ಕೆ ಇಂಗ್ಲೆಂಡಿನ ಪಾರ್ಲಮೆಂಟಿನ ಚುನಾವಣೆಯೂ ನಿಶ್ಚಿತವಾದೊಡನೆ, ವೇವೆಲ್ ಸಾಹೇಬರು ಲಂಡನಗೆ ಹೋಗಿದ್ದಾರೆ. ವೈಸರಾಯರನ್ನು ಅವಸರದಿಂದ ಲಂಡನಿಗೆ

ಕಳುಹಿಸುವಂತಹ ಯಾವ ಮಹತ್ತ್ವದ ಘಟನೆಯೂ ಹಿಂದುಸ್ತಾನದಲ್ಲಿ ಜರುಗಿಲ್ಲ. **ವೈಸರಾಯರ ಪ್ರಯಾಣಕ್ಕೆ ಹಿಂದುಸ್ತಾನದಲ್ಲಿಯ ಘಟನೆಗಿಂತ ಯುರೋಪ-ಇಂಗ್ಲಂಡುಗಳಲ್ಲಿಯ ಪರಿಸ್ಥಿತಿಯೆ ಬಲವಾದ ಕಾರಣ ಎಂಬುದು ಅತ್ಯಂತ ಮಹತ್ತ್ವದ ಸಂಗತಿಯಾಗಿದೆ.** ಯುರೋಪದ ಯುದ್ಧ ಮುಗಿದೊಡನೆ ಸಾವಿರಾರು ಬ್ರಿಟೀಶರು ಕ್ರಮೇಣ ಸೈನ್ಯದಿಂದ ವಿಸರ್ಜನೆಯನ್ನು ಪಡೆಯುವರು; ಕ್ರಮೇಣ ಅವರು ತಮ್ಮ ನಾಗರಿಕ ವೃತ್ತಿಯನ್ನು ಮತ್ತೆ ಕೈಕೊಳ್ಳುವರು; ಇಂಗ್ಲಂಡದ ಔದ್ಯೋಗಿಕ ವೃತ್ತಿಯು ಮತ್ತೆ ಪ್ರಾರಂಭವಾಗುವುದು. ಈ ಸರಿಸ್ಥಿತಿಯಲ್ಲಿ ಸೈನ್ಯದಿಂದ ವಿಸರ್ಜನೆ ಪಡೆದ ಸಾವಿರಾರು ಜನರಿಗೆ ಇಂಗ್ಲಂಡದ ನಾಗರಿಕ ಜೀವನದಲ್ಲಿಯ ಸ್ಥಾನ ದೊರೆಯುವುದು ದುಸ್ತರ. ಉದ್ಯೋಗದಲ್ಲಿ ಹಿಂದುಳಿದ ಹಿಂದುಸ್ತಾನದಲ್ಲಿ ಅಂತಹ ಸಾವಿರಾರು ಜನರಿಗೆ ಆಸರ–ಅವಕಾಶ ದೊರೆಯಬಹುದಾಗಿದೆ. ದೇಶದ ರಾಜಕೀಯ ವಾತಾವರಣ ಸ್ತಿಮಿತಗೊಂಡರೆ ಮಾತ್ರ ಇದು ಸುಲಭಸಾಧ್ಯವಾಗುವುದು; ಅದರಂತೆಯೆ ಅಧಿಕಾರ ಸೂತ್ರ ಕೈಯಲ್ಲಿದ್ದರೆ ಮಾತ್ರ ಈ ಯೋಜನೆ ವ್ಯವಹಾರ್ಯವಾಗುವುದು. ಈ ವಿಚಾರದ ಹಿನ್ನೆಲೆಯಲ್ಲಿ ನಮ್ಮ ರಾಜಕೀಯ ವಾತಾವರಣ ಬದಲಾಯಿಸಬಹುದಾಗಿದೆ.

ಪಾರ್ಲಮೆಂಟಿನ ಚುನಾವಣೆ

ಇನ್ನೆರಡು ತಿಂಗಳ ಅವಧಿಯಲ್ಲಿ ಇಂಗ್ಲಂಡಿನ ಪಾರ್ಲಮೆಂಟದ ಹೊಸ ಚುನಾವಣೆಯಾಗಬಹುದಾಗಿದೆ. ಅಷ್ಟರಲ್ಲಿ ಯುರೋಪದ ಯುದ್ಧ ಮುಗಿದು ಹಳೆಯ ಮಾತಾಗಿರುವುದು. ಆಗ ಬ್ರಿಟಿಶ ಮತದಾರರ ಮುಂದೆ ಒಂದು ಪ್ರಶ್ನೆ ಅನಿವಾರ್ಯವಾಗಿ ಎದ್ದು ನಿಲ್ಲುವುದು. ಯುರೋಪದ ಯುದ್ಧವೆಂದರೆ ಸಮೀಪದ ಗಂಡಾಂತರ. ಅದನ್ನು ಗೆಲ್ಲಬೇಕಾಯಿತು. ಅದಕಾಗಿ ಅಪಾರ ಕಷ್ಟ-ನಷ್ಟಗಳನ್ನೂ ಜೀವನಾಶವನ್ನೂ ಸಹಿಸಬೇಕಾಯಿತು, ಅದನ್ನು ಸಹಿಸಿದ್ದೂ ಆಯಿತು. ಇಷ್ಟಾದ ಮೇಲೂ ಸಾವಿರಾರು ಮೈಲುಗಳಾಚೆ ನಡೆಯುವ ಜಪಾನದ ವಿರುದ್ಧದ ಯುದ್ಧದಲ್ಲೂ ಬ್ರಿಟಿಶ ನಾಗರಿಕರೆ ಸೈನಿಕರಾಗಿ ಹೋರಾಡಬೇಕೆ? ಅದು ಅನಿವಾರ್ಯವೆ? ಚೀನಾದೇಶವಿದೆ, ಹಿಂದುಸ್ತಾನವಿದೆ; ಜನಬಲ—ಧನಬಲ ಸಾಕಷ್ಟಿವೆ. ಈಗ ಈ ಯುದ್ಧದ ಹೊಣೆಯನ್ನು ಈ ಜನರೆ ಹೆಚ್ಚಾಗಿ ಹೊರಬಾರದೇಕೆ? ಮನೆ–ಮಾರು–ಮಡದಿ–ಮಕ್ಕಳು–ಜೀವಗಳನ್ನೆ ಕಳೆದುಕೊಂಡು, ಆರು ವರ್ಷಗಳ ವರೆಗೆ ಹೋರಾಡಿದ ಬ್ರಿಟಿಶ ನಾಗರಿಕನು ಹೀಗೆ ಪ್ರಶ್ನೆಗಳನ್ನು ಕೇಳುವುದು ಸಹಜವಿದ್ದಂತೆ ನ್ಯಾಯವೂ ಆಗಿದೆ. ಇತ್ತ ಚೀನೀಯರಾಗಲಿ, ಹಿಂದೀಯರಾಗಲಿ ಹೊಣೆಯನ್ನು ಹೊರಲು ಹೆದರಿಲ್ಲ, ಹಿಂಜರಿದಿಲ್ಲ. ಆದರೆ ಹಿಂದೀಯರದು ಮಾತ್ರ ಒಂದು ಮಹತ್ತ್ವದ ಪ್ರಶ್ನೆ ಇದೆ. ನಮಗೆ ಸಲ್ಲಬೇಕಾದ ಅಧಿಕಾರ ನಮ್ಮದಾದರೆ ನಾವು ಸ್ವಸಂತೋಷದಿಂದ ಹೊಣೆ ಹೊರಲು ಮುಂದೆ ಬರುವೆವು—ಎಂದು ಹಿಂದೀಯರು ಹೇಳುತ್ತಿದ್ದಾರೆ. ಅದಕಾಗಿ ಮತದಾರರಾದ ಬ್ರಿಟಿಶ ನಾಗರಿಕರನ್ನು ಒಲಿಸಿಕೊಳ್ಳುವುದಕ್ಕಾಗಿಯೆ ಚರ್ಚಿಲ್ ಅಮೆರಿ ಸಾಹೇಬರು—ತಮ್ಮ ತತ್ತ್ವಕ್ಕೆ ವಿರುದ್ಧವಾದಾಗ್ಯೂ—ಹಿಂದುಸ್ತಾನಕ್ಕೆ ಹೆಸರಿಗಾದರೂ, ಸದ್ಯಕ್ಕಾದರೂ ಅಧಿಕಾರವನ್ನು ಒಪ್ಪಿಸಲು ಸಿದ್ಧರಾಗಬಹುದಾಗಿದೆ. ಅಂತೂ ಮುಂಬರುವ ಬದಲಾವಣೆ ನಮಗೆ ಯೋಗ್ಯವಾದುದೆಂಬುದಕ್ಕಿಂತ ತಾತ್ಪೂರ್ತಿಕ ಪರಿಸ್ಥಿತಿಗಾಗಿ ಬ್ರಿಟಿಶರಿಗೆ ಅನಿವಾರ್ಯವಾದುದು ಎಂದು ಹೇಳಬಹುದು. ಮಹಾತ್ಮರು ಬಯಸುವ ಹೃದಯ ಪರಿವರ್ತನೆಗಿಂತ ಚರ್ಚಿಲ್‌ರು ಬಯಸುವ ಮತ–ಪರಿವರ್ತನೆಯೆ ಇಲ್ಲಿ ಮುಖ್ಯ ಕಾರಣವಾಗಿದೆ. ಇಂತಹ ಪರಿಸ್ಥಿತಿಯೇ ಆಶೆಯನ್ನಿಡುವುದೆಂಬರೆ ಅಜ್ಞಾನವನ್ನು ತೋರಿಸಿದಂತೆ. ದಾರಿ ಕಾಯುವುದಕ್ಕಿಂತ ನಮ್ಮನ್ನು ಕಾಯ್ದುಕೊಳ್ಳುವುದೆ ಬುದ್ಧಿವಂತಿಕೆಯ ಲಕ್ಷಣ.

ಸಪ್ರು ಸಮಿತಿ

ವೈಸರಾಯರ ಲಂಡನ ಭೆಟ್ಟಿಯಷ್ಟೇ ಇನ್ನೊಂದು ಮಹತ್ತ್ವದ ಘಟನೆ ಕಳೆದ ತಿಂಗಳು ಜರುಗಿದೆ. ಅದೆಂದರೆ ಸಪ್ರು ಸಮಿತಿಯ ಫಲಿತಾಂಶ. ವೈಸರಾಯರು ಎಷ್ಟು ಅವಸರದಿಂದ ಪ್ರಯಾಣವನ್ನು ಬೆಳಸಿದರೋ ಅಷ್ಟೆ ಅವಸರದಿಂದ ಈ ಸಮಿತಿಯವರೂ ತಮ್ಮ ನಿರ್ಣಯಗಳಿಗೆ ಮುಟ್ಟಿದರು. ಸಪ್ರು ಸಮಿತಿಯು ತನ್ನ ಮುಂದೆ ಎರಡು ವಿಷಯಗಳನ್ನಿಟ್ಟುಕೊಂಡಿದ್ದಿತು. ಒಂದು, ಕೂಡಲೆ ಯುದ್ಧಕಾಲದಲ್ಲೂ ಅಗತ್ಯವಾಗಿ ಮಾಡಬೇಕಾದ ರಾಜಕೀಯ ಬದಲಾವಣೆ. ಎರಡು, ಹಿಂದುಸ್ತಾನದ ಭಾವೀಘಟನೆ. ನಿಜವಾಗಿ, ಎರಡನೆಯ ವಿಷಯವನ್ನು ಈ ಸಮಿತಿಯು ಅಷ್ಟೊಂದು ಅಗತ್ಯವಾಗಿ ತನ್ನ ಮುಂದಿಟ್ಟುಕೊಂಡಿರಲಿಲ್ಲ. ಮುಖ್ಯವಾಗಿ, ಕಾಂಗ್ರೆಸ್-ಮುಸ್ಲಿಂ ಲೀಗಗಳನ್ನು ಹೊಂದುವಂತೆ ಮಾಡಿ, ಸದ್ಯದ ರಾಜಕೀಯ ಬಿಕ್ಕಟ್ಟನ್ನು ಬಿಡಿಸುವುದೇ ಈ ಸಮಿತಿಯ ಒಂದೇ ಒಂದು ಮುಖ್ಯವಾದ ಗುರಿಯಾಗಿದ್ದಿತು. ವೇವೆಲ್ ಸಾಹೇಬರು ರಾಜಕೀಯ ಬಿಕ್ಕಟ್ಟನ್ನು ಬಿಡಿಸುವುದಕ್ಕಾಗಿಯೆ ಲಂಡನಕ್ಕೆ ತೆರಳಿದ್ದಾರೆ ಎಂಬ ವಿಚಾರದಿಂದ ಸಮಿತಿಯವರು ತಮ್ಮ ನಿರ್ಣಯವನ್ನು ವೇವೆಲ್ ಸಾಹೇಬರಿಗೆ ತಂತಿಯಿಂದ ಕಳುಹಿದರು. ಈಗ ಆನುಷಂಗಿಕವಾಗಿ ಸಮಿತಿಯು ಭಾವೀ ಘಟನೆಯ ಬಗ್ಗೆಯೂ (ವಿವರವಾದ ವರದಿಯನ್ನಲ್ಲ, ಸಂಕ್ಷೇಪವಾಗಿ) ನಿರ್ಣಯಗಳನ್ನೆ ಮಾತ್ರ ಪ್ರಕಟಿಸಿದೆ. ವರದಿಯನ್ನು ಪೂರ್ತಿಯಾಗಿ ನೋಡದೆ ಈ ನಿರ್ಣಯಗಳನ್ನು ಯಾರೂ ಟೀಕಿಸಬಾರದೆಂದೂ ಸಮಿತಿಯ ಯೋಜಕರು ಕೇಳಿಕೊಂಡಿದ್ದಾರೆ. ಆದರೆ ವರದಿಯಂತೂ ಉಳಿಯಲಿ, ನಿರ್ಣಯಗಳು ಕೂಡ ಪ್ರಕಟವಾಗದ ಮುಂಚೆ ಜಿನಾ ಸಾಹೇಬರು ಸಮಿತಿಯ ಮೇಲೆ ಮೊದಲ ಗುಂಡನ್ನು ಹಾರಿಸಿದರು. ಆದಾದ ಮೇಲೆ ಮಿಕ್ಕವರೂ ವರದಿಯ ದಾರಿಯನ್ನು ಕಾಯದೆ ಸಪ್ರುಸಮಿತಿಯ ಈ ನಿರ್ಣಯಗಳನ್ನು ವಿಮರ್ಶಿಸಿ ತಮ್ಮ ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದಾರೆ. ಆದರೆ ನಾವು ಮಾತ್ರ ಸದ್ಯಕ್ಕೆ ಈ ನಿರ್ಣಯಗಳ ವಿಮರ್ಶೆಯನ್ನು ಮಾಡುವುದಿಲ್ಲ. ಯಾಕೆಂದರೆ, ಸದ್ಯದ ಪರಿಸ್ಥಿತಿಯಲ್ಲಿ—ಜಪಾನದೊಡನೆ ಯುದ್ಧ ನಡೆಯುವ ವರೆಗೆ—ಈ ನಿರ್ಣಯಗಳ ವಿಮರ್ಶೆ ಅಪ್ರಸ್ತುತ ಎಂದು ನಮ್ಮ ಅಭಿಪ್ರಾಯ. ಯುದ್ಧಕಾಲಕ್ಕಾಗಿ ಸದ್ಯದ ಬಿಕ್ಕಟ್ಟನ್ನು ಬಿಡಿಸುವುದಕ್ಕಾಗಿ ಸಮಿತಿಯು ಮಾಡಿದ ಯೋಜನೆ ಮುಖ್ಯವಾದದ್ದು. ಆ ಯೋಜನೆ ಬಹುಜನರಿಗೆ ಸಮ್ಮತವಾಗಲು ಅಡ್ಡಿ ಇಲ್ಲ ಎಂದು ನಮ್ಮ ಅಭಿಪ್ರಾಯ.

೨೩—೪—೪೫

ಸಾದರ ಸ್ವೀಕಾರ

೧೩೨ **ಪ್ರಾಣಿಶಾಸ್ತ್ರ** (ಪ್ರಥಮ ಪರಿಚಯ) ವಿಜ್ಞಾನ ವಿವೇಚನಾತ್ಮಕ ಗ್ರಂಥ. ಲೇಖಕರು ಡಾ. ಎ. ಸುಬ್ಬರಾವ್ ಬಿ. ಎ., ಡಿ. ಎಸ್‌ಸಿ. (ಲಂಡನ್) ಮತ್ತು ಶ್ರೀಮಾನ್ ಎ. ನಾರಾಯಣರಾವ್ ಎಂ. ಎಸ್ ಸಿ. ಅವರು. ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಗ್ರಂಥಮಾಲೆಯ ೨೦ನೆಯ ಗ್ರಂಥ. ಕ್ರಾ. ೮. ೧೩+೪೭೦ ಪುಟಗಳು. ಬೆಲೆ ೧-೮-೦.

೧೩೩. **ಸ್ತ್ರೀ ಹೃದಯ ಮತ್ತು ಇತರ ಕಥೆಗಳು.** (ಮೂರು ಸಣ್ಣಕತೆಗಳ ಸಂಕಲನ). ಲೇಖಕರು ಬೇರೆ ಬೇರೆ ಮೂವರು ಕತೆಗಾರರು. ಹಂಸ ಸಾಹಿತ್ಯ ಮಾಲೆಯ ೫ನೆಯ ಪುಷ್ಪ. ಪ್ರಕಾಶಕರು ಕೆನರಾ ಬುಕ್ಸ್ ಆಂಡ್ ನ್ಯೂಜ್ ಏಜನ್ಸಿ ಲಾಲಬಾಗ್—ಮುಂಬೈ. ಕ್ರಾ- ೮. ೩೨ ಪುಟಗಳು. ಬೆಲೆ. ೦-೬-೦.

ಇವರಲ್ಲಿ 'ಸ್ತ್ರೀ ಹೃದಯ' 'ಉತ್ತರ' 'ಗೋಪಾಲನ ಮರುಳು' ಎಂಬ ಕತೆಗಳಿದ್ದು, ಮೊದಲನೆಯದನ್ನು ಶ್ರೀ. ಕೆ. ಎಸ್. ಶೆಣೈ ಅವರೂ, ಎರಡನೆಯದನ್ನು ಉಡುಪಿಯ ಶ್ರೀ. ಹೊನ್ನೇಗೌಡರೂ, ಮೂರನೆಯದನ್ನು ಶ್ರೀ 'ನಾರಾಯಣ ಶಿವ' ಅವರೂ ಬರೆದಿದ್ದಾರೆ. ಮುಂಬಯಿಯಲ್ಲಿದ್ದು—ಚಿಕ್ಕ ಪ್ರಮಾಣದಲ್ಲಿಯೆ ಆಗಲೊಲ್ಲದೇಕೆ—ಕನ್ನಡ ಗ್ರಂಥಮಾಲೆ ತೊರಡಿಸಿ ನಡೆಯಿಸಿಕೊಂಡು ಬಂದಿರುವುದು ಅಭಿಮಾನದ ವಿಷಯವಾಗಿದೆ.

೧೩೪ **ನನ್ನ ಗೀತಗಳು** (ಕವನ ಸಂಗ್ರಹ) ಗೀತಕಾರರು ಶ್ರೀಮಾನ್ 'ಗೀತಾಪ್ರಿಯ' ಅವರು. ಶ್ರೀಮಾನ್ ದ. ಬಾ. ಜೋಶಿಯವರು ವಿಶದವಾದ ಮುನ್ನುಡಿ ಬರೆದಿದ್ದಾರೆ. ಪ್ರಕಾಶಕರು ಧಾರವಾಡದ ಸಾಧನ ಮುದ್ರಣಾಲಯದ ಒಡೆಯರಾದ ಶ್ರೀಮಾನ್. ಶೇ. ಗೋ. ಕುಲಕರ್ಣಿ ಅವರು. ಕ್ರಾ. ೮. ೧೬+೫೪ ಪುಟಗಳು. ಬೆಲೆ ೧-೦-೦.

೧೩೫ **ಮಧುರ ಮಿಲನ** (ಕಥಾಸಂಗ್ರಹ) ಬರೆದವರು ಬೇರೆ ಬೇರೆ ಕತೆಗಾರರು. ಪ್ರಕಾಶಕರು ನೈಜಾಮ್ ಇಲಾಖೆಗೆ ಸೇರಿದ ರಂಗಂಪೇಟೆ (ಸುರಪುರ)ಯ ಕನ್ನಡ ಸಾಹಿತ್ಯ ಸಂಘ. ರಾಯಲ್ ೧೬ ದ ೯೦ ಪುಟಗಳು. ಬೆಲೆ -೫-೦.

ಇದರಲ್ಲಿ ನಾಲ್ಕು ಸಣ್ಣಕತೆಗಳಿದ್ದು 'ನಾನು ನಿಜವಾದ್ದರೆ' ಎಂಬ ಮೊದಲನೆಯ ಕತೆಯನ್ನು ಶ್ರೀ. ನಗರ ಕೃಷ್ಣ ಇನಾಂದಾರರು ಬರೆದಿರುವರು. ಎರಡನೆಯದಾದ 'ಮದುವೆಯ ಹುಚ್ಚು' ಎಂಬುದನ್ನು 'ಕಮಲ ಸಂಭವ' ಕಾವ್ಯದ ಜಾಣ ಅವರು ಬರೆದಿದ್ದಾರೆ. '.........?' ಎಂಬ ಮೂರನೆಯ ಕತೆಯು ಶ್ರೀ. ಕೊಳ್ಳೂರ ಶ್ರೀನಿವಾಸಾಚಾರ್ಯ ಜಾಗಿರದಾರ ಅವರದು. ನಾಲ್ಕನೆಯ 'ಮಧುರಮಿಲನ' ಎಂಬುದು ಶ್ರೀ. ಶಿವಕುಮಾರ ಎಂಬವರದು. ನೈಜಾಮ್ ಕರ್ನಾಟಕದಲ್ಲಿ ಐತಿಹಾಸಿಕ ಕಾಲ ಸಾಹಿತ್ಯದ ಬಳಿಯ ಮುಂಬಿನ ಕಾಲ ನಾವರೂ, ವರ್ತಮಾನ ಕಾಲದ ಸಾಹಿತ್ಯದ ಬರಗಾಲದ ಬೀಡಾಗಿ ಪರಿಣಮಿಸಿದೆ. ಅಲ್ಲಿ ಕನ್ನಡದ ಎಚ್ಚರು ಇದೀಗ ಮೂಡುತ್ತಿರುವುದು ಸಂತೋಷದ ಸಂಗತಿ. ಈಗ ಅಲ್ಲಿ ಬರೆಯಬೇಕೆಂಬ ಹಂಬಲದಿಂದ ಹೊರಟ ತರುಣರ ಪ್ರಾರಂಭ ಪ್ರಯತ್ನಗಳನ್ನು ಕನ್ನಡಿಗರು ಆದರದಿಂದ ಸ್ವಾಗತಿಸಬೇಕು. ಈ ಪುಸ್ತಕದ ಪ್ರಕಟನೆಗೆ ಸ್ಥಳೀಯ ಕನ್ನಡಿಗರು ಉದಾರತನದಿಂದ ನೆರವನ್ನು ಕೊಟ್ಟಿರುವುದು ಆನಂದದ ಮಾತು. ರಂಗಂಪೇಟೆಯ ಕನ್ನಡಿಗರ ಸಂಘದಂತೆಯೇ ನೈಜಾಮ್ ಸಂಸ್ಥಾನದ ಮಿಕ್ಕ ಕಡೆಯ ಕನ್ನಡಿಗರೂ ಸಾಂಘಿಕವಾಗಿಯಾಗಲಿ, ವೈಯಕ್ತಿಕವಾಗಿಯಾಗಲಿ ಸಾಹಿತ್ಯನಿರ್ಮಾಣ ಮಾಡುತ್ತಿರಲೆಂದು ನಮ್ಮ ಹಾರಯಕೆ. ರಂಗಂಪೇಟೆಯ ಕನ್ನಡಿಗರ ಈ ಗ್ರಂಥ ಪ್ರಕಟನಾಕಾರ್ಯಕ್ಕಾಗಿ ಹೃತ್ಪೂರ್ವಕ ಅಭಿನಂದನೆಗಳು.

೧೩೬ **ಶೈಲಾಜಿ** (ಏಕಾಂಕ ನಾಟಕಸಂಗ್ರಹ) ಬರೆದವರು ಬೇರೆ ಬೇರೆ ಲೇಖಕರು. ಪ್ರಕಾಶಕರು ಶ್ರೀ. ದ. ಬಾ. ಕುಲಕರ್ಣಿ, ಮನೋಹರ ಗ್ರಂಥಭಾಂಡಾರ, ಧಾರವಾಡ. ಲಲಿತ ಸಾಹಿತ್ಯಮಾಲೆಯ ೧೧ನೆಯ ಕುಡಿಯಿದು. ಕ್ರಾ ೮. ೧೦೦ ಪುಟಗಳು; ಬೆಲೆ ೧-೪-೦.

ಇವರಲ್ಲಿಯ 'ಅತ-ಆಕೆ' ಎಂಬ ಸಾಂಸಾರಿಕ ಚಿತ್ರವನ್ನು ಚಿತ್ರದುರ್ಗದ ಶ್ರೀ. ಬಿ. ಕೆ. ರಾಮಚಂದ್ರರಾವ್ ಎಲ್ ಎಲ್ ಬಿ. ಅವರು ಬರೆದಿರುವರು. 'ಸತ್ಯವಂತರಾಯ' ಎಂಬ ಸ್ವಭಾವಚಿತ್ರವನ್ನು ಶ್ರೀ. ಬೇಂದ್ರೆ, ಲಕ್ಷ್ಮಣರಾಯರು ಸಹಜ ರಂಜಕರೀತಿಯಲ್ಲಿ ರೇಖಿಸಿರುವರು. ಶ್ರೀಮಾನ್ ಕೈಲಾಸದ ರಾಜಾರಾಯರ 'ಪಥ-ಪರಿತ್ರ' ಎಂಬ ನೃತ್ಯದ ಪರಮೋತ್ಕರ್ಷದ ಪರಿಣಾಮದ ಕೂಡಿದ್ದು ವಿಷಾದದಲ್ಲಿ ಕೊನೆಗೊಂಡಿದೆ. ಶ್ರೀ. ಎನ್. ಕೆ. ಕುಲಕರ್ಣಿಯವರ 'ದೀಪಾಳಿಯ ದರಸಂಗ್ರಹ' ಎಂಬುದು ಜಯಂತಿಯ ವಾಚಕರಿಗೆ ಹೊಸದಲ್ಲ. ಕೊನೆಯದಾದ 'ಶೈಲಾಜಿ' ಎಂಬುದನ್ನು ಶ್ರೀ. ಕಲ್ಯಾಣಿ ಗುರುರಾಯರು ಬರೆದಿದ್ದಾರೆ. ಇದರನ್ನು ಐತಿಹಾಸಿಕವೆನಿಸುವಂತೆ ಲೇಖಕರು ಪ್ರಯತ್ನ ಮಾಡಿದ್ದಾರೆ. 'ಏಕಾಂಕ ನಾಟಕ'ದ ಸಾಹಿತ್ಯ ತಂತ್ರಕ್ಕೆ ಇದರಲ್ಲಿಯ ಕೃತಿಗಳು ಹೊಂದಿ ನಿಲ್ಲದಿದ್ದರೂ ಎಲ್ಲವೂ ಲಲಿತವಾಗಿವೆ; ಮನೋಹರವಾಗಿವೆ.

೧೩೭ **ಸಾಹಿತಿ-ಕೈಚೀಲ** (ವಿವಿಧ ಸಂಗ್ರಹ) ಬರೆದವರು ಶ್ರೀ. 'ದೇವದಾಸ' ಗದಗ-ಬೆಟಗೇರಿ ಅವರು. ವಾಣೀ ಗ್ರಂಥಮಾಲೆಯ ಮೊದಲನೆಯ ಪ್ರಕಟನೆ. ಡೆ. ೮. ೮೨ ಪುಟಗಳು. ಬೆಲೆ ೦-೧೨-೦. ಪ್ರೊ. ಜಾಗಿರದಾರರ ಮುನ್ನುಡಿಯುಂಟು.

೧೩೮ **ವೀಣಾನಾದ** (ಕವನ ಸಂಗ್ರಹ) ಬರೆದವರು ಶ್ರೀಮಾನ್ ಎಸ್. ಎಸ್. ಬಸುಪಟ್ಟದ. ಮೇಲಿನ ವಾಣೀ ಗ್ರಂಥಮಾಲೆಯ ೬ನೆಯ ಕುಸುಮ ಕ್ರಾ. ೮. ೧೨+೫೬ ಪುಟಗಳು. ಬೆಲೆ ೧-೦-೦.

೧೩೯ **ಬೆಳ್ಳಿಯ ಹಬ್ಬ** (ಮೈಸೂರು ಮಹಾರಾಜರವರ ಕಾಲೇಜಿನ ಕರ್ನಾಟಕ ಸಂಘದ ಬೆಳ್ಳಿಯ ಹಬ್ಬದ ವರದಿ). ಡೆ. ೮. ೪೦ ಪುಟಗಳು.

೧೯೪೪ನೆಯ ಡಿಸೆಂಬರ್ ೧೬-೧೭ನೆಯ ತಾರೀಖು ಗಳಲ್ಲಿ ವಿಜೃಂಭಣೆಯಿಂದ ನಡೆದ ಈ ಸಮಾರಂಭದ ವರದಿ, ವಿವರ-ವಿವರವಾಗಿ ಇದರಲ್ಲಿ ಪ್ರಕಟವಾಗಿದೆ. ಕೆಲವು ಹಿರಿಯ ಸಾಹಿತ್ಯಿಕರ — ವಿದ್ಯಾರ್ಥಿಗಳ ಭಾಷಣಸಾರಗಳೂ ಇದರಲ್ಲಿ ಅಡಕವಾಗಿವೆ.

೧೪೦ **ವಾಕ್ಚಿತ್ರ** (ಮಾಸಪತ್ರಿಕೆಯ ವಾರ್ಷಿಕ ಸಂಚಿಕೆ). ಸಂಪಾದಕರೂ ಪ್ರಕಾಶಕರೂ ಶ್ರೀಮಾನ್ ಮಾ. ನಾ. ಚೌಡಪ್ಪ, 'ವಾಕ್ಚಿತ್ರ' ಕಾರ್ಯಾಲಯ, ೧೨೧ ಸುಲ್ತಾನ್ ಪೇಟೆ, ಬೆಂಗಳೂರು ಸಿಟಿ. ಕ್ರಾ. ೪ದ ೯೬ ಪುಟಗಳು, ಬೆಲೆ ೦-೮-೦.

ಚಲಚ್ಚಿತ್ರ ಪ್ರಪಂಚಕ್ಕೆ ಸೇರಿದ ಲೇಖನ, ಪ್ರಬಂಧ, ಹರಟೆ, ಕತೆ, ವಿಮರ್ಶೆ, ಚಿತ್ರಗಳಿಂದ ಕೂಡಿದ ಈ ಸಂಚಿಕೆಯ ಅಂತರಂಗ ಚಿತ್ತಾಕರ್ಷಕವಾಗಿದೆಯಷ್ಟೆ, ರಕ್ಷಾಪತ್ರದ ಬಣ್ಣದ ಚಿತ್ರವೂ, ಒಳಗಿನ ಸಿನೇಮಾ ಸಂದರ್ಭಚಿತ್ರಗಳೂ, ಮುದ್ರಣದ ಅಚ್ಚುಕಟ್ಟೂ ಕೂಡಿ ಬಹಿರಂಗವೂ ನಯನಮನೋಹರವಾಗಿದೆ. ಲೇಖಕ ವರ್ಗದಲ್ಲಿ ಶ್ರೀಮಾನ್ ನಾ. ಕಸ್ತೂರಿ, ಎಂ. ವಿ. ಸೀತಾರಾಮಯ್ಯ, ಟಿ. ಕೃಷ್ಣಸ್ವಾಮಿ, 'ಶ್ರೀರಂಗ', ಅ. ನ. ಕೃಷ್ಣರಾಯರು ಮೊದಲಾದ ಹೆಸರಾಂತ ಲೇಖಕರೂ ಇರುವರು. ಸಂಪಾದಕರಾದ ಶ್ರೀ. ಎಂ. ಎನ್. ಚೌಡಪ್ಪನವರ ಅನುಭವ ಪೂರ್ಣ ಸಂಪಾದಕತ್ವದಲ್ಲಿ 'ವಾಕ್ಚಿತ್ರ' ಒಳ್ಳೆಯ ಭವಿಷ್ಯವನ್ನು ತಲಪುವದೆಂದು ನಮ್ಮ ವಿಶ್ವಾಸ.

ಮುದ್ರಕರು:
ಶ್ರೀ. ಎಸ್. ಎಚ್. ಬೆಂಗೇರಿ, ವಿಜಯ ಮುದ್ರಣಾಲಯ, ಧಾರವಾಡ.

ಪ್ರಕಾಶಕರು:
ಶ್ರೀ. ಎಂ. ಬಿ. ಮೊಳ್ಳೆಗೇರಿ, ಜಯಂತಿ ಕಾರ್ಯಾಲಯ, ಧಾರವಾಡ.

R. No B. 4116

ದಿ ಯುನಾಯಿಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪನಿ, ಲಿ. ಧಾರವಾಡ

ಹೆಡ್ ಆಫೀಸ್ — ಧಾರವಾಡ

೧ ನೀವು ಮಾಡುವ ಇನ್ಶೂರೆನ್ಸು ಕರ್ನಾಟಕಸ್ಥರಿಂದ, ಸ್ಥಳದಿಂದ ಬೆಳೆಯುತ್ತಿರುವ ಈ ಕನ್ನಡ ಕಂಪನಿಯ ಪಾಲಿಸಿಯನ್ನೇ ಪಡೆಯಬೇಕು!

೨ [illegible] (Valuation) [illegible]

೩ [illegible] (Claim) [illegible]

೪ [illegible]

[illegible] ಧಾರವಾಡ [illegible]

ವಿಶೇಷ ವಿವರಕ್ಕೆ ಬರೆಯಿರಿ :

ಎಂ. ಗೋವರ್ಧನದಾಸ, ಮ್ಯಾನೇಜರ್

ತಲೆಗೂದಲು ಬಿಳುಪಾಗಿದ್ದರೆ ಕೆಲಸಿಗೊಂದು ಚಿಟ್!

ನಿಮಗೆ ಬೆಳ್ಳಗಾಗುವುದೆಂದರೇನು?

ತಲೆಗೂದಲು ಕಪ್ಪಗೆ ಬೆಳೆಯಲು, ಮೆತ್ತಗಾಗಿ, ಸೊಂಪಾಗಿ ಬೆಳೆಯಲು!

ಹಾಗಾದರೆ ಕೂಡಲೆ 'ಮುಕಲಿ' ಉಪಯೋಗಿಸಿರಿ!

[illegible] ಚಿಕ್ಕಂದಿನಲ್ಲಿ [illegible] ತಲೆ ಕೂದಲು [illegible]

ಮುಕಲಿ

[illegible] ಉಪಯೋಗಿಸಿ.

[illegible]

ಆಯುರ್ವೇದಿಕ್ ಫಾರ್ಮಸಿ ಲಿ., ಅಹಮ್ಮದನಗರ

[illegible] ಸ್ಟೇಶನ್ ರೋಡ, ಹುಬ್ಬಳ್ಳಿ.





ಸಂಪುಟ ೮ ❋ ಸಂಚಿಕೆ ೧

— ಈ ಸಂಚಿಕೆಯಲ್ಲಿ —

ಉಕ್ಕು ಉಕ್ಕಿಲಿ ಆತ್ಮ
ನಮ್ಮೂರ ನಾಯಕರು
ಕ್ರಾಂತಿಯ ಅರ್ಥ
ಸ್ತ್ರೀ ಮತ್ತು ಪುರುಷ
ಶಿಕ್ಷಣದ ಭವಿತವ್ಯ
ಜಕ್ಕಣನ ಯಾತ್ರೆ
ವಿಜ್ಞಾನದ ವಿಚಿತ್ರ ಪ್ರಪಂಚ

— ಇತ್ಯಾದಿ —

ಜೂನ್ ❁ ೧೯೮೪

ಬೆಲೆ ಆರು ಆಣೆ

ಸಾದರ ಸ್ವೀಕಾರ

೧. **ಸ್ವಪ್ನಜೀವಿ ಮತ್ತು ಇತರ ಕಥೆಗಳು:** (ಕಥಾ ಸಂಗ್ರಹ) ಬರೆದವರು ಶ್ರೀ. 'ಆನಂದ', ಮೈಸೂರು ಕಾವ್ಯಾಲಯದ ೭೭ನೆಯ ಪ್ರಕಟನೆ. ಕ್ರೌನ್. ೮. ೬೪ ಪುಟಗಳು. ಬೆಲೆ ?

ಇದರಲ್ಲಿ 'ಸ್ವಪ್ನ ಜೀವಿ' 'ಭೂಪಾರಾಧನೆ' 'ಜಪಲಾ' ಎಂಬ ಮೂರು ಕತೆಗಳಿವೆ. ಮೊದಲಿನ ಎರಡು ಸುಪ್ರಸಿದ್ಧ ಡಚ್ ಕಥೆಗಾರ ಲೂಯಿ ಕೌಪೆರೆಸ್ ಎಂಬವನ ಕೃತಿಗಳ ರೂಪಾಂತರಗಳು. ಮೂರನೆಯದು ಶ್ರೀ. ವಿಠ್ಠಲ ಸೀತಾರಾಮ ಗುರ್ಜರ್ ಅವರ ಮರಾಠಿ ಭಾಷೆಯ ಕತೆಯೊಂದರ ಇಂಗ್ಲಿಶ್ ತರ್ಜುಮೆಯ ಕನ್ನಡ ಭಾಷಾಂತರ. ಆನಂದರು ಎರಡು ತಮ್ಮ ಪ್ರೀತಿಗೆ ತಕ್ಕಂತಹ ಸಂವಿಧಾನಕ [illegible] ಕತೆಗಳನು ಅನುವಾದಕ್ಕಾಗಿ ಆಯ್ದುಕೊಂಡಿದ್ದಾರೆ. ಮರಾಠೀ ಕತೆಯಲ್ಲೂ ಕೆಲವು ಆಂಕಿತನಾಮಗಳು—ಇಂಗ್ಲಿಷ್ ಭಾಷಾಂತರ [illegible]ದರಿಂದ—ಕನ್ನಡದಲ್ಲಿ ವಿಕೃತಿಗೊಂಡಿವೆ.

೨. **ಗೋಕುಲ ನಿರ್ಗಮನ** (ಗೀತ ರೂಪಕ) ಬರೆದವರು ಶ್ರೀ. ಪು. ತಿ. ನರಸಿಂಹಾಚಾರ್ಯರು. ಮೈಸೂರು ಕಾವ್ಯಾಲಯದ ೭೮ನೆಯ ಪ್ರಕಟನೆ ಕ್ರೌ. ೮. ೬೨ ಪುಟಗಳು, ಬೆಲೆ ೧-೦-೦

೩. **ಧನಚಿತ್ರ:** (೬೦ ದು ಜ ಹಾ ಸೀ ನಾಟಕದ ರೂಪಾಂತರ) ಬರೆದವರು ಶ್ರೀ. 'ಆನಂದ' ಅವರು ಮೈಸೂರು ಕಾವ್ಯಾಲಯದ ಪ್ರಕಟನೆ. ಕ್ರೌ. ೮. ೬೦ ಪುಟಗಳು. ಬೆಲೆ ೦-೮-೦.

ರುದ್ರ-ಭಯಂಕರ ವಸ್ತುವಿನಿಂದ ಕೂಡಿದ ಈ ರೂಪಾಂತರಿತ ನಾಟಕವು ಜಯಂತಿಯ ಹೊಸ [illegible] ವರ್ಷದ ಮೊದಲನೆಯ ಸಂಚಿಕೆಯಲ್ಲಿ ಪ್ರಕಟವಾಗಿತ್ತು. ಶ್ರೀ. ಆನಂದರು ಮೂಲ [illegible] ನಾಟಕವನ್ನು ವಿದೇಶೀಯತೆ [illegible]ದಂತೆ ಸರ್ಜನಾ [illegible]ದವಕ್ಕಾಗಿ—ಅನುವಾದಿಸಿದ್ದಾರೆ.

೪. **ಹಾಳೂರು:** (ಸ್ವೀಳ್ಪ ಮನಸ್ತ್ರೀಮ). ಬರೆದವರು ಶ್ರೀಮಾನ್ ಕು. ವೆ. ಪು. ಎಂದರೆ ಕೆ. ವಿ. ಪುಟ್ಟಪ್ಪನವರು. ತಾವೇ ಪ್ರಕಾಶಕರು. ರೊಯ [illegible] ದ [illegible] ಪುಟಗಳು. ಬೆಲೆ ೦-೪-೦.

ಬಹಳ ದಿನಗಳ ಹಿಂದೆ ಬೆಂಗಳೂರು ಒಕ್ಕಲಿಗರ ಪತ್ರಿಕೆಯ ವಿಶೇಷ ಸಂಚಿಕೆಯೊಂದರಲ್ಲಿ ಪ್ರಕಟವಾದ ಈ ಕೃತಿ [illegible]ವಾಗಿ ಹೊರಕ್ಕೆ ಬಂದಿದೆ. ಮೂಲ ಕಥೆಯ ಇಂಗ್ಲಿಷ ನೆ[illegible] ಟರ್ನ್ ವಿಲೇಜ್' ಎಂಬ ಕವನದಿಂದ ತೆಗೆದುಕೊಂಡಿರಬಹುದಾದರೂ, ಬೆಳವಣಿಗೆಯಲ್ಲಿ ಶ್ರೀ. ಕು. ವೆಂ. ಪು. ಅವರದೆ. ಎಲ್ಲೆಲ್ಲಿಯೂ ಕನ್ನಡ ಮಾತು ಕನ್ನಡದ ನೋಟಗಳೇ ಕಾಣುತ್ತವೆ.

೫. **ಕನ್ನಡ ಯಾತ್ರೆ:** (ಲಲಿತ ಪ್ರಬಂಧ) ಬರೆದವರು ಶ್ರೀಮಾನ್ ಮಾಸ್ತೀ ನರಸಿಂಗರಾಯರು ಎಂ. ಎ., ಬಿ. ಟಿ. ಎಲ್. ಅವರ ಪ್ರಕಾಶಕರು ಕರ್ನಾಟಕ ಸಾಹಿತ್ಯ ಮಂದಿರ. ಹೈದರಾಬಾದ್—ದಕ್ಷಿಣ. ಕ್ರೌ. ೮. ೧೧೩ ಪುಟಗಳು. ಬೆಲೆ ೧-೮-೦.

೬. **ವಿಹಾರ:** (ಕಥಾಸಂಗ್ರಹ). ಬರೆದವರು ಶ್ರೀಮಾನ್ ಕೆ. ಎನ್. ಮೊರೆಸ್ವಾಮಿ. ಪ್ರಕಾಶಕರು ಕರ್ನಾಟಕ ಗ್ರಂಥ ಪ್ರಕಾಶನ ಸಮಿತಿ, ಬಸವನಗುಡಿ—ಬೆಂಗಳೂರು. ಕ್ರೌ. ೮. ೭೦+೧೬ ಪುಟಗಳು. ಬೆಲೆ ೧-೦-೦.

[illegible] ೮೦ ಪುಟಗಳ ಭಾಗದಲ್ಲಿ 'ವಿಧವೆಯ ಚಂಚಲತೆ' 'ಜಾಣೆ ಮಗ' 'ತಂದೆಯ ಮಾತು' 'ಬಾಯರ [illegible]' 'ಕಣ್ಣೀರಿಯ ಹುಣ್ಣು' ಎಂಬ [illegible] ಕತೆಗಳಿವೆ. ಇವು ಕ್ರಮವಾಗಿ ಚೀನಾ, ಇಂಗ್ಲೆಂಡ್, ಜರ್ಮನಿ, [illegible], ಹಂಗೇರಿ ದೇಶದ ಕತೆಗಳು. ಮುಂದಿನ ಹದಿನಾರು ಪುಟಗಳಲ್ಲಿಯ 'ಅನಾಥ ರಕ್ಷಕ' 'ಆನಂದ [illegible]'—'ಎಷ್ಟಾದರೂ ಒಬ್ಬ ತಾಯಿಯ ಮಕ್ಕಳಲ್ಲವೆ?' ಎಂಬ ಮೂರು ಸ್ವತಂತ್ರ ಕಥೆಗಳು. ಪ್ರಸ್ತುತ ಭಾಷಾಂತರಕ್ಕಾಗಿ ಒಳ್ಳೆಯ ಕತೆಗಳನ್ನೇ ಆಯ್ದುಕೊಂಡಿದ್ದಾರೆ. ಸ್ವತಂತ್ರ ಕಥೆಗಳು [illegible] [illegible]. [illegible], ಕಟ್ಟು ಅಂದವಾಗಿವೆ.

೭. **ತರುಣ ಭಾರತ:** (ಮರಾಠಿ [illegible] ಪತ್ರಿಕೆಯ ಕಾಂಗ್ರೆಸ್ ಪ್ರಕರಣದ ವಿಶೇಷ ಸಂಚಿಕೆ). ಸಂಪಾದಕರು ಶ್ರೀಮಾನ್ ಡಿ. ಆರ್. ಠಾಕೂರ ಅವರು. ಪ್ರಕಾಶಕರು ಶ್ರೀ. ಜಿ. ಆರ್. ತೇಂಡೋಲ್ಕರರು, ತರುಣ ಭಾರತ ಪ್ರೆಸ್, ಸಮಾದೇವೀ ಗಲ್ಲಿ, ಬೆಳಗಾಂವಿ. ಕ್ರೌ. ೪ ಪ. ೧೦೦ ಪುಟಗಳು. ಬೆಲೆ ೦ ೧೨-೦.

[illegible] ಮರಾಠಿಯ [illegible] ಗಳ ಹೆಂಗುಸರನ್ನು ಕೂಡ ತಾಯಿ-ಅಕ್ಕ-ತಂಗಿಯರಂತೆ ನಡೆಯಿಸಿಕೊಳ್ಳುತ್ತಿದ್ದರಂತೆ. ಇಂದಿನ ಆದೇ ಮರಾಠರ ಪವಿತ್ರ ಸಂತತಿಯ ರಾಜರ ಆಡಳಿತ[illegible] [illegible]ಗಳಾದ ಪೋಲೀಸ್ [illegible] [illegible] ಕುಲಕ್ಕೇ ಸೇರಿದ ಹೆಣ್ಣುಮಕ್ಕಳನ್ನು—ಸ್ವಾರ್ಥಾಂಧರಾಗಿ—ಹೇಗೆ ಹೇಗೆ ಛಲಿಸಿದರೆಂಬುದರ ಭೀಭತ್ಸ ಚಿತ್ರವನ್ನು ಈ ಸಂಚಿಕೆಯಲ್ಲಿ ಕಾಣಬಹುದು. ಸ್ವಾತಂತ್ರ್ಯಕ್ಕಾಗಿ ಕಾದಲು ಹೊರಟ ನಮ್ಮ ವೀರರನ್ನು, ಶತ್ರುಗಳಿಗೆ ಹಿಡಿದುಕೊಟ್ಟು, ಉಂಬಳಿ ಸಂಪಾದಿಸಿ, ಸಿರಿವಂತರಾಗಿ ಮೆರೆಯುವ ದೇಶ. ದ್ರೋಹಿ ಘಂಟೀಣರಿಗೆ ಭಾರತದ ಇತಿಹಾಸದಲ್ಲಿ ಕೊರತೆಯಿಲ್ಲ. ವರ್ತಮಾನಕಾಲದಲ್ಲಿಯೂ ಇತಿಹಾಸದ ಪುನರಾವೃತ್ತಿಯನ್ನು ಕಾಣುತ್ತಿರುವುದು ದೇಶದ ದುರ್ಭಾಗ್ಯದ ಲಕ್ಷಣ.

ಮಲ್ಲಿಕಪ್ಪನೆಂಬ ತರುಣನ ತಾಯಿ ಹಣಬರ ಕಾಶವ್ವ. ಹಣಬರೆಂಬ ಜಾತಿಯವರು ಕನ್ನಡದ ವೀರ ಜನಾಂಗಕ್ಕೆ ಸೇರಿದವರು. ಕಳೆದ ವಿಧ್ವಂಸಕ ಚಳವಳಿಯಲ್ಲಿ ಮಲ್ಲಪ್ಪ ಕಣ್ಮರೆಯಾಗಿದ್ದಾನೆ. ಆತನನ್ನು ಕಂಡು ಹಿಡಿಯಲಾರದೆ ಉರಿದೆದ್ದ ಪೋಲಿಸ ಅಧಿಕಾರಿಗಳು ನ್ಯಾಯಾನ್ಯಾಯ ನೀತಿ-ಅನೀತಿಗಳನ್ನು ಮರೆತು ಪರಸಂಬಂಧಿಯಾದ ಹೆಂಗುಸನ್ನು ಸಿಪಾಯಿಗಳಾದ ಪಶುಗೃಹಸ್ಥರನ್ನು ಮನಸ್ಸಿಗೆ ಬಂದಂತೆ ಹೊಡೆದು [illegible]ದು ಅಪಮಾನಗೊಳಿಸಿದ್ದಾರೆ. ಬಲುಮಟ್ಟ [illegible]ಧಿಕಾರಿಗಳ ಕಂಪ್ಯಾದಲ್ಲಿ ಜನರ ಗೋಳನ್ನು ಕೇಳುವವರಾರು? ಧೃತರಾಷ್ಟ್ರನ ಮಕ್ಕಳಾದ ದುಂದೋರ [illegible]ನ—ದುಶ್ಶಾಸನರ ದುರ್ವರ್ತನೆಯನ್ನು ಕಂಡೂ [illegible]ದಂತಿರುವವನಲ್ಲವೆ? ಹಣಬರ ಕಾಶವ್ವನ ಗೋಳನ್ನು ಯಾವ ಅಧಿಕಾರಿಯೂ ಕಿವಿಗ ಹಾಕಿಕೊಳ್ಳಲಿಲ್ಲ. ಬೆಳಗಾಂವಿಯ 'ತರುಣ ಭಾರತ' ಪತ್ರಿಕೆಯ ಸಂಪಾದಕರಾದ ಶ್ರೀಮಾನ್ ಡಿ. ಆರ್. ಠಾಕೂರರು ಈ ಕಾಶವ್ವನ ಕರುಣಕತೆಯನ್ನು [illegible]—ಕನ್ನಡ [illegible] [illegible] ಜಗತ್ತಿನ [illegible] ತಂದು [illegible]ದ್ದಾರೆ. [illegible] ಕಂಡವರು [illegible] ಈ ಕತೆಯನ್ನು [illegible] ಕೇಳಲಿ! ತಮ್ಮ [illegible] ಸ್ಥಿತಿಯ [illegible] ಅರಿತುಕೊಳ್ಳಲಿ. ಶ್ರೀ. ಠಾಕೂರರು ಈ [illegible] ಅಭಿನಂದನೀಯವಾದುದು.

೮. **ಕೊರವಂಜಿ:** (ಮಾಸಪತ್ರಿಕೆಯ [illegible]ಸ್ನೋತ್ಸವ ಸಂಚಿಕೆ). ಸಂಪಾದಕರು [illegible] ಎ. [illegible] ಅವರು. ಪ್ರಕಾಶಕರು ಶ್ರೀ. ಬಿ. ಎಸ್. ಗುಪ್ತ, ಬೆಂಗಳೂರು ನಗರ. [illegible] ೮. ೧೦೦ ಪುಟ. ಬೆಲೆ ೦-೧೨-೦

[illegible] ಬಣ್ಣದ ಚಿತ್ರದಿಂದ ಕೂಡಿದ ಸುಂದರ [illegible] ರಟ್ಟು, ಅಂದವಾದ ಅಚ್ಚು, ವ್ಯಂಗ್ಯ [illegible] ಸಾಹಿತ್ಯವು ಆಕರ್ಷಕವಾಗಿದೆ. [illegible] ನಗಿಸುವದರಿಂದ ಕೂಡಿದ ಚಿತ್ರ-[illegible] ವ್ಯಂಗ್ಯ ಕವನಗಳು, [illegible] ಹಟ ನೋಡಿರಿ.

ಜಯಂತಿ

ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

ವಾ. ವರ್ಗಣಿ ಅಂಚೆವೆಚ್ಚ ಸೇರಿ ೪—೮—೦ ಆರು ತಿಂಗಳಿಗೆ ೨—೪—೦ ಬಿಡಿ ಸಂಚಿಕೆಗೆ ೬ ಆಣೆ.

ಸಂಪುಟ ೮ | ೧ನೆಯ ಜೂನ್ ೧೯೪೫ | ಸಂಚಿಕೆ ೧

ಉಕ್ಕು ಉಕ್ಕೆಲೆ ಆತ್ಮ !

ಶ್ರೀ. ಬಿ ಎಚ್. ಶ್ರೀಧರ, ಎಂ. ಎ. ಭಟಕಳ

ಉಕ್ಕು ಉಕ್ಕೆಲೆ ಆತ್ಮ ಉಕ್ಕಾಗು ಆಗು.
ಅಕ್ಕು ಕಡಿದನ್ಯಾಯವನು ನೀಗು ನೀಗು! ॥ ಪ ॥

ಉಕ್ಕುಉಕ್ಕೆಲೆ ಆತ್ಮ ಉಕ್ಕಾಗು ಉರಿಯಾಗು.
ತಕ್ಕುದನು ಪಡೆದು ತಾಮಸದ ತಡೆಯು:
ಸಿಕ್ಕಾಗದಿರು ವಿಷಯಮೋಹಕ್ಕೆ, ಹೃದಯವನು
ಸಿಕ್ಕಗೊಡದಿರು ದುರ್ಬಲತೆಗೆಂದೂ !
ನಿರ್ಜರನು ನೀನಿರುವೆ ನಿಜತೇಜವನು ಸುರಿಸು
ದುರ್ಭೀತಿಗೀಡಾಗದಿರು ಧೈರ್ಯಗುಂದಿ:
ಗರ್ಜಿಸೆಂದಹ ' ಸತ್ಯೇನಸಿಧ್ಯತಿಂ ಊರ್ಜ-
ಸ್ವೂ ' ಜಗಸ್ಸಿ ಹೇ ಸಜ್ಜುಷ್ಷನಾಗಿ
ವಂಚಿತನ ಕಪಟ ಕುಹಕತೆಯೊಡ್ಡಿ ಬಾಗಿಸ್ಸಿ
ಸುಂದಯುಂದದಿ ಮೋಸ ಮರ್ಕಟರನು
ನಿಂದಲ್ಲಿ ನಿರ್ನಾಮ ಗೈಯೆಂದು ನೈಪಾಕ್ಷೆ
ಬಂಧಿಸಾದು ತೆಗೆಮುಕೋ ಧುರಧೀರ್ಸ್ತ!
ಧರ್ಮಕಾಗಿಯೆ ದುಡಿದ ಧರ್ಮಕಾಗಿಯೆ ಮಡಿದ
ಧರ್ಮರಾಯರ ಪಡೆದ ಭೂಮಿಯಿಂದು !
ಕರ್ಮಬಾಹಿರನಾಗ್ಬು ! ಕರ್ತವ್ಯಸೂತ್ರಜನ
ನಿರ್ವೀರ್ಯತೆಯನಾಂತು ನಿದ್ರಿಸಿತ ಹಾ !

ಉತ್ತಿಷ್ಠ ಉದಿತೋದಿತಾತ್ಮ ಪ್ರಾಪ್ತಂಸು ನಿಜ-
ಸತ್ತ್ವವನು ಸಾರಮೊದೆ ನಿನ್ನನೆಲ್ಲ
ನಿತ್ಯಾನಪೇಬಣಕ ಗುರಿಸಾಡಿಸುವರು. ನಕ್ಕ
ಸತ್ಯಾದಂಬರದ ಜನ ಮಾನಸ್ಕಿಯಾಗಿ!
ಸುಪ್ತ ಕೇಸರಿಯಾಗ್ಸು ಕೇಣಕುಹ ಜಂಬುಕರ
ಉಸ್ತುಗೋನವೆ ಪಡುವುದುಚಿತವಲ್ಲ:
ಗುಪ್ತಕಾರಸ್ಥ ನಡೆವೆಗಡಂವಿಗು ಬಿಡದು.
ಪೃಥ್ವೀಶನ್ಯಾವಿ ಆ ಫೋಣಿಯಿಂತೆ!
ಪ್ರಬೋಧ್ರಕ್ಕಾಗು ನಿಜ ಸುಮ ಸಸ್ಯಬಾಧಕರ,
ನಿಧನವನು ಸಾಧಿಸದೇಯಾತ್ತ ನಿಲು!
ಯುದ್ಧವೇ ಸಾಧನವು. ಪ್ರಣವಿಲಸಿತನಮೂನು
ನದ್ದರ್ಮ, ನಡುಕು ಗಾಂಡೀವಧನುನ!
ಪಿಸಿಗಾನು ಜಯಿಸುಸ್ವಾದಿ ರಸವಿಲಿಸೆ ಸಾಂದ್ಯು,
ಸರಾಗಳನು ಜಯಿಸುವುದು ನಾಶನಿಯಲಾ !
ಆಪನಾಂದರನು ಆರಿನ ನಿರುಸ ಸಂಚಾಸನದ
ಶಿರುಸಾದರೂ ಬಿಡದೆ ನೀಗಬೇಕು !

ರಾಷ್ಟ್ರಸಾರೀಕರನು ನಿನ್ನೆದೆಯುದೆಲೆ ಜೀನು.
ನಾಶನಬಲಾನಹದ ಪರಾರ್ವನವನು!
ದುರ್ಜಾತಿಯನು ಪಡಿಸಿ ಪಸುಡರೆಂದೆತ್ತು ಏ
ಘೂರ್ಜರಿಯ ಶರಣ, ಕಡಸಾದಲೇಕೆ ?

ವಿಜಯೋತ್ಸವ !

ಜಗತ್ತನ್ನೆಲ್ಲ ಒಂದೆ ದಂಡದಿಂದ ಆಳಬೇಕೆಂಬ ಮಹತ್ವಾಕಾಂಕ್ಷೆಯಿಂದ ಮುಂದುವರಿದು, ಪ್ರಪಂಚದಲ್ಲೆಲ್ಲ ಯುದ್ಧದ ಮಾರಿಯಾಟವನ್ನು ಎಬ್ಬಿಸಿ ಹಬ್ಬಿಸಿದ ಜರ್ಮನಿಯ ನಾಝಿಗಳ ಬಳಗ, ಇಂದು ಮಿತ್ರರಿಗೆ ಸೋತು ಶರಣಾಗತವಾಯಿತು. ನಾಝಿಗಳ ಬಲಾತ್ಕಾರದ ಆಡಳಿತದ ಭೀತಿ ಸದ್ಯ ಹುದಿಗೂಡಿ ಹೋಯಿತು. ಲೋಕಕಲ್ಯಾಣದ ದೃಷ್ಟಿಯಿಂದ ಎಲ್ಲರೂ ಇದಕ್ಕಾಗಿ ಸಮಾಧಾನಪಡತಕ್ಕುದು ಸಹಜವೆ. ಹಾಗೆ ಭಾರತಕ್ಕೂ ಸಮಾಧಾನವಾಗಿದ್ದರೆ ಅದು ಆಶ್ಚರ್ಯವಲ್ಲ. ಆದರೆ ಬಲವಂತದ ಮಾಘಸ್ನಾನದಂತೆ ಭಾರತದಲ್ಲಿ "ವಿಜಯ ಮಹೋತ್ಸವ" ಅಲ್ಲಲ್ಲಿ ವಿಜೃಂಭಣೆಯಿಂದ ನಡೆಯಿತಲ್ಲ! ಈ ವಿಜೃಂಭಣೆಯ ಉತ್ಸವ ಭಾರತದ ಇಂದಿನ ವಿಷಮ—ವಿಷಮಯ—ಪರಿಸ್ಥಿತಿಯಲ್ಲಿ ಸಹಜವಾದುದೆ? ಸ್ವಾಭಾವಿಕವಾದುದೆ? ವಿಜಯ ಪಡೆದವರು ವಿಜಯೋತ್ಸವ ಮಾಡಿದರೆ ಅದೊಂದು ಆಶ್ಚರ್ಯದ ಸಂಗತಿಯಲ್ಲ; ಆದರೆ "ವಿಜಯ" ಎಂದರೆ ಏನೆಂಬುದನ್ನು ಕನಸಿನಲ್ಲಿ ಕೂಡ ಕಾಣದ ನಮ್ಮ ಜನರು 'ವಿಜಯೋತ್ಸವ' ನಡೆಯಿಸಿದುದು ಆಶ್ಚರ್ಯದ ಮಾತು; ಅದ್ಭುತದ ವಿಷಯ!

* * * *

ಪ್ರತಿಕೂಲವಾಗಿ ನಿಂತ ವ್ಯಕ್ತಿಗಳನ್ನೂ ಶಕ್ತಿಗಳನ್ನೂ ಪರಿಸ್ಥಿತಿಯನ್ನೂ ತಮ್ಮ ಪೌರುಷದಿಂದ ಎದುರಿಸಿ ಹೋರಾಡಿ, ಅವುಗಳನ್ನು ಇಲ್ಲದಂತೆ ಮಾಡುವುದಕ್ಕೆ "ವಿಜಯ" ಎಂದು ಹೆಸರು. ಇಂಗ್ಲಂಡ್, ಅಮೇರಿಕಾ, ರಷ್ಯಾ ಸಾಮ್ರಾಜ್ಯಗಳಿಗೆ ಪ್ರತಿಕೂಲವಾಗಿ ಎದ್ದುನಿಂತ ನಾಝೀಶಕ್ತಿ ಅವರ ಹೋರಾಟದಿಂದ ಬಳಲಿ ಬಿದ್ದಿತು; ಆ ಮೂರು ರಾಷ್ಟ್ರಗಳಿಗೆ ನಿಜವಾದ ವಿಜಯ ದೊರೆಯಿತು. ಆ ವಿಜಯವನ್ನು ಭಾರತೀಯರು ತಮ್ಮದೆಂದು ಹೇಳುವಂತಿದೆಯೆ? ಯಾವ ಪ್ರತಿಕೂಲ ಶಕ್ತಿ-ಪರಿಸ್ಥಿತಿಗಳನ್ನು ಭಾರತೀಯರು ತಮ್ಮ ಪೌರುಷದಿಂದ ಎದುರಿಸಿ ಸೋಲಿಸಿ ಇಂದು ಸ್ವಾತಂತ್ರ್ಯವನ್ನು ಪಡೆದಿದ್ದಾರೆ? ವಿಜಯೋತ್ಸವದಲ್ಲಿ ಭಾಗ ವಹಿಸುವವನು ನಿಜವಾಗಿಯೂ ಸ್ವಾವಲಂಬನ—ಸ್ವಾತಂತ್ರ್ಯಗಳಿಂದ ಮುಂದಿನ ಜಗತ್ತಿನಲ್ಲಿ ಬಾಳುವ ವಿಶ್ವಾಸವುಳ್ಳವನಾಗಿರಬೇಕು. ಅಂತಹ ವಿಶ್ವಾಸ ಬಂದಿದೆಯೇ ನಮ್ಮ ಜನರಲ್ಲಿ?

* * * *

ದೇಶಕ್ಕೆ ಒಳ್ಳೆಯದಾಗಬೇಕೆಂದು ದುಡಿಯುವ ನಿಃಸ್ವಾರ್ಥಿಗಳಾದ ಮುಂದಾಳುಗಳಿಲ್ಲಿ ಸೆರೆಮನೆಯಲ್ಲಿ ಕೊಳೆಯುತ್ತಿದ್ದಾರೆ. ಉತ್ತು ಬಿತ್ತಿ ಶ್ರಮದಿಂದ ಬೆಳೆದ ಅನ್ನಧಾನ್ಯಗಳಿಂದು ಕಣ್ಣಿಗೆ ಕಾಣದಂತೆ ಮಾಯವಾಗಿ, ಜನತೆಯಲ್ಲಿ ಹಸಿವೆಯ ಬೆಂಕಿಯನ್ನು ಹೊತ್ತಿಸಿವೆ. ಉಡಲಿಕ್ಕೆ ಅರಿವೆಯ ಕೊರತೆ; ಅಡಲಿಕ್ಕೆ ಉರುವಲಿನ ಕೊರತೆ. ಸಿರಿವಂತಿಕೆಯ ಸ್ವಾರ್ಥ ತನ್ನ-ತನ್ನವರ ಕುತ್ತಿಗೆಗಳನ್ನೂ ಹಿಸುಕಿ ಹೊಟ್ಟೆಗಳನ್ನು ಸುಟ್ಟುತ್ತಲಿದೆ. ಆಡಳಿತದ ಬಲಾತ್ಕಾರದ ಭಸ್ಮಾಸುರನ ಬಳಗಗಳು, ಜನತೆಯನ್ನು ಬೆಂಬತ್ತಿ ಬಳಲಿಸುತ್ತಿವೆ. ಜಾತಿ-ಕುಲಗಳ ಬಡಿದಾಟ ಬಂಧು-ಬಾಂಧವತನ, ಗೆಳೆತನ-ನಚ್ಚುತನಗಳನ್ನೂ ಸಮಾಧಿಗೊಳಿಸಿ, ಅಸಂತುಷ್ಟಿಯನ್ನು ಹರಡುತ್ತಲಿವೆ. ಏನು ನಮಗೆ ಬೇಕೆಂದು ಕೂಗುವುದಕ್ಕೂ ನಮಗೆ ಸ್ವಾತಂತ್ರ್ಯವಿಲ್ಲ; ಆಘಾತದಿಂದ ನಾವು ನೊಂದಿದ್ದೇವೆಂದು ನರಳಲಿಕ್ಕೂ ನಮಗೆ ಅವಕಾಶವಿಲ್ಲ. ಸ್ವಲ್ಪ ಕೈ-ಮೈ ಅಲುಗಾಡಿಸಿದರೆ ಸುತ್ತುಗಟ್ಟಿರುವ ಶೂಲಗಳು ನೆತ್ತರು ಹರಿಸಲು ನಿಂತಿರುವುವು. ಹೀಗಿರುವಾಗಲೂ ನಾವು ಹಿಗ್ಗುವೆವಲ್ಲಿ? ವಿಜಯೋತ್ಸವವನ್ನು ಮಾಡುವ ಹುಮ್ಮಸು, ಹುರುಪು ನಮ್ಮಲ್ಲಿ ಇರಬಹುದೆ?

* * * *

ಸರ್ಕಸಿನಲ್ಲಿ ಸಿಂಹ-ಹುಲಿಗಳ ಆಟ ನಡೆಯುತ್ತಿದ್ದಿತು. ಸಿಂಹರಾಜನು ಗಂಡುಮಗ; ಹೆಣ್ಣುಹುಲಿಯೊಂದು ಹೆಣ್ಣುಮಗಳು. ಎರಡಕ್ಕೂ ಮದುವೆಯಾಗಬೇಕು. ಪಂಜರದಿಂದ ಆಟದ ಬಯಲಿಗೆ ಬಂದ ಸಿಂಹರಾಜನ ಸುತ್ತಲೂ ಉರಿವ ಪಂಜುಗಳ ಸಾಲು; ನಾಲ್ಕಾರು ಜನ ತುಂಬಿದ ಬಂದೂಕಿನ ಸಿಪಾಯಿಗಳು; ಆಟವಾಡಿಸುವವನ ಕೈಯೊಂದರಲ್ಲಿ ಪಿಸ್ತೂಲು; ಇನ್ನೊಂದು ಕೈಯಲ್ಲಿ ಚರ್ಮವನ್ನು ಛೇದಿಸುವ ಚಾಟಿ. ಸಿಂಹ ಬಾಯಿ ತೆರೆದರೆ ಏಟು, ಅತ್ತಿತ್ತ ಅಲುಗಾಡಿದರೆ ಏಟು. ಕಾಲು ಸರಿಸಿದರೆ ಹೊಡೆತ. ಎತ್ತಿದರೆ ಬಡಿತ. ಆದರೂ ಸಿಂಹರಾಜ ಮದುಮಗ. ಅವನ ಸ್ವಾಗತಕ್ಕೆಂದು ಮೊಳಗುತ್ತಿದ್ದಿತು. ಇನ್ನೊಂದು ಕಡೆಗೆ ಹುಲಿರಾಣಿ ಮದುಮಗಳಾಗಿ ಆಯುಧಗಳ ಕಾವಲಿನಲ್ಲಿ ಹೊರಬಂದಳು. ಆಟಗಾರ ಪುರೋಹಿತನಾಗಿ ಮದುವೆ ಮಾಡಿದ. ಜನರು ಮೆಚ್ಚಿ ತಲೆದೂಗಿದರು; ಕೈತಟ್ಟಿ ಕುಣಿದರು. ಸಿಂಹರಾಜ-ಹುಲಿರಾಣಿಯರಿಗೇನು ಆನಂದವೋ ಬೇರೆ ಕಾಣೆ; ಎರಡರ ಮುಖದ ಮೇಲೆಯೂ ಪರಾಧೀನತೆಯ ಕಳೆ, ಪರಿಸ್ಥಿತಿಯ ಹೆದರಿಕೆ ಮೂಡಿ ನಿಂತಿದ್ದಿತು. ಇಂತಹ ಮದುಮಗ ಮದುಮಗಳಂತೆಯೆ ಭರತಖಂಡವಿಂದು ವಿಜಯದ ಉತ್ಸವದಲ್ಲಿ ಭಾಗ ವಹಿಸಿತು. ಇದರ ವರದಿ ದೇಶ-ವಿದೇಶದ ಪತ್ರಿಕೆಗಳಲ್ಲಿ ಪ್ರಕಟವಾಯಿತು. ಭರತಖಂಡದ ಸಾಮ್ರಾಜ್ಯನಿಷ್ಠೆ ಲೋಕವಿಶ್ರುತವಾಯಿತು. ಯಾರದೋ ವಿಜಯ ಬಡಭಾರತೀಯರ ವಿಜಯವಾಗಿಯೂ ಪರಿಣಮಿಸಿತು.

* * * *

ಬಡತನ-ತಿಳಿಗೇಡಿಗಳುಳ್ಳ ಬಹುಜನರಿರುವಲ್ಲಿಯೂ ಸ್ವಾರ್ಥಾಂಧರಾದ ಮುಂದಾಳುಗಳಿರುವಲ್ಲಿಯೂ ನಿಜವಾದ ವಿಜಯೋತ್ಸವಗಳು ನಡೆವುದು ಸಾಧ್ಯವೇ? ಇಲ್ಲವಮ್ಮಲ್ಲಿಯ ಜಯಚಂದ್ರ ಮನೋವೃತ್ತಿಯ ಮಹಮ್ಮದ್ ಘೋರಿಯ ಗೆಲುವಿಗಾಗಿ ವಿಜಯೋತ್ಸವ ನಡೆಯಿಸಿದರೆ, ಬ್ರಿಟಿಷ್, ರಷ್ಯಾ, ಅಮೇರಿಕಾ ಮೊದಲಾದ ಸ್ವತಂತ್ರ ರಾಷ್ಟ್ರಗಳ ಜನತೆ ನಮಗಾಗಿ ನಕ್ಕುಬಿಡಬಹುದು. ಇಷ್ಟೇ ಅಲ್ಲ, ಸೋತ ಜನಾಂಗವಾದ ಜರ್ಮನಿಯು ಕೂಡ ತನ್ನ ಪರಾಭವದ ದುಃಖದಲ್ಲಿಯೂ ತಿರಸ್ಕಾರದ ನಗೆ ನಗಬಹುದು. 'ಸರ್ವೇ ಜನಾಃ ಸುಖಿನೋ ಭವಂತು' ಎಂಬ ಸೂಳು ಮಂತ್ರವನ್ನು ಯಾವಾಗಲೂ ಜಪಿಸುವ ಭಾರತೀಯರಿಗೆ ಭಯಶಕ್ತಿಕಾರಿಯಾದ ನಾಝೀ ಜರ್ಮನಿ ಸೋತುದು ಸಮಾಧಾನದ ಸಂಗತಿಯೇ ಸರಿ; ಆದರೆ ಪರಾಧೀನರಾಗಿರುವ ತನಕ ಅವರಿಗೆ ವಿಜಯದ ಆನಂದವೆಲ್ಲಿ? ವಿಜಯೋತ್ಸವವೆಲ್ಲಿ? ಚಿತ್ರಸೇನ ಗಂಧರ್ವನೊಡನೆ ಯುದ್ಧಮಾಡಿ ಗದ್ದು ದುರ್ಯೋಧನನನ್ನು ಬಿಡಿಸಿದ್ದು ಪಾಂಡವರಿಗೆ ಪರಾಧೀನತೆ ತಪ್ಪಲಿಲ್ಲ; ಆ ವಿಜಯ ವಿಜಯವೆನಿಸಲಿಲ್ಲ. ಇದು ಪುರಾಣದ ಕತೆಯಾದರೂ ಹುರುಳುಳ್ಳ ಕತೆಯಾಗಿದೆ. ಭರತಖಂಡಕ್ಕೆ ನಿಜವಾದ ವಿಜಯ ದಿನವು ಬರಲಿ! ಅದಕ್ಕಾಗಿ ಭಾರತೀಯರು ಒಂದುಗೂಡಿ ಕಾರ್ಯ ಮಾಡಲಿ!

—ಸಂಪಾದಕರು

೧. ತಿಗ—ತಿಗ—ಹುರ್ರಾ !

‘ಅಂಚೆ-ಯುದ್ಧ ಪುನರ್‍ರಚನೆ (post-war reconstruction)’ಯಲ್ಲಿ ಕನ್ನಡ ಭಾಷೆಗೆ ಹೊಸ ಸ್ವರೂಪ ಕೊಡಬೇಕೆಂಬ ಸೂಚನೆಗೆ ಮಂಗರಾಯನು ವ್ಯೈತುರನಾ ಸಿದ್ಧನಿದ್ದಾನೆ. ಇವನು ಒಂದು ಕಮಿಟಿಯನ್ನು ಗೊತ್ತುಮಾಡಿ, ಆ ಕಮಿಟಿಯ ‘ನೀಲೀ ಕಾಗದ’ (blue-print) ವನ್ನು ಕೂಡಲೆ ಸಿದ್ಧಪಡಿಸಬೇಕು.’ ಯುದ್ಧದ ಸಲುವಾಗಿ ನಮ್ಮ ನುಡಿ ಬಹಳೇ ಮುಂದರಿದಿದೆ. ಆ ‘ಇದಿರು (front)’ ಗಳ ಅನುಭವವನ್ನು ಅದು ಉಂಡಿದೆ. ಉಳಿದ ರಾಷ್ಟ್ರಗಳ ರಾಜಕಾರಣಿಗಳು ಯುದ್ಧಕ್ಕಾಗಿ ಸಮ್ಮಿಶ್ರ ಮಂತ್ರಿಮಂಡಲಗಳನ್ನು ಮಾಡಿಕೊಂಡಂತೆ, ಯುದ್ಧಕ್ಕಾಗಿ ನಮ್ಮ ಭಾಷೆ ಸಂಯುಕ್ತ ಶಬ್ದಮಂಡಳಗಳನ್ನು ಮಾಡಿಕೊಂಡಿದೆ. ‘ವಾಂತಜ್ವಾಲೆ (Spit-fire)’ಯಂತೆ ವೇಗವಂತವಾಗಿದೆ. ‘ಮಧುಚಂದ್ರ’ (Honey-moon) ವನ್ನು ಉಪಭೋಗಿಸಿದಂತೆ ‘ಜೀವಂತೀ’ (lively) ಯಾಗಿದೆ. ಈ ಯುದ್ಧದ ಮಹತ್ತ್ವವನ್ನರಿತು ಎಲ್ಲ ಪತ್ರಿಕೆಗಳು ‘ನಾಯಕ’ (leader) ರನ್ನೂ ‘ಅಲ್ಪ-ನಾಯಕ’ (Leaderette)ರನ್ನೂ ಬರೆಯಬೇಕೆಂದು ಮಂಗರಾಯನು ಕಂಠ ತುಂಬಿ, ಬಾಲವನ್ನು ಮುರಿದು ಕೂಗುತ್ತಿದ್ದಾನೆ. ಉತ್ತಿಷ್ಠತ, ಜಾಗ್ರತ. ವಾಚಕರೇ! ಪಾಪ, ಪುರಾಣ ಬಾಧೆಗೆ ಇಲ್ಲಿಲ್ಲ—ಪರಾರ್ಥ ಸಾಧಿಸಿ! ಅಂಚೆಯುದ್ಧ ಪುನರ್‍ರಚನೆಯಲ್ಲಿ ಇದು ಉಳಿದ ‘ಮಾನವೀ’ (Humanitarian) ಕಾರ್ಯಗಳಷ್ಟೆ ಮಹತ್ತ್ವದ್ದೆಂದು ತಿಳಿಯಿರಿ, ಒಂದಾಣೆ ಒಗೆಯಿರಿ.

ತಿಗ—ತಿಗ—ಹುರ್ರಾ !
ಮೂರಕ್ಕೂ ಚೀರಾ !

\+ + +

೨. ಮುಂದಿನ ಪ್ರಶ್ನೆ ?

‘ಎಲ್ಲಿ ನೋಡಿದಲ್ಲೆಲ್ಲ ವಿಧಾಯಕ—ವಿಧಾಯಕ ಎಂಬ ಹೆಸರಿನ ಕಾರ್ಯಕ್ರಮ ಕೇಳಬರುತ್ತಿದೆ. ಆದರೆ ಕಣ್ಣಿಗೆ ಯಾವ ಚಟುವಟಿಕೆಯಾಗಲಿ, ಚಳವಳವಾಗಲಿ ಕಾಣಬರುವದಿಲ್ಲ. ಇದಾವ ಗೂಢ?’ ಎಂದು ವಾಚಕನೊಬ್ಬನು ಮಂಗರಾಯನನ್ನು ಕೇಳಿದ್ದಾನೆ. ನಿಜವಾಗಿ ನೋಡಿದರೆ ಇದರಲ್ಲಿ ಯಾವ ಗೂಢವೂ ಇಲ್ಲ. ಜೇಲಿಗೆ ಹೋಗುವ ಚಳವಳ ಮುಗಿದಾಕ್ಷಣ ವಿಧಾಯಕ ಚಳವಳ ಪ್ರಾರಂಭವಾಗುವದು ಕಳೆದ ೨೦—೨೫ ವರ್ಷಗಳಿಂದ ಮಂಗರಾಯನು ಹಲ್ಕಿರಿದಂತೆ ರೂಢವಾಗಿದೆ. ಇದು ಸಹಜ. ಯಾವುದಕ್ಕೂ ಎರಡೂ ಬದಿಗಳಿರುವಂತೆ ರಾಜಕೀಯ ಚಳವಳಕ್ಕೂ ಎರಡು ಬದಿಗಳಿರಬಾರದೇಕೆ? ಊಟವಾದ ಮೇಲೆ ನಿದ್ದೆ ಮಾಡುವುದಿಲ್ಲವೆ? ಊಟ ಚಳವಳ ಎನ್ನಿಸಿದರೆ, ನಿದ್ದೆ ವಿಧಾಯಕ ಕಾರ್ಯಕ್ರಮ.. ಅಲ್ಲ, ಅಂದ್ರೆ—ಇದೊಂದು ದೃಷ್ಟಾಂತ. ಎಲ್ಲರೂ ತಂತಮ್ಮ ಕೆಲಸ ಬಿಟ್ಟು ಜೇಲಿಗೆ ಹೋಗುವರು, ಇದು ಚಳವಳ! ಅದು ಮುಗಿದ ಮೇಲೆ ವಕೀಲರು ಮತ್ತೆ ವಕೀಲಿಯನ್ನು, ವಿದ್ಯಾರ್ಥಿಗಳು ವಿದ್ಯಾಸಂಸ್ಥೆಯನ್ನು, ಮುಂದಾಳುಗಳು ನಿಧಿಗೂಡಿಸುವುದನ್ನು ಕೈಕೊಳ್ಳುವರು—ಇದು ವಿಧಾಯಕ ಕಾರ್ಯಕ್ರಮ. ನಿದ್ದೆ ಇಲ್ಲದಿದ್ದರೆ ಮತ್ತೆ ಹಸಿವೆಯಾಗುವುದಿಲ್ಲ, ಅಲ್ಲವೆ? ಎಂದರೆ, ವಿಧಾಯಕ ಕಾರ್ಯಕ್ರಮವಿಲ್ಲದಿದ್ದರೆ ಮತ್ತೆ ಚಳವಳ ಶಕ್ಯವಿಲ್ಲ—ಹಾಂ—ಹಾಂ—ಜಾಣ! ತಿಳಿಯಿತಲ್ಲ? ವಿಧವಿಧವಾಗಿ+ಆಯುವನ್ನು+ಕಳಾಯಿಸುವುದು=ವಿಧಾಯಕ... ಆಯಿತಲ್ಲ? ಹಾ—ಮುಂದಿನ ಪ್ರಶ್ನೆ—?

ವಿಧಾಯಕ ಕಾರ್ಯ ಮಾಡಿದವನೇ
ವಿನಾಯಕನಾದಾನು !

× × × ×

೩. ಭಾರತಮಾತಾ ದ್ರೌಪದೀಬಾದ್ !

ಭಾರತದೇಶದ ಸ್ಥಿತಿ ದ್ರೌಪದಿಯಂತೆ ಆಗಿದೆ ಎಂದು ಮಹಾತ್ಮರು ಹೇಳಿದ್ದಕ್ಕೆ ಮಂಗರಾಯನು ಹಲ್ಕಿರಿದದ್ದು, ಕೊಂಬೆಗೆ ಬಾಲೀ ಕರಿಸುತ್ತಲಿದ್ದಾನೆ! ಎಷ್ಟೊಂದು ಸಂತಸ? ಮಹಾತ್ಮರ ಮಾತು—ಗರ್ಭಿತಾರ್ಥ ಮುತ್ತು! ಆಹಹ! ಏನೆಂದು ಭಾಷ್ಯೀಕರಿಸೋಣ? ಕಾಂಗ್ರೆಸ್-ಲೀಗ-ಮಹಾಸಭೆ-ಕೂಲಿಕಾರ-ಪಕ್ಷಾತೀತ ಈ ಐದು ರಾಜಕೀಯ ಪಕ್ಷಗಳನ್ನು ವರಿಸಿ ಭಾರತಮಾತೆಯು ದ್ರೌಪದಿಯಂತೆ ವನವಾಸವನ್ನನುಭೋಗಿಸುತ್ತಿದ್ದಾಳೆ ಎನ್ನೋಣವೇ? ಅಥವಾ—ದ್ರೌಪದಿಯಂತೆ ಭಾರತಮಾತೆಗೂ ವಸ್ತ್ರಾಪಹರಣದ ದುರ್ದೆಸೆ ಬಂದಿದೆ ಎನ್ನೋಣವೆ? ಇಲ್ಲವೆ—ರೇಶನ್ ಎಂಬ ಅಕ್ಷಯ್ಯ—ಪಾತ್ರೆಯ ಮೇಲೆ ಉಪಜೀವನವನ್ನು ಸಾಗಿಸಬೇಕಾಗಿದೆ ಎನ್ನೋಣವೇ? ಅಥವಾ—ಕಿವಿ ಕೇಳದ ಕುಂತಿಯು ತನ್ನ ಐವರು ಮಕ್ಕಳಿಗೆ ತಂತಮ್ಮೊಳಗೆ ಹಂಚಿಕೊಳ್ಳಲು ಹೇಳಿದ ಸಾಮ್ಯವನ್ನು ನೆನೆಯೋಣವೆ? ಅತತಥತಥವಾ—!—!—! ದ್ರೌಪದಿಯಂತೆ ಭಾರತಮಾತೆಯನ್ನು ಗೆದಿಯಲು ಮುಖ ಕೆಳಗೆ ಮಾಡಿ ಮೇಲೆ ಗುರಿ ಇಡುವ ಅವಶ್ಯಕತೆ ಇದೆ ಎಂದು ತಿಳಿಯೋಣವೆ?... ಏನೆಂದು—ಅಥವಾ — ಎಷ್ಟೆಂದು — ಇಕ್ಕಿ, ಕೊನೆ ? ಯಾಕೆಂದು - ಈ ಫಲಗರ್ಭಿತಾರ್ಥವನ್ನು ಮಂಗರಾಯನು ದವಡೀಕರಿಸಿ ಬಿಡಿಸಬೇಕು?

ಸೊಲ್ಲಾಪುರದಲ್ಲಿ ನಮ್ಮ ಏಜಂಟರು :
ಶ್ರೀ. ಎನ್. ಎಚ್. ದೇಶಪಾಂಡೆ
ನ್ಯೂಜ್ ಏಜನ್ಸಿ
ಝುಂಬ್ರೇವಾಡಾ, ನಾರ್ಥ ಕಸ್ಬಾ,
ಮನೆ ನಂ. ೫೨೬.

ಸಾಹಿತ್ಯವಿಹಾರ

‘ ವಿಹಾರಿ ’

ಕನ್ನಡ ಜನದ ಸಾಂಸ್ಕೃತಿಕ ಜೀವನ ಇಂದು ಒಂದು ಸಂಧಿಕಾಲವನ್ನು ಸಂಧಿಸಿದೆ ಎಂದು ಹೇಳಬಹುದು. ಆರು ವರ್ಷಗಳ ಕಾಲದ ವಿಶ್ವಯುದ್ಧ ಮುಗಿಯುವ ಕಾಲ ಸಮೀಪಿಸುತ್ತ ಬಂದಹಾಗೆ, ಭಾರತದ ರಾಜಕೀಯ ಸಮಸ್ಯೆಯೂ ಒಂದು ವಿಚಿತ್ರವಾದ ಹಂತಕ್ಕೆ ಬಂದು ತಲುಪಿದಾಗ, ಮುಂಬರುವ ದಿವಸಗಳ ವಿಚಾರದಲ್ಲಿ ಆಸಕ್ತಿ ಆಸೆಗಳುಳ್ಳ ಯಾವನೂ ಸಾಂಸ್ಕೃತಿಕ ಜೀವನದ ವಿಚಾರದಲ್ಲಿ ಜಾಗರೂಕತೆಯನ್ನು ತಾಳದಿರಲಾರ. ಇಂದಿನ ನಮ್ಮ ಜಾಗತಿಕ ಸಮಸ್ಯೆಗಳಿಗೆ ಕೂಡ ಮಾನವ ಸಂಸ್ಕೃತಿಯ ನೆಲಗಟ್ಟನ್ನು ದೂರವಾಗಿರಿಸಿದಲ್ಲಿ ಯಾವ ಪರಿಹಾರವೂ ಇಲ್ಲವೆಂಬುದು ಸ್ಪಷ್ಟವಾಗಿದ್ದಾಗ, ಕನ್ನಡಿಗರಿಗೆ ತಮ್ಮ ಆಶೆ-ಆಕಾಂಕ್ಷೆಗಳ ವಿಚಾರದಲ್ಲಿ ತಮ್ಮ ಸಂಸ್ಕೃತಿಯ ಅರಿವು ಎಂತಹ ನೆರವನ್ನು ನೀಡಬಹುದು ಎಂಬುದನ್ನು ವಿಶೇಷವಾಗಿ ನಮ್ಮ ಜನ ಗಮನಿಸುತ್ತಿಲ್ಲ. ಕನ್ನಡಿಗರ ಸರ್ವತೋಮುಖವಾದ ಪ್ರಗತಿಗೆ ತೀರ ಆವಶ್ಯಕವಾದ ರಾಜಕೀಯ ಏಕೀಕರಣವು ಸಾಧ್ಯವಾಗಬೇಕಿದ್ದಲ್ಲಿ, ಮೊಟ್ಟಮೊದಲು ಕನ್ನಡಿಗರ ಸಾಂಸ್ಕೃತಿಕ ಏಕೀಕರಣವಾಗಬೇಕೆಂಬ ಮಾತನ್ನು ತುಸು ಒತ್ತಿ ಹೇಳುವುದು ಅವಶ್ಯವೆಂದು ತೋರುತ್ತದೆ.

ಸಾಹಿತ್ಯವಿಹಾರದಲ್ಲಿ ಈ ವಿಷಯವನ್ನೆತ್ತಲು ಸಮರ್ಥನೆ ಯಾವುದನ್ನೂ ಮುಂದುಮಾಡಬೇಕಾಗಿಲ್ಲ. ಕನ್ನಡಿಗರ ಬದುಕೇ ಒಂದು ರೀತಿಯಾಗಿ ಒಡೆದು ಒಂದಾಗಬೇಕೆಂಬ ಬುದ್ಧಿ ಕೂಡ ಸಹಜವಾಗಿ ತಲೆಯೆತ್ತಲಾರದಾಗ, ಕನ್ನಡ ಸಾಹಿತಿಗಳ ನಿರ್ಮಿತಿಸ್ವರೂಪವು ಕೂಡ ಜೀವನದ ಅಂತರ್ಯದಲ್ಲಿಯ ಈ ಒಡಕಿನ ಫಲವಾಗಿ ಒಮ್ಮುಖವಾಗಿ ಒಂದು ಧ್ಯೇಯವನ್ನು ಸಾಧಿಸಬಹುದಾದ ರೀತಿಯಲ್ಲಿ ನಡೆಯುತ್ತಿಲ್ಲವೆಂಬುದಕ್ಕಾಗಿಯೆ ಈ ಮಾತನ್ನು ಇಲ್ಲಿ ಎತ್ತಿದ್ದು. ಕಾರಣಾಂತರಗಳ ಮೂಲಕ ಬೇರೆ ಬೇರೆ ಸ್ಥಳಗಳಲ್ಲಿದ್ದುಕೊಂಡು ತನ್ನ ಅನುಕೂಲಗಳಿಗೋ ಅನಾನುಕೂಲಗಳಿಗೋ ತಕ್ಕಂತೆ ತನ್ನ ಸಾಹಿತ್ಯಸೇವೆಯನ್ನು ಪ್ರತಿಯೊಬ್ಬ ಸಾಹಿತಿಯೂ ನಡೆಸಿರುತ್ತಾನೆ. ಕನ್ನಡ ಜನ ಒಂದು ಜನ; ಜಾತಿ-ಮತಗಳನ್ನು ಮೀರಿದ ಒಂದೇ ಒಂದು ಸಂಸ್ಕೃತಿಯ ರೀತಿ-ನೀತಿಗಳಲ್ಲಿ ಬಾಳನ್ನು ಬೆಳೆಸಿಕೊಂಡು ಬಂದ ಜನ ಎಂಬ ಮಾತನ್ನು ಮನಮೆಚ್ಚುವಂತೆ, ಜನ ಅದನ್ನು ತಿಳಿದು, ಒಪ್ಪಿ ಆ ತಿಳಿವನ್ನೇ ತಮ್ಮ ಆಯುಧವನ್ನಾಗಿಸಿಕೊಂಡು ತಮಗೆ ಸಾಧಿಸಬೇಕಾದ ಗೊತ್ತು-ಗುರಿಗಳ ಕಡೆಗೆ ಮುನ್ನುಗ್ಗುವಂತೆ ಚೇತರಿಸಬಹುದಾದ ಶಕ್ತಿಯುಳ್ಳ ಸಾಹಿತ್ಯವನ್ನು ನಿರ್ಮಿಸಬೇಕಾಗಿದ್ದಲ್ಲಿ, ಲೇಖಕರಲ್ಲಿ ಅಖಂಡ ಕರ್ನಾಟಕದ ದೃಷ್ಟಿಬೇಕು. ಇದು ರಾಜಕೀಯದ ವಿಷಯವೆಂದು ಕೆಲವರು ಹಿಂಜರಿಯುತ್ತಿದ್ದರೆ ಇನ್ನಿತರರು ಬೇಲೂರು-ಹಳೇಬೀಡುಗಳ ಹಳೆಯ ಕತೆಗಳ ಕೀರ್ತನವನ್ನಾರಂಭಿಸುತ್ತಾರೆ. ಪುಲಿಕೇಶಿ, ಕೃಷ್ಣದೇವರಾಯ ದೊಡ್ಡಸ್ತಿಕೆಯನ್ನು ನಾವು ಹೇಳಕೂಡದೆಂದಲ್ಲ. ಯಾವ ಪ್ರಯೋಜನಕ್ಕಾಗಿ ನಾವು ಆ ಹೆಮ್ಮೆಯ ಹೆಸರುಗಳನ್ನು ಹೇಳಿಕೊಳ್ಳಬೇಕೆಂಬುದರ ಬಗೆಯಲ್ಲಿ ಆಸ್ಥೆ ಇರದಿದ್ದರೆ, ಹೇಳಿಕೊಳ್ಳುವುದು ಹಿಂದಿನದ್ದ ನೆನೆದು ಹಿತ್ತಲಲ್ಲಿ ಅತ್ತಹಾಗೆಯೆ. ಹಿಂದಿನದು ನೆನಪು, ಇಂದಿನಾಳನ್ನು ಹಿಂದಿನ ಘನತೆಗೆ ಏರಿಸುವುದಕ್ಕೊಂದು ಸ್ಫೂರ್ತಿಯನ್ನು ಕೊಡುವುದಕ್ಕಾಗಿ ಎಂಬುದನ್ನು ನಾವು ಇಂದು ಮರೆಯುತ್ತಿದ್ದೇವೆ. ಕನ್ನಡ ಸಂಸ್ಕೃತಿಯ ಮಾತನ್ನೆತ್ತಿದಾಗ, ಬಾಹುಬಲಿಯಂಥವನ ಹೆಸರು ಹೇಳಿ ನಾವಿಂದು ಪಾರಾಗಲೆಳಸುತ್ತಿದ್ದೇವಲ್ಲದೆ, ಆ ಸಂಸ್ಕೃತಿಯು ಇಂದು ನಮ್ಮಿಂದ ಯಾವುದನ್ನಪೇಕ್ಷಿಸುತ್ತಿದೆ ಎಂಬುದರ ಕಡೆಗೆ ನಮ್ಮ ಗಮನವಿಲ್ಲ. ಇದರರ್ಥ ಇಷ್ಟೇ: ಸ್ಫೂರ್ತಿ ಕೊಡಬಹುದಾದ ಸಾಂಸ್ಕೃತಿಕ ಜೀವನ ಇಂದು ಕರ್ನಾಟಕದಲ್ಲಿ ಸಾಹಿತ್ಯದಲ್ಲಿ ಒಂದುರೀತಿಯಲ್ಲಾದರೆ, ಸಾಮಾಜಿಕ ಜೀವನದಲ್ಲಿ ಇನ್ನೊಂದು ರೀತಿಯ ಒಂದು ಇಳಿತಾಯದ ಮಟ್ಟದಲ್ಲಿ ಮುಗ್ಗರಿಸುತ್ತಿದೆ. ಮುಂದೆ ನಾವ ಆಶೆ ಇದೆಯೋ ಇಲ್ಲವೋ ಎನ್ನುವಂತಾಗಿದೆ ಎಂದು ಹೇಳಿದರೇ ಆಶಾವಾದಿಗಳ ಹೊರತಾಗಿ ಇನ್ನಾರಿಗೂ ಆಶಾಭಂಗವಾಗುವಂತಿ;

ನಮ್ಮ ಇಂದಿನ ಸಾಹಿತ್ಯದ ವಿಷಯದಲ್ಲಿ ನಮಗೆ ಅಸಂತುಷ್ಟಿ ಇದ್ದರೆ, ಅದಕ್ಕೆ ಮೂಲಕಾರಣವನ್ನು ನಾವು ನಮ್ಮ ಸಾಂಸ್ಕೃತಿಕ ಜೀವನದ ವಿಪರ್ಯಾಸದಲ್ಲಿಯೆ ಕಾಣಬೇಕು. ಒಂದು ಜನತೆಯ ಸಾಹಿತ್ಯದ ಸ್ವರೂಪ ಆ ಜನ ಜೀವನದ ಆಗು-ಹೋಗುಗಳ ಮೇಲೆಯೆ ನಿಂತಿರುವುದೆಂದು ಹೇಳುವುದು ಈ ದೃಷ್ಟಿಯಿಂದಲೇ. ಇಂದಿನ ನಮ್ಮ ಸಾಮಾಜಿಕ ಜೀವನ ನವ ಆಕಾಂಕ್ಷೆಗಳನ್ನು ಸಾಧಿಸುವುದಕ್ಕೊಂದು ಸಾಧನವಾಗಬಲ್ಲ ರೀತಿಯಲ್ಲಿ ಬೆಳೆದು ಬರುತ್ತಿದ್ದರೆ, ಆ ಜೀವನದ ರೀತಿಯೇ ನಮ್ಮ ಸಾಹಿತ್ಯನಿರ್ಮಿತಿಗೆ ಒಂದು ತೆರದ ಹೊಸ ಹುರುಪನ್ನು ತಂದುಕೊಡಬಲ್ಲದಾಗುತ್ತದೆ. ಆದರೆ ನಾವು ಇಂದು ಸಾಮಾನ್ಯವಾಗಿ ನೋಡುವುದೇನು? ಸಾಂಸ್ಕೃತಿಕ ಏಕೀಕರಣದ ಮಾತಂತೂ ದೂರವೇ ಇರಲಿ. ಆ ಸಂಸ್ಕೃತಿಯ ಒಂದು ಮುಖ್ಯವಾದ ಸಾಹಿತ್ಯದಲ್ಲಿ ಕೂಡ ಮತ-ಪಂಗಡಗಳ ರುಂಬಾಟ ಮೇಲಿಂದ ಮೇಲೆ ಕೇಳಬರಹತ್ತಿದೆ. ಒಂದು ಕಡೆಗೆ ಪ್ರತಿಶೀಲತ್ವದ ಕೂಗಾದರೆ ಇನ್ನೊಂದೆಡೆ ಜಾತೀಯ ಸಾಹಿತ್ಯದ ಕೂಗು ಸಾಹಿತ್ಯಕ್ಷೇತ್ರದಲ್ಲಿ ಕೂಡ ಜಾತೀಯ ವಿರಸಗಳು ಮನೆಮಾಡತೊಡಗಿದಾಗ, ಕನ್ನಡಿಗರೆಂಬ ಒಂದು ಜನದ ಸಂಸ್ಕೃತಿಯ ಮುಂಬರವಿನ ವಿಚಾರವನ್ನು ಮಾಡುವುದೇ ಒಂದು ಅಧಿಕಪ್ರಸಂಗನಾಗುವಂತಿದೆ. ಈ ತೆರದ ಒಡಕುಗಳಿಗೆ ನಮ್ಮಲ್ಲಿಯ ತರುಣರು—ಮುಂದಿನ ತಲೆ[illegible]ರಿನಲ್ಲಿ ಕನ್ನಡದ ಜೀವನವನ್ನು ಸಾಗಿಸಿಕೊಂಡು ಹೋಗುವ ಹ[illegible]ಯನ್ನು ಹೊರುವ ಹಿರಿಯರಾಗುವವರು—ಯಾವ ಒಂದು [illegible]ಷ್ಟ ರೀತಿಯ ಪ್ರತಿಕ್ರಿಯೆಯನ್ನೂ ತೋರುತ್ತಿಲ್ಲ. ನಿರಾಯಾ[illegible]ಗಿ ಹೇಗಾದರೂ ಬದುಕಿಕೊಂಡು ಹೋಗಬೇಕೆಂಬ ಅವರ ಅನ[illegible]ಯಲ್ಲಿ ನಮ್ಮ ಜೀವನದ ಅಸ್ತಿವಾರವೇ ಕುಸಿದುಹೋಗುತ್ತ[illegible]ದ್ಯಾವಂತರಾದ ತರುಣ ಕನ್ನಡಿಗರಲ್ಲಿ ಎಷ್ಟು ಜನ ನಿಜವಾಗಿ[illegible]ಂದಿನ ಕನ್ನಡ ಸಾಹಿತ್ಯದ ವಿಚಾರದಲ್ಲಿ, ಅದರಂತೆ ಕನ್ನಡಿಗರ [illegible]ಸ್ಕೃತಿಕ ಜೀವನದ ವಿಚಾರದಲ್ಲಿ

(೨೭ನೆಯ [illegible] ನೋಡಿರಿ !)

ನಮ್ಮೂರ ನಾಯಕರು

(ಚಿಕ್ಕ ಕತೆ)

●

ಶ್ರೀ. ಮಿರ್ಜಿ ಅಣ್ಣಾರಾಯರು, ಉಗಾರ

ಅಣ್ಣ-ತಮ್ಮಂದಿರನ್ನೂ ಅರೆದು ತಿನ್ನಲು ಹೇಸದ ಊರ ನಾಯಕರು ಮಾನವರೆ? ತಿಮಿಂಗಿಲ ಕುಲಕ್ಕೆ ಸೇರಿದ ದಾನವರು!

"ಅಪ್ಪಾ! ಅಪ್ಪಾ! ಅಪ್ಪಾ!"

ಶ್ರಾವಣಮಾಸ. ರಾತ್ರಿ ಸುಮಾರು ಹನ್ನೊಂದು ಗಂಟೆಯಾಗಿರಬಹುದು. ಮುಗಿಲ ತುಂಬ ಮೋಡ ಮುಸುಕಿದೆ. ಮಳೆ ನಿಂತು ಒಂದೆರಡು ಗಳಿಗೆಯಾಗಿರಬೇಕು. ಇನ್ನೂ ಬೀದಿಯ ಮೇಲೆ ಅಲ್ಲಲ್ಲಿ ನೀರು ನಿಂತಿದೆ. ಆ ನೀರಲ್ಲಿಯ ಕಪ್ಪೆಗಳು 'ರಾಕ್ ರಾಕ್' ಎಂದು ಒದರಿ, ರಾತ್ರಿಯ ಗಭೀರತೆಯನ್ನು ಭೀಕರತೆಗೆ ಮಾರ್ಪಡಿಸುತ್ತಲಿವೆ. ಅದಕ್ಕೆ ಸುತ್ತಲೂ ಹಬ್ಬಿದ ಕಗ್ಗತ್ತಲೆಯೂ ನೆರವಾಗುತ್ತಲಿದೆ.

ಇಂತಹ ಸಮಯದಲ್ಲಿ, ಒಂದು ಚಿಕ್ಕ ಮನೆಯ ಮುರುಕು ಬಾಗಿಲನ್ನು ತಟ್ಟಿ ತಟ್ಟಿ ಒಬ್ಬ ಯುವಕನು, ಮೇಲೆ ಹೇಳಿದಂತೆ "ಅಪ್ಪಾ! ಅಪ್ಪಾ! ಅಪ್ಪಾ!" ಎಂದು ಕರೆಯುತ್ತಲಿದ್ದಾನೆ. ಅವನ ವಯಸ್ಸು ಸುಮಾರು ಇಪ್ಪತ್ತಾರು ಇಪ್ಪತ್ತೇಳು ಇರಬಹುದು.

ಸ್ವಲ್ಪ ಹೊತ್ತಿನಲ್ಲಿಯೆ ಬಾಗಿಲು ತೆರೆಯಿತು. ಒಳಗಿನಿಂದ ಒಬ್ಬ ಮುದುಕ ಹೊರಗೆ ಬಂದು ನೋಡಿ 'ಶಿವು ಬಂದ!' ಎಂದು ಉದ್ವೇಗದಿಂದ ಉದ್ಗಾರ ತೆಗೆದು "ಎಲ್ಲಿ ಹೋಗಿದ್ದೆಪ್ಪಾ ಮಗನೆ ಇಷ್ಟ ದಿನ?" ಎಂದು ದುಃಖ ಬಿಗಿಹಿಡಿದ ಹಿಡಿದ ಸ್ವರದಲ್ಲಿ ಕೇಳುತ್ತ ಕೊರಳಿಗೆ ಬಿದ್ದನು. ಇಬ್ಬರೂ ಮನೆಯನ್ನು ಸೇರಿದರು. ಒಳಗಿನ ಮುದುಕಿ —ಶಿವುನ ತಾಯಿ—'ಸುಡುಗಾಡ, ಕಡ್ಡೀಪೆಟ್ಟಿಗಿ ಎಲ್ಲಿ ಐತ್ಯೋ!' ಎಂದು ಕತ್ತಲೆಯಲ್ಲಿಯೆ ಕೈಯಾಡಿಸಿ ಹುಡುಕಿದಳು. ಸಿಕ್ಕದಿರಲು ಸ್ವಲ್ಪ ಯೋಚಿಸಿ, ಮಲಗುವಾಗ ತನ್ನ ತಲೆದಿಂಬಿನ ಬುಡದಲ್ಲಿ ಇಟ್ಟು-ಕೊಂಡುದನ್ನು ನೆನೆದು, ಅದನ್ನು ತಕ್ಕೊಂಡಳು. ಒಂದೆರಡು ಕಡ್ಡಿ-ಗಳನ್ನು ಕೆರೆಯಲು ಅವು ಹೊತ್ತಲಿಲ್ಲ. ಆಗ ಮತ್ತೊಂದು ಕಡ್ಡಿಯನ್ನು ಪೆಟ್ಟಿಗೆಯಿಂದ ತೆಗೆದು, ತನ್ನ ಉಟ್ಟ ಸೀರೆಗೆ ತಿಕ್ಕಿ ಸ್ವಲ್ಪ ಬೆಚ್ಚಗೆ ಮಾಡಿ, ಅನಂತರ ಕೆರೆದಳು. ಕಡ್ಡಿ ಹೊತ್ತಿ ಮನೆತುಂಬ ಮಂದ-ಪ್ರಕಾಶವನ್ನು ಹಬ್ಬಿಸಿತು ಕೂಡಲೆ ಅವಳು ಒಂದು ಪಣತಿಯೊಳಗಿನ ಬತ್ತಿಗೆ ಹಚ್ಚಿದಳು. ಅದು ಸ್ವಲ್ಪ ಹೊತ್ತು "ಚಿಟ್‌ಚಿಟ್" ಎಂದು, ಬಳಿಕ ಹೊತ್ತಿತು. ಮುದುಕಿ ಅದೇ ಕಡ್ಡಿಯಿಂದ ದೀಪದ ಮಕ್ಕು ಹೊಡೆದು ಬತ್ತಿಯನ್ನು ಸ್ವಲ್ಪ ಚಾಚಲು, ಕಮರು ವಾಸನೆಯನ್ನು ಹರಡುತ್ತ ದೀಪವು ಸಾಧಾರಣ ಥಾಳಾಗಿ ಉರಿಯತೊಡಗಿತು.

ಮುದುಕಿಯ ಕಣ್ಣುಗಳಲ್ಲಿ ನೀರೂರಿದ್ದಿತು. ಸೋತಕಣ್ಣಿನಿಂದ ಮಗನ ಕಡೆಗೊಮ್ಮೆ ದೃಷ್ಟಿಯನ್ನು ಬೀರಿದಳು. ಶಿವು, ಅವಳು ಹೊತ್ತುಕೊಳ್ಳುವ ಕವುದೆಯನ್ನು ಸ್ವಲ್ಪ ಸರಿಸಿ, ಹಾಸಿದ್ದ ಚಾಪೆಯ ಮೇಲೆ ಕುಳಿತ....ಕೆಸರಾದ ಕಾಲುಗಳನ್ನು ಹಾಸಿಗೆಯ ಹೊರಕ್ಕೆ ಇಟ್ಟು. ಒಂದೆರಡು ನಿಮಿಷ ಯಾರೂ ಮಾತನಾಡಲಿಲ್ಲ. ಕೊನೆಗೆ ಶಿವಪ್ಪನೇ ಮೌನವನ್ನು ಮುರಿದು "ತೋರೂ ಎಲ್ಲಿ ಕಾಣಿಸೂದಿಲ್ಲ?" ಎಂದು ಕೇಳಿದ.

ತಾಯಿ ಏನನೂ ಹೇಳಲಿಲ್ಲ; ಕಣ್ಣೊಳಗಿನ ನೀರನ್ನು ಒರಸಿ-ಕೊಂಡಳು ಮಾತ್ರ. ಶಿವಪ್ಪನ ಎದೆಯು ಜೋರಿನಿಂದ ಹಾರಹತ್ತಿತು; ತುಟಿಗಳು ಒಣಗಿದುವು. ಮುಂದೆ ಏನು ಮಾತನಾಡಬೇಕೆಂಬುದೂ ಅವನಿಗೆ ತಿಳಿಯದಾಯಿತು. ಸುಮ್ಮನೆ ಮೂಕನಂತೆ ತಂದೆಯ ಮುಖದ ಕಡೆಗೆ ನೋಡತೊಡಗಿದ. ಆಗ ತಂದೆಯು ಮೆಲ್ಲಗೆ ನುಡಿದ:

"ಗೌಡರ ಮನ್ಯಾಗ ಕೆಲಸಕ್ಕ ಇಟ್ಟೇವಿ. ಹೊಟ್ಟೆ ಅರಿವೆ ನೋಡಿಕೊಂಡು, ತಿಂಗಳಿಗೆ ಮೂರು ರೂಪಾಯಿ ಕೊಡತಾರ....ಅಷ್ಟನ ತಂದು ಗಂಜೀ ಕಾಸಿ ಕುಡಿತೀವಿ....ಆಯ್ತು!"

"ಏನ್ ಮಾಡೂದು? ಹಸಿವಿಗಾಗಿ ಹೊಟ್ಟೀ ಕರಳು ಬೇಲೀ ಮ್ಯಾಲ ಹಾಕೋದು! ನಿನ್ನೀ ಹುಡುಗ ಸಿಕ್ಕಿತ್ತು...ಹಳ್ಳದ ಹಾದ್ಯಾಗ!" ಎಂದು ತಾಯಿ ಅಳುದನಿಯಲ್ಲಿ ಮಾತನ್ನು ಮುಂದುವರಿಸಿದಳು: "ಗೌಡನ ಹರಕ ಅಂಗೀ ಹಾಕ್ಕೊಂಡಿದ್ದ; ಮೈಯೆಲ್ಲ ಕಾಣಿಸತಿತ್ತು.... ಚಳಿ ಹತ್ತಿ ಹಲ್ಲಿಗೆ ಹಲ್ಲು ಬಡೀತಿದ್ದು;....ಸೊರಗಿ ಸೊರಗಿ ಕಡ್ಡಿ ಆಗ್ಯಾನ....ಹೊಟ್ಟೆಗೆ ಚೆಲೂ ನೋಡೂದಿಲ್ಲ ಅಂತ...." ಮಾತಿನ ಮುಗಿತದೊಡನೆ ಅಳತೊಡಗಿದಳು ಮುದುಕಿ.

"ನಾಳೇ ನೌಕರೀ ಬಿಡಿಸಿ ತರತೀನಪ್ಪಾ ಅವನ್ನ....ಚಿಂತೀ ಮಾಡಬ್ಯಾಡ ನೀ!"

"ಏನ್ ತರತೀಯಪ್ಪಾ....ಒಂದ್ನ ಮಾತು ಬಯ್ದದ್ದಕ್ಕ ನೀನೂ ಆರು ತಿಂಗಳಾತ್ಯು, ಮನೀ ಬಿಟ್ಟು ಹೊಂಟು ಹೋದಿ. ಪತ್ತೇ ಇಲ್ಲ.... ಸುದ್ದಿ ಇಲ್ಲ....ಯಾರೋ ಹೇಳಿದರು.... 'ಮಿಲಿಟರಿ ಭರತೀ ಆಗ್ಯಾನ' ಅಂತ...." ದುಃಖ ಉಕ್ಕಿ ಬರಲು "ಅಯ್ಯೋ ನನ್ನ ಮಗನ!" ಎಂದು ಶಿವಪ್ಪನನ್ನು ಅಪ್ಪಿಕೊಂಡು ಅಳತೊಡಗಿದಳು.

"ಛೇ ಛೇ!....ನಾ ಭರತೀ ಆಗಿಲ್ಲ ಮಿಲ್ಟ್ರೀ ಒಳಗ!"

"ಆಗಿಲ್ಲ....? ಕುಲಕರ್ಣೇರು ಒಯ್ದು ಭರತೀ ಮಾಡಿದ್ದರಂತ-ಲ್ಲಪ್ಪಾ!" ಅರ್ಧ ಹರ್ಷ, ಅರ್ಧ ಸಂದೇಹ ಬೆರೆತ ಧ್ವನಿಯಲ್ಲಿ ಮುದುಕ ಕೇಳಿದ.

"ಹೌದು, ಆ ದಿವಸ ನಾವು ಮನಿಯೊಳಗ ಸ್ವಲ್ಪ ಜಗಳಾಡಿದ್ದನ್ನ ಯಾರೋ ಕುಲಕರ್ಣೇರಿಗೆ ಹೇಳಿದರಂತ. ಸಂಜಿಗೆ ಕಟ್ಟೀ ಮ್ಯಾಲ ಕೂಡಾಗ ಕರಿಸಿದರು. ಹೀಂಗ್ಯ ಆ ಮಾತು ಈ ಮಾತು ಕೇಳತಾ ಮಿಲಿಟರಿಗೆ ಭರತೀ ಆಗತೀಯೇನಂತ ಕೇಳಿದರು....ಚಹಾನೂ ಒಂದು ಕಪ್ಪು ತರಿಸಿ ಕೊಟ್ಟರು. 'ಯಾಕ ಮಳಿ ಬಾಡೀತ? ಮಧ್ಯಾಹ್ನದಾಗ ಉಂಡಿದಿಯೋ ಇಲ್ಲೋ?' ಎಂದು ಕೇಳಿ, ರಾತ್ರಿ ತಮ್ಮ ಮನಿಗೆ ಊಟಕ್ಕ ಬರಲಿಕ್ಕೂ ಹೇಳಿದರು. ಅಂದು ಅವರಲ್ಲೇ ಊಟಾ ಮಾಡಿದೆ ಮನೀಗೇನು ಮಲಗಲಿಕ್ಕೆ ಬರಬೇಕಂದರ ಬಿಡಲಿಲ್ಲ.

ಮರುದಿನ ಸೂರ್ಯಾ ಉದಯ ಆಗೂದಕಿಂತಾ ಮುಂಚೇ ಎಬ್ಬಿಸಿ, ಸ್ಟೇಶನಕ್ಕ ಕರಕೊಂಡು ಹೋದರು; ಹೆಸರು ಬರೆದುಕೊಟ್ಟು ದಂಡಿಗೆ ಭರತೀ ಮಾಡಿಬಿಟ್ಟರು....! "

" ಅಂ? " ಎಂದು ಮುದುಕ ಗಾಬರಿಯಾಗಿ ಬಾಯಿ ತೆರೆದ.

" ಮುಂದ? " ಎಂದಳು ಮುದುಕಿ.

" ಮುಂದ ಪುಣೆಗೆ ಒಯ್ದರು....ಅಲ್ಲಿ ನನ್ನ ಕೈ ಮುರಿದದ್ದನ್ನ ನೋಡಿದರು....' ಅನ್‌ಫಿಟ್ ' ಅಂತ ಏನೋ ಹೇಳಿ ಬಿಟ್ಟುಬಿಟ್ಟರು. ನನ್ನ ಜೊತೆ ಇದ್ದವರನೆಲ್ಲಾ ಬ್ಯಾರೇ ಕಡೆ ಒಯ್ದುಬಿಟ್ಟರು. ನಾ ಪುಣೆ-ದಾಗ ಎರಡು ದಿನಾ ತಿರುಗಾಡಿದೆ....ದೊಡ್ಡ ಊರದು; ಯಾರು ಕೇಳಬೇಕು....? ನನ್ನ ಹತ್ತರ ಗಾಡೀ ಖರ್ಚಿಗೂ ರೊಕ್ಕ ಇರಲಿಲ್ಲ.... ತಿರುಗಿ ಊರಿಗೆ ಬರಬೇಕಂದರ! ಅಲ್ಲೇ ಹೊಟೇಲಿನೊಳಗ ಕೆಲಸಕ್ಕ ನಿಲ್ಲಬೇಕಂತ ಅಲ್ಲಿ ಇಲ್ಲಿ ಅಲೆದಾಡಿ, ಒಂದು ಕೆಲಸಾ ಹಿಡಿದೆ....ಗಾಡೀ ಖರ್ಚಿನ ಪೂರ್ತಿ ಪಗಾರ ಕೂಡಿದ ಕೂಡ್ಲೆ ಊರಿಗೆ ಬರಬೇಕಂದರ.... ಮಾಲಕರು ಪಗಾರನs ಕೊಡವೊಲ್ಲರು....ಕೇಳಲಿಕ್ಕೆ ಹೋದರ ' ಈಗ್ಯಾತಕ್ಕ ಬೇಕು? ಒಮ್ಮೇ ಕೊಡತೀವಂತ! ' ಅನ್ನೋರು. ಹಾಗೇ ಈ ಆರು ತಿಂಗಳು ಕಳೆದು, ಆ ಮ್ಯಾಲೆ ಪಗಾರ ಕೊಟ್ಟರು. ಈಗ ಊರಿಗೆ ಬಂದು ಹತ್ತಿದೆ!" ಎಂದು ತನ್ನ ಆರು ತಿಂಗಳ ಕಥೆಯನ್ನು ಸ್ವಲ್ಪದರಲ್ಲಿ ಹೇಳಿ ಮುಗಿಸಿದ ಶಿವಪ್ಪ.

" ಇಲ್ಲಪ್ಪಾ, ಇನ್ನೂ ಯಾವಾಗ ಹಿಡಿದು ಒಯ್ಯತಾರೊ ಏನೋ ನೇಮನs ಇಲ್ಲ!....ಮೊನ್ನೆ ಮೂರು ತಿಂಗಳು ತಿರಗಾಡತಿದ್ದ ಪರಮಾ-ನಟ್ಟಿ ಪದಮ್ಯಾನ್ನ ಒಮ್ಮೆಲೇ ಬಂದು ಹಿಡಿದು ಒಯ್ದರು...."

" ಅಂವ ಮಿಲಟರಿಗೆ ಭರತೀ ಆಗ್ಯಾನ!....ಅವನ ಹಾಂಗ ನಾ ಭರತೀ ಆಗಿಲ್ಲ!" ಸ್ವಲ್ಪ ಸಿಟ್ಟಿನ ಸ್ವರದಿಂದ ಹೇಳಿದ ಶಿವಪ್ಪ.

" ಏನ್ ನಿಂದೂ ನೇಮನs ಹೇಳಲಿಕ್ಕೆ ಬರೂದಿಲ್ಲ ಬಿಡು.... ಮೊದಲ ' ಟೇಶನ ಮ್ಯಾಲೆ ಭರತೀ ಮಾಡಿದರು ' ಅಂತ ಹೇಳತಿ.... ಮುಂದ—ಪುಣೇಕ ಒಯ್ದು ಬಿಟ್ಟರೂ ಅಂತೀ! " ಎಂದು ಬೇಸರದಿಂದ ಉಸುರಿದ ಮುದುಕ.

" ಹೌದು, ಕೈ ಮುರಿದವರನ್ನ ಏನ್ ಮಾಡತಾರಲ್ಲೆ ತೊಗೊಂಡು....? ಡಾಕ್ಟರ್ ಪರೀಕ್ಷಾ ಮಾಡ್ತಾರ....ಸ್ವಲ್ಪ ಏನಾದ್ರೂ ಬ್ಯಾನಿ ಇದ್ದರ....ನೋವು ಇದ್ದರ....ಡಿಸ್‌ಮಿಸ್ ಮಾಡಿ ಬಿಡತಾರ.... ತಿಳೀತೂ....? "

" ಆಗಸರ ಭೀಮನ ಕಣ್ಣು ಒಂದು ಕಾಣಸತಿದ್ದಿಲ್ಲ; ಹಾಂಗs ಒಯ್ದರು....! ಲಷ್ಕರಿನೊಳಗ ಹಾಕಲಿಲ್ಲ....ಸಾಹೇಬರ ಅರವೀ ಒಗೀ-ಲಿಕ್ಕೆ ಹಚ್ಚಿದರು.... ಕೈಯೊಳಗ ಸಿಕ್ಕವರನ್ನ ಮನೀಗೆ ಬಿಡತಾರs ಅವರು....? ಹೇಳತೀ ನೀ ಇಲ್ಲದ್ದs ಒಂದು ! "

ಆ ದಿನ ಇರುಳೆಲ್ಲ ಆ ಮಾತು ಈ ಮಾತುಗಳಲ್ಲಿಯೆ ಕಳೆಯಿತು. ತಾಯಿಗೆ ' ಎಲ್ಲಿಯೇ ಹೋಗವೊಲ್ಲನ್ಯಾಕ; ಈಗ ಮಗ ಮನಿಗೆ ಬಂದನಲ್ಲ ' ಎಂಬ ಹಿಗ್ಗು. ತಂದೆಗೆ ಮಾತ್ರ ' ಮನಿಗೆ ಬಂದ ಮಗನನ್ನ ಮತ್ತೆ ಹಿಡಿದು ಒಯ್ದರೆ!....' ಎಂಬ ಚಿಂತೆ. ಇನ್ನೂ ನಸುಕು ಇರುವಾಗಲೇ ಭೀಮಪ್ಪ—ಶಿವಪ್ಪನ ತಂದೆಯ ಹೆಸರು—ಎದ್ದು, ಇದೀಗ ಹೊರಗೆ ಬಂದು, ಕೆಮ್ಮುತ್ತ ಅಂಗಳ ಕಸ ಗುಡಿಸುವುದರಲ್ಲಿದ್ದ. ಮನದಲ್ಲಿ ' ನಾಲ್ಕು ದಿನ ಶಿವಪ್ಪನನ್ನು ಎಲ್ಲಿಯಾದರೂ ಅಡವಿಯಲ್ಲಿ ಇಡಬೇಕು; ಊರ ಜನ ಕೆಟ್ಟ; ಮತ್ತೇನಾದರೂ ಪೋಲಿಸರಿಗೆ ತಿಳಿಸಿದರೆ ಹಿಡಿದು ಒಯ್ದಾರು....' ಎಂದು ಮೊದಲಾಗಿ ಯೋಚಿಸುತ್ತಲಿದ್ದ. ಅಷ್ಟರಲ್ಲಿಯೆ ಕಸ ಒಗೆಯಲಿಕ್ಕೆಂದು ಬಂದ ನೆರೆಮನೆಯ ಹೆಂಗುಸೊಬ್ಬಳು ಕೇಳಿದಳು:

" ಭೀಮಣ್ಣಾ, ರಾತ್ರಿ ಶಿವ್ಯಾ ಬಂದಾ? " ಭೀಮಪ್ಪ ಅಂಗಳ ಕಸಗುಡಿಸುವುದನ್ನು ಅಷ್ಟಕ್ಕೇ ನಿಲ್ಲಿಸಿ ಉಸುರುಗರೆದನು; " ಎಲ್ಲಿಂದ ಬರತಾನ ?ಹೋಗಿ ಆರು ತಿಂಗಳಾತು....ಇನ್ನೂ ಪತ್ತೆನs ಇದ್ದಿಲ್ಲ! " ಎಂದು ಹೇಳಬಾರದೆಂದಿದ್ದ ಸಂಗತಿಯನ್ನು ಅರ್ಧ ಹೇಳಿದಂತೆಯೇ ಮಾಡಿ, ಮಾತನ್ನು ಮುಗಿಸಿದ.

"ಅಲ್ಲ, ರಾತ್ರೀ ಅವನ ಹಾಂಗs ದನಿ ಕೇಳಬಂತು;....ಅದಕ್ಕಂಡೆ."

" ಇಲ್ಲ !....ನಮ್ಮಾಕಿನs....ರಾತ್ರೀ ಮಗನ ನೆನಪು ಮಾಡಿ ಬೆಳ್ಳ ಬೆಳತನಕಾ ಅಳತಿದ್ದಳು!" ಎಂದು ಹೇಳಿ ಕಸಬರಿಗೆಯನ್ನು ತಕ್ಕೊಂಡು ಒಳಕ್ಕೆ ಹೋದ. ಲಗುಬಗೆಯಿಂದ ಶಿವಪ್ಪನನ್ನು ತಟ್ಟಿ ಎಚ್ಚರಿಸಿ, ಕಳ್ಳದನಿಯಿಂದ "ಶಿವ್ಯಾ ಬೆಳಗಾಯಿತು.... ಏಳು! ಇನ್ನೂ ಯಾರು ಕೇಳ್ಯಾರೋ....ಇಲ್ಲೋ; ಅಷ್ಟರೊಳಗs....ಹೋಗು ನೀ! ಸಿದ್ದಪ್ಪನ ತೋಟಕ್ಕ ನಡೀ! ಹಿಂದಿನಿಂದ ರೊಟ್ಟೀ ತೊಗೊಂಡು ನಾ ಬರತೇನಂತ. ಸಂಜಿಗೆ ಮತ್ತ ಬಂದೀಯಂತ ! " ಎಂದು ಹೇಳಿದ.

" ಇಲ್ಲ; ಯಾರು ಏನ ಮಾಡ್ತಾರಪ್ಪಾ? ನಾ ಏನು ಭರತೀ ಆಗೇದಿನೇನು? "

" ಅಲ್ಲೋ ಶಿವ್ಯಾ, ನಿನಗ ಗೊತ್ತಿಲ್ಲ; ನಮ್ಮೂರು ಬಹಳ ಕೆಟ್ಟ! ಮತ್ತ ಎಲ್ಲಿಯಾದರೂ ಒಯ್ದಾರೂ ಅಂತ ಎದಿ ಹಾರತೈತಿ ನಂದು! ನಾಕು ದಿನಾತನಕ ಹೋಗು, ನಾ ಯಾರಿಗಾದರೂ ಹೇಳಿ ವ್ಯವಸ್ಥಾ ಮಾಡೂತನಕಾ! " ಎಂದು ಏನೇನೋ ಸಮಾಧಾನ ಹೇಳಿ, ಕಳುಹಿ ಬಿಟ್ಟನು.

* * * *

ಶಿವಪ್ಪ ಸಿದ್ದಪ್ಪನ ತೋಟದಲ್ಲಿ ಹೋಗಿ ನಿಂತ. ಸಿದ್ದಪ್ಪ ನಮ್ಮೂರ ದೊಡ್ಡ ರೈತ. ಅವನ ತೋಟ ಊರು ಬಿಟ್ಟು ನಾಲ್ಕು ಮೈಲು ದೂರದಲ್ಲಿದೆ, ಒಂದು ಮೊರಡಿಯ ಇಳುಕಲಲ್ಲಿ. ಅತ್ತ ಊರ ಜನರು ಹೋಗುವುದು ಕಡಿಮೆ. ಅಲ್ಲದೆ ಸಿದ್ದನಿಗೂ ಭೀಮನಿಗೂ ಮೊದಲಿ ನಿಂದಲೂ ಸ್ವಲ್ಪ ಸಂಬಂಧ ಸಿದ್ದನೆಂದರೆ ಭೀಮನ ಮನೆಯವರಿಗೆಲ್ಲ ತುಂಬ ವಿಶ್ವಾಸ. ಭೀಮನ ವಿಷಯಕ್ಕೆ ಸಿದ್ದನ ಮನೆಯವರಿಗೂ ಹಾಗೆಯೆ, ಅದಕ್ಕೆ ಸಿದ್ದನಲ್ಲಿ ಭೀಮನು ಕೂಲಿಯ ಆಳನಂತೆ ದುಡಿ ಯದೆ ಮನೆಯವನಂತೆ ದುಡಿಯುತ್ತಿದ್ದುದೂ, ಸಿದ್ದನು ಭೀಮ ಬಡವ ನೆಂದು ಬಗೆದು ತನ್ನ ತೋಟದಲ್ಲಿರುವ ಕಾಯಿ ಕಸುರುಗಳನ್ನು ಸ್ವಲ್ಪ ಕೊಡುತ್ತಿದ್ದುದೂ ಕಾರಣವಾಗಿದ್ದುವು.

ಶಿವಪ್ಪ ಹಗಲು ತೋಟದಲ್ಲಿ ಇರುತ್ತಿದ್ದ; ರಾತ್ರಿಯಾಗಲು ಮನೆಗೆ ಮಲಗಲು ಬರುತ್ತಿದ್ದ. ಒಂದೊಂದು ದಿನ ತೋಟದಲ್ಲಿಯೆ ಮಲಗಿದರೂ ಮಲಗಿದನೆ. ಆಗ ಸಿದ್ದನಲ್ಲಿಯೆ ಶಿವಪ್ಪನ ಊಟ. ಸಿದ್ದನಿಗಾದರೂ ಅನಾಯಾಸವಾಗಿ ಹೊಟ್ಟೆಗೆ ಹಾಕಿ ದುಡಿಸಿಕೊಳ್ಳಲು ಒಂದು ಆಳು ಸಿಕ್ಕಿತು. ' ಇರುವಷ್ಟು ದಿನ ಇದ್ದು ಬಿಡಲಿ, ತಲೆ ತಪ್ಪಿಸಿಕೊಂಡು ತಿರುಗುವ ಶಿವಪ್ಪ ಕೂಲಿಯನ್ನು ಬೇರೆ ಬೇಡುವ

ದಿಲ್ಲವಲ್ಲ!' ಎಂದು ಸಂತೋಷವಾಗಿದ್ದಿತು. ಒಮ್ಮೆ ಭೀಮನನ್ನು ಕರೆದು, "ಭೀಮಾ, ಶಿವಪ್ಪನ ವಿಷಯಕ್ಕ ನೀ ಏನೂ ಕಾಳಜೀ ಮಾಡೂ ಜರೂರಿಲ್ಲs....ನಮ್ಮ ತೋಟದ ಕಡೆ ಯಾವ ಮಗಾನೂ ಹಾಯೂಹಾಂಗಿಲ್ಲ....ಒಮ್ಮೆ ಊರಾಗಿನ ಸುದ್ದಿ ಆಡಗೂತನಕಾ.... ಕುರಾಲ....ಹಗಲು ರಾತ್ರಿ ಇರಲಿ....ಇಲ್ಲೇ!" ಎಂದು ಭೀಮನ ಮೇಲೆ ಮಹದುಪಕಾರ ಮಾಡುವವನಂತೆ ಹೇಳಿಬಿಟ್ಟ.

ಭೀಮಪ್ಪನ ಮುಖ ಈಗ ನಾಲ್ಕಾರು ದಿನಗಳಿಂದ ಸ್ವಲ್ಪ ಕಳೆಗೊಂಡಿದೆ. ಆದರೂ ಅವನ ಮನಸ್ಸಿನಲ್ಲಿ 'ಮಗನನ್ನು ಇನ್ನೂ ಮಿಲಟರಿಯವರು ಬಂದು ಹಿಡಿದು ಒಯ್ದರೆ....?' ಎಂಬ ಚಿಂತೆಯೊಂದು ಮನೆಮಾಡಿಕೊಂಡಿತ್ತು. ಅದು ಸಹಜವಾಗಿ ಊರ ಜನರು 'ಇನ್ನೂ ಎಲ್ಲಿ ಮಗನ ಸುದ್ದಿ ಹತ್ತಲಿಲ್ಲs....ಭೀಮಣ್ಣಾ....' 'ಮೊನ್ನೆ ಯಾರಿಗೋ ಸ್ಟೇಶನ ಮ್ಯಾಲೇ ದೊರಕಿದ್ದನಂತ ಅಲ್ಲಾ?....' ಎಂದು ಮೊದಲಾಗಿ ಕೇಳುವ ವಿವಿಧ ಪ್ರಶ್ನೆಗಳಿಂದ ಚಿಂತೆ ಮತ್ತಿಷ್ಟು ಹೆಚ್ಚುತ್ತಲಿತ್ತು. ದೂರದಲ್ಲಿ ಯಾರು ಏನು ಮಾತನಾಡಿದರೂ ಅವರು ತನ್ನ ಮಗನ ವಿಷಯಕ್ಕೇ ಮಾತನಾಡುತ್ತಿರುವರೇನೋ—ಎಂದು, ಬೆದರಿದ ಭೀಮಪ್ಪನ ಮನಸ್ಸಿಗೆ ಭಾಸವಾಗುತ್ತಲಿದ್ದಿತು. ಈಗೀಗ ಜನರು ಅವನ ಕಡೆಗೆ ನೋಡಿದರೆ ಸಾಕು; ಕೇವಲ ಸಂಶಯ ದೃಷ್ಟಿಯಿಂದಲೇ ತನ್ನನ್ನು ನೋಡುವರೆಂದು ತಿಳಿಯುವನಾತ. ಊರಲ್ಲಿ ರಜೆ ಪಡೆದು ಬಂದ ಮಿಲಟರಿಯಲ್ಲಿ ಸೇರಿದ ತರುಣರು ಡ್ರೆಸ್ಸು ಮಾಡಿಕೊಂಡು ಸಹಜವಾಗಿ ಭೀಮನ ಮನೆಯ ಮುಂದಿನಿಂದ ಹಾಯ್ದರೂ ಸಾಕು; ಇವನ ಎದೆ ಡವ ಡವ ಹೊಡೆದುಕೊಳ್ಳ ತೊಡಗುವುದು. ಅಕಸ್ಮಾತ್ ಅವರು ಹೊರಳಿ ಇವನ ಮನೆಯ ಕಡೆಗೆ ನೋಡಿದರಂತೂ ತೀರಿಯೆ ಹೋಯಿತು; ಭೀಮನ ಕೈಕಾಲುಗಳೇ ತಣ್ಣಗಾಗುವುವು. ಮೊನ್ನೆ ಒಬ್ಬ—ಮಿಲಟರಿಯಲ್ಲಿ ಹೋಗಿ ಬಂದ ಹುಡುಗ—'ನಿನ್ನ ಮಗಾ ಈಗೆಲ್ಲಿ ಇದ್ದಾನ? ತಿಂಗಳಾ ರೂಪಾಯಿ ಎಷ್ಟು ಕಳಸ್ತಾನ....? ಪತ್ರ ಬರ್ತಾವೇನು ಪ್ಯಾಲಿಂದ ಮ್ಯಾಲ?....' ಎಂದು ಸ್ವಾಭಾವಿಕವಾಗಿ ಕೇಳಲು, ಭೀಮನು ಒಮ್ಮೆಲೆ ಅವನ ಪಾದಗಳನ್ನು ಮುಟ್ಟಿ, ಕಣ್ಣೀರು ಸುರಿಸುತ್ತ....'ಯಾರಿಗೂ ಹೇಳಬ್ಯಾಡಪ್ಪಾ; ಬಡವರ ಮ್ಯಾಲೆ ದಯಾ ಮಾಡು....ನಿಮ್ಮಂತೆ ನಾಲ್ಕು ಮಂದಿ ಇಲ್ಲ....ಮನ್ಯಾಗ!....ಕೈ ಬಾಯಿಗೆ ಬಂದಾಂವ ಒಬ್ಬನs ಮಗಾ..' ಎಂದು ಅಂಗಲಾಚಿ ಬೇಡಿಕೊಂಡ. ಅಷ್ಟಕ್ಕೇ ಹೊರಗೆ ನಗರಗಳಲ್ಲಿ ಅಲೆದಾಡಿ ಬಂದ ಆ ತರುಣ, ಇದರಲ್ಲೇನಾದರೂ ಗುಟ್ಟು ಇದೆ ಎಂದರಿತು, ಭೀಮನನ್ನು ಸಲ್ಪ ಬೆದರಿಸಿ, ಸ್ವಲ್ಪ ರಮಿಸಿ, ಎಲ್ಲ ಸಂಗತಿಯನ್ನು ಕೇಳಿ ತಿಳಿದುಕೊಂಡೇ ಬಿಟ್ಟ....ಹೀಗೆ ಶಿವಪ್ಪನು ಬಂದ ಸುದ್ದಿಯು ಭೀಮಪ್ಪನಿಂದಲೇ ಊರಲ್ಲಿ ಕೆಲವು ಜನರಿಗೆ ಗೊತ್ತಾಗಿ ಹೋಯಿತು.

ಭೀಮನಿಗೆ ಮಗನು ಮನೆಗೆ ಬಂದಿರುವನೆಂದು ಅಷ್ಟು ಸಂತಸವಿಲ್ಲ. 'ಇನ್ನು ಮೇಲೆ ಮಗನು ಮಿಲಟರಿಯವರ ಕೈಗೆ ಸಿಕ್ಕದಂತೆ ಉಳಿಸಿಕೊಳ್ಳುವದೆಂತು?' ಎಂಬ ಚಿಂತೆಯು ಹಗಲಿರುಳೂ ಅವನ ಮನಸ್ಸನ್ನು ತಿನ್ನುತ್ತಲಿದ್ದಿತು. ಇಂದು ಭೀಮ ಊಟ ಮಾಡಿ ಎದ್ದ ಕೂಡಲೆ, ಮಗನ ಚಿಂತೆ ಅವನ ಮನವನ್ನಾವರಿಸಿತು. ಆಗ ಒಮ್ಮೆಲೆ ಅವನಿಗೊಂದು ವಿಚಾರ ಹೊಳೆಯಿತು: 'ಮೂಲೀಮನಿ ಗುಂಡಪ್ಪಂದರ ಊರ ಕಾರಭಾರಿ; ಗೌಡ-ಕುಲಕರ್ಣೇರ ಮನಿಗೂ ಹೋಗಿಬರುವ ರೂಢಿಯವನದು ! ಯಾವಾಗಲೂ ಗೌಡರ ಹತ್ತರಾನs ಬಿದ್ಕೊಂಡು ಇರತಾನ....ಊರಾಗಿನ ಮದಿವೀ ಮುಂಜೀ ಹಿಡಕೊಂಡು... ಹೊಲಾ ಮನೀ ಪಾಲುಗಾರಿಕೀ ತನಕಾ ಎಲ್ಲಾ ಕೆಲಸಗಳೂ ಅವನ ಕೈವಾಡ ಇಲ್ಲದೆ ಆಗೂಹಾಂಗಿಲ್ಲ....ಆದವ್ಯಾಲ, ಅವನ ಕಿವೀವ್ಯಾಲ ಒಂದು ಮಾತು ಹಾಕಿ ಇಡಬೇಕು....ಅಂದರ ಒಳ್ಳೇದಾಗತೈತಿ....' ಎಂದು ವಿಚಾರ ಬರುವುದೇ ತಡ....ಗುಂಡಪ್ಪನ ಮನೆಯ ಹಾದಿಯನ್ನೇ ಹಿಡಿದ ಭೀಮಪ್ಪ.

* * * *

"ಯಾಕ, ಭೀಮಣ್ಣಾನ ಸ್ವಾರಿ ಬಹಳ ದಿವಸಕ್ಕ ಬಂತು? ಎಂದು ಗುಂಡಪ್ಪ ಕಂಬಳಿ ಹಾಸುತ್ತ ಕೇಳಿದ. "

"ಏನೋ ಸುಮ್ಮನ....ಸ್ವಲ್ಪ ಕೆಲಸ ಇತ್ತರೀ...." ಎಂದ ಬಾಯಲ್ಲಿಯೇ ಪುಟಪುಟಿಸಿದ ಭೀಮಪ್ಪ. ಮತ್ತು ಸ್ವಲ್ಪ ತಡೆದು— "ಊಟಕ್ಕ ವ್ಯಾಳೇ ಆಯಿತ್ರೀ?...." ಎಂದ.

ಗುಂಡಪ್ಪನು ಕಂಬಳಿಯ ಮೇಲೆ ಕುಳಿತು ಎಲೆ ತಿನ್ನುವ ಚೀಲ ಬಿಚ್ಚುತ್ತ ಹೇಳತೊಡಗಿದ:— "ಮುಂಜಾನೆ ಸಹಜ ಗೌಡನ ವಾಡೇದ ಕಡೆಗೆ ಹೋದೆನೇನಪಾ! ಎಲ್ಲಿ....ಆ....ಸೂ—ಮಕ್ಕಳ ಕುರುಬರು, ಸತ್ಯಪ್ಪನ ಹತ್ತೀ ಹಕ್ಕಲದಾಗ....ಕೇಳದs ಕುರೀ ಹಾಯಿಸಿದ್ದರಂತ ಬ್ಯಾಸಿಗ್ಯಾಗ!... ಸತ್ಯಪ್ಪ ಸುಮ್ಮನs ಬಿಡೊ ಬಂಟನ? ಅವರ ಒಂದು ಕುರೀನs ಎಳದು ತಂದಿದ್ದ ಆಗ ಮನಿಗೆ. ಆ ನ್ಯಾಯ ನನ್ನ ತನಕಾ ಬಂತು....ನಾ ಹೇಳಿದ್ದೆ: 'ಎರಡು ದಿವಸ ಹೊಲದಾಗ ಕುರೀ ಕೂಡ್ರಿಸಿ ಕೊಡಿರಿ; ನಿಮ್ಮ ಕುರಿ ಒಯ್ಯೋರಿ; ನಮಗೇನು ಮಾಡೂದು' ಅಂತ. ಆದರ ಅವರ ಹೇಳತs ಕೇಳತs ಕುರುಬರು! 'ಇಂದs ನಾಳೇ' ಅನ್ನತ, ಈಗ ಹಾರಿಸೇ ಬಿಟ್ಟರು! ನಿನ್ನೆ ಸತ್ತ್ಯಾ ಅಳತs ಮತ್ತ ನನ್ನ ಕಡೆ ಬಂದ....ನನಗೂ ಸಿಟ್ಟು ಬಂತು. ಕುರುಬರು ನೊಕ್ಕಿಗೆ ಬಂದಾರಂತ ಒಯ್ದು ಗೂಟಕ್ಕ ಹಾಕಿಬಿಟ್ಟೆ....ಒದ್ದಾಡಲಿನ್ನ, ಗೌಡ ಏನೂ ತೊಗೊಳ್ಳದs ಬಿಡತಾನs? ಕಷ್ಟ ಇಲ್ಲದs ಬ್ಯಾಟಿ ಕೈಯಾಗ ಬಂದೈತಿ....ಮುಂಜಾನೆ ಹಿಡದೂ ಗೌಡನ ಮನ್ಯಾಗ ಅದs....ನ್ಯಾಯ ನಡಿದಿತ್ತು....ತೀರಿಸಿ ಬರಬೇಕಾದರ ಒಂದಿಷ್ಟು ಊಟಕ್ಕೆ ವ್ಯಾಳೇ ಆಯ್ತು!" ಎಂದು ಊಟಕ್ಕೆ ವೇಳೆಯಾದುದರ ಕಾರಣ ಹೇಳಿದನು ಗುಂಡಪ್ಪ.

"ಈಗೀಗ ಕುರುಬರೂ ನೊಕ್ಕಿಗೆ ಬಂದಾರರೀ!" ಎಂದು ಗುಂಡಪ್ಪನ ಮನಸ್ಸಿನ ಹೊಲಬನ್ನರಿತೇ ನುಡಿದ ಭೀಮಪ್ಪ.

ಗುಂಡಪ್ಪ ಎಲೆಯಡಿಕೆ ಹಾಕಿಕೊಳ್ಳುತ್ತಾ: "ಏನು ಭೀಮಣ್ಣಾ, ಹಲ್ಲು ಅವಾವೇನು? ಮೊದಲ ತಂಬಾಕ ತಿಂತಿದ್ದೆಲ್ಲs?" ಎಂದ.

ಮಾತು ತೆಗೆಯಲು ಇದೇ ಸಮಯವೆಂದರಿತು ಭೀಮಪ್ಪ "ತಂಬಾಕ ಹಾಕೋತಿದ್ದೆನಪ್ಪಾ! ಹಿರೀ ಮಗಾ ಹೋದಾಗಿಂದs ಎಲ್ಲಾನೂ ಬಿಟ್ಟಬಿಟ್ಟೆ! ಈಗ ಹಲ್ಲೂ ಅಗಲಾಡಲಾಕ ಹತ್ಯಾವ...." ಎಂದು ಹೇಳುತ್ತ, ಎದ್ದು ಗುಂಡಪ್ಪನ ಸಮೀಪಕ್ಕೆ ಹೋಗಿ, ಅವನ ಪಾದಗಳ ಮೇಲೆ ತಲೆಯಿಟ್ಟುಕೊಂಡು ಕುಳಿತುಬಿಟ್ಟ.

ಶೀಲಧಾ

ಎಂಟೀಮಲೇರಿಯಾ ವನಸ್ಪತಿ ಪಿಲ್ಸ್

ಎಲ್ಲ ತರದ ಜ್ವರ, ಜ್ವರಗಡ್ಡೆ, ತಜ್ಜನ್ಯ ಅಶಕ್ತತೆಗು ಮೇಲೆ ರಾಮಬಾಣ! ಲಿವರ್, ಹೊಟ್ಟೆನೋವು, ಮಲಬದ್ಧತೆ ಸುಧಾರಿಸಿ ಶಕ್ತಿ ಬೆಳೆಯಿಸುತ್ತದೆ! ಕ್ವಿನ್ಯಾನ್ ಬದಲು ವೈದ್ಯ-ಡಾಕ್ಟರರು ದವಾಖಾನೆಗಳಲ್ಲಿ ವಾಪರಿಸುವರು. ೧೦೦೦ ಗುಳಿಗೆಗಳಿಗೆ ರೂ. ೧೫; ೯೦ಕ್ಕೆ ೧-೧೪-೦. ಔಷಧದಲ್ಲಿ ಗುಣವಿಲ್ಲವೆಂದು ಸಿದ್ಧ ಮಾಡಿದವರಿಗೆ ೧೦೦೦ ರೂಪಾಯಿ ಬಹುಮಾನ. ಪ್ರತಿ ಊರಲ್ಲಿಯೂ ಪಗಾರದ ಏಜಂಟರು ಬೇಕು.

ಶೀಲಧಾ ಕೆಮಿಕಲ್ ಕಂಪನಿ, ಸಿರಸಿ, ಉ. ಕ.

ಸೋಲ್ ಏಜೆಂಟರು:—

ಎಸ್. ಎಲ್. (ಅಪ್ಪರಾವ) ಧಾಕಪ್ಪಾ

ಜನತಾ ಔಷಧಿ ಸರ್ವಿಸ್, ಸಿರಸಿ, ಉ. ಕಾನಡಾ

“ ಇದೇನಪಾ? ಶಿವ್ಯಾ ಬಂದಾನ ಏನು? ಎಲ್ಲಿ ನನಗ ಭೆಟ್ಟೀನs ಆಗಿಲ್ಲಲಾ? ಎಲ್ಲಿ ಹೋಗಿದ್ದನಂತ ಇಷ್ಟ ದಿನಾ....?” ಎಂದು ಗುಂಡಪ್ಪ ಕೇಳಿದ.

“ಇಲ್ಲರಿ; ನಿನ್ನೇ ಬಂದಾನ....ಇನ್ನೂ ತೋಟದೊಳಗs ಇದ್ದಾನ....ನೀವು ಊರಾಗ ಬರಲಿಕ್ಕೆ ಅಪ್ಪಣೀ ಕೊಟ್ಟರ ಬರತಾನ.... ನಿಮ್ಮ ಕಿವಿಗೆ ಹಾಕದ ಹ್ಯಾಂಗ ಬರೋದು? ನೀವು ಊರಾಗ ತಿರ-ಗಾಡತೀರಿ....ಗೌಡರ ಮನಿಗೂ ಚಾವಡೀ ಬೀದಿಗೂ ಹಾಯ್ದಾಡ-ತೀರಿ....ಅಪ್ಪಾ....ನಾವೇನು ಕಣ್ಣಿದ್ದೂ ಕುರುಡರ್ಹ್ಯಾಂಗ! ಪ್ಯಾಲಿಂದ ಏನಾದರೂ ಸ್ವಲ್ಪ ಬಂದರ ನೋಡಿಕೋರಿ....ಶಿವ್ರೂನ್ನ....ನಿಮ್ಮ ಉಡ್ಯಾ-ಗನs ಹಾಕಿಬಿಟ್ಟೇದೀನಿ....ಇಂದ ಅಂವ ನನ್ನ ಮಗಾ ಅಲ್ಲ; ನಿಮ್ಮ ಮಗಾನs ಅಂತ ತಿಳಕೋರಿ!” ಎಂದು ಅಂಗಲಾಚಿ ಬೇಡಿದ ಭೀಮಪ್ಪ.

“ಅವನ ಚಿಂತೀ ಬಿಟ್ಟುಬಿಡು. ಏನು ಬಂದರೂ ನೋಡಿ-ಕೊಳ್ಳಾಕ ನಾ ಇದ್ದೀನಿ!” ಎಂದು ಆಶ್ವಾಸನ ಕೊಟ್ಟ ಗುಂಡಪ್ಪ.

\+ \+ \+ \+

ಈಗ ಭೀಮಪ್ಪ ನಿಶ್ಚಿಂತನಾದ. ಗುಂಡಪ್ಪನ ಮುಖಾಂತರ ಊರವರನ್ನೇ ಕಟ್ಟಿಕೊಂಡ ಮೇಲೆ ಬೇರೆ ಏನು ಹೆದರಿಕೆ ಅವನಿಗೆ? ಶಿವಪ್ಪನೂ ಈಗ ಬೇಕಾದಂತೆ ಊರಲ್ಲಿ ತಿರುಗಾಡತೊಡಗಿದ. ದಿನಾಲು ಕೆಲಸಕ್ಕೆ ಹೋಗಿ ಸಂಪಾದಿಸಿ, ತಂದೆ-ತಾಯಿಗಳ ಹೊಟ್ಟೆಗೆ ಹಾಕಹತ್ತಿದ. ಇನ್ನೊಂದು ತಿಂಗಳಲ್ಲಿ ಗೌಡರ ಮನೆಯಿಂದ ತನ್ನ ತಮ್ಮನನ್ನು ಕೆಲಸದಿಂದ ಬಿಡಿಸಿ ತಂದು, ಮೊದಲಿನಂತೆ ಸಾಲೆಗೆ ಕಳುಹಬೇಕೆಂಬ ಆಲೋ-ಚನೆಯಲ್ಲಿದ್ದ. ಮೊನ್ನೆ ಹಾದಿಯಲ್ಲಿ ಶಾಲೆಯ ಮಾಸ್ತರರು ದೊರಕಿ-ದಾಗ ‘ ನಮ್ಮ ಹುಡುಗನಿಗಷ್ಟು ಚಲೋ ಪಾಠಾ ಹೇಳಿಕೊಡ್ರೀ ’ ಅಂತ ಈಗಾಗಲೇ ಸೂಚಿಸಿದ್ದ.

ಭೀಮಣ್ಣ ಈಗ ಸಂಜೆಗೆ ಮಗನನ್ನು ಬಿಟ್ಟು, ಎಂದೂ ಊಟ ಮಾಡುವುದಿಲ್ಲ. ಮಧ್ಯಾಹ್ನ ಮಾತ್ರ ಕೆಲಸಕ್ಕೆ ಹೋದಾಗ ಶಿವಪ್ಪ ಹೊಲದಲ್ಲಿ ಉಣ್ಣುತ್ತಿದ್ದುದರಿಂದ, ಒಬ್ಬನೇ ಉಣ್ಣುತ್ತಿದ್ದ; ಸಂಜೆಗೆ ಮಗನು ಕೆಲಸದಿಂದ ಬಂದ ಮೇಲೆ, ಇಬ್ಬರೂ ಕೂಡಿಯೇ ಊಟಕ್ಕೆ ಕೂಡುವರು. ಅದೇ ಕಾಲಕ್ಕೆ ಶಿವಪ್ಪನ ತಾಯಿಯೂ ಅವರ ಜೊತೆ-ಯಲ್ಲಿಯೆ ಊಟಕ್ಕೆ ಕೂರುವಳು. ಅದೇನು ಈಗಿನ ಹೊಸ ಪದ್ಧತಿಯ ಪರಿಣಾಮವಲ್ಲ. ಹಿಂದು-ಮುಂದೆ ಊಟ ಮಾಡಿದರೆ, ಮೊದಲುಣ್ಣು-ವವರು ಹೊಟ್ಟೆತುಂಬ ತಿಂದರೆ, ಹಿಂದಿನವರಿಗೆ ಉಳಿಯುವುದೊ ಇಲ್ಲವೊ ಎಂಬ ಶಂಕೆ ಬೇರೆ ಇರುವುದಲ್ಲ....ಒಮ್ಮೆಲೇ ಕುಳಿತರೆ ಹೆಚ್ಚುಕಡಿಮೆ ಎಲ್ಲರೂ ಸ್ವಲ್ಪ ಸ್ವಲ್ಪ ಹರಿದು ಹಂಚಿ ತಿನ್ನಲು ಬರುತ್ತದೆ. ಅಲ್ಲದೆ ಇಂತಹ ದಿವಸಗಳಲ್ಲಿ ದೀಪವನ್ನೂ ಬಹಳ ಹೊತ್ತು ಉರಿಸಬೇಕಾ-ಗುವುದಿಲ್ಲ....ಎಂಬುವೇ ಅದರ ಕಾರಣಗಳು.

ಇಂದು ಅದೇಕೋ ರಾತ್ರಿ ಎಂಟು ಗಂಟೆಯಾದರೂ ಶಿವಪ್ಪ ಕೆಲಸದಿಂದ ಬರಲಿಲ್ಲ. ಭೀಮಪ್ಪ ಗುಬ್ಬಿಮರಿಯಂತೆ ದಾರಿ ಕಾಯುತ್ತ-ಲಿದ್ದಾನೆ. ಹೊಟ್ಟೆ ಹಸಿದಿದೆ. ಇನ್ನೂ ಶಿವಪ್ಪನ ಸುಳುವಿಲ್ಲ. ವೇಳೆ-ಯಾಗಿ ಹೋಯಿತು, ‘ ಯಾಕ ಬರಲಿಲ್ಲೊ! ಎಲ್ಲಿಯಾದರೂ ಹೋದನೇನು ಮೊದಲಿನಾಂಗ? ಛೇ, ಎಂದೂ ಹೋಗಲಿಕ್ಕಿಲ್ಲ! ಅಂದಾದರೂ ಅಂವ ಹೋಗತಕ್ಕವನೇ? ಕುಲಕರ್ಣೇರು ಎರಡು ದಿವಸ ನವಿ ನವಿ ತಿನ್ನಾಕ ಹಾಕಿ, ಒಯ್ದು ಭರತೀ ಮಾಡಿ ಬಿಟ್ಟರು! ಅವ-ರೇನೋ ತಮ್ಮ ಸಾವಿಗೆ ಅಂಜತಾರ; ಯಾರನ್ನರೆ ಬಡವರ ಮಕ್ಕ-ಳನ್ನ ಭರತಿ ಮಾಡಿಕೊಟ್ಟು, ತಾವು ಸರಕಾರದಾಗ ಮುಂದ ಆಗ-ತಾರ! ’ ಎಂದು ಏನೇನೋ ವಿಚಾರಗಳೆಲ್ಲ ಭೀಮಪ್ಪನ ಮನಸ್ಸಿನಲ್ಲಿ ಬರತೊಡಗಿದುವು. ಅಷ್ಟರಲ್ಲಿ ಹೊರಗೆ ಯಾರೋ ಬಂದ ಸಪ್ಪಳಾಯಿತು. ಶಿವಪ್ಪನೇ ಬಂದನೆಂದು ಮುದುಕನ ಮುಖ ಅರಳಿತು. ಆದರೆ ಬಂದವನು ಶಿವಪ್ಪನಾಗಿರಲಿಲ್ಲ. ಮತ್ತೊಬ್ಬ ಯಾವನೋ ತರುಣ-ನಾಗಿದ್ದ—ಅರ್ಧಮರ್ಧ ಮಿಲಿಟರಿ ಅರಿವೆಗಳೇ ಅವನ ಮೈಮೇಲಿದ್ದುವು. ಭೀಮಪ್ಪ ದೃಷ್ಟಿಸಿ ನೋಡಿದ. ಕತ್ತಲೆಯಲ್ಲಿ ಬಂದವನ ಗುರುತು ಹತ್ತದಾಯಿತು. ಅಷ್ಟರಲ್ಲಿ ಬಂದವನೇ ಗದ್ದರಿಸುವ ಧ್ವನಿಯಲ್ಲಿ: “ ಭೀಮ ಇಲ್ಲೇನು ಮನಿಯೊಳಗ?....” ಎಂದು ಕೇಳಿದ.

“ ಯಾಕೋ ಯಪ್ಪಾ ಇದ್ದೀನಿ!....” ನಿಟ್ಟುಸಿರೊಡನೆ ಮಾತು ಬಂತು ಭೀಮನ ಮುಖದಿಂದ.

“ ನಡಿ ಅಲ್ಲಿ;....ನಿನ್ನ ಮಗಾ....ಮಿಲಿಟರಿಯಿಂದ ಓಡಿಬಂದಾ-ನಂತ ಪೋಲಿಸರು ಹಿಡಿದು ಒಯ್ಯಲಿಕ್ಕೆ ಹತ್ಯಾರ. ಈಗ ಬಂದರ ಭೆಟ್ಟಿ ಆಗತಾನ....ಇಲ್ಲದಿದ್ದರ ಅವನ ಮುಖ....ಮತ್ತೊಮ್ಮೆ ಸಿಗೂ ಹಾಂಗಿಲ್ಲ....ರಾತ್ರೀ ಮೇಲ್‌ಗಾಡಿಗೆ ಒಯ್ಯತಾರ ಅವನ್ನ! ‘ನಮ್ಮ ಅಪ್ಪ-ಗಷ್ಟು ತಿಳಿಸು’ ಅನ್ನೋಣು....ನಾ ಬಂದೆ....” ಎಂದು ಸಿಡಿಲೆರಗಿದಂತೆ ನುಡಿದು ಬಿಟ್ಟ.

“ ಈಗ ಎಲ್ಲಿ ಅದಾನೋಪ್ಪಾ! ” ನಡುಗುವ ದನಿಯಿಂದ ಕೇಳಿದ ಭೀಮಪ್ಪ.

ಡೋಂಗರೆ ಬಾಲಾಮೃತ

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

“ ಎಲ್ಲಿಯೋ ಕೆಲಸಕ್ಕ ಹೋಗತ್ತಿದ್ದನಂತ....ಅಲ್ಲೇ ಹೋಗಿ ಹಿಡದಾರ....ಈಗ ಊರ ಹೊರಗ ತೊಗೊಂಡು ಬಂದಾರ....ಸ್ಟೇಶನಕ್ಕ ಒಯ್ಯಬೇಕಂತ....! ಹೋಗಿ ಭೆಟ್ಟಿ ಆಗೋದಿದ್ದರ ಆಗು! ” ಎಂದು ಹೇಳಿ, ಹೋಗಿ ಬಿಟ್ಟ ಆತ.

“ ಅಯ್ಯೋ ನನ್ನ ಮಗನ....ಮತ್ತ ಒಯ್ಯತಾರಪ್ಪಾ! ಇನ್ನ.... ಏನ್ ಮಾಡಲ್ಯೋ ಮಗನ....! ಮುಪ್ಪಿನ ಕಾಲದಾಗ ನಮ್ಮನ್ನ ಯಾರ ಜೋಕಿ ಮಾಡವರೋ ...! ಶಿವನs ನಮ್ಮನ್ನ ನೋಡಿಯಾದರೂ ದಯಾ ಬರಬಾರದೇನಪ್ಪಾ ನಿನಗ? ” ಎಂದು ಭೀಮಪ್ಪ ಹಲಬುತ್ತ ಎದ್ದು ಹೊರಟೊಂಟ

“ ನಾನೂ ಕೈತೊಳಕೊಂಡು ಬರತೀನಿ....ಹಿಂದಿಟ್ಟ ನಿಂದರ್ರಿ! ” ಎಂದು ಶಿವಪ್ಪನ ತಾಯಿ ರೊಟ್ಟಿ ಮಾಡುವುದನ್ನು ಬಿಟ್ಟು ಎದ್ದಳು.

× × × ×

ಶಿವಪ್ಪನನ್ನು ನಡುವೆ ಕೂಡಿಸಿಕೊಂಡು ಸುತ್ತಲೂ ನಾಲ್ಕಾರು ಜನರು ಕುಳಿತಿದ್ದಾರೆ. ಅವರ ನಡುವೆ ಶಿವಪ್ಪನು ಏನೂ ಚಿಂತೆಯಿಲ್ಲದೆ ಸ್ವಸ್ಥ ಕುಳಿತಿದ್ದಾನೆ. ಅವನಿಗೆ ಇವರೆಲ್ಲಿಯೂ ಒಯ್ಯುವುದಿಲ್ಲವೆಂಬುದು ಮನದಟ್ಟಾಗಿದೆ. ಮಧ್ಯಾಹ್ನದಿಂದಲೂ ' ಆ ಗಾಡಿಗೆ ಒಯ್ಯುತ್ತೇವೆ, ಈ ಗಾಡಿಗೆ ಒಯ್ಯುತ್ತೇನೆ ' ಎಂದು ಬೆದರಿಸಿ, ಸ್ಟೇಶನಿಗೆ ಕರೆದೊಯ್ದರು. ಪೋಲೀಸ್ ಇನಸ್ಪೆಕ್ಟರು ಬರುವರೆಂದು ಅರ್ಜಿ ಹಾಕಿದರು, ನಾಲ್ಕು ರೂಪಾಯಿ ಸಿಕ್ಕಬಹುದೆಂದು. ಅದು ಸಾಧ್ಯವಾಗದಿರಲು ಈಗ ನಮ್ಮಪ್ಪನನ್ನು ಕರೆಯಿಸಿ, ಹೇಗಾದರೂ ನಾಲ್ಕು ದುಡ್ಡು ಖರ್ಚು ಬೇಕೆಂದು ಮಾಡಿದ್ದಾರೆ....ಎಂದು ಏನೇನನೋ ಯೋಚಿಸುತ್ತಿರುವಷ್ಟರಲ್ಲಿ ಅವರೊಳಗಿನವನೊಬ್ಬನು :

“ ಏಶಿವಾ....ನಿನಗ ಮಧ್ಯಾಹ್ನದಿಂದೂ ಹೇಳಲಿಕ್ಕೆ ಹತ್ತೇವಿ ಬುದ್ಧಿ ಬರವಲ್ದು....ಮಗನs....ನಾವು ನಿನ್ನ ಹಿತಕ್ಕಾಗಿ ಮಾಡಲಿಕ್ಕೆ ಹೋದರ ನಿನಗದರ ಸುದ್ದೀನs ಇಲ್ಲ....! ಸುಮ್ಮನ ಆ ಮೂಲಿಮನೀ ಗುಂಡಪ್ಪನ ಹತ್ತರ ನಿಮ್ಮಪ್ಪಗ ಹೋಗೂ ಅನ್ನು. ಅವನದೂ ಫೌಜದಾರನದೂ ನೆಟ್ಟಗೈತಿ .. ಏನಾರೂ ಮಾಡತಾನ....ಹೋಗಿ ಅವನ ಕಾಲು ಹಿಡೀ ಅನ್ನು....ನಿಮ್ಮಪ್ಪಗ....” ಎಂದು ಬುದ್ಧೀ ಮಾತು ಹೇಳುತ್ತಿದ್ದನು.

ಅಷ್ಟರಲ್ಲಿ ಭೀಮಪ್ಪ ಅಲ್ಲಿಗೆ ಹೋದ. ಭೀಮಪ್ಪ ಬಂದುದನ್ನು ನೋಡಿ ಮತ್ತಷ್ಟು ಜೋರಿನಿಂದ— “ ನೋಡಿದೀ....ನಿನ್ನ ಮಗನ ಕಾರಭಾರ....? ಮೊದಲ ಭರತೀ ಆಗಬಾರದೂ ...ಅದ ಮ್ಯಾಲ.... ಹೀಂಗ ತಪ್ಪಿಸ್ಕೊಬಾರದು....ತಪ್ಪಿದರ ಬಿಡ್ತದs..?..”

“ ನಾ ಭರತೀ ಆಗಿಲ್ಲ; ಸುಮ್ಮನ ನೀವs ಕಾಡಲಿಕ್ಕೆ ಹತ್ತೀರಿ. ಫೌಜದಾರ್ರು ಬರಲಿ, ನಾ ಹೇಳತೀನಿ. ಇಲ್ಲ ಅಂದರೆ, ನೀವು ಎಲ್ಲಿ ನಡೀ ಅಂತೀರಿ ಅಲ್ಲಿ ನಡೀರಿ....! ಬೇಕಾದಲ್ಲಿ ಬರತೀನಿ ” ನಡುವೆಯೇ ಬಾಯಿ ಹಾಕಿ ಶಿವಪ್ಪ ಹೇಳಿದ.

“ ಇನ್ನೂ ಇವನ ಸೊಕ್ಕು ಮುರದಿಲ್ಲಲೋ....? ತೊಗೊಳ್ಳರಿ.... ನಾಲ್ಕು ಏಟು ! ” ಎಂದ ಮತ್ತೊಬ್ಬ.

ಇನ್ನೊಬ್ಬ ಶಿವಪ್ಪನನ್ನು ಹೊಡೆಯಲು ಸಿದ್ಧನಾದ. ಅದನ್ನೆಲ್ಲ ಕಂಡು ಭೀಮಪ್ಪನು. “ ಬಿಡರೆಪ್ಪಾ! ಬಡೀಬ್ಯಾಡ್ರಿ; ಆ ಅಲ್ಲದ ಹುಡುಗನ್ನ ಏನ್ ಮಾಡತೀರಿ? ಏನ್ ಹೇಳೋದು ನನಗ ಹೇಳಿರಿ.... ಮಾಡ್ತೀನಿ!... ನಾಲ್ಕು ದುಡ್ಡು ಖರ್ಚ ಆದರೂ ಜೀವಾ ಒತ್ತೀ ಇಟ್ಟು ತರತೀನಿ ..” ಎಂದು ಅವರಿಗೆ ನಮಸ್ಕಾರ ಮಾಡಲು ಓಡಾಡ ತೊಡಗಿದ.

ಅವರಲ್ಲಿಯ ಒಬ್ಬ ಧೂರ್ತನು ' ಇಲ್ಲಿ ಬಾ, ಮುದಕಾ' ಎಂದು ಭೀಮಪ್ಪನನ್ನು ದೂರ ಅಡವಿಯಲ್ಲಿ ಕರೆದೊಯ್ದು, ಅವನ ಕಿವಿಯಲ್ಲಿ ಏನೇನೋ ಬಹಳ ಹೊತ್ತಿನವರೆಗೆ ಹೇಳಿದ. ಅದಕ್ಕೆಲ್ಲ ಮುದುಕನು ಒಪ್ಪಲು, ಅವರೊಳಗಿನವನೊಬ್ಬ ಮುದುಕನ ಬೆನ್ನು ಹತ್ತಿ ಊರೊಳಗೆ ನಡೆದ. ಹೋಗುವಾಗ...."ಈಗ ಬರತೀನಿ;....ನಾ ಬರುವವರೆಗೆ ಬಿಟ್ಟೀರಿ ಮತ್ತ ಇವನ್ನ! ಜಿಗದ ಹೋದಾನು ಎಲ್ಲ್ಯಾದರೂ;.... ... ಪೋಲೀಸರು .... ನಮ್ಮನ್ನ ಒಯ್ದು ಕೂಡಿಸ್ಯಾರು .... ತುರುಂಗದೊಳಗ!....” ಎಂದು ನಸುನಗೆಯೊಡನೆ ಕೂಗಿ ಹೇಳಿದ.

× × × × ×

ಇಂದು ಮುಂಜಾನಿನಿಂದಲೂ ಗುಂಡಪ್ಪನ ಮನೆಯ ಆಳು ಭೀಮಪ್ಪನ ಕಡೆಗೆ ನಾಲ್ಕಾರು ಸಲ ಬಂದು ಹೋದ. ಮಧ್ಯಾಹ್ನ ನಾಲ್ಕರ ಗಾಡಿಗೆ ಫೌಜದಾರ್ ಬರುತ್ತಾನಂತೆ.. .ನೊನ್ನೆ ರಾತ್ರಿ ಹೇಳ-

ಜೀವನ

ಶಕ್ತಿಹೀನರೆಲ್ಲರೂ ಹಾರಯಿಸುವ ಪ್ರಭಾವಶಾಲಿಯಾದ

ಪೌಷ್ಟಿಕ ಮಿಶ್ರಣವು

ಇದರ ಸೇವನೆಯಿಂದ ಹಸಿವೆಯು ಚೆನ್ನಾಗಿ ಆಗತೊಡಗಿ ರಕ್ತವು ವೃದ್ಧಿಯಾಗುವದಲ್ಲದೆ, ರಕ್ತದಲ್ಲಿಯ ಕೆಂಪುಕಣಗಳ ಪ್ರಮಾಣವು ಹೆಚ್ಚಿ, ಉತ್ಸಾಹವುಂಟಾಗುವದು. ನರಗಳು ಬಲಪಟ್ಟು ಸರ್ವ ಅವಯವಗಳಲ್ಲಿಯೂ ಸಾಮರ್ಥ್ಯ ಬರುವುದು. ಬೇನೆಯಿಂದ ಬಳಲಿ ಎದ್ದವರಿಗಂತೂ ಇದು ಸಂಜೀವಿನಿಯೇ ಸರಿ।

ಕರ್ನಾಟಕ ಆಯುರ್ವೇದ ಫಾರ್ಮಸಿ ಲಿಮಿಟೆಡ್

ಬಾಗಲಕೋಟೆ

ಹುಬ್ಬಳ್ಳಿಯ ಶಾಖೆ:

ಮಿತ್ರಮಂಡಲಿ ಕೋಟೆ, ಹುಬ್ಬಳ್ಳಿ.

ದಂತೆ ಇಂದು ಇಪ್ಪತ್ತೈದು ರೂಪಾಯಿ ಕೊಟ್ಟು ತೀರಿಸಬೇಕಂತೆ; ಏನಾದರೂ ಮಾಡಿ ಕೊಟ್ಟುಬಿಡಬೇಕೆಂದರೆ ಹತ್ತರ ರೂಪಾಯಿ ಇಲ್ಲ. ಭೀಮ ಯೋಚಿಸತೊಡಗಿದ: "ಮನೆಯೊಳಗ ಸಂಜೀ ಕೂಳಿಗೆ ಗತಿಯಿಲ್ಲ. ಇಪ್ಪತ್ತೈದು ರೂಪಾಯಿ ಎಲ್ಲಿಂದ ತರಬೇಕು? ಕೇಳಲಿಕ್ಕೆ ಹೋದರ ಯಾರೂ ಒಂದ ಕಾಸನೂ ಕೊಡುವಂತಿಲ್ಲ. ಸಿದ್ದನನ್ನು ಕೇಳಿದರ 'ನಿನ್ನ ಮಗನ್ನ ನನ್ನಲ್ಲಿ ಚಾಕರೀ ಇಟ್ಟರ ಕೊಡತೀನಿ' ಅನ್ನುವ. 'ಆರು ತಿಂಗಳು ಚಾಕರಿಗೆ ಇಡು. ಏನಾದರೊಮ್ಮೆ ಈ ಕತ್ತರಿಯೊಳಗಿಂದ ಪಾರಾಗೋಣ' ಎಂದು ಹೇಳಿದರ' ಶಿವಪ್ಪ 'ನಾ ಮೊದಲ ಭರತೀನs ಆಗಿಲ್ಲ; ಸುಮ್ಮನs ನಾಲ್ಕು ಮಂದಿ ಹೆದರಿಸಿ ನಿನ್ನ ಕಡಿಂದ ರೂಪಾಯಿ ಎತ್ತಬೇಕಂತ ಮಾಡ್ತಾರ; ನೀ ಅಂಜುಬುರುಕ ಇದ್ದೀದಿ, ಅದಕ್ಕ ಹೀಂಗ ಮಾಡತಾರವರು....ಸ್ಪಷ್ಟ ಹೇಳು, ಕೊಡೂದಿಲ್ಲಂತ, ಇದೆಲ್ಲಾ....ಆ ಗುಂಡಪ್ಪನ ಆಟ ಐತಿ! ಊರಾಗ ರಜೇದ ಮೇಲೆ ಬಂದ ನಾಲ್ಕು ಮಿಲಿಟರೀ-ಹುಡುಗರನ್ನ ಕೂಡಿಕೊಂಡು....ಒಬ್ಬ ಪೋಲೀಸನ್ನ ಕಟ್ಟಿಕೊಂಡು, ಈ ಕೆಲಸ ನಡಸ್ಯಾನ, ಅಂತಾನ. ಯಾಂವ ಆಟ ಇದ್ದರೇನಾತು....? ಊರಾಗ ನಾವು ಜನ್ಮಾ ಮಾಡಬೇಕಾಗೇತಿ. ದೊಡ್ಡವರಿಗೆ ವಿರುದ್ಧ ಆದರ ಹ್ಯಾಂಗ ಬಾಳ್ವೇ ಆದೀತು? ಏನಾರೂ ಮಾಡಿ ಗೌಡನ ಕಿವಿ ಮ್ಯಾಲೆ ಒಂದು ಮಾತ ಇಡಬೇಕು....ಅವನಾದರೂ ಏನ್ ಅಂತಾನ ಕೇಳೋಣು...." ಎಂದು ವಿಚಾರಿಸುತ್ತಲೇ ಗೌಡರ ಮನಿಗೆ ಹೋದ.

"ನಮಸ್ಕಾರರೀ" ಎಂದ ಭೀಮಪ್ಪ.

ಗೌಡರು ಉಂಡು ಇದೀಗ ಪಡಸಾಲೆಗೆ ಬಂದಿದ್ದರು. ಭೀಮನು ಬಂದುದನ್ನು ಕಂಡೂ ಕಾಣದವರಂತೆ ಇದ್ದರು. ನಮಸ್ಕಾರಕ್ಕೆ ಪ್ರತಿ ನಮಸ್ಕಾರ ಗೌಡರಿಂದ ಸಿಕ್ಕದಿರಲು, ಭೀಮನ ಮುಖ ಇಳಿಯಿತು. ಹಾಗೆಯೇ ಸ್ವಲ್ಪ ಹೊತ್ತು ಕಟ್ಟೆಯ ಮೇಲೆ ಕುಳಿತ. ಸುಮಾರು ಅರ್ಧ ತಾಸು ಕಳೆದಿರಬಹುದು. ಗೌಡರು ಹಾಗೆಯೆ ಅಡ್ಡಾಡುತ್ತಲಿದ್ದಾರೆ. ನಡುವೆ ಒಮ್ಮೆ ಭೀಮನ ಕಡೆಗೆ ದೃಷ್ಟಿಯನ್ನು ಬೀರಿದರಷ್ಟೇ. ಅದೇ ಕಾಲಕ್ಕೆ ಮಾತನ್ನು ತೆಗೆಯಬೇಕೆಂದು ಭೀಮ ಬಾಯಿ ಚಪ್ಪರಿಸಿದನಾದರೂ, ಬಾಗಿಲ ಕಡೆಗೆ ಏನನ್ನೋ ಕಂಡು ಅಲ್ಲಿಯೆ ಬಿದ್ದ ಗೌಡರ ನಾಯಿಯು 'ಬವ್'ಗುಡುತ್ತ ಓಡಿತು-ಅದಕ್ಕೆಂತಲೇ ಗೌಡರು ಸ್ವಾಭಾವಿಕವಾಗಿ "ಏನೋ?" ಎಂದು ಕೇಳಿದರು.

ಭೀಮನು ಬಾಗಿಲ ಕಡೆಗೆ ನೋಡಿ— "ಏನಿಲ್ಲರೀ....ಹಾದಿಯಿಂದ ಹೋಗುವ ಎಮ್ಮಿ ಮಣಕಾ ನೋಡಿ....ಓಡಿತು!" ಎಂದು ಹೇಳಿ ಸುಮ್ಮನಾದ. ಮತ್ತೆ ಮೌನ ಆವರಿಸಿತು. ಹತ್ತೆಂಟು ನಿಮಿಷಗಳು ಕಳೆದಿರಬೇಕು. "ಭೀಮಾ, ಹುಡುಗನ್ನ ಚಾಕರಿಂದ ಬಿಡಿಸಬೇಕಂತ ಮಾಡೀದಿ ಅಂತ....?" ಎಂದು ಗೌಡರು—ತಮ್ಮ ಸ್ವಾಭಾವಿಕವಾದ ಚೀರುವದನಿಯಲ್ಲಿ—ಆ ಮೌನವನ್ನು ಭೇದಿಸಿದರು. ಮನೆಯಲ್ಲಿ ಹುಡುಗನನ್ನು ಚಾಕರಿಯಿಂದ ಬಿಡಿಸುವುದೆಂದು ನಿಶ್ಚಯವಾಗಿದ್ದಿತಾದರೂ, ಈಗ ಅದರ ಪ್ರಸ್ತಾವನೆ ಮಾಡುವುದು—ಅದೇಕೆ—ಅದನ್ನು ತಿಳಿಸುವುದು ಒಳಿತಲ್ಲವೆಂದು ಭಾವಿಸಿ "ಇಲ್ಲರೀ....ಇಂತಾ ದಿನದೊಳಗ ಚಾಕರೀ ಬಿಡಿಸಿ ಏನ್ ಮಾಡೂನು?....ಇಲ್ಲಿ ಇದ್ದಾನ ಅಂತ ತುತ್ತು ರೊಟ್ಟೀನರs ಕಾಣತಾನ!" ಎಂದು ನುಡಿದ ಭೀಮಣ್ಣ.

"ಅದೇ, ಮೊನ್ನೆ ನಿನ್ನ ಮಗಾ ಮಾಸ್ತರ ಮುಂದ ಅಂತಿದ್ದನಂತ 'ನೌಕರೀ ಬಿಡಿಸಿ ಸಾಲಿಗೆ ಕಳಿಸ್ತೀನಿ' ಅಂತ. ಅದಕ್ಕs.... ಕೇಳಿದೆ....".

"ಎಲ್ಲೀದ ಏನರಿ....?" ಕೂತ ಸ್ಥಳದಿಂದ ಎದ್ದು ಗೌಡರ ಸಮೀಪಕ್ಕೆ ಹೋಗುತ್ತ "ಸಾಲೀ-ಸಮುದಾ ನಮ್ಮಂತವರಿಗೆ ಏನ್ ಮಾಡೋದು? ಅದರs....ಮಾಸ್ತರು ಅಂದರು: 'ಈಗ ಮೂರ ಎತ್ತೆ ಆಗೇತಿ. ಇನ್ನೊಂದು ಎರಡು ಎತ್ತೆ ಆಗಲಿ, ಅಂದರ ಕಾಗದ ಪತ್ರ ಓದಿಕೊಳ್ಳಲಿಕ್ಕೆ ಬರತ್ತೈತಿ' ಅಂತ...."

"ಕೂತ ಹೇಳಲಿಕ್ಕೆ ಮಾಸ್ತರದು ಏನ ಹೋಗತ್ತೈತಿ .... ? .... ಹೊಟ್ಟೆಗೆ ಏನ ತಿನ್ನ ಅಂತಾನ ಸಾಲಿಗೆ ಕಳಿಸಿ?" ಎಂದು ಗೌಡರು ನಡುವೆಯೆ ಗುಡುಗಿದರು.

ಭೀಮ ಮನಸ್ಸಿಲ್ಲದಿದ್ದರೂ "ಹೌದು ಗೌಡರ! ಅವರಿಗೆ ಏನ ತಿಳೀತೈತಿ..." ಎನ್ನುತ್ತ ಗೌಡರ ಸಮೀಪಕ್ಕೆ ಹೋಗಿ, ಮೊನ್ನೆ ಗುಂಡಪ್ಪನಿಗೆ ಇಪ್ಪತ್ತೈದು ರೂಪಾಯಿಗಳನ್ನು ಕೊಡುವುದನ್ನು ಗೊತ್ತು ಮಾಡಿ ಮಗನನ್ನು ಬಿಡಿಸಿ ತಂದ ಸಂಗತಿಯನ್ನೆಲ್ಲವನ್ನೂ, ವಿವರವಾಗಿ ಅಂಜುತ್ತಂಜುತ್ತ ಹೇಳಿದನು. ಗೌಡರು ಎಲ್ಲವನ್ನೂ ಕೇಳಿಕೊಂಡು ಮನದಲ್ಲಿ—'ಈ ಗುಂಡಪ್ಪನೂ ಇಂಥವನೇ; ನನಗ ಒಂದು ಮಾತನ್ನೂ ತಿಳಿಸಿಲ್ಲ. ನನ್ನ ಕಡೆಗೆ ತಂದ ಕುಳಗಳಲ್ಲೂ ಪಾಲು ಪೊಡದs ಹೊಡೀತಾನ....ಹೀಂಗ ನಡವನೂ ಸಿಕ್ಕಷ್ಟು ಎತ್ತತಾನ— ಇದರೊಳಗ ಅವನಿಗೆ ಬುದ್ಧೀ ಕಲಿಸಿ ಬಿಡಬೇಕು....' ಎಂದು ವಿಚಾರಿಸಿ, ಭೀಮನ ಕಡೆಗೆ ಸಿಟ್ಟಿನಿಂದ ನೋಡಿ,— "ನಿಮಗ ಅಕಲೀ ಇಲ್ಲ; ಮಗಾ ಬಂದಾನಂತ ನನಗ ತಿಳಿಸಿ ಹೋದೀ? ನಿಮ್ಮ ಮೈಯಾಗ ಸೊಕ್ಕ ಐತಿ, ಏನ ಮಾಡೀರಿ ನೀವು....? ಹೋಗಲಿ ಹೋಗು, ಹಿಡಿದು ಒಯ್ಯಲಿ....ಅಂದರ ಆಗತಾ ಕೂಡ್ರತಿ...." ಎಂದು ಭಯಂಕರ ದನಿಯಿಂದ ಗರ್ಜಿಸಿ, ಒಳಗೆ ಹೋಗಿ ಬಿಟ್ಟರು ಗೌಡರು.

ಒಡನಾಡಿ

'ಆನಂದಕಂದ'ರ ಹೊಸ ಕವನಸಂಗ್ರಹ

ಇದೀಗ ಅಚ್ಚಾಗಿ ಬೆಳಕಿಗೆ ಬಂದಿದೆ!

"ಮುಂಬರಿಯುವ ಮುಗ್ಧತೆಯುಳ್ಳ ಆತುರ-ಕಾತರಗಳನ್ನೂ, ಬರುವರೆಯದ ಕಾಮುಕತೆಯುಳ್ಳ ರತಿ-ಹಾಸವಿಲಾಸಗಳನ್ನೂ, ತುಂಬುಹರೆಯದ ಅನುಭವತೆಯುಳ್ಳ ಸುಖ-ದುಃಖಗಳ ಹುಚ್ಚುಕಲ್ಪನೆಗಳನ್ನೂ, ಜೀವನದ ಪರಿಪಕ್ವತೆಯುಳ್ಳ ತತ್ವಜ್ಞತೆಯನ್ನೂ ಇಲ್ಲಿಯ ಕೃತಿಗಳಲ್ಲಿ ನೋಡಬಹುದು!"

ಹೊಸಕವನಗಳನ್ನು ವಿವಿಧರಾಗಗಳಲ್ಲಿ ಹಾಡಿಕೊಳ್ಳ ಬೇಕೆಂದು ಬಯಸುವವರು, ಅವಶ್ಯವಾಗಿ ಈ ಕವನ ಸಂಗ್ರಹದ ಸಹಕಾರ ಪಡೆಯಬೇಕು.

'ಬಾಳಿದು ಕನಸಲ್ಲ' 'ಬಂತು ಬಂತು ಮಾಗಿ!' 'ಜಯ ಜಯ ಫಾಲ್ಗುಣ!' 'ಹಚ್ಚೇ ದೀಪಾ ನಲ್ಲೆ!' ಮೊದಲಾದ ಜನಪ್ರಿಯ ಭಾವಗೀತಗಳು ಇದರಲ್ಲಿ ಸಂಗ್ರಹಗೊಂಡಿವೆ.

ಅಂದವಾದ ಮುದ್ರಣ ಸುಂದರವಾದ ಕಟ್ಟು

ಬೆಲೆ ಒಂದು ರೂಪಾಯಿ

ಬೇಕಾದವರು ಜಯಂತಿ ಕಾರ್ಯಾಲಯಕ್ಕೆ

ಬರೆಯಿರಿ!

"ಬಾಬಾ!.... ಬಾಬಾ" ಎಂದು ಕರೆಯುತ್ತ, ಗೌಡರ ಮನೆಯಲ್ಲಿ ಎಲ್ಲಿಯ ವರೆಗೆ ತನಗೆ ಹೋಗಲು ಶಕ್ಯವಿದೆಯೋ ಅಲ್ಲಿಯ ವರೆಗೆ ಮುಂದೆ ಹೋಗಿ, ಬಾಯಿ ತೆರೆದ ಭೀಮಪ್ಪ.

"ಹೋಗು; ಮನೀಗೆ ಒಬ್ಬರು ಪ್ರಾಹುಣರಾಗೀರಿ....ಊರಾವರಿಗಂದರ.... ಶಿಸ್ತೂತ್ತನಃ ಇಲ್ಲ!" ಎಂದು ನಡುಮನೆಯಿಂದಲೇ ಗೌಡರು ಗುಡುಗಿದರು.

ಭೀಮಪ್ಪನ ಕಿವಿಯಲ್ಲಿ ಕಬ್ಬಿಣ ಕಾಯಿಸಿ ಸುರಿದಂತಾಯಿತು. ಕಣ್ಣಿಗೆ ಕತ್ತಲೆ ಕವಿದು ಅಲ್ಲೇ ಕಟ್ಟೆಯ ಕೆಳಗೆ ಕುಳಿತ. ಅದೆಷ್ಟು ಹೊತ್ತು ಕುಳಿತನೊ! ಗೌಡರ ಮನೆಯೊಳಗಿನ ಐದಾರು ವರ್ಷದ ಹುಡುಗನು ಆಡುತ್ತ ಆಡುತ್ತ ಬಂದು. ಕಟ್ಟೆಯ ಮೇಲಿರುವ ಜೋಡುಗಳನ್ನು ಒಂದೊಂದಾಗಿ ಭೀಮನ ಬೆನ್ನಿನ ಮೇಲೆ—ಮುಖದ ಮೇಲೆ—ಒಗೆಯ ಹತ್ತಿದನು....ಆಗ ಎದ್ದ ಭೀಮ....ಎದುರಿಗೆ ಗೌಡರ ಅಕ್ಕ ಹುಡುಗನ ಆಟವನ್ನು ನೋಡುತ್ತ ನಿಂತಿದ್ದಾಳೆ!

"ಬಾಬಾಗೋಳು ಏನ ಮಾಡಲಿಕ್ಕ ಹತ್ತ್ಯಾರರೀ?" ಎಂದು ನಮ್ರತೆಯಿಂದ ಮುಖ ಒರಸಿಕೊಳ್ಳುತ್ತ, ಕೇಳಿದ ಭೀಮ.

"ಏನ....ನೀರ ಕುಡೀಲಿಕ್ಕ ಹತ್ತೀನಾರ ಏನೋ..! ಮೊದಲ ಒಂದು ಮಾತು ಕಿವೀ ಮ್ಯಾಲ ಹಾಕಿ ಇಡಬೇಕಪ್ಪಾ....ಕುತ್ತಿಗಿಗೆ ಬರೋಣಾ ಬರ್‍ತೀರಿ.... ಅವರರು ಏನ ಮಾಡಬೇಕು? ಕೈ ಮೀರಿ ಹೋದ ಮೇಲೆ? ಇನ್ನ ನೋಡು.... ಫೌಜದಾರನ್ನ ಕಟ್ಟಿಕೊಳ್ಳ ಬೇಕು....ಇದೇನು ಖರ್ಚು ಇಲ್ಲದs ಆಗತೈತಿ? ಖರ್ಚು ಮಾಡೋದು ಮಾಡಿ.... ಹನ್ನೆರಡು ಮಂದೀ ಹತ್ತರ....ಬಾಯಿ ತೆರೀಬೇಕು, ನಿಮ್ಮ ಸಲುವಾಗಿ ಗೌಡರು!...." ಎಂದು ಗೌಡರ ಉದ್ದೇಶಕ್ಕೆ ಭೂಮಿಯನ್ನು ಹದಗೊಳಿಸಿದಳು, ಅವರ ಹಿರಿಯಕ್ಕ.

"ಅವರೇನು ನಮ್ಮ ಮನಿಯವರs ಅವ್ವಾ, ಏನೂ ಇಲ್ಲದ ಮಾಡಲಾಕ...? ಗೌಡರೊಂದು ನಮ್ಮಾವರುದರ....".

"ಇದೇ; ಏನಾರs ಕೊಡತೀನಂತ....".

ಅಷ್ಟರಲ್ಲಿ ಗೌಡರು ಹೊರಗೆ ಬಂದರು. ಅವರ ಅಕ್ಕನ ಮಾತು ಅಷ್ಟಕ್ಕೇ ನಿಂತಿತು. ಹೆದರಿದವಳಂತೆ ನಟಿಸಿ ನಡುಮನೆಗೆ ಹೋದಳು. ಗೌಡರ ಅಕ್ಕನೇ ಅವರಿಗೆ ಅಷ್ಟು ಹೆದರಿದ ಮೇಲೆ ಭೀಮಪ್ಪ ನೆಷ್ಟು ಹೆದರಬೇಡ?....ನಡುಗುವ ಕೈಗಳಿಂದ ಗೌಡರ ಕಾಲನ್ನು ಹಿಡಿದ.

"ಈ ಹೊತ್ತು ಫೌಜದಾರ್‍ರು ಬರಾವರು ಇದ್ದಾರ, ಏನಾರs ಮಾಡೋಣು; ಹೋಗು, ಹದಿನೈದು ರೂಪಾಯಿ ತಗೊಂಡು ಬಾ.... ಕೆಲಸ ಆದರ ನಿನ್ನ ನಸೀಬ...." ಎಂದರು ಗೌಡರು.

"ಕೈ ಹೋಡದತೀನಿ....ಏನಾರೂ ಮಾಡಿ ಇದೊಂದು ಕೆಲಸಾ ಮಾಡಲಾಕs ಬೇಕು!"

"ನೋಡೋಣು ಹೋಗು... ಏನ ಆಗತೈತಿ...! ಬರೋಗರ ಅಕ್ಷೀ ತನಕ...."

ಭೀಮ ತಲೆಬಾಗಿಲ ವರೆಗೆ ಹೋಗಿರಬೇಕು. ಗೌಡರು "ಭೀಮಾ" ಎಂದು ಕೂಗಿದರು. ಭೀಮ ಗೌಡರ ಸಮೀಪಕ್ಕೆ ಬರಲು "ನೋಡು. ಆಗೂಹಾಂಗ ಇದ್ದರ ಹೇಳು....ಸಂಜಿಗೆಂದರ ಫೌಜದಾರ ಸಾಹೇಬರು ಬರಾವರು.... ಬಂದ ಕೂಡಲೆ ನಿಮ್ಮದು ಪ್ರಕರಣ. ಇಲ್ಲಾದರ ಸುಳ್ಳs ನನ್ನ ಮಾರೀ ಕೆಡಿಸಿ ಇಟ್ಟೀ ಅವರ ಮುಂದ...."

ದೊಡ್ಡ ಬಾಯಿ ಗೌಡರದು. ಹದಿನೈದು ರೂಪಾಯಿಗಳಲ್ಲೇ ಕೆಲಸ ಆಗುವುದು....ಎಂಬ ಉಬ್ಬಿನಲ್ಲಿ, ರೂಪಾಯಿ ಎಲ್ಲಿಂದ ತರುವುದೆಂಬುದನ್ನೂ ವಿಚಾರಿಸದೆ. ಮನೆಯಲ್ಲಿ ಇಟ್ಟು ಬಂದವರಂತೆ ಭೀಮ ತರಲಿಕ್ಕೆ ಹೊರಟಿದ್ದ. ಈಗ ಗೌಡರ ಮಾತಿನಿಂದ ಅವನು ವಿಚಾರ ಕ್ಕೊಳಗಾದ; ಬೆಪ್ಪನಂತೆ ಸುಮ್ಮನೆ ನಿಂತು ಬಿಟ್ಟ.

"ಸಣ್ಣ ಹುಡುಗನನ್ನು ಮುಂದಿನ ವರ್ಷ ಒಂದು ನಮ್ಮಲ್ಲೇ ದನಗಳನ್ನು ಕಾಯಲಿಕ್ಕೆ ಇಟ್ಟುಬಿಡು....ನಾ ಎಲ್ಲಾನೂ ನೋಡಿಕೋತೀನಿ!" ಎಂದು ಗೌಡರೇ ಉಪಾಯನ್ನು ಸೂಚಿಸಿದರು.

"ಹೂಂ! ಹಾಂಗs ಏನಾರೇ ಮಾಡಿ ಪುಣ್ಯಾ ಕಟ್ಟಿಕೊಳ್ಳಿರಿ....! ವಿಶ್ವಾಸ ನಿಮ್ಮ ಉಡ್ಯಾಗs ಹಾಕೀದೀನಿ....ಇಂದ ಶಿವ್ಯಾ ನನ್ನ ಭುಗಾ ಅಲ್ಲ, ನಿಮ್ಮ ಮಗಾ ಅಂತ ತಿಳಕೊಳ್ಳಿರಿ....ನಾನಾರೇ ರೂಪಾಯಿ ಎಲ್ಲಿಂದ ತರಲಿ....? ಏನೋ ಮನೀವ್ಯಾಗ ನಾಲ್ಕು ಪತ್ರೆ (ತಗಡು) ಅದಾವು....ಅವನ್ನs ಎಲ್ಲಿಯಾದರೂ ಒತ್ತಿ ಇಟ್ಟು ತಂಬೇಕು; ಅದರ ಹೊರತಾಗಿ ನಮ್ಮ ಮನಿಯೊಳಗ ಏನ ಐತಿ?...."

ವಾಗ್ವಿಲಾಸ ಬುಕ್‌ಡಿಪೋ ದುರ್ಗದಬೈಲು, ಹುಬ್ಬಳ್ಳಿ

ಇವರಲ್ಲಿ ದೊರೆಯುವ ಪುಸ್ತಕಗಳು

ಪೋಲೀಸನಾಯಿದು (ಕಲಕೋಟಿಕೃತ)	೨—೮—೦
ಒಕ್ಕಲತನದ ಸಾಂಪತ್ತಿಕ ಸ್ಥಿತಿ	೨—೬—೦
ಉತ್ಪನ್ನದ ಮೇಲಿನ ಕರದ ಕೈಪಿಡಿ	೨—೮—೦
ಮುಂಬೈ ಇಲಾಖೆಯ ಸಹ. ಸಂ. ಕಾಯಿದೆ	೧—೮—೦
ಪಂಡಿತ ಜಗನ್ನಾಥರ ಚರಿತ್ರ	೧—೦—೦
ಸಂತಾನಶಾಸ್ತ್ರ (ಸಬರದಕೃತ)	೧—೪—೦
ತರುಣ ಪಕ್ಷಿ	೦—೮—೦
ಕಲಿತರ ಹೀಗೆ ಕಲಿಯಬೇಕು	೦—೫—೦
ಗೀತಾರ್ಥ ಬೋಧಿನಿ	೦ ೧೨—೦
ತತ್ವಲಾವಣಿ	೦ -೪—೦

"ಛೀ, ಹಾಂಗೇನೂ ಆಗಾಡಬ್ಯಾಡ....ಮಳೀ—ಮಳಿಗಾಲ ದಿನಾ....ನೋಡ ಬ್ಯಾಡ ನಡಿಗೂಡಪ್ಪತಿ....: ಮಳೀ ಬಂತೂ ಅಂದರ ಎಲ್ಲಿ ಹೋಗ್ತಾವರು....? ಇಲಿಕ್ಕ ನಾಚೀ ಬ್ಯಾಡ?....' ಎಂದು ಗೌಡರು ದಯದೋರಿದರು, ದನ ಕಾಯಲು ಮತ್ತೊಬ್ಬ ಹುಡುಗ ಸಿಕ್ಕುವುದಿಲ್ಲನೆಂದು.

ಭೀಮಪ್ಪನ ಮನಸ್ಸಿನಲ್ಲಿ ಮಗನಿಗೆ ಇನ್ನೊಂದೆರಡು ವರ್ಷ ಓದು-ಬರಹ ಕಲಿಸಬೇಕೆಂದಿದ್ದರೂ ಅನಿವಾರ್ಯವಾಗಿ ಗೌಡರ ಮಾತಿಗೆ ಒಪ್ಪಬೇಕಾಗಿತ್ತು. ಹುಡುಗ ತನ್ನ ಒಂದು ವರ್ಷ ಗೌಡರಲ್ಲಿ ದನ ಕಾಯ್ದರೂ ಆಗುತ್ತಿತ್ತು. ಆದ್ದ, ಈ ಸಂಕಟದೊಳ-ಗಿಂದ ಶಿವಪ್ಪನನ್ನು ಗೌಡರು ಬಿಡಿಸಿದರೆ ಸಾಕು, ಎಷ್ಟು ಮಟ್ಟಿ ಅವನ ಸುತ್ತಲಿನ ಪರಿಸ್ಥಿತಿಯು ಭೀಕರವಾಗಿ ತೋರುತ್ತಿತ್ತು. ಅದರಿಂದ ಗೌಡರು ಶಿವಪ್ಪನನ್ನು ಉಳಿಸಿದರೆ ಅವರೇ ದೈವವೆಂದು ಭಾವಿಸಿ, ಅವನು ಸಂತೋಷದಿಂದ ಮನೆಗೆ ನಡೆದ.

'ಇನ್ನೇನೂ ಶಿವಪ್ಪನ ವಿಷಯಕ್ಕೆ ಕಾಳಜಿ ಮಾಡಬೇಕಿಲ್ಲ; ಎಲ್ಲಾನೂ ಗೌಡರು ನೋಡಿಕೊಳ್ಳತಾರ....' ಎಂಬ ಸಂಗತಿಯನ್ನು ಹೆಂಡತಿಗೆ ತಿಳಿಸಬೇಕೆಂದು ಉತ್ಸಾಹದಿಂದ ಸ್ವಲ್ಪ ಬೇಗನೆಯಿಂದಲೇ ಮನೆಯ ಕಡೆಗೆ ಸಾಗಿದ್ದ ಭೀಮಪ್ಪ....ಮನೆಯನ್ನು ಸಮೀಪಿಸುವಷ್ಟರಲ್ಲಿ ಅವನ ಎದೆಯು ಹೊಡೆದುಕೊಳ್ಳುತ್ತಿತ್ತು ಬೆಚ್ಚಿ ನಿಲ್ಲ-ಕ್ಕೆಂದೋ ಏನೋ...ಹೋದಿದ್ದೀನ ಮನೆಯಾಗ ಒಂದಿಷ್ಟು. ನಾಲ್ಕು ಹೆಜ್ಜೆ ಓಡಿಹೋಗಿ, ಮನೆಯನ್ನು ಬೇಗ ಸೇರಬೇಕೆಂದ ಭೀಮಪ್ಪ ಕಂಡುದೇನು ಗೊತ್ತೇ? ಮನೆಯೊಳಗಿನ ಸಾಮಾನುಗಳೆಲ್ಲ ಮಳೆಯಿಂದ ತೊಯ್ಯುತ್ತಲಿವೆ. ಮುದುಕಿಯು ಕಣ್ಣೀರು ಸುರಿಸುತ್ತ ನೆರೆಹೊರೆಯವರ ಮನೆಯಲ್ಲಿ ಕೆಲವು ಸಾಮಾನುಗಳನ್ನು ಒಯ್ದು ಇಡುತ್ತಿದ್ದಾಳೆ! ಅದನ್ನು ಕಂಡು ನಿಲ್ಲಲಾಗದೆ ಭೀಮಪ್ಪ. ಅಲ್ಲೇ ನೆಲಕ್ಕೆ ಕುಸಿದು ಬಿದ್ದ....

× × × ×

ಇಂದು ಗೌಡರು ಕಟ್ಟಿಸಿದ ಗುಡಿಯಲ್ಲಿ ಮೂರ್ತಿಯನ್ನು ಕೂಡಿಸಬೇಕಾಗಿದೆ. ಜಯಪುರದಿಂದ ಬಿಳಿಯ ಶಿಲೆಯಲ್ಲಿ ಕೆತ್ತಿದ ಸುಂದರ ಮೂರ್ತಿಯನ್ನು ತರಿಸಿದ್ದಾರೆ. ಸುತ್ತಲಿನ ನಾಲ್ಕೆಂಟು ಊರುಗಳಿಂದ ವಾದ್ಯಗಳ ಮೇಳದವರೂ ಗೌಡರ ಆಮಂತ್ರಣದ ಪ್ರಕಾರ ಉತ್ಸವಕ್ಕೆ ಬಂದಿದ್ದಾರೆ. ನಮ್ಮೂರ ಜನಕ್ಕೆ ಇದೊಂದು ಹೊಸ ಹಬ್ಬವಾದಂತಾ-ಗಿದೆ. ಮುಂಜಾನೆಯಿಂದಲೂ ಗುಡಿಯ ಮುಂದೆ ಜನ ಜಾತ್ರೆಯಂತೆ ನೆರೆದಿವೆ. ಗೌಡರು ವಾದ್ಯಗಳ ಸಂಭ್ರಮದೊಡನೆ ಗುಡಿಗೆ ಬರುತ್ತ, ತಮ್ಮ ಹಸ್ತಕನಾದ ಗುಂಡಪ್ಪನ ಕಡೆಗೆ ಹೊರಳಿ: "ಎಲ್ಲಿಂದಲೋ ತಗಡು ತಂದು ಮಂಟಪ ಪೂರ್ತಿ ಮಾಡಿ ಬಿಟ್ಟಿರುವಿಯಲ್ಲ!" ಎಂದು ಸ್ವಲ್ಪ ಸಂತಸದ ಸ್ವರದಲ್ಲಿ ಕೇಳಿದರು.

"ನಿಮ್ಮಂತಾ ಗೌಡರು ಇರೂ ತನಕಾ....ನಮಗೇನು ಕೊರತಿ? ಆ ಭೀಮ್ಯಾನ ಕಡಿಂದ ಇಪ್ಪತ್ತೈದು ರೂಪಾಯಿ ಬರಬೇಕಾಗಿ-ದ್ದವು....ನಾಲ್ಕೆಂಟು ದಿನಾ ಕೇಳಿದರೂ ಕೊಡಲಿಲ್ಲ. ಸೂ....ಮಗಾ....! ನಿನ್ನೆ ಅವನ ಮನಿಯ ಮ್ಯಾಲಿಂದ ಪತ್ರೇ ತಗಿಸಿ ತರಿಸಿದೆ; ಗುಡಿಗೂ ನಾಲ್ಕು ಪತ್ರೇ ಕಡಿಮೆ ಬಿದ್ದಂತಿದ್ದವು....'' ಎಂದು ಆಢ್ಯತೆಯಿಂದ ಹೇಳತೊಡಗಿದ ಗುಂಡಪ್ಪ.

"ಒಳ್ಳೇ ಹಂಚಿಕಿ ನಿಂದೂ...."

"ಏನಾರೇ ಮಾಡಲಿಕ್ಕೆ ಬೇಕಲ್ಲ; ಮಂದಿರದ ಕೆಲಸ ಲಗೂನ ಮುಗೀಲಿಕ್ಕೆ ಬೇಕಂತ....ಹಗಲಿರುಳೂ ಚಿಂತಿ ಮಾಡತಿದ್ದಿರಿ ನೀವು....!"

"ಹೌದು, ಈ ಶ್ರಾವಣ ಮಾಸಕ್ಕೆಂದರೆ ಗುಡೀ ಕೆಲಸ ಮುಗೀಲಿಕ್ಕೇ ಬೇಕಾಗಿತ್ತು. ತಾಯಿ ತೀರಿಕೊಂಡು ಒಂದು ವರ್ಷದೊಳಗ ಗುಡೀ ಕಟ್ಟಿಸಿ, ಅವರ ಕೊನೆಯ ಇಚ್ಛೆಯನ್ನು ಪೂರ್ತಿಗೊಳಿಸಬೇಕಾ ದದ್ದು ನಿಮ್ಮೆಲ್ಲರ ನೆರವಿನಿಂದ....ಸಾಧ್ಯವಾಯಿತು!"

"ನಮ್ಮದೇನು ದೊಡ್ಡ ನೆರವು....ಬಿಡ್ರಿ!"

ಹೀಗೆ ಮಾತನಾಡುತ್ತ ತಮ್ಮ ಸಂಗಡಿಗರೊಡನೆ ಗೌಡರು ಆನಂದದಿಂದ ಮಂಟಪವನ್ನು ಪ್ರವೇಶಿಸುತ್ತಿದ್ದರು. ಅಲ್ಲಿಯೆ ಒಂದು ಬದಿಗೆ ಅನಾಥರಿಬ್ಬರು: "ಅಯ್ಯೋ....! ಅಯ್ಯೋ....! ಇವರು ನಮ್ಮ ಮನಿಯ ಪತ್ರೆಗಳನ್ನೇ ತಂದು....ಗುಡಿಗೆ ಹಾಕಿದ್ದಾರಲ್ಲ....?.... ಮಗನನ್ನ ಉಳಿಸಿಕೊಡತೀನಂತ ಹೇಳಿ....ಹುಡುಗನನ್ನ....ಅತ್ತ.... ಚಾಕರಿಗೂ ಇಟ್ಟಗೊಂಡ....ಗೌಡ....! ಇತ್ತ........ಮನೀಮ್ಯಾಲಿಂದ ಪತ್ರೇನೂ....ಗುಂಡಪ್ಪ ಒಯ್ದನಲ್ಲ....'' ಎಂಬ ಆರ್ತಸ್ವರದಿಂದ ನರಳುವ ಕೂಗು, ಆ ಮಹೋತ್ಸವದ ವಾದ್ಯಗಳ ಗೊಂದಲದಲ್ಲಿ ಯಾರಿಗೆ ಕೇಳಿಸೀತು....?

ಕ್ರಾಂತಿಯ ಅರ್ಥ

(ವಿವೇಚನಾತ್ಮಕ ಪ್ರಬಂಧ)

●

ಶ್ರೀ. ಗೌರೀಶ ಕಾಯ್ಕಿಣಿ, ಗೋಕರ್ಣ

ಹೊಸ ಶಿಕ್ಷಣದಿಂದ ಜಾಣರಾದ ಆಧುನಿಕರಲ್ಲಿ —ಅದರಲ್ಲಿಯೂ ವಿಶೇಷವಾಗಿ ನಮ್ಮ ನಾಡಿನಲ್ಲಿ—ಕೆಲವು ಹೊಸ ಶಬ್ದಗಳು ತುಂಬಾ ಬಳಕೆಯಲ್ಲಿ ಬಂದಿವೆ. ಸಂಸ್ಕೃತಿ, ವ್ಯಕ್ತಿತ್ವ ಇವೇ ಮುಂತಾದ ನಾಜೂಕಾದ ಶಬ್ದಗಳು ಬಾಯಲ್ಲಿ ಬಂದ ಹೊರತು ತಮ್ಮ ಸುಶಿಕ್ಷಿತತನ ಸಿದ್ಧವಾಗುವುದಿಲ್ಲವೆಂದು ಪ್ರಾಮಾಣಿಕವಾಗಿ ನಂಬುವ ಭಾವಿಕರು ಕಡಮೆ ಇಲ್ಲ. ಹೀಗಾಗಿ ಈ ಕೆಲವು ಶಬ್ದಗಳು ಬಹಳೇ ಅಪಾರ್ಥ-ಅನರ್ಥಗಳಿಗೆ ಇಂಬಾಗಿವೆ.

ಇಂತಹ ನಿರುಪದ್ರವಿಯಾದರೂ ಉತ್ಪಾತಕ್ಕೆ ಕಾರಣವಾದಂತಹ ಒಂದು ಶಬ್ದವೆಂದರೆ 'ಕ್ರಾಂತಿ'. ಹೊಸ ಹರಯದಲ್ಲಿಯೇ ಮೀಸೆ ಬೋಳಿಸುವ ಅಶಿಕ್ಷಿತನು, ತಾನು ಏನೋ ಕ್ರಾಂತಿಯನ್ನಾರಂಭಿಸಿದೆನೆಂದು ಉಬ್ಬುತ್ತಾನೆ. ಡಾರ್ಕ್ ಬಂಗಲೆಗೆ ಬೆಂಕಿ ಇಡಲು ಮುಡುಕಿದ ಉಡಾಳನನ್ನು ಕ್ರಾಂತಿಕಾರಕನೆಂದು ಕರೆದು, ಅರ್ಧಶಿಕ್ಷಿತ ಫೌಜದಾರನು ಹೆಮ್ಮೆಪಡುತ್ತಾನೆ. ಬಿಡುವಿನಲ್ಲಿ ವೃತ್ತಪತ್ರಗಳ ಮೇಲೆ ಕಣ್ಣಾಡಿಸಿ, ಬಾರ್‌ರೂಮಿನಲ್ಲಿ ಮಿಕ್ಕವರೆದುರು ತನ್ನ ಪ್ರಗಲ್ಭತೆಯನ್ನು ತೋರುವ ತವಕದ ಸುಶಿಕ್ಷಿತ ವಕೀಲನೂ, ಹಿಟ್ಲರ್-ಮುಸಲೋನಿಯರನ್ನು ಕ್ರಾಂತಿಕಾರಕರೆಂದು ಕರೆಯುತ್ತಾನೆ. ಅಷ್ಟೇ ಏಕೆ, ದಿನದ ಪಠ್ಯಪುಸ್ತಕ ಅರಗಿಸಿಕೊಳ್ಳುವುದರಲ್ಲಿ ಬುದ್ಧಿ ಮುಸಳಿಸಿಹೋದ ಸುಲಬದ್ಧ ಶಾಲಾಶಿಕ್ಷಕನೂ, ವಿದ್ಯಾರ್ಥಿಗಳ ವಿವಾದಮಂಡಳದಲ್ಲಿ, ರೇಶನ್-ಕಂಟ್ರೋಲುಗಳ ಮೇಲೆ ವಾಚಾಳತನ ಮಾಡಿ, ತಾನು ಕ್ರಾಂತಿಕಾರಕ ಭಾಷಣ ಕೊಟ್ಟೆನೆಂದು ತನ್ನ ಜಾಣ್ಮೆಗೆ ತಾನೆ ಮೆಚ್ಚುವಾಗ, ತನ್ನ ಧೈರ್ಯಕ್ಕೆ ತಾನೇ ಅಂಜುತ್ತಾನೆ.

ಇದಾಯಿತು ಸಾಮಾನ್ಯರ ಮಾತು. 'ಮುಖಂಡರು' 'ಮುಂದಾಳುಗಳು' ಎಂದೆನಿಸಿಕೊಂಡವರೂ ಕ್ರಾಂತಿಯ ವಿಷಯಕ್ಕೆ ವಿಚಿತ್ರ ಭ್ರಾಂತಿಗೆ ಒಳಗಾದುದನ್ನು ಕಾಣಬಹುದು. ಬಿಳಿಯ ಮುದಿಯನನ್ನೆಲ್ಲ ಗುಂಡಿಕ್ಕಿ ಕೊಲ್ಲುವ ಪಣತೊಟ್ಟು ಗಲ್ಲಕ್ಕೇರಿದ ಭಗತಸಿಂಗ ಪ್ರಭೃತಿಗಳು ಕ್ರಾಂತಿಕಾರಕರೆಂದು ಹೇಳಲಾಗುತ್ತದೆ. ವಿಧವಾವಿವಾಹ, ಸ್ತ್ರೀಯರ ಆರ್ಥಿಕ ಸ್ವಾತಂತ್ರ್ಯ ಮುಂತಾದ ಸುಧಾರಣೆಗಳನ್ನು ಕುರಿತು ಪ್ರಯತ್ನ-ಪ್ರಚಾರಗಳನ್ನು ಮಾಡುವ ಸಾಮಾಜಿಕ ಮುಂದಾಳುಗಳೂ ಕ್ರಾಂತಿಮಾಡಿದವರೆಂದು ಎಣಿಸಲ್ಪಡುತ್ತಾರೆ. ದೇಶದ ತುಂಬ ಪ್ರಚಂಡ ಜನಜಾಗ್ರತಿಯೆಬ್ಬಿಸಿ, ರಾಜಕೀಯ ಚಟುವಟಿಕೆ ಹೂಡುವ ಜವಾಹರಲಾಲರು ಕ್ರಾಂತಿಪುರುಷರಾಗುತ್ತಾರೆ. ದೇಶದ ದುರ್ದಶೆಯನ್ನು ದೂರಮಾಡಲು ಆರ್ಥಿಕ ಸ್ಥಿತ್ಯಂತರಗಳನ್ನು ತರಲು ಯತ್ನಿಸುವ ಕಾಮ್ಯುನಿಸ್ಟರು ಕ್ರಾಂತಿಯ ಅಗ್ರದೂತರೆಂದು ಕೊಳ್ಳುವರು. ಹಾಗೆಯೆ ದೇಶದ ಜನಜೀವನದ ಸಮಸ್ಯೆಗಳನ್ನು ಆಧ್ಯಾತ್ಮಿಕ ಭೂಮಿಕೆಯಿಂದ ಬಿಡಿಸ ಬಯಸುವ ಮಹಾತ್ಮರೂ ಸರ್ವಶ್ರೇಷ್ಠ ಕ್ರಾಂತಿಕಾರಕರೆಂದೆಂದುಕೊಳ್ಳುವರು.

ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಕ್ರಾಂತಿಯ ಅರ್ಥವನ್ನು ನಿಶ್ಚಿತಮಾಡುವುದು ಅವಶ್ಯವಿದೆ. ಇದ್ದ ಸ್ಥಿತಿಯಲ್ಲಿ ಯಾವುದೇ ಬೇರ್ಪಾಟ ಮಾಡಿದೊಡನೆ ಅದು ಕ್ರಾಂತಿಯಾಯಿತೆಂದು ಮಂದಿಯ ಅಭಿಪ್ರಾಯವಿದೆ. ಉದಾಹರಣೆಗಾಗಿ, ಕೈಮಗ್ಗ, ಕೈರಾಟೆ ಮುಂತಾದ ಚಿಕ್ಕಪುಟ್ಟ ಸಾಧನಗಳ ಬದಲು ಭವ್ಯವಾದ ಯಂತ್ರೋಪಕರಣಗಳು ಬಂದೊಡನೆ, ಉತ್ಪಾದನೆಯಲ್ಲಿ ಸ್ಥೂಲವಾಗಿ ಸ್ಥಿತ್ಯಂತರವಾಗಿಯೆ ಆಗುತ್ತದೆ; ಇವನ್ನೆಲ್ಲ ಕ್ರಾಂತಿಯೆಂದು ಕರೆಯುವ ರೂಢಿಯಾಗಿದೆ. ರಾಜಕಾರಣದಲ್ಲಿಯೂ ಹಾಗೆಯೆ. ಸಾಮೋಪಾಯ ಬಿಟ್ಟು, ಪ್ರತೀಕಾರದ ಹೊಂಚು ಕೈಕೊಂಡೊಡನೆ ಒಂದು ರಾಜಕೀಯ ಕ್ರಾಂತಿ ತಲೆಯೆತ್ತಿತೆಂದು ಭಾವಿಸಲಾಗುತ್ತದೆ. ಯಾವುದೇ ಕ್ಷೇತ್ರವಿರಲಿ, ಪ್ರತಿಯೊಂದು ಬಂಡಾಯವೂ—ಕಣ್ಣು-ಕಿವಿ ತುಂಬುವಂತಹ ಪ್ರತಿಯೊಂದು ಕೋಲಾಹಲವೂ—ಒಂದು ಕ್ರಾಂತಿಯೆನಿಸಿಕೊಳ್ಳುತ್ತದೆ.

ಇದು ಅಪರಾಧವೇನೂ ಅಲ್ಲ. ಬರೇ ತಿಳುವಳಿಕೆಯ ವಿಪರ್ಯಾಸ. ತರ್ಕದ ಪರಿಭಾಷೆಯಲ್ಲಿ ಇದೊಂದು ಅತಿವ್ಯಾಪ್ತಿ. ನಿಜವಾದ ಕ್ರಾಂತಿಯ ಕೆಲವೊಂದು ಲಕ್ಷಣಗಳ ಪರಿಚಯ ಮಾತ್ರ ಇದ್ದವರು, ಆ ಲಕ್ಷಣಗಳು ತೋರಿದಲ್ಲೆಲ್ಲ ಕ್ರಾಂತಿಯಾಗಿದೆಯೆಂದು ಭಾವಿಸುವುದು; ಸಮರ್ಪಕವಲ್ಲದಿದ್ದರೂ ಸಹಜವೆ. ಶಬ್ದಕೋಶವು ಕ್ರಾಂತಿಯ ಅರ್ಥವನ್ನು ಒಂದು ಮಾದರಿಯಾಗಿ ಕೊಡುತ್ತದೆ "ಆಕಸ್ಮಿಕವಾಗಿಯೂ ಬಲಾತ್ಕಾರದಿಂದಲೂ ಒದಗಿದ ಸ್ಥಿತ್ಯಂತರ" ಕ್ರಾಂತಿಯೆಂದು ಕರೆಯಲ್ಪಡುವುದು. ಈ ಅರ್ಥವೂ ಕೆಲಮಟ್ಟಿಗೆ ಯಥಾರ್ಥವಲ್ಲ. ಪ್ರತಿಯೊಂದು ಕ್ರಾಂತಿಯೂ ಆಕಸ್ಮಿಕವಾಗಿರಬೇಕಿಲ್ಲ; ಹಾಗೆಯೇ ಅದು ಬಲಾತ್ಕಾರದಿಂದ ಕೂಡಿರಬೇಕಾಗಿಯೂ ಇಲ್ಲ. ಕ್ರಾಂತಿಯಲ್ಲಿ ಬಂದು ಸೇರುವ ಆಕಸ್ಮಿಕತೆಯು ಇಲ್ಲವೆ ಬಲಾತ್ಕಾರದ ಅಂಶವು ಆಗಂತುಕ—ಕೆಲವು ಸ್ಥಾನಿಕ ಮತ್ತು ಕಾಲಿಕ ನಿಮಿತ್ತಗಳ ಮೂಲಕ. ಇವೆರಡೂ ಕ್ರಾಂತಿಯ ನಿಜವಾದ ಅಂಗಗಳಲ್ಲ.

ಮಧ್ಯಯುಗದ ಧಾರ್ಮಿಕ ವಿಚಾರ-ಆಚಾರಗಳ ಭೂಮಿಕೆ ಹೋಗಿ ಆಧುನಿಕತೆಯ ಹೊಸ ನಡೆವಳಿಯು ಆಕಸ್ಮಿಕವಾಗಿ ಬರಲಿಲ್ಲ. ಬಲಾತ್ಕಾರವಾಗಿಯೂ ಬಂದುದು ಕಡಮೆ. ಹಾಗೆಯೇ ನೈತಿಕ ಮೌಲ್ಯಗಳು, ಕಲೆಯ ಅಭಿರುಚಿಯ ಮಾನದಂಡಗಳು ಇನ್ನೆಲ್ಲವುಗಳಲ್ಲಿ ಆಮೂಲಾಗ್ರ ಪರಿವರ್ತನೆಯಾಗಿದ್ದರೂ, ಆಕಸ್ಮಿಕ-ಬಲಾತ್ಕಾರಗಳ ತಕ್ಕೆಯಲ್ಲಿ ಅಂತಹ ಕ್ರಾಂತಿ ಬರುವುದಿಲ್ಲ. ಬರೇ ಬಲಾತ್ಕಾರವೂ ಕ್ರಾಂತಿಯನ್ನು ತರಲೊಲ್ಲದು. ಕೆಮಾಲ್-ಅತಾತುರ್ಕರು ಬಲಾತ್ಕಾರವಾಚರಿಸಿದರು; ಅಮೀರ್ ಅಮಾನುಲ್ಲಾನೂ ಬಲಾತ್ಕಾರ ಆಚರಿಸಿದನು. ಆದರೇನು? ತುರ್ಕಸ್ಥಾನದಲ್ಲಿ ಕ್ರಾಂತಿಯು ಫಲಿಸಿತು. ಅಫಗಾನಿಸ್ಥಾನದಲ್ಲಿ ಕ್ರಾಂತಿಪುರುಷನಿಗೆ ಅರ್ಧಚಂದ್ರ ಸಿಕ್ಕಿತು. ರಶಿಯಾದಲ್ಲಿ ಸರ್ವತೋಮುಖ ಕ್ರಾಂತಿಯಾಯಿತು. ಬಲಾತ್ಕಾರದಿಂದಲೇ ಅದು ಸ್ಥಿರವಾಯಿತು. ಆದರೆ ಸ್ಪೇನಿನಲ್ಲಿ, ಇಟಲಿಯಲ್ಲಿ ಅದು ಆಗಲಿಲ್ಲ.

ಇದರಿಂದ ಒಂದು ಮಾತು ಸ್ಪಷ್ಟವಾಗುತ್ತದೆ. ಅದೆಂದರೆ ಕ್ರಾಂತಿಗೆ ಒಂದು ಯೋಗ ಬರಬೇಕು. ಅದೇನು ಆಧ್ಯಾತ್ಮಿಕ ಯೋಗವಲ್ಲ. ಪರಿಸ್ಥಿತಿಯು ಪರಿಪಾಲಕವು ಕ್ರಾಂತಿಗೆ ತಕ್ಕುದಿರಬೇಕು. ಜನಾಂಗದ ಸಾಮೂಹಿಕ ಜೀವನವು ಒಂದು ನಿಕರದ ಹದಕ್ಕೆ—ಇಲ್ಲವೆ ಹದಗೇಡಿಗೆ—ಬಂದಿರಬೇಕು. ಆ ಮೊದಲಾಗಲಿ, ಆಮೇಲಾಗಲಿ ಜರುಗುವ ಕ್ರಾಂತಿಯ ಪ್ರಯತ್ನಗಳೆಲ್ಲ ವ್ಯರ್ಥವಾಗುವವು. ಎಂದಮೇಲೆ ಕ್ರಾಂತಿಯ ನಿಜವಾದ ಅರ್ಥ ತಿಳಿಯಲು, ಈ ಸಾಮೂಹಿಕ ಜೀವನದ ಸನ್ನಿವೇಶ—ಅದರಿಂದ ಸೂಚಿತವಾದ ನಿಶ್ಚಿತ ಹೊಸ ಮಾರ್ಪಾಟದ ಮಾರ್ಗ ಇವೆರಡನ್ನು ಅವಶ್ಯ ಅಭ್ಯಾಸಿಸಬೇಕಾಗುತ್ತದೆ. ಬರೇ ಬಲಾತ್ಕಾರವಿದೆಯೋ, ಆಕಸ್ಮಿಕವಾಗಿದೆಯೋ ಎಂಬುದಷ್ಟೇ ಕ್ರಾಂತಿಯ ನಿರ್ಣಯಕ್ಕೆ ಸಾಲದು.

ಸರಿ. ಹಾಗಿದ್ದರೆ ಕ್ರಾಂತಿಯ ನಿಜವಾದ ಅರ್ಥವೇನು? ಕ್ರಾಂತಿಯು ಬರೇ ಸ್ಥಿತ್ಯಂತರವೋ ಬರೇ ಗತ್ಯಂತರವೋ ಇಲ್ಲವೆ ಕೇವಲ ರೂಪಾಂತರವೋ? ಇದನ್ನು ಅರಿತುಕೊಳ್ಳುವ ಮುನ್ನ ಸೃಷ್ಟಿ ತಾತ್ತ್ವಿಕ ವಿವೇಚನೆಯಲ್ಲಿ ಸೇರಬೇಕು. ನಿಸರ್ಗದ ಎಲ್ಲ ವಿಕಾಸದ ವ್ಯಾಪಾರದಲ್ಲಿ ಎರಡು ತತ್ತ್ವಗಳು ಒಳವಟ್ಟಿವೆ: ಒಂದು ನಿತ್ಯ ಇಲ್ಲವೆ ಸಾಮಾನ್ಯ, ಇನ್ನೊಂದು ನೈಮಿತ್ತಿಕ ಇಲ್ಲವೇ ವಿಶೇಷ. ಸಾಮಾನ್ಯವಾದದ್ದು ಉತ್ಕ್ರಾಂತಿ; ವಿಶೇಷವಾದದ್ದು ಕ್ರಾಂತಿ. ನಿಯಮಕ್ಕೆ ಒಂದು ಅಪವಾದವಿರುತ್ತದಷ್ಟೇ, ಹಾಗೇ ನಿಯತಿಗೂ ಒಂದು ಅಪಘಾತವಿರುತ್ತದೆ. ಕಾಲಕಾಲಕ್ಕೆ ಬರುವ ಕ್ರಾಂತಿಯೇ ಆ ಅಪಘಾತ. ಇವೆಲ್ಲ ಮಾತು ಬರಿ ಆಡಂಬರದ್ದೆಂದು ಕಂಡರೂ ತೀರ ಸರಳವಿದೆ. ಕೆಲವು ಉದಾಹರಣೆಗಳು ಇದನ್ನು ವಿಶದಪಡಿಸುತ್ತವೆ. ಈ ಉದಾಹರಣೆಗಳನ್ನು ಬೇರೆ ಬೇರೆ ಕ್ಷೇತ್ರದಿಂದ ಆರಿಸಲಾಗಿದೆ ಅವೇನೆಂಬುದನ್ನು ನೋಡೋಣ.

ನೀರು ದ್ರವ ಪದಾರ್ಥ. ಅದರ ಉಷ್ಣತೆ ಕೆಲವೊಂದು ಇದ್ದೇ ಇರುತ್ತದೆ. ಆ ಉಷ್ಣತೆಯನ್ನು ಹೆಚ್ಚಿಸಲಾಗುತ್ತದೆ. ಹೀಗೆ ಸಾಮಾನ್ಯವಾಗಿ ನೀರಿಗೆ ಹೆಚ್ಚು ಹೆಚ್ಚು ಉಷ್ಣತೆ ಕೊಟ್ಟಂತೆ, ಅದರ ಪ್ರಸರಣವಾಗುತ್ತ ನಡೆಯುತ್ತದೆ. ಆದರೆ ಈ ಕ್ರಿಯೆಗೆ ಒಂದು ಅವಧಿ ಇದೆ. ಆಮೇಲೆ ಎಷ್ಟೇ ಉಷ್ಣತೆ ಕೊಡುತ್ತಿದ್ದರೂ ನೀರು ಇನ್ನು ಕಾಯುವುದಿಲ್ಲ; ಪ್ರಸರಣವನ್ನೂ ಹೊಂದುವುದಿಲ್ಲ. ಇದರಲ್ಲಿ ಅದರ ಅವಸ್ಥೆಯಲ್ಲಿ ತೀವ್ರವಾಗಿ ಮಾರ್ಪಾಟವಾಗುತ್ತದೆ. ನೀರು ಉಗಿಯಾಗುತ್ತದೆ. ಅದರ ದ್ರವತ್ವ ಹೋಗಿ ಬಾಷ್ಪತ್ವವು ಬರುತ್ತದೆ. ದ್ರವದಲ್ಲಿ ಇಲ್ಲದ ತೀರ ಹೊಸ ಗುಣಧರ್ಮಗಳು ಬಾಷ್ಪದಲ್ಲಿ ತಲೆದೋರುತ್ತವೆ. ಇದು ಕ್ರಾಂತಿ. ದ್ರವದ ಉಷ್ಣತೆಯನ್ನು ಹೆಚ್ಚಿಸುತ್ತ ಹೋಗುವುದು ಉತ್ಕ್ರಾಂತಿ. ಆದರೆ ಈ ಅತಿರೇಕಕ್ಕೆ ಮುಟ್ಟಿದ ಉಷ್ಣತೆಯ ಪರಿಮಾಣವೇ ದ್ರವದಲ್ಲಿ ಸಂಪೂರ್ಣ ಬೇರೆಯ ಪರಿಣಾಮವನ್ನು ಒದಗಿಸುತ್ತದೆ. ನೀರಿನ ಗುಣ ನಷ್ಟ ಮಾಡಿ, ಉಗಿಯ ಗುಣ ತರುತ್ತದೆ. ಇದು ಜಡದ ಉದಾಹರಣೆಯಾಯಿತು.

ಇನ್ನೊಂದು ಉದಾಹರಣೆ ಜೀವದ್ದು. ಬೀಜವು ನೆಲದಲ್ಲಿ ಹೂತು ಕೆಲಕಾಲ ತನ್ನ ಗುಣದ ವಿಕಾಸಮಾಡಿಕೊಳ್ಳುತ್ತಾ, ಕೊನೆಗೆ ತನ್ನನ್ನೇ ತಿಂದುಕೊಂಡು ಮೊಳಕೆಯೊಡೆದು ಗಿಡವಾಗುತ್ತದೆ. ತತ್ತಿಯು ೨೧ ದಿನ ತನ್ನ ವಿಕಾಸ ಮಾಡಿಕೊಳ್ಳುತ್ತಲೇ ತನ್ನನ್ನೇ ಕೊಂದುಕೊಂಡು ಮರಿಯನ್ನು ಹೊರಗೆಡಹುತ್ತದೆ. ಗರ್ಭವು ಬೆಳೆದು ಶಿಶುವಾಗುವ ಗೂಢವೂ ಇದೇ ಮಾದರಿಯದು. ಈ ಮೂರು ಸಂಗತಿಗಳಲ್ಲಿಯೂ ಒಂದು ಸಾಮ್ಯವಿದೆ. ಒಂದು ಸ್ಥಿತಿ; ಅದರಲ್ಲಿ ಪ್ರಗತಿ. ಪ್ರಗತಿ ಕೆಲವೊಂದು ಬಿಂದುವಿಗೆ ತಲ್ಪಿದೊಡನೆ ಸಮಗ್ರ ಸ್ಥಿತ್ಯಂತರ. ಕೆಲವೊಂದು ಪರಿಸ್ಥಿತಿಯು ಒಂದು ಜಡತತ್ತ್ವಕ್ಕೆ, ಒಂದು ಜೀವತತ್ತ್ವಕ್ಕೆ ಪೋಷಕವಾಗಿ, ಅದರ ಬೆಳವಣಿಗೆಗೆ ಕಾರಣವಾಗುತ್ತದೆ. ಆದರೆ ಆ ಬೆಳವಣಿಗೆ ಒಂದು ಮಟ್ಟಕ್ಕೆ ಮುಟ್ಟಿದೊಡನೆ, ಮುಂದಿನ ಮಾರ್ಪಾಟಕ್ಕಾಗಿ ಇದ್ದ ಪರಿಸ್ಥಿತಿಯು ರದ್ದಾಗಬೇಕು

ಇದೇ ತತ್ತ್ವ ಸಮಾಜಕ್ಕೂ ಅನ್ವಯಿಸುತ್ತದೆ. ಮನುಷ್ಯಪ್ರಾಣಿಗೂ ಮಿಕ್ಕ ಪ್ರಾಣಿಗಳಿಗೂ ಇದೇ ಅಭ್ಯಂತರ. ಪರಿಸ್ಥಿತಿಯೊಂದಿಗೆ ಹೊಂದಿಸಿಕೊಂಡು ಬಾಳುವ ಮಟ್ಟಿಗೇ ಮಿಕ್ಕ ಪ್ರಾಣಿಗಳು ಉತ್ಕ್ರಾಂತಿ ಹೊಂದುತ್ತವೆ; ಆದರೆ ಮನುಷ್ಯನು ಪರಿಸ್ಥಿತಿಗಾಗಿ ತನ್ನನ್ನು ಮಾರ್ಪಡಿಸಿಕೊಂಡು ಉತ್ಕ್ರಾಂತಿ ಹೊಂದಿದೊಡನೆಯೆ ಮುಂದಿನ ಉತ್ಕ್ರಾಂತಿಗಾಗಿ ತನ್ನ ಪರಿಸ್ಥಿತಿಯನ್ನೇ ಬೇರ್ಪಡಿಸಿಕೊಳ್ಳುತ್ತಾನೆ. ಇದುವೆ ಕ್ರಾಂತಿ. ಹೀಗೆ 'ಕ್ರಾಂತಿ' ಶಬ್ದಕ್ಕೆ ಇತಿಹಾಸದಲ್ಲಿ ಒಂದು ವಿಶೇಷ ಅರ್ಥವಿದೆ. ಮಾನವನ ಮುನ್ನಡೆಯ ಪ್ರತಿಯೊಂದು ಮುಂದಿನ ಮೆಟ್ಟು, ಮೇಲ್ಮಟ್ಟ ಕ್ರಾಂತಿಯ ಹೆಜ್ಜೆಯು. ಮಾನವನ ಭಾಗ್ಯದ ಒಕ್ಕಣಿಕೆಯಲ್ಲಿ ಒಂದೊಂದು ವಾಕ್ಯವೂ ಪ್ರಗತಿ ಇಲ್ಲವೇ ಉತ್ಕ್ರಾಂತಿಯ ವಿಸ್ತಾರವಾದರೆ, ಅದರ ವಿರಾಮಚಿಹ್ನೆಯು ಕ್ರಾಂತಿಯ ಸ್ಥಾನ. ಒಂದು ವಾಕ್ಯ ಮುಗಿಸಿದ ವಿಕಾಸಕ್ಕೆ ಒಂದು ಅವಧಿ ಒಂದು ಪರಿಧಿಯಿರುತ್ತದೆ. ಅದರ ಅಂಚಿಗೆ ಬಂದೊಡನೆ ಆಚೆಗೆ ಹೋಗುವ ಹೆಜ್ಜೆಯೇ ಕ್ರಾಂತಿ. ಉತ್ಕರ್ಷದ ಘಟ್ಟವೇರುವ ದಾರಿಯು ನೇರವಾಗಿಲ್ಲ. ಅದರ ಪ್ರತಿಸುತ್ತಿಗೂ ಒಂದು ಉತ್ತರವಿದೆ. ಆ ಎತ್ತರದ 'ಮುರಿಕೆ'ಯೇ ಕ್ರಾಂತಿಯ ಸಂದರ್ಭ.

ಹೀಗೆ ಒಂದು ಸ್ಥಿತಿಯಲ್ಲಿ, ಒಂದು ಸ್ವರೂಪದ ಗುಣಧರ್ಮಗಳಲ್ಲಿ, ಒಂದು ಸಮಾಜದ ಪರಿಸ್ಥಿತಿಯಲ್ಲಿ ವಿಕಾಸವಿಲ್ಲವೇ ಉತ್ಕ್ರಾಂತಿಯಾಗುತ್ತ ಹೋಗಿ, ಅದರ ಮುಕ್ತಾಯ ಕ್ರಾಂತಿಯಲ್ಲಿ ಆಗುತ್ತದೆ. ಎಂದರೆ ಪರಿಮಾಣದ ಸ್ಥಿತ್ಯಂತರವೇ ಉತ್ಕ್ರಾಂತಿ. ಪರಿಮಾಣದಿಂದ ಗುಣಕ್ಕೆ ಹಾಯುವ ಸ್ಥಿತ್ಯಂತರವೇ ಕ್ರಾಂತಿ. ಪ್ರತಿಯೊಂದು ಸಂಗತಿಯೂ ಗುಣ ಮತ್ತು ಪರಿಮಾಣಗಳ ದ್ವಂದ್ವ. ಒಂದು ಬೆಳೆದಂತೆ ಇನ್ನೊಂದು ಬೇರೆಯಾಗುತ್ತದೆ. ಈ ಬೇರ್ಪಾಟವು ಪ್ರಕಟವಾಗುವುದೇ ಕ್ರಾಂತಿ. ಬರೇ ಸುಧಾರಣೆ ಪ್ರಗತಿಗಳನ್ನು ತೀವ್ರ ಮಾಡುವುದು ಕ್ರಾಂತಿಯಲ್ಲ.

ಮುಂಬಯಿ ದಾದರಿನಲ್ಲಿ ನಮ್ಮ ಏಜಂಟರು
ಶ್ರೀ. ಆರ್. ಆರ್. ಕೊಲ್ಹಾಪುರೇ
– 'ಜಾನಕೀನಿವಾಸ' ಎಲ್. ಜೆ. ರೋಡ್

ರಬಕವಿಯಲ್ಲಿ ನಮ್ಮ ಏಜಂಟರು
ಶ್ರೀ. ಎಂ. ಜಿ. ಪೂಜಾರಿ
ನ್ಯೂಜ್‌ಪೇಪರ್ ಏಜಂಟ್

ಸ್ತ್ರೀ ಮತ್ತು ಪುರುಷ

(ಒಂದು ವ್ಯಂಗ್ಯ ಲೇಖನ)

●

" ಶ್ರೀರಾಜ " ಮುಂಬಯಿ

ಸ್ತ್ರೀಯರನ್ನು ದೇವತೆಯಂತೆ ಮನ್ನಿಸಲೂ ಸಿದ್ಧ ನಿದ್ದೇನೆ. ಆದರೆ ಅವರು ದೇವತೆಯರಂತೆ ವರ್ತಿಸದೆ ಹೋದರೆ ನಾವು ಹೇಗೆ ಅವರನ್ನು ಮನ್ನಿಸಬೇಕು?

●

ಬೋರೀ ಬಂದರಕ್ಕೆ ಬಂದೆ. ನಸುಕಿನ ಐದು ಗಂಟೆಯಾಗಿತ್ತು. ಆದರೂ ಟಿಕೀಟ್ ಆಫೀಸಿನ ಹತ್ತರ ಜನರು ಇದ್ದೇ ಇದ್ದರು. ಕೆಲವರು ತೂಕಡಿಸುತ್ತ, ಕೆಲವರು ಕಣ್ಣುಗಳನ್ನು ಒರಸುತ್ತ ರಾತ್ರಿಯಲ್ಲಿ ಅಲ್ಲಿಯೇ ನಿದ್ರೆ ಮಾಡಿ ಆದೇ ಎಚ್ಚರಾದಂತೆ ತೋರುತ್ತಿದ್ದಿತು.

ಒಂದೇ ಸವನೆ ಎರಡು ದಿನಗಳಿಂದ ಪ್ರಯತ್ನ ನಡೆಯಿಸಿದ್ದೇನೆ. ಮುಂಬಯಿಯಿಂದ ಹುಟಗಿಯ ವರೆಗೆ ಒಂದು ಟಿಕೀಟನ್ನು ದೊರಕಿಸಲು. ಮುಂಜಾನೆ ಹತ್ತು ಗಂಟೆಗೆ ಬಂದರೂ ಅದೇ ಹಾಡು; ಎಂಟು ಗಂಟೆಗೆ ಬಂದರೂ ಅದೇ ಹಾಡು. ಬಂದ ಹಾದಿಗೆ ಸುಂಕವಿಲ್ಲವೆಂದು ಕೈಜಾಡಿಸುತ್ತ ಮರಳಿ ಹೋಗಲೇಬೇಕಾಗಿತ್ತು. ಆದುದರಿಂದ ಈ ದಿನ ನಸುಕಿನಲ್ಲಿ ಬಂದರೂ ಮತ್ತೆ ಅದೇ ಸ್ಥಿತಿ. ಜನರು ಸಾಲಾಗಿ ನಿಂತಿದ್ದರು. ನನ್ನ ನಂಬರು ಸಾಧಾರಣ ಇಪ್ಪತ್ತೈದು ಇರಬಹುದು ಇನ್ನೂ ಟಿಕೀಟನ್ನು ಕೊಡಲು ಪ್ರಾರಂಭಿಸಿರಲಿಲ್ಲವಾದ್ದರಿಂದ, ಟಿಕೀಟು ದೊರೆಯಬಹುದೆಂಬ ಆಶೆಯಿಂದ ಸಾಲಿನಲ್ಲಿ ನಿಂತೆ. ಇಷ್ಟು ನಸುಕಿನಲ್ಲಿ ಬಂದದ್ದು ಸಾರ್ಥಕವಾಯಿತೆಂದು ಸಮಾಧಾನಪಟ್ಟುಕೊಂಡೆ.

ಸರಿಯಾಗಿ ಆರು ಗಂಟೆಗೆ ಟಿಕೀಟುಗಳನ್ನು ಕೊಡಲು ಪ್ರಾರಂಭಿಸಿದರು. ಟಿಕೀಟು ಕೊಡಲು ಪ್ರಾರಂಭಿಸಿದರೂ ನಮ್ಮ ಸಾಲು ಮುಂದೆ ಸರಿಯಲೊಲ್ಲದು. 'ಏಕೆ?' ಎಂದು ಸಾಲಿನಿಂದ ಸ್ವಲ್ಪ ಮಗ್ಗುಲಿಗೆ ಸರಿದು ನೋಡುತ್ತೇನೆ— ನಮ್ಮ ಸಾಲಿನಷ್ಟೇ ದೊಡ್ಡದೊಂದು ಸ್ತ್ರೀಯರ ಸಾಲು ಟಿಕೇಟ್ ಆಫೀಸಿನ ಮತ್ತೊಂದು ಬದಿಗೆ ಎಂದರೆ ನಾವು ಹೊರಗೆ ಹೋಗುವ ದಾರಿಯಲ್ಲಿ ನಿಂತಿದೆ. ಮೊದಲು ಅವರಿಗೆ ಟಿಕೀಟುಗಳನ್ನು ಕೊಡುತ್ತಿದ್ದಾರೆ. ಅವರಿಗೆಲ್ಲ ಕೊಡುವುದಾದ ಮೇಲೆ ನಮಗೆ ಟಿಕೀಟು ದೊರೆಯುವುದು. ಸ್ತ್ರೀಯರ ಸಂಖ್ಯೆಯಾದರೂ ಸಣ್ಣದಿರುವುದೇ? " ನಿಮ್ಮಷ್ಟೇ ನಾವು! " ಎಂದು ನಮಗೆ ಮನವರಿಕೆ ಮಾಡುವ ಉದ್ದೇಶದಿಂದಲೊ ಏನೊ ನಮ್ಮಷ್ಟೇ ಸ್ತ್ರೀಯರು ಅಲ್ಲಿ ನಿಂತಿದ್ದಾರೆ. ಇದನ್ನು ನೋಡಿ ನನ್ನ ಧೈರ್ಯವಂತೂ ಮಾಯವಾಯಿತು. ಆಶೆ ನಿರಾಶೆಯಾಯಿತು. " ಸೀದಾ ಲಾಯಿನ್‌ಸೆ ಖಡೇರಹೋ " ಎಂದು ಪೋಲೀಸ್ 'ಸಾಹೇಬ'ನು ಸ್ವಲ್ಪ ನೂಗಿಸಿದಾಗಲೆ ನನಗೆ ಎಚ್ಚರಿಕೆ. ಆದರೆ ಮುಂದೆ ಲಾಯಿನಿನಲ್ಲಿ ಬಹಳ ಹೊತ್ತು ನಿಲ್ಲುವ ಪ್ರಸಂಗವೇ ಬರಲಿಲ್ಲ. ನನ್ನ ಮುಂದೆ ಇನ್ನೂ ಹತ್ತು ಹದಿನೈದು ಜನರು ಇರುವಾಗಲೆ " ಟಿಕೀಟುಗಳೆಲ್ಲ ಮಾರಾಟವಾದುವು " ಎಂದು ಘೋಷಿಸಲಾಯಿತು.

ನನಗೆ ಏನೂ ತೋಚದಾಯಿತು. ಟಿಕೀಟನ್ನು ದೊರಕಿಸಲು ಇನ್ನು ಏನು ಮಾಡಬೇಕು? ರೇಲ್ವೆಯಲ್ಲಿ ಯಾವ ಗೆಳೆಯನಾಗಲಿ ಆಪ್ತನಾಗಲಿ ಕೆಲಸಕ್ಕೆ ಇಲ್ಲ. ಹೊರಗೆ ಮಾರುವವರಿಂದ ಮಾರಾಟಕ್ಕೆ ತೆಗೆದುಕೊಂಡು ಪ್ರವಾಸ ಮಾಡುವ ಧೈರ್ಯ ನನ್ನಲ್ಲಿಲ್ಲ. " ಮತ್ತೆ ನಾಳೆ ಬರೋಣ. ಇನ್ನೂ ಒಂದು ಗಂಟೆ ಮೊದಲು— ನಾಲ್ಕು ಗಂಟೆಗೇ ಬರೋಣ " ಎಂದು ನಿಶ್ಚಯ ಮಾಡಿ, ಮನೆಗೆ ಮರಳಬೇಕೆಂದು ಬಸ್ ಸ್ಟ್ಯಾಂಡಿಗೆ ಬಂದೆ.

ಇಲ್ಲಿ ಕೂಡ ಸಾಲು; ಆದರೆ ಇಲ್ಲಿಯೂ ಸ್ತ್ರೀಯರಿಗಾಗಿ ಪ್ರತ್ಯೇಕ ಸಾಲು ಇದೆಯೇನೆಂದು ಎರಡೂ ಬದಿಗೆ ನೋಡಿದೆ; ಇಲ್ಲಿ ಮಾತ್ರ ಸ್ತ್ರೀಯರು— ಕೆಲವರು ಪುರುಷರ ಮಧ್ಯದಲ್ಲಿ, ಕೆಲವರು ಕೊನೆಗೆ ನಿಂತಿದ್ದರು. 'ಇಲ್ಲಿಯಾದರೂ ನಮ್ಮನ್ನು ಹಿಂದಿಟ್ಟು ಕೇವಲ ಸ್ತ್ರೀಯರನ್ನೇ ಕೂಡ್ರಿಸಿಕೊಂಡು ಹೋಗುವುದಿಲ್ಲವಲ್ಲ!' ಎಂಬುದೇ ಸಮಾಧಾನ. ಬಸ್ಸಿನಲ್ಲಿ ನಾನು ಕುಳಿತಾಗ ಸ್ಥಳಗಳೆಲ್ಲ ತುಂಬಿ ನಾಲ್ಕೈದು ಜನರು ನಿಂತುಕೊಂಡಿದ್ದರು ಇಷ್ಟು ಹೊತ್ತಿನ ವರೆಗೆ ನಿಂತು ನಿಂತು ನೋವನ್ನು ಅನುಭವಿಸಿದ ನನ್ನ ಕಾಲುಗಳಿಗೆ ಮಾತ್ರ ಅಷ್ಟೇ ವಿಶ್ರಾಂತಿ ದೊರೆಯಿತು. ಆದರೆ ದೈವ ಕೆಟ್ಟದ್ದಲ್ಲವೇ? ಮುಂದಿನ ಸ್ಟ್ಯಾಂಡಿನಲ್ಲಿಯೆ ೨೦-೨೫ ವರ್ಷದ— ಆಧುನಿಕ ರೀತಿಯಲ್ಲಿ ವೇಷ-ಭೂಷಣವನ್ನು ಮಾಡಿಕೊಂಡ-ಒರ್ವ ಯುವತಿಯು ಬಸ್ಸಿನಲ್ಲಿ ಪ್ರವೇಶಿಸಿದಳು ಅವಳ ರೀತಿ, ನೀತಿ, ನಡೆವಳಿಯನ್ನು ನಿರೀಕ್ಷಿಸಿದಲ್ಲಿ, ನಿನ್ನೆ ಸಂಜೆಗೇ ಅವಳು ಇಂಗ್ಲಂಡಿನಿಂದ ವಿದ್ಯಾಭ್ಯಾಸ ಮುಗಿಸಿಕೊಂಡು ಬಂದಿರುವಂತೆ ತೋರುತ್ತಿತ್ತು. ದಾರಿಯಲ್ಲಿ ನಿಂತುಕೊಂಡಿದ್ದ ಆ ನಾಲ್ಕೈದು ಪುರುಷರನ್ನು ನೂಗಿಸಿ, ಅವಳು ನಾನು ಕುಳಿತಲ್ಲಿಗೇ ಬಂದಳು. ನನ್ನ ಹತ್ತಿರ ಹಾಗು ಸುತ್ತುಮುತ್ತಲೂ ಮೂರು ನಾಲ್ಕು ಜನ ಸ್ತ್ರೀಯರೆ ಕುಳಿತಿದ್ದರು. ಸ್ವಲ್ಪ ದೂರದಲ್ಲಿ ಮಾತ್ರ ಕೆಲವು ಪುರುಷರು ಸ್ಥಾನಾಪನ್ನರಾಗಿದ್ದರು-ಆ ಯುವತಿಯು ಬಂದವಳೇ ನನ್ನ ಕಡೆಗೇ ಎಂದರೆ ನಾನು ಕುಳಿತ ಸ್ಥಳದ ಕಡೆಗೇ ನೋಡಲು ಪ್ರಾರಂಭಿಸಿದಳು. ಹತ್ತಿರದಲ್ಲಿ ಕುಳಿತ ಆ ಸ್ತ್ರೀಯರೂ— ನಿಂತುಕೊಂಡಿದ್ದ ಆ ಪುರುಷರು ಕೂಡ— ನನ್ನೆಡೆಗೇ ನೋಡಲು ಪ್ರಾರಂಭಿಸಿದರು. ನಾನು ಎದ್ದು ಅವಳಿಗೆ ಸ್ಥಳ ಮಾಡಿ ಕೊಟ್ಟೆ. ಅವಳು 'ಥ್ಯಾಂಕ್ಸ್' ಎನ್ನಲೇ ಇಲ್ಲವಾದ್ದರಿಂದ, ನಾಲಗೆಯ ತುದಿಯ ಮೇಲೆ ನಾನು ತಂದು ಇಟ್ಟಿದ್ದ 'ನೋ ಮೆನ್‌ಶನ್ ಪ್ಲೀಜ್' ಹಿಂದೆ ತೆಗೆದುಕೊಳ್ಳಬೇಕಾಯಿತು. ನಾನು ನೋಯುತ್ತಿರುವ ಕಾಲುಗಳ ಮೇಲೆ ಮತ್ತೆ ಭಾರ ಕೊಟ್ಟೆ. ಅವಳು ಮಾತ್ರ ಎಷ್ಟು ಆಡಂಬರದಿಂದ ಕುಳಿತಿದ್ದಳು!

ಕಾಲುಗಳು ತಾವಷ್ಟೇ ಏಕೆ ನೋಯಬೇಕೆಂದು ತಲೆಯನ್ನು ಕೂಡ ತಮ್ಮ ಪಾಲುಗಾರನನ್ನಾಗಿ ಮಾಡಿಕೊಂಡುವು.

ಯುದ್ಧಕಾಲದಲ್ಲಿ ಮನುಷ್ಯನು ಎಷ್ಟು ಕಷ್ಟ ಸಹಿಸಬೇಕು? ಹೊಟ್ಟೆಗೆ ಸರಿಯಾದ ಆಹಾರವಿಲ್ಲ. ಬೇಕಾದ ಬಟ್ಟೆಗಳು ಪೇಟೆಗಳಲ್ಲಿ

ಬರುವುದು ನಿಂತು ಬಿಟ್ಟಿವೆ. ಇನ್ನೂ ಅನೇಕ ರೀತಿಯ ಕಷ್ಟಗಳನ್ನು ಸಹಿಸಿ ರೂಢಿಯಾಗುತ್ತಿವೆ. ಕಷ್ಟಗಳನ್ನು ಮನುಷ್ಯನು ಹೇಗಾದರೂ ಸಹಿಸಬಹುದು; ಆದರೆ ಅವುಗಳ ಜೊತೆಗೆ ಅನ್ಯಾಯವನ್ನೂ ಸಹಿಸಬೇಕೆ? ಇಂದು ಮುಂಜಾನೆ, ನನ್ನ ಮೇಲೆ ಎರಡು ಸಲ ಅನ್ಯಾಯವಾಯಿತಲ್ಲದೆ ಮತ್ತೇನು? ಅನ್ಯಾಯ? ಯಾರಿಂದ ಯಾರ ಮೇಲೆ ಅನ್ಯಾಯ? ಸ್ತ್ರೀಯರಿಂದ ನನ್ನ ಮೇಲೆ! ಅಹುದು—ಸ್ತ್ರೀಯರಿಂದ ಪುರುಷರ ಮೇಲೆ ಅನ್ಯಾಯ! ಹೀಗೆ ನಾನು ಹೇಳುವುದರಿಂದ ಅನೇಕರು ನನ್ನ ಕಡೆಗೆ ನೋಡಿ ನಗಬಹುದು. ಆದರೆ ಈ ಅನ್ಯಾಯದ ಪರಿಣಾಮವಾಗಿ ನಾನು ಅಳುವ ಪ್ರಸಂಗ ಬಂದಿದೆ ಯಾದುದರಿಂದ ಅದನ್ನು ಸ್ಪಷ್ಟವಾಗಿ ಹೇಳಲೇ ಬೇಕಾಗಿದೆ.

ಪುರುಷರ ಮೇಲೆ ಸ್ತ್ರೀಯರ ಅನ್ಯಾಯವೇ? ಅನಾದಿಕಾಲದಿಂದ ಇಂದಿನ ವರೆಗೆ ನಮ್ಮ ಋಷಿಗಳು, ಪುರಾಣಕಾರರು, ಕವಿಗಳು, ಲೇಖಕರು, ಭಾಷಣಕಾರರು— ಎಲ್ಲರೂ ಸ್ತ್ರೀಯರ ಮೇಲೆ ಪುರುಷರಿಂದ ಆಗುವ ಅನ್ಯಾಯವನ್ನೇ ಬಯಲಿಗೆಳೆಯಲು ಪ್ರಯತ್ನಿಸಿದ್ದಾರೆ. ಇವರೆಲ್ಲರೂ ಸ್ತ್ರೀದಾಕ್ಷಿಣ್ಯದಿಂದ ಕುರುಡರಾಗಿರುವಂತೆ ತೋರುತ್ತದೆ. ಅವರಿಗೆ ನಿಜವಾದ ಜ್ಞಾನದ ಅಭಾವವಿತ್ತು. ಅಥವಾ ಆಗಿನ ಕಾಲದಲ್ಲಿ ಹಾಗಿತ್ತೋ ಏನೋ! ಈಗಂತೂ ಕಾಲ ಬದಲಾಗಿದೆ— ಬುಡಮೇಲಾಗಿದೆ.

ಇಂದು ಮುಂಜಾನೆ ನಾನು ಅನುಭವಿಸಿದುದು ಅನ್ಯಾಯವೇ ಅಹುದು! "ಸೂರ್ಯವಂಶ" ದವನಾದ ನಾನು, ಕಷ್ಟಪಟ್ಟು ನಸುಕಿನಲ್ಲಿ ಎದ್ದು ರೇಲ್ವೆ ನಿಲ್ದಾಣಕ್ಕೆ ಹೋದರೂ ನನಗೆ ಟಿಕೀಟು ಸಿಗಲಾರದ್ದಕ್ಕೆ ಕಾರಣರಾರು? ಸ್ತ್ರೀಯರೇ ಅಲ್ಲವೇ? ಸ್ತ್ರೀಯರಿಗಾಗಿ ಪ್ರತ್ಯೇಕವಾದ ಸಾಲು ಮಾಡದೆ ಹೋಗಿದ್ದರೆ ನನಗೆ ನಿಶ್ಚಯವಾಗಿ ಟಿಕೀಟು ದೊರೆಯುತ್ತಿತ್ತು. ಅವರಿಗೆ ಪ್ರತ್ಯೇಕವಾದ ಸಾಲು ಏಕೆ? ನನಗಿಂತ ಎಷ್ಟೋ ಹೊತ್ತು ತಡಮಾಡಿ ಬಂದ ಸ್ತ್ರೀಯರು ಕೂಡ ಸಾಲಿನಲ್ಲಿ ಸೇರಿ ಟೀಕೀಟನ್ನು ತೆಗೆದುಕೊಂಡು, ನಮ್ಮ ಹತ್ತಿರವೇ ಹಾಯ್ದು ನಗುತ್ತ ಹೋದರು. ಇದು ಅನ್ಯಾಯವೆಂದು ಮೂರನೆಯ ವರ್ಗದ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಕೂಡ 'ನಿಕಾಲ' ಆಗಬಹುದು....ಹೈಕೋರ್ಟಿನ ವರೆಗೆ ಹೋಗುವುದೇ ಬೇಡ. ಹೀಗೆ ಏಕೆ ಆಗಬೇಕು? ಸ್ತ್ರೀಯರು ಹಾಗು ಪುರುಷರು ಒಂದೇ ಸಾಲಿನಲ್ಲಿ ಏಕೆ ನಿಲ್ಲಬಾರದು? ಸ್ತ್ರೀಯರಿಗೆ ಇಷ್ಟೊಂದು ಸೌಕರ್ಯವೇಕೆ?

ಬಸ್ಸಿನಲ್ಲಿ ಕೂಡ ಆ ಯುವತಿಯಿಂದ ನನ್ನ ಮೇಲೆ ಅನ್ಯಾಯವೇ ಆಯಿತೆಂದು ನಾನು ತಿಳಿಯುತ್ತೇನೆ. ಆ ಯುವತಿಗೆ ಸ್ಥಳ ಮಾಡಿ ಕೊಡಲು ನಾನೇ ಎದ್ದೆ ಎಂಬುದು ನಿಜ; ಆದರೆ ನಾನು ಏಕೆ ಎದ್ದೆ? ನಾನು ಏಳಲೇ ಬೇಕಾಯಿತು. ಏಳದೆ ಹೋಗಿದ್ದರೆ? ಆ ಯುವತಿಯು ನನ್ನ ಹತ್ತಿರ ಬಂದು ನಿಂತ ಕೂಡಲೆ ನನ್ನೆಡೆಗೆ ನೋಡಲಾರಂಭಿಸಿದ ಆ ಸ್ತ್ರೀಯರು ಹಾಗು ಪುರುಷರು ನಗಲು ಪ್ರಾರಂಭಿಸುತ್ತಿದ್ದರು. ಅಲ್ಲದೆ ಆ ಯುವತಿಯು ಕೂಡ "ನಾನು ಸ್ತ್ರೀ, ನೀನು ಎದ್ದು ನನಗೆ ಸ್ಥಳ ಮಾಡಿ ಕೊಡಲೇಬೇಕು!" ಎಂದು ಅಧಿಕಾರದಿಂದ ಹೇಳುವಂತೆಯೆ ಮುಖಭಾವ ಮಾಡಿದ್ದಳು. ಹೀಗಿರುವಾಗ ನಾನು ಮುಖವನ್ನು ಕೆಳಗೆ ಮಾಡಿಕೊಂಡೇ ಕುಳಿತುಕೊಳ್ಳಬೇಕಾಗುತ್ತಿತ್ತು. ಆದರೆ ನಾನು ಸ್ಥಳ ಬಿಟ್ಟು ಕೊಟ್ಟ ಕೂಡಲೆ ಅವಳು "ಥ್ಯಾಂಕ್ಸ್" ಕೂಡ ಎನ್ನಬಾರದೇ? ಏಕೆ ಅಂದಾಳು? ನನ್ನನ್ನೆಬ್ಬಿಸಿ ಕೂಡ್ರಲು ಅವಳಿಗೆ ಸಮಾಜವೇ ಅಧಿಕಾರವನ್ನು ಕೊಟ್ಟಿಲ್ಲವೆ?

ಹೀಗೆ ಏಕೆ ಆಗಬೇಕು? ಹೀಗೆ ಆಗುವುದು ಯೋಗ್ಯವೋ? ನ್ಯಾಯವೋ? ಈ ಅನ್ಯಾಯವನ್ನು ನಾವು ಸಹಿಸಬೇಕೋ? ಆಯುಷ್ಯದಲ್ಲಿ ಎಷ್ಟು ಅನ್ಯಾಯಗಳನ್ನು ನಾವು ಸಹಿಸಬೇಕು? ಅನ್ಯಾಯಗಳ ಪರಿಣಾಮವೇ ಯುದ್ಧ; ಯುದ್ಧಗಳ ಪರಿಣಾಮವೇ ಅನ್ಯಾಯ. ಯುದ್ಧದ ಮೂಲಕ ಉತ್ಪನ್ನವಾದ ಅನೇಕ ಕಷ್ಟ— ಅನ್ಯಾಯಗಳನ್ನು ನಾವು ಸಹಿಸಲೇಬೇಕಾಗುವುದು. ಏಕೆಂದರೆ ಅವು ಅನಿವಾರ್ಯವಾದುವುಗಳು. ಆದರೆ ಈ ಅನ್ಯಾಯವು—ಸ್ತ್ರೀಯರಿಂದ ಪುರುಷರ ಮೇಲೆ ಆಗುತ್ತಿರುವ ಈ ರೀತಿಯ ಅನ್ಯಾಯವು— ಕೂಡ ಅನಿವಾರ್ಯವಾದದ್ದೋ?

ಸುಮಾರು ನೂರು ವರ್ಷಗಳ ಮೊದಲು ಈ ರೀತಿ ನಡೆಯುತ್ತಿದ್ದರೆ ನಾವು ಹೇಗಾದರೂ ಸಹನ ಮಾಡಿಕೊಳ್ಳುತ್ತಿದ್ದೆವು. ಆಗ ಹಾಗೆ ನಡೆಯುವುದು ಅನ್ಯಾಯವಾಗುತ್ತಿರಲಿಲ್ಲ. ಆಗಿನ ಸ್ತ್ರೀಯರು ಈಗಿನವರಂತೆ ಇರಲಿಲ್ಲ. ಈಗಿನ ಸ್ತ್ರೀಯರು! ಏನು ಇವರ ಅಬ್ಬರ! ಜಾಗೃತಾವಸ್ಥೆಗೆ ಬಂದು ಇನ್ನೂ ಕಣ್ಣು ತೆರೆದಿಲ್ಲ- ಇವರಿಗೆ ಪುರುಷರ ಜೊತೆಗೆ ಸಮಾನ ಹಕ್ಕುಗಳು ಬೇಕಂತೆ! ಸಮ್ಮೇಲನಗಳಲ್ಲಿ "ಉದಯವಾಗಲಿ" ಅಥವಾ "ವಂದೇ ಮಾತರಂ" ಎನ್ನಲು ಮರೆತಿರಬಹುದು; ಆದರೆ ಈ ಸಾಧಾರಣ ಇಪ್ಪತ್ತೈದು ವರ್ಷಗಳಲ್ಲಿ, ಸ್ತ್ರೀಯರ ಒಂದು ಸಮ್ಮೇಲನ ಕೂಡ ಈ ಸಮಾನಹಕ್ಕುಗಳ ಗೊತ್ತುವಳಿಯನ್ನು ಅಂಗೀಕರಿಸದೆ ಮುಕ್ತಾಯವಾಗಿಲ್ಲ. ಸ್ತ್ರೀಯರಿಗೆ ಸಮಾನ ಹಕ್ಕುಗಳನ್ನು ಕೊಡಲು ನಾನು ವಿರುದ್ಧನಿಲ್ಲ; ಆದರೆ ಕೊಡಲು ನಾನು ಯಾರು? ಸಮಾನ ಹಕ್ಕುಗಳನ್ನು ನಾವು ಕೊಡುವುದು ಇರುವುದಿಲ್ಲ, ಸ್ತ್ರೀಯರು ಅದನ್ನು ತಮ್ಮಿಂದ ತಾವೇ ಗಳಿಸಿಕೊಳ್ಳಬೇಕಾಗುತ್ತದೆ. ತಮ್ಮ ಯೋಗ್ಯತೆ, ಶಿಕ್ಷಣ, ಸಂಸ್ಕೃತಿ, ಬಲಗಳನ್ನು ಸಂವರ್ಧನೆ ಮಾಡಿಕೊಂಡು, ಸಮಾನ ಹಕ್ಕುಗಳ ಜೊತೆಗೆ ಅಡಕವಾಗಿರುವ ಹೊಣೆಗಾರಿಕೆಯನ್ನು ಹೊರಲು ಸಿದ್ಧರಾಗಿರಬೇಕಾಗುತ್ತದೆ. ತಂದೆ, ಪತಿ ಅಥವಾ ಮಗ ಇವರು ಗಳಿಸಿದ್ದುದರ ಮೇಲೆಯೆ ಅವರು ಅವಲಂಬಿಸಿ, ಸಮಾನಹಕ್ಕುಗಳನ್ನು ಬೇಡುವುದು-ನಗೆಮಾತಾಗುತ್ತದೆ ಅಲ್ಲವೇ?

ಸ್ತ್ರೀಯರ ಬಾಯಿಯು ಅನೇಕ ಬರೆಹಗಾರರ ಟೀಕೆಗೆ ಒಂದಿಲ್ಲ ಒಂದು ರೀತಿಯಿಂದ ಗುರಿಯಾದುದರಲ್ಲಿ ಆಶ್ಚರ್ಯವೇನೂ ತೋರುವುದಿಲ್ಲ. "ಪುರುಷರು ನಮ್ಮ ಮೇಲೆ ಅನ್ಯಾಯ ನಡೆಯಿಸಿದ್ದಾರೆ, ಅವರ ಅಧೀನರಾಗಿ ಇರುವುದು ಇನ್ನು ಸಾಕು, ನಮಗೆ ಸಮಾನ ಹಕ್ಕು ಬೇಕು!" ಎಂದು ಕಲಿತ ನಾಲ್ಕು ಜನ ಸ್ತ್ರೀಯರು ಸಭೆಯಲ್ಲಿ ನಮ್ಮ ವಿರುದ್ಧ ಬೊಬ್ಬಾಟ ಮಾಡಿ, ಸಮಾಜದಲ್ಲಿ ನಮ್ಮಿಂದ ಏನು ಬೇಡುತ್ತಾರೆ ಗೊತ್ತೋ? ಸಮಾನ ಹಕ್ಕು ಅಲ್ಲ! ಸೌಕರ್ಯ!! ವಿಶೇಷ ಸೌಕರ್ಯ ಬೇಡುತ್ತಾರೆ. ಸಮಾನ ಹಕ್ಕುಗಳನ್ನು ಬೇಡಿದ ಬಾಯಿಂದಲೇ ವಿಶೇಷ ಸೌಕರ್ಯಗಳನ್ನೂ ಈ "ಬಾಯಿಯವರು

ಬೇಡುತ್ತಾರೆ. ಆಗ ಎಲ್ಲಿ ಹೋಗಿರುತ್ತದೆ ಇವರ ಅಧೀನತೆಯ ಅರಿವು? ಹರಿಜನರಿಗೆ ನಾವು ಸಮಾನ ಹಕ್ಕುಗಳನ್ನು ಹಾಗು ಅಧಿಕಾರಗಳನ್ನು ಕೊಟ್ಟಾಗ, ಅವರು ಮತ್ತೆ ತಮಗೆ ಶಿಕ್ಷಣ ಹಾಗು ನೌಕರಿಗಳಲ್ಲಿ ಸೌಕರ್ಯ ಹಾಗು ಪ್ರಾಶಸ್ತ್ಯ ಬೇಡಿದರೆ ಹೇಗೆ ಒಪ್ಪಬೇಕು ? ನಾವು ಸೌಕರ್ಯಗಳನ್ನು ಕೊಟ್ಟರೂ ಅವುಗಳನ್ನು ಧಿಕ್ಕರಿಸಿ "ನಾವು ಸೌಕರ್ಯ ತೆಗೆದುಕೊಳ್ಳುವಷ್ಟು ಅಶಕ್ತರಲ್ಲ, ನಮಗೆ ಸಮಾನ ಹಕ್ಕು ಬೇಕು! " ಎಂದು ಸ್ತ್ರೀಯರು ಹೇಳಬೇಕಲ್ಲದೆ, ನಾವು ಸೌಕರ್ಯಗಳನ್ನು ಕೊಡದಿದ್ದರೂ ಸಮಾಜನಿಯಮನ್ನು ಮೀರಿ ಹೊಕ್ಕು ನಮ್ಮಿಂದ ಸೌಕರ್ಯಗಳನ್ನು ಬಲಾತ್ಕಾರದಿಂದ ಕಸಿದುಕೊಳ್ಳುತ್ತಿರುವುದನ್ನು ನಾನು ಯಾವ ಶಬ್ದದಿಂದ ಕರೆಯಲಿ?

ಅಶಿಕ್ಷಿತ ಸ್ತ್ರೀಯರಿಗಿಂತ ಸುಶಿಕ್ಷಿತ ಸ್ತ್ರೀಯರೇ ಈ ರೀತಿ ಸೌಕರ್ಯಗಳನ್ನು ಬೇಡುವುದರಲ್ಲಿ— ಕಸಿದುಕೊಳ್ಳುವುದರಲ್ಲಿ— ಮುಂದೆ ಇರುತ್ತಾರೆಂಬುದು ವಿಶೇಷ ಆಶ್ಚರ್ಯಕರವಾದ ಸತ್ಯಸಂಗತಿಯು. ಗಿರಣಿಯಲ್ಲಿ ಕೆಲಸ ಮಾಡುವ ಸ್ತ್ರೀಯರಾಗಲಿ, ದಿನಗೂಲಿಯ ಕೆಲಸ ಮಾಡುವ ಸ್ತ್ರೀಯರಾಗಲಿ ಇನ್ನೂ ವರೆಗೆ ಗಾಡಿಯಲ್ಲಿ ಅಥವಾ ಬಸ್ಸಿನಲ್ಲಿ ನನ್ನಿಂದ ಸ್ಥಳವನ್ನು ಕಸಿದುಕೊಂಡಿಲ್ಲ.

ಸುಶಿಕ್ಷಿತರು ಇರುವ ಅಥವಾ ಹೆಚ್ಚು ಸುಶಿಕ್ಷಿತರು ತಯಾರಾಗುತ್ತಿರುವ ಕಾಲೇಜಿನಲ್ಲಿಯ ಪರಿಸ್ಥಿತಿಯನ್ನೇ ನಾವು ವಿಚಾರಕ್ಕೆ ತೆಗೆದುಕೊಳ್ಳೋಣ. ಅಲ್ಲಿ ಸ್ತ್ರೀಯರಿಗೆ ಎಷ್ಟು ಸೌಕರ್ಯಗಳು! ವಿದ್ಯಾರ್ಥಿಗಳು ಮಾತ್ರ ' ಹುಶ್ ಹುಶ್ ' ಎಂದು ತೇಕುತ್ತ ಅಟ್ಟಗಳನ್ನು ಹತ್ತಿ ಇಳಿಯುವುದನ್ನು ಮಾಡಬೇಕು. ವಿದ್ಯಾರ್ಥಿನಿಯರು ಲಿಫ್ಟಿನಿಂದ ಸರ್‍ರನೆ ಹತ್ತಬೇಕು, ಇಳಿಯಬೇಕು. ವರ್ಗದಲ್ಲಿ ವಿದ್ಯಾರ್ಥಿನಿಯರಿಗೆ ಕುಳಿತುಕೊಳ್ಳಲು ಪ್ರತ್ಯೇಕವಾದ ಸ್ಥಳ. ಅವರು ಎಷ್ಟೇ ತಡ ಮಾಡಿ ಬಂದರೂ ಅವರಿಗಾಗಿ ಕಾಯ್ದಿಟ್ಟ ಆ ಸ್ಥಳದಲ್ಲಿ ವಿದ್ಯಾರ್ಥಿಗಳು ಕೂಡತಕ್ಕದ್ದಲ್ಲ. ವಿದ್ಯಾರ್ಥಿಗಳೊಡನೆ ಒಂದೇ ಬಾಕಿನ ಮೇಲೆ ಕೂಡ್ರಲು ವಿದ್ಯಾರ್ಥಿನಿಯರಿಗೆ ಹೆದರಿಕೆಯೋ,ನಾಚಿಕೆಯೊ ಯಾರು ಬಲ್ಲರು! ಅಥವಾ ಈ ರೀತಿಯ ಸೌಕರ್ಯಗಳು ತಮ್ಮ ಜನ್ಮಸಿದ್ಧ ಹಕ್ಕುಗಳೆಂದು ಅವರು ತಿಳಿದಿರುವರೋ? ವಿದ್ಯಾರ್ಥಿನಿಯರಿಗೆ ವಿರಾಮಕ್ಕಾಗಿ ಎಂದು ಬೇರೆ ಕೋಣೆ. ಅಸೆಂಬ್ಲಿ ಹಾಗು ಮ್ಯುನಿಸಿಪಾಲಿಟಿಗಳ ಚುನಾವಣೆಯಲ್ಲಿ ಹರಿಜನರಿಗಾಗಿ ಎಂದು ಕಾಯ್ದಿಡಲ್ಪಟ್ಟ ಸ್ಥಳಗಳು ಇರುವುದಿಲ್ಲವೇ ?—ಹಾಗೆ ಕಾಲೇಜ್ ಜಿಮಖಾನಾ ಕಮೀಟಿಗಳಲ್ಲಿ ವಿದ್ಯಾರ್ಥಿನಿಯರಿಗೆ ಕಾಯ್ದಿಡಲ್ಪಟ್ಟ ಸ್ಥಳಗಳು ಇರುತ್ತವೆ. ಪರೀಕ್ಷೆಯ ಉಮೇದ್ವಾರರ ಯಾದಿಯಲ್ಲಿ ವಿದ್ಯಾರ್ಥಿನಿಯರ ಹೆಸರುಗಳು ಎದ್ದು ಕಾಣಬೇಕೆಂದು, ಇಟಾಲಿಕ್ಸ್‌ನಲ್ಲಿ ಮುದ್ರಿಸುವರು. ವಿದ್ಯಾರ್ಥಿನಿಯರಿಗೆ ಕೊಡಲ್ಪಡುತ್ತಿರುವ ಇವೆಲ್ಲ ಸೌಕರ್ಯಗಳ್ರ್ಗಗಳು ವಿದ್ಯಾರ್ಥಿನಿಯರಿಗೆ ಕೊಡಲ್ಪಡುತ್ತಿರುವ ಇವೆಲ್ಲ ಸೌಕರ್ಯಗಳು ವಿದ್ಯಾರ್ಥಿಗಳಿಗೆ ಅಪಮಾನಕಾರಕವೆಂದೇ ಹೇಳಬಹುದು ಆದರೆ ಇದಕ್ಕೂ ಹೆಚ್ಚಿನ ಅಪಮಾನವೊಂದು ಇದೆ. ವರ್ಗದಲ್ಲಿ ಹಾಜರಿ ತೆಗೆದುಕೊಳ್ಳುವಾಗ " ಮಿಸ್ ಸರಳಾ ಕುಲಕರ್ಣಿ " ಎಂದು ಓದರಬೇಕು. ಆದರೆ " ಮಿಸ್ಟರ್ ಟಿ. ಡಿ. ಕುಲಕರ್ಣಿ " ಎಂದು ಯಾರೂ ಓದರುವುದೇ ಇಲ್ಲ. ಕೇವಲ "ಟಿ. ಡಿ. ಕುಲಕರ್ಣಿ" ಎಂದು ಓದರಿದರೆ ಸಾಕೆಂದು ತೋರುತ್ತದೆ. ಕೆಲವು ವಿದ್ಯಾರ್ಥಿನಿಯರು ತಮ್ಮ ಸಹಿ ಮಾಡುವಾಗ ಕೂಡ ಹಿಂದೆ " ಮಿಸ್ " ಎಂದು ಬರೆದುಕೊಂಡದ್ದು ಗೊತ್ತಿದೆ ಕೇವಲ " ಸರಳಾ ಕುಲಕರ್ಣಿ " ಎಂದು ಬರೆದರೆ ಅಥವಾ ಹೇಳಿದರೆ ವಿದ್ಯಾರ್ಥಿನಿಯು ಅಲ್ಲವೆಂದು ತಿಳಿದು, ವಿದ್ಯಾರ್ಥಿಯೇ ಎಂದು ಬಗೆದು, ದೊರೆಯುವ ಸೌಕರ್ಯಗಳೆಲ್ಲ ಎಲ್ಲಿ ಮಾಯವಾಗುವುವೋ ಎಂಬ ಭೀತಿ ಅವರಿಗೆ ಇರುವಂತೆ ತೋರುತ್ತದೆ.

ಕಾಲೇಜಿನಂತೆಯೇ ನಮ್ಮ ಸಮಾಜದಲ್ಲಿ ಕೂಡ ಸ್ತ್ರೀಯರು ಇನ್ನೂ ಅನೇಕ ರೀತಿಯಿಂದ ಸೌಕರ್ಯಗಳನ್ನು ದೊರಕಿಸಿಕೊಂಡಿದ್ದಾರೆ. " ಸ್ತ್ರೀಯರಿಗಾಗಿ ಪ್ರತ್ಯೇಕ ವ್ಯವಸ್ಥೆ ಮಾಡಲಾಗಿದೆ" ಎಂದು ಜಾಹೀರ್ ಮಾಡಿದರೇನೇ ಇವರು ಸಭೆ-ಸಮ್ಮೇಲನಗಳಿಗೆ ಬರುವರು. ಇಲ್ಲವೆ ಹೋದರೆ ಭಾಷಣಕಾರರಿಗೆ " ಅಣ್ಣಂದಿರೇ" ಎಂದು ಕರೆದು ಮುಂದೆ " ತಾಯಂದಿರೇ " ಎಂದು ಕರೆವ ಪ್ರಸಂಗವೇ ಬರುವುದಿಲ್ಲ. ಪುರುಷರಿಂದ ಕರೆಯಲ್ಪಟ್ಟ ಸಭೆ-ಸಮ್ಮೇಲನಗಳಿಗೆ ಹೋಗಲು ಇವರು ಯಾವ ರೀತಿಯಿಂದಲೂ ಸಂಕೋಚಪಟ್ಟುಕೊಳ್ಳುವುದಿಲ್ಲ ಆದರೆ ತಮ್ಮ ಸಭೆ-ಸಮ್ಮೇಲನಗಳಿಗೆ ಪುರುಷರಿಗೆ " ಮಜ್ಜಾವ " ಮಾಡಲು ಇವರಿಗೆ ಏನೂ ಎನಿಸುವುದಿಲ್ಲ.

ಸಿನೇಮಾ ಅಥವಾ ನಾಟಕ ಥಿಯೇಟರುಗಳಲ್ಲಿ ಇವರಿಗೆ ಕೇವಲ ಬೇರೆ ಸ್ಥಳ ಕಾಯ್ದಿಟ್ಟರೆ ಸಾಲದು. ಇವರಿಗೆ ಮತ್ತೆ " ಝನಾನಾ ಶೋ " ಬೇಕು. ಅಂದಿನ ಕಾರ್ಯಕ್ರಮಕ್ಕೆ ದ್ವಾರಪಾಲಕರ ಹೊರತು ಬೇರೆ ಪುರುಷರು ಯಾರೂ ಇರತಕ್ಕದ್ದಲ್ಲ. ವಿವಾಹಿತ ಪುರುಷರು ಬಂದು ಸಮಾಧಾನ ಹಚ್ಚಿಕೊಳ್ಳಬಹುದು : ಅವರ ಸೌಕರ್ಯಕ್ಕೆ ಸ್ತ್ರೀಯರು ಒಮ್ಮೊಮ್ಮೆ ಸಾಧನರಾಗುವರು. ಸ್ತ್ರೀಯರು ಜೊತೆಯಲ್ಲಿ ಇದ್ದರೆ ಸೌಕರ್ಯ ದೊರೆತು ಅವರಿಗೆ " ಕುಟುಂಬ ಪೆಟ್ಟಿಗೆ " ಯಲ್ಲಿ ಕೂಡ್ರಲು ಅನುಕೂಲವಾಗುವುದು. ಸ್ತ್ರೀ ಹಾಗು ಸೌಕರ್ಯ ಇವು ಬೇರೆ ಬೇರೆ ಅಲ್ಲವೆಂದು ತೋರುತ್ತದೆ.

ಜಯಂತಿ ಕಾರ್ಯಾಲಯದಲ್ಲಿ ದೊರೆಯುವ ಪುಸ್ತಕಗಳು

'ಶ್ರೀರಂಗ' ಬರೆದುವು

ಗೀತಾಗಾಂಭೀರ್ಯ	೨	೦	೦
ನಗೆ (ರಸವಿಚಾರ).	೧	೮	೦
ಆಹ್ವಾನ (ಕವನಸಂಗ್ರಹ)	೧	೦	೦
ನಿರಾಹಾರ	೦	೧೨	೦

'ಆನಂದಕಂದ'ರು ಬರೆದುವು

ಸುದರ್ಶನ (ಕಾದಂಬರಿ)	೧	೦	೦
ವಿರಹಿಣಿ (ಕವನಸಂಗ್ರಹ)	೦	೧೨	೦
ಕರ್ನಾಟಕ ಜನಜೀವನ	೧	೮	೦

೫೨ ವರ್ಷಗಳಿಂದ ಅನುಭವ ಪಟ್ಟ
ಕರ್ಕ ಮತ್ತು ಕಂಪನಿ
ಇವರ
ಜ್ವರದ ಗುಳಿಗೆಗಳು
ಬಾಟ್ಲಿಗೆ ೧-೮-೦
ಎಲ್ಲ ಪ್ರಕಾರದ ಜ್ವರಗಳಿಗೂ ದಿವ್ಯೌಷಧ.
ವಿಳಾಸ:- ಗಣೇಶ ರಾಮಚಂದ್ರ ಕರ್ಕ ಮತ್ತು ಕಂಪನಿ

ದಯಾಘನನಾದ ಪರಮಾತ್ಮನು ಮಾನವ ಜಾತಿಯಲ್ಲಿ ಎರಡೇ ಭೇದ ಮಾಡಿದ್ದಾನೆ: ಸ್ತ್ರೀ ಹಾಗು ಪುರುಷ! ಆದರೆ ನಾವು ನಮ್ಮ-ನಮ್ಮಲ್ಲಿ ಎಷ್ಟು ಭೇದಗಳನ್ನು ಮಾಡಿಕೊಂಡಿದ್ದೇವೆ! ಅದರಲ್ಲಿಯಂತೂ ರೇಲ್ವೆಯವರು " ಕಮಾಲ್ " ಮಾಡಿದ್ದಾರೆ. ಪರಮಾತ್ಮನು ' ಸ್ತ್ರೀ ಹಾಗು ಪುರುಷ' ಎಂದು ಎರಡೇ ಭೇದ ಮಾಡಿದ್ದರೆ ರೇಲ್ವೆಯವರು ಸ್ತ್ರೀಯರಲ್ಲಿ Women ಹಾಗು Ladies ಎಂದೂ, ಪುರುಷರಲ್ಲಿ Men ಹಾಗು Gentlemen ಎಂದೂ ಭೇದ ಮಾಡಿದ್ದಾರೆ. ಮೂರನೆಯ ವರ್ಗದಲ್ಲಿ ಕೂಡುವವರು Women ಹಾಗು Men. ಮೇಲಿನ ವರ್ಗದಲ್ಲಿ ಕೂಡುವವರು Ladies ಹಾಗು Gentlemen. Men ಹಾಗು Gentlemen ರಿಗಾಗಿ ಇರುವ ಡಬ್ಬಿಗಳಲ್ಲಿ ಸ್ತ್ರೀಯರು ನಿರಂಕುಶವಾಗಿ ಪ್ರವಾಸ ಮಾಡಬಹುದು. ಆದರೆ Women ಹಾಗು Ladies ಇವರಿಗಾಗಿ ಇರುವ ಡಬ್ಬಿಗಳಲ್ಲಿ, ಪುರುಷರು ಪ್ರವೇಶಿಸಿದರೆ ಸ್ವಲ್ಪ ಅವಧಿಯಲ್ಲಿಯೇ ಅವರು ಕೋರ್ಟಿನಲ್ಲಿ ಆರೋಪಿಗಳಿಗಾಗಿ ಇರುವ ಡಬ್ಬಿಯನ್ನು ಪ್ರವೇಶಿಸಬೇಕಾಗುವುದು.

ಕೇವಲ ದೊಡ್ಡ ಪಟ್ಟಣಗಳಲ್ಲಿರುವ ಪರಿಸ್ಥಿತಿಯನ್ನೇ ನಾನು ವಿಚಾರ ಮಾಡುತ್ತಿದ್ದೇನೆ. ಏಕೆಂದರೆ ದೊಡ್ಡ ಪಟ್ಟಣಗಳಲ್ಲಿಯೆ ಸುಶಿಕ್ಷಿತ ಸ್ತ್ರೀಯರ ಸಂಖ್ಯೆ ಹೆಚ್ಚು. ಮೊದಲೇ ಹೇಳಿದಂತೆ ಈ ಸುಶಿಕ್ಷಿತರೆಂದು ಕರೆಯಲ್ಪಡುವ ಸ್ತ್ರೀಯರೇ ಸೌಕರ್ಯ ಬೇಡಲು ಆತುರರಾಗಿರುತ್ತಾರೆ.

'ಸ್ತ್ರೀಯರ ವೇಳೆಯೆಲ್ಲವೂ ಸೌಂದರ್ಯಸಾಧನೆಯಲ್ಲಿ ಹೋಗುವುದರಿಂದ ಶರೀರಸಂವರ್ಧನೆಯನ್ನು ಮಾಡಿಕೊಳ್ಳಲು ಅವರಿಗೆ ವೇಳೆ ಸಾಲುವುದಿಲ್ಲ ಆದುದರಿಂದ ಅವರು ಪುರುಷರಿಗಿಂತ ಅಶಕ್ತರು. ಕಾರಣ ಅವರಿಗೆ ನಾವು ಕೆಲವು ವಿಶೇಷ ಸೌಕರ್ಯಗಳನ್ನು ಕೊಡಬೇಕಾಗುತ್ತದೆ' ಎಂದು ಯಾರಾದರೂ ವಾದಿಸಬಹುದು. ಹೀಗೆ ವಾದಿಸುವವರು ಸ್ತ್ರೀಯರಿಗೆ " ನೀವು Weaker Sex " ಎಂದು ಹೇಳಿ ಆ ಮೇಲೆ ವಾದ ಹಾಕಬಹುದು. "ನೀವು Weaker Sex" ನವರು ಎಂದು ನುಡಿದರೆ ಸ್ತ್ರೀಯರಿಗೆ ಎಷ್ಟು ಕೋಪ! ಹಾಗೆ ಹೇಳಿಸಿಕೊಳ್ಳಲು ಅವರು ಸಿದ್ಧರಿಲ್ಲ. ಅದೇ ನೀವು ಅವರಿಗೆ 'Fair Sex' ನವರು ಎಂದು ಕರೆಯಿರಿ. ಒಳ್ಳೇ ಅಭಿಮಾನ ಅವರಿಗೆ! ಸ್ತ್ರೀಯರು ತಾವು ಅಶಕ್ತರಲ್ಲವೆಂಬುದನ್ನೂ ಅನೇಕ ಸಲ ತೋರಿಸುತ್ತಾರೆ. ವಿಶೇಷತಃ ಕಾಲೇಜಿನಲ್ಲಿ. ಕಾಲವು ಬುಡಮೇಲಾಗಿದೆ ಎಂದು ಮೊದಲೇ ಹೇಳಲಿಲ್ಲವೇ? ಕಾಲೇಜಿನ ಆವರಣದಲ್ಲಿ ಓಡಾಡುವಾಗ ವಿದ್ಯಾರ್ಥಿನಿಯರಿಗೆ ಇತರರ ಅರಿವೇ ಇರುವುದಿಲ್ಲ. ದಾರಿಯಲ್ಲಿ, ಎದುರಿಗೆ ಮಗ-ಲಿಗೆ ಯಾರೂ ಇದ್ದರೂ ಇವರು ಅವರನ್ನು ನುಗಿಸಿ ಹೋಗುವುದಕ್ಕೂ ಹಿಂದು-ಮುಂದು ನೋಡುವುದಿಲ್ಲ. ಒಮ್ಮೆ ಒಂದು ಕಾಲೇಜ್ ಗ್ಯಾದರಿಂಗಿನಲ್ಲಿ ಒರ್ವ ವಿದ್ಯಾರ್ಥಿನಿಗೆ Fish-pondನಲ್ಲಿ ಒಂದು ಬಿಗುಲು ಕೊಟ್ಟು " ನೀನು ಓಡಾಡುವಾಗ ಇದನ್ನು ಊದುತ್ತ ಇರು " ಎಂದು ಹೇಳಿದ್ದು ನೆನಸಿಗೆ ಬರುತ್ತದೆ. ಇದು ಸಾಧಾರಣ ಈಗಿನ ಎಲ್ಲ ಸುಶಿಕ್ಷಿತ ಸ್ತ್ರೀಯರಿಗೆ ಅನ್ವಯಿಸುತ್ತದೆ.

ಸ್ತ್ರೀಯರಿಗೆ ವಿಶೇಷ ಸೌಕರ್ಯಗಳನ್ನು ಕೊಡಬಾರದೆಂದು ನಾನು ಪ್ರತಿಪಾದಿಸುತ್ತಿರುವುದಿಲ್ಲ. ಸ್ತ್ರೀಯರನ್ನು ದೇವತೆಯರಂತೆ ಮನ್ನಿಸಲು ಕೂಡ ನಾನು ಸಿದ್ಧನಿದ್ದೇನೆ. ಆದರೆ ಅವರು ದೇವತೆಯರಂತೆ ವರ್ತಿಸದೆ ಹೋದರೆ ನಾವು ಹೇಗೆ ಅವರನ್ನು ಮನ್ನಿಸಬೇಕು? ದೇವತೆಯರು ಎಂದಾದರೂ ನಮ್ಮೊಡನೆ ಸಮಾನ ಹಕ್ಕು ಬೇಡಿದ್ದುಂಟೇ? ಸ್ತ್ರೀಯರನ್ನು ದೇವತೆಯರಂತೆ ಮನ್ನಿಸುವ ಕಾಲ ಇಲ್ಲದೆ ಇರಲಿಲ್ಲ. ಆಗ ಸ್ತ್ರೀಯರು ಸಮಾನ ಹಕ್ಕುಗಳ ಭಾಷೆಯನ್ನು ಆಡುತ್ತಿರಲಿಲ್ಲ. ಆದುದರಿಂದ ವಿಶೇಷ ಸೌಕರ್ಯಗಳನ್ನು ಕೇಳಲು ಅವರಿಗೆ ಅಧಿಕಾರವಿತ್ತು. ಪುರುಷರು ತಾವಾಗಿಯೆ ಸ್ತ್ರೀಯರಿಗೆ ಸೌಕರ್ಯಗಳನ್ನು ಕೊಡುತ್ತಿದ್ದರು. ಆದಕಾರಣ ಸಮಾಜದಲ್ಲಿ ಹಾಗು ಕುಟುಂಬದಲ್ಲಿ ಸಮಾಧಾನದ ಹಾಗು ಶಾಂತತೆಯ ವಾತಾವರಣವು ನೆಲಸಿತ್ತು. ಆದರೆ ಈಗ? ಸ್ತ್ರೀಯರ ಮೇಲೆ ಪುರುಷರ ಅನ್ಯಾಯ, ಪುರುಷರ ಮೇಲೆ ಸ್ತ್ರೀಯರ ಅನ್ಯಾಯ! ಇವಕ್ಕೆ ಕಾರಣ? ಸ್ತ್ರೀಯರಿಗೆ " ಸಮಾನ ಹಕ್ಕು " ಹಾಗು " ವಿಶೇಷ ಸೌಕರ್ಯ " ಇವುಗಳ ನಿಜವಾದ ಅರ್ಥವೇ ಗೊತ್ತಾಗದಿರುವುದು.

ಚಿಕ್ಕ ಮಗುವಿನ ಎದುರು ಒಂದು ಆಟಿಗೆಯ ಹೊಗೆಬಂಡಿಯನ್ನು ಹಾಗು ಒಂದು ಆಟಿಗೆಯ ಮೋಟರನ್ನು ಇಟ್ಟರೆ, ಆ ಮಗುವು ಮೊದಲು ಹೊಗೆಬಂಡಿಯನ್ನು ಬೇಡುವುದು. ಅನಂತರ ಮೋಟರೂ ಬೇಕು ಎಂದು ಅತ್ತು ಅದನ್ನು ಕೂಡ ದೊರೆಕಿಸುವುದು. ನಮ್ಮ ಸ್ತ್ರೀಯರ ಪರಿಸ್ಥಿತಿಯೂ ಹೀಗೆಯೇ ಇದೆ. " ಸಮಾನ ಹಕ್ಕು ಬೇಕು " ಎಂದು ಚೀರಾಡುವರು. ಅವನ್ನು ಕೊಟ್ಟರೂ " ಸೌಕರ್ಯ "ಗಳನ್ನು ಬಿಟ್ಟುಕೊಡಲು ಅವರು ಸಿದ್ಧರಾಗುವುದು ಶಕ್ಯವೇ ಇಲ್ಲ. ಏಕೆಂದರೆ ಸಾವಿರಾರು ವರ್ಷಗಳಿಂದ ಅವರು ಅವುಗಳನ್ನು ಅನುಭವಿಸುತ್ತ ಬಂದಿದ್ದಾರೆ. ದೇವರು ತಮ್ಮನ್ನು ಈ ವಿಶೇಷ ಸೌಕರ್ಯಗಳನ್ನು ಅನುಭವಿಸುವುದಕ್ಕಾಗಿಯೇ ಹುಟ್ಟಿಸಿರುವನೆಂದು ಅವರ ಮನವರಿಕೆಯಾಗಿದೆ.

ಸ್ತ್ರೀ ಹಾಗು ಪುರುಷ! ನಿಷ್ಪಕ್ಷಪಾತಿಯೆಂದು ಪೂಜಾರಿಗಳಿಂದ ಸ್ತುತಿಸಿಕೊಳ್ಳಲ್ಪಡುವ ಪರಮಾತ್ಮನೇ ಈ ಪ್ರಕಾರ ಸ್ತ್ರೀ ಹಾಗು ಪುರುಷರಲ್ಲಿ ಭೇದಭಾವ ಮಾಡಿದರೆ, ನಾವು ಪಾಮರರಾದ ಪುರುಷರು ತಲೆ ಬಗ್ಗಿಸಲೇಬೇಕಲ್ಲವೇ?

ನಮ್ಮ ಶಿಕ್ಷಣದ ಭವಿತವ್ಯ

(ಸಾರ್ಜಂಟ ಸಮಿತಿಯ ವರದಿಯ ಸಾರಾಂಶ)

●

ಶ್ರೀ ನೆಗಳೂರ ಶ್ರೀನಿವಾಸರಾಯರು ಎಂ. ಎ., ಬಿ. ಟಿ.

ಯುದ್ಧಾನಂತರ ಭಾರತದಲ್ಲಿಯೂ ವಿವಿಧ ಕ್ಷೇತ್ರಗಳಲ್ಲಿ ಪುನರ್ರಚನೆಯಾಗುವುದೆಂದು ಹೇಳುವುದು ಈವೊತ್ತಿನ ಒಂದು ಸಹಜವಾದ ಮಾತು. ಭಾರತೀಯರ ಶಿಕ್ಷಣದ ವಿಷಯವೂ ಪುನರ್ರಚನೆಯನ್ನು ಹೊಂದಬೇಕೆಂದು, ಬಹುಕಾಲದಿಂದ ಶಿಕ್ಷಣ ತಜ್ಞರಿಗೆ ತೋರಿದು ಬಂದ ವಿಷಯವಾಗಿದೆ. ಭಾರತೀಯರ ಜೀವನಕ್ಕೆ ಸಂಬಂಧಿಸಿದ ಅನೇಕ ವಿಷಯಗಳಲ್ಲಿ ಸುಧಾರಣೆಗಳನ್ನು— ತೋರಿಕೆಗಾದರೂ— ಮಾಡಬೇಕೆಂದಿರುವ ಭಾರತದ ಕೇಂದ್ರ ಸರಕಾರವು, ಸುದೈವದಿಂದ ಶಿಕ್ಷಣ-ಕ್ಷೇತ್ರದಲ್ಲಿಯು ಪುನರ್ರಚನೆಯನ್ನು ಮಾಡಬೇಕಾಗಿ ಒಂದು ತಜ್ಞರ ಸಮಿತಿಯನ್ನು ಏರ್ಪಡಿಸಿತು. ಮಿ. ಸಾರ್ಜಂಟ್ ಎಂಬವರು ಈ ಸಮಿತಿಯ ಕಾರ್ಯವಾಹಕ ಅಧ್ಯಕ್ಷರಾಗಿದ್ದುದರಿಂದ, ಇದಕ್ಕೆ **'ಸಾರ್ಜಂಟ್ ಸಮಿತಿ'** ಎಂದು ಹೆಸರು ಬಂದಿದೆ. ಈ ಸಮಿತಿಯು ತಾನು ಮಾಡಿದ ಕೆಲಸದ ವರದಿಯನ್ನು ೧೯೪೪ರ ಜನವರಿ ತಿಂಗಳಲ್ಲಿ ಪ್ರಕಟಿಸಿದೆ. ವರದಿಯು ಪ್ರಕಟಿಸಲ್ಪಟ್ಟು ಒಂದುವರೆ ವರುಷ ಕಾಲ ಗತಿಸಿದ್ದರೂ, ಹಿಂದುಸ್ತಾನದ ಶಿಕ್ಷಣದ ಸಮಸ್ಯೆಯಲ್ಲಿ ಅತ್ಯಂತ ಮಹತ್ತ್ವದ ಮತ್ತು ಉಪಯುಕ್ತವಾದ ಸುಧಾರಣೆಗಳನ್ನು ಮಾಡಬೇಕೆಂದು ಧೈರ್ಯವಾಗಿ ಉದ್ದೇಶಿಸುವ ಈ ವರದಿಯನ್ನು, ಈಗಲೂ ವಿವೇಚಿಸಿ ಸರಿಯಾಗಿ ತಿಳಿದುಕೊಳ್ಳುವುದು ಅವಶ್ಯವೆಂದೆನಿಸುವುದರಿಂದ, ಅದರ ಸಾರಾಂಶವನ್ನು ಈ ಲೇಖನದ ಮುಖಾಂತರ ಕೊಡಲಾಗಿದೆ.

ಹಿಂದೀಯರ ಶಿಕ್ಷಣದ ವಿಷಯವನ್ನು ಈ ವರದಿಯಲ್ಲಿ ಮೂಲ, ಪ್ರಾಥಮಿಕ, ಮಾಧ್ಯಮಿಕ, ಉಚ್ಚ, ಔದ್ಯೋಗಿಕ, ವ್ಯಾಪಾರ, ಕಲಾ, ಪ್ರೌಢ ಎಂಬುದಾಗಿ, ವಿಭಾಗಿಸಿ ವಿವೇಚಿಸಿದ್ದಾರೆ. ಇದಲ್ಲದೆ ಶಿಕ್ಷಕರ ತರಬೇತು, ವಿದ್ಯಾರ್ಥಿಯ ಆರೋಗ್ಯ, ಪ್ರತಿಕೂಲ ಪರಿಸ್ಥಿತಿಯಲ್ಲಿದ್ದವರ ಶಿಕ್ಷಣ, ಮನರಂಜಕ ಮತ್ತು ಸಾಮಾಜಿಕ ಕಾರ್ಯಕ್ರಮ, ಮುಂತಾದ ಮಹತ್ತ್ವದ ವಿಷಯಗಳ ವಿವರಣೆಯೂ ಇದರಲ್ಲಿ ಅಡಕವಾಗಿದೆ.

ಮೂಲ ಶಿಕ್ಷಣ:

(ಅ) ೬ರಿಂದ ೧೪ರ ವರೆಗಿನ ವಯಸ್ಸಿನ ಎಲ್ಲ ಗಂಡು-ಹೆಣ್ಣು ಮಕ್ಕಳಿಗೆ ಸಾರ್ವತ್ರಿಕವಾದ ಒತ್ತಾಯದ ಶಿಕ್ಷಣವನ್ನು ತೀವ್ರವಾಗಿಯೆ ಪುಕ್ಕಟೆಯಾಗಿ ಕೊಡುವ ಏರ್ಪಾಡನ್ನು ಮಾಡಬೇಕು. ಇದಕ್ಕೆ ಅವಶ್ಯವಾದ—ಯೋಗ್ಯ ತರಬೇತನ್ನು ಹೊಂದಿದ—ಶಿಕ್ಷಕರನ್ನು ಕೂಡಲೆ ದೊರೆಕಿಸುವ ವಿಷಯ ಕಠಿನವಾಗಿದ್ದರೂ ಮುಂಬರುವ ನಾಲ್ವತ್ತು ವರುಷಗಳಲ್ಲಿಯಾದರೂ ಈ ಯೋಜನೆ ಸಂಪೂರ್ಣವಾಗಬೇಕು.

(ಆ) ಈ ಎಂಟು ವರುಷಗಳಲ್ಲಿ ಮೊದಲಿನ ಐದು ವರುಷಗಳನ್ನು 'ಕೆಳ ತರಗತಿ' ಎಂದೂ ಉಳಿದ ಮೂರು ವರುಷಗಳನ್ನು 'ಮೇಲ್ತರಗತಿ' ಎಂದೂ ವಿಭಾಗಿಸಬೇಕು. ಕೆಳ ತರಗತಿಯನ್ನು ಮುಗಿಸಿದ ವಿದ್ಯಾರ್ಥಿಗಳಿಗೆ ಬೇರೆ ಬಗೆಯ ಶಾಲೆಗಳಿಗೆ ಹೋಗಲು ಅವಕಾಶವಿರಬೇಕು. ಶಿಕ್ಷಣವನ್ನು ಮಾತೃಭಾಷೆಯ ಮುಖಾಂತರವೇ ಕೊಡಬೇಕು. ಹಿಂದುಸ್ತಾನಿಯನ್ನು ಕಲಿಸಲು ತಕ್ಕ ಏರ್ಪಾಡನ್ನು ಮಾಡಬೇಕು. ಅನೇಕ ವಿಧವಾದ ಚಟುವಟಿಕೆಗಳಿದ್ದು, ಅವುಗಳ ಮುಖಾಂತರ ಶಿಕ್ಷಣವನ್ನೀಯಬೇಕೆಂಬ ವರ್ಧಾಶಿಕ್ಷಣ ತತ್ತ್ವವು ಈ ಸಮಿತಿಗೆ ಮಾನ್ಯವಾಗಿದೆ. ಕೆಳತರಗತಿಯಲ್ಲಿ ಈ ಚಟುವಟಿಕೆಗಳು ವಿವಿಧವಾಗಿದ್ದು, ಮಕ್ಕಳು ಮೇಲ್ತರಗತಿಗೆ ಹೋದಂತೆ ಇವು ಯಾವುದಾದರೊಂದು ಕೈಗಾರಿಕೆಗೆ ಸಹಾಯಕಾರಿಯಾಗಬೇಕು. ಇಂತಹ ಕೈಗಾರಿಕೆಗಳ ಮುಖಾಂತರ ಕಲಿಸಲು ಬಾರದ ಅವಶ್ಯವಿದ್ದ ಸಾಂಸ್ಕೃತಿಕ ವಿಷಯಗಳನ್ನು ಸ್ವತಂತ್ರವಾಗಿ ಕಲಿಸಬೇಕು. ಶಿಕ್ಷಕರ ವೇತನ ತಿಂಗಳೊಂದಕ್ಕೆ ಮೂವತ್ತು ರೂಪಾಯಿಗಳಿಗೆ ಕಡಿಮೆಯಿಲ್ಲದಿರಬೇಕು. ಸಾಧ್ಯವಿದ್ದಷ್ಟು ಹೆಣ್ಣುಮಕ್ಕಳನ್ನೇ ಹೆಚ್ಚಾಗಿ ಶಿಕ್ಷಕಿಯರನ್ನಾಗಿ ನಿಯಮಿಸಿಕೊಳ್ಳಬೇಕು. ಈ ಅಭ್ಯಾಸಕ್ರಮವು ಸಂಪೂರ್ಣವಾದ ಮೇಲೆ, ವಿದ್ಯಾರ್ಥಿಗಳಿಗೆ ಅವರು ವರುಷದಲ್ಲೆಲ್ಲ ಮಾಡಿದ ಕೆಲಸವನ್ನು ನೋಡಿ ಪ್ರಶಸ್ತಿಪತ್ರಗಳನ್ನೀಯಬೇಕು.

(ಇ) ಮೂಲ ಶಿಕ್ಷಣದ 'ಮೇಲ್ತರಗತಿಯ' ಶಿಕ್ಷಣವೇ ದೇಶದಲ್ಲಿ ಅನೇಕರು ಪಡೆಯಬೇಕಾದಂತಹ ಶಿಕ್ಷಣವಾಗಿರುವುದರಿಂದ ಅದನ್ನು ಎಲ್ಲ ವಿಧವಾಗಿ ಪರಿಪೂರ್ಣಗೊಳಿಸಬೇಕು.

(ಈ) ಎಲ್ಲ ಶಿಕ್ಷಣವೂ ಶಿಕ್ಷಕನನ್ನು ಅವಲಂಬಿಸಿರುವುದರಿಂದ, ಶಿಕ್ಷಕನ ಸ್ಥಿತಿಗತಿಗಳನ್ನು ಸುಧಾರಿಸಿ, ಅವನ ಪ್ರತಿಷ್ಠೆಯನ್ನು ಬೆಳೆಯಿಸಲು ಪ್ರಯತ್ನಿಸಬೇಕು.

(ಉ) ಈ ಯೋಜನೆ ಸಂಪೂರ್ಣವಾಗಿ ಒಳಕೆಯಲ್ಲಿ ಬಂದರೆ ಇದಕ್ಕೆ ವರುಷವೊಂದಕ್ಕೆ ೨೦೦ ಕೋಟಿ ರೂಪಾಯಿಗಳ ವೆಚ್ಚ ತಗಲುವುದು.

ಪ್ರಾಥಮಿಕ ಶಿಕ್ಷಣಕ್ಕೆ ಮುಂಚಿತವಾದ ಶಿಕ್ಷಣ.

ಪ್ರಾಥಮಿಕ ಶಿಕ್ಷಣಕ್ಕಿಂತ ಮುಂಚಿತವಾಗಿ ದೊರೆಯಬೇಕಾದ ಶಿಕ್ಷಣಕ್ಕಾಗಿ ತಕ್ಕ ಏರ್ಪಾಡನ್ನು ಮಾಡುವುದು ಅವಶ್ಯ. ಇದು ಶಿಶುಸಂಗೋಪನಾಲಯಗಳ ಮುಖಾಂತರ ದೊರೆಯಬೇಕು. ಯಾವುದೊಂದು ರಾಷ್ಟ್ರೀಯ ಶಿಕ್ಷಣ ಪದ್ಧತಿಯು ಪರಿಪೂರ್ಣವಾಗಬೇಕಾದರೆ, ಈ ಶಿಕ್ಷಣವು ಅತ್ಯಾವಶ್ಯಕ. ಈ ವಿಷಯದಲ್ಲಿ ಈಗಿದ್ದ ಪರಿಸ್ಥಿತಿ ಬಹು ವಿಷಾದಕರವಾಗಿದೆ. ಪಟ್ಟಣಗಳಲ್ಲಿ ಸಾಕಷ್ಟು ಚಿಕ್ಕಮಕ್ಕಳು ಇರುವ ಸ್ಥಳಗಳಲ್ಲಿ, ಶಿಶುಪಾಲನ ಶಾಲೆಗಳನ್ನು ತೆರೆಯಬೇಕು. ಇನ್ನಿತರ ಸ್ಥಳಗಳಲ್ಲಿ ಮೂಲಶಿಕ್ಷಣದ 'ಕೆಳ ತರಗತಿ'ಗೆ ಇಂತಹ

ವರ್ಗಗಳನ್ನು ಜೋಡಿಸಬೇಕು. ಇಂತಹ ಶಾಲೆಗಳಲ್ಲಿ ಸ್ತ್ರೀಯರೇ ಶಿಕ್ಷಕಿಯರಾಗಿರಬೇಕು. ಈ ಶಿಕ್ಷಣವು ಪುಕ್ಕಟೆಯಾಗಿ ದೊರೆಯಬೇಕು. ಮಕ್ಕಳು ಶಾಲೆಗೆ ಬರುವಂತೆ ಒತ್ತಾಯಪಡಿಸಬಾರದಾಗಿದ್ದರೂ, ಮನೆವಾರಿನ ಸ್ಥಿತಿಗತಿಗಳು ಅನಾರೋಗ್ಯಕರವಾದಲ್ಲಿ, ಸ್ತ್ರೀಯರು ದುಡಿಯಲು ಹೊರಗೆ ಹೋಗುತ್ತಿದ್ದಲ್ಲಿ, ಅಂತಹ ತಂದೆತಾಯಿಗಳು ಮಗುಗಳನ್ನು ಶಾಲೆಗಳಿಗೆ ಕಳುಹುವಂತೆ ಅವರ ಮನವೊಲಿಸಬೇಕು ಮಗುಗಳಿಗೆ ಇಂತಹ ಶಾಲೆಗಳ ಮುಖಾಂತರ ಸಾಮಾಜಿಕ ಅನುಭವವು ದೊರೆಯಬೇಕೆಂಬ ಉದ್ದೇಶವಿರುತ್ತದೆಯೆ ಹೊರತು, ವಿದ್ಯಾಪ್ರಸಾರವನ್ನು ಮಾಡಬೇಕೆಂಬುದಲ್ಲ. ಮೂರರಿಂದ ಆರು ವರುಷಗಳ ವರೆಗಿನ ಮಗುಗಳನ್ನು ಲಕ್ಷ್ಯಿಸಿ ಇಂತಹ ಶಾಲೆಗಳಲ್ಲಿ ಸುಮಾರು ೧೦,೦೦,೦೦೦ ಸ್ಥಳಗಳಿರಬೇಕೆಂದೂ ಇದಕ್ಕೆ ಸುಮಾರು ೩,೧೮,೪೦,೦೦೦ ರೂಪಾಯಿಗಳ ವೆಚ್ಚ ತಗಲಬಹುದೆಂದೂ ಅಂದಾಜು ಮಾಡಲಾಗಿದೆ

ಮಾಧ್ಯಮಿಕ ಶಿಕ್ಷಣ

ಮಾಧ್ಯಮಿಕ ಶಿಕ್ಷಣವು ಆರು ವರುಷಗಳ ವರೆಗೆ ನಡೆಯಬೇಕು ಮಾಧ್ಯಮಿಕ ಶಾಲೆಗಳಿಗೆ ಬರುವಾಗ ವಿದ್ಯಾರ್ಥಿಯು ಹನ್ನೊಂದು ವರುಷದವನಾಗಿರಬೇಕು. ಈ ಶಾಲೆಗಳಲ್ಲಿ ವಿಶಿಷ್ಟ ಗುಣಗಳುಳ್ಳ—ಆರಿಸಿ ತೆಗೆದ—ವಿದ್ಯಾರ್ಥಿಗಳಿಗೆ ಮಾತ್ರ ಪ್ರವೇಶ ದೊರೆಯಬೇಕು. ಇಲ್ಲಿ ದೊರೆಯಬಹುದಾದ ಶಿಕ್ಷಣದ ಯೋಗ್ಯ ಉಪಯೋಗವನ್ನು ಮಾಡಿಕೊಳ್ಳಬಹುದಾದ ವಿದ್ಯಾರ್ಥಿಗಳನ್ನಷ್ಟೇ ಇಲ್ಲಿಗೆ ಬರಮಾಡಿಕೊಳ್ಳಬೇಕು. ಉಳಿದ ವಿದ್ಯಾರ್ಥಿಗಳಿಗೂ ಇಲ್ಲಿ ಪ್ರವೇಶ ದೊರೆಯಬಹುದು. ಆದರೆ ಅವರ ವಿದ್ಯಾಭ್ಯಾಸದ ವೆಚ್ಚವು ಸಾರ್ವಜನಿಕ ಹಣದಿಂದಾಗಬಾರದು. ಈ ಶಾಲೆಗಳನ್ನು ಕೇವಲ ಜ್ಞಾನಪ್ರಧಾನ (Academic) ವಾದುವುಗಳೆಂದೂ, ಔದ್ಯೋಗಿಕ (Technical) ವೆಂದೂ ಎರಡು ವಿಧವಾಗಿ ವಿಭಾಗಿಸಬೇಕು. ವಿದ್ಯಾರ್ಥಿಗಳು ಇವುಗಳಲ್ಲಿ ಯಾವುದಾದರೊಂದು ವಿಧದ ಶಿಕ್ಷಣವನ್ನು ತಮ್ಮ ಯೋಗ್ಯತಾನುಸಾರವಾಗಿ ಪಡೆಯಬಹುದು. ಜೀವನದಲ್ಲಿ ತಮ್ಮ ಸ್ಥಾನಮಾನಗಳನ್ನು ನಿರ್ಧರಿಸಲು, ಅವುಗಳನ್ನು ಕಾಯ್ದುಕೊಳ್ಳಲು ಉಪಯುಕ್ತವಾದ ವಿದ್ಯಾಭ್ಯಾಸವನ್ನೀಯುವುದೇ ಈ ಶಾಲೆಗಳ ಮುಖ್ಯ ಉದ್ದೇಶ. ಅಭ್ಯಾಸಕ್ರಮವು ಪರಿಸ್ಥಿತಿಯನ್ನವಲಂಬಿಸಿ ಸಾಕಷ್ಟು ವಿವಿಧವಾಗಿರಬೇಕಲ್ಲದೆ, ವಿದ್ಯಾರ್ಥಿಗಳನ್ನು ಕೇವಲ ಪರೀಕ್ಷೆಗಾಗಿ ಸಿದ್ಧಪಡಿಸಲು ಅಲ್ಲ. ಒಳ್ಳೇ ಜಾಣನಾದ ಬಡವಿದ್ಯಾರ್ಥಿಯು ಕೂಡ ಈ ವಿದ್ಯಾಭ್ಯಾಸದ ಉಪಯೋಗವನ್ನು ಪಡೆಯಬೇಕಾಗಿ, ವಿದ್ಯಾರ್ಥಿವೇತನ, ಸಂಬಳ ಮುಂತಾದ ಸೌಕರ್ಯಗಳನ್ನು ಒದಗಿಸಿಕೊಡಬೇಕು. ಯೋಗ್ಯ ಶಿಕ್ಷಕರು ದೊರೆತು ಮನಃಪೂರ್ವಕವಾಗಿ ತಮ್ಮ ಕೆಲಸವನ್ನು ಮಾಡುವಂತೆ, ಉದಾರವೃತ್ತಿಯನ್ನು ಅವರಿಗೆ ಕೊಡಬೇಕು. ಈ ಯೋಜನೆಗೆ ಸುಮಾರು ೫೦ ಕೋಟಿ ರೂಪಾಯಿಗಳ ವಾರ್ಷಿಕ ವೆಚ್ಚವು ತಗಲಬಹುದು

ಉಚ್ಚ ಶಿಕ್ಷಣ

ಈಗಿದ್ದ ಭಾರತದ ವಿದ್ಯಾಪೀಠಗಳು [Universities] ರಾಷ್ಟ್ರೀಯ ಶಿಕ್ಷಣ ಪದ್ಧತಿಯಲ್ಲಿರಬೇಕಾದ ಅನೇಕ ವಿಷಯಗಳನ್ನು ಸಂಪೂರ್ಣವಾಗಿ ಪೂರಯಿಸಲಾರವು. ವಿದ್ಯಾಭ್ಯಾಸದ ಮಟ್ಟವನ್ನು ಏರಿಸಬೇಕಾದರೆ, ವಿದ್ಯಾಪೀಠಗಳಲ್ಲಿ ಪ್ರವೇಶ ಪಡೆಯಬಹುದಾದ ವಿದ್ಯಾರ್ಥಿಗಳ ಜ್ಞಾನದ ಮಟ್ಟವೂ ಮೇಲ್ತರಗತಿಯದಾಗಿರಬೇಕು. ಯೋಗ್ಯತೆಯಿದ್ದವನಿಗೇ ಪ್ರವೇಶ ದೊರೆಯಬೇಕೇ ಹೊರತು, ಕೇವಲ ಹಣವಿದ್ದವನಿಗಲ್ಲ. ಯೋಗ್ಯ ಬಡ ವಿದ್ಯಾರ್ಥಿಗೆ ಹಣದ ಸಹಾಯ ದೊರೆಯಬೇಕು. ಈಗಿನ ಇಂಟರ್‌ಮೀಡಿಯೆಟ್ ಪರೀಕ್ಷೆಯ ವರೆಗಿನ ಅಭ್ಯಾಸಕ್ರಮವೆಲ್ಲ, ಮಾಧ್ಯಮಿಕ ಶಾಲೆಗಳ ಕೈಯಲ್ಲಿರಬೇಕು. ಅನಂತರ ಯಾವುದೊಂದು ಪದವಿಯನ್ನು ಪಡೆಯಬೇಕಾದರೆ, ವಿದ್ಯಾರ್ಥಿಯು ಮೂರು ವರುಷಗಳ ವರೆಗಾದರೂ ಅಭ್ಯಾಸ ಮಾಡಬೇಕು. ಅಧ್ಯಾಪಕರು ಅಭ್ಯಾಸಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಸಂಪೂರ್ಣವಾದ ಮಾರ್ಗದರ್ಶಿಗಳಾಗಿರಬೇಕಲ್ಲದೆ, ಗುರು-ಶಿಷ್ಯರ ಸಂಬಂಧವು ನಿಕಟವಾಗಿರಬೇಕು. ಸಂಶೋಧನಾತ್ಮಕ ಕಾರ್ಯಕ್ಕೆ ಮಹತ್ವದ ಸ್ಥಾನ ದೊರೆಯಬೇಕು. ಈ ಕ್ರಮದಿಂದ ಉಚ್ಚ ಶಿಕ್ಷಣದ ಪ್ರಸಾರವಾಗಬೇಕಾದರೆ, ಪ್ರತಿ ವರುಷ ೬೭೨ ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡಬೇಕಾಗುವುದು.

ಔದ್ಯೋಗಿಕ ಶಿಕ್ಷಣ

ಇತ್ತೀಚಿನ ಔದ್ಯೋಗಿಕ ಬೆಳವಣಿಗೆ, ಯುದ್ಧಾನಂತರದ ವ್ಯಾಪಾರೋದ್ಯೋಗಗಳ ಬೆಳವಣಿಗೆ ಇವುಗಳನ್ನು ಪರಿಗಣಿಸಿದರೆ, ಬೇರೆ ಬೇರೆ ಬಗೆಯ ಔದ್ಯೋಗಿಕ ಶಿಕ್ಷಣವನ್ನು ಜನತೆಗೆ ಕೊಡುವ ಏರ್ಪಾಡನ್ನು ಕೂಡಲೆ ಮಾಡಬೇಕಾಗುತ್ತದೆ. ಔದ್ಯೋಗಿಕ ಶಿಕ್ಷಣವು ರಾಷ್ಟ್ರದ ಶಿಕ್ಷಣಪದ್ಧತಿಯ ಒಂದು ಮುಖ್ಯಾಂಗವಾಗಿ ಪರಿಗಣಿಸಲ್ಪಡಬೇಕು. ಮೊದಲಿನಿಂದಲೂ ಶಿಕ್ಷಣವು ವ್ಯಾವಹಾರಿಕವಾಗಿರಬೇಕು. ಜ್ಞಾನದಾಯಕ ಮತ್ತು ವ್ಯಾವಹಾರಿಕ ವಿಷಯಗಳೆರಡರೊಡನೆಯೂ ಮಕ್ಕಳಿಗೆ ಪರಿಚಯವಿರಬೇಕು ಔದ್ಯೋಗಿಕ ಶಿಕ್ಷಣದಲ್ಲಿ ಉದ್ಯೋಗಗಳಿಗೆ ಸಂಬಂಧಪಡುವಂತೆ ವ್ಯಾಪಾರ ಮತ್ತು ಕಲಾಶಿಕ್ಷಣವು ಕೂಡಿಕೊಂಡಿರುವುದು ಅವಶ್ಯ. ಒಕ್ಕಲುತನದ ಶಿಕ್ಷಣವು ಔದ್ಯೋಗಿಕ ಶಿಕ್ಷಣದ ಒಂದು ಅತ್ಯಾವಶ್ಯಕವಾದ ವಿಭಾಗ. ಮೂಲ ಶಿಕ್ಷಣದ ಮೇಲ್ತರಗತಿಯಲ್ಲಿಯೂ ಮತ್ತು ಹಳ್ಳಿಗಳಲ್ಲಿಯೂ ಒಕ್ಕಲುತನದ ಶಿಕ್ಷಣಕ್ಕೆ ಮಹತ್ವದ ಸ್ಥಾನವನ್ನೀಯಬೇಕು. ಔದ್ಯೋಗಿಕ ಮತ್ತು ವ್ಯಾಪಾರ ವಿಷಯಕ ಕೇಂದ್ರಗಳ ಬಳಿ ಇಂತಹ ಶಾಲೆಗಳಿಸ್ಸಿಡುವುದು ಉಚಿತ ಈ ಯೋಜನೆ ಪರಿಪೂರ್ಣವಾದರೆ, ಇದಕ್ಕೆ ಸ್ಥೂಲವಾಗಿ ೧೦ ಕೋಟಿ ರೂಪಾಯಿಗಳನ್ನು ಪ್ರತಿ ವರುಷ ವೆಚ್ಚ ಮಾಡಬೇಕಾಗುವುದು

ಪ್ರೌಢ ಶಿಕ್ಷಣ

ಭಾರತದಲ್ಲಿ ಅಶಿಕ್ಷಿತ ಪ್ರೌಢರ ಸಂಖ್ಯೆ ಅಪಾರವಾಗಿರುವುದರಿಂದ, ಪ್ರೌಢಶಿಕ್ಷಣವು ಅತಿ ಮಹತ್ವದ ವಿಷಯವಾಗಿದೆ. ಇತ್ತೀಚಿನ ಪ್ರಯೋಗಗಳಿಂದ ೪೦ ವರುಷಕ್ಕೆ ಮೀರಿದ ಪ್ರೌಢರಿಗೆ ಶಿಕ್ಷಣವನ್ನೀಯುವುದು ಅನುಪಯುಕ್ತವೆಂದು ಕಂಡುಬಂದಿದೆ. ನಾಲ್ವತ್ತುವರ್ಷಗಳ ಮೇಲಿನವರನ್ನು ಬಿಟ್ಟುಬಿಟ್ಟರೆ, ಬ್ರಿಟಿಶ್ ಹಿಂದುಸ್ತಾನದಲ್ಲಿ ೧೨,೬೪,೫೩,೧೭೨ ಜನ ಅಶಿಕ್ಷಿತ ಪ್ರೌಢರು ಉಳಿಯುತ್ತಾರೆ. ಇವರಿಗೆ ಶಿಕ್ಷಣವನ್ನು ಕೊಡಬೇಕಾದರೆ, ಶಿಕ್ಷಕರನ್ನು ಪೂರಯಿಸುವುದು ದುಸ್ತರ

ಪ್ರೌಢ ಶಿಕ್ಷಣ ಸಮಿತಿಯವರು ಒಂದು ಯೋಜನೆಯನ್ನು ಮಾಡಿ ೨೫ ವರುಷಗಳಲ್ಲಿ ಈ ಎಲ್ಲರಿಗೆ ಶಿಕ್ಷಣವನ್ನು ಕೊಡಬಹುದೆಂದು ಊಹಿಸಿದ್ದಾರೆ. ಸರಕಾರವು ಈ ಕೆಲಸದ ಭಾರವನ್ನೆಲ್ಲ ಹೊರುವುದು ಅತ್ಯಾವಶ್ಯಕವಾಗಿದ್ದರೂ, ಸ್ವಯಂಸ್ಫೂರ್ತಿಯಿಂದ ಕೆಲಸ ಮಾಡಲು ಮುಂದೆ ಬರುವ ಕೆಲಸಗಾರರ ಸಹಾಯವಿಲ್ಲದೆ ಕೆಲಸ ಯಶಸ್ವಿಯಾಗಲಾರದು. ಇದಕ್ಕೆ ಪ್ರತಿ ವರುಷ ೩ ಕೋಟಿ ರೂಪಾಯಿಗಳು ವೆಚ್ಚವಾಗಬಹುದು.

ಶಿಕ್ಷಕರ ತರಬೇತು

ದೇಶದ ತುಂಬೆಲ್ಲ ಈ ಎಲ್ಲ ವಿಧವಾಗಿ ಶಿಕ್ಷಣಪ್ರಸಾರವಾಗಬೇಕಾದರೆ, ತರಬೇತು ಹೊಂದಿದ ಸಾಕಷ್ಟು ಶಿಕ್ಷಕರನ್ನು ಒದಗಿಸಿ ಕೊಡಲು ಈಗಿದ್ದ ಶಿಕ್ಷಣಸಂಸ್ಥೆಗಳು ಸಾಕಾಗಲಾರವು. ಈ ಕೆಲಸಕ್ಕಾಗಿ ಇನ್ನೂ ಅನೇಕ ಶಾಲೆ-ಕಾಲೇಜುಗಳನ್ನು ತೆರಯಬೇಕಾಗುವುದು. ಕನಿಷ್ಟ ೨೦,೦೦,೦೦೦ ಪದವೀಧರರಲ್ಲದ ಶಿಕ್ಷಕರೂ, ೧೮೦.೦೦೦ ಪದವೀಧರ ಶಿಕ್ಷಕರೂ ಬೇಕಾಗಬಹುದು. ಶಾಲೆಗಳಲ್ಲಿಯ ವಿದ್ಯಾಭ್ಯಾಸವು ಮುಗಿಯುವಷ್ಟರಲ್ಲಿಯೆ ಶಿಕ್ಷಕರಾಗಲು ಯೋಗ್ಯರೆನಿಸಬಹುದಾದ ವಿದ್ಯಾರ್ಥಿಗಳನ್ನು ಆರಿಸಿ ತೆಗೆದು, ಅವರನ್ನು ಮುಂದೆ ಶಿಕ್ಷಕರಾಗಲು ಸರಿಯಾಗಿ ತರಬೇತುಗೊಳಿಸುವದು ಅವಶ್ಯ. ತರಬೇತುಗೊಳಿಸುವ ವಿದ್ಯಾಲಯಗಳಲ್ಲಿ ಶಿಕ್ಷಣವು ಪುಕ್ಕಟೆಯಾಗಿ ದೊರೆಯಬೇಕು. ಶಿಕ್ಷಣದ ವಿಷಯದಲ್ಲಿ ಹೆಚ್ಚು ಆಸ್ಥೆ ವಹಿಸುವಂತಹರಿಗೆ, ಸಂಶೋಧನಕ್ಕಾಗಿಯೂ ಪರರಾಷ್ಟ್ರಗಳ ಶಿಕ್ಷಣ ಕ್ರಮವನ್ನು ನಿರೀಕ್ಷಿಸುವುದಕ್ಕೂ, ಅಭ್ಯಸಿಸುವುದಕ್ಕೂ ಸಾಕಷ್ಟು ಪ್ರೋತ್ಸಾಹವನ್ನೀಯಬೇಕು. ಈ ಯೋಜನೆ ಸಂಪೂರ್ಣವಾಗಬೇಕಾದರೆ ೪,೫೬,೯೯,೯೫೦ ರೂಪಾಯಿಗಳು ಪ್ರತಿ ವರುಷ ಬೇಕಾಗುವವು.

ಇವಲ್ಲದೆ ಶಿಕ್ಷಣವನ್ನು ಪಡೆಯುವ ಚಿಕ್ಕ ಮಕ್ಕಳ ಆರೋಗ್ಯ, ಶರೀರಸಂಪತ್ತಿ, ಮನರಂಜಕ—ಸಾಮಾಜಿಕ ಚಟುವಟಿಕೆಗಳು, ಪ್ರತಿಕೂಲ ಪರಿಸ್ಥಿತಿಯಲ್ಲಿದ್ದವರ ವಿದ್ಯಾಭ್ಯಾಸ ಮುಂತಾದ ಮಹತ್ತ್ವದ ವಿಷಯಗಳನ್ನು ಈ ಸಮಿತಿಯವರು ಕೂಲಂಕಷವಾಗಿ ವಿವೇಚಿಸಿ ಯೋಗ್ಯವಾದ ಸಲಹೆ ಸೂಚನೆಗಳನ್ನಿತ್ತಿದ್ದಾರೆ.

ಅಂತೂ (ಪರಕೀಯ) ಸರಕಾರದಿಂದ ನಿಯೋಜಿತವಾಗಿದ್ದರೂ, ಈ ಸಾರ್ಜಂಟ್ ಸಮಿತಿಯು, ಭಾರತದ ಸ್ಥಿತಿಗತಿಗಳನ್ನನುಲಕ್ಷಿಸಿ, 'ಭಾರತವು ಒಂದು ಬಲಿಷ್ಠ ರಾಷ್ಟ್ರವಾಗುವುದಕ್ಕೆ ಒಂದು ರಾಷ್ಟ್ರೀಯ ಶಿಕ್ಷಣ ಪದ್ಧತಿಯು ಅದಕ್ಕೆ ಅವಶ್ಯ' ಎಂಬ ಮಾತನ್ನು ಒಳ್ಳೇ ಧೈರ್ಯವಾಗಿ ತನ್ನ ವರದಿಯಲ್ಲಿ ಕಾಣಿಸಿದೆ. ಈ ಸಮಿತಿಯ ವರದಿಯು ಪರಿಪೂರ್ಣವಾಗಿರದಿದ್ದರೂ, ಅನೇಕ ಸೂಕ್ತ ಸಲಹೆಗಳನ್ನು ಒಳಗೊಂಡಿದೆ. ತಲೆಗೆ ೩೩ ರೂಪಾಯಿ ೨ ಆಣೆ ಶಿಕ್ಷಣಕ್ಕಾಗಿ ವೆಚ್ಚವಾಗುತ್ತಿದ್ದ ಗ್ರೇಟ್‌ಬ್ರಿಟನ್ ಜನರು, ಮೊನ್ನೆ ಮೊನ್ನೆ ಯುದ್ಧಾನಂತರದ ಶೈಕ್ಷಣಿಕ ಪುನರ್ರಚನೆಯ ವಿಷಯವಾಗಿ "Upon the education of the people of this country, the fate of this country depends" ಎಂದು ಪಾರ್ಲಿಮೆಂಟಿನೆದುರು ಶ್ವೇತಪತ್ರದಲ್ಲಿ ತಮ್ಮ ದೂರು ಹೇಳಿರಲು, ತಲೆಗೆ ಕೇವಲ ೮ ಆಣೆ ೯ ಪೈ ಮಾತ್ರ ಶಿಕ್ಷಣಕ್ಕಾಗಿ ವೆಚ್ಚವಾಗುತ್ತಿದ್ದ ಭಾರತೀಯರು ಇದೇ ಮಾತನ್ನು ಎಷ್ಟು ಒತ್ತಿ ಹೇಳಬೇಕಾದೀತೆಂಬುದಾಗಿ ಈ ಸಮಿತಿಯವರು ತಮ್ಮ ಉಪೋದ್ಘಾತದ ಪುರೋಭಾಗದಲ್ಲಿಯೇ—ಒಳ್ಳೇ ಸೂಕ್ತವಾಗಿ—ಹೇಳಿದ್ದಾರೆ. ವರ್ಧಾ ಶಿಕ್ಷಣ ತತ್ತ್ವಕ್ಕೆ ಈ ಸಮಿತಿಯವರ ಸಂಪೂರ್ಣ ಮನ್ನಣೆ ದೊರೆತಿದೆ ಎಂಬುದು ಪ್ರತಿಯೊಬ್ಬ ರಾಷ್ಟ್ರಭಕ್ತನಿಗೆ ಸಂತೋಷಕರವಾದ ಸಂಗತಿ. ಈ ಯೋಜನೆಯು ಪೂರೆಗೆ ವರುಷವೊಂದಕ್ಕೆ ಕೋಟ್ಯಂತರ ರೂಪಾಯಿಗಳ ವೆಚ್ಚ ತಗಲುವುದು. ಅದನ್ನು ಈ ಸಮಿತಿಯವರು ಲೆಕ್ಕಿಸಿಲ್ಲ. "The expenditure involved is extremely heavy, but the experience of war suggests htat when a paramount necessity can be established, the money required to meet it can and will be found" ಎಂದು ಒಳ್ಳೇ ನಿಜವಾದದ್ದನ್ನೇ ನುಡಿದಿದ್ದಾರೆ. ಈ ಯೋಜನೆಯು ಪರಿಪೂರ್ಣವಾಗಿರದಿದ್ದರೂ ಯಾವುದೊಂದು ಪರಿಪೂರ್ಣವಾಗಿ ಯೋಜನೆಯನ್ನು ಸಿದ್ಧಪಡಿಸಲು ಬಹುಮಟ್ಟಿಗೆ ಸಹಾಯಕವಾಗಬಹುದು. ಇದರ ಗುಣಾವಗುಣಗಳನ್ನು ಪರಿಶೀಲಿಸಿ, ಇದರಲ್ಲಿ ವಿಹಿತವಾದುದನ್ನು ಬಳಕೆಯಲ್ಲಿ ತರುವಂತೆ ಹಿಂದುಸ್ತಾನದ ಕೇಂದ್ರ ಸರಕಾರವನ್ನು ಒತ್ತಾಯಪಡಿಸುವುದು ಪ್ರತಿಯೊಬ್ಬ ದೇಶಪ್ರೇಮಿಯ ಕರ್ತವ್ಯವಾಗಿದೆ. ಇಂತಹ ಒಳ್ಳೆ ಉಪಯುಕ್ತವಾದ ಶಿಕ್ಷಣದ ಯೋಜನೆಯನ್ನು ಭಾರತಕ್ಕೆ ಸಿದ್ಧಪಡಿಸಿ ಕೊಟ್ಟುದಕ್ಕಾಗಿ ಸಾರ್ಜಂಟ್ ಸಮಿತಿಗೆ ಅಖಿಲ ಭಾರತವೇ ಕೃತಜ್ಞವಾಗಿರಬೇಕಾಗಿದೆ.

ಆತ-ಆಕೆಯರ ಮಾತುಕತೆ

ಶ್ರೀ. ಜಿ. ವಿ. ಕಟ್ಟಿ ವಕೀಲರು, ಬೆಳಗಾಂವಿ

ಹಣಕ್ಕಾಗಿ ಕೂರೂಪಿ ಹೆಂಡತಿಯನ್ನು ಮದುವೆಯಾದ ಒಬ್ಬನು ಹಣದ ಹೋದ ಮೇಲೆ ಹೆಂಡತಿಯನ್ನು ಕುರಿತು ಹೀಗೆ ಹೇಳುತ್ತಾನೆ:

ನಾರಿ, ನಿನ್ನ ಮಾರೀ ನೋಡೀ ಜಗಾ ಎಲ್ಲ ಮರೀಬೇಕs,
ಮರೀಬೇಕ ಮರೀಬೇಕs ಕಡಿಯಾಶ್ರಮ ಹಿಡೀಬೇಕs !

ಮಟಮಟ ಮಧ್ಯಾನ್ನದಾಗs ಮನೀ ಬಿಟ್ಟು ಓಡಬೇಕs!
ಓಡಬೇಕ ಓಡಬೇಕs ಬಾವಾ ಆಗಿ ತಿರ್‌ಗಬೇಕs !

ಮಾಯಾ ಮೋಹ ಮರಸಿ-ಸಂಥಾ ದಿವ್ಯಮೂರ್ತಿ,
ಸುಂದರಮೂರ್ತಿ!
ದಿವ್ಯಮೂರ್ತಿ ಸುಂದರಮೂರ್ತಿ, ವೈರಾಗ್ಯಕ್ಕ ನೀನೇ ಸ್ಫೂರ್ತಿ!
'ಅರ್ಥವಿಲ್ಲ ಸಂಸಾರದಾಗ' ಅಂತ ಕೂಗಿ ಹೇಳುವ ಮಾರಿ—
ಅಂತ ಕೂಗಿ ಹೇಳುವ ಮಾರೀ, ನಿನ್ನ ಮಾರಿ ಮೋಕ್ಷಕ ದಾರಿ!

ದುಡ್ಡಿಗಾಗಿ ಮಾಡಿಕೊಂಡೆ, ನಿನ್ನ ಜೊತೆಗೆ ಕೂಡಿಕೊಂಡೆ!
ಹಣಾ ಹೋತ್ಯ ನೀನು ಮಾತ್ರ ಎಂದಿನ್ಹಾಂಗ ನಿಂತುಕೊಂಡೆ!

ಆಕೆ ಉತ್ತರ ಕೊಟ್ಟುದು ಇಂತು:—

ನನ್ನ ರೂಪ ನಿನ್ನ ಬುದ್ಧಿ ಒಂದಕೊಂದು ತಾಳ-ಮೇಳೊ,
ಒಂದಕೊಂದು ತಾಳ-ಮೇಳೋ, ಬ್ರಹ್ಮ ಗಂಟು ಹಾಕ್ಯಾನೇಳೊ!

ಜಕ್ಕಣನ ಜಾತ್ರೆ

(ಒಂದು ಪ್ರವಾಸ ಪ್ರಬಂಧ)

●

" ಶ್ರೀರಂಗ "

" ಅಗತ್ಯವಿದ್ದರೆ ಮಾತ್ರ ಪ್ರಯಾಣ ಬೆಳೆಸಿರಿ " ಎನ್ನುವ ರೈಲು ಕಂಪನಿಗಳಿಗೆ ನಮ್ಮಂತಹ ಸಾಹಿತಿಗಳ ಅಸ್ತಿತ್ವದ ಅರಿಕೆ ಇದೆಯೊ ಇಲ್ಲವೋ ? ಯಾಕೆಂದರೆ, ನಮ್ಮದು ಸ್ಫೂರ್ತಿಯ ಜಾತಿ. ಸ್ಫೂರ್ತಿ ಬಂದಿತೆಂದರೆ ಆಯಿತು,ಅಗತ್ಯದ ಕಲ್ಪನೆ ಇಲ್ಲ: ಅರ್ಥಿಕತೆಯ ಹೆದರಿಕೆ ಇಲ್ಲ; ಆ ಕೆಲಸ ಆಗಲೇ ಬೇಕು. ಇದಲ್ಲದೆ, ಬೇಸಗೆಯಲ್ಲಿಯೆ ನಮಗೆ ರಜೆ. ರಜೆಯಲ್ಲಿ ಎಂದಿನಂತೆ ಬರೆಯುವುದು ಶಕ್ಯವಿಲ್ಲ, ಕಾಗದದ ಅಭಾವದ ದಿನಸಗಳಿವು. ಹೀಗಾಗಿ ಈ ಸಲದ ಬೇಸಗೆಯ ರಜೆಯಲ್ಲಿ ಸಂಚರಿಸುವ ಸ್ಫೂರ್ತಿ ಬಂದಿತು ನಮಗೆ—ಮುವ್ವರಿಗೆ—; ಒಬ್ಬರು ಅರ್ಥಾತ್ ಶ್ರೀರಂಗರು, ಇನ್ನಿಬ್ಬರು ರಂಗ-ಮಂಗ ಪ್ರಕಾಶನದ ಒಡೆಯ ರಾದ ರಂಗರು—ಮಂಗರು. ಅಂತೂ ಮುವ್ವರು ಹೊರಟೆವು ಹಾಸನಕ್ಕೆ. ಶ್ರವಣ ಬೆಳ್ಗೊಳವನ್ನು ಮೊದಲು ನೋಡೋಣ ಎಂದು.

ವಾಚಕರಿಗಾಗಿ ಒಂದು ಮಾತನ್ನು ಮೊದಲು ಸ್ಪಷ್ಟ ಮಾಡುವೆ: ಚಿಕ್ಕಂದಿನಿಂದಲೂ ಕಲ್ಲಿಗೂ ನನಗೂ ಯಾವ ತರದ ಸ್ನೇಹಸಂಬಂಧವೂ ಬೆಳೆದಿಲ್ಲ; ಇಂದಿಗೂ ಕಲ್ಲಿನಲ್ಲಿ ಬರೆದದ್ದಾಗಲಿ ಕೊರೆದದ್ದಾಗಲಿ ನನಗೆ ವಿಶೇಷ ತಿಳಿಯುವುದೂ ಇಲ್ಲ. ಈ ದೃಷ್ಟಿಯಿಂದ ನಾನು ಸಾಮಾನ್ಯ ಜನತೆಯ ಪ್ರತಿನಿಧಿ ಎಂದು ಹೇಳಬಹುದು. ಅದಕ್ಕಾಗಿ ಶಿಲ್ಪಕಲೆಯ ತಜ್ಞತೆಯನ್ನು ವಾಚಕರು ನನ್ನ ಅನುಭವದಲ್ಲಿ ಕಾಣಲಿಕ್ಕಿಲ್ಲ; ಮುಂಚಿತವಾಗಿಯೆ ಎಚ್ಚರ ಕೊಡುತ್ತೇನೆ. ಆಯಾ ಸ್ಥಳಗಳನ್ನು ನೋಡಬೇಕೆಂಬ ಸ್ಫೂರ್ತಿಗಾಗಿಯೆ ನಾನು ಈ ಇಬ್ಬರು ಗೆಳೆಯರೊಡನೆ ಹೊರಟದ್ದು.

ರೈಲುಸಂಚಾರವು ನನ್ನ ಪ್ರೀತಿಯ ವಿಷಯ ಎಂಬುದು ಅನೇಕ ವಾಚಕರಿಗೆ ಗೊತ್ತಿರಲು ಸಾಕು. ರೈಲುಸಂಚಾರವೆಂದರೆ ಅದೊಂದು ಪ್ರತಿಭೆ; ಪ್ರತಿಸಲವೂ ನವನವೋನ್ಮೇಷಶಾಲಿನಿಯಾದುದು, ಎಂದರೆ ಹೊಸ ಹೊಸ ಅನುಭವವನ್ನು ತಂದುಕೊಡುವುದು. ಈ ಸಲವೂ ಹಾಗೆಯೆ. ಮೊದಲನೆಯ ವಿಷಯವೆಂದರೆ ಪ್ರವಾಸಕ್ಕೆ ಹೊರಟವರು ನಾವು ಮುವ್ವರಲ್ಲ, ನಾಲ್ವರು ಎಂಬುದು. ನಾಲ್ಕನೆಯವನಾರು ಎನ್ನು ವಿರಾ ? " ಇಲ್ಲೇ ಕೂತಾರ್ರಿ....ಈಗ ಸ್ಟೇಶನ್ ಬಂದ್ಹೊತ್ಲೆ ಕೆಳಗಿಳಿ ದಾರ....ಬರ್‍ತಾರ...." ತಿಳಿಯಿತೆ ? ಅವನಿಗಾಗಿ ನಾವು ಸ್ಥಳ ಯಾವಾ ಗಲೂ ಕಾದಿಡುತ್ತಿದ್ದೆವು. ಕೊನೆಯ ವರೆಗೂ ಅವನು ಬಂದು ಆ ಸ್ಥಳ ವನ್ನು ಆಕ್ರಮಿಸದಿದ್ದುದು ಅವನ ತಪ್ಪು; ನಿಲ್ಲಬೇಕಾದವರ ದುರ್ದೈವ. ನಿಲ್ಲುವವರೆಂದಾಕ್ಷಣ ಮತ್ತೊಂದು ಅನುಭವ— ಎರಡನೆಯದು— ಸ್ಮರಣೆಗೆ ಬರುವುದು. ಅಗತ್ಯವಿದ್ದಲ್ಲಿಯೆ ಪ್ರಯಾಣ ಬೆಳೆಯಿಸಬೇಕೆಂಬ ನಿಯಮವಿದ್ದಾಗ, ನಮ್ಮ ದೇಶದಲ್ಲಿ ಎಷ್ಟೊಂದು ಜನ ಪ್ರಯಾಣದ ಅಗತ್ಯವುಳ್ಳವರಿದ್ದಾರೆ! ಆ ಅಗತ್ಯವಾದರೂ ಎಂತಹದು ! ಟಿಕೆಟ್ಟನ್ನು ಕೊಳ್ಳಲು ಕೂಡ ಪುರಸೊತ್ತಿಲ್ಲ! ಇಂತಹ ನೂರಾರು ಜನರನ್ನು ಕಂಡಾಗ, ನಿಧಾನವಾಗಿ ಟಿಕೆಟ್ಟನ್ನು ಕೊಳ್ಳುವ ಅವಕಾಶವಿದ್ದ ನಮಗಾಗಿ ನಾಚಿಕೆಯಾಯಿತು.

* * * *

ಅಂತೂ ಬಂದಿತು ' ಆಸ್ನ ' (ಹಾಸನ); ಇದೀಗ ಮೈಸೂರು ಕರ್ನಾಟಕ: " ಆ ಮಹಾ ದೋಸೇಶ್ವರಾದಿ " ಎಂದು ನಾವು ಅಭಿ- ಮಾನದಿಂದ ಕನ್ನಡಗೀತವನ್ನು ಹಾಡಿದೆವು: ದೋಸೆಯ ಮಹಿಮೆ ಎಂದರೆ, ಅದನ್ನು ತಿಂದಾಕ್ಷಣ, " ಬಂತೇ—ಬೆಣ್ಣೇ " ಎಂದು ಬಾಯಿ ತಾನಾಗಿಯೆ " ಗಿಜವಾಯಿ"ಯಾಗುವುದು. ದೋಸೆ ತಿನ್ನುವ ದರೊಳಗಾಗಿ ನಮ್ಮ ಬಸ್ಸು ಊರೊಳಗೆ ಹೊರಟು ಹೋಗಿತ್ತು. ಬಸ್ಸಿನ ಹಿಂದೆ ನಾವು, ನಮ್ಮ ಹಿಂದೆ ಏಜೆಂಟ್, ಏಜೆಂಟನ ಹಿಂದೆ ಬಸ್ಸು— ಹೀಗೆ ಚಕ್ರಾಕಾರ ಶೋಧ ನಡೆಯಿತು. ನಮಗೆ ಅದರಿಂದ ಯಾವ ಶ್ರಮವೂ ಇರಲಿಲ್ಲ. ಯಾಕೆಂದರೆ, 'ಆಸ್ನ'ದ ಟ್ರಾವೆಲರ್ಸ್ ಬಂಗಲೆ ಯಲ್ಲಿ— ಒಬ್ಬ ಪ್ರವಾಸಿಗ ಅಧಿಕಾರಿಯು ಉದ್ಧಟನಂತೆ ವರ್ತಿಸಿ ದಾಗೂ— ಅಲ್ಲಿಯ ನೋಕರರ ಸಾಲ್ವಾಣೆಯ ಸೌಜನ್ಯಕ್ಕಾಗಿ ಸ್ನಾನ- ವನ್ನು ಮಾಡಿದ್ದೆವು. ಅಂತೂ ಕೊನೆಗೆ ಬಸ್ಸಿನ ಗುಹೆಯಲ್ಲಿ ಸಮಾಧಿ- ಸ್ಥರಾಗಿ ಶ್ರವಣಬೆಳ್ಗೊಳಕ್ಕೆ ಹೊರಟೆವು. ದಾರಿಯುದ್ದಕ್ಕೂ ನನಗೆ ಗೊಮ್ಮಟೇಶ್ವರನ ಮೂರ್ತಿಯೆ ಕಣ್ಣೆದುರು ಕಟ್ಟಿತ್ತು. ಆಶ್ಚರ್ಯದ ಮಾತೆಂದರೆ ಆ ಮೂರ್ತಿಗೆ ದರ್ಟ, ಕೋಟು ಇದ್ದಿತು! ನೋಡಿದತ್ತೆಲ್ಲ ಅದೇ ಮೂರ್ತಿ ಕಂಡಿತು ನನಗೆ! " ಭಲೆಭಲೆ, ಶ್ರೀರಂಗಾ, ಇಷ್ಟೊಂದು ದೇವಲಂಡತನದಿಂದ ಬರೆದರೂ ನಿನ್ನ ಹೃದಯಾಂತರಾಳದಲ್ಲಿ ಭಕ್ತಿಯ ಝರಿ ಎಂತಹದಿದೆ ?" ಎಂದುಕೊಂಡೆ.... ಬಂದಿತು ಶ್ರವಣ ಬೆಳ್ಗೊಳ. ಇನ್ನೊಂದು ಆಶ್ಚರ್ಯ....ನನ್ನ ಗೊಮ್ಮಟೇಶ್ವರ ಮೂರ್ತಿ ಸರಿಯಿತು....ಎಲ್ಲವೂ ಬಯಲಾಯಿತು. ದಾರಿಯುದ್ದಕ್ಕೂ ಬಸ್ಸಿಗೆ ಜೋತು ಬಿದ್ದ ಪ್ರಯಾಣಿಕ ಎಂದು ಹೊಳೆಯಿತು, ನನ್ನ ಭಕ್ತಿಮದ ಇಳಿಯಿತು. ಮಧ್ಯಾಹ್ನದ ೧॥ ಗಂಟೆ. - ಪಾದರಕ್ಷೆಗಳನ್ನು ಕೆಳ ಗಿಟ್ಟು' ಬೆಟ್ಟವನ್ನು ಹತ್ತುವುದು! ಪಾದಗಳನ್ನೂ ಕೆಳಗಿಟ್ಟೇ ಹೋಗಿದ್ದರೆ ಸುಖ ಎಂದು ಆ ವೇಳೆ ಎನ್ನಿಸಿತು ನಮಗೆ. ಅಥವಾ—ಹೋಗಲಿ.... ಭಾವಿಕರು ಅನ್ಯಥಾ ಭಾವಿಸದಿದ್ದರೆ ಒಂದು ಮಾತನ್ನು ಹೇಳುವೆ. ಆ ಬಿಸಿಲಿನಲ್ಲಿ ಕಾಲು ಸುಟ್ಟುಕೊಂಡು ಮೇಲೆ ಹತ್ತಿದರೆ, ತಿರುಗಿ ಬರಲು ಕಾಲಿಲ್ಲದಂತಾಗಿ, ನಾವೂ ಅಲ್ಲಿಯೆ ಮೂರ್ತಿಯಾಗಿ ನಿಲ್ಲಬಹುದ ? ಹಿಂದಿನ ಕಾಲದಲ್ಲಿ ಇಂತಹ ಘಟನೆಯೆ ಆಗಿರಬಹುದ? —ಎನ್ನಿಸಿತು. ಮೇಲೆ ಹೋದಾಕ್ಷಣ, ಕಣ್ಣೆದುರು ೫೦ ಅಡಿ ಎತ್ತರ ಮೂರ್ತಿಯನ್ನು ಕಂಡಾಕ್ಷಣ, ಇದನ್ನು ಕಡೆದು ನಿಲ್ಲಿಸಿದವರಿಗೆ ಯಾವ ಹುಚ್ಚು ಹಿಡಿದಿತ್ತು ಎನಿಸಿದಾಕ್ಷಣ— ನಮ್ಮ ಎಲ್ಲ ಅವಯವಗಳು ಕಣ್ಣಲ್ಲಿ ಸೇರಿ, ಕಣ್ಣು ಹೃದಯದಲ್ಲಿ ನೆಟ್ಟು,ಬಿಸಿಲು—ಉರಿ—ಕಾಲು ಇವು ಗಳ ಎಚ್ಚರವೆ ಉಳಿಯಲಿಲ್ಲ. ತಾನು ಎಂತಹ ಕ್ಷುಲ್ಲಕ ಎಂದು ಕಾಲ ಕಾಲಕ್ಕೆ ಕಂಡುಕೊಳ್ಳಲಿಕ್ಕಾದರೂ ಮಾನವನು ಈ ಬೆಟ್ಟವನ್ನು ಹತ್ತ ಬೇಕು; ಸೃಷ್ಟಿಸೌಂದರ್ಯವನ್ನು ನೋಡಬೇಕು; ಮತ್ತೊಮ್ಮೆ ಮೂರ್ತಿಯನ್ನು ದಿಟ್ಟಿಸಬೇಕು. ' ಸೃಷ್ಟಿಸೌಂದರ್ಯಕ್ಕಾಗಿ ಸಮಾಧಿಸ್ಥ ನಂತೆ ತನ್ಮಯನಾಗಬೇಕಲ್ಲದೆ ಸ್ವಾರ್ಥಿಯಾಗಬಾರದು ' ಎಂದು ತುಟಿ ಬಿರಿಯದ ಬಾಯಿಯಿಂದ ಆ ಮೂರ್ತಿ ಹೇಳುವುದನ್ನು ಕೇಳಿಕೊಳ್ಳ ಬೇಕು....ಆದರೆ ನಾವು ಸ್ವಾರ್ಥಿಯಾದೆವು; ಮೂರ್ತಿಯ ಸನ್ನಿಧಾನದ- ವಲ್ಲಿ ಉಪಾಹಾರದ ಗಂಟನ್ನು ಬಿಚ್ಚಿದೆವು: ಅಮೇರಿಕನ್ ನಾಹೇಬರ

ಗಾಗಿ ಕೈಮುಗಿದು, ಬೆನ್ನು ಬಾಗಿ ಬಾಯ್ಬಿಡುವ ಅರ್ಚಕರನ್ನು ಕಂಡು ನಕ್ಕೆವು: ಕಾದ ಕಬ್ಬಿಣದ ಹಾವಟಿಗೆಗಳ ಮೇಲೆ ಒಗ್ಗರಣೆಯಲ್ಲಿಯ ಸಾಸಿವೆ ಕಾಳ್ಗಳಂತೆ ಕುಣಿಯುತ್ತ ಕೆಳಗಿಳಿದೆವು; ಕಾಫೀ ಕುಡಿದು, 'ಸಾಹೇಬ'ರಿಗಾಗಿ ಫ್ರಂಟ್ ಸೀಟನ್ನು ಬಿಟ್ಟುಕೊಟ್ಟು ಪ್ರವಾಸಕ್ಕೆ ಅಣಿಯಾದೆವು. ಹಾಸನ-ಶ್ರವಣಬೆಳ್ಗೊಳ ದಾರಿಯಲ್ಲಿ ಚೆನ್ನರಾಯ ಪಟ್ಟಣವಿದೆ. ಅಲ್ಲಿ ಎಲ್ಲಿಯಾದರೂ 'ತಿಂಡಿ ಸಿಕ್ಕುತ್ತೇ ? ' ಎಂದು ಒಬ್ಬನನ್ನು ಕೇಳಿದರೆ 'ಸ್ವಾಮೀ, ಇದು ಚೆನ್ನರಾಯ ಪಟ್ಟಣ ಅಲ್ಲ, ಚಾಂಡಾಲ ರಾಯರ ಪಟ್ಟಣ ' ಎಂದ ! ಅದೇ ಚುನಾವಣೆಯಾದ ಚಿಹ್ನೆಗಳು ಗೋಡೆಯ ಮೇಲಿದ್ದುದನ್ನು ಕಂಡು ಸುಮ್ಮನಾದೆವು.

ಹಾಸನದಿಂದ ಬೇಲೂರು ಇಪ್ಪತ್ತೆರಡು ಮೈಲು. ಅದೇ ಸಾಯಂಕಾಲ ೪॥ ಗಂಟೆಯ ಬಸ್ಸಿನಲ್ಲಿ ಹೊರಟೆವು. 'ಸೇವಂಟಿಫೈವ್' ಮಿನಿಟ್ಸಿನಲ್ಲಿ ಮುಟ್ಟಿಸುವೆ ಎಂದರು ಡ್ರೈವರ್ ಸಾಹೇಬರು. ಮಿಲಿಟರಿಯಲ್ಲೂ ಗಾಡಿಯನ್ನು ನಡೆಸಿ ಬಂದಿರುವರಂತೆ ಅವರು. ಆದರೆ ಐದೈದು ನಿಮಿಷಗಳಿಗೊಮ್ಮೆ ಸ್ಟೋಪ್, ಕ್ಲೀನೈನ್, ನೀರು ಮೊದಲಾದುವುಗಳ ಉಪಚಾರ ಬೇಕು ಈ ಬಸ್ಸಿಗೆ. ಆದಕಾಗಿ ಸಾಯಂಕಾಲ ೭ ಗಂಟೆಗೆ ತಲುಪಿದೆವು. ಟ್ರಾವೆಲರ್ಸ್ ಬಂಗಲೆಯಲ್ಲಿ ಸ್ನಾನಮಾಡಿಕೊಂಡು ಚೆನ್ನಕೇಶವನ ದರ್ಶನಕ್ಕೆ ಹೊರಟೆವು. ಅಲ್ಲಲ್ಲಿ ಬಾಗಿಲುಗಳು ಮುಚ್ಚಿದ್ದರಿಂದ ಹೊರಗೋಡೆಯ ಬೊಂಬೆಗಳನ್ನು ನೋಡಿದೆವು. ಸಾಕಷ್ಟು ಕತ್ತಲಾಗಿದ್ದರಿಂದ, ನಾವೂ ದಣಿದದ್ದರಿಂದ ಶಿಲ್ಪಕಲೆ ಸುಂದರವೆಂದು ಕೂಡಲೆ ಒಪ್ಪಿಕೊಂಡು ಹೊರಟೆವು. ಆಗ ಒಂದು ಬಾಗಿಲು ತೆರೆದಿತ್ತು: ಒಳಗೆ ಹೋಗಿ ತಂಪಾದ ದುಂಡುಗಲ್ಲನ್ನು ಹೆಡ್ ಆಫೀಸ್ ಮಾಡಿ, ಸುತ್ತಲೂ ನೋಡುತ್ತ ಕುಳಿತೆವು. ಅಷ್ಟರಲ್ಲಿಯೆ 'ಪೂಜೆ ನಡೆದಿದೆ, ಎದ್ದು ನಿಲ್ಲಿರಿ' ಎಂಬ ಗುಡುಗು ಕೇಳಿಸಿತು.... ಅಂತೂ ಹೆಚ್ಚು ಶ್ರಮ ಹೊಂದಿ ವಾಸಸ್ಥಾನಕ್ಕೆ ಮರಳಿದೆವು.

ಮರುದಿನ ಬೆಳಗ್ಗೆ ಮುಪ್ಪಡೂ ಪೈಸಿಕಲ್ಲಿನ ಮೇಲೆ ಹಳೆಬೀಡಿಗೆ ಹೊರಟೆವು. ಹನ್ನೆರಡು ಮೈಲಿನ ದಾರಿ.... ಒಂದು ಗಂಟೆಯ ಸಮಯದಲ್ಲಿ ಹಳೆಬೀಡಿನ ಪ್ರವೇಶದ್ವಾರದಂತಿದ್ದ 'ಆದಿಕರ್ಣಾಟಕ ಕೊಲೊನಿ'ಯನ್ನು ಕಂಡೆವು. ಮುಂಚಿನ ದಿವಸದ ಆರ್ಭಟವನ್ನು ನೆನೆದುಕೊಂಡು, ವಿಶ್ರಾಂತಿ ಹೊಂದುವುದಾದರೆ ಈ 'ಕೊಲೊನಿ'ಯಲ್ಲಿಯೆ ಎಂದು ನಿಶ್ಚಯಿಸಿ, ಒಳಹೊಕ್ಕು, ಜನರನ್ನು ಮಾತನಾಡಿಸಿ ನೀರುಕುಡಿದೆವು. 'ಹಾಲು ಬೇಕೆ, ಸ್ವಾಮೀ ? ' ಎಂದ ಒಬ್ಬ ಹರಿಜನ (ಇವರಿಗೆ ಮೈಸೂರಲ್ಲಿ ಆದಿಕರ್ಣಾಟರು ಎಂದು ಹೆಸರು). ತಮ್ಮಲ್ಲಿ ಯಾವ ವೇನೂ ಇಲ್ಲ ಎಂದರು. ಆದಕಾಗಿಯೆ ಮಾನವರೊಡನೆ ಇಷ್ಟು ಸೌಜನ್ಯದಿಂದ ನಡೆದುಕೊಂಡರೇನೊ ! ನೀರಿನಿಂದಲೆ ನಾವು ತೃಪ್ತಿ ಹೊಂದಿ (ಆ ನೀರು ಹೊಲಸು ಕೆರೆಯದು, ಅವರಿಗಾಗಿ ಬಾವೀ ತೋಡಿಸುವ ಕೆಲಸ ಇನ್ನೂ ಮುಗಿದಿಲ್ಲವಂತೆ !), ಅವರ ದರ್ಶನದಿಂದ ಮುಡಿವಂತರಾಗಿ, ದೇವಾಲಯಗಳಿಗೆ ಹೊರಟೆವು. ಮೂರು ಸ್ಥಾನಗಳಿವೆ, ಅದರಲ್ಲೊಂದು ಬಸದಿ. ಬಸದಿಯ ಬಾಗಿಲು ಭದ್ರ.... ಅರ್ಚಕರು ಎಲ್ಲಿಯೋ ಹೋಗಿದ್ದಾರೆ! ಅವರನ್ನು ಕರೆ ಕಳುಹಿಸಿದೆವು ... ಇನ್ನೊಂದು ನೋಡಲು ಹೊರಟೆವು; ನಾಲ್ಕಾಣೆಯ ಆಸೆಯನ್ನು ಅರ್ಚಕನಲ್ಲಿ ಹುಟ್ಟಿಸಿದೆವು. ಅವನು ನಮ್ಮನ್ನು ಸುತ್ತಾಡಿಸಿದ. ರಾಮಾಯಣ, ಮಹಾಭಾರತ, ದಶಾವತಾರ— ಮೊದಲಾದ ಸಂನಿವೇಶದ ಬೊಂಬೆಗಳನ್ನು ತೋರಿಸಿದ; ೧೦ ಅಡಿ ಎತ್ತರ ನಂದಿಯ ಮೇಲೆ ವಿಶ್ರಮಿಸಿದೆವು; ಗಂಟೆಗೊಣಗು-ಮಂಗಳ ಮುಗಿಯಿತು. ಇಲ್ಲಿಯೂ ಒಂದೇ ವಿಚಾರ ನಮಗೆ: ಕಲ್ಲಿಗೂ ಜೀವಕಳೆಯನ್ನು ತುಂಬಿದ ಈ ಕಲೆಗೆ ಸ್ಫೂರ್ತಿ ಯಾವುದು? 'ಕೊರೆದವನು ಕೂಲಿಯವನಲ್ಲ, ಕಲಾವಿದನು' ಎಂಬುದು ಪ್ರತಿಯೊಂದು ಬೊಂಬೆಯ ಕಣ್ಣು-ಮೂಗುಗಳನ್ನು ಕಂಡಾಕ್ಷಣ ಸ್ಪಷ್ಟವಾಗುವುದು. ಕೇವಲ ಭಕ್ತಿಯ ಕೆಲಸವಿದಲ್ಲ. ಶುದ್ಧ ಕಲಾದೃಷ್ಟಿಯೂ ಇದರಲ್ಲಿದೆ. ಇಲ್ಲವಾದರೆ ಬಸದಿಯ ಕಂಬಗಳಲ್ಲಿ ಪ್ರತಿಬಿಂಬದ ವೈಚಿತ್ರ್ಯಕ್ಕಾಗಿ ಯತ್ನಿಸುವುದೇಕೆ? ಇದಲ್ಲದೆ ನೃತ್ಯ ಮತ್ತು ವಾದನಸಾಮಗ್ರಿಗಳ ಪ್ರದರ್ಶನ ನೋಡಿದಲ್ಲೆಲ್ಲ ಇದೆ. ಇವರು ಸುಖಜೀವಿಗಳಿದ್ದರೆ ? ಅಗತ್ಯವಿಲ್ಲದಾಗೂ ಈ 'ಹಸ್ತಕೌಶಲ' ತೋರಿಸಿದರೆಂದೇ ಅದಿಷ್ಟು ಚೈತನ್ಯಮಯವಾಗಿರಬಹುದೇ ?.... ಎಳನೀರನ್ನು ಕುಡಿವಾಗ, 'ಅಮ್ಮಡಿ' ಯನ್ನು ತಿನ್ನುವಾಗ, ಇಂತಹ ವಿಚಾರಗಳಿಗೆ ನಮಗೆ ಸಾಕಷ್ಟು ಅವಕಾಶ ದೊರೆಯಿತು. ನಮ್ಮ ದುಃಖವೆಂದರೆ ಒಂದೇ: ಹೋದಹೋದಲ್ಲಿ ಯಾವ ಅರ್ಚಕನೂ ಬಾಗಿಲಿಗೆ ಬೀಗ ಹಾಕಿ ಹೊರಟು ಹೋಗಿದ್ದಾನೆ. ತಿಳಿದವರು, ತಿಳುಹಿಸುವವರು ಇಡೀ ಹಗಲು ಈ ಸ್ಥಳದಲ್ಲಿರುವಂತೆ ಮೈಸೂರು ಸರ್ಕಾರದವರು ವ್ಯವಸ್ಥೆ ಮಾಡಿದರೆ, ಯಾತ್ರಿಕರಿಗೆ ತುಂಬಾ ಅನುಕೂಲವಾದೀತು....

ಪೈಸಿಕಲ್ಲಿನ ಮೇಲೆ ಮಧ್ಯಾಹ್ನ ೨ ಗಂಟೆಯ ಉರಿಬಿಸಿಲಿನಲ್ಲಿ ಬೇಲೂರಿಗೆ ಮರಳಿದೆವು. ಆಗ ನಮ್ಮ ವಿಚಾರಗಳು ಬದಲಾಯಿಸತೊಡಗಿದುವು. 'ಹಳೆಬೀಡಲ್ಲ, ಹಾಳುಬೀಡು' ಎಂದು ಕಾಫಿ ಅಂಗಡಿಯಲ್ಲಿ ಒಬ್ಬ ನುಡಿದಿದ್ದ. ಈ ಹಾಳುಬೀಡನ್ನು ಇಂತಹ ಪೈಸಿಕಲ್ಲಿಗೆ ಕಷ್ಟವಾದ ಸ್ಥಳದಲ್ಲಿ ಯಾಕೆ ನಿಲ್ಲಿಸಿದರು?—ಎಂದು ನಮ್ಮ ದೂರು.... ಮತ್ತೆ ಅದೇ ಅನುಭವ ... ದಾರಿಯಲ್ಲಿ ೧೦-೧೨ ಮನೆಗಳ ಒಂದು ಹಳ್ಳಿ ... ಕುಡಿಯಲು ನೀರು ಕೊಡುವಿರಾ?—ಎಂದರೆ 'ಯಾರು ನೀರು ಬೇಡಿದ್ರೂ ಮಜ್ಜಿಗೆ ಕೊಡೋ ಪಾಟಾ ಮಾಡೀನಿ ' ಎಂದು ಗೌಡರು ತಳ ಸುಟ್ಟ ಪಾತ್ರೆಯಲ್ಲಿ ಬೆಳೆ ಮಜ್ಜಿಗೆಯನ್ನು ಕೊಟ್ಟರು. ಬೀದಿಯ ಮರದ ಕೆಳಗೆ ಅದನ್ನು ಕುಡಿದು. ಪಾತ್ರೆಯನ್ನು ಅವರಿಗೆ ಒಪ್ಪಿಸಿ, ತೇಕುತ್ತ ತೂಗುತ್ತ ನಾಲ್ಕು ಗಂಟೆಗೆ ಬೇಲೂರನ್ನು ತಲುಪಿದೆವು. ಊಟವನ್ನು ಮುಗಿಸಿಕೊಂಡವರೆ ದೇವಾಲಯಕ್ಕೆ ಹೋದೆವು. ಒಳಗುಡಿಯ ಎಲ್ಲ ಬಾಗಿಲುಗಳು ಮುಚ್ಚಿದ್ದುವು. ಮತ್ತೆ ನಮ್ಮ ಬುದ್ಧಿವಂತಿಕೆಯಿಂದಲೆ ಹೊರಗೋಡೆಯ ಬೊಂಬೆಗಳನ್ನು ನೋಡುತ್ತ ಸುತ್ತಾಡಿದೆವು.

ಹಳೆಬೀಡಿನ ಮತ್ತು ಬೇಲೂರಿನ ಕೌಶಲದಲ್ಲಿ ಒಂದು ವ್ಯತ್ಯಾಸ ನಮಗೆ ಕಂಡಿತು. ಬೇಲೂರಿನ ದೇವಾಲಯದ ಬೊಂಬೆಗಳಲ್ಲಿ ನಯ ಹೆಚ್ಚು: ಮುಖವಿಕಾರ, ಭಾವಭಂಗಿ ಇವುಗಳನ್ನು ಸೂಕ್ಷ್ಮವಾಗಿ ಪ್ರದರ್ಶಿಸುವ ಕಲಾಕೌಶಲವನ್ನು ಇಲ್ಲಿ ಸಾಕಷ್ಟಾಗಿ ಕಾಣಬಹುದು. ಇದಲ್ಲದೆ ಇಲ್ಲಿಯ ಕಲಾವಿದರಲ್ಲಿ ಕವಿತ್ವವೂ ಇದೆ. ಭ್ರಮರವನ್ನು ಪ್ರದರ್ಶಿಸುವಾಗ, ಉಡುವ ಸೀರೆಯಲ್ಲಿ ಚೇಳನ್ನು ಕಂಡ ದೃಶ್ಯ ಅತ್ಯಂತ ಮಾರ್ಮಿಕವಾಗಿದೆ. ಬೇಟೆಯ ಭಂಗಿಗಳೂ ಬಹಳೇ ಸ್ಫೂರ್ತಿಯುತವಾಗಿವೆ. ಯುದ್ಧದ ಚಿತ್ರಗಳಲ್ಲಿ ತುರುಬು ಕಟ್ಟಿದ ಹೆಣ್ಮಕ್ಕಳು ಕುದುರೆಯ ಸವಾರಿಯನ್ನೇ ಇದ್ದಾರೆ. ಇಲ್ಲಿಯೂ ಪ್ರಹ್ಲಾದನ ಕತೆ ಇದೆ. ರಾಮಾಯಣ-ಮಹಾಭಾರತಗಳ ಸಂನಿವೇಶಗಳಿವೆ. ಸ್ವಲ್ಪಾವಧಿಯಲ್ಲಿಯೇ ಎಲ್ಲವನ್ನೂ ತಿಳಿದುಕೊಳ್ಳುವ ಸಂಯೋಗ ನಮಗೆ ಲಭಿಸಿತು

ಅರ್ಚಕರೂ ಬಂದರು; ಅವರು ಶ್ರೀರಂಗರ ಹೆಸರನ್ನೂ ಕೇಳಿದ್ದರಂತೆ. ಎಲ್ಲವೂ ಅನುಕೂಲವೆ ಆಯಿತು. ಇದ್ದಲ್ಲದೆ ಇಲ್ಲಿಯ ಅರ್ಚಕರು ಇತಿಹಾಸದ ದೃಷ್ಟಿಯುಳ್ಳವರು. ಆದ್ದರಿಂದ ನಾಲ್ಕು ಗಂಟೆ ನಮ್ಮನ್ನು ಅವರು ಸುತ್ತಾಡಿಸಿದರೂ ನಮಗೆ ಸಂತೋಷವೆ ಆಯಿತಲ್ಲದೆ, ಶ್ರಮವೆನ್ನಿಸಲಿಲ್ಲ. ಗೋಡೆಯ ಮೇಲೆ ಹತ್ತಿ, ಕಾಲಿಕ್ಕಿ ಗುಳ್ಳನ್ನು, ನಟ್ಟ ಸುಂದರಿಯ ಮುಖವಿಕಾರವನ್ನು ನೋಡಿದೆವು. ಜಡೆಯಲ್ಲಿ ಒಬೆ, ಅಲ್ಲಿ ನೊಣ ಸಿಕ್ಕಿದೆ, ಅದನ್ನು ತಿನ್ನಲು ಒಂದು ಹಲ್ಲಿ—ಪ್ರತಿಯೊಂದು ಸೂಕ್ಷ್ಮವೂ ಕಲ್ಲಿನಲ್ಲಿದೆ. ಈ ಕಲಾವಿದರಿಗೆ ಕಲ್ಲಿನಿಂದ ಯಾವ ತೊಂದರೆಯೂ ಇದ್ದಂತಿಲ್ಲ. ಕಾಗದವಷ್ಟು ತೆಳುವಾಗಿ ಅದನ್ನು ಕೊರೆದಿದ್ದಾರೆ. ಕೈಯಲ್ಲಿಯ ಕಂಕಣ ಸರಿದಾಡುವಂತೆ ಮಾಡಿದ್ದಾರೆ! ಗುಡಿಯ ಒಳಕ್ಕೆ ಮೇಲಂಗಣದಲ್ಲಿ ಕಮಲಾಕಾರದಲ್ಲಿ ಕತೆಯ ಸನ್ನಿವೇಶಗಳನ್ನು ಕೊರೆದಿದ್ದಾರೆ.... ಈ ಕೌಶಲವನ್ನು ಕಂಡು ಮಾನವನೂ ಬೆರಗಾಗಿ ಕಲ್ಲಿನ ಬೊಂಬೆಯಂತೆ ನಿಲ್ಲಬಹುದಾಗಿದೆ. ಒಳಗಿನ ಮೂರ್ತಿಯಾದರೂ ಅಷ್ಟೆ ಸುಂದರ ಮತ್ತು ಸಾತ್ತ್ವಿಕವಾದುದು. ಪ್ರಾಕಾರದ ಬಯಲಲ್ಲಿ ೪೦–೫೦ ಅಡಿ ಎತ್ತರದ ದೀಪಗಲ್ಲು (ಇದು ಒಂದೇ ಕಲ್ಲು) ಕೇವಲ ತನ್ನ ಭಾರದಿಂದಲೆ ನಿಂತಿದೆ ... ನೋಡಿದಷ್ಟಿಲ್ಲ, ನೋಡಿನೋಡಿದಂತೆ ಬೆರಗುಗೊಳಿಸುವಂತಹ ಕೃತಿಸೌಂದರ್ಯ. ಬೇಲೂರಿನಲ್ಲಿ, ಹಳೆಬೀಡಿನಲ್ಲಿ ಬಿದ್ದ ಗೋಡೆಗಳಿಂದ ಕಳಚಿದ ಬೊಂಬೆಗಳು ಪ್ರಾಕಾರದ ತುಂಬ ಹರಡಿವೆ. ಕೆಲವನ್ನು ವ್ಯವಸ್ಥಿತವಾಗಿ ನಿಲ್ಲಿಸಿದ್ದಾರೆ. ಗೋಡೆಯಲ್ಲಿ ಅಲ್ಲಲ್ಲಿ ತುಂಡಾದ ಗೊಂಬೆಯನ್ನು ಮತ್ತೆ ಕೊರೆದು ಈಗಿನವರು ಸೇರಿಸಿದರಂತೆ, ಮುಂಚಿನ ಕೌಶಲದ ಬದಿಯಲ್ಲಿ ತಮ್ಮದನ್ನು ನೋಡಿ ಈಗ ಅದನ್ನು ನಿಲ್ಲಿಸಿರುವರಂತೆ— ಬೇಲೂರಿನ ಅರ್ಚಕರು ಹೇಳಿದರು ನಮಗೆ. ಆ ಒಂದೆರಡು ಉದಾಹರಣೆಗಳನ್ನು ನೋಡಿ ಒಂದು ಮಾತು ಸ್ಪಷ್ಟವಾಗುವುದು: ' ಜಕ್ಕಣನ ಶಿಲ್ಪಕಲೆ ' ಕರ್ನಾಟಕದಲ್ಲಿ ಉಳಿದಿಲ್ಲ. ....ಜಕ್ಕಣನ ಕೃತಿ ಎಂದು ಬೇಲೂರಿನ ಇತಿಹಾಸಜ್ಞರಾದ ಅರ್ಚಕರು ಒಪ್ಪುವುದಿಲ್ಲ; ಅದು ದಂತಕತೆ, ಪ್ರತಿಯೊಂದು ಬೊಂಬೆಯ ಕೆಳಗೆ ಕೊರೆದವನ ಹೆಸರಿದೆ ಎಂದು ಈಗಲೂ, ವಯಸ್ಸಾದ ಈ ಅರ್ಚಕರು ಉತ್ಸಾಹದಿಂದ ಗೋಡೆಯನ್ನೇರಿ ಓದಿ ತೋರಿಸುತ್ತಾರೆ. ಇಡಿಯ ಕರ್ನಾಟಕದ ವೈಭವವೆ ದಂತಕತೆಯಂತೆನ್ನಿಸುವ ಈಗಿನ ಕಾಲದಲ್ಲಿ, ಜಕ್ಕಣನ ದಂತಕತೆಯನ್ನೂ ನಂಬಿದರ ನಷ್ಟವೇನು ಎಂದೆನಿಸುವುದು ಒಮ್ಮೊಮ್ಮೆ.

ಮೂರು ದಿವಸಗಳ ಪ್ರವಾಸ ನಮ್ಮದು. ಅಗತ್ಯವಿರದಿದ್ದಾಗಲೂ ೫೦ ಗಂಟೆಗಳವರೆಗೆ ಬಿಸಿಲಲ್ಲಿ ಬಳಲಿದೆವು. ಅದಕ್ಕೆಂದೇ ಇಷ್ಟೊಂದು ಆಲ್ಹಾದದಾಯಕವೆನ್ನಿಸಿತೇನೋ! ಅಂತೂ ಕರ್ನಾಟಕದ ಗತವೈಭವದ ಒಂದಂಶವನ್ನು ನೋಡಿದೆವು. ನೋಡುವಾಗಲೆಲ್ಲ ನಮ್ಮದ ಕರ್ನಾಟಕ ನಮಗೆ ಸ್ಫೂರ್ತಿಯಾಗಿ ಮರೆಯುತ್ತಿತ್ತೆಂಬುದೇ ಆ ವೈಭವದ ಘನತೆಯನ್ನು ಸೂಚಿಸುತ್ತದೆ. ಹಳೆಬೀಡಿನ ಸೌಂದರ್ಯವನ್ನು ಸುತ್ತಲಿನ ಅರಸಿಕ ಮಾನವಜಗತ್ತಿನಿಂದ ಮರೆಮಾಡಿದ ಬೆಟ್ಟದ ಸುತ್ತು-ನಾಲುಗಳ ರಮಣೀಯತೆಯನ್ನು ಎಷ್ಟು ಸವಿದರೂ ಕಡಿಮೆಯೆ. ಯಾರಿಂದ ರಕ್ಷಿಸಲು ನಮ್ಮ ಪೂರ್ವಜರು ಇಂತಹ ನಡುಬೆಟ್ಟದ ದರಿಯಲ್ಲಿ ಈ ಸೌಂದರ್ಯವನ್ನು ಕಟ್ಟಿದರು? ಮುಸಲ್ಮಾನರಿಂದಲೆ? ಶತ್ರುರಾಜರಿಂದಲೆ ? ಅಥವಾ ಯೋಗ್ಯತೆ ಇಲ್ಲದ ಇಡಿಯ ಮಾನವ ಪ್ರಪಂಚದಿಂದಲೆ ? ಯಾವ ಉದ್ದೇಶಕ್ಕಾಗಿ ನೂರಾರು ವರ್ಷಗಳ ವರೆಗೆ ಸಾವಿರಾರು ಜನರನ್ನು ದುಡಿಸಿ, ಕಲ್ಲಿನಲ್ಲಿ ಈ ಚೈತನ್ಯವನ್ನು ನಿಲ್ಲಿಸಿದರು? ವೈಭವದ ದರ್ಪಕ್ಕಾಗಿಯೆ ? ಗುಲಾಮರನ್ನು ದಣಿಸುವುದಕ್ಕಾಗಿಯೆ ? ಭಕ್ತಿಯನ್ನು ಸಾರುವುದಕ್ಕಾಗಿಯೆ ? ಅಥವಾ— ಹೃದಯದೊಳಗಿನ ಒಂದು ಸೌಂದರ್ಯಲಾಲಸೆಯನ್ನು ಇಲ್ಲವೆ ಧ್ಯೇಯಸಾಧನೆಯನ್ನು ತೃಪ್ತಿಗೊಳಿಸುವುದಕ್ಕಾಗಿಯೆ ? ಇವೆಲ್ಲ ಮಾತುಗಳಿಗೆ ಉತ್ತರವಿದೆ: ಶಬ್ದಗಳಲ್ಲಿ ಬರೆದು ಪ್ರಕಟಿಸುವ ಉತ್ತರವಲ್ಲ. ಆ ಬೊಂಬೆಗಳನ್ನು ಆದರಿಸುವವನ ಕಿವಿಯಲ್ಲಿ ಮೌನದಿಂದಲೆ ರಸವಿಕಾರದ ಮೂಗದಿಂದಲೆ ಆ ಬೊಂಬೆಗಳು ಇಂದಿಗೂ ಉತ್ತರವನ್ನು ಸಾರುತ್ತವೆ. ಅದನ್ನು ಅನುಭವಿಸಲಾದರೂ ನಾವು ಅಲ್ಲಿಯವರೆಗೆ ಹೋಗಬೇಕಾಗುವುದು.

* * * *

ಮೂರು ದಿವಸಗಳ ಕನಸಿನ ಸಾಮ್ರಾಜ್ಯ ಕೆಳಗುರುಳಿತು. ಮತ್ತೆ ಬಸ್ಸು, ಸತ್ತ ದನಗಳಂತೆ ಒಂದರ ಮೇಲೊಂದು ಮನುಷ್ಯರನ್ನು ತುರುಕಿ ತುಂಬುವ ಆ ಜನಸಂದಣಿ ಮತ್ತೆ, ಹಿಂದಿನ ವೈಭವವನ್ನು ಒಂದೇಟಿಗೆ ಮರೆಯಿಸುವಂತಹ ಧೂಳಿನ ಅಂತಃಪಟ, ಮತ್ತೆ 'ಡ್ರೈವರ್' ಮತ್ತೆ ' ಹೋಲ್ಡಾನ್ ', ಮತ್ತೆ ಜಟಕಾವಾಲಾಯ ಕೂಡ ಬುದ್ಧಿಯ ಲೆಕ್ಕದ ಕುಸ್ತಿ, ಸ್ಟೇಶನಿನಲ್ಲಿ ಕೂಲಿಯವನನ್ನು ಹುಡುಕುವುದು— ಗಾಡಿ ಬಂದ ಮೇಲೆ ಸ್ಥಳವನ್ನು ಹುಡುಕುವುದು—ಸ್ಥಳ ದೊರೆತ ಮೇಲೆ ಕೂಲಿಯವನನ್ನೂ ಸಾಮಾನನ್ನೂ ಹುಡುಕುವುದು— ಇದು ದೊರೆತ ಮೇಲೆ ಮತ್ತೆ ಸ್ಥಳವನ್ನು ಹುಡುಕುವುದು— ಮತ್ತೆ— ಮತ್ತೆ .. ಕಳಚಿದ ವೈಭವವನ್ನು ಮರಳಿ ತರಲಾರದ ಜನತೆಯ ಯೋಗ್ಯತಾಶೂನ್ಯತೆಯ ಲಕ್ಷಣಗಳೆ ಇವು ?

ಪ್ಯನೂರು ಹಿಂದಿನ ಕಾಲದಲ್ಲಿ ಕನ್ನಡ ದೇಶ: ಇಂದಿಗೂ ಕನ್ನಡವೆಂದು ಹೇಳಲಾಗುತ್ತಿದೆ. ಆದರೇನು? ಹಳೆಬೀಡಿನಲ್ಲಿ, ಹನ್ನೆರಡು ಹರಿದಾರಿ ಮಾತ್ರ ದೂರದ ಹಳ್ಳಿಯವನೊಬ್ಬ ಬಂದಿದ್ದ. ಬಸದಿಯ ಕಂಬವನ್ನು ನೋಡುನೋಡುತ್ತ ' ನೈಸ್ ' ಇದೆ ಎಂದ! ' ನೈಸ್ ' = nice = ಇಂಗ್ಲಿಷ್ ಶಬ್ದ ! ಬಸ್ ಡ್ರೈವರ್-ಕ್ಲೀನರ್-ಕಂಡಕ್ಟರ್ ಎಲ್ಲರ ಬಾಯಲ್ಲಿ ದಿನಂಪ್ರತಿ ಜೀವನದ ಭಾಷೆಯಲ್ಲೂ ಇಂಗ್ಲಿಷ್ ಶಬ್ದ. ಕಲಿತವರ ಹಚ್ಚೆಬರಹವಂತೂ ಹೇಳಬಾರದಲ್ಲ. ಇತ್ತ ಇಂಗ್ಲೀಷೂ ಅಲ್ಲ (ಉಚ್ಚಾರವಂತೂ ತೀರ ಅಶುದ್ಧ, ಕರ್ಣಕಟು), ಇತ್ತ ಕನ್ನಡವೂ ಅಲ್ಲ. ಈ ಆಂಗ್ಲ-ಕನ್ನಡ ಭಾಷೆಯಲ್ಲಲ್ಲದೆ ಇವರಿಗೆ ಸಾಮಾನ್ಯ ಮಾತುಗಳನ್ನು ಹೇಳಲಿಕ್ಕಾಗುವುದಿಲ್ಲ. ' ಬಸ್ ರನ್ (run) ಆಗ್ತದೆ ', ' ಎಲೆಕ್ಷನ್ ವಿನ್ ಮಾಡ್ಕೊಂಬುಟ್ಟ ', ' ಫಸ್ಟ್ ಕಾಫೀ ಡ್ರಿಂಕ್ ಮಾಡಿ '— ಯಾವ ಭಾಷೆ ಇದು ? ಇಷ್ಟೇಕೆ ? ಒಂದೆಡೆ ಅರ್ಚಕರು ಕೂಡ ತಮಗೆ ಕನ್ನಡಕ್ಕಿಂತ ಇಂಗ್ಲಿಷಿನಲ್ಲಿ ಹೇಳಲು ಸುಲಭವೆನ್ನಿಸುವುದು ಎಂದರು ! ಇದು ಕನ್ನಡದ ಹತವೈಭವ ! ನಮ್ಮ ನುಡಿಯಲ್ಲಿ ನಾಲಿಗೆ ನಡೆಸಲು ಬಾರದ ನಾವು ಎಷ್ಟು ಬುದ್ಧಿವಂತ ಇಲ್ಲವೆ ವಿಚಾರವಂತರಾಗಬಹುದಾಗಿದೆ ? ಹಳ್ಳಿಯವ ಕೂಡ ' ಸೊಗಸು ' ಎಂಬುದನ್ನು ಮರೆತು 'ನೈಸು' ಎನ್ನಬೇಕಾದರೆ, ನಮ್ಮಂತಹ ಅಭಿಮಾನಶೂನ್ಯರ ಕರ್ತವ್ಯಚ್ಯುತಿಗಾಗಿ ದೇವರುಗಳೆಲ್ಲ ಬೆಟ್ಟದ ದರಿಗಳಲ್ಲಿ ಓಡಿ

(೩೭ನೆಯ ಪುಟದ ಅಡಿಯಲ್ಲಿ)

ವಿಜ್ಞಾನದ ವಿಚಿತ್ರ ಪ್ರಪಂಚ

ಪ್ರತಿಯೊಬ್ಬ ನಾಗರಿಕನು, ತಾಯಿಯು, ಬಾಲಕ-ಬಾಲಕಿಯರು—ಎಲ್ಲರೂ ಅವಶ್ಯವಾಗಿ ಓದಬೇಕಾದ ಲೇಖನಮಾಲೆ ಇದು. ದಿನನಿತ್ಯದ ಜೀವನಕ್ಕೆ ಸಂಬಂಧಿಸಿದ, ಅಗತ್ಯದ, ಮಹತ್ವದ ಸಂಗತಿಗಳನ್ನು ಲೇಖಕರು ಅತ್ಯಂತ ಸುಲಭ ಮತ್ತು ಮನೋಜ್ಞ ಶೈಲಿಯಲ್ಲಿ, ವಿಜ್ಞಾನದ ದೃಷ್ಟಿಯಿಂದ, ವೈಜ್ಞಾನಿಕರ ಚರಿತ್ರೆಯ ಮುಖಾಂತರವಾಗಿ ಇಲ್ಲಿ ಬರೆಯುವರು. 'ವಿಜ್ಞಾನ ಮತ್ತು ಸಾಹಿತ್ಯ' ಎಂಬ ಇವರ ಗ್ರಂಥವನ್ನು ಓದಿದವರು, ಈ ಲೇಖನಗಳನ್ನು ಉತ್ಸುಕತೆಯಿಂದ ಓದುವರೆಂಬ ಭರವಸೆ ನಮಗಿದೆ. ಇವರು ಮರಾಠಿ ಪತ್ರಿಕೆಯಲ್ಲಿಯೂ ಈ ವಿಷಯವಾಗಿ ಬರೆಯುತ್ತಿದ್ದು ಅದುಬದು ವಾಚಕರಿಗೆ ಎಚ್ಚರಗೊಳಿಸಿದೆ, ಅವರಿಗೆ ಅಭಿಮಾನವನ್ನುಂಟುಮಾಡುವುದು. —ಸಂ.

ಶ್ರೀ. ಕೆ ಎಸ್. ಸವಣೂರ, ಎಮ್. ಎಸ್ಸಿ. ಕರ್ನಾಟಕ ಕಾಲೇಜ್, ಧಾರವಾಡ

೧ ಎಲ್ಲರೂ ವಿಜ್ಞಾನ ವಿಶಾರದರೇ!

ವಿಜ್ಞಾನವೆಂದೊಡನೆ ಯಾರೂ ಬೆಚ್ಚಿಬೀಳುವ ಕಾರಣವಿಲ್ಲ. ಪ್ರತಿಯೊಬ್ಬ ಮನುಷ್ಯನೂ ವ್ಯಾವಹಾರಿಕವಾಗಿ—ವಿಶಿಷ್ಟ ಅಭ್ಯಾಸವನ್ನು ಮಾಡಿದವನಂತೆ—'ವಿಜ್ಞಾನಿ' ಎಂದು ಕರೆಯಲ್ಪಡದಿದ್ದರೂ, ಸೂಕ್ಷ್ಮ ದೃಷ್ಟಿಯಿಂದ ವಿಚಾರ ಮಾಡಿದಲ್ಲಿ, ಜೀವವಿದ್ದ ಯಾವ ಪ್ರಾಣಿಯನ್ನಾದರೂ 'ವಿಜ್ಞಾನಿ' ಎಂದು ಹೇಳಬೇಕಾಗುವುದು. ಕಾರಣವೆಂದರೆ, ನಿಸರ್ಗನಿಯಮಗಳನ್ನು ತನಗೆ ಅನುಗುಣವಾಗಿ ಉಪಯೋಗಿಸುವವನೇ ವಿಜ್ಞಾನಿ; ಎಂದರೆ 'ವಿಜ್ಞಾನ' ಎನ್ನುವುದು ಬೇರೊಂದಿರದೆ ನಿಸರ್ಗನಿಯಮಗಳ ಉಪಯೋಗಕ್ರಮವೇ ಆದೆಂದು ಹೇಳಬೇಕಾಗುವುದು.

ಎಲ್ಲರೂ 'ವಿಜ್ಞಾನಿಗಳು' ಎಂದು ಹೇಳುವುದು ಕೇವಲ ಉತ್ಸಾಹದಲ್ಲಿ ಬರೆದುದಲ್ಲ, ಇಲ್ಲದೆ ಇಲ್ಲದುದನ್ನು ಹೇಳಿ ವಿಜ್ಞಾನದ ಪ್ರಚಾರ ಮಾಡುವುದೂ ನನ್ನ ಉದ್ದೇಶವಲ್ಲ. ವಿಜ್ಞಾನವು ಉದಯಿಸುವುದಕ್ಕಾಗಲಿ ಬೆಳೆಯುವುದಕ್ಕಾಗಲಿ ಸತ್ಯವೇ ತಳಹದಿಯು. ನಿಸರ್ಗನಿಯಮಗಳನ್ನು ವಂಚಿಸುವುದು ಎಂದಿಗೂ ಅಸಾಧ್ಯವೇ. ಇಲ್ಲಿ ವಂಚನೆಗೆ ಸ್ಥಳವೇ ಇಲ್ಲ. ಮೇಲಾಗಿ ನಿಸರ್ಗನಿಯಮಗಳ ಕ್ರಿಯಾಶಕ್ತಿಯು ನಮ್ಮ ಪ್ರಚಾರವನ್ನು ಅವಲಂಬಿಸಿ ಕೆಲಸಮಾಡುವಂತಹವಲ್ಲ. ಮತ್ತು ಅವಕ್ಕೆ ಪ್ರಚಾರದ ಆವಶ್ಯಕತೆಯೂ ಇಲ್ಲ. ನಾವು ಎಲ್ಲರೂ ವಿಜ್ಞಾನಿಗಳು ಹೇಗೆಂಬುದನ್ನು ಒಂದೆರಡು ಉದಾಹರಣೆಗಳಿಂದ ತಿಳಿಯಲು ಸಾಧ್ಯ. ಬೇಸಗೆಯಲ್ಲಿ ಬಿಳಿಯ ಅರಿವೆಗಳ ಉಪಯೋಗವು ಹಿತಕರವೆಂಬುದೂ, ಚಳಿಗಾಲದಲ್ಲಿ ಕಂಬಳಿಯನ್ನು ಹೊದೆಯುವುದು ಹಿತಕರವೆಂಬುದೂ ಎಲ್ಲರೂ ತಿಳಿದ ವಿಷಯವೆ ಆಗಿದೆ. ಅದರಂತೆಯೇ ಅಡಿಗೆ ಮಾಡುವಾಗ ಹೆಣ್ಣುಮಕ್ಕಳು ಒಲೆಯ ಮೇಲಿನ ಪಾತ್ರೆಯನ್ನು ಕೆಳಗೆ ಇಳಿಸಲು ಮುತ್ತಲ ಎಲೆಯ ಸಹಾಯವನ್ನು ತೆಗೆದುಕೊಳ್ಳುವುದಾಗಲಿ ಅಥವಾ ಬೇಳೆಯನ್ನು ಬೇಗನೆ ಬೇಯಿಸುವುದಕ್ಕಾಗಿ ಪಾತ್ರೆಯನ್ನು ಮುಚ್ಚಿಡುವುದಾಗಲಿ ಅನುಭವದಿಂದ ತಿಳಿದ ವಿಷಯಗಳಾದರೂ, ಇವೆಲ್ಲವುಗಳಲ್ಲಿ ವಿಜ್ಞಾನದ ತತ್ತ್ವಗಳು ಅಡಗಿದುದು ಮಾತ್ರ ಎಲ್ಲರಿಗೂ ತಿಳಿದ ವಿಷಯವಲ್ಲ. ಎಂದರೆ ಇವರೆಲ್ಲರೂ 'ವಿಜ್ಞಾನಿ' ಇದ್ದೂ 'ವಿಜ್ಞಾನಿ' ಎಂಬ ತಿಳಿವಳಿಕೆ ಮಾತ್ರ ಇಲ್ಲದವರು. ಅದರಂತೆಯೆ, ತನಗಿರುವ ದೂರದೃಷ್ಟಿಯ ಸಹಾಯದಿಂದ ತನ್ನ ಆಹಾರವನ್ನು ಹುಡುಕಲೋಸುಗ ಆಕಾಶದಲ್ಲಿ ಹಾರಾಡುವ ಹದ್ದಿಗೆ, ಇಂದಿನ ವಿಮಾನರಚನೆಗೆ ತಾನು ಗುರುವಾಗಿದ್ದೇನೆಂಬ ಕಲ್ಪನೆಯಾದರೂ ಹೇಗೆ ಬರಬೇಕು? ಹೀಗೆ ಸೂಕ್ಷ್ಮದೃಷ್ಟಿಯಿಂದ ವಿಚಾರ ಮಾಡಿದಲ್ಲಿ, ನಾವೆಲ್ಲರೂ ತಿಳಿದಾಗಲಿ ತಿಳಿಯದೆಯಾಗಲಿ ಹೇಗೆ ನಿಸರ್ಗನಿಯಮಗಳಿಂದ ಬಂಧಿತರಾಗಿದ್ದೇವೆನ್ನುವುದು ಕಂಡುಬರುವುದು. ಈ ಬಂಧನದ ರೀತಿ ತಿಳಿದಲ್ಲಿ, ಆ ನಿಯಮಗಳನ್ನು ನಮ್ಮ ಸುಖಕ್ಕನುಗುಣವಾಗಿ ಮಾರ್ಪಡಿಸಲು ಸಾಧ್ಯ.

ವೈಜ್ಞಾನಿಕ ಜ್ಞಾನದ ಆವಶ್ಯಕತೆ

ಇಂದು ಪ್ರಪಂಚವನ್ನು ನಿಜವಾಗಿಯೂ ಕಣ್ತೆರೆದು ನೋಡಿದಲ್ಲಿ, ಎಲ್ಲರೂ ತಮ್ಮ ಹೊಟ್ಟೆಯ ಸಲುವಾಗಿ—ಯಾವುದೇ ರೀತಿಯಲ್ಲಿ ಆಗಲೊಲ್ಲದೇಕೆ—ದುಡಿಯಬೇಕೆನ್ನುವುದು ತಿಳಿದು ಬರುವದು. ಅಧಿಕಾರಿಗಳೆಂದು, ನೌಕರರೆಂದು, ಅಧ್ಯಾಪಕರೆಂದು, ಗಿರಣಿಗಳಲ್ಲಿ ಕೆಲಸ ಮಾಡುವವರೆಂದು, ಲೇಖಕರೆಂದು (?), ವಿಜ್ಞಾನಿಗಳೆಂದು, ರಾಜಕಾರಣಿಗಳೆಂದು, ಬಂಡವಾಳಗಾರರೆಂದು ಇನ್ನೂ ಅನೇಕ ರೀತಿಯಲ್ಲಿ ದುಡಿಯುವುದು ಮೊದಲು ಹೊಟ್ಟೆಯ ನಿಮಿತ್ತವಾಗಿ, ಆಮೇಲೆ ಅಧಿಕಾರ, ಕೀರ್ತಿ ಇವುಗಳಿಗೋಸುಗ (ಹಲವು ಅಪವಾದಗಳು ಉಂಟು). ಅದರಂತೆಯೇ ಸಣ್ಣಮಕ್ಕಳು ತಮ್ಮ ಶಾಲೆಯ ಅಭ್ಯಾಸಮಾಡಿ ಇಲ್ಲವೆ ಬೇರೊಂದು ರೀತಿಯಿಂದ, ಹೆಣ್ಣುಮಕ್ಕಳು (ಸಾಮಾನ್ಯವಾಗಿ) ಮನೆಯಲ್ಲಿ ಕೆಲಸಮಾಡುವುದರಿಂದ ಮತ್ತು ಮುದುಕರು ಸಣ್ಣಮಕ್ಕಳೊಡನೆ ಮಕ್ಕಳಂತೆ ಆಟವಾಡುವುದರಿಂದ ಇಂತಹ ಇನ್ನೂ ಅನೇಕ ರೀತಿಯಲ್ಲಿ ತಮ್ಮ ಹೊಟ್ಟೆಯ ಸಲುವಾಗಿ ಕೆಲಸ ಮಾಡುವರು. ಇವರ ಹೊರತಾಗಿ ಸಮಾಜದ ಸುಗಮಸಂಚಾಲನೆಗೆ ಬೇರೆ ಬೇರೆ ಜನರು ಅವಿಶ್ರಾಂತವಾಗಿ ದುಡಿಯುವರು ಎನ್ನುವುದು ಕಂಡುಬರುವುದು. ಈಗ ನನ್ನ ಉದಾಹರಣೆಯಿಂದಲೆ ಈ ಮಾತನ್ನು ವಿಶದೀಕರಿಸುವೆ: ನನ್ನ ಕೆಲಸವು ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಕಲಿಸುವುದು ಮತ್ತು ತಿಂಗಳಿಗೆ ಒಂದು ಸಲ ವೇತನವನ್ನು ತರುವುದು. ಕೇವಲ ರೊಕ್ಕದಿಂದ ಏನೂ ಆಗಲಾರದು. ಅದರಿಂದ ನಾನು ನನ್ನ ಸೌಕರ್ಯಗಳನ್ನು ಕೊಂಡುಕೊಳ್ಳಬೇಕು. ಈ ಸೌಕರ್ಯಗಳನ್ನು ತಯಾರಿಸುವಲ್ಲಿ ಶ್ರಮಪಡುವವರು ಬೇರೆ ಜನರು. ನಾನು ಕೇವಲ ಕೊಳ್ಳುವವನು. ಹೀಗೆ ವಿಚಾರ ಮಾಡಿದಲ್ಲಿ ನಮಗೆ ಕಂಡುಬರುವುದೆಂದರೆ, ಯಾವನು ಪ್ರತಿಫಲಕ್ಕೋಸುಗ ಒಂದು ಕೆಲಸದಲ್ಲಿ ತೊಡಗಿರುವನೋ ಅವನು ತನ್ನ ಸೌಕರ್ಯಗಳನ್ನು ಕೊಳ್ಳಲೇ ಬೇಕಾಗುವುದು. ಎಂದರೆ, ನನಗೆ ಊಟದ ಸೌಕರ್ಯಗಳನ್ನು ಪೂರೈಸಲು, ಅರಿವೆಗಳನ್ನು ಒದಗಿಸಲು ಇಲ್ಲವೆ ಇಂತಹ ಬೇರೆ ಅನೇಕ ಸೌಕರ್ಯಗಳಿಗಾಗಿ ಬೇರೆ ಜನರು ದುಡಿಯಬೇಕಾಗುವುದು. ಈಗ ಅದರಂತೆಯೆ ಬೇರೊಬ್ಬನಿಗೆ ತನ್ನ ಮಗನು ಕಾಲೇಜಿನಲ್ಲಿ ಕಲಿಯಬೇಕೆಂದೆನಿಸಿದಾಗ,

ಅವನಿಗ ಮಗನಿಗೋಸುಗ ವಿಷ್ಯೆಯನ್ನು ಕೊಳ್ಳಬೇಕಾಗುವುದು. ಎಂದರೆ ಇಂದು ಪ್ರಪಂಚದಲ್ಲಿ ತನಗೆ ಬೇಕಿರುವ ಎಲ್ಲ ಸಾಧನಗಳನ್ನೂ ತಾನೇ ಪೂರಯಿಸಿಕೊಳ್ಳುವುದು ಸಾಧ್ಯವೇ ಇಲ್ಲ. ಇದು ವ್ಯಕ್ತಿಯ ಮಾತಾಯಿತು. ಇನ್ನು ಯಾವುದೊಂದು ದೇಶದ ವಿಷಯವಾಗಿ ವಿಚಾರಮಾಡಿದರೆ, ಹಿಂದಿನ ಕಾಲದಲ್ಲಿ ಅದು ಸಾಮಾನ್ಯವಾಗಿ ತನ್ನ ಸೌಕರ್ಯಗಳನ್ನು ಪೂರಯಿಸಿಕೊಳ್ಳಲು ಸಮರ್ಥವಿದ್ದರೆ, ಇಂದು ವಿಜ್ಞಾನದ ಪುರಸ್ಕಾರದಿಂದ ಪ್ರಚಲಿತವಿರುವ ನಮ್ಮ ಸೌಕರ್ಯಗಳ ಮೂಲಕ ಯಾವ ದೇಶವೂ ಎಲ್ಲ ರೀತಿಯಲ್ಲಿಯೂ ಸ್ವಾವಲಂಬಿಯೆನಿಸಲಾರದು. ಎಂದರೆ ವೈಜ್ಞಾನಿಕ ಸೌಕರ್ಯಗಳನ್ನು ಉಪಯೋಗಿಸಲು ನಮ್ಮ ಜೀವನವನ್ನು ಸಾಗಿಸುವುದು ಕಠಿಣವಾಗತೊಡಗಿದೆ. ಪರಿಸ್ಥಿತಿಯು ಹೀಗಿರುವುದರಿಂದ ಮೇಲೆ ನಮಗೆ ದೊರೆಯಬಹುದಾದ ಸೌಕರ್ಯಗಳನ್ನು ಉಪಯೋಗಿಸುವದಕ್ಕಾದರೂ ಜ್ಞಾನದ ಅವಶ್ಯಕತೆಯು ಇಲ್ಲವೆ? ಉದಾಹರಣೆಗೆಂದರೆ ವಿದ್ಯುದ್ದೀಪಗಳನ್ನು ತಜ್ಞರು ಕಾರಖಾನೆಗಳಲ್ಲಿ ತಯಾರಿಸಬಹುದು; ಆದರೆ ಹೀಗೆ ತಯಾರಿಸಿದ ದೀಪಗಳನ್ನು ಮನೆಯಲ್ಲಿ ಉಪಯೋಗಿಸುವದಕ್ಕಾದರೂ ತಿಳಿಯಲು ಬೇಡವೆ? ಇದರಂತೆಯೇ ಮನೆಯಲ್ಲಿ ಯಾರಿಗಾದರೂ ಜ್ವರಬಂದಲ್ಲಿ, ಥರ್ಮಾಮೀಟರನ್ನು ಉಪಯೋಗಿಸಿ ಉಷ್ಣತೆಯ ಅಂಶವನ್ನು ತಿಳಿಯುವುದೂ, ಇಲ್ಲವೆ ಒಂದು ಗಡಿಯಾರ ಕೈಕೊಟ್ಟಲ್ಲಿ ಕೊಡುವುದೂ ಅಥವಾ ಸಾಬಾಣವನ್ನು ಮಿತಿಯಿಂದ ಹೇಗೆ ಉಪಯೋಗಿಸಬೇಕು ಮೊದಲಾದ ಸಾಮಾನ್ಯ ಮತ್ತು ಆವಶ್ಯಕವಾಗಿ ಇರಬೇಕಾದ ಜ್ಞಾನವು ನಮ್ಮಲ್ಲಿಯ ನೂರರಲ್ಲಿಯ ಎಷ್ಟು ಜನರಿಗೆ ಇದೆ? ಇಂತಹ ಸಾಧನೆಗಳು ಇದ್ದೂ ಅವುಗಳ ಉಪಯೋಗವು ತಿಳಿಯದಿದ್ದಲ್ಲಿ, ಅವು ಇದ್ದೂ ಇಲ್ಲದಂತೆಯೇ ಎನಿಸುವವು. ಈ ಮಾತುಗಳು ಕೇವಲ ಗಂಡಸರಿಗಷ್ಟೇ ಸಂಬಂಧಪಟ್ಟವೆಂದಲ್ಲ, ಹೆಣ್ಣುಮಕ್ಕಳಿಗೆ ಸಹ ಸಂಬಂಧಪಟ್ಟವು ಇವೆ. ಎಂದರೆ, ತಜ್ಞರಿಂದಲೇ ಸರಿಪಡಿಸಲು ಯೋಗ್ಯವಿದ್ದ (ರೇಡಿಯೋ ಇಲ್ಲವೇ ಟೆಲಿಫೋನ ಇಂಥ ಸಾಧನಗಳು) ಸಾಧನೆಗಳನ್ನು ಬಿಟ್ಟು, ನಮ್ಮ ನಿತ್ಯದ ವೈಜ್ಞಾನಿಕ ಸೌಕರ್ಯಗಳ ಉಪಯುಕ್ತತೆಯು ತಿಳಿದಲ್ಲಿ ನಾವು ಹೆಚ್ಚು ಸುಖದಿಂದ ಇರಲು ಸಾಧ್ಯವಿದೆ.

ವೈಜ್ಞಾನಿಕ ವೃತ್ತಿ: ಯಾವುದೊಂದು ಕೆಲಸವನ್ನು ವ್ಯವಸ್ಥಿತವಾಗಿ, ಅಚ್ಚುಕಟ್ಟಾಗಿ ಮಾಡಲು ಕಲಿಯುವುದು ಎಷ್ಟು ಹಿತಕರವೆನ್ನುವುದನ್ನು ಪ್ರತ್ಯೇಕವಾಗಿ ಹೇಳುವ ಅಗತ್ಯವೇ ಇಲ್ಲ. ಎಲ್ಲ ಸೌಕರ್ಯಗಳಿದ್ದೂ ವ್ಯವಸ್ಥೆಯೊಂದು ಇಲ್ಲದಲ್ಲಿ, ಎಂತಹ ಅನಾನುಕೂಲವು ಪರಿಣಮಿಸುವುದೆಂಬುದು ತಿಳಿದ ವಿಷಯವೇ. ಹೀಗೆ ವೈಜ್ಞಾನಿಕ ಮಾರ್ಗದಿಂದ ಕೆಲಸ ಮಾಡುವ ಪರಿಪಾಠವನ್ನು ಅಭ್ಯಾಸಿಸಿದಲ್ಲಿ ವೈಜ್ಞಾನಿಕ ಬೋಧೆಗಳ ಎಲ್ಲ ಸೌಕರ್ಯಗಳನ್ನು ಹೆಚ್ಚು ಉಪಯುಕ್ತ ರೀತಿಯಲ್ಲಿ ಅನುಭವಿಸಲು ಸಿಕ್ಕುವುದಲ್ಲದೆ, ಇದು ಹೆಚ್ಚಿನ ಸೌಕರ್ಯಗಳಿಗೆ ಮಾರ್ಗದರ್ಶಿಯಾಗುವುದು. ಈ ತರದ ಶಿಕ್ಷಣವೊಂದಲು ಕೆಲವೇ ದಿವಸ ಶ್ರಮಪಟ್ಟಲ್ಲಿ, ಅದರಿಂದ ದೊರೆಯುವ ಪ್ರತಿಫಲಕ್ಕೋಸ್ಕರ ನಾವೇ ಅದರ ಬೆನ್ನು ಹತ್ತುವಂತಾಗುವುದು.

ವೈಜ್ಞಾನಿಕ: ಎಲ್ಲ ವೈಜ್ಞಾನಿಕರೂ ಪ್ರತಿಫಲಕ್ಕೋಸುಗ ಇಲ್ಲವೆ ಯಾವುದೊಂದು ಸಲಕರಣೆಯನ್ನು ತಯಾರಿಸಲೋಸುಗವೇ ಕೆಲಸ ಮಾಡುತ್ತಾರೆಂದಲ್ಲ. ಎಷ್ಟೋ ಸಲ ಕೇವಲ ನಿಸರ್ಗಕ್ರಮವನ್ನು ತಿಳಿಯುವ ಮನಸಿನ ಬಯಕೆಯೇ ಹೊಸ ಬೋಧಗಳಿಗೆ ಕಾರಣವಾಗುವುದಲ್ಲದೆ, ಇಂತಹ ತಿಳಿವಳಿಕೆಯಿಂದ ದೊರೆಯಬಹುದಾದ ಸಂತೋಷವೇ ಇದಕ್ಕೆ ಪ್ರತಿಫಲವು. ಇದು ಫಲಿಸಲು ಅತ್ಯಂತ ಸಾಮಾನ್ಯವಾದ ಸಂಗತಿಗಳಿಂದ ಪ್ರಾರಂಭ ಮಾಡುವುದೂ ಮತ್ತು ತಮ್ಮ ನಿರೀಕ್ಷಣೆಯ ಫಲವಾಗಿ ಕಾರಣ-ಕಾರ್ಯಗಳ ಸಂಬಂಧದ ರೀತಿಯನ್ನು ಶೋಧಿಸುವುದೂ ಇದರಿಂದ ದೊರೆತ ಪರಿಣಾಮಗಳನ್ನು ಹೆಚ್ಚಿನ ಬೋಧಕ್ಕಾಗಿ ಉಪಯೋಗಿಸುವುದೂ. ಇವೇ ಮೊದಲಾದ ರೀತಿಯಲ್ಲಿ ಜ್ಞಾನವು ಹೆಚ್ಚುವುದು. ಈ ತೆರದ ಜ್ಞಾನವೇ ಇಂತಹ ಶ್ರಮಕ್ಕೆ ಪ್ರತಿಫಲವೆಂದು ತಿಳಿದು ಕೆಲಸ ಮಾಡುವ ಬೋಧಕರೂ ಇರುವರು. ಇದರ ಹೊರತಾಗಿ ಇಂತಹ ಬೋಧಗಳನ್ನು ಉಪಯೋಗಿಸಿ, ವ್ಯಾವಹಾರಿಕ ಸೌಕರ್ಯಗಳನ್ನು ಕಲ್ಪಿಸುವ [illegible] ಶೋಧಕರೂ ಇರುವರು. ಆದರೆ ಜನಸಾಮಾನ್ಯರಿಗೆ ಮಾತ್ರ ಕೇವಲ ಜ್ಞಾನವೇ ಪ್ರತಿಫಲವೆಂದು ತಿಳಿದುಕೊಳ್ಳುವಂತಹ ಮನೋಭಾವವು ಅಗತ್ಯವಿಲ್ಲದಿದ್ದರೂ, ಈ ಜನರ ಬೋಧದ ಫಲವಾಗಿ ನಿರ್ಮಿತವಾದ ನಿತ್ಯದ ಸೌಕರ್ಯಗಳನ್ನು ಉಪಯೋಗಿಸುವದಕ್ಕಾದರೂ ತಿಳುವಳಿಕೆಯು ಮುಟ್ಟಿದಲ್ಲಿ, ವೈಜ್ಞಾನಿಕ ಸಮಾಜದಲ್ಲಿ ನಮಗೆ ನಮ್ಮ ಜೀವನವನ್ನು ಸುಗಮವಾಗಿ ಮತ್ತು ಹೆಚ್ಚಾಗಿ ವ್ಯಾವಹಾರಿಕವಾಗಿ ಸಾಗಿಸುವುದು ಸಾಧ್ಯವಾಗುವುದು.

ಲೇಖನದ ಉದ್ದೇಶ: ಈ ಲೇಖನವು ನಾನು ಮುಂದೆ ಬರೆಯಲಿರುವ ಲೇಖನಗಳಿಗೆ ಉಪೋದ್ಘಾತವೆಂದೇ ತಿಳಿಯಬೇಕು. ಯಾವುದೊಂದು ನಿತ್ಯೋಪಯೋಗಿ ವಸ್ತುವನ್ನು ವರ್ಣಿಸಿ, ಅದಕ್ಕೆ ಸಂಬಂಧಪಟ್ಟ ಇತಿಹಾಸವನ್ನು ಮತ್ತು ಅದನ್ನು ಶೋಧಿಸಿದವನ ವಿಷಯವಾಗಿ ಹಲವು ಮಾತುಗಳನ್ನು ತಿಳಿಸುವುದೇ ನನ್ನ ಮುಖ್ಯ ಉದ್ದೇಶ. ಈ ತೆರದ ವಿವೇಚನೆಯಿಂದ ಜನಸಾಮಾನ್ಯರಿಗೆ ಆ ವಿಷಯದ ಕಲ್ಪನೆಯಾಗುವುದಲ್ಲದೆ, ಇಂತಹ ಶೋಧಕ್ಕಾಗಿ ಬೋಧಕನು ಹೇಗೆ ಹೇಗೆ ದುಡಿದನು, ಎಂತಹ ಎಡರುಗಳನ್ನೂ ಲೆಕ್ಕಿಸದೆ ಎಂತಹ ಪರಿಸ್ಥಿತಿಯಲ್ಲಿ ಕೆಲಸ ಮಾಡಿದನು?--ಇತ್ಯಾದಿ ತಿಳಿಯುವುದರಿಂದ, ಇಂತಹ ಇತಿಹಾಸವು ಸಹ ಇಂತಹ ಶೋಧಕ ಬುದ್ಧಿಗೆ ಮಾರ್ಗದರ್ಶಕವಾಗುವುದು. ಏಕೆಂದರೆ, ಚರ್ಚಿನಲ್ಲಿ ತೂಗಾಡುವ ಕಂದೀಲು ಇಂದಿನ ವೇಳೆಯನ್ನು ತೋರಿಸುವ ಸಾಧನಗಳಿಗೆ ಕಾರಣವಾಯಿತೆಂದು ಕೇಳಿದಲ್ಲಿ, ಹೀಗೆ ಕಂಡವನು ಯಾರು ಮತ್ತು ಇಂತಹ ತೂಗಾಡುವ ದೀಪದ ಕಥೆಯೇನು? .. ಎಂದು ಕೇಳಲು ಯಾರು ಉತ್ಸುಕರಾಗಲಿಕ್ಕಿಲ್ಲ? ಇಲ್ಲವೆ ಕೇಳಿ ಸಂತೋಷಪಡಲಿಕ್ಕಿಲ್ಲ? ಅದರಂತೆಯೆ ಇಂದು ನಾವೆಲ್ಲರೂ ಉಪಯೋಗಿಸುವ ವಿದ್ಯುದ್ದೀಪಗಳನ್ನು ಕಂಡು ಹಿಡಿದವನು ಚಿಕ್ಕಂದಿನಲ್ಲಿ ವರ್ತಮಾನ ಪತ್ರಗಳನ್ನು ಮಾರಿ ತನ್ನ ಜೀವನವನ್ನು ಸಾಗಿಸುತ್ತಿದ್ದನೆಂದು ತಿಳಿದಲ್ಲಿ, ಇಂತಹ ದೀಪದ ಮತ್ತು ಅದರ ಶೋಧಕನ ಕತೆಯನ್ನು ಕೇಳುವ ಉತ್ಸಾಹವು ನಮ್ಮಲ್ಲಿ ಮೂಡಲಿಕ್ಕಿಲ್ಲವೇ? ಹಾಗೆಯೆ ಕ್ಯಾನ್ಸರ್ ರೋಗಕ್ಕೆ ಉಪಯುಕ್ತವಾದ ಚಿಕಿತ್ಸೆಯನ್ನು ಶೋಧಿಸಲೋಸುಗ ತನ್ನ ಜೀವನವನ್ನೂ ಲೆಕ್ಕಿಸದ ದುಡಿದ ಸಾಧ್ವೀಮಣಿಯ ಚರಿತ್ರೆಯನ್ನು ಓದಲು ಯಾರು ಉತ್ಸಾಹಪೂರಿತರಾಗಲಿಕ್ಕಿಲ್ಲ? ಮೇಲಾಗಿ ಈ ತೆರದ ವಿವೇಚನೆಯಿಂದ ಎಲ್ಲರಲ್ಲಿಯೂ ವೈಜ್ಞಾನಿಕ ವೃತ್ತಿಯು ಮೂಡಿ, ನಮಗೆ ಈ ನಮ್ಮ ಅಲ್ಪಕಾಲಿಕ ಮನೆಯಾದ ಭೂಮಿಯಲ್ಲಿ ಹೆಚ್ಚು ಸುಖವಾಗಿ ಇರಲು ಸಾಧ್ಯವಾಗುವುದೆಂದು ನಾನು ನಂಬಿದ್ದೇನೆ.

ಆಸ್ಥೆಯನ್ನು ವಹಿಸಿ—ಅನುಕೂಲವಾಗಿಯೆ ಆಗಲಿ ಪ್ರತಿಕೂಲವಾಗಿಯೆ ಆಗಲಿ—ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿದ್ದಾರೆ? ಓದುವವರ ಸಂಖ್ಯೆಯೇನೋ ಬೆಳೆಯುತ್ತಿದೆ ಎಂದು ಅಲ್ಲಲ್ಲಿಯ ವಾಚನಾಲಯಗಳ ಸಂಚಾಲಕರು ಹೇಳುವುದುಂಟು. ಆದರೆ ಓದುತ್ತಿರುವ ವಿಷಯ ಯಾವುದು, ಸಾಧಿಸಬೇಕಾದ ಧ್ಯೇಯಸಾಧನೆಯಲ್ಲಿ ಅದರಿಂದ ಯಾವ ತರದ ಪ್ರಯೋಜನವನ್ನು ತಾವು ಪಡೆಯುತ್ತಿದ್ದೇವೆಂಬುದರ ಅರಿವನ್ನಿಟ್ಟುಕೊಂಡು ಓದುತ್ತಿದ್ದಾರೆಯೆ?—ಎಂಬ ಎಷ್ಟೋ ವಿಷಯಗಳ ಬಗೆಯಲ್ಲಿ ನಿರ್ಣಯವಾದ ಪ್ರಮಾಣವಿಲ್ಲ. ಏನೋ ಪ್ರಕಟವಾದ ಹತ್ತಾರು ಕಥೆ-ಕಾದಂಬರಿಗಳನ್ನು ತಿರುವಿಹಾಕುವುದರಲ್ಲಿ ತಮ್ಮ ಹೊತ್ತನ್ನು ಕಳೆಯುವುದಕ್ಕಾಗಿ ಒಂದು ಸಾಧನವನ್ನು ಹುಡುಕುತ್ತಿದ್ದಾರೆಯೇ ಹೊರತು, ಒಟ್ಟಿನಲ್ಲಿ ಸಾಹಿತ್ಯದ ರೀತಿ-ನೀತಿಗಳ ವಿಚಾರದಲ್ಲಿಯಾಗಲಿ, ಜನಜೀವನಕ್ಕೆ ಒಂದು ದಾರಿ ತೋರಿಸುವ ವಿಚಾರದಲ್ಲಿಯಾಗಲಿ, ಯಾವ ಆಸ್ಥೆಯನ್ನೂ ತೋರುತ್ತಿರುವುದಿಲ್ಲ. ಒಂದು ಜನದ ಸಾಹಿತ್ಯಜೀವನದ ಮಟ್ಟ ಆ ಸಾಹಿತ್ಯದ ನಿರ್ಮಾತೃಗಳನ್ನಷ್ಟೇ ಅಲ್ಲದೆ ಅದರ ಓದುಗರನ್ನೂ ಅವಲಂಬಿಸುತ್ತದೆಂಬುದನ್ನು ನಾವು ವಿಶೇಷವಾಗಿ ಮರೆಯುತ್ತಿದ್ದೇವೆ. ರಾಜಕೀಯದಲ್ಲಿ ಒಂದು ಮಾತನ್ನು ಹೇಳುವುದುಂಟು. ಒಂದು ಜನಾಂಗದ ಸರಕಾರ ವ್ಯವಸ್ಥೆ ಆ ಜನಾಂಗದ ಯೋಗ್ಯತೆಗೆ ಸರಿಯಾಗಿರುತ್ತದಂತೆ. ಸಾಹಿತ್ಯಕ್ಷೇತ್ರದಲ್ಲಿಯೂ ಅಷ್ಟೇ. ಜನ ತನ್ನ ಯೋಗ್ಯತೆಯನ್ನು ಮೀರಿ ಸಾಹಿತ್ಯಜೀವನವನ್ನು ಅಪೇಕ್ಷಿಸುವುದು ವ್ಯರ್ಥವೇ. ಆದುದರಿಂದ ಇಂದು ನಾವು ನಮ್ಮ ಸಾಹಿತ್ಯದ ಪ್ರಮಾಣದಲ್ಲಿಯಾಗಲಿ, ರೀತಿ-ನೀತಿಗಳಲ್ಲಿಯಾಗಲಿ ಅಸಂತುಷ್ಟಿಯನ್ನು ವ್ಯಕ್ತಮಾಡುವುದರ ಬದಲಾಗಿ, ಆ ಸಾಹಿತ್ಯಕ್ಕೆ ತಳಹದಿಯಾದ ಜೀವನದ ರೀತಿ-ನೀತಿಗಳನ್ನು ಭದ್ರವಾಗಿರಿಸಿಕೊಳ್ಳುವುದು ಹೆಚ್ಚಿನ ಮಹತ್ವದ ಕಾರ್ಯವೆಂದು ಹೇಳಬೇಕಾಗಿದೆ. ಈ ಕೆಲಸದಲ್ಲಿ ನಮ್ಮ ಯುವಕರು ಮುಂದುವರಿಯುವುದು ಅಗತ್ಯವಲ್ಲದೆ ಅವರಿಲ್ಲದೆ ಈ ಕೆಲಸ ಇನ್ನಿತರರಿಂದಾಗದು ಎಂದು ಸ್ಪಷ್ಟವಾಗಿ ಹೇಳಬಹುದು.

ನಮ್ಮ ಯುವಕರು ಯಾವ ರೀತಿ ತಮ್ಮ ನಿರುತ್ಸಾಹಕ್ಕೆ ತಾವೇ ಬಲಿಯಾಗುತ್ತಿದ್ದಾರೆಂಬುದಕ್ಕೆ ಬೇಕಾದಷ್ಟು ಉದಾಹರಣೆಗಳನ್ನು ಹೇಳಬಹುದು. ನಮ್ಮ ಸಾಹಿತ್ಯಪ್ರಪಂಚದಲ್ಲಿಯದೇ ಆದ ಒಂದು ಮಾತನ್ನು ಇಲ್ಲಿ ಎತ್ತಿ ಹೇಳಬಹುದು. ಕೆಲವು ಕಾಲ ಹಿಂದೆ ಜಯಂತಿಯಲ್ಲಿ ನಮ್ಮ ಲೇಖಕರ ಚುನಾವಣೆಯ ಏರ್ಪಾಡೊಂದನ್ನು ಮಾಡಿತ್ತು. ಆದರ ಫಲಿತಾಂಶವೂ ಯೋಗ್ಯ ಕಾಲದಲ್ಲಿ ಹೊರಬಿದ್ದಿತು. ಆದರೆ ಆ ಏರ್ಪಾಡಿನ ಮೂಲಕ ಹೊರಗೆ ಬಂದ ಫಲಿತಾಂಶ ಬೇರೆಯೇ. ಕನ್ನಡ ಪುಸ್ತಕಗಳನ್ನು ಓದುವವರ ಸಂಖ್ಯೆಯನ್ನು ಲಕ್ಷ್ಯದಲ್ಲಿರಿಸಿಕೊಂಡು ಆ ಚುನಾವಣೆಯಲ್ಲಿ ತಮ್ಮ ಮತವನ್ನು ಕೊಟ್ಟವರ ಸಂಖ್ಯೆಯನ್ನು ನೋಡಿದರೆ, ನಮ್ಮ ಸಾಹಿತ್ಯದ ವಿಚಾರದಲ್ಲಿ, ನಮ್ಮ ಲೇಖಕರ ಬಗೆಯಲ್ಲಿ ನಮ್ಮ ವಿದ್ಯಾವಂತರು ಯಾವ ತೆರದ ಆಸ್ಥೆ-ಆದರಗಳನ್ನು ಇಟ್ಟುಕೊಂಡಿದ್ದಾರೆಂಬುದು ಸ್ಪಷ್ಟವಾಯಿತು. ಕೆಲವರಿಗೆ ಇದು ಹುಡುಗಾಟವೆನಿಸಿರಬೇಕು. ಕೆಲವರು ಇನ್ನು ಇನ್ನಾವ ಕಾರಣದ ಮೂಲಕವಾಗಿಯೊ ತಮ್ಮ ಅಭಿಪ್ರಾಯವನ್ನು ಹೇಳಲಿಕ್ಕಿಲ್ಲ. ಆದರೆ ಎಲ್ಲದರ ಅಭಿಪ್ರಾಯ ಒಂದೇ: ನಮ್ಮ ಜನಕ್ಕೆ ನಮ್ಮ ಸಂಸ್ಕೃತಿಯ ವಿಚಾರದಲ್ಲಿ, ಸಾಹಿತ್ಯವನ್ನೂ ಅದರ ಲೇಖಕರನ್ನೂ ಉತ್ತೇಜಿಸಿಕೊಂಡು ಹೋಗುವ ಬಗೆಯಲ್ಲಿ ಇರಬೇಕಾದ ಉತ್ಸಾಹ ಇನ್ನೂ ಬರಲಿಲ್ಲ ಎಂಬುದೇ. ಇನ್ನೂ ಒಂದು ಉದಾಹರಣೆಯನ್ನು ಕೊಡಬಹುದು. ಮೊನ್ನೆ ತಾನೆ ಮುಂಬಯಿಯಲ್ಲಿ ನಡೆದ ಹೊರನಾಡ ಕನ್ನಡಿಗರ ಸಮ್ಮೇಲನದಲ್ಲಿ ಎಷ್ಟು ಜನ ತರುಣರು ತಮ್ಮ ಮೇಲಿದ್ದ ಹೊಣೆಯನ್ನು ಸರಿಯಾಗಿ ನಿರ್ವಹಿಸಿದರೆಂಬುದು ಆ ಸಮ್ಮೇಲನಕ್ಕೆ ಬಂದ ಕೆಲವಾರು ಜನರಿಗೆ ಕಳವಳವನ್ನುಂಟುಮಾಡದಿರದು. ಇಂತಹ ಸಂದರ್ಭಗಳಲ್ಲಿ, ನಮ್ಮ ಕಿರಿಯರು ಕನ್ನಡ ಮುಂದಾಗಬೇಕೆಂಬ ಆಸೆಯನ್ನಿಟ್ಟುಕೊಂಡವರಾಗಿದ್ದಲ್ಲಿ ನೂರುಗಟ್ಟಲೆ ಏಕೆ ಸಾವಿರಗಟ್ಟಲೆ ಮುನ್ನುಗ್ಗಿ ಬಂದು, ಕನ್ನಡದ ಬೇಡಿಕೆಯನ್ನು ಮೂಲೆ ಮೂಲೆಗಳಲ್ಲಿಯೂ ಕೇಳಿಸಬೇಕು. ಹಿಂದಿನ ಘನತೆಯನ್ನು ವಿಚಾರಿಸಿ ನಮ್ಮ ಜನಕ್ಕೆ ಯಾರೂ ಇನ್ನು ಮುಂದಿನ ಸ್ಥಾನಮಾನಗಳನ್ನು ಕೊಡುವುದಿಲ್ಲ. ಅವುಗಳಿಗಾಗಿ ನಾವು ಇಂದು ಹೋರಾಡಬೇಕಾಗಿದೆ. ಆ ಕೆಲಸವನ್ನು ನಾವು ಇಂದು ಮಾಡದೆ ಹೋದರೆ ಇನ್ನೆಂದಿಗೂ ಮಾಡಲಾರೆವು. ಆದಕ್ಕೆಂತಲೇ ನಮ್ಮ ಸಾಂಸ್ಕೃತಿಕ ಜೀವನ ಒಂದು ಸಂಧಿಕಾಲವನ್ನು ಸಂಧಿಸಿದೆ ಎಂದು ಮೊದಲು ಹೇಳಿದೆ. ಇಂದಿನ ನಮ್ಮ ನಿರುತ್ಸಾಹ ನಮ್ಮನ್ನು ನಿರಾಶೆಗಲ್ಲದೆ ಇನ್ನೆಲ್ಲಿಗೂ ಒಯ್ಯುವುದು ಸಾಧ್ಯವಿಲ್ಲ. ಇಂದಿನ ನಮ್ಮ ಒಡಕುಗಳು, ಭಿನ್ನಾಭಿಪ್ರಾಯಗಳು, ಕಡಕಿಗಲ್ಲದೆ ಇನ್ನೆಲ್ಲಿಯೂ ಕರೆದೊಯ್ಯುವುದಿಲ್ಲ. ನಾವು ಕನ್ನಡಿಗರೆಂದು ಹೆಮ್ಮೆಯಿಂದ ಜನ ಹೇಳಿಕೊಳ್ಳುವ ರೀತಿಯಲ್ಲಿ, ನಾವು ನಮ್ಮ ಬದುಕನ್ನು ಇಂದು ಬೆಳೆಸಿಕೊಂಡು ಹೋಗಬೇಕಾಗಿದೆ. ಇದರ ಹೊಣೆ ನಮ್ಮ ಯುವಕ ವಿದ್ಯಾವಂತರ ಮೇಲಿದೆ ಎಂಬ ಮಾತನ್ನು ಎಷ್ಟು ಸಾರಿಯೂ ಹೇಳಬೇಕಾಗಿದೆ.

(೨೦ನೆಯ ಪುಟದಿಂದ ಮುಂದುವರಿದುದು)

ಹೋಗಿ ಕಲ್ಲಾಗಿ ಮುಖ ತಪ್ಪಿಸಿರಬಾರದೇಕೆ ?...ಮಲೆನಾಡು ಇಂದು ಮಲೇರಿಯಾ ನಾಡೆಂದು ಹೆಸರುಗೊಂಡಿದೆ.... ಹಿಂದಿನವರು ಅಲ್ಲಿ ಸಾಮ್ರಾಜ್ಯಗಳನ್ನು ನಿಲ್ಲಿಸುವ ವೀರಾವೇಶ ಮುದ್ರೆಯವರಾಗಿದ್ದರೆ, ಇಂದಿನವರು ಕ್ವಿನೈನ್‌ದ ಕೋಳಿನೋರೆಯವರಾಗಿದ್ದಾರೆ. ಅದೇ 'ಕ್ವಿನೈನ್ ಡೋಜಿ'ಗಾಗಿ ಹಿಂದಿನ ಕೂಗು ಕೇಳಿಸದಷ್ಟು 'ಡೆಫ್' ಆಗಿದ್ದಾರೇನೋ ಇಂದಿನವರು!



ಮುಕ್ತಾಯ ಯಾರಿಗೆ?

ಸುಮಾರು ಆರು ವರ್ಷಗಳ ವರೆಗೆ ನಡೆದ ಯುರೋಪದ ಯುದ್ಧವು ಕಳೆದ ತಿಂಗಳ ಪ್ರಾರಂಭದಲ್ಲಿ ಜರ್ಮನರ 'ಶ್ರಾಹಿ' (unconditional surrender) ಯಿಂದ ಕೊನೆಗಂಡಿತು. ಆದರೂ, ಯುದ್ಧದ ಸಮಾಪ್ತಿಗಾಗಿ ಜನತೆಗೆ ಎಷ್ಟೊಂದು ಆನಂದಾತಿರೇಕವಾಗಬಹುದಾಗಿತ್ತೊ ಅಷ್ಟು ಆದಂತೆ ಯಾವ ವಿಜಯೋತ್ಸವದ ವರದಿಯಿಂದಲೂ ಎನ್ನಿಸುವುದಿಲ್ಲ. ಇದಕ್ಕೆ ಕೆಲವು ಕಾರಣಗಳೂ ಇವೆ: (೧) ಕಳೆದ ಕೆಲವು ತಿಂಗಳುಗಳಿಂದ ಜನತೆಯು ವಿಜಯವನ್ನು ನಿರೀಕ್ಷಿಸುತ್ತಲೆ ಇದ್ದಿತು, (೨) ಆರು ವರ್ಷಗಳ ಅಮಾನುಷ ಕೊಲೆಸುಲಿಗೆಗಳಿಂದ ಸಂಸ್ಕೃತರೆಂದು ಸ್ವಯಂಮನ್ಯರಾದ ಯುರೋಪೀಯ ನಾಗರಿಕರು ದಿಙ್ಮೂಢರಾಗಿದ್ದಾರೆ, ದಣಿದಿದ್ದಾರೆ, ನಾಚಿಕೆಗೊಂಡಿರಲೂ ಸಾಕು, (೩) ವಿಜಯದ ಸಮಯಕ್ಕೆಯೆ ಅಮೇರಿಕೆಯು ಅಧ್ಯಕ್ಷ ರೂಜ್‌ವೆಲ್ಟರನ್ನು ಕಳೆಕೊಂಡಿತು, (೪) ಅಮೇರಿಕಾ-ಇಂಗ್ಲಂಡ್-ಆಸ್ಟ್ರೇಲಿಯಾಗಳಿಗೆ ಇನ್ನೂ ಜಪಾನದೊಡನೆ ಯುದ್ಧವಿದೆ. (೫) ಯುರೋಪದ ರಾಜಕಾರಣದಲ್ಲಿ ತೊಡಕೂ ಬಿಕ್ಕಟ್ಟೂ ಬೆಳೆದಿವೆ. ಇವೆಲ್ಲ ಕಾರಣಗಳಿಗಾಗಿ ವಿಜಯವನ್ನು ಸಂಪಾದಿಸಿದ ರಾಷ್ಟ್ರಗಳಲ್ಲೂ ಹೆಚ್ಚಿನ ಉತ್ಸಾಹವಿಲ್ಲ. ಅದರಂತೆಯೆ ಹಿಂದುಸ್ತಾನ, ಬರ್ಮಾ ಮೊದಲಾದ ಪರತಂತ್ರ ರಾಷ್ಟ್ರಗಳಿಗೆ 'ಯುದ್ಧದ ಮುಕ್ತಾಯವೆಂದರೆ ದಾಸ್ಯದಿಂದ ಮುಕ್ತಾಯವಲ್ಲ' ಎಂಬ ಎಂಬ ಸಂಶಯ ಹೆಚ್ಚಾಗುವಂತಿದೆ. ಹೀಗಾಗಿ ಯುದ್ಧ ಮುಗಿದುದಕ್ಕೆ ನಿಜವಾದ ಆನಂದ ಒಂದು ರಶಿಯಾ ದೇಶಕ್ಕೆ ಮಾತ್ರ ಆಗಿದೆ ಎಂದು ಹೇಳಬಹುದು.

(೧೫—೫—೪೫)

ಧ್ಯೇಯಬದ್ಧ ಧೋರಣೆ

ಈ ಆರು ವರ್ಷಗಳಲ್ಲಿ ರಶಿಯಾದ ಧೋರಣೆ ಮಾತ್ರ ಏಕಸೂತ್ರವಾಗಿ, ಧ್ಯೇಯದ ಮೇಲೆ ದೃಷ್ಟಿಯನ್ನಿಟ್ಟುಕೊಂಡು ಸಾಗಿದೆ. ಆ ಧ್ಯೇಯವೆಂದರೆ, ರಶಿಯಾಕ್ಕೆ ಯುದ್ಧದ ಗಂಡಾಂತರವನ್ನು ತಪ್ಪಿಸಿ ಸುರಕ್ಷಿತತೆಯನ್ನು ತಂದುಕೊಳ್ಳುವುದು. ಈ ಧ್ಯೇಯಕ್ಕಾಗಿ ಸ್ಟಾಲಿನರು ಜಪಾನದೊಡನೆ ಅನಾಕ್ರಮಣದ ಒಪ್ಪಂದವನ್ನು ಮಾಡಿಕೊಂಡರು; ಇದೇ ಧ್ಯೇಯಕ್ಕಾಗಿ ತನ್ನ ಕಡುವೈರಿಯಾದ ಹಿಟ್ಲರನೊಡನೆ ರಶಿಯಾ ಸಂಧಾನ ಮಾಡಿಕೊಂಡಿತು; ಇಂದು ಇದೇ ಧ್ಯೇಯಕ್ಕಾಗಿ ಪೋಲಂಡಿನಲ್ಲಿ ತನಗೆ ಅನುಕೂಲವಾದ ಸರಕಾರವಿರಬೇಕೆಂಬ ಹಟದಿಂದ ಸ್ಟಾಲಿನರು 'ಪೋಲಿಶ್ ಬಿಕ್ಕಟ್ಟ'ನ್ನುಂಟುಮಾಡಿದ್ದಾರೆ. ಒಂದು ದೃಷ್ಟಿಯಿಂದ ನೋಡಿದಲ್ಲಿ ಇಂಗ್ಲಂಡಿಗಿಂತ ರಶಿಯಾದ ಧೋರಣವು ಸಮಂಜಸವಾದುದು ಎನ್ನಿಸುವದು; ಅದು ಎಂದಿನಿಂದಲೂ ಸ್ಪಷ್ಟವಾಗಿದೆ. ಚರ್ಚಿಲ್‌ರ ಧೋರಣವು ಹಾಗಿಲ್ಲ, ಅಮೇರಿಕೆಯ ಧೋರಣವೂ ಹಾಗಿಲ್ಲ. 'ಎಲ್ಲರಿಗೂ ಸ್ವಾತಂತ್ರ್ಯ ದೊರೆಯಲೆಂದು ಯುದ್ಧ ಮಾಡುವೆವು' ಎಂಬ ಅಮೇರಿಕೆಯೆ ಇಂದು 'ಟ್ರಸ್ಟಿಶಿಪ್' (ಪಾಲಕತನ) ನೆವದಿಂದ ಸಾಮ್ರಾಜ್ಯ ಶಾಹಿತ್ವವನ್ನು ಎತ್ತಿ ಹಿಡಿಯುತ್ತದೆ. ಅಟ್ಲಾಂಟಿಕ್ ಚಾರ್ಟರಿಗೆ ಸಹಿ ಹಾಕಿದ ಚರ್ಚಿಲ್‌ರು ಬರ್ಮಾ-ಹಿಂದುಸ್ತಾನಗಳಿಗೆ ಸ್ವಾತಂತ್ರ್ಯವನ್ನು ಕೊಡಲೊಪ್ಪರು. ತಾನು ಫಾಸಿಸ್ಟ ಎಂದು ಹೇಳಿಕೊಳ್ಳುವ ಸರ್ ಆಸ್ವಲ್ಡ್ ಮೊಸ್ಲೆ ಎಂಬವರನ್ನು ವಿಜಯದ ಕರುಣೆಯ ಬ್ರಿಟಿಶ್ ಸರಕಾರವು ಬಂಧನದಿಂದ ಮುಕ್ತಮಾಡಿತು. ಆದರೆ ಎಂದಿನಿಂದಲೂ ಫಾಸಿಸ್ಟರ ವೈರಿಯಾದ ಪಂಡಿತ ಜವಾಹರ ಮೊದಲಾದ ಕಾಂಗ್ರೆಸ್ ಮುಂದಾಳುಗಳು ಇನ್ನೂ ಜೇಲಿನಲ್ಲಿಯೆ ಕೊಳೆಯುತ್ತಿದ್ದಾರೆ! ಜಗತ್ತಿನ ರಾಷ್ಟ್ರಗಳಿಗೆ ಸ್ವಾತಂತ್ರ್ಯ ಎಂದರೆ ಹಿಂದುಸ್ತಾನಕ್ಕಿಲ್ಲ, ನಾಝಿವಾದ ಸೋತರೂ ಅದೇ ತತ್ತ್ವದ ಮೇಲೆ ನಿಂತ ಸಾಮ್ರಾಜ್ಯಶಾಹಿತ್ವವನ್ನು ಬಿಡುವಂತಿಲ್ಲ! ಇದೆಂತಹ ಧೋರಣೆ?

ವಿಜಯದ ಒರೆಗಲ್ಲು

ಆರು ವರ್ಷಗಳ ವರೆಗೆ ಒಂದೆ ಸಮನೆ ಚರ್ಚಿಲ್‌ರು ತತ್ತ್ವದ ದೊಡ್ಡ ದೊಡ್ಡ ಮಾತುಗಳನ್ನಾಡಿದ್ದಾರೆ. ಹಿಟ್ಲರನ ನಾಶವೆಂದರೆ ಸ್ವಾತಂತ್ರ್ಯ ತತ್ತ್ವದ ವಿಜಯ; ಮಾನವನ ಸಂಸ್ಕೃತಿಯು, ಮಾನವನ ಸ್ವಾತಂತ್ರ್ಯವು ಮತ್ತೊಮ್ಮೆ ಎಂದಿಗೂ ಇಂತಹ ಧಕ್ಕೆಗೆ ಗುರಿಯಾಗದಂತೆ ನಾಝಿವಾದವನ್ನು ನಿರ್ಮೂಲ ಮಾಡತಕ್ಕದ್ದು — ಎಂದು ಮುಂತಾಗಿ, ಚರ್ಚಿಲ್‌ರ ಅನೇಕ ಗರ್ಜನೆಗಳನ್ನು ನಾವು ಕೇಳಿದ್ದೇವೆ. ಇಂದು ಹಿಟ್ಲರ್, ಅವನ ಅನುಯಾಯಿಗಳು, ಅವನ ಸೈನ್ಯಶಕ್ತಿ, ನಾಝಿವಾದ — ಸರ್ವವೂ ನಿರ್ನಾಮವಾಗಿದೆ. ಆದರೆ ಸ್ವಾತಂತ್ರ್ಯ ತತ್ತ್ವವು ಜಗತ್ತಿನಲ್ಲಿ ತಲೆ ಎತ್ತಿ ನಿಂತಿದೆಯೆ? ಯುರೋಪದ ಚಿಕ್ಕ ರಾಷ್ಟ್ರಗಳಲ್ಲಿ ತಂತಮ್ಮ ಪ್ರಭಾವವು ಸ್ಥಿರಗೊಳ್ಳಬೇಕೆಂದು ಮಿತ್ರರಾಷ್ಟ್ರಗಳು ಕಿತ್ತಾಟದಲ್ಲಿ ಹೆಣಗುತ್ತಿವೆ. ಕಸುವುಳ್ಳವನೇ ಬದುಕ-

ಬೇಕೆಂದು ನಾತ್ಸಿವಾದ; ಆದರೆ ಆ ಕಲ್ಪನೆಯನ್ನು ತೆಗೆದೂಗೆವುದನ್ನು ಬಿಟ್ಟು ಮಿತ್ರರಾಷ್ಟ್ರಗಳು 'ಪಂಚಮಹಾಭೂತ' (Big Five) ರಾಷ್ಟ್ರಗಳು, ಮಿಕ್ಕವು ಚಿಕ್ಕ ರಾಷ್ಟ್ರಗಳು ಎಂದು ಇನ್ನೂ ಕಸುವಿನ ಭಾಷೆಯಲ್ಲಿಯೆ ಮಾತನಾಡುತ್ತಿದ್ದಾರೆ! ಕೊಟ್ಟ ಅಭಿವಚನಕ್ಕೆ ವಿರುದ್ಧವಾಗಿ, ಅವುಗಳ ಸ್ವಾತಂತ್ರ್ಯಕ್ಕೆ ಧಕ್ಕೆ ಒದುವಂತೆ ಇಂದು ಸಿರಿಯಾ–ಲೆಬನಾನ್ ರಾಷ್ಟ್ರಗಳಲ್ಲಿ ಫ್ರಾನ್ಸವು ಸೈನ್ಯಶಕ್ತಿಯನ್ನು ಉಪಯೋಗಿಸುತ್ತಿದೆ. ಇಂಗ್ಲೆಂಡ್-ಅಮೇರಿಕೆಗಳು ತಮ್ಮ ವಸಾಹತುಗಳನ್ನು ಬಿಟ್ಟುಕೊಡಲು ಸಿದ್ಧವಿಲ್ಲ! ಒಂದು ಕಡೆ ಸಾನ್ ಫ್ರಾನ್ಸಿಸ್ಕೋದ ಉದಾತ್ತ ತತ್ತ್ವಗಳ ಚರ್ಚಾಸಂಘ; ಇನ್ನೊಂದೆಡೆ ಸಾಮ್ರಾಜ್ಯ ಶಾಹಿತ್ವದ ದಬ್ಬಾಳಿಕೆ! ಈ ಪರಿಸ್ಥಿತಿಯಲ್ಲಿ ನಾತ್ಸಿವಾದವನ್ನು ಗೆದ್ದೆವು, ನಿರ್ಮೂಲ ಮಾಡಿದೆವು ಎಂದು ಯಾರಿಗೆ ಆನಂದವಾದೀತು? ಅಮೇರಿಕೆಯಲ್ಲಿ ಪಂಡಿತ ವಿಜಯಲಕ್ಷ್ಮಿಯವರು ಹೇಳಿದಂತೆ, ಹಿಂದುಸ್ಥಾನದ ಸ್ವಾತಂತ್ರ್ಯವು ವಿಜಯದ ಒರೆಗಲ್ಲಾಗಿದೆ. ತಮ್ಮ ರಾಜ್ಯಸೂತ್ರವನ್ನು ತಾವು ವಹಿಸಲು ಸಿದ್ಧರಾದ, ಯೋಗ್ಯತೆಯುಳ್ಳವರಾದ ಭಾರತೀಯರಿಗೆ ಬ್ರಿಟಿಶರು ಅಧಿಕಾರವನ್ನು ಒಪ್ಪಿಸದಿದ್ದರೆ ನಾತ್ಸಿವಾದವನ್ನು ನಿರ್ಮೂಲ ಮಾಡಿದಂತಾಗಲಿಲ್ಲ; ಸಾನ್ ಫ್ರಾನ್ಸಿಸ್ಕೋದ ಟ್ರಸ್ಟಿಶಿಪ್ (ಪಾಲಕತನ)ದ ತತ್ತ್ವಗಳಲ್ಲೂ ಪ್ರಾಮಾಣಿಕತೆ ಇದ್ದಂತಾಗಲಿಲ್ಲ.

ಭಾರತದ ಬಿಕ್ಕಟ್ಟು

ನಿಜವಾಗಿ ನೋಡಿದರೆ, ಅಟ್ಲಾಂಟಿಕ್ ಚಾರ್ಟರಿನ ಕಾಲದಿಂದಲೆ ಭಾರತದಲ್ಲಿಯ ರಾಜಕೀಯ ಬಿಕ್ಕಟ್ಟು ಬಿಡಬಹುದಾಗಿತ್ತು. ಆದರೆ 'ಆ ಚಾರ್ಟರಿನಲ್ಲಿಯ ತತ್ತ್ವಗಳು ಹಿಂದುಸ್ಥಾನಕ್ಕೆ ಅನ್ವಯಿಸುವುದಿಲ್ಲ' ಎಂದು ಚರ್ಚಿಲ್‌ರು ಹಟದಿಂದ ಹೇಳಿದರು. ಇಂದು ಈ ಬಿಕ್ಕಟ್ಟನ್ನು ಬಿಡಿಸುವ ಉದ್ದೇಶದಿಂದಲೆ ವೈಸರಾಯ್ ವೇವೆಲ್‌ರು ಇಂಗ್ಲಂಡಿಗೆ ಹೋಗಿದ್ದಾರೆಂದು ಹೇಳಲಾಗುತ್ತಿದೆ. ಆದರೆ ವೇವೆಲ್‌ರ ಅಭಿಪ್ರಾಯಗಳಿಗೂ ಅಮೇರಿ-ಚರ್ಚಿಲ್‌ರು ಮಣಿದಿಲ್ಲ ಎಂದೂ ನಾವು ಕೇಳುತ್ತಿದ್ದೇವೆ. ಒಂದು ದೃಷ್ಟಿಯಿಂದ ವೇವೆಲ್ ಸಾಹೇಬರಿಂದ ನಮಗೆ ಸ್ವಾತಂತ್ರ್ಯ ದೊರೆಯುವುದೆಂದು ತಿಳಿಯುವುದೂ ತಪ್ಪು. ನಮ್ಮ ಮುಂದಾಳುಗಳ ಅದೂರ ದೃಷ್ಟಿ, ನಮ್ಮ ಜಾತಿ-ಜಟ್ಟಿಗಳ ಕುಸ್ತಿ, ನಮ್ಮ ರಾಜಕೀಯ ಪಕ್ಷಗಳ ಸ್ವಾರ್ಥ ಸಂಕುಚಿತ ಧೋರಣ, ನಮ್ಮ ಜನತೆಯ ಅನಾಸ್ಥೆ, ನಮ್ಮ ಅಧಿಕಾರವಂತರ ಅಧಿಕಾರ ಲಾಲಸೆ— ಇಂತಹವುಗಳ ಮುಂದೆ ವೇವೆಲ್ ಸಾಹೇಬರಂತಹ ಚತುರ ಸೇನಾಪತಿಗಳೂ ಹಿಂದೆ ಸರಿಯಲೇಬೇಕಾಗುವುದು. ಆದರೆ ನಾವೀಗ ಈ ಪ್ರಶ್ನೆಯನ್ನು ಬ್ರಿಟಿಶರ ಯುದ್ಧಧ್ಯೇಯದ ದೃಷ್ಟಿಯಿಂದ ನೋಡುತ್ತೇವೆ. ಚರ್ಚಿಲ್‌ರ ಆ ಧ್ಯೇಯದಲ್ಲಿ ಸಾಮ್ರಾಜ್ಯಶಾಹಿತ್ವವು ತಳಹದಿಯಾಗಿ ನಿಂತಿದೆ ಎಂಬುದರಲ್ಲಿ ಎಳ್ಳಷ್ಟೂ ಸಂದೇಹವಿಲ್ಲ. ಚರ್ಚಿಲ್‌ರಂತಹರ ಕೈಯಲ್ಲಿ ಅಧಿಕಾರಸೂತ್ರವಿರುವವರೆಗೆ ಭಾರತದ ಬಿಕ್ಕಟ್ಟು ಖಂಡಿತವಾಗಿಯೂ ಬಿಡದು.

ಅನಿರೀಕ್ಷಿತ ಘಟನೆ

ಚರ್ಚಿಲ್‌ರ ಧೋರಣೆಗೆ ಒಂದು ಸಹಾಯಕವಾದ ಕಾರಣವಿದೆ. ಯುದ್ಧವನ್ನು ನಡೆಯಿಸಲು ಇಂಗ್ಲಂಡಿಗೆ ಚರ್ಚಿಲ್‌ರನ್ನು ಬಿಟ್ಟರೆ ಮತ್ತೊಬ್ಬ ಮುಂದಾಳು ಇಲ್ಲ. ಇದನ್ನೊಪ್ಪಿಕೊಂಡೇ ಕೂಲಿಕಾರಪಕ್ಷದವರು ಚರ್ಚಿಲ್‌ರ ನೇತೃತ್ವದಲ್ಲಿ ಸಮ್ಮಿಶ್ರಮಂತ್ರಿಮಂಡಳವನ್ನು ಸೇರಿಕೊಂಡರು. ಸರಿ. ಸದ್ಯಕ್ಕೆ ಇನ್ನೂ ಇಂಗ್ಲಂಡಿನ ದೃಷ್ಟಿಯಿಂದ ಯುದ್ಧ ಮುಗಿದಿಲ್ಲ. ಅದೇಕೆ? ಸಾಮ್ರಾಜ್ಯದ ದೃಷ್ಟಿಯಿಂದ ಜಪಾನದೊಡನೆ ಯುದ್ಧವು ಹೆಚ್ಚು ಮಹತ್ತ್ವದ್ದಾಗಿದೆ. 'ಜಪಾನವನ್ನು ನಿರ್ನಾಮ ಮಾಡುವ ವರೆಗೆ ನಾವು ಶಸ್ತ್ರವನ್ನು ಕೆಳಗಿಡುವುದಿಲ್ಲ' ಎಂದು ವಿಜಯೋತ್ಸವದ ದಿವಸವೇ ಚರ್ಚಿಲ್‌ರು ಗರ್ಜಿಸಿದರು. ತರುವಾಯ, ಆ ಯುದ್ಧ ಮುಗಿವ ವರೆಗೂ ಸಮ್ಮಿಶ್ರ ಮಂತ್ರಿ ಮಂಡಳಕ್ಕೆ ಒಪ್ಪಿಗೆಯನ್ನು ಕೊಡಬೇಕೆಂದು ಕೂಲಿಕಾರ ಪಕ್ಷವನ್ನು ಕೇಳಿಕೊಂಡರು. ಆ ಯುದ್ಧಕ್ಕೂ ಚರ್ಚಿಲ್‌ರೆ ಸವ್ಯಸಾಚಿಗಳು; ಆ ಯುದ್ಧಕ್ಕಂತೂ ಹಿಂದುಸ್ಥಾನವು ತೀರ ಮಹತ್ತ್ವದ, ಆಯಕಟ್ಟಿನ ದೇಶ. ಇವೆರಡೂ ಕಾರಣಗಳಿಗಾಗಿ ವೇವೆಲ್ ಸಾಹೇಬರನ್ನು ಚರ್ಚಿಲ್‌ರು ಕಡೆಗಣಿಸಿದ್ದರೆ ಆಶ್ಚರ್ಯವೇನು? ಆದರೆ, ಇದೀಗ ಒಂದು ಅನಿರೀಕ್ಷಿತ ಘಟನೆ ಜರುಗಿದೆ. ಕೂಲಿಕಾರ ಪಕ್ಷದ ಪರಿಷತ್ತಿನಲ್ಲಿ ಚರ್ಚಿಲ್‌ರ ಸಮ್ಮಿಶ್ರಮಂತ್ರಿಮಂಡಳದ ಬೇಡಿಕೆ ಒಮ್ಮತದಿಂದ ನಿರಾಕೃತವಾಗಿದೆ. ಎಂದರೆ ಕೂಲಿಕಾರ ಪಕ್ಷವು ತನ್ನ ಧೋರಣೆಯ ಸ್ವಾತಂತ್ರ್ಯವನ್ನು ಇಟ್ಟುಕೊಳ್ಳಲು ನಿರ್ಣಯಿಸಿದೆ. ಈ ಪರಿಸ್ಥಿತಿಯಲ್ಲಿ ಇಂಗ್ಲಂಡದ ಪಾರ್ಲಮೆಂಟಿನ ಚುನಾವಣೆಯಾಗುವುದೆಂದರೆ ಚರ್ಚಿಲ್ ಸಾಹೇಬರು ವೇವೆಲ್‌ರನ್ನು ಮೊದಲಿನಂತೆ ಖಂಡಿತವಾಗಿಯೂ ಕಡೆಗಣಿಸುವುದಿಲ್ಲ ಎಂದು ನಾವು ಧೈರ್ಯದಿಂದ ಹೇಳುತ್ತೇವೆ. ಈ ಮಾತು ವಾಚಕರ ಕೈಸೇರುವುದರ ಒಳಗಾಗಿ ಇವರ ಸತ್ತ್ವತೆ ಕಂಡುಬಂದರೆ ನಮಗೆ ಎಳ್ಳಷ್ಟೂ ಆಶ್ಚರ್ಯವೆನಿಸುವುದಿಲ್ಲ.

(೨೨—೫—೪೫)

ನಮ್ಮವರ ಹೊಣೆ

ವೇವೆಲ್ ಸಾಹೇಬರ ಯಾತ್ರೆಯ ಫಲವು ಅನುಕೂಲವಾಗಿ ಪರಿಣಮಿಸುವ ಚಿಹ್ನಗಳಿವೆ ನಿಜ. ಆದರೆ, ಅದೊಂದರ ಮೇಲೆಯೆ ಆಶೆಯನ್ನಿಟ್ಟುಕೊಂಡು ನಾವು— ಎಂದರೆ, ನಮ್ಮ ಮುಂದಾಳುಗಳು— ಕೈಚೆಲ್ಲಿ ಕೂಡಬಹುದೆ? ನಮ್ಮ ದೇಶದಲ್ಲಿ ರಾಜಕೀಯ ಪಕ್ಷಗಳು ಇಷ್ಟೊಂದು ಅವನತಿಗಿಳಿದುದನ್ನು, ನಮ್ಮ ಮುಂದಾಳುತನವು ಇಷ್ಟೊಂದು ನಿಷ್ಕ್ರಿಯವಾದುದನ್ನು ಇದುವರೆಗೆ ನಾವೆಂದಿಗೂ ಕಂಡಿಲ್ಲ. ಕಾಂಗ್ರೆಸಿನವರು ಕೇವಲ ವರ್ಧಾದಿಂದ ಮಹಾಬಳೇಶ್ವರದವರೆಗೆ ಮುಖವನ್ನು ತಿರುಗಿಸುತ್ತ ಕುಳಿತಿದ್ದಾರೆ. ದಿನದಿನಕ್ಕೆ ಅನ್ನ-ಬಟ್ಟೆಗಳ ತೊಂದರೆ ಜನತೆಗೆ ಹೆಚ್ಚಾಗುತ್ತಿದ್ದಾಗಲೂ 'ವಿಧಾಯಕ' ಎಂಬ ಹೆಸರಿನಲ್ಲಿ ಯಾವುದೋ ಒಂದು ಅನಿಶ್ಚಿತ ಸ್ವರೂಪದ ಧೋರಣೆಯನ್ನು ಕಾಂಗ್ರೆಸಿಗರು ಉಸಿರುತ್ತಿದ್ದಾರೆ. ಅದರ ಫಲವೆಂದರೆ,—ಕ್ರಮೇಣ ಜನತೆಯ ಮೇಲಿದ್ದ ಕಾಂಗ್ರೆಸಿನ ವರ್ಚಸ್ಸು ಜನತೆಯ ಮರ್ಲಕ್ಷ್ಯಕ್ಕೆ ಪಾತ್ರವಾಗತೊಡಗಿದೆ. ಮುಸ್ಲಿಂ ಲೀಗನಂತೂ ಜಾತೀಯಧೋರಣೆಯನ್ನು ಬಿಟ್ಟುಕೊಡದೆ ತನ್ನ ಹಿಡಿತವನ್ನು ವ್ಯವಸ್ಥೆಗೊಳಿಸಿಕೊಳ್ಳುತ್ತಲಿದೆ. ಮಿಕ್ಕ ಕೆಲವು ಪಕ್ಷಗಳು ತಾವೇ ಎಲ್ಲರಿಗಿಂತ ಹೆಚ್ಚಿನ ಬುದ್ಧಿವಂತರೆಂಬಂತೆ ಈ ಹಳೆಯ ಪಕ್ಷಗಳನ್ನು ಟೀಕಿಸುವುದರಲ್ಲಿಯೇ ಆನಂದವನ್ನೂ ಸಮಾಧಾನವನ್ನೂ ಕಾಣುತ್ತಲಿವೆ. ಒಟ್ಟಾರೆ, ಜನತೆಗೆ ಇಂದಿನ ಸಂದರ್ಭದಲ್ಲಿ ಪ್ರತಿನಿಧಿಯೂ ಇಲ್ಲ, ಮುಂದಾಳೂ ಇಲ್ಲ; ಈ

ಈ ಅವನತಿಯಲ್ಲಿ ವೇವೇಲ್‌ಸಾಹೇಬರು ಎಂತಹ ಯೋಜನೆಯನ್ನು ಮುಂದಿಟ್ಟರೂ 'ನಾ ಮುಂದೆ—ನೀ ಮುಂದೆ' ಎನ್ನುತ್ತ ನಮ್ಮ ಮುಂದಾಳುಗಳು ಸ್ವೀಕರಿಸುವರೆಂಬ ಹೆದರಿಕೆ ಇದೆ. ಅದಕ್ಕಾಗಿಯೆ ಕಳೆದ ಸಲ ಈ ನೋಟದಲ್ಲಿ ನಾವು ಎಚ್ಚರಿಕೆಯನ್ನು ಕೊಟ್ಟಿದೆವು.

ಎದುರಿಸಬೇಕಾದ ಪ್ರಶ್ನೆ

ಆರು ವರ್ಷಗಳ ಯುದ್ಧಪರಿಸ್ಥಿತಿಯು ಮಿಕ್ಕ ದೇಶಗಳಲ್ಲಿಯಂತೆ ನಮ್ಮಲ್ಲೂ ಜನತೆಯ ಹೃದಯದ ಮೇಲೆ ಮಹತ್ತ್ವದ ಪರಿಣಾಮವನ್ನು ಮಾಡಿರಲು ಸಾಕು. ಸ್ವಾತಂತ್ರ್ಯದ ಮಹತ್ತ್ವವಂತೆ ಸ್ವಾತಂತ್ರ್ಯಕ್ಕಿದ್ದ ಗಂಡಾಂತರಗಳ ಕಲ್ಪನೆಯೂ ನಮಗೆ ಹೆಚ್ಚು ಸ್ಪಷ್ಟವಾಗಿದೆ. 'ಪಂಚಮಹಾಭೂತ' ರಾಷ್ಟ್ರಗಳನ್ನೆ ನೆನೆದುಕೊಂಡರೆ ಜಗತ್ತಿನಲ್ಲಿ ಚಿಕ್ಕ ಇಲ್ಲವೆ ದುರ್ಬಲ ರಾಷ್ಟ್ರಗಳಿಗೆ ಎಂತಹ ಹೆದರಿಕೆ ಇದೆ ಎಂಬುದು ತಿಳಿಯುವುದು. ಇಂದು ನಮಗೆ ಕೇವಲ ಬ್ರಿಟಿಶರೊಡನೆ ಹೋರಾಡುವುದಿಷ್ಟೆ ಇಲ್ಲ; ಇಂತಹ ಜಗತ್ತಿನಲ್ಲಿ ಸ್ವಾತಂತ್ರ್ಯವನ್ನು ಕಾಯ್ದುಕೊಳ್ಳುವಂತಹ ಶಕ್ತಿವಂತರೂ ನಾವಾಗಲೇಬೇಕಾಗಿದೆ. ಆ ವಿಶಾಲ ದೃಷ್ಟಿಯಿಂದ ನೋಡುವ ಮುಂದಾಳುತನ ನಮಗೆ ದೊರೆಯಬೇಕಾಗಿದೆ. ಸ್ವಾತಂತ್ರ್ಯವೆಂದರೆ ಕೇವಲ ಸ್ವೀಯ ಆಡಳಿತದ ಅಧಿಕಾರ ಎಂಬ ಕಲ್ಪನೆ ತಪ್ಪು. ಆ ತಪ್ಪು ಕಲ್ಪನೆಗಾಗಿಯೆ ಅಧಿಕಾರ ಲಾಲಸೆಯಿಂದ ನಮ್ಮಲ್ಲಿ ಪಕ್ಷಗಳೂ ಜಾತೀಯತೆಯೂ ಬೆಳೆಯುತ್ತಲಿವೆ. 'ನಮ್ಮ ದೇಶ' ಎಂದಿಷ್ಟೆ ನಾವು ತಿಳಿಯಬಹುದು; ಆದರೆ ಒಂದುಕಡೆ ಧನಿಕರು, ಇನ್ನೊಂದುಕಡೆ ಕೂಲಿಕಾರರು— ಇವರು ಸಂಕುಚಿತ ದೇಶಾಭಿಮಾನವನ್ನು ಬಿಟ್ಟು ವಿಶಾಲ ಸ್ವಾರ್ಥಾಭಿಮಾನದಿಂದ ಇಡಿಯ ಜಗತ್ತನ್ನು ಒಂದಾಗಿ ತಿಳಿಯುತ್ತಲಿದ್ದಾರೆ, ಹಾಗೆ ವರ್ತಿಸುತ್ತಲೂ ಇದ್ದಾರೆ. ಎಂದರೆ ಮಿಕ್ಕ ದೇಶಗಳನ್ನು ಮರೆತು ನಮಗೆ ಸ್ವಾತಂತ್ರ್ಯವಿಲ್ಲ; ಮಿಕ್ಕವರಿಗೆ ಸ್ವಾತಂತ್ರ್ಯವಿಲ್ಲದೆ ನಮ್ಮ ಸ್ವಾತಂತ್ರ್ಯ ಸಾಲದು. ನಾವು ಪರತಂತ್ರರಿರುವವರೆಗೆ ಮಿಕ್ಕವರಿಗೆ ಸ್ವಾತಂತ್ರ್ಯವೆಂಬುದೂ ಸುಳ್ಳು. ಈ ಮಾತನ್ನು ತಿಳಿಯುವ, ತಿಳುಹಿಸುವ ಮುಂದಾಳುತನ ಬೇಕು. ಸಾಮಾನ್ಯ ಜನತೆಯ ಹೃದಯದಲ್ಲಿ ಯುದ್ಧದಿಂದ ಇಂತಹ ವಿಚಾರಕ್ರಾಂತಿಯಾದರೂ ನಮ್ಮಲ್ಲಿ ಇನ್ನೂ ಜಾತೀಯತೆಯ ಇಲ್ಲವೆ ಬರಿಯ ದೇಶಾಭಿಮಾನದ ಮುಂದಾಳುತನವೆ ಇದೆ. ಜಾತೀಯತೆಯಾಗಲಿ ಬರಿಯ ದೇಶಾಭಿಮಾನವಾಗಲಿ ಮುಖ್ಯವಿದ್ದಲ್ಲಿ, ವಿಚಾರಸ್ವಾತಂತ್ರ್ಯಕ್ಕೆ ಎಡೆಯು ದೊರಕದು. ಭಿನ್ನಾಭಿಪ್ರಾಯವೆಂದರೆ ದ್ರೋಹ ಎನ್ನಿಸುವುದು. ಅದಕ್ಕಾಗಿಯೆ ನಮ್ಮಲ್ಲಿ ಇದುವರೆಗೆ ಜಾತೀಯ ಐಕ್ಯವು ಶುದ್ಧ ಅಸಂಭವ ಎಂದೆನ್ನಿಸಿದೆ. ಮುಂದಾಳುತನ ಬದಲಾಯಿಸದೆ 'ಸಾಹೇಬೀ ಜಾದೂಗಾರಿಕೆ' ಕೂಡ ನಮ್ಮನ್ನು ಸ್ವಾತಂತ್ರ್ಯಕ್ಕೆ ಅರ್ಹರನ್ನಾಗಿ ಮಾಡಲಾರದು.

ಸರಿಯಾದ ಮಾರ್ಗ

ಮೇಲಿನ ಮಾತುಗಳಿಂದ ನಮ್ಮ ಅಭಿಪ್ರಾಯವನ್ನು ತಪ್ಪು ತಿಳಿದುಕೊಳ್ಳುವ ಸಂಭವವಿದೆ. ಇಂದು ನಮ್ಮ ದೇಶದಲ್ಲಿಯೂ ಬಂಡವಾಳಗಾರರ ಪಕ್ಷ, ಕೂಲಿಕಾರರ ಪಕ್ಷ ಇವೆರಡಾದರೆ ಸಾಕು; ಇಂತಹ ಪಕ್ಷಗಳ ಅವಶ್ಯಕತೆ ಇದೆ ಎಂದು ನಮ್ಮ ಅಭಿಪ್ರಾಯವಲ್ಲ. ನಾವು ಹೇಳುವುದು ಪಕ್ಷವನ್ನು ಕಟ್ಟುವ ವಿಷಯವಲ್ಲ, ಪರಿಸ್ಥಿತಿಯನ್ನು ಅರಿತುಕೊಳ್ಳುವ ವಿಷಯ. ಇಂತಹ ಪಕ್ಷಗಳು ನಮ್ಮಲ್ಲಿ ಉದಯಿಸಬಹುದು, ಹಾಗಾದಲ್ಲಿ ನಮ್ಮ ಇದ್ದಷ್ಟು ದೇಶಾಭಿಮಾನವೂ ಕಳಚಿ ನಮ್ಮ ಸ್ವಾತಂತ್ರ್ಯದ ಪ್ರಶ್ನೆಯನ್ನು ಮರೆಯಬಹುದು, ಇಲ್ಲವೆ ಹಾಗಾಗಲು ಕಾರಣರಾಗಬಹುದು. ಈ ಪರಿಸ್ಥಿತಿಯನ್ನು ತಪ್ಪಿಸುವಂತಹ ಮುಂದಾಳುತನ ನಮಗೆ ಬೇಕು ಎಂದು ನಾವು ಹೇಳುವುದು. ಸ್ವಾತಂತ್ರ್ಯ ನಮಗೆ ಇಂದಿಲ್ಲ ನಾಳೆ ಕಟ್ಟಿಟ್ಟದ್ದೆ ಎಂಬ ತತ್ತ್ವಪ್ರತಿಪಾದನೆಯುಕ್ತ ವೈಪರಿತ್ಯ ಕೈಚೆಲ್ಲುವಂತಿಲ್ಲ. ನಮ್ಮದು ಬಡದೇಶ, ಅಜ್ಞಾನದ ದೇಶ. ಈ ಬಡತನದ ಮತ್ತು ಈ ಅಜ್ಞಾನದ ದುರ್ಲಾಭವನ್ನು ನಮ್ಮವರಂತೆಯೆ ನಮ್ಮ ಶತ್ರುಗಳೂ ಪಡೆಯಬಹುದಾಗಿದೆ. ಅದನ್ನು ತಪ್ಪಿಸಬೇಕು. ಅದಕ್ಕಾಗಿ ಈಗಿನಿಂದಲೆ ಜನತೆಯೊಡನೆ ಸಂಪರ್ಕವನ್ನು ಬೆಳೆಯಿಸಿ ಜ್ಞಾನವನ್ನೂ ಜಾಗೃತಿಯನ್ನೂ ಹುಟ್ಟಿಸಬೇಕು. ಪಾಕಿಸ್ತಾನವನ್ನು ಒಪ್ಪದ ವರೆಗೆ ಒಂದು ಹೆಜ್ಜೆಯನ್ನೂ ಮುಂದಿಡುವುದಿಲ್ಲ ಎಂಬುದು ಎಷ್ಟು ತಪ್ಪಾದುದೋ ಅಷ್ಟೆ ವರ್ಕಿಂಗ್ ಕಮೀಟಿಯ ಸದಸ್ಯರ ಬಿಡುಗಡೆಯಾಗದ ವರೆಗೆ ಏನನ್ನೂ ಮಾಡುವುದಿಲ್ಲ ಎಂಬುದೂ ತಪ್ಪಾದುದು.

ಅಭಿನಂದನೆ

ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳದಿರಲಾರೆವು. ಅದೆಂದರೆ ಪಂಡಿತ ವಿಜಯಲಕ್ಷ್ಮಿ ಇವರನ್ನು ಮನಃಪೂರ್ವಕವಾಗಿ ಅಭಿನಂದಿಸುವುದು. ಕಳೆದ ಕೆಲವು ತಿಂಗಳುಗಳಿಂದ ಶ್ರೀಮತಿ ಪಂಡಿತರು ಅಮೇರಿಕೆಯಲ್ಲಿ ಅವಿಶ್ರಾಂತವಾಗಿ ದುಡಿಯುತ್ತಿದ್ದಾರೆ. ಭಾರತದ ಪರವಾಗಿ ಅವರು ಅತ್ಯಂತ ಪರಿಣಾಮಕಾರಕವಾದ ಪ್ರಚಾರವನ್ನು ನಡೆಸುತ್ತಲಿದ್ದಾರೆ ಎಂಬುದಕ್ಕಾಗಿಯೆ ನಾವು ಅವರನ್ನು ಅಭಿನಂದಿಸುವುದಿಲ್ಲ. ಆ ಪ್ರಚಾರ ಕೆಲಸವನ್ನು ಎಂದಿನಿಂದಲೂ ಲೂಯಿ ಫಿಶರ್-ಪರ್ಲಬಕ್ ಮೊದಲಾದವರು ನಡೆಯಿಸಿದ್ದಾರೆ. ಆದರೆ ಪಂಡಿತ ವಿಜಯಲಕ್ಷ್ಮಿಯವರು ಅದಕ್ಕೂ ಮಹತ್ತ್ವದ ಕೆಲಸವನ್ನು ಮಾಡುತ್ತಲಿದ್ದಾರೆ ನಮ್ಮ ದೃಷ್ಟಿಯಿಂದ. ಅದೆಂದರೆ, ಭಾರತದ ಪರವಾಗಿ, ಮುಂದಾಳುತನದ ಅಧಿಕಾರದಿಂದ ದೂರದೃಷ್ಟಿಯ, ವಿಶಾಲ ಧ್ಯೇಯದ ಘೋಷಣೆಯನ್ನು ಅಮೇರಿಕೆಯ ಮುಖಾಂತರವಾಗಿ ಜಗತ್ತಿನ ಮುಂದಿಡುತ್ತಿದ್ದಾರೆ. ಇದುವರೆಗೆ ನಾವು ಹೇಳುತ್ತಲಿದ್ದ ಮುಂದಾಳುತನದ ಒಂದು ಮಾದರಿ ಇದು. ನಿಜವಾಗಿ 'ಏಶಾಯಿಕ' ಮುಂದಾಳುತನ ಇದು. ಗಾಂಧೀಜಿಯಿಂದ (ಮಂತ್ರಿಮಂಡಳಗಳು ರಾಜಿನಾಮೆಯನ್ನು ಕೊಟ್ಟಂದಿನಿಂದ) ಕಾಂಗ್ರೆಸ್ ಮಾಡಿದ ಎಷ್ಟೋ ತಪ್ಪನ್ನು ಪಂಡಿತ ವಿಜಯಲಕ್ಷ್ಮಿಯವರು ತಿದ್ದಿದ್ದಾರೆಂದು ಧೈರ್ಯವಾಗಿ ಹೇಳಬಹುದು. ಅದಕ್ಕಾಗಿ ನಮ್ಮ ಅಭಿನಂದನೆ. ಪಂಡಿತ ಜವಾಹರರು ಜೇಲಿನಲ್ಲಿ ಕೊಳೆಯುತ್ತಿದ್ದಿಲ್ಲವಾದರೆ ಇಂದು ಯೋಗ್ಯವಾದ ಮುಂದಾಳುತನವನ್ನು ನಾವು ಪಡೆಯಬಹುದಾಗಿತ್ತೆಂದು ಈ ಸಹೋದರಿಯು ಸ್ಪಷ್ಟವಾಗಿ ಹೇಳಿದರು. ಪಂಡಿತ ಜವಾಹರರನ್ನು—ಇಂತಹರನ್ನು—ಬಂಧನದಲ್ಲಿಟ್ಟು ಭಾರತಕ್ಕೆ ಅಲ್ಲ, ಇಡಿಯ ಜಗತ್ತಿಗೆ ಅಮೆರಿಸುವರು ಅನ್ಯಾಯ ಬಗೆದರೆಂದು ಈ ಸಹೋದರಿಯು ಪ್ರಚಾರದಿಂದ ಹೇಳಬಹುದಾಗಿದೆ

ತುಣುಕು—ಮಿಣುಕುಗಳೂ ಇವೆ. 'ಕೊರವಂಜಿ' ಕನ್ನಡ ಪತ್ರಿಕಾ ಪ್ರಪಂಚದಲ್ಲಿ ತನ್ನದೊಂದು ಶಾಶ್ವತ ಸ್ಥಾನವನ್ನು ಕಲ್ಪಿಸಿಕೊಳ್ಳುತ್ತಲಿರುವುದು ಅಭಿಮಾನದ ಸಂಗತಿ.

೯. **ಒಡನಾಡಿ** (ಕವನ ಸಂಗ್ರಹ) ಬರೆದವರು ಶ್ರೀ. 'ಆನಂದಕಂದ'. ಪ್ರಕಾಶನ ಸ್ಥಳ 'ಜಯಂತಿ' ಕಾರ್ಯಾಲಯ, ಧಾರವಾಡ. ಕ್ರೌ. ೧೬. ೬೦ ಪುಟಗಳು. ಬೆಲೆ ೧—೦—೦.

ಇದರಲ್ಲಿ ಭಾವಸ್ನಿಗ್ಧದಿಂದ ಕೂಡಿದ ೩೮ ಗೀತ ಕವನಗಳಿವೆ. ಭಾವಗೀತಗಳನ್ನು ಹಾಡುವವರು ಇವರ ಪ್ರಯೋಜನ ಪಡೆಯಬಹುದು. ಪದ್ಯ-ಪದ್ಧತಿಯೂ 'ಆನಂದಕಂದ'ರ ವೈಶಿಷ್ಟ್ಯ ಒಡೆದು ತೋರುವದು. ಅಚ್ಚು—ಕಟ್ಟು ಅಂದವಾಗಿದೆ.

೧೦. **ಸಪ್ತಮಹಾವ್ರತಗಳು** (ಪರಿಚಯಾತ್ಮಕ ಕಿರುಹೊತ್ತಿಗೆ). ಮಹಾತ್ಮಾ ಗಾಂಧಿಯವರ ಮೂಲ ಹಿಂದೀ ಪುಸ್ತಕವನ್ನು ಶ್ರೀ. ಲಿಂಗಸುಗೂರು ವಿಠ್ಠಲರಾಯರಿಂದ ಕನ್ನಡದಲ್ಲಿ ಭಾಷಾಂತರಿಸಿ, ಕನ್ನಡ ಪ್ರಕಟನಾಲಯ— 'ಪ್ರಜಾ' ಕಾರ್ಯಾಲಯ, ನಾಮಪಲ್ಲಿ—ಹೈದರಾಬಾದ್ ಅವರು ಪ್ರಕಟಿಸಿದ್ದಾರೆ. ಕ್ರೌ. ೧೬. ೩೪ ಪುಟಗಳು. ಬೆಲೆ ೦—೬—೦

ಮಹಾತ್ಮರ ತತ್ತ್ವದಂತೆ ಸತ್ಯಾಗ್ರಹಿಯು ಕೈಕೊಂಡು ಆಚರಿಸಬೇಕಾದ ೧ ಸತ್ಯ, ೨ ಅಹಿಂಸೆ, ೩ ಬ್ರಹ್ಮಚರ್ಯ, ೪ ಅಸ್ವಾದ, ೫ ಅಸ್ತೇಯ, ೬ ಅಪರಿಗ್ರಹ, ೭ ಅಭಯ ಈ ಸಪ್ತವ್ರತಗಳ ಶಾಸ್ತ್ರೀಯ ವಿವೇಚನೆ ಇದರಲ್ಲಿದೆ.

೧೧. **ಹೆತ್ತಳಾತಾಯಿ** (ಸ್ವತಂತ್ರ ಸಾಮಾಜಿಕ ಕಾದಂಬರಿ). ಬರೆದವರು ಶ್ರೀಮಾನ್ ಶಿವರಾಮ ಕಾರಂತರು. ಪ್ರಕಾಶಕರು ಶ್ರೀಮಾನ್ ಬಾಲಚಂದ್ರ ಘಾಣೇಕರ, ಸಮಾಜ ಪುಸ್ತಕಾಲಯ, ಧಾರವಾಡ. ಪ್ರತಿಭಾ ಗ್ರಂಥಮಾಲೆಯ ೬ನೆಯ ಕಿರಣ. ಕ್ರೌ. ೧೬. ೧೨೦ ಪುಟಗಳು. ಬೆಲೆ ೨—೦—೦

೧೨. **ಬೆಳಕು** (ಜನತೆಯ ವಾರಪತ್ರಿಕೆ) ಸಂಪಾದಕರು. ಶ್ರೀಮಾನ್ ಗೌರೀಶ ಕಾಯ್ಕಿಣಿ ಅವರು. ಪ್ರಕಾಶಕರು ಶ್ರೀ ಎಂ. ಆರ್. ನಿಶ್ಚೇಕಣಿ, ಕಾರ್ಯದರ್ಶಿ ಕರ್ನಾಟಕ ರ್‍ಯಾಡಿಕಲ್ ಡೆಮೊಕ್ರೆಟಿಕ್ ಪಕ್ಷ, ಬ್ಯಾಂಕರೋಡಿ, ಧಾರವಾಡ ಕ್ರೌನ್ ಫೋಲಿಯೊ ೮ ಪುಟಗಳು, ವಾರ್ಷಿಕ ವರ್ಗಣಿ ೩—೦—೦. ಬಿಡಿ ಸಂಚಿಕೆಗೆ ೦—೧—೦.

ಕನ್ನಡ ನಾಡಿನಲ್ಲಿ ಕಾಮ್ರೇಡ್ ರಾಯ್ ಅವರ ರಾಜಕೀಯ ತತ್ತ್ವವನ್ನು ಪ್ರಚಾರ ಮಾಡುವುದಕ್ಕಾಗಿ ಹೊರಟ ವಾರಪತ್ರಿಕೆಯಿದು. ಹೊಸ ಸ್ಪಂದಿಸಿದ ತರುಣರು ಸಂಚಾಲಕರಾಗಿರುವರು. ಸಂಪಾದಕರಾದ ಗೌರೀಶ ಕಾಯ್ಕಿಣಿಯವರು ಜಯಂತಿಯ ವಾಚಕರಿಗೆ ಹೊಸಬರೇನೂ ಅಲ್ಲ. ರಾಷ್ಟ್ರೀಯ ಮಹಾಸಭೆಯ ವಿಚಾರದಲ್ಲಿ ಸಂಪೂರ್ಣ ಪ್ರತ್ಯೇಕಿಸಿದ ಕನ್ನಡ ನಾಡಿನಲ್ಲಿ, ಹೊಸ ಮಾತನ್ನು ಹೇಳಲು ಬಂದಿರುವ ಈ ಬೆಳಕಿಗೆ ಎಂತಹ ಸ್ವಾಗತ ಸಿಕ್ಕುವದೋ ನೋಡಬೇಕು. ವಿಚಾರ ಸ್ವಾತಂತ್ರ್ಯವನ್ನು ಮನ್ನಿಸಿಯಿಂದ ಕಾಣುವ ಜಯಂತಿ ಬೆಳಕನ್ನು ಆನಂದದಿಂದ ಬರಮಾಡಿಕೊಳ್ಳುತ್ತದೆ.

೧೩. **ಜೀವನ** (ಶಕ್ತಿವರ್ಧಕ ಔಷಧ). ಸಿದ್ಧಗೊಳಿಸಿದವರು ಬಾಗಲಕೋಟೆಯ ಕರ್ನಾಟಕ ಆಯುರ್ವೇದ ಫಾರ್ಮಸಿಯ ಆಯುರ್ವೇದ ಪಂಡಿತರು. ೬೦ ಗೋಳಿಗಳ ಬಾಟ್ಲಿಗೆ ಬೆಲೆ ೨—೮—೦.

ಇಂದು ದೇಶದಲ್ಲಿ ಜೀವನೀಯ (ಟಾನಿಕ್) ಔಷಧಗಳ ಸುಗ್ಗಿ ಹೆಚ್ಚಾಗಿದೆ. ಎಲ್ಲ ಪ್ರಕಾರದಲ್ಲಿಯೂ ಕನ್ನಡಿಗರ ಧನವು ಈ ಜೀವನೀಯ ಔಷಧಿಗಳಿಗಾಗಿಯೂ ಪರಪ್ರಾಂತ-ಪರದೇಶಗಳಿಗೆ ಹರಿದು ಹೋಗುತ್ತಿರುವುದು. ಈಗ ಕನ್ನಡಿಗರ ಸ್ವಾವಲಂಬನದಿಂದ ಹೊರಟ ಈ ಔಷಧಾಲಯವು ಕನ್ನಡ ಶಕ್ತಿದು ಸಂಶೋಧಿಸಿ ತೆಗೆದ ಈ ಶಕ್ತಿವರ್ಧಕ ಔಷಧಿಯನ್ನು, ಆಗತ್ಯವಿದ್ದ ಕನ್ನಡಿಗರೆಲ್ಲ ಕೊಂಡು ಬಳಸಬೇಕು. ಔಷಧಿಯು ರುಚಿಕರವಾಗಿದ್ದು ನರಗಳ ದೌರ್ಬಲ್ಯವನ್ನು ತೆಗೆದುಹಾಕಿ ರಕ್ತವೃದ್ಧಿಯನ್ನು ಮಾಡುವುದೆಂದು ಹಲವರ ಅನುಭವಕ್ಕೆ ಬಂದ ಮಾತಾಗಿದೆ. ಜಾಹಿರಾತಿನಲ್ಲಿಯೂ ಇದರ ಪ್ರಾಶಸ್ತ್ಯ ತಿಳಿಸಲಾಗಿದೆ.

೧೪. **ಹೂಬಳ್ಳಿ** (ಕವನ ಸಂಗ್ರಹ) ಬರೆದವರು ಶ್ರೀಮಾನ್ ದೇಸಾಯಿ ದತ್ತಮೂರ್ತಿ, ಪ್ರಕಾಶಕರು ಮನೋಹರ ಗ್ರಂಥ ಭಂಡಾರ, ಧಾರವಾಡ. ಕ್ರೌ. ೧೬. ೪೦ ಪುಟಗಳು ಬೆಲೆ ೧—೦—೦.

ಇದರಲ್ಲಿ ಬೇರೆ ಬೇರೆ ೩೦ ಕವನಗಳಿವೆ. ಕೊನೆಯ ನಾಲ್ಕು ಗೀತಗಳು. ಭಾಷೆ ಛಂದಸ್ಸು, ರೀತಿಗಳಲ್ಲಿ ಶ್ರೀಮಾನ್ ಬೇಂದ್ರೆಯವರ ಅನುಕೃತಿ ಹೆಚ್ಚಾಗಿ ಕಾಣುವುದು. ಪ್ರಣಯಗೀತ, ವರ್ಣಕ ಕವನ, ದೇಶಭಕ್ತಿ—ದೇವಭಕ್ತಿಯ ಪದ್ಯಗಳು, ತತ್ತ್ವದ ಪದದ ಜಾತಿಯ ಪದ್ಯಗಳು, ಚಲಚ್ಚಿತ್ರದ ದಾಟಿಯ ಹಾಡುಗಳು ಹೀಗೆ ವಿವಿಧ ರೀತಿಯ ಕವನಗಳು ಇದರಲ್ಲಿವೆ.

೧೫. **ಗಂಡುಹೆಣ್ಣಿನ ಸಮಸ್ಯೆ** (ಹಿಂದಿ ಕಾದಂಬರಿಯೊಂದರ ಅನುವಾದ). ಅನುವಾದ ಮಾಡಿದವರು ಶ್ರೀಮತಿ ಎಂ. ಎ. ಕುಪ್ಪಮ್ಮ, ಬೆಂಗಳೂರು. ಪ್ರಕಾಶಕರು ಶ್ರೀ. ಬಾಲಚಂದ್ರ ಘಾಣೇಕರ, ಸಮಾಜ ಪುಸ್ತಕಾಲಯ ಧಾರವಾಡ. ಪ್ರತಿಭಾ ಗ್ರಂಥಮಾಲೆಯ ೮-೯ನೆಯ ಕಿರಣ. ಕ್ರೌ. ೧೬. ೩೫೭ ಪುಟಗಳು. ಬೆಲೆ ೩—೮—೦.

೧೬. **ಶ್ರೀ. ರಾಮಾನುಜ** (ಜೀವನ ಚರಿತ್ರೆ ಮತ್ತು ತತ್ತ್ವಜ್ಞಾನ ಪರಿಚಯ). ಲೇಖಕರು ಶ್ರೀಯುತರುಗಳಾದ ಎಸ್. ಕೆ. ಶ್ರೀನಿವಾಸರಾಘವಾಚಾರ್ಯ ಬಿ. ಎ., ಎಸ್. ಎಸ್. ರಾಘವಾಚಾರ್ಯ ಎಂ. ಎ. ಮತ್ತು ಎಂ. ಎ. ಕೃಷ್ಣಸ್ವಾಮಿ ಎಂ. ಎ. ಪ್ರಕಾಶಕರು ಶ್ರೀ. ಎಚ್. ಎಸ್. ದೊರೆಸ್ವಾಮಿ, ಮಿತ್ರಸಂಘ, ಬೆಂಗಳೂರು. ಕ್ರೌ. ೧೬. ೮೦ ಪುಟಗಳು. ಬೆಲೆ ಉತ್ತಮ ಪ್ರತಿಗೆ ೧—೦—೦; ಸಾಧಾರಣ ಪ್ರತಿಗೆ ೦—೧೦—೦.

ಇದರಲ್ಲಿ ನಾಲ್ಕು ಭಾಗಗಳಿವೆ. 'ಹಿನ್ನೆಲೆ' ಎಂಬ ಮೊದಲನೆಯ ಪ್ರಕರಣವನ್ನು, 'ಜೀವನ ಚರಿತ್ರೆ' ಎಂಬ ಎರಡನೆಯ ಭಾಗವನ್ನು ಶ್ರೀ. ಎಂ. ಎ. ಕೃಷ್ಣಸ್ವಾಮಿ ಎಂ. ಎ. ಅವರು ಬರೆದಿದ್ದಾರೆ. 'ವಿಶಿಷ್ಟಾದ್ವೈತ ದರ್ಶನ ಮತ್ತು ಇತರ ದರ್ಶನಗಳು' ಎಂಬ ಮೂರನೆಯ ಭಾಗವನ್ನು ಶ್ರೀ ಎಸ್. ಎಸ್. ರಾಘವಾಚಾರ್ಯರು ಎಂ. ಎ. ಅವರು ಬರೆದಿರುವರು. ನಾಲ್ಕನೆಯ ಭಾಗ 'ಸಿದ್ಧಾಂತದ ಸ್ವರೂಪ' ವನ್ನು ಶ್ರೀ. ಎಸ್. ಕೆ. ಶ್ರೀನಿವಾಸ ರಾಘವಾಚಾರ್ಯರು ಎಂ. ಎ. ಅವರು ಬರೆದಿರುವರು. ಸಂಗ್ರಹಿಸಲೇಬೇಕಾದ ಪುಸ್ತಕ.

ಮುದ್ರಕರು:
ಶ್ರೀ ಎನ್. ಎಸ್. ಬೆಂಗೇರಿ, ನಿಜಾಮ್ ಮುದ್ರಣಾಲಯ, ಧಾರವಾಡ.

ಪ್ರಕಾಶಕರು:
ಶ್ರೀ. ಎಂ. ಬಿ. ಪೋಲೀಸ್ ಪಾಟೀಲ, ಜಯಂತಿ ಕಾರ್ಯಾಲಯ, ಧಾರವಾಡ.

ದಿ ಯುನಾಯಿಟೆಡ್ ಕರ್ನಾಟಕ ಇನ್ಶ್ಯೂರೆನ್ಸ್ ಕಂಪನಿ, ಲಿ. ಧಾರವಾಡ

ಹೆಡ್ ಆಫೀಸ್ ಧಾರವಾಡ

- **ವಿಮೆ ಮಾಡುವ ಅನುಕೂಲವುಳ್ಳ ಕರ್ನಾಟಕಸ್ಥರು, ಭರದಿಂದ ಬೆಳೆಯುತ್ತಿರುವ ಈ ಕನ್ನಡ ಕಂಪನಿಯ ಪಾಲಿಸಿಯನ್ನೇ ಪಡೆಯಬೇಕು!**
- ಮೊದಲನೆಯ ಮೌಲ್ಯಮಾಪನದಲ್ಲಿ (Valuation) ಲಾಭವನ್ನು ಹಂಚುವುದಲ್ಲದೆ, ಹೊಸ ವಿಮಾ ಕಾಯಿದೆಯ ನಿರ್ಬಂಧಗಳಿಗೆ ತಕ್ಕಂತೆ ನಡೆದು, ಎಲ್ಲ ಪಾಲಿಸಿದಾರರ ಪ್ರೋತ್ಸಾಹಕ್ಕೂ ಪಾತ್ರವಾಗಿದೆ.
- ಮರಣಹೊಂದಿದ ಪಾಲಿಸಿದಾರರ ವಾರಸದಾರರಿಗೆ ವಿಲಂಬವಿಲ್ಲದೆ ಹಕ್ಕಿನ ಹಣ (Claim) ವನ್ನು ಸಲ್ಲಿಸುವುದರಿಂದ, ಎಲ್ಲರ ನಂಬಿಗೆಗೂ ತಕ್ಕುದಾಗಿದೆ.
- ಕರ್ನಾಟಕದ ಏಳ್ಗೆಗಾಗಿ ಹಂಬಲಿಸುವವರೂ ಕನ್ನಡನಾಡಿನ ಹಿತಚಿಂತಕರೂ, ಇದೇ ಕಂಪನಿಯ ಪಾಲಿಸಿಗಳನ್ನೂ ಪಾಲುಗಳನ್ನೂ ಕೊಂಡುಕೊಳ್ಳಲೇಬೇಕು.

ಏಜಂಟರಿಗೆ ಧಾರಾಳವಾದ ಕಮಿಶನ್ ಕೊಡಲಾಗುವುದು.

ವಿಶೇಷ ವಿವರಕ್ಕೆ ಬರೆಯಬೇಕು :- ಎಂ. ಗೋವರ್ಧನರಾವ, ಮ್ಯಾನೇಜರ್

ಕೆಮ್ಮನ್ನು ಅಲಕ್ಷಿಸಿದ ವಿಶೇಷ ದುಷ್ಪರಿಣಾಮಗಳಿಂದ, ಸಾವಿರಾರು ಜನರನ್ನು, ಪ್ರಸಿದ್ಧಿಗೊಂಡಿದ ಈ ಔಷಧವು ಸಂರಕ್ಷಿಸಿದೆ.

'**ಕಾಸ್ಫೊ**'ದಲ್ಲಿ ಎರಡು ರೀತಿಯ ಗುಣಗಳಿವೆ:— ಹೊರಭಾಗದಿಂದ:— ಅದರ ಸರಿಯಾದ ಶಕ್ತಿಯು ಗಂಟಲೊಳಗೆ ಇಳಿಗೊಂಡು ಕೆಮ್ಮನ್ನು ತೋರಿಸುವ ನರಗಳನ್ನು ಶಾಂತಪಡಿಸುತ್ತದೆ. ಒಳಭಾಗದಿಂದ:— ಅದು ಗಂಟಲೊಳಗಿನ ಸ್ವಾಭಾವಿಕವಾದ ಒಸರುವಿಕೆಗೆ ಚೈತನ್ಯವನ್ನುಂಟುಮಾಡುತ್ತದೆ. ಕಫವನ್ನು ಕತ್ತರಿಸಲು ಸಹಾಯ ಮಾಡುತ್ತದೆ. ಶ್ವಾಸೋಚ್ಛ್ವಾಸದ ನಾಳಗಳನ್ನು ಶುದ್ಧಪಡಿಸುತ್ತದೆ. ಮತ್ತು ಕೆಮ್ಮನ್ನು ಹೊರಡಿಸುವ ರೋಗವನ್ನು ಅಲ್ಪಕಾಲದಲ್ಲಿಯೇ ನಿರ್ಮೂಲಪಡಿಸಿ, ಎಂದೆಂದಿಗೂ ಕೆಮ್ಮಿನ ಬಾಧೆಯನ್ನು ನೀಗಿಸುತ್ತದೆ. 'ಪ್ರಿಸ್ಕ್ರಿಪ್ಶನ್'ನಂತೆ ಒಂದು ಬಿಲ್ಲೆಯನ್ನು ೧-೨ ಗಂಟೆಗೊಮ್ಮೆ ಕೆಮ್ಮು ಕಡಿಮೆಯಾಗುವವರೆಗೆ ತೆಗೆದುಕೊಳ್ಳುವುದು.

ಎಲ್ಲಾ ಔಷಧಾಲಯಗಳಲ್ಲಿಯೂ ದೊರೆಯುವುದು

ಕೆಮ್ಮಿನ ಬಾಧೆಯಿಂದ ನಿಮಗೆ ರಾತ್ರಿಯಿಂದ ನರಳು ತ್ತಿರುವಿರಿ. ಆದಕ್ಕಾಗಿ [illegible] ಮಾಡಿದ್ದರಿ—ನೀವು "ಕಾಸ್ಫೊ" ವನ್ನು ತೆಗೆದುಕೊಳ್ಳಲು ಆರಂಭಿಸಿದ ಕೂಡಲೇ, ಕೆಮ್ಮು [illegible] ಕೆಮ್ಮು ಕೂಡಲೆ [illegible] "ಕಾಸ್ಫೊ" [illegible] ಆದನು, ಕಿಕ್ಕೊಳ್ಳುತ್ತದೆ.

Kaspho

ಆಶ್ಚರ್ಯಕರವಾದ ಕೆಮ್ಮು-ನಾಶಕ ಬಿಲ್ಲೆಗಳು

ಅಯುರ್ವೇದಾಶ್ರಮ ಫಾರ್ಮಸಿ ಲಿಮಿಟೆಡ್, ಅಹಮ್ಮದ್ ನಗರ.

ಜಯಂತಿ

ಸಂಪಾದಕ:
ಬೆಟಗೇರಿ ಕೃಷ್ಣಶರ್ಮ

ಸಂಪುಟ ೮] [ಸಂಚಿಕೆ ೨

ಈ ಸಂಚಿಕೆಯಲ್ಲಿ:—

ನನ್' ಹಿಂದುಸ್ತಾನ್ ದೊಡ್ ದೇಶಾ (ವ್ಯಂಗ್ಯಕವನ)
ಶ್ರೀ. ಜಿ. ವಿ. ಕಟ್ಟಿ ಬಿ. ಎ., ಎಲ್ಎಲ್. ಬಿ ಬೆಳಗಾವಿ
ಹದಿನೆಂಟು (ಸಣ್ಣ ಕತೆ)
ಶ್ರೀ. ಎಸ್. ಅನಂತನಾರಾಯಣ ಬಿ. ಎ. (ಆನರ್ಸ್) ಮೈಸೂರು
ಜಾತೀಯ ಐಕ್ಯ (ವಿಚಾರ ಪ್ರಚೋದಕ ಪ್ರಬಂಧ) ೩೮
'ಶ್ರೀರಂಗ'
ಮಹಾಪ್ರವಾಸ ಇಲ್ಲವೆ ಭಾರತಯುದ್ಧ (ನಡೆದ ಕತೆ) ೪೨
ಶ್ರೀ. ಬಿ. ಎಚ್. ಶ್ರೀಧರ ಎಂ. ಎ. ಭಟಕಳ
ನೀಲಗಿರಿಯಲ್ಲಿ ಒಂದು ದೃಶ್ಯ (ಕವನ) ೪೩
ಶ್ರೀ. ಸಾಲಿ ರಾಮಚಂದ್ರರಾಯರು, ಧಾರವಾಡ
ಸಂಯುಕ್ತಘಟನೆಯ ಭಾರತ (ರಾಜಕಾರ್ಯ ವಿಮರ್ಶೆ) ೪೪
ಶ್ರೀ. ರಂ. ಬಾ. ಜೋಶಿ, ಧಾರವಾಡ
ಹಸಿದವರ್ಯಾಡು (ಗೀತದೃಶ್ಯ) ೪೭
ಶ್ರೀ. 'ಚಿದಾನಂದ' ಜ್ವಾಲಪೊಂಗಲು
ವಿಷಮ ಸಾಹಸ (ಕನ್ನಡಿಸಿದ ಸಣ್ಣ ಕತೆ) ೫೨
ಶ್ರೀ. ಎಸ್. ಎನ್. ರಾಮಸ್ವಾಮಿ ಅಯ್ಯರ್

ಅಲ್ಲದೆ, ಸಂಪಾದಕೀಯ (೩೨), ಮಂಗನ ಮಲ್ಲಿನಾಥನ (೩೩).
ವಿಜ್ಞಾನದ ವಿಚಿತ್ರ ಪ್ರಸಂಗ. (೫೪) ಪುಸ್ತಕ ವಿಮರ್ಶೆ (೫೬) ಸಾದರ-
ಸ್ವೀಕಾರ (೫೭) ನಾ. ನಿ. ನೋಟ (೫೮).

ಏಪ್ರಿ ೧೯೪೫ ಬೆಲೆ ೬ ಆರಾಣೆ

ಬಳ್ಳಾರಿ ಜಿಲ್ಲೆಯ ೧ನೆಯ ಕನ್ನಡ ಸಮ್ಮೇಳನ

(ಹಕ್ಕಿ-ನೋಟ)

'ಮಂಜುನಾಥ' ಬಳ್ಳಾರಿ

'ಬಳ್ಳಾರಿ ಕನ್ನಡ ನಾಡಿನ ಗಂಡುಮೆಟ್ಟು!— ಕರ್ನಾಟಕ ಜಯಶ್ರೀ ಮಿಂಚಿ ಮೆರೆದ ನಾಡು! ವಿದ್ಯಾರಣ್ಯರ—ಕನ್ನಡ ಕಲಿಗಳ ಬೀಡು!' ಎಂದು ನೋಡುತ್ತ ಹಾಡುತ್ತಿದ್ದಂತೆಯೆ, ಕನ್ನಡವೆಲ್ಲ ಅಳಿಸಿ ಹೋಗುವುದರಲ್ಲಿತ್ತು. ತೆಲುಗರು ಎಲ್ಲವನ್ನೂ ತಮ್ಮದನ್ನಾಗಿ ಮಾಡುವುದರಲ್ಲಿದ್ದರು! ಆದರೆ ಆ ಕನ್ನಡತನ ಹೇಗೆ ಹೋದೀತು?

ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯ, ಏಕೀರಣ ಸಭೆಯ ಕಾರ್ಯ ಇತ್ತ ಕಡೆಗೇ ಒತ್ತರವಾಗಿ ಜರುಗಬೇಕಿದ್ದರೂ, ಬರಿ ಮಾತಿನಲ್ಲೇ ಮುಕ್ತಾಯ ಹೊಂದಿದುದನ್ನು ಕಂಡು ನಿರಾಶೆ ಹೊಂದಿದರೂ, ಬಳ್ಳಾರಿಯ ಕನ್ನಡಿಗರು ಕೆಲಸ ಮಾಡುವುದನ್ನು ಕಡಿಮೆ ಮಾಡಲಿಲ್ಲ. ಉಳಿದ ದಾರಿ—'ಉದ್ಧರೇದಾತ್ಮನಾತ್ಮಾನಂ!' ಜನರಲ್ಲಿ ಸ್ಫೂರ್ತಿಗೆ, ಕಾರ್ಯೋನ್ಮುಖತೆಗೆ ಕಡಿಮೆಯಿರಲಿಲ್ಲ. ಛಿನ್ನವಿಚ್ಛಿನ್ನ ಸ್ಫೂರ್ತಿಗಳಿಗೊಂದು ದಾರಿ ಮಾತ್ರ ತೋರಬೇಕಿತ್ತು! ಅಂತೆಯೆ ಸಮ್ಮೇಳನವನ್ನು ನೋಡಿದ ಮೇಲೆ 'ಎಂತಹ ಉತ್ಸಾಹವಪ್ಪಾ!' ಎನಿಸಿತು ಎಲ್ಲರಿಗೆ!

ಪುನರ್ರಚಿತವಾದ ಜಿಲ್ಲಾ ಕರ್ನಾಟಕ ಸಂಘ ಇಷ್ಟೊಂದು ಶೀಘ್ರವಾಗಿ ಇಷ್ಟೊಂದು ಯಶಸ್ವೀ ಸಮಾವೇಶ ಜರುಗಿಸಲು ಶಕ್ತಿಯುತವಾಗಿದ್ದುದು ಸಂತೋಷದ ಸಂಗತಿ! ಶ್ರೀ. ಕೆ. ಚೆನ್ನಬಸಪ್ಪ, ಶ್ರೀ. **ಅಲಬೂರು ನಂಜಪ್ಪ** ಅವರಂತಹ ಉತ್ಸಾಹೀ ತರುಣ ಕಾರ್ಯಕರ್ತರ ಕಳಕಳಿಯ ಬಿನ್ನಪ ಹೊಸ ಕಳೆಯನ್ನೇ ತಂದುಬಿಟ್ಟಿತು! ಕನ್ನಡದ ಹುಚ್ಚು ಒಡಮೂಡಿತು ಜನರಲ್ಲಿ! ಚೇತನ ಸಜೀವವಾಗಿರಲು ಇಂತಹ ಸನ್ನಿವೇಶಗಳ ಅವಶ್ಯಕತೆ ಬಹಳ ಬೇಕು! ಎರಡು ಪ್ರಾಂತೀಯ ಸಾಹಿತ್ಯ ಸಮ್ಮೇಳನಗಳಾಗುವ ಸುಯೋಗ ಬಳ್ಳಾರಿಗಿತ್ತು—ಆದರೆ—ಅವುಗಳ ಕಾರ್ಯಕಲಾಪಗಳೇ ಬೇರೆ! ಪ್ರಾಂತಿಕ ದೃಷ್ಟಿ ಅವುಗಳದು! ಮನೆಯ ಸಂಗತಿ ಬಿಟ್ಟು ಊರ ಸಂಗತಿ ಎತ್ತಿಕೊಂಡಂತೆ! ಗದ್ದಲ ಮುಗಿದ ಮೇಲೆ ಮನೆಯ ವಿಷಯಗಳೇ ಮನಸ್ಸಿನಲ್ಲಿ ಮೂಡುವುದಲ್ಲದೆ ಹೊರಗಿನ ಸಂಗತಿಗಳು ಮುಚ್ಚಿಹೋಗುತ್ತವೆ! ಹಾಗೆಯೆ ಆ ಸಮ್ಮೇಳನಗಳ ಪ್ರಭಾವ! ಮರೆತುಹೋಗದಿದ್ದರೂ—ಮಾಸಿಹೋಗಿದೆ! ಈಗ ನಮ್ಮ ಸಂಗತಿ, ನಮ್ಮ ಜಿಲ್ಲೆಯ ಸಂಗತಿ, ನಮ್ಮವರ ಸಮಸ್ಯೆಗಳು ಇವುಗಳನ್ನು— ಕಲೆತು ಕೂಡಿ ತೀರ್ಮಾನಿಸಲು ಒಂದು ಸುಯೋಗ ಸಿಕ್ಕಿದುದು ಎಷ್ಟು ಸೊಗಸಾದ ಪ್ರಸಂಗ! ಇಂತಹ ಸಮಾವೇಶ ವರ್ಷವರ್ಷವೂ ಜರುಗುವುದಂತೆ! ಬರುವ ಡಿಸೆಂಬರಿನಲ್ಲೇ ರಾಯದುರ್ಗದಲ್ಲಿ ಮುಂದಿನ ಸಮ್ಮೇಳನ ಜರುಗುವುದು! ಆಮಂತ್ರಣಕೊಡಲಾಗಿದೆ!

× × × ×

ಕಳೆದ ಜೂನ್ ಒಂದನೆಯ ಮತ್ತು ಎರಡನೆಯ ತಾರೀಕುಗ[ಳಲ್ಲಿ] ವಿಜೃಂಭಣೆಯಿಂದಲೇ ಜರುಗಿತು ಈ ಸಮ್ಮೇಳನ. ಜಿಲ್ಲೆಯ ಮ[ೂಲೆ] ಮೂಲೆಗಳಿಂದ ಹಲವಾರು ಪ್ರತಿನಿಧಿಗಳು ಬಂದಿದ್ದರು. ಉ[...] ಉಪಚಾರ, ವ್ಯವಸ್ಥೆಗಳೆಲ್ಲ ನಾಜೂಕಾಗಿಯೇ ಇದ್ದುವು. ಎ[...] ದಿನ 'ವಾರ್ಡಲಾ ವಠಾರ'ದಲ್ಲಿ ಕನ್ನಡದ ಬಾವುಟ ಹಾರಿತು!

ಗಮಕ ಕಲಾನಿಧಿಗಳಾದ ದೊಡ್ಡನಗೌಡರ ಸ್ವಾಗತ ಭಾ[ಷಣ] ಹಿಂದಣ ವೈಭವಗಳನ್ನು ನೆನೆದು, ಕಾರ್ಯಬಾಹುಳ್ಯವನ್ನು ಬಿತ[್ತಿ] ಕನ್ನಡಿಗರನ್ನು ಎಚ್ಚರಿಸಿದರೆ, ಉದ್ಘಾಟಕರಾದ ನಾಗೇಶ ಶಾಸ್ತ್ರಿ[ಗಳ] ಭಾಷಣ ಹೊಸತೊಂದು ಸಮರ್ಥನೆಯನ್ನೇ ಎದುರಿಟ್ಟಿತು! [...] ವರ್ಷಗಳಿಂದಲೂ ಹಿಂದೆ ಬಂದ ಮಿಶನರಿಗಳು ಬಳ್ಳಾರಿಯ[ನ್ನು] ತಮ್ಮ ಕನ್ನಡ ಖಾತೆಯಲ್ಲೇ ಜೋಡಿಸಿಬಿಟ್ಟಿದ್ದರು! ಆ ಕನ್ನ[ಡ] ಬಳ್ಳಾರಿಯಲ್ಲಿ ನಲಿದಾಡುತ್ತಲೇ ಇತ್ತು! 'ಬಳ್ಳಾರಿ ತೆಲುಗರದು' ಎಂದು ಸಾಧಿಸುವ ಮಹಾನುಭಾವರಿದುರಿಗೆ, ಹಾಗಲ್ಲವೆಂಬು[ದಕ್ಕೆ] ಇದಕ್ಕೂ ಹೆಚ್ಚಿಗೆ ಬೆಲೆಯುಳ್ಳ ಸಾಕ್ಷಿಯಾವುದು ಬೇಕು?

ಇನ್ನು ಅಧ್ಯಕ್ಷ ತಿರುಮಲರ ತಿರುನುಡಿ!—ಕರ್ತವ್ಯ ವಿಧಾ[ಯ]ಕತೆಯನ್ನೇ ಸೂಚಿಸುತ್ತದೆ; ನಮ್ಮ ಬೇಕುಗಳನ್ನು ಮಂಡಿಸುತ್ತ[...] ಸ್ವತಃ ಗಮಕಿಗಳಾದ ಮೈಸೂರು ತಿರುಮಲಾಚಾರ್ಯ[ರು] ತೆಲುಗನ್ನೇ ಕಲಿತು ತೆಲುಗರನ್ನೇ ವಿರಾಂಸಿದ ಕನ್ನಡಿಗ[ರು]! ಮ[...] ಬಿಟ್ಟು ಕನ್ನಡವನ್ನು ಶ್ರಮಪಟ್ಟು ಕಲಿತು, ತೆಲುಗಿನಿಂದ ದ[...] ಲಾಭವನ್ನು ಕನ್ನಡದಲ್ಲಿ ವ್ಯಯಿಸಲು ಟೊಂಕ ಕಟ್ಟಿ ನಿಂತಿದ[ೆ] ಕರ್ಣನ ಘೋರ ಸಂಕಲ್ಪ ಮಾಡಿದ್ದಾರೆ—ಮಾಡಿಸಿದ್ದಾರೆ.

ಹೊಸತು ಬೇಕೆನ್ನುವುದಕ್ಕಿಂತಲೂ ಇದ್ದುದನ್ನು ಬಳಸಿಕೊ[ಳ್ಳ] ಬೇಕೆನ್ನುವ ಪಂಥ ಇವರದು! ತಮ್ಮನ್ನೇ ಕನ್ನಡ ಸಾಹಿತ್ಯದ[...] ಯಲ್ಲಿ ಮುಳುಗಿಸಿದ ಕುಮಾರವ್ಯಾಸ ಭಾರತದಂತಹ ಕೃತಿಗ[ಳನ್ನು] ಜನಸಾಮಾನ್ಯರಲ್ಲೂ ಹಂಚಲು ಹವಣಿಸುತ್ತಾರೆ! ಕನ್ನಡ[...] ವಿಶಿಷ್ಟವಾಗಿರುವ ದಾಸರ ಕೀರ್ತನೆಗಳು, ಜಾನಪದ ಗೀತ[ೆ] ಯಕ್ಷಗಾನ ಬಯಲಾಟಗಳು ಕನ್ನಡ ಪ್ರಜಾದಲ್ಲಿ [...] ಬೇಕಲ್ಲವೆ? ಎಲ್ಲರೂ ಒಪ್ಪಬೇಕಾದ ಮಾತುಗಳು!

ಅಧ್ಯಕ್ಷ ಭಾಷಣ ಗಂಭೀರವಾದ ವಿಷಯಗಳನ್ನು ಸಾಮಾ[ನ್ಯ]ರಿಗೆ ತಿಳಿಯಾಗಿ ಮಾಡಿಕೊಟ್ಟಿತ್ತು. ಎಲ್ಲ ಸೂಚನೆಗಳು ಸ[...] ವಾಗಿ ವಿಧಾಯಕವಾಗಿದ್ದುವು. ಕನ್ನಡತನದ ಕಷ್ಟ-ಸುಖಗಳ[ನ್ನು] ಅನುಭವಿಸಿದ ರಸಿಕನ ಹೃದಯದಿಂದ ಹೊರ[...] ಮಾ[ತು]ಗಳಲ್ಲವೆ?

(ಕವರಿನ ೩ನೆಯ ಪುಟ ನೋಡಿರಿ)

ಜಯಂತಿ

ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

ವಾ. ವರ್ಗಣಿ ಅಂಚೆವೆಚ್ಚ ಸೇರಿ ೪—೮—೦ ಆರು ತಿಂಗಳಿಗೆ ೨—೪—೦ ಬಿಡಿ ಸಂಚಿಕೆಗೆ ೬ ಆಣೆ.

ಸಂಪುಟ ೮ | ೧ನೆಯ ಜೂಲೈ ೧೯೪೫ | ಸಂಚಿಕೆ ೨

ನಮ್ ಹಿಂದುಸ್ತಾನ್ ದೊಡ್ ದೇಶಾ!

ಶ್ರೀ ಜಿ. ವಿ. ಕಟ್ಟಿ ವಕೀಲರು, ಬೆಳಗಾಂವಿ

(ಶ್ರೀ, ಕೈಲಾಸಂ ಅವರ ‹ ನಮ್ ತಿಪ್ಪಾರ್‌ಹಳ್ಳಿ ಬಲು ದೂರಾ › ಎಂಬ ಪದದ ನಡಿಗೆ.)

ನಮ್ ಹಿಂದುಸ್ತಾನ್ ದೊಡ್ ದೇಶಾ...... ಜನಸಂಖ್ಯಾಕ್ ದೊಡ್ ದೇಶಾ!
ನಮ್ ಹಿಂದುಸ್ತಾನ್ ದೊಡ್ ದೇಶಾ....... ಬೇಕಾರ್‍ನೋಡಿಕೊಳ್ರಿ ನಕಾಶಾ!

೧

ಹಿಂದೂ—ಮುಸ್ಲಿಂ—ಪಾರ್ಸೀ—ಕ್ರಿಶ್ಚನ್ ಧರ್ಮದ
ಹೊಡಿದಾಟಾ!
ಆರ್ಯ ಶೀಖ ಬೌದ್ಧ ಜೈನ ಮತಗಳ ಮೇಳಾಟಾ!
ಮುದ್ರೀ ಧನ್ಯಾ ಬಡಕೊಂಡ್ ಮೋಕ್ಷಕ ಟುಣುಟುಣು
ಜಗದಾಟಾ!
ಮನವಾನ್ ಮನಿಶಾ ಮುಟಾಬೇಕಾದ್ರ ಎಂಥಾ ಗೋಟಾಟಾ!
ನಮ್ಮ್ ಹಿಂದುಸ್ತಾನ್ ದೊಡ್ ದೇಶಾ.......

೨

ಎಲ್ಲೆಲ್ಲ್ನೋಡ್ರಿ ತ್ರಿಕಾಲಜ್ಞಾನಿ ನಂತರ ಅವತಾರಾ....
ಬೂದಿಯೊಳಗಿನ ಬಂಗಾರ್ ತೊರ್‍ಸಾ ಬಾಬಾನ್ ಬಾಜಾರಾ...
ಪ್ಯಾಲಿಂದ್ ಪ್ಯಾಲಿ ಮನ್ಯಾರವ್ನೈಯಾಗ ದೇವರನಂಜಾರಾ...
ಕ್ಷೇತ್ರಕ್ಕ್ಹೋದರ ಮೊದಲು ಸುಲಿಗೀ ಆ ಪ್ಯಾಲುದ್ವಾರಾ!
ನಮ್ಮ್ ಹಿಂದುಸ್ತಾನ್ ದೊಡ್ ದೇಶಾ.......

೩

ಸಾಯೂ ಮುತ್ತ್ಯಾನ್ ಮೂರ್ನೇ ಮದಿವೀ
ಸಂಭ್ರಮ್ದಾ ನೋಡ್ರಿ....
ಬಂಗಾರ್‌ಗಿಳೀಪಿನ ಚಾಳೀಸ್ದಾ ಕಿದ ಕಾಮಣ್ಣ ನೋಡ್ರಿ....
ಕಲವು-ಗಿಲವು ಹಚಿಕೊಂಡ್ ನ್ಯಾಟ್ಯಾಗ
ಮೆರವಣಿಗೀ ನೋಡ್ರಿ....
ಹದಿನೈದು ವರ್ಷದ ವಿಧವೆಗೆ ಮಾತ್ರ ವೇದಾಂತ ಹೇಳತಾರ್ರೀ!
ನಮ್ಮ್ ಹಿಂದುಸ್ತಾನ್ ದೊಡ್ ದೇಶಾ.......

೪

ಒಂದೇ ಧರ್ಮಾ ಸಾವಿರ ಜಾತೀ ಎಂಥಾ ವಿಚಿತ್ರಾ!
ಒಂದು ಜಾತಿಗಿಂತಾ ಮತ್ತೊಂದ್ ಜಾತಿ ಪವಿತ್ರಾ!
ಆರೇಳ್ ಕೋಟಿ ಹಿಂದೂ ಜನರೇ ಸ್ಪರ್ಶಕ್ ಅಪಾತ್ರಾ!
ಸಾಹೇಬ್ ಪಾರ್ಟೀ ಕೊಟ್ಟರೆ ಎಲ್ಲರ ಭೋಜನ ಏಕತ್ರಾ!
ನಮ್ಮ್ ಹಿಂದುಸ್ತಾನ್ ದೊಡ್ ದೇಶಾ.......

ನಮ್ ಹಿಂದುಸ್ತಾನ್ ದೊಡ್ ದೇಶಾ....... ಜನಸಂಖ್ಯಾಕ್ ದೊಡ್ಡ ದೇಶಾ!
ನಮ್ ಹಿಂದುಸ್ತಾನ್ ದೊಡ್ ದೇಶಾ....... ಬೇಕಾರ್‍ನೋಡಿಕೊಳ್ರಿ ನಕಾಶಾ!

ಕನ್ನಡದ ಕರ್ಮಯೋಗಿ

ಪ್ರತಿಯೊಂದು ಪ್ರಾಣಿಯ ಜೀವನಕ್ಕೆ ಸಾವೆಂಬ ಕೊನೆಯನ್ನು ನಿರ್ಮಿಸಿ, ನಿಸರ್ಗವು ಜೀವನನಾಟಕದಲ್ಲಿ ವಿವಿಧ ಭಾವ-ರಸಗಳು ಪರಿಪೋಷಣೆ ಹೊಂದುವಂತೆ ಮಾಡಿರುವುದು. ವೀರನ ಸಮರಮರಣ ಉತ್ಸಾಹಕಾರಿಯಾಗಿ ಕಂಡರೆ, ಧೀರನ ಪರಾರ್ಥಮರಣ ಆದರ್ಶದತ್ತ ತಿರುಗಿಸುತ್ತದೆ. ಆಪ್ತ-ಬಂಧುಗಳ ಮರಣ ನಿರ್ವೇದವನ್ನುಂಟುಮಾಡಿದರೆ ಶತ್ರುಗಳಾದವರ ಮರಣ ಸಮಾಧಾನವನ್ನು ಹುಟ್ಟಿಸುತ್ತದೆ. ಪ್ರಿಯ-ಪ್ರೇಯಸಿಯರ ಮರಣ ಕರುಣೆಯ ಹೊಳೆಯನ್ನು ಹರಿಸಿದರೆ ನೆರೆಹೊರೆಯವರ ಮರಣ ಭಯಾನಕ-ಬೀಭತ್ಸಗಳನ್ನು ತಲೆದೋರಿಸುತ್ತದೆ; ಯಾವಾಗಲೂ, ಮರಣದ ಭೀತಿ ತಿಳಿದವನನ್ನು ಆಶಾವಾದಿಯನ್ನಾಗಿಸಿ ಕಾರ್ಯಪ್ರವಣನನ್ನು ಮಾಡುತ್ತದೆ; ತಿಳಿಯದವನನ್ನು ನಿರಾಶೆಯಲ್ಲಿ ಕೆಡಹಿ ಕಂಗೆಡಿಸಿ ಹೇಡಿಯನ್ನಾಗಿ ಮಾಡಿಬಿಡುತ್ತದೆ. ಮರಣವೆಂಬುದೊಂದು ಇರದೆ ಇರುತ್ತಿದ್ದರೆ, ಜೀವನದಲ್ಲಿ ಸ್ವಾರಸ್ಯವೇ ಉಳಿಯುತ್ತಿರಲಿಲ್ಲವೆಂದು ಹೇಳಬಹುದು. ಆದರೂ ಜನಸಾಮಾನ್ಯರಿಂದ ತುಂಬಿದ ಜಗತ್ತಿನಲ್ಲಿ, ಮರಣಕ್ಕಾಗಿ ಅಳುವ ಜನರೆ ಹೆಚ್ಚಾಗಿ ತೋರುವರು.

ಅತ್ತು ಕಣ್ಣೀರುದುರಿಸಿದರೆ ಸತ್ತವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಿ ಋಣಮುಕ್ತರಾದೆವೆಂಬ ಮೂಢಭಾವನೆ ನಮ್ಮಲ್ಲಿ ಬೆಳೆದು ಬಂದಿದೆ. ಇದು ಸಂಪೂರ್ಣವಾಗಿ ತಪ್ಪು. ವ್ಯಕ್ತಿಯ ಕಾರ್ಯಮಹತ್ತ್ವದಂತೆ ಋಣವನ್ನು ತೀರಿಸುವ ವಿಧಾನಗಳು ಬೇರೆಯಾಗಿರುವುವು. ಸುಸಂತಾನವನ್ನು ಒದಗಿಸಿ ಲೋಕದ ಮುಂದುವರಿತಕ್ಕೆ ಸಹಾಯ ಮಾಡುವುದರಿಂದ ಪಿತೃಋಣ ತೀರಿಸಿದಂತಾಗುವುದು. ಸತ್ಯದ್ರಷ್ಟಾರರ ಸತ್ಯಸಿದ್ಧಾಂತದ ಬೆಳಕನ್ನು ತಲೆಯಿಂದ ತಲೆಗೆ ತೆಗೆದುಕೊಂಡು ಹೋಗುವುದರಿಂದ ಋಷಿಋಣವನ್ನು ತೀರಿಸಿದಂತಾಗುವುದು. ವಿಭೂತಿಪುರುಷರ ಕಾರ್ಯಗೌರವದ ತಿರುಳನ್ನರಿತು, ಆ ಕಾರ್ಯ ಮುಂದುವರಿಸುವ ಆವಶ್ಯಕತೆ ಕಂಡಲ್ಲಿ, ಲೋಕಕಲ್ಯಾಣದ ದೃಷ್ಟಿಯಿಂದ ಅದನ್ನು ಮುಂದುವರಿಸುವುದರಿಂದ ಅಂತಹ ಮಹನೀಯರ ಋಣ ತೀರಿಸಿದಂತಾಗುವುದು. ಈ ತತ್ತ್ವವನ್ನು ಅರಿತವರು ಸತ್ತವರಿಗಾಗಿ ದುಃಖಪ್ರದರ್ಶನ ಸಭೆ ಮಾಡಬೇಕಾಗಿಲ್ಲ; ಅವರ ಭೌತಿಕಸ್ಮಾರಕವೆಂದು ಸ್ತಂಭ-ಶಾಸನ ಪ್ರತಿಮೆಗಳನ್ನು ಸ್ಥಾಪಿಸಲೇಬೇಕೆಂಬ ನಿರ್ಬಂಧವಿಲ್ಲ. ಕರ್ಮಯೋಗಿ ಕೌಜಲಗಿ ಹನುಮಂತರಾಯರ ಋಣದಿಂದ ಕನ್ನಡಿಗರು ಮುಕ್ತರಾಗಬೇಕಾದರೆ, ಅವರ ಕರ್ಮಯೋಗಿತ್ವದ ಮರ್ಮವನ್ನು ಅರಿತುಕೊಳ್ಳಬೇಕು ; ಅದನ್ನು ತಮ್ಮ ನಿತ್ಯಜೀವನದಲ್ಲಿ ತಂದುಕೊಳ್ಳಬೇಕು.

ದಿವಂಗತ ಕೌಜಲಗಿ ಹನುಮಂತರಾಯರು ಭಾರತದಲ್ಲಿಯ ಬಹಳ ಜನರಂತೆ ಸಾಮಾನ್ಯ ಪರಿಸ್ಥಿತಿಯ ತಂದೆ-ತಾಯಿಗಳ ಹೊಟ್ಟೆಯಿಂದಲೆ ಹುಟ್ಟಿದವರು. ಮಹಾಪುರುಷರ ಅವತಾರಕಾಲದಲ್ಲಿಯ ಸಾಂಪ್ರದಾಯಿಕ ಚಮತ್ಕಾರಗಳೇನೂ ಅವರ ಜನ್ಮಕಾಲದಲ್ಲಿ ಘಟಿಸಿದಂತೆ ಕಾಣೆವು. ಎಲ್ಲ ಬಾಲಕರು ಬೆಳೆಯುವಂತೆಯೆ ಇವರೂ ಬೆಳೆದಿರಬಹುದು. ಕಲಿಯುವ ಅನುಕೂಲತೆಯಿದ್ದುದರಿಂದ ಎಲ್‌ಎಲ್.ಬಿ ವರೆಗೆ ಕಲಿತರು. ಹಲವು ಜನರಂತೆ ವಕೀಲಿಯನ್ನು ಪ್ರಾರಂಭಿಸಿದರು. ಮಿಕ್ಕ ವಕೀಲರಂತೆ ದುಡ್ಡು ಗಳಿಸಿಯೊ—ಗಳಿಸಲಾರದೆಯೊ—ಸತ್ತುಹೋಗಿದ್ದರೆ, ಅವರನ್ನು ಕುರಿತು ಬರೆಯುವ ಸಂದರ್ಭ ನಮಗೆ ಬರುತ್ತಿರಲಿಲ್ಲ. ಆದರೆ ಹನುಮಂತರಾಯರ ಕರ್ತವ್ಯಬುದ್ಧಿ-ಕಾರ್ಯಕಾರಿತ್ವಗಳ ಮೇಲ್ಮೆಯಿಂದ ತುಂಬಿದ ತುಂಬು ಮಾನವತನ, ಕನ್ನಡದ ಅಭಿಮಾನಿಗಳ ಲೆಕ್ಕಣಿಕೆಯನ್ನು ಸುಮ್ಮನಿರಗೊಡಿಸುವಂತಹದಲ್ಲ.

ಸಮಾಜಶಾಂತಿ ಹನುಮಂತರಾಯರ ಮುಖ್ಯ ಗುರಿ. ಅದಕ್ಕೆ ಸ್ವಾತಂತ್ರ್ಯಜೀವನವು ಸಾಧನವೆಂಬುದನ್ನು ಅವರು ಭಾವಿಸಿದ್ದರು. ಭಾರತದ ಸ್ವಾತಂತ್ರ್ಯ ರಾಯರಿಗೆ ಕೊನೆಯ ಸಿದ್ಧಿಯಲ್ಲ; ಭಾರತೀಯರ ಶಾಂತಿ-ಸುಖಗಳು ಅವರ ಮುಖ್ಯ ಗುರಿ. ಆದುದರಿಂದಲೆ ಅವರು ಹಣ ಗಳಿಸುವ ವಕೀಲಿ 'ಧಂದೆ'ಯನ್ನು ಬಿಟ್ಟು, ದೇಶದ ಹೀನ ದೀನರ—ಸಂಕಟಗ್ರಸ್ತರ ವಕೀಲಿಯನ್ನು ಸಂತೋಷದಿಂದ ಕೈಕೊಂಡು, ನಿಸ್ಪೃಹಿಗಳಾಗಿ ಕಾರ್ಯ ಮಾಡಲು ತೊಡಗಿದರು. ಅವರ ಉಪನ್ಯಾಸ ಹುಯ್ಯೆಂದು ಹುಯಿಲೆಬ್ಬಿಸುವ ಭಾವನಾಪ್ರಧಾನವಾದುವಲ್ಲ. ಬುದ್ಧಿ-ಭಾವನೆಗಳ ಸಾಮರಸ್ಯದಿಂದ ಕೂಡಿ, ಜನರನ್ನು ಕರ್ತವ್ಯಜಾಗೃತರನ್ನಾಗಿಸುವಂತಹ ಹಿತವಚನಗಳಿಂದ ಕೂಡಿದುವು. ಸಂದರ್ಭ ಬಂದಾಗ ಸೆರೆಮನೆಗೆ ಹೋಗಲು ಹಿಂಜರಿಯದ ಗಂಡೆದೆಯವರಲ್ಲಿ ಇದ್ದರೂ, ಸೆರೆಮನೆಗೆ ತಾವಾಗಿಯೆ ಹೋಗುವ ಆತುರ ಅವರದಲ್ಲ. ಏಕೆಂದರೆ ಸೆರೆಮನೆಗೆ ಹೋಗಿ ನಿಷ್ಕ್ರಿಯರಾಗಿ ಕುಳಿತುಕೊಳ್ಳುವುದಕ್ಕಿಂತ ಹೊರಗಿದ್ದುಕೊಂಡು ಬಡವರಿಗೆ ಒಂದು ತುತ್ತು ರೊಟ್ಟಿ ಒದಗುವಂತೆ ಮಾಡುವ ವಿಧಾಯಕ ಕಾರ್ಯ ರಾಯರಿಗೆ ಪ್ರಿಯವಾದುದು. ಅಂತಲೆ ಖಾದಿ—ಗ್ರಾಮೋದ್ಯೋಗ—ಹರಿಜನೋದ್ಧಾರ ಮೊದಲಾದ ರಾ. ಮ. ಸಭೆಯ ವಿಧಾಯಕ ಕಾರ್ಯಗಳನ್ನೇ ಮೆಚ್ಚಿ ಕೈಕೊಂಡರು. ಕಾರ್ಯಸಿದ್ಧಿಯ ಕಡೆಗೆ ಲಕ್ಷ್ಯವನ್ನಿರಿಸಿದ ಇವರು ಪಕ್ಷ-ಪಂಗಡಗಳ ಹುಚ್ಚು ಅಭಿಮಾನದಲ್ಲಿ ಸಿಕ್ಕಿಕೊಳ್ಳುತ್ತಿರಲಿಲ್ಲ. ಖಾದಿ ಕಾರ್ಯಕ್ಕಾಗಿ ಕನ್ನಡನಾಡಿನಲ್ಲಿಯ ಬೇರೆ ಬೇರೆ ಸಂಸ್ಥಾನ ಸರ್ಕಾರಗಳ ನೆರವನ್ನು ಪಡೆದರು. ಅರ್ಧಸರಕಾರಿ ಸಂಸ್ಥೆಯಾದ ಮಧ್ಯವರ್ತಿ ಸಹಕಾರ ಸಂಘಗಳಿಂದಲೂ ಜಿಲ್ಲಾ ಸಹಕಾರ ಸಂಘಗಳಿಂದಲೂ ನೆರವನ್ನು ದೊರಕಿಸುವುದಕ್ಕೆ ಹೆಣಗಿದರು. ವಿಜಾಪುರದ ಬರಗಾಲ ನಿವಾರಣೆಯ ಕಾರ್ಯದಲ್ಲಿ ಜಿಲ್ಲಾಧಿಕಾರಿಗಳಿಗೆ ಮುಖ್ಯ ಸಲಹೆಗಾರರಾಗಿ, ಅವರಿಂದ ಕಾರ್ಯ ಮಾಡಿಸಿದರು. ಇವರ ಕಾರ್ಯಪದ್ಧತಿ ಇವರದೇ ಆಗಿದ್ದಿತು. ಜೊತೆಯ ಕೆಲಸಗಾರರಲ್ಲಿ ತಮ್ಮ ವಿಷಯದಲ್ಲಿ ಅನಾದರ-ಅವಿಶ್ವಾಸಗಳು ಉಂಟಾಗದಂತೆ ನಡೆಯುವುದರಲ್ಲಿ ತುಂಬ ಎಚ್ಚರ ತೆಗೆದುಕೊಳ್ಳುವರು. ಎಲ್ಲರೊಂದಿಗೂ ನಗುನಗುತ್ತಲೆ ಮಾತುಕತೆ. ಮಾತಿನಲ್ಲಿ ವ್ಯಂಗ್ಯವಿರುತ್ತಿದ್ದಿತಾದರೂ ಯಾರ ಮನಸ್ಸನ್ನೂ ನೋಯಿಸದಂತಹ ವ್ಯಂಗ್ಯ; ನಗೆ ಇರುತ್ತಿದ್ದಿತಾದರೂ ಯಾರನ್ನೂ ಅಣಕಿಸಿ ಕೆರಳಿಸದಂತಹ ನಗೆ.

ಜಾತಿಯ ಅಭಿಮಾನದ ಆರೋಪವನ್ನು ಹನುಮಂತರಾಯರಂತಹರೂ ಹೊರಬೇಕಾಗಿ ಬಂದುದು ನಮ್ಮ ನಾಡಿನ ಮುಂದಾಳುಗಳಲ್ಲಿಯ ಒಡಕಿನ ಮೂಲಕ ಮಾತ್ರ. ಅವರ ಒಂದೊಂದು ಕಾರ್ಯವನ್ನೂ ಒಡೆದು ಭೇದಿಸಿ ನೋಡಿದರೆ, ಅದರಲ್ಲಿ ಅವರ ಸಾಮಾಜಿಕ ಹಿತಬುದ್ಧಿಯೆ ಕಾಣುವುದಲ್ಲದೆ ಸ್ವಜಾತಿ ಹಿತದ ಚಟುವಟಿಕೆ ಒಂದೂ ಕಾಣದು. ಒಕ್ಕಲಿಕಾರರ ಹಿತಕ್ಕೆ ಗದೆಯ ಏಟು ಬೀಳಲಿರುವಾಗ, ಅವರ ಮುಂದಾಳುಗಳಾಗಿ ಕಾರ್ಯ ಮಾಡಿದರು. ನೇಕಾರರ ಸಂಘಟನೆಗಾಗಿ ಸಭೆ-ಸಮ್ಮೇಳನಗಳನ್ನು ಕೂಡಿಸಿ ದುಡಿದರು. ರೈತರ ಕಷ್ಟನಿವಾರಣೆಗಾಗಿ ಹೋರಾಡಿದರು. ದನಗಳ ಸುಖಜೀವನಕ್ಕಾಗಿ ಪ್ರಯತ್ನಪಟ್ಟರು. ಇಷ್ಟೆಲ್ಲವಾದರೂ ಯಾವುದೇ ಜಾತೀಯ ಸಂಸ್ಥೆಯ ಚಟುವಟಿಕೆಯೆಂಬುದೊಂದರಲ್ಲಿಯೂ ಇವರು ಭಾಗವಹಿಸಿಲ್ಲ. ಇಷ್ಟೆ ಅಲ್ಲ; ಇವರು ಬರೆದ ಕಥೆ-ನಾಟಕ-ಪ್ರಬಂಧಗಳು ಕೂಡ ಜನಸಾಮಾನ್ಯರ ಕಷ್ಟನಷ್ಟಗಳ ಚಿತ್ರಗಳಾಗಿರುವುವು ಹೊರತು ಮೇಲಿನ ಜನರ ವಿಷಯವನ್ನೆತ್ತಿಲ್ಲ. ಇಂತಹ ಮನುಷ್ಯತ್ವದ ಪೂರ್ಣತೆಯಿಂದಿದ್ದ ಹನುಮಂತರಾಯರು, ಅಕಾಲದಲ್ಲಿ ಅಗಲಿಹೋದುದು ನಮ್ಮ ನಾಡಿಗೆ ದೊಡ್ಡದೊಂದು ನಷ್ಟ. ಆದರೆ ಅವರ ಋಣವನ್ನು ತೀರಿಸಲು ತರುಣ ಕನ್ನಡಿಗರು ನಿಜವಾಗಿ ಸಿದ್ಧರಾದರೆ ಆ ನಷ್ಟ ತುಂಬಿ ಬರಬಹುದು. ಆದರಿಂದ ಕರ್ಮಯೋಗಿ ಹನುಮಂತರಾಯರ ಜೀವಕ್ಕೆ ಶಾಂತಿ ಸಿಕ್ಕಬಹುದು.

೧. ಏಕ್-ಜೀ-ಕಟ್ಯೂೀ ಕೌನ್ಸಿಲ್

ಮುಂದಾಳುಗಳ ಪರಿಷತ್ತಿಗಾಗಿ ವೈಸರಾಯರು ತನಗಿತ್ತ ಆಮಂತ್ರಣವನ್ನು ಮಂಗರಾಯನು ನಿದಾಕ್ಷಿಣ್ಯದಿಂದ ನಿರಾಕರಿಸಿದನೆಂಬ ರಾಜಕೀಯ ರಹಸ್ಯವನ್ನು ಈಗ ಹೊರಗೆಡಹಲು ಮಂಗರಾಯನಿಗೆ ಆತಂಕವಿಲ್ಲ; ಅಭಿಮಾನ ಬೇಕಾದಷ್ಟಿದೆ, ಯಾಕೆಂದರೆ ನಿರಾಕರಿಸಿದವನು ಮಂಗರಾಯನೊಬ್ಬನೇ! ತತ್ತ್ವವನ್ನು ತಳಗಾಣಿಸುವ ಹಾನೇರಿಸ್ಥಾಯಿ ಮಂಗರಾಯನಿಗೆ ಸಮ್ಮತವಿಲ್ಲ; ವೈಸರಾಯರು ಇಂಗ್ಲಂಡದ ವರೆಗೆ ಹಾರಿಬಂದರೆಂಬ ಮಾತ್ರಕ್ಕೆ ಮಂಗರಾಯನು ಆದರವನ್ನು ತಾಳುವನೆ? ವೈಸರಾಯರಲ್ಲಿ ಆತ್ಮೀಯತೆ—ಮಂಗೀಯತೆ—ಯನ್ನು ವಹಿಸುವನೆ? 'ಸುವರ್ಣ ಹಿಂದೀಯರಿಗೆ ಪ್ರಾತಿನಿಧ್ಯವಿದ್ದಂತೆ ಅ—ಸುವರ್ಣ ಹಿಂದೀಯರಿಗೂ ಬೇಕು, ತಾನು ಬಂದರೆ ಅಸುವರ್ಣರ ಪ್ರತಿನಿಧಿ ಎಂದೇ ಬರುವವ' ಎಂದು ಮಂಗರಾಯನ ವಾದ; ಕೇವಲ ಸುವರ್ಣರಿಗೂ ಕಸು-ವರ್ಣರಿಗೂ ಮಾತ್ರ ಪ್ರಾತಿನಿಧ್ಯ ಎಂದು ವೈಸರಾಯರ ವಾದ. ಇದಲ್ಲದೆ ಬೆಟ್ಟದ ಎತ್ತರದ ಸಿಮ್ಲಾದಲ್ಲಿ ಮಂಗರಾಯನ ವಂಶೀಯರಿಗೆ ಸಹಜ ಹಕ್ಕಿನ ಸ್ಥಾನವಿದೆ ಎಂದೂ ಮಂಗರಾಯನ ವಾದ. ವೈಸರಾಯರು: ಈ ತತ್ತ್ವಗಳನ್ನೊಪ್ಪದೆ ಈ ಪರಿಷತ್ತಿನಲ್ಲಿ ಹೆಚ್ಚಿನ ಮಂಗಗಳ ಆವಶ್ಯಕತೆಯಿಲ್ಲ, ಮಂಗರಾಯನು ಇಚ್ಛಿಸಿದಂತಹ ಪ್ರಾತಿನಿಧ್ಯ ಸಾಕಷ್ಟಿದೆ, ಎಗ್‌ಝಿಕ್ಯೂಟಿವ್ ಕೌನ್ಸಿಲರರಾದರೂ ವೈಸರಾಯರನ್ನು ಮಂಗೀಕರಿಸುವಂತಹರೆ ಇದ್ದಂತೆ ನೋಡುವೆ ಎಂಬ—ಆಶ್ವಾಸನವನ್ನು ಕೊಟ್ಟರು. ಆದ್ದರಿಂದ ಮಂಗರಾಯನು ಸಿಮ್ಲಾ ಅಂತಲೂ ಬಯಲಿನಲ್ಲಿಯ ಗಿಡವೆ ಆರೋಗ್ಯಕರ ಎಂದು ನೆನೆದು ನಿರಾಕರಿಸಿದನು.

\+ + +

೨. ಸತ್ತೆಮ್ಮೆಗೆ ಸೇರು ತುಪ್ಪ!

ಸತ್ತ ಎಮ್ಮೆಗೆ ಸೇರು ತುಪ್ಪ ಎಂಬ ಗಾದೆಯ ಮಾತಿನ ಅರ್ಥವೇನು ಎಂದು ಕನ್ನಡ ಸಂಶೋಧನ ಜಿಜ್ಞಾಸುಗಳೊಬ್ಬರು ಮಂಗರಾಯನನ್ನು ಕೇಳಿದ್ದಾರೆ. 'ಸತ್ತವರ ಗುಣಗಾನವನ್ನು ಮಾಡುವುದು' ಎಂದು ರೂಢಿಯಲ್ಲಿ ಅರ್ಥವಿದ್ದದ್ದು ತಪ್ಪು ಎಂದು ಮಂಗರಾಯನು ಇತ್ತೀಚಿನ ರೂಢಿಯ ಅನುಭವದಿಂದಲೆ ಹೇಳಬಯಸುತ್ತಾನೆ. ಮೇಲಿನ ಗಾದೆ ಮಾತಿನಲ್ಲಿ ಮುಖ್ಯವಾದ ಮಾತೆಂದರೆ 'ಸೇರು ತುಪ್ಪ'. ಈ ಮಾತು ಯಾರಿಗೆ ಅನ್ವಯಿಸುವುದು? ಸತ್ತವನಿಗಲ್ಲ; ಅಲ್ಲವೆ? ಸೇರು ಇರಲಿ ಸೇರದಿರಲಿ ತುಪ್ಪದಿಂದ ಸತ್ತವನಿಗೆ ಉಪಯೋಗವೇನು? ಆದ್ದರಿಂದ ಇದ್ದವರಿಗೇ ಆ ಮಾತು ಅನ್ವಯಿಸುವುದು ಎಂದು ಹೇಳಬಹುದಲ್ಲವೆ? ಅರ್ಥಾತ್, ಮೇಲಿನ ಗಾದೆ ಮಾತು ಇದ್ದವರ ಸೃಷ್ಟಿಯಿಂದ ಎಂದು ಸ್ಪಷ್ಟವಾದಂತಾಯಿತು? ಹಾಗೆಂದರೆ ಆ ಗಾದೆ ಮಾತಿನ ಅರ್ಥವೇನು? ಯಾರಾದರೂ ಸತ್ತರೆ ಇದ್ದವರಿಗೆ ಸೇರು ತುಪ್ಪ ದೊರೆತಂತೆ ಎಂದು! ಹಹ! ಹೋಯಿತಲ್ಲವೆ! ಸತ್ತವರ ಹೆಸರಿನಿಂದ ಇದ್ದವರು—ಅಥವಾ ಒಂದು ಉದಾಹರಣೆಯನ್ನೆ ನೋಡೋಣ, ಮಿಸ್ಟರ್ ಇಲ್ಲವೆ ದೇಶಭಕ್ತ 'ಕ್ಷ' ಎಂಬವರು ಸ್ವರ್ಗವಾಸಿಗಳಾದರು. ಆಗ ನಮ್ಮ ಕರ್ತವ್ಯವೇನು? ಒಂದು ಸಭೆಯನ್ನು ಕೂಡಿಸುವುದು. ಅಲ್ಲಿ ಮಾಡುವುದೇನು? ಸತ್ತವರು ಸತ್ತರು-ಇದ್ದವರು ಮಹತ್ತ್ವ ಎಂಬ ವ್ಯಾವಹಾರಿಕ ದೃಷ್ಟಿಯಿಂದ ಸಭೆಗೆ 'ಶ್ರದ್ಧಾಂಜಲಿ'ಯನ್ನು ಕೊಡುವ ಸರಕಾರದಿಂದ ಕಾರ್ಯಭಾರದ ವಿರುದ್ಧ ಪಕ್ಷದವರ ವರೆಗೆ ಪ್ರತಿಯೊಬ್ಬನು ಖಂಡಿಸಿ, ನಮ್ಮ ವಿಚಾರಗಳನ್ನೊ ಕೃತಿಗಳನ್ನೊ ಮಂಡಿಸಿ, ಉದ್ದ ಉಪನ್ಯಾಸಗಳಿಂದ ಸತ್ತವರನ್ನು ಮರೆಯಿಸಿ 'ಜೈ' ಎನ್ನಿಸಿಕೊಂಡು ಹೊರಬೀಳುವುದು. ಹೀಗೆ ಹೊರಬೀಳುವವನಿಗೆ ಸೇರು ತುಪ್ಪ ಸವಿದಂತೆಸುಖವಾಗುವುದಲ್ಲವೆ, ಯಾವನೂ ಸತ್ತವಕ್ಕೆ? ಎಷ್ಟೊ ಸಲ ದುಃಖಸೂಚಕ ಸಭೆಗಳಲ್ಲಿ ಮಾತನಾಡುವವರ ಆವೇಶಕ್ಕಾಗಿ ಗೊತ್ತಾವಳಿಯಲ್ಲಿ ಆಗಿಂದಾಗ ಇನ್ನೊ ಒಂದೆರಡು ಹೆಸರು ಸೇರಿಸುವ ಪ್ರಸಂಗ ಬರಬಹುದು! ಅದಕ್ಕಾಗಿಯೆ ಹೇಳುವುದು—ಇದ್ದ ಕೋಣನಿಗೆ ಸೇರು—ಅಲ್ಲಲ್ಲ—ಸತ್ತ ಎಮ್ಮೆಗಾಗಿ ಸೇರು ತುಪ್ಪ ಎಂದು.

೩ 'ಪರಟಿ' (Parity) ಯೋಜನೆ

'ವೇವೆಲ್ ಯೋಜನೆ ಪ್ರಕಟವಾದಂದಿನಿಂದ 'ಪರಟಿ' ಎಂಬ ಶಬ್ದ ಹೆಚ್ಚಾಗಿ ಕೇಳಬರುತ್ತದಲ್ಲ. ಅದು ಇಂಗ್ಲಿಷ ಶಬ್ದವೆ? ' ಎಂದು ಭಾಷಾಶಾಸ್ತ್ರಜ್ಞನೊಬ್ಬನು ಪರಿಶೋಧವನ್ನು ನಡೆಯಿಸಿದ್ದಾನೆ. ಮಂಗರಾಯನು ಈ ವಿಷಯದಲ್ಲಿ ಎಲ್ಲ ಆಧಾರ ಗ್ರಂಥಗಳನ್ನು ನೋಡಿಕೊಂಡು ಈ ನಿರ್ಣಯಕ್ಕೆ ಬಂದಿದ್ದಾನೆ. ಪರಟಿ ಎಂಬ ಶಬ್ದವು ಇಂದು ವೇವೆಲ್ ಯೋಜನೆಯಲ್ಲಿ ಮಹತ್ತ್ವದ ಶಬ್ದವಾಗಿರಲು ಕಾರಣವಿದೆ. ಸಾಮಾನ್ಯವಾಗಿ ಬ್ರಿಟಿಶರ ಆಡಳಿತ ರೂಢವಾದಂದಿನಿಂದ 'ಪರಟಿ' (Parity) ಎಂಬ ಶಬ್ದವೂ ರೂಢಿಯಲ್ಲಿ ಬರುತ್ತಲಿದೆ. ವ್ಯಾಪಾರಸ್ಥರಾದ ಬ್ರಿಟಿಶರು ಮೊದಮೊದಲು ಇಡಿಯ ಹಿಂದುಸ್ತಾನಕ್ಕಾಗಿ ಪರಟಿಯ ಯೋಜನೆಯನ್ನು ಮಾಡಿದ್ದರು. ಕ್ರಮೇಣ ಆರ್ಥಿಕ ಮತ್ತು ರಾಜಕೀಯ ಸುಧಾರಣೆಗಳಾಗುತ್ತ ಇಂದು ಕೇವಲ ಸವರ್ಣ ಹಿಂದುಗಳು ಮತ್ತು ಮುಸಲ್ಮಾನರು ಇವರಿಬ್ಬರಿಗೆಯೆ 'ಪರಟಿ' ಅಗತ್ಯವೆಂದು ಇಂದಿನ ವೈಸರಾಯರು ಯೋಚಿಸಿದ್ದಾರೆ. ಈ ಇತಿಹಾಸಕ್ಕಾಗಿ 'ಪರಟಿ' ಎಂಬ ಶಬ್ದಕ್ಕೆ ವಿಶೇಷಾರ್ಥ ಬಂದಿದೆ. ಜಾತೀಯ ಜಗಳವನ್ನು ಬಿಡಿಸುವ ಸಾಧನಕ್ಕೆ 'ಪರಟಿ' ಎಂದು ಹೆಸರು. ವೇವೆಲ್ ಯೋಜನೆಗೆ ಜಾತೀಯ ಜಗಳವೆ ತಳಹದಿಯಾದ್ದರಿಂದ ಇಡಿಯ ಯೋಜನೆಗೆ 'ಪರಟಿ (Parity) ಯೋಜನೆ' ಎಂಬ ಹೆಸರು ಬಂದಿದೆ. ಈ ಶಬ್ದದ ಹೆಚ್ಚಿನ ವಿವರಗಳಿಗಾಗಿ 'ಮಂಗನಡಿಯ ಜೀವಾಳ' ಎಂಬ ಆಧಾರ ಗ್ರಂಥದ ಜಾಹೀರಾತನ್ನು ನೋಡಬಹುದು.

ನೇಗಿಲ ಯೋಗಿಗಳಿಗೆ

●

ಶ್ರೀ ಬಂಕಾಪುರ ದತ್ತರಾಯ, ಹಾನಗಲ್ಲ

೧.

ನೋಡಿರಿ ಮೂಡಣ ದೆಸೆ ಕೆಂಪಾದುದು,
ಏಳಿರಿ ಬೆಳಗಾಯ್ತು;
ಬೇಡ ಮಲಗುವುದು, ಈಗ ನೀವು ಎ-
ದ್ದೇಳ್ವಸಮಯವಾಯ್ತು!
ನೀವೇಳದೆ ಈ ಭಾರತವೇಳ್ವುದೆ?
ಸಾಕು ನಿದ್ದೆಯೇಳಿ!
ನಿಮ್ಮ ಮೇಲೆಯೇ ಭಾರತ ನಿಂತಿದೆ,
ಅದರ ಮೊರೆಯ ಕೇಳಿ!
ವಿವಿಧ ವಿಹಂಗಮಗಳ ಹೃದಯಂಗಮ
ಗಾನ ಕೇಳ್ವುದೀಗ;
ಒಕ್ಕಲು ಮಕ್ಕಳ ಒಕ್ಕಟ್ಟಿನ ಪಡೆ
ಮುಂಬರಿಯಲಿ ಬೇಗ!
ಯುಗವೆಚ್ಚತ್ತಿದೆ, ಜಗವೆಚ್ಚತ್ತಿದೆ,
ನಿಮಗೆ ಎಚ್ಚರಿರದೆ?
ನಿಮ್ಮ ಮೇಲೆಯೇ ಭಾರತ ನಿಂತಿದೆ;
ಅದರ ಅರಿವು ಬರದೆ?

೨.

ನಾಡಿನ ಕರ್ಮಠ ಕರ್ಣಧಾರರು—
ನೀವೇ ಗೊತ್ತಿದೆಯೇ?
ಭಾರತದೇಳ್ಗೆಯ ಗೋಪುರ ನಿಲ್ಲುವು-
ದೆಂತು ನೀವು ಎತ್ತದೆಯೆ!
ಹಿಂದು ಮುಸಲ್ಮಾನ್ ಶೀಖ ಪಾರಸಿಕ-
ಕ್ರೈಸ್ತ ಜೈನ ಬುದ್ಧ–
ಕೋಟಿಕೋಟಿ ಜನ ಮೇಟಿಯ ಮಕ್ಕಳೆ,
ಆಗಿರಿ ನೀವು ಪ್ರಬುದ್ಧ!
ಎಂದಿಗು ನೇಗಿಲೆ ನಿಮ್ಮಯ ಬಾವುಟ
ಹಾಡಿರಿ ನೇಗಿಲ ಮಹಿಮೆಯನು,
ನೇಗಿಲ ಗೆಯ್ಮೆಯೆ ಒಡೆವುದು ನಿಮ್ಮಯ
ಬಾಳಿನ ಬಗೆಬಗೆಯೊಗಟವನು!
ಪೂರ್ವಸವಿಾರಣ-ಸುಳಿವನು ಸುತ್ತಲು
ಅರುಣಕಿರಣವಿದೆಕೊ!
ಈಗ ಮಲಗಲೇನಪ್ಪುದು ಗೊತ್ತೋ?
'ಬಿತ್ತಿದುದನು ಬೆಳಕೊ!'

೩.

ನಿಮ್ಮ ಬಲುಹಿನಲಿ 'ಶಾಸನ' ನಡೆವುದು
ಗೊತ್ತಿದೆಯೇ ನಿಮಗೆ?
ನಿಮ್ಮ ಗಳಿಕೆಯಲಿ 'ಗಾದೆ' ಯ ಭದ್ರತೆ
ಗೊತ್ತಿಲ್ಲವೆ ನಿಮಗೆ?
ನಿಮ್ಮಯ ಗೆಯ್ಮೆಯ ಹೆರವರ ನೈಮೆಗೆ
ಸಾಧನವಾಗಿಹುದು;
ನಿಮ್ಮಾಹುತಿಯಲಿ ಧನಿಕರ ಗೆಲುವಿನ
ಗುಡಿ ಹಾರಾಡುವುದು!
ನಿಮ್ಮ ದುಡಿಮೆಯಲಿ ಸದಾ ಸಸ್ಯಶಾ-
ಲಿನಿ ಭಾರತಮಾತೆ!
ತೆಗೆಯಿರಿ ಮುಸುಕು–ಹರಿದಿದೆ ನಸುಕು–
ಏಳಿ, ಎಚ್ಚರಾಯ್ತೆ?
ಮಾತೆಯ ಬಹುಸಂಖ್ಯಾಕ ಸುಪುತ್ರರು
ನೀವೇ ಎಂಬುದು ಗೊತ್ತೆ?
ನಿಮ್ಮ ಮೇಲೆಯೇ ಭಾರತನಿಂತಿದೆ,
ನಿಲುವುದು ನೀವ್ ಹಿಡಿದೆತ್ತೆ!

೪.

ನೇಗಿಲಿನಿಂದಲೆ ಜನದುಪಜೀವನ
ಮಳಲಲಿಯೂ ಬೆಳೆ ಪಡೆಯುವಿರಿ!
ನೇಗಿಲ ಯೋಗದಿ ದೀನರ ಪೊರೆವಿರಿ
ಪುಣ್ಯದ ರಾಶಿಯನೊಕ್ಕುವಿರಿ!
ನೇಗಿಲ ಪೂಜಿಸಿ, ನೇಗಿಲ ಮಹಿಮೆಯ
ರಾಗದಿ ಹಾಡಿರಿ ಯೋಗಿಗಳೆ,
ನೇಗಿಲಿನಿಂದಲೆ ನೀಗಿರಿ ಸಂಕಟ–
ಸಾಗರವನು ಸುತ್ಯಾಗಿಗಳೆ!
ನೋಡಿರಿ ಮೂಡಣ ದೆಸೆ ಕೆಂಪಾದುದು,
ಏಳರೇಳಿರೈ ಬೆಳಗಾಯ್ತು!
ಬೇಡ ಮಲಗುವುದು ಈಗ ನಿಮಗೆ ಎ
ದ್ದೇಳುವುದಕೆ ಬಲು ಹೊತ್ತಾಯ್ತು!
ಯುಗವೆಚ್ಚತ್ತಿದೆ, ಜಗವೆಚ್ಚತ್ತಿದೆ,
ನಿಮಗೆ ಎಚ್ಚರಿರದೆ?
ನಿಮ್ಮ ಮೇಲೆಯೇ ಭಾರತ ನಿಂತಿದೆ,
ಅದರ ಅರಿವು ಬರದೆ?

ಹದಿನೆಂಟು

(ಸಣ್ಣ ಕತೆ)

ಶ್ರೀ. ಎಸ್. ಅನಂತನಾರಾಯಣ ಬಿ. ಎ (ಆನರ್ಸ್) ಮೈಸೂರು

ಪೋಲೀಸ ಕಾನ್‌ಸ್ಟೇಬಲನ ತಮ್ಮ ಅಪ್ರತಿಮ ದೇಶಭಕ್ತ. ಅಣ್ಣ ಹೊಟ್ಟೆಯ ಚಿಂತೆ, ತಮ್ಮನ ಪ್ರೀತಿಗಳ ಎಳೆದಾಟದಲ್ಲಿ ಸೋತುಹೋದ. ಆದರೆ

"ಯಾರೋ ಅದು ಮಾತನಾಡ್ತಿರೋದು ?"

"ನಾರಾಯಣ ' ಸಾರ್, ನಂಬರ್ ಹದನೆಂಟು."

"ಸ್ಟೇಷನ್ನಿನಲ್ಲಿ ಇನ್ಯಾರಿದಾರೇಂತ ನೋಡು!"

"ತಿಮ್ಮಯ್ಯನೂ ರಾಮಮೂರ್ತಿಯೂ ಇದಾರೆ, ಸಾರ್. ...ವೃಕೇಸಿನ ಖೈದಿ ಲಾಕಪ್ಪಿನಲ್ಲಿದಾನೆ. ಅವನ್ಜೊತೇಲೊಂದ್ನಿಗಾ ಇರ-ಲೀಂತ...."

"ಸರಿ. ಸರಿ— ತಕ್ಷಣವೇ ನೀನು 'ಎ' ಸ್ಟೇಷನ್ನಿಗೆ ಬಾ; ಸೈಕಲ್ ಹಾಕಿಕೊಂಡು ಬಾ !!"

ನಾರಾಯಣ ಫೋನನ್ನು ಕೆಳಗಿಟ್ಟು, ತನ್ನ ಪೆಟ್ಟಿಗೆಯ ಬಳಿ ಹೋದ. ಮಫ್ತಿ ತೆಗೆದು-ಡ್ಯೂಟಿಯ ಡ್ರೆಸ್ ಹಾಕಿಕೊಂಡ. ಇಂತಹ ರಾತ್ರಿಯಲ್ಲಿ—ಕೊರೆಯುವ ಚಳಿಯಲ್ಲಿ 'ಎ' ಸ್ಟೇಷನ್ನಿಗೆ ಹೋಗ ಬೇಕು. ಸ್ವಲ್ಪ ನಿದ್ರೆಯಾದರೂ ಮಾಡೋಣ ಅಂದ್ರೆ ಅದಕ್ಕೂ ಮಾರ್ಗವಿಲ್ಲ. ಬರಿಯ ಅವಾಂತರ! ಹಾಳು ಹದಿನೇಳು ರೂಪಾಯಿಗೆ ಹಗಲೂ ರಾತ್ರಿ ದುಡಿತ. ಒಂದು ನಿಮಿಷವೂ ಪುರುಸೊತ್ತಿಲ್ಲ. ಸಾಲ-ದ್ದಕ್ಕೆ ಆ ಕಜಡಾ ಖಾಕೀಡ್ರೆಸ್ಸು. ಬೇರೆ! ಎಂತಹ ಸೆಕೆಯಾಗಲಿ ಅವನ್ನೇ ಹಾಕಿಕೊಳ್ಳಬೇಕು. ಆನಂದ ದುರ್ನಾತ ಹೊಡೆಯು ತ್ತಿತ್ತು. ಆದರೆ ನಿಧಿಯಿಲ್ಲ—ಹಾಕಿಕೊಳ್ಳಲೇ ಬೇಕು.

ನಾರಾಯಣ ಇನಸ್ಪೆಕ್ಟರನ್ನು ಶಪಿಸುತ್ತಾ ಸೈಕಲ್ಲೇರಿದ. ಸಿದ್ದೆ ಗಣ್ಣು! ಕಣ್ಣೊರೆದುಕೊಂಡು ಹೋಗುತ್ತಿತ್ತು. ಆದರೆ ಇದೆಯಲ್ಲಾ ಚಾಕರಿಗೆ ಸೇರಿದ ಮೇಲೆ ಗುಲಾಮಗಿರಿ— ತೀರದ ಕಟ್ಟಳೆ!

ಇನಸ್ಪೆಕ್ಟರು ನಾರಾಯಣನಿಗಾಗಿ ಕಾದಿದ್ದರು. ನಾರಾಯಣ ಸೆಲ್ಯೂಟ್ ಮಾಡಿದ. "ನಾಣಿ—ಸಬ್‌ಇನಸ್ಪೆಕ್ಟರ್ ರೂಪಸಿಂಗ್ ಮನೆಗೆ ಹೋಗಿ ಈ ಕಾಗದ ಕೊಟ್ಟು ಕೂಡಲೇ ಕರೆದುಕೊಂಡು ಬಾ; ಮುಖ್ಯ ಕೆಲಸವಿದೆ!"

ಅಷ್ಟರಲ್ಲಿ ಪಕ್ಕದ ಫೋನ್ ಸದ್ದಾಯಿತು. ಇನಸ್ಪೆಕ್ಟರು ಫೋನಿ-ನಲ್ಲಿ ಮಾತನಾಡಿದರು.

"ಸರಿ, ಸಾರ್,. ಎಲ್ಲಾ ಏರ್ಪಾಡೂ ಆಗಿದೆ. ವಾರಂಟುಗಳು ಸಿದ್ಧವಾಗಿವೆ. ಹೆಸರುಗಳು ತುಂಬುವುದು ಬಾಕಿ. ಡಿ. ಐ. ಆರ್. ೨೬ನೇ ಸೆಕ್ಷನ್-ವಾಸಿ ಸಾರ್. ಎಲ್ಲಾ ದಕ್ಕೂ ಉಪಯೋಗಿಸಬಹುದು"

ನಾರಾಯಣನಿಗೆ ಈ ಮಾತುಗಳದೇ ಚಿಂತೆ ಹೊಂ! ಇನ್ನೆಷ್ಟು ಜನಗಳು ಈ ಒದ್ದಾಟವೊ! ದಸ್ತಗಿರಿಗಳು—ಲಾಠೀಛಾರ್ಜು—ಗುಂಡಿನ ಹೊಡೆತ! ಎಷ್ಟು ಜನಸಾಯಬೇಕೋ—ಹತ್ಯಾಕಾಂಡಕ್ಕೆ ರಂಗಭೂಮಿ ಸಿದ್ಧವಾಗಿತ್ತು. ಪೋಲೀಸ್ ಕಾನಸ್ಟೇಬಲ್‌ಗಳಿಗೆ ರೈಫಲ್ ಟ್ರೇನಿಂಗ್ ಕೊಟ್ಟಿದ್ದರು. ಫೈರಿಂಗ್ ಪ್ರಾಕ್ಟೀಸ್ ಕೂಡ ಆಗಿತ್ತು. ಹವಾಲ್ದಾರನೂ ದಫೇದಾರನೂ ಗುಸಗುಸನೆ ಮಾತ-ನಾಡುತ್ತಿದ್ದರು: 'ಏನೋ ಚಳುವಳಿ ಪ್ರಾರಂಭವಾಗುತ್ತೆ. ಆ ಗಾಂಧಿ ಗಲಾಟೆ ಹೆಚ್ಚಿದರೆ ಅವನನ್ನು ಜೈಲಿಗೆ ಹಾಕಿ ಚಳುವಳಿ ತುಳಿಯ ಬೇಕು. ಎಲ್ಲರೂ ಸಿದ್ಧವಾಗಿರಬೇಕು," ಎಂದು. ನಾರಾಯಣನಿಗೆ ಮೈ ನಡುಕ ಬಂತು—ಆದರೆ—ಅವನ ಕೆಲಸ. ಎಷ್ಟಿದ್ದರೂ ಅವನೊಬ್ಬ ಕಾನಸ್ಟೇಬಲ್—ನಂ. ಹದಿನೆಂಟು!

ಬೆಳಗ್ಗೆ ಮನೆಗೆ ಬರುವ ವೇಳೆಗೆ ೯ ಗಂಟೆಯಾಗಿತ್ತು. ತಾಯಿ ಕಾದಿದ್ದರು, ಕಾಫೀಕುಡಿದು ನುಧಾರಿಸಿಕೊಳ್ಳೋಣವೆಂದು ಹಾಸಿ-ಗೆಯ ಮೇಲೆ ಅಡ್ಡಾದ. ಅಷ್ಟರಲ್ಲಿ ತಮ್ಮ ಓಡಿ ಬಂದ—

"ಲೋ ನಾಣಿ, ನಾಣಿ!"

"ಅವನನ್ನು ಯಾಕೋ ಕೂಗುತ್ತೀ? ಸ್ವಲ್ಪ ಮಲಗಲಿ!" ಎಂದರು ತಾಯಿ.

"ಏನೋ ನೀನು?" ನಾಣಿ ಹಾಗೆಯೇ ಒಂದು ಪಕ್ಕಕ್ಕೆ ತಿರುಗಿ ಕೇಳಿದ.

"ಗಾಂಧೀಜಿ, ನೆಹ್ರೂ ಎಲ್ಲರನ್ನೂ ಬಂಧಿಸಿದರಂತೆ. ಬೊಂಬಾ-ಯಿ ಯಲ್ಲಿ ಸಭೆಯನ್ನು ಚೆದರಿಸಲು ಟಿಯರ್‌ಗ್ಯಾಸ್ ಉಪಯೋಗಿಸಿ ದರಂತೆ!"

"ಹುಂ! ನಮಗಿನ್ನೇನು ಕಾದಿದೆಯೋ!" ನಾಣಿ ಗೊಣಗಿದ.

ತಿಮ್ಮಯ್ಯ ಅಷ್ಟರಲ್ಲೇ ಬಂದು, ಇನಸ್ಪೆಕ್ಟರು ಬರಹೇಳಿದರೆಂದು ನಾಣಿಯನ್ನು ಕರೆದುಕೊಂಡು ಹೋದ.

ನಾಣಿಗೆ ಒಂದೇ ಚಿಂತೆ: ತನ್ನ ವಿಷಯವಾಗಿ ಏನೂ ಪರವಾ-ಗಿಲ್ಲ. ಆದರೆ ತಾಯಿಗೆಷ್ಟು ಯೋಚನೆ —ಸೀನ ಕಾಲೇಜು ವಿದ್ಯಾರ್ಥಿ, ಗಾಂಧೀಭಕ್ತ—ಕಾಂಗ್ರೆಸ್ಸಿಗೆ ಸದಸ್ಯನಾಗಿದ್ದ. ಅವನು ಚಳುವಳಿಗೆ ಸೇರುವುದೇನೋ ಖಂಡಿತ. ಸೆರೆಗೆ ಹೋದರೂ ಪರವಾಗಿಲ್ಲ. ಆದರೆ ಏನಾದರೂ ಅಪಘಾತವಾದರೆ:—

ಸಂಜೆಯ ಸಭೆಗೆ ನಾಣಿ ಮಫ್ತಿಯಲ್ಲಿ ಹೋದ. ಕಾಂಗ್ರೆಸ್-ನಾಯಕರು ಸಾಮಾನ್ಯದಂತೆ ಸರ್ಕಾರದ ಮೇಲೆ ಆರೋಪಗಳನ್ನು ಹೊರಿಸಿ ಭಾಷಣ ಮಾಡಿದರು. ಇವರೆಲ್ಲ ನಾಳೆಯ ಬೆಳಗಿನ ವೇಳೆಗೆ ಸೆರೆಯ ಸುಖ ಅನುಭವಿಸುತ್ತಿರಬಹುದು ಎಂದುಕೊಂಡು ನಾಣಿ ಮನಸ್ಸಿನಲ್ಲಿಯೆ ನಕ್ಕನು. ಅಷ್ಟರಲ್ಲಿ ಚಪ್ಪಾಳೆಯ ಸದ್ದು—ನಾಣಿಗೆ ಮೈಯೆಲ್ಲಾ ಬೆವತಿತು. ಹೃದಯದ ಬಡಿತ ವಿಪರೀತವಾಯಿತು. ಅಲ್ಲಿ ಯಾವುದಾಗಬಾರದೆಂದಿದ್ದನೋ ಅದು ಆಗಿ ಹೋಗಿತ್ತು. ಸೀನ ವೇದಿಕೆಯ ಮೇಲೆ ನಿಂತು ಭಾಷಣ ಮಾಡುತ್ತಿದ್ದ. ನಾಣಿ ಅವನ ಭಾಷಣವನ್ನು ರಿಪೋರ್ಟ್ ಮಾಡಬೇಕಾಗಿತ್ತು!

"ನಾರಾಯಣ!"

"ಸಾರ್"

"ಶ್ರೀನಿವಾಸರಾವ್ ನಿನ್ನ ತಮ್ಮನೋ?"

"ಹೌದು, ಸಾರ್"

"ಅವನಿಗೆ ತಲೆ ತಿರುಗಿದಂತಿದೆ ಕೊಂಚ ಬುದ್ಧಿ ಹೇಳಿ, ಮನೆಯ ಮೂಲೆಯಲ್ಲಿ ಮುದುರಿಕೊಂಡಿರೋಕೆ ಹೇಳು!"

"ಆಗಲಿ ಸಾರ್" ನಾಣಿ ತುಟಿ ಕಚ್ಚಿಕೊಂಡ.

"ಮುಟ್ಠಾಳಸೂಳೇ ಮಕ್ಕಳು!"

ನಾಣಿ ಈ ಮಾತನ್ನು ಕೇಳಿಕೊಂಡೂ ಸುಮ್ಮನಿರಬೇಕಾಯಿತು ಕಣ್ಣಿನಲ್ಲಿ ನೀರು ತುಂಬಿತು "ಸೂಳೇಮಕ್ಕಳು—ಸೂಳೇಮಕ್ಕಳು! ಎಂತಹ ಮಾತು! ಅದೂ ಆ ಹುಡುಗರ ವಿಷಯಕ್ಕೆ! ತಮ್ಮ ದೇಶದ ಉಳಿವಿಗಾಗಿ ದುಡಿಯುವ ತಮ್ಮ ಮಕ್ಕಳನ್ನೇ ಸೂಳೇಮಕ್ಕಳೆನ್ನುವರಲ್ಲಾ— ಎಂತಹ ಜನ!" ನಾಣಿಗೆ ಇನಸ್ಪೆಕ್ಟರ್ ಎಂತಹವನೆಂಬುದು ಚೆನ್ನಾಗಿ ತಿಳಿದಿತ್ತು. ತನ್ನ ಮಗಳು ಚಳುವಳಿಯಲ್ಲಿ ಸೇರದೆ ಇರಲೆಂದು ಕಾಲಿಗೆ ಬರೆಹಾಕಿ ಕೋಣೆಯಲ್ಲಿ ಕೂಡಿದ್ದ. ತನ್ನ ಮಗಳನ್ನೇ ಆ ರೀತಿ ಪೀಡಿಸುವವನು ಮತ್ತೆ ಯಾರನ್ನು ತಾನೇ ಬಿಟ್ಟಾನು?

ನಾಣಿ ಮನೆಗೆ ಬಂದಾಗ ಸೀನು ಅವಸರವಸರವಾಗಿ ಊಟ ಮಾಡುತ್ತಿದ್ದ. ನಾಣಿ ಅವನ ಕಡೆಯೇ ನೋಡುತ್ತಿದ್ದ. ಎಂತಹ ಪ್ರತಿಭಾವಂತ! ಈಗೇನೋ ಕಾಲೇಜು ಬಿಟ್ಟು ಚಳುವಳಿ ಸೇರಿದ್ದಾನೆ. ಆದರೆ—ಅವನು ಚಳುವಳಿ ಸೇರಿದುದು ತಪ್ಪೇ? ಅವನಿಗೆ ಹೇಗೆ ಹೇಳುವುದು? ಹೇಳದೇ ಇರುವುದಾದರೂ ಹೇಗೆ? ಇನಸ್ಪೆಕ್ಟರ ಆಜ್ಞೆ—ಹೂಂ—ಇನಸ್ಪೆಕ್ಟರು! ನನ್ನ ತಮ್ಮ ಏನು ಮಾಡಿಕೊಂಡರೆ ಇನಸ್ಪೆಕ್ಟರಿಗೇನು? ಆದರೆ-ದಬ್ಬಾಳಿಕೆಯೊಂದಿದೆಯಲ್ಲಾ!....ಇಷ್ಟೆಲ್ಲಾ ಚಿಂತೆ ನಾಣಿಯ ಕಣ್ಣಿನಲ್ಲಿ ಕಾಣುತ್ತಿತ್ತು. ಸೀನ ಕಂಡೂ ಕಾಣದಂತೆ ಊಟಮಾಡಿ ಎದ್ದ. ಹೊರಗೆ ಹೊರಟ ಅವನನ್ನು ನಾಣಿ ಕರೆದ.

"ಏನಣ್ಣಾ?"

"ಬಾ ಇಲ್ಲಿ. ನಿನ್ನ ಹತ್ತಿರ ಒಂದೆರಡು ಮಾತನಾಡಬೇಕು"

"ಒಂದು ಮಾತು ಸ್ಪಷ್ಟವಾಗಿ ಹೇಳಿಬಿಡುತ್ತೇನೆ, ಚಳುವಳಿಯಿಂದ ಹಿಂದೆಗೆಯಬೇಕೆಂದು ಮಾತ್ರ ಹೇಳಬೇಡ!"

"ಹಾಗಲ್ಲಾ ಸೀನು. ಚಳುವಳಿಯಲ್ಲಿ ಸೇರು—ಬೇಡವೆಂದು ನಾನೇನೂ ಹೇಳುವುದಿಲ್ಲ. ಆದರೆ ಸ್ವಲ್ಪ ತಾಳಬೇಕು. ಅಮ್ಮನಿಗೆ ನಿನ್ನಿಂದ ಎಷ್ಟು ವ್ಯಥೆಯಾದೀತು ನೋಡು. ಅವಳೇನೋ ಏನೂ ಹೇಳುವುದಿಲ್ಲ; ಆದರೆ ನಾವು ತಿಳಿಯಬೇಕು!"

"ನಾನೇನು ಮಾಡಲಣ್ಣಾ?"

"ಇನ್ನೇನೂ ಇಲ್ಲ. ಚಳುವಳಿಯಲ್ಲಿ ಉಳಿದ ಹುಡುಗರಂತೆಯೇ ಇರಬೇಕೇ ಹೊರತು ನಾಯಕತ್ವ ವಹಿಸಲು ಹೋಗಬೇಡ. ಯಾವ ಕ್ಷಣದಲ್ಲಿ ಹೇಗೋ ಹೇಳಲಾಗುವುದಿಲ್ಲ!"

"ಹೂ" ಎಂದು ಸೀನು ಹೊರಟು ಹೋದ.

× × × ×

ರಾತ್ರಿಯೆಲ್ಲಾ ನಾಣಿಗೆ ನಿದ್ರೆಯೇ ಇಲ್ಲ. ಲಾಕಪ್ಪಿನ ಕಡೆಯೇ ನೋಡುತ್ತಿದ್ದ. ಸೀನು ಲಾಕಪ್ಪಿನಲ್ಲಿ ನಿದ್ರಿಸುತ್ತಿದ್ದ, ಧೂಳಿನ ರಾಶಿಯಲ್ಲಿ ತನ್ನ ಜಮಖಾನೆ ಹಾಸಿಕೊಂಡು ಮಲಗಿದ್ದ. ನಾಣಿ ಮಾತ್ರ ಕಣ್ಣು ಮುಚ್ಚಲೇ ಇಲ್ಲ. ಅದೇ ಲಾಕಪ್ಪಿನಲ್ಲಿ ಖೂನಿ ಮಾಡಿದವರು

ವಾಗ್ವಿಲಾಸ ಬುಕ್‌ಡಿಪೋ ದುರ್ಗದಬೈಲು, ಹುಬ್ಬಳ್ಳಿ

ಇವರಲ್ಲಿ ದೊರೆಯುವ ಪುಸ್ತಕಗಳು

ಪೋಲೀಸಗಾಯಿಡು (ಕಲಕೋಟಿಕೃತ)	೨—೮—೦
ಒಕ್ಕಲತನದ ಸಾಂಪತ್ತಿಕ ಸ್ಥಿತಿ	೨—೬—೦
ಉತ್ಪನ್ನದ ಮೇಲಿನ ಕರದ ಕೈಪಿಡಿ	೨—೮—೦
ಮುಂಬೈ ಇಲಾಖೆಯ ಸಹ. ಸಂ. ಕಾಯಿದೆ	೧—೮—೦
ಪಂಡಿತ ಜಗನ್ನಾಥರ ಚರಿತ್ರ	೧—೦—೦
ಸಂತಾನಶಾಸ್ತ್ರ (ಸಬರದಕೃತ)	೧—೪—೦
ತರುಣ ಪತ್ನಿ	೦—೮—೦
ಕಲಿತರೆ ಹೇಗೆ ಕಲಿಯಬೇಕು	೦—೫—೦
ಗೀತಾರ್ಥ ಬೋಧಿನಿ	೦—೧೨—೦
ತತ್ವಲಾವಣಿ	೦—೪—೦

ದರೋಡೆಖೋರರು ವ್ಯಭಿಚಾರ ನಡೆಯಿಸಿದ ಅತ್ಯಾಚಾರಿಗಳು ಮಲಗಿದ್ದುದನ್ನು ಅವನೇ ಕಂಡಿದ್ದ. ಆ ಕೋಣೆಯಲ್ಲಿಯೇ ಅದೇ ನೆಲದ ಮೇಲೆಯೇ ತನ್ನ ತಮ್ಮ ಖೈದಿ—ತಾನೇ ಕಾವಲು! ನಾಣಿ ಕಣ್ಣೊರಸಿಕೊಂಡ. ಲಾಕಪ್ಪಿನಲ್ಲಿ ದೀಪವಿರಲಿಲ್ಲ. ಕಬ್ಬಿಣದ ಬಾಗಿಲಿನ ಕಂಬಿಗಳಿಂದ ಬೆಳಕು ಸೀನನ ಮುಖದ ಮೇಲೆ ಬೀಳುತ್ತಿತ್ತು. ಎಂತಹ ಮುದ್ದು ನೋಟ! ಆ ತುಸು ಹೊಂಬಣ್ಣದ ಕೂದಲಿನ ಹಿನ್ನೆಲೆಯಲ್ಲಿ ಸೀನನ ವಿಶಾಲವಾದ ಹಣೆ ಎದ್ದು ಕಾಣುತ್ತಿತ್ತು ತುಟಿ ಏನೋ ಹೇಳುವಂತೆ ಅಲುಗುತ್ತಿತ್ತು.

ನಾಣಿ ನಿಟ್ಟುಸಿರಿಟ್ಟ. ಎಲ್ಲವೂ ತಂದೆಯಂತೆಯೇ. ಎಳತನದಲ್ಲಿಯೇ ತಂದೆಯನ್ನು ಕಳೆದುಕೊಂಡಿದ್ದರು. ತಾಯಿ ಅಲ್ಲಿ ಇಲ್ಲಿ ಮೆಣಸಿನಪುಡಿ ಕುಟ್ಟಿ ಇಬ್ಬರನ್ನೂ ಸಾಕಿದ್ದರು. ನಾಣಿ ಕೆಲಸಕ್ಕೆ ಸೇರಿದ ಮೇಲೆ ಪರವಾಗಿಲ್ಲವೆನ್ನುವಂತಾಗಿತ್ತು. ಸೀನನೂ ಬುದ್ಧಿವಂತ. ಎಲ್ಲ ಪರೀಕ್ಷೆಗಳಲ್ಲಿಯೂ ಸುಲಭವಾಗಿಯೇ ತೇರ್ಗಡೆಯಾಗಿದ್ದ. ಬಿ ಎ. ಒಂದು ಮುಗಿಸಿದ್ದರೆ—ನಡುವೆ ಇದೊಂದು ವಿಘ್ನ. ಅಷ್ಟರಲ್ಲಿ ಫೋನ್ ಶಬ್ದಮಾಡಿತು:

"ನಾರಾಯಣ, ನಂಬರ್ ೧೮"

"ಲಾಕಪ್ಪಿನಲ್ಲಿ ಎಷ್ಟು ಜನ ಇದ್ದಾರೆ"

"ಒಬ್ಬನೇ ಸಾರ್"

"ಹೆಸರು?"

"ಶ್ರೀನಿವಾಸರಾವ್, ಕಾಲೇಜುವಿದ್ಯಾರ್ಥಿ!"

"ನಾಳೆಯ ದಿನ ಶ್ರೀನಿವಾಸರಾವ್ ಮೇಲೆ ಮೊಕದ್ದಮೆ ಹೂಡಬೇಕು- ಸೆಂಟ್ರಲ್ ಸ್ಟೇಷನ್ನಿಗೆ ಬೆಳಗ್ಗೆ ಕರೆದುಕೊಂಡು ಬಾ!"

"ಆಗಲಿ ಸಾರ್."

× × × ×

ಮೊಕದ್ದಮೆ ಹೂಡಿಯಾಗಿತ್ತು. ಸೀನನ ವಿರುದ್ಧ ಪ್ರಾಸಿಕ್ಯೂಷನ್ ಸಾಕ್ಷಿಗಳಲ್ಲಿ ನಾಣಿಯೂ ಒಬ್ಬ. ತನ್ನ ತಮ್ಮನ ವಿರುದ್ಧ ಸುಳ್ಳು

ಸಾಕ್ಷಿ ಹೇಳಬೇಕು! ಸೀನ ನಿರಪರಾಧಿಯೆಂಬುದು ಅವನಿಗೆ ತಿಳಿದಿತ್ತು. ಆದರೆ—

"ಪೋಲೀಸ್ ಕಾನಸ್ಟೇಬಲ್ ನಂಬರ್ ಹದಿನೆಂಟು....ನಾರಾಯಣರಾವ್!" ದವಾಲಿ ಕೂಗಿಕೊಂಡ.

ನಾಣಿ ಕೋರ್ಟಿನೊಳಗೆ ಹೋಗಿ ಸಾಕ್ಷಿಪೆಟ್ಟಿಗೆಯಲ್ಲಿ ನಿಂತ. ಸೀನ ಅಪರಾಧಿಸ್ಥಾನದಲ್ಲಿ ನಿಂತಿದ್ದ. ತಲೆಯೆಲ್ಲಾ ಕೆದರಿ ಒಂದೆರಡು ಕೂದಲು ಹಣೆಯ ಮೇಲೆ ಹಾದಿದ್ದುವು. ಅಣ್ಣನ ಕಡೆಗೇ ದೃಷ್ಟಿಸುತ್ತಿದ್ದ. ಆದರೆ ನಾಣಿಗೆ ಅವನ ಕಡೆ ನೋಡುವುದೂ ಸಾಧ್ಯವಿಲ್ಲ. ಒಂದು ಕಡೆ ನಾಚಿಕೆ—ಒಂದು ಕಡೆ ದೈನ್ಯ. ಇಂತಹ ತಮ್ಮನ ವಿರುದ್ಧ ಸುಳ್ಳು ಸಾಕ್ಷಿ ಹೇಳಬೇಕಲ್ಲಾ—ಎಂದು!

ಪ್ರಾಸಿಕ್ಯೂಟರ್ ಪ್ರಶ್ನೆ ಹಾಕಲಾರಂಭಿಸಿದರು:

"ಅಪರಾಧಿಯ ಕಡೆ ನೋಡು!"

ನಾಣಿ ಸೀನನ ಕಡೆ ತಿರುಗಿದ. ಇಬ್ಬರ ಕಣ್ಣು ಕೂಡಿದುವು. ಒಂದೊಂದು ಹನಿ ನೀರು ಇಬ್ಬರ ಹೃದಯವನ್ನು ಒಂದುಗೂಡಿಸಿತು. "ನನ್ನ ಇಚ್ಛೆಗೆ ವಿರುದ್ಧ ಸಾಕ್ಷ್ಯ ಹೇಳುತ್ತಿದ್ದೇನೆ ಹೃದಯ ಉರಿಯುತ್ತಿದೆ—ನನ್ನನ್ನು ಕ್ಷಮಿಸು ನೀನು!" ಎಂದುವು ನಾಣಿಯ ಕಣ್ಣುಗಳು.

"ಅಣ್ಣಾ—ನಿನ್ನ ಕೆಲಸ ನೀನು ನಡೆಯಿಸು. ಎಷ್ಟಿದ್ದರೂ ನಾವಿಬ್ಬರೂ ಒಂದು. ನಿನ್ನ ವಿಶ್ವಾಸ, ಪ್ರೇಮ, ಆಶೀರ್ವಾದ ಇದ್ದರೆ ಸಾಕು, ನಿನಗಿಷ್ಟು ತೊಂದರೆ ಕೊಟ್ಟುದಕ್ಕೆ ನನ್ನನ್ನು ಕ್ಷಮಿಸು" ಎಂದುವು ಸೀನನ ಕಣ್ಣುಗಳು.

"ಅಪರಾಧಿ ನಿನಗೆ ಗೊತ್ತೇ?"

"ಗೊತ್ತು ಸಾರ್—ನನ್ನ ತಮ್ಮ!"

"ಅವನನ್ನು ಸೆರೆಹಿಡಿದುದು ಯಾವಾಗ?"

"ಕಳೆದ ತಿಂಗಳು ೨೩ನೆಯ ತಾರೀಕು!"

"ಯಾರು ಹಿಡಿದವರು?"

"ನಾನೇ ಸಾರ್!"

"ಆಗ ಅವನೇನು ಮಾಡುತ್ತಿದ್ದ?"

"ಕೈಯಲ್ಲೊಂದು ನಾಡಬಾಂಬನ್ನಿಟ್ಟುಕೊಂಡು ರೇಲ್ವೆ ಸೇತುವೆಯ ಕಡೆಗೆ ಹೋಗುತ್ತಿದ್ದ.......ನಾನು ಹಿಂಬಾಲಿಸಿದೆ. ಬಾಂಬನ್ನ ಅಲ್ಲಿಟ್ಟು ಈ ಕಡೆ ಬಂದ. ನಾನು ಕೂಡಲೇ ಬಾಂಬನ್ನೆತ್ತಿ ಆ ಕಡೆ ಎಸೆದು ಅವನನ್ನು ಸೆರೆ ಹಿಡಿದೆ!"

"ಆಗ ಎಷ್ಟು ವೇಳೆಯಿರಬಹುದು?"

"ರಾತ್ರಿ ಬಹಳ ಹೊತ್ತಾಗಿತ್ತು ಸಾರ್. ಸ್ಟೇಷನ್ನಿಗೆ ನಾನು ಸೇರಿದಾಗ ರಾತ್ರಿ ೨ ಗಂಟೆಯಾಗಿತ್ತು!"

"ಸ್ಟೇಷನ್ನಿಗೂ ಅವನನ್ನು ಹಿಡಿದ ಸ್ಥಳಕ್ಕೂ ಎಷ್ಟು ದೂರ?"

"ಸುಮಾರು ಎರಡು ಮೈಲಿಯಾಗುತ್ತ ಸಾರ್!"

"ಹಾಗಿದ್ದರೆ ನೀವು ಅವನನ್ನು ೧೨ಕ್ಕೆ ಯಿಂದ ೧ ಗಂಟೆಯ ಒಳಗೆ ಹಿಡಿದಿರಬಹುದು!"

ಜೀವನ

ಶಕ್ತಿಹೀನರೆಲ್ಲರೂ ಹಾರಯಿಸುವ ಪ್ರಭಾವಶಾಲಿಯಾದ

ಪೌಷ್ಟಿಕ ಮಿಶ್ರಣವು

ಇದರ ಸೇವನೆಯಿಂದ ಹಸಿವೆಯು ಚೆನ್ನಾಗಿ ಆಗತೊಡಗಿ ರಕ್ತವು ವೃದ್ಧಿಯಾಗುವುದಲ್ಲದೆ, ರಕ್ತದಲ್ಲಿಯ ಕೆಂಪುಕಣಗಳ ಪ್ರಮಾಣವು ಹೆಚ್ಚಿ, ಉತ್ಸಾಹವುಂಟಾಗುವುದು. ನರಗಳು ಬಲಪಟ್ಟು ಸರ್ವ ಅವಯವಗಳಲ್ಲಿಯೂ ಸಾಮರ್ಥ್ಯ ಬರುವುದು. ಬೇನೆಯಿಂದ ಬಳಲಿ ಎದ್ದವರಿಗಂತೂ ಇದು ಸಂಜೀವಿನಿಯೇ ಸರಿ!

ಕರ್ನಾಟಕ ಆಯುರ್ವೇದ ಫಾರ್ಮಸಿ ಲಿಮಿಟೆಡ್

ಬಾಗಲಕೋಟೆ

ಹುಬ್ಬಳ್ಳಿಯ ಶಾಖೆ:

ಮಿತ್ರಮಂಡಲಿ ಕೋಟೆ, ಹುಬ್ಬಳ್ಳಿ.

"ಹೌದು ಸಾರ್."

"ನೀವು ಹೋಗಿ!"

ಪ್ರಾಸಿಕ್ಯೂಟರು ವಾದಿಸುತ್ತಾ ಸೀನನ ಮೇಲಿನ ಆರೋಪಗಳನ್ನು ಸ್ಥಿರಗೊಳಿಸಿದರು. ರಾತ್ರಿ ೧೧ ಗಂಟೆಗೆ ಬರುವ ಪೂನಾ ಮೇಲಿನಲ್ಲಿ ಸೈನ್ಯ ಬರುತ್ತಿತ್ತು. ಆ ಸುದ್ದಿ ತಿಳಿದ ಅಪರಾಧಿ, ರೈಲನ್ನೇ ಉರುಳಿಸುವ ಯೋಚನೆ ಮಾಡಿ ಬಾಂಬು ತಯಾರಿಸಿ ಅಲ್ಲಿಗೆ ನಡೆದ. ಆದರೆ ಕಾನಸ್ಟೇಬಲ್ ನಂಬರ್ ಹದಿನೆಂಟು ಧೈರ್ಯವಾಗಿ ಅವನನ್ನು ಸೆರೆಹಿಡಿದ. ತಮ್ಮನಾದರೂ ಸರಿಯೇ—ದೇಶದ್ರೋಹಿಗೆ ಶಿಕ್ಷೆಯಾಗಲೇಬೇಕೆಂದು ಅವನನ್ನು ಬಂಧಿಸಿದ.

ಮ್ಯಾಜಿಸ್ಟ್ರೇಟ್ ಸೀನನಿಗೆ ಶಿಕ್ಷೆ ವಿಧಿಸುತ್ತಾ "ಸಾರ್ವಭೌಮ ಸರ್ಕಾರದ ಸಂಗ್ರಾಮದ ಪ್ರಯತ್ನಕ್ಕೆ ಅಡ್ಡಿ ತಂದು ಮಿಲಿಟರಿವಾಹನಕ್ಕೆ ಬಾಂಬುಹಾಕಿ ಜನಹಾನಿ—ಪ್ರಾಣಹಾನಿಗೆ ಯತ್ನಿಸಿದ ಅಕೃತ್ಯಕ್ಕಾಗಿ ಕಾಲೇಜುವಿದ್ಯಾರ್ಥಿ ಶ್ರೀನಿವಾಸರಾಯನಿಗೆ ೪ ವರ್ಷ ಕಠಿಣ ಸಜಾ ವಿಧಿಸಿದೆ. ಈ ಕಾರ್ಯದಲ್ಲಿ ಅವರು ನಿರತನಾದಾಗ ತಮ್ಮನೆಂಬ ಅಂಧವಿಶ್ವಾಸವನ್ನೂ ಬಿಟ್ಟು ನಿಜವಾದ ದೇಶಪ್ರೇಮ ಮತ್ತು ಸ್ವಾರ್ಥತ್ಯಾಗಗಳನ್ನು ತೋರಿ ಅಪರಾಧಿಯನ್ನು ಬಂಧಿಸಿದ ಕಾನಸ್ಟೇಬಲ್ ನಂಬರ್ ಹದಿನೆಂಟು ನಾರಾಯಣರಾಯರ ಕಾರ್ಯ ಪ್ರಶಂಸನೀಯ!" ಎಂದು ಹೇಳಿದರು.

ಸೀನ ಪೋಲೀಸ ವ್ಯಾನ್ ಹತ್ತಿದ. ನಾಣಿಯ ಕಣ್ಣಿನಲ್ಲಿ ನೀರು ತುಂಬಿತ್ತು. ಗಾಡಿ ಮೆಲ್ಲನೆ ಮರೆಯಾಯಿತು. ನಾಣಿ ಕೋರ್ಟಿನ ಮುಂದಿನ ಕಂಬವನ್ನೊರಗಿಕೊಂಡು ಆಕಾಶದ ಕಡೆ ದೃಷ್ಟಿಸುತ್ತಿದ್ದ. ಅವನ ಮುಖ ಶೂನ್ಯವಾಗಿತ್ತು. ಆದರೆ ಅವನ ಭುಜದ ಮೇಲೆ ಹೊಳಸಿತ್ತು—ಆ ಹಿತ್ತಾಳೆಯ ಸಂಖ್ಯೆ, ಮುಳುಗುತ್ತಿದ್ದ ಸೂರ್ಯನ ಕೆಂಗಿರಣದಲ್ಲಿ ಹೊಳೆಯುತ್ತಿತ್ತು. ಅದು ಅವನ ಗುರುತು—ಕಾನಸ್ಟೇಬಲ್ ನಾರಾಯಣರಾಯ—ನಂಬರ್ ಹದಿನೆಂಟು!

ಜಾತೀಯ ಐಕ್ಯ

ಶ್ರೀರಂಗ

೧

ಹಿಂದುಸ್ಥಾನವು ಒಂದು ರಾಷ್ಟ್ರ, ಒಂದು ರಾಷ್ಟ್ರವಾಗಿಯೇ ಅದರ ಬಲ ಬೆಳೆಯಬೇಕು, ರಾಷ್ಟ್ರೀಯತೆಗೆ ವಿಘಾತಕವಾದ ಎಲ್ಲವನ್ನೂ ದೂಡಿದು ಹಾಕಿ ರಾಷ್ಟ್ರೀಯತೆಯನ್ನು ಬೆಳೆಯಿಸಬೇಕು.— ಎಂಬ ಧ್ಯೇಯಕ್ಕಾಗಿ ರಾಷ್ಟ್ರಸೇವಕ ಸೈನಿಕರಾಗಬಯಸಿದ ನಿಮಗೆ ಒಂದು ಮಾತನ್ನು ಮುಂಚೆ ಹೇಳಬಯಸುತ್ತೇನೆ. ಅದೆಂದರೆ ಕರ್ನಾಟಕ ಏಕೀಕರಣದ ವಿಷಯ. ಏಕೀಕರಣವು ಪ್ರಾಂತೀಯ ಭಾವನೆಯಾದ್ದರಿಂದ ರಾಷ್ಟ್ರೀಯತೆಗೆ ವಿಘಾತಕವಾದುದು ಎಂಬ ತಪ್ಪು ಮತ್ತು ದುಷ್ಟ ಕಲ್ಪನೆಯ ದಿವಸಗಳು ಕಳೆದು ಹೋದುವು. ಏಕೀಕರಣವಿಲ್ಲದ ರಾಷ್ಟ್ರೀಯ ಜೀವನದಲ್ಲಿ ನಮಗೆ ಸಲ್ಲತಕ್ಕ ಸ್ಥಾನಮಾನಗಳು ದೊರೆಯಲಾರವು, ನಮ್ಮ ಸಂಘಟನೆಗೆ ಚೈತನ್ಯ ಬಾರದು, ಅದಕ್ಕಾಗಿ ಏಕೀಕರಣವಾಗದೆ ನಮ್ಮ ರಾಷ್ಟ್ರೀಯತೆಯ ಚಳವಳಕ್ಕೆ ನೈತಿಕ ಪುಷ್ಟಿಯಾಗಲಿ, ವ್ಯಾವಹಾರಿಕ ಶಕ್ತಿಯಾಗಲಿ ಬಾರದು ಎಂಬ ಸರಿಯಾದ ವಿಚಾರ ಈಗ ನಮಗೆಲ್ಲರಿಗೆ ಹೊಳೆದಿದೆ. ಆದ್ದರಿಂದ ರಾಷ್ಟ್ರೀಯತೆಗೆ ಪೋಷಕವಾದ ಏಕೀಕರಣವು ಮೊದಲ ಹೆಜ್ಜೆಯಂತೆ ತಮ್ಮ ಜೀವನ ಧ್ಯೇಯದಲ್ಲಿ ಮೊದಲಸ್ಥಾನವನ್ನು ಪಡೆಯುವದು ಎಂದು ಹಾರೈಸುತ್ತೇನೆ.

ರಾಷ್ಟ್ರೀಯತೆಯ ಚಳವಳಕ್ಕೆ ಸಂಬಂಧಿಸಿದ ಒಂದು ಮಹತ್ವದ ವಿಷಯವನ್ನು ಇಂದು ತಮ್ಮೆದುರು ಚರ್ಚಿಸಬೇಕೆಂದಿದ್ದೇನೆ. ಅದೆಂದರೆ ಜಾತೀಯತೆಯ ವಿಷಯ. ಹಿಂದುಸ್ಥಾನದ ಜನರಲ್ಲಿ ಜಾತೀಯ ಭಾವನೆಯು ಸಂಪ್ರದಾಯದಂತೆ ರಕ್ತಗತವಾದ್ದರಿಂದ ಹಿಂದುಸ್ಥಾನವು ಒಂದು ರಾಷ್ಟ್ರವಾಗದು ಎಂದು ಅನೇಕ ವರ್ಷಗಳಿಂದ ಸರಕಾರದವರು ಹೇಳುತ್ತಿದ್ದ ಮಾತನ್ನು—ದಡ್ಡತನದಿಂದಲೋ, ದುರ್ದೈವದಿಂದಲೋ —ಇಂದು ನಮ್ಮವರೂ ನಂಬಿ ಹೇಳುತ್ತಿದ್ದಾರೆ. ಈ ಮಾತನ್ನು ನಾವು ಸರಿಯಾಗಿ ತಿಳಿದುಕೊಳ್ಳೋಣ. ಹಿಂದುಸ್ಥಾನದಲ್ಲಿ ಬೇರೆ ಬೇರೆ ಜಾತಿಗಳು, ಪರಸ್ಪರ ಭಿನ್ನ ಮತ್ತು ವಿರುದ್ಧವಾದ ಧರ್ಮಗಳು ಇವೆ ಎಂದ ಮಾತ್ರಕ್ಕೆ ಹಿಂದುಸ್ಥಾನದಲ್ಲಿ ರಾಷ್ಟ್ರೀಯ ಐಕ್ಯ ಶಕ್ಯವಿಲ್ಲ ಎಂದರ್ಥವಲ್ಲ. ಸ್ವಿಝರಲಂಡ, ಕಾನಡಾ, ಅಮೇರಿಕಾ, ದಕ್ಷಿಣ ಆಫ್ರಿಕಾ, ರಶಿಯಾ ಮೊದಲಾದ ದೇಶಗಳಲ್ಲೂ ಭಿನ್ನಭಿನ್ನ ಧರ್ಮಗಳಿವೆ; ಆದರೂ ಅಲ್ಲಿ ಏಕರಾಷ್ಟ್ರೀಯತೆಯ ಭಾವನೆ ಕಂಡು ಬರುವುದು. ಅದರಂತೆಯೆ ಒಂದಿಲ್ಲ ಒಂದು ತರದ ಉಚ್ಚನೀಚ ಜಾತಿಗಳು ಪ್ರತಿಯೊಂದು ದೇಶದಲ್ಲೂ ಕಂಡು ಬರುತ್ತವೆ. ಆದ್ದರಿಂದ ಕೇವಲ ಜಾತಿಗಳ ಇಲ್ಲವೆ ಬೇರೆ ಧರ್ಮಗಳ ಅಸ್ತಿತ್ವದಿಂದಲೆ ರಾಷ್ಟ್ರೀಯತೆ ಹುಟ್ಟದು ಎಂದಲ್ಲ. ಹಿಂದುಸ್ಥಾನದ **ಜನರಲ್ಲಿ ಜಾತೀಯತೆಯ ಭಾವನೆ ಇದೆ,** ಅದಕ್ಕಾಗಿ ರಾಷ್ಟ್ರೀಯ ಐಕ್ಯ ಶಕ್ಯವಿಲ್ಲ ಎಂಬುದು ಈ ಮಾತಿನ ನಿಜವಾದ ಅರ್ಥ.

ಈ ಅರ್ಥವು ನಿಜವಿದ್ದಷ್ಟೆ ಸರಿಯಾದುದೂ ಇದೆ ಎಂದು ನಾವು ಒಪ್ಪಿಕೊಳ್ಳಲೇ ಬೇಕು. ಹಿಂದುಗಳಲ್ಲಿಯೆ ಬ್ರಾಹ್ಮಣ, ಬ್ರಾಹ್ಮಣೇತರ, ಹರಿಜನ ಎಂದು ಮೂರಾದು ಜಾತಿಗಳಿವೆಯಲ್ಲದೆ ಇಂದಿಗೂ ಈ ಜಾತಿಗಳ ಸಾಮಾಜಿಕ ಜೀವನದಲ್ಲಿ ಪರಸ್ಪರ ಬಳಕೆ ಇಲ್ಲ. ಇಷ್ಟೇ ಅಲ್ಲ, ಇವುಗಳಲ್ಲಿ ಉಚ್ಚ-ನೀಚ-ಭಾವನವನ್ನು ವಸ್ತುಸ್ಥಿತಿಗೆ ವಿರುದ್ಧವಾದ್ದೆನಿಸಿದಾಗೂ ನಾವು ಒಪ್ಪುತ್ತೇವೆ. ಹೀಗಿರುವಾಗಲೆ ತಮ್ಮವರಲ್ಲಿಯೆ ಸಮಾನ ಸ್ವಾತಂತ್ರ್ಯವನ್ನೇ ಒಪ್ಪದ ಹಿಂದುಗಳು ನಮ್ಮವರನ್ನು ಸರಿಸಮಾನರೆಂದು ನಡೆಯಿಸಿಕೊಳ್ಳುವುದು ಶಕ್ಯವೇ ಇಲ್ಲ ಎಂದು ಮುಸಲ್ಮಾನರು ತಿಳಿದುಕೊಳ್ಳಬಹುದಲ್ಲವೇ? ಇದಕ್ಕಾಗಿ ಹಿಂದುಗಳ ಬಗ್ಗೆ ಮುಸಲ್ಮಾನರಲ್ಲಿ ಅವಿಶ್ವಾಸವು ಇರಬಾರದೇಕೆ?

ಹಿಂದು-ಮುಸಲ್ಮಾನರ ಪರಸ್ಪರ ಅವಿಶ್ವಾಸವೆ ಇಂದಿನ ಜಾತೀಯ ಸಮಸ್ಯೆಯ ತಳಹದಿಯಾಗಿದೆ ಎಂದು ಅನೇಕರು ಅಭಿಪ್ರಾಯಪಡುತ್ತಾರೆ. ಕಳೆದ ಇಪ್ಪತ್ತೈದು ವರ್ಷಗಳಿಂದ ಗಾಂಧೀಜಿಯವರು ಹರಿಜನೋದ್ಧಾರಕ್ಕೆ ರಾಷ್ಟ್ರೀಯ ಚಳವಳದಲ್ಲಿ ಮುಖ್ಯಸ್ಥಾನವನ್ನು ಕೊಟ್ಟದ್ದನ್ನು ನಾವು ಈ ದೃಷ್ಟಿಯಿಂದಲೆ ತಿಳಿದುಕೊಳ್ಳಬೇಕಾಗಿದೆ. ಹರಿಜನೋದ್ಧಾರವು ಆತ್ಮವಿಶ್ವಾಸದ ಮಾರ್ಗದಲ್ಲಿ ಒಂದು ಹೆಜ್ಜೆ ಮಾತ್ರ. ಅದೇ ಭಾವನೆಯನ್ನು ವಿಸ್ತಾರಗೊಳಿಸಿ ಹಿಂದುಗಳಲ್ಲಿಯೆ ಅಲ್ಲದೆ ಎಲ್ಲರೂ ಸರಿಸಮಾನರೆಂಬ ಗುರಿಗೆ ನಾವು ಮುಟ್ಟಬೇಕಾಗಿದೆ. ಅದು ಹೇಗೆ ಶಕ್ಯವಿದೆ ಎಂಬುದನ್ನು ವಿವರಿಸುವ ಮುಂಚೆ ಜಾತೀಯ ಸಮಸ್ಯೆ ಎಂಬುದನ್ನು ಪೂರ್ತಿಯಾಗಿ ತಿಳಿದುಕೊಳ್ಳೋಣ.

ಹಿಂದು-ಮುಸಲ್ಮಾನರ ಪರಸ್ಪರ ಅವಿಶ್ವಾಸವೆ ಜಾತೀಯ ಪ್ರಶ್ನೆಯ ಸ್ವರೂಪವಾಗಿದೆ ಎಂದು ಮೇಲೆ ಸೂಚಿಸಿದೆಯಷ್ಟೆ? ಈ ಮಾತನ್ನು ಇನ್ನೊಂದು ದೃಷ್ಟಿಯಿಂದ ನೋಡೋಣ. ಅವಿಶ್ವಾಸ ಇದೆ ಎಂದು ಸದ್ಯಕ್ಕೆ ಒಪ್ಪಿಕೊಳ್ಳೋಣ. ಆದರೆ ಈ ಅವಿಶ್ವಾಸ ಯಾವ ಹೆದರಿಕೆಗಾಗಿ? ಇಂದಿನ ಕಾಲದಲ್ಲಿ ಹಿಂದುಗಳು ತಮ್ಮ ಕುಲಧರ್ಮವನ್ನು ನಾಶ ಮಾಡಬಹುದೆಂಬ ಹೆದರಿಕೆಯೆ ಮುಸಲ್ಮಾನರಿಗೆ? ಅಂತಹ ಹೆದರಿಕೆಗೆ ಇಂದಿನ ಜೀವನದಲ್ಲಿ ಎಳ್ಳಷ್ಟು ಪುಷ್ಟಿ ಇಲ್ಲ ಎಂದು ಸ್ಪಷ್ಟವಾಗಿ ಹೇಳಬಹುದು. ವಸ್ತುಸ್ಥಿತಿಗೆ ವಿರುದ್ಧವಾದಾಗೂ ಹೆದರಿಕೆ ಇದೆ ಎಂದು ಹಟದಿಂದ ಹೇಳುವವನು ಹುಚ್ಚರ ಆಸ್ಪತ್ರೆಯನ್ನು ಸೇರಬೇಕಾಗುವುದು. ಮುಸಲ್ಮಾನರು ಹಿಂದುಸ್ಥಾನದಲ್ಲಿ ಬೆಳೆಯ ತೊಡಗಿದಂದಿನಿಂದ ಇಂದಿನ ವರೆಗೆ ಮುಸಲ್ಮಾನರ ಧರ್ಮವನ್ನಾಗಲಿ, ಸಂಸ್ಕೃತಿಯನ್ನಾಗಲಿ ದೂಡಿದುಹಾಕಬೇಕೆಂಬ ವಿಚಾರ ಹಿಂದುಗಳಲ್ಲಿಲ್ಲ, ರಾಜ್ಯವೈಭವವನ್ನು ಕಸಿದುಕೊಳ್ಳಬೇಕೆಂದು ಹೋರಾಟವಾಗಿದೆ, ನಿಜ. ಆದರೆ ಇಂದು ಅಂತಹ ಹೋರಾಟವೂ ಶಕ್ಯವಿಲ್ಲ. ಯಾಕೆಂದರೆ, ಹಿಂದು-ಮುಸಲ್ಮಾನ ಇಬ್ಬರೂ ಸಮವಾಗಿ ವೈಭವಹೀನರಾಗಿದ್ದಾರೆ, ಪೂರಕವಾಗಿ ಇಂದಿನ ಜೀವನದಲ್ಲಿ ಧರ್ಮಕ್ಕೆ ಮುಂಚಿನಂತಹ ಸ್ಥಾನವೆ ಇಲ್ಲ. ಇವೆಲ್ಲ ಕಾರಣಗಳಿಗಾಗಿ, ಅವಿಶ್ವಾಸಕ್ಕೆ ಮೂಲವಾಗಬಹುದಾದ ಹೆದರಿಕೆ ಕೇವಲ ಕಾಲ್ಪನಿಕವಾದುದು.

ಅವಿಶ್ವಾಸ ಯಾಕೆ ಎಂಬುವನ್ನು ಸುಸಂಬದ್ಧವಾಗಿ ಸಮರ್ಥಿಸಲು ಆಗದಿರುವಾಗ ಅದೇ ಮಾತನ್ನು ಇನ್ನೊಂದು ರೀತಿಯಿಂದ ಹೇಳಲಾಗುತ್ತಿದೆ. ಅದೆಂದರೆ, ಇತಿಹಾಸದ ದೃಷ್ಟಿಯಿಂದಲೆ ಆಗಲಿ ಮನುಷ್ಯಸ್ವಭಾವದ ದೃಷ್ಟಿಯಿಂದಲೆ ಆಗಲಿ, ಹಿಂದುಗಳಿಂದ ಮುಸಲ್ಮಾನರಿಗೆ ನ್ಯಾಯ ದೊರಕುವ ಆಸೆ ಇಲ್ಲ ಎಂದು ಇತಿಹಾಸದಲ್ಲಿ

ಹಿಂದುಗಳ ಮೇಲೆ ಅನ್ಯಾಯವನ್ನು—ಹಿಂದುಗಳ ದೃಷ್ಟಿಯಿಂದ ಮುಸಲ್ಮಾನರ ಆಳಿಕೆಯು ಹೇರಿದೆ. ಇಂದು ಆ ಸ್ಮರಣೆಗಾಗಿ ಮುಸಲ್ಮಾನರನ್ನು ಹಿಂದುಗಳು ನ್ಯಾಯದಿಂದ ನಡೆಯಿಸಿಕೊಳ್ಳುವರೆಂದು ಹೇಳಲಾಗದು. ಇದಲ್ಲದೆ, ಮನುಷ್ಯನ ಸ್ವಭಾವವೂ ಹಾಗೆಯೆ ಇದೆ. ಇಂದು, ಕರ್ನಾಟಕದಲ್ಲಿ ಬ್ರಾಹ್ಮಣ-ಬ್ರಾಹ್ಮಣೇತರರ ಪರಿಸ್ಥಿತಿಯನ್ನೆ ನೋಡಿದರೆ, ಒಂದು ಜಾತಿಯ ಪ್ರಾಬಲ್ಯವಿದ್ದಾಗ ಇನ್ನೊಂದು ಜಾತಿಗೆ ನ್ಯಾಯ ದೊರಕುವ ಆಸೆಯೆ ಇಲ್ಲ. ಇಂದಿನ ವಸ್ತುಸ್ಥಿತಿಯನ್ನು ಸ್ಥೂಲವಾಗಿ ನೋಡಿದಲ್ಲಿ ಈ ಮಾತು ನಿಜವೆನ್ನಿಸುವುದು, ಆದರೆ ಸ್ಥೂಲವಾಗಿ ನೋಡಿದಲ್ಲಿ ಮಾತ್ರ; ಯಾಕೆಂದರೆ, ನಿಜವಾಗಿ ನೋಡಿದಲ್ಲಿ ಈ ಮಾತು ಮನಸಿನದೊಂದು ಮೋಸ ಎನ್ನಿಸುವುದು. ಇಂದಿನ ನಮ್ಮ ಸಾಮಾಜಿಕ ಜೀವನದ ಧ್ಯೇಯವು ಮೊದಲಿಗಿಂತ ಬೇರೆಯಾಗಿದೆ, ವ್ಯಕ್ತಿಸ್ವಾತಂತ್ರ್ಯದ ತತ್ತ್ವವನ್ನು ನಾವು ಒಪ್ಪುತ್ತಲಿದ್ದೇವೆ. ಮುಖ್ಯವಾಗಿ ಅನ್ನ—ಆರೋಗ್ಯ—ಬಟ್ಟೆ—ಶಿಕ್ಷಣ—ವಿಚಾರ—ವ್ಯವಸಾಯ ಇವುಗಳಿಗಾಗಿ ಪ್ರತಿಯೊಂದು ವ್ಯಕ್ತಿಗೆ ಹಕ್ಕು ಇದೆ ಎಂದು ನಾವು ಒಪ್ಪುವುದು ಇಂದಿನ ಜೀವನಧ್ಯೇಯದಲ್ಲಿ ಮುಖ್ಯವಾಗಿದೆ, ಮಹತ್ತ್ವದ್ದಾಗಿದೆ. ಆ ಧ್ಯೇಯ ಸಾಧ್ಯವಾಗಬೇಕಾದರೆ—ಸಾಧ್ಯವಂತೂ ಆಗಲೇಬೇಕು—ನಮ್ಮ ಆಡಳಿತ ಸ್ವಾತಂತ್ರ್ಯ ನಮಗೆ ಬೇಕು. ಅಂತಹ ಸ್ವಾತಂತ್ರ್ಯವಿಲ್ಲದಿರುವಾಗ ನಮ್ಮ ನಡೆವಳಿಕೆಯನ್ನು ನೋಡಿ ಒಂದು ನಿರ್ಣಯಕ್ಕೆ ಬರುವುದು ತಪ್ಪಾಗುವುದು. ಹೀಗಿರುವಾಗ ಅವಿಶ್ವಾಸವಿದೆ ಇಲ್ಲವೆ ನ್ಯಾಯ ದೊರಕುವುದಿಲ್ಲ ಎಂಬುದೂ ತಪ್ಪಾಗುವುದು. ಇದನ್ನರಿತೂ ಆ ಮಾತನ್ನೆ ಹೇಳುವವರಿದ್ದಾರೆ; ಅವರದು ಪರವಂಚನೆ; ಇದನ್ನರಿಯದೆ ಆ ಮಾತನ್ನು ಹೇಳುವವರಿದ್ದಾರೆ; ಅದು ಆತ್ಮವಂಚನೆ.

ಇತ್ತಿತ್ತಲಾಗಿ ಹೊಸತೊಂದು ಮಾತು ಕೇಳಬರುತ್ತಲಿದೆ. ಅದೆಂದರೆ—ಭಾಷೆ-ಧರ್ಮ-ರೂಢಿ-ಸಂಸ್ಕೃತಿ ಇವೆಲ್ಲ ಭಿನ್ನವಾದಲ್ಲಿ ಆ ಜನಾಂಗವೂ ಭಿನ್ನವಾದದ್ದೆಂದೇ ತಿಳಿಯಬೇಕಂತೆ. ಹೀಗೆ ಮಾತನಾಡುವವರು ಇತಿಹಾಸದ ಮತ್ತು ಮಾನವ ಪ್ರಗತಿಯ ಅಜ್ಞಾನವನ್ನು ಪ್ರದರ್ಶಿಸುತ್ತಲಿದ್ದಾರೆ ಎಂದು ಧೈರ್ಯವಾಗಿ ಹೇಳಬಹುದು. ಭಿನ್ನವಾದುದು, ವಿವಿಧವಾದುವು ಒಂದಾಗುವುದನ್ನೆ ಇತಿಹಾಸದಲ್ಲಿ ಕಾಣುತ್ತೇವೆ. ರಶಿಯಾ, ಕಾನಡಾ, ಅಮೇರಿಕಾ ಇವೇ ಮೊದಲಾದ ದೇಶಗಳ ದೃಷ್ಟಾಂತವನ್ನೆ ಈ ದೃಷ್ಟಿಯಿಂದಲೆ ನೋಡಬಹುದು. ಭಿನ್ನ ಭಿನ್ನ ಭಾಷೆ-ಧರ್ಮ-ಸಂಸ್ಕೃತಿಗಳ ಜನರು ಒಂದು ರಾಷ್ಟ್ರವಾಗಿದ್ದಾರೆ. ಇದಲ್ಲದೆ, ಜಗತ್ತಿನ ಜನಾಂಗಗಳಲ್ಲಿಯ ಭೇದಭಾವವನ್ನು ಕಳೆಯುವುದೆ ಮಾನವಪ್ರಗತಿಯ ಹೆಗ್ಗುರುತಾಗಿದೆ. ಹಿಂದುಸ್ತಾನದಂತಹ ದೊಡ್ಡ ದೇಶದಲ್ಲಿ ಅನೇಕ ಭಾಷೆಗಳಿವೆ; 'ಒಂದು ವ್ಯಕ್ತಿಯ ಭಾಷೆ ಇನ್ನೊಂದು ವ್ಯಕ್ತಿಯಂತಿರುವುದಿಲ್ಲ' ಎಂದು ಭಾಷಾಶಾಸ್ತ್ರಜ್ಞರು ಹೇಳುತ್ತಾರೆ. ಧರ್ಮವು ಆಯಾ ವ್ಯಕ್ತಿಗೆ ಸಂಬಂಧಿಸಿದ ವಿಷಯ ಎಂದು ಇಂದು ನಾವು ಹೇಳುತ್ತೇವೆ. ಇದಕ್ಕಾಗಿ ಪ್ರತಿಯೊಂದು ವ್ಯಕ್ತಿಯೂ ಒಂದು ವಿಶಿಷ್ಟ ಜನಾಂಗ, ಒಂದು ವ್ಯಕ್ತಿ ಎಂದರೆ ಒಂದು ರಾಷ್ಟ್ರ—ಎಂದು ಹೇಳೋಣವೆ?

ನಿಜವಿದ್ದ ಮಾತೆಂದರೆ, ಜಾತಿಯ ಪ್ರಶ್ನೆ ಎಂಬುದು ಇಲ್ಲವೇ ಇಲ್ಲ. ಅದಕ್ಕಾಗಿಯೆ ಆ ಪ್ರಶ್ನೆ ಇದೆ ಎಂದು ಸಾಧಿಸುವವರು ಕಲ್ಪನೆಗೆ ಕೂಡ ನಿಲುಕದ ಅಸಂಭಾವ್ಯ ಕಾರಣಗಳನ್ನು ಕೊಡುತ್ತಾರೆ. ಒಂದು ರಾಜಕಾರಣ, ಇನ್ನೊಂದು ನೌಕರಿಯ ನಿಮಿತ್ತ; ಇವೆರಡೆ ಸಂಗತಿಗಳ ಮೇಲೆ ಜಾತಿಯ ಪ್ರಶ್ನೆ ಎಂಬುದು ನಿಂತಿದೆ. ಆದರೆ ಇಂದಿನ ರಾಜಕಾರಣ ಹೊಣೆಗಾರಿಕೆ ಇಲ್ಲದ್ದು. ನಾಳೆ ಹೊಣೆಗಾರಿಕೆಯ ರಾಜಕಾರಣ ಅಸ್ತಿತ್ವದಲ್ಲಿ ಬಂದಾಗ, ಅಲ್ಪಸಂಖ್ಯಾಕ ಪಕ್ಷವು ಬಹುಸಂಖ್ಯಾಕ ಪಕ್ಷವಾಗಬೇಕೆಂದು ಹಂಬಲಿಸುವಾಗ, ಜಾತೀಯ ದೃಷ್ಟಿಯು ಹಿಂದೆ ಬೀಳುವುದರಲ್ಲಿ ಸಂದೆಯವಿಲ್ಲ. ಯಾಕೆಂದರೆ, ಜಾತೀಯವಾದದಲ್ಲಿ ಕೆಲವು ಪಕ್ಷಗಳು ಶಾಶ್ವತವಾಗಿ ಅಲ್ಪಸಂಖ್ಯಾಕವಾಗಿ ಉಳಿಯಬೇಕಾಗುವುದು. ನೌಕರಿಯ ವಿಷಯವಾದರೂ ಹಾಗೆಯೆ. ಮುಕ್ತವೆ ಶಿಕ್ಷಣ, ಔದ್ಯೋಗಿಕ ಶಿಕ್ಷಣ ಎಲ್ಲರಿಗೂ ದೊರೆತು ನೌಕರಿಯು ಯೋಗ್ಯತೆಯನ್ನವಲಂಬಿಸುವಂತೆ ಮಾಡಿದರೆ, ಹೊಟ್ಟೆಗಾಗಿ ಜಾತೀಯತೆಯ ಬೀದಿ ದೊಂಬರಾಟ ಮಾಡುವುದು ನಿಲ್ಲುವುದು. ಮುಖ್ಯ ವಿಷಯವೆಂದರೆ, ಇಂದಿನ ನಮ್ಮ ಮುಂದಾಳುತನವು ಈ ದೃಷ್ಟಿಯನ್ನಿಟ್ಟುಕೊಳ್ಳಬೇಕು. ಸನಾತನ ವರ್ಣಾಶ್ರಮ ಧರ್ಮದ ಅಭಿಮಾನಿಗಳಿಗೆ, ಗೋ-ಬ್ರಾಹ್ಮಣ ಪರಿಪಾಲಕ ಸಾಮ್ರಾಜ್ಯವಾದಿಗಳಿಗೆ, ಇಸ್ಲಾಮಿನ ಪ್ರಚಾರಕರಿಗೆ ಇಂದಿನ ಸಾರ್ವಜನಿಕ ಜೀವನದಲ್ಲಿ ಮುಂದಾಳುತನ ಇಲ್ಲ—ಎಂದರೆ ಅಂತವರು ಮುಂದಾಳು ಎಂದು ನಾವು ಒಪ್ಪಕೂಡದು. 'ಜಾತಿಯ ಪ್ರಶ್ನೆ ಎಂಬುದು ಮಾಯೆ, ಏಕರಾಷ್ಟ್ರೀಯತೆಯೆ ಸತ್ಯ' ಎಂದು ಆಗ ಹೊಳೆಯುವುದು.

ಒಡನಾಡಿ

'ಆನಂದಕಂದ'ರ ಹೊಸ ಕವನಸಂಗ್ರಹ

ಇದೀಗ ಅಚ್ಚಾಗಿ ಬೆಳಕಿಗೆ ಬಂದಿದೆ!

"ಮುಂಬರಯದ ಮುಗ್ಧಪ್ರಣಯದ ಆತುರ-ಕಾತರಗಳನ್ನೂ, ಏರುವರೆಯದ ಕಾಮಪ್ರಣಯದ ರತಿ-ಹಾಸವಿಲಾಸಗಳನ್ನೂ, ತುಂಬುವರೆಯದ ಅನುಭವಪ್ರಣಯದ ಸುಖ-ದುಃಖಗಳ ಉಯ್ಯಾಲೆಯಾಟವನ್ನೂ, ಇಳಿವರೆಯದ ಪರಿಪಕ್ವಪ್ರಣಯದ ತತ್ತ್ವಜ್ಞತೆಯನ್ನೂ ಇಲ್ಲಿಯ ಕೃತಿಗಳಲ್ಲಿ ನೋಡಬಹುದು!"

ಹೊಸಕವನಗಳನ್ನು ವಿವಿಧರಾಗಗಳಲ್ಲಿ ಹಾಡಿಕೊಳ್ಳಬೇಕೆಂದು ಬಯಸುವವರು, ಅವಶ್ಯವಾಗಿ ಈ ಕವನಸಂಗ್ರಹದ ಸಹಕಾರ ಪಡೆಯಬೇಕು.

'ಬಾಳಿದು ಕನಸಲ್ಲ' 'ಬಂತು ಬಂತು ಮಾಗಿ!' 'ಜಯ ಜಯ ಫಾಲ್ಗುಣ!' 'ಹಚ್ಚsದೀಪಾ ನಲ್ಲೆ!' ಮೊದಲಾದ ಜನಪ್ರಿಯ ಭಾವಗೀತಗಳು ಇದರಲ್ಲಿ ಸಂಗ್ರಹಗೊಂಡಿವೆ.

ಅಂದವಾದ ಮುದ್ರಣ ಸುಂದರವಾದ ಕಟ್ಟು

ಬೆಲೆ ಒಂದು ರೂಪಾಯಿ

ಬೇಕಾದವರು ಜಯಂತಿ ಕಾರ್ಯಾಲಯಕ್ಕೆ ಬರೆಯಿರಿ!

ಜಾತೀಯ ಪ್ರಶ್ನೆ ಎಂಬುದೆ ಇಲ್ಲ ಎಂಬ ನನ್ನ ಮಾತಿಗಾಗಿ ನಾನಾನ್ಯರು ದಿಗ್ಭ್ರಾಂತರಾಗಬಹುದು, ಸ್ವಯಂಮನ್ಯರು ಬುದ್ಧಿವಂತಿಕೆಯ ಮುಗುಳ್ನಗೆಯನ್ನು ಬೀರಬಹುದು. ಇವರಿಬ್ಬರಿಗಾಗಿಯೂ ನಾನೊಂದು ಮಾತನ್ನು ಹೇಳುತ್ತೇನೆ. ಜಾತೀಯ ಐಕ್ಯವಿಲ್ಲದೆ ಸ್ವಾತಂತ್ರ್ಯವು ದಕ್ಕವೇ ಇಲ್ಲ. ಅದಕ್ಕಾಗಿ ಜಾತೀಯ ಐಕ್ಯಕ್ಕಾಗಿ ಎಷ್ಟು ಪ್ರಯತ್ನಪಟ್ಟರೂ ಕಡಮೆಯೆ ಎಂದು ವಾದಿಸುವವರಿದ್ದಾರಲ್ಲವೆ? ಅವರಂತೆಯೆ ಗಾಂಧಿ-ಜಿನ್ನಾರನ್ನು ಸೋವಲ್ಲೊಂದು ಆ ಐಕ್ಯಕ್ಕಾಗಿ ಪ್ರಯತ್ನ ಮಾಡಿದ, ಮಾಡುತ್ತಲಿರುವ ಬೇರೆ ಮುಂದಾಳುಗಳೂ ಅನೇಕರಿರುವರಲ್ಲವೆ? ಅವರೂ ಪ್ರತಿಸಲ ಐಕ್ಯವು ಮುಂಚೆಗಿಂತ ಹೆಚ್ಚು ಜಟಿಲಪ್ರಶ್ನೆಯಾಗಿ ಉಳಿಯುವುದು. ಯಾಕೆ? ಐಕ್ಯಪ್ರಯತ್ನಗಳ ಇತಿಹಾಸವನ್ನು ಸೂಕ್ಷ್ಮವಾಗಿ ನೋಡಿದರೆ ಹೊಳೆಯುವುದು. ನೂರಕ್ಕೆ ೩೦ರಿಂದ ನೂರಕ್ಕೆ ೫೦, ಕೊನೆಗೆ ನೂರಕ್ಕೆ ನೂರು ಮುಸಲ್ಮಾನರಿಗೆ ಪ್ರಾತಿನಿಧ್ಯ ಬೇಕೆನ್ನುತ್ತ, ಪ್ರತಿಸಲ ಪ್ರಮಾಣವು ಬದಲಾಯಿಸುತ್ತ ಈಗ ಇಬ್ಬರಿಗೂ ನೂರಕ್ಕೆ ನೂರು ಎನ್ನುವ ನಗೆಗೇಡು ಪರಿಸ್ಥಿತಿ ಪ್ರಾಪ್ತವಾಗಿದೆ! ನಿದ್ದೆ ಹೋದವನನ್ನು ಎಚ್ಚರಿಸುವುದು ಕಠಿಣವಲ್ಲ, ನಿದ್ದೆ ನಟಿಸುವವನನ್ನು ಎಚ್ಚರಿಸುವುದು ಅಸಾಧ್ಯ ಎಂದು ಹೇಳುವರಲ್ಲವೇ? ಅದೇ ಮಾತು ಇಲ್ಲಿಯೂ ಅನ್ವಯಿಸುವುದು. ಜಾತೀಯ ಪ್ರಶ್ನೆ ಎಂಬುದು ಇದ್ದರೆ ಅದನ್ನು ಬಿಡಿಸಬಹುದಾಗಿದೆ, ಆ ಪ್ರಶ್ನೆಯೆ ಇದ್ದಿಲ್ಲವಾದರೆ ಬಿಡಿಸುವುದೆಂತು? ಪ್ರತಿಯೊಂದು ಪ್ರಯತ್ನದ ವೇಳೆಗೆ ಮಾತ್ರ, ಪ್ರಶ್ನೆ ಇದೆ ಎಂದು ತೋರಿಸುವ ಹಟಕ್ಕಾಗಿಯೊ ಏನೊ ಎನ್ನುವಂತೆ ಹೊಸ ಹೊಸ ಮಾತುಗಳನ್ನು ಸೇರಿಸುವುದು! ನಿಜವಾದ ಪರಿಸ್ಥಿತಿ ಹೀಗಿರುವಾಗ, ಜಾತೀಯ ಐಕ್ಯವನ್ನು ಮೊದಲು ಸಾಧಿಸಬೇಕು ಎನ್ನುವವರು ಜಾತೀಯ ಮುಂದಾಳುಗಳ ಪ್ರಚಾರಕ್ಕೆ ಪುಷ್ಟಿಯನ್ನು ಕೊಡುತ್ತಲಿದ್ದಾರೆ ಎಂಬುವದನ್ನರಿಯಲಿ.

ಕೊನೆಯದಾಗಿ ಒಂದು ಮಾತು: ಸಾವಿರಾರು ವರ್ಷಗಳಿಂದ ನಡೆದು ಬಂದ ಜಾತಿಗಳನ್ನು ತೆಗೆದೊಗೆವುದು ಅಶಕ್ಯವಾದ್ದರಿಂದ ಜಾತೀಯ ಪ್ರಶ್ನೆ ಬಿಡುವಂತೆಯೇ ಇಲ್ಲ ಎಂದು ಕೆಲವರು ನಿರಾಶೆಗೊಳ್ಳುತ್ತಾರೆ. ಆ ವಿಚಾರವೂ ತಪ್ಪಾದುದು. ಜಾತೀಯತೆಯ ಭಾವನೆಯನ್ನು ತೆಗೆದೊಗೆವುದೆಂದರೆ ಜಾತಿಗಳನ್ನು ತೆಗೆದೊಗೆಯಬೇಕೆಂದು ಎಂದಿಗೂ ಅರ್ಥವಲ್ಲ. ಒಂದು ವೇಳೆ ಇಂದಿನ ಜಾತಿಗಳನ್ನು ಸರ್ವಾಧಿಕಾರಿಯೊಬ್ಬನು ಕಿತ್ತೊಗೆದನೆಂದು ತಿಳಿಯುವಾ. ಆಗಲೂ ಒಂದಿಲ್ಲೊಂದು ತರದಿಂದ--ಬಡವ-ಧನಿಕ, ದಡ್ಡ-ಜಾಣ, ಸೋಮಾರಿ--ಸಾಹಸಿ ಹೀಗೆ ಅನೇಕ ವಿಧವಾಗಿ ಮನುಷ್ಯರಲ್ಲಿ ಪರಸ್ಪರ ವಿಂಗಡವಾಗುವುದು. ಸ್ವಭಾವ-ವ್ಯವಸಾಯ ಮೊದಲಾದ ಕಾರಣಗಳಿಗಾಗಿ ಮನುಷ್ಯರು ಬೇರೆ ಬೇರೆಯಾಗಿ ಗುಂಪುಗೂಡುವುದು ಎಂದಿಗೂ ತಪ್ಪುವುದಿಲ್ಲ. ಆದರೆ ಜಾತೀಯತೆಯ ಭಾವನೆ ಹೋಗುವುದೆಂದರೆ ಮನುಷ್ಯನು ತನ್ನ ಸಾಂಸಾರಿಕ ಜೀವನದಲ್ಲಿ ಯಾವ ಗುಂಪಿಗೆ ಸೇರಿದರೂ ಸಾಮಾಜಿಕ ಜೀವನದಲ್ಲಿ ಅದರ ಸಂಬಂಧವನ್ನು ತರಕೂಡದು ಎಂದರ್ಥ. ಅದರಂತೆಯೆ, ಮನುಷ್ಯನು ಯಾವ ನ್ಯಾಯ್ಯವಾದ ವ್ಯವಸಾಯವನ್ನು ಮಾಡಿದರೂ ರಾಷ್ಟ್ರೀಯ ಜೀವನದಲ್ಲಿ ಆ ವ್ಯವಸಾಯಕ್ಕೆ ಮಿಕ್ಕ ವ್ಯವಸಾಯಗಳಷ್ಟೆ ಸ್ಥಾನ-ಮಾನವಿರಬೇಕು ಎಂದರ್ಥ. ಇಂದು ನಾವು ಬುದ್ಧಿವಂತರಾಗಿ ಈ ಮಾತನ್ನು ಅರಿತುಕೊಳ್ಳೋಣ. ಜಾತೀಯ ಐಕ್ಯವೆಂದರೆ ಜಾತಿ-ಜಾತಿಗಳ ಸಹಭೋಜನ. ಜಾತಿಜಾತಿಗಳಲ್ಲಿ ಮದುವೆಯಾಗುವುದು ಎಂಬುದು ಹುಡುಗಾಟದ ವಿಚಾರ. ಮುಂದಾಳುಗಳೆನ್ನಿಸುವವರು ಕಾಗದ-ಪೆನ್ಸಿಲುಗಳನ್ನಿಟ್ಟುಕೊಂಡು ಪರಸ್ಪರ ಪ್ರಾತಿನಿಧ್ಯದ ಪ್ರಮಾಣವನ್ನು ಗೊತ್ತುಪಡಿಸುವುದು ಜಾತೀಯ ಐಕ್ಯ ಎಂಬುದೂ ಅಷ್ಟೇ ಹುಡುಗಾಟದ ವಿಚಾರ

ಡೋಂಗರೆ ಬಾಲಾಮೃತ
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

ರಬಕವಿಯಲ್ಲಿ ನಮ್ಮ ಏಜಂಟರು
ಶ್ರೀ. ಎಂ. ಜಿ. ಪೂಜಾರ.
ನ್ಯೂಜ್ ಏಜಂಟ್

ಉಡುಪಿಯಲ್ಲಿ ನಮ್ಮ ಏಜಂಟರು
ಶ್ರೀ. ಎಸ್. ಗೋವಿಂದ ನಾಯಕ
ಎಸ್. ಎಸ್. ನ್ಯೂಜ್ ಏಜನ್ಸಿ ರಥಬೀದಿ

ಮಹಾಪ್ರವಾಸ ಇಲ್ಲವೆ ಭಾರತಯುದ್ಧ

(ಒಂದು ನಡೆದ ಕತೆ)

ಪ್ರೊ. ಬಿ. ಎಚ್. ಶ್ರೀಧರ ಎಂ. ಎ. ಭಟಕಳ

'ಭಟ್ಕಳದ ಬೀದಿಯನ್ನು ಬೆಳಗಾಗುತ್ತಲೇ ನೋಡಬೇಕು'— ಎನ್ನುತ್ತ ಭೀಮಣ್ಣನು ನನ್ನ ಜತೆಗೆ ಮೋಟಾರು ಸ್ಟೇಂಡಿಗೆ ನಡೆದಿದ್ದನು. ಕಾಗೆ 'ಕಾಕಾ' ಎನ್ನುವ ಸಮಯ. ಪ್ರಕೃತಿದೇವಿಯ ದೂತರು ಬೀದಿಯನ್ನು ಚೊಕ್ಕ ಮಾಡತೊಡಗಿದ್ದರು. ಚಳಿಯಾಕೆಯು ಅಪ್ಪಿದ ಅಪ್ಪನ್ನು ಬಿಡಲಾರೆನೆಂದು ಹಟಹಿಡಿದಿದ್ದಳು. 'ಏನೋ, ಪ್ರವಾಸ ಅಂದರೆ ಈಗಿನ ಕಾಲದಲ್ಲಿ ಬರೀ ಪ್ರಯಾಸವೇ ಸರಿ ಕಣೋ,' ಎಂದ ಭೀಮಣ್ಣನ ಮಾತಿಗೆ ನಾನೆಂದೆ, 'ಅಲ್ಲವೋ, ಪ್ರಯಾಸವಾಗಲಿ ಬೇಕಾದ್ದಾಗಲಿ, ನಿರ್ವಾಹವಿಲ್ಲದಿದ್ದಾಗ ಮಾಡಬೇಕಾದುವನ್ನು ಮಾಡಲೇ ಬೇಕಲ್ಲವೆ?'— ಹೀಗೆ ಹೇಳಿ ನಾನೂ ಅವನೂ ಕೆಲಹೊತ್ತು ಸುಮ್ಮನೆ ನಡೆಯತೊಡಗಿದೆವು. ಮೋಟಾರಿನ ಕೂಗು ಅಷ್ಟು ಹೊತ್ತಿಗೆ ಯಾವುದೋ ಮೂಲೆಯಿಂದ ಕೇಳಿಬಂತು.

ಜೀವನಸಮರದಲ್ಲಿ ಸಿಕ್ಕಿ ಸೋಲಿನ ಮೇಲೆ ಸೋಲನ್ನು ಪಡೆದು ಭಾರವಾದ ಹೃದಯದಿಂದ ನಡೆಯುತ್ತಿದ್ದ ನನ್ನನ್ನು ಕಂಡು ಭೀಮಣ್ಣನು—'ಲೋ ನೀನೇನು ಬೆಳಗ್ಗದ್ದು ಬೀದಿಯನ್ನು ಅಳೆಯುತ್ತ ಕೂಡುವೆಯೋ ಇಲ್ಲವೆ ಬೇಗ ಬೇಗ ಕಾಲುಹಾಕುತ್ತೀಯೋ? ಮೋಟಾರು 'ಸ್ಟೇಂಡ'ನ್ನು ಬಿಟ್ಟು ಆಗಲೇ 'ಟೋಲ್‌ಗೇಟಿ'ನ ಸಮೀಪಕ್ಕೆ ಹೋದಂತೆ ತೋರುತ್ತದೆ'— ಎನ್ನಲು ವಿಚಾರದಿಂದ ಎಚ್ಚತ್ತು ಗಡಿಬಿಡಿಯಿಂದ ನಡೆಯತೊಡಗಿದೆ.

ಹೌದು, ಮೋಟಾರು ಆಗಲೇ 'ಟೋಲ್‌ಗೇಟಿ'ನ ಬಳಿ ಸಾಗಿದ್ದಿತು. ಮೋಟಾರಿನ ಹತ್ತಿರ ನಿಂತು ಒಳಗೆ ನೋಡಿದರೆ ಏನು ನೋಡಬೇಕು? ಜನ ಕಿಕ್ಕಿರಿದಿದ್ದಿತು. ಅದನ್ನು ಕಂಡು ಭೀಮಣ್ಣನ ಕುಶಾಲು ಬಾಯಿ ಸುಮ್ಮನಿರದಾಯ್ತು —'ಲೋ ಕಂಡಕ್ಟರ್, ನೀನು ಎಷ್ಟೋ ಮೂಟೆ ಹೇರಿರೋದು ಮೋಟಾರೊಳಗೆ? ಮೂಟೆಗಳನ್ನು ಒಳಗೆ ಹಾಕಿ ಮನುಷ್ಯರನ್ನು ಮೇಲೆ ಕೂಡಿಸುವುದೆಂದು ಮಾಡಿದ್ದೀಯೇನೋ?' ಎಂದ. ಹಲ್ಲು ಕಿರಿದು ಕಂಡಕ್ಟರನು ಮೊದಲೇ ಟಿಕೀಟು ಮಾಡಿಕೊಂಡಿದ್ದ ನನ್ನನ್ನು ಬಿಡಲಾರದೆ, ಎಲ್ಲೆಲ್ಲೋ ಹುಡುಕಿ 'ಡ್ರೈವರ'ನ ಬಲಗಡೆ ನನ್ನನ್ನೂ, 'ಫ್ರಂಟ್ ಸೀಟಿ'ನಲ್ಲಿ ಮೂರನೆಯ ಮನುಷ್ಯನನ್ನಾಗಿ ನನ್ನ ಗೆಳೆಯನನ್ನೂ ಕುಳ್ಳಿರಿಸಿದನು.

ರಥ ಹೊರಟಿತು. ಮಗ್ಗುಲಿಗೆ ಮೋಟಾರಿನ ಕಬ್ಬಿಣದ ಪಟ್ಟಿಯು ತಾಗುತ್ತಿರಲು ನೊಂದ ನಾನು ಭೀಮಣ್ಣನನ್ನು ಕರೆದು ಹೇಳಿದೆ— ಒಳ್ಳೇ ಇಕ್ಕಟ್ಟಿನಲ್ಲಿ ಸಿಕ್ಕಿಕೊಂಡೆನಲ್ಲೋ, ಏನು ಮಾಡಬೇಕಾಯ್ತು? ಹೀಗೆ ಕುಳಿತರೆ ಪಕ್ಕೆ ಮುರಿದುಹೋಗುವುದೇ ಸರಿ!' ಅದಕ್ಕವನೇನೆಂದ ಗೊತ್ತೇ? 'ಡೊಂಬರು ಮಗು ಹುಟ್ಟಿದ ಕೂಡಲೆ ಅದರ ಮೈಯನ್ನು ಮುರಿದು ಮುರಿದು ಹದ ಮಾಡುವರಂತೆ. ಹೌದು, ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ? ನಿನ್ನ ಮಾತಿನಲ್ಲೇ ಹೇಳಬೇಕಾದರೆ ಮುಂದಿನ ಜೀವನನಾಟಕದಲ್ಲಿ ಅಥವಾ ಸರ್ಕಸ್ಸಿನಲ್ಲಿ ಕಸರತ್ತು ಮಾಡಲು ಟ್ರೈನಿಂಗ್ ತೆಗೆದುಗೊಳ್ಳಲು ಇದೇ ಉತ್ತಮ ಸಂದರ್ಭವಲ್ಲವೆ?' ಎಂದು. ಆ ಮಾತಿಗೆ ತಲೆ ಹಾಕಿ ನಾನು ಯೋಚಿಸತೊಡಗಿದೆ. 'ಇದ್ದರೆ ಭೀಮಣ್ಣನಂತಿರಬೇಕು. ನಿರಾಲಂಬ, ಯಾವ ಚಿಂತೆಯನ್ನೂ ಮನಸ್ಸಿಗೆ ಹಚ್ಚಿಕೊಳ್ಳುವುದಿಲ್ಲ. Life is a tragedy to one who feels— ನನ್ನ ಹಾಗೆ ಮನಸ್ಸಿನಲ್ಲೇ ಕೊರಗುವವನಿಗೆ ಜೀವನವು ಅವಿದ್ಧ ನಾಟಕವೇ ಸರಿ. ನಾನು ಎಷ್ಟು ಸೂಕ್ಷ್ಮ ಸ್ವಭಾವ (Sensitive) ದವನೆಂಬುದನ್ನು ಎಣಿಸಿದರೆ ನನಗೇ ಆಶ್ಚರ್ಯವಾಗುತ್ತದೆ!'

ಧೂಳಿನ ಪುಡಿಯನ್ನು ದಿಕ್ಕುದಿಕ್ಕಿಗೆರಚುತ್ತ ಮೋಟಾರು— ಲಕ್ಷ್ಮಿ ನಡೆದಳು. ಮಧ್ಯೆ ಮಧ್ಯೆ ಓಕುಳಿಗಾಗಿಯೋ ಎಂಬಂತೆ ಅವಳ ಮುಂದೆ ದಾರಿಯಲ್ಲಿ ತಾರಿಗಳಡ್ಡ ಬರುತ್ತಿದ್ದುವು. ತಾರಿಗಳನ್ನು (Ferries) ದಾಟಿ, ಗುಡ್ಡಗಾಡುಗಳನ್ನು (ಬೀಳ್ಕೊಟ್ಟದ್ದಕ್ಕೆ) ಹರಸಿ ಎಡಬಲದ ಹರಿತ ಸೃಷ್ಟಿಯ ಮೇಲೆ ತಿರಸ್ಕಾರ ದೃಷ್ಟಿಯನ್ನು ಬೀರುತ್ತ ಮುಂದೆ ಸಾಗಿದಳು. ಯಾಕೋ ಭೀಮಣ್ಣನೂ ಸುಮ್ಮನಿದ್ದನು. ನಾನೂ ನನ್ನ ಆಲೋಚನೆಯಲ್ಲೇ ಮಗ್ನನಾಗಿ, ನನ್ನನ್ನಷ್ಟೇ ಅಲ್ಲದೆ ಕ್ರಮೇಣ ಆಲೋಚನೆಯನ್ನೇ ಮರೆತುಬಿಟ್ಟೆ! ಹುಬ್ಬಳ್ಳಿ ಬಂದಾಗ ಮಾತ್ರ ಎಚ್ಚತ್ತಂತಾದೆ; ಕಣ್ಣೊರಸಿ ಎದ್ದೆ. ನಿಲ್ದಾಣದ ಸಮೀಪದಲ್ಲಿಳಿದೆವು. ಈ ತುಟ್ಟಿಯ ಕಾಲದಲ್ಲಿ ಆರೇ ಆಣೆಗೆ ಊಟ ಹಾಕಿದ ನಿಲ್ದಾಣದ ಹೊಟೇಲಧಿಕಾರಿಗೆ ಮನಸ್ಸಿನಲ್ಲೇ ವಂದಿಸಿದೆವು.

ಪೂನಾಕ್ಕೆ ಟಿಕೀಟನ್ನು ಪಡೆಯಬೇಕೆಂದು ಇಬ್ಬರೂ ಟಿಕೀಟಾಫೀಸಿಗೆ ನಡೆದೆವು. ಮಧ್ಯಾಹ್ನ ಎರಡು ಗಂಟೆಯ ಸಮಯ. ಹಿಂದುಸ್ತಾನದ ನಾಗರಿಕತೆಯ ವೈವಿಧ್ಯವನ್ನು ವ್ಯಕ್ತಪಡಿಸುವ ಉಡುಗೆಯ ಮಾತಿನ ಮತ್ತು ನಡತೆಯ ಮೂರನೆಯ ದರ್ಜೆಯ ಪ್ರಯಾಣಿಕರು ಟಿಕೀಟು ಕೊಡುವ ಕಿಟಕಿಯೆದುರು ಸಿಪಾಯಿಗಳಂತೆ ಸಾಲಾಗಿ ನಿಂತಿದ್ದರು. ಅವರ ಮುಖದ ಕೊಳೆಯನ್ನು ಕಂಡು ಭೀಮಣ್ಣನು 'ಕಳೆ' ಯೆಂಬುದರ ತದ್ಭವ 'ಕೊಳೆ' ಯೆಂದು ವ್ಯಾಕರಣವನ್ನು ಪರಿಷ್ಕರಿಸಬೇಕು' ಎಂದು ನುಡಿದು ನಕ್ಕನು. ಭೀಮಣ್ಣನು ಅಲ್ಲಿಗೇ ಸುಮ್ಮನಾದರೆ ನನಗೆ ಮಾತ್ರ ಸುಮ್ಮನಿರಲಾಗಲಿಲ್ಲ: "ದಾರಿದ್ರ್ಯವೆಂಬುದು ಆರ್ಥಿಕ ದೌರ್ಬಲ್ಯ (Weakness); ಅಜ್ಞಾನವೆಂಬುದು ಮಾನಸಿಕ ದೌರ್ಬಲ್ಯ; 'ದೈವ್ಯೋ ದುರ್ಬಲ ಘಾತಕಃ' ದಾರಿದ್ರ್ಯ ಅಜ್ಞಾನ, ದುಷ್ಕರ್ಮ— ಈ ತ್ರಿಮೂರ್ತಿಗಳಲ್ಲಿ ಯಾರು ಮೊದಲು ಮನುಷ್ಯನ ಮೇಲೆ ಮುನಿದೆದ್ದರು? ಇವರ ವಿಷಮ ಚಕ್ರದಿಂದ (vicious circle) ನಾವು ಇಂದಿನ ಭಾರತೀಯರು ತಪ್ಪಿಸಿಕೊಳ್ಳುವ ಬಗೆ ಹೇಗೆ?'— ಹೀಗೇ ಆಲೋಚಿಸುತ್ತ ನಿಂತಿರುವಲ್ಲಿ

ನನ್ನ ಗೆಳೆಯನು ಟಿಕೀಟುಗಳನ್ನು ತಂದೇಬಿಟ್ಟನ್ನನು. ವೇದಿಕೆ (Platform) ಯ ಕಡೆ ನಡೆದೆವು.

ಮುಂಪೆ 'ಮಿಲಿಟರಿ' ಯವರ ಮಂದೆಗಳು ಒಂದಾದಮೇಲೊಂದ ರಂತೆ ಡಬ್ಬಿಗಳೊಳಗೆ ತೂರಿದುವು. "ನಾವಾದರೂ ಹೋಟಬ್ದೇತಕ್ಕೆ? ಈಗ ಸೀಪಾಯಿಗಳ ಜಾತಿಯನ್ನು ನೋಡಿ ನಗುವೆವು; ಕನಿಕರ ಪಡು-ವೆವು; ಉದರನಿಮಿತ್ತದಿಂದಲೋ. ದೇಶಪ್ರೇಮದಿಂದಲೋ ಇಲ್ಲವೆ ರಾಜಭಕ್ತಿಯಿಂದಲೋ ಯಾವುದರಿಂದ ಇವರು ಹೀಗೆ ಪಾಶವೀ ಜೀವನ ದಲ್ಲಿ ತೊಡಗಲು ಸಾಹಸ ಮಾಡಿದರು?—ಎಂದು ದೂರ ನಿಂತು ಆಲೋಚಿಸುವೆವು. ಆದರೆ ನಾವು ನಾಳೆ ಸ್ಟಾಲಿನ್‌ಗ್ರಾಡ್ ಯುದ್ಧ ವನ್ನು ನಮ್ಮ ಮನೆಗಳಲ್ಲೇ ಮಾಡಬೇಕಾದ ಪ್ರಸಂಗ ಒದಗಿದರೆ?" ಎಂದ ಮಾತಿಗೆ ಭೀಮಣ್ಣನು—'ಅಲ್ಲೋ, ನೀನು ಅಂತಹ ಯುದ್ಧ ದಲ್ಲಿ ತೊಡಗಿದರೆ ಕೇವಲ ರಷ್ಯದ ವೀರನ ಸಮಾನನೆನಿಸುವೆ ಮಾತ್ರ; ಆದರೆ ರಷ್ಯದ ರಣರಸಿಕರಿಂದ ಮುನ್ನೂರು ಮಡಿ ಹೆಚ್ಚಿನವನೆನಿಸ ಬೇಕಾದರೆ ಬಂಗಾಳದಲ್ಲಿ ಹೋಗಿ ಬದುಕಬೇಕು—ಅಲ್ಲಲ್ಲ—ಸಾಯ ಬೇಕು; ಹೇಗೆ? ಕುರಿಯ ಹಾಗೆ, ತಿಳಿಯಿತ?'—ಎಂದ. ಅಷ್ಟರಲ್ಲಿ ಸಿಳ್ಳು ಕೇಳಿಸಿತು; ರೈಲು ಹೊರಟಿತು; ಭೀಮಣ್ಣನೂ ನಾನೂ 'ಕಿಷ್ಕಿಂಧೆ'ಯ ಪ್ರಜೆಗಳಾದೆವು (ಎಂದರೆ, ಭೀಮಣ್ಣನ ಮಾತಿನಲ್ಲಿ ಹೇಳುವುದಾದರೆ ಹುಣಿಸೆಹಣ್ಣನ್ನು ಡಬ್ಬದಲ್ಲಿ ಹಾಕಿ ಜಡಿದಂತೆ ನಮ್ಮನ್ನು ನಾವು ಡಬ್ಬಿಯೊಳಕ್ಕೆ ಒತ್ತಿಕೊಂಡೆವು!)

ಮಗ್ಗುಲಿಗೆ ಮಗ್ಗುಲಿಗೆ ಬೆಸಿಗೆ ಹಾಕಿದಂತೆ ನಾವು ಕುಳಿತಿರಲು ನನ್ನ ಗೆಳೆಯನು—'ತೀರದ ತೋರದ ಹಾಳು ಸಂಸಾರದ' ಎಂದು ಒಳದನಿಯಿಂದ ರಾಗತೆಗೆದ. ಜಾಗದ ದೆಸೆಯಿಂದ' ಒಬ್ಬಾತನೊಡನೆ ವಿವೇಕ ಹೇಳುತ್ತಿದ್ದ ನನ್ನನ್ನು ಅದು ತನ್ನ ಕಡೆಗೆಳೆಯಿತು. ಒತ್ತಿ ತಿರುಗಿ ನೋಡಿದೆ. ಮಿತ್ರನೆಂದ: 'ಜನರು ರೈಲಿನ ಕಾರಾಗಾರದೊಳಗ ಗುಂಪಾಗಿ ಹೊಡೆದು ನುಗ್ಗಿದರು; ಮುದ್ದಾಗಿ ಸಿಡಿದು ಆರ್ಭಟಿಸಿದರು; ಮಾನವ ಶತಘ್ನಿ (Human bomb) ಗಳಾಗಿ ಹೋಕ್ಕು ರೈಲಿನ ಗರ್ಭದಲ್ಲಿ ಅಡಗಿದರು, ಉಡುಗಿದರು! 'ವಾತಾಟಕಂದರು ಕೆಲ ಸಾಯು ಗಂಡರು'; ಮಾನವನ ವಿಜ್ಞಾನಶಕ್ತಿಯ ಉದ್ಭೃತ ಅವತಾರದ ಹೃದಯಕುಹರದಲ್ಲಿ ಸಾಯುಜ್ಯವನ್ನು ಪಡೆದರು; ಈಗ ಏನ್ನೇನು ಮಾಡುತ್ತಿದ್ದಾರೆ ಗೊತ್ತೇ? ಬದುಕಲು ಜಾಗಕ್ಕಾಗಿ ಹೆಣಗುತ್ತಿದ್ದಾರೆ' 'ಏನೋ ಇದು? ದೊಡ್ಡ 'ಲೆಕ್ಚರ'ಗೆ ಶುರುಮಾಡಿ ಬಿಟ್ಟಯಲ್ಲೋ?' ಎಂದೆ. ಅದಕ್ಕವನು 'ಹೌದೋ. ಸ್ವಲ್ಪ ಸಾವಧಾನದಿಂದ ನೋಡು ಮತ್ತು ಸಾವಕಾಶವಾಗಿ ಕೇಳು. ಒಳಗೆ ಸೇರಿದ ಈ ಜೀವಕೋಟಿಯು ಇರಲು ಜಾಗ ಸಾಲದೆ (For want of Labensraum) ಕಣ್ಣುಮುಚ್ಚಿ ತೆರೆವುದರಲ್ಲಿ ವಿವಿಧ ಆಸನ, ಪ್ರಾಣಾಯಾಮ ಮುಂತಾದ ವಿಧಿಗಳನ್ನು ಕೈಕೊಂಡು ಸಮಾಧಿಸ್ಥವಾಗುತ್ತಿದೆ. ಅಗೋ ಅಲ್ಲಿ ನೋಡು: ಒಬ್ಬನು ಹಲಾಸನ ಹಾಕಿದರೆ ಮತ್ತೊಬ್ಬನು ಧನುರಾಸನ ಹಾಕುತ್ತಿದ್ದಾನೆ. ಒಬ್ಬನದು ಮತ್ಸ್ಯಾಸನ, ಮತ್ತೊಬ್ಬನದ ಕೂರ್ಮಾಸನ; ಸರ್ಪಾಸನ, ಶೀರ್ಷಾಸನ, ಮಯೂರಾಸನ ಕುಕ್ಕುಟಾಸನ, ಮಂಡೂಕಾಸನ—ಹೀಗೆ ನಾನಾ ಅವತಾರದ ಆಸನಗಳಲ್ಲಿ ಮಂತ್ರಾಸ್ತ್ರಸಿದ್ಧಿಗಾಗಿ ತಪಸ್ಸಿಗಾರಂಭಿಸಿದ್ದಾರೆ ದ್ವಾಪರಯುಗದಲ್ಲಿ

ಶೇಲಢಾ

ಎಂಟೀಮಲೇರಿಯಾ ವನಸ್ಪತಿ ಪಿಲ್ಸ್

ಎಲ್ಲ ತರದ ಜ್ವರ, ಜ್ವರಗಡ್ಡೆ, ತಜ್ಜನ್ಯ ಅಶಕ್ತತೆಯ ಮೇಲೆ ರಾಮಬಾಣ! ಲಿವರ್-ಹೊಟ್ಟೆನೋವು, ಮಲಬದ್ಧತೆ ಸುಧಾರಿಸಿ ಶಕ್ತಿ ಬೆಳೆಯಿಸುತ್ತದೆ! ಕ್ವಿನಾಯಿನ್ ಬದಲು ವೈದ್ಯ-ಡಾಕ್ಟರರು ದವಾಖಾನೆಗಳಲ್ಲಿ ವಾಪರಿಸುವರು. ೧೦೦೦ ಗುಳಿಗೆಗಳಿಗೆ ರೂ. ೧೫; ೯೦ಕ್ಕೆ ೧-೧-೦. ಔಷಧದಲ್ಲಿ ಗುಣವಿಲ್ಲವೆಂದು ಸಿದ್ಧ ಮಾಡಿದವರಿಗೆ ೧೦೦೦ ರೂಪಾಯಿ ಬಹುಮಾನ. ಪ್ರತಿ ಊರಲ್ಲಿಯೂ ಮಾರುವ ಏಜಂಟರು ಬೇಕು.

ಶೇಲಢಾ ಕೆಮಿಕಲ್ ಕಂಪನಿ, ಸಿರಸಿ, ಉ. ಕ.

ಸೋಲ್ ಏಜೆಂಟರು:—

ಎಸ್. ಎಲ್. (ಅಪ್ಪುರಾವ) ಧಾಕಪ್ಪಾ

ಬಡವರ ಔಷಧಿ ಸರ್ವಿಸ್, ಸಿರಸಿ. ಉ. ಕಾನಡಾ

ಭಾರತಯುದ್ಧ ಶುರುವಾಗುವುದಕ್ಕೆ ಎಷ್ಟೋ ವರುಷಗಳ ಹಿಂದೇ ಊರ್ಧ್ವರೋಮಾದಿ ವೀರರು ತಯಾರಿ ನಡೆಸಿದ್ದರಂತೆ; ಹಾಗೇ ನಮ್ಮ ಜೊತೆಗೆ ಕುಳಿತ ಈ ಜೀವನಸಮರದಲ್ಲಿ ಮುಮುಕ್ಷುತ್ತಿರುವ ಭಾರತ ವೀರರು ನಿರಾಯುಧತೆಯಿಂದ ಮುಕ್ತರಾಗಿ ದಿವ್ಯಾಸ್ತ್ರಗಳನ್ನು ಪಡೆಯಲು ತೊಡಗಿದ್ದಾರೆ! ಹೌದೋ ಅಲ್ಲವೋ?' ಎಂದು ಪ್ರಸನ್ನ ಗಂಭೀರ ಮುದ್ರೆಯಿಂದ ನನ್ನ ಕಡೆ ನೋಡಿ ಕೇಳಿದನು. ರೈಲು ಜೋರಾಗಿ ಸಾಗುತ್ತಿತ್ತು. ಭೀಮಣ್ಣನ ಮಾತಿನಲ್ಲಿ ಹೇಳುವುದಾದರೆ, ಆ ಶ್ರೀಕೃಷ್ಣ ಪರಮಾತ್ಮನಂತೆ ಉದರದಲ್ಲಿ ಬ್ರಹ್ಮಾಂಡಭಾಂಡವನ್ನೇ ಇಟ್ಟುಕೊಂಡು 'ಅಭೀಃ' ಎನ್ನುತ್ತ ಓಡುತ್ತಿತ್ತು.

ಕಾಲಚಕ್ರ ಉರುಳಿತು; ಭೀಮಣ್ಣನ 'ಕಾಲಜ್ಞಾನ' ವಾಕ್ಯಾ-ನುಸಾರ ಕುಳಿತವರ ತಲೆಗೆ 'ಚಕ್ರ' ಬರಹತ್ತಿತು; ಭಾರತಯುದ್ಧವು ಮೊದಲಾಯ್ತು. ಏನು ನೋಡುತ್ತೀರಿ? ಸಿಗರೇಟನ್ನು ಹೊತ್ತಿಸಿ ಧೂಮಕೇತುವಾದ (Smoker banneied) ಅತಿರಥನೊಬ್ಬನು (ಎಂದರೆ ಡಬ್ಬಿಯಲ್ಲಿ ಕುಳಿತುಕೊಳ್ಳುವ ಪಾಲುಹಲಗೆಯನ್ನು ಬಿಟ್ಟ ಮೇಲಿನ ಕಟ್ಟುಹಲಗೆ—Upper Berth—ಯ ಮೇಲೆ ಮಲಗಿದ ಮಹಾಶಯನು) ರೈಲಿನ ಯಂತ್ರ (Engine) ದಂತೆ ಹೊಗೆಯುಗುಳುತ್ತ ಆಗ್ನೇಯಾಸ್ತ್ರವನ್ನು ಬಿಟ್ಟನು (ಅರ್ಥಾತ್ ಕೆಳಗೆ ಒರಗಿದವನ ಮೇಲೆ ಸಿಗರೇಟಿನಿಂದ ಕಿಡಿಗಳನ್ನುದುರಿಸಿದನು). 'ಏನು ಕಣ್ಣು ಕಾಣೋ ಇಲ್ಲೋ ನಿನಗೆ, ಮುಕದ ವ್ಯಾಟುಗುಳ್ಳೇನು!' ಎಂದ ಕೆಳಗಿನ ಮಹಾರಥನು ವರುಣಾಸ್ತ್ರವನ್ನು ಬಿಟ್ಟನು (ತಂಬುಲವನ್ನು ಮೊರಕ್ಕೆ ಉಗುಳಿದನು) ಎಳೆದಾಟ ಶುರುವಾಗಿ ಆಕರ್ಷಣ

ಅಪಕರ್ಷಣ, ಉತ್ಕರ್ಷಣ, ಅಧಃಕರ್ಷಣ ಇತ್ಯಾದಿ ವಿವಿಧ ರೀತಿಯ ಯುದ್ಧ ಚಮತ್ಕಾರಗಳನ್ನು ತೋರಿದರು. ಈ ದ್ವಂದ್ವದಿಂದ ಎಚ್ಚತ್ತರಾದ ಉಳಿದ 'ಪ್ಯಾಸೆಂಜರ್' ಭಟರು ಸಮಸಪ್ತಕರಂತೆ ಕಾದತೊಡಗಿದರು. ಅರ್ಧನಿದ್ರೆಯಲ್ಲಿದ್ದ ಒಬ್ಬನು ಧಸಕ್ಕನೆ ಕೆಳಗೆ ಮಲಗಿದ ವೀರನೊಬ್ಬನ ವಕ್ಷಃಸ್ಥಲವನ್ನು ಪಾದದಿಂದ ತಾಡನ ಮಾಡಿದನು. ಸರಿ, ಶುರುವಾಯ್ತು ಕದನ: ದೃಷ್ಟಿಯುದ್ಧ, ವಾಗ್ಯುದ್ಧ, ಮಲ್ಲಯುದ್ಧ ಮುಂತಾದ ತುಮುಲ ವೈವಿಧ್ಯಗಳನ್ನು ಪ್ರದರ್ಶಿಸಿದರು. ಅಷ್ಟರಲ್ಲಿ ಭೀಮಣ್ಣನು ಗಿಸಕ್ಕೆಂದು ನಕ್ಕನು. 'ಏನೋ ಸಮರಕೌಶಲವನ್ನು ನೋಡಿ ನಗುವೆಯಾ?' ಎಂದೆ. ಅವ ಉತ್ತರಿಸಿದ: 'ಈ ಕಡೆ ತಿರುಗೋ; ಇಲ್ಲಿ ವಿಶ್ವಾಮಿತ್ರ-ವಸಿಷ್ಠರು ಪ್ರಚಂಡವಾದ ಕೋಪದಿಂದ ಪರಸ್ಪರರ ಮೇಲೆ ದಂಡಿ ಹಾಯುತ್ತಿದ್ದಾರೆ; ಬ್ರಹ್ಮರ್ಷಿಗಳ ಯುದ್ಧ, ಗೊತ್ತಾಯಿತೋ?' ಹೌದು, ಬೆವರುಧೂಳು ಮೆತ್ತಿದ, ಗಡ್ಡ ಬೆಳೆದ, ನಿದ್ದೆಗೆಟ್ಟು ಕಣ್ಣು ಕೆಂಪಾದ ಜೋಲುವ ಎಣ್ಣೆಗಪ್ಪಡದಂತಹ ಧೋತ್ರವುಟ್ಟ ಇಬ್ಬರು ಮಲಗಿದಲ್ಲೇ ಕಾಲು ನೀಡಲು ಪ್ರಯತ್ನಿಸಿ, ತುಳಿಸಿಕೊಂಡು ಸಾಗರಹಾವಿನಂತೆ ಒಬ್ಬರಮೇಲೊಬ್ಬರು ಏರಿ ಬಂದಿದ್ದಾರೆ. ಇದನ್ನು ಕಂಡು ನನಗೂ ನಗೆ ಬಂತು. ಆದರೆ ಮರುಕ್ಷಣದಲ್ಲಿ ನನ್ನ ನಗೆ ಒಣಗಿ ಉದುರಿ ಬೀಳುವಂತಾಯ್ತು. ಮೊಣಕಾಲಿನ ಸಂದಿಗೆ ತಗಣಿಯು 'ಇಂಜಕ್ಷನ್' ಕೊಟ್ಟಿತ್ತು. ಪ್ರವಾಸಿಕರ ತಿಕ್ಕಾಟದಲ್ಲಿ ನನ್ನ ನರಳಾಟವೂ ಸೇರಿತ್ತು— ನಾನೂ ಪ್ರವಾಸಿಕನೇ ಅಲ್ಲವೆ? 'ನನ್ನ ಮತ್ತು ಉಳಿದ ಪ್ರಯಾಣಿಕರ ದುರವಸ್ಥೆಗೆ ಯಾರು ಹೊಣೆ? ದೈವವೇ, ಕರ್ಮವೇ, ದಾಸ್ಯವೇ, ದಾರಿದ್ರ್ಯವೇ, ಸಮಾಜದ ನಿರ್ವೀರ್ಯತ್ವ, ಅಜ್ಞಾನ, ಸಂಕುಚಿತ ಸ್ವಾರ್ಥ ಇವುಗಳೇ ಇಲ್ಲವೆ ಬಂಡವಾಲ ಶಾಹಿಯ ಕಾರಭಾರವೇ? ಒಂದೊಂದೇ ಅಲ್ಲ, ಎಲ್ಲ ಒಟ್ಟಾಗಿ ಕೈಯಿಟ್ಟು ನೋವಿನಿಂದ ಹುಣ್ಣಿನಂತಾದ ನನ್ನ ಶರೀರವನ್ನು ನನ್ನ ಗೆಳೆಯನ ಮೈಗೆ ಚಾಚಿದೆ. ನನ ಕಪ್ಪಿಟ್ಟ ಮೋರೆಯನ್ನು ಕಂಡು ಅವನ ನಗೆ ಇಂಗಿ ಸವರ್ಣವಾಯ್ತು.

× × × ×

ಒಮ್ಮೆಲೇ ಚಳಿಗಾಳಿ ಬೀಸಿತು. 'ಕೂಲೀ ಕೂಲೀ' ಎಂಬ ಸದ್ದು ನಮ್ಮನ್ನು ಬಡಿದೆಬ್ಬಿಸಿತು. ಪೂನಾ ನಿಲ್ದಾಣ ಬಂದಿತ್ತು. ಬೆಳಕು ಹರಿಯುತ್ತಿತ್ತು. ಜನ ಡಬ್ಬಿಯಿಂದ ಹೊರಕ್ಕೆ ಧುಮುಕುತ್ತಿತ್ತು. ಎಲ್ಲ ಇಳಿಯಲೆಂದು ನಾವು ಸುಮ್ಮನಿದ್ದೆವು. ನಾವೂ ನಮ್ಮ ಜೊತೆ ಪ್ರವಾಸಿಕರೂ ಸೆರೆಯಿಂದ ಮುಕ್ತರಾದೆವಲ್ಲಾ ಎಂದು ನಿಟ್ಟುಸಿರಿಟ್ಟೆವು. ನಮಗಿಂತಲೂ ದರಿದ್ರರೂ ರೋಗಿಗಳೂ, ಅಶಕ್ತರೂ, ಅಜ್ಞಾನಿಗಳೂ ಆಗಿದ್ದವರನ್ನೆಣಿಸಿ ಭಾವನಾ ಪರವಶನಾಗಿ ಕನಿಕರಪಡತೊಡಗಿದೆ. ಆದರೆ ಅಷ್ಟರಲ್ಲಿ ಶೌಚಗೃಹದಿಂದ ಹೊರ ಬಂದ ಭೀಮಣ್ಣನು ಮೇಲೆ ನೋಡಿ, ಒಮ್ಮಿಂದೊಮ್ಮೆ ಅವಾಕ್ಕಾದನು. 'ಏನೋ' ಎಂದು ಗಾಬರಿಯಿಂದ ಕೇಳಿ ಅವನು ನೋಡಿದತ್ತ ನೋಡಿದೆ. ಏನೂ ಇರಲಿಲ್ಲ, ಅಂದ್ರೆ, ನಮ್ಮ ಹಾಸಿಗೆ ಟ್ರಂಕುಗಳು ಅದೃಶ್ಯವಾಗಿದ್ದುವು! ಈ ಕೆಲಸವನ್ನು ಮಾಡಿರಬಹುದಾದ ನಮ ಸಹಪ್ರವಾಸಿ ದೀನನೋ, ಹೀನನೋ? ಯಾವುದೂ ಗೊತ್ತಾಗಲಿಲ್ಲ. ಭೂಮಿಯೇ ಕುಸಿದಂತಾಯ್ತು. ಎಚ್ಚರತಪ್ಪಿ ಕುಳಿತ ನನ್ನನ್ನು ನಾನೇ ಸಂತೈಸಿಕೊಂಡೆ. ಕೆಲ ಹೊತ್ತು ಸುಮ್ಮನೆ ಮೆಲ್ಲಗೆ ನಡೆಯುತ್ತ ನಾವು ಸಾಗುತ್ತಿರಲು ಗೆಳೆಯನೆಂದ—'ಹೋಗಲಿ ಬಿಡು, ಭಾರತದ ಯುದ್ಧಪ್ರಯತ್ನಕ್ಕೆ ಕಾಣಿಕೆ ಕೊಟ್ಟಂತಾಯ್ತು; ಯುದ್ಧಾನಂತರ ಭಾರತಕ್ಕೆ ಇಂತಹ ಲಾಭವೇ ನಿಶ್ಚಿತವೋ, ಯಾರಿಗೆ ಗೊತ್ತು?

ನೀಲಗಿರಿಯಲ್ಲಿ ಒಂದು ದೃಶ್ಯ

●

ಶ್ರೀ. ಸಾಲಿ ರಾಮಚಂದ್ರರಾಯರು, ಧಾರವಾಡ

೧

ಇದೊ ಇದೋ ದೃಶ್ಯಮತ್ಯದ್ಭುತಂ! ಹಿಂತೆ ನೋ-
ಡಿದನಿಲ್ಲಮೀವಗೆಯ ನೊಗಮೀವ ಚೆಲ್ವನಾಂ
ಇದಿರೊಳೀ ಗಂಭೀರ ದರಿ, ಅಚೆಗಾ ನೀಲ್ದ
ಬೆಟ್ಟು, ಬೆಂಗಡೆಗೆ ಬೆಟ್ಟು! ॥
ಗದರಿಸುತೆ ಬಲ್ದನಿಯ ಕರ್ಮುಗಿಲ್ ಪರಿಯುತಿ-
ರ್ಪುದು ಬೆಟ್ಟುಗಳ ನಡುವೆ, ಸೂರ್ದನಿಯ ಗುಣ್ಸನಿತೊ!
ಇದು ಕಣ್ಗೆ ಮನಕೆ ನಲ್ಲೊಸಗೆ ಬಗೆಬಗೆಯ ಪೊ-
ನೊಂಪನೇಂ ನೆರ್ಪಿಸುವುದೊ! ॥

೨

ತಿಳಿಗೊಳದ ನೊಬಗಿತ್ತಲಿದೆ ನೋಡ ತುಂಗಗಿರಿ-
ಗಳ ಮಧ್ಯಮೊಳ್! ಪಕ್ಷಿಯಿದು ಶಾಂತಿಸುಖದ ಮಂ-
ಗಳ ಗೀತದಿಂಪನೇನುಣಿಸುವುದೊ ಎನಗೆ ತ-
ನ್ನತಿಥಿಯಾನೆಂದು ನಲಿದು ॥
ಪ್ರೊಳೆವುದು ಘನನೀಲವಾರಿಯಿದು ತನಗೆ ನಿ-
ರ್ಮಳತೆಯಿಂದೊದವಿರ್ಪ ಚೆಲ್ವಿನಿಂ ಸೃಷ್ಟಿಯು-
ಗ್ಗಳದ ಕನ್ನಡಿಯಾಗಿ ನೊಗಯಿಸುತೆ! ನೀಲಗಿರಿ
ಸೌಂದರ್ಯನಿಧಿ, ನಮಸ್ತೇ ॥

ಸಂಯುಕ್ತ ಘಟನೆಯ ಭಾರತ

(ರಾಜಕಾರ್ಯ ವಿಮರ್ಶೆ)

ಶ್ರೀ. ಶಂ. ಬಾ. ಜೋಶಿ, ಧಾರವಾಡ.

ಕೀರ್ತಿಶೇಷ ಗೋಖಲೆಯವರ ಹೆಸರಿನಿಂದ ಪುಣೆಯಲ್ಲಿ ರಾಜಕಾರಣ ಮತ್ತು ಅರ್ಥಶಾಸ್ತ್ರದ ವಿದ್ಯಾಲಯವು ಸ್ಥಾಪಿತವಾಗಿದ್ದು, ಅದು ಕಳೆದ ೧೦-೧೫ ವರುಷಗಳಿಂದ ಅರ್ಥಶಾಸ್ತ್ರದಲ್ಲಿ ಅಪೂರ್ವವಾದ ಸಂಶೋಧನ ಕಾರ್ಯವನ್ನು ನಡಸಿದೆ. ಪ್ರೊ. ಗಾಡಗೀಳ ಧನಂಜಯರಾಯರು M. A., M. Lit (cantb) ಅದರ ಸಂಚಾಲಕರಾಗಿದ್ದು ಹಲವು ಮಹಾರಾಷ್ಟ್ರ, ಕರ್ನಾಟದ ವಿದ್ಯಾರ್ಥಿಗಳು M. A. Phd ಗಳಿಗಾಗಿ ಅವರಲ್ಲಿ ಓದುತ್ತಲಿದ್ದಾರೆ. ಈ ಸಂಸ್ಥೆಯಿಂದ ಆಗಿರುವ ಅರ್ಥಶಾಸ್ತ್ರವಿಷಯಕ ಕಾರ್ಯದ ಮಹತ್ವವನ್ನು ಅರಿತು, ಸಾಂಗ್ಲಿ ಕೊಲ್ಲಾಪುರ ಮೊದಲಾದ ಸಂಸ್ಥಾನಿಕರೂ, ಮುಂಬೈ ಸರಕಾರ ಅದರಂತೆ ಭಾರತ ಸರಕಾರವು ಕೂಡ, ಅರ್ಥಶಾಸ್ತ್ರಕ್ಕೆ ಸಂಬಂಧಿಸಿದ ವಿಷಯಗಳಲ್ಲಿ, ಇದರ ಸಂಚಾಲಕರಾದ ಪ್ರಿನ್ಸಿಪಾಲ ಗಾಡಗೀಳರ ಸಲಹೆಯನ್ನು ಕೋರುತ್ತಿರುವುದುಂಟು.

ಇಂತು ಅರ್ಥಶಾಸ್ತ್ರವಿಶಾರದರೆಂದು ಹೆಸರಾದ ಶ್ರೀ ಗಾಡಗೀಳ ಧನಂಜಯರಾಯರು ಭಾರತದ ರಾಜಕೀಯ ಸಮಸ್ಯೆಯನ್ನು ಕುರಿತೂ "Federating India" ಎಂಬ ಹೆಸರಿನ ಸ್ವತಂತ್ರ ವಿಚಾರದ ಒಂದು ಹೊತ್ತಗೆಯನ್ನು ಪ್ರಕಟಿಸಿದ್ದಾರೆ. ಶ್ರೀ. ಗಾಡಗೀಳರು ಬುದ್ಧಿವಾದಿಗಳು. ಆದುದರಿಂದ ಅವರ ತೀಕ್ಷ್ಣವಾದ ತರ್ಕಶುದ್ಧವಾದ ವಿಚಾರಸರಣಿಯು ಇಂದಿನ ನಮ್ಮ ಅಚ್ಚುನಚ್ಚಿನ ಎಷ್ಟೋ ಭಾವನೆಗಳ ಮೇಲೆ ಬಲವಾದ ಏಟುಗಳನ್ನು ಹಾಕುತ್ತಿರುವುದು ನಿಜ. ಆದರೆ ನಮ್ಮ ಭಾವನಾತ್ಮಕ ಹೆಬ್ಬಯಕೆಗಳು ಎಷ್ಟೇ ಉದಾತ್ತ ಗಂಭೀರವಾಗಿದ್ದರೂ ಕ್ರೂರವೂ ನಿಷ್ಠುರವೂ ಆದ ವಾಸ್ತವಸತ್ಯದ ಮುಂದೆ ಅವು ಕೆಲಕಾಲವಾದರೂ ಸಂಕೋಚಗೊಂಡು ಹಿಂದೆ ನಿಲ್ಲದೆ ಗತಿಯಿಲ್ಲ. ಶ್ರೀ. ಗಾಡಗೀಳರು ತಮ್ಮ ಈ ಹೊತ್ತಗೆಯಲ್ಲಿ ಪಾಕಿಸ್ತಾನದ ವಿಚಾರವನ್ನು ಎತ್ತಿ ನಿರ್ದಾಕ್ಷಿಣ್ಯವಾಗಿ, ಕೂಲಂಕಷವಾಗಿ ವಿವೇಚಿಸಿದ್ದಾರೆ. ಅದರೊಳಗಿನ ಹಲವು ಸಂಗತಿಗಳು ನಿವಾರ್ಯವಾದ ಅಪ್ರಿಯ ಸತ್ಯವಾಗಿವೆ. ಬೆಕ್ಕು ಕಣ್ಣು ಮುಚ್ಚಿ ಹಾಲಕುಡಿಯ ಬಯಸಿದರೂ ಬೆನ್ನ ಮೇಲೆ ಏರಿಬರುವ ಬಡಿಗೆ ತಪ್ಪುವುದಿಲ್ಲ. ನಾವು ಅಖಂಡ ಭಾರತದ ಧ್ಯಾನ ಮಾಡುತ್ತಿರುವೆವಾದರೂ—ಅಖಂಡ ಭಾರತವು ನಮಗೆಲ್ಲರಿಗೂ ಅತ್ಯಂತ ಪ್ರಿಯಕರವಾಗಿದ್ದರೂ—ಅದನ್ನು ಆಗಗೊಡದಿರಲು ಒಳಗೊಳಗೆ ಸುರಂಗಗಳನ್ನು ತೋಡಿ ಭಾರತವನ್ನು ಒಡೆದು ಬಿಡಲು ಅಣಿಯಾಗಿರುವ ಶಕ್ತಿಗಳನ್ನು ಕಡೆಗಣಿಸಿ ಹೇಗೆ ನಡೆಯಬೇಕು? ಅವುಗಳ ಕಡೆಗೆ ನಾವು ಕಣ್ಣುಹೊರಳಿಸದಿದ್ದರೂ ಅವು ತಮ್ಮ ಕಾಯಕ ನಡಸದೆ ಬಿಡವು. ಆದುದರಿಂದ 'ಅವೆಲ್ಲ ವಿನಾಶಕ ಶಕ್ತಿಗಳನ್ನೂ ಸಂಪೂರ್ಣವಾಗಿ ಎಣಿಕೆಗೆ ಹಿಡಿದುಕೊಂಡೇ ಭಾರತದ ಹೊಸ ಸಂಯುಕ್ತ ಘಟನೆಯ ವಿಚಾರ ಮಾಡುವುದು ಜಾಣ್ಮೆ' ಎಂದು ಶ್ರೀ ಗಾಡಗೀಳರು ಪ್ರತಿಪಾದಿಸಿದ್ದಾರೆ. ಈ ವಿಷಯವನ್ನು ಕುರಿತು ಹೇಳಿರುವ ಅವರ ಮಾತುಗಳು ತುಂಬ ವಿಚಾರ ಪ್ರಚೋದಕವಾಗಿರುವುದರಿಂದ ಅದರ ಸಾರಾಂಶವನ್ನು ಇಲ್ಲಿ ಕೊಡಲಾಗಿದೆ:

'ಸಂಯುಕ್ತ ಘಟನೆ' ಎಂಬುದರಿಂದ ಸಂಯುಕ್ತವಾಗತಕ್ಕ ಘಟಕಗಳು ಒಂದೊಂದೂ ಬೇರೆ, ಬೇರೆ; ಮತ್ತು ಅವು ಪರಸ್ಪರ ಸಹಕಾರದಿಂದ ಒಂದುಗೂಡತಕ್ಕವು ಎಂದು ಗೃಹೀತವಾಗುತ್ತದೆ. ಸಂಯುಕ್ತಘಟನೆಯಲ್ಲಿ ಒಳಪಡತಕ್ಕ ಪ್ರತಿಯೊಂದು ಘಟಕವೂ ಒಟ್ಟಿನಲ್ಲಿ ಒಂದೇ ಮುಖ್ಯ ಸಂಸ್ಕೃತಿಯ, ಪ್ರಮುಖ ಏಕಭಾಷೆಯ ವಿಭಾಗವಾಗಿರಲಿಕ್ಕೆ ಬೇಕು. ಹಾಗಿಲ್ಲದಿದ್ದರೆ ಆ ಮೂಲ ಘಟಕವು, ಏಕಾತ್ಮಕವೆನಿಸಲಾರದು; ಸ್ಥೂಲವಾಗಿಯಾದರೂ ಏಕಾತ್ಮಕವಾಗಿ ಇರದ ವಿಭಾಗವು ಮೂಲ ಘಟಕವೆನಿಸದು. ಇಂತಹ ಮೂಲಘಟಕವಲ್ಲದ ಘಟಕಗಳ 'ಸಂಯುಕ್ತ ಘಟನೆ' ವಿಘಟನೆಯೆ ಸರಿ ಅದಕ್ಕೆ 'ಸಂಯುಕ್ತ ಘಟನೆ' ಎಂಬ ಹೆಸರು ಸಾರ್ಥವಾಗದು ಇಂದಿನ ಬ್ರಿಟಿಶ ಭಾರತದ ಪ್ರಾಂತಗಳನ್ನು ಮೂಲಘಟಕಗಳೆಂದು ಹೇಳುವುದು ಸಾಹಸವಾದೀತು. ಆದುದರಿಂದ ಅವಶ್ಯವಿದ್ದಲ್ಲಿ ಹೆಚ್ಚಾಗಿ ಒಂದೇ ಬಗೆಯ ಸಂಸ್ಕೃತಿ ಮತ್ತು ಜನಗಳು ಒಂದೆಡೆಗೆ ಬರುವಂತೆ ಹೊಸ ಪ್ರಾಂತಗಳನ್ನು ನಿರ್ಮಿಸುವುದು ಅಗತ್ಯವಾಗಿದೆ.

ದೇಶೀಯ ಸಂಸ್ಥಾನಗಳು 'ಸಂಯುಕ್ತಘಟನೆ'ಯಲ್ಲಿ ಸೇರಬಹುದು, ಅಥವಾ ಬಿಡಬಹುದು ಎಂಬ ಸ್ವಾತಂತ್ರ್ಯವನ್ನು ಈ ಮೊದಲೆ ಒಪ್ಪಿಕೊಂಡಿರುವುದರಿಂದ, ಆ ವಿಚಾರವನ್ನು ಈಗ ಎತ್ತುವುದು ಬೇಡ. ಮತ್ತು ಬ್ರಿಟಿಶ್ ಸರಕಾರದವರು ಸಂಸ್ಥಾನಿಕ ರಾಜರಿಗೆ ಅವರ ರಾಜ್ಯವನ್ನು ಉಳಿಸಿಕೊಡುವ ವಚನವನ್ನು ಕೊಟ್ಟಿರುವರು. ಆದುದರಿಂದ 'ಸಂಯುಕ್ತ ಘಟನೆ'ಯ ಪೂರ್ವ ನಿಯೋಜಿತ ಘಟಕಗಳೆಂದು ಈ ಸಂಸ್ಥಾನಗಳನ್ನು ಎಣಿಸದೆ ಗತಿಯಿಲ್ಲ, ಈ ಸಂಸ್ಥಾನಗಳು ಮತ್ತು ಬ್ರಿಟಿಶ್ ಪ್ರಾಂತಿಕ ವಿಭಾಗಗಳು ಇವುಗಳಸ್ಥಾನ-ಮಾನಗಳಲ್ಲಿ ಯಾವ ತಾರತಮ್ಯವನ್ನು ಕಲ್ಪಿಸುವದಕ್ಕೂ ಆಗುವುದಿಲ್ಲ. ಸಂಸ್ಥಾನ ಅಥವಾ ಬ್ರಿಟಿಶ್ ಹದ್ದಿನೊಳಗಿನ ಬಹುದೊಡ್ಡ ವಿಭಾಗದಲ್ಲಿ ಅಡಕವಾಗಿರುವ ಭಿನ್ನ ಸಂಸ್ಕೃತಿಯ ಹಾಗೂ ಭಿನ್ನ ಭಾಷೆಯವರಿಗೆ ಅವರ ವೈಶಿಷ್ಟ್ಯವನ್ನು ಕಾಯ್ದುಕೊಳ್ಳಲು ಅನುಕೂಲವಾಗುವಂತೆ ಉಪವಿಭಾಗಗಳನ್ನು ಅವಶ್ಯವಿದ್ದಲ್ಲಿ ಮಾಡಿಕೊಡಬಹುದು.

ಯಾವುದೊಂದು ಪ್ರಾಂತವು 'ಸಂಯುಕ್ತಘಟನೆ'ಯಲ್ಲಿ ಸ್ವೇಚ್ಛೆಯಿಂದ ಸೇರಬಹುದು, ಅಥವಾ ಬಿಡಬಹುದು ಎಂದು ಗೊತ್ತಾದುದರಿಂದ, ಒಂದು ಪ್ರಾಂತವು ಅಥವಾ ಸಂಸ್ಥಾನವು 'ಸಂಯುಕ್ತ ರಾಜ್ಯ'ದ ಅಂಗವಾಗಿರಬಹುದು, ಇಲ್ಲವೆ ಸ್ವತಂತ್ರವಾಗಿ ಉಳಿಯಬಹುದು. ಈ ಬಗೆಯ ಅವಕಾಶವನ್ನು ಕಲ್ಪಿಸಿಕೊಟ್ಟಿರುವುದರಿಂದ ಒಂದು ಭಾರತದಲ್ಲಿ ಒಂದಕ್ಕಿಂತ ಹೆಚ್ಚು ಸಂಘರಾಜ್ಯಗಳಾಗಬಹುದು. ಆದರೂ ಸ್ವಲ್ಪ ದೂರ ದೃಷ್ಟಿಯಿಂದ ವಿಚಾರಿಸಿದರೆ, ಒಂದು ಮುಸ-

ಲ್ಮಾನರ ಸಂಯುಕ್ತರಾಜ್ಯ ಮತ್ತು ಇನ್ನೊಂದು ಮುಸಲ್ಮಾನೇತರ ಎಂದರೆ ಹಿಂದೂ ಪಂಗಡದವರ ಸಂಯುಕ್ತ ರಾಜ್ಯವಾಗುವುದೇ ಹೆಚ್ಚು ಸಂಭಾವ್ಯವಾಗಿದೆ. ಸ್ವತಂತ್ರವಾಗಿ ಉಳಿಯುವ ಹಕ್ಕು ಇದಕ್ಕೂ ಬೇರೆ ತೆರನಾದ ಸಂಯುಕ್ತ ರಾಜ್ಯಗಳ ನಿರ್ಮಾಣಕ್ಕೆ ಕಾರಣವಾದೀತೆಂದು ತೋರುವುದಿಲ್ಲ.

ಹಿಂದೂ ಮತ್ತು ಮುಸಲ್ಮಾನರಲ್ಲಿ ಮನೆಮಾಡಿಕೊಂಡಿರುವ ತಾವು ಅತ್ಯಂತ ಭಿನ್ನ ಜನಾಂಗಗಳೆಂಬ ಆಳವಾದ ನಂಬುಗೆಯೆ ಅವರು ಬೇರೆ ಬೇರೆ ಉಳಿಯುವುದಕ್ಕೆ ಕಾರಣವಾಗಿದೆ. ಧರ್ಮ ಮತ್ತು ಸಾಮಾಜಿಕವ್ಯವಸ್ಥೆಗಳಲ್ಲಿ ಇವರಲ್ಲಿರುವ ವೈಷಮ್ಯವು ವಿಶೇಷವಾಗಿದೆ. ಭಾಷೆ ಮತ್ತು ಸಂಸ್ಕೃತಿಗಳಲ್ಲಿ, (ವಿಶೇಷವಾಗಿ ಮೊದಲನೆಯದರಲ್ಲಿ) ಸಾಮ್ಯವು ಹೆಚ್ಚಾಗಿದ್ದರೂ ಇತ್ತೀಚೆ ದಿನದಿನಕ್ಕೂ ಭೇದ (ವೈಷಮ್ಯ)ವನ್ನು ಬೆಳಸುವ ಸುಸಂಘಟಿತ ಪ್ರಯತ್ನಗಳು ಹೆಚ್ಚಾಗುತ್ತಲಿವೆ. ಬೇರೆ-ಬೇರೆಯಾಗುತ್ತಿರುವ ಇವೆರಡೂ ಪಂಗಡಗಳನ್ನು ಒಂದುಗೂಡಿಸುವುದಕ್ಕೆ ಎರಡು ಸಂಗತಿಗಳು ಮುಖ್ಯವಾಗಿ ಅಡ್ಡ ಬರುತ್ತಲಿವೆ. ಮುಸಲ್ಮಾನರು ಬಹುಸಂಖ್ಯಾಕರಾಗಿರುವ ಪ್ರಾಂತಗಳನ್ನು ಪ್ರತ್ಯೇಕಿಸಬೇಕೆಂಬ ಬೇಡಿಕೆ ಒಂದು; ಮತ್ತು ಮುಸಲ್ಮಾನರು ಅಲ್ಪ ಸಂಖ್ಯಾಕರಾಗಿರುವ ಪ್ರಾಂತಗಳಲ್ಲಿ ಅವರಿಗೆ ವಿಶೇಷ ರಾಜಕೀಯ ಹಕ್ಕುಗಳನ್ನು ಕೊಡಬೇಕೆಂಬ ಬೇಡಿಕೆ ಇನ್ನೊಂದು. ಮುಸಲ್ಮಾನೇತರ ಜನಾಂಗಗಳ ವರ್ಚಸ್ಸಿರುವ ಕೇಂದ್ರ ಸರಕಾರದ ಯಾವುದೇ ಬಗೆಯ ಅಂಕೆಯಲ್ಲಿರಲು ಮುಸಲ್ಮಾನರು ಸಿದ್ಧರಿಲ್ಲದುದರಿಂದಲೆ, ಅವರು ತಮ್ಮ ಧರ್ಮದವರ ಒಂದು ಸ್ವತಂತ್ರ ಸಂಯುಕ್ತ ರಾಜ್ಯವನ್ನು ಕೋರುತ್ತಿದ್ದಾರೆ; ಮತ್ತು ಮುಸಲ್ಮಾನರಿಗೆ ವಿಶೇಷ ಹಕ್ಕು-ಬಾಧ್ಯತೆಗಳನ್ನು ಇನ್ನುಳಿದೆಡೆಗಳಲ್ಲಿಯೂ ಹಾರಯಿಸುತ್ತಿದ್ದಾರೆ. ಕೇಂದ್ರ ಸರಕಾರದ ರಾಜಕೀಯ ಮತ್ತು ಆರ್ಥಿಕ ಅಧಿಕಾರಕ್ಕೂ ಒಳಪಡಲು ಮುಸಲ್ಮಾನರು ಸಿದ್ಧರಿಲ್ಲವೆಂದೇ ಇದರ ಅರ್ಥವಾಗುತ್ತದೆ. ಭಾರತದ ರಾಜಕೀಯ ಹಾಗೂ ಆರ್ಥಿಕ ಹಿತಕ್ಕಿಂತಲೂ ತಮ್ಮ (ಮುಸಲ್ಮಾನರ) ರಾಜಕೀಯ ಹಾಗೂ ಆರ್ಥಿಕ ಹಿತಸಂಬಂಧಗಳೇ ಭಿನ್ನವಾಗಿವೆಯೆಂದು ಇವರು ನಂಬಿದಂತಿದೆ ಅನೇಕ ಮುಸಲ್ಮಾನರು ತಮ್ಮದೊಂದು ಸಂಪೂರ್ಣ ಸ್ವತಂತ್ರವಿಭಾಗವಾಗಬೇಕೆಂದೇ ಪ್ರತಿಪಾದಿಸುತ್ತಲಿದ್ದಾರೆ. ರಾಷ್ಟ್ರೀಯ ವೃತ್ತಿಯವರೆಂದು ಹೇಳುವ ಹಲಕೆಲವು ಮುಸಲ್ಮಾನರು ಕೂಡ ತಮ್ಮದೊಂದು ಬೇರೆ ವಿಭಾಗವಿರಬೇಕೆಂದೂ, ಅದಕ್ಕೆ ಬೇಕಾದಾಗ ಬೇರೆಯಾಗುವ ಹಕ್ಕು ಇರಬೇಕೆಂದೂ ಪ್ರತಿಪಾದಿಸುತ್ತಿರುವರು. ಇವೆರಡೂ ಹೇಳಿಕೆಗಳ ರೀತಿ ಬೇರೆಯಾಗಿದ್ದರೂ ಒಟ್ಟು ಗುಟ್ಟು ಒಂದೇ ಆಗಿದೆ

ಈ ಪರಿಸ್ಥಿತಿಯಲ್ಲಿ ಮುಸಲ್ಮಾನರಿಗೆ ಈ ಬಗೆಯ ಹಕ್ಕು ಬಾಧ್ಯತೆಗಳನ್ನೆಲ್ಲ ಒದಗಿಸಿಕೊಟ್ಟು ಅವರನ್ನು ಒಂದೇ ಸಂಯುಕ್ತ ಘಟನೆಯ ಒಳಗೆ ಉಳಿಯುವಂತೆ ಒಲಿಸಿಕೊಳ್ಳುವುದು ಯುಕ್ತವೆ? ಎಂಬುದು ವಿಚಾರಾರ್ಹವಾದ ಸಂಗತಿಯಾಗಿದೆ. ಕೇಂದ್ರ ಸರಕಾರದಲ್ಲಿ ಅನಾವಶ್ಯಕವಾದ ಇನ್ನೂ ಹೆಚ್ಚು ಹೆಚ್ಚಿನ ಸವಲತ್ತುಗಳನ್ನು ಕೊಡುವುದರಿಂದ, ಮಧ್ಯವರ್ತಿ ಸರಕಾರವು ಹೆಚ್ಚು ಹೆಚ್ಚಿಗೆ ದುರ್ಬಲವಾಗದೆ ಇರಲಾರದು. ಹೀಗೆ ಕೇಂದ್ರ ಸರಕಾರವು ದುರ್ಬಲವಾಗಿರುವುದು ರಾಜಕೀಯ ಮತ್ತು ಆರ್ಥಿಕ ದೃಷ್ಟಿಯಿಂದ ಅತ್ಯಂತ ಘಾತಕವಾಗಿದೆ. ಯುದ್ಧ ಕಾಲದಲ್ಲಿ ಅಲ್ಲದೆ ಶಾಂತಿಯ ಸಮಯದಲ್ಲಿ ಕೂಡ ಇಂತಹ ಸವಲತ್ತುಗಳಿಂದ ಭಾರತದ ಯಾವ ಬಗೆಯ ಹಿತವೂ ಸಾಧಿಸಲಾರದು. ಪ್ರಾಂತದಲ್ಲಿ ಅಥವಾ ಕೇಂದ್ರದಲ್ಲಿ ಮುಸಲ್ಮಾನರಿಗೆ ವಿಶೇಷ ಮತಾಧಿಕಾರಗಳನ್ನು ಕೊಡುವುದು ಹಾನಿಕರವಾಗಿದೆ. ಈ ವಿಷಯವನ್ನು ಸೂಕ್ಷ್ಮವಾಗಿ ವಿಮರ್ಶಿಸಿದಷ್ಟೂ ಈ ವಿಶೇಷ ಮತಾಧಿಕಾರದ ವಿಘಾತಕ ತತ್ತ್ವದಿಂದ ಬೇಗನೆ ದೂರ ಸರಿಯುವುದು ಹಿತಕರವೆಂದು ಕಂಡುಬರದೆ ಇರಲಾರದು. ಕಾರ್ಯಕಾರಿ ಮಂಡಳಗಳಲ್ಲಂತೂ ಈ ಬಗೆಯ ಮತಾಧಿಕ್ಯವನ್ನು ಒದಗಿಸಿಕೊಡುವ ಯೋಜನೆಯು ಇನ್ನೂ ಭಯಾವಹವಾಗಿದೆ. ಇಂತಹ ಆಡಳಿತದಿಂದ ರಾಷ್ಟ್ರವು ರಾಜಕೀಯ ಹಾಗೂ ಆರ್ಥಿಕ ಗಂಡಾಂತರಗಳಿಗೆ ಈಡಾಗುವುದು ನಿಶ್ಚಿತ. ಪ್ರೊ ಕೋಪಲಾಂಡ್ ಪ್ರಭೃತಿಗಳು ಮುಂದೆ ಚಾಚಿರುವ ಯೋಜನೆಯಲ್ಲಿ ಮುಸಲ್ಮಾನರಿಗೆ ವಿಶೇಷ ಸವಲತ್ತುಗಳನ್ನು ಕೊಡಬೇಕೆಂದು ಪ್ರತಿಪಾದಿಸಿ ಅವರು ಕೇಂದ್ರ ಸರಕಾರವು ನಿರ್ಬಲವಾಗುವಂತೆ ಮಾಡಿದ್ದಾರೆ; ಅಲ್ಲದೆ ಆ ಯೋಜನೆಗಳು ಆರ್ಥಿಕ ಮತ್ತು ರಾಜಕೀಯ ದೃಷ್ಟಿಯಿಂದ ತೀರ ಬುಡವಿಲ್ಲದುವುಗಳಾಗಿವೆ. ಇಷ್ಟೇ ಅಲ್ಲ; ಅದರ ಯೋಜನೆಗಳಿಂದ ಹಿಂದೂ ದೇಶವು ಕೇವಲ ಎರಡೆ ಅಲ್ಲ, ಎರಡಕ್ಕಿಂತಲೂ ಹೆಚ್ಚು ತುಂಡುಗಳಾಗುವುದು. ದೊಡ್ಡ ತತ್ತ್ವಗಳ ಬಣ್ಣದ ಮಾತಿಗೆ ಒಲಿದರೆ ಹೀಗೆ ಹಿಂದೂ ದೇಶವು ಚೂರು ಚೂರಾಗದೆ ಇರಲಾರದು, ಈಗ ಮುಸಲ್ಮಾನ ಮುಖಂಡರು ಹೇಳುತ್ತಿರುವುದಕ್ಕೆ, ಮುಸಲ್ಮಾನರು ಬಹುಸಂಖ್ಯಾಕರಾಗಿರುವ ಪ್ರದೇಶದೊಳಗಿನ

ಕನ್ನಡ ನಾಡಿನ ಅತ್ಯುತ್ತಮ, ಸುಸಂಸ್ಕೃತ ಚಲಚ್ಚಿತ್ರಪತ್ರಿಕೆ

ಚಿತ್ರ

ಸಂಪಾದಕರು
ಶ್ರೀ. ಪಾ. ನಾ ಚೌಡಪ್ಪ

೪೬ ಪುಟಗಳು :: ಮೂರಾಣೆ

ವಾರ್ಷಿಕ ಚಂದಾ
ಎರಡೂವರೆ ರೂಪಾಯಿ.

ಈಗ ಏಜೆಂಟರಿಲ್ಲದೆಡೆಗಳಲ್ಲೆಲ್ಲಾ ಏಜೆಂಟರು ಬೇಕಾಗಿದ್ದಾರೆ.

ವಿವರಗಳಿಗೆ

ಚಿತ್ರ ಏಜೆನ್ಸೀಸ್
೧೨೧ ಸುಲ್ತಾನ್ ಪೇಟ :: ಬೆಂಗಳೂರು ನಗರ

ಅವರ ಸಮಾಜವು ಬೆಂಬಲವನ್ನು ಕೊಡುತ್ತಿದ್ದರೆ, ಅವರಿಗೆ ಸ್ವತಂತ್ರ ಪಂಗಡವಾಗಿ ನಿಲ್ಲುವುದನ್ನು ಯಾರಿಂದಲೂ ತಡೆಯಲಿಕ್ಕಾಗದು. ಮತ್ತು ಈ ಅನಿವಾರ್ಯವಾದ ಮಾತನ್ನು ಶಾಂತವಿಚಾರದಿಂದ ಒಪ್ಪಿಕೊಂಡು, ಒಂದು ಮುಸಲ್ಮಾನ ಮತ್ತು ಇನ್ನೊಂದು ಮುಸಲ್ಮಾನೇತರ ಸಂಯುಕ್ತರಾಜ್ಯದ ಘಟನೆಯನ್ನು ಸ್ವೀಕರಿಸುವುದರಲ್ಲಿಯೆ ಭಾರತದ ಹಿತವಿದೆ.

ಈ ಬಗೆಯಾದ ಎರಡು ಸಂಯುಕ್ತ ಘಟನೆಗಳ ರಾಜ್ಯದ ಸೀಮೆಗಳನ್ನು ಆ ವಿಭಾಗದಲ್ಲಿ ವಾಸಿಸುವ ಬಹು ಸಂಖ್ಯಾಕರಾದ ಜನಗಳ ಅಪೇಕ್ಷೆಯ ಮೇರೆಗೇ ನಿರ್ಧರಿಸಬೇಕು. ಇವೆರಡೂ ಪ್ರದೇಶಗಳಲ್ಲಿ ನೆಲಸಿರುವ ಅಲ್ಪಸಂಖ್ಯಾಕರಾದ ಜನಾಂಗಗಳ ಹಿತಸಂರಕ್ಷಣೆಯ ಹಕ್ಕು-ಬಾಧ್ಯತೆಗಳಿಗೆ ಯಾವ ಧಕ್ಕೆಯೂ ತಗಲದಂತೆ ನೋಡಿಕೊಳ್ಳಲು ಒಂದು ಅಂತರರಾಷ್ಟ್ರೀಯ ಮಂಡಲವು ಇರತಕ್ಕದ್ದು ಲೇಸು. ಭಾರತದ ಸಂಯುಕ್ತ ಘಟನೆಯನ್ನು ಅಥವಾ ಘಟನೆಗಳನ್ನು ವಿರಚಿಸಲು ಅಂತರರಾಷ್ಟ್ರೀಯ ಮಂಡಲವನ್ನು ಆಮಂತ್ರಿಸುವುದು ಅಯುಕ್ತವಾಗಿದೆ. ಅದರಲ್ಲೂ ಬ್ರಿಟೀಶರನ್ನು ಕರೆಯುವುದೆಂದರೆ ಆತ್ಮಘಾತಕ್ಕೆ ಸಂಚಕಾರ! ಸಂಯುಕ್ತ ಘಟನೆಯು ಎರಡು ಬೇರೆ ರಾಜ್ಯಗಳಾಗಲು ಇಂದು ಒಪ್ಪುವುದರಿಂದ, ಅವು ಎಂದೆಂದೂ ಒಂದಾಗಕೂಡದು, ಯಾವಾಗಲೂ ಭಿನ್ನವಾಗಿ ನಿಂತುಕೊಳ್ಳಲು ಸಮ್ಮತಿಸಿದಂತಾಯಿತೆಂದು ತಿಳಿಯಕೂಡದು. ಇಂದು ಬೇರೆ ಇರಲು ಸಂತೋಷದಿಂದ ಒಪ್ಪಿಕೊಳ್ಳುವುದರಿಂದ ನಾಳೆ ಮತ್ತೆ ಒಂದಾಗಿ ಕೂಡಿಕೊಳ್ಳಬಹುದೆಂಬುದಕ್ಕೆ ಇಂಬಿದೆ. ಇಂದು ಒತ್ತಾಯದಿಂದ ಸೇರಿಕೊಂಡಂತೆ ನಿಂತರೂ ನಾಳೆ ವಿಪರೀತ ಪರಿಸ್ಥಿತಿಯ ಒತ್ತಾಯದಲ್ಲಿ ಅವರು ಸಿಡಿದು ಬೇರೆಯಾಗುವ ಸಂಭವವು ಇಲ್ಲದಿಲ್ಲ.

ಮುಸಲ್ಮಾನರಿಗೆ ಹೆಚ್ಚಿನ ಮತಾಧಿಕಾರ, ವಿಶೇಷ ಹಕ್ಕು-ಬಾಧ್ಯತೆಗಳ ಆಮಿಷತೋರಿಸಿ, ಅವರನ್ನು ಒಂದೇ ಸಂಯುಕ್ತ ಘಟನೆಯಲ್ಲಿ ಇದ್ದುಕೊಳ್ಳಲು ಒಲಿಸಿಕೊಂಡರೂ ಆ ಬಗೆಯಾದ ಅಖಂಡ ಭಾರತವು ತೋರಿಕೆಯಲ್ಲಿ ಮಾತ್ರ 'ಅಖಂಡ', ನಿಜವಾಗಿ ಅದು ಹೃದಯದಲ್ಲಿ ಖಂಡ, ಖಂಡ. ಏಕೆಂದರೆ ರಾಷ್ಟ್ರೀಯ ವೃತ್ತಿಯ ಮುಸಲ್ಮಾನರೆಂದೆನಿಸುವ ಮೌ. ಅಝಾದರಂತಹರೂ ಎಲ್ಲಿಯ ವರೆಗೆ ಮಹಮ್ಮದೀಯ ಜನಾಂಗ, ಸಂಸ್ಕೃತಿ, ಭಾಷೆಗಳು ಭಾರತದಿಂದ ತೀರ ಭಿನ್ನವೆಂದು ಬಗೆಯುತ್ತಿರುವರೋ, ಅಲ್ಲಿಯ ವರೆಗೆ ಮುಸಲ್ಮಾನರು ಏಕಭಾರತದಲ್ಲಿ ಸಮರಸರಾಗಲಾರರು. ಭಾರತದ ಉತ್ತರ ಸರಹದ್ದಿನಲ್ಲಿ ಮುಸಲ್ಮಾನರ ರಾಜ್ಯಗಳಿರುವುದರಿಂದ, ನಮ್ಮ ಈ ಹಿಂದೂ ಮುಸಲ್ಮಾನರ ತೊಡಕು ಇನ್ನಿಷ್ಟು ತೊಡಕಿನದಾಗಿದೆ. ಆ ಹೊರನಾಡಿನ ಮಹಮ್ಮದೀಯರತ್ತ ಭಾರತದ ಮಹಮ್ಮದೀಯರು ಒಲಿಯಬಾರದೆಂದು ಅವರಿಗೆ ಎಷ್ಟೆಷ್ಟು ಹೆಚ್ಚಿನ ಸವಲತ್ತುಗಳನ್ನು ತೋರಿಸಬಹುದೋ ಅಷ್ಟು ಹೆಚ್ಚು ಹೆಚ್ಚು ಭಾರತದ ಸರಕಾರವು ಗಂಡಾಂತರಕ್ಕೆ ಒಳಗಾಗಬಹುದಲ್ಲದೆ, ಮತ್ತೆ ಹೊತ್ತು ಬರುತ್ತಲೆ ಈ ಮುಸಲ್ಮಾನರು ಯಾವಾಗ ಆ ಹೊರನಾಡ ಮುಸಲ್ಮಾನ ರಾಜರ ಕಡೆಗೆ ಹೋಗುವರೊ ಎಂಬ ಹೆದರಿಕೆ ತಪ್ಪುವುದಿಲ್ಲ. ಆದುದರಿಂದ ಈ ಬಗೆಯಾದ ಹೆದರಿಕೆಯ ಕಿಚ್ಚನ್ನು ಮಡಿಲಲ್ಲಿ ಕಟ್ಟಿಕೊಂಡು, ಹಿಂದೂ ದೇಶವು ಒಂದುಗೂಡಿದೆಯೆಂದು ಸಮಾಧಾನ ಹಚ್ಚಿಕೊಳ್ಳುವುದು ಕೇವಲ ಭ್ರಮೆಯೆ ಸರಿ. ಆದುದರಿಂದ ಮುಸಲ್ಮಾನರು ಹಿಂದೂಭಾರತದಿಂದ ಬೇರೆಯಾಗ ಬಯಸುತ್ತಿದ್ದರೆ ಕೂಡಲೆ ಅವರನ್ನು ಸಂತೋಷದಿಂದ ದೂರಿರಲು ಬಿಟ್ಟು ಬಿಡಬೇಕು. ಇಲ್ಲದ ಹೆಚ್ಚಿನ ಮತಾಧಿಕಾರದ ಹಕ್ಕುಗಳನ್ನು ಕೊಟ್ಟು ಅವರನ್ನು ಒಳಗಿಟ್ಟುಕೊಂಡಲ್ಲಿ, ಭಾರತದ ಹಿತಕ್ಕೆ ಗಂಡಾಂತರವೆ ಇದೆಯಲ್ಲದೆ ಲಾಭವು ಏನೂ ಇಲ್ಲ.

ನಾದೋನ್ಮಾದ

ಶ್ರೀ ಗಂಗಾಧರ ಚಿತ್ತಾಲ, ಧಾರವಾಡ

ಜೀವದುಂಬಿ ತೋಂತನನೆನುತಿರಲು ಮೃದು ಮೃದಂಗವು
ತರ-ತರಂಗವಾಗಿ ಕೆರೆಯುತಿರಲು ಸಾರಂಗವು,
ಮುಗ್ಧವಾಗಿ ಸೂಸುತಿರಲು ವೇಣು ಮೋಹನಾದವಾ-
ಮೈದುಂಬಿ ತರುತಲಿರಲು ನರ್ತನೋನ್ಮಾದವಾ
ಹೃದ್ಬಂಧವು ಸ್ಪಂದಿಸೆ ಸೆಳೆದೆಳೆಯೆ ಭಾವಬಂಧನಾ
ರಾಸಕೆಂದು ನಿಂದರಂದು ರಾಧೆ-ನಂದನಂದನಾ.
ಮಧುವನವದು ಮುದದಿ ಮೈತುಂಬ ಹೂತು ನಲಿಯಿತು;
ನೆಳಲನೀಡಿ ಶ್ಯಾಮಲ ತಮಾಲ ತಲೆಯನೊಲೆಯಿತು.
ಲಹರಿ-ಲಹರಿಯಾಗಿ ಕಂಪಿಸಿತು ಪವನವಾಹವು
ತರಲತರಂಗಿತವದಾಯ್ತು ಯಮುನ ಜಲಪ್ರವಾಹವು.
ಧಮುನಿ ಧಮುನಿ ಧುಮುಧುಮೆನಿಸೆ ಪಾದನೋಲ್ಲಾಸವು
ತರಂಗೋತ್ತರಂಗವಾಗಲಂಗ ವಿನ್ಯಾಸವು—
ನಾದದುನ್ಮಾದವೇರೆ ಸುಪ್ತಚೈತನ್ಯವೇ
ಮದದಲೆದ್ದು ತೂಗಿದಂತೆ ಮೈಯ ನಿಲುವು ತೂಗಲು
ತೋಳುಗಳೂ ತೂರಿ ತೆರೆಗಳಾಗಿ ಬಳುಕಿ ತೇಲಲು—

ನಾದ-ಸಂಮೋಹನಕ್ಕೆ, ಮೈಮನಗಳ ಸೋಲಿಸಿ
ಅದರ ತೀವ್ರ ಮಾಧುರ್ಯಕೆ ಸೋತು ಕಣ್ಣು ಜೋಲಿಸಿ—

ನಾದಮಾಯೆ ತೂಗಿದತ್ತ
ರಾಗ ಗತಿಯು ನೂಗಿದತ್ತ
ತಾಲಗತ್ತು ಕುಣಿಸಿದಂತೆ
ಹಾಡಮುರುಕ ಮಣಿಸಿದಂತೆ—

ಮೋಹ ಮಂತ್ರಮುಗ್ಧರಂತೆ ಸ್ವಚ್ಛಂದ ಕುಣಿದರು;
ಉನ್ಮತ್ತರಂತೆ ಮೈಯ ಮರೆದು ಸುತ್ತು ಕುಣಿದರು.
ತಾನ-ತಾನವೇರಿ ನಾದತುಂಬೆ ಗಗನದಂಗಣಾ
ತನ್ನ ಗತಿಗೆ ತಾನೆ ಮುದಿಸಿ ಕುಣಿಯೆ ರಾಗ ರಂಗಣಾ
ಮೃದು ಮೃದಂಗಸ್ಪಂದನಕ್ಕೆ ಜಗವೆ ಝುಮ್ಮೆಂದಿರೆ
ನಾದಪಾನ ಮದವದೇರಿ ಗಿರಿ ಮೊಮ್ಮೆಂದು ಸಿಡಿರೆ—
ವೇಣುವಹಾ ಮುಗ್ಧವಾಣಿಯಿಂದ ಒಲವ ತೋರೆಯಿತು
ಮುಗುದೆಯೆದೆಯು ಓತು ಸೋತು ಕರೆವಂತೆಯೆ ಕರೆಯಿತು.

ಹಸಿದವರ ಹಾಡು

(ಗೀತದೃಶ್ಯ)

●

" ಚಿದಾನಂದ "

ಮೊದಲ ಮಾತು :—ಅನ್ನದ ಸಮಸ್ಯೆಯು ಧುತ್ತೆಂದು ಮುಂದೆನಿಂತಾಗ ಮಾನವನ ಮನಸ್ಸಿನ ಸ್ಥಿತಿಯು ಹೇಗಿರುವುದೆಂಬುದನ್ನು ಚಿತ್ರಿಸುವುದೇ ಈ ಕವನದ ಉದ್ದೇಶ. ಪ್ರಗತಿಶೀಲ ಸಾಹಿತ್ಯಕ್ಕಾಗಲಿ ಸಮತಾವಾದ (Communism) ಕ್ಕಾಗಲಿ ಇದರ ಸಂಬಂಧವೇನೂ ಇಲ್ಲ.

— ೧ —

[ಯಾವುದೊ ಪಟ್ಟಣದ ಬೀದಿಯೊಂದು. ಜನರ ಗುಂಪೊಂದು ಹಾಡುತ್ತ ಹೊರಟಿದೆ. ಮಾಸಿದ ಹರಕು ಬಟ್ಟೆ. ಕೈಯಲ್ಲಿ ಕೆಂಪು ಬಾವುಟ. ಒಬ್ಬನು ಮುಂದಾಳಾಗಿ ಹಸಿವಿನ ಗೀತವನ್ನು ಹಾಡುತ್ತ ಬರುತ್ತಾನೆ. ಉಳಿದವರೆಲ್ಲ ದನಿಗೂಡಿಸುತ್ತಾರೆ.]

ಮುಂದಾಳು :— ನಾವೆಲ್ಲರು ಹಸಿದವರು,
ಹಸಿವೆ ನಮ್ಮ ದೇವರು !
ಅವರ ತೃಪ್ತಿ ನಮ್ಮ ಧರ್ಮ,
ಅದಕಾಗಿಯೆ ನಮ್ಮ ಕರ್ಮ !
ಇದ್ದವರನು ಸುಲಿದುಕೊಂಡು
ಇಲ್ಲದವರು ಹಂಚಿಕೊಂಡು
ಹಸಿವನೆಲ್ಲ ತೊಡೆದುಹಾಕಿ
ಮರಣವನ್ನು ಮುಂದೆ ನೂಕಿ
ಜಗದಿ ನಾವು ಬಾಳುವಾ,
ಬಾಳಿಗಾಗಿ ಕಾದುವಾ !
ಏಕೆ ನಾವು ಸಾಯಬೇಕು ?
ಅವರವೇಕೆ ಬದುಕಬೇಕು ?
ಹಸಿದು ನಾವು ಸಾಯುತಿರೆ
ಉಂಡು ಅವರು ನಲಿಯುತಿರೆ
ಅವರು ನಮ್ಮ ಬಂಧುಗಳೆ... ?
ಅಲ್ಲ, ಅವರು ವೈರಿಗಳೇ !
ಅವರ ಕೂಡ ನಮ್ಮ ಕದನ
ಅದಕಾಗಿ ಇದೆಲ್ಲ ಹದನ
ಸಾರಿ ಬನ್ನಿ ಹಸಿದವರೆ,
ಬರಿದೆ ಹಸಿದು ಸಾಯುವರೆ ?
ಜಾತಿ–ನೀತಿ ಹಸಿವೆಗಿಲ್ಲ,
ಹಸಿದವರೊಳು ಭೇದವಿಲ್ಲ,
ಹಸಿದ ಜನವು ಒಂದೆ ಎಲ್ಲ,
ಹಸಿವೆಯಲ್ಲ ಜಗದ ಮೂಲ ;
ನಾವೆಲ್ಲರು ಹಸಿದವರು
ಹಸಿವೆ ನಮ್ಮ ದೇವರು !

[ಹೀಗೆ ಹಾಡುತ್ತ ಗುಂಪು ಮುಂದೆ ಸಾಗುತ್ತದೆ; ಸಾಗಿದಂತೆ ಹೆಚ್ಚು ಹೆಚ್ಚು ಜನ ಬಂದು ಸೇರುತ್ತಾರೆ.]

— ೨ —

[ಉದ್ಯಾನವೊಂದರ ಒಳ ಆವಾರದಲ್ಲಿ ಕೆಲವರು ಸಿರಿವಂತರು ಏರ್ಪಡಿಸಿದ ಸತ್ಕಾರಕೂಟವು ನಡೆದಿದೆ. ಜನರೆಲ್ಲ ಆನಂದದಿಂದ ಊಟಕ್ಕೆ ಅಣಿಯಾಗುತ್ತಿದ್ದಾರೆ. ಜನಜಂಗುಳಿಯು ಹಾಡುತ್ತ ಅದೇ ದಾರಿಯಲ್ಲಿ ಸಾಗುತ್ತದೆ. ಸಮೀಪಕ್ಕೆ ಬಂದಕೂಡಲೆ ಅವರಿಗೆ ಸತ್ಕಾರಕೂಟದ ವೈಭವ ಕಾಣುತ್ತದೆ.]

ಮುಂದಾಳು :— ನುಗ್ಗಿರಲ್ಲಿ ಹಸಿದವರೆ
ನಿಮಗೆ ಅನ್ನ ಬೇಕಿರೆ—
ನಡೆದಿಹುದಿದೊ ' ಮೇಜವಾನಿ '
ಹೊಟ್ಟೆ ತುಂಬ ಉಣ್ಣ ಬನ್ನಿ !

(ಒಳನುಗ್ಗುವರು. ಒಳಗಿನವರೆಲ್ಲ ಗಾಬರಿಯಾಗುವರು. ಕಿರಿ-ಹೇಳುವರು, ಬೇಡಿಕೊಳ್ಳುವರು. ಆಗ)

ತಿಳಿಯದವರ ಮೋಸಗೈದು
ಅವರದೆಲ್ಲ ಹಣವ ಸುಲಿದು
ರಕುತ ಹೀರಿ ಜನರ ಕೊಂದು
ಅವರ ಹಿಂದೆ ಕೂಳನುಂಡು,
ನೀವು ದೊಡ್ಡ ಹೊಟ್ಟೆ ಬೆಳಸಿ
ಮೆರೆಯುತಿಹಿರಿ ಮಾನಗಳಿಸಿ.
ಹಸಿದು ನಾವು ಸಾಯುತಿರೆ
ಹಬ್ಬದೂಟ ಮಾಡುವಿರೇ ?
ನಾಕು ನಿಮ್ಮ ಆಟವಿನ್ನು
ಹೊರಡಿ ಬಿಟ್ಟು ಎಲ್ಲವನ್ನು !

[ಅವರೆಲ್ಲರನ್ನು ಓಡಿಸಿ ಮೇಜವಾನಿಯನ್ನುಂಡು ಮುಂದೆ ಸಾಗುವರು.]

— ೩ —

[ದೇವಸ್ಥಾನವೊಂದರ ವಿಶಾಲವಾದ ಒಳ ಅಂಗಳ. ಭಾರೀ ಸಮಾರಾಧನೆ ನಡೆದಿದೆ. ಜನಜಂಗುಳಿ ಅದೇ ದಾರಿಯಾಗಿ ಹಾಡುತ್ತ ಬರುವಾಗ ಒಳಗಿನ ಊಟ-ಪಾಟಗಳೆಲ್ಲ ಕಾಣುತ್ತವೆ.]

ಮುಂದಾಳು :— ನುಗ್ಗಿರಲ್ಲಿ ಹಸಿದವರೆ,
ನಿಮಗೆ ಅನ್ನ ಬೇಕಿರೆ—
ದೇವರ... ಹೆಸರು ಮರಸಿ

ಠಣಗೂಳಿನ ಬೊಜ್ಜು ಬೆಳೆಸಿ
ಮೆರೆಯುವವರನೆಲ್ಲ ಅಳಿಸಿ,
ಗುಡಿಯನ್ನೆಲ್ಲ ಬಿರಿದುಗೊಳಿಸಿ,
ಮುಂದೆ ನಾವು ಸಾಗುವಾ;
ದೇವರನ್ನು ತಾಗುವಾ !

(ಒಳನುಗ್ಗುವರು. ಒಳಗಿನವರು ಉಪದೇಶ ಮಾಡಲು ಬರುವರು. ಆಗ)

ದೇವರಂತೆ ದೇವರು !
ಎಲ್ಲಿರುವನು ದೇವರು ?
ನಾವು ಹಸಿದು ಸಾಯುತಿರಲು
ಅವನು ಉಂಡು ತೇಗುವುದೇ?
ಆರ್ತರಾಗಿ ಕರೆಯುತಿರಲು
ತಾನು ಕಾಣದಾಗುವುದೇ ?
ತಾನು ಹುಟ್ಟಿಸಿರುವ ಜನರ
ಹಸಿವೆಯನ್ನು ಕಳೆಯಲಾರ;
ತನ್ನ ಮಕ್ಕಳೆನ್ನುವವರ
ಜೀವವನ್ನು ಉಳಿಸಲಾರ;
ದೇವರಂತೆ–ದೇವರು—
ಯಾವನವನು ದೇವರು ?
ಒಡೆದುಹಾಕಿ ಮೂರ್ತಿಯನ್ನು !
ಕೆಡಹಿಬಿಡಿರಿ ದೇಗುಲವನು !

(ಅಲ್ಲಿ ಬಡಿಸಿದುದನ್ನು ತಿಂದು, ಧ್ವಂಸಮಾಡಿ, ಗರ್ಭಗುಡಿಯನು ಕೆಡಹಿಹೋಗುವರು.)

— ೪ —

[ಒಂದು ನಾಟ್ಯಶಾಲೆ. ನೃತ್ಯ-ಸಂಗೀತಗಳು ನಡೆದಿವೆ ಅದರಲ್ಲಿ ಜನ ತನ್ಮಯರಾಗುತ್ತಿದ್ದಾರೆ. ಅಷ್ಟರಲ್ಲಿ ಹಸಿದವರ ಪ್ರವೇಶ.]

ಮುಂದಾಳು :— ನೋಡಿರಲ್ಲಿ ಹಸಿದವರೆ,
ಹಸಿದು ನಾವು ಸಾಯುತಿರಲು,
ಇವರ ನೃತ್ಯ–ಗಾನವೇ ?
ನಮ್ಮ ಆರ್ತಧ್ವನಿಗೆ ಮಾತ್ರ
ಕಿವುಡುಗಿವಿಯ ಮಾನವೇ ?
ಒಬ್ಬರಿಲ್ಲಿ ನಕ್ಕು ನಲಿಯೆ
ಅಲ್ಲಿ ನಾವು ಅಳುವುದೇ ?
ಯಾವ ಜಗದಿದೆಲ್ಲ ನೀತಿ ?
ಹುರುಳಿಲ್ಲದ ತತ್ತ್ವಗೀತಿ!
ಇವರೆಲ್ಲರು ಮಡಿಯಲಿ,
ನಮ್ಮ ಹಸಿವು ಹಿಂಗಲಿ !

(ಎಂದು ಅಲ್ಲಲ್ಲಿ ದಾಂಗುಡಿ ಎಬ್ಬಿಸಿ ಮುಂದೆ ಸಾಗುವರು.)

[ಸಾಹಿತ್ಯ ಸಮ್ಮೇಲನದ ಸಮಾರಾಧನೆ ನಡೆದಿದೆ. ಚರ್ಚೆ ಮಾಡುತ್ತ ಸಾಹಿತಿಗಳು ಉಣ್ಣುತ್ತಿದ್ದಾರೆ. ಜನಜಂಗುಳಿ ಅದನ್ನು ನೋಡಿ ಸಹಿಸಲಾರದೆ ಒಳಕ್ಕೆ ನುಗ್ಗುವುದು]

ಮುಂದಾಳು :— ಬನ್ನಿ ಮುಂದೆ ಹಸಿದವರೆ,
ನಿಮಗೆ ಅನ್ನ ಬೇಕಿರೆ—
ಕಲೆಯು ಕಾವ್ಯವೆಂದು ಹೇಳಿ
ತಿಳಿಯದಂತೆ—ಏನೊ ಬೊಗಳಿ,
ಹೊಟ್ಟೆ ಬಿರಿಯುವಂತೆ ತಿಂದು
ದಿಂಬಿಗಾತು ಒರಗಿಕೊಂಡು,
ಪ್ರೇಯಸಿಯನು ಲಲ್ಲೈಸಿದು
ಅವಳ ಮೇಲೆ ಹಾಡು ಬರೆದು,
ಆಯುಷ್ಯವ ಹಾಳುಗೈವ
ಅಲಸಿಗಳಿದೊ ಇವರ ಕುಳಿವ!

(ಸಾಹಿತಿಗಳು ತತ್ತ್ವ ಸಾರಲು ಬರುತ್ತಾರೆ. ಜೀವನವನ್ನು ರಮಿಸಲು ಕಾವ್ಯ ಬೇಕೆಂದು ಹೇಳುತ್ತಾರೆ.)

ಮುಂದಾಳು :— ಹೊಟ್ಟೆ ಹಸಿದ ಕಾಲದಲ್ಲಿ
ಮನ ಹಿಡಿವುದೆ ಕಾವ್ಯದಲ್ಲಿ ?
ಕಾವ್ಯವನ್ನು ಓದಲೆಮಗೆ
ಹೊಟ್ಟೆ ಹಸಿವು ಹಿಂಗಬಹುದೆ ?
ಕಲೆಯ ಬೆನ್ನ ಬಿದ್ದರೆಮಗೆ
ಕಾಳು ಕೂಳು ದೊರೆಯಬಹುದೆ ?
ಅನ್ನ ಬೇಕು ಅನ್ನ ಬೇಕು,
ಅದಕೆ ನಾವು ದುಡಿಯಬೇಕು !
ನೀವೆಲ್ಲರು ಮಾತಿನವರು,
ಹಗಲುಗನಸು ಕಾಣುವವರು !
ಹೊತ್ತಗೆಯನು ಮುಚ್ಚಿ ಬನ್ನಿ,
ದುಡಿಮೆ ನಮ್ಮ ದೇವರೆನ್ನಿ !

[ಎಂದು ಎಲ್ಲರನ್ನೂ ಓಡಿಸಿ ಸಿಕ್ಕಷ್ಟು ತಿಂದು ಮುಂದೆ ಸಾಗುವರು]

— ೫ —

[ವೈರಾಗಿಯೊರ್ವನು ಎದುರಾಗಿ ಬರುತ್ತಾನೆ.]

ಮುಂದಾಳು :— ಯಾರು ನೀನು ಎಲ್ಲಿ ಹೊರಟೆ ?
ಹಸಿದಿಲ್ಲವೆ ನಿನ್ನ ಹೊಟ್ಟೆ ?
ಪರಟೆ ನಿನ್ನ ಕೈಯೊಳೇಕೆ ?
ಮನುಜ ಬಿಕ್ಷೆ ಬೇಡಬೇಕೆ ?
ವೇದಾಂತದ ಬುರುಡೆ ಹೇಳಿ
ಮೈಗಳ್ಳತೆಯಿಂದ ಬಾಳಿ
ಮಾನವತೆಯ ಹಾಳುಗೈವೆ;
ಜೀವನವನು ವ್ಯರ್ಥ ಕಳೆವೆ.

ಜಯಂ

[ಎಂದು ಅವನನ್ನು ಹೊಡೆಯುಹೋಗುವರು.]

ಟಿ. ರಾಗಿ :— ಹಾ ನಿಲ್ಲು! ಸ್ವಲ್ಪ ತಡೆ!
ಒಂದು ಮಾತು ಕೇಳಿ ಹೊಡೆ.
ಹಸಿವು ಜಗದ ಮೂಲ ತಾನು
ಅದರದುವೆ ಕೊನೆಯು ಏನು?
ಏಕೆ ಹಸಿವು ಏಕೆ ನೋವು?
ಏಕೆ ಹುಟ್ಟು ಏಕೆ ಸಾವು?
ಏಕೆ ನಾವು ಬಾಳಬೇಕು?
ಏತಕಾಗಿ ದುಡಿಯಬೇಕು?
ಹಸಿವು ಎಂದು ಕೊಂದರಾಯ್ತು?
ಹಸಿವು ಹಿಂಗೆ ಎಲ್ಲ ಮುಗಿತೆ?
ಮನುಜ ದುಡಿಮೆಯಂತ್ರವೇನು?
ಜನದೊಳನವಸ್ಥಾನವೇನು?
ಜಗದ ಗುಟ್ಟು ತಿಳಿದು ಬಾಳು,
ಬಾಳಿನೊಗಟ ಒಡೆದು ಹೇಳು!
ದೇವರನ್ನು.........…………

[ಅವನ ವಾದವನ್ನು ಕೇಳುತ್ತಾ ನಿಲ್ಲದೆ ಅವನನ್ನು ಹೊಡೆದು ಮುಂದೆ ಸಾಗುವುದು.]

— ೭ —

ಮುಂದಾಳು :— ನಾವೆಲ್ಲರು ಹಸಿದವರು
ಹಸಿವೆ ನಮ್ಮ ದೇವರು,
ದೇವರೊಬ್ಬನಿರುವನಿಲ್ಲ-[
ವೆಂಬುದೆಮಗೆ ಗೊತ್ತು ಇಲ್ಲ.
ಜಗದ ಗುಟ್ಟು ತಿಳಿಯದೆಮಗೆ,
ಬಾಳಿನೊಗಟ ಒಡೆಯದೆಮಗೆ;
ಮನುಜರೆಂಬುದೆಮಗೆ ಗೊತ್ತು
ಮಾನವತೆಯೆ ನಮ್ಮ ಸೊತ್ತು!
ಇರುವೆನೆಂದು ಬಾಳಬೇಕು,
ಬಾಳಿಗೆಂದು ಅನ್ನ ಬೇಕು.
ಅನ್ನಕಾಗಿ ದುಡಿಯಬೇಕು.
ದುಡಿಮೆಗೊಳ್ಳೆ ಫಲವು ಬೇಕು.
ಒಬ್ಬ ಹಸಿದು ಸಾಯುತಿರಲು
ಒಬ್ಬನುಂಡು ತೇಗುವುದೇ?
ಕೆಲರು ಬರಿಯೆ ದುಡಿಯುತಿರಲು
ಹಲರು ತಿಂದು ನಲಿಯುವುದೇ?
ಏಕೆ ನಾವು ಸಾಯಬೇಕು?
ಅವರದೇಕೆ ನಲಿಯಬೇಕು?
ಸಲ್ಲದೆಮಗೆ ಇಂಥ ನೀತಿ,
ನಾವೆಲ್ಲರು ಒಂದೆ ಜಾತಿ!
ಎಲ್ಲರೆಮಗೆ ಬದುಕಬೇಕು
ಎಲ್ಲಕೊಟ್ಟು ದುಡಿಯಬೇಕು.
ದುಡಿದುದೆಲ್ಲದುಣ್ಣಬೇಕು.
ಎಲ್ಲರುಂಡು ನಲಿಯಬೇಕು.
ನಲುಮೆ ಬಾಳ ಬೆಳಗಬೇಕು.
ಹೀಗೆ ಬಾಳು ಚಿಗುರಬೇಕು.
ಭೇದಭಾವ ನಮ್ಮೊಳಿಲ್ಲ
ಕುಟಿಲ ನೀತಿಯೆಮಗೆ ಒಲ್ಲ.
ನಾವೆಲ್ಲರು ಹಸಿದವರು
ಹಸಿವೆ ನಮ್ಮ ದೇವರು!

[ಹೀಗೆ ಹಾಡುತ್ತ ಹಾಗೇ ಸಾಗುತ್ತದೆ.]

ಜಯಂತಿ ಕಾರ್ಯಾಲಯದಲ್ಲಿ ದೊರೆಯುವ ಪುಸ್ತಕಗಳು

'ಶ್ರೀರಂಗ' ಬರೆದುವು

ಗೀತಾಗಾಂಭೀರ್ಯ	೨	೦	೦
ನಗೆ (ರಸವಿಚಾರ)	೧	೮	೦
ಆಹ್ವಾನ (ಕವನಸಂಗ್ರಹ)	೧	೦	೦
ಸರಾಹಾರ	೦	೬	೦

'ಆನಂದಕಂದ'ರು ಬರೆದುವು

ಸುದರ್ಶನ (ಕಾದಂಬರಿ)	೧	೦	೦
ವಿರಹಿಣಿ (ಕವನಸಂಗ್ರಹ)	೦	೧೨	೦
ಕರ್ನಾಟಕ ಜನಜೀವನ	೧	೮	೦

ಜಯಂತಿ ಪ್ರಚಾರ ಮಾಲೆ

ಅಕ್ಷರ ಬರೆಯಲು ಬಂದ ಮಾತ್ರಕ್ಕೆ ಸುಶಿಕ್ಷಿತನೆನಿಸಿಕೊಳ್ಳಲಿಕ್ಕಾಗುವುದಿಲ್ಲ. ಹಾಗೆನಿಸಿಕೊಳ್ಳುವುದಕ್ಕೆ ವಿವಿಧ ಮುಖವಾದ ಪ್ರಪಂಚದ ಪರಿಚಯ ಬೇಕು. ಅದಕ್ಕಾಗಿ ಎಲ್ಲರೂ ಈ ಮಾಲೆಯ ಪ್ರಕಾಶನಗಳನ್ನು ಓದಿ ಮನನ ಮಾಡಬೇಕು.

೧ ಜಾತೀಯ ಸಮಸ್ಯೆ	೦-೪-೦
೨ ಕರ್ನಾಟಕ ಏಕೀಕರಣ	೦-೪-೦

ಬೇಕಾದವರು ಕೂಡಲೆ ಬರೆದು ತರಿಸಿಕೊಳ್ಳಿರಿ!

ವಿಷಮ ಸಾಹಸ

(ಕನ್ನಡಿಸಿದ ಸಣ್ಣ ಕತೆ)*

ಶ್ರೀ. ಎಸ್. ಎಸ್. ರಾಮಸ್ವಾಮಿ ಅಯ್ಯರ್, ಮಂಡ್ಯ

"**ಬೇಕಾಗಿದ್ದಾರೆ**:—ಆತ್ಮಹತ್ಯ ಮಾಡಿಕೊಳ್ಳಲು ಸಿದ್ಧರಾಗಿರುವ ನಾಲ್ಕು ಜನರು, ಪ್ರಾಣಕ್ಕೇ ಅಪಾಯ ಸಂಭವಿಸಬಹುದಾದ ಒಂದು ಸಾಹಸಕಾರ್ಯದಲ್ಲಿ ಭಾಗ ವಹಿಸಲು ಇಷ್ಟವುಳ್ಳವರು ಬೆಳಗ್ಗೆ ೯ ಗಂಟೆಯ ಮೇಲೆ, ಕ್ಯಾಪ್ಟನ್ ಕಾಗ್ವಿಲ್‌ರವರನ್ನು ನಂ.... ....ಶೂನ್ಯ ವೀಧಿ........ಇಲ್ಲಿ ಬಂದು ಕಾಣಬಹುದು."

ಕ್ಯಾಪ್ಟನ್ ಕಾಗ್ವಿಲ್ಲನು ಯಾರಾದರೂ ಮುಂದೆ ಬಂದಾರೆಂದು ನಿರೀಕ್ಷಿಸಿ, ಮೂರು ದೈನಂದಿನ ಪತ್ರಿಕೆಗಳಲ್ಲಿ ಈ ಸಮಾಚಾರವನ್ನು ಪ್ರಕಟಿಸಿದನು. ಬೆಳಗ್ಗೆ ಒಂಭತ್ತು ಗಂಟೆಯಿಂದ ಹಿಡಿದು ಮಧ್ಯಾಹ್ನದ ವೇಳೆಗೆ ಐದು ಮಂದಿ ಪುರುಷರು, ಇಬ್ಬರು ಸ್ತ್ರೀಯರು ಆ ಸಾಹಸ ಕಾರ್ಯದ ಸ್ವರೂಪವೇನು?—ಎಂಬುದನ್ನು ತಿಳಿದು, ಅದು ಅಂತಹ ರಾಷ್ಟ್ರದ್ರೋಹವಲ್ಲದಿದ್ದಲ್ಲಿ, ತಮ್ಮ ಸಹಕಾರ, ಸಹಾಯಗಳನ್ನು ನೀಡಲು ಸಿದ್ಧರಿರುವೆವೆಂದು ತಿಳಿಸಲು ಕಾಗ್ವಿಲ್ಲನ ಆಫೀಸಿಗೆ ಬಂದರು. ಬಂದಿದ್ದವರಲ್ಲಿ ಮೂರುಜನ ಗಂಡಸರು, ಒಬ್ಬ ಪ್ರಾಯದ ಹೆಂಗುಸು, ಒಟ್ಟು ನಾಲ್ಕು ಮಂದಿ ಚುನಾಯಿತರಾದರು. ಕಾಗ್ವಿಲ್ಲನು ಕದವನ್ನು ಮುಚ್ಚಿ ಆ ನಾಲ್ಕು ಮಂದಿಗೆ "ನಾನು ನಿಮ್ಮನ್ನು ಅಪೇಕ್ಷಿಸಿದ ಕಾರಣವು ಇಷ್ಟೆ; ಸಮುದ್ರ ಮಾರ್ಗವಾಗಿಯಾಗಲಿ, ಇತರ ಯಾವ ಸಾಧನಗಳಿಂದಾಗಲಿ! ಸಾಹಸಿಗಳು ಉತ್ತರಧ್ರುವವನ್ನು ಸೇರಲಾರರೆಂಬುದು ನನಗೆ ಮನದಟ್ಟಾಗಿದೆ. ಇನ್ನುಳಿದಿರುವ ಫಲಸಾಧ್ಯವಾದ ಮಾರ್ಗ ವಾಯುಮಾರ್ಗವೊಂದೆ. ಅದಕ್ಕಾದರೂ ಇರುವ ಪ್ರಯಾಣ ಸೌಕರ್ಯ ಒಂದು ಆಕಾಶಬುಟ್ಟಿ—ಇದು ನಿಮಗೆ ತಿಳಿದಿರಬಹುದು. ಈ ಪ್ರಯತ್ನದಲ್ಲಿ ಸಾಹಸಿಗಳಿಗೆ ಅನೇಕ ಅಪಾಯಗಳು ಅಡ್ಡ ಬರುವುದು ಖಂಡಿತ. ಅಂತಹ ಅಪಾಯಗಳಿಗೆ ಪ್ರಾಣವನ್ನು ತೃಣಪ್ರಾಯವನ್ನಾಗಿ ಎಣಿಸಿದತಕ್ಕವರು ಮಾತ್ರ ಈಡಾಗಬಹುದೆಂಬುದು ನನ್ನ ಅಭಿಪ್ರಾಯ. ಆತ್ಮಹತ್ಯದಿಂದ ಬರುವ ದೋಷದಲ್ಲಿ ಒಂದು ಪಾಲು, ಪ್ರತ್ಯಕ್ಷವಾಗಿಯಾಗಲಿ ಪರೋಕ್ಷವಾಗಿಯಾಗಲಿ ಪ್ರಪಂಚಕ್ಕೆ ಅದರಿಂದ ಆಗುವ ಉಪಕಾರದಿಂದ ಕಡಿಮೆಯಾಗುವುದೆಂಬುದು ನನ್ನ ತಿಳಿವಳಿಕೆ. ಒಂದು ವಿಸ್ತಾರವಾದ ಮತ್ತು ಎಲ್ಲ ಸೌಕರ್ಯಗಳಿಂದಲೂ ಸುಸಜ್ಜಿತವಾದ ಆಕಾಶಬುಟ್ಟಿಯನ್ನು ಸಿದ್ಧಗೊಳಿಸಿದ್ದೇನೆ. ಅದರಲ್ಲಿ ಆಹಾರಸಾಮಗ್ರಿಗಳನ್ನೆಲ್ಲ ಒದಗಿಸುವುದಲ್ಲದೆ ಆಮ್ಲಜನಕವನ್ನು ಹೊಸದಾಗಿ ಒದಗಿಸುವ ಸಾಧನಗಳೂ ಇವೆ. ನಿಮಗೆ ಈ ಆಕಾಶಬುಟ್ಟಿಯಲ್ಲಿ ಹೊರಟು, ನನ್ನ ಉದ್ಯಮದಲ್ಲಿ ಪ್ರಯತ್ನಪಡುವ ಇಚ್ಛೆಯಿದೆಯೋ?" ಎಂದು ಹೇಳಿ, ಒಂದು ಪುಟ್ಟ ಉಪನ್ಯಾಸವನ್ನೇ ಮಾಡಿದನು. ನಾಲ್ವರೂ "ಇದೆ" ಎಂದರು.

"ನೀವೆಲ್ಲ ಹೇಗಾದರೂ ಪ್ರಾಣಬಿಡಲು ನಿಶ್ಚಯಿಸಿದ್ದೀರೋ?" ಇದಕ್ಕೆ ಎಲ್ಲರೂ ಒಪ್ಪಿದರು. ಕ್ಯಾಪ್ಟನ್ ಕಾಗ್ವಿಲ್ಲನು ಅದರೇ ಪ್ರತಿಯೊಬ್ಬರ ಹೆಸರನ್ನೂ ಕೇಳಿ ಬರೆದುಕೊಂಡನು.

ಕ್ರೆಟರ್: ಧಾರಾಳವಾಗಿ ೩೦ ವಯಸ್ಸು. ಒಳ್ಳೆಯ ಉಡುಪನ್ನು ಧರಿಸಿದ್ದಾನೆ. ನೋಟದಿಂದಲೆ ಸುಸಂಸ್ಕೃತನೆನ್ನಬಹುದು. ಮುಖವು ಕಾಂತಿಹೀನವಾಗಿದ್ದುದನ್ನು ನೋಡಿದರೆ ಬಹುಶಃ ತನ್ನಲ್ಲಿದ್ದ ಐಶ್ವರ್ಯವನ್ನೆಲ್ಲಾ ವೃಥಾ ದುಂದುಮಾಡಿದವನಂತಿತ್ತು.

ಡಾಕ್ಟರ್ ಓ ಹೇಗನ್ನು ತೆಳುವು. ಬಿಳಿಚು ಮುಖ. ತಾಪತ್ರಯದ ಮುದ್ರೆ. ಖಾಯಿಲೆಯವನಂತೆ, ಹೃದಯದಲ್ಲಿಯ ನಲವು ಬತ್ತಿಹೋದಂತೆ ಕಾಣುತ್ತಿದ್ದನು.

ಜಾನ್‌ವಿಲ್: ದುಡಿಮೆಯವನಂತೆ ತೋರುತ್ತಿದ್ದನು. ದುಃಖ ಮುದ್ರಿತ ಮುಖ. ಆದರೂ ಬುದ್ಧಿಶಾಲಿ. ಸಮಾಜದಲ್ಲಿ ಅಂತಹ ಕೀಳು ವರ್ಗಕ್ಕೇನೂ ಸೇರಿದವನಲ್ಲವೆಂದು ಅವನ ನಯ ನಡತೆ ಹೇಳುತ್ತಿತ್ತು.

ಕುಮಾರಿ ಡರ್ಮಟ್: ನಿರಾಶೆಯ ಪ್ರತಿಬಿಂಬವೆನ್ನುವಂತೆ ಕೈಗಳನ್ನು ತೊಡೆಯಮೇಲಿಟ್ಟುಕೊಂಡು ಕುಳಿತಿದ್ದಾಳೆ. ತೆಳುವಾಗಿ, ಜೀರ್ಣವಾಗಿದ್ದ ಶಾಲುವೊಂದನ್ನು ಹೊದ್ದಿದ್ದಾಳೆ. ಆಕೆಯ ನೀರಸ ಕಪೋಲಗಳು ಹಸಿವನ್ನೂ ಮನೋವೇದನೆಯನ್ನೂ ಸೂಚಿಸುತ್ತಿವೆ.

ಎಲ್ಲರೂ ಆಕಾಶಬುಟ್ಟಿಗೆ ಸೇರಿದಂತಿದ್ದ ವಿಶಾಲವಾದ ಯಂತ್ರವೊಂದರಲ್ಲಿ ಕೂಡಬೇಕು. ಅಷ್ಟರಲ್ಲಿಯೆ ಆಗಂತುಕ ಯುವಕನೊಬ್ಬನು ಆ ಸ್ಥಳವನ್ನು ಪ್ರವೇಶಿಸಿ, ಕಾಗ್ವಿಲ್ಲನನ್ನು ಜಾಗ್ರತೆಯಾಗಿ ಸಮೀಪಿಸಿ, "ನಾನೂ ಆಕಾಶಬುಟ್ಟಿಯೊಡನೆ ಹೊರಡುತ್ತೇನೆ" ಎಂದು ಕ್ಯಾಪ್ಟನ್ ಕಾಗ್ವಿಲ್‌ನನ್ನೂ ಲಕ್ಷ್ಯಿಸದೆ ಭಯಂಕರವಾಗಿ ಆರ್ಭಟಿಸಿದನು.

ಕಾಗ್ವಿಲ್ "ಅದು ಅಸಾಧ್ಯ. ಸಾಕಾದಷ್ಟು ಮಂದಿ ಇದ್ದಾರೆ. ಅಲ್ಲದೆ ನಮ್ಮ ಉದ್ದೇಶವಾದರೂ ನಿನಗೆ ತಿಳಿಯದು!" ಎಂದನು.

ಅದಕ್ಕೆ ಆಗಂತುಕನು "ಹೌದು. ನನಗೆ ತಿಳಿದಿದೆ. ಇವರೆಲ್ಲ ಆತ್ಮಹತ್ಯೆ ಮಾಡಿಕೊಳ್ಳುವವರು. ಉತ್ತರಧ್ರುವಕ್ಕೆ ಹೊರಟಿದ್ದಾರೆ. ನಾನೂ ಇವರೊಡನೆ ಹೊರಡುತ್ತೇನೆ" ಎಂದನು. ಕಾಗ್ವಿಲ್ಲನು ತಾರ್ಕಿಕ ಧ್ವನಿಯಿಂದ "ಅಯ್ಯಾ!........" ಎಂದು ಮೊದಲು ಮಾಡಿದನು:

"ನಾನು ಹೊರಡಲೇ ಬೇಕು. ಇಲ್ಲದೆ, ಈಗಲೇ ಈ ಸ್ಥಳದಲ್ಲಿಯೇ ನನ್ನನ್ನು ಕಡಿದುಕೊಂಡು ಸಾಯುವೆನು. ಇವರಿಗೆ ನನಗಿಂತಲೂ ಜೀವನದಲ್ಲಿ ಜೀಹಾಸೆಯಿರಲಾರದು!" ಎಂದು ಆಗಂತುಕನು ಅಡ್ಡಮಾತನಾಡಿದನು.

ಅದಕ್ಕಾಗಿ ಕಾಗ್ವಿಲ್ಲನು ಉತ್ತರ ಕೊಡುತ್ತಾ "ಇರಬಹುದು, ಆದರೆ ಆಕಾಶಬುಟ್ಟಿಗೆ ಹೊರೆಯು ಹೆಚ್ಚಬಹುದು;" ಎಂದನು. "ಏನೇ ಆಗಲಿ; ನಾನು ಹೊರಡಲೇ ಬೇಕು" ಎಂದು ಹೇಳುತ್ತಾ

* Max Adeler ಎಂಬುವರ "A desperate Adventure" ಎಂಬ ಸಣ್ಣ ಕತೆಯನ್ನು ಕನ್ನಡಿಸಿದೆ.

ಆಗಂತುಕನು ನಗೆದು ಅವರೊಡನೆ ಕುಳಿತನು. ಕ್ಯಾಪ್ಟನನು ದೀರ್ಘವಾಗಿ ಉಸಿರೆಳೆದು "ಸರಿ, ನಿಮಗೆ ಇಷ್ಟಬಂದಂತೆ ಮಾಡಿಕೊಳ್ಳಿ!" ಎಂದನು. ಆಗಂತುಕನು ತನ್ನ ಹೆಸರು **ಜಾನ್ ವಿಂಡೆನ್** ಎಂದೂ ಯಾರಾದರೂ ತನ್ನನ್ನು ವಿಚಾರಿಸಬಹುದೆಂದೂ ಹೇಳಿದನು.

ಕ್ಯಾಪ್ಟನ್ನನು ಎಲ್ಲರಿಗೂ ಶುಭವನ್ನು ಕೋರಿದನು. ಹಗ್ಗಗಳನ್ನು ಬಿಚ್ಚಿದರು. ಆಕಾಶಬುಟ್ಟಿಯು ಭರ್ರನೆ ಆಗಸಕ್ಕೇರಿತು. ಅದರ ಮುಖ್ಯ ವಾಹಕ **ಡಾಕ್ಟರ್ ಓ ಹೇಗನ್**. ಕೊಂಚ ಕಾಲದಲ್ಲಿಯೆ ಈಶಾನ್ಯ ದಿಕ್ಕಿನಿಂದ ಬಿರುಗಾಳಿಯೆದ್ದು ಆಕಾಶಬುಟ್ಟಿಗೆ ಎದುರಾಗಿ ಬೀಸಿತು; ಅದು ಅತಿ ರಭಸದಿಂದ ಅತ್ತಿತ್ತ ಸುಳಿದಾಡಲಾರಂಭಿಸಿತು.

ಬಹುಕಾಲ ಯಾರೂ ಮಾತನಾಡಲಿಲ್ಲ. ಮಾತನಾಡುವುದಿರಲಿ, ಅತ್ತಿತ್ತ ದೃಷ್ಟಿಯನ್ನೂ ತಿರುಗಿಸಲಿಲ್ಲ. ಒಬ್ಬನಿಗೂ ತನ್ನ ಪಕ್ಕದಲ್ಲಿ ಇಣಕಿ, ಕೆಳಗಿದ್ದ ಆ ಮನೋಹರ ದೃಶ್ಯವನ್ನು ನೋಡುವ ಕುತೂಹಲವು ಕೂಡ ಉಂಟಾಗಲಿಲ್ಲ. ತುಸು ಹೊತ್ತಿನ ಮೇಲೆ ಕ್ರಟರ್-ಡರ್ಮಟ್‌ಳ ಕಡೆಗೆ ದೃಷ್ಟಿಸಿ ನೋಡಿ, "ಆತ್ಮಹತ್ಯ ಮಾಡಿಕೊಳ್ಳಲು ನಿನಗೆ ಸಂಪೂರ್ಣ ಇಚ್ಛೆಯಿದೆಯೆ?" ಎಂದು ಕೇಳಿದನು. ಆಕೆ-ಯೊಡನೆ ಎಲ್ಲರೂ "ಇದೆ" ಎಂದರು.

ಕ್ರಟರ್‌ನು "ನಾವು ಸುರಕ್ಷಿತವಾಗಿ ಉತ್ತರಧ್ರುವವನ್ನು ಸೇರಿ ಹಿಂದಿರುಗಿದರೂ ನನಗೆ ಮಾತ್ರ ಬದುಕಿರುವ ಇಚ್ಛೆಯಿಲ್ಲ!" ಎಂದನು. ಡರ್ಮಟ್ "ನನಗೂ ಅಷ್ಟೆ!" ಎಂದಳು. ಮಿಕ್ಕವರೆಲ್ಲರೂ ಒಂದೇ ಉಸಿರಿಂದ "ನಮಗೂ ಬದುಕುವ ಆಸೆಯಿಲ್ಲ!" ಎಂದರು.

ಎಲ್ಲರೂ ಮೌನ. ಸುಮಾರು ಅರ್ಧ ಗಂಟೆಯ ಮೇಲೆ ಮೌನವು ಮುರಿಯಿತು. ಕ್ರಟರ್‌ನು "ಇದು ಎಂತಹ ಸೌಖ್ಯಾನುಭವ. ಪ್ರಶಾಂತವಾದ ವಾಯುಮಂಡಲದಲ್ಲಿ ತೇಲುವುದು; ಸಾಮಾನ್ಯ ಪ್ರಪಂಚದಲ್ಲಿದ್ದು ನಮ್ಮನ್ನು ಹುಚ್ಚರನ್ನಾಗಿ ಮಾಡುವ ವಿವಿಧ ಭಾವನೆಗಳ ಸಂಘಟನೆಯ, ಹೋರಾಟಗಳ ಸಂಪರ್ಕವಿಲ್ಲ! ನನ್ನ ಜೀವನವು ದಾರುಣಮಯವಾಗಿಲ್ಲದಿದ್ದಲ್ಲಿ, ನಾನು ಇದರಿಂದ ಅತ್ಯಾನಂದ ಪಡುತ್ತಿದ್ದೆ!" ಎಂದನು.

"ನನ್ನಲ್ಲಿ ಸುಖಕ್ಕೆ ಸ್ಥಳವಿಲ್ಲದಷ್ಟು ದುಃಖವೇ ತುಂಬಿದೆ. ಈ ಒಂದು ಕ್ಷಣವಾದರೂ ನನ್ನ ಮನಸ್ಸು ಉಲ್ಲಾಸದಿಂದಿದೆಯೆಂಬುದನ್ನು ನಾನು ಇಲ್ಲವೆನ್ನಲಾರೆ" ಎಂದು ಡರ್ಮಟ್ ಹೇಳಿಕೊಂಡಳು. ಹೃದಯವು ನೋವಿನ ಕುಲುಮೆಯಂತಿರುವವನಿಗೆ ಇದರಿಂದ ಸುಖವು ಸಿಕ್ಕಲಾರದೆಂದು ವಿಂಡೆನ್ ಅಭಿಪ್ರಾಯಪಟ್ಟನು.

ಹೇಗನ್ ಗೆಲುಮುಖದಿಂದ, "ವಾಯುಮಂಡಲದಲ್ಲಿ ಮೇಲೆ ಹೋದಂತೆಲ್ಲಾ ಇಷ್ಟು ಸುಖ-ಸಂತೋಷ-ಸಮಾಧಾನಗಳು ಅಡಗಿವೆ-ಯೆಂಬುದನ್ನು ನಾನು ಈಗಲೇ ಅರಿತದ್ದು!" ಎಂದನು. ಜಾನ್ ವಿಲ್‌ಸನ್‌ಗೇನೋ ಒಂದು ಅವರ್ಣನೀಯ ಉತ್ತಮ ಅವಸ್ಥೆಯ ಅನುಭವವಾಗಿತ್ತು.

ಕ್ರಟರ್ ಬಹು ಯೋಚಿಸಿ ಡರ್ಮಟ್‌ಳನ್ನು ಕುರಿತು "ನಿನ್ನ ಮತ್ತು ವಿಂಡೆನ್‌ನಂತಹ ಪ್ರಾಯದವರಿಗೆ ಜೀವನವು ಬೇಸರವೆಂದರೆ ನನಗೆ ಆಶ್ಚರ್ಯ. ನನ್ನಂತಹ ಮುದಿಯು ಸಾವನ್ನು ಬಯಸುವುದು ಅಂತಹ ಅಸಂಭವವಲ್ಲ. ನೀನೇಕೆ ಸಾಯಬಯಸುವೆ?" ಎಂದು ಪ್ರಶ್ನಿಸಿದನು. ಇದಕ್ಕೆ ವಿಂಡೆನ್ ಮತ್ತು ಡರ್ಮಟ್‌ಳ ಮೌನವೆ ಉತ್ತರ.

ಹೇಗನ್‌ನು ಆಕಾಶಬುಟ್ಟಿಯು ಕೆಳಕ್ಕೆ ಇಳಿಯದಿರಲೆಂದು ಒಂದು ಮೂಟೆ ಭಾರವನ್ನು ಮೇಲೆಸೆದು, "ನಾವೆಲ್ಲ ಒಟ್ಟಿಗೆ ನಿವಾತ ಹೊಂದುವುದು ನಿಶ್ಚಯವಾದ ಮಾತು. ಈ ಸಂಕಟದಲ್ಲಿ ಸಮಭಾಗಿಗಳಾದ ನಾವೆಲ್ಲರೂ ನಮ್ಮ ನಮ್ಮ ದುಃಖವನ್ನು ಏಕೆ ಹೇಳಿಕೊಳ್ಳಬಾರದು?" ಎಂಬ ಅಭಿಪ್ರಾಯವನ್ನು ಸೂಚಿಸಿದನು. "ಅದು ಸರಿ. ನಾನು ಮೊದಲುಮಾಡುತ್ತೇನೆ. ಮಿಕ್ಕವರು ನನ್ನನ್ನು ಅನುಸರಿಸಬಹುದು," ಎಂದು ಕ್ರಟರ್ ಹೇಳಿದ ಮಾತಿಗೆ ಎಲ್ಲರೂ ಒಪ್ಪಿಗೆಯ ಮುದ್ರೆಯೊತ್ತಿದರು.

ಕ್ರಟರ್ ತನ್ನ ಚರಿತ್ರೆಯನ್ನು ಈ ರೀತಿ ಸಂಕ್ಷೇಪಿಸಿದನು: "ನನ್ನದು ಬಹಳ ಸ್ವಲ್ಪ ಮಾತು. ನಾನು ವಿಲಾಸಿಯಾಗಿ, ಸೋಮಾರಿಯಾಗಿ ಜೀವನವನ್ನು ಸಾಗಿಸಲು ಸಾಕಾಗುವಷ್ಟು ಸ್ಥಿತಿವಂತ. ಹಾಗೆಯೇ ಜೀವನವನ್ನೂ ಸಾಗಿಸಿದೆನು. ನಾನು ಪಡೆಯದ ಭೋಗವಿಲ್ಲ. ಪಡದಿರುವ ಸುಖ ಮತ್ತೊಂದಿಲ್ಲ. ಜೊತೆಗೆ ನಿರಂತರವೂ ಭಯಂಕರ ಅಜೀರ್ಣ ರೋಗದಿಂದ ನರಳುತ್ತಿದ್ದೇನೆ. ಬದುಕು ನನಗೆ ಬಹು ಭಾರವಾಗಿದೆ. ಎಂದು ಸಾಯುವೆನೋ ಎಂದು ಹಂಬಲಿಸುತ್ತಿರುವೆನು. ಇದಿಷ್ಟೇ ನನ್ನ ಕಥೆ."

"ನಮ್ಮಿಬ್ಬರಲ್ಲಿಯೂ ಎಂತಹ ತಾರತಮ್ಯ!" ಎಂದು ಹೇಗನ್‌ನು ಮೊದಲುಮಾಡಿದನು: "ನನ್ನ ಉದ್ಯೋಗದಲ್ಲಿ ನನಗೆ ಅನೇಕ ವರ್ಷಗಳ ಅನುಭವ. ಅತಿಯಾಗಿ ದುಡಿದು ಈಗ ದುರ್ಬಲನಾಗಿ ಹಣ್ಣಾಗಿದ್ದೇನೆ. ನರಗಳಲ್ಲಿ ಬಲವಿಲ್ಲ; ದೇಹದಲ್ಲಿ ಶಕ್ತಿಯಿಲ್ಲ. ಏನೋ ಒಂದು ಬಗೆಯ ಜಿಗುಪ್ಸೆ. ಸಾಲದುದಕ್ಕೆ ಯಾವುದೋ ಒಂದು ದಿವಾಳಿಗೆ ಬಿದ್ದು ಕೂಡಿಟ್ಟ ಹಣವೆಲ್ಲ ಹಾಳಾಯಿತು. ಇದರಿಂದ ಮನಸ್ಸಿಗೆ ಶಾಂತಿಯಿಲ್ಲ. ವಿರಾಮವಿಲ್ಲದೆ ದುಡಿಯಬೇಕು, ಇಲ್ಲವೆ ಪ್ರಾಣ ಬಿಡಬೇಕು!"

ಡರ್ಮಟ್‌ಳು, "ನನ್ನ ಕಥೆಯೂ ಸ್ವಲ್ಪ ನಿಮ್ಮದರಂತೇ ಹೋಲುತ್ತದೆ. ನಾನು ಬಡವಿ. ಹಿತವನ್ನು ಕೋರಲು ಯಾರೂ ಇಲ್ಲದ ಅನಾಥೆ. ಹೊಲಿಗೆಯ ಕೆಲಸದಿಂದ ಆಹಾರ ಸಾಮಗ್ರಿಗಳಿಗೆ ಸಾಲುವಷ್ಟು ಸಂಪಾದನೆಯಿಲ್ಲ. ಈ ಬವಣೆಯನ್ನು ನಾನು ಸಹಿಸಲಾರೆ. ಇಷ್ಟು ವರ್ಷಗಳೂ ಸಹಿಸಿ ಬೆಂದಿದ್ದೇನೆ. ಇಂತಹ ಬದುಕಿನಿಂದ ಸಾವು ಸಾವಿರಪಾಲು ಲೇಸು!" ಎಂದು ಸುಮ್ಮನಾದಳು.

ವಿಲ್‌ಸನ್ ತನ್ನ ಕಥೆಗೆ ಪ್ರಾರಂಭಿಸಿದನು: "ನಾನೊಬ್ಬ ವೃತ್ತಿಯಿಂದ ವಿಜ್ಞಾನ ಪರಿಶೋಧಕ. ಹೊಗೆಯು ಸರಿಯಾಗಿ ಹೊರಗೆ ಹೋಗಲು ಒಂದು ಸಾಧನವನ್ನು ಕಂಡುಹಿಡಿಯಲು ಹತ್ತು ವರ್ಷ ಹಣಗಿದೆ. ನನ್ನ ಪ್ರಯತ್ನದಲ್ಲಿ ಸಿದ್ಧಿಯೂ ಲಭಿಸಿತು. ಅಂತಹ ಒಂದು ಮಾದರಿಯನ್ನು ಮಾಡಲು ನನ್ನಲ್ಲಿ ಹಣವಿಲ್ಲ. ಹೊಟ್ಟೆಗೇ ಇಲ್ಲದೆ ಉಪವಾಸವಿರಬೇಕಾಗಿದೆ. ನನ್ನಲ್ಲಿ ಕನಿಕರಿಸಿ ಕೈ ಹಿಡಿಯುವವರು ಯಾರೂ ಸಿಕ್ಕಲಿಲ್ಲ. ಈ ವ್ಯರ್ಥ ಬಾಳನ್ನು ಬಾಳುವುದಕ್ಕಿಂತ ಮಣ್ಣಾಗುವುದೇ ಉತ್ತಮ!" ಎಂದನು.

ವಿಂಡನ್ ತನ್ನ ಗಂಟಲನ್ನು ಎರಡು ಮೂರು ಬಾರಿ ಸರಿಮಾಡಿಕೊಂಡು ತನ್ನ ಕಥೆಯನ್ನು ಮೊದಲುಮಾಡಿದನು. ಏನೋ ಒಂದು ಅವರ್ಣನೀಯ ಅವ್ಯಕ್ತ ಸಂಕಟಕ್ಕೀಡಾದವನಂತೆ ಅವನ ಮುಖವು ಕಾಣುತ್ತಿತ್ತು. "ಇಷ್ಟೇ ನನ್ನ ಸಂಗತಿ: ನಾನೊರ್ವ ಯುವತಿಯನ್ನು ಪ್ರೀತಿಸುತ್ತಿದ್ದೆ. ಆಕೆಯು ನಿನ್ನೆಯ ರಾತ್ರಿ ನನ್ನನ್ನು ಒಲ್ಲೆನೆಂದಳು. ಇಂತಹ ಜೀವನವನ್ನು ಸಾಗಿಸುವುದಕ್ಕಿಂತಲೂ ತ್ಯಜಿಸುವುದೇ ಯೋಗ್ಯವೆಂದು ನಿರ್ಧರಿಸಿದೆನು!" ಎಂದನು.

ತುಸುಕಾಲ ಯಾರೂ ಮಾತನಾಡಲಿಲ್ಲ. ಹೇಗನ್‌ನು ಒಮ್ಮೆಲೆ, "ಆಕಾಶಬುಟ್ಟಿಯು ಕೆಳಕ್ಕೆ ಇಳಿಯುತ್ತಿದೆ. ಅದನ್ನು ಈ ಸಮಯದಲ್ಲಿ ಪುನಃ ಹಾರಿಸುವುದಕ್ಕಿಂತ ಕೆಳಕ್ಕಿಳಿಸಿ, ಒಂದು ಮರಕ್ಕೆ ಕಟ್ಟುವುದೇ ಸರಿ. ನಾಳೆಯ ದಿನ ಬೆಳಗ್ಗೆ ಮತ್ತೆ ಸ್ವಲ್ಪ ಅನಿಲವನ್ನು ತುಂಬಿಕೊಂಡು ಪುನಃ ಹೊರಡೋಣ!" ಎಂದನು.

ಹೇಗನನ ಅಭಿಪ್ರಾಯಕ್ಕೆ ಜೊತೆಯವರೆಲ್ಲರೂ ಹೂಂಗುಟ್ಟಿದರು. ಹೇಗನ್ ಪಂಜರಂತಿದ್ದ ಒಂದು ಗೂಟವನ್ನೆಸೆದನು. ಅದು ಹೋಗಿ ಮರವೊಂದಕ್ಕೆ ತಗುಲಿಕೊಂಡಿತು. ಆಕಾಶಬುಟ್ಟಿಯನ್ನು ಕೆಳಕ್ಕಿಳಿಸಿ ಕಷ್ಟಪಟ್ಟು ಬಿಗಿಯಾಗಿ ಕಟ್ಟಿದರು. ಎಲ್ಲರೂ ಯಂತ್ರದಿಂದ ಕೆಳಗಿಳಿದರು.

ಅದೊಂದು ನಿರ್ಜನ ಪ್ರದೇಶ. ಭಯವನ್ನುಂಟುಮಾಡುವಂತಹ ಮೌನ. ನಾಲ್ಕು ಜನ ಪುರುಷರೂ ಸ್ವಲ್ಪ ಹೊತ್ತಿನಲ್ಲೇ ಬೆಂಕಿಯನ್ನು ಹೊತ್ತಿಸಿದರು. ವಿಂಡನ್ ಮತ್ತು ಜಾರ್ನ್‌ವಿಲ್ ಅಡಿಗೆಯನ್ನು ಸಿದ್ಧಮಾಡಿದರು. ಹೇಗನ್ ಮತ್ತು ಕ್ರಟರ್ ಇಬ್ಬರೂ ಆ ರಾತ್ರಿ ಡರ್ಮಟ್‌ಳು ಮಲಗಲು ಸ್ಥಳವನ್ನು ಸರಿಪಡಿಸಿಕೊಟ್ಟರು.

ಊಟವಾದ ಮೇಲೆ ಎಲ್ಲರೂ ಬೆಂಕಿಯ ಸುತ್ತ ಕುಳಿತರು. ಅವರ ಮುಖಗಳಲ್ಲಿ ಗೆಲವು ಸುಳಿದಾಡುತ್ತಿತ್ತು. ಕ್ರಟರ್ ದೀರ್ಘವಾಗಿ ಆಲೋಚಿಸಿ, ಗಂಭೀರವಾಗಿ "ನನ್ನಲ್ಲಿ ಖರ್ಚು ಮಾಡಲು ಮಾರ್ಗವೇ ತೋರದಷ್ಟು ಹಣವಿದ್ದೂ ಡರ್ಮಟ್‌ಳಂತಹ ಬಡಹೆಂಗುಸು ಆಹಾರವಿಲ್ಲದೆಯೆ ಇರುವುದು ನಾಚಿಕೆಗೇಡಿನ ಪ್ರಸಂಗ. ಡರ್ಮಟ್, ನಿನಗೆ ಸಮ್ಮತಿಯಿದ್ದರೆ ನೀನು ಹಿಂದಿರುಗಿ ಹೋಗಿ ನನ್ನ ಐಶ್ವರ್ಯವೆಲ್ಲವನ್ನೂ ಅನುಭವಿಸಬಹುದು. ನನ್ನ ಐಶ್ವರ್ಯವು ದರಿದ್ರರಿಗೆ ವಿನಿಯೋಗವಾಗಲೆಂದು ಈಗಾಗಲೇ ಉಯಿಲನ್ನು ಬರೆದಿದ್ದೇನೆ. ಈಗ ಬೇರೊಂದು ಉಯಿಲನ್ನು ನಿನಗೆ ಬರೆದುಕೊಡುತ್ತೇನೆ. ಆ ಹಳೆಯ ಉಯಿಲಿರುವ ಸ್ಥಳವನ್ನು ನಿನಗೆ ತಿಳಿಸುತ್ತೇನೆ. ಅದನ್ನು ಹರಿದುಹಾಕಿ ನೀನು ಸುಖದಿಂದಿರಬಹುದು!" ಎಂದನು.

ಅದಕ್ಕೆ ಡರ್ಮಟ್‌ಳು ತನಗೆ ಹಿಂದಿರುಗಲು ಇಷ್ಟವಿಲ್ಲವೆಂದು ಮರುನುಡಿ ನುಡಿದಳು.

ವಿಂಡನ್ ಮಧ್ಯೆ ಬಾಯಿ ಹಾಕಿ "ನನ್ನಂತಹವನಾಗಿದ್ದರೆ ಈ ಕ್ಷಣವೆ ಹಿಂದಿರುಗಲು ಒಪ್ಪಿಕೊಳ್ಳುತ್ತಿದ್ದೆ. ನಿನ್ನಂತಹವಳು ಇಂತಹ ಅಪಾಯಕರ ಪ್ರಯಾಣವನ್ನು ಕೈಕೊಳ್ಳುವುದು ಸರಿಯಲ್ಲ. ಜಾರ್ನ್‌ವಿಲ್, ನಿನ್ನ ಜೊತೆ ಹೋಗುವ ಸಾಧನದ ವಿಚಾರವನ್ನು ಕೇಳಿದಾಗಿನಿಂದ ನನ್ನ ಮನಸ್ಸಿನಲ್ಲಿ ಒಂದು ಯೋಚನೆ ಹೊಳೆಯುತ್ತಿದೆ. ನನ್ನ ತಂದೆ ಒಳ್ಳೆಯ ಸ್ಥಿತಿವಂತ. ಒಂದು ಕಬ್ಬಿಣದ ಕಾರ್ಖಾನೆಯ ಮಾಲೀಕ. ಈಗ ನೀನು ಕಂಡುಹಿಡಿದಿರತಕ್ಕಂತಹ ಸಾಧನವನ್ನು ತಯಾರಿಸಿಕೊಟ್ಟವರಿಗೆ ಭಾರಿ ಬಹುಮಾನ ಕೊಡುವುದಾಗಿ ಪ್ರಕಟಿಸಿದ್ದಾನೆ. ನಿನ್ನ ಸಾಧನವನ್ನು ಅವನೇನಾದರೂ ಒಪ್ಪಿದರೆ, ನಿನ್ನ ಸ್ಥಿತಿ ಗತಿಗಳು ಸ್ವಲ್ಪ ಸುಧಾರಿಸಬಹುದು!" ಎಂದು ಸೂಚಿಸಿದನು.

"ಈ ಸಂಗತಿ ನಾವು ಹೊರಡುವ ಮುಂಚೆಯೆ ತಿಳಿದಿದ್ದರೆ ಚೆನ್ನಾಗಿತ್ತು!" ಎಂದು ಜಾರ್ನ್‌ವಿಲ್ ಸುಮ್ಮಗಾದನು.

ಡಾಕ್ಟರ್ ಓ ಹೇಗನ್‌ನು "ಅದು ಸರಿ, ಕ್ರಟರ್ ಅಜೀರ್ಣ ರೋಗದಿಂದ ನರಳುತ್ತಿದ್ದುದು, ಅದರ ದೆಸೆಯಿಂದ ಅವನು ಪ್ರಾಣ ಬಿಡಲು ನಿರ್ಧರಿಸಿದುದು ನನಗೆ ತಿಳಿದಿದ್ದರೆ, ನಾನು ಅವನಿಗೆ ಗುಣ ಮಾಡುತ್ತಿದ್ದೆ. ಆ ರೋಗವನ್ನು ಗುಣಪಡಿಸುವುದರಲ್ಲಿ ನನ್ನದ ಎತ್ತಿದಕೈ. ಎಲ್ಲಿ, ನಿನ್ನನ್ನು ಸ್ವಲ್ಪ ಪರೀಕ್ಷಿಸೋಣ!" ಎಂದು ಕ್ರಟರ್‌ನೊಡನೆ ಕೊಂಚಹೊತ್ತು ಮಾತನಾಡಿ, ಅವನ ಮುಖವನ್ನು ನೋಡಿ ಪರೀಕ್ಷಿಸುತ್ತ "ಹೌದು, ಖಂಡಿತವಾಗಿಯೂ ನಿನ್ನ ರೋಗವನ್ನು ಗುಣಪಡಿಸಬಲ್ಲೆನೆಂದು ನನಗೆ ಹೊಳೆಯುತ್ತದೆ" ಎಂದನು. ಕ್ರಟರ್ ಉತ್ತರ ಕೊಡುತ್ತ "ಈಗ ಕಾಲ ಮಿಂಚಿಹೋಯಿತು. ನಿನ್ನೆಯೇ ನೀನು ಈ ಮಾತು ಹೇಳಿದ್ದರೆ ನನ್ನ ಐಶ್ವರ್ಯದಲ್ಲಿ ಅರ್ಧವನ್ನೇ ನಿನಗೆ ಕೊಟ್ಟುಬಿಡುತ್ತಿದ್ದೆ!" ಎಂದನು. "ನಾನು ನಿನ್ನನ್ನು ಆಗಲೇ ನೋಡಿದ್ದಲ್ಲಿ, ಈಗ ಇಲ್ಲಿರುವ ಸಂಭವವೇ ಇರುತ್ತಿರಲಿಲ್ಲ!" ಎಂದು ಡಾಕ್ಟರ್ ಹೇಳಿದನು.

"ನಾವೆಲ್ಲರೂ ಪುನಃ ಹಿಂದಿರುಗಲಾಗುವುದಿಲ್ಲವೆ?" ಎಂದು ಕೇಳಿದ ಮಾತಿಗೆ "ಆಗುವುದೇ ಇಲ್ಲ" ಎಂದು ಹೇಗನ್‌ನಿಂದ ಉತ್ತರ ಬಂದಿತು.

ವಿಂಡನ್ "ನಾನೇಕೆ ಹೋಗಬೇಕು, ನನ್ನ ದೃಷ್ಟಿಯಲ್ಲಿ ನನ್ನ ಸಂಕಟಕ್ಕೆ ನಿವಾರಣೆಯೇ ಇಲ್ಲ!" ಎಂದು ಕಳವಳಿಸಲು "ನಿನಗೆ ಒಳ್ಳೆಯ ಹೆಂಡತಿಯಾಗಲು ತಕ್ಕ ಯೋಗ್ಯತೆಯುಳ್ಳ ಯುವತಿಯರು ಇನ್ನೂ ಅನೇಕರಿದ್ದಾರೆ" ಎಂದು ಹೇಳಿ, ಅವನನ್ನು ಸಮಾಧಾನಪಡಿಸಿದನು. ಅದಕ್ಕೆ ವಿಂಡನ್‌ನು ಮಾತನಾಡಲು ಹಿಂಜರಿಯುತ್ತ, ಡರ್ಮಟ್‌ಳ ಕಡೆ ನೋಡಿಕೊಂಡು, "ಅದನ್ನು ನಾನು ಬಲ್ಲೆ, ಆದರೆ..........." ಎಂದು ನಿಲ್ಲಿಸಿದನು. ಡರ್ಮಟ್‌ಳ ಮುಖವು ಕೆಂಪೇರಿತು.

"ಇಂದು ರಾತ್ರಿ ವಿಶ್ರಾಂತಿ ತೆಗೆದುಕೊಂಡು, ಎಲ್ಲ ಸಂಗತಿಗಳನ್ನು ನಿಧಾನವಾಗಿ ಯೋಚಿಸಿ ಮಲಗೋಣ. ಆತುರಪಡುವುದರಲ್ಲಿ ಪ್ರಯೋಜನವಿಲ್ಲ" ಎಂದು ಹೇಗನ್ ಹೇಳಿದನು. ಒಂದು ಮರದ ಕೆಳಗೆ ಸಿದ್ಧಪಡಿಸಿದ್ದ ಹಾಸಿನ ಮೇಲೆ ಡರ್ಮಟ್ ಮಲಗಿದಳು. ಹೇಗನ್ ಆಕೆಗೆ ಒಂದು ಹೊದ್ದಿಕೆಯನ್ನು ಹೊದಿಸಿದನು. ಮಿಕ್ಕ ನಾಲ್ವರೂ ಬೆಂಕಿಗೆ ಸ್ವಲ್ಪ ದೂರದಲ್ಲಿ ಸಾಲಾಗಿ ಮಲಗಿದರು.

ಇದಕ್ಕೆ ಮುಂಚೆ ನಡೆದಿದ್ದ ಸಂಭಾಷಣೆಯು ಅವರ ಮನಸ್ಸಿನ ಮೇಲೆ ಸತ್ಪರಿಣಾಮವನ್ನುಂಟುಮಾಡಿರಲೆ ಬೇಕು. ನಮಗೆ ಇರತಕ್ಕ ಕಟುತರ ಕಷ್ಟಗಳನ್ನು ಮನಸ್ಸಿಗೆ ತಂದುಕೊಂಡು, ಅವುಗಳಿಂದ ಪಾರಾಗಿ ಹರ್ಷಚಿತ್ತರಾಗಿರಬೇಕಾದರೆ ಮಾನವರಿಗೆ ಇತರರ ಕೇಡಿಗೆ ಕನಿಕರ ತೋರುವುದೇ ಸರಿಯಾದ ಮಾರ್ಗ.

ಬೆಳಕು ಹರಿಯಿತು. ಎಲ್ಲರೂ ಫಲಾಹಾರ ಮುಗಿಸಿದರು. ಕ್ರಟರ್ ಹಿಂದಿನ ರಾತ್ರಿಯ ಮಾತುಗಳನ್ನೆಲ್ಲಾ ದೀರ್ಘವಾಗಿ ಆಲೋ

ಚಿಸಿ ಒಂದು ನಿರ್ಧಾರಕ್ಕೆ ಬಂದಿದ್ದನು. ಅದೇನೆಂದರೆ: ಹೇಗನ್, ಡರ್ಮಟ್ ಮತ್ತು ಜಾರ್ನ್‌ವಿಲ್ ಊರಿಗೆ ಹಿಂದಿರುಗಿ, ತನ್ನ ಆಸ್ತಿಯನ್ನು ಹಂಚಿಕೊಳ್ಳುವುದು. ವಿಂಡನ್‌ನು ಜಾರ್ನ್‌ವಿಲ್‌ನ ಕೈಯಲ್ಲಿ ತನ್ನ ತಂದೆಗೆ ಪತ್ರವೊಂದನ್ನು ಬರೆದು ಕೊಟ್ಟು, ಆ ಹೊಗೆಯ ಯಂತ್ರದ ವಿಚಾರವನ್ನು ಸೂಚಿಸುವುದು. ತಾನೂ ತನ್ನ ಪ್ರೀತಿಪಾತ್ರ ವಿಂಡನ್‌ನೂ ಮುಂದಕ್ಕೆ ಪ್ರಯಾಣ ಮಾಡುವುದು. ಕ್ರಟರ್‌ನ ಈ ಅಭಿಪ್ರಾಯಕ್ಕೆ ಜಾರ್ನ್‌ವಿಲ್ ಮೊದಲು ತನ್ನ ಸಮ್ಮತಿಯನ್ನು ಸೂಚಿಸಿದನು. ಹೇಗನ್‌ನು ಕ್ರಟರ್ ಸಹ ಹಿಂದಿರುಗುವ ಪಕ್ಷಕ್ಕೆ ತನ್ನದೇನೂ ಪ್ರತ್ಯಭಿಪ್ರಾಯವಿಲ್ಲವೆಂದೂ, ಅಲ್ಲದೆ ಕ್ರಟರ್‌ನ ಕಾಯಿಲೆಯನ್ನು ತಾನು ಗುಣಪಡಿಸುವುದಾಗಿಯೂ ಹೇಳಿದನು. ಅದಕ್ಕೆ ಕ್ರಟರ್ ಉತ್ತರ ಕೊಡುತ್ತ "ನಾವೆಲ್ಲರೂ ವಿಂಡನ್ ಒಬ್ಬನನ್ನೆ ಬಿಟ್ಟುಹೋಗುವುದು ಮಾನ ತರುವ ಸಂಗತಿಯಲ್ಲ. ಅಲ್ಲದೆ ನನಗೆ ಇನ್ನೂ ಬದುಕಿ ಬಾಳಬೇಕೆಂಬ ಇಚ್ಛೆಯೂ ಇಲ್ಲ. ನಾನು ಮಾತ್ರ ಮುಂದೆ ಪ್ರಯಾಣ ಮಾಡುತ್ತೇನೆ" ಎಂದನು.

"ಡಾಕ್ಟರ್ ಹೇಳುವ ಮಾತಿನಲ್ಲಿ ಒಂದು ತತ್ತ್ವವಿದೆ. ಆದರೂ ......" ಎಂದು ವಿಂಡನ್ ನಿಲ್ಲಿಸಿದನು. "ಹಾಗಾದರೆ ನಿನಗೆ ಊರಿಗೆ ಹೋಗುವ ಮನಸ್ಸಿಲ್ಲವೋ?" ಎಂದು ಕ್ರಟರ್ ಕೇಳಿದನು. "ಅದು ನನಗೆ ತಿಳಿಯದು. ನಿನ್ನೆಯ ರಾತ್ರಿ ಆ ವಿಚಾರವಾಗಿ ಯೋಚಿಸಿದೆ. ಒರ್ವ ಹೆಂಗುಸಿನ ಕೋಪಕ್ಕೆ ಒಬ್ಬ ಹೆಂಗುಸಿನ ಪ್ರಾಣವು ಎಂದಿಗೂ ಸಮನಲ್ಲ ಎಂಬ ತತ್ತ್ವ ಮನಸ್ಸಿಗೆ ಬಂತು. ಮತ್ತೆ ನಾನು ......" ಎಂದು ವಿಂಡನ್ ಅರೆನಾಚಿಕೆಯಿಂದ ಉತ್ತರ ಕೊಟ್ಟನು.

ಕ್ರಟರು ವಿಂಡನ್‌ನ ಮಾತಿಗೊಪ್ಪಿ, ತನ್ನ ಅಭಿಪ್ರಾಯವನ್ನು ತಿದ್ದಿ ಸರಿಪಡಿಸಿದನು: ಡಾಕ್ಟರ್ ಹೇಗನ್ ತನ್ನ ಕಾಯಿಲೆಯನ್ನು ಗುಣಪಡಿಸುವುದು. ಅದಕ್ಕೆ ಪ್ರತಿಫಲವಾಗಿ ತಾನು ೫೦ ಸಾವಿರ ಡಾಲರುಗಳ ರೊಕ್ಕವನ್ನು ಕೊಡುವುದು. ಜಾರ್ನ್‌ವಿಲ್ಲನ ವಿಜ್ಞಾನ ಪರಿಶೋಧನೆಯ ಕಾರ್ಯದಲ್ಲಿ ತಾನೂ ಭಾಗಿಯಾಗಿ ಹಣವನ್ನೂ ತಗಿಸತಕ್ಕದ್ದು. ಇದರಿಂದ ವಿಂಡನ್ ಅವನ ತಂದೆಯನ್ನು ನೋಡಿದ ಹಾಗಾಗುವುದಲ್ಲದೆ, ಅವರಲ್ಲಿಯೆ ಇದ್ದು ಬಾಳಬಹುದು. ಕೊನೆಯದಾಗಿ ಡರ್ಮಟ್‌ಳು ಕ್ರಟರ್‌ನ ದತ್ತುಮಗಳಾಗುವುದು!

"ನನ್ನ ಅಭಿಪ್ರಾಯವು ನಿನ್ನದಕ್ಕೆ ತೀರ ವಿರುದ್ಧವಾದುದೇನೂ ಅಲ್ಲ. ಎಲ್ಲೋ ಸ್ವಲ್ಪ ವ್ಯತ್ಯಾಸ, ಅಷ್ಟೆ. ಹೂಂ, ಆದರೂ ಅದರಂತೆ ನಡೆಯಲು ಆಗುವುದಿಲ್ಲವೆಂದು ತೋರುತ್ತದೆ," ಎಂದು ವಿಂಡನ್ ಹೇಳಿದನು. ಆ ಅಭಿಪ್ರಾಯವೇನೆಂದು ಹೇಗನ್ ಕೇಳಿದನು. ಅದಕ್ಕೆ ವಿಂಡನ್ "ನನ್ನ ಯೋಚನೆಯೇನೆಂದರೆ, ಬಹುಶಃ....ಏನೂ ಇಲ್ಲ! ಅದನ್ನು ಹೇಳುವುದರಿಂದ ಏನೂ ಪ್ರಯೋಜನವಿಲ್ಲ" ಎಂದು ನಿಲ್ಲಿಸಿದನು. ಆದರೆ ಕ್ರಟರ್ ಒತ್ತಾಯಪಡಿಸಿದಮೇಲೆ, ತನ್ನ ಸೂಚನೆಯನ್ನು ವ್ಯಕ್ತಪಡಿಸಿ "ಡರ್ಮಟ್‌ಳನ್ನು ಕ್ರಟರ್ ದತ್ತು ತೆಗೆದುಕೊಳ್ಳುವುದಕ್ಕಿಂತ ಅವಳಿಗೆ ನನ್ನನ್ನು ಮದುವೆಯಾಗಲು ಒಪ್ಪಿಗೆಯಿದೆಯೆ ತಿಳಿದುಕೊಳ್ಳುವುದು ಯುಕ್ತ. ನನ್ನ ಅಭಿಪ್ರಾಯವು ನಿನಗೆ ಒಪ್ಪಿಗೆಯೆ, ಡರ್ಮಟ್?" ಎಂದು ನುಡಿದನು. ಡರ್ಮಟ್ ತಲೆಯನ್ನು ತಗ್ಗಿಸಿದಳು. ಅವಳಿಗೆ ಏನು ಹೇಳುವುದೂ ತೋಚಲಿಲ್ಲ. ತನ್ನಲ್ಲಿ ಯೋಚಿಸಿ ಹೇಳುವುದಾಗಿ ಉತ್ತರ ಕೊಟ್ಟು ಸುಮ್ಮನಾದಳು.

ಕ್ರಟರ್ ಮುಗುಳುನಗೆ ನಗುತ್ತ "ಎಂದರೆ ಅವಳಿಗೆ ಒಪ್ಪಿಗೆಯಿದೆ ಎಂದಹಾಗಾಯಿತು. ಆಕೆಯು ನನ್ನೊಡನೆ ಬರಲಿ; ಈ ವಿಚಾರವಾಗಿ ಯೋಚಿಸಲಿ. ಇದು ಎಲ್ಲರಿಗೂ ಸಮ್ಮತವಷ್ಟೆ?" ಎಂದನು. ಎಲ್ಲರೂ ಮೌನದಿಂದಲೇ ತಮ್ಮ ಒಪ್ಪಿಗೆಯನ್ನು ಸೂಚಿಸಿದರು. ಸಂತೋಷವು ಎಲ್ಲರ ಮುಖದಮೇಲೂ ಸೂಸುತ್ತಿತ್ತು.

ಡರ್ಮಟ್‌ಳು ಇದ್ದಕ್ಕಿದ್ದಂತೆಯೆ ಚಕಿತ ಧ್ವನಿಯಿಂದ ತನ್ನ ನೆತ್ತಿಯಮೇಲೆ ಹಾರುತ್ತಿದ್ದ ವಸ್ತುವೊಂದನ್ನು ತೋರಿಸುತ್ತ "ಅದೇನು?" ಎಂದಳು. ಎಲ್ಲರ ದೃಷ್ಟಿಯೂ ಅತ್ತ ಹೊರಳಿತು. ಡಾಕ್ಟರ್ ಹೇಗನ್‌ನು "ಅದು ನಮ್ಮ ಆಕಾಶಬುಟ್ಟಿಯೇ ಇದ್ದೀತು. ಹೌದು! ನಾವು ಊಟಮಾಡುತ್ತಿರುವಾಗ, ಅದು ಕಟ್ಟನ್ನು ಬಿಚ್ಚಿಕೊಂಡು ಹೊರಟುಹೋಗಿರಬೇಕು" ಎಂದನು.

"ಒಳ್ಳೆಯದೇ ಆಯಿತು. ಹೋದರ ಹೋಗಲಿ! ನಮಗೇನು? ಕ್ಯಾಪ್ಟನ್ ಕಾಗ್ಗಿಲ್ಲನಿಗೆ ನಷ್ಟವಾಗಿರುವ ಹಣವನ್ನು ನಾನು ಕೊಡುತ್ತೇನೆ. ಈಗ ನಾವು ಊರಿಗೆ ಹೋಗಿ ನಮ್ಮ ನಮ್ಮ ಮನೆಗಳನ್ನು ಸೇರುವ ಮಾರ್ಗವನ್ನು ನೋಡೋಣ!" ಎಂದು ಕ್ರಟರ್ ನಿರಾತಂಕವಾಗಿ ಹೇಳಿದನು. ವಿಂಡನ್ ಮತ್ತು ಜಾರ್ನ್‌ವಿಲ್ ಇಬ್ಬರೂ ಹೊರಟು, ಒಂದೆರಡು ಗಂಟೆಗಳು ಕಷ್ಟಪಟ್ಟು ಒಂದು ಗಾಡಿಯನ್ನು ಹುಡುಕಿ ತಂದರು. ಎರಡು ಗಂಟೆ ಪ್ರಯಾಣ ಮಾಡಿ ಎಲ್ಲರೂ ಹದಿಮೂರು ಮೈಲಿ ದೂರವಿದ್ದ ರೈಲ್ವೆ ನಿಲ್ದಾಣವನ್ನು ಸೇರಿದರು. ಕ್ರಟರ್‌ನು "ಟಿಕೇಟು"ಗಳನ್ನು ಕೊಂಡುಕೊಂಡನು. ಅಷ್ಟರಲ್ಲಿಯೆ ಹೇಗನ್ ಅಂಚೆಯ ಕಚೇರಿಗೆ ಹೋಗಿ, ತಂತಿ ವರ್ತಮಾನವೊಂದನ್ನು ಕಳುಹಿಸಿದನು:

"ಕ್ಯಾಪ್ಟನ್ ಡಬ್ಲ್ಯು. ಎ. ಕಾಗ್ಗಿಲ್ಲರ್ ಆಕಾಶಬುಟ್ಟಿಯು ತಪ್ಪಿಸಿಕೊಂಡುಹೋಯಿತು. ನಾವು ಸುಖ-ಸಂತೋಷದಿಂದಿದ್ದೇವೆ. ನಾಳೆಯ ದಿನ ಬೆಳಗ್ಗೆ ಮನೆಯನ್ನು ಸೇರುತ್ತೇವೆ."

(ಸಹಿ) ಹೇನ್ರಿ, ಓ, ಹೇಗನ್.

ಬೆಂಗಳೂರಲ್ಲಿ ನಮ್ಮ ಏಜಂಟರು
ಶ್ರೀ. ಕೆ. ಶಾಮಣ್ಣ ಬುಕ್‌ಸೇಲರ್
ಮತ್ತು ನ್ಯೂಜ್ ಏಜನ್ಸಿ ಬಳೇಪೇಟೆ

ಗುಳೇದಗುಡ್ಡದಲ್ಲಿ ನಮ್ಮ ಏಜಂಟರು
ಶ್ರೀ. ಆರ್. ಎಸ್. ಪರ್ವತೀಕರ
ನ್ಯೂಜ್ ಏಜಂಟ್

ವಿಜ್ಞಾನದ ವಿಚಿತ್ರ ಪ್ರಪಂಚ

ಶ್ರೀ. ಕೆ ಎಸ್. ಸವಣೂರ, ಎಮ್. ಎಸ್‌ಸಿ, ಧಾರವಾಡ

●

೨ ಗ್ಯಾಲಿಯೊ ಗ್ಯಾಲಿಲಿ

ಈಗ ನಾನು ತಮ್ಮೆಲ್ಲರಿಗೂ ಹೇಳಬೇಕೆಂದಿರುವ ಚರಿತ್ರೆಯು ವಿಜ್ಞಾನದ ಒಂದು ವೈಶಿಷ್ಟ್ಯದ ಮಾದರಿ ಎನ್ನಿಸುವ ವ್ಯಕ್ತಿಯದು. ಈ ವ್ಯಕ್ತಿ ಪ್ರಯೋಗವಿಜ್ಞಾನದ (ಪ್ರಯೋಗವೆ ವೈಶಿಷ್ಟ್ಯ) ಜನಕ ಎನ್ನಬಹುದು. ಯಾಕೆಂದರೆ 'ವಿಜ್ಞಾನ ವಿಷಯವು ಪ್ರಯೋಗಗಳಿಗೆ ಒಳಪಟ್ಟುದು ಇದ್ದು, ನಮ್ಮ ಸಿದ್ಧಾಂತಗಳು ಪ್ರಯೋಗದ ಪರಿಣಾಮದಿಂದ ಬಂಧಿತವಾಗಿವೆ!' ಎಂಬ ತಿಳುವಳಿಕೆಯಿಂದ ದುಡಿದವನು ಇವನು. ಇಂತಹವನ ಚರಿತ್ರೆಯನ್ನು ಓದುವಾಗ ಮುಖ್ಯವಾಗಿ ಗಮನಿಸತಕ್ಕ ವಿಷಯವೆಂದರೆ—ಇದನ್ನು ಕೇವಲ ಕತೆಯೆಂದಾಗಲಿ ಅಥವಾ ಅವನ ದಿನಚರಿಯೆಂದಾಗಲಿ ತಿಳಿಯದೆ, ಸಂಶೋಧನಗಳಿಗೆ ಸಂಬಂಧಪಟ್ಟ ಚರಿತ್ರೆಯಲ್ಲಿಯ ಮುಖ್ಯ ಅಂಶಗಳನ್ನು ತಿಳಿಸುವ ವಿವೇಚನೆ ಎಂದೇ ತಿಳಿಯಬೇಕು. ಈ ತೆರದ ವಿವೇಚನೆಯು ನಮ್ಮ ಶೋಧಕ ಬುದ್ಧಿಗೆ ಮಾರ್ಗದರ್ಶಕವಾಗುವುದರಿಂದ ಮತ್ತು ಇಂತಹ ಚರಿತ್ರೆಯು ಅಂದಿನ ದೇಶ-ಕಾಲಗಳಿಂದ ಬಂಧಿತವಾಗಿರುವುದರಿಂದ, 'ಪ್ರಪಂಚದಲ್ಲಿದ್ದು ಪರಮಾರ್ಥವನ್ನು ಸಾಧಿಸು' ಎಂದು ಹೇಳುವಂತೆ, ಈ ಜನರು ಎಂತಹ ಪರಿಸ್ಥಿತಿಯಲ್ಲಿ ಎಷ್ಟು ಮಹತ್ತ್ವದ ಶೋಧಗಳನ್ನು ಮಾಡಿದರು ಎಂಬುದು ತಿಳಿದಲ್ಲಿ, ಈ ಚರಿತ್ರೆಗಳು ನಮ್ಮ ನಮ್ಮ ರೀತಿಯಲ್ಲಿ ನಮಗೆ ಉತ್ಸಾಹಜನಕವಾಗುವುವೆಂದು ಹಾರಯಿಸಿದ್ದೇನೆ.

ಈ ನಮ್ಮ ಚರಿತ್ರನಾಯಕನಾದ ಗ್ಯಾಲಿಲಿಯೋ ಇವನು ಇಟಲಿ ದೇಶದೊಳಗಿನ ಪೀಸಾ ಎಂಬ ಊರಲ್ಲಿ ೧೫೬೪ನೆಯ ಇಸ್ವಿಯಲ್ಲಿ ಜನಿಸಿದನು. ಈತನು ಕುಲೀನ ಮನೆತನದಲ್ಲಿ ಹುಟ್ಟಿದ್ದನಾದರೂ, ಮನೆತನದ ಪರಿಸ್ಥಿತಿಯು ಮಾತ್ರ ಸಾಮಾನ್ಯವೇ ಇದ್ದುದರಿಂದ, ಇವನನ್ನು ಯಾವುದಾದರೊಂದು ಲಾಭದಾಯಕವಾದ ಉದ್ಯೋಗದಲ್ಲಿ ತೊಡಗಿಸಬೇಕೆಂದು ಇವನ ತಂದೆಯು ಮೊದಲಿನಿಂದಲೂ ಆಶಿಸಿದ್ದನು. ಇದೇ ಉದ್ದೇಶದಿಂದಲೆ ಇವನನ್ನು ಉರಿವೆಯ ವ್ಯಾಪಾರದಲ್ಲಿ ತೊಡಗಿಸಬೇಕೆಂದು ಮನಸ್ಸು ಮಾಡಿದನು. ತನ್ನ ಮಗನು ವೈಜ್ಞಾನಿಕನಾಗಿ ಜೀವನವನ್ನು ಸಾಗಿಸುವುದು ತಂದೆಯ ಮನಸ್ಸಿಗೆ ಹಿಡಿಯಲಿಲ್ಲ. ಆದರೆ ದೈವಗತಿಯು ಮಾತ್ರ ಮಗನಿಗೆ ಅನುಕೂಲವಾಗಿದ್ದಿತೇ ಹೊರತು ತಂದೆಗಲ್ಲ. ಹೆಚ್ಚು ಲಾಭದಾಯಕವಾದ ವೈದ್ಯಕವಿದ್ಯೆಯನ್ನು ಕಲಿಯಲೆಂದು ತಂದೆಯು ಇಚ್ಛಿಸಿದುದರಿಂದ, ೧೭ ವರ್ಷದ ಯುವಕನಾದ ಗ್ಯಾಲಿಲಿಯೋನು ವೈದ್ಯಕೀಯ ವಿಷಯದಲ್ಲಿ ಪದವಿಯನ್ನು ದೊರಕಿಸಲೋಸುಗ ಪೀಸ ವಿಶ್ವವಿದ್ಯಾನಿಲಯವನ್ನು ಪ್ರವೇಶಿಸಿದನು.

ಇಲ್ಲಿ ಕೂಡ ದೈವಗತಿಯು ತಂದೆಯ ಇಚ್ಛೆಯನ್ನು ಪ್ರತಿಭಟಿಸಿತು. ಗ್ಯಾಲಿಲಿಯೋನು ಗಣಿತಶಾಸ್ತ್ರದಲ್ಲಿ ಗತಿಯಿಲ್ಲದವನಿದ್ದರು ಇದಕ್ಕೆ ಬೇಕಿರಬಹುದಾದ ಪ್ರತಿಭೆಯು ಮಾತ್ರ ಇವನಲ್ಲಿ ತುಂಬಿ ತುಳುಕುತ್ತಿತ್ತು. ಅದರಂತೆಯೇ ಯಾಂತ್ರಿಕ ಕೌಶಲ್ಯಕ್ಕಾದರೂ ಇವನಲ್ಲಿ ಕೊರತೆಯಿರಲಿಲ್ಲ. ಇವನು ಒಂದು ದಿನ ಪ್ರಾರ್ಥನೆಗೆಂದು ಚರ್ಚಿಗೆ ಹೋದಾಗ ಇವನ ಮನಸ್ಸು ಪ್ರಾರ್ಥನೆಯೆಡೆಗೆ ಆಕರ್ಷಿಸಲ್ಪಡದೆ ಮೇಲೆಯೇ ತೂಗುಹಾಕಲ್ಪಟ್ಟ ದೀಪದೆಡೆಗೆ ಎಳೆಯಲ್ಪಟ್ಟಿತು. ಅದರ ಹೊಯ್ದಾಟದಲ್ಲಿಯ ಕ್ರಮಬದ್ಧತೆಯು ಇವನ ಮನಸ್ಸನ್ನೇ ಸೆಳೆಯಿತು. ಅದರ ಆಂದೋಲನದ[೧] ವೇಳೆಯು ಆಂದೋಲನದ ಅಂತರದ[೨] ಮೇಲೆ ಅವಲಂಬಿಸಿರದೆ, ಈ ವೇಳೆಯು ಯಾವ ಅಂತರಕ್ಕಾದರೂ ಅಷ್ಟೇ ಇರಬಹುದೆಂಬ ಕಲ್ಪನೆಯು ಇವನ ಶೋಧಕಬುದ್ಧಿಗೆ ಹೊಳೆಯಿತು. ಹೀಗೆ ಎನಿಸಿದರೂ ಇದು ಪ್ರಯೋಗದಿಂದ ಸಿದ್ಧವಾದದ್ದಲ್ಲವಾದದರಿಂದ ಇದನ್ನು ಪ್ರಮಾಣಿಸಿಯೇ ನೋಡಬೇಕೆಂದು ಯೋಚಿಸಿ ಹೀಗೆ ಮಾಡಲು ವೇಳೆಯನ್ನು ನೋಡುವ ಸಾಧನಗಳು ಅಂದು ಉಪಲಬ್ಧವಿಲ್ಲದುದರಿಂದ, ತನ್ನ ನಾಡಿಗಳ ಗತಿಯನ್ನೇ ವೇಳೆಯನ್ನು ಅಳೆಯುವ ಸಾಧನವೆಂದು ಉಪಯೋಗಿಸಿದನು. ಆ ಮೇಲೆ ಮನೆಗೆ ಬಂದೊಡನೆಯೆ ಒಂದು ಲೋಹದ ಗುಂಡನ್ನು ದಾರದಿಂದ ತೂಗಬಿಟ್ಟು ತನ್ನ ನಾಡಿಗಳ ಗತಿಯನ್ನು ವೇಳೆಯನ್ನು ಅಳೆಯುವ ಸಾಧನವೆಂದು ಉಪಯೋಗಿಸಿ, ಪ್ರಯೋಗವನ್ನೇ ನಡೆಯಿಸಿದನು. ಇದರಿಂದ ಅವನಿಗೆ ಕಂಡು ಬಂದುದೇನೆಂದರೆ :— 'ದಾರದ ಉದ್ದಳತೆಯು ಹೆಚ್ಚಿದಂತೆ ಪೂರ್ಣ ಆಂದೋಲನದ ವೇಳೆಯು ಹೆಚ್ಚುವುದು ಮತ್ತು ಅದೇ ಉದ್ದದ ದಾರವಿದ್ದಲ್ಲಿ, ಈ ವೇಳೆಯು ಯಾವ ಅಂತರಕ್ಕಾದರೂ ಅಷ್ಟೇ ಇರುವುದು' ಇತ್ಯಾದಿ. ಈ ತತ್ತ್ವವೇ ಇಂದಿನ ಗಡಿಯಾರಗಳಲ್ಲಿ ಲಂಬಕವನ್ನು ಉಪಯೋಗಿಸುವದರಲ್ಲಿ ಪರಿಣಮಿಸಿದೆ. ಅದಲ್ಲದೆ ಅಂದು ಮಾತ್ರ ಈ ಶೋಧ ಇಂತಹ ಸಾಧನೆಗೆ ಉಪಯೋಗಿಸಲ್ಪಡದೆ ರೋಗಿಗಳ ನಾಡಿಗಳ ಗತಿಯನ್ನು ಪರೀಕ್ಷಿಸುವುದಕ್ಕೋಸ್ಕರ

೧. ದಾರದಿಂದ ತೂಗುಹಾಕಲ್ಪಟ್ಟ ಗುಂಡು ಓಲಾಡುವಾಗ ಪುನರಾವೃತ್ತಿಯಾಗುವ ವರೆಗೆ ನಡೆಯುವ ಚಲನೆಗೆ ಆಂದೋಲನವೆಂದು ಹೆಸರು.
೨. ಸ್ಥಿರವಾಗಿ ವಿರಮಿಸಿದ ಗುಂಡು ಓಲಾಡದಿರುವಾಗಿನ ಸ್ಥಳದಿಂದ ಒಂದು ಕಡೆಗೆ ಎಷ್ಟು ದೂರ ಚಲಿಸುವದೋ ಆ ದೂರಕ್ಕೆ ಅಂತರವೆಂದು ಹೆಸರು.

ಪಲ್ಸಿಲೋಜಿಯಾ' ಎಂಬ ಹೆಸರಿನ ಉಪಕರಣಕ್ಕಾಗಿ ಅನುಕೂಲತೆ ಮಾಡಿಕೊಟ್ಟಿತು.

ಗ್ಯಾಲಿಲಿಯೋನು ತನ್ನ ವೈದ್ಯಕೀಯ ಅಭ್ಯಾಸವನ್ನು ತ್ಯಜಿಸಲು ಒಂದು ಆಕಸ್ಮಿಕ ಕಾರಣವು ಒದಗಿತು. ಈ ಕಾರಣವೆಂದರೆ ಈತನು ಆಕಸ್ಮಿಕವಾಗಿ ತಮ್ಮ ಮನೆತನದ ಒಬ್ಬ ಮಿತ್ರನ ರೇಖಾಗಣಿತ ವಿಷಯದ ಪಾಠವನ್ನು ಕೇಳಿದುದು. ಈ ಪಾಠವು ಇವನಿಗೆ ಮುಂದೆ ಇವನು ಅನುಸರಿಸಬೇಕಾದ ಹಾದಿಯನ್ನು ತೋರಿಸಲು ಕಾರಣವಾಯಿತು. ರೇಖಾಗಣಿತವು ಇವನ ಮನಸ್ಸನ್ನೇ ಆಕರ್ಷಿಸಿತು ಮತ್ತು ಆ ಮಿತ್ರನಿಗೆ ಈ ವಿಷಯದಲ್ಲಿ ಪರಿಚಯ ಮಾಡಿಕೊಡಲು ವಿಜ್ಞಾಪಿಸಿದುದೂ ಆಯಿತು. ಇದೆಲ್ಲದರ ಪರಿಣಾಮವೆಂದರೆ ತನ್ನ ವೈದ್ಯಕೀಯ ಅಭ್ಯಾಸವನ್ನು ತ್ಯಜಿಸಬೇಕಾದುದು.

ಈಗ ಮಾತ್ರ ಗ್ಯಾಲಿಲಿಯೋನು ಆಯುಷ್ಯವನ್ನು ಗಣಿತಶಾಸ್ತ್ರ ಮತ್ತು ಭೌತಿಕಶಾಸ್ತ್ರಕ್ಕೆ ಮೀಸಲಾಗಿರಿಸಿದನು ಮತ್ತು ಹಿಂದಿನ ಕಾಲದಲ್ಲಿ ಪ್ರಸಿದ್ಧರೆನಿಸಿದ ಆರ್ಕಿಮಿಡಿಸ್ ಮೊದಲಾದವರ ಕೃತಿಗಳನ್ನು ಸಂಪೂರ್ಣವಾಗಿ ಮನನ ಮಾಡಿದನು. ಮುಂದೆ ಇವನು ಬರೆದ ನಿಬಂಧಗಳ ಮೂಲಕ ಇವನ ಪ್ರಸಿದ್ಧಿಯು ರಾಜಮನೆತನದ ವರೆಗೆ ಮುಟ್ಟಿ, ಅವರ ಆಶ್ರಯದಿಂದಲೇ—ತನ್ನ ೨೬ನೆಯ ವಯಸ್ಸಿನಲ್ಲಿ ಪೀಸಾ ವಿಶ್ವವಿದ್ಯಾನಿಲಯದಲ್ಲಿ ಗಣಿತಶಾಸ್ತ್ರದ ಪ್ರಾಧ್ಯಾಪಕನೆಂದು ನಿಯಮಿಸಲ್ಪಟ್ಟನು.

ಇವನ ಕೆಲಸದ ಮಹತ್ತ್ವವನ್ನು ತಿಳಿಯಲು ಅಂದಿನ ದೇಶದಲ್ಲಿಯ ಪರಿಸ್ಥಿತಿಯನ್ನು ಗಮನಿಸುವುದು ಅವಶ್ಯ. ಭೌತಶಾಸ್ತ್ರದಲ್ಲಿ ಆರಿಸ್ಟಾಟಲನ* ಪ್ರತಿಭೆಯು ಇನ್ನೂ ಅತೀವ ಜಾಗ್ರತವಿದ್ದು, ಅವನು ಸಾರಿದ ತತ್ತ್ವಗಳಿಗೆ ವಿರೋಧವಾಗಿ ಒಂದು ಶಬ್ದವನ್ನಾದರೂ ಆಡುವುದೆಂದರೆ ಧಾರ್ಷ್ಟ್ಯದ ಮಾತಾಗಿತ್ತು. ಆದರೆ ವಿಚಾರಸ್ವಾತಂತ್ರ್ಯವು ಇವನಲ್ಲಿ ಕುದಿಯುತ್ತಿತ್ತು; ಆದಕ್ಕಾಗಿ ಇವನು ಕೆಲಸ ಮಾಡುವ ರೀತಿ ಮಾತ್ರ ಬೇರೆ ತೆರದ್ದಾಯಿತು. ಪ್ರಯೋಗ ಮಾಡುವುದರಲ್ಲಿ ಕುಶಲತೆ, ವಸ್ತುಸ್ಥಿತಿಯನ್ನು ಇದ್ದಂತೆಯೆ ಬರೆದಿಡುವ ಗುಣ ಮತ್ತು ಯಾವ ಪರಿಣಾಮವನ್ನು ತನ್ನ ಪ್ರಯೋಗಶಾಲೆಯು ಅಸತ್ಯವೆಂದು ಸಾರಿತೋ ಅದನ್ನು—ತನ್ನ ಮನಸ್ಸಿಗೆ ವಿರುದ್ಧವಾದರೂ—ಅಸತ್ಯವೇ ಎಂದು ಎದೆತಟ್ಟಿ ಹೇಳುವ ಗುಣಗಳು ಇವನಲ್ಲಿ ಇದ್ದುವೆಂದ ಮೇಲೆ, ಇವನ ಕೆಲಸದ ರೀತಿಯೇ ವೈಶಿಷ್ಟ್ಯಯುತವಾದುದೆನ್ನಲು ಅಡ್ಡಿಯೇನು?

ಇವನ ಸಹೋದ್ಯೋಗಿಗಳು ಮಾತ್ರ ಇಂತಹ ಪ್ರಯೋಗ ಮೊದಲಾದುವುಗಳನ್ನು ಏನೂ ಅರಿಯರು. 'ಹೀಗೆ ಮಾಡುವುದೆಂದರೆ ಅರಿಸ್ಟಾಟಲನ ತತ್ತ್ವವನ್ನು ಮತ್ತು ಅದರ ಪವಿತ್ರತೆಯನ್ನು ದೂಷಿಸಿದಂತೆ' ಎಂಬ ಭಾವನೆಯುಳ್ಳವರು. ಯಾವುದೊಂದು ವಿಷಯದ ಸತ್ಯಾಸತ್ಯತೆಯನ್ನು ಕುರಿತು ವಾದವಿವಾದದಲ್ಲಿ, ಇಂತಹ ವಿಷಯವನ್ನು ಪ್ರಮಾಣಿಸಿ ನೋಡುವುದು ಅಂದಿನ ಪರಿಪಾಠವಾಗಿರಲಿಲ್ಲ. ಕೇವಲ ಅರಿಸ್ಟಾಟಲನ ಪುಸ್ತಕವನ್ನು ತಿರುವಿ, 'ಈ ವಿಷಯವು ಅದರಲ್ಲಿ ಪ್ರತಿಪಾದಿತವೋ ಹೇಗೆ?' ಎನ್ನುವುದನ್ನು ನೋಡುವುದು, ಮತ್ತು ಅದನ್ನೇ ಸತ್ಯವೆಂದು ಗ್ರಹಿಸುವುದು. ಹೀಗೆ ಅರಿಸ್ಟಾಟಲನ ಪುಸ್ತಕಗಳನ್ನೆಲ್ಲ ತಿರುವಿಹಾಕಿ ಸಿದ್ಧಾಂತವನ್ನು ಪ್ರತಿಪಾದಿಸುವವನು ಪಂಡಿತನೆನಿಸುತ್ತಿದ್ದನಲ್ಲದೆ, ಇಂತಹ ಮನುಷ್ಯನೇ ಈ ವಿಷಯಗಳಲ್ಲಿ ಅಂತಿಮ ನಿರ್ಣಯವನ್ನು ಕೊಡಲು ಯೋಗ್ಯನೆಂಬ ಕಲ್ಪನೆಯು ಅತ್ಯಂತ ಬಲವಾಗಿತ್ತು. ಅಂದಿನ ಜನರಿಗೆ ಹಿಂದಿನವರು ಹೇಳಿದುದಕ್ಕಿಂತ ಹೆಚ್ಚಿನದೇನೂ ಬೇಕಿರಲಿಲ್ಲ. 'ಹಿಂದಿನವರು ಹೇಳಿದ್ದು ದೋಷಹೀನ ಮತ್ತು ಇಂದಿನವರು ಹೇಳಿದ್ದು ದೋಷಪೂರ್ಣ' ಎಂದು ಅವರ ಮತ. ಪ್ರಗತಿಯು ಅನವಶ್ಯವಾಗಿದ್ದು ಅದು ಬೇಕಿರಲಿಲ್ಲ. ಎಲ್ಲ ವಿಷಯಗಳಲ್ಲಿ ಚರ್ಚಿನ (Church) ಸಿದ್ಧಾಂತವೇ ಗ್ರಹಿಸಲು ಯೋಗ್ಯ ಮತ್ತು ಅದು ಗ್ರಹಿಸಲೇ ಬೇಕಾದುದು. ಹೀಗೆ ಮಾಡದಿದ್ದವನು ನಾಸ್ತಿಕ. ಮೇಲಾಗಿ ಅರಿಸ್ಟಾಟಲನ ತತ್ತ್ವ ಮತ್ತು ಬ್ರಹ್ಮವಿದ್ಯೆ ಇವೆರಡೂ ಒಂದರಲ್ಲೊಂದು ತಳುಕು ಹಾಕಿಕೊಂಡು ಪ್ರತಿಪಾದಿಸಲ್ಪಡುತ್ತಿದ್ದುವಾದುದರಿಂದ, ಅಂದಿನ ಪರಿಸ್ಥಿತಿಯು ವಿಜ್ಞಾನದ ಬೆಳವಣಿಗೆಗೆ ಅತ್ಯಂತ ವಿರೋಧವಿತ್ತೆನ್ನಲು ಏನೂ ಅಡ್ಡಿ ಇಲ್ಲ. ಇಂತಹ ಪರಿಸ್ಥಿತಿಯಲ್ಲಿ ಮುಂದುವರಿಯುವುದೆಂದರೆ—ನೂರಾರು ವರ್ಷಗಳ ಬಂಧನವನ್ನು ಕಡಿಯುವುದು. ಈ ತೆರದ ಪರಿಸ್ಥಿತಿಯು ಕೆಲವಂಶದಲ್ಲಿ ಇಂದಿಗಾದರೂ ಇದೆ. ಆದರೆ ಇಂದಿನ ಪರಿಸ್ಥಿತಿಯಲ್ಲಿ ಮುಂದುವರಿಯಲು ಪ್ರಯತ್ನಿಸುವವನಿಗಿಂತ, ಹಿಂದಿನ ಅಸಹಾಯ ಪರಿಸ್ಥಿತಿಯಲ್ಲಿ ಯುದ್ಧರಂಗಕ್ಕೆ ಇಳಿದ ನಮ್ಮ ಚರಿತ್ರನಾಯಕನು ನಮ್ಮೆಲ್ಲರ ಆದರಕ್ಕೆ ಪಾತ್ರನು.

ಉದಾಹರಣೆಗೆಂದರೆ:— ತೂಕದಲ್ಲಿ ಹೆಚ್ಚು-ಕಡಿಮೆ ಇದ್ದ ವಸ್ತುಗಳನ್ನು ಮೇಲಿನಿಂದ ಕೆಳಗೆ ಬೀಳಲುಕೊಟ್ಟದ್ದಾದರೆ, 'ಹೆಚ್ಚು ತೂಕವಿದ್ದುದು ಕಡಿಮೆ ತೂಕದ ವಸ್ತುವಿಗಿಂತ ಬೇಗನೆ ನೆಲವನ್ನು ಮುಟ್ಟುವುದು' ಎಂಬ ಸಿದ್ಧಾಂತವನ್ನು ಅರಿಸ್ಟಾಟಲನು ಪ್ರತಿಪಾದಿಸಿದ್ದನು. ಎಂದರೆ, ಒಂದೇ ಎತ್ತರದಿಂದ ೫ ಪೌಂಡು ಮತ್ತು ೧ ಪೌಂಡಿನ ಭಾರದ ಎರಡು ಗುಂಡುಗಳನ್ನು ಕೆಳಗೆ ಚೆಲ್ಲಿದ್ದಾದರೆ ೫ ಪೌಂಡಿನ ಭಾರವು ೧ ಪೌಂಡಿನ ಭಾರಕ್ಕಿಂತ ೫ ಪಟ್ಟು ವೇಗದಿಂದ ಬೀಳುವುದು. ಆದರೆ ಇಂತಹ ಸುಲಭ ಪ್ರಯೋಗವನ್ನು ಮಾಡಿ, ಅರಿಸ್ಟಾಟಲನ ಸಿದ್ಧಾಂತವನ್ನು ಒರೆಗೆ ಹಚ್ಚುವ ಸಾಹಸವನ್ನು ಮಾತ್ರ ಈ ತನಕ ಯಾರೂ ಮಾಡಿರಲಿಲ್ಲ. ಇಂತಹ ಪ್ರಯೋಗವು ಮಾತ್ರ ವಿಜ್ಞಾನದ ಬೆಳವಣಿಗೆಯ ಇತಿಹಾಸದಲ್ಲಿ ಪ್ರಮುಖ ಕಾರ್ಯಸಿದ್ಧಿಯೆಂದೇ ಹೇಳಬಹುದು. ಇನ್ನು ಗ್ಯಾಲಿಲಿಯೋನ ವಿಷಯವಾಗಿ ಹೇಳುವುದಾದರೆ—ಅಷ್ಟೇ ಎತ್ತರದಿಂದ ಬೀಳುವ ಪದಾರ್ಥಗಳ ವೇಗವು ಅವುಗಳ ತೂಕವನ್ನು ಅವಲಂಬಿಸಿರುವುದಿಲ್ಲವೆನ್ನುವುದು. ಎಂದರೆ ಮೇಲೆ ಉದಹರಿಸಿದ ಎರಡೂ ಗುಂಡುಗಳು ಒಂದೇ ವೇಳೆಗೆ ನೆಲವನ್ನು ಮುಟ್ಟುವವೆಂದು. ಇದು ಅರಿಸ್ಟಾಟಲನ ಸಿದ್ಧಾಂತಕ್ಕೆ ವಿರುದ್ಧವಾದುದು ಇದ್ದುದರಿಂದ ಇದಕ್ಕೆ ಬೆಂಬಲವು ಸಿಗದೆ, ಇವನ ದ್ವೇಷಿಗಳ ಸಂಖ್ಯೆಯು ಮಾತ್ರ ಬೆಳೆಯುತ್ತಿತ್ತು. ಆದರೆ ಗ್ಯಾಲಿಲಿಯೋನು ಇದಕ್ಕೆ ಸೊಪ್ಪು ಹಾಕಲಿಲ್ಲ. ಈ ವಿಷಯದಲ್ಲಿ ತನ್ನ ಸಿದ್ಧಾಂತವೇ ನಿಜವೆಂದು ಅವನಿಗೆ ಗೊತ್ತಿತ್ತು ಮತ್ತು ಈ ಸತ್ಯತೆಯನ್ನು ಎಲ್ಲರಿಗೂ ತೋರಿಸುವ ದೃಢನಿಶ್ಚಯದಿಂದ ಎಲ್ಲರನ್ನೂ ಕೂಡಿಸಿ ಪೀಸಾದಲ್ಲಿಯ ಬಾಗಿದ ಗೋಪುರ

* ಪುರಾತನ ಕಾಲದ ಗ್ರೀಕ್ ತತ್ತ್ವಜ್ಞಾನಿ

ವನ್ನೇ ಏರಿ, ಅಲ್ಲಿಂದ ೧೦೦ ಪೌಂಡಿನ ಮತ್ತು ೧ ಪೌಂಡಿನ ಎರಡು ಗುಂಡುಗಳನ್ನು ಏಕಕಾಲಕ್ಕೇ ಕೆಳಗೆ ಬೀಳಗೊಟ್ಟನು. ಎರಡೂ ಗುಂಡುಗಳು ಕೂಡಿಯೇ ಚಲಿಸಿದುವು ಮತ್ತು ಒಂದೆ ವೇಳೆಗೇ ನೆಲವನ್ನಾದರೂ ಮುಟ್ಟಿದುವು. ಈ ಗುಂಡುಗಳು ನೆಲವನ್ನು ಮುಟ್ಟಿದ ಕ್ಷಣವು ಜಗತ್ತಿನ ಇತಿಹಾಸದಲ್ಲಿಯೆ ಅಮೌಲ್ಯವಾದ ಕ್ಷಣವೆಂದು ಹೇಳಬಹುದು. ಆದರೆ ಅಂದಿನ ಜನರ ಅವಿವೇಕದಲ್ಲಿ ಜನಿಸಿದ ದುರಭಿಮಾನವು ಮಾತ್ರ, ಇಂದ್ರಿಯಗೋಚರ ಪ್ರಮಾಣವನ್ನು ಕೂಡ ದುರ್ಲಕ್ಷ್ಯಮಾಡುವಂತಹದಿತ್ತು. ಇಷ್ಟೇ ಅಲ್ಲದೆ, ಅಲ್ಲಿ ನೆರೆದ ಅರಿಸ್ಟಾಟಲನ ಅಭಿಮಾನಿಗಳು ಮನೆಗೆ ಹೋದದ್ದೇ ತಡ, ಅವನ ಪುಸ್ತಕವನ್ನೇ ತೆರೆದು 'ಜಡಪದಾರ್ಥವೇ ತೀವ್ರವಾಗಿ ಚಲಿಸುವುದು' ಎಂದು ಅವನು ಬರೆದಿಟ್ಟುದನ್ನು ನೋಡಿದರು. ಅವರು ಮತ್ತು ಹೇಳಿದುದೆಂದರೆ:—'ಅರಿಸ್ಟಾಟಲನ ಅಭಿಪ್ರಾಯವು ಚರ್ಚೆಗೆ ಸಮ್ಮತವಾದುದಲ್ಲವೇ?' ಎಂದು. ಇದೆಲ್ಲದರ ಪರಿಣಾಮವೆಂದರೆ— ಈ ಎಲ್ಲ ಜನರೂ ಒಳಗೊಳಗೆ ಗ್ಯಾಲಿಲಿಯೋನಿಗೆ ಅಂಜಿದಂತಿದ್ದರೂ ತೋರಿಕೆಯಲ್ಲಿ ಅವನನ್ನು ದ್ವೇಷಿಸತೊಡಗಿದರು.

ಈ ದ್ವೇಷದ ಜ್ವಾಲೆಯು ಸ್ವಲ್ಪಕಾಲದ ಮೇಲೆ ಕ್ರಮೇಣ ಆರುವುದರಲ್ಲಿತ್ತು; ಆದರೆ ಬೇರೊಂದು ಕಾರಣವು ಇದನ್ನು ತೀವ್ರವಾಗಿ ಪ್ರಜ್ವಲಿಸುವಂತೆ ಮಾಡಿತು. ರಾಜಮನೆತನಕ್ಕೆ ದೂರದ ಸಂಬಂಧಿಕನೊಬ್ಬನು ತಯಾರಿಸಿದ ಒಂದು ಯಂತ್ರದ ವಿಷಯವಾಗಿ ಗ್ಯಾಲಿಲಿಯೋನ ಅಭಿಪ್ರಾಯವನ್ನು ಕೇಳಲಾಯಿತು. ಈತನು ಅತ್ಯಂತ ನಿಸ್ಪೃಹಿಯಾಗಿ ಇದ್ದುದರಿಂದ—ಈ ಯಂತ್ರವು ಏನೂ ಕೆಲಸಕ್ಕೆ ಬಾರದ್ದೆಂದು ತನ್ನ ಅಭಿಪ್ರಾಯವನ್ನು ವ್ಯಕ್ತಮಾಡಿದನು. ಮುಂದೆ ಈತನ ಅಭಿಪ್ರಾಯವು ಯೋಗ್ಯವಿತ್ತೆಂಬುದು ನಿಜವಾಗಿ ಕಂಡುಬಂದರೂ ಆಗುವುದೆಲ್ಲ ಆಗಿಯೇ ಹೋಯಿತು. ಕೋಪೋದ್ರಿಕ್ತನಾದ ರಾಜಮನೆತನದ ಸಂಶೋಧಕನು, ತನ್ನ ವರ್ಚಸ್ಸಿನಿಂದ ಗ್ಯಾಲಿಲಿಯೋನು ರಾಜದರ್ಬಾರದಲ್ಲಿ ವರ್ಚಸ್ಸನ್ನು ಕಳೆದುಕೊಳ್ಳುವಂತೆ ಮಾಡಿದನು; ಇದರ ಪರಿಣಾಮವಾಗಿ ಸ್ವಾಭಿಮಾನಿಯಾದ ಗ್ಯಾಲಿಲಿಯೋನು ತನ್ನ ಕೆಲಸಕ್ಕೇ ಶರಣುಹೊಡೆಯಬೇಕಾಯಿತು. ಇದೇ ವೇಳೆಗೆ ಅವನ ತಂದೆಯು ತೀರಿದುದರಿಂದ 'ಮತ್ತು ಮನೆತನದ ಜವಾಬ್ದಾರಿಯು ಮೇಲೆ ಬಿದ್ದುದರಿಂದ, ಇವನು ೧೫೯೨ನೆಯ ಇಸ್ವಿಯಲ್ಲಿ, ವ್ಹೆನಿಸ್ ನಗರದ ವಿಶ್ವವಿದ್ಯಾಲಯದ ವ್ಯವಸ್ಥಾಪಕ ಮಂಡಲದವರು ಕೊಡಮಾಡಿದ ಪ್ಯಾಡುವಾ ವಿಶ್ವವಿದ್ಯಾಲಯದಲ್ಲಿಯ ಗಣಿತಶಾಸ್ತ್ರದ ಪ್ರಾಧ್ಯಾಪಕತ್ವವನ್ನು ಅಂಗೀಕರಿಸಿದನು.

(ಮುಂದುವರಿಯುವುದು)

ವಿ. ಸೂ:— ತಲೆಕಟ್ಟಿನಲ್ಲಿ 'ಗ್ಯಾಲಿಯೊ,' ಎಂದಿದ್ದುದನ್ನು 'ಗ್ಯಾಲಿಲಿಯೊ,' ಎಂದು ತಿದ್ದಿಕೊಳ್ಳಬೇಕು. ಸಂ.

ಗ್ಯಾಲಿಲಿಯೋನ ಚರಿತ್ರೆಯು ಕೆಳಗೆ ಕಾಣಿಸಿದ ಪುಸ್ತಕಗಳ ಆಧಾರದಿಂದ ಬರೆದುದು ಇದೆ.

1. Pioneers of Science—Oliver Lodge.
2. Heroes of the Scientific World—Gibson.
3. Makers of Science—Hart.
4. Great Men of Science—Lenard.

ಪುಸ್ತಕ ವಿಮರ್ಶೆ

ಚಕಮಕಿ: (ಕಥಾ ಸಂಕಲನ) ಶ್ರೀ. ಬೇಂದ್ರೆ ಲಕ್ಷ್ಮಣರಾಯರು. ಧಾರವಾಡ. ಪ್ರತಿಭಾ ಗ್ರಂಥಮಾಲೆಯ ಏಳನೆಯ ಕಿರಣ.

ಚಕಮಕಿಯಿಂದ ಕಿಡಿ ಹುಟ್ಟುವುದು. ಕಿಡಿಯಿಂದ ಜ್ವಾಲೆ. ಲಕ್ಷ್ಮಣರಾಯರ ಕಥಾಸಂಕಲನವಾದ ಈ 'ಚಕಮಕಿ'ಯನ್ನು ಓದಿದರೆ ಅವರಲ್ಲಿ ಆಳವಾಗಿ ಅಡಗಿದ್ದ ಮಹಾಜ್ವಾಲೆಯ ಅರಿವು ಆಗದಿರದು. ನೋಡಲು ಚಕಮಕಿಯ ಕಲ್ಲುಗಳು ಕಳೆಯಿಲ್ಲದುವುಗಳಾಗಿ ಕಾಣುವುವು; ಕಡೆದು ನೋಡಿದಾಗ 'ಕಿಡಿಯು' ಕಾಣುವುದು. ಲಕ್ಷ್ಮಣರಾಯರು ಕತೆಗಾರರ ಯಾದಿಯಲ್ಲಿ ಹೊಸಬರೆಂಬಂತೆ ಕಾಣುವರು. ಅವರ ಹೆಸರಿಗೆ ಇನ್ನೂ ಹಳಬರ ಹಿರಿಮೆ ಅಂಟಿಲ್ಲ. ಅವರ ಕತೆಗಳನ್ನು ಓದಿ ರಸ ಸವಿದಾಗ 'ಇವರ ಕತೆಗಳು ಅದಾವ ಹಿರಿಯ ಕತೆಗಾರರ ಕತೆಗಳಿಗಿಂತ ಕಡಮೆಯಾಗಲಾರವು' ಎಂದೆನಿಸುವುದು.

ಕತೆಗಳನ್ನೋದುತ್ತಿರುವಾಗ ಆಂಗ್ಲ ಸಾಹಿತ್ಯದಲ್ಲಿಯ ಕತೆಗಳ ಅರಿವು ಉಂಟಾಗುತ್ತದೆ. ತಂತ್ರದಲ್ಲಿಯಂತೂ ಅವು ಅನೇಕ ಆಂಗ್ಲ ಸಾಹಿತ್ಯ ಕತೆಗಳ ನೆಳಲು ಎಂಬಂತೆನ್ನಿಸುವುದು. ಸಂಭಾಷಣೆಯ ರೀತಿ ಮನೋವಿಶ್ಲೇಷಣೆಯ ರೀತಿಯನ್ನು ತೂಗುವುದರಿಂದಂತೂ ಪಾಶ್ಚಾತ್ಯ ಸಾಹಿತ್ಯದ ಪ್ರಭಾವವು ಹೆಚ್ಚು ಹೆಚ್ಚು ಸ್ಫುಟವಾಗುವುದು. ಅನೇಕ ಬಗೆಯ ಅನೇಕ ಭಾಷೆಯ ಸಾಹಿತ್ಯ ಓದುವವನು, ಈ ಬಗೆಯ ಪ್ರಭಾವಕ್ಕೆ ಸಿಲುಕುವುದು ಅನಿವಾರ್ಯ. ಅದೇನು ಕುಂದಲ್ಲ. ಯಾರದೆ ಇರಲಿ; ಅವರ ರೀತಿಯನ್ನು ಮೈಗೂಡಿಸಿಕೊಂಡು ತನ್ನದನ್ನಾಗಿ ಮಾಡಿಕೊಳ್ಳಬಲ್ಲವನೆ ಒಳ್ಳೆಯ ಸಾಹಿತಿಯಾಗಬಲ್ಲ. ಹೊರಗಿನದೆಲ್ಲವನ್ನೂ ನೋಡಿ—ಅರಿತು—ರಸಹೀರಿ, ತನ್ನಲ್ಲಿ ಮೂಡಿಸಿಕೊಂಡು, ತನ್ನ ವ್ಯಕ್ತಿತ್ವದ ಅಚ್ಚೊತ್ತಿ ಒಂದು ಸ್ವರೂಪತೋರಿದಾಗ, ಅದು ಕೊಟ್ಟವನ ಕಾಣಿಕೆಯೆ ವಿನಾ, ಅದಕ್ಕೂ ಮೊದಲಿನ ರೂಪಗಳ ಅನುವಾದ ಎಂದು ಹೇಳಬಾರದು.

ಸಂಕಲನದಲ್ಲಿ ಎಲ್ಲವೂ ಒಳ್ಳೆಯ ಕತೆಗಳೆ ಇವೆ. 'ಗರತಿಯಾಗುವ ಆಸೆ' "ಕುಡಿದ ಕಣ್ಣೀರು" "ಜಟಕಾ ಸಾಬಿ" ಇವು ಎಲ್ಲ ದೃಷ್ಟಿಯಿಂದಲೂ ಮೇಲು. "ಅಣ್ಣ ತಮ್ಮ" "ಸಾಹಿತಿಗೊಂದು ಸಮಾಧಾನ" ಇವೆರಡರಲ್ಲಿ ಕೊನೆ ಅಷ್ಟು ಮಾರ್ಮಿಕವಿಲ್ಲ. ಅಲ್ಲಿ ನಿರ್ಣಾಯಕ ಅಭಿಪ್ರಾಯ ಕೊಡಲು ಬರೆಹಗಾರರು ಅಂಜಿರುವಂತೆ ಭಾಸವಾಗುತ್ತದೆ "ಸರಸೀ ಕೂಡ ಸಿನೆಮಾ" "ಚಕಮಕಿ" "ಬದುಕುಬಾಳು" ಇವು ನವಪ್ರಣಯಿಗಳಲ್ಲಿ ನಡೆಯಬೇಕಾದ ಸನ್ನಿವೇಶಗಳ—ಸಂಭಾಷಣೆಗಳವಿರುವುದರಿಂದ, ಓದುಗರಿಗೆ ಕುಲುಕು—ನವಿರು ತರುವುವು. "ಎರಡನೆಯ ಸಂಬಂಧವಲ್ಲ" "ಮೀರೆಯ ಮದ್ದು" ಸಮಾಜದ ಒಂದೊಂದು ಚಿತ್ರವನ್ನು ತೋರುವುವು.

ಲಕ್ಷ್ಮಣರಾಯರು ಕೆಲವು ಕಠೋರಸತ್ಯ ಸನ್ನಿವೇಶಗಳನ್ನು—ಇದ್ದಂತೆ—ಚಿತ್ರಿಸಿದರೆ, ಆ ಕೃತಿಗಳು ಅಮರಸಾಹಿತ್ಯದಲ್ಲಿ ಸೇರಬಹುದು ಎಂದು ಹೇಳಲು ಯಾವ ಆತಂಕವೂ ಇಲ್ಲ.

—ರಂಗನಾಥ

ಸಾದರ ಸ್ವೀಕಾರ

●

೧೭. ನವಭಾರತದ ವಿಜಯಾಂಕ: (ವಾರಪತ್ರಿಕೆಯ ವಿಶೇಷ ಸಂಚಿಕೆ) ಸಂಪಾದಕರು ಮತ್ತು ಪ್ರಕಾಶಕರು ಶ್ರೀಮಾನ್ ವಿ. ಎಸ್. ಕುಡವ 'ನವಭಾರತ' ಮುದ್ರಣಾಲಯ, ಕೊಡಿಯಾಲ ಬಯಲು, ಮಂಗಳೂರು. ಕ್ರೌನ್ ಪ್ಲೋಲಿಯೊ ೪೦ ಪುಟಗಳು. ಬೆಲೆ ೦–೬–೦.

ವರ್ತಮಾನ ಯುದ್ಧದ ವಿವಿಧಮುಖ ಪರಿಚಯವನ್ನು ಸಂದರ್ಭ ಚಿತ್ರಗಳೊಂದಿಗೆ ಮಾಡಿಕೊಡುವಲ್ಲಿ ಇಂತಹ ಸಂಚಿಕೆ ಕನ್ನಡದಲ್ಲಿ ಇನ್ನಾವುದೂ ಹೊರಬಿಲ್ಲವೆಂದು ಧಾರಾಳವಾಗಿ ಹೇಳಬಹುದು. ಯುದ್ಧ ಪರಿಚಯಾತ್ಮಕ ಲೇಖನಗಳಲ್ಲದೆ, ಯುದ್ಧ ವಿಷಯಕ ಕವಿತೆ-ಪ್ರಬಂಧಗಳೂ ಇರುವುವು. ಎಲ್ಲರೂ ಓದಿ ನೋಡಬೇಕಾದ ವಿಶೇಷ ಸಂಚಿಕೆ.

೧೮. ಮುಂಬಯಿ ಬಿಲ್ಲವರ ಎಸೋಶಿಯೇಶನ್ನಿನ ೧೩ನೆಯ ವಾರ್ಷಿಕ ವರದಿ: ಕಳುಹಿದವರು ಆನರರಿ ಜನರಲ್ ಸೆಕ್ರೆಟರಿ, ೭೭ ರಘುನಾಥ ದಾದಾಜಿ ಸ್ಟ್ರೀಟ್; ಕೋಟೆ–ಮುಂಬೈ. ಡಿ. ಆ. ೪೦ ಪುಟಗಳು.

ಸಮಾಜ ಸಂಘಟನೆಯ ಮಹತ್ತ್ವ ಮಂಗಳೂರು ಜಿಲ್ಲೆಯ ಜನಸಾಮಾನ್ಯರಿಗಷ್ಟೇ ತಿಳಿದಿದೆಯೋ ನೋ ಎನಿಸುವಂತಿವೆ 'ಮುಂಬಯಿಯ ಬಿಲ್ಲವರ ಅಸೋಶಿಯೇಶನ್ನು, ಮೊಗವೀರ ಸಂಘ, ಮೊಗವೀರ ತರುಣ ಸಂಘ ಮೊದಲಾದ ಸಂಸ್ಥೆಗಳು. ಈ ಬಿಲ್ಲವರ ಸಂಸ್ಥೆಯು ಮುಂಬಯಿಯಲ್ಲಿದ್ದುಕೊಂಡು ತನ್ನ ಸಮಾಜ ಸಂಘಟನೆಯ ಕಾರ್ಯ ಮಾಡುವುದಲ್ಲದೆ ಕನ್ನಡ ನಾಡು-ನುಡಿಗಳ ಅಭಿವೃದ್ಧಿ-ಸಂರಕ್ಷಣೆಗಳ ಚಟುವಟಿಕೆಗಳನ್ನೂ ನಡಿಸಿರುವುದು. ಶಿಕ್ಷಣ-ಪ್ರಚಾರ ಸಂಸ್ಕೃತಿಪ್ರಸಾರಕ್ಕಾಗಿ ಈ ಸಂಸ್ಥೆ ನಡೆಯಿಸಿರುವ ಕಾರ್ಯ ಆದರ್ಶವಾದುದು. ಕನ್ನಡದ ಉನ್ನತಿಗಾಗಿ ಈ ಸಂಸ್ಥೆ ಬೆಳೆಯಲಿ, ಬಾಳಲಿ!

೧೯. ಕರ್ನಾಟಕ (ವಾರಪತ್ರಿಕೆ). ಸಂಪಾದಕರು ಶ್ರೀಮಾನ್ ಚಿಕ್ಕೋಡಿ ಅನಂತರಾಯರು, ಬೆಳಗಾಂವಿ. ಸಂಪಾದಕರೇ ಪ್ರಕಾಶಕರು. ಕ್ರಾ. ಫ್ಲೋ. ೪ ಪುಟಗಳು. ವಾರ್ಷಿಕ ಚಂದಾ ಗೊತ್ತಾಗುವಂತಿಲ್ಲ.

ಮೊದಲನೆಯ ವರ್ಷದ ೩೬ನೆಯ ಸಂಚಿಕೆಯಿದು. ಸ್ವತಂತ್ರ ಭಾರತ—ಸ್ವಾಯತ್ತ ಕರ್ನಾಟಕಗಳು ಪತ್ರಿಕೆಯ ಗುರಿಯೆಂಬುದು ಪತ್ರಿಕೆಯ ಮುಖದಮೇಲೆ ತೋರೆಯುತ್ತದೆ. ಸಂಪಾದಕರು ಉಜ್ವಲ ಕನ್ನಡಿಗರೂ ಅಹುದು; ಸೆರೆಮನೆ ಕಂಡುಬಂದ ಸ್ವಾತಂತ್ರ್ಯವೀರರೂ ಅಹುದು. ಬೆಳಗಾಂವಿಯಲ್ಲಿ ಕನ್ನಡ ಪತ್ರಿಕೆಗಳ ಕೊರತೆಯಿರುವುದನ್ನು ಇವರ 'ಕರ್ನಾಟಕ' ಕಡಿಮೆ ಮಾಡಬಹುದಾಗಿದೆ. ಆದರೆ ಇಂದಿನವರ ವಾಚನದ ಹಸಿವನ್ನು ಈ ನಾಲ್ಕು ಪುಟಗಳು ತಣಿಸಲಾರವು. ವಾರಪತ್ರಿಕೆಗಳಲ್ಲಿ ಕೂಡ ಲೇಖನ ವೈವಿಧ್ಯವನ್ನು ಅಪೇಕ್ಷಿಸುವ ಕಾಲವು ಇದೀಗ ಬಂದಿದೆ. ಪ್ರಾಂತ-ಪರಪ್ರಾಂತಗಳ ಹಲವು ವಾರಪತ್ರಿಕೆಗಳು, ವಾರಪತ್ರಿಕೆಗಳ ಕಾರ್ಯವ್ಯಾಪ್ತಿ ಎಂತಹದೆಂಬುದರ ಮಾದರಿಯನ್ನು ತೋರಿಸುತ್ತಲಿವೆ. ಕನ್ನಡನಾಡಿನಲ್ಲೀಗ ದೈನಂದಿನ ಪತ್ರಿಕೆಗಳ ಪ್ರಚಾರ ಹೆಚ್ಚಿರುವುದರಿಂದ, ಕೇವಲ ಸುದ್ದಿಗಳ ವಾರಪತ್ರಿಕೆಗಳು ತಂಗುಳುಣಿಸಾಗಿ ಕಾಣುವುವು. 'ಕಾಸದಾಸ್ಯತ್ತ', 'ಕೊಡಗು'ಗಳಂತೆ ಪ್ರಾದೇಶಿಕ ಚಟುವಟಿಕೆಗಾಗಿ ಕಾರ್ಯ ಮಾಡುವ ವಾರಪತ್ರಿಕೆಗಳ ಆವಶ್ಯಕತೆ ಬೆಳಗಾಂವಿ ಜಿಲ್ಲೆಯಲ್ಲಿಯೂ ಇದೆ. 'ಕರ್ನಾಟಕ' ಆ ಕಾರ್ಯವನ್ನು ನಿದಾಕ್ಷಿಣ್ಯದಿಂದ ಮಾಡತೊಡಗಿದರೆ, ಬೆಳಗಾಂವಿಯ ಕನ್ನಡಿಗರಿಗೂ ಹೊರಗಿನವರಿಗೂ ಅದರ ಆವಶ್ಯಕತೆ ಹೆಚ್ಚಾಗಿ ಕಂಡೀತು. ಪತ್ರಿಕೆಯು ಪ್ರಸಾರ ಹೆಚ್ಚಿ ಯಶಸ್ವಿಯೆನಿಸಿಕೊಂಡೀತು. 'ಕರ್ನಾಟಕ' ಬಹುಕಾಲ ಬಾಳಿ ಕನ್ನಡಕ್ಕೆ ಸೇವೆ ಸಲ್ಲಿಸಲಿ.

೨೦. ಯಾರ ವಿಜಯ? (ರಾಜಕೀಯ ವಿಚಾರ), ಮೂಲ ಇಂಗ್ಲಿಷ್ ಲೇಖಕರು 'ಹಿಂದೂ ದೇಶದ ಕಮ್ಯೂನಿಸ್ಟ್ ಪಾರ್ಟಿಯ. ಕಾರ್ಯದರ್ಶಿ ಪಿ. ಸಿ. ಜೋಶಿಯವರು. ಕನ್ನಡದಲ್ಲಿ ಭಾಷಾಂತರಿಸಿದವರು. ಶ್ರೀ ಕುಳಕುಂದ ಶಿವರಾಯರು. ಪ್ರಕಾಶಕರು 'ಜನತಾ ಸಾಹಿತ್ಯ' ೧೨೧ ಸುಲ್ತಾನ್ ಪೇಟೆ, ಬೆಂಗಳೂರುನಗರ. ಕ್ರೌನ್. ಅಷ್ಟಪತ್ರದ ೪೦ ಪುಟಗಳು. ಬೆಲೆ ನಾಲ್ಕಾಣೆ.

"ಇದು ಯಾರ ವಿಜಯ? ಸ್ವಾತಂತ್ರ್ಯಪ್ರೇಮಿಗಳಾದ ಪುರೋಗಾಮಿ ಪ್ರಜಾಪ್ರಭುತ್ವವಾದಿಗಳದೇ? ಲೋಕಕಂಟಕರಾದ ಹಿರಿಯ ಭಂಡವಳಗಾರ ಸಾಮ್ರಾಜ್ಯವಾದಿಗಳದೇ? ಹಿಂದಿನ ಯುದ್ಧಕ್ಕೂ ಈ ಯುದ್ಧಕ್ಕೂ ವ್ಯತ್ಯಾಸವಿದ್ದರೆ, ಹಿಂದಿನ ವಿಜಯಕ್ಕೂ ಈ ವಿಜಯಕ್ಕೂ ವ್ಯತ್ಯಾಸವಿರಬೇಡವೆ? ಶಾಂತಿ ಸಂರಕ್ಷಣಾ ಸಂಘದಲ್ಲಿ ಕೇಳಬರುತ್ತಿರುವ ದೊಡ್ಡ ಸ್ವರ ಯಾರದು? ಶಾಂತಿ ಅವಲಂಬಿಸಿರುವುದು ಯಾರನ್ನು? ಹಿಂದೂದೇಶದ ನಾನ್ನೂರು ಮಿಲಿಯ ಜನ 'ನಮ್ಮ ವಿಧಿ' ಎನ್ನುತ್ತ ಕುಳಿತಿರಬೇಕೆ? ಜನತೆಯ ಬಗ್ಗೆ ನಾವು ಪಾಲಿಸಬೇಕಾಗಿರುವ ಕರ್ತವ್ಯ ಯಾವುದು?" ಈ ಎಲ್ಲ ಪ್ರಶ್ನೆಗಳಿಗೆ ಕಮ್ಯೂನಿಸ್ಟ್ ದೃಷ್ಟಿಕೋಣದಿಂದ ಕೊಟ್ಟ ಉತ್ತರವಾಗಿದೆ ಈ ಪುಸ್ತಕ. ಅಚ್ಚುಕಟ್ಟು ಚೆನ್ನಾಗಿದೆ.

೨೧. ವಿಚಾರಮಂಜರಿ: (ವಿವಿಧ ಲೇಖನ ಸಂಗ್ರಹ) ಬರೆದವರು ಪ್ರೊ. ದ ರಾ. ಬೇಂದ್ರೆ ಎಂ.ಎ. ಅವರು. ಧಾರವಾಡದ ಮಿಂಚಿನ ಬಳ್ಳಿಯ ೭ನೆಯ ವರ್ಷದ ೨ನೆಯ ಕುಡಿ. ಕ್ರೌನ್. ಆ. ೧೨+೧೪೮ ಪುಟಗಳು. ಬೆಲೆ ಸಾದಾ ಪ್ರತಿಗೆ ೨-೦-೦; ಸುಂದರ ಪ್ರತಿಗೆ ೩-೮-೦.

'ನಾಡು-ನುಡಿ' ಗಳಿಗೆ ಸಂಬಂಧಿಸಿದ ಐದು ಪ್ರಬಂಧಗಳೂ, 'ಧರ್ಮ' ಎಂಬ ವಿಷಯಕ್ಕೆ ಸಂಬಂಧಿಸಿದ ಏಳು ಲೇಖನಗಳೂ, 'ವಿಚಾರ' ಎಂಬ ಭಾಗದಲ್ಲಿ ಹತ್ತು ವಿಚಾರ ತರಂಗಗಳೂ 'ವ್ಯಕ್ತಿ' ಎಂಬ ವಿಭಾಗದಲ್ಲಿ ಬೇರೆ ಬೇರೆ ಆರು ವ್ಯಕ್ತಿ ಪರಿಚಯಗಳೂ, 'ವಿಮರ್ಶೆ' ಎಂಬ ಕೊನೆಯ ಭಾಗದಲ್ಲಿ ಸಾಹಿತ್ಯ ವಿಮರ್ಶೆಗೆ ಸಂಬಂಧಿಸಿದ ಐದು ಲೇಖನಗಳೂ ಈ ಸಂಗ್ರಹದಲ್ಲಿ ಅಡಕವಾಗಿವೆ. ಸಂಗ್ರಹಕ್ಕೆ ಮುನ್ನುಡಿ ಬರೆದ ಶ್ರೀಮಾನ್ ಸರೇಗಲ್ಲ ಪ್ರಲ್ಹಾದರಾಯರು ಕೊನೆಯಲ್ಲಿ ಹೀಗೆ ಹೇಳಿದ್ದಾರೆ:

"ಹೀಗೆ ಬೇಂದ್ರೆಯವರು ಕಳೆದ ತಪದ್ವಯದ ಅವಧಿಯಲ್ಲಿ ಅಲ್ಲಲ್ಲಿ ಚೆಲ್ಲಿಬಿಟ್ಟ ಪ್ರಬಂಧಗಳನ್ನೆಲ್ಲಾ ಒತ್ತಟ್ಟಿಗೆ ಸಂಗ್ರಹಿಸಿ........ಪ್ರಕಟಿಸಿದುದು ನಮ್ಮೆಲ್ಲರ ಭಾಗ್ಯವೇ ಸರಿ. ಅಂಬಿಕಾತನಯದತ್ತರ ಕವನಗಳನ್ನು ಮೆಚ್ಚಿದ ಕನ್ನಡಿಗರು, ಶ್ರೀ. ದತ್ತರಾಯರ 'ವಿಚಾರ ಮಂಜರಿ' ಯನ್ನೂ ಸಂತೋಷದಿಂದ ಸ್ವಾಗತಿಸುವರೆಂಬುದರಲ್ಲಿ ಸಂಶಯವಿಲ್ಲ."



ವೇವೆಲ್‌ರ ಯೋಜನೆಯ ತಳಹದಿ

ಸೋದ ತಿಂಗಳ ನೋಟದಲ್ಲಿ ನಾವು ಸೂಚಿಸಿದಂತೆ ಜಪಾನದ ವಿರುದ್ಧ ಯುದ್ಧಪ್ರಯತ್ನಗಳನ್ನು ರಭಸದಿಂದ ಮುಂದೆ ಸಾಗಿಸುವ ಮುಖ್ಯೋದ್ದೇಶವನ್ನಿಟ್ಟುಕೊಂಡೇ ವೈಸರಾಯರ ಯೋಜನೆಯು ಹೊರಬಿದ್ದಿದೆ. ಅನೇಕ ದಿವಸಗಳಿಂದ ಹಿಂದುಸ್ತಾನವೂ ಮತ್ತು ಮಿತ್ರ-ರಾಷ್ಟ್ರಗಳಲ್ಲಿ ಕೆಲವು ಸ್ವಾತಂತ್ರ್ಯಪ್ರಿಯರೂ ದಾರಿ ಕಾಯುತ್ತಿದ್ದ ಈ ಯೋಜನೆಯು, ಹಿಂದುಸ್ತಾನದ ಭವಿತವ್ಯವನ್ನು ನಿರ್ಣಯಿಸುವುದಕ್ಕಾಗಿ ಅಲ್ಲ, ಅದರಂತೆಯೆ ೧೯೩೫ರ ಸಂಯುಕ್ತಘಟನೆಯ ಕಾಯದೆಯನ್ನು ತಿದ್ದುವುದಕ್ಕೂ ಅಲ್ಲ ಎಂಬುದು ಮೊದಲು ಲಕ್ಷ್ಯದಲ್ಲಿಡತಕ್ಕ ವಿಷಯ. ಸದ್ಯದ ಬದಲಾವಣೆ ಕೇಂದ್ರಕ್ಕೆ ಮಾತ್ರ ಸಂಬಂಧಿಸಿದ್ದು, ಭಾವೀ ರಾಜ್ಯಘಟನೆಯನ್ನು ಹಿಂದೀಯರೆ ಪರಸ್ಪರ ಒಪ್ಪಿಗೆಯಿಂದ ತಯ್ಯಾರಿಸಬೇಕಾದ್ದರಿಂದ ಸದ್ಯದ ಯೋಜನೆ ತಾತ್ಪೂರ್ತಿಕವಾದುದು, ಈ ಯೋಜನೆಯನ್ನು ವಿವಿಧಪಕ್ಷಗಳು ಒಪ್ಪಿದರೆ ಕೇಂದ್ರದಲ್ಲೂ ಪ್ರಾಂತಗಳಲ್ಲೂ ೧೯೩೫ರ ಕಾಯದೆಯನ್ನನುಸರಿಸಿಯೆ (ಸಂಯುಕ್ತ ಘಟನೆ--Federation—ಯೊಂದನ್ನು ಬಿಟ್ಟು) ಆಡಳಿತ ನಡೆಯತಕ್ಕದ್ದು ಎಂದು ವೈಸರಾಯರು ತಮ್ಮ ಪ್ರಾರಂಭದ ಘೋಷಣೆಯಲ್ಲಿ ಸ್ಪಷ್ಟಪಡಿಸಿದ್ದಾರೆ. ಎಂದರೆ ಪಾಕಿಸ್ತಾನದ ಬಗ್ಗೆಯಾಗಲಿ, ಸಂಪೂರ್ಣ ಸ್ವಾತಂತ್ರ್ಯದ ಬಗ್ಗೆಯಾಗಲಿ ಚರ್ಚೆಯು ಸದ್ಯಕ್ಕೆ ಅಪ್ರಸ್ತುತವಾದುದೆಂದು ವೈಸರಾಯರ ಅಭಿಪ್ರಾಯ.

ಬದಲಾವಣೆಯ ಉದ್ದೇಶಗಳು

ಮುಖ್ಯವಾದ ಜಾತೀಯ ತೊಡಕಿನ ಪ್ರಶ್ನೆಯ ನಿರ್ಣಯವನ್ನು ಮುಂದೆ ಹಾಕಿ, ಸದ್ಯಕ್ಕೆ ಮತ್ತು ಸದ್ಯದ ಮಟ್ಟಿಗೆ ಆಡಳಿತದಲ್ಲಿ ಬದಲಾವಣೆ ಅವಶ್ಯವಾದುದೇಕೆ— ಎಂಬ ಪ್ರಶ್ನೆಗೆ ವೇವೆಲ್‌ರು ಕೆಲವು ಅತ್ಯಗತ್ಯವಾದ ಕಾರ್ಯಗಳ ಪಟ್ಟಿಯನ್ನು ಕೊಟ್ಟಿದ್ದಾರೆ. 'ಹೊಸ ಕೇಂದ್ರ ಸರಕಾರವು ಮಾಡಬೇಕಾದ ಕಾರ್ಯಗಳವು' ಎಂದು ವೇವೆಲ್‌ರ ಅಭಿಪ್ರಾಯ.

ಆ ಕಾರ್ಯಗಳೆಂದರೆ ಹೀಗೆ:—

೧. ಸಂಪೂರ್ಣ ಜಯವನ್ನು ದೊರೆವ ವರೆಗೆ ಜಪಾನದ ವಿರುದ್ಧ ಯುದ್ಧವನ್ನು ನಡೆಯಿಸುವುದು.

೨. ಶಾಶ್ವತ ಘಟನೆ ಅಸ್ತಿತ್ವದಲ್ಲಿ ಬರುವವರೆಗೆ ಯುದ್ಧೋತ್ತರ ಪುನರ್ರಚನೆಯ ಕಾರ್ಯಗಳನ್ನು ಕೈಕೊಳ್ಳುವುದು.

೩. ಪರಸ್ಪರ ಒಡಂಬಡಿಕೆ (ನಮ್ಮಲ್ಲಿಯ ಬೇರೆ ಬೇರೆ ಪಕ್ಷಗಳೊಳಗೆ) ಸಾಧ್ಯವಾಗುವಂತೆ ಉಪಾಯಗಳನ್ನು ಕೈಕೊಳ್ಳುವುದು.

'ಕೇಂದ್ರದಲ್ಲಿ ಇಷ್ಟೊಂದೆ ಕೆಲಸ ಆಗಬೇಕಾಗಿದ್ದರೆ ಇಂತಹ ಬದಲಾವಣೆ ಏಕೆ? ಸದ್ಯದ ಕಾರ್ಯಕಾರಿ ಮಂಡಳದ ಸಹಾಯದಿಂದಲೆ ಸಾಗಿಸಬಹುದಾಗಿತ್ತಲ್ಲ?' ಈ ಪ್ರಶ್ನೆಗಳಿಗೆ ಭಾರತ ಮಂತ್ರಿಗಳಾದ ಅಮೆರಿಯವರು ಧೈರ್ಯತಂದುಕೊಂಡು ಉತ್ತರವನ್ನು ಕೊಟ್ಟಿದ್ದಾರೆ. 'ವೈಸರಾಯರ ಸದ್ಯದ ಕಾರ್ಯಕಾರಿ ಮಂಡಳಕ್ಕೆ ಪ್ರಮುಖ ರಾಜಕೀಯ ಪಕ್ಷಗಳ ಬೆಂಬಲವಿಲ್ಲೆಂಬುದನ್ನು ಒಪ್ಪಿಕೊಳ್ಳಲೇಬೇಕು' ಎಂದು— ಎಷ್ಟೇ ತಡವಾದರೂ— ಅಮೆರಿಯವರು ಸತ್ಯವನ್ನು ಬಹಿರಂಗವಾಗಿ ಸಾರಿದ್ದಾರೆ. ಎಂದರೆ ಸದ್ಯಕ್ಕೆ ಪ್ರಮುಖ ರಾಜಕೀಯ ಪಕ್ಷಗಳ ಬೆಂಬಲವಿದ್ದ ಕಾರ್ಯಕಾರಿ ಮಂಡಳವು ಆಡಳಿತಕ್ಕೆ ಅಗತ್ಯವಾಗಿದೆ ಎಂದು ಸರಕಾರದ ಅಭಿಪ್ರಾಯ. ವೇವೆಲ್‌ರ ಯೋಜನೆಯ ವಿವರಗಳನ್ನು ತಿಳಿದುಕೊಳ್ಳಬೇಕಾದರೆ ಈ ಮಾತು ಅತ್ಯಂತ ಮಹತ್ತ್ವದ್ದಿದೆ.

ಯೋಜನೆಯ ಸ್ವರೂಪ

ಬ್ರಿಟಿಶ್ ಸರಕಾರಕ್ಕೆ ಈಗ ಬೇಕಾದದ್ದು ದೇಶದ ಆಡಳಿತದ ಹೊಣೆಯನ್ನು ಹಿಂದೀಯರಿಗೆ ಒಪ್ಪಿಸುವುದಲ್ಲ; ಆ ಆಡಳಿತವನ್ನು ತಮ್ಮ ಅಧಿಕಾರದಿಂದಲೆ ಸಾಗಿಸಲಿಕ್ಕೆ ಪ್ರಮುಖ ರಾಜಕೀಯ ಪಕ್ಷಗಳ ಬೆಂಬಲ, ಸಹಾಯ, ಸಹಕಾರ. ಹಿಂದುಸ್ತಾನದ ಸ್ವಾತಂತ್ರ್ಯತತ್ತ್ವದ ನಿರ್ಣಯಕ್ಕಾಗಿ ವೈಸರಾಯರು ಮುಂದಾಳುಗಳ ಸಭೆಯನ್ನು ಕರೆದಿಲ್ಲ; ಹಿಂದುಸ್ತಾನದ ರಾಜ್ಯಘಟನೆಯ ಬದಲಾವಣೆಗಾಗಿಯೂ ಸಭೆಯನ್ನು ಕರೆದಿಲ್ಲ; ಪ್ರಜಾಪ್ರತಿನಿಧಿತ್ವ ಮತ್ತು ಪ್ರಜಾಪ್ರಭುತ್ವ ಇವುಗಳ ಗಾಳಿ ಕೂಡ ಈ ಮುಂದಾಳುಗಳ ಸಭೆಯಲ್ಲಿ ಸುಳಿದಾಡುವಂತಿಲ್ಲ; ಹಿಂದುಸ್ತಾನದಲ್ಲಿ ಪ್ರಮುಖ ರಾಜಕೀಯ ಪಕ್ಷಗಳು ಇಂತಿಷ್ಟು ಎಂದೆಣಿಸಿ, ಆ ಪಕ್ಷಗಳ ಸಹಕಾರವನ್ನು ದೊರಕಿಸುವುದಕ್ಕಾಗಿ ಪಕ್ಷೀಯ ಮುಂದಾಳುಗಳ ಸಭೆಯನ್ನು ಕರೆದಿದ್ದಾರೆ. ಹೀಗಿದ್ದರೆ ಮುಸ್ಲಿಂ ಲೀಗನ್ನು ಕರೆಯುವುದೇಕೆ? ಎಂದು ಅನೇಕರು ವಾದಿಸಬಹುದಾಗಿದೆ. ಮುಸ್ಲಿಂ ಲೀಗವು ಜಾತೀಯ ಸಂಸ್ಥೆ; ನಿಜ ಆದರೆ ಆ ಸಂಸ್ಥೆಯ ಹೆಸರಿನಿಂದಲೆ ರಾಜಕೀಯ ರಂಗದಲ್ಲಿ ಚುನಾವಣೆಗಳೂ ಶಾಸನ ಸಭೆಯ ಪಕ್ಷಗಳೂ ಮಂತ್ರಿಮಂಡಳಗಳೂ ವ್ಯವಹಾರದಲ್ಲಿ ನಡೆಯುವುದರಿಂದ, ಮುಸ್ಲಿಂ-ಲೀಗವು ರಾಜಕೀಯ ಪಕ್ಷ ಎಂದು ಬ್ರಿಟಿಶ್ ಸರಕಾರದ ಅಭಿಪ್ರಾಯ-

ನಿದ್ದಂತೆ ತೋರುವುದು. ಹಾಗಿದ್ದರೆ ಸದ್ಯದ ಪರಿಸ್ಥಿತಿಯಲ್ಲಿ ಅದನ್ನು ಅಲ್ಲಗಳೆಯುವುದು ಇಲ್ಲವೆ ವಿರೋಧಿಸುವುದು ನಮಗೆ ಶಕ್ಯವಾಗದು.

ಕಾಂಗ್ರೆಸಿನ ಸ್ಥಾನವೇನು ?

ಮುಸಲ್ಮಾನರ ಪ್ರತಿನಿಧಿಯಾಗಬಹುದಾದ ಮುಸ್ಲಿಂ ಲೀಗ ಜಾತೀಯ ಸಂಸ್ಥೆಯನ್ನು ರಾಜಕೀಯ ಪಕ್ಷವೆಂದು ಎಣಿಸುವಾಗ, ವೈಸರಾಯರು ರಾಜಕೀಯ ಪಕ್ಷವಾದ ಕಾಂಗ್ರೆಸನ್ನು ಜಾತೀಯ ಸಂಸ್ಥೆ ಎಂದು ಎಣಿಸಿದಂತೆ ಕಾಣುವುದು; ಯಾಕೆಂದರೆ ಮುಸಲ್ಮಾನ, ಶೀಖ ಮತ್ತು ಹರಿಜನ ; ಈ ಮೂವರನ್ನುಳಿದ ಹಿಂದುಗಳಿಗೆ ಮಾತ್ರ ಕಾಂಗ್ರೆಸಿನ ಪ್ರತಿನಿಧಿತ್ವ ಅನ್ವಯಿಸುವಂತಿದೆ. ಅದಕ್ಕಾಗಿ ಗಾಂಧಿಜಿಯವರೂ ಸರದಾರ ಪಟೇಲರೂ ಈಗಾಗಲೆ ತಮ್ಮ ಅಸಂತೋಷವನ್ನು ವ್ಯಕ್ತಪಡಿಸಿದ್ದಾರೆ. ಸಕೃದ್ದರ್ಶನಕ್ಕೆ ವೈಸರಾಯರ ಯೋಜನೆಯಲ್ಲಿ ಕಾಂಗ್ರೆಸಿಗೆ ಅನ್ಯಾಯವಾದಂತಾಗಿದೆ, ಅದಕ್ಕಾಗಿ ಕಾಂಗ್ರೆಸು ಈ ಯೋಜನೆಯನ್ನು ಒಪ್ಪುವಂತಿಲ್ಲ ಎಂದೂ ಸಂದೇಹ ಉಂಟಾಗುವುದು. ಆದರೆ ಇನ್ನೊಂದು ದೃಷ್ಟಿಯಿಂದ ನೋಡಿದರೆ ಹೆದರಿಕೆಗೆ ಆಸ್ಪದವಿಲ್ಲ ಎಂದೂ ಎನ್ನಿಸುವಂತಿದೆ. ವೈಸರಾಯರು ರಾಜಕೀಯ ಪಕ್ಷಗಳ ಪ್ರತಿನಿಧಿಗಳನ್ನು ಕರೆದಿದ್ದಾರೆ. ಕೇಂದ್ರಶಾಸನ ಸಭೆಯಲ್ಲಿ ಅಧಿಕೃತವಾದ ಎಷ್ಟು ಪಕ್ಷಗಳಿವೆಯೊ ಅಷ್ಟನ್ನೆ ಕರೆದಿದ್ದಾರೆ. ಇದಲ್ಲದೆ ಕೇವಲ ಜಾತೀಯತೆಯೆ ಅವರ ದೃಷ್ಟಿಯಲ್ಲಿಲ್ಲ ಎಂಬುದಕ್ಕೆ ಹಿಂದು ಮಹಾಸಭೆಯನ್ನು ತಮ್ಮ ಪರಿಷತ್ತಿನಲ್ಲಿ ಕೂಡಿಸದಿದ್ದುದೆ ಸಾಕ್ಷಿ. ಆದ್ದರಿಂದ ಕಾಂಗ್ರೆಸು ಯಾರ ಪ್ರತಿನಿಧಿ ಎಂದು ಹೋಗದೆ, ಕೇವಲ ಒಂದು ರಾಜಕೀಯ ಪಕ್ಷವೆಂದು ಪರಿಷತ್ತಿನಲ್ಲಿ ಭಾಗ ವಹಿಸಬಾರದೇಕೆ ?

(೧೮–೬–೪೫)

ವಿಚಿತ್ರ ತೊಡಕು

ಮಹಾತ್ಮರನ್ನು ನೊರತೊಂದು ಕಾಂಗ್ರೆಸ್ಸಿನ ಮುಂದಾಳುಗಳು ವ್ಯಕ್ತ ಮಾಡುತ್ತಿರುವ ಅಭಿಪ್ರಾಯಗಳನ್ನು ನೋಡಿದರೆ, ಕಾಂಗ್ರೆಸು ರಾಜಕೀಯ ಪಕ್ಷವೆಂದು ವೈಸರಾಯರ ಪರಿಷತ್ತಿನಲ್ಲಿ ಭಾಗ ವಹಿಸಲು ಸಿದ್ಧನಿದ್ದಂತೆ ಕಾಣುತ್ತದೆ. ಆದರೆ ಮುಸ್ಲಿಂ ಲೀಗ್ ಮತ್ತು ಕಾಂಗ್ರೆಸುಗಳಲ್ಲಿ ಒಂದು ವ್ಯತ್ಯಾಸವಿದೆ. ಮುಸ್ಲಿಂ ಲೀಗವು ಮುಸಲ್ಮಾನರ ಪ್ರತಿನಿಧಿ ಎಂದೇ ತಾನು ಹೇಳಿಕೊಳ್ಳುತ್ತದೆ; ಕಾಂಗ್ರೆಸು ಮಾತ್ರ ಜಾತಿಭೇದಗಳನ್ನು ಮೀರಿ ಇಡಿಯ ದೇಶದ ಪ್ರತಿನಿಧಿ ಎಂದು ಹೇಳಿಕೊಳ್ಳುತ್ತದೆ. ಒಂದು ವೇಳೆ ವೈಸರಾಯರ ಪರಿಷತ್ತು ಯಶಸ್ವಿಯಾದರೆ, ಕಾಂಗ್ರೆಸು ಇಡಿಯ ಎಗ್ಝಿಕ್ಯೂಟಿವ್ ಕೌನ್ಸಿಲರರ (ಎಂದರೆ ಒಪ್ಪಿದ ಪ್ರಮಾಣದಲ್ಲಿಯೆ ಎಲ್ಲ ಜಾತಿಯವರ) ಹೆಸರುಗಳನ್ನು ಕೊಡಬಹುದಲ್ಲವೆ? ಅದನ್ನು ವೈಸರಾಯರು ಒಪ್ಪಬಹುದೆ ? ಇಲ್ಲವೆ ಕಾಂಗ್ರೆಸು 'ಕೇವಲ ಸವರ್ಣ ಹಿಂದುಗಳ ಹೆಸರುಗಳನ್ನೆ ಸೂಚಿಸತಕ್ಕುದು, ಎಂದು ವಾದಿಸುವರೆ ? ಅದರಂತೆಯೆ, ಮುಸ್ಲಿಂ ಲೀಗದ ಹೊರತು ಬೇರೆ ಯಾವ ಸಂಸ್ಥೆಗೂ ಮುಸ್ಲಿಮ್ ಹೆಸರುಗಳನ್ನು ಸೂಚಿಸಲು ಅಧಿಕಾರವೆ ಇಲ್ಲ ಎಂದು ಜಿನ್ನಾ ಸಾಹೇಬರು ಹಟ ಹಿಡಿಯಬಹುದೆ ? ಇಂತಹ ಪರಿಸ್ಥಿತಿ ಒದಗಿದರೆ . ವಿಚಿತ್ರ ತೊಡಕಿನ ಪ್ರಸಂಗ ಉಂಟಾಗುವುದು. ಅದಕ್ಕಾಗಿಯೆ ಇಂದು ಕಾಂಗ್ರೆಸ್ಸಿನ ಅಧ್ಯಕ್ಷರು ಕೂಡ ವಿಶಿಷ್ಟ ಜಾತಿಯ ಹೆಸರಿನಿಂದ ಕಾಂಗ್ರೆಸು ಯಾವ ಪರಿಷತ್ತಿನಲ್ಲೂ ಭಾಗವನ್ನು ವಹಿಸುವುದಿಲ್ಲ ಎಂದು ಸ್ಪಷ್ಟವಾಗಿ ಸಾರಿದ್ದಾರೆ.

ವೈಸರಾಯರ ಸದಿಚ್ಛೆ

ಇದಾಯಿತು ವೈಸರಾಯರು ಕರೆದ ಪರಿಷತ್ತಿನ ರಚನೆಯ ವಿಚಾರ. ಈ ಮಾತುಗಳು ವಾಚಕರ ಕೈ ಸೇರುವುದರೊಳಗಾಗಿ ಈ ಪರಿಷತ್ತು ನಿರ್ಣಯಕ್ಕೆ ಬರಬಹುದಾದರೂ, ನಾವು ಇಲ್ಲಿ ಎತ್ತಿ ಹಿಡಿದ ವಿಚಾರಸರಣಿಯು ಪರಿಷತ್ತು ಯಾವ ನಿರ್ಣಯಕ್ಕೆ ಬಂದರೂ ಅದರ ಮೇಲೆ ಪರಿಣಾಮವನ್ನು ಮಾಡುವಂತಹದಿದ್ದುದರಿಂದ, ಹೀಗೆ ವಿಶದವಾಗಿ ಬರೆಯುತ್ತಲಿದ್ದೇವೆ. ಪರಿಷತ್ತಿನ ರಚನೆಯು ಎಲ್ಲರಿಗೂ ಸಮಾಧಾನಕಾರವೆನಿಸಿಲ್ಲ ಎಂಬುದಕ್ಕೆ ವೈಸರಾಯರೊಡನೆ ನಡೆದ ತಂತಿ ವ್ಯವಹಾರ, ಕೆಲವು ಪ್ರಕಟನೆಗಳು ಇವೆ ಸಾಕ್ಷ್ಯವಾಗಿವೆ. ಆದರೆ ಇದೆಲ್ಲಕ್ಕೆ ತಡಕದಿಯಾಗಿ ರಾಜಕೀಯ ಬಿಕ್ಕಟ್ಟನ್ನು ಬಿಡಿಸಲು ವೇವೆಲ್ ಸಾಹೇಬರು ಅತ್ಯಂತ ಕಳಕಳಿಯಿಂದ ಪ್ರೇರಿತರಾಗಿದ್ದಾರೆಂಬುದೂ ಸ್ಪಷ್ಟವಿದೆ. ಇಂದು ಈ ಬಿಕ್ಕಟ್ಟು ಹಾಗೆಯೆ ಉಳಿಯಲು ಕಾಂಗ್ರೆಸಿಗಿಂತ ಮುಸ್ಲಿಂ ಲೀಗವೆ ಹೆಚ್ಚಾಗಿ ಕಾರಣೀಭೂತವಾಗಿದೆ. ' ಪಾಕಿಸ್ತಾನ'ವನ್ನು ಬಿಟ್ಟರೆ ಮಾತನ್ನಾಡಲು ಕೂಡ ಜಿನ್ನಾಸಾಹೇಬರು ಸಿದ್ಧರಿಲ್ಲ. ಈ ಪರಿಸ್ಥಿತಿಯಲ್ಲಿ ರಕ್ಷ್ಯವಾದ ಸುಧಾರಣೆಗಳನ್ನು ವೈಸರಾಯರು ಮುಂದಿಸಿದ್ದಾರೆ. ಇದಲ್ಲದೆ ಪಾಕಿಸ್ತಾನಕ್ಕೆ ಸಮೀಪಿಸುವಂತೆ ಚರ್ಚೆಗೆ ಅವರು ಅವಕಾಶವನ್ನೆ ಕೊಡಬಾರದೆಂದು ನಿರ್ಧರಿಸಿದ್ದಾರೆ. ಎಲ್ಲ ಮುಂದಾಳುಗಳೊಡನೆ ಸಹಕಾರದ ಮತ್ತು ಶಾಂತ ವೃತ್ತಿಯಿಂದ ವ್ಯವಹಾರವನ್ನು ನಡೆಯಿಸಿದ್ದಾರೆ. ಗಾಂಧಿಜಿಯವರ ಸೂಚನೆಯಂತೆ ಕಾಂಗ್ರೆಸ್ಸಿನ ಅಧ್ಯಕ್ಷರನ್ನೂ ಆಮಂತ್ರಿಸಿದ್ದಾರೆ. ಇದೆಲ್ಲವನ್ನೂ ನೋಡಿದರೆ ಬಿಕ್ಕಟ್ಟನ್ನು ಬಿಡಿಸಿಯೆ ತೀರಬೇಕೆಂಬ ಸದಿಚ್ಛೆಯ ಹಟ ವೈಸರಾಯರಿಗಿದೆ ಎಂದು ಹೇಳಬಹುದು.

ಕಾಂಗ್ರೆಸಿನ ಧೋರಣವೇನು ?

ಕಾಂಗ್ರೆಸಿನ ರಾಜಕೀಯ ತತ್ತ್ವಗಳ ದೃಷ್ಟಿಯಿಂದ ನೋಡಿದರೆ ವೇವೆಲ್ ಯೋಜನೆಯು ತೀರ ಅಸಮಾಧಾನಕರವಿದೆ ಎಂದು ಹೇಳಬಹುದು. ಸ್ವಾತಂತ್ರ್ಯದ ಪ್ರಶ್ನೆ ಇಲ್ಲ, ಹೊಣೆಗಾರಿಕೆಯ ಅಧಿಕಾರವಿಲ್ಲ, ಮೇಲೆ ಕೇಂದ್ರ ಸರಕಾರದಲ್ಲಿ ಜಾತೀಯತೆಯನ್ನು ಒಪ್ಪಿಕೊಳ್ಳುವುದು ! ಇಷ್ಟೇಕೆ ? ವೇವೆಲ್ ಯೋಜನೆಯ ಪರಿಣಾಮವಾಗಿ ಕಾಂಗ್ರೆಸಿನ ರಾಷ್ಟ್ರೀಯ ಸ್ವರೂಪ ಕಳೆದು ಕಾಂಗ್ರೆಸು ' ಸವರ್ಣ ಹಿಂದು ' ಗಳ ಪ್ರತಿನಿಧಿ ಸಂಸ್ಥೆಯಾಗಿ ರೂಪುಗೊಡುವ ಹೆದರಿಕೆ ಇದೆ. ಅದರಂತೆಯೆ ಕಾಂಗ್ರೆಸಿನಲ್ಲಿ ಭಿನ್ನಾಭಿಪ್ರಾಯಗಳು ತಲೆದೋರಿ ಶಾಶ್ವತವಾಗಿ ಕಾಂಗ್ರೆಸಿನ ಕ್ರಾಂತಿಸಂಸ್ಥಾರೂಪ ಕಳೆದು, ಅದೊಂದು ಬೇರೆ ಬೇರೆ ಪಂಗಡಗಳಲ್ಲಿ ಒಡೆದ ಕನ್ನಡಿಯಂತಾಗಬಹುದಾಗಿದೆ. ಇವೆಲ್ಲ ಕಾರಣಗಳಿಗಾಗಿ 'ವೇವೆಲ್ ಯೋಜನೆಯನ್ನು ವಿಚಾರ ಕೂಡ ಮಾಡಲಾರದೆ ಧಿಕ್ಕರಿಸಬೇಕು' ಎಂದು ಅನೇಕ ಕಾಂಗ್ರೆಸಿಗರು ವಾದಿಸಬಹುದಾಗಿದೆ. ಆದರೆ ಇನ್ನೂ ಒಂದು ದೃಷ್ಟಿಯಿಂದ, ವ್ಯವಹಾರ್ಯತೆಯ ದೃಷ್ಟಿಯಿಂದ, ಇಂದು ಕಾಂಗ್ರೆಸು ಮುಂದಾಗಬೇಕಾಗಿದೆ. ಇಡಿಯ ದೇಶದ ಪ್ರತಿನಿಧಿ ಸಂಸ್ಥೆ ತಾನೆಂಬ ಹೆಮ್ಮೆ ಕಾಂಗ್ರೆಸಿಗೆ ಇರುವುದಾದರೆ,

ಅವರ ಜೊತೆಗೆ ದೇಶದ ಹಿತಾಹಿತಗಳ ಹೊಣೆಗಾರಿಕೆಯೂ ಕಾಂಗ್ರೆಸಿಗೆ ಇರಬೇಕು. ಅಂತರರಾಷ್ಟ್ರೀಯ ಪರಿಸ್ಥಿತಿ, ಭಾರತದೇಶದ ಸದ್ಯದ ದುಸ್ಥಿತಿ ಇವುಗಳನ್ನು ಲಕ್ಷ್ಯದಲ್ಲಿಟ್ಟುಕೊಂಡರೆ ವೇವೆಲ್‌ರ ಪ್ರಯತ್ನವು ಯಶಸ್ವಿಯಾಗುವಂತೆ ಪ್ರಾಮಾಣಿಕ ಬುದ್ಧಿಯಿಂದ ಸಹಕಾರ ನೀಡುವುದು ಕಾಂಗ್ರೆಸಿನ ಹೊಣೆ ಎಂದು ನಮ್ಮ ಅಭಿಪ್ರಾಯ. ಗಾಂಧಿಜಿಯವರು ಹೇಳುವಂತೆ ತತ್ತ್ವಕ್ಕೆ ವಿಘಾತಕವಾಗುವಂತೆ ಮಾತ್ರ ಸಹಕರಿಸುವ ಸೌಜನ್ಯ ಬೇಡ. (೧೯–೬–೪೫)

ಮುಸ್ಲಿಂ ಲೀಗದ ಧೋರಣವೇನು?

ವೇವೆಲ್‌ರ ಯೋಜನೆ ಪ್ರಕಟವಾದಂದಿನಿಂದ, ಕಾಂಗ್ರೆಸು ಮತ್ತು ಗಾಂಧಿಜಿಯವರು ತೋರಿಸಿದ ಸಹಕಾರ-ಸದಿಚ್ಛೆ ಜಿನ್ನಾ ಸಾಹೇಬರ ಧೋರಣೆಯಲ್ಲಿ ಕಂಡುಬರುವುದಿಲ್ಲ. ಪಾಕಿಸ್ತಾನ ಎಂಬ ಶಬ್ದವನ್ನು ಪ್ರಯೋಗಿಸದೆ ಹತ್ತಾರು ತಂತಿಗಳನ್ನು ಜಿನ್ನಾ ಸಾಹೇಬರು ಕಳುಹಿಸಿದ್ದು ಇಷ್ಟೇ ಮೊದಲಿಸಲಾಗಿದ್ದರೂ, ಖಂಡಿತವಾಗಿ ಅವರು ಒಂದೂ ಮಾತನ್ನು ಆಡಲೊಲ್ಲರು. ಸಭೆಯನ್ನು ಮುಂದುವರಿಸಿರಿ ಎಂದರು, ನನ್ನ ವರ್ಕಿಂಗ್ ಕಮಿಟಿಯನ್ನು ಕೂಡಿಸುವುದು ಯಾವಾಗ ಎಂದರು, ಏನೆಂಬುವನ್ನು ಭೆಟ್ಟಿಯ ನಂತರವೆ ಖಂಡಿತವಾಗಿ ಹೇಳುತ್ತೇನೆ ಎಂದರು; ಒಟ್ಟಾರೆ, ಒಂದು ತರದ ಸಂದೇಹ, ಒಂದು ತರದ ಅಧೈರ್ಯ ಅವರ ಧೋರಣೆಯಲ್ಲಿ ಕಂಡುಬರುತ್ತದೆ. ಇದುವರೆಗೆ ಕಾಂಗ್ರೆಸು ಹೇಳಿದಂತೆ ತರುವಾಯದಲ್ಲಿ ತಾವೂ ಹೇಳುತ್ತಿದ್ದರು, 'ಬೇಡ' ಎಂದು. ಆದರೆ ಈಗ 'ಬೇಕು' ಎಂಬ ಮಾತನ್ನೆ ವೈಸರಾಯರು ಅಪೇಕ್ಷಿಸುತ್ತಾರೆ. ಮಾಡುವುದೇನು? 'ಬೇಕು' ಎಂದರೆ ಪಾಕಿಸ್ತಾನವನ್ನು ಬದಿಗೊತ್ತಿದಂತಾಗುವುದು. 'ಬೇಡ' ಎಂದರೆ ಕಾಂಗ್ರೆಸು 'ಬೇಕು' ಎಂದು ಮುಸಲ್ಮಾನರ ಹೆಸರುಗಳನ್ನು ಕೊಡಬಹುದಾಗಿದೆ. ಅದಕಾಗಿ ಜಿನ್ನಾ ಸಾಹೇಬರಿಗೆ ಸಂದೇಹ ಮತ್ತು ಅಧೈರ್ಯ. ಇದರಿಂದ ಒಣ ಬೆದರಿಕೆಗೆ ಸೊಪ್ಪು ಹಾಕದಂತಹ ಸ್ವಭಾವ ವೈಸರಾಯರದು ಎಂದು ಜಿನ್ನಾ ಸಾಹೇಬರಿಗೆ ಗೊತ್ತು. ಒಂದು ದೃಷ್ಟಿಯಿಂದ ನೋಡುವುದಾದರೆ ವೇವೆಲ್ ಯೋಜನೆಯಿಂದ ಕಾಂಗ್ರೆಸಿಗಿಂತ ಮುಸ್ಲಿಂ ಲೀಗದ ಮೇಲೆ ಹೆಚ್ಚು ಘಾತಕ ಪರಿಣಾಮವಾಗಬಹುದಾಗಿದೆ. (೨೦–೬–೪೫)

ದೃಷ್ಟಿ ಬದಲಾಯಿಸಿದೆ

ಇದೀಗ ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ವೈಸರಾಯರ ಪರಿಷತ್ತಿನಲ್ಲಿ ಭಾಗವನ್ನು ವಹಿಸಲು ಒಪ್ಪಿದೆ ಎಂದೂ ರಾಷ್ಟ್ರಾಧ್ಯಕ್ಷರಾದ ಮೌಲಾನಾ ಅಬುಲ್ ಕಲಂ ಅಝಾದರು ಕಾಂಗ್ರೆಸಿನ ಪ್ರತಿನಿಧಿಯಾಗಿ ಹೋಗುವರೆಂದೂ ಅಧಿಕೃತವಾಗಿ ನಿರ್ಣಯವಾದ ಪ್ರಕಟಣೆ ಹೊರಬಿದ್ದಿದೆ. ಕಾಂಗ್ರೆಸ್ ಮುಂದಾಳುಗಳು ವ್ಯಕ್ತಮಾಡುತ್ತಲಿದ್ದ ಅಭಿಪ್ರಾಯಗಳನ್ನು ಸೂಕ್ಷ್ಮವಾಗಿ ನಿರೀಕ್ಷಿಸುತ್ತಿದ್ದವರಿಗೆ ಈ ಸುದ್ದಿಯಿಂದ ಆಶ್ಚರ್ಯವಾಗಬೇಕಾಗಿಲ್ಲ. ಮೂರು ವರ್ಷಗಳ ಹಿಂದೆ—೧೯೪೨ ಆಗಸ್ಟ್‌ಲಕ್ಕೆ ಕೈಕೊಂಡ ಧೋರಣೆಯನ್ನು ಎತ್ತಿ ಹಿಡಿಯಲು ಪ್ರತಿಯೊಬ್ಬ ಮುಂದಾಳು ಪ್ರಯತ್ನಿಸಿದಾಗ್ಯೂ, ಸದ್ಯಕ್ಕೆ ಆ ಧೋರಣೆಯನ್ನು ಬಿಡಬೇಕೆಂಬ ಧ್ವನಿ ಪ್ರತಿಯೊಂದು ಅಭಿಪ್ರಾಯದಲ್ಲಿ ಸ್ಪಷ್ಟವಿದ್ದಿತು. ವರ್ಕಿಂಗ್ ಕಮಿಟಿಯ ಅಧಿವೇಶನದ ಮುಂಚೆ ಮೌಲಾನಾ ಆಝಾದರು ಇದನ್ನು ಹೆಚ್ಚು ಸ್ಪಷ್ಟವಾಗಿ ಮತ್ತು ಅಧಿಕಾರಯುತವಾಗಿ ಹೇಳಿದ್ದಾರೆ. 'ಜಪಾನದೊಡನೆ ಯುದ್ಧ ನಾಗುವವರೆಗೆ ಕಾಂಗ್ರೆಸು ಯಾವ ಚಳವಳವನ್ನೂ ಹೂಡಬಾರದೆಂದು ನನ್ನ ಅಭಿಪ್ರಾಯವಿದೆ' ಎಂದರು ರಾಷ್ಟ್ರಾಧ್ಯಕ್ಷರು. ಇದಕ್ಕೂ ಮಹತ್ತ್ವದ್ದಾದ ಇನ್ನೊಂದು ಮಾತನ್ನೂ ಅವರು ಹೇಳಿದ್ದಾರೆ: 'ಇಷ್ಟು ವರ್ಷಗಳ ತರುವಾಯ ಈಗ ನಾವು ನಮ್ಮ ಧ್ಯೇಯಕ್ಕೆ ಸಮೀಪಿಸಿದ್ದೇವೆ ಎಂದು ನನಗೆ ತೋರುವುದು' ಎಂಬ ಮೌಲಾನಾ ಆಝಾದರ ಮಾತಿನಲ್ಲಿ, ಕಾಂಗ್ರೆಸಿನ ಇಡಿಯ ಧೋರಣವೆ—ದೃಷ್ಟಿಯೆ—ಬದಲಾಯಿಸಬೇಕಾಗಿದೆ ಎಂಬ ಅಭಿಪ್ರಾಯವು ಅಡಕವಾಗಿದೆ. ಈ ಅಭಿಪ್ರಾಯದ ಹಿನ್ನೆಲೆಯಲ್ಲಿ ನೋಡುವುದಾದರೆ, ದೇಶದ ಆಡಳಿತದ ಹೊಣೆಯನ್ನು ಹೊರಲು ಕಾಂಗ್ರೆಸು ಶಕ್ಯವಾದಷ್ಟು ಪ್ರಯತ್ನವನ್ನು ಮಾಡುವುದು ಎಂದು ನಿಸ್ಸಂದೇಹವಾಗಿ ಹೇಳಬಹುದು. (೨೨–೬–೪೫)

ಸಿಮ್ಲಾ ಪರಿಷತ್ತು—?

ಪರಿಷತ್ತು ನಡೆದಿದೆಯಾದರೂ ಚರ್ಚೆಯ ವಿಷಯವಾಗಿ ಯಾವ ಪ್ರಕಟನೆಯನ್ನೂ ಕೊನೆಯ ವರೆಗೂ ಕೊಡಬಾರದೆಂಬ ನಿರ್ಧಾರವಿದ್ದಂತಿದೆ. ಇದಲ್ಲದೆ ಚರ್ಚೆಯ ವಿವರಗಳನ್ನೂ ಹೊರಗೆಡಹಬಾರದೆಂದು ಪತ್ರಿಕಾಪ್ರತಿನಿಧಿಗಳೂ ಒಪ್ಪಿಕೊಂಡಂತಿದೆ. ಇಷ್ಟೇ ಅಲ್ಲದೆ ಮಿಕ್ಕವರು ಕೂಡ ತರ್ಕ–ವಿತರ್ಕ ಮಾಡಬಾರದೆಂದು ಅಲ್ಲಿ ಕೂಡಿದವರ ಇಚ್ಛೆ ಇದೆಯಂತೆ! ಇಂತಹ ಇಚ್ಛೆ ನಿಜವಾಗಿಯೆ ಇದ್ದುದಾದರೆ, ಅದು ಜಾಣತನದ್ದಾಗದು; ಮಿಕ್ಕವರ ತರ್ಕ-ವಿತರ್ಕಗಳನ್ನು ತಡೆಯುವುದಾದರೆ ಚರ್ಚೆಗೆ ಪ್ರಕಟನೆ ಇರಬೇಕು. ಅದೇನೆ ಇರಲಿ—ಈ ಮಾತುಗಳು ಪ್ರಕಟವಾಗುವುದರೊಳಗಾಗಿ ಪರಿಷತ್ತಿನ ಫಲಿತಾಂಶ ಹೊರಬೀಳಲಿ ಎಂಬ ಅಪೇಕ್ಷೆಯಿಂದ ನಮ್ಮ ತರ್ಕ-ವಿತರ್ಕಗಳನ್ನು ಇಲ್ಲಿ ಕಾಣಿಸುವೆವು:

(೧) ಯಾವ ರಾಜಕೀಯ ಪಕ್ಷದ ತತ್ತ್ವಕ್ಕೂ ಭಂಗ ಬಾರದಂತೆ ನೋಡಲು ವೈಸರಾಯರೆ ಹಟ ತೊಟ್ಟರೂ ದೇಶದ—ಇಡಿಯ ದೇಶದ—ಸತ್ತ್ವಕ್ಕೆ ಭಂಗ ಬಾರದಂತೆ ನೋಡಲು ಮೌಲಾನಾ ಆಝಾದರು ಹಟ ತೊಟ್ಟಂತಿದೆ; ಅದಕಾಗಿ,

(೨) ಹೊಸ ಕೌನ್ಸಿಲಿನಲ್ಲಿ ಎಷ್ಟು ಜಾಗೆಗಳೊ ಅಷ್ಟೆ ಹೆಸರುಗಳನ್ನು ಕೊಡಬೇಕು, ಶಕ್ಯ ಮಾಡಿ ಪರಿಷತ್ತಿನಲ್ಲಿಯೆ ನಿರ್ಣಯಿಸಿ ಕೊಡಬೇಕು ಎಂದು ಆಝಾದರ ಮತ; ಆದರೆ,

(೩) ಮುಸಲ್ಮಾನರ ಹೆಸರುಗಳನ್ನು ಕೊಡುವವರು ಯಾರು—ಎಂದು ಜಗಳ. ಎಲ್ಲ ಮುಸಲ್ಮಾನ ಹೆಸರುಗಳನ್ನು ಜಿನ್ನಾರೆ ಕೊಡಲಿ, ಆದರೆ ಅವುಗಳಲ್ಲಿ ಒಂದೆರಡಾದರೂ ಲೀಗಕ್ಕೆ ಸೇರದ ಹೆಸರುಗಳಿರಲಿ; ಇಲ್ಲವೆ ಮುಸಲ್ಮಾನರ ಹೆಸರುಗಳಲ್ಲಿ ಕೆಲವಷ್ಟು ಜಿನ್ನಾ ಸಾಹೇಬರು ಕೊಡಲಿ, ಉಳಿದ ಮುಸಲ್ಮಾನ್ ಹೆಸರುಗಳನ್ನು ಕಾಂಗ್ರೆಸು ಕೊಡಲಿ ಎಂದು ಒಂದು ಸಮಾಧಾನ

(೪) ಈ ಸಮಾಧಾನವನ್ನು ಲೀಗವು ಒಪ್ಪುವುದಾದರೆ ಜನಸಂಖ್ಯೆಯ ಪ್ರಮಾಣದಂತೆ ಪ್ರಾಂತೀಯ ಮಂತ್ರಿಮಂಡಲಗಳೂ ಸಮ್ಮಿಶ್ರವಾಗಬಹುದು.

(೫) ಕೊನೆಯದಾಗಿ—ಇದಾವುದೂ ಒಪ್ಪದಿದ್ದರೆ—ಲೀಗದಿಂದ ಮುಸಲ್ಮಾನರನ್ನು ಬೇರೆ ಪಕ್ಷಗಳಿಂದ ಮುಸಲ್ಮಾನೇತರರನ್ನೂ ಜಿನ್ನಾ ಸಾಹೇಬರೆ ಆರಿಸಲಿ.

ಈ ರೀತಿ ನಿರ್ಣಯವಾಗದಿದ್ದಲ್ಲಿ ಪರಿಷತ್ತಿನ ಚರ್ಚೆಯನ್ನು ಎಷ್ಟು ಮುಚ್ಚಿಡುವುದಾದರೂ ಯಶಸ್ಸು ನಿಜವಾದುದಲ್ಲ ಎಂಬುದು ಖಂಡಿತ ಮುಷ್ಟ ತರ್ಕ-ವಿತರ್ಕವಲ್ಲ. (೨೭–೬–೪೫)

ಬಳ್ಳಾರಿಯಲ್ಲಿ ಕನ್ನಡಕ್ಕಾಗುತ್ತಿರುವ ಅನ್ಯಾಯಕ್ಕೆ ಮುಖ್ಯವಾಗಿ ಅಧಿಕಾರಿಗಳೇ ಕಾರಣರೆನ್ನಬಹುದು. ಮದ್ರಾಸು ಪ್ರಾಂತ್ಯದಲ್ಲಿ ಬಳ್ಳಾರಿ ಎರಡನೆಯ ಕನ್ನಡ ಜಿಲ್ಲೆ—ಅದೂ ತೆಲುಗೆಂದೇ ಸರಕಾರದ ಗಣನೆ! ಬಂದು ಹೋಗುವ ಅಧಿಕಾರಿಗಳೆಲ್ಲ ಆಂಧ್ರರು! ಸಾಮಾನ್ಯ ಜನ ಅನಿವಾರ್ಯವಾಗಿ ಅಧಿಕಾರಿಗಳೊಡನೆ ಮಾತನಾಡಲಿಕ್ಕಾದರೂ ತೆಲುಗನ್ನು ಕಲಿಯಬೇಕಾಗುತ್ತದೆ. ಇದರಿಂದ ಅಧಿಕಾರಿಗಳು ಬಳ್ಳಾರಿ ತೆಲುಗೆಂದೇ ಭಾವಿಸಿದ್ದಾರೆನ್ನಬಹುದು!

ಇದನ್ನು ಖಂಡಿಸುತ್ತಾ ಕನ್ನಡಿಗರನ್ನೇ ಅಧಿಕಾರಿಗಳನ್ನಾಗಿ ನಿಯಮಿಸಬೇಕೆಂದು ಸರಕಾರವನ್ನು ಕೋರಿ ಗೊತ್ತುವಳಿ ಮಾಡಿದ್ದು ಮುಖ್ಯವಾದುದೆನ್ನಬಹುದು. ಕನ್ನಡದ ಊರುಗಳಲ್ಲಿ ತೆಲುಗು ಶಾಲೆಗಳಿರುವುದೊಂದು ತೀರಾ ಪ್ರಮಾದದ ಸಂಗತಿ! ಇನ್ನೂ ಕೆಲವು ಕಡೆ ಹಾಸ್ಯಾಸ್ಪದವಾಗಿ—ಬಾಲಕರ ಶಾಲೆ ಕನ್ನಡ, ಬಾಲಿಕೆಯರ ಶಾಲೆ ತೆಲುಗು ಇರುವುದೂ ಉಂಟು. ಇಂತಹ ಕುಂದು-ಕೊರತೆಗಳನ್ನು ಹೊರಗೆ ಮಂಡಿಸಿ ಗೊತ್ತುವಳಿಗಳನ್ನು ಮಂಜೂರು ಮಾಡಲಾಗಿದೆಯೆನ್ನಬಹುದು.

ಜಿಲ್ಲೆಯ ಹೊಸ—ಕಿರಿಯ—ಕವಿಗಳನ್ನು ಪ್ರಚೋದಿಸಲು ಕವಿಗೋಷ್ಠಿ ಕೂಡ ಜರುಗಿತು. ಹಿರಿಯ ಸಾಹಿತಿ ಪುಲ್ಲಯ್ಯನ ಪ್ರಬಂಧಗಳ ಎಂ. ಜಿ ವೆಂಕಟೇಶಯ್ಯ ಅಧ್ಯಕ್ಷರಾಗಿದ್ದರು. ಶ್ರೀಯುತರಾದ 'ಮನು' 'ಕನ್ನಡಿಗ' ಪ್ರಗತಿಶೀಲ ಚೆನ್ನಬಸಪ್ಪ ಇತ್ಯಾದಿಯವರು ತಮ್ಮ ಸ್ಫೂರ್ತಿದಾಯಕ ಹೊಸ ಕವಿತೆಗಳನ್ನು ಓದಿದರು. '**ಬಳ್ಳಾರಿ ಬೀಚಿಯ ದೇವನಿಗೊಂದು ಬುದ್ಧಿ ಮಾತು**' 'ದೇವನ ಕಾಣಿಕೆ' 'ಏಕೀಕರಣ' ನಾಟಕಗಳು ನಗೆಯ ಚೆಲ್ಲಾಟವನ್ನೇ ಮಾಡಿದುವು. **ಶ್ರೀಮತಿ ಸರ್ವ ಮಂಗಳಾಂಬೆಯವರ** ಗದ್ಯವಾಚನವೂ ನಡೆಯಿತು. ಇದೇ ಸಂದರ್ಭದಲ್ಲಿ, ಹೊಸ ಕವಿಗಳಿಗೆ ಅಗತ್ಯವಾಗಿ ಕೊಡಬೇಕಾದ ಪ್ರೋತ್ಸಾಹ ಇಂತಹ ಗೋಷ್ಠಿಗಳಿಂದಲೂ ಸಿಗುತ್ತಿರಬೇಕು. ಜಿಲ್ಲಾ ಕರ್ನಾಟಕ ಸಂಘ ತನ್ನ ಗುರಿಗಳಲ್ಲಿ ಕವಿಗಳಿಗೆ ಸಾಕಷ್ಟು ಸಹಾಯ ಮಾಡುವುದನ್ನೂ ಒಂದಾಗಿ ಇಟ್ಟುಕೊಂಡಿರುವುದು ಸಂತೋಷದ ಸಂಗತಿ!

ಹೊಸತಾಗಿ ಬಂದು ನಾಡನ್ನು ನಡುಗಿಸಿದ ಪ್ರಗತಿಶೀಲ ಸಾಹಿತ್ಯ ಕುರಿತು ಇಲ್ಲಿಯೂ ಭಾಷಣಮಾಲೆಯನ್ನು ಏರ್ಪಡಿಸಲಾಗಿತ್ತು. ಕುಲಕರ್ಣಿ ದತ್ತಾತ್ರೇಯ, ಸಮತಾವಾದಿ ಉಪಾಧ್ಯಾಯರು, ಕೆ. ಚೆನ್ನಬಸಪ್ಪ ತಮ್ಮ ಪ್ರಗತಿಶೀಲ ಪಂಥವನ್ನು ಪ್ರತಿಪಾದಿಸಿದರು. ಸಭಿಕರಲ್ಲಿ ಮಾತ್ರ 'ಏನಿದು?' ಎಂದು ಕಕ್ಕಾಬಿಕ್ಕಿಯಾದವರೇ ಬಹಳ. ಮಾಸ್ತಿಯವರಿಗೂ, ಪ್ರಗತಿಶೀಲರಿಗೂ ಇರುವ ಮತಭೇದ ತಿಳಿಯದವರಿಗೆ ಚೆನ್ನಬಸಪ್ಪನವರ ಭಾಷಣ ಅರ್ಥವಾಗುವುದು ಕಷ್ಟವಾಗಿದ್ದರೂ, ವಿಷಯ ವೈವಿಧ್ಯ ಗ್ರಾಹ್ಯವಾಗಿತ್ತು.

ಡಾ. ಮಾರ್ಲರ 'ಜೀವನವೇ ಸಾಹಿತ್ಯ' ಎಂಬ ಪ್ರತಿಪಾದನಾ ವ್ಯಾಖ್ಯೆ, ಹಿರಿಯ ಧುರೀಣರಾದ ಬೂದಿಹಾಳ ಅನಂತಾಚಾರ್ಯರ 'ಸಾಹಿತ್ಯವೇ ಜೀವನಮಾರ್ಗದರ್ಶಕ.' ಎಂಬ ಉಪದೇಶ, ಮಲ್ಲಾಬಾದಿಯವರ ವ್ಯಾಖ್ಯಾನಗಳು—ಎಲ್ಲ ನವೀನವಾಗಿ ಹೊಸ ಕಳೆಯನ್ನೇ ಕೊಟ್ಟಿದ್ದವು.

ಇನ್ನು ಮರೆಯಲಾರದ ವಿಷಯವೆಂದರೆ ದೊಡ್ಡನಗೌಡರ ಗಮಕ! ಒಂದುವರೆ ಘಂಟೆ ಕಾಲ ತಮ್ಮ ಸುರಸ ವಾಣಿಯಿಂದ ಸಭಿಕರನ್ನು ಕೊನೆದಾಡಿಸಿದರವರು! ಮೊದಲೇ ರಾಘವಾಂಕನ ಹರಿಶ್ಚಂದ್ರ ಕಾವ್ಯ—ಅದರಲ್ಲಿಯೂ ಚಂದ್ರಮತಿಯ 'ವಿಲಾಪ!' ಇನ್ನು ಕೇಳಬೇಕೇನು? ಜನರ ಹೃದಯವನ್ನು ಕೆದಕಿ, ಅಲ್ಲಾಡಿಸಿ ಕರಗಿಸಿಬಿಟ್ಟರು! ರಸವರ್ಷ ಇಳಿಯಿತು! ಕನ್ನಡತನ ಮೆರೆದಾಡಿತು!

ಅಂತೂ ಯಶಸ್ವೀ ಸಮಾರಂಭ! ಹಬ್ಬ ಮುಗಿಯಿತು! ಆದರೆ ಹಬ್ಬದೊಂದಿಗೆ ಉತ್ಸಾಹ ಕೂಡ ಮುಗಿಯದೆ, ಕಾರ್ಯ ತೀವ್ರಗತಿಯಿಂದ ಜರುಗಲಿದೆ. ಧ್ಯೇಯವಾಗಿಟ್ಟುಕೊಂಡಿರುವ ವಿಷಯಗಳಲ್ಲಿ ಅತ್ಯಾವಶ್ಯಕವಾದುವುಗಳೇ—ಕನ್ನಡ ಶಾಲೆಗಳನ್ನು ಸ್ಥಾಪಿಸುವುದು, ಕನ್ನಡ ಪತ್ರಿಕೆ-ಪುಸ್ತಕಗಳನ್ನು ಪ್ರಕಟಿಸುವುದು, ಕನ್ನಡ ಪ್ರಚಾರ ಮಾಡುವುದು!— ಎಲ್ಲವೂ ಜರುಗಲಿವೆ. ಜಿಲ್ಲಾ ಕರ್ನಾಟಕ ಸಂಘಕ್ಕೆ ಎಲ್ಲ ಕನ್ನಡಿಗರೂ ತಮ್ಮ ನೆರವನ್ನು ನೀಡಬೇಕಾಗಿದೆ.

ಗಡಿನಾಡಿನ ಕನ್ನಡ ಬದುಕಿದರೆಯೆ ನಾಡು ನಿರ್ಭಯವಾಗಿ ನಿಂತೀತು. ಆಗಾಗ ಬರುವ ಗಂಡಾಂತರಗಳು ಇದೇ ನಾಡಿನ ಸಮಸ್ಯೆಗಳು. ಜಿಲ್ಲಾ ಸಂಘ ತನ್ನ ಚಟುವಟಿಕೆಗಳಿಂದ ಕರ್ನಾಟಕದ ದೃಷ್ಟಿಯನ್ನು ಈ ಕಡೆ ಸೆಳೆಯಿತು. ಅದಕ್ಕೆ ಪ್ರತ್ಯುತ್ತರ ಕೊಡುವ ಭಾರ ಕನ್ನಡತನದ ಉಳಿವಿಗಾಗಿ ಹೋರಾಡುವೆನೆನ್ನುವ ಕನ್ನಡಿಗರದು, ಕನ್ನಡ ಸಂಘಗಳದು. ಕನ್ನಡ ಪ್ರಚಾರಕ್ಕಾಗಿ ಎಲ್ಲರೂ ಕಂಕಣಬದ್ಧರಾದರೆ ಕನ್ನಡ ಕುಣಿದಾಡುತ್ತದೆ ಬಳ್ಳಾರಿಯಲ್ಲಿ!

ಕನ್ನಡ ಗೆಲ್ಲಲಿ! ಕನ್ನಡದ ಗುಡಿ ಮೆರೆದಾಡಲಿ!

೫೨ ವರ್ಷಗಳಿಂದ ಅನುಭವ ಪಟ್ಟ
ಕರ್ಕ 'ಮಾತೃ' ಕಂಪನಿ
ಇವರ
ಜ್ವರಗಡ್ಡೆಯ ಗುಳಿಗೆಗಳು
ಬಾಟ್ಲಿಗೆ ೧-೪-೦
ಎಂತಹ ಜ್ವರಗಡ್ಡೆಯನ್ನೂ ಕಳೆಯುವುದು
ವಿಳಾಸ:— ಗಣೇಶ ರಾಮಚಂದ್ರ ಕರ್ಕ ಮತ್ತು ಕಂಪನಿ
ಗಿರಗಾಂವ, ಮುಂಬಯಿ

ಮುದ್ರಕರು:
ಎಸ್. ಎಸ್. ಬೇಗೇರಿ,
ವಿಜಯ ಮುದ್ರಾಲಯ, ಧಾರವಾಡ.

ಪ್ರಕಾಶಕರು:
ಎಂ. ವಿ. ನಲ್ಲಿಗಟ್ಟಿ,
ಜಯಂತಿ ಕಾರ್ಯಾಲಯ, ಧಾರವಾಡ.

ದಿ ಯುನಾಯಿಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪನಿ, ಲಿ. ಧಾರವಾಡ

ಹೆಡ್ ಆಫೀಸ್ ಧಾರವಾಡ

- ವಿಮೆ ಮಾಡುವ ಅನುಕೂಲವುಳ್ಳ ಕರ್ನಾಟಕಸ್ಥರು, ಭರದಿಂದ ಬೆಳೆಯುತ್ತಿರುವ ಈ ಕನ್ನಡ ಕಂಪನಿಯ ಪಾಲಿಸಿಯನ್ನೇ ಪಡೆಯಬೇಕು!
- ಮೊದಲನೆಯ ಮೌಲ್ಯಮಾಪನದಲ್ಲಿ (Valuation) ಲಾಭವನ್ನು ಹಂಚುವುದಲ್ಲದೆ, ಹೊಸ ವಿಮಾಕಾಯಿದೆಯ ನಿರ್ಬಂಧಗಳಿಗೆ ತಕ್ಕಂತೆ ನಡೆದು, ಎಲ್ಲ ಪಾಲಿಸಿದಾರರ ಪ್ರೋತ್ಸಾಹಕ್ಕೂ ಪಾತ್ರವಾಗಿದೆ.
- ಮರಣಹೊಂದಿದ ಪಾಲಿಸಿದಾರರ ವಾರಸದಾರರಿಗೆ ವಿಳಂಬವಿಲ್ಲದೆ ಹಕ್ಕಿನ ಹಣ (Claim) ವನ್ನು ಸಲ್ಲಿಸಿರುವುದರಿಂದ, ಎಲ್ಲರ ನಂಬಿಗೆಗೂ ತಕ್ಕುದಾಗಿದೆ.
- ಕರ್ನಾಟಕದ ಏಳ್ಗೆಗಾಗಿ ಹಂಬಲಿಸುವವರೂ ಕನ್ನಡನಾಡಿನ ಹಿತಚಿಂತಕರೂ, ಇದೇ ಕಂಪನಿಯ ಪಾಲಿಸಿಗಳನ್ನೂ ಪಾಲುಗಳನ್ನೂ ಕೊಂಡುಕೊಳ್ಳಲೇಬೇಕು.

ಏಜಂಟರಿಗೆ ಧಾರಾಳವಾದ ಕಮಿಶನ್ ಕೊಡಲಾಗುವುದು.

ವಿಶೇಷ ವಿವರಕ್ಕೆ ಬರೆಯಬೇಕು :- ಎಂ. ಗೋವರ್ಧನರಾವ, ಮ್ಯಾನೇಜರ್

ತಲೆಗೂದಲು ಚೆನ್ನಾಗಿದ್ದರೆ ಚೆಲುವಿಗೊಂದು ಬೆಲೆ!
ಹಾಗೆ ಚೆನ್ನಾಗಿರುವುದೆಂದರೇನು?

ತಲೆಗೂದಲು ಕಪ್ಪಗೆ ಇರಬೇಕು, ದಟ್ಟವಾಗಿ, ನೀಟವಾಗಿ ಇರಬೇಕು!

ಹಾಗಾಗಬೇಕಾದರೆ "ಮುಕುಲ" ಉಪಯೋಗಿಸಿರಿ!

ತರುಣ–ತರುಣಿಯರು ಬರಿಯ ಕಣ್ಣು ಮೂಗು- ಬಣ್ಣಗಳಿಂದ ಚೆನ್ನಾಗಿದ್ದರೆ ಏನಾಯಿತು? ತಲೆಗೆ ಕೂದಲು ಚೆನ್ನಾಗಿರದಿದ್ದರೆ ಎಷ್ಟು ಚೆಲುವಿಕೆ ಇದ್ದರೂ ಅದು ವ್ಯರ್ಥವೆನಿಸುವುದು.

ಮುಕುಲ

ದಿನದಿನವೂ ಉಪಯೋಗಿಸಿರಿ.

ಆಯುರ್ವೇದ ತಜ್ಞರಿಂದ ಶುದ್ಧ ಕೊಬ್ಬರಿ ಎಣ್ಣೆಯಲ್ಲಿ ತಯಾರಿಸಲಾದ "ಮುಕುಲ" ಎಂಬ ಕೇಶವರ್ಧಕ ತೈಲವನ್ನು ಯಾವಾಗಲೂ ಬಳಸುತ್ತಿದ್ದರೆ, ನಿಮ್ಮ ಚೆಲುವಿಕೆ ಪೂರ್ಣತೆ ಪಡೆಯುವುದೆಂಬುದನ್ನು ಮರೆಯಬೇಡಿರಿ.

ಆಯುರ್ವೇದಾಶ್ರಮ ಫಾರ್ಮಸಿ ಲಿ., ಅಹಮ್ಮದನಗರ

ಹುಬ್ಬಳ್ಳಿ- ಶಾಖೆ : ಸ್ಟೇಶನ್ ರೋಡು, ಹುಬ್ಬಳ್ಳಿ.

ಜಯಂತಿ

ಸಂಪಾದಕ:
ಬೆಟಗೇರಿ ಕೃಷ್ಣಶರ್ಮ

ಸಂಪುಟ ೮] [ಸಂಚಿಕೆ ೩

—: ಈ ಸಂಚಿಕೆಯಲ್ಲಿ :—

ಭಾರತೀಯನ ದೃಷ್ಟಿ (ಕವನ) ೬೧
ಶ್ರೀ. ಕೆ. ಚೆನ್ನಬಸಪ್ಪ ಬಿ. ಎ. ಬೆಳಗಾಂವಿ
ಪ್ರಾರ್ಥನೆ (ಕವನ) ೬೪
'ಕೌಸಲ್ಯಾ ತನಯ' ಶಿವಮೊಗ್ಗ
ನೀನೇ ಮಂಗಳ (ಕವನ) ೬೪
ಶ್ರೀ. ಡಿ. ಎಸ್. ಕರ್ಕಿ ಎಂ. ಎ. ಬೆಳಗಾಂವಿ
ತೊಡಲಾರದ ಕಣ್ಣು (ಏಕಾಂಕನಾಟಕ) ೬೫
ಪ್ರೊ. ರಂ. ಶ್ರೀ. ಮುಗಳಿ ಎಂ. ಎ., ಬಿ. ಟಿ. ಸಾಂಗ್ಲಿ
ನಶಿವು, ಓ ಎನ್ನ ಗುರುದೇವ! (ಕವನಗಳು) ೭೧
'ರಾಘವ' 'ಆತ್ರೇಯ'
ಧ್ರುವವಲಯಗಳು (ಲಘುಪ್ರಬಂಧ) ೭೨
ಶ್ರೀ. ಸಚ್ಚಿದಾನಂದ ಶಿರೋಡಕರ, ಪುಣೆ
ಪ್ರಪಂಚದ ಪೇಟೆಗಳು ಯಾರ ಪದರಲ್ಲಿ? (ಆರ್ಥಿಕ ವಿಚಾರ) ೭೩
ಶ್ರೀ ವಾಕ್ಳೀಕರ ಗುರುರಾಯರು ಬಿ. ಎ., ಎಲ್‌ಎಲ್. ಬಿ. ...
ಆಕೆ ಯಾರು? (ಸಣ್ಣ ಕತೆ) ೮೧
ಶ್ರೀ. ಎಂ. ನರಸಿಂಹಮೂರ್ತಿ, ...
ಚಿತ್ರ ಸಂಪಾದಕೀಯ (...), ...
ವಿಜ್ಞಾನದ ವಿಚಿತ್ರ ಪ್ರಪಂಚ (...) ...
ಸಾದರ ಸ್ವೀಕಾರ (ಕವರ್ ೩) ...

...ಗಸ್ಟ್ ೧೯೪೫ ... ಬೆಲೆ: ...

ಸಾದರ ಸ್ವೀಕಾರ

೨೨. **ಶ್ರೀ ರುಕ್ಮಾಂಗದ ಮಹಾರಾಜರವರ ಚರಿತ್ರವು:** ಬರೆದವರು ಶ್ರೀಮಾನ್ ವ್ಯಂಕಟೇಶ ಅವ್ಯಕ್ತ ಉಪ್ಪಲದಿನ್ನಿ ಪೇನಶನರ್ ಮಾಸ್ತರ್, ವಿಜಾಪುರ. ಲೇಖಕರೇ ಪ್ರಕಾಶಕರು. ಕ್ರಾ. ೫. ೫೮ ಪುಟಗಳು; ಬೆಲೆ ೦-೬-೦.

ವಿಜಾಪುರದ ಆದಿಲಶಾಹಿಯ ಕೊನೆಯ ಕಾಲಖಂಡದಲ್ಲಿ ಬಾಳಿ ಬೆಳಗಿದ ರುಕ್ಮಿಣಿ-ಪಂಡಿತರೆಂಬ ಮಹಾತ್ಮರ ಜೀವನ ಪರಿಚಯವಿದು. ಲೌಕಿಕ-ಪರಮಾರ್ಥಗಳೆರಡರಲ್ಲಿಯೂ ಪಂಡಿತರವು ಮೇಲುಗೈ. ಸುಪ್ರಸಿದ್ಧ ವೈದ್ಯರು. ಸಂಸ್ಕೃತದಲ್ಲಿ ಗ್ರಂಥಗಳನ್ನೂ ಸಂಸ್ಕೃತ-ಕನ್ನಡದಲ್ಲಿ ಹಾಡು-ಪದ್ಯಗಳನ್ನೂ ರಚಿಸಿದ್ದಾರೆ. ಪ್ರಸ್ತುತ ಚರಿತ್ರ ಭಾವಿಕತನದಿಂದ ಬರೆದುದಾದುದರಿಂದ, ಹಲವು ಪವಾಡ ಕಥೆಗಳಿಂದ ಕೂಡಿಕೊಂಡಿದೆ. ಇಂದಿನ ವೈಜ್ಞಾನಿಕ ಯುಗದಲ್ಲಿ, ಮನುಷ್ಯರು ಮನುಷ್ಯರಾಗಿಯೆ ಬಾಳಿ ದೊಡ್ಡವರೆನಿಸಿಕೊಂಡುದನ್ನು ತಿಳಿಸುವಂತಹ ಜೀವನಚರಿತ್ರಗಳ ಅವಶ್ಯಕತೆಯಿದೆ.

೨೩. **ಮುಂಬಯಿ ಮೊಗವೀರ ವ್ಯವಸ್ಥಾಪಕ ಮಂಡಳಿಯ ೪೨ನೆಯ ವರ್ಷದ ವರದಿ.** ಡೆ. ೫. ೩೬ ಪುಟಗಳು. ಆನರರಿ ಸೆಕ್ರೆಟರಿಗಳವರಿಂದ ಬಂದಿದೆ.

ಸಮಾಜ ಸಂಘಟನೆಗಾಗಿ ನಡೆದಿರುವ ಮುಂಬಯಿಯ ಕನ್ನಡಿಗರ ಸಂಸ್ಥೆಗಳಲ್ಲಿ ಮಾದರಿಯ ಹಿರಿಯ ಸಂಸ್ಥೆಯಿದು. ಒಂದೊಂದು ಜಾತಿಯವರೂ ಕನ್ನಡವನ್ನು ಒಂದುಗೂಡಿಸುವ ಗುರಿಯನ್ನಿರಿಸಿಕೊಂಡು, ತಂತಮ್ಮ ಸಂಘಟನೆಯನ್ನು— ಮೊಗವೀರರಂತೆ— ಮಾಡಿಕೊಳ್ಳುತ್ತ ಹೋದರೆ, ಕನ್ನಡಿಗರ ಏಳಿಗೆಗಾಗಿ ಬಹಳ ದಾರಿಕಾಯಬೇಕಾಗಿಲ್ಲ.

೨೪. **ಕರ್ನಾಟಕ ಟೇಲರ್ಸ್ ಅಸೋಶಿಯೇಶನ್ ಧಾರವಾಡ** ಈ ಸಂಸ್ಥೆಯ ವಾರ್ಷಿಕವರದಿ ಕಾರ್ಯದರ್ಶಿಗಳು ಶ್ರೀಯುತರಾದ ಸಿ. ಡಿ. ಹಳಪೇಟೆ ಮತ್ತು ಕೆ. ಬಿ. ನರೇಗಲ್ಲ ಅವರು. ಕ್ರಾ. ೮ ೮ ಪುಟಗಳು.

ಯುದ್ಧದ ಕಾಲ ನಮ್ಮಲ್ಲಿ ಹೊಸದೇನಾದರೂ ಮಾಡಿದ್ದರೆ, ಜನರಿಗೆ ಸಂಸ್ಥಾಜೀವನದ ಅನಿವಾರ್ಯತೆಯನ್ನು ತೋರಿಸಿಕೊಟ್ಟುದು. ವ್ಯಕ್ತಿಯ ಕೂಗಿಗೆ ಕೇಳುವ ಕಿವಿಯೆ ಸಿಕ್ಕದಂತಾಗಲು, ಜನಸಾಮಾನ್ಯ [illegible] ವುಗೂಡಿ ಕಿರಿಚಿಕೊಳ್ಳಬೇಕಾಯಿತು. ಅದಕ್ಕಾಗಿಯೆ ಅಲ್ಲಲ್ಲಿ ಬೇರೆ ಬೇರೆ ವ್ಯಾಪಾರೋದ್ಯಮಗಾರರ ಸಂಸ್ಥೆಗಳು ನಾಡಿನಲ್ಲಿ ತಲೆಯೆತ್ತಿದುವು. ಪ್ರಸ್ತುತ ಸಂಸ್ಥೆಯೂ ಹೀಗೆಯೆ ಹೊರಟು ಮುಂದೆ ಬಂದುದು. ಒಂದು ವರ್ಷದಲ್ಲಿ ಹೊಲಿಗೆಯ ವ್ಯವಸಾಯಗಾರರ ಕೊರತೆಯನ್ನು ಕಳೆಯಲು ಎಷ್ಟೋ ಸಹಾಯಕವಾಗಿದೆಯಲ್ಲದೆ, ಸಮಾಜದ ಕಷ್ಟನಿವಾರಣೆಯ ಕಾರ್ಯದಲ್ಲೂ ತನ್ನ 'ಅಳಲಿಭಕ್ತಿ'ಯ ಸೇವೆ ಸಲ್ಲಿಸಿದೆ. ಈ ಸಂಸ್ಥೆ ಬಹುಕಾಲ ಬಾ
ನಾಡಕಟ್ಟಡಕ್ಕೆ ನೆರವಾಗಲಿ!

೨೫. **ಹುಣ್ಣಿಮೆಯ ರಾತ್ರಿ** (ಚಿಕ್ಕ ಕಾದಂಬರಿ) ಬರೆದವರು ಶ್ರೀಮಾನ 'ಧನ್ವಂತ' ಬೆಂಗಳೂರು ಅವರು. ಪ್ರಕಾಶಕರು ಮೇ. ಎಚ್. ಎಸ್. ರಾವ್ ಬ್ರದರ್ಸ್, ಚಿಕ್ಕಪೇಟೆ. ಬೆಂಗಳೂರುನಗರ. ಕ್ರಾ. ೮ ೬೪ ಪುಟಗಳು. ಬೆಲೆ ೦-೧೨-೦.

ಮನೋಹರ ಗ್ರಂಥಮಾಲೆಯವರ ಪ್ರಶಂಸನೀಯ ಉಪಕ್ರಮ.

ಸಾಹಿತ್ಯನಿರ್ಮಾಣದ ವಿವಿಧ ವಿಭಾಗದ ಸ್ಪರ್ಧೆಗಳು.

೨೦೦೦ ರೂ. ಗಳಿಗೆ ಮಿಕ್ಕಿ ಬಹುಮಾನಗಳನ್ನಿರಿಸಿರುವರಲ್ಲದೆ
'ಸಾಹಿತ್ಯಾಲಂಕಾರ' ಎಂಬ ಸುವರ್ಣಪದಕದ
ವಿಶೇಷ ಮಾನವನ್ನೂ ಸಲ್ಲಿಸಲಿರುವರು.

ಏರ್ಪಡಿಸಿದ ಸ್ಪರ್ಧೆಗಳು

೧. ಕಾದಂಬರೀ ಲೇಖನ: ಎರಡು ಬಹುಮಾನಗಳು ೪೦೦,೨೦೦ ರೂಪಾಯಿಗಳವು. ೨. ನಾಟಕಲೇಖನ: ಎರಡು ಬಹುಮಾನಗಳು ೪೦೦, ೨೦೦ ರೂಪಾಯಿಗಳವು; ೩. ಸಣ್ಣ ಕತೆಯ ಲೇಖನ: ಮೂರು ಬಹುಮಾನಗಳು ೧೦೦,೫೦, ೨೫ ರೂ. ಗಳವು. ೪. ಏಕಾಂಕ ನಾಟಕ ಲೇಖನ: ಮೂರು ಬಹುಮಾನಗಳು ೧೦೦, ೫೦, ೨೫ ರೂ. ಗಳವು. ೫. ವ್ಯಕ್ತಿಚಿತ್ರ ಲೇಖನ: ಮೂವತ್ತೈದು ಬಹುಮಾನಗಳು, ಪ್ರತಿಯೊಂದು ೧೫ ರೂ. ಗಳದು. ೬. ಪ್ರಬಂಧ ಲೇಖನ: ಎರಡು ಬಹುಮಾನಗಳು ೭೦, ೫೦ ರೂ. ಗಳವು. ೭. ಕಾವ್ಯಲೇಖನ. ಒಂದು ಬಹುಮಾನ ೧೦೬ ರೂ. ಗಳದು.

ಎಲ್ಲ ಸ್ಪರ್ಧೆಗಳಲ್ಲಿಯೂ ಮೇಲ್ತರಗತಿಯಲ್ಲಿ ಬಂದು, ಒಟ್ಟಿನಲ್ಲಿ ಮೊದಲನೆಯವರಾದವರಿಗೆ ಆಯಾ ಬಹುಮಾನಗಳಲ್ಲದೆ "ಸಾಹಿತ್ಯಾಲಂಕಾರ" ಬಿರುದಾಂಕಿತ ಸುವರ್ಣ ಪದಕವನ್ನು ಕೊಟ್ಟು ಗೌರವಿಸಲಾಗುವುದು. ತಾ. ೩೧-೩-೪೬ನೆಯ ದಿನವು ಸ್ಪರ್ಧೆಯ ಅವಧಿಯ ಕೊನೆಯ ದಿನವಾಗಿದೆ. ವಿಶೇಷ ವಿವರಣೆ ಬೇಕಾದವರು 'ಮನೋಹರ ಗ್ರಂಥಮಾಲಾ, ಧಾರವಾಡ' ಇವರೊಂದಿಗೆ ಪತ್ರವ್ಯವಹಾರ ಮಾಡಿ ತಿಳಿದುಕೊಳ್ಳಬೇಕು

ಕನ್ನಡನಾಡಿನ ಎಲ್ಲ ಹಿರಿಯ ಕಿರಿಯ ಸಾಹಿತ್ಯಿಕರೂ ಈ ಸ್ಪರ್ಧೆಯಲ್ಲಿ ಭಾಗವಹಿಸಿ ಯಶಸ್ವಿಯಾಗಿಸಬೇಕಲ್ಲದೆ, ಸ್ಪರ್ಧೆಯ ನೆಪದಿಂದ ಸಾಹಿತ್ಯನಿರ್ಮಿತಿಯ ಕಾರ್ಯಮಾಡಿ, ಕನ್ನಡ ಸಾಹಿತ್ಯದ ವೈಭವವನ್ನು ಹೆಚ್ಚಿಸಬೇಕು. ಸಂ. ಜ.

ಜಯಂತಿ

ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

ವಾ. ವರ್ಗಣಿ ಅಂಚೆವೆಚ್ಚ ಸೇರಿ ೪—೮—೦ ಆರು ತಿಂಗಳಿಗೆ ೨—೪—೦ ಬಿಡಿ ಸಂಚಿಕೆಗೆ ೬ ಆಣೆ.

ಸಂಪುಟ ೮ | ೧ನೆಯ ಆಗಸ್ಟ್ ೧೯೪೫ | ಸಂಚಿಕೆ ೩

ಭಾರತೀಯನ ದೃಷ್ಟಿ!

ಶ್ರೀ. ಕೆ. ಚೆನ್ನಬಸಪ್ಪ, ಬಿ. ಎ. ಬೆಳಗಾಂವಿ

೧

ವಿಜಯ ವಿಜಯ ವಿಜಯವಂತೆ,
ನಾಜಿ ಪತನವಾಯಿತಂತೆ
ದಾಸ್ಯದಿಂದ ಮುಕ್ತಿಯಂತೆ
ಜಗದ ಸೆರೆಯು ಹರಿಯಿತಂತೆ
ದಾಸ್ಯವೆನಲು ಮೃತ್ಯುವಂತೆ
ಮಿಥ್ಯೆಯಳಿದು, ಸತ್ಯವುಳಿದು
ಜಗಕೆ ಶಾಂತಿ ದೊರೆಯಿತಂತೆ
ಎಂಥ ವಿಜಯವೊ—
ಇದು—ಎಂಥ ವಿಜಯವೊ!

೨

ಜಗದ ಕುತ್ತನಿರಿದುಕೊಂಡು
ಜಗಕೆ ಮುಕ್ತಿಯಿತ್ತೆವೆಂದು—
ನಾಲ್ಕು ಹತ್ತು ಕೋಟಿ ಜನರ
ದೊಡ್ಡದೊಂದು ಸೆರೆಯೊಳಿಟ್ಟು—
ನಾವು ಜಗದ ಮುಕ್ತಿಗಾಗಿ
ಕಾದು ಗೆದ್ದ ಸತ್ಯಸಂಧ-
ರೆಂದು ಲಜ್ಜೆ ಬಿಟ್ಟು ಕುಣಿವು-
ದೇನು ವಿಜಯವೊ?—
ಇದು—ಎಂಥ ವಿಜಯವೊ!

೩

ವೇಶ್ಯೆಯೊಬ್ಬಳನ್ನ ವಿಟನ
ಇದಿರ ಹೆಣ್ಣಿಗೂಳಿಯಂತೆ
ಹಿಡಿದು ತನ್ನ ಮನೆಯೊಳಿರಿಸಿ,
ಅವನೆ ತನ್ನ ಸ್ವಾಮಿಯೆನಲು
'ತಾನೆ ಸೀತೆ! ಸಾಧ್ವಿ!' ಎಂದು
'ಪಾತಿವ್ರತ್ಯ ಮೂರ್ತಿ!' ಎಂದು
ಕೂಗಿಕೊಳುವುದೆಂಥ ಸತ್ಯ?
ಅಂಥ ವಿಜಯವೊ—
ಇದು-ಅಂಥ ವಿಜಯವೊ!

೪

ನಾಜಿಪ್ರೇತ ದಹನವಿಲ್ಲ,
ಅಂತ್ಯಕ್ರಿಯೆಯು ಮುಗಿಯಲಿಲ್ಲ!
ನಾಜಿ ಆತ್ಮ ದೇಹ ತಳೆದು
ಜಗದಿ ಜನಿಸಿ ನಿಂತೆ ಇಹುದು!
ಬೇರೆ ನಾಮ-ರೂಪತಳೆದು!
ವಿಜಯ ವಿಜಯ ವಿಜಯವೆಂದು
ಕಿರುಚಿ ಕೂಗಿ ನಗೆವುದೊಂದು
ಎಂಥ ವಿಜಯವೊ—
ಇದು—ಎಂಥ ವಿಜಯವೊ!

೫

ವಿಜಯ ವಿಜಯ ವಿಜಯವೆಂದು
ಗಂಟಲರಿದು ಕೂಗಿಕೊಳಲು
ಮಿಥ್ಯೆಯಳಿದು ಸತ್ಯವುಳಿದ
ಗುರುತು ಎಂದು ತಿಳಿಯಬರಿದು!
ಒಬ್ಬ ಕಳ್ಳನಳಿದು ಮತ್ತೆ
ಒಬ್ಬ ಕಳ್ಳ ಜನಿಸಿದಂತೆ!
ಇದಕೆ ವಿಜಯ ವಿಜಯವೆನಲು
ಎಂಥ ವಿಜಯವೊ—
ಇದು—ಎಂಥ ವಿಜಯವೊ!

೬

ಇಂಥ ಆಟ ನಡೆಯದಿನ್ನು
ಸಾಕು ಮೋಸದಾಟವಿನ್ನು!
ನಿಮ್ಮ ನುಡಿಗೆ ಮಾರುಹೋಗಿ
ಭಕ್ತಿಯಿಂದ ತಲೆಯ ಬಾಗಿ
ಮಣಿವ ದಾಸರಲ್ಲ ನಾವು!
ಇಂದೊ ನಾಳೆ ನಮ್ಮ ಕಾವು
ತಗುಲಿ: ನಿಮ್ಮ ಕೊಬ್ಬು ಕರಗಿ
ಜಗಕೆ ಶಾಂತಿ ದೊರೆವುದಂದೆ!
ವಿಜಯ ವಿಜಯವು,—
ಮುಕ್ತಿ ಮುಕ್ತಿಯು!

ಸಂಪಾದಕೀಯ

ಕನ್ನಡನಾಡಿನ ಹಳ್ಳಿಗಳು

ಕನ್ನಡನಾಡು ಹೆಚ್ಚಾಗಿ ಹಳ್ಳಿಗಳಿಂದ ತುಂಬಿದ ದೇಶ. ಇಲ್ಲಿ ಪಟ್ಟಣಗಳೆನಿಸಿಕೊಳ್ಳುವುವು ಇವೆಯಾದರೂ, ಬಹುಸಂಖ್ಯಾಕ ಪಟ್ಟಣಗಳ ಜನಸಾಮಾನ್ಯರು ಹಳ್ಳಿಗರೆನಿಸಿಕೊಳ್ಳಲಿಕ್ಕೇ ತಕ್ಕವರಾಗಿರುವರು. ಸಾಮಾನ್ಯವಾಗಿ ಪಟ್ಟಣಗಳು ಎರಡು ರೀತಿಯಿಂದ ಬೆಳೆದುವುಗಳಿರುವುವು. ಒಂದು ರಾಜಕೀಯ, ಎರಡನೆಯದು ವ್ಯಾಪಾರ-ಉದ್ಯಮ. ನಮ್ಮಲ್ಲಿಯ ಬಹಳ ಪಟ್ಟಣಗಳು ರಾಜಕೀಯ ಕಾರಣಕ್ಕಾಗಿಯೇ 'ಬೆಳೆದುವುಗಳಿರುವುವು'. ಅಲ್ಲಿಂದ ಸರಕಾರೀ ಕೋರ್ಟು-ಕಚೇರಿಗಳನ್ನು ಕಳೆದುಬಿಟ್ಟರೆ, ಉಳಿಯುವುದು ಬರಿ ಹಳ್ಳಿ. ವ್ಯಾಪಾರೋದ್ಯಮಗಳಿಗಾಗಿ ಬೆಳೆದ ನಗರಗಳು ನಮ್ಮಲ್ಲಿ ಒಂದು ಕೈಬೆರಳಿನಿಂದ ಎಣಿಸುವಷ್ಟು ಕೂಡ ಇಲ್ಲ. ಹಳ್ಳಿಗರ ಅಸಿದ್ಧ ವಸ್ತುಗಳನ್ನು ಬೇರೆ ಕಡೆಗೆ ಸಾಗಿಸಿ, ಅವರಿಗೆ ಪರದೇಶ ಪರಪ್ರಾಂತ್ಯಗಳ ಸಿದ್ಧವಸ್ತುಗಳನ್ನು ಪೂರಯಿಸಿ ಕೊಡುವ ದಳ್ಳಾಳಿಗಳಿಂದ ಕೂಡಿದ ಪೇಟೆಯೂರುಗಳು ಎಂದೂ ಪಟ್ಟಣಗಳೆನಿಸವು. ಏಕೆಂದರೆ ಅಲ್ಲಿ ಕೂಡ ಸಂಸ್ಕೃತಿಯ ದೃಷ್ಟಿಯಿಂದ ನೋಡಿದರೆ, ಹಳ್ಳಿಗತನವೇ ನೆಲಸಿರುವುದು. ಮುಖ್ಯ ರಾಜಧಾನಿಯ ನಗರಗಳೂ ಉದ್ಯಮ ಕೇಂದ್ರಗಳೂ ನಿಜವಾದ ಪಟ್ಟಣಗಳು. ಪಟ್ಟಣದ ಸಂಸ್ಕೃತಿ ನೆಲಸಿರುವುದು ಇಂತಹ ಜನವಸತಿಗಳಲ್ಲಿ ಮಾತ್ರ. ಆದರೆ ಇಂತಹ ಜನವಸತಿಗಳು ನಮ್ಮಲ್ಲಿ ಎಷ್ಟು ಇವೆ?

ಬ್ರಿಟಿಷ್ ಪೂರ್ವದ ನಮ್ಮ ಹಳ್ಳಿಗಳ ರೀತಿಯೇ ಬೇರೆಯಿತ್ತು, ಇಂದಿನ ಹಳ್ಳಿಗಳ ರೀತಿಯು ಬೇರೆಯಾಗಿದೆ. ಅಂದಿನ ಹಳ್ಳಿಗರು ಒಕ್ಕಲುತನ, ಮನೆಯ ಕೈಗಾರಿಕೆ ಎರಡನ್ನೂ ಸುವ್ಯವಸ್ಥಿತವಾಗಿ ನಡೆಯಿಸಿಕೊಂಡು ಸುಖದಿಂದ ಉಪಜೀವನ ಸಾಗಿಸುತ್ತಿದ್ದರು. ಇಂದಿನ ಹಳ್ಳಿಗರು ಒಕ್ಕಲುತನವೊಂದನ್ನೇ ಅವಲಂಬಿಸಿಕೊಂಡಿದ್ದು, ಅರೆಹೊಟ್ಟೆ-ಬರಿಮೈಗಳಿಂದ ಬದುಕುತ್ತಿರುವರು. ಹಿಂದಿನ ನಗರಗಳು ರಾಜಕೀಯ ರೀತಿಯಿಂದಲೆ ಬೆಳೆದುವುಗಳಾದುದರಿಂದ, ಅಲ್ಲಿ ಇರುವವರೆಲ್ಲ ಸಂಬಳದಾಳುಗಳಾಗಿದ್ದರು. ಅವರಿಗೆ ಬೇಕಾಗುವ ಎಲ್ಲ ಪದಾರ್ಥಗಳ ಪೂರೈಕೆಯೂ ಹಳ್ಳಿಗಳಿಂದಲೆ ಆಗಬೇಕಾಗಿದ್ದುದರಿಂದ, ಹಳ್ಳಿಯ ಒಕ್ಕಲಿಗರ ಮತ್ತು ಉದ್ಯಮಗಾರರ ಆರ್ಥಿಕ ಪರಿಸ್ಥಿತಿ ತುಂಬ ಚೆನ್ನಾಗಿರುತ್ತಿದ್ದಿತು. ಆದರೆ ಇಂದಿನ ನಗರಗಳಿಗೆ ಹಳ್ಳಿಗರಿಂದ ಆಹಾರ ಪದಾರ್ಥ ಮಾತ್ರ ಬೇಕಾಗಿದೆ; ಉದ್ಯಮಗಾರರ ಶ್ರಮದ ಆವಶ್ಯಕತೆ ಸ್ವಲ್ಪವೂ ಇಲ್ಲ. ಅವರ ಪರಿಶ್ರಮದಿಂದ ಸಿದ್ಧವಾಗಿ ಸಿಕ್ಕುತ್ತಿದ್ದ ಜೀವನೋಪಯುಕ್ತ ಪದಾರ್ಥಗಳೂ ವಿಲಾಸದ ವಸ್ತುಗಳೂ ಅವರಿಗೆ ಈಗ ಪರದೇಶಗಳಿಂದ ಸಿಕ್ಕುತ್ತಲಿವೆ. ಇದರಿಂದ ಹಳ್ಳಿಗಳಲ್ಲಿ ಉಂಟಾಗಿರುವ ದೊಡ್ಡದೊಂದು ತೊಂದರೆಯೆಂದರೆ, ಪರಂಪರೆಯಿಂದ ಗ್ರಾಮೋದ್ಯಮಗಾರಿಕೆಯಿಂದ ಉಪಜೀವಿಸುತ್ತ ಬಂದವರೆಲ್ಲರೂ ಕೆಲಸಗೇಡಿಗಳಾದುದು. ಹಳ್ಳಿಗರ ಮುಖ್ಯ ಉದ್ಯಮ ನೂಲುವುದು, ನೇಯುವುದು. ಇದಕ್ಕೆ ಸಹಕಾರಿಗಳಾಗಿ ಕಂಬಾರ, ಬಡಿಗ, ಪಿಂಜಾರ, ಚರ್ಮಕಾರ ಇವರೆಲ್ಲ ಬೇಕಾಗುತ್ತಿದ್ದರು. ನೂಲು-ಬಟ್ಟೆಗಳನ್ನು ಪರಪೇಟೆಗಳಿಗೆ ಸಾಗಿಸುವ ಚಿಕ್ಕಪುಟ್ಟ ವ್ಯಾಪಾರಿಗಳೂ ಅಲ್ಲಿ ಇರುತ್ತಿದ್ದರು. ಇಂದು ಅವರೆಲ್ಲರೂ ನಿರುದ್ಯೋಗಿಗಳು. ಆದುದರಿಂದ ಇವರಲ್ಲಿಯ ಹಲವರು ಹಳ್ಳಿಯ ಇನ್ನೊಂದು ಪ್ರಮುಖ ಉದ್ಯೋಗವಾದ ಒಕ್ಕಲುತನದ ಕಡೆಗೆ ತಿರುಗಿಕೊಂಡರು. ಒಕ್ಕಲಿಗರ ಸಂಖ್ಯೆ ಹೆಚ್ಚಾಯಿತೇನೋ ಸರಿ, ಆದರೆ ಹಳ್ಳಿಯಲ್ಲಿ ಹೊಲಗಳ ಸಂಖ್ಯೆ ಹೇಗೆ ಹೆಚ್ಚಾಗಬೇಕು? ಇನ್ನೊಂದು ವಿಶೇಷ ಸಂಗತಿಯೆಂದರೆ, ನಮ್ಮ ಹಳ್ಳಿಗಳಲ್ಲಿ ಸ್ವಂತದ ಹೊಲಗಳಿದ್ದ ಒಕ್ಕಲಿಗರ ಸಂಖ್ಯೆ ತೀರ ಕಡಿಮೆ. ಇದ್ದವರ ಸ್ವಲ್ಪ ಹೊಲಗಳೂ ಪಾಲುಗಾರಿಕೆಯ ಮೂಲಕ ಒಡೆದೊಡೆದು ತುಂಡುಗಳಾಗಿವೆ. ಆದುದರಿಂದ ಬೇರೆಯವರ ಹೊಲಗಳನ್ನು ಮಾಡಿಯೇ ಬಹುಜನರು ಬದುಕಬೇಕು. ಒಕ್ಕಲಿಗರ ಸಂಖ್ಯೆ ಹೆಚ್ಚಾದಂತೆ ಗೇಣಿಯಿಂದ ಹೊಲ ಹಿಡಿಯುವವರಲ್ಲಿ ತೀಕ್ಷ್ಣ ಮೇಲಾಟಕ್ಕೆ ಮೊದಲಾಯಿತು. ಕನ್ನಡನಾಡಿನ ಬಹುಭಾಗದಲ್ಲಿ ಮಳೆಯ ಅನಿಯಮಿತತನವೇ ಬಹಳವಿರುವುದರಿಂದ, ಬೆಳೆಗೇಡಾಗುವುದು ಇದ್ದೇ ಇದೆ. ಅದರಲ್ಲಿ ಪರದೇಶದ ಪೇಟೆಗಳ ಮೇಲೆ ನಮ್ಮಲ್ಲಿಯ ಪೇಟೆಗಳ ದರ ಅವಲಂಬಿಸಿರುವುದರಿಂದ, ಬೆಳೆದ ಬೆಳೆಗೂ ಸರಿಯಾದ ಬೆಲೆ ಬಾರದೆ ಹೋಯಿತು. ಹೀಗಾಗಿ ಒಕ್ಕಲಿಗರು ಸಾಲಗಾರರಾಗಿ ಹೋದರು. ಪರಸ್ಪರರಲ್ಲಿಯ ಮೇಲಾಟ, ಸಾಲಗಾರಿಕೆಗಳಿಂದ ಇಂದು ಹಳ್ಳಿಗರು ನಿರ್ವಿಣ್ಣರಾಗಿದ್ದಾರೆ. ದಿಕ್ಕುಗೆಟ್ಟು ಹೋಗಿದ್ದಾರೆ.

ಎಲ್ಲರೂ ಸುಖ-ಶಾಂತಿಗಳಿಂದಿರುವಾಗ ಸ್ಪರ್ಧೆಗೆ — ಮತ್ಸರಕ್ಕೆ — ಆಸ್ಪದವೇ ಇರುವುದಿಲ್ಲ. ಇರುವ ಸ್ವಲ್ಪ ಉಪಜೀವನದ ವಸ್ತುಗಳಿಗಾಗಿ ಎಲ್ಲರೂ ಪ್ರಯತ್ನಪಡತೊಡಗಿದರೆ ಮನಸ್ತಾಪಗಳುಂಟಾಗುವುದು ಸಹಜ. ತುಣುಕುರೊಟ್ಟಿಗಾಗಿ ಕಚ್ಚಾಡುವ ಬೀದಿನಾಯಿಗಳ ಪಾಡು ಮನುಷ್ಯರದೂ ಆಗುವುದು ಸ್ವಾಭಾವಿಕ. ಆದುದರಿಂದಲೆ ಹಳ್ಳಿಗಳಲ್ಲಿ ಕಲಹಗಳು ಬೆಳೆಯತೊಡಗಿದುವು. ದಾಯಾದ ಕಲಹ, ಜಾತಿಕಲಹ, ಜಾತಿ-ಜಾತಿಗಳಲ್ಲಿಯ ಕಲಹ ಹೆಚ್ಚತೊಡಗಿದುವು. ನಿರುದ್ಯೋಗಿಗಳಿಗೆ ಒಂದು ಉದ್ಯೋಗ ಹೊಸತಾಗಿ ದೊರೆತಂತಾಯಿತು: ಕಲಹಗಳನ್ನು ಕೋರ್ಟಿಗೆ ಎಳೆದೊಯ್ದು ವಕೀಲ ದಲಾಲಿ ಮಾಡುವುದು. ಹಟಕ್ಕೆ ಬಿದ್ದ ಸ್ತ್ರೀಗಳು 'ಸವತಿಯ ಗಂಡ ಸಾಯಲಿ' ಎಂಬ ನ್ಯಾಯದಂತೆ, ಎದುರಾಳಿಯ ಮೇಲೆ ಮುಯ್ಯು ತೀರಿಸಲು ತಮ್ಮ ಹಾನಿಯನ್ನೂ ಲೆಕ್ಕಿಸದೆ ಕೋರ್ಟಿನ ದಾರಿ ಹಿಡಿಯತೊಡಗಿದರು. ಮೊದಲೇ ಸಾಲದ ಭಾರದಿಂದ ಬಗ್ಗಿದ ಒಕ್ಕಲಿಗರು, ಈ ಸ್ವಯೂಥಕಲಹಗಳಿಂದ ಇನ್ನಿಷ್ಟು ಆರ್ಥಿಕಸಂಕಟದಲ್ಲಿ ಬಿದ್ದರು. ಕೋರ್ಟು-ಕಚೇರಿಗಳ ಮೂಲಕ ಪಟ್ಟಣಗಳಿಗೆ ಬರತೊಡಗಿದ ಹಳ್ಳಿಗರು ಪಟ್ಟಣಿಗರ ಬಾಹ್ಯಛಾಯೆಯ ಜೀವನಕ್ಕೆ ಮರುಳಾದರು. ಅವರ ತಿಂಡಿ-ತಿನಿಸು, ಉಡಿಗೆ ತೊಡಿಗೆ, ಆಟ-ನೋಟಗಳಿಗೆ ತಮ್ಮ ಜೀವನವನ್ನು ಮಾರುಗೊಡಲಾರಂಭಿಸಿದರು. ಇದರಿಂದ ಹಳ್ಳಿಗರ ಆರ್ಥಿಕ ಸಂಕಟದ ಉರುಲು ಇನ್ನಿಷ್ಟು ಬಿಗಿಯಾಯಿತು. ಆಗಿಂದ ಮೇಲಕ್ಕೇಳುವ ಬಗೆಯೇ ಹಳ್ಳಿಗರಿಗೆ ತಿಳಿಯದಾಗಿದೆ. ಬಲ್ಲಿದರಿಗೆ ಅವರನ್ನು ಮೇಲಕ್ಕೆತ್ತುವ ಸಹಾನುಭೂತಿ ಇಲ್ಲದಂತಾಗಿದೆ. ಹೀಗೆ ನಮ್ಮ ನಾಡಿನ ಜನರಲ್ಲಿ ಬಹುಸಂಖ್ಯಾಕರಾದ ಹಳ್ಳಿಗರು ಸೋತು ಸುಣ್ಣವಾಗಿ — ಬಳಲಿ ಬೆಂಡಾಗಿ — ಬಿದ್ದಿರುವಾಗ, ನಮ್ಮ ನಾಡಿನಲ್ಲಿ ಚೈತನ್ಯ ತುಂಬುವ ಬಗೆ ಹೇಗೆ? ಸ್ವಾತಂತ್ರ್ಯಾಪೇಕ್ಷಿಗಳಾದ ಕಾಂಗ್ರೆಸಿಗರೂ, ಏಕೀಕರಣಾಪೇಕ್ಷಿಗಳಾದ ಕನ್ನಡಾಭಿಮಾನಿಗಳೂ, ವ್ಯಾಪಾರೋದ್ಯಮ ಬೆಳೆಯಿಸಬೇಕೆಂಬ ಬಂಡವಲಗಾರರೂ, ಸುಖ-ಶಾಂತಿಗಳನ್ನು ಬಯಸುವ ಸುಸಂಸ್ಕೃತರೂ ಇಂದು ಹಳ್ಳಿಗಳ ಕಡೆಗೆ ಕಂದೆರೆಯಬೇಕು. ಬಿದ್ದ ಹಳ್ಳಿಗರನ್ನು ಮೇಲೆತ್ತಿ ಅವರಲ್ಲಿ ಚೈತನ್ಯವುಂಟಾಗಿಸಬೇಕು. ಹಳ್ಳಿಗರ ಮಹಾಶಕ್ತಿಯ ಸಹಕಾರವಿಲ್ಲದೆ ಹೋದರೆ ಕನ್ನಡಿಗರಿಗೆ ಇಹವೂ ಇಲ್ಲ, ಪರವೂ ಇಲ್ಲವೆಂಬುದನ್ನು ಯಾರೂ ಮರೆಯಲಾಗದು.

—ಸಂಪಾದಕರು



೧. ಮಂಗಕಾರಣ

ಸಿಮ್ಲಾ ಪರಿಷತ್ತು ಮುರಿದುದಕ್ಕೆ ಯಾರು ರಣರಾಗಿದ್ದಾರೆ ಎಂಬ ಯೋಚನೆ ತೊಡಕು ಂಗರಾಯನ ತಲೆ ಹಿಡಿದಿದೆ :—

ವೈಸರಾಯ ವೇವೆಲ್ :—'ನಾನೇ ಕಾರಣ'

ಅಧ್ಯಕ್ಷ ಆಝಾದ :— 'ಜಿನ್ನಾ ಕಾರಣ'

ಮಾಸ್ಟರ್ ತಾರಾಸಿಂಗ:— 'ಕಾಂಗ್ರೆಸ್ ಲೀಗಗಳು ಕಾರಣ'

ಜನಾಬ ಜಿನ್ನಾ :— 'ಪಂಜಾಬದ ಖಿಜರ ತಿವಾನಾ ಕಾರಣ'

ಪರಕೀಯರು :— ಹಿಂದುಸ್ತಾನದ ಜಾತಿಗಳು ಕಾರಣ'

ಆವರಿವರು :— 'ಗಾಂಧಿ ಕಾರಣ'

ಕೊನೆಯದಾಗಿ,

ಮಹರ್ಷಿ ಮಂಗರಾಯ :—

'ಕಾಜಕಾರಣ'

ಟೀಪು :— ಸಂಸ್ಕೃತಭಾಷೆಯ ಹಿಂದುಗಳು ವುದಕ್ಕೆ 'ವಿನಾಕಾರಣ' ಎನ್ನುವರೊ ಅದನ್ನು ಕಿಸ್ತಾನದ ಪಂಡಿತರು 'ಜಿನಾ ಕಾರಣ' ಎನ್ನು ು. ಇದಿನ್ನೂ ವಾದಗ್ರಸ್ತವಾದ ವಿಷಯವಾದ್ದ ದ ಮಂಗರಾಯನು ಅವುಗಳನ್ನು ಅಧಿಕೃತವಾಗಿ ಗೀ 'ಕಿರಿಸು'ವುದಿಲ್ಲ.

೨. ಧಿಕ್ಕೃತ ಮಂಗತನ

ಸಿಮ್ಲಾ ಪರಿಷತ್ತಿನ ವಿಷಯವಾಗಿ ಮಂಗರಾಯನ ಸ್ಪಷ್ಟೀಕರಣ ರಾಷ್ಟ್ರದ ದೃಷ್ಟಿಯಿಂದ ಅಗತ್ಯವಿದೆ ಎಂಬ ಅಗ್ರಹದ ಸೂಚನೆಗಳು ಬಂದದ್ದರಿಂದ ಚೀನ ಮಂಗರಾಯನು ಅಧಿಕೃತವಾಗಿ ಹೀಗೆ ಸ್ಪಷ್ಟೀಕರಿಸುತ್ತಿದ್ದಾನೆ:—

'ಎಲ್ಲರಿಗೂ ಮುಂಚಿತವಾಗಿ ಮಂಗರಾಯನಿಗೆ ಸರಾಯರ ಕರೆ ಬಂದಿತು, ಸರಕಾರಕ್ಕಾಗಿ ರೆ ಬಂದಿತು, ಸಿಮ್ಲಾದಲ್ಲಿ ಉನ್ನತ ಶಾಖೋಪ ಖಾಯುಕ್ತ ವೃಕ್ಷವು ಮಂಗರಾಯನ ಶೀಲ-ವಾಸಸ್ಥಾನವಾಗಿ ಕಾದಿರಿಸಲ್ಪಟ್ಟಿತು. ಆದರೆ ಗರಾಯನು ಒಂದು ಮಾತನ್ನು ಖಂಡಿತಗೊಳಿ ದನು:—ಎಲ್ಲ ಮಂಗಳೌನ್ಸಿಲರರನ್ನು ಆರಿಸುವ ಸರ್ವಾಧಿಕಾರ ಮಂಗರಾಯನಿಗಿರಬೇಕೆಂದು. ಆದರೆ ಅವಸರದಲ್ಲಿ ತಂತಿ ಕಚೇರಿಯವರು 'ಎಲ್ಲ ಕೌನ್ಸಿಲರರು ಮಂಗಗಳಾಗಿ ಆರಿಸುವ ಸರ್ವಾಧಿಕಾರ' ಮುಂತಾಗಿ ತಂತೀಕರಿಸಿದ್ದರಿಂದ ವೈಸರಾಯರು ಮಂಗರಾಯನ ಬೇಡಿಕೆ ತಮ್ಮ ಅಧಿಕಾರವನ್ನು ಮೀರಿದ್ದೆಂದು ಅಮೇರಿಸಾಹೇಬರಿಗೆ ಸಾಗಿಸಿದರು. ಚುನಾವಣೆ ಮುಗಿಯುವರೆಗೆ ಇಂತಹ ಮಹತ್ತ್ವದ ತತ್ತ್ವದ ಮೇಲೆ ತಮ್ಮ ಅಭಿಪ್ರಾಯವನ್ನು ಕೊಡಲಾಗದೆಂದು ಅಮೇರಿಸಾಹೇಬರು ಹಿಂಜರಿದದ್ದರಿಂದ ಮಂಗರಾಯನು ಪರಿಷತ್ತಿನಿಂದ ಅಲಿಪ್ತನಾಗಬೇಕಾಯಿತು. ಹೀಗೆ ಈ ಸಾರೆ ಸಿಮ್ಲಾದಲ್ಲಿ ನಡೆದದ್ದು ಅಧಿಕೃತ ಮಂಗತನವಲ್ಲ ಎಂದು ಮಂಗರಾಯನು ಮತ್ತೊಮ್ಮೆ ಸ್ಪಷ್ಟೀಕರಿಸುತ್ತಾನೆ.

೩. ಜಿಗಿವ ಜವಾಹರ ಜೈ!

'ನೆಲಮುಟ್ಟಿ ಕಾಲನ್ನು ಹಿಡಿಯುವುದು ದಾಸ್ಯಬುದ್ಧಿಯ ಚಿಹ್ನ' ಎಂದು ಜವಾಹರರು ಖಂಡಿಸುತ್ತಿರುವಾಗ ಯಾರೊ ಕಾಲನ್ನು ಮುಟ್ಟಲು ಬಾಗಲು ತಪ್ಪಿಸಬೇಕೆಂದು ಟಣ್ಣನೆ ಜಿಗಿದಾಗ ಆ ನವಜವಾನ ನೇತಾರರು ತಗ್ಗಿನಲ್ಲಿ ಬೀಳುತ್ತಿದ್ದರಂತೆ! ಹಹ! ಅಲ್ಲ—ಎಂದರೆ ಮಂಗರಾಯನಿಗೆ ಆನಂದವಲ್ಲ—ಇಂತಹ ನೇತಾರರೂ ಜಿಗಿದು ಮಂಗರಾಯನ ಅನುಕರಣ ಮಾಡಲು ಯತ್ನಿಸುವರೆಂದು. ಆದರೆ—ಜವಾಹರರಂತಹರೂ ದಿಕ್ಕುತಪ್ಪಿದರಲ್ಲ ಎಂದು—ಕನಿಕರದ ನಗೆ. 'ಹಿಂದಿದ್ದ ತಗ್ಗಿನಲ್ಲಿ' ಎಂದು ಜವಾಹರರು ಹೇಳಿದ್ದು. ಆದರೆ ನಿಜವಾಗಿ ಮುಂದೆ—ಕಣ್ಣು ಮುಂದೆಯೇ ಇದ್ದಿತು ಆ ತಗ್ಗು! 'ಬೀಳಬಹುದಾಗಿತ್ತು' ಎಂದರು ಪಂಡಿತರು. ಆದರೆ ನಿಜವಾಗಿ ಬಿದ್ದೇಬಿಟ್ಟಿದ್ದರು ತಾವು ಎಂಬುವನ್ನರಿಯಲಿಲ್ಲ ಅವರು! 'ಸಿಮ್ಲಾದಲ್ಲ ಒಂದು ತಗ್ಗಿನಲ್ಲಿ' ಎಂದು ಭ್ರಾಂತಿ ಅವರದು. ನಿಜವಾಗಿ 'ಸಿಮ್ಲಾ ಎಂಬ ತಗ್ಗಿನಲ್ಲಿ' ಎಂದು ಹೇಳಬೇಕಾಗಿತ್ತು ಬುದ್ಧಿಗೆ ಭ್ರಾಂತಿಯಾಗಿದ್ದರೂ ಜಡದೇಹ ಜಿಗಿಯಿತು. ತಂದೆ ಜವಾಹರರು ಪಾರಾದರು! ಬಾಂಧವರೇ, ಇನ್ನಾದರೂ ಎಚ್ಚರಾಗಿರಿ:—

ಜಿಗಿಯುವ ಬುದ್ಧಿಗೆ ಜೈ
ಝಿಂದಾಬಾದ್ ಮಂಗರ್ಕೈ!

೪. ಮಂಗರಾಯನ ಸಿಮ್ಲಾಯಾತ್ರೆ

ಮಂಗರಾಯ ಸಿಮ್ಲಾ ಪರಿಷತ್ತಿನಿಂದ ಮರಳಿ ತನ್ನ ಮರನಾಡಿಗೆ ಹೊರಟ. ಬೀಳ್ಕೊಡಲು ಬಂದ ಮಂಗಾನುಯಾಯಿಗಳು ಕೇಳಿದರು: "ನೀನು ಪ್ಲವಂಗಮಜಾತಿಸಂಭೂತಾ, ಮರ್ಕಟಪ್ರಪಂಚನಾಥಾ. ನೀನೀಗ ಯಾವ ಮೋಟಾರಿನಿಂದ ಹೊರಡುವೆ? ಒಬ್ಬರ ಡ್ರೈವರನೂ ನಿನ್ನ ಜಾತಿಗೆ ಸೇರಿದವನಲ್ಲ. ಸಾಕ್ಷಾತ್ ಜಿನ್ನಾಸಾಹೇಬರೇ ಅನ್ಯಜಾತಿಯ ಡ್ರೈವರನ ಬಸ್ಸಿನಲ್ಲಿ ಕಾನ್ಫರನ್ಸಿಗೋಗಲಿಕ್ಕೆ ಹೆದರಿ ನಡುಗಿದರೆಂದ ಮೇಲೆ, ನೀನೇನು ಮಾಡುತ್ತೀ ನೋಡು! ನೀನು ಯಾವಾಗಲೂ ಒಂದು ಜಾತಿಯನ್ನು ಎತ್ತಿ ಮಾತನಾಡುವವನಲ್ಲ; ಮಾತೆತ್ತಿದರೆ ಜಾತಿವಾದಿಗಳನ್ನು ಬೈಯುವವನು! ಜಾತಿಗೆ ಸೇರದ ಡ್ರೈವರುಗಳು ಹಿಂದುಸ್ತಾನದಲ್ಲಿ ಇಲ್ಲವೇ ಇಲ್ಲ. ನಿನ್ನನ್ನು ಸುರಕ್ಷಿತವಾಗಿ ಕಳುಹುವ ಬಗೆ ಹೇಗೆ?" ಮಂಗರಾಯ ಯಾವುದನ್ನೂ ಮಾತನಾಡದೆ, ಎಲ್ಲರೊಂದಿಗೆ ಮೋಟರ್ ಸ್ಟ್ಯಾಂಡಿಗೆ ಬಂದ. ಅಲ್ಲಿಯ ಮೋಟರುಗಳಲ್ಲಿಯ ಬೇರೆ ಬೇರೆ ಜಾತಿಗೆ ಸೇರಿದ ಡ್ರೈವರುಗಳೆಲ್ಲರೂ, ಮಂಗರಾಯನನ್ನು ಕಂಡು 'ನನ್ನ ಗಾಡಿಯಲ್ಲಿ ಬಾ, ನನ್ನ ಗಾಡಿಯಲ್ಲಿ ಬಾ!' ಎಂದು ಗದ್ದಲವೆಬ್ಬಿಸಿದರು. ಈ ಗದ್ದಲವೇ ಒಂದು ಜಾತೀಯ ಜಗಳವಾಗಿ ಪರಿಣಮಿಸಬಹುದೆಂದು, ಮಂಗರಾಯ ಸಿಮ್ಲಾದಿಂದ ತನ್ನ ನಾಲ್ಕು ಕಾಲಿನಿಂದ ನೆಗೆಯುತ್ತಲೇ ಹೊರಟಿದ್ದಾನೆ. ಹಾದಿಯಲ್ಲಿ ಹಳ್ಳಿ-ಹಳ್ಳಿಗೂ ಪಟ್ಟಣ-ಪಟ್ಟಣಕ್ಕೂ ಅವನ ಸ್ವಾಗತ ನಡೆದಿದೆ.

ಕಲಬುರ್ಗಿಯಲ್ಲಿ ನಮ್ಮ ಏಜೆಂಟರು

ಶ್ರೀ. ಕೃಷ್ಣರಾವ್,

C/o. ಶಾಂತಯ್ಯ ಪಟ್ಟಣಕರ,

ಮೊಹಲ್ಲಾ, ಜಗತ್

ಗುಲಬುರ್ಗಾ

ಪ್ರಾರ್ಥನೆ

'ಕೌಸಲ್ಯಾತನಯ' ಶಿವಮೊಗ್ಗಾ

೧

ನಿನಗಾಗಿ ಕಾದಿಹೆನು ನಾನಿಲ್ಲಿ ನಿಂದಿಹೆನು,
ಬಾರೆನ್ನ ಮೊರೆಕೇಳ ದೊರೆಯೆ!
ನೀನಿತ್ತ ಬೆಳಕಿನಲಿ ನಾ ಮುಂದೆ ಸಾಗಿಹೆನು,
ಬಂದೆನ್ನ ನೀನಿಂದು ಪೊರೆಯೆ!

೨

ನಿನಗೆಂದು ಬಲು ಅಲೆದು ವನವೆಲ್ಲ ತಿರಿ-ತಿರಿದು
ತಂದಿಹೆನು ತನಿವಣ್ಣ ದೊರೆಯೆ,
'ಬಂದಿಹನು ಬಲುಬಳಲಿ' ಎಂದೆನುತ ಮೊಗ ತೋರು
ನಿನ್ನ ಬಳಿ ನಾನಿಂದು ಕರೆಯೆ.

೩

ಜಗವೆಲ್ಲ ನಾ ಬಲ್ಲೆ ದಾಟಿಹೆನು ನಾ ಎಲ್ಲೆ
ಎಂದೆನುತ ದಿನದಿನವ ಕಳೆದೆ!
ಇಂದೆನಗೆ ಅರಿವಾಯ್ತು ಜಗವನ್ನು ಬಲ್ಲವನು
ನೀನೆಂದು ನಾನಿನ್ನು ತಿಳಿದೆ!

೪

ಮೂಡಣದ ಮನೆಯಿಂದ ಮುತ್ತಿನಾ ಚೆಂಡೊಂದು
ಥಳಥಳನೆ ಹೊಳೆಯುತ್ತ ಬಂದು,
ಜಗವನ್ನು ಬೆಳಗುತ್ತ ಜನವನ್ನು ಒಲಿಸುತ್ತ
ಮುಗಿಲಾಚೆ ಮುಳುಗಿಹುದು ಅಂದು.

೫

ಬಾರಯ್ಯ ಬಾ ತಂದೆ, ಬಾರವ್ವ ಬಾ ತಾಯಿ,
ಕರೆಯುವೆನು ನಿನ್ನನ್ನು ನಾನು;
ನೀ ಬಂದು ಎನ್ನೊಡನೆ ಬಹುಕಾಲ ಬಾಳುತ್ತ
ನೀಡಯ್ಯ ಜೀವನದ ಜೇನು!

೬

ನೀ ಬಂದು ಮನೆ ತುಂಬು, ಬೆಳಕಿತ್ತು ಮನ ತುಂಬು,
ಜಗವೆಲ್ಲ ತುಂಬಿಹುದು ಬಾರ!
ತುಂಬೆನ್ನ ಒಡಲನ್ನು, ನೀ ತುಂಬು ಕಡಲನ್ನು,
ತುಂಬುತ್ತ ಶಾಂತಿಯನು ತಾರ!

ನೀನೇ ಮಂಗಳ!

ಶ್ರೀ. ಬಿ. ಎಸ್. ಕರ್ಕಿ ಎಂ. ಎ. ಬೆಳಗಾಂವಿ

೧

ಅಂಗನೆಯೆ ನೀ ಮಂಗಳಕೆ ಮನೆ,
ಮನೆಗೆ ನೀನೇ ಮಂಗಳ!
ನಿನ್ನ ಕಂಗಳ ಬೆಳಕನರಿಯದ
ಬದುಕು--ತೆಗೆ ತೆಗೆ—ತಂಗುಳ!

೨

ಹೊಮ್ಮಿ ಬಂದಿತು ಕರುಣೆಯೆಂಬುವ
ಮೊದಲು ನಿನ್ನೆದೆ-ಬುಗ್ಗೆಯಿಂ;
ಮೊತ್ತಮೊದಲಹ, ನಮ್ಮ ತೋಟಕೆ
ತಂದಿತದು ಹೊಸ ಸುಗ್ಗಿಯಿಂ!

೩

ಚಿಗುರಿಸುವೆ ನೀ ಬಾಳ ಬಳ್ಳಿಯ
ನೀನೆ ಜೀವಸ್ಫೂರ್ತಿಯು;
ಬೆಳೆಯಿಸುವೆಯದ ಬೇಸರಿಲ್ಲದೆ
ನೀನೆ ತಾಳ್ಮೆಯ ಮೂರ್ತಿಯು!

೪

ನಿನ್ನ ಜೋಗುಳದಿಂದಲೊಗೆಯಿತು
ಪ್ರಥಮ ಪೃಥಿವೀ ಕಾವ್ಯವು;
ಅಂದಿನಿಂದವೆ ಮುಂದುವರಿದಿದೆ—
ಎಂದಿಗೂ ನವನವ್ಯವು!

೫

ಹೆಜ್ಜೆ ಚೆಲ್ಲಲು ನೃತ್ಯ, ಕೊರಳುಲಿ
ತೋರಲದೆ ಸಂಗೀತವು!
ಲಲಿತಕಲೆಗಳಿಗೆಲ್ಲ ನಿನ್ನಿಂ-
ದಲ್ಲವೇ ಲಾಲಿತ್ಯವು?

೬

ನಿನ್ನ ಕಂಗಳ ಮಂಗಳಾರತಿ
ಬೆಳಗಲೌ ನಮ್ಮಿಳೆಯನು;
ಅಂತರಂಗದ ಅಮಲ ದೀಧಿತಿ
ತೊಳಗಿ ತೊಳೆಯಲಿ ಕೊಳೆಯನು!

ಕೂಡಲಾರದ ಕಣ್ಣು*

(ಏಕಾಂಕ ನಾಟಕ)

ಪ್ರೊ. ರಂ. ಶ್ರೀ. ಮುಗಳಿ ಎಂ. ಎ., ಬಿ. ಟಿ. ಸಾಂಗಲಿ.

●

ಪಾತ್ರಗಳು :

ತಾರಾಬಾಯಿ :—	ಮನೆಯ ಯಜಮಾನನ ತಾಯಿ		
ಲಕ್ಷ್ಮಿಂಬಾಯಿ :—	,,	,,	ಹೆಂಡತಿ
ರಮಾಬಾಯಿ :—	,,	,,	ತಂಗಿ
ದ್ವಾರಕಾ :—	,,	,,	ಹೆಂಡತಿಯ ಗೆಳತಿ
ನೀಲವ್ವ :—			ಹಾಲಿನಾಕೆ

[ಗುಮಾಸ್ತೆ ಗುರುರಾಯನ ಮನೆಯ ಪಡಸಾಲೆ. ಸಂಜೆಯ ಆರು ಘಂಟೆಯ ಹೊತ್ತು. ಗೋಡೆಯ ಹತ್ತಿರ ಒಂದು ಹೊಲಹೊಲಸು ಗ್ರುವಾರ ಹಾಸಿದೆ. ಅದರ ಮೇಲೆ ಗೋಡೆಗೆ ಒರಗಲೆಂತೆ ಏರಿಸಿ ಮೂರು ನಾಲ್ಕು ಹಾಸಿಗೆ ಸುರುಳಿಗಳನ್ನಿಟ್ಟಿದೆ. ಖುರ್ಚಿ-ಟೇಬಲ್ಲುಗಳಿಲ್ಲ. ಗೋಡೆಯ ಮೇಲೆ ಒಂದೆರಡು ಫೋಟೊ, ಕ್ಯಾಲೆಂಡರು ಗೂಟಕ್ಕೆ ತೂಗುಬಿದ್ದಿವೆ. ಕಾಲೇಜ ವಿದ್ಯಾರ್ಥಿನಿಯಾದ ದ್ವಾರಕಾ ಮನೆಯೊಳಗೆ ಪ್ರವೇಶಿಸುತ್ತಾಳೆ.]

ದ್ವಾರಕಾ :— (ಪ್ರವೇಶಿಸುತ್ತ) ಶಾರೀ, ಶಾರದಾ, ಏಳು, ಸಿನೇಮಾಕ್ಕ ಹೊರಡೂ ಹೊತ್ತಾತು.... (ಸುತ್ತುನೋಡಿ) ಇಲ್ಲೆ ಯಾರದೂ ಸುಳಿವೇ ಇಲ್ಲ. ಒಳಗ ಇದ್ದಾಳೊ ಏನೊ, ಇನ್ನೊಮ್ಮೆ ಕರೀತೀನಿ.... ಶಾರ.... (ಒಮ್ಮೆಲೆ ನೆನೆದು) ನಾ ಎಂಥಾ ಹುಚ್ಚಿ! ಅತ್ತೀಮನಿಗೆ ಬಂದು ನಮ್ಮ ಗೆಳತಿ ಶಾರದಾ ಈಗ ಲಕ್ಷ್ಮಿ—ಲಕ್ಷ್ಮಿಂಬಾಯಿಯಾಗ್ಯಾಳಲ್ಲ, ನಾ ಮತ್ತ ಮತ್ತ ಮರೀತೀನಿ. (ದನಿಏರಿಸಿ) ಏ ಲಕ್ಷ್ಮಿಂಬಾಯಿ, ಅಲ್ಲ ಲಕ್ಷ್ಮಿಂಬಾಯಿಯವರs (ಯಾರೂ ಓ ಕೊಡದಿರಲು) ಹಲೋ ಮಿಸೆಸ್ ಗುಮಾಸ್ತೇ (ಎಂದು ಘಟ್ಟಿಸಿ ಕೂಗುತ್ತಾಳೆ.)

ಲಕ್ಷ್ಮಿಂಬಾಯಿ:— (ಒಳಗಿನಿಂದ ಪ್ರಫುಲ್ಲ ಮುಖದಿಂದ ಧಾವಿಸಿ ಬಂದು) ಯಾರು ಬೇಕು ? ಅವರು ತಿರುಗಾಡಲಿಕ್ಕೆ ಹೋದರು ಇದೇ ಈಗ ! (ತಲೆಯೆತ್ತಿ ದ್ವಾರಕೆಯನ್ನು ನೋಡಿ, ಪೆಚ್ಚಾಗಿ ತುಟಿ ಕಚ್ಚಿ ನಿಲ್ಲುವಳು)

ದ್ವಾರಕಾ:— ಹಿಂಗೇನು ? (ಕುಚೇಷ್ಟೆಯ ದನಿಯಲ್ಲಿ) ಅವರಂದರ ಲಕ್ಷ್ಮಿಂಬಾಯಿಯವರು, ಮಿಸೆಸ್ ಗುಮಾಸ್ತೆ ?

ಲಕ್ಷ್ಮಿಂಬಾಯಿ:— ಗೊತ್ತಾತ ಬಿಡು, ನೀ ಬಂದೀದಿ. ನಾ ಯಾರೋ ಗಂಡಸರೂ ಅಂತ ಮಾಡಿದ್ದೆ.

ದ್ವಾ : — ಛಲೋ ಅದ. ಕಾಲೇಜಕ್ಕ ಹೋದ ಹಿಡಿದು ನಾ ಹಿಂಗ ಬ್ಯಾರೇ ಕಾಣಸತೀನೇನು ನಿನಗ ? (ಇಬ್ಬರೂ ನಗುವರು) ಅಲ್ಲ, ಅವರು ಅಂದೆಲ್ಲ ಅವರ್‍ಯಾರು ?

ಲ :— ಅವರು ಅಂದರ ಅವರು ! ಗೊತ್ತಿಲ್ಲೇನು ? ನೀನೂ ಒಳ್ಳೇ ಚಾಷ್ಟಿ ಮಾಡುವಾಕಿ ಬಿಡು !

ದ್ವಾ :— ಅಲ್ಲಾ ಶಾರೀ, ಮ್ಯಾಟ್ರಿಕ್‌ತನಕಾ ಇಂಗ್ರೇಜಿ ಕಲಿತ ನಮ್ಮ ಜೋಡಿ; ಇನ್ನೂ ಯಜಮಾನರಿಗೆ ಸರ್ವನಾಮ ಹಚ್ಚೋದನ್ನೂ ಬಿಡವ್ವೊಲ್ಲಿಯಲ್ಲ ?

ಲ :— ಮ್ಯಾಟ್ರಿಕ್ ಆದರೇನು ? ನಿನ್ನಂಗ ಕಾಲೇಜ ಬ್ಯಾರೇ ಕಾಣಲಿಲ್ಲ ! ನೋಡು ದ್ವಾರಕಾ, ಎಷ್ಟು ಕಲಿತರೇನು, ಬಿಟ್ಟರೇನು; ಮದಿವೀ ಮಾಡಿಕೊಂಡಿಯೆಂದರ ಇವೆಲ್ಲಾ ತಾನು ತಿಳಿತಾವ !

ದ್ವಾರಕಾ :— ಆಗಿಹೋತು, ಮತ್ತೊಂದು ಸರ್ವನಾಮ. ಅಲ್ಲ, ಒಳಗೇನು ನಡಿಸಿದ್ದಿ ? ಮತ್ತ ಯಾಕೋ ಮಾರೀಮ್ಯಾಲೆ ಕುಲುಕುಲು ನಗಿ ಸುಳಿದಾಡತದ ಈವತ್ತ ?

ಲಕ್ಷ್ಮಿಂಬಾಯಿ :— ನಿನ್ನ ದನಿಂದನ, ಚಹಾಮಾಡತಿದ್ದೆ. ಸಿನೇಮಾಕ್ಕ ನೀ ಕರೀಲಿಕ್ಕೆ ಬರತೀನಿ ಅಂತ ಹೇಳಿದ್ದಿಲ್ಲs ?

ದ್ವಾ :— ಹಂಗಾರ ಸಿನೇಮಾಕ್ಕ ಈಗ ಬರುವಾಕಿ ಅನಬಾರದ ? ಯಜಮಾನರ ಪರವಾನಿಗಿ ಸಿಕ್ಕಂದ ಕಾಣಿಸತದ. ಅದಕ್ಕs ಈ ಉಮೇದಿ ಹೌದಲ್ಲೊ ?

ಲ:—ಪರವಾನಿಗಿ ? (ಮುಖವರಳಿಸಿ) ಬರೇ ಪರವಾನಿಗಿ ಯಾಕ ? ದ್ವಾರಕಾ, ಇಲ್ಲಿ ನೋಡು, ಯಾರಿಗೂ ಹೇಳಬ್ಯಾಡ. ಪಗಾರನs ನನ್ನ ಕೈಯಾಗ ಸಿಕ್ಕಂದ ಈವತ್ತ !

ದ್ವಾ:— ಹಿಂಗs ? ಸ್ತ್ರೀಸ್ವಾತಂತ್ರ್ಯದ ದಿಗ್ವಿಜಯ ಆತು ಬಿಡು! ಇಂದ ಸಿನೇಮಾಕ್ಕ ಹೋಗಲಿಕ್ಕೇ ಬೇಕು. ಆದೆಂಗ ನಿನ್ನ ಕಡೆ ಕೊಟ್ಟರs ಶಾರೀ....ಎಂದೆಂದೂ ಕೊಡದೆ ಹೋದವರು ? ದಿನಾ ಒಂದು ತಕರಾರ ಹೇಳತಿದ್ದಿ : ' ಅವ್ವನ ಮಾತು ಕೇಳತಾರ, ಮನಸಿಗೆ ಬಂಧಂಗ ಮಾಡತಾರ, ಈ ಮನ್ಯಾಗ ನಂದೇನೂ ನಡಿಯುದಿಲ್ಲ, ನಾ ತಿಪ್ಪ್ಯಾಗಿನ ಕಸ; ಹಂಗ ಹಿಂಗ' ಅಂತ! ಆದೆಂಗ ಕೊಟ್ಟರೂ ಅಂತೀನಿ!

ಲಕ್ಷ್ಮಿಂ :— ಹೆಂಗಂದರ, ಕೊಟ್ಟರು ಆತು. ಈವತ್ತ ನೋಡು ಫೈಲಾ ತಾರೀಖು, ಪಗಾರಾತಂತ. ಅದನ್ನ ತಗೊಂಡು ಕಚೇರಿಂದ ಬಂದ ಕೂಡ್ಲೆ ' ಅವ್ವ ಎಲ್ಲಿ ಹೋಗ್ಯಾಳ !' ಅಂತ ಕೇಳಿದರು. ನಾ ಗಂಟುಮಾರಿ ಮಾಡಿ ' ಗುಡಿಗೆ ಪುರಾಣಕ್ಕ ಹೋಗಿದ್ದಾರು ' ಅಂದೆ. ' ಹಂಗಾರ ಬಾ ಇಲ್ಲೆ ' ಅಂತ ಹೇಳ್ಯಾಗ ಬ್ಯಾರೇ ಕರದು ' ಇಕಾ, ಈ ಪಾಕೀಟು ತಗೊ. ಇವತ್ತ ಪಗಾರಾತು, ಇದರಾಗ ಎಲ್ಲಾ ಅದ, ಇನ್ನ ಮ್ಯಾಲೆ ಸಂಸಾರದ ಖರ್ಚು ನೀನೇ ನೋಡಿಕೊ, ಆತಿಲ್ಲೊ. ನಾ ಉಸಾಬರಿ ಮಾಡೂದಿಲ್ಲ!' ಅನಕೋತ ನನ್ನ ಕೈಯಾಗ ಇದನ್ನ ಕೊಟ್ಟರು. (ಉಡಿಯಲ್ಲಿದ್ದ ಪಾಕೀಟು ತೋರಿಸುತ್ತ) ಮತ್ತ ' ಅವ್ವನ ಮುಂದ ಮುಂದೀ ಮುಂದೆ ಹೇಳಿಗೀಳೀ ' ಅಂದರು. ' ನಾ ಯಾಕ ಹೇಳಲಿ, ಹುಚ್ಚೇನು ? ' ಅಂದೆ.

* ಈ ನಾಟಕವನ್ನು ಅಭಿನಯಿಸುವವರು ಲೇಖಕರಿಗೆ ಮುಂಚಿತ ತಿಳಿಸಬೇಕು.

ದ್ವಾ :— ಮತ್ತ ನನಗ ಹೇಳಿಬಿಟ್ಟಿಲ್ಲs ಮಹಾರಾಯಳ! ಇದೇನು ಹುಚ್ಚರದ್ದೋ ಶಾಣ್ಯಾರದ್ದೋ ಲಕ್ಷಣ ?

ಲಕ್ಷ್ಮಂ :— ನಿನಗ ಹೇಳಿದರೇನು ತಪ್ಪು ಬಿಡ ? ಅತ್ತೆವರಿಗೆ ಹೇಳತೀನಂತ ತಿಳಿದೀಯೇನು ? ಇನ್ನವರ ಮಾತು ಕೇಳತೀನಂತ ತಿಳಿದೀಯೇನು ?

ದ್ವಾ :— ಇನ್ಯಾಕ ಕೇಳೀ ? ನಿನಗ ಸ್ವರ್ಗ ಇನ್ನ ನಾಕೇ ಬಟ್ಟು! ಅಲ್ಲಾ, ಅದರಾಗ ಎಷ್ಟರೇ ರೂಪಾಯಿ ಅದ ತಗದು ಎಣಿಸಿ ನೋಡಲ್ಲಾ !

ಲಕ್ಷ್ಮಂ :— ನೋಡೋದೇನೇನೂ ಕಾರಣಿಲ್ಲ. ಇಷ್ಟು ವಿಶ್ವಾಸ ಇಲ್ಲೇನು ಅವರ ಮ್ಯಾಲೆ? ಹಾದ್ಯಾಗೆಲ್ಲ್ಯಾರೆ ಉದ್ರೀ ಗಿದ್ರೀ ಅಂಗಡಿಯವರು ಛೆಟ್ಟಿ ಆದಾರು ಅಂತ, ಕಚೇರ್‍ಯಾಗ ಅಂಟುಹಚ್ಚಿ ಪಾಕೀಟು ಬಂದಮಾಡಿ ತಗೊಂಡು ಬಂದಾರ. ದ್ವಾರೀ, ಅವರ ಸ್ವಭಾವ ಎಷ್ಟು ಛೊಲೋದು ನೋಡು !

ದ್ವಾ :— (ಕುಸು ಅಣಕಿಸುವ ದನಿಯಲ್ಲಿ) ಹೌದು ಬಾರಿ, ಭಂಗಾರದಂತಾದು ! ಬಂಗಾರದ ಬದಲೀ ನೋಟುಕೊಟ್ಟಾರ ಸರಕಾರಧಂಗ, ಅಷ್ಟೇ ಅಂತರ !

ಲಕ್ಷ್ಮಂ :— ಸರಕಾರ ? ದ್ವಾರಕಾ, ಇನ್ನ ಮ್ಯಾಲ ಈ ಮನ್ಯಾಗ ನಾನs ಸರಕಾರ! ನನಗ ಭಾಳ ಸಂತೋಷ ಆಗೇದ. ಇಲ್ಲಿ ಕೂತು ಮಾತಾಡೋಣ ಬಾ. (ಕೈ ಹಿಡಿದುಕೊಂಡು ಹೋಗಿ ಗೂಡಾರದ ಮೇಲೆ ಕೂಡಿಸ ಹೋಗುವಳು.)

ದ್ವಾ :— (ಹಿಂದೆ ಮುಂದೆ ನೋಡುತ್ತ) ಅಲ್ಲs ಕೂಡತೀನಿ. ಮತ್ತ ನಿಮ್ಮ ಸ್ವಂತ ಕಾರಭಾರ—ಅಲ್ಲ ಸರಕಾರ—ಆತು ಈಗ. ನಿಮ್ಮ ಬಜೆಟ್‌ದಾಗ ಒಂದೆರಡು ಖರ್ಚ ಮಾಡಿಸಲ್ಲ ಕೂಡಲಿಕ್ಕೆ !

ಲಕ್ಷ್ಮಂ :— ಯಾಕ ? ಕಾಲೇಜಕ್ಕ ಹೋದ ತೊಟ್ಟು ನೆಲದ ಮ್ಯಾಲ ಕೂಡೂದಿಲ್ಲೇನು ಈ ದೇಹ ? ಒಂದೊಂದು ವರ್ಷ ಮುಗಿಸಿದಂಗ ಒಂದೊಂದು ಮೊಳ ಎತ್ತರ ಬೇಕೇನೂ ಆಸನ ? ಈಗಂತೂ ಮೂರನೇ ವರ್ಷ ಜ್ಯೂನಿಯರ್ ಬಿಯೆದಾಗ ಇದ್ದಿ. ಅಷ್ಟೆತ್ತರ ಖರ್ಚಿ ಎಲ್ಲಿ ಮಾಡಿಸೂಣ ನಮ್ಮವ್ವಾ, ನಾವು ಬಡವರು !

ದ್ವಾ :— (ಸಂಕೋಚದಿಂದ ಕೂಡುವುದೆಂದು ಬಾಗಿ) ಹಂಗಲ್ಲs ಶಾರದಾ, ನನ್ನ ಸಲುವಾಗಿ ಹೇಳಲಿಲ್ಲ. ನಾ ಕೂಡತೀನಿ ಆತಿಲ್ಲೊ !

ಲಕ್ಷ್ಮಂ :— ಬ್ಯಾಡ ನಿಂದರು, ಖರ್ಚಿ ಮಾಡಿಸೋಣ ಮುಂದ; ಈಗ ಈ ಗಾದೀ ಸುರಳೀನs ಖರ್ಚಿ ಮಾಡೂಣ ಬಾ ! (ಎರಡು ಗಾದಿ ಸುರುಳಿ ಎತ್ತಿ ಇದಿರು ಬದಿರು ಇಟ್ಟು) ಕೂದಿನ್ನ ! (ಇಬ್ಬರೂ ನಗುತ್ತ ಇದಿರು ಬದಿರಾಗಿ ಕೂಡುವರು)

ದ್ವಾ :— ಛೊಲೋ ಯುಕ್ತಿ ಹುಡಿಕಿದಿ ಬಿಡು. ಬೆನ್ನಿಲ್ಲದ ಖರ್ಚಿ ಬೇಸ್ಯದ !

ಲಕ್ಷ್ಮಂ :— ದ್ವಾರಕಾ, ಸಂಸಾರ ಮಾಡೂ ಅವರಿಗೆ ಇವೆಲ್ಲಾ ಯುಕ್ತಿ ತಾನs ಹೊಳೀತಾವ. ಇನ್ನ ಮ್ಯಾಲಿ ನೋಡು, ಕೈ ಹತ್ತಿ ಹಿಡಿದು ಸಂಸಾರಮಾಡಿ, ಈ ಎಂಬತ್ತು ರೂಪಾಯಿದಾಗ ತಿಂಗಳಾ ಐವತ್ತು ಬ್ಯಾಂಕಿನಾಗ ಇಡತೀನಿ. ಅಂದರ ವರ್ಷಕ್ಕ ಎಷ್ಟಾದವು ? ಆರುನೂರು ರೂಪಾಯಿ ನೋಡಿದ್ಯಾ, ಆರುನೂರುರೂಪಾಯಿ ಆಗತಾವ. ಹಿಂಗ ಹತ್ತು ವರ್ಷದ ತನಕಾ ಇಟಗೋತ ಹೋದರ ಆರು ಸಾವಿರ ರೂಪಾಯಿ ಆಗತಾವ !

ದ್ವಾ :— (ಅಣಗಿಸುತ್ತ) ಹೂಂ, ಆರುಸಾವಿರ ರೂಪಾಯಿ ! ಹಿಂಗs ನೂರು ವರ್ಷ ಇಟಗೋತ ಹೋದರ ಅರವತ್ತು ಸಾವಿರ ರೂಪಾಯಿ ಆಗತಾವ—ಲಕ್ಷಾಧೀಶ ಆಗಲಿಕ್ಕೆ ನಾಲ್ವತ್ತೇ ಸಾವಿರ ಕಡಿಮೆ ಬೀಳತಾವೇಳು ! ಬಹುಶಃ ಆಷ್ಟೊತ್ತಿಗೆ ಬ್ಯಾಂಕಿನ ಬಡ್ಡಿಗಿಡ್ಡಿ ಕೂಡಿ ಲಕ್ಷಕ್ಕೇ ಬರಬಹುದು, ಅಲ್ಲs ?

ಲಕ್ಷ್ಮಂ :— ಸಾಕು ಬಿಡs ನಿನ್ನ ಅಣಕಾಟ; ನನಗ ತಿಳಿಯೂದಿಲ್ಲೇನು ? ಅದೇನೋ ಹೇಳತಾರ ಹನಿಹನೀ ಕೂಡಿದರ ಹಳ್ಳಂತ !

ದ್ವಾ :— ಅದು ಖರೆ. ಹನೀಹನೀಹಂಗ ಉದ್ರಿ ಬೆಳಕೋತ ಹೋಗಿ ಹಳ್ಳಕೂಡೀರಿ; ನೋಡಿಕೊ....ಅಂದೆ.

ಲಕ್ಷ್ಮಂ :— ಉದ್ರಿ? ಹೆಂಗಸರು ಎಂದೆಂದೂ ಉದ್ರೀ ಮಾಡೂದಿಲ್ಲ. ಅದೆಲ್ಲಾ ಗಂಡಸರದs ಕೆಟ್ಟ ಚಾಳಿ ! ಇದ್ದದ್ದರಾಗ ಚಟ್ಣೀ ಭಕ್ಕರೀ ತಿಂದಿರಲಿಕ್ಕೆ ಬರೂದಿಲ್ಲೇನು ? ಈಗ ನೋಡು, ಹಬ್ಬಾ—ಹುಣ್ಣಿವಿ ಅನಕೋತ ಅತ್ತೆವರು ಹೇಳಿಧಂಗ ಕುಣಿಯೋದು; ಹಾಳು ಮಾಡೋದು !

ದ್ವಾ :— ಹಂಗಾರ ಇನ್ನ ಅತ್ತೆವರಿಗೆ ಹಾಯುಗೊಡೂದಿಲ್ಲ ಆನಬಾರದs ಲಕ್ಷ್ಮೀಬಾಯರ ಸರಕಾರ !

ಲಕ್ಷ್ಮಂ :— ತೆರಪಿಲ್ಲದ ಖರ್ಚಮಾಡಿದರ ನಾಯಾಕ ಹಾಯಗೊಡಲಿ? ನಮ್ಮ ಕೈಯ್ಯಾಗ ನಾವಿರಬೇಕು ! ನಾವು, ನಮ್ಮ ಮಕ್ಕಳು. ಅರಿವಿ, ಅಂಚಡಿ,—ಬೆಳ್ಳಿ, ಬಂಗಾರ—ಕಾಣಲಿಲ್ಲ. (ಹಿಂದೆ ಮುಂದೆ ನೋಡಿ) ನೋಡು ದ್ವಾರಕಾ, ಈಗ ವಯಿನ್ಸನ್ನ (ನಾದಿನಿಯನ್ನ)—ತಮ್ಮ ಮಗಳನ್ನ—ಅತ್ತೀ ಮನಿಯಿಂದ ಕರಸಿಕೊಂಡಾರ ತವರಮನಿಗೆ, ಅಭ್ಯಾಸಮಾಡಲಿಕ್ಕೆ. ಆಕೆಗೆ ಬೇಡಿದಾಗ ಮೀರಾಗಬೇಕು, ಶ್ರೀಖಂಡಾಗಬೇಕು; ಮಡಿಮಡಿಮಡಿ ನಮ್ಮ ನೈವೇದ್ಯ ಮಾತ್ರ ಖಂಡ ತಗೀಬೇಕು! ಮ್ಯಾಲೆ ನೋಡು. ಆಕೆಗೆ ಇಲಕಲ್ಲ ಸೀರಿ ಕೊಡಿಸು, ಮುತ್ತಿನ ಬಳಿ ಮಾಡಿಸು ಅಂತ ಗಂಟು ಬಿದ್ದಾರ. ನನಗ ಸಾಕಾಗಿ ಹೋಗೇದ ತಾಯಿ !

ದ್ವಾ :— ಹಿಂಗೇನು ? ಇನ್ನೆಂಗ ಮಾಡತಾರ ನಿನ್ನ ಯಜಮಾನರು ?

ಲಕ್ಷ್ಮಂ :— ಅವರೇನು ಮಾಡತಾರ....ಯಜಮಾನಕೀನs ನನ್ನ ಕಡೆ ಬಂದ ಮ್ಯಾಲೆ? ನಾ ಸೊಕ್ಕ ಹೇಳಿ ಬಿಡತೀನಿ, ಒಂದು ಪೈ ಕೊಡೂದಿಲ್ಲಂತ. 'ಗುಪ್ತಧಂಗ ಸಾಲಕೊಡsದ, ಅದನ್ನ ಮೊದಲ ಮುಟ್ಟಿಸಬೇಕಾದರನs ಕಣ್ಣೀರು ಕಪಾಳಕ್ಕ ಬರತಾವ' ಅಂತ !

ದ್ವಾ :— ಖರೇವಂದರ ಇಷ್ಟು ಸಾಲಾಗೇದೇನs ಶಾರಿ ?

ಲಕ್ಷ್ಮಂ — ಮತ್ತೇ, ಕಾಲೇಜಕ್ಕ ಹೋದವರಿಗೆ ವ್ಯವಹಾರಜ್ಞಾನ ಇರೋದಿಲ್ಲ ಅಂತ ಅವಕ್ಕs ಅಂತಾರ ನೋಡು ! ಸುಳ್ಳೊಂದು ಸೊಟ್ಟೊಂದು ಹೇಳಬೇಕು !

ದ್ವಾ :— ಹಿಂಗs ? ಅಂಥಾ ವ್ಯವಹಾರಜ್ಞಾನ ಇನ್ನೂ ಕಲಿತಿಲ್ಲ ಬಿಡು ತಾಯಿ ! ಅಲ್ಲ, ವಯಿನ್ನ ಎಂದ ಹೋಗತಾಳ ?

ಲಕ್ಷ್ಮಿ :— ಅಕ್ಯಾಕ ಹೋಗತಾಳ ಹೋಗೂ ಅಸ್ನೂತನಕಾ? ನಾನೂ ನೋಡೂ ತನಕಾ ನೋಡತೀನಿ. ಅಲ್ಲಿಂದ ಇನ್ನೊಂದು ಏಳೆಂಟು ದಿನಕ್ಕ 'ಯಾರೋ ನಿಮ್ಮ ತ್ತೀಮನಿಯವರು ಬಂದಿದ್ದರು, ನಿಮ್ಮ ಮನ್ಯಾಗ ಯಾರಿಗೋ ಭಾಳ ಜಡ್ಡಾಗೇತಂತ, ನಾಳಿನ ಗಾಡಿಗೇ ಜರೂರ್ ಕಳಿಸಂತ ಹೇಳ್ಯಾರ' ಅಂತ ಹೇಳಿ ಹೊತ್ತುಹಾಕಿ ಬಿಡತೀನಿ!

ದ್ವಾ :— ಭಾಳ ಜಾಣಿ ಬಿಡು ನೀನು! ನಿನ್ನ ಮಾತಿನಾಗ ನಮ್ಮ ಸಿನೇಮಾ ಸುರು ಆಗಿ ಹೋಗಿದ್ದೀತು. ಈಗರ ಬರತೀಯಿಲ್ಲೋ? ಏಳು! (ಎದ್ದು ನಿಲ್ಲುವಳು)

ಲಕ್ಷ್ಮಿ :— ನಾಳೆ ಹೋಗೋಣೇಳs ಧ್ಯಾರಕಾ! ನಾ ಕರಕೊಂಡು ಹೋಗತೀನಿ ಕೂಡಿವತ್ತ!

ದ್ವಾ :— ಆsಗಿ ಹೋತು. ನೀ ಜೀನತನದ ಸಂಸಾರ ಮಾಡುವಾಕಿ ನೀ ಏನು ಕರಕೊಂಡು ಹೋಗತೀ....ನಾ ಏನು ಕಾಣತೀನಿ! ನಾ ಒಬ್ಬಾಕೆರs ಹೋಗತೀನಿ ಬಿಡವ್ವ!

ಲಕ್ಷ್ಮಿ :— (ಎದ್ದು ಕೈ ಹಿಡಿದು ಕೂಡಿಸಿ) ಕೂಡs. ಸಿನೇಮಾಕ್ಕ ಹೆಂಗಸರಿಗೆ ಹಿಡಿಯೋ ಖರ್ಚೂ ಅಷ್ಟs ಆದ. ಎರಡಾಣೆ, ಬಹಳಾವರ ನಾಕಾಣೆ. (ಕುಲಮಿಯಿಂದ ಕೂಡಿಸಿ) ಛಹಾಕಿಟ್ಟೀನಿ, ತಗೊಂಡು ತಿರುಗ್ಯಾಡಲಿಕ್ಕೆ ಹೋಗೋಣಂತ! ಇಲ್ಲಿ ನೋಡು, ಈ ಪುಣ್ಯಾತಗಿತ್ತಿ....

ದ್ವಾ :— ಯಾರು? ವಯಸ್ಸನೋ ಅತ್ತ್ಯೋ?

ಲ :— ಇಬ್ಬರೂ ಒಂದs ಅನ್ನು, ನಾ ಹೇಳೋದು—ಈ ಅತ್ತೆವರು 'ಮಗಾ ಮಗಾ' ಅಂತ ಎಷ್ಟರs ಗೊಂಬೀಕುಣಿಸಿಧಂಗ ಕುಣಿಸೋದು? ಅದೇನೋ ಇವರಿಗೆ ಸಣ್ಣವರಿದ್ದಾಗ ಭಾಳ ಜೇರಾಗಿತ್ತಂತ, ಆಗ ಬೇಡಿಕೊಂಡಾರಂತ: ಸುಗ್ಗೀಕೇರಿ ಹಣಮಪ್ಪಗ ಸೇವಿದ್ಯಾಮಾಡಸಬೇಕು, ನೂರು ಮಂದಿಗೆ ಊಟಕ್ಕ ಹಾಕಬೇಕೂ ಅಂತ. ಈಗ ಒಂದೇ ಸವನೆ ಗಂಟು ಬಿದ್ದಾರ ಅದನ್ನ ಮಾಡಿಸು ಅಂತ. ಏನಾರs ನೆಗಡಿ ಕೆಮ್ಮು ಬಂದರಾತು, 'ನೀ ಹರಕಿ ನಡಿಸವೊಲ್ಲಿ ಅದಕ್ಕs ಹಗಲೆಲ್ಲಾ ಜಡ್ಡಿಗೆ ಬೀಳತಿ' ಅಂತಾರ ಅವರಿಗೆ '. ನಾ ಅರ ಎಲ್ಲಿ ಮಾಡಲಿಕ್ಕೆ ಬ್ಯಾಡಂತೀನಿ. ಆದರ ನೂರು ಮಂದಿಗೇ ಯಾಕ ಊಟಕ್ಕ ಹಾಕಬೇಕು?—ಅಂದರ ಕೇಳವೊಲ್ಲರು. ದಿನಾ ಅವರ ಕಾಲಾಗ ಲಗ್ಗಿ-ಮುಗ್ಗಿ ಝಗಳ!

ದ್ವಾ :— ತಿಳೀತು ಬಿಡು. ಅಲ್ಲ, ನಿಮ್ಮ ಮಾವಾ ಅವರು ಕೆಲಸ ಮಾಡತಾರಲ್ಲೇನು?

ಲ :— ಮಾಡಿದರೇನಾತು? ಅವರ ಪಗಾರ ಹಿಡಿಯೋ ಹಂಗಿಲ್ಲ, ವೆಳ್ಳೀ ಸಾಲಿ ಮಾಸ್ತರು. ಹಳ್ಳ್ಯಾಗ ಆವರ್ನ ಬಿಟ್ಟು, ಅನುವ್ವ-ಆಸತ್ತು ನೋಡದೇ ಇವರು ಇಲ್ಲೇ ಒಂದು ಸೇರ್ಕಾರ ಮಗನ ಹತೀಲೆ; ನಮ್ಮ ತಲೀಮ್ಯಾಲೆ ಮೊಣಸರಿಲಿಕ್ಕೆ.... ಮತ್ತೇನದ?

ದ್ವಾ : ನೀ ಯಾಕ ಕೇಳತಿ ಇನ್ನ? ಅವರು ಮೊಣಸರದ ನೀ ಖಾರಪುಡಿ ಆರಿ!

ಲ :— ಬಿಡತೀನೇನು? ಪಗಾರ ನನ್ನ ಕೈಯಾಗದ ಅಂತ ಹೇಳತೀನಿ. ಅಂದರ ತಾವs ಹಾದಿಗೆ ಬರತಾರ. ನನ್ನ ಮಡುಗ ಮೋಹನ ಇನ್ನೂ ಬಂಗಾರದ ಉಡದಾರ ಕಂಡಿಲ್ಲ, ಜರದ ಟೊಪ್ಪಿಗಿ ಹಕ್ಕೊಂಡಿಲ್ಲ; ಸುಡಗಾಡ ನನಗ ಒಂದೆರಡು ಚೆಲೋ ಜರದ ಸೀರಿ, ನಾಕೆಂಟು ಜರದ ಪೋಲ್ಕಾಗಳಿಲ್ಲ. ಎಲ್ಲ್ಯಾರ ಹೋದರ ಬಂದರ ಬೇಕೋ ಬ್ಯಾಡೋ? ತಿರಗಾಮುರಗಾ ಇವರ್ದs ಮೆರವಣಿಗಿ ನಡದದ!

ದ್ವಾ :—ಹೌದು ಮತ್ತ, ಇವೆಲ್ಲಾ ನೀ ನೂರವತ್ತು ರೂಪಾಯಿದಾಗ ಮಾಡುವಾಕಿಯೇನು?

ಲ :— ಅದ್ಯಾಕಾದೀತು? ಮೊದಲ ಒಂದೆರಡು ತಿಂಗಳು ಬ್ಯಾಂಕಿನಾಗ ಸ್ವಲ್ಪs ಇಡತೀನಿ. ನನ್ನ್ಯಾರು ಕೇಳೂವರು? ಒಂದಿಷ್ಟು ಘಾಂಡೀ ಕೋಂಡೀ ತಗೋಬೇಕು, ಅರಿವಿ ಅಂಚಡಿ ತಗೋಬೇಕು, ಮೋಹನಗ ಉಡದಾರ ಮಾಡಿಸಬೇಕು.... ... (ಮೇಲೆ ನೋಡುತ್ತ ಎಣಿಕೆ ಹಾಕುವಳು.)

ದ್ವಾ :— ತಿಳೀತು ಬಿಡವ್ವಾ; ಈಗ ಮೊದಲ ಚಹಾ ಒಂದಿಷ್ಟು ತಗೋಬೇಕು!

ಲ :— (ಒಮ್ಮೆಲೆ ನೆನಪಾಗಿ ಚಟ್ಟನೆ ಎದ್ದು) ಹೌದು ನಡಿ. ಎಸರು ಬಂದಿದ್ದೀತು. ಒಳಗ ಹೋಗಿ ಚಹಾ ಕುಡಕೋತ ಮಾತಾಡೋಣು! (ಇಬ್ಬರೂ ಮನೆಯೊಳಕ್ಕೆ ಹೊರಡುವರು. ಅಷ್ಟರಲ್ಲಿ ಹಾಲಿನಾಕೆ ಹೊರಗಿನಿಂದ 'ಅಪ್ಪವರ' ಎಂದು ಕರೆಯುತ್ತ ಬರುವಳು.)

ಲ :— ಯಾರವರು? ಹಾಲಿನಾಕೇನು? ಯಾಕs ನೀಲವ್ವಾ?

ಹಾ :— ಅಪ್ಪವರು ಮನ್ಯಾಗಿದ್ದಾರೇನ್ರಿ?

ಲ :— ಎದಕ್ಕ?

ಹಾ :— ಪೈಲಾತಾರೀಕು ಈವತ್ತ. ಹಾಲಿನ ಲೆಕ್ಕಾ ಕೇಳೂಣಾಂತ ಬಂದಿದ್ದೆ.

ಲ :— ಅವರೆದಕ್ಕಬೇಕು? ಇಷ್ಟನ್ಯಾಳೆ ನನ್ನs ಕೇಳು, ನಾನs ಕೊಡತೀನಿ!

ದ್ವಾ :— ಹೌದು ನೀಲವ್ವಾ. ಈವತ್ತಿನ ಹಿಡಿದು ಅನ್ನಾ ಅವರೇ ಅಪ್ಪಾಅವರು!

ಹಾ :— (ನಗುತ್ತ) ಹ್ಯಾಂಗೇನರಿ? ನನಗೇನ ತ್ಯಾಂವಿಕಿ ಬಿಡರಿ! ಬೇಸ್ಯಾತು. ಮತ್ತ ಐದ ರೂಪಾಯಿ ಆಗೇತಿ.

ಲ :— ಏನು ಐದುರೂಪಾಯಿ? ಅಧೆಂಗ ಅದು ಐದುರೂಪಾಯಿ? ಇನ್ನ ಹೇಳಿಧಂಗ ಕೊಡಲಿಕ್ಕೆ ಅವರಂತ ತಿಳಿದೀಯೇನು? ಎಲ್ಲಾ ಲೆಕ್ಕಾ ಹೇಳು ಬರಾಬರಿ!

ಹಾ :— ನಾಯಾಕ ಸುಳ್ಳ ಹೇಳಲಿರೀ ಅನ್ನವರ! ಆವತ್ತ ಮೀರಿಗೆ ಎರಡು ರೂಪಾಯಿ ಹಾಲು, ಮತ್ತ ದಿನಾ ನಾಕು ಪಾವು.......

ಲ :— ಅದೆಲ್ಲಾ ಗೊತ್ತಿಲ್ಲ. ಸಂಜೀ ಹಾಲು ತಗೊಂಡು ಇನ್ನೊಂದು ಸ್ವಲ್ಪ ಬಿಟ್ಟು ಬಾ. ಆಗ ಲೆಕ್ಕಾಮಾಡಿ ನೋಟು ಮುರಿಸಿ ಕೊಡತೀನಿ!

ಹಾ :— ಹ್ಯಾಂಗs ಮಾಡತೀನಿ (ಹೋಗುತ್ತ) ಗನಾನ ಕೊಡರೀ ಅವ್ವಾ, ಅಡಚಣ ಆಗೇತಿ (ಹೋಗುವಳು). (ಲಕ್ಷ್ಮಿಬಾಯಿ ದ್ವಾರಕಾ ಇಬ್ಬರೂ ಒಳಗೆ ಹೋಗುವರು. ಹೊರಗಿನಿಂದ ಪತ್ತಿಬುಟ್ಟಿ ಹಿಡಕೊಂಡು ಕಾಶೀಬಾಯಿ ಮತ್ತು ರಮಾಬಾಯಿ ಬರುವರು.)

ರಮಾ :— ಅವ್ವಾ, ಈವತ್ತ ಪುರಾಣದಾಗ ಅಳಸೋಹಂಗ ಕತಿ-ಗಿತಿ ಹೇಳಿದರೇನು, ಕಣ್ಣೀರಿನ ಕಲೆ ಬಿದ್ದಾವ ಮಾರೀಮ್ಯಾಲೆ?

ತಾರಾಬಾಯಿ :— ಅಲ್ಲs ರಮಾ, ಇವು ದುಕ್ಖದ ಕಣ್ಣೀರಲ್ಲ, ಸಂತೋಷದ ಕಣ್ಣೀರು!

ರ:— (ಆಶ್ಚರ್ಯದಿಂದ) ಸಂತೋಷದ್ದು? ಮಗನ ಮನ್ಯಾಗ ಕಾಲಿಟ್ಟ ಮ್ಯಾಲೆ ಈವತ್ತs ನೋಡು ನಿನಗ ಸಂತೋಷ ಆದ್ದು. ಅದ್ಯಾತಕ್ಕ ಸಂತೋಷದ್ದು?

ತಾ:— ರಮಾ, ಏನ ಹೇಳಲೆ, ಎಷ್ಟು ವರ್ಣನಾ ಮಾಡಲೆ ನನ್ನ ಮಗನ ಗುಣ? ಗುರುರಾಯ ಅಂದರ ಗುರುಗೋಳ ಹಂಗs ಇದ್ದಾನ ನೋಡು!

ರ:— ಇದೇನs ಅವ್ವಾ? ಹಗಲೆಲ್ಲಾ ಶ್ಯಾಪಿಸಿ ಕಲ್ಲೊಡಿಯು-ವಾಕಿ, ಈವತ್ತ ಹಿಗ್ಗಿಗ್ಗಿ ವರ್ಣನಾ ಮಾಡತೀದಿ? ನನ್ನ ನಿನ್ನ ಕಂಡರ ಆಂವ, ಅವನ ಹೆಂಡತಿ ಅವರ ಮೈ ದುಮು ದುಮು ಉರೀತsದ.

ತಾ:— ಅದು ಸುಳ್ಳು ರಮಕ್ಕಾ. ಅವನ ಹೇಣ್ತಿ ಜೋಡಿ ಇದ್ದಾಳಂಬೂದು ಜಗತ್ತಿಗೇ ಜಾಹೀರದ. ಆದರ ಅವ ಮುತ್ತಿನಂಥಾ ಹುಡುಗ!

ರ:— ಮುತ್ತಿನಂಥಾ ಹುಡುಗ! ಅಲ್ಲ, ಅವ್ವಾ, ಪುರಾಣಕ್ಕ ಹೋಗೂ ಮುಂದ ಆಂವಗ ಬಾಯಿಗೆ ಬಂಧಂಗ ಬಯ್ದು 'ಕತ್ತಿ ಇದ್ದಾನ ಕತ್ತಿ!' ಅಂದಿಲ್ಲ?

ತಾ:— ನನ್ನ ತಪ್ಪಾತು. ರಮಾ, ಈಗಂವ ಬ್ಯಾರೇ ಮನಸ್ಯಾ ಆದ. ಹಳೇದೆಲ್ಲ ಹೋತು, ಹಾರಿಹೋತು!

ರ:— ಅದ್ಯಾಕ ಹಿಂಗಂತೀ? ಪುರಾಣಿಕ ಆಚಾರ್ರು ನಿನ್ನ ತಲ್ಯಾಗ ಏನಾರ‍s ತುಂಬಿದರೋ ಏನು ಅಂತೀನಿ.

ತಾ:— ಯಾರೂ ಇಲ್ಲಕ್ಕಾ. ನಾನs ಮನಗಂಡೆ. ನೋಡು ಪುರಾಣ ಬಿಟ್ಟಮ್ಯಾಲೆ ಒಬ್ಬಾಕೇ ಗುಡಿಯಿಂದ ಮನಿಗೆ ಬರತಿದ್ದೆ; ಅವ ಮನಿಯಿಂದ ತಿರಿಗ್ಯಾಡಲಿಕ್ಕೆ ಹೊಂಟಿದ್ದ. ನಾ ಅವನ ಮಾರೀ ಸಹಿತ ನೋಡಲಿಲ್ಲ. ಅವನs ಹತ್ತೀಲೆ ಬಂದು, 'ಅವ್ವಾ' ಅಂತ ಭಕ್ತಿಯಿಂದ ಕರದು, 'ನೋಡು ಈವತ್ತ ಪೈಲಾ ತಾರೀಖು, ಪಗಾರಾತು, ಈ ಪಾಕೀಟಿನಾಗ ಎಲ್ಲಾ ಅದ, ನೀನs ಸಂಸಾರ ನೋಡಿಕೊ, ನಾ ಇನ್ನ ಉಸಾಬರಿ ಮಾಡೋದಿಲ್ಲ' ಅಂತ್ಹೇಳಿ ಹೊರಟು ಹೋಗಿ ಬಿಟ್ಟ. ಇದs ನೋಡು ಆ ಪಾಕೀಟು (ಕತ್ತೀ ಬುಟ್ಟಿಯೊಳಗೆ ತಳದಲ್ಲಿ ಬಚ್ಚಿಟ್ಟ ಪಾಕೀಟನ್ನು ಎತ್ತಿ ತೋರಿಸುತ್ತಾಳೆ.)

ರ:— ಎಲ್ಲಿ ನೋಡೋಣ ಅವ್ವಾ! (ಕಸಿದುಕೊಳ್ಳಲು ಹೋಗುವಳು)

ತಾ:— ಹೂ. ಹಿಡಿಬ್ಯಾಡ. ಹೋಗಯೋಗತs ಬಜಾಯಿಸಿ ಹೇಳಿದ: 'ಆಕೀ ಮುಂದ ಮತ್ತ ಮಂದೀ ಮುಂದ ಹೇಳಬ್ಯಾಡ ಅವ್ವಾ' ಅಂತ.

ರ:— ಹೀಂಗ? ನನ್ನ ಮುಂದ ಹೇಳಿದೆಲ್ಲಾ!

ತಾ:— ನಿನಗೆ ಹೇಳಿದರೇನಾತು? ನೀ ಆಕೀನೂ ಅಲ್ಲ, ಮಂದಿನೂ ಅಲ್ಲ!

ರ:— ಹಂಗಾರ ಸ್ವಲ್ಪ ಹಿಡಿದು ನೋಡತೀನಿ (ಎತ್ತಿ ನೋಡಿ ಗಾಬರಿಯಿಂದ) ಅವ್ವಾ, ಇದರಾಗ ರೂಪಾಯಿ ರೊಕ್ಕಾ ಏನೂ ಕಾಣೂದಿಲ್ಲ. ಆಂವ ಏನೋ ಕುಚಾಷ್ಟಿ ಮಾಡಿರಬೇಕೇಳು!

ತಾ:— ಅದ್ಯಾಕಾದೀತು? ಅದರಾಗ ನೋಟ ಅವ ಎಲ್ಲಾ. ಈಗ ಬೇಕಂದರರ ಎಲ್ಲಿ ಸಿಗತಾವ ರೂಪಾಯಿ ರೊಕ್ಕ? ಎಲ್ಲಾ ಕಡೆ ನೋಟs ನೋಟು!

ರ:— ಇದ್ದೀತವ್ವಾ. ಕಚೇರ್‍ಯಾಗ ಬಂದೋಬಸ್ತ ಮಾಡೇ ತಗೊಂಡು ಬಂದಾನ. ಹರಿದು ನೋಡಲ್ಯಾ ಅವ್ವಾ?

ತಾ:— ಒಂದಿಷ್ಟು ಸುಮ್ಮಿರು ನೀನು. ಇಬ್ಬರs ಇದ್ದಾಗ ಒಳಗ ಹೋಗಿ ನೋಡೋಣ: ಈಗ ಆ ಸಟವಿ ಬಂದುಗಿಂದಾಳು!

ರ:— ಅಂಥಂಗ ಪೈನಿ ಎಲ್ಲಿ ಹೋಗ್ಯಾಳೋ ಏನು?

ತಾ:— ಎಲ್ಲೇನು ಗೊತ್ತs ಅದ. ಅದೊಂದು ಟಿಸ್-ಪಿಸ್ ಅನಕೋತ ಸೊಟ್ಟ ಜೈತಲ ತಕ್ಕೊಂಡು, ಗೋಲ ಉಟಗೊಂಡು ಧುಬಲಿ ಬರತದಲ್ಲ, ಅದರ ಜೋಡಿ ಹೋಗಿದ್ದಾಳು ಹವಾ ತಿನ್ನಲಿಕ್ಕೆ! ತಿನ್ನಲಿನ್ನ ಹವಾ, ಬರೇ ಹವಾ! ಪಗಾರೆಲ್ಲಾ ನನ್ನ ಕೈಯಾಗ ಸಿಕ್ಕಿತು, ಇನ್ನ ಮ್ಯಾಲೆ ಎಲ್ಲಾ ಕಾರಭಾರ ನನ್ನದು!

ರ:— ಹೌದು ಅವ್ವಾ, ಭಾಳ ಛೊಲೋ ಆತು ನೋಡು. ಆಕಿ ಫಟ್ಟ ಫಜೀತಿ ಮಾಡೂಣ. ಇಷ್ಟು ದಿವಸ ಗಂಡನ ಕಿವಿ ಚುಚ್ಚಿ-ಚುಚ್ಚಿ, ನಮ್ಮನ್ನ ಚಿಟುಕುಮುಟ್ಯಾಡಿಸತಿದ್ದಳು. ಇನ್ನಮ್ಯಾಲೆ ಹೇಳಿದ ಕೆಲಸಾ ಮಾಡಿಕೋತ ಹಾಕಿದ್ದುಂಡು ಬೀಳಲಿ.

ತಾ:— ಝುಕ್ಕನ್ನs ಬೀಳತಾಳ. ಇನ್ಯಾರು ಕೇಳತಾರ ಆ ನಾಜೂಕು, ಆ ಡೌಲು, ಆ ಮುರಕ? ನಾಕಕ್ಷರ ಇಂಗ್ರೇಜಿ ಕಲಿತ-ದ್ದಕ್ಕ ಎಷ್ಟದು ದಿಮಾಕ ಮಾಡೋದು? ನಾಕು ಮನಿ ಕಸಬಳಿದ ಘಳಿಗ್ಗೆ 'ಅಯ್ಯs, ನನ್ನ ಕಾಲು ಹರಿತಾವರಿ' ಅಂಬೂದು, ನಾಕುಕೊಡ ನೀರು ಜಗ್ಗಿದರಾತು, 'ನನಗ ಬಿಟ್ಟಿ ಬಂತರೀ, ನನ್ನ ಹೊಟ್ಟಿ ಕಡಿತದರಿ' ಅಂಬೂದು!

ರ:— ಮತ್ತ ಆಕಿ ಬುಬ್ಬುಣಚಾರ ಕೇಳಿ ಇಂವ ಗುರಣ್ಣಾ ಹಾಸಿಗಿ ಹಾಸಿ ಕೊಡೋದೇನು, ತಲೀ ಒತ್ತೋದೇನು? ಎಲ್ಲಾ ಮಜಾನೇ! (ನಗುವಳು).

ತಾ:— ಇನ್ಮೋದು ರಮಾ, ಇಂಥಾದೆಲ್ಲಾ ಬಗಿಹರಿಯೋದಿಲ್ಲ ಅಂತ ಹೇಳಿಬಿಡತೀನಿ. ಮನೀ ಸೊಸಿ ಅಂದ ಮ್ಯಾಲೆ ಮನದಣಿ ದುಡೀಬೇಕು. ನಾವು ಬಡವರು, ನೀರಿನವರ್ನ ಅಡಗಿಯವರ್ನ ಇಟು-ಗೊಂಡರ ಎಲ್ಲಿ ಪೂರೈಸತದ? ಆಕೀ ಕಡಿಂದs ಜಗ್ಗಿ ಕೆಲಸಾ ತಗೊಂಡು ಎಲ್ಲಾ ಖರ್ಚು ಕಡಿಮೆ ಮಾಡಿ, ಇಷ್ಟನ್ನ ರೂಪಾಯಿದಾಗ ಸಂಸಾರ-ಮಾಡತೀನಿ!

ರ:— ಬರಾಬರಿ. ಮತ್ತ ಉಳಿದ ಆದುವತ್ತು ಏನ್ ಮಾಡತೀ-ಮತ್ತ?

ತಾ:— ಕೂಡಿಹಕ್ಕೋತs ಹೋಗಬೇಕು. ಅಂದರ ಸಂಸಾರ! ಮನ್ಯಾಗ ಒಂದು ತುಣುಕು ಬಂಗಾರಿಲ್ಲ, ಹೆಣ್ಣುಮಕ್ಕಳಿಗೆ ಒಂದು ವಸ್ತ ಮಾಡಿಸಿಕೊಟ್ಟಿಲ್ಲ, ಒಂದು ಛೊಲೋ ಸೀರಿ ಕೊಟ್ಟಿಲ್ಲ...

ರ :— ಹೌದು ಅವ್ವಾ, ನನಗ ನೀ ಅಂಥಂಗ.......

ತಾ :— ಅದs ನಾ ಹೇಳೋದು. ನಿನಗೇನು ಬೇಕಾದ್ದು ಮಾಡ ತೀನಿ ಅತಿಲ್ಲೊ—? ಅಲ್ಲಿಂದ ಗುರಣ್ಣನ ಮನಿಂದ ಅದೊಂದು ಹರಿಕೆ ಹೊತ್ತದ್ದು ಹಣಮಪ್ಪಂದು, ಅದನ್ನ ತೀರಿಸಬ್ಯಾಡs ? ಭಾಳ ಉಗ್ರ ದೇವರು!

ರ :— ಹೌದು ತಾಯಿ, ಅದಕ್ಕ ನೂರಿನ್ನೂರು ರೂಪಾಯಿ ಖರ್ಚು ಮಾಡಲಿಕ್ಕೇ ಬೇಕು ಮೊದಲು. ಆದರ ಅದನ್ನ ನಾ ಎಂದೆಂ- ದಿಗೂ ಮಾಡಿಸಿಗೊಟ್ಟಾಕಿ ಅಲ್ಲ.... ಅಂತಿದ್ದಳಲ್ಲ ಆ ಮಾರಾಯ್ತಿ !

ತಾ :—ಆಕೇನಂತಾಳ ? ಆಕೀದೇನ ನಡೀತದ ಇನ್ನ ? ಹುಡುಗ ಬುದ್ಧಿ, ದೇವರು ದಿಂಡರು ಅಂದ್ರ ಅವಕ್ಕೇನು ತಿಳೀತದ ? ತಲಿಗೆ ಬಡಿಯೋ ತನಕಾ ಈ ವಿಷಯ ಗೊತ್ತಾಗುದಿಲ್ಲ !

ರ :— ಆದರ ಅವ್ವಾ, ನೀ ಏನs ಅನ್ನು, ನಾ ನಾಳೆ ನಮ್ಮನಿಗೆ ಹೋಗಿ ಬಿಡತೀನಿ !

ತಾ :—ಅದ್ಯಾಕs ಹುಚ್ಚೀ, (ಹತ್ತಿರ ಎಳೆದು ಬೆನ್ನಮೇಲೆ ಕೈಯಾಡಿಸಿ) ಅತ್ತೀಮನ್ಯಾಗ ಎಷ್ಟು ದುಡಿಸಿಗೋತಾರೋ ಏನೋ, ನೋತು ಸುಣ್ಣಾ- ಗಿದಿ; ಮಾರೀಮ್ಯಾಲಿನ ಕಳೇನ ಹೋಗೇದ. ನಿನಗ ಬೇಕಾದ್ದು ಮಾಡಿಸಿಕೊಂಡು ತಿಂದು ಆರಾಮ ಕಾಲ ಚಾಚಿಕೊಂಡು ನಾಕೊಪ್ಪತ್ತು ಕೂಡು ! ಒಂದಿಷ್ಟು ನಿನ್ನ ಮೈಯರ ತುಂಬಿದ್ದು ನೋಡತೀನಿ !

ರ :— ಹಂಗಲ್ಲ ಅವ್ವಾ, ನೀ ಎಲ್ಲಾ ಅಕ್ಕರತಿಯಿಂದ ಮಾಡತಿ. ಆಕಿ ಲಕ್ಷುಂಬಾಯಿ ನನ್ನ ಕಂಡರ ಸಿಟ್ಟು ಸಿಟ್ಟು ಮಾಯತಾಳ, ಕೌ ಕೌ ಹರಕೋತಾಳ !

ತಾ :— ಆ ಹೊಯ್ಯಾಲಿನ್ನ ತಗೊಂಡೇನ ಮಾಡತೀ ? ತವರ ಮನಿಗೆ ಅಂದರ ನನ್ನ ಮನಿಗ ಬಂದೀದಿ, ಅಂದನ್ಯಾಲಾತು. ಆ ಹಳ್ಳೀ ಕೊಂಪ್ಯಾಗ ಅವರ ಹತ್ತೀಲೆ ಬ್ಯಾಡಂತ ಇಲ್ಲೇ ಕರಿಸೀನಿ. ಬೇಕಾದಷ್ಟು ದಿನ ಇದ್ದು ಸುಖಬಡು ! ಇಷ್ಟು ದಿನಾ ಹೇಣ್ತೀ ಮಾತು ಕೇಳಿ ಗುರುರಾಯ ಹುಚ್ಚುಚ್ಚು ಬಡೀತಿದ್ದ: ಈವತ್ತ ದೇವರ ಅನುಗ್ರಾದಿಂದ ಅವಗ ಬುದ್ಧಿ ಬಂತು, ಆಕಿದೆಲ್ಲಾ ಹೊರಬಿತ್ತು. ಮನ್ಯಾಗ ಆದರ ಆಕಿಗೆ ತಿಳಿದೀತು ಅಂತ, ಹಾದ್ಯಾಗ ಭೆಟ್ಟ್ಯಾಗಿ ಇದನ್ನ ಕೊಟ್ಟು ಹೋದ. ಎಂಥಾ ವಿವೇಕಿ ಅಂದಿ ಗುರುರಾಯ !

ರ :— ಹೌದವ್ವಾ ಭಾಳ ವಿವೇಕಿ ! [ನೀಲವ್ವ ಹಾಲಿನ ಚೊಂಬು ತಗೊಂಡು ಬರುತ್ತಾಳೆ.]

ನೀ :— ಅವ್ವಾ ಅವರs, ಹಾಲ ಹಾಕಿಸಿಗೋರಿ !

ತಾ :— ಯಾಕs ನೀಲವ್ವಾ, ಈವತ್ತ ಇಷ್ಟ್ಯಾಕ ಬಗೂ ತಂದೀ ಹಾಲು ?

ನೀ :— ಅವ್ವಾವರು ಹೇಳ್ಯಾರ್ರಿ.

ತಾ :— ಯಾರವರು ಅವ್ವಾವರು....ನನ್ನೊರತು ?

ನೀ :— ನೀವಲ್ಲರಿ, ಲಕ್ಷುಂಬಾಯರು ಹೇಳ್ಯಾರು ಮತ್ತ....

ರ :— ತಿಳೀತs ಲಕ್ಷುಂಬಾಯರಂತ ! ಅವರದೇನು ನಡೀತದ ಈ ಮನ್ಯಾಗ ? ನಮ್ಮವ್ವಗ ಅವ್ವಾವರನ್ನ, ತೀಳೀತಿಲ್ಲೊ ?

ನೀ :— ನಮಗೇನು ಗೊತ್ತರಿ. ಇಬ್ಬರೂ ಅವಟ. ಮೊದಲೀಟ ಹಾಲ ತಗೊಂಡು ಹಾಲಿನ ಲೆಕ್ಕಾ ಕೊಡಂತ ಹೇಳರಿ....

ತಾ :— ಯಾರಿಗೆ ಹೇಳೂದು ? ನಾನs ಕೊಡೂ ಆಕಿ. ತಿಳೀ- ತಿಲ್ಲೊ ? ಗುರುರಾಯನ್ನ ಕೇಳಬ್ಯಾಡ; ಹೆಚ್ಚು ಕಡಿಮಿ ಲೆಕ್ಕಾ ಹೇಳಬ್ಯಾಡ. ನಾಳಿನ ಹಿಡದು ಎರಡು ಪಾವು ಹಾಲು ಸಾಕು, ಅಷ್ಟs ತಗೊಂಬಾ !

ನೀ :— ಇದೇನ್ರಿ, ಅವ್ವಾ ನಿಮಗ್ಯಾತಕs ತಿಳೀವಲ್ಲದು. ಆಗಾಳೆ ಬಂದಿದ್ನಿ; ' ನಾನs ಅವ್ವವರು, ನಾ ಲೆಕ್ಕಾ ಕೊಡತೀನಿ' ಅಂತ ಲಕ್ಷುಂ- ಬಾಯರು ಅಂದರು. ಈಗ ನೀವs ಕೊಡತೀನಿ ಅಂತೀರಿ.

ತಾ :— ಹಾ ! ಏನು ಲಕ್ಷ್ಮುಂಬಾಯಿ ನಾ ಕೊಡತೀನಿ ಅಂದಳs? ಅದೆಂಗದು ? ತವರಮನಿಯಿಂದ ದುಡ್ಡುಗಿಡ್ಡು ತರಿಸ್ಯಾಳೋ ಏನು ಮಾಡಗಾಡು ?

ರ :— ಇಲ್ಲೇನು ಅವ್ವಾ. ಹೌಲು ಬಡೀಲಿಕ್ಕೆ ಅಂದಿದ್ದಾಳು!

ನೀ :— ನಮಗ ಬಾಳ ಅಡಚಣಿ ಐತಿ. ಯಾರದೇ ಗಮಾನ ಕೊಡರಿ ಆತು. ಹಾಲ ತಗೋಳಿಕ್ಕೆ ಅವ್ವಾಅವರನ್ನ ಕರೀತೀನಿ. ಅವ್ವವರs ಅವ್ವವರs [ಗಟ್ಟಿಸಿ ಒದರುವಳು.]

ರ :— ಏನಿದು ಅವ್ವಾ. ಸ್ವೈಸೀ ಒಳಗ ಅಡಿಗೀಮನ್ಯಾಗ ಇದ್ದಾಳ ಕಾಣಿಸತದ!

ನೀ :— ಹೌದರೀ ಬಾಯೇರು ಒಳಾಕ ಕೂತಾರ.

ತಾ :— ಇರಬೇಕ್ಯಾಕ. ನಮಗೇನು ಮಾಡತಾಳ ?
[ಲಕ್ಷುಂಬಾಯಿ, ದ್ವಾರಕಾ ಅಡಿಗೆಮನೆಯಿಂದ ಹೊರಗೆ ಬರುತ್ತಾರೆ.]

ಲ :— ಬಂದೆ ನೀಲವ್ವಾ ಬಂದೆ. ಒಳಗತ್ತ ಅಡಿಗೀಮನ್ಯಾಗ ಮಾತಾಡಿಕೋತ ಕೂತಿದ್ವಿ. ನೀ ಬಂದದ್ದs.... (ಏನು ನಡದದ್ದ ತಲೆಯೆತ್ತಿ ತಾರಾಬಾಯಿ ರಮಾಬಾಯಿಯರನ್ನು ನೋಡಿ) ಎಲಾ, ನೀವು ಯಾವಾಗ ಬಂದಿರಿ. ಪ್ರಯಾಣ ಚೆಟ್ಟಿತೇನು ?

ತಾ :— ಹೂಂ ಪ್ರಯಾಣ ಚಟ್ಟಿತು! ನಿಮ್ಮ ಹರಕೀ ಪೂರ್ತ್ಯಾಣ ಮುಗೀತಿಲ್ಲೊ ? ಏಳಿನ್ನು. ಹಾಲು ಹಾಕಿಸಿಕೊಂಡು ಒಳಗಿಡು, ಮಡಿ ಉಟಕೊಂಡು ಅಡಿಗ್ಗ ಕೂಡು !

ಲ :— ನೀವಂತೂ ಒಳಗ ನಡೀರಿ, ನಾ ಎಲ್ಲಾ ನೋಡಿಕೋತೀನಿ!

ತಾ :— ಎಷ್ಟದು ಅತಿಶ್ಯಾ ! ಹೆಂಗದು ಮಾತಾಡೂದು ಹಿರೇ- ಮನಸ್ಯಾರಿಗೆ ?

ಲ :— ಹಿರೇಮನಸ್ಯಾರು, ಹಿರೇಮನಸ್ಯಾರು! ಹಗಲೆಲ್ಲಾ ಯಾರು ಕೇಳತಾರ? ದ್ವಾರಕಾ. ಆ ಹಾಲಿನ ಭಾಂಡಿ ತಂದು ಒಂದಿಷ್ಟು ಹಾಲು ಹಾಕಿಸಿಕೊ! (ದ್ವಾರಕಾ ಭಾಂಡಿ ತಂದು ಹಾಕಿಸಿಕೊಳ್ಳುವಳು).

ತಾ :— ಲಕ್ಷ್ಮುಂಬಾಯಿ. ನಾಲಿಗೀ ಭಾಳ ಹರೀ ಬಿಡತೀದಿ ? ಮನ್ಯಾಗ ಏನು ನಿಂದs ಎಲ್ಲಾ ಕಾರಭಾರಂತ ತಿಳದೀಯೇನು ?

ಲ :— ತಿಳಿಯೋದೇನು ? ನಂದs ಕಾರಭಾರ ಇನ್ನ ಮ್ಯಾಲೆ!

ರ : ಅವ್ವಯ್ಯಾ. ಏನ ಧಿಟ್ಟೀ ತಾಯಿ ಆಕಿ!

ಲ :—ಹೌದರೆವ್ವಾ. ನಿಮ್ಮಷ್ಟು ಸಮ್ಗಣ ನಮ್ಮಲ್ಲಿ ಹೆಂಗ ಬರಬೇಕು ?

ತಾ :— ಸಾಕ ಸುಮ್ಮಿರು ಲಕ್ಷ್ಮಿಂಬಾಯಿ !

ಲ :— ಸುಮ್ಮನಿರಲಿಕ್ಕೆ ನಾ ಏನು ನಿಮ್ಮ ಕೈಯಾಗಿನ ಗೊಂಬಿ ಅಲ್ಲ. ಸೀಲವ್ವಾ, ನಿನ್ನ ಲೆಕ್ಕಾ ನಾಳೆ ಮುಂಜಾನೆ ತಗೊಂಡು ಹೋಗು. ನೋಟು ಮುರಿಸಿಡತೀನಿ! ತಿಳಿತಿಲ್ಲೊ ?

ತಾ :— ನೀ ಯಾರು ಆಕಿಗೆ ಕೊಡೂ ಆಕಿ ? ನಾ ಎಲ್ಲಾ ಕೇಳಿ ನಾಳೆ ಕೊಡತೀನಿ. ನಾಳೆ ಮಧ್ಯಾನದಾಗ ಬಾರವ್ವ ಸೀಲವ್ವಾ, ಈಗ ಹೋಗು.

ಸೀ :— (ದಿಕ್ಕೆಟ್ಟಂತಾಗಿ) ಅಯ್ಯೋ ಶಿವನ, ಇದೇನ ಫಜೀತಿ ಬಂತಂತೀನಿ! ಯಾರರ ಗಡಾನ ಕೊಡರೀ ಅಪ್ಪನವರ, ನಾಳೆ ಬರತೀನಿ! (ಹೊರಡುತ್ತ) ಲೆಕ್ಕ ಕೊಡೂದಕ್ಕೂ ಅತ್ತೀ ಸೊಸೀ ತಂಟೇನೂ! (ಹೋಗುವಳು)

ತಾ :—ಏ ಲಕ್ಷ್ಮಿಂಬಾಯಿ. ಅಂವ ಮನಿಗೆ ಬರಲಿ, ನಿನ್ನ ಫಜೀತಿ ಮಾಡಿಸತೀನಿ. ಆ ಘುಬಲಿ ನೀನೂ ಒಂದಾಗಿ ಹಿರೇರ ಮಾನಾ ತಗೊಳ್ಳಿಕ್ಕೆ ನಿಂತೀರಲ್ಲಿ ?

ದ್ವಾ :— ನಾ ಏನ ಮಾಡೀನಂ ತಾರಾಬಾಯರ, ಮನ್ಯಾನ್ರ ಮಾತಾಡಿಸಲಿಕ್ಕೆ ಬಂದಿದ್ದೆ.

ಲ :— ಆಕೀ ಸುತ್ತಾಕ ನಿಮ್ಮ ಕಟ್ಟಿನಾಗಾತು ? ಮನಿಗೆ ಬರಲಿ, ನಾನೂ ಫಜೀತಿ ಮಾಡಿಸತೀನಿ. ಈಗೆಲ್ಲಾ ಅಧಿಕಾರ ನನ್ನ ಕಡೆ ಬಂದದ!

ತಾ :— ಅದೆಲ್ಲಾ ಸುಳ್ಳು, ನನ್ನ ಕಡೆ ಬಂದದ!

ಲ :— ಬರೇ ಬಾಯಿಲೆ ಅಂದರೇನಾತು? ಇಲ್ಲಿ ನೋಡಿರಿ ಸಗಾರನs ನನ್ನ ಕಡೆ ಕೊಟ್ಟಾರ! (ಉಡಿಯೊಳಗಿಂದ ಪಾಕೀಟು ಎತ್ತಿ-ತೋರಿಸುವಳು).

ತಾ :— ಅದೆಲ್ಲಾ ಖೊಟ್ಟಿ ಮಾತು. ನನ್ನ ಕಡೆ ಕೊಟ್ಟಾನ ಗುರುರಾಯ, ಇಲ್ಲಿ ನೋಡು. (ಹತ್ತಿಬಟ್ಟಿಯಿಂದ ಪಾಕೀಟು ಎತ್ತಿ ತೋರಿ-ಸುವಳು.) [ಇಬ್ಬರೂ ಚಕಿತರಾಗಿ ಒಂದು ಕ್ಷಣ ಮಿಕಿಮಿಕಿ ನೋಡುವರು.]

ರ :— ಅವ್ವಾ, ಇಬ್ಬರಿಗೂ ಹೆಂಗ ಕೊಟ್ಟನs ಅಣ್ಣಾ?

ದ್ವಾ :— ರಾಣೀ, ಇದೇನ ಚಮತ್ಕಾರs? ನಿನಗರ್ಧ ಅವರಿಗರ್ಧ ಕೊಟ್ಟಾರೋ ಏನು ? ನೀ ಒಡೆದು ನೋಡೇ ಇಲ್ಲ!

ಲ :— ಹೌದು, ಬಡಿವಾರ ಬ್ಯಾಡಂತ ಕೊಟ್ಟಿದ್ದರೂ ಕೊಟ್ಟಿದ್ದಾರು. ಅವರ ತಲಿ ಈಗ ಠಿಕಾಣೆದಾಗ ಎಲ್ಲ್ಯದ ?

ತಾ :— ಅವಗೇನಾಗ್ಯೇದ ಧಾಡಿ, ನನ್ನ ಕಡೆ ಕಟ್ಟಿಬಿಡೆ ಸಗಾರ ಕೊಟ್ಟಾನ; ನಿನ್ನ ಕಡೆ ಸುಳ್ಳೆ ಪಳ್ಳೆ ಕಾಗದ ಪುಡಿಕಿ ಕೊಟ್ಟಾನ !

ದ್ವಾ :— ರಾಣಿ, ಒಡದ ನೋಡೆರ ನೋಡು; ಏನದ ಅದ ಒಳಗ!

ಲ :— (ಒಡೆಯುತ್ತ) ನನಗ ಖಾತ್ರೀ ಅದ ಅದರಾಗ ನೋಟು ಇರಲಿಕ್ಕೇ ಬೇಕು! (ಒಡೆದು ಪಟ್ಟ ಕಾಗದದಲ್ಲಿ ಬರೆದ ಒಂದು ಪತ್ರವನ್ನು ಮಾತ್ರ ನೋಡಿ, ಒಳಗೆ ಹಣಕಿ ನೆಟ್ಟಗೆ ತಪಾಸ ಮಾಡಿ ನೋಡಿ, ನೋಟಿಲ್ಲದ್ದಕ್ಕೆ ಜೋಲುಮೋರೆಯಾಗಿ) ಇದರಾಗ ಕಾಗದೊಂದs ಅದ.

ರ :— ಹೆಂಗಾತು ಫಟ್ಟಿಫಜೀತಿ ರಾಣೀಸರಕಾರದ್ದು !

ತಾ :— ನಾ ಹೇಳಿದ್ದಿಲ್ಲ ? ಅಂವ ಯಾರು, ನನ್ನ ಮಗ!

ಶೀಲಧಾ

ಎಂಟೀಮಲೇರಿಯಾ ವನಸ್ಪತಿ ಪಿಲ್ಸ್

ಎಲ್ಲ ತರದ ಜ್ವರ, ಜ್ವರಗಡ್ಡೆ, ತಜ್ಜನ್ಯ ಅಶಕ್ತತೆಯ ಮೇಲೆ ರಾಮಬಾಣ! ಲಿವರ್, ಹೊಟ್ಟೆನೋವು, ಮಲಬದ್ಧತೆ ಸುಧಾರಿಸಿ ಶಕ್ತಿ ಬೆಳೆಯಿಸುತ್ತದೆ! ಕ್ವಿನ್ಯಾನ್ ಬದಲು ವೈದ್ಯ-ಡಾಕ್ಟರರು ದವಾಖಾನೆಗಳಲ್ಲಿ ವಾಪರಿಸುವರು. ೧೨೦೦ ಗುಳಿಗೆಗಳಿಗೆ ರೂ. ೧೫; ೬೦ಕ್ಕೆ ೧-೧೩-೦. ಔಷಧದಲ್ಲಿ ಗುಣವಿಲ್ಲವೆಂದು ಸಿದ್ಧ ಮಾಡಿದವರಿಗೆ ೧೦೦೦ ರೂಪಾಯಿ ಬಹುಮಾನ. ಪ್ರತಿ ಊರಲ್ಲಿಯೂ ಮಾರುವ ಏಜಂಟರು ಬೇಕು.

ಶೀಲಧಾ ಕೆಮಿಕಲ್ ಕಂಪನಿ, ಸಿರಸಿ, ಉ. ಕ.

ಸೋಲ್ ಏಜೆಂಟರು:—

ಎಸ್. ಎಲ್. (ಅಪ್ಪುರಾವ) ಧಾಕಪ್ಪಾ

ಬಡವರ ಔಷಧಿ ಸರ್ವಿಸ್, ಸಿರಸಿ, ಉ. ಕಾನಡಾ

ದ್ವಾ :— ನೀ ಯಾರ ಕೈಯಾಗೂ ಕೊಟ್ಟಿಲ್ಲ: ನೋಟಿದ್ದರ ಎಲ್ಲಿ ಹೋಗತಿದ್ದವು ?

ತಾ :— ಅದರಾಗೆಲ್ಲಿ ಎರಡೇಕು ನೋಟು ? ಇದರಾಗವ !

ರ :— ಅವ್ವಾ, ನೀ ನೋಡು ಏನೂ ಕಾಣಸ್ತದ. ಅದರೇನು ನೋಡು ? ತೆಗೆದು ನೋಡೇ ಬಿಡೂಣೇ? ಅಂದರ ಇವರ ಮಾರೀಮ್ಯಾಲೆ ಹೊಡಧಂಗಾಗತದ. (ಪಾಕೀಟು ತೊಗೊಂಡು ಒಡೆದು, ಎಲ್ಲ ಕಡೆ ನೋಡಿ ಹುಡುಕಿ, ಒಂದು ದಪ್ಪ ಕಾಗದದಲ್ಲಿ ಬರೆದ ಪತ್ರವನ್ನು ಮಾತ್ರ ಕಂಡು ಪೆಚ್ಚಾಗಿ) ಇದರಾಗಿಲ್ಲೀ ಇಲ್ಲ!

ತಾ :— ಅದ್ಹೆಂಗs ರಮಾ? ಇಲ್ಲಿ ತಾ ನೋಡೂಣ (ನೋಡಿ ಇಲ್ಲೆಂದು ನಿಸ್ತೇಜಳಾಗುವಳು)

ಲ :— ಅವs, ನನಗಂತಿದ್ದಿ. ನಿಮ್ಮ ಮಾರಿಗೂ ಆರತೀ ಬೆಳಗಿ-ದ್ಹಂಗಾತs ರಮಾಬಾಯರ ?

ರ :— ನನಗ್ಯಾಕಂತೀರಿ? ನಂದೇನು ಸಂಬಂಧ ? ನಿಮ್ಮ ಮಗಾ-ನನೋ, ನೀವೇನೋ!

ತಾ :— ಏನು ಬಿಡ್ಯಾ ಹಿಂಗ ಗುರ್ಯಾ ? ಅದ್ಹೆಂಗ ಹೋದೀತು ಮುಚ್ಚಿಗುಳು? ಹಡಿತನಕಾ ನುಂಗು, ಕಡತನಕಾ ನೋಡು!

ದ್ವಾ :— (ಪತ್ರ ಕಣ್ಣೆಟ್ಟು ನೋಡಿ) ಇದರಾಗ ಏನೋ ಬರದದ ನೋಡು ರಾಣಿ!

ಲ :— ಹಗೊಂದೇನು ಮಾಡೂದು ಅದನ್ನ ? ನೀ ಬೇಕಾದರ ಓದಿಕೊಳ್ಳಿರಿ ಓದು! (ದ್ವಾರಕಾ ಓದತೊಡಗಿದಂತೆ ರಮಾ ತಾಯಿ ಯೂ ತನ್ನ ಹತ್ತಿರದ ಪಾಕೀಟಿನಲ್ಲಿಯ ಪತ್ರವನ್ನು ಓದತೊಡಗುತ್ತಾಳೆ.)

ದ್ವಾ :— (ಗಟ್ಟಿಸಿ ಪತ್ರವೋದುತ್ತ "ಈ ಮನ್ಯಾಗ ಹತ್ತರಿಪ್ಪೂ ಜಪ್ಪಂದರ **ಕೂಡಲಾರದ ಕಣ್ಣವ.** ಅವು ಇರೋತನಕ ಸುಖದಿಂದ ಸಂಸಾರ ಮಾಡೋದು ಸರ್ವಥಾ ಸಾಧ್ಯ ಇಲ್ಲ....ಅಂತ ನಾ ಮನ ಗಂಡಂಗಾತು. ಎರಡೂ ಕಡೆ ತೂಕ ಹಿಡಿಯೋದರಾಗ ನನ್ನ ತೂಕಾನs ತಪ್ಪಿ ಹೋತು, ತಲಿಯೆದ್ದು ಹುಚ್ಚು ಹಿಡಿಯೋದೊಂದs ಉಳಿದದ! ಇನ್ನ ಬಂದ ಪಗಾರೆಲ್ಲಾ ಯಾರಿಗರ ದಾನಧರ್ಮ ಮಾಡಿ, ನಾ ಸಂನ್ಯಾಸ ತಗೊಂಡು, ಎಲ್ಯಾರೆ ಅಡವೀಪಾಲಾಗಿ ಹೋಗಿಬಿಡತೀನಿ.

ನಿಮ್ಮ ನಿಜದ ಸಂಸಾರಿ ಗುರುರಾಯ."

ರ :— ಅವ್ವಾ, ಈ ಪತ್ರದಾಗೂ ಅದೇ ಮಾತs ಬರದದ!

ತಾ :— (ಕಂಠವುಬ್ಬಿ) ಏನ ಮಾಡಲೇ ನಾನು ಇವನ ಹಾಗತ್ಯಾದ ಮಾತಿಗೆ? ಸಂನ್ಯಾಸ ತಗೊತೀನಿ ಅಂತಾನಲ್ಲರೆ, ಎಲ್ಯಾರೆ ಅಡವೀ-ಪಾಲಾಗಿ ಹೋಗತೀನಿ ಅಂತಾನಲ್ಲರೆ, ಹೆಂಗ ಮಾಡಲೆ?........

ಲ :— ಹೆಂಗೇನು? (ಕೊರಳುಬ್ಬಿ) ಅವರು ಸಂನ್ಯಾಸ ತಗೋತಾರ, ನೀವು....ಕಾಶೀಯಾತ್ರಿಗೆ ಹೊರಡಿರಿ. ನಾ....ನಾ.... (ಕಣ್ಣಿಗೆ ಸೆರ-ಗೊತ್ತಿ) ಎಲ್ಯಾರ ಕೆರೀ ಭಾವೀ ಬೀಳತೀನಿ!

ತಾ :— ಲಕ್ಷ್ಮಂಬಾಯಿ, (ಹತ್ತಿರ ಹೋಗಿ ನ್ಯೆಡದವಿ) ಹಂಗೆಲ್ಲಾ ಅಭದ್ರ ಆಡಬಾರದು! ಗಂಡಸರು ತ್ರಾಸಾಸಿಗೊಂಡು ಹುಚ್ಚುಚ್ಚಾರ ಅಂತಾರಂತ ನಾವೂ ಹಂಗs ಮಾಡಬೇಕೇನು? ಆವದ್ದಾಡು ಮನಸ್ಸಿ-ನ್ಯಾಗಿನ ಮುಂಡಿಗೀ ತಿಂದೆವಲ್ಲಾ ಇಬ್ಬರೂ....ಹೊಟ್ಟೆತುಂಬ? ಇನ್ನ ನಾಕು, ಇದ್ದಂಗ ಇರೋಣು!

ಲ :— ಏನು ಇದ್ದಂಗೋ ಏನೋ ಸುಡಗಾಡ! ನನ್ನ ಜೀವಕ್ಕ ಸಾಕಾಗೇದ ತಾಯಿ (ತಲೆ ಹಿಡಿದು ನೆಲಕ್ಕೆ ಕೂಡರಬೀಳುವಳು).

(ದ್ವಾರಕಾ ಮತ್ತು ರಮಾಬಾಯಿ ಇವರ ಕೈಯೊಳಗಿನ ಪತ್ರ ತಟ್ಟನೆ ನೆಲಕ್ಕೆ ಬೀಳುವವು. ತಾರಾಬಾಯಿಯು ಕೈಯಲ್ಲಿ ಹತ್ತಿಬಟ್ಟೆ ಸೊಟ್ಟಾಗಿ ಕೆಲವು ಬತ್ತಿಗಳು ನೆಲಕ್ಕುರುಳುವುವು. ಎಲ್ಲರ ದೃಷ್ಟಿ ಲಕ್ಷ್ಮಂಬಾಯಿಯ ಕಡೆ ಭಯಪೂರ್ಣವಾಗಿ ಧಾವಿಸುವುದು.)

[ತೆರೆ ಬೀಳುವುದು.]

ವಾಗ್ವಿಲಾಸ ಬುಕ್‌ಡಿಪೊ, ದುರ್ಗದಬೈಲು, ಹುಬ್ಬಳ್ಳಿ

ಇವರಲ್ಲಿ ದೊರೆಯುವ ಪುಸ್ತಕಗಳು

ಪ್ರೋಲೀಸಗಾಯಿಡು (ಕಲಕೋಟಿಕೃತ,	೨—೮—೦
ಒಕ್ಕಲತನದ ಸಾಂಪತ್ತಿಕ ಸ್ಥಿತಿ	೨—೬—೦
ಉತ್ಪನ್ನದ ಮೇಲಿನ ಕರದ ಕೈಪಿಡಿ	೨—೮—೦
ಮುಂಬೈ ಇಲಾಖೆಯ ಸಹ. ಸಂ. ಕಾಯಿದೆ	೧—೮—೦
ಪಂಡಿತ ಜಗನ್ನಾಥರ ಚರಿತ್ರ	೧—೦—೦
ಸಂತಾನಶಾಸ್ತ್ರ (ಸಬರದಕೃತ)	೧—೪—೦
ತರುಣ ಪತ್ನಿ	೦—೮—೦
ಕಲಿತರೆ ಹೀಗೆ ಕಲಿಯಬೇಕು	೦—೫—೦
ಗೀತಾರ್ಥ ಬೋಧಿನಿ	೦ ೧೨—೦
ತತ್ವಲಾವಣಿ	೦—೪—೦

ಹಸಿವು

ಹಸಿವು ಹಸಿವೆಲ್ಲಿಲ್ಲು ಹಸಿವು ಹಸಿವು;
ಎಲ್ಲರನು ಆಡಿಸಿ ಪೀಡಿಸುತಿಹುದು ಹಸಿವು!
ರಾಷ್ಟ್ರನಾಯಕರಿಗೋ, ರಾಜ್ಯ ಗಳಿಕೆಯ ಹಸಿವು;
ಸೇನಾಧಿಪತಿಗಳಿಗೊ, ಸಮರಕೀರ್ತಿಯ ಹಸಿವು;
ವಣಿಕರಾಜರಿಗೆಲ್ಲ ಲಾಭಕೊಳ್ಳೆಯ ಹಸಿವು;
—ಆದರಿಂದ ಹಸಿವು ನಮಗೆ!
ಮಲಗಿದ್ದ ರಣಮಾರಿಯೆಚ್ಚತ್ತಳೆಂದೊ:
ನರಮಾಂಸ ನೆಣನೆತ್ತರುಣುವವಳ ಹಸಿವು
ತೀರಲಿಲ್ಲವಿನ್ನೂ;
ತಣಿಸಲವಳನ್ನು,
ಅವಳ ಪೂಜಾರಿಗಳು ಇಕ್ಕುತಿಹರಿಂದು
ಅವಳಿಗೌತಣವ;
ಅದಕಾಗೆ ಮಾಡುತಿಹರವರೆಲ್ಲ ಕೂಡಿ
ಮಂದಿ ಮಾರಣವ,
ನೆರಹಿ ರಣವ:
—ಆದರಿಂದ ನಮಗೆ ಹಸಿವು!
ಅವರ ಹಸಿವೆಮ್ಮ ಹಸಿವೆಲ್ಲಕ್ಕು ನಾವೆ ಬಲಿ ಕಟ್ಟಕಡೆಗೆ!
ಬಲವರ್ಗೆ ಇಕೆಬಾಳು, ಬರಿಯೆ ಬಡವರ ಪಾಲು,
ಎಂದಿನಿಂದಿಲ್ಲಿವರೆಗೆ!

[ಮೇ ೧೯೪೪] —ರಾಘವ.

ಓ ಎನ್ನ ಗುರುದೇವ!

'ರಸಿಕನಾಡಿದ ಮಾತು ಶಿರಿಯುದಿಸಿ ಬಂದಂತೆ'
ಎಂದು ನುಡಿದನು ಅಂದು ಸಿಡಿಲನುಡಿ ಸರ್ವಜ್ಞ;
ಓ ಎನ್ನ ಗುರುದೇವ! ಈ ಮಾತ ನೆನೆಯುವರೆ
ನಾಳೆಯನು ಕಂಡ ಕವಿ ನಿನ್ನ ಕುರಿತಾಡಿದನೆ?

ಭಾವದಂತರ್ಮುಖತೆ ಹೂವಿನೊಲು ತಲೆಯೆತ್ತಿ
ನಗೆಬೀರಿ, ಸಂತಸದ ಸಲೆ ಬೀರಿ, ಜಗದುಸಿರಿ-
ನೊಳು ಬೆರೆತು ಒಂದಾಗಿ, ಮುಂದಾಗಿ ನಾಳಿನೂ.
ಹೆಯ ಸಾರಿ, ರವಿ ತೋರದಿಹ ನೋಟ ನೀಡುತಿಹೆ!

ರಸಿಕ ಲೋಕವನೆಲ್ಲ ಒಂದೆಡೆಗೆ ಸೆಳೆತಂದು
ಭಾವಲೋಕದಿ ಅವರ ಕರೆದು ಓಲಾಡಿಸುವೆ;
ಬಾಳ ಕಹಿ-ಸಿಹಿಯಲ್ಲಿ ನಗೆನ-ಸಂತಸವುಂಡು
ಕವನಿಸುವೆ, ಕಲೆಯ ಕುಂಚದಿ ಬರೆದು ಜೀವಕಳೆ!
ಕಲ್ಲನರಳಿಸಿ ಹೂವ ಮಾಡಿ ತೋರುವದುಂಟೆ!
ಸಿರಿ ನುಡಿಗೆ ಸೋಲದಿಹ ಕಲ್ಲಿನೆದೆಯವರುಂಟೆ?

—ಆತ್ರೇಯ

ಧೂಮ್ರವಲಯಗಳು

[ಲಘುಪ್ರಬಂಧ]

ಶ್ರೀ. ಸಚ್ಚಿದಾನಂದ ಶಿರೋಡಕರ, ಪುಣೆ

ಕೈಯಲ್ಲಿ ಕೆಲಸವಿಲ್ಲದಾಗ, ಕೈಕೊಂಡ ಕಾರ್ಯವು ಮುಗಿದಂತೆ ಎನಿಸಿದಾಗ, 'ಇನ್ನು ಸಾಕು, ಸುಖನಿದ್ದೆಯಲ್ಲಿ ಕಾಲ ಕಳೆಯುವ!' ಎಂದೆನಿಸಿದಾಗ, ವಿಚಾರಪಾತ್ರಗಳು ಮನೋರಂಗದಲ್ಲಿ ಪ್ರವೇಶಿಸಿ, ಅಜ್ಞಾನ-ಅನಾಸಕ್ತಿಗಳ ತೆರೆಯನ್ನು ಸರಿಸಿ, ಮೆಲ್ಲಮೆಲ್ಲಗೆ ತಮ್ಮ ಚಟುವಟಿಕೆಗಳನ್ನು ಆರಂಭಿಸಿ, ಕಾರ್ಯಕಲಾಪ ಮುಗಿಯಿತೆಂಬ ಮನೋವೃತ್ತಿಯಲ್ಲಿದ್ದವನನ್ನು ಇನ್ನು ಮುಂದಿನ ಹಾಗೂ ಹೆಚ್ಚಿನ ಹಿರಿಮೆಯ ಕರ್ತವ್ಯಗಳ ಕಡೆಗೆ ಹೊರಡುವಂತೆ ಸೂಚಿಸುತ್ತವೆ; ಪ್ರೇರೇಪಿಸುತ್ತವೆ. ಮಂದವಾದ ಕ್ರಿಯಾಶಕ್ತಿಯ ಹಾಗೂ ಆತ್ಮಶಕ್ತಿಯ ವೇಗ (Momentum) ವನ್ನು ಹೆಚ್ಚಿಸಿ, ಕಾರ್ಯತತ್ಪರತೆಯನ್ನು ಪ್ರಜ್ವಲಿಸಿ, ಪ್ರಗತಿಶೀಲ ದಾರಿಯಲ್ಲಿ ನಡೆದ ಯಶಸ್ವೀ ಪ್ರವಾಸಕ್ಕೆ ಅವಶ್ಯವೆನಿಸುವ ಸಲಕರಣೆಗಳನ್ನೂ ಶಕ್ತಿ-ಸಾಮರ್ಥ್ಯಗಳನ್ನೂ ಪೂರಯಿಸುತ್ತವೆ. ಔದಾರ್ಯದಿಂದ ಸ್ಫೂರ್ತಿಗೊಂಡ ವಿಚಾರಗಳು– ಸತ್ಯ, ಸೌಂದರ್ಯ, ಪ್ರೇಮ, ದಯೆ, ನ್ಯಾಯ, ಮಾನವೀಯತೆ ಇವುಗಳಿಂದ ಪ್ರೇರೇಪಿತವಾದ ವಿಚಾರಗಳು– ಆದರ್ಶ ಪ್ರಗತಿಶೀಲರ ಸಾಹಸಗಳು. ನಿಜವಾದ ಪ್ರಗತಿಶೀಲ ವಿಚಾರಸರಣಿಯಲ್ಲಾಗಲಿ, ಕಾರ್ಯದಲ್ಲಾಗಲಿ ಮಾನವೀಯತೆಯ ಬಗ್ಗೆ ಉಚ್ಚ ವಿಚಾರ ಬೇಕು, ಧ್ಯೇಯವಿರಬೇಕು, ಸಮಾನತ್ವವಿರಬೇಕು, ಸ್ವಾತಂತ್ರ್ಯವಿರಬೇಕು. ಆತ್ಮೀಯತೆಯ ಹೊನಲು ಅಬಾಧಿತವಾಗಿ ಶಾಂತವಾಗಿ ವರುಷ-ವರುಷಗಳಿಂದಲೂ ಸಾಗರದಲ್ಲಿ ಹರಿಯುವ ನದಿಗಳಂತೆ ಹರಿಯುತ್ತಿರಬೇಕು. ಕಠಿನವಾದ ಈ ಗುರಿಯನ್ನು ಮುಟ್ಟುವುದರಲ್ಲಿ ನಡೆದ ಪ್ರಯತ್ನದಲ್ಲಿ ಕೂಡ ಸತ್ಯಾಂಶವಿದೆ, ಪ್ರಗತಿ ಇದೆ, ಹಿರಿಮೆ ಇದೆ, ಸುಸಂಸ್ಕೃತಿ ಇದೆ.

ಶಾಂತಿ ಪ್ರಗತಿಗಳು ಇಡಿ ಜಗತ್ತಿನ ಮುಂದಿದ್ದ ಗುರಿಗಳು; ಆದರೆ ತೋರಿಕೆಗೆ ಬೇಕಾಗುವ ಶಾಂತಿಯು ಬೇರೆ- ಕುರಿಗಳಿಗೆ ಬೇಕಾಗುವ ನ್ಯಾಯದ ಶಾಂತಿಯು ಈ ಜಗತ್ತಿನಲ್ಲಿ ಇನ್ನು ವರೆಗೆ ನೆಲಸಿಲ್ಲ—ತಮ್ಮ ಕೈಕೆಳಗೆ, ತಾವು ಹೇಳಿದಂತೆ ಪಿಟ್ಟೆನ್ನದೆ ಜಗತ್ತು ಇರಬೇಕೆಂಬುದು ಸಾಮ್ರಾಜ್ಯವಾದಿಗಳ ಹಂಬಲ. ಇದೇ ಅವರಿಗೆ ಬೇಕಾದ 'ಶಾಂತಿ' ಆದರೆ ಇದು ನಿಜವಾದ ಶಾಂತಿಯಲ್ಲ! ಈ ಶಾಂತಿಯು ಇಲ್ಲದಿರುವ ವರೆಗೆ ಪ್ರಗತಿಯು ಸಾಧ್ಯವಿಲ್ಲ. ಎಂದಿನ ವರೆಗೆ ಜಗತ್ತಿನ ಸರ್ವರಾಷ್ಟ್ರಗಳಲ್ಲಿ ಸ್ವಾತಂತ್ರ್ಯದ ಧ್ವಜಗಳು ಹಕ್ಕಿಗಳಂತೆ ಗೆಲವು-ಗಗನದಲ್ಲಿ ಹಾರಾಡಲಾರವೋ, ಎಂದಿನ ವರೆಗೆ ರಾಷ್ಟ್ರವೀರರು ಮತ್ತು ರಾಷ್ಟ್ರದೇವತೆಯ ಜಯಜಯಕಾರ ಮಾಡುವ ಸ್ವಾತಂತ್ರ್ಯವು ಪ್ರತಿಯೊಬ್ಬ ಮಾನವನಿಗಿರಲಾರದೋ, ಎಂದಿನ ವರೆಗೆ ನ್ಯಾಯವಾದ ಈ ಹಕ್ಕು ಅಪರಾಧವೆಂದೆಣಿಸಲ್ಪಡುವುದೋ, ಎಂದಿನ ವರೆಗೆ ಪ್ರತಿಯೊಬ್ಬನ ಜನ್ಮಸಿದ್ಧ ಹಕ್ಕಾದ ಸ್ವಾತಂತ್ರ್ಯದ ಸಾಧಕರನ್ನು ಸೆರೆಮನೆಯಲ್ಲಿಟ್ಟು ಹಿಂಸಿಸುವವನ್ನು ಪಶುಬುದ್ಧಿಯು ಕೆಲವು ಸಾಮ್ರಾಜ್ಯಗಳಲ್ಲಿರುವುದೋ, ಅಂದಿನ ವರೆಗೆ ಜಗತ್ತಿಗೆ ಶಾಂತಿಯು ಲಭಿಸಲಾರದು—ಪ್ರಗತಿಪಥವು ಕಾಣಲಾರದು. ಅವುಗಳ ವೈಭವವು ಎಷ್ಟೇ ಹೃದಯಂಗಮವಾಗಿರಲಿ, ಹಿಂಸ್ರಪಶುಗಳ ದರ್ಜೆಗಿಳಿದ ಸಾಮ್ರಾಜ್ಯವಾದಿ ರಾಷ್ಟ್ರಗಳು ಪ್ರಗತಿ ಎಂಬ ಹೆಸರನ್ನು ಕೂಡ ಉಚ್ಚರಿಸಲು ಅಯೋಗ್ಯವಾಗಿವೆ. ಇತರ ದೇಶದವರನ್ನು ನರಿಯ ಕುಟಿಲತೆಯಿಂದ ಪಾರತಂತ್ರ್ಯದಲ್ಲಿ ಮುಳುಗಿಸಿ, ಅವರ ಕೈಕಾಲು-ಬಾಯಿಗಳನ್ನು ಬಿಗಿದು, ಅವರ ಉದ್ಯೋಗಗಳನ್ನು ನಷ್ಟಪಡಿಸಿ, ಅವರು ನ್ಯಾಯದಿಂದ ಗಳಿಸಿದ ಸಂಪತ್ತನ್ನು ಅನ್ಯಾಯದಿಂದ ಸುಲಿದು ತಮ್ಮ ಸಂಪತ್ತನ್ನು ಹೆಚ್ಚಿಸಿಕೊಳ್ಳುವುದು ಪ್ರಗತಿಯಲ್ಲ, ಸುಧಾರಣೆಯೂ ಅಲ್ಲ, ಪೌರುಷವೂ ಅಲ್ಲ. ಇಂತಹ ಪಶುವೃತ್ತಿಯು ಅವನತಿಯ ಮತ್ತು ರಕ್ಕಸತನದ ಸಂಕೇತ (Sign of barbarism).

ವಿಚಾರಗಳು ಕೇಳುತ್ತಲಿವೆ: ಪ್ರಗತಿ—ಆನಂದ—ಸಮೃದ್ಧಿ, ಸುಖ-ಶಾಂತಿ ಇವು ಒಂದೆರಡು ದೇಶದ ಸೊತ್ತುಗಳಾದುವೆಂದರೆ ಜಗತ್ತಿನ ಪ್ರಗತಿಯಾದಂತಾಯಿತೇ? ಜಗತ್ತಿನಲ್ಲಿ ಶಾಂತಿಯು ನೆಲೆಗೊಂಡಂತೆ ಆಯಿತೇ? ಒಂದೆರಡು ವಿಷಯಗಳಲ್ಲಿ ಮುಂದುವರಿದೆವೆಂದರೆ ಸರ್ವಾಂಗೀಣ ಪ್ರಗತಿಯನ್ನು ನಾವು ಸಾಧಿಸಿದಂತಾಯಿತೇ? ನ್ಯೂಯಾರ್ಕಿನಿಂದ ಇಪ್ಪತ್ತೆರಡು ಗಂಟೆಗಳಲ್ಲಿ ಮುಂಬೈಗೆ ವಿಮಾನ ಹಾರಿತೆಂದರೆ ಪ್ರಗತಿಯನ್ನು ಪಡೆದಂತಾಯಿತೆ? ಅಷ್ಟು ದೂರವೇಕೆ? ಸೂರ್ಯಾಸ್ತವಾಗದ ತಮ್ಮ ಸುಂದರ ಸಾಮ್ರಾಜ್ಯವನ್ನು ಅಬಾಧಿತವಾಗಿ ಸಾಗಿಸುವ ಪ್ರಯಾಸದಲ್ಲಿ, ಪ್ರಾಣ ಬಿಟ್ಟು ಸಹಾಯ್ಯ ಮಾಡಿದ ಬಗ್ಗೆ ಕೆಲವು ಹಿಂದೀ ಸೈನಿಕರಿಗೆ ಪದಕಗಳನ್ನು ಕೊಟ್ಟ ಮಾತ್ರಕ್ಕೆ ಹಿಂದುಸ್ಥಾನದ ವಿಷಯಕ ಬ್ರಿಟಿಷ ಧೋರಣೆಯಲ್ಲಿ ಬದಲಾವಣೆಯೇ? ಹಿಂದೀಯರ ನ್ಯಾಯವಾದ ಬೇಡಿಕೆಗಳ ಸುರಿಮಳೆಯನ್ನು, ತಮ್ಮ ತಲೆಯಲ್ಲಾಡಿಸಿ ಧಿಕ್ಕರಿಸಿದ ಚರ್ಚಿಲ್ಲರು ನಿಜವಾಗಿಯೂ ಇಂಗ್ಲೆಂಡಿನ ಉದ್ಧಾರ ಮಾಡುತ್ತಿರುವರೇ? ಪ್ರಗತಿಯನ್ನು ಸಾಧಿಸುತ್ತಿರುವರೇ?.... ವಿಚಾರಗಳು ರಚಿಸಿದ ಈ ಬಲೆಯನ್ನು ಓಡಿಸಬೇಕೆಂದು ಅದೆಷ್ಟೋ ಸಲ ಯತ್ನಿಸುತ್ತೇನೆ. ಸಾಧ್ಯವಾಗುವುದೇ ಇಲ್ಲ. ವಿಚಾರಗಳು ಮುಗುಳುನಗೆ ನಗುತ್ತ ಮೆಲ್ಲಗೆ ಒಬ್ಬರಿಂದೊಬ್ಬರು ತಮ್ಮ ಅರವಗಳನ್ನು ಕೇಳಿಸುತ್ತವೆ:—ಬೇಸರಪಡಬೇಡ, ಜಗತ್ತು ವಿಶಾಲವಾಗಿದೆ—ಪ್ರಗತಿಶೀಲನ ಮನಸ್ಸು, ಕಾರ್ಯರಂಗ, ಪ್ರಯತ್ನಕ್ಷೇತ್ರ ಇವು ವಿಶಾಲವಾಗಿರಬೇಕು. ವಿಶಾಲತೆಯು ಒಂದು ಸೌಂದರ್ಯದ ಹೆಗ್ಗುರುತು! ಸಾಮಾಜಿಕ ವ್ಯಕ್ತಿಯಾಗುವುದರಲ್ಲಿ ಮನುಷ್ಯತ್ವವಿದೆ. ಇಡೀ ಜಗತ್ತೇ ಒಂದು ಸಮಾಜವೆಂದು ತಿಳಿದುಕೊಂಡು ಸ್ವಕಾರ್ಯದಿಂದ ಬಿಡುವು ಸಿಕ್ಕಾಗೆಲ್ಲ, ಒಮ್ಮೆ ವೇಳೆ ಸುಲಭವಾಗಿ ಸಿಕ್ಕದಿರಲು ಪ್ರಯತ್ನಪೂರ್ವಕವಾಗಿ ಬಿಡುವು ಮಾಡಿಕೊಂಡು ನಮ್ಮನ್ನು ಸ್ವಾಗತಿಸು. ನಾವು ಬಂದೆವು; ನಾವು ಪರಿಹಾರ ನಿನಗೆ ತೋರಿಸಿ ಕೊಡಬಹುದು. ಆದರೆ ಮಗು, ನೆನಪಿನಲ್ಲಿಡು-- Life is not a bed of roses (ಜೀವನವು ಹೂವಾಸಿಗೆಯಲ್ಲ) The world is his who exerts himself (ಈ ಜಗತ್ತು ದುಡಿಯುವವನದಾಗಿದೆ). ಕಷ್ಟ-ನಷ್ಟಗಳ ಅನುಭವ, ತೊಂದರೆಗಳ ಕಿರುಕುಳ ಇವುಗಳನ್ನು ಸಹಿಸದೆ ಮುಂಬರು-

ವೂ ಸಾಧ್ಯವಿಲ್ಲ—ಪ್ರಯತ್ನದ ವಿನಾ ಪ್ರಕಾಶಮಾನವ್ಯಕ್ತಿಯಾಗುವುದು ಅಸಾಧ್ಯ. ಆದರ್ಶವ್ಯಕ್ತಿಯಾಗಲಾರೆ. ಏನೂ ಕಾರ್ಯವಮಾಡದೆ ಮುಂದೆ ಬಂದು ಹರುಷಗಗನದಲ್ಲಿ ಹಾರಾಡುವುದು ಒಂದೇ ರಂಗದಲ್ಲಿ ಸಾಧ್ಯ. ಆ ರಂಗವೇದರೆ ಪ್ರೇಮರಂಗ.... ಕಾಮರಂಗ! ಈ ರಂಗಭೂಮಿಯಲ್ಲಿ ಕಣ್ಣುಗಳ ಕಾಂತಿ, ಮಾತಿನ ಮಾಧುರ್ಯ ಮೈಸುಣುಪು, ಮೊಗದ ಮೋಹನತೆ ಇವೇ ಬೇಕಾದುವುಗಳು. ಆದುದರಿಂದ ನಾವು ತೊಂದರೆ ಕೊಡುತ್ತೇವೆಂದು ನಾವು ಬಂದಾಗ ಕದ ಮುಚ್ಚಬೇಡ! “ಸುವರ್ಣವನ್ನು ಸುತ್ತಿಗೆಯಿಂದ ಹೊಡೆದರೆ ಅದರ ಕಾಂತಿಯು ಹೆಚ್ಚುತ್ತದೆ- ಚಂದನವನ್ನು ತಿಕ್ಕಿದರೆ ಸುವಾಸನೆಯು ಹೊರಹೊಮ್ಮುತ್ತದೆ. ನಿನ್ನ ಕಾರ್ಯ ಮುಗಿಯಿತೆಂದು ನೀನೆಂದಿಗೂ ನೆಮ್ಮದಿಯಾಗಿರಕೂಡದು. ಜಗತ್ತಿನ ಘಟನೆಗಳು ಅವ್ಯಾಹತವಾಗಿವೆ. ಪ್ರಗತಿಶೀಲ ಮನುಷ್ಯನ ಕಾರ್ಯಕ್ಕೆ ಅಂತ್ಯವಿರಬಾರದು! ನೋಡು! ಎಷ್ಟೋ ಸಾವಿರ ವರುಷಗಳಾದುವು. ಸಮುದ್ರದ ತೆರೆಗಳು ಒಂದೇಸಮನೆ ದಂಡೆಗೆ ಅಪ್ಪಳಿಸುತ್ತಲಿವೆ. ಗಾಳಿಯು ಬಿಡುವಿಲ್ಲದೆ ದಶದಿಕ್ಕುಗಳಲ್ಲಿ ಸಂಚರಿಸುತ್ತಲಿದೆ. ನದಿಗಳು ಹರಿ ಹರಿದು ಸಾಗರಕ್ಕೆ ನೀರನ್ನು ಪೂರೈಯಿಸುತ್ತವೆ. ನೀನೂ ಹೀಗೆಯೇ ಅವಿಶ್ರಾಂತ ಪರಿಶ್ರಮದಲ್ಲಿ ಆನಂದಿಸಬೇಕು. ಇಂದು ಇಂತಹ ಪ್ರಯಾಸ ನೀಯ ಶಕ್ತಿಯು ನಿನ್ನಲ್ಲಿಲ್ಲವೆಂದು ಕಂಡು ಬಹು ಖೇದವೆನಿಸುತ್ತದೆ. ಇದೇ ನಿನ್ನ ಇಂದಿನ ಸಣ್ಣಪುಟ್ಟ ಸೋಲುಗಳಿಗೆ ಕಾರಣ: ಆದರೆ ಹಿಂದೆ ನಿನ್ನಲ್ಲಿ ರಂಜಿಸುವ ಕರ್ತೃತ್ವದ ನೆನಪು ನಮ್ಮಲ್ಲಿ ಆಹ್ಲಾದವನ್ನು ಕಳುಹಿಸುತ್ತದೆ. ನಮಗೂ ಹಾರೈಸಿಸುತ್ತದೆ. ಕಾರಣಾಂತರದಿಂದ ಇಂದು ಸ್ವಲ್ಪ ಹಿಂದೆ ಸರಿದ ನೀನು, ಹಿಂದಿನಂತೆ ಏಕೆ ಮುಂದೆಯೂ ಮುನ್ನುಗ್ಗಬಾರದು? ನಿನ್ನ ಕಾಲುಗಳು ಹಿಂದೆ ಸರಿದಿವೆ, ಅಡ್ಡಿಯಿಲ್ಲ; ಆದರೆ ಪ್ರಗತಿಪಥದಲ್ಲಿ ಯಶಸ್ವಿಯಾಗಿ ಮುನ್ನುಗ್ಗಬೇಕೆಂಬ ಮನೋನಿಶ್ಚಯವು ಅದಮನೀಯವಾಗಿರಲಿ. ಕೆಲವೊಮ್ಮೆ ಜೀವನದಲ್ಲಿ ಎದೆಯನ್ನಪ್ಪಳಿಸುವ ತೊಂದರೆಯ ತೆರೆಗಳಿಂದ ತಲ್ಲಣಗೊಳ್ಳಬೇಡ! ನಿನಗೆ ನಿಕಟವಾಗಿ ಸಂಬಂಧಿಸಿದ ಕಾರ್ಯಗಳು ನೂರಾರುವಾಗಲೀ ಜಗತ್ತಿನ ಕಡೆಗೂ ನಿನ್ನ ವಿಶಾಲದೃಷ್ಟಿಯನ್ನು ಚೆಲ್ಲುತ್ತಿರು—ಮನೆಯೊಳಗೇ ಕುಳಿತುಕೊಂಡಿರುವುದು ಎಷ್ಟರಮಟ್ಟಿಗೆ ಸಾಧ್ಯ? ಕೆಲಮಟ್ಟಿಗಾದರೂ ಜಗತ್ತಿನ ಸುಖವು ನಿನ್ನ ಸುಖ. ದುಃಖ ಜಗತಿನಲ್ಲಿ ನೀನೊಬ್ಬನೇ ಸುಖಿಯಾಗಿ ಬಾಳಬಾರದು; ಬಾಳಲಾರೆ!”

ಕೆಲವು ವರುಷಗಳ ಹಿಂದೆ ನನಗೆ ಸಂಬಂಧಿಸಿದ ಈ ವಿಚಾರಗಳು ಸುಳಿದಾಗೆಲ್ಲ, ಪುಸ್ತಕಗಳನ್ನು ತೆರೆದು ಮನದ ಬಾಗಿಲನ್ನು ಭದ್ರವಾಗಿ ಮುಚ್ಚಿ, ಇವು ಒಳಗೆ ಬರಬಾರದೆಂದು ಹೋರಾಡುತ್ತಿದ್ದ ನಾನು, ಇಂದು ಇವು ಸಮೀಪಿಸಿದಾಗೆಲ್ಲ ಕಣ್ಮುಂದಿದ್ದ ಪುಸ್ತಕಗಳನ್ನು ಮುಚ್ಚಿ ಸಾದರ ಸ್ವಾಗತವನ್ನು ನೀಡುತ್ತೇನೆ! ಆನಂದ! ಹರುಷದಿಂದ ಅವುಗಳೊಡನಾಡುತ್ತೇನೆ.

ಐದಾರು ವರುಷಗಳ ಭೀಕರ ಯುದ್ಧದ ತರುವಾಯ ಶಾಂತಿದೇವಿಯ ಆಗಮನದ ಚಿಹ್ನಗಳು ಕಂಡುಬರುತ್ತಿವೆ. ಈ ಆನಂದದ ಚಿಹ್ನವೆಂದು ಜಯಶಾಲಿಗಳು ಪರಾಜಿತರನ್ನು ಜೀವಂತ ಗೋರಿಯಲ್ಲಿಡಬೇಕೆಂದಿದ್ದಾರೆ. ಜಯಶೀಲರಿಗೆ ಬೇಕಾದದ್ದೆಲ್ಲ ಸಿಕ್ಕಲು ಶಾಂತಿ ಸ್ಥಾಪನೆಯಾದಂತಾಯಿತಂತೆ! ವಿಚಾರಗಳು ಇಂತಹ ಶಾಂತಿ

ಕನ್ನಡ ನಾಡಿನ ಅತ್ಯುತ್ತಮ, ಸುಸಂಸ್ಕೃತ ಚಲಚ್ಚಿತ್ರಪತ್ರಿಕೆ

ವಾಕ್ಚಿತ್ರ

ಸಂಪಾದಕರು

ಶ್ರೀ. ಮಾ. ನಾ. ಚೌಡಪ್ಪ

೩೬ ಪುಟಗಳು : : ಮೂರಾಣೆ

ವಾರ್ಷಿಕ ಚಂದಾ
ಎರಡೂವರೆ ರೂಪಾಯಿ.

ಈಗ ಏಜೆಂಟರಿಲ್ಲದೆಡೆಗಳಲ್ಲೆಲ್ಲಾ ಏಜೆಂಟರು ಬೇಕಾಗಿದ್ದಾರೆ.

———— ವಿವರಗಳಿಗೆ ————

ಚಿತ್ರಾ ಏಜೆನ್ಸೀಸ್

೨ ಸುಲ್ತಾನ್‌ಪೇಟೆ : : ಬೆಂಗಳೂರು ನಗರ

ಸ್ಥಾಪನೆಗೆ ಬೆಂಬಲಕೊಡುವಷ್ಟು ವಿವೇಕಶೂನ್ಯರಾಗಿಲ್ಲ! ಮೂರನೆಯ ಮಹಾಯುದ್ಧದ ಬೀಜಗಳನ್ನು ಇಂದಿನ ಜಯಶಾಲಿ ರಾಷ್ಟ್ರಗಳು ಬಿತ್ತುತ್ತಲಿವೆಯೆಂದು ಅವರು ನ್ಯಾಯವಾಗಿ ಸಾರಿದ್ದಾರೆ. ಯುದ್ಧಾರಂಭದಲ್ಲಿ ತಮ್ಮ ಅಸ್ತಿತ್ವವು ಸಂಕಟದಲ್ಲಿದ್ದಾಗ ಸತ್ಯ, ನ್ಯಾಯ, ಸ್ವಾತಂತ್ರ್ಯಗಳಿಗಾಗಿ ಹೋರಾಡುತ್ತೇವೆಂದು ಉದ್ಬುದ್ಧ ಮಾತುಗಳಲ್ಲಿ ತಮ್ಮ ಗುರಿಯ ಹಿರಿಮೆಯ ರಾಗ ಎಳೆದ ರಾಷ್ಟ್ರಗಳು, ಇಂದು ಯುದ್ಧ ತಮಗೆ ಅನುಕೂಲವಾಗುತ್ತ ನಡೆದಂತೆ, ತಮ್ಮ ಮನಸ್ಸಿನ ವಿಷಗಾಳಿಯನ್ನು ನಿರ್ಭೀತಿಯಿಂದ ಅಧಿಕಾರವಾಣಿಯಿಂದ ಸಾರುತ್ತಲಿವೆ. ಸರ್ವಾಧಿಕಾರ, ಸಾಮ್ರಾಜ್ಯಶಾಹಿ, ಅನ್ಯಾಯದ ವ್ಯಾಪಾರಶಾಹಿ ಇವುಗಳ ಸಂಪೂರ್ಣವಾಗಿ ಖಂಡಿತವಾಗಿಯೂ ಇನ್ನೊಂದು ಯುದ್ಧವು ಸ್ವಲ್ಪಾವಧಿಯಲ್ಲಿಯೇ ಸಿಡಿದೇಳುವುದೆಂದು ಲೋಕಕ್ಕೆ ಎನಿಸುತ್ತಲಿದೆ. ಷೇಕ್ಸ್‌ಪಿಯರ್ (Shakespeare)! ಹೆಮ್ಲೇಟನ (Hamlet)! ಪಾತ್ರವನ್ನು ಸೃಷ್ಟಿಸಿದ ನಿನಗೆ ಧನ್ಯವಾದಗಳು! ನಿನ್ನ ದೇಶದ ಇಂದಿನ ರಾಜಕಾರಣಿಗಳು ಇಂದು ಹೆಮ್ಲೆಟನ ಪಾತ್ರವನ್ನು ವಹಿಸಿದ್ದಾರೆ. ಹೆಮ್ಲೆಟ್ ಕ್ರಿಯಾಶೂನ್ಯ ವಿಚಾರವಂತ! ಇಂಗ್ಲೆಂಡಿನ ರಾಜಕಾರಣಿಗಳೂ ಇದೇ ಪಟ್ಟಿಗೆ ಸೇರಿದ್ದಾರೆ. ಸ್ವಾತಂತ್ರ್ಯ, ಶಾಂತಿ, ನೀತಿಗಳ ಬಗ್ಗೆ ದೊಡ್ಡ ದೊಡ್ಡ ಉದ್ಗಾರಗಳನ್ನು ತೆಗೆದರು! ಕ್ರಿಯೆ ಮಾತ್ರ ಮುಂಬರುವ ಚಿಹ್ನೆಗಳಿಲ್ಲ. ಪ್ರತಿಕೂಲ ಮಾರ್ಗವನ್ನೇ ಅವರು ಹಿಡಿದಿದ್ದಾರೆ. ಇನ್ನೊಂದು ಮೋಜಿನ ವಿಷಯ! ಪ್ರೇಮವೆಂದರೆ ಗಾಳಿ ಅಲ್ಲವೇ? ಬ್ರಿಟನ್ ಸ್ವಾತಂತ್ರ್ಯ ನೀತಿಯೆಂದರೆ ಬಾಲ ಯುವತಿಯ ಮೇಲಿನ ಯುವಕನ ಪ್ರೇಮ! ತನ್ನ ಪ್ರಿಯತಮೆ

ಗಾಗಿ ಯುವಕನು ಸರ್ವಸ್ವವನ್ನೂ ಬಲಿಗೊಡಲು ಉದ್ಯುಕ್ತನಾಗುತ್ತಾನೆ, ಕಲ್ಲು-ಮುಳ್ಳುಗಳನ್ನೂ ಮೆಟ್ಟಿ, ಹೊಂಡ–ಕಂದರಗಳನ್ನೂ ದಾಟಿ ಅವಳನ್ನು ಚುಂಬಿಸುತ್ತಾನೆ, ಅವಳನ್ನು ತನಗಾಗಿ ದೊರೆಕಿಸುವುದಕ್ಕಾಗಿ ಕೊಲೆ-ಸುಲಿಗೆಗಳಲ್ಲಿ ಕೈಹಾಕುವುದು ಕೂಡ ತನ್ನ ಆದ್ಯ ಕರ್ತವ್ಯವೆನ್ನುತ್ತಾನೆ. ಆದರೆ ಇನ್ನಿತರರು ತನ್ನ ಪ್ರೇಯಸಿಯನ್ನು ಕಣ್ಣೆತ್ತಿ ನೋಡುವುದೂ ಅವನಿಗೆ ಸಹನವಾಗದು. ಬ್ರಿಟಿಷರು ತಮ್ಮ ಸ್ವಾತಂತ್ರ್ಯ, ಸ್ವಾಭಿಮಾನಗಳ ರಕ್ಷಣೆಗಾಗಿ ಬೇಕಾದ ಸ್ವಾರ್ಥ-ತ್ಯಾಗ ಮಾಡಲು ಸಿದ್ಧರಾಗುತ್ತಾರೆ. ಈ ಯುದ್ಧದಲ್ಲಿ– ಸ್ವಾತಂತ್ರ್ಯ ರಕ್ಷಣೆಯ ಹೋರಾಟದಲ್ಲಿ ಅವರು ಧೈರ್ಯ, ಸ್ಥೈರ್ಯ, ಒಕ್ಕಟ್ಟಿನಿಂದ ಎದುರಿಸಿದ ಭೀಕರ ನರಕಯಾತನೆಗಳಿಗಾಗಿ ಅವರಿಗೆ ನನ್ನ ಧನ್ಯವಾದಗಳು! ಆದರೆ ದುರ್ದೈವ! ಬ್ರಿಟನ್ನಿನ ದುರ್ದೈವ! ಹಿಂದುಸ್ತಾನದ ದುರ್ಭಾಗ್ಯ! ಪ್ರಶಂಸನೀಯ ಚಿರಸ್ಮರಣೀಯ ಕಾರ್ಯದೊಡನೆ ಅಮರವಾದ ಕಲಂಕವೊಂದನ್ನು ಹಚ್ಚಿಕೊಂಡರು. ತಮ್ಮಂತೆಯೆ ಸ್ವಾತಂತ್ರ್ಯಕ್ಕಾಗಿ—ಪ್ರಗತಿಗೆ ತಮ್ಮ ಏಳಿಗೆಗೆ ಅವಶ್ಯವಿದ್ದ ಸಾಧನೆಗಾಗಿ—ನ್ಯಾಯವಾದ ಸಭ್ಯರೀತಿಯಿಂದ ಅಹಿಂಸಾ ಶಸ್ತ್ರದೊಡನೆ ಹೋರಾಡುವ ಹಿಂದೀ ಕಾಂಗ್ರೆಸ್ ಸಂಸ್ಥೆಯನ್ನು ಹಿಂಸಾವೃತ್ತಿಯಿಂದ ಹತ್ತಿಕ್ಕಲು ಪ್ರಯತ್ನಿಸಿದರು! ಅನಿಯಮಿತ ಅವಧಿಯವರೆಗೆ ಜನತೆಯ ಧುರೀಣರನ್ನು ಬಂಧಿಸಿಟ್ಟರು. ಹಿಂದುಸ್ತಾನದ ವಿಷಯಕ್ಕೆ ಸುಳ್ಳು ಪ್ರಚಾರವನ್ನು ಅಮೇರಿಕೆಯಲ್ಲಿ ನಡೆಸಿದರು– ಇನ್ನೂ ನಡೆಸಿದ್ದಾರೆ. ಚರ್ಚಿಲ್ಲರ ಜಗತ್ತೆಂದರೆ ಬರೆ ಬಿಳಿಯ ಜನಾಂಗ! ಅವರ ಶಾಂತಿಯೆಂದರೆ ಬ್ರಿಟಿಷ್ ಸಾಮ್ರಾಜ್ಯವು ಅಮರವಾಗಿ ಮೆರೆಯಲು, ಬ್ರಿಟಿಷ್ ವ್ಯಾಪಾರೋದ್ಯೋಗಗಳು ಇತರ ರಾಷ್ಟ್ರಗಳ ಆರ್ಥಿಕ ಹಾನಿಯ ಮೇಲೆ ಕುಣಿಯಲು ಬೇಕಾಗುವ ವ್ಯವಸ್ಥೆ! ಸ್ಮಶಾನ ಶಾಂತಿ! ಇದೇ ಸಾಮ್ರಾಜ್ಯಶಾಹಿಗೆ ಬೇಕಾದ ಶಾಂತಿ! ಜಗತ್ತಿನ ಸುರಕ್ಷಿತತೆಗಾಗಿ ಅವಶ್ಯವೆಂದು ಸಾರಲ್ಪಡುವ ಸಾಮ್ರಾಜ್ಯದ ಒಂದು ಭಾಗವಾದ ಬಂಗಾಲದಲ್ಲಿ, ಒಂದೇ ವರುಷದಲ್ಲಿ ಅನ್ನವಿಲ್ಲದೆ ಹತ್ತು ಲಕ್ಷ ಜನರು ಇಂದಿನ ಸುಧಾರಿಸಿದ ಪರಿಸ್ಥಿತಿಯಲ್ಲಿ ಅಕಾಲಮರಣಕ್ಕೆ ತುತ್ತಾದರು– ಇನ್ನೂ ಸಾಯುತ್ತಲಿದ್ದಾರೆ. ಭಾರತದ ಮೂಲೆ ಮೂಲೆಗಳಲ್ಲಿ ಸಾವಿರಾರು ಜನರು ಅನ್ನ-ಬಟ್ಟೆಗಳಿಲ್ಲದೆ, ಔಷಧೋಪಚಾರಗಳಿಲ್ಲದೆ ನರಕಯಾತನೆಯನ್ನು ಅನುಭವಿಸುತ್ತಿದ್ದಾರೆ— ಕಷ್ಟದ ದವಡೆಯಲ್ಲಿ ಸಿಕ್ಕು ಹಿಟ್ಟಾಗುತ್ತಲಿದ್ದಾರೆ. ಅಜ್ಞಾನ, ದಾರಿದ್ರ್ಯ, ಅಶಾಂತಿಗಳಲ್ಲಿ ಭಾರತವು ಬೆಂದು ಹೋಗುತ್ತಲಿದೆ. ಇಂತಹ ದುರ್ದೆಸೆಯನ್ನು ಹತ್ತಿಕ್ಕಿ ಸುಖ, ಸಮೃದ್ಧಿ, ಶಾಂತತೆ, ಪ್ರಗತಿಗಳನ್ನು ತರಲು ರಾಷ್ಟ್ರೀಯ ಸರಕಾರವು ಅವಶ್ಯ! ಸ್ವಾತಂತ್ರ್ಯ ಅವಶ್ಯ! ಜಗತ್ತಿನ ಸ್ವಾತಂತ್ರ್ಯಕ್ಕಾಗಿ ಯುದ್ಧಸಾಗಿದೆಯೆಂದು ಸಾರಿದವರು ಈ ಸ್ವಾತಂತ್ರ್ಯವನ್ನು, ನ್ಯಾಯದ ಈ ಬೇಡಿಕೆಯನ್ನು ಸ್ವಾರ್ಥದ ಮಬ್ಬಿನಲ್ಲಿ ಮಾನ್ಯಮಾಡುತ್ತಿಲ್ಲ! ಸ್ವಾಭಿಮಾನದ, ಸ್ವಾತಂತ್ರ್ಯದ ಹಾಗೂ ತಮ್ಮ ಸ್ವಾತಂತ್ರ್ಯ ಧುರೀಣರ ಜಯಜಯಕಾರ ಮಾಡುವುದೂ ಅಪರಾಧವಾಗಿದೆ. ಶಾಂತಿಸ್ಥಾಪಕರ ನೀತಿಯಿದು! ನಾಲ್ಕು ಕೋಟಿ ಜನರ ಮಿತಿಮೀರಿದ ವೈಭವಕ್ಕಾಗಿ, ನಲುವತ್ತು ಕೋಟಿ ಜನರನ್ನು ಅಜ್ಞಾನ, ದಾರಿದ್ರ್ಯ, ದಾಸ್ಯ, ಬರಗಾಲಗಳಲ್ಲಿ ನೂಕಿಡುವುದು ಶಾಂತಿಯ ಲಕ್ಷಣವೇ? ಸುಧಾರಣೆಯ ಚಿಹ್ನವೇ? ಪ್ರಗತಿಯ ಛಾಯೆಯೇ? ಜಗತ್ತಿನ ಉಳಿದ ರಾಷ್ಟ್ರಗಳು ತನ್ನ ಸ್ವಾಮಿತ್ವವನ್ನು ಒಪ್ಪಬೇಕು, ತನ್ನ ಲಾಭಕ್ಕಾಗಿ ತನ್ನೊಡನೆ ವ್ಯಾಪಾರ ಮಾಡಬೇಕು, ತನ್ನ ಉದ್ಯೋಗಗಳು ತಯಾರಿಸಿದ ವಸ್ತುಗಳನ್ನೇ ಕೊಳ್ಳಬೇಕು ಇವೆಲ್ಲ ಸಾಮ್ರಾಜ್ಯಶಾಹಿ ರಾಷ್ಟ್ರಗಳ ಹೆಬ್ಬಯಕೆಗಳು. ಯಾವ ಸ್ವಾಭಿಮಾನಿ ರಾಷ್ಟ್ರವೂ ಇದಕ್ಕೊಪ್ಪಲಾರದು. ಮತ್ತು ಒಂದಾನೊಂದು ವೇಳೆ ಉಪಾಯವಿಲ್ಲದೆ ದಾಸ್ಯವನ್ನು ಸ್ವೀಕರಿಸಿದರೂ, ಪ್ರಸಂಗ ಬಂದಾಗ ತನ್ನ ಸ್ವಾತಂತ್ರ್ಯವನ್ನು ಪಡೆಯಲು ಯುದ್ಧ ಮಾಡುವುದು ಖಂಡಿತ. ಸಾಮ್ರಾಜ್ಯಶಾಹಿಯು ಇಂಥ ರಾಷ್ಟ್ರಗಳನ್ನು ಶಾಂತತಾ ವಿರೋಧಿಗಳೆಂದು ಸಂಬೋಧಿಸುತ್ತದೆ–ಆದರೆ ಇಂತಹ ಯುದ್ಧಗಳು ನ್ಯಾಯದ ಯುದ್ಧಗಳು! ಸಾಮ್ರಾಜ್ಯಗಳು ಇರುವವರೆಗೆ ಈ ಯುದ್ಧಗಳು ನಡೆಯುವುವು, ನಡೆಯಲೇ ಬೇಕು! ನಮ್ಮಲ್ಲಿಯೂ ಸ್ವಾಭಿಮಾನವು ತಲೆಯೆತ್ತಿ ನಿಲ್ಲಲಾರಂಭಿಸಿರುವುದು, ಹಿಂದಿನ ನಮ್ಮ ವೈಭವದ ಅರಿವುಂಟಾಗಿರುವುದು, ಭವಿಷ್ಯಕ್ಕಾಗಿ ಹೋರಾಡುವ ಮಹತ್ವಾಕಾಂಕ್ಷೆಯು ಪ್ರಜ್ವಲಿಸುತ್ತಿರುವುದು ನಮ್ಮ ಮುಂದಿನ ಭಾಗ್ಯದ ಸಂಕೇತಗಳು!

ಆಶ್ಚರ್ಯ! ಜಗತ್ತಿನ ಲೋಕಸಂಖ್ಯೆಯು ನೂರಕ್ಕೆ ಇಪ್ಪತ್ತರಷ್ಟು ಭಾರತೀಯರು ದಾಸ್ಯದಲ್ಲಿರುವಾಗ, ಜಗತ್ತಿನ ಸ್ವಾತಂತ್ರ್ಯ - ಸಾಮ್ರಾಜ್ಯಶಾಹಿಗಳ ಹೆಚ್ಚುತ್ತಿರುವ ಬಲದೊಡನೆ ಲೋಕಶಾಹಿಯ ಸ್ಥಾಪನೆ! ಒಂದು ಕಡೆ ಹಿಂದುಸ್ತಾನದಲ್ಲಿ ಇದೀಗ ತಲೆ ಎತ್ತುತ್ತಿರುವ ವಿವಿಧ ಉದ್ಯೋಗಗಳನ್ನು ಹತ್ತಿಕ್ಕುವ ಪ್ರವೃತ್ತಿ; ಇನ್ನೊಂದು ಕಡೆ ಇಡೀ ಜಗತ್ತಿಗೆ ಆರ್ಥಿಕ ಸ್ವಾತಂತ್ರ್ಯ!

ನಮಗಿನ್ನೂ ಸ್ವಾತಂತ್ರ್ಯಯುದ್ಧಗಳಲ್ಲಿ ಜಯ ದೊರೆತಿಲ್ಲವಾದರೂ, ಸ್ವಾತಂತ್ರ್ಯದ ಮಹತ್ವ ಅವಶ್ಯತೆಗಳ ಪ್ರಕಾಶ ಪೂರ್ಣವಾಗಿ ನಮ್ಮ ಮೇಲೆ ಬಿದ್ದಿರುವ ಕಾರಣ, ಕಾರ್ಯಸಾಧಿಸುವ ವರೆಗೆ ನಾವು ಹೋರಾಡುವುದು ಖಂಡಿತ. ಅಹಿಂಸಾ ಹೋರಾಟವು ವಿಹಿತವಲ್ಲವೆಂದು ಪೂರ್ಣ ಮನಗಂಡರೆ, ಹಿಂಸಾಯುದ್ಧದಲ್ಲಿ ಒಂದಿಲ್ಲೊಂದು ದಿನ ಕೈಹಾಕುವುದು ಖಂಡಿತ; ಮಾನವನ ಮನಸ್ಸಿನ ಪ್ರವೃತ್ತಿಯನ್ನು ಬಂಧಿಸುವುದು ಯಾರಿಗೂ ಶಕ್ಯವಿಲ್ಲ. ದಾಸ್ಯದ ದವಡೆಯಲ್ಲಿ ಸಿಕ್ಕು ಕ್ಷೀಣರಾಗಿ ನಾವು ಜಾಣರಾಗಿದ್ದೇವೆ. ನಮ್ಮ ಆಕ್ರಂದನದಿಂದ ಮುಂಬರುವವರು ಇನ್ನಿಷ್ಟು ಅನುಭವಿಗಳಾಗುವರು. ನೆಪೋಲಿಯನ್ನನೊಡನೆ ನಡೆದ ದೀರ್ಘಕಾಲದ ಯುದ್ಧದಿಂದ ಅನುಭವಿಸಿದ ಹಾನಿಯನ್ನು ತುಂಬಿಕೊಳ್ಳಲು ಬ್ರಿಟಿಷರು ನಮ್ಮ ಉದ್ಯೋಗಗಳನ್ನು ನಷ್ಟಪಡಿಸಿ, ತಮ್ಮ ಉದ್ಯೋಗಗಳನ್ನು ಹೆಚ್ಚಿಸಿಕೊಂಡರು. ತಮ್ಮ ಸರಕುಗಳು ವೇಗದಿಂದ ನಮ್ಮ ಹಳ್ಳಿ-ಹಳ್ಳಿಗೂ ಮುಟ್ಟಿ ಅಲ್ಲಿಯ ಸಣ್ಣ ಸಣ್ಣ ಉದ್ಯೋಗಗಳನ್ನೂ ನಿಲ್ಲಿಸಬೇಕೆಂದು ರೈಲನ್ನು ತಂದರು. “ಹಿಂದೀಯರ ಹಿತದ ಸಲುವಾಗಿಯೆ ಹಿಂದುಸ್ತಾನದ ರೈಲುಗಳಿವೆ ಎಂದು ಯಾರಾದರೂ ತಿಳಿದುಕೊಂಡಿದ್ದರೆ ಅದೊಂದು ಪ್ರಮಾದ. ನಮ್ಮ ದೇಶದ ರೈಲುಗಳು ನಮಗೆ ಬೇಡವಾದ ಹಾಗೂ ನಮಗೆ ಜವಾಬ್‍ದಾರರಲ್ಲದ ಸರಕಾರದ ಸೈನ್ಯದ ಸೌಕರ್ಯಕ್ಕಾಗಿ ಮತ್ತು ಇಂಗ್ಲೆಂಡಿನ ವ್ಯಾಪಾರದ ಬೆಳವಣಿಗೆಗಾಗಿ, ನಮ್ಮ ಉದ್ಯೋಗಗಳ ಸಾವಿಗಾಗಿ ಇದುವರೆಗೆ ಈ ಮೂರೂ ಕೆಲಸಗಳನ್ನು ಅವು ಯಶಸ್ವಿಯಾಗಿ ಸಾಧಿಸಿವೆ. ಬರೇ ಬೇಸಾಯದಿಂದ ನಮ್ಮ ಆರ್ಥಿಕ ಪ್ರಗತಿಯಾಗದೆಂದು ಅನುಭವದಿಂದ ನಾವು, ಪಾಶ್ಚಿಮಾತ್ಯರಂತೆ ಉದ್ಯೋಗಳನ್ನು ಆರಂಭಿಸಬೇಕೆಂದು

ಸ್ಸೇವೆ—ಕೆಲವು ರಂಗಗಳಲ್ಲಿ ಮುಂದುವರಿದಿದ್ದೇವೆ. ಶಾಂತಿಪ್ರಿಯ ಪ್ರಗತಿಪ್ರಿಯ ಇಂಗ್ಲಂಡು ನಮ್ಮ ಪ್ರಗತಿಶೀಲ ದಾರಿಯ ಮೇಲೆ ಕೋಟೆಗಳನ್ನು ಕಟ್ಟುತ್ತಲಿದೆ. ಇಂದಿನ ಯುದ್ಧಕಾಲದಲ್ಲಿ ಕೂಡ ನಮ್ಮ ಉದ್ಯೋಗಗಳಿಗೆ ಸಾಕಷ್ಟು ಬೆಂಬಲವು ಸಿಕ್ಕಲಿಲ್ಲ. ಯುದ್ಧಾರಂಭದಿಂದ ಎರಡು ವರುಷಗಳ ಅವಧಿಯಲ್ಲಿ ಸಾಮ್ರಾಜ್ಯಸರಕಾರವು ಬರೀ ಮುನ್ನೂರು ಕೋಟಿ ರೂಪಾಯಿ ಬೆಲೆ ಬಾಳುವ ಸರಕನ್ನು ಹಿಂದೀ ಕಾರಖಾನೆಗಳಿಂದ ಕೊಂಡಿತು. ಅದೇ ಅವಧಿಯಲ್ಲಿ ಹನ್ನೊಂದು ಸಾವಿರ ಕೋಟಿ ರೂಪಾಯಿಗಳ ಸರಕನ್ನು ಕಾನಡಾದ ಕಾರಖಾನೆಗಳಿಂದ ಕೊಂಡಿತು. ಇಂದಿನ ವರೆಗೂ ನಮ್ಮ ದೇಶದ ರೇಲ್ವೆಗಳು ದೇಶೀ ಕಂಪನಿಗಳಿಂದ ಸಲಕರಣೆಗಳನ್ನು ಕೊಳ್ಳದೆ ಪರದೇಶದಿಂದ ಕೊಳ್ಳುವುದು ನಮ್ಮ ಸರಕಾರದ (ಇಂಗ್ಲಂಡಿನ) ಪ್ರತಿಗಾಮಿ ಧೋರಣೆಯ ನಿದರ್ಶನವಾಗಿದೆ. ಈ ಯುದ್ಧದಲ್ಲಿ ಅನುಭವಿಸಿದ ಹಾನಿಯನ್ನು ತುಂಬಿಕೊಳ್ಳಲು, ಭಾರತೀಯರನ್ನು ಹಿಚುಕಬೇಕೆಂದಿದೇ ಸಾಮ್ರಾಜ್ಯಶಾಹಿ! ಇದೇ ಕಾರಣದಿಂದ ಸ್ವರಾಜ್ಯದ ಬೇಡಿಕೆ ಮನ್ನಿಸಲ್ಪಟ್ಟಿಲ್ಲ. ಆದರೆ ಇದು ನಮ್ಮ ಜೀವನ-ಮರಣದ ಸಮಸ್ಯೆಯಾಗಿದೆ—ಇಂಗ್ಲಂಡಿನ ಅಭಿವೃದ್ಧಿಗಾಗಿ ನಮ್ಮ ದೇಶದವರನ್ನು ನಿರುದ್ಯೋಗದಲ್ಲಿ ಹಸಿವೆಯಲ್ಲಿ ನೂಕಲು ನಾವು ಸಿದ್ಧರಿಲ್ಲ. ಉಳಿದ ರಾಷ್ಟ್ರಗಳ ಜನರಂತೆ ನಮ್ಮ ಜನರೂ ನೆಮ್ಮದಿಯಲ್ಲಿರಬೇಕು—ಸುಸಂಸ್ಕೃತರಾಗಬೇಕು—ಸಾಕ್ಷರರಾಗಬೇಕು. ಈ ಇಚ್ಛೆಯು ಸಾಧಿಸಬೇಕಾದರೆ, ಆರ್ಥಿಕ ಪ್ರಗತಿಯನ್ನು ಭಾರತವು ಪಡೆಯಬೇಕಾದರೆ, ಬೇಸಾಯ ಮತ್ತು ಉದ್ಯೋಗಗಳ ಸುಂದರ ಸಮ್ಮಿಲನವು ಶಾಸ್ತ್ರೀಯ ರೀತಿಯಲ್ಲಿ ಮುಂದುವರಿಯಬೇಕು. ಜೀವನದ ಮಟ್ಟವನ್ನು ಏರಿಸಬೇಕೆಂಬ ಮಹತ್ವಾಕಾಂಕ್ಷೆ ನಮ್ಮ ಜನರಲ್ಲಿ ಬೆಳಗುತ್ತಿರಬೇಕು. ಇದನ್ನು ಸಾಧಿಸಲು ರಾಷ್ಟ್ರೀಯ ಸರಕಾರವನ್ನು ಪಡೆಯಬೇಕು, ಸ್ವಾತಂತ್ರ್ಯ ಗೆಲ್ಲಬೇಕು. ಜಗತ್ತಿನಲ್ಲಿ ನಮಗೊಂದು ನ್ಯಾಯದ ಮತ್ತು ಮಹತ್ವದ ಸ್ಥಾನವಿರಬೇಕು—ಜಗತ್ತಿನ ಶಾಂತಿ—ಜಗತ್ತಿನ ಸ್ವಾತಂತ್ರ್ಯ ಎಂದರೆ, ಭಾರತದ ಶಾಂತಿಸ್ವಾತಂತ್ರ್ಯಗಳಿಗೂ ಅದರಲ್ಲಿ ಸ್ಥಾನವಿರಬೇಕು. ವಿಜಯೀ ರಾಷ್ಟ್ರಗಳು ವಿಜಯದ ಮದದಲ್ಲಿ ಭಾರತವನ್ನು ದಾಸ್ಯದಲ್ಲಿಯೆ ಇಟ್ಟರೆ, ಭಾರತೀಯರು ಅದನ್ನೆಂದಿಗೂ ಸಹಿಸರು. ಒಂದಾನೊಂದು ದಿನ ಅವರು ತಮ್ಮ ಬೇಡಿಗಳನ್ನು ಬದಿಗಿರಿಸಿ, ಸ್ವಾತಂತ್ರ್ಯಯುದ್ಧವನ್ನು ಸಾರುವುದು ಖಂಡಿತ. ಈ ಯುದ್ಧವು, ದಾಸ್ಯದಲ್ಲಿದ್ದು ಸ್ವಾತಂತ್ರ್ಯವನ್ನು ಬಯಸಿದ ಇತರ ರಾಷ್ಟ್ರಗಳು ಸಾರಿದ ಇಂತಹ ಯುದ್ಧಗಳು ಸಾಮ್ರಾಜ್ಯಶಾಹಿಗಳೆನ್ನುವಂತೆ ಶಾಂತತಾ ವಿರೋಧಿಗಳಲ್ಲ; ಇವು ಆದರ್ಶ ಶಾಂತತೆಯನ್ನು ಸ್ಥಾಪಿಸುವ ಯುದ್ಧಗಳು. ಜಗತ್ತಿನಲ್ಲಿ ದಾಸ್ಯವಿರುವ ವರೆಗೆ, ಸಾಮ್ರಾಜ್ಯಗಳಿರುವ ವರೆಗೆ ಇಂತಹ ಯುದ್ಧಗಳು ಸಾಗಲೇಬೇಕು ಮತ್ತು ಸಾಗುವುವು. ಇಂದು ನಡೆದಿರುವ ಯುದ್ಧಾನಂತರ ಬರುವ ವ್ಯವಸ್ಥೆಯಲ್ಲಿ, ವ್ಯವಸ್ಥೆಯ ನಂತರವೂ ದಾಸ್ಯಕ್ಕೆ ಆಸ್ಪದವಿದ್ದರೆ, ವರ್ಣದ್ವೇಷಕ್ಕೆ ಸ್ಥಾನವಿದ್ದರೆ, ಸಾಮ್ರಾಜ್ಯಶಾಹಿಗೆ ಅನುವಿದ್ದರೆ, ಸ್ವಾತಂತ್ರ್ಯಯುದ್ಧಗಳು ಮುಂಬರುವುವು. ಈ ಯುದ್ಧಗಳಲ್ಲಿ ಎಷ್ಟೆ ಹಾನಿಯಾಗಲಿ, ಎಷ್ಟೇ ಜನರು ಸಾಯಲಿ ದಾಸ್ಯದಲ್ಲಿದ್ದ ರಾಷ್ಟ್ರಗಳು ಸ್ವತಂತ್ರವಾಗುವ ವರೆಗೆ ಇವು ನಡೆಯಲೇಬೇಕು, ಮತ್ತು ನಡೆಯುವುವು.

ಇಂದಿನ ವರೆಗೆ ನಾವು ಸೋಲುತ್ತ ಬಂದಿದ್ದೇವೆ— ಸ್ವಾತಂತ್ರ್ಯ ದೊರೆಕಿಸುವ ಪ್ರಯತ್ನಗಳಲ್ಲಿ! ಆದರೆ ಸಮಾಧಾನದ ಸಂಗತಿಯೆಂದರೆ ನಮ್ಮ ರಾಷ್ಟ್ರೀಯತೆಯು ಸತ್ತಿಲ್ಲ, ನಮ್ಮ ನಿಶ್ಚಯವೂ ಇನ್ನಿಷ್ಟು ಬಲಗೊಂಡಿದೆ. ಕ್ರಮೇಣ ನಮ್ಮ ಪ್ರತೀಕಾರ ಶಕ್ತಿಯೂ ಹೆಚ್ಚುವುದು. ನಾವಿನ್ನು ಸಾಂಘಿಕ ಪ್ರಯತ್ನ ಮಾಡುತ್ತಲಿದ್ದೇವೆ, ತಾತ್ಕಾಲಿಕ ಅಪಯಶಸ್ಸಿಗೆ ಗುರಿಯಾದರೂ ಸಾಂಘಿಕಶಕ್ತಿಗೆ ಕೊನೆಯ ಜಯ ಖಂಡಿತ. ಗಾಯಗೊಂಡ ಸತ್ಯವು ಕೊನೆಗೆ ಗೆಲ್ಲುವುದು ಖಂಡಿತ. ಅಂದೇ ಜಗತ್ತಿನಲ್ಲಿ ಆದರ್ಶ ಸ್ವಾತಂತ್ರ್ಯ—ಶಾಂತಿಗಳು ನೆಲೆಗೊಳ್ಳುವುವು. ಇಂಗ್ಲಂಡಿನ ಕವಿ ಮಿಲ್ಟನ್ ಹಾಡಿದ್ದಾನೆ:

" Virtue may be assailled but not hurt
Surprised by unjust force but never enthralles "

ಮೇಲಾಗಿ ನಮ್ಮ ಇಚ್ಛೆ, ಮಹತ್ವಾಕಾಂಕ್ಷೆ, ಪ್ರಯತ್ನಗಳಲ್ಲಿ ಸಾತ್ವಿಕತೆ ಇದೆ, ನ್ಯಾಯಕ್ಕಾಗಿ ನಾವು ಹೋರಾಡುತ್ತಲಿದ್ದೇವೆ; ಯಾರ ಕೇಡನ್ನೂ ನಾವು ಇಚ್ಛಿಸುತ್ತಿಲ್ಲ, ಯಾರ ಸೊತ್ತನ್ನೂ ಅಪಹರಿಸಬೇಕೆಂದಿಲ್ಲ. ಮಹಾತ್ಮಾ ಎಬ್ರಹಾಂಲಿಂಕನ್ (Abraham-linkan) ಹೇಳಿರುವಂತೆ " With malice towards rone, with charity for all, with faith in the right as god gives us to see the right, let us strive on to finish the work we are in " ಎನ್ನುತ್ತ ನಾವು ಸಾಗಿದ್ದೇವೆ. ನ್ಯಾಯವು ನಯವನ್ನು ಅನುಭವಿಸುವುದು ಖಂಡಿತ.

ಹೊಣೆಯು ಮೇಲಕ್ಕೇರುತ್ತಲಿದೆ. ನನ್ನ ಮನಸ್ಸು ವಿಚಾರವಾಹನವನ್ನೇರಿ ಮೇಲೇರಲಿ! ಗಾಳಿಯು ಬೀಸುತ್ತಲಿದೆ, ದಶದಿಕ್ಕುಗಳಲ್ಲಿ ಸಂಚರಿಸುತ್ತಲಿದೆ. ನನ್ನ ಕಣ್ಣುಗಳೂ ವಿಶಾಲ ಜಗತ್ತಿನ ಕಡೆಗೆ ನೋಡುತ್ತಿರಲಿ! ನನ್ನ ಕಾರ್ಯರಂಗವು ದಿನದಿನಕ್ಕೆ ದೊಡ್ಡದಾಗುತ್ತ ನಡೆಯಲಿ. ಒಂದೆರಡು ವರುಷಗಳಿಂದ ಮಾನವತೆಯ ವಿಷಯದಲ್ಲಿ ನನ್ನಲ್ಲಿ ಮನೆಮಾಡುತ್ತಿರುವ ಮಮತೆಯು, ಮಾನವತೆಯ ಸಮಸ್ಯೆಗಳಲ್ಲಿ ಸೂಕ್ಷ್ಮವಾಗಿ ವಿಚಾರಿಸುವ ವಿಮರ್ಶಾಬುದ್ಧಿಯು ಮರಗಳಾಗಿ ಬೆಳೆದು, ತಮ್ಮ ಫಲಗಳನ್ನು ನಾಲ್ದೆಸೆಗಳಲ್ಲಿ ಹಂಚಲಿ. ಇಂದು ಇದು ಇಚ್ಛೆಯಾಗಿದ್ದರೆ ನಾಳೆಯದು ಮಹತ್ವಾಕಾಂಕ್ಷೆಯಾಗಿ ಪರಿಣಮಿಸಲಿ. ಇಡೀ ಜಗತ್ತಿನಲ್ಲಿ ಸ್ವಾತಂತ್ರ್ಯ, ಶಾಂತಿ, ಪ್ರಗತಿಗಳು ನಲಿದಾಡುವ ಸುದಿನಗಳು ಬೇಗನೆ ಬರಲಿ!

ಜಯಂತಿ ಕಾರ್ಯಾಲಯದಲ್ಲಿ ದೊರೆಯುವ ಪುಸ್ತಕಗಳು

ಗೀತಾಗಾಂಭೀರ್ಯ	೩	೦	೦
ನಗೆ (ರಸವಿಚಾರ)	೧	೮	೦
ಆಹ್ವಾನ (ಕವನಸಂಗ್ರಹ)	೧	೦	೦
ನಿರಾಹಾರ	೦	೧೨	೦
ಸುದರ್ಶನ (ಕಾದಂಬರಿ)	೧	೦	೦
ವಿರಹಿಣಿ (ಕವನಸಂಗ್ರಹ)	೦	೧೨	೦
ಕರ್ನಾಟಕ ಜನಜೀವನ	೧	೮	೦

ಪ್ರಪಂಚದ ಪೇಟೆಗಳು ಯಾರ ಪದರಲ್ಲಿ?

(ಆರ್ಥಿಕಲೋಕದ ಅವಲೋಕನ)

ಶ್ರೀ. ವಾಳವೇಕರ ಗುರುರಾಯರು, ಬಿ. ಎ., ಎಲ್ಎಲ್. ಬಿ. **ಹುಬ್ಬಳ್ಳಿ**

ಪ್ರಪಂಚದಲ್ಲಿ ಆದ ಆಧುನಿಕ ಯುದ್ಧಗಳು ಪೇಟೆಗಳನ್ನು ಕೈವಶಮಾಡಿಕೊಳ್ಳುವುದಕ್ಕಾಗಿಯೆ ಆಗಿವೆಯೆಂದು ಹೇಳಿದರೆ ಬಹಳ ತಪ್ಪಾಗಲಿಕ್ಕಿಲ್ಲ. ಯುದ್ಧದಲ್ಲಿ ತೊಡಗಿದ ರಾಷ್ಟ್ರಗಳಲ್ಲಿ ಉದ್ಯೋಗಗಳಲ್ಲಿ ಬಹಳ ಮುಂದರಿದ ರಾಷ್ಟ್ರಗಳಿವೆ. ಬ್ರಿಟನ್, ಜರ್ಮನಿ, ಜಪಾನ್, ಅಮೇರಿಕೆಗಳು ತಾವು ತಯಾರಿಸಿದ ಸರಕುಗಳಿಗೆ ಭೂಪೃಷ್ಠದ ಎಲ್ಲ ಭಾಗಗಳಲ್ಲಿಯೂ ಗಿರಾಕಿಗಳಿರಬೇಕೆಂದು ಯತ್ನಿಸುತ್ತಿವೆ. ಆದರೆ ಸದ್ಯದ ಮಹಾಯುದ್ಧ ಮುಗಿದ ಬಳಿಕ ಕೆಲವು ಕಾಲದವರೆಗಾದರೂ ಪ್ರಪಂಚದ ಪೇಟೆಗಳಲ್ಲಿ ಸ್ವತಂತ್ರತೆಯಿಂದ ಸುಳಿದಾಡಲು ಜರ್ಮನಿ-ಜಪಾನುಗಳಿಗೆ ಅನುವು ದೊರತೀತೆಂದು ತೋರುವುದಿಲ್ಲ. ಆದರೂ ಜರ್ಮನಿಯು ಕೊನೆಯ ವರೆಗೆ ಹಿಂದುಳಿದ ರಾಷ್ಟ್ರವಾಗಿಯೆ ಕಾಲ ಕಳೆದೀತೆಂದು ಹೇಳಲಿಕ್ಕಾಗುವುದಿಲ್ಲ. ಹಿಂದಿನ ಮಹಾಯುದ್ಧದಲ್ಲಿ ಜರ್ಮನರ ಪೂರ್ವಜರು ಹೂಣರು (Huns) ಇದ್ದರೆಂದು ಸದ್ಯದ ಜರ್ಮನರು ಅವರ ವಂಶಜರನ್ನು ಹೀಯಾಳಿಸುವುದರಲ್ಲಿ ಬಂತು. ಹಾಗಿದ್ದರೆ ರೋಮನ್ ಸಾಮ್ರಾಜ್ಯವನ್ನು ಮಣ್ಣುಗೂಡಿಸಿದ ಮತ್ತು ಬ್ರಿಟಿಶ್ ಸಾಮ್ರಾಜ್ಯವನ್ನು ಮೂಲೆಗುಂಪುಮಾಡಿದ ಅಭಿಮಾನ ಅವರಿಗೆ ಯಾಕೆ ಇರಬಾರದು? ಕಳೆದ ಮಹಾಯುದ್ಧದ ಮೊದಲು ಲಂಡನ್ ಪೇಟೆಯನ್ನು ಸರಿಗಟ್ಟುವ ಬೇರೆ ಪೇಟೆ ಪ್ರಪಂಚದಲ್ಲಿ ಎಲ್ಲಿಯೂ ಇದ್ದಿಲ್ಲ. ಲಂಡನಿನ ಸ್ಟಾಕ್ಎಕ್ಸ್‌ಚೇಂಜಿಗೆ ಅಗ್ರಪೂಜೆಯ ಮಾನವಿದ್ದು, ಬ್ರಿಟನ್ನು ಸಾವುಕಾರ ರಾಷ್ಟ್ರ (Creditor nation)ವಾಗಿತ್ತು; ಉದ್ಯೋಗಗಳ ಕೇಂದ್ರವಾಗಿತ್ತು. ತಾನು 'ವರ್ಕ್‌ಶಾಪ್ ಆಫ್ ದಿ ವರ್ಲ್ಡ್' ಎಂಬ ಹೆಮ್ಮೆಯಿಂದ ಮೆರೆಯುತ್ತಿತ್ತು. ಜಾಗತಿಕ ಮೊದಲನೆಯ ಯುದ್ಧದಲ್ಲಿ ಜರ್ಮನರು ಸೋತರೂ, ಬ್ರಿಟನನ್ನು ಮೊದಲನೆಯ ಮಾನದ ಸ್ಥಾನದಿಂದ ಪದಚ್ಯುತ ಮಾಡದೆ ಬಿಡಲಿಲ್ಲ. ಸಾವುಕಾರನಿದ್ದವನನ್ನು ಸಾಲಗಾರನನ್ನಾಗಿ ಮಾಡಿತು. ನ್ಯೂಯಾರ್ಕದ ಸ್ಟಾಕ್ ಎಕ್ಸ್‌ಚೇಂಜು, ಅಭಿಮಾನದ ಮೊದಲನೆಯ ಸ್ಥಾನವನ್ನು ಸಹಜವಾಗಿ ಸೆಳೆದುಕೊಂಡಿತು. ಹಡಗುಗಳನ್ನು ಕಟ್ಟುವುದರಲ್ಲಿ ಹಾಗೂ ಪ್ರಪಂಚದ ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಸರಕುಗಳನ್ನು ಒಯ್ದುಕೊಂಡು ಹೋಗುವುದರಲ್ಲಿ ಬ್ರಿಟಿಶರು ಎಲ್ಲ ರಾಷ್ಟ್ರಗಳಿಗಿಂತ ಮುಂದುವರಿದಿದ್ದರು. Britannia rules the waves ಎಂಬ ಬಿರುದಾವಳಿ ತಮಗಿದೆಯೆಂದು ಹೇಳಿಕೊಳ್ಳುತ್ತಿದ್ದರು. ಕಳೆದ ಮಹಾ ಯುದ್ಧದ ನಂತರ ಎಲ್ಲವೂ ಬಯಲಾಯಿತು. ಭರತಖಂಡದಲ್ಲಿಯ ಬ್ರಿಟಿಶ್ ನೌಕರರು, ಬ್ರಿಟಿಶ್ ಕಂಪನಿಯ ಪ್ರವಾಸಿಕರ ಹಡಗುಗಳಲ್ಲಿಯೆ ಹೆಚ್ಚು ಬಾಡಿಗೆ ಕೊಟ್ಟು ಹೋಗಬೇಕೆಂದು ಅಪ್ರತ್ಯಕ್ಷವಾಗಿ ಒತ್ತಾಯ ಮಾಡುವ ಪ್ರಸಂಗ ಬಂತು. ಇಟಲಿಯ ಪ್ರವಾಸಿಕರ ಹಡಗುಗಳು ಕಡಿಮೆ ಬಾಡಿಗೆ ತಕ್ಕೊಂಡು ಪ್ರವಾಸಿಕರಿಗೆ ಎಲ್ಲ ಸುಖ-ಸೌಕರ್ಯಗಳನ್ನು ಪೂರಯಿಸತೊಡಗಿದುವು. ಜಲಪ್ರವಾಸಿಕರ ಹೆಸರುಗಳು ಪತ್ರಿಕೆಗಳಲ್ಲಿ ಪ್ರಕಟಿಸಲ್ಪಡುತ್ತವೆ. ಭಾರತದಲ್ಲಿಯ ಬ್ರಿಟಿಶ್ ನೌಕರರಿಗೆ ಸ್ವದೇಶಕ್ಕೆ ಹೋಗಲಿಕ್ಕೆ ತಗಲುವ ವೆಚ್ಚ ಹಿಂದುಸ್ಥಾನದ ಬೊಕ್ಕಸದಿಂದ ದೊರೆಯುತ್ತದೆ. ಬ್ರಿಟಿಶ್ ಹಡಗುಗಳು ಬೇಡುವ ಹೆಚ್ಚಿನ ಬಾಡಿಗೆ ತಕ್ಕೊಂಡು, ಕಡಿಮೆ ಬಾಡಿಗೆ ಬೇಡುವ ಇಟಲಿಯ ಹಡಗುಗಳಲ್ಲಿ ಪ್ರವಾಸ ಮಾಡಿದ ಉದಾಹರಣೆಗಳು ಗೊತ್ತಾದುವಂತೆ. ಬ್ರಿಟಿಶ್ ಹಡಗುಗಳಲ್ಲಿ ಪ್ರವಾಸ ಮಾಡುವುದು ಬಹುಮಾನದ್ದೆಂಬ ತಿಳುವಳಿಕೆಯು ಹೋಯಿತು.

ವ್ಹರ್ಸಾಯದ ಒಪ್ಪಂದದಲ್ಲಿ ಕಾಣಿಸಿದ ಕರಾರುಗಳನ್ನು ನೋಡಿದರೆ ಜರ್ಮನಿಯ ಅವಸ್ಥೆಯು ಹಿಂದುಸ್ಥಾನದಲ್ಲಿಯ ಎರಡನೆಯ ಮೂರನೆಯ ತರಗತಿಯ ಸಂಸ್ಥಾನಕ್ಕೆ ಬಂದಂತಾಗಿತ್ತು. ಆದರೆ ಯುರೋಪಖಂಡದಲ್ಲಿ ಫ್ರಾನ್ಸದ ವರ್ಚಸ್ಸು ಹೆಚ್ಚಾಗಿ, ಅದು ತಮಗೆ ಬಾಧಕವಾದೀತೆಂದು ಬ್ರಿಟಿಶರಿಗೆ ಎನಿಸಿ, ಜರ್ಮನಿಯು ತಕ್ಕಮಟ್ಟಿಗೆ ಬಲವಾದ ರಾಷ್ಟ್ರವಾಗಿರುವುದು ಒಳಿತೆಂದೆನಿಸತೊಡಗಿತು. ಜರ್ಮನರು ಕೊಡಬೇಕೆಂದು ಒಪ್ಪಂದದಲ್ಲಿ ಕಾಣಿಸಿದ ಕಪ್ಪ-ಕಾಣಿಕೆಗಳನ್ನು—ಅವರು ಮನಸ್ಸು ಮಾಡಲು ಯತ್ನಿಸಿದ್ದರೂ—ಅವರಿಂದ ಕೊಡುವುದಾಗುತ್ತಿದ್ದಿಲ್ಲ. ಜರ್ಮನ್ ಸರಕುಗಳನ್ನು ತಕ್ಕೊಳ್ಳದಿದ್ದರೆ ಅವರು ಕೊಡಬೇಕಾದ ಹಣ ಅವರಿಗೆ ಎಲ್ಲಿಂದ ದೊರೆಯಬೇಕು? ಎಲ್ಲ ಸ್ವತಂತ್ರರಾಷ್ಟ್ರಗಳು ಜಕಾತಿಯ ಕೋಟೆ-ಕೊತ್ತಳಗಳನ್ನು ಕಟ್ಟಿಕೊಂಡಿದ್ದುವು. ಆದರಿಂದ ಈ ಕರಾರುಗಳ ಪುನರ್ವಿಚಾರಣೆಯಾಯಿತು. ಡಾವಿಸ ಪ್ಲ್ಯಾನ್, ಯಂಗ್ ಪ್ಲ್ಯಾನುಗಳು ಬಂದುವು. ಜರ್ಮನರಿಗೆ ಬೇಕಾದ ಬಂಡವಲವು ದೊರೆಯತೊಡಗಿತು. ಅವರು ತಮ್ಮ ಸರಕುಗಳಿಗೆ ಗಿರಾಕಿಗಳನ್ನು ದೊರಕಿಸಹತ್ತಿದರು. ಬಹಳ ಹೇಳುವುದೇನು? ಬ್ರಿಟಿಶರನ್ನು ನಾಲ್ಕು ವರ್ಷಗಳವರೆಗೆ ತೇಕಿಸಿದ ಜರ್ಮನರಿಗೆ, ಹಿಂದುಸ್ಥಾನದಲ್ಲಿಯ ಒಂದು ದೊಡ್ಡ ಪಟ್ಟಣದಲ್ಲಿಯ ಮುನಿಸಿಪಾಲ್ಟಿಗೆ ಪಾಯಿಪುಗಳನ್ನು ಪೂರಯಿಸಲು ಆಸ್ಪದ ದೊರಕಿತ್ತು. ಮೇಲೆ ಹೇಳಿದಂತೆ ಮಹಾಯುದ್ಧ ಮುಗಿದನಂತರ ಜರ್ಮನರ ಕಳೆದುಕೊಂಡ ವ್ಯಾಪಾರವು ತಿರುಗಿ ಅವರಿಗೆ ಎಂದೂ ದೊರೆಯಲಿಕ್ಕಿಲ್ಲವೆಂದು ಹೇಳುವುದು ಧಾರ್ಷ್ಟ್ಯದ ಮಾತು.

ಜರ್ಮನಿ-ಜಪಾನುಗಳು ತಗ್ಗಿದ ಮಾಲನ್ನು ಪೂರಯಿಸುವುದರಲ್ಲಿ ಮುಗಿಬೀಳುವುವು. ಪ್ರಪಂಚದ ಪೇಟೆಗಳಿಂದ ಇವೆರಡೂ ರಾಷ್ಟ್ರಗಳು ಇಲ್ಲದಂತಾಗುತ್ತವೆ. ಆ ಬಳಿಕ ಉಳಿದವುಗಳಲ್ಲಿ ಫ್ರಾನ್ಸು ಬಲಹೀನವಾದದ್ದು; ಅದನ್ನು ಗಣನೆಗೆ ತಕ್ಕೊಳ್ಳುವ ಕಾರಣವಿಲ್ಲ. ಬಹಳ ಹೆಚ್ಚಾದರೆ ಅದಕ್ಕೆ ಅದರ ವಸಾಹತುಗಳ ಪೇಟೆಗಳನ್ನು ಬಿಟ್ಟುಕೊಡ-

ಬಹುದು. ರಶಿಯಾ ತನ್ನ ಔದ್ಯೋಗಿಕ ಉನ್ನತಿಯಲ್ಲಿ ತೊಡಗಿಕೊಂಡುಳಿಯುವುದು. ಹೆಚ್ಚಿನ ಹೊರಗಿನ ಪೇಟೆಗಳ ಗೊಡವೆಗೆ ಅದು ಹೋಗಲಿಕ್ಕಿಲ್ಲ. ಬ್ರಿಟನ್ ಮತ್ತು ಅಮೇರಿಕೆಗಳಿಗೆ ಪ್ರಪಂಚದಲ್ಲೆಲ್ಲ ಪಸರಿಸಲು ಬೇಕಾದಷ್ಟು ಅನುವು ಇದೆ. ಇಬ್ಬರೂ ಕೂಡಿ ಜಗತ್ತಿನಲ್ಲಿಯ ಎಲ್ಲ ಸಾಧನ-ಸಾಮಗ್ರಿಯನ್ನು ತಕ್ಕೊಂಡು ಹೋಗಿ, ತಮ್ಮ ಕಾರಖಾನೆ-ಗಿರಣಿಗಳಲ್ಲಿ ಸಿದ್ಧವಾದ ಸರಕುಗಳನ್ನು ಪೂರಯಿಸುವ ಕೆಲಸವನ್ನು ಹಂಚಿಕೊಂಡರಾಯಿತೆಂಬುದು ಕೆಲವು ಬ್ರಿಟಿಶರ ವಿಚಾರ. ಆದರೆ ಹೀಗಾಗುವುದಕ್ಕೆ ಅನೇಕ ಎಡರು-ತೊಡರುಗಳಿವೆ.

ಈ ಎರಡೂ ರಾಷ್ಟ್ರಗಳು ಸಮಬಲ ರಾಷ್ಟ್ರಗಳಲ್ಲ. ಅಮೇರಿಕೆಯು ಸಾವುಕಾರನಾಗಿದೆ; ಬ್ರಿಟನ್ನು ಸಾಲಗಾರನಾಗಿದೆ. ಉದ್ಯೋಗದಲ್ಲಿ ಅಮೇರಿಕೆಯು ಬಹಳ ಮುಂದುವರಿದಿದೆ. ಬ್ರಿಟನ್ನು ೧೯ನೆಯ ಶತಮಾನದ ಹಳೆಯ ಅಭಿಮಾನದ ಕತೆ ಹೇಳುತ್ತ ಕುಳಿತಿದೆ. ಲ್ಯಾಂಕೆಶಾಯರ್ ಮ್ಯಾಂಚೆಸ್ಟರಿನಲ್ಲಿಯ ಗಿರಣಿಗಳಲ್ಲಿಯ ಯಂತ್ರಗಳು ಯಾವ ಮಾದರಿಯವಿವೆಯೆಂಬುದನ್ನು, ಬ್ರಿಟನಿನಿಂದ ಅಮೇರಿಕೆಗೆ—ಅಲ್ಲಿಯ ನೂಲುವ ನೇಯುವ ಉದ್ಯೋಗವನ್ನು ನಿರೀಕ್ಷಿಸಲಿಕ್ಕೆ ಹೋದ ಕಮಿಶನಿನವರು ಚೆನ್ನಾಗಿ ವರ್ಣಿಸಿದ್ದಾರೆ: ೩೨ ಮಗ್ಗಗಳನ್ನು ಒಬ್ಬನೇ ಅಮೇರಿಕನ್ ನೇಕಾರನು ನಡೆಯಿಸಬಲ್ಲನು. ಬ್ರಿಟನಿನಲ್ಲಿಯ ಗಿರಣಿಗಳಲ್ಲಿ, ೮–೧೦ ಮಗ್ಗಗಳಿಗಿಂತ ಹೆಚ್ಚಿನ ಮಗ್ಗಗಳು ಬ್ರಿಟನ್ ನೇಕಾರನಿಂದ ನಡೆಯಿಸಲು ಸಾಧ್ಯವಿಲ್ಲ. ಅಮೇರಿಕೆಗೆ ಪರದೇಶಗಳಿಂದ ತರುವ ಸಾಧನಸಾಮಗ್ರಿ ಬಹಳ ಕಡಿಮೆ ಇದೆ. ಒಂದು ತೊಳೆಯ ಹತ್ತಿ ಬೆಳೆಯದ ಬ್ರಿಟಿಶರು ಪ್ರಪಂಚದ ಪೇಟೆಗಳಿಗೆಲ್ಲ ನೂಲು ಹಾಗು ಬಟ್ಟೆಗಳನ್ನು ಪೂರಯಿಸುವ ಹವ್ಯಾಸವನ್ನು ಏಕೆ ತಾಳಬೇಕು? ಉತ್ತಮವಾದ ಹತ್ತಿ ಬೆಳೆಯುವ ದೇಶಗಳು ೬–೮ ಸಾವಿರ ಮೈಲು ದೂರವಿರುವ ಬ್ರಿಟನಿಗೆ ಹತ್ತಿಯನ್ನು ಕಳಿಸಿ, ಬ್ರಿಟನ್ನಿನಲ್ಲಿಯ ಕೆಲಸಗಾರರಿಗೆ ತಮ್ಮ ದೇಶದಲ್ಲಿಯ ಕೆಲಸಗಾರರಿಗಿಂತ ಹೆಚ್ಚು ಕೂಲಿ ಕೊಟ್ಟು, ಬ್ರಿಟಿಶ್ ವಿಮಾ ಕಂಪನಿಗಳಿಗಾಗಿ ಪ್ರಿಮಿಯಮ್ ಪೂರಯಿಸಿ, ಬ್ರಿಟಿಶ್ ಬ್ಯಾಂಕುಗಳಿಗೆ ಹುಂಡಿ-ದಲಾಲಿ ಮುಂತಾದ್ದನ್ನು ಕೊಟ್ಟು, ತುಟ್ಟಿಯ ಮಾಲು ಯಾಕೆ ಕೊಳ್ಳಬೇಕು? ಅಮೇರಿಕೆಯು ಎಲ್ಲಕ್ಕೂ ಮಿಗಿಲಾದ ಹತ್ತಿಯನ್ನು ಬೆಳೆಯುವ ದೇಶವಿದೆ. ಸಿರಿವಂತಿಕೆಯಲ್ಲಿ ಅದರ ಸಜ್ಜಿಗೆ ಕುಳಿತುಕೊಳ್ಳುವ ಯೋಗ್ಯತೆ ಪ್ರಪಂಚದಲ್ಲಿ ಬೇರೆ ಯಾವ ರಾಷ್ಟ್ರಕ್ಕೂ ಇಲ್ಲ. ಭೌತಿಕಶಾಸ್ತ್ರದಲ್ಲಿ, ಯಂತ್ರಕಲೆಯಲ್ಲಿ ಬ್ರಿಟನನ್ನು ಹಿಂದೆ ಹಾಕಿದೆ. ಹಿಂದುಸ್ಥಾನದಲ್ಲಿ ಬಂದ ಅಮೇರಿಕೆಯ ಸೈನಿಕರ ಸಮವಸ್ತ್ರಗಳು ತಳತಳಿಸುತ್ತಿರುತ್ತವೆ. ಅವರು ವೆಚ್ಚ ಮಾಡುವ ಹಣ, ಅವರು ಉಣ್ಣುವ ಊಟ, ಅವರು ತಿನ್ನುವ ತಿನಿಸು, ಅವರು ಕುಡಿಯುವ ಮದ್ಯ, ಅವರು ನಿತ್ಯ ಉಪಯೋಗಿಸುವ ಸಾಮಾನುಗಳನ್ನು ನೋಡಿ, ಬ್ರಿಟಿಶ್ ಸೈನಿಕರು ತಕರಾರು ಮಾಡಿದ್ದರಿಂದ ಅದರ ವಿಚಾರಣೆಗಾಗಿ ಒಬ್ಬ ದೊಡ್ಡ ಬ್ರಿಟಿಶ್ ಅಧಿಕಾರಿಯು ಹಿಂದುಸ್ಥಾನಕ್ಕೆ ಬಂದಿದ್ದನು.

ಬ್ರಿಟಿಶರಿಗೆ ಕಲ್ಲಿದ್ದಲಿ ಕಬ್ಬಿಣದ ಹೊರತು ಎಲ್ಲ ಸಾಧನಸಾಮಗ್ರಿ ಪರದೇಶಗಳಿಂದ ಬರಬೇಕು. ಅಮೇರಿಕೆಯು ಬಹುಮಟ್ಟಿಗೆ ಸ್ವಾವಲಂಬಿಯಾಗಿದೆ. ಬ್ರಿಟನಿನಲ್ಲಿ ಎಣ್ಣೆಯ ಕಣಿಗಳಿಲ್ಲ. ಪ್ರಪಂಚದಲ್ಲಿಯ ಎಣ್ಣೆಯ ಉತ್ಪತ್ತಿಯ ೧೦೦ಕ್ಕೆ ೬೦ರಷ್ಟು ಎಣ್ಣೆಯು ಅಮೇರಿಕೆಯ ಕಣಿಗಳಿಂದ ಹೊರಬೀಳುತ್ತದೆ. ಇದಲ್ಲದೆ ಇರಾಣ ಇರಾಕ್‌ಗಳಲ್ಲಿ—ಅಮೇರಿಕೆಯು ಧನಸಂಪನ್ನ ರಾಷ್ಟ್ರವಾದ್ದರಿಂದ—ಅದರ ವರ್ಚಸ್ಸು ಹೆಚ್ಚಾಗಿದೆ. ಮಧ್ಯಪೂರ್ವದ ರಾಷ್ಟ್ರಗಳಿಗೆ ಬೇಕಾದ ಯಂತ್ರಸಾಮಗ್ರಿಯನ್ನು ಹಾಗೂ ಅವರಿಗೆ ಅವಶ್ಯವಿರುವ ನಿತ್ಯೋಪಯೋಗದ ಒಡವೆಗಳನ್ನು ಕೊಟ್ಟು, ಅವರ ಎಣ್ಣೆಯ ವ್ಯಾಪಾರವನ್ನು ತಮ್ಮ ಅನುಮತಿಯಂತೆ ನಡೆಸಲು ಅವರನ್ನು ಒತ್ತಾಯಪಡಿಸಬಹುದು. ಅಲ್ಲಿಯ ಜನರನ್ನು ಬಂದೂಕು-ಬೇಯೊನೆಟ್ಟುಗಳಿಂದ ಬೆದರಿಸಿ, ಅಲ್ಲಿ ಮುಂದೆ ಬಹುಕಾಲದವರೆಗೆ ವ್ಯಾಪಾರ ಬೆಳೆಯಿಸುವುದು ಶಕ್ಯವಿಲ್ಲ.

ಬ್ರಿಟಿಶ್ ಸಾಮ್ರಾಜ್ಯದ ಭಾಗಗಳೇ ಬ್ರಿಟಿಶರ ಕೂಡ ಸ್ಪರ್ಧೆ ಮಾಡುವ ಸಂಭವ ಹೆಚ್ಚಿದೆ. ರೇಲ್ವೆಗಳಿಗೆ ಬೇಕಾದ ಸ್ಟೀಮ್ ಎಂಜಿನುಗಳನ್ನು ಕಾನಡಾ ಪೂರಯಿಸಲು ಪ್ರಾರಂಭಿಸಿದುದರಿಂದ ಹಾಗೂ ಆಸ್ಟ್ರೇಲಿಯಾ ಅದರ ಅನುಕರಣ ಮಾಡುವುದರಿಂದ ಭರತಖಂಡದಲ್ಲಿಯ ಬ್ರಿಟಿಶರ ಗಿರಾಕಿ ಕಡಿಮೆಯಾಗುವುದು. ತಮ್ಮ ವಸಾಹತುಗಳಿಗೆ ಸಾಮ್ರಾಜ್ಯದ ಪೇಟೆಗಳನ್ನು ತಮಗಾಗಿ ಕಾದಿಡಬೇಕೆಂದು ಬ್ರಿಟನು ಹೇಳಿದರೆ ಅವರು ಕೇಳುವರೋ? ಯುದ್ಧಕಾಲದಲ್ಲಿ ಎಲ್ಲ ದೇಶಗಳಲ್ಲಿ ಕಾರಖಾನೆಗಳು ಹೆಚ್ಚಾಗಿವೆ. ಅವುಗಳಲ್ಲಿ ಸಿದ್ಧವಾಗುವ ಮಾಲಿಗೆ ಎಲ್ಲರಿಗೂ ಪೇಟೆಗಳು ಬೇಕು. ಸ್ವದೇಶದಲ್ಲಿಯ ಪೇಟೆಗಳಿಗೆ ಬೇಕಾಗುವ ಸರಕುಗಳನ್ನು ಮಾತ್ರ ಸಾಮ್ರಾಜ್ಯಾಂತರ್ಗತ ರಾಷ್ಟ್ರಗಳು ಪೂರೈಸಿದರೂ ಕೂಡ, ಬ್ರಿಟನಿಗೆ ಅದರಿಂದ ಧಕ್ಕೆ ತಗಲದೆ ಇರದು. ಹಿಂದುಸ್ಥಾನದಲ್ಲಿ ರೇಲ್ವೆ ಎಂಜಿನುಗಳನ್ನು ತಯಾರಿಸಬೇಕೆಂಬ ಭಾರತೀಯರ ಬೇಡಿಕೆ ಬಹಳ ಹಳೆಯದಿದೆ. ಬ್ರಿಟಿಶರು ನೇಮಿಸಿದ ಕಮೀಶನ್ನಿನವರು ಸಹ ಹಿಂದೀ ಕಾರಖಾನೆಗಳಲ್ಲಿ ಎಂಜಿನ್ ತಯಾರಿಸಬೇಕೆಂದು ಶಿಫಾರಸು ಮಾಡಿದ್ದಾರೆ. ಈಗ ಟಾಟಾ ಕಂಪನಿಯ ಜಮಶೇದ್‌ಪುರದ ಕಾರಖಾನೆಯಲ್ಲಿ ಬಾಯಲರುಗಳು ತಯಾರಾಗುತ್ತವೆ. ಎಂದರೆ ಬ್ರಿಟನಿನಿಂದ ಭಾರತಕ್ಕೆ ಬೇಕಾದ ಎಲ್ಲ ಬಾಯಲರುಗಳು ಮೊದಲಿನಂತೆ ಬರಲಾರವು. ಕಡಿಮೆ ಕಲ್ಲಿದ್ದಲಿ ಸುಟ್ಟು ಹೆಚ್ಚು ಉಗಿ ಉತ್ಪನ್ನ ಮಾಡುವ ಎಂಜಿನು ಬಾಯಲರುಗಳನ್ನು ತಯಾರಿಸುವ ದೇಶಕ್ಕೆ ಹೆಚ್ಚು ಗಿರಾಕಿಗಳು ದೊರೆಯುವವು—ಆಸ್ಟ್ರೇಲಿಯದಲ್ಲಿ ಕಬ್ಬಿಣದ ಹಾಗೂ ಉಕ್ಕಿನ ಕಾರಖಾನೆಗಳು ಬಹಳ ಬೆಳೆದಿವೆ.

ಅಮೇರಿಕೆಗೆ ಜರ್ಮನ್ ಬಾಂಬುಗಳ ಧಕ್ಕೆ ತಾಗಿಲ್ಲ—ಬ್ರಿಟನ್ನಿಗೆ ಜರ್ಮನಿಯ ಬಾಂಬುಗಳು ತಂದೊಡ್ಡಿದ ಹಾನಿಯು ಅಪಾರವಾಗಿದೆ. ಅನೇಕ ಪಟ್ಟಣಗಳು ಹಾಳಾಗಿವೆ. ವಾಸಮಾಡಿಕೊಂಡಿರಲಿಕ್ಕೆ ಮನೆಗಳಿಲ್ಲ. ಲಕ್ಷಾವಧಿ ಮನೆಗಳು ಬಿದ್ದುಹೋಗಿವೆಯಲ್ಲದೆ ಕೆಲವು ಕಟ್ಟಡಗಳನ್ನು ಕೆಡವಿ ಪುನಃ ಕಟ್ಟದ ಹೊರತಾಗಿ ಗತ್ಯಂತರವಿಲ್ಲದಂತಾಗಿದೆ. ಅವುಗಳಿಗೆ ಪ್ರತ್ಯೇಕ ಬಾಂಬಿನ ಹೊಡೆತ ಬೀಳದಿದ್ದರೂ ಬಲವಾದ ಧಕ್ಕೆ ತಗಲಿದ್ದುದರಿಂದ, ಅವುಗಳ ತಳಹದಿಗಳು ಸಡಿಲಾಗಿವೆ. ಅನೇಕ ಕಾರಖಾನೆಗಳು ಧ್ವಂಸಮಾಡಲ್ಪಟ್ಟಿವೆ. ಇವುಗಳನ್ನು ಸರಿಪಡಿಸಿಕೊಳ್ಳಲು ಬಹಳ ಹಣ ವೆಚ್ಚಮಾಡಬೇಕು. ಕಳೆದ ೪–೫ ವರ್ಷಗಳಲ್ಲಿ ಬ್ರಿಟಿಶರಿಗೆ ಪರದೇಶಗಳಲ್ಲಿ ಕಾಲಿಡಲು ಶಕ್ಯವಿದ್ದಿಲ್ಲ. ಯುದ್ಧ ಸಾಮಗ್ರಿಯನ್ನು ಪೂರಯಿಸುವದರಲ್ಲಿ ಅವರ ಉತ್ಪಾದಕ ಬಲವೆಲ್ಲ ಖರ್ಚಾಗುತ್ತಿತ್ತು. ಆದರೆ ಕಳೆದ ನೂರು ವರ್ಷಗಳಲ್ಲಿ

ಯುದ್ಧಕ್ಕೆ ಸಂಬಂಧವಿಲ್ಲದ (Non-Military) ಸರಕುಗಳನ್ನು ಅಮೇರಿಕೆಯು ಮೊದಲಿಗಿಂತ ಹೆಚ್ಚುಪ್ರಮಾಣದಿಂದ ಕಳಿಸಿದೆ. ಹಿಂದುಸ್ಥಾನಕ್ಕೆ ಅಮೇರಿಕೆಯಿಂದ ಬರುವ ಸರಕುಗಳು ಕಳೆದ ಮೂರುವರ್ಷಗಳಲ್ಲಿ ಹತ್ತು ಪಟ್ಟು ಹೆಚ್ಚಾಗಿವೆ. ಇವು ಸೈನ್ಯಕ್ಕೆ ಬೇಕಾದ ಸರಕುಗಳಲ್ಲ. ಹೀಗಾಗಲಿಕ್ಕೆ ಮುಖ್ಯ ಕಾರಣಗಳು ಎರಡು: ಜರ್ಮನರು ಹಗಲಿರುಳೂ ಎಡೆಬಿಡದೆ ನಡೆಯಿಸಿದ ಬಾಂಬುಹಲ್ಲೆಗಳು ಮತ್ತು ಬ್ರಿಟನ್ನಿನಲ್ಲಿಯ ಸಾಧನ ಸಾಮಗ್ರಿಯ ಅಭಾವ. ಹೊರಗಿನಿಂದಲೆ ಎಲ್ಲ ಸಾಧನ ಸಾಮಗ್ರಿ ಬ್ರಿಟನ್ನಿಗೆ ಬಂದ ಹೊರತು ಬ್ರಿಟನ್ನಿನ ಕಾರಖಾನೆಗಳು ನಡೆಯುವಂತಿಲ್ಲ. ಯುದ್ಧ ಮುಗಿದ ಬಳಿಕ ಕೂಡ ಈ ಅನನುಕೂಲತೆಯು ಬ್ರಿಟನ್ನಿಗೆ ಇದ್ದೇ ಇದೆ.

ಯುದ್ಧದ ಮೊದಲು ಬ್ರಿಟನ್ನಿಗೆ ಪರದೇಶಗಳಲ್ಲಿ ಅವರು ಬಿತ್ತಿದ ಬಂಡವಲದ ಬಡ್ಡಿ, ಡಿವ್ಹಿಡೆಂಡ್ ಮೊದಲಾದುವುಗಳು ಬರುತ್ತಿದ್ದುವು. ಈ ಹಣದಿಂದ ಅವರು, ಪರದೇಶಗಳಿಂದ ತಮಗೆ ಬೇಕಾದ ಸರಕುಗಳನ್ನು ಕೊಳ್ಳುತ್ತಿದ್ದರು. ಬ್ರಿಟನಿನ ಆಯಾತ ನಿರ್ಯಾತದ ಅಂಕೆಗಳನ್ನು ನಿರೀಕ್ಷಿಸಿದರೆ, ಆಯಾತವೆ ಹೆಚ್ಚಿದೆಯೆಂದು ಕಾಣುತ್ತದೆ. ಆದರೆ ಅದು ನಿಜವಾದ ವಸ್ತುಸ್ಥಿತಿ ಪ್ರದರ್ಶಕವಲ್ಲ. ಯುದ್ಧ ಪ್ರಾರಂಭವಾದ ನಂತರ, ಪರದೇಶಗಳಲ್ಲಿಯ ಬ್ರಿಟನಿನ ಬಂಡವಾಳವು ಅರ್ಧದಷ್ಟು ಈಗಾಗಲೆ ಕರಗಿ ಹೋಗಿದೆ. ಯುದ್ಧ ಇನ್ನೂ ಮುಗಿದಿಲ್ಲ. ಕೂಡಲೆ ಮುಗಿಯುವ ಭರವಸೆಯೂ ಇಲ್ಲ. ಮತ್ತು ನೆಚ್ಚಿನಾದ ಹಣದ ಲೆಕ್ಕಾಚಾರ ಆಗತಕ್ಕದ್ದಿದೆ. ಹಿಂದುಸ್ಥಾನಕ್ಕೆ ೧೫೦೦ಕೋಟಿ ರೂಪಾಯಿಗಳನ್ನು ಬ್ರಿಟನು ಕೊಡಬೇಕಾಗುತ್ತದೆ. "Enport or-die=" ನಿರ್ಯಾತವನ್ನು ಬೆಳೆಸಿರಿ ಇಲ್ಲವೆ ಮಡಿಯಿರಿ" ಎಂಬ ಕೂಗು ಬ್ರಿಟನಿನಲ್ಲಿ ಎದ್ದಿದೆ. ಯುದ್ಧದ ಮೊದಲಿಗಿಂತ ಯುದ್ಧದ ನಂತರ ಬ್ರಿಟನಿನ ನಿರ್ಗತವನ್ನು ೧೦೦ಕ್ಕೆ ೫೦ರಂತೆ ಹೆಚ್ಚಿಸಬೇಕೆಂದು ಅರ್ಥಸಚಿವರ ಅಭಿಪ್ರಾಯ. ಎಂದರೆ ಬ್ರಿಟನಿಗೆ ಯುದ್ಧದನಂತರ ಹೆಚ್ಚು ಪೇಟೆಗಳಿರಬೇಕು. ಅನೇಕ ದೇಶಗಳಲ್ಲಿ ಯುದ್ಧಸಾಮಗ್ರಿಯನ್ನು ತಯಾರಿಸಲು ಕಾರಖಾನೆಗಳು ಹೊರಟಿವೆ. ಗುಂಡು-ಮದ್ದುಗಳವೆ. ಯುದ್ಧಸಾಮಗ್ರಿಗಳು, ಹಡಗುಗಳು, ವಿಮಾನಗಳು, ಬಟ್ಟೆ, ಬೂಟು, ಸಿಮೆಂಟು ಮೊದಲಾದ ಅನೇಕ ಸರಕುಗಳು ಯುದ್ಧಸಾಮಗ್ರಿಗಳಲ್ಲಿ ಸಮಾವೇಶವಾಗುತ್ತವೆ. ಇವುಗಳ ಉತ್ಪಾದನೆಯ ಕಾರಖಾನೆಗಳು ಬೆಳೆದಿವೆ- ಇದ್ದ ಕಾರಖಾನೆಗಳು ವಿಸ್ತಾರಗೊಂಡು, ಅವುಗಳ ಉತ್ಪಾದನೆ ಹೆಚ್ಚಾಗಿದೆ. ಅರ್ಥಾತ್ ಇಂತಹ ಸಾಮಾನುಗಳನ್ನು ಪರದೇಶಗಳಿಂದ ತರಿಸುವ ಅವಶ್ಯ ಉಳಿದಿಲ್ಲ. ಬಟ್ಟೆ, ಸಿಮೆಂಟು, ಸಕ್ಕರೆಯ ವಿಚಾರದಲ್ಲಿ ಹಿಂದುಸ್ಥಾನವು ಸ್ವಾವಲಂಬಿಯಾಗಿದೆ. ಹೀಗೆ ಬೇರೆ ಬೇರೆ ಸರಕುಗಳ ಅಂಕೆಗಳನ್ನೂ ಬೇರೆ ಬೇರೆ ಉದ್ಯೋಗಗಳ ಪರಿಸ್ಥಿತಿಯನ್ನೂ ಪರಿಶೀಲಿಸಿದರೆ, ಪ್ರಪಂಚದ ಪೇಟೆಗಳು ಯಾವ ಪವಣಿನಲ್ಲಿ ಬೀಳುತ್ತವೆಯೆಂಬುದನ್ನು ಹೇಳುವುದು ಕಠಿನವಾಗುತ್ತದೆ

ಅಮೇರಿಕೆಯ ಕಾರಖಾನೆಗಳು ಈಗಿನಂತೆ ನಡೆದರೆ (ಮತ್ತು ಹಾಗೆ ನಡೆಯಲೇಬೇಕೆಂದು ಅಮೇರಿಕನ್ ತಜ್ಞರ ಮತ) ಅಮೇರಿಕನರಿಗೆ ಯುದ್ಧದನಂತರ ಸದ್ಯಕ್ಕಿಂತ ಇಮ್ಮಡಿ ಮಾಲು ಪರದೇಶಗಳಿಗೆ ಕಳಿಸಲೇ ಬೇಕಾಗುತ್ತದೆ. ಇಲ್ಲದಿದ್ದರೆ ಅವರ ಕೆಲಸಗಾರರು ಕೆಲಸಗೇಡಿಗಳಾಗುವರು. ಈಗ ಯುದ್ಧದಲ್ಲಿ ತೊಡಗಿದವರು ರಣಕ್ಷೇತ್ರಗಳಿಂದ ತಿರುಗಿ ಬಂದ ಬಳಿಕ ಅವರಿಗೆ ಕೆಲಸ ಕೊಡಬೇಕಲ್ಲವೆ? ಈ ಪ್ರಶ್ನೆ ಎಲ್ಲ ಯುದ್ಧಮಾನ ರಾಷ್ಟ್ರಗಳನ್ನು ವಿಚಾರಕ್ಕೆ ಹಚ್ಚಿದೆ. ಹಿಂದುಸ್ಥಾನದಲ್ಲಿ ಕೂಡ ೧೦-೧೨ಲಕ್ಷ ಜನರನ್ನು ಉದ್ಯೋಗಗಳಲ್ಲಿ ತೊಡಗಿಸಬೇಕಾಗಿದೆ. ಅವರೆಲ್ಲರನ್ನೂ ಒಕ್ಕಲತನದಲ್ಲಿ ನೂಕಲಿಕ್ಕಾಗುವುದಿಲ್ಲ. ಹೊಸ ಕಾರಖಾನೆಗಳನ್ನು ಅವರಿಗಾಗಿ ನಿರ್ಮಿಸಲಿಕ್ಕೇ ಬೇಕು. ಎಂದರೆ ದೇಶದ ಉತ್ಪಾದಕಬಲ ಬೆಳೆಯಬೇಕು. ಅದು ಬೆಳೆದಂತೆ ಪರದೇಶದ ಆಯಾತಕ್ಕೆ ಧಕ್ಕೆ ತಗಲುತ್ತ ಹೋಗುತ್ತದೆ. ಪ್ರಪಂಚದ ಪೇಟೆಗಳನ್ನೆಲ್ಲ ಬ್ರಿಟನ್ ಅಮೇರಿಕೆಗಳಿರಡಕೆ ಮೀಸಲಾಗಿ ಇಟ್ಟರೂ ಅವರಲ್ಲಿ ಸ್ಪರ್ಧೆ ತಪ್ಪದು; ಮತ್ತು ಜರ್ಮನ್-ಜಪಾನುಗಳು ಮಾಡಿದ ಹಾನಿಯನ್ನು ತುಂಬಿಕೊಡುವ ಕರಾರು ಆದರೆ ಹಾಗೂ ಕಪ್ಪ-ಕಾಣಿಕೆಗಳನ್ನು ಕೊಡುವುದಾದರೆ ಅವರು ನಗದು ಹಣ ಕೊಡುವುದು ಅಥವಾ ಬಂಗಾರ-ಬೆಳ್ಳಿ ಕೊಟ್ಟಾರೆಂದು ಹೇಳಲಿಕ್ಕಾಗುವುದಿಲ್ಲ. ಕೊಡುವುದು ಶಕ್ಯವಿಲ್ಲ. ಹಿಂದಿನ ಯುದ್ಧವಾದ ಬಳಿಕ ಆದ ಒಪ್ಪಂದದ ಕರಾರುಗಳು ಕಾಣಿಸಿದಂತೆ ಮೈಲುದ್ದ ಅಂಕೆಗಳನ್ನು ಹಾಕಿ ಜನತೆಯನ್ನು ಮೋಸಗೊಳಿಸಬಾರದು ಮತ್ತು ಆತ್ಮವಂಚನೆ ಮಾಡಿಕೊಳ್ಳಬಾರದೆಂದು ರಶಿಯಾ ಹೇಳಿದೆ. ಜರ್ಮನಿ, ಜಪಾನುಗಳು, ಕೊಡಬೇಕಾದ ಹಣವನ್ನು ಸರಕುಗಳನ್ನು ಕಟ್ಟೇ ಮುಟ್ಟಿಸುವವು. ಅವುಗಳ ಕಾರಖಾನೆಗಳಿಗೆ ಗಿರಣಿಗಳಿಗೆ ಬೀಗ ಹಾಕಿದ ಹೊರತು ಬ್ರಿಟನ್-ಅಮೇರಿಕೆಗಳಿರವರಲ್ಲಿಯೆ ಪ್ರಪಂಚದ ಪೇಟೆಗಳ ಹಂಚಿಕೆ ಹೇಗಾಗಬೇಕು?

ಡೋಂಗರೆ ಬಾಲಾಮೃತ
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

ಅಮೇರಿಕೆಗೆ ಅನೇಕ ತರದ ಅನುಕೂಲತೆಗಳಿವೆ. ದಕ್ಷಿಣ ಅಮೇರಿಕೆಯ ಉದ್ಯೋಗ ವ್ಯಾಪಾರಗಳು ಅಮೇರಿಕೆಯ ಹೇಳಿಕೆಯಂತೆ ಸಾಗುವುವು. ಅಮೇರಿಕೆಯ ಬಲವು ಬೆಳೆಯುತ್ತಿದೆ ಬ್ರಿಟನ್ನಿನ ಬಲವು ಇಳಿಯುತ್ತಿದೆಯೆಂಬುದು ಎಲ್ಲರಿಗೆ ಗೊತ್ತಾದ ಸಂಗತಿ. **ಅರ್‌ಗೆಂಟಿನಾದ** ಗೋದಿಯ **ಬ್ರೆಝಿಲ್ಲಿನ** ಕಾಫಿಯ ವ್ಯಾಪಾರ ಕೂಡ ಅಮೇರಿಕನ್ ಕೋಟ್ಯಧೀಶರ ಸ್ವಾಧೀನಕ್ಕೆ ಹೋಗಬಹುದು. ದಕ್ಷಿಣ ಅಮೇರಿಕೆಯ ಪೇಟೆಯೂ ಯುರೋಪಿಯನರಿಗೆ ದೊರೆಯುವ ಸಂಭವವಿಲ್ಲ. ಯುರೋಪು ಬಹಳ ದೂರ. ಯುರೋಪು ಯುದ್ಧದಿಂದ ಹಣ್ಣಾಗಿದೆ. ದಕ್ಷಿಣ-ಉತ್ತರ-ಅಮೇರಿಕೆಗಳಿಗೆ ಯುರೋಪದ ಪೇಟೆಗಳೂ ಬೇಕಾಗಿವೆ. ಪ್ಯಾಸಿಫಿಕ್ ಮಹಾಸಾಗರದಲ್ಲಿಯ ಭೂಪ್ರದೇಶವನ್ನು ಅಮೇರಿಕನರು ಯಾರಿಗೂ ಬಿಟ್ಟುಕೊಡರು. ಅವರ ಸುರಕ್ಷತೆಗಾಗಿ ಅವುಗಳು ತಮ್ಮ ಆಳುಕಿನಲ್ಲಿರಲೇಬೇಕೆಂದು ಅವರ ಮನೀಷೆ. ಚೀನವು ತನ್ನ ಕಾಲ ಮೇಲೆ ತಾನು ನಿಲ್ಲಲು ಸಿದ್ಧವಾಗಿದ್ದರೂ, ಅಲ್ಲಿ ಯುರೋಪಿಯನರಿಗೆ ಕಾಲೂರಿ ನಿಲ್ಲಲು ಸ್ಥಳ ದೊರೆಯುವುದಿಲ್ಲ. ಚೀನಕ್ಕೆ ಬೇಕಾದ ಯಂತ್ರಸಾಮುಗ್ರಿಯನ್ನು ಪೂರಯಿಸಲು ಅಮೇರಿಕೆಯಷ್ಟು ಅನುಕೂಲತೆಗಳು ಬ್ರಿಟನ್ನಿಗೆ ಇಲ್ಲ. ಅಮೇರಿಕೆಯಲ್ಲಿ ವಿಪುಲ ಬಂಡವಾಳವಿರುವುದರಿಂದ, ಚೀನದಲ್ಲಿಯ ಉದ್ಯೋಗಗಳಿಗೆ ಬೇಕಾದ ಬಂಡವಾಳವನ್ನು ಅಮೇರಿಕೆಯು ಸಹಜವಾಗಿ ಪೂರಯಿಸಿ, ಚೀನದಲ್ಲಿ ಸಿದ್ಧವಾಗುವ ಒಡವೆಗಳಿಗೆ ಬೇಕಾದ ಯಂತ್ರಸಾಮುಗ್ರಿಯನ್ನು ತಮ್ಮ ಕಡೆಯಿಂದಲೇ ಕೊಳ್ಳಬೇಕೆಂಬ ಕರಾರು ಮಾಡಿಕೊಳ್ಳಬಹುದು. ಹತಾಶ ಜರ್ಮನಿ, ಬಲವಿಲ್ಲದ ಬ್ರಿಟನ್, ಕಳೆಗುಂದಿದ ಜಪಾನುಗಳಿಗೆ—ಚೀನದಲ್ಲಿ ಅಮೇರಿಕೆಗೆ ದೊರೆಯುವ ಆಸ್ಪದ— ಕೆಲವು ಕಾಲ ದೊರೆಯದು. ಚೀನವು ಮನೆಮುರುಕತನಕ್ಕೆ ಶರಣೆಂದು ಒಕ್ಕಟ್ಟಿನಿಂದ ತಮ್ಮ ದೇಶದ ಆರ್ಥಿಕ ಹಾಗೂ ಔದ್ಯೋಗಿಕ ಉನ್ನತಿಮಾಡಿಕೊಂಡಿದೆ. yallow danger ದ ಬಾಧೆ ಬಹು ಜನಾಂಗಗಳಿಗೆ ಬಡಿಯದೆ ಇರದು. ಚೀನೀ ಜನರು ಬಹಳ ಉದ್ಯೋಗಿಗಳು. ತೀರ ಅಲ್ಪ ವೆಚ್ಚದಿಂದ ಜೀವಿಸಬಲ್ಲರು. ಭೂಪೃಷ್ಠದ ಎಲ್ಲ ಭಾಗಗಳಲ್ಲಿ ಎಲ್ಲರಿಗಿಂತ ಕಡಿಮೆ ಕೂಲಿ ತಕ್ಕೊಂಡು ಎಲ್ಲರಿಗಿಂತ ಹೆಚ್ಚು ಕೆಲಸ ಮಾಡುವವರೆಂದು ಅವರ ಕೀರ್ತಿ ಇದೆ.

ಹೀಗಿದ್ದರೂ ಬ್ರಿಟಿಶರಿಗೆ ಸಾಮ್ರಾಜ್ಯದ ದುರಭಿಮಾನ ತಪ್ಪಿಲ್ಲ. ವರ್ಣದ್ವೇಷವು ಅಳಿದಿಲ್ಲ. ಆಫ್ರಿಕಾದಲ್ಲಿಯ ಮೂಲ ನಿವಾಸಿಗಳಿಗೆ ಪ್ರಜಾಪ್ರಭುತ್ವದ ಪಾಠ ಕಲಿಸುವ ಕೆಲಸವು ಇನ್ನೂ ಎಷ್ಟು ಶತಮಾನಗಳ ವರೆಗೆ ಸಾಗುವುದೋ ತಿಳಿಯದು. ಅಲ್ಲಿಯ ಹತ್ತಿ, ಕೋಕೋ, ಕೊಬ್ಬರಿ ಮೊದಲಾದುವುಗಳನ್ನು ತೀರ ಅಗ್ಗದ ಧಾರಣೆಯಿಂದ ಕೊಂಡುಕೊಂಡು, ಬಟ್ಟೆ, ಸಕ್ಕರೆ ಮೊದಲಾದುವುಗಳನ್ನು ಹೆಚ್ಚಿನ ಬೆಲೆಗೆ ಮಾರುವ ವ್ಯಾಪಾರವು ಅವ್ಯಾಹತ ನಡೆದಿದೆ. ಆಫ್ರಿಕದ ಪೇಟೆಗಳು ಯುರೋಪಿಯನರಿಗಾಗಿ ಕೊಟ್ಟುವಾಗಿದ್ದುವು. ಜರ್ಮನ್, ಫ್ರೆಂಚ್ ಬ್ರಿಟಿಶ್, ಪೋರ್ತುಗಾಲದಂತಹ ಸಣ್ಣ ಬಲಹೀನ ರಾಜ್ಯ ಸಹ— ಆಫ್ರಿಕದಲ್ಲಿಯ ಜನಾಂಗಗಳನ್ನು ಆಳುವ ನಿಸರ್ಗಸಿದ್ಧವಾದ ಹಕ್ಕು ಹೇಳುತ್ತಿವೆ. ‘ ಯುರೋಪಿಯರು ಉಷ್ಣಕಟಿಬಂಧದ ಭೂಭಾಗದಲ್ಲಿ ಬಳಲುತ್ತಿರುವುದು ಅಲ್ಲಿಯ ಜನರ ಸುಧಾರಣೆಗಾಗಿ, ಅವರ ಉದ್ಧಾರಕ್ಕಾಗಿ! ’ ಎಂದು ಬೇರೆ ಹೇಳಬೇಕಾಗಿಲ್ಲ! ಆಫ್ರಿಕಾದ ಕಪ್ಪು ಜನಾಂಗ-

೬. ಒಡನಾಡಿ

‘ ಆನಂದಕಂದ ’ರ ಹೊಸ ಕವನಸಂಗ್ರಹ

ಇದೀಗ ಅಚ್ಚಾಗಿ ಬೆಳಕಿಗೆ ಬಂದಿದೆ!

“ ಮುಂಬರಯದ ಮುಗ್ಧಪ್ರಣಯದ ಆತುರ-ಕಾತರಗಳನ್ನೂ, ನಿರುವರಯದ ಕಾಮಪ್ರಣಯದ ರತಿ-ಹಾಸವಿಲಾಸಗಳನ್ನೂ, ತುಂಬುವರಯದ ಅನುಭವಪ್ರಣಯದ ಸುಖ-ದುಃಖಗಳ ಉಯ್ಯಾಲೆಯಾಟವನ್ನೂ, ಇಳಿವರಯದ ಪರಿಪಕ್ವಪ್ರಣಯದ ತತ್ತ್ವಜ್ಞತೆಯನ್ನೂ ಇಲ್ಲಿಯ ಕೃತಿಗಳಲ್ಲಿ ನೋಡಬಹುದು ! ”

ಹೊಸಕವನಗಳನ್ನು ವಿವಿಧರಾಗಗಳಲ್ಲಿ ಹಾಡಿಕೊಳ್ಳಬೇಕೆಂದು ಬಯಸುವವರು, ಅವಶ್ಯವಾಗಿ ಈ ಕವನ ಸಂಗ್ರಹದ ಸಹಕಾರ ಪಡೆಯಬೇಕು.

‘ ಬಾಳಿದು ಕನಸಲ್ಲ ’ ‘ ಬಂತು ಬಂತು ವಸಾಗಿ! ’ ‘ ಜಯ ಜಯ ಫಾಲ್ಗುನ ! ’ ‘ ಹಚ್ಚs ದೀಪಾ ನಲ್ಲೆ ! ’ ಮೊದಲಾದ ಜನಪ್ರಿಯ ಭಾವಗೀತಗಳು ಇದರಲ್ಲಿ ಸಂಗ್ರಹಗೊಂಡಿವೆ.

ಅಂದವಾದ ಮುದ್ರಣ, ಸುಂದರವಾದ ಕಟ್ಟು!

ಬೆಲೆ ಒಂದು ರೂಪಾಯಿ

ಬೇಕಾದವರು ಜಯಂತಿ ಕಾರ್ಯಾಲಯಕ್ಕೆ ಬರೆಯಿರಿ !

ವನ್ನು ಶತಮಾನಗಳ ವರೆಗೆ ದಾಸ್ಯದಲ್ಲಿಟ್ಟ ಸುಧಾರಿಸಿದ ರಾಷ್ಟ್ರವಾದ ಅಮೇರಿಕೆಯು, ಯುರೋಪಿಯನರಿಗಿಂತ ಆಫ್ರಿಕಾದ ಸಂಬಂಧ ತನಗೆ ಹೆಚ್ಚಿದೆ.... ಅಲ್ಲಿಯ ವ್ಯಾಪಾರ ತಮ್ಮ ಸ್ವಾಧೀನದಲ್ಲಿರತಕ್ಕದ್ದು ನ್ಯಾಯವಾದದ್ದು—ಎಂದು ಪ್ರತಿಪಾದಿಸಹತ್ತಿದೆ. ಉತ್ತರ ಆಫ್ರಿಕೆಯಲ್ಲಿ ಇಜಿಪ್ಸಿಯನ್ನರು ‘ ತಮ್ಮ ಉತ್ತಮವಾದ ಹತ್ತಿಯ ಲಾಭ ತಮಗೇ ಉಳಿಯಬೇಕು, ಅದನ್ನು ಪರಕೀಯರ ವಶದಲ್ಲಿ ಹಿಂದೆ ಹಾಕಿದ್ದು ಸಾಕು, ಮುಂದೆ ಹಾಗೆ ಮಾಡುವುದು ಯುಕ್ತವಲ್ಲ, ’ ಎಂದು ತಿಳಿಯಹತ್ತಿದ್ದಾರೆ. ಭಾರತೀಯರು ಕೂಡ ಯುಗಾಂಡಾ (Uganda) ಮೊದಲಾದ ಆಫ್ರಿಕದ ಭಾಗಗಳಲ್ಲಿ ಅಲ್ಪ ಸ್ವಲ್ಪ ಪ್ರಮಾಣದಿಂದ ವಸಾಹತು ಮಾಡಿಕೊಂಡು, ತಮ್ಮ ವ್ಯಾಪಾರ ಬೆಳೆಯಿಸಹತ್ತಿದ್ದಾರೆ. ಅಲ್ಲಿ ಭಾರತೀಯರ ಜಿನ್ನು-ಪ್ರೆಸ್ಸುಗಳಿವೆ. ತಟ್ಟು ಬಟ್ಟೆ, ಮೊದಲಾದವುಗಳು ಆಫ್ರಿಕಾಕ್ಕೆ ಹೋಗುತ್ತವೆ. ಅರಿಸಿಣ, ಕೊಬ್ಬರಿ, ಮೊದಲಾದವುಗಳು ಹಿಂದುಸ್ಥಾನಕ್ಕೆ ಬರುತ್ತವೆ. ಆದರೆ ಯಾವ ದೊಡ್ಡ ವ್ಯಾಪಾರವೂ ಭಾರತೀಯರ ಕೈಯಲ್ಲಿ ಇರಬಾರದೆಂದು ಯುರೋಪಿಯನರ ಯತ್ನ; ಆದರೂ ಗುಜರಾಥದ ಜನರು ಆಫ್ರಿಕೆಯಲ್ಲಿ ಸ್ಥಳಿಕರಾಗಿ ನಿಂತುಕೊಂಡು, ಯುರೋಪಿಯನರ ಕೂಡ ನಡೆಯಿಸಿದ ವ್ಯಾಪಾರದ ಸ್ಪರ್ಧೆಯಲ್ಲಿ ಹಿಂದೆ ಬಿದ್ದಿಲ್ಲ. ಅಬಿಸೀನಿಯಾದಲ್ಲಿ ‘ ಹರಹರ ’ ಎಂಬ ಪಟ್ಟಣವಿದೆ. ಅಲ್ಲಿ ದೊಡ್ಡ ಸ್ಟೋರ್ ಇಟ್ಟು ವ್ಯಾಪಾರ ಮಾಡಿದ ಮುಂಬಯಿ-

ಯಲ್ಲಿಯ ವರ್ತಕರು, ಮುಂಬಯಿಯಲ್ಲಿ ತಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸುವುದಕ್ಕಾಗಿ Harar Building ಕಟ್ಟಿದ್ದಾರೆ. ಕಳೆದ ಮಹಾಯುದ್ಧದ ನಂತರ ಆಫ್ರಿಕೆಯ ಪೇಟೆಗಳಲ್ಲಿ ಜಪಾನದ ಸರಕುಗಳು ಪ್ರವೇಶಿಸಿದುವು. ಅವುಗಳನ್ನು ದೂಡಿಹಾಕುವುದು ಯುರೋಪಿಯನರಿಗಾಗಲಿಲ್ಲ. ಇದಲ್ಲದೆ ಆಫ್ರಿಕೆಯ ಜನಾಂಗಗಳಲ್ಲಿ ಸಹ ಅಲ್ಪ-ಸ್ವಲ್ಪ ಜಾಗ್ರತಿಯಾಗಹತ್ತಿದೆ. ಹಿಂದಿನ ಯುದ್ಧವಾದ ಬಳಿಕ ಕುಶಾಗ್ರ-ಬುದ್ಧಿಯ ಜರ್ಮನ್ ಶಾಸ್ತ್ರಜ್ಞರು ಉದ್ಯೋಗಗಳಲ್ಲಿ ಹಿಂದುಳಿದ ದೇಶಗಳಿಗೆ ಹೋಗಿ, ಅಲ್ಲಿ ಉದ್ಯೋಗಗಳನ್ನು ಸ್ಥಾಪಿಸಲು ಸೂಚನೆ-ಸಲಹೆಗಳನ್ನು ಕೊಟ್ಟರು. ಜರ್ಮನಿಯಲ್ಲಿ ಅವರಿಗೆ ಸ್ಥಳ ದೊರೆಯ-ದಿದ್ದರೆ ಅವರು ಆಫ್ರಿಕೆಯನ್ನು ನುಗ್ಗದೆ ಬಿಡರು. ಇರಾಣ, ಅಫಗಾಣಿಸ್ಥಾನ, ತುರ್ಕಸ್ಥಾನಗಳಲ್ಲಿ ಉದ್ಯೋಗಸ್ಥರು ಅವರ ಕುಶಲತೆಯನ್ನು ಅರಿತುಕೊಂಡಿದ್ದಾರೆ.

ಪರಿಸ್ಥಿತಿ ಬದಲಾಯಿಸಿದಂತೆ ಬ್ರಿಟಿಶ್ ಬಂಡವಳಗಾರರ ವಿಚಾರದಲ್ಲಿ ಬದಲಾವಣೆಗಳಾಗಿವೆ. ಕಪ್ಪು ಜನರು ಕಚ್ಚಾ ಮಾಲು ತಯಾರಿಸುವ ಆಚೆಗೆ ಹೋಗಬಾರದು. ಹತ್ತಿ ಬೆಳೆಯಬೇಕು, ಬಟ್ಟೆಗಾಗಿ ನೂಲಿಗಾಗಿ ಅದನ್ನು ಯುರೋಪೀಯ ದೇಶಗಳಿಗೆ ಕಳಿಸಬೇಕು. ಸೇಂಗಾ, ಅಗಸಿ ಮೊದಲಾದ ಎಣ್ಣೆಕಾಳುಗಳನ್ನು ಯುರೋಪಕ್ಕೆ ರಫ್ತು ಮಾಡಬೇಕು. ಅದರಿಂದ ತಯಾರಾದ ಬೇರೆ ಬೇರೆ ತರದ ಸಾಮಾನುಗಳನ್ನು ಕೊಳ್ಳ-ಬೇಕು.... ಎಂಬ ಹಿಂದಿನ ವಿಚಾರ ಅಡಗಿದೆ. ಈಗ ಪೌರ್ವಾತ್ಯ ರಾಷ್ಟ್ರಗಳ ಬಂಡವಳಗಾರರನ್ನು ಕೂಡಿಸಿಕೊಂಡು ಆ ದೇಶದಲ್ಲಿ ಉದ್ಯೋಗಗಳನ್ನು ತೆಗೆಯುವ ವಿಚಾರ ನಡೆದಿದೆ. ಪೌರ್ವಾತ್ಯ ರಾಷ್ಟ್ರಗಳಲ್ಲಿ ಸಾಧನಸಾಮುಗ್ರಿ ಸಮೀಪದಲ್ಲಿ ದೊರೆಯುತ್ತದೆ. ಪೇಟೆ ಕಾರಖಾನೆಯ ಬಾಗಿಲಲ್ಲಿ, ಕೂಲಿಯ ದರ ಕಡಿಮೆ, ಬಿಳಿಯ ಕೂಲಿಕಾರರಂತೆ ಹೆಚ್ಚಿನ ಸವಲತ್ತುಗಳನ್ನು ಕಪ್ಪುಕೂಲಿಕಾರರು ಬೇಡುವುದಿಲ್ಲ ಮತ್ತು ಸ್ಥಾನಿಕ ಬಂಡವಾಳಗಾರರಿಗೆ ಒಂದು ತುಣುಕು ಕೊಟ್ಟರೆ ಅವರ ಬಾಯಿಗೆ ಬೀಗ ಹಾಕಿದಂತಾಗುತ್ತದೆ.... ಎಂಬ ವಿಚಾರ ತಲೆದೋರ-ಹತ್ತಿದೆ. ಆದರೆ ಪರಕೀಯ ಬಂಡವಾಳ ಬೇಡ, ಅವರು ನಮಗೆ ಬಂಡವಾಳ ಕೊಡುವುದಾದರೆ ನಮ್ಮ ಕರಾರುಗಳಿಗನುಸರಿಸಿ ಕೊಡಲಿ! ಕಾರಖಾನೆಗಳ ಒಡೆತನ ಅವುಗಳ ಚಾಲಕತ್ವ ನಮ್ಮದಿರಬೇಕು, ನಮ್ಮ ಪೇಟೆಗಳು ನಮ್ಮ ಸ್ವಾಧೀನದಲ್ಲಿರಬೇಕು— ಎಂದು ಭಾರತೀಯರ ಅಭಿಪ್ರಾಯ.

ಎಲ್ಲಕ್ಕೂ ಮಹತ್ವ್ವದ ಪ್ರಶ್ನೆ ಎಂದರೆ, ಬಿಳಿಯ ಜನರ ಕಾರಖಾನೆಗಳ ಸರಕುಗಳಿಗೆ ಚಿರವಾಗಿ ಗಿರಾಕಿಗಳಾಗಿ ಉಳಿಯುವ ಕಪ್ಪು ಹಾಗು ಪೀತವರ್ಣದ ಜನಾಂಗಗಳಲ್ಲಿ, ಆ ಸರಕುಗಳನ್ನು ಕೊಳ್ಳುವ ಆರ್ಥಿಕ ಬಲವಿರಬೇಕಲ್ಲವೆ? ಅವರ ಜೀವನದ ಮಟ್ಟವು (Standard of living) ಬೆಳೆಯಬೇಕು ಎಂದು ಹೇಳುವುದರಲ್ಲಿ ಬರುತ್ತದೆ. ಪಾಶ್ಚಾತ್ಯರ ಆರ್ಥಿಕ ಸತ್ವ್ಯದರಣವು ನಿಂತರೆ ಅವರ ಸ್ಥಿತಿ ಸುಧಾರಿಸೀತು. ಒಂದು ಉದಾಹರಣೆಯನ್ನು ತೆಕ್ಕೊಳ್ಳುವಾ. ಬಟ್ಟೆಗಳಿಗೆ ಬೇಕಾದ ಸಾಬಾಣ, ಮೈಗೆ ಹಚ್ಚಿಕೊಳ್ಳುವ ಸಾಬಾಣಗಳಿಗೆ ಗಿರಾಕಿ ಹೆಚ್ಚಾಗಬೇಕಾಗಿದೆಯನ್ನಿ. ಹೊಟ್ಟೆತುಂಬ ಅನ್ನ, ಮೈತುಂಬ ಬಟ್ಟೆಗಳನ್ನು ದೊರಕಿಸುವ ಸಾಮರ್ಥ್ಯವೇ ಅವರಲ್ಲಿರದಿದ್ದರೆ ಅವರು ಸಾಬಾಣದ ಗೊಡವೆಗೆ ಏಕೆ ಹೋದಾರು ? ಸಾಬಾಣ ಕೊಳ್ಳಲು ಸಮರ್ಥರಿದ್ದವರಿಗೆ ದೇಶದಲ್ಲಿಯೆ ತಯಾರಾದ ಸಾಬಾಣಗಳ ಪುರಯಿಕೆಯಾದರೆ, ಅವರ ಆರ್ಥಿಕ ಬಲ ಬೆಳೆದರೂ ಅದರ ಉಪಯೋಗ ಸ್ವಕೀಯರಿಗಾಗುವುದೇ ಹೊರತು ಪರಕೀಯರಿಗಾಗುವುದಿಲ್ಲ.' ಹಿಂದುಸ್ಥಾನದಲ್ಲಿ ಸ್ವದೇಶೀ ಸಾಬಾಣಗಳ ಹೆಚ್ಚು ಖರ್ಚಾಗಹತ್ತಿದೆ. ಸಾಬಾಣದಿಂದ ಪರದೇಶಗಳಿಗೆ ಹೋಗುವ ಹಣ ದೇಶದಲ್ಲಿ ಉಳಿಯಲಿಕ್ಕೆ ಹತ್ತಿದ್ದರಿಂದ, ಅದರ ಉಪಯೋಗ ಬೇರೆ ಉದ್ಯೋಗಗಳನ್ನು ತೆಗೆಯುವುದಕ್ಕಾಗಿ ಆಗಹತ್ತಿದೆ. ಸ್ವದೇಶಿ ಭಾವನೆ ಬಲವಾಗಹತ್ತಿದ್ದರಿಂದ ಪರಕೀಯರು ಹಿಂದುಸ್ಥಾನದಲ್ಲಿ ಸಾಬಾಣದ ಕಾರಖಾನೆಯನ್ನು ಸ್ಥಾಪಿಸಿ " Made in India " ಎಂದು ತಮ್ಮ ಸಾಬಾಣ ಮಾರುತ್ತಿದ್ದಾರೆ. ಹೀಗಾದ್ದರಿಂದ ಸ್ವದೇಶಿ ಅಂದರೆ Indian Capital, Indian Management, Indian Labour ಇರಬೇಕೆಂದು ಹೇಳುವುದರಲ್ಲಿ ಬಂತು. ಸರ್ವನಾಶ-ವಾಗುವ ಕಾಲಕ್ಕೆ ಅರ್ಧ ತ್ಯಜಿಸುವುದು ಒಳ್ಳೆಯದೆಂಬ ವಿಚಾರಕ್ಕೆ ಪಾಶ್ಚಾತ್ಯರು ಬಂದಿದ್ದಾರೆ. ' ನಿಮಗೆ ನಿತ್ಯ ಉಪಯೋಗದ ಸರಕುಗಳು ಬೇಕಾದರೆ ಅವುಗಳನ್ನು ತಕ್ಕೊಳ್ಳಬೇಡಿ, ಆದರೆ ಅವುಗಳನ್ನು ತಯಾರಿಸುವ ಕಾರಖಾನೆಗಳಿಗೆ ಬೇಕಾದ ಯಂತ್ರಸಾಮುಗ್ರಿಗಳನ್ನು ನಮ್ಮ ಕಡೆಯಿಂದಲೇ ಕೊಳ್ಳಿರಿ ' ಎಂದು ಹೇಳಹತ್ತಿದ್ದಾರೆ. ' ಇಡಿ ಮೋಟಾರು ಕಟ್ಟಬೇಡಿ; ಅದರ ಭಾಗಗಳನ್ನು ನಮ್ಮ ಕಡೆಯಿಂದ ಕೊಂಡು ನಿಮ್ಮ ದೇಶದಲ್ಲಿ ಅವುಗಳನ್ನು ಹೊಂದಿಸಿ ಮೋಟಾರು ತಯಾರಿಸಿರಿ ! ' ಎಂದು ಉಪದೇಶ ಮಾಡುವುದರಲ್ಲಿ ಬರುತ್ತದೆ. ನಮ್ಮ ದೇಶದಲ್ಲಿ ಆಗತಕ್ಕ ಮೋಟಾರಿನ ಎಲ್ಲ ಭಾಗಗಳನ್ನೂ ನಾವು ಸಿದ್ಧಮಾಡುತ್ತೇವೆ, ಸದ್ಯಕ್ಕೆ ನಮ್ಮಿಂದ ಆಗದಂತಹವುಗಳನ್ನಷ್ಟೇ ಕೊಂಡುಕೊಳ್ಳುತ್ತೇವೆಂದು ಭಾರತೀಯರು ಹೇಳುತ್ತಿದ್ದಾರೆ. ಪಾಶ್ಚಾತ್ಯರ ಸ್ವಾಧೀನದಲ್ಲಿದ್ದ ಪೌರ್ವಾತ್ಯ ದೇಶದಲ್ಲಿಯ ಪೇಟೆಗಳಲ್ಲಿ ಈ ತರದ ಪರಿವರ್ತನೆಯಾಗ-ಹತ್ತಿದೆ.

ಮಹಾಯುದ್ಧದಲ್ಲಿ ಅನೇಕ ಪಟ್ಟಣಗಳು ನಾಶವಾದುವು, ಎಷ್ಟೋ ಲಕ್ಷ ಜನರು ಮನೆಮಾರು ಕಳಕೊಂಡರು, ಲಕ್ಷಾವಧಿ ಜನರು ಪ್ರಾಣಕ್ಕೆರವಾದರು. ಅಂಗವಿಹೀನರ ಸಂಖ್ಯೆಗೆ ಎಣೆಯಿಲ್ಲ. ಆದರೂ ಚಿತ್ತಶುದ್ಧಿಯಾಗಿಲ್ಲ, ಹೃದಯಪರಿವರ್ತನೆಯಾಗಿಲ್ಲ. ವ್ಯಾಪಾರದ ಅಹಮಹಮಿಕೆಯಿಂದ ಮುಂದೆ ಮುಂದೆ ಹೊರಡುವ ಸಿದ್ಧತೆಯೇ ನಡೆದಂತಿದೆ. ಹೆಚ್ಚು ಪೇಟೆಗಳು ತಮ್ಮ ಸ್ವಾಧೀನದಲ್ಲಿರುವುದಕ್ಕಾಗಿ ಯೋಗ್ಯ ನಡೆದಿದೆ. ಬ್ರಿಟಿಸಿಗೆ ಹೋದ ಯುದ್ಧದ ಮೊದಲು ಇದ್ದ ಸ್ಥಾನ ದೊರೆಯದು. ಈ ಯುದ್ಧದ ಮೊದಲು ಇದ್ದ ಅದರ ವರ್ಚಸ್ಸು ಅದಕ್ಕೆ ಇರದು. ಪ್ರಪಂಚದ ಪೇಟೆಗಳಲ್ಲಿ ಅಮೇರಿಕೆಗೇ ಅಗ್ರಸ್ಥಾನ ದೊರೆಯದೆ ಇರದು.

ನರೇಗಲ್ಲ (ರೋಣ) ದಲ್ಲಿ ನಮ್ಮ ಏಜಂಟರು

ಬಸೆಟ್ಟೆಪ್ಪ ಬಸಪ್ಪ ಜಕ್ಕಲಿ

ನ್ಯೂಜ್ ಏಜಂಟ.

ಆಕೆ ಯಾರು?

(ಸಣ್ಣ ಕತೆ)

ಶ್ರೀ. ಎಂ. ನರಸಿಂಹಮೂರ್ತಿ, ಗುಬ್ಬಿ

"ಯಾರ್ರೀ ಅವರು?"

"ಯಾರು?"

"ಆ ಹೆಂಗಸರು!"

"ಯಾವ ಹೆಂಗಸರೇ? ಸ್ಪಷ್ಟವಾಗಿ ಹೇಳಬಾರದೇ?"

"ಅವತ್ತು ರೈಲಿನಲ್ಲಿ..........."

"ಏನು ರೈಲಿನಲ್ಲಿ......." ಬಾಯಿ ಬಿಡು: ಅರ್ಧರ್ಧ ಮಾತಾಡೋದೆಲ್ಲಿ ಕಲಿತೇ! ಸಿಹಿಯಾಗಲಿ, ಕಹಿಯಾಗಲಿ ಬಾಯಿ ಬಿಟ್ಟು ಅಂದು ಬಿಡಬೇಕು!"

"ಆ ಮೇಲೆ ಕೋಪಿಸಿಕೊಂಡ್ರೆ?"

"ಯಾರ ಮೇಲೆ ಕೋಪ, ಯಾತಕ್ಕೆ? ಇಲ್ಲ, ಕೋಪಿಸಿಕೊಳ್ಳೊಲ್ಲ!"

"ಖಂಡಿತವಾಗಿ?"

"ಖಂಡಿತವಾಗಿ ಇಲ್ಲ!"

"ನಾವು ರೈಲಿನಲ್ಲಿ ಬರುವಾಗ ನೀವು ಕಣ್ಣು ಮಿಟುಕಿಸದೆ ಮುಗುಳ್ನಗೆಯಿಂದ ನೋಡುತ್ತಿದ್ದಿರಲ್ಲಾ, ಆ ದೇವಿ ಯಾರೂ ಅಂತ; ತಿಳೀತೆ?"

"ಓ, ಹೊ! ಅದೇ? ಏನು ಮಾಯಾಂಗನೆಯರೇ ನೀವು! ನೀನು ಹ್ಯಾಗೆ ಕಂಡುಕೊಂಡೆ ಅದನ್ನ?"

"ಬಿಡ್ರೀ ಸಾಕು, ಹೇಳ್ರೀ ಅವಳ್ಯಾರು (ನಸುನಗೆಯಿಂದ) ಎಂದೂ ನಂಬಬಾರದು ಗಂಡಸರನ್ನ!"

"ನಂಬದಿದ್ದರೆ ಬೇಡ, ಬಿಡು! ನಂಬೂ ಅಂತ ನಿನ್ನ ಗೋಗರ್‍ಯೋರಾರು?"

"ಆಗಲೇ ಬಂತು ಸಿಟ್ಟು. ಅದಕ್ಕೇ ನಾ ಬಾಯಿ ಬಿಡೋಲ್ಲಾಂತ-ಅಂದದ್ದು ಹೇಳ್ರೀ.......ರೀ!"

"ನೋಡು ಲೀಲಾ, ಹೆಂಗುಸರ ಸ್ವಭಾವವೇ ಇಷ್ಟು. ಕೂಲಂಕಷವಾಗಿ ವಿಚಾರಮಾಡೋದಿಲ್ಲ, ಏನಿಲ್ಲ! ಸುಮ್ಮನೆ ಇಲ್ಲದ ಸಂಶಯ ತಂದುಕೊಂಡು ಕೊರಗೋದು. ನಮ್ಮ ಹಾಗೆ Plain ಆಗಿರಬಾರದೇ?"

"ನೀವು ಗಂಡಸ್ರು ಏನು ಮಾಡಿದರೂ ನಾವು ತುಟಿಪಿಟಕ್ಕೆನ್ನದೆ ನೋಡ್ತಾ ಇದ್ರೆ ಮಾತ್ರ ನಾವು ಒಳ್ಳೇವರು: ಏನಾದರೂ 'ಹಾಗಲ್ಲ ಹೀಗೆ ಎಂದರೆ ಆಗಲೇ ಬಂದು ಬಿಡತ್ತೆ ಸಿಟ್ಟು, ಕೋಪ! ಹೋಗಲಿ, ಅವಳ್ಯಾರು ಹೇಳ್ರೀ ನೀವು ಸಾಚಾ ಅದ್ರೇ! ಸಂದೇಹಕ್ಕೆ ನೀವಲ್ಲವೇ ಕಾರಣ?"

"ನೋಡು ಲೀಲಾ, ಕೊಂಚ ಸಮಾಧಾನ ತೊಗೋ. ಈ ಪ್ರಪಂಚದಲ್ಲಿ, ದೇವರು ಎಷ್ಟೋ ವಸ್ತುಗಳನ್ನು ಸೃಷ್ಟಿ ಮಾಡಿದ್ದಾನೆ. ಕೆಲವು ಮುದ್ದಾಗಿ ಮನಸ್ಸೆಳೆಯುವಂತಿವೆ. ಮತ್ತೆ ಕೆಲವು ಜುಗುಪ್ಸೆಯನ್ನುಂಟುಮಾಡುವಂತಿವೆ. ಸುಂದರ ಗುಲಾಬಿ, ಹುಣ್ಣಿಮೆಯ ಚಂದ್ರ, ಮುದ್ದಾದ ಶಿಶುಗಳು, ನೀಲಿಯಾಕಾಶ ಇವನ್ನು ನೋಡಿದರೆ ಮನಸ್ಸಿಗೆ ಆನಂದವಾಗುವುದಿಲ್ಲವೇ ಹಾಗೇ..........."

"ಸಾಕ್ರೀ, ಈ ಪುರಾಣ; ನನಗೂ ಇದೆಲ್ಲಾ ಗೊತ್ತಿದೆ! ಕೇಳಿದ ವಿಷಯ ಬಿಟ್ಟು ನನ್ನನ್ನು ಮರೆಯಿಸಲಿಕ್ಕೆ ಯಾವುದೋ ವಿಚಾರವೆತ್ತಿ ಬಿಟ್ಟಿರಲ್ಲಾ! ಇದೆಲ್ಲಾ ಬುದ್ಧಿವಂತಿಕೆ ಆ ಹಳ್ಳಿಯ ಮೇಷ್ಟ್ರುಗಳ ಎದುರಿಗೆ ತೋರಿಸಿ, ನನ್ನೆದುರಿಗೆ ಬೇಡ!"

"ಆಗಲೇ ಬಂತು ಸಿಟ್ಟು. ಅದಕ್ಕೇ ನಾ ಬಾಯಿ ಬಿಡೋಲ್ಲಾಂದದ್ದು"

"ಲೀಲಾ, ಈ ನನ್ನ ಪುರಾಣ ಸಾವಧಾನದಿಂದ ಕೇಳೋಕೆ ನೀನಲ್ಲದೆ, ಆಫೀಸಿನಲ್ಲಿ ಕೇಳ್ತಾರೆಯೇ? ಅಲ್ಲಿ ಮಾಡೋ ಕೆಲಸಾ ಬಿಟ್ಟು ಹೀಗೆಲ್ಲಾ ಆಡಿದರೆ ಹುಚ್ಚ ಅಂತಾರೆ. ಆ ಮೇಲೆ ಆಸ್ಪತ್ರೆಗೇ—ಈ ಊರ್ದಲ್ಲ, ಬೆಂಗಳೂರು ಹುಚ್ಚಾಸ್ಪತ್ರೆಗೆ ದಾಖಲ್ಮಾಡ್ತಾರೆ. ಆ ಮೇಲೆ ನಿನ್ನ ಗತಿ?"

"ಏನ್ರೀ! ಇದು ಎಲ್ಲಿಂದೆಲ್ಲಿಗೋ ವಿಷಯ ಹಾರಿಸಿಬಿಟ್ರಲ್ಲ! ಖಂಡಿತವಾಗಿ ಕೇಳ್ತೀನಿ ಇನ್ನೊಂದು ಸಲ, ಹೇಳಲ್ಲವೇನ್ರಿ?"

"ಬಾರೇ ಇಲ್ಲಿ, ಇದ್ಯಾಕೆ ಇಷ್ಟು ಮುನಿಸು? ಕೊಂಚತಾಳು! ನೀನು ಕೇಳಿದ್ದಕ್ಕೆಲ್ಲಾ ಉತ್ತರ ಕೊಟ್ಟೆ ಅಷ್ಟೆ; ಇದು ಪುರಾಣವೇನೇ? ಬಾ ಚಿನ್ನ! ಆ ವಿಷಯ ಹೇಳ್ತೀನಿ." ಎಂದವನೇ ರಾಜು ಲೀಲೆಯನ್ನು ಎತ್ತಿ ಪಕ್ಕದಲ್ಲಿ ಕೂಡಿಸಿಕೊಂಡ.

ಹೊರಗಡೆ ಯಾರೋ "ಸಾರ್, ಸಾರ್" ಎಂದು ಕೂಗಿದಂತಾಯಿತು. ಲೀಲೆಯು ಆಶಾಭಂಗದಿಂದ "ಸರಿ, ಯಾರೋ ಮೇಷ್ಟ್ರು;" ಸಾಹೇಬರನ್ನು ಕರೆಯೋಕೆ ಬಂದಿದ್ದಾರೆ. ಇನ್ನೇನು ಹೊರಡಿ'ರೀ, ಒಂದು ಉಪಾಯಮಾಡ್ಲೆ? 'ಸಾಹೇಬರು ಇಲ್ಲಾಂತ ಹೇಳು' ಎಂದು ....ರಂಗ ಹಿತ್ತಲಲ್ಲಿ ಇದ್ದಾನೆ........ಅವನಿಗೆ ಹೇಳಲೆ? '

"ಬೇಡ, ಲೀಲಾ, ಪಾಪ ಆ ಮೂವಿನಕೆರೆ ಮೇಷ್ಟರು ಕರೆಯುವುದಕ್ಕೆ ಬಂದಿದ್ದಾರೆ ಅಂತ ಕಾಣತ್ತೆ. ನಾಳೆ ಆ ಊರಲ್ಲಿ ಹೊಸದಾಗಿ ಕಟ್ಟಿಸಿರುವ ಸ್ಕೂಲ್ ಕಟ್ಟಡದ ಪ್ರಾರಂಭೋತ್ಸವ ಇಟ್ಕೊಂಡಿದ್ದಾರಂತೆ. ಡಿ. ಇ. ಓ. ಸಾಹೇಬರೂ ಬರಬಹುದು ಅವರಿಗೆ ನಾವು ನೆರವಾಗದಿದ್ದರೆ, ಮುಂದೆ ಹೇಗೆ ಕೆಲಸ ನೆರವೇರಿಸಬೇಕೆಂಬುದು ತೋಚುವುದಿಲ್ಲ. ಹೋಗಿ ನೋಡ್ತೀನಿ!"

"ಸರಿ, ಬಿಡಿ! ನಿಮಗೆ ಯಾವತ್ತು ಪುರಸತ್ತು? ಇವತ್ತು ವಿಜಾಟಿಂಗು, ನಾಳೇ ಸರಸ್ವತೀ ಪೂಜೆಯಾಗುವುದು ಸ್ಕೂಲಿನಲ್ಲಿ; ನಾಡಿದ್ದು ಸರ್ಕೀಟು ಇದ್ದೇ ಇದೆ. ಏನಾದರೊಂದು ದಿನ ಬೆಳಗಾದರೆ! ಅಂತೂ ಇಂತೂ ನನ್ನ ಪ್ರಶ್ನೆ ಹಾಗೇ ಉಳೀತು"

"ಲೀಲಾ, ಕೊಂಚ ತಡೆದುಕೋ. ಓಡಿಹೋಗುತ್ತೇನೆಯೇ ನಾನು? ಇಂದಲ್ಲ ನಾಳೆ ಎಲ್ಲಾ ಗೊತ್ತಾಗುತ್ತೆ! ಅದನ್ನು ಪುರಸತ್ತಿದ್ದಾಗ ಕೊಂಚ ವಿವರವಾಗಿ ಹೇಳಬೇಕು. ಬರುತ್ತಲೂ ಹೇಳ್ತೀನಿ." ಎಂದು ಕಿರುನಗೆಯನ್ನು ಸೂಚಿಸುತ್ತಾ ಬಾಗಿಲಿಗೆ ಹೋದನು.

ಮೊದಲೇ ಊಹಿಸಿದಂತೆ ಕೂಡಲೆ ಪ್ರಯಾಣ ಮಾಡಬೇಕಾಗಿ ಬಂದಿತು. ಪ್ರಯಾಣದ ಸಿದ್ಧತೆಯ ಗಡಿಬಿಡಿಯಲ್ಲಿ ಲೀಲಾ ತನ್ನ ಪತಿಗೆ ಪುಥಃ ತೊಂದರೆ ಕೊಡಲಿಲ್ಲ. ರಾಜು ಹೊರಟು ಸಿದ್ಧನಾದ; ಲೀಲಾ ಕಡೆ ತಿರುಗಿದ: "ಲೀಲಾ ಮನೆಕಡೆ, ಜೋಪಾನ, ನಾಳೆ ಸಾಯಂಕಾಲ ಬರುತ್ತೇನೆ," ಎಂದು ರಂಗನನ್ನು ಕೂಗಿದ: "ಲೋ ಸಿಕ್ಕಿದ ಕಡೆ ಅಲೆಯಬೇಡ, ಹುಷಾರಾಗಿ ನೋಡಿಕೋ!" ಎನ್ನುತ್ತಾ ಗಾಡಿಯಲ್ಲಿ ಹೊರಟೇ ಬಿಟ್ಟ.

ಲೀಲೆಯ ಮನಸ್ಸು ಶಾಂತವಾಗಲಿಲ್ಲ. ಏನೇನೋ ಯೋಚಿಸಿ ಯೋಚಿಸಿ, ತನ್ನ ಮನದಲ್ಲಿ ಒಂದು ಕಲ್ಪನಾ ಪ್ರಪಂಚವನ್ನೇ ನಿರ್ಮಿಸಿಕೊಂಡಳು. "ಅವರೇಕೆ ನನ್ನ ಪ್ರಶ್ನೆಗೆ ಉತ್ತರ ಕೊಡಲಿಲ್ಲ.....? ಇಬ್ಬರೂ ಚಿರಪರಿಚಿತ ವ್ಯಕ್ತಿಗಳಂತೆ ಒಬ್ಬರನ್ನೊಬ್ಬರು ಅಂದು ನೋಡುತ್ತಿರಲಿಲ್ಲವೇ? ಇದಕ್ಕೇನು ಕಾರಣ?....ನೋಡಿದರೆ ನಮ್ಮವರು ಬಹು ಸಂಭಾವಿತರಂತೆ ಕಾಣುತ್ತಾರೆ. ಪಾಪ ಅವರ ನಡತೆಯಲ್ಲಿ ಕೊಂಚಕ್ಕೂ ಒಂದಿಷ್ಟು ಕುಂದು ಕಂಡು ಬರುವುದಿಲ್ಲ. ಬೀದಿಯಲ್ಲಿ ಹೋಗುವಾಗ, ನಾನೇ ಎಷ್ಟೋ ಸಾರಿ ನೋಡಿದ್ದೇನೆ....ಹೆಂಗಸರನ್ನು ಕಣ್ಣೆತ್ತಿಕೂಡ ನೋಡುವುದಿಲ್ಲ. ಆದರೆ ಅಂದೇಕೆ ಹಾಗಾಯಿತು?..ಆಕೆ ಇವರಿಗೆ ದೂರದ ಸಂಬಂಧಿಯಿರಬಹುದೇ? ಇಲ್ಲ,ಅದೂ ಸಾಧ್ಯವಿಲ್ಲ! ಹಾಗಾಗಿದ್ದರೆ ಮಾತನಾಡಿಸಬಹುದಾಗಿತ್ತು. ಇರಲಿ, ಈ ಸಮಸ್ಯೆಯನ್ನು ನಾನಂತೂ ಬಿಡಿಸಲಾರೆ. ನಾಳೆ ಬರಲಿ. ಹೇಳಿಸಿಯೇ ಬಿಡತೀನಿ!" ಎಂದು ತನ್ನಲ್ಲೇ ನಿರ್ಧರಿಸಿದಳು. ಪತಿಯನ್ನು ಸ್ವಾಗತಿಸಿ, ಉಪಚಾರಗಳಿಂದ ತೃಪ್ತಿಪಡಿಸಿ, ಸುಪ್ರಸನ್ನನಾದ ಸಮಯದಲ್ಲಿ ಈ ಪ್ರಶ್ನೆಯನ್ನು ಕೇಳಬೇಕೆಂದು ಯೋಚಿಸಿಕೊಂಡಳು.

× × × ×

ರಾಯರು ದೂರದಲ್ಲಿ ಬರುತ್ತಿರುವಾಗಲೆ ರಂಗನು ಓಡಿ ಬಂದು ಹೇಳಿದನು. ಸರಿ, ಸ್ವಾಗತಕ್ಕೆ ಸಿದ್ಧವಾಯಿತು. ರಾಜುವು ಲೀಲೆಯು ಪಂಚೆಕೆಯನ್ನು ಗೊತ್ತು ಮಾಡಿಕೊಂಡು, ಮುಗುಳ್ನಗೆಯಿಂದ ಕಾಫಿ ಕುಡಿಯುತ್ತಿದ್ದನು. ಕೊಂಚ ವಿನೋದ ಮಾಡಬೇಕೆನ್ನಿಸಿತು:

"ಲೀಲಾ, ಬಾ ಇಲ್ಲಿ! ಕೊಂಚ ಪಿಟೀಲು ತೆಗೆದುಕೋ!" ಎಂದ

"ಇವತ್ತು ಹೇಳ್ತೀರೋ? ನನ್ನ ಪ್ರಶ್ನೆಗೆ ಉತ್ತರವನ್ನು ಹೇಳಿ!"

"ಪಿಟೀಲು ತೊಗೋ ಬೇಜಾರಾಗಿದೆ ಅಂದ್ರೆ, ಮತ್ತೂ ಬೇಜಾರ್ಮಾಡೋಕೆ ಶುರು ಮಾಡಿದೆ!"

"ಇಲ್ಲಾಂದ್ರೆ ಪಿಟೀಲು ಬಾರಿಸ್ತೀನಿ, ಆ ಮೇಲೆ ನೀವು ಹೇಳೀಂತ ಕೇಳದ್ದು!"

"ಹಾಗೋ, ಈಗ ಗೊತ್ತಾಯಿತು! ನಾನು ಹೇಳ್ತೀನಿಂತ ಮಾತು ಕೊಟ್ಟರೆ ನೀನೂ ಹಾಡ್ತಿಯೇನು?"

"ಅಲ್ರೀ, ಆ ಕಂಡೀಷನ್ ಏನೂ ಇಲ್ಲ. ನನ್ನ ಆತುರ ನಿಮಗೆ ಹೇಗೆ ಗೊತ್ತಾಗಬೇಕು? ಹೇಳೋದಿಲ್ಲಾ ಅನ್ನಿ, ಪುನಃ ಕೇಳೋದೇ ಇಲ್ಲ!"

"ಸಂಶಯಪಿಶಾಚ ಮನಸ್ಸನ್ನು ಕೊರೆಯುತ್ತಿದೆಯೇನೋ! ಆಗಲಿ, ಹೇಳೋಣಂತೆ, ಅದಕ್ಕೇನು? ಎಲ್ಲಿ ಹಾಡೋಣಾಗಲಿ!"

ಲೀಲೆಯು ಪತಿಯ ಭರವಸೆಯಿಂದ ಹಿಗ್ಗಿದವಳಾಗಿ, ಮಧುರ ಕಂಠವನ್ನು ಪಿಟೀಲಿಗೆ ಹೊಂದಿಸಿಕೊಂಡು, ಬಹು ಇಂಪಾಗಿ ತ್ಯಾಗರಾಜ ಕೃತಿಗಳನ್ನು ಹಾಡಿದಳು.

ರಾಜುವಿನ ಕಡೆ ನೋಡಿದಳು. ರಾಜು ಇನ್ನು ತನ್ನ ಸರ... ಯೊಂದು ತಿಳಿದುಕೊಂಡ.

ಅಷ್ಟರಲ್ಲಿ ರಂಗ ಓಡಿ ಬಂದು "ಬುದ್ಧಿ, ದೊಡ್ಡ ಸಾಹೇಬರ ಬಸ್ಸಿನಾಗಬಂದವರೆ; ಕರೀತಾರೆ ತಮ್ಮನ್ನ" ಎಂದ. ಲೀಲೆಗೆ ಎದ... ದನೆಯ ಬಾರಿ ಆಶಾಭಂಗವಾಯಿತು. ರಾಜು ಕೂಡಲೆ ಕೋಟು ಬೂಟುಗಳನ್ನು ಧರಿಸಿ ಹೊರಟೇ ಬಿಟ್ಟನು.

× × × ×

ರಾತ್ರಿ ಸುಮಾರು ಒಂಬತ್ತು ಗಂಟೆಗೆ ರಾಜು ಮನೆಗೆ ಬಂದನು ಲೀಲೆಗೆ ಕೊಂಚ ಆವೇಶ ಬಂದಿತ್ತು. ಮಂಚದ ಮೇಲೆ ಬೋರಲಾ... ಮಲಗಿದ್ದಳು. ರಾಜುವಿಗೆ ಅರ್ಥವಾಯಿತು. ಮೆಲ್ಲಗೆ ಕಪೋಲ... ಮೇಲೆ ಕೈಯಿಟ್ಟ. ಕಣ್ಣೀರು ಸುರಿಯುತ್ತಿದ್ದಂತೆ ಕಂಡುಬಂತ... ದಿಂಬೆಲ್ಲ ಕಣ್ಣೀರಿನಿಂದ ನೆನೆದು ಒದ್ದೆಯಾಗಿತ್ತು. ರಾಜುವಿಗ... ಮರುಕವುಂಟಾಯಿತು. "ಲೀಲಾ" ಎಂದ. ಲೀಲಾ ಪಕ್ಕಕ್ಕೆ ಸ... ದಳು. "ಏಳು ಲೀಲಾ, ಊಟವಾಗಲಿ, ಹೇಳಿದಲ್ಲದ ಮಲಗುವುದಿ...

"ಊಟವಾಗುವ ಹೊತ್ತಿಗೆ ಯಾರು ಬರ್ತಾರೋ ಸಾಹೇಬರ... ಕರೆಯೋಕೆ? " ಎಂದಳು ಲೀಲಾ. " ಯಾರೂ ಬಹುಶಃ ಬರುವುದಿ... ಬಂದರೂ ಅವರು ಇಲ್ಲ ಅಂತ ಹೇಳಿಕಳುಹಿಸಿ ಬಿಡು!" ಎಂದು ರಾ... ಮಾತು ಕೊಟ್ಟನು!

ಭೋಜನವಾಯಿತು. ಇಬ್ಬರೂ ತಾಂಬೂಲ ಸವಿಯುತ... ಮಂಚದ ಮೇಲೆ ಕುಳಿತರು. ಆಗ ರಾಜುವೇ ತನ್ನ ಕಥೆಯನ್ನ... ಪ್ರಾರಂಭಿಸಿದ: "ಲೀಲಾ, ನಿನ್ನ ಸಂಶಯಕ್ಕೆ ಕೊಂಚವೂ ಎಡೆಯಿ... ಸುಮ್ಮನೆ ವೃಥಾ ಏನೇನೊ ಊಹಿಸಿಕೊಂಡು ತೊಂದರೆ ಪಟ್ಟುಕೊ...

ಬಟ್ಟೆಗೆ ಹಾಕುವ 'ಡಾಯ್‌ಮಂಡ್'
ತಯಾರಿ ಬಣ್ಣಗಳು

ತಾಳಿಕೆ-ಹೊಳಪುಗಳುಳ್ಳ, ಗುಲಾಬಿ, ಹಳದಿ, ಕೇಸರಿ, ನೀಲಿ,
ನೀರಲ, ಹಸಿರು, ಕಪ್ಪು, ಕೆಂಪು, ಖಾಕಿ, ಲೆವೆಂಡರ್,
ಮತ್ತು ಚಾಕೊಲೆಟ್ ಬಣ್ಣಗಳು!
ಯಾವುದೇ ಬಗೆಯ ೧೧ ಒದೆಗಳನ್ನು ವ್ಹಿ. ಪಿ. ಯಿಂದ
೨ ರೂಪಾಯಿಗಳಿಗೆ ಪಡೆಯಬಹುದು.
ಡಾಯ್‌ಮಂಡ್ ಸೋಪ್ ಕಂ. ಕಲ್ಯಾಣ
(ಜಿ. ಆಯ್. ಪಿ. ರೇಲ್ವೆ)

ಳ್ಳುತ್ತೀಯೆ. ನಾನು ಮೊದಲು ಕೆಲಸಕ್ಕೆ ಸೇರಿದಾಗ, ಹೈಸ್ಕೂಲು ಮಾಸ್ತರಾಗಿ ಅಲ್ಲವೇ ಸೇರಿದ್ದು? ನನ್ನನ್ನು ಮೊದಲು ಹಾಸನದ ಹೈಸ್ಕೂಲಿಗೆ ನೇಮಕ ಮಾಡಿದರು. ಆಗ ಇನ್ನೂ ಪ್ರತ್ಯೇಕವಾದ ಹೈಸ್ಕೂಲನ್ನು ಹೆಣ್ಣುಮಕ್ಕಳಿಗಾಗಿ ಏರ್ಪಡಿಸಿರಲಿಲ್ಲ. ಹೆಣ್ಣುಮಕ್ಕಳೂ, ಗಂಡು ಹುಡುಗರೂ ಒಟ್ಟಿಗೆ ಹೈಸ್ಕೂಲಿಗೆ ಬರುತ್ತಿದ್ದರು.....

....ಆಗ ನನಗೆ ಇನ್ನೂ ಇಷ್ಟು ಲೋಕಾನುಭವ, ತಾಳ್ಮೆ ಇರಲಿಲ್ಲ; ಮೇಲಾಗಿ ಇನ್ನೂ ಚಿಕ್ಕ ವಯಸ್ಸು. IV ಫಾರ್ಮ್ ತರಗತಿಗೆ ಆರು ಜನ ಹುಡುಗಿಯರು ಬರುತ್ತಿದ್ದರು. ಅವರನ್ನು ಪ್ರತ್ಯೇಕವಾಗಿ ಕೂಡಿಸುವ ರೂಢಿಯಿತ್ತು. ಅವರಲ್ಲಿಯ "ಇಂದುಮತಿ" ಎಂಬ ಹುಡುಗಿ ಬಹಳ ಚುರುಕಾಗಿದ್ದಳು. ಅಲ್ಲದೆ ಕೊಂಚ ಧೈರ್ಯಶಾಲಿ ಎಂದು ಹೇಳಬೇಕು. ಆ ಗಂಡು ಹುಡುಗರಿಗೂ ಇವಳನ್ನು ಕಂಡರೆ ಕೊಂಚ ದಿಗಿಲು. ಅವರ ತುಂಟಾಟಕ್ಕೆ ಇವಳು ಸಗ್ಗುತ್ತಿರಲಿಲ್ಲ. ಎದುರಿಗೇ ದಬಾಯಿಸಿಬಿಡೋಳು; ಇಲ್ಲವೆ ಮುಖ್ಯೋಪಾಧ್ಯಾಯರಿಗೆ ತಿಳಿಸಿ ಶಿಕ್ಷೆ ಮಾಡಿಸುತ್ತಿದ್ದಳು. 'ಇಂದು' ಆ ಹುಡುಗಿಯರ ಗುಂಪಿಗೇ ಮುಂದಾಳಾಗಿದ್ದಳು. ನಾನು ಮೊದ-ಮೊದಲು ಆ ಹುಡುಗರನ್ನೇ ಸಂಬೋಧಿಸಿ ಪಾಠ ಹೇಳುತ್ತಿದ್ದೆ. ಕೆಲವು ದಿನ ಹೀಗೆಯೇ ಕಳೆಯಿತು. ಒಂದು ದಿನ ಇಂದುವು "ಏನು ಸಾರ್, ನಮ್ಮನ್ನು ಏನೂ ಕೇಳುವುದೇ ಇಲ್ಲವಲ್ಲ! ನಾವು ಬಂದು ಕೂತಿರೋದು ಹೋಗೋದು ತಾನೆ?" ಎಂದಳು. ಇವಳ ಧೈರ್ಯಕ್ಕೆ ನನಗೇ ಆಶ್ಚರ್ಯವಾಯಿತು. ಅಂದಿನಿಂದ ಪಾಠಕ್ರಮವನ್ನು ಕೊಂಚ ಬದಲಾಯಿಸಿಕೊಂಡೆ; ಆದರೂ ಕಣ್ಣೆತ್ತಿ ಅವರ ಕಡೆ ನೋಡುತ್ತಿರಲಿಲ್ಲ. ಸರಿ. ಕೊಂಚ ದಿವಸಗಳಲ್ಲಿಯೆ ಇಂದುವು ನನಗೆ ನಾಮಕರಣ ಮಾಡಿದಳು. ಅದು ನನಗೆ ತಿಳಿದು ಬಂದುದು ಗಂಡುಹುಡುಗರಿಂದ. ಅವರು ಇಂದುವಿನ ಮೇಲೆ ಸೇಡುತೀರಿಸಿಕೊಳ್ಳಲು ಕಾದಿದ್ದರು. ನಾಥು, ತರಗತಿಯ ಮಾನೀಟರ್, ಒಂದು ದಿನ ನನ್ನ ಕೊಠಡಿಗೆ ಬಂದು, "ಸಾರ್ ಆ ಹುಡುಗೀರು ತಮಗೆ Sheep ಅಂತ ಹೆಸರಿಟ್ಟಿದ್ದಾರೆ. ಅವರ ಗಲಾಟೆ ಜಾಸ್ತಿಯಾಗಿದೆ. ಇದಕ್ಕೆಲ್ಲ ಇಂದುವೇ ಕಾರಣ ಸಾರ್! ನೀವು ಹೆಡ್ಮಾಸ್ತರಿಗೆ ಹೇಳಿ ಬಿಡಿಸಾರ್. ಸರಿ ಹೋಗುತ್ತೆ" ಎಂದ. ನನಗೆ ನಿಜವಾಗಿ ಇಂದುವಿನ ಮೇಲೆ ಕೋಪ ಬರಲಿಲ್ಲ. ಆಕೆಯೇ ನನಗೆ ಮಾರ್ಗದರ್ಶಿನಿಯೆಂದು ಭಾವಿಸಿದೆ. ತಪ್ಪನ್ನು ತಿದ್ದಿಕೊಂಡೆ.

ವಾರ್ಷಿಕ ಪರೀಕ್ಷೆಯ ವೇಳೆ ಸಮೀಪಿಸಿತು. ಒಂದು ದಿನ ಇಂದುವು ನನಗೊಂದು "ಲೆಟರ್" ಕೊಟ್ಟು ಹೊರಟು ಹೋದಳು. ಅದನ್ನು ಓದಿಕೊಂಡೆ. ನನಗೆ ಇಂದುವಿನ ಹೃದಯ ಗೊತ್ತಾಯಿತು. ಅದು ಕ್ಷಮಾಪಣೆಯ ಪತ್ರವಾಗಿತ್ತು. ಅದನ್ನು ಇನ್ನು ಕಳೆಯದೆ ಪೆಟ್ಟಿಗೆಯಲ್ಲಿ ಇಟ್ಟಿದ್ದೇನೆ. ಮಾರನೆಯ ದಿನ ಅವಳನ್ನು ಕರೆದು ಹೇಳಿದೆ: 'ಇಂದು, ಯೋಚಿಸಬೇಡ! ನಿನ್ನ ವಿಷಯದಲ್ಲಿ ನನಗೆ ತಪ್ಪು ಅಭಿಪ್ರಾಯವಿಲ್ಲ. ನನ್ನನ್ನು ಕಣ್ಣು ತೆರೆಯುವಂತೆ ಮಾಡಿದವಳು ನೀನು! ಹೆದರಬೇಡ, ಕ್ಷಮಿಸಿದ್ದೇನೆ ಹೋಗಮ್ಮ!' ಎಂದೆ. ಆಗ ಇಂದುವು ಅಶ್ರುಪೂರಿತವಾದ ಕಣ್ಣುಗಳಿಂದ ನನ್ನನ್ನು ಕ್ಷಣ ನೋಡಿದಳು. ನಾಚಿಕೆಯಾಯಿತೇನೋ; ಪಾಪ ತಲೆತಗ್ಗಿಸಿಕೊಂಡು ಹೊರಟುಹೋದಳು. ಅಂದಿನ ನೋಟವು ನನಗೆ ಇಂದೂ ಕಣ್ಣಿಗೆ ಕಟ್ಟಿದಂತಾಗಿದೆ. ಆ ವರ್ಷ ನನಗೆ ಅಲ್ಲಿಂದ ವರ್ಗವೂ ಆಯಿತು. ನಾನು ಈ ಮಧ್ಯೆ ಅವಳನ್ನು ಎಂದೂ ನೋಡಿರಲಿಲ್ಲ. ಮೊನ್ನೆ ನಾವು ರೈಲಿನಲ್ಲಿ ಸಂಧಿಸಿದುದು ಆಕೆಯನ್ನೇ. ಈಗ ಆಕೆಯೂ ಸಂಸಾರಿಯಾಗಿರಬೇಕು. ಪೂರಾ ಬದಲಾಯಿಸಿದ್ದಾಳೆ. ಆಕೆಯೊಡನೆ ಮತ್ತೆ ಯಾರೋ ಇದ್ದುದರಿಂದ ಅವಳು ನನ್ನನ್ನು ಮಾತನಾಡಿಸಲಿಲ್ಲವೆಂದು ತೋರುತ್ತೆ. ನಾನೂ ನಾಚಿಕೆಯಿಂದ ಮಾತನಾಡಿಸಲಿಲ್ಲ. ಆದರೂ ಇಬ್ಬರ ನೋಟಗಳೂ ಮಿಳಿತವಾದುವು. ಹಿಂದಿನ ನೆನಪು ಕ್ಷಣಕಾಲ ಇಬ್ಬರ ಮನದಲ್ಲಿಯೂ ಮೂಡಿ, ನೋಟದಲ್ಲಿ ನಿಂತು ಹಾಗೆಯೇ ಮರೆಯಾಯಿತು. ತಿಳಿಯಿತೇ "ಲೀಲಾ?" ಎಂದು ಹೇಳಿ ರಾಜುವು ಆ ಕ್ಷಮಾಪತ್ರವನ್ನು ಹುಡುಕಿ ತೆಗೆದು ಲೀಲೆಯ ಮುಂದೆ ಹಾಕಿದನು.

ಲೀಲೆಯ ಸಂದೇಹ ನಿವೃತ್ತಿಯಾಯಿತು. ತನ್ನ ಪತಿದೇವರಡಿಯಲ್ಲಿ ತಲೆಯಿಟ್ಟಳು. ರಾಜುವು ಪ್ರೇಮದಿಂದ ಆಕೆಯನ್ನು ಸಂತಯಿಸಿ ಕ್ಷಮಾಮುದ್ರೆಯನ್ನೊತ್ತಿದನು.

ಮಿತ್ರ ರಾಜುವಿನಿಂದಲೇ ತಿಳಿದು ಬಂದ ಈ ಘಟನೆಯೇ ಕಥೆಗೆ ಕಾರಣವಾಯಿತು.

ಜಯಂತಿ ಪ್ರಚಾರ ಮಾಲೆ

ಅಕ್ಷರ ಬರೆಯಲು ಬಂದ ಮಾತ್ರಕ್ಕೆ ಸುಶಿಕ್ಷಿತನೆನಿಸಿಕೊಳ್ಳಲಿಕ್ಕಾಗುವುದಿಲ್ಲ. ಹಾಗೆನಿಸಿಕೊಳ್ಳುವುದಕ್ಕೆ ವಿವಿಧ ಮುಖವಾದ ಪ್ರಪಂಚದ ಪರಿಚಯ ಬೇಕು. ಅದಕ್ಕಾಗಿ ಎಲ್ಲರೂ ಈ ಮಾಲೆಯ ಪ್ರಕಾಶನಗಳನ್ನು ಓದಿ ಮನನ ಮಾಡಬೇಕು.

೧ ಜಾತೀಯ ಸಮಸ್ಯೆ	೦–೪–೦
೨ ಕರ್ನಾಟಕ ಏಕೀಕರಣ	೦–೬–೦

ಬೇಕಾದವರು ಕೂಡಲೆ ಬರೆದು ತರಿಸಿಕೊಳ್ಳಿರಿ!

ವಿಜ್ಞಾನದ ವಿಚಿತ್ರ ಪ್ರಪಂಚ

ಶ್ರೀ. ಕೆ. ಎಸ್. ಸವಣೂರ ಎಮ್. ಎಸ್ಸಿ. ಧಾರವಾಡ

●

೩ ಗ್ಯಾಲಿಲಿಯೊ ಗ್ಯಾಲಿಲಿ

(ಜುಲೈ ಸಂಚಿಕೆಯಿಂದ ಮುಂದುವರಿದುದು.)

ಗ್ಯಾಲಿಲಿಯೋನು ಪ್ಯಾಡುವಾ ವಿಶ್ವವಿದ್ಯಾಲಯವನ್ನು ಸೇರಿದೊಡನೆಯೆ, ತನ್ನ ಅಧ್ಯಾಪನ ಕೆಲಸವನ್ನು ಪ್ರಾರಂಭಿಸಿದನು. ಇಲ್ಲಿ ಅವನು ಮಾಡಿದ ಮೊದಲನೆಯ ಭಾಷಣವು ಅವನ ವಾಕ್ಪ್ರೌಢಿಮೆಯ ನಿದರ್ಶನವೆ ಆಗಿದ್ದುದರಿಂದ, ಅವನ ಕೀರ್ತಿಯಾದರೂ ಬೆಳೆಯಲು ಪ್ರಾರಂಭವಾಯಿತು ಅವನ ಭಾಷಣಗಳು ಮೊದ-ಮೊದಲು ವಿಶ್ವವಿದ್ಯಾಲಯದ ಆವಾರದಲ್ಲಿಯೆ ಜರುಗಿದರೂ, ಮುಂದೆ ಕೇಳುವವರ ಸಂಖ್ಯೆಯು ಅತೀವವಾಗಿ ಬೆಳೆದುದರಿಂದ, ಎಷ್ಟೋ ಸಲ ಬಯಲಿನಲ್ಲಿಯೆ ಭಾಷಣ ಮಾಡಬೇಕಾಗುತ್ತಿತ್ತು.

ಇವನ ಪರಿಶ್ರಮದ ಫಲವಾಗಿ ಉಷ್ಣಮಾಪನ ಉಪಕರಣವು ಜನಿಸಿತು. ಅದು ಇಂದು ನಮಗೆ ಸಾಮಾನ್ಯವಾಗಿ ಕಂಡುಬರುವ ಪಾರಜಯುಕ್ತ ಥರ್ಮಾಮೀಟರ್ ಆಗಿರದೆ, ಒಂದು ಸಾಮಾನ್ಯವಾದ ಕಾಜಿನ ಚೆಂಬುವೇ (Flask) ಆಗಿತ್ತು. ಇಂತಹ ಚೆಂಬುವನ್ನು ಬಣ್ಣದ ನೀರಿನಲ್ಲಿ ತಿರುವು-ಮುರುವಾಗಿ ಇಟ್ಟು, ಆ ಚೆಂಬುವಿನಲ್ಲಿಯ ಹವೆಯಾದರೂ ಕೆಲವಂಶದಲ್ಲಿ ಹೊರದೂಡಲ್ಪಟ್ಟಿತು. ಹೀಗೆ ಮಾಡುವುದರಿಂದ, ಹವೆಯ ಒತ್ತಡದ ಮೂಲಕ ಆ ಚೆಂಬುವಿನ ಮೇಲ್ಭಾಗದಲ್ಲಿ ಹವೆಯೂ ಅದರ ಕುತ್ತಿಗೆಯ ಭಾಗದಲ್ಲಿ ಬಣ್ಣದ ನೀರೂ ಇದ್ದು ಇದೇ ಅವನ ಉಷ್ಣಮಾಪನ ಯಂತ್ರವಾಯಿತು. ಇದನ್ನು ಉಪಯೋಗಿಸುವ ಕ್ರಮವಾದರೂ ಅತಿ ಸುಲಭವಿದ್ದು ಉಷ್ಣತೆಯ ಮೂಲಕ ಹೆಚ್ಚುಗುವ, ಹವೆಯ ಪ್ರಸರಣ ಶೀಲತ್ವ ಗುಣದ ಮೂಲಕ ಕೆಳಭಾಗದಲ್ಲಿರುವ ಬಣ್ಣದ ನೀರು ಕೆಳಗೆ ಒತ್ತಲ್ಪಟ್ಟು ಅದರ ಮಾತ್ರೆಯ ಏರಿಳಿತಗಳು ಉಷ್ಣತೆಯ ಮಾಪನವೆಂದು ತಿಳಿಯಬಹುದಾಗಿದೆ.

ಗ್ಯಾಲಿಲಿಯೋನು ಜಗದ್ವಿಖ್ಯಾತಿಯನ್ನು ಪಡೆಯಲು ಕಾರಣೀಭೂತವಾದ ಶೋಧಗಳನ್ನು ಮಾಡಿದುದು ಇಲ್ಲಿಯೆ. ಅಂದಿನ ಇಟಲಿ ದೇಶದಲ್ಲಿ ಖಗೋಲಶಾಸ್ತ್ರ ವಿಷಯದಲ್ಲಿ ಪರಂಪರಾಗತ ಅಭಿಪ್ರಾಯವು — 'ಪೃಥ್ವಿಯು ಅಚಲವಿದ್ದು ಅದು ವಿಶ್ವಕೇಂದ್ರದಲ್ಲಿದೆ' ಎನ್ನುವದು ಪ್ರಚಾರದಲ್ಲಿದ್ದು — ಇದೇ ಸರ್ವಮಾನ್ಯವಾಗಿತ್ತು. ಇದರಂತೆಯೆ ಇವನು ತನ್ನ ಭಾಷಣಗಳಲ್ಲಿ ಇದೇ ಅಭಿಪ್ರಾಯವನ್ನು ವ್ಯಕ್ತಮಾಡಿದರೂ ಒಳಗೆ ಮಾತ್ರ ಕೋಪರ್ನಿಕಸ್[೧]ನಿಂದ ಪ್ರತಿಪಾದಿತವಾದ 'ಸೂರ್ಯನು ವಿಶ್ವಕೇಂದ್ರದಲ್ಲಿದ್ದು, ಪೃಥ್ವಿಯು ಸೂರ್ಯನನ್ನು ಸುತ್ತು ಹಾಕುವುದು' ಎಂಬ ಅಭಿಪ್ರಾಯವೇ ನಿಜವಿದೆ ಎಂಬ ತತ್ತ್ವವನ್ನು ವಿಚಾರಾಂತ್ಯದಲ್ಲಿ ಅಂಗೀಕರಿಸಿದ್ದನು. ಈ ವಿಷಯವನ್ನು ಅವನು ಕೆಪ್ಲರ[೨]ನಿಗೆ ಬರೆದ ಪತ್ರದಲ್ಲಿ ತಾನೇ ಒಪ್ಪಿದ್ದಾನೆ. 'ನಾನು ಎಷ್ಟೋ ವರ್ಷಗಳಿಂದ ಕೋಪರ್ನಿಕಸ್‌ನ ತತ್ತ್ವಕ್ಕೇ ಅಂಟಿಕೊಂಡಿದ್ದೇನೆ; ಏಕೆಂದರೆ ಪರಂಪರಾಗತ ತತ್ತ್ವವಾದ ಪೃಥ್ವೀಕೇಂದ್ರತ್ವವು ನಮಗೆ ನಿಸರ್ಗದಲ್ಲಿ ಕಂಡುಬರುವ ಕಾರಣ-ಕಾರ್ಯಗಳ ಸಂಬಂಧವನ್ನು ತಿಳಿಹೇಳುವ ವಿಷಯದಲ್ಲಿ ಸಮರ್ಥವಾಗಿಲ್ಲ. ಪರಂಪರಾಗತ ತತ್ತ್ವವನ್ನು ಪ್ರತಿಭಟಿಸಲು ಬೇಕಿರುವ ಪ್ರಮಾಣಗಳು ನನ್ನಲ್ಲಿ ಸಾಕಷ್ಟು ಇದ್ದರೂ ನನ್ನ ಗುರುವಾದ ಕೋಪರ್ನಿಕಸ್‌ನಂತೆ ನನ್ನ ಅವಸ್ಥೆಯೂ ಆಗಬಾರದೆಂದು, ಅವನ ತತ್ತ್ವವನ್ನು ಸಾರ್ವಜನಿಕವಾಗಿ ಪ್ರತಿಪಾದಿಸುವ ಸಾಹಸವನ್ನು ಮಾಡಲಪೇಕ್ಷಿಸುವುದಿಲ್ಲ. ನಮ್ಮ ಗುರುವಿನ ಕೀರ್ತಿಯು ಹಲವು ಜನರಿಂದ ಆಚಂದ್ರಾರ್ಕವಾಗಿ ಉಳಿದರೂ, ಉಳಿದ ಮೂರ್ಖರ ಮೂಲಕ ಮಾತ್ರ ಉಪಹಾಸ್ಯ ಮತ್ತು ನಿಂದೆಗೆ ಆತ ಪಾತ್ರನಾಗಿದ್ದಾನೆ."

ಹೊಸ ತತ್ತ್ವವನ್ನು ಪ್ರತಿಪಾದಿಸಲು ಕೆಪ್ಲರನು ಇವನನ್ನು ಒತ್ತಾಯಪಡಿಸಿದನು. ಹೀಗೆ ಮಾಡಿದಲ್ಲಿ ತಾನೂ ತನ್ನ ಗುರುವಿನಂತೆಯೆ ಉಪಹಾಸ್ಯ-ನಿಂದೆಗಳನ್ನು ಎದುರಿಸಬೇಕಾಗುವುದೆಂದು ಇವನಿಗೆ ಮನವರಿಕೆಯಾಗಿತ್ತು. ತನ್ನ ಕೆಲಸದ ಮೇಲೆ ಗದೆ ಬೀಳಬಾರದೆಂಬ ಇಚ್ಛೆಯಿಂದ, ತನ್ನ ಮನಸ್ಸಿನ ವಿರುದ್ಧವಾದರೂ ಸುಮ್ಮನಿರಬೇಕಾಯಿತು. ಮುಂದೆ ಇವನ ಕೆಲಸದ ಅವಧಿಯು ಮತ್ತೆ ೬ ವರ್ಷಗಳ ವರೆಗೆ ಬೆಳೆಯಿಸಲ್ಪಟ್ಟಿತಲ್ಲದೆ ಇವನ ವೇತನವಾದರೂ ಹೆಚ್ಚಿಸಲ್ಪಟ್ಟಿತು. ಇವನು ಸುಮ್ಮನಿರಲು ಬೇರೊಂದು ಕಾರಣವೂ ಇದ್ದಿಲ್ಲವೆಂದಲ್ಲ. ಸುವರ್ಣಾಕ್ಷರಗಳಿಂದ ಬರೆಯಬೇಕಾಗಿರುವ ಚರ್ಚಿನ ಇತಿಹಾಸಕ್ಕೆ ಕಪ್ಪು ಬಳಿಯುವ ಒಂದು ದುರ್ದೈವದ ಸಂಗತಿಯು ಅದೇ ತಾನೆ

[೧] ಕೋಪರ್ನಿಕಸ್:— ಪೋಲಂಡ್ ದೇಶದಲ್ಲಿ ೧೪೭೩ನೆಯ ಇಸ್ವಿಯಲ್ಲಿ ಹುಟ್ಟಿದನು. ತೋರಿಕೆಯಲ್ಲಿ ಚಲಿಸುವ ಆಕಾಶದ ಚಲನೆಯ ಬದಲು ನಿಜವಾಗಿ ಪೃಥ್ವಿಯೇ ತನ್ನ ಅಕ್ಷದಲ್ಲಿ ಮತ್ತು ಸೂರ್ಯನ ಸುತ್ತಲೂ ತಿರುಗುವುದೆಂದು ಪ್ರತಿಪಾದಿಸಿದನು.

[೨] ಕೆಪ್ಲರ್:— ಜರ್ಮನಿ ದೇಶದಲ್ಲಿ ೧೫೭೧ನೇ ಇಸ್ವಿಯಲ್ಲಿ ಹುಟ್ಟಿದನು. ಗ್ರಹಗಳ ಗತಿಗಳನ್ನು ಕುರಿತು ಇವನು ಪ್ರತಿಪಾದಿಸಿದ ಮೂರು ಕಟ್ಟಳೆಗಳು ಇಂದಿಗೂ ಪ್ರಸಿದ್ಧವಿವೆ.

ಜರುಗಿತ್ತು. ಬ್ರೂನೋ ಎಂಬ ವಿಖ್ಯಾತ ತತ್ತ್ವಜ್ಞಾನಿಯು ಸೂರ್ಯ-ಕೇಂದ್ರತ್ವ ತತ್ತ್ವವನ್ನು ಪ್ರತಿಪಾದಿಸಿದ್ದನು. ಇದು ನಾಸ್ತಿಕವಾದವೆಂದು ಚರ್ಚಿನ ಸಿದ್ಧಾಂತವಾದ್ದರಿಂದ, ಮುಂದೆ ಇವನು ಆಪಾದನೆಗೆ ಗುರಿಮಾಡಲ್ಪಟ್ಟು ತುರಂಗಕ್ಕೆ ತಳ್ಳಲ್ಪಟ್ಟನು. ತನ್ನ ಹೇಳಿಕೆಯು ತಪ್ಪೆಂದು ಒಪ್ಪಲಿಲ್ಲ. ಧರ್ಮಾಧಿಕಾರಿಗಳ ಅಭಿಪ್ರಾಯದಂತೆ ಇವನ ಆತ್ಮಶುದ್ಧೀಕರಣವಾಗಬೇಕಾಯಿತು. ಈ ಅಪರಾಧಕ್ಕಾಗಿ ಸುಡಿಸಿಕೊಂಡು ಸಾಯಬೇಕಾಯಿತು. ಇವನು ಸಾಯುವಾಗ ಹೇಳಿದ್ದೆಂದರೆ 'ನನ್ನನ್ನು ಶಿಕ್ಷೆಗೆ ಗುರಿಮಾಡಿದ ನೀವು ಶಿಕ್ಷೆಮಾಡಿಸಿಕೊಳ್ಳಲ್ಪಟ್ಟ ನನಗಿಂತ ಹೆಚ್ಚು ಹೆದರಿದಂತಿದ್ದೀರಿ ಬೆದರಿಕೆಯಿಂದ ಬದುಕುವುದಕ್ಕಿಂತ ಧೈರ್ಯದಿಂದ ಸಾವನ್ನೇ ಎದುರಿಸುವೆ' ಬ್ರೂನೋನ ಮರಣವು ಗ್ಯಾಲಿಲಿಯೋನ ಮನಸ್ಸಿನ ಮೇಲೆ ಪರಿಣಾಮವನ್ನು ಮಾಡದಿರಲಿಲ್ಲ. ಇಲ್ಲಿ ಅವನು ಖಂಡಿತವಾಗಿ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಲು ಹಲವು ವರ್ಷಗಳು ಮಾತ್ರ ಗತಿಸಬೇಕಾದುವು

ಈ ವಿಷಯದಲ್ಲಿ ಇವನು ಹೆಜ್ಜೆ ಇಟ್ಟುದು ರೂಢಿಯಲ್ಲಿದ್ದ ಮತ್ತು ಅರಿಸ್ಟಾಟಲನಿಂದ ಪ್ರತಿಪಾದಿತವಾದ ಆಕಾಶದ ವಿಷಯವಾಗಿ. 'ಆಕಾಶವು ಸರ್ವಕಾಲದಲ್ಲಿಯೂ ಬದಲಾಗದು' ಎಂಬುದೇ ಅರಿಸ್ಟಾಟಲನ ತತ್ತ್ವ. ಈ ತತ್ತ್ವವನ್ನು ಖಂಡಿಸಲು ಬೇಕಿರುವ ಯೋಗವು ಮಾತ್ರ ಗ್ಯಾಲಿಲಿಯೋನ ಇಚ್ಛೆಯಲ್ಲಿ ಆಕಸ್ಮಿಕವಾಗಿಯೆ ಒದಗಿತು. ಒಮ್ಮೆಲೆ ಒಂದು ದಿನ ಆಕಾಶದಲ್ಲಿ ಗುರುಗ್ರಹದ ತೇಜವನ್ನು ಸಹ ಮೀರಿಸಿದಂತಹ ಒಂದು ನಕ್ಷತ್ರವು ಪ್ರಕಟವಾಯಿತು ಈ ನಕ್ಷತ್ರವು ಗ್ಯಾಲಿಲಿಯೋನಿಗೆ ಪರಂಪರಾಗತ ತತ್ತ್ವಗಳನ್ನು ಪ್ರತಿಭಟಿಸಲು ಮಾರ್ಗದರ್ಶಕವೂ ಮತ್ತು ಅರಿಸ್ಟಾಟಲನ ಅನುಯಾಯಿಗಳಿಗೆ ಬುದ್ಧಿಕಲಿಸುವ ವಿಷಯವೂ ಆಗಿ ಪರಿಣಮಿಸಿತು. 'ಆಕಾಶವು ಬದಲಾಗದಂತಹದಿದ್ದರೆ ಈ ನಕ್ಷತ್ರವು ಬದಲಾಗದ ಆಕಾಶದಲ್ಲಿ ಪ್ರಕಟವಾಯಿತೇಕೆ? ಯಾವುದೊಂದು ಪರಿಣಾಮವನ್ನು ತಿಳಿಹೇಳಲು ಅಶಕ್ಯವಿದ್ದ ಸಿದ್ಧಾಂತಗಳಿಂದ— ಈಗ ಪ್ರಕೃತದಲ್ಲಿ ಅರಿಸ್ಟಾಟಲನ ಆಕಾಶವಿಷಯಕ ಸಿದ್ಧಾಂತದಿಂದ—ಏನು ಪ್ರಯೋಜನ?' ಹೀಗೆಂದು ಅತ್ಯಂತ ಉತ್ಸಾಹಪೂರಿತರಾದ ಸಭಿಕರನ್ನುದ್ದೇಶಿಸಿ ಚರ್ಚಿಸಲು ಪ್ರಾರಂಭಿಸಿದನು. ಇದರ ಪರಿಣಾಮವೆಂದರೆ ವಿಚಾರ ಸ್ವಾತಂತ್ರ್ಯಯುತನಾದ ಇವನು ಇದೇ ವೇಳೆಯನ್ನು ಸಾಧಿಸಿ ಬಹಿರಂಗವಾಗಿಯೇ 'ಸೂರ್ಯಕೇಂದ್ರ' ತತ್ತ್ವವನ್ನು ಪ್ರತಿಪಾದಿಸಲು ಪ್ರಾರಂಭಿಸಿದನು. ಇಂತಹ ವಿಚಾರ-ಸ್ವಾತಂತ್ರ್ಯವನ್ನು ಎಂತಹ ಮೌಲ್ಯವನ್ನು ಕೊಟ್ಟುಕೊಳ್ಳಬೇಕಾಯಿತು ಮತ್ತು ಹೇಗೆ ಧರ್ಮಾಧಿಕಾರಿಗಳು ಇವನ ಜೀವನದ ಉತ್ತರಾರ್ಧವನ್ನು ವಿಷಮಯವಾಗಿ ಪರಿಣಮಿಸಲು ಕಾರಣೀಭೂತರಾದರು ಎನ್ನುವುದನ್ನು ಮುಂದೆ ತಿಳಿಯೋಣ.

ಇದೇ ವೇಳೆಯಲ್ಲಿ ದೈವವು ಗ್ಯಾಲಿಲಿಯೋನಿಗೆ ಸೂರ್ಯ-ಕೇಂದ್ರತ್ವ ತತ್ತ್ವವನ್ನು ಪ್ರತಿಪಾದಿಸಲು ಬೇಕಿರುವ ಮತ್ತು ತನ್ನ ವಿರೋಧಿಗಳ ತತ್ತ್ವವನ್ನು ನಿರ್ಮೂಲಮಾಡಲು ಬೇಕಿರುವ ಒಂದು ಅತ್ಯಂತ ಶಕ್ತಿಯುತವಾದ ಶಸ್ತ್ರವನ್ನೇ ಒದಗಿಸಿತು. ಹಾಲೆಂಡ್‌ದೇಶದಲ್ಲಿ ಒಂದು ಉಪಕರಣವು ಉಪಲಬ್ಧವಿದ್ದು, ಅದರ ಸಹಾಯದಿಂದ ದೂರದ ವಸ್ತುಗಳನ್ನು ಹೆಚ್ಚು ನಿಚ್ಚಳವಾಗಿ ಮತ್ತು ಸಮೀಪವರ್ತಿಗಳಾಗಿದ್ದಂತೆ ನೋಡಬಹುದೆಂಬ ವರ್ತಮಾನವು ಹರಡಿತ್ತು. ಈ ಉಪಕರಣವನ್ನು ಯೋಜಿಸುವುದರಲ್ಲಿ ಡಾಲೇಸಿನ ಹಲವು ಕನ್ನಡಿಗಳನ್ನು ಉಪಯೋಗಿಸಿದ್ದರು. ಈ ಸುದ್ದಿಯು ಗ್ಯಾಲಿಲಿಯೋನವರೆಗೆ ಬಂದಿತು. ಇದರ ಪರಿಣಾಮವೆಂದರೆ ಹದಗಿದ ಮತ್ತು ಫಲವತ್ತಾದ ನೆಲದಲ್ಲಿ ಬೀಜವನ್ನು ಬಿತ್ತಿದಂತಾಯಿತು. ಆ ರಾತ್ರಿಯನ್ನೆಲ್ಲ ವಿಚಾರ ಮಾಡುವುದರಲ್ಲಿಯೇ ಕಳೆದನು. ಆವನು ಅಂತರ್ಗೋಲ ಮತ್ತು ಬಹಿರ್ಗೋಲ ಕನ್ನಡಿಗಳ ವಿಷಯವನ್ನು ತಿಳಿದವನಾಗಿದ್ದನು. ಬೆಳಕಿನ ವಿಷಯವಾಗಿ ಉಪನ್ಯಾಸವನ್ನು ಮಾಡಿ ವಿದ್ಯಾರ್ಥಿಗಳಿಗೆ ಕಲಿಸುತ್ತಿದ್ದನಾದುದರಿಂದ, ಕಣ್ಣಿನ ರಚನೆ, ಕೆಲಸ ಮಾಡುವ ರೀತಿ ಇತ್ಯಾದಿ ಎಲ್ಲವುಗಳನ್ನೂ ತಿಳಿದವನಾಗಿದ್ದನು. ಗೋಲಗನ್ನಡಿಗಳನ್ನು ಹೊಂದಿಸಿ. ಆಕಾಶದಲ್ಲಿ ಚಲಿಸುವ ಗ್ರಹಗಳನ್ನು ಸಮೀಪವರ್ತಿಗಳನ್ನಾಗಿ ಮಾಡುವ ಉಪಕರಣವು ಸಾಧ್ಯವಾಗಲಾರದೆ?....ಇತ್ಯಾದಿ ವಿಚಾರ ಮಾಡಿ, ಇಂತಹ ಹಲವನ್ನು ತಯಾರಿಸಿದನು. ಇವುಗಳಲ್ಲಿ ಒಂದು ಮಾತ್ರ ಕೈಗೂಡಿತು; ಆದರೆ ಇದರ ರಚನೆಯು ಮಾತ್ರ, ಇವನು ಕೇಳಿದ ಹಾಲೆಂಡದ ಉಪಕರಣಕ್ಕಿಂತ ಭಿನ್ನವಿತ್ತು. ಒಂದು ಕೊಳವೆಯ ಒಂದು ತುದಿಗೆ ಬಹಿರ್ಗೋಲ ಕನ್ನಡಿಯೂ ಎರಡನೆಯ ತುದಿಗೆ ಒಂದು ಅಂತರ್ಗೋಲ ಕನ್ನಡಿಯೂ ಜೋಡಿಸಲ್ಪಟ್ಟವು. ವಿಶಿಷ್ಟ ಕೇಂದ್ರಾಂತರವುಳ್ಳ (Focal Length) ಈ ಗಾಜುಗಳ ವ್ಯವಸ್ಥೆಯು ಒಂದು ದುರ್ಬೀನಿಯಾಗಿ ಪರಿಣಮಿಸಿತಲ್ಲದೆ ಇದರಲ್ಲಿ ಕಾಣುವ ಪ್ರತಿಕೃತಿ (Image)ಯು ತಲೆಕೆಳಗಾಗಿ ಕಾಣದೆ ಸಮನಾಗಿಯೆ ಕಾಣುತ್ತಿತ್ತು. ಇದರಲ್ಲಿನ ಒಂದು ಕನ್ನಡಿಯು ದೂರದ ವಸ್ತುವಿನ ಪ್ರತಿಕೃತಿಯನ್ನು ಸಮೀಪವಾಗಿ ತರುವ ಕೆಲಸವನ್ನೂ ಮತ್ತು ಎರಡನೆಯ ಕನ್ನಡಿಯು ಹೀಗೆ ಸಮೀಪವಾಗಿ ತರಲ್ಪಟ್ಟ ಪ್ರತಿಕೃತಿಯನ್ನು ದೊಡ್ಡದಾಗಿ ಮಾಡುವ ಕೆಲಸವನ್ನೂ ಸಾಧಿಸುವುವು ಎಂದರೆ ನಮಗೆ ದೂರದ ವಸ್ತುವನ್ನು ಸಮೀಪ ತರಲು ಸಾಧ್ಯವಿಲ್ಲದಿದ್ದರೂ ಅದರ ಪ್ರತಿಕೃತಿಯನ್ನು ಬಹಿರ್ಗೋಲಕನ್ನಡಿಯ ಮೂಲಕ ತರಲು ಸಾಧ್ಯವಿದ್ದುದರಿಂದ, ಇಂತಹ ಉಪಕರಣದಿಂದ ದೂರದ ವಸ್ತುವಿನ ವಿಶೇಷ ಪರಿಚಯವು ಲಭಿಸಲು ಸಾಧ್ಯವಾಗುವುದು. ವೆನಿಸ್ ನಗರದಲ್ಲಿ ಮೇಲಧಿಕಾರಿಗಳಿಗೆ ಮತ್ತು ವಿಶ್ವವಿದ್ಯಾಲಯದ ವ್ಯವಸ್ಥಾಪಕ ಮಂಡಲದ ಸದಸ್ಯರಿಗೆ ಈ ಉಪಕರಣವನ್ನು ತೋರಿಸಲು ಇವನನ್ನು ಕೇಳಿಕೊಳ್ಳಲಾಯಿತು ಇದನ್ನು ನೋಡಲು ಉತ್ಸುಕರಾದ ಜನರ ಉಬ್ಬಿಂದರೆ ಅಷ್ಟಿಷ್ಟಲ್ಲ. ಎಷ್ಟೋ ಇಳಿವಯಸ್ಸಿನ ಜನರೂ ಅತ್ಯಂತ ಎತ್ತರವಾದ ಚರ್ಚಿನ ಗೋಪುರಗಳ ಮೇಲಿಂದ ಅತಿದೂರದಲ್ಲಿ ಬರುತ್ತಿರುವ ಮತ್ತು ಕಣ್ಣಿಗೆ ಕಾಣಿಸದಿರುವ ಹಡಗುಗಳನ್ನು ನೋಡುವುದರಲ್ಲಿ ಉದ್ಯುಕ್ತರಾದರು. ೫೦ ಮೈಲುಗಳಾಚೆ ಇರುವ ವಸ್ತುಗಳು ಕೇವಲ ೫ ಮೈಲಿನ ಮೇಲಿದ್ದರೆ ಹೇಗೆ ಕಾಣಿಸಬೇಕೋ ಹಾಗೆ ಕಾಣುತ್ತಿದ್ದುವು. ಅದರಂತೆಯೆ ೧ ಮೈಲಿನ ಮೇಲಿರುವ ಮನುಷ್ಯನು ನಗುವ ದೃಶ್ಯ ಇತ್ಯಾದಿಗಳು ಜನರನ್ನು ಭ್ರಮೆಗೊಳಿಸಿದುವು ಆದರೆ ಗ್ಯಾಲಿಲಿಯೋನು ಮಾತ್ರ ಒಂದು ಉತ್ತಮವಾದ ಉಪಕರಣವನ್ನು ತಯಾರಿಸಿ. ಅದನ್ನು ಭೂಮಿಯ ಮೇಲಿನ ವಸ್ತುಗಳನ್ನು ನೋಡಲು ಉಪಯೋಗಿಸದೆ, ಊರ್ಧ್ವಗಮನವಾಗಿರಿಸಿ ಆಕಾಶದ ಕಡೆಗೆ ಹೊರಳಿಸಿದನು. ಆಕಾಶ ಪರೀಕ್ಷೆಯಲ್ಲಿ ಇವನಿಗೆ ಕಂಡುಬಂದ ಸಂಗತಿಗಳು ಅರಿಸ್ಟಾಟಲನ ತತ್ತ್ವಗಳನ್ನು ಖಂಡಿಸಲು ಹೆಚ್ಚಿಚ್ಚಾಗಿ ಮಾರ್ಗ-

(೬೦ ನೆಯ ಪುಟಕ್ಕೆ ಸಾಗಿದೆ)